THE BOOK WAS DRENCHED

TEXT LITE WITHIN THE BOOK ONLY

UNIVERSAL LIBRARY
OU_200613
UNIVERSAL LIBRARY

ಸಟೀಕಾ

# ಮಾಧವನಿದಾನ

(ಮೂಲ ಸಹಿತ ಕನ್ನಡ ಭಾಷಾಂತರ.)

ಸಾಹಿತ್ಯವಿದ್ವಾನ್, ಕಾವ್ಯತೀರ್ಥ, ಆಯುರ್ವೇದಭೂಷಣ ಇತ್ಯಾದಿ ಬಿರುದಾಂಕಿತ

**ಪಟ್ಟಗೆರೆ. ಸೂರ್ಯನಾರಾಯಣಶಾಸ್ತ್ರಿ**

ಇವರಿಂದ ಭಾಷಾಂತರಿಸಲ್ಪಟ್ಟು

ತೀರ್ಥಹಳ್ಳಿ,

ಶ್ರೀ ಭುವನೇಂದ್ರ ಆಯುರ್ವೇದ ವೈದ್ಯಶಾಲಾ ಮಾಲೀಕರು

**ಜವಳಿ. ರಘುಪತಿರಾವ್ ಬ್ರದರ್ಸ್**

ಇವರಿಂದ ಪ್ರಕಾಶಿಸಲ್ಪಟ್ಟಿದೆ.

*(Copyrights Reserved.)*

೧೯೨೯

ಬೆಲೆ: ೪—೮—೦.

ತೀರ್ಥಹಳ್ಳಿ, ರಾಧಾಕೃಷ್ಣ ಮುದ್ರಾಮಂದಿರದಲ್ಲಿ
ಜವಳಿ ವಾಮನರಾವ್ ಇವರಿಂದ
ಪ್ರಕಾಶಕರಿಗೋಸ್ಕರ ಮುದ್ರಿಸಲ್ಪಟ್ಟಿದೆ.

(ಇದರ ಸರ್ವ ಸ್ವಾತಂತ್ರ್ಯವೂ ಪ್ರಕಾಶಕರದಾಗಿದೆ.)

# ವಿಜ್ಞಾಪನೆ

ನಮ್ಮ ಈ ಭಾರತದೇಶದಲ್ಲಿ ಅತ್ಯುಚ್ಛ್ರಾಯ ಸ್ಥಿತಿಯಲ್ಲಿದ್ದ ಎಲ್ಲಾ ವಿದ್ಯೆಗಳೊಂದಿಗೆ ಆಯುರ್ವೇದ ವಿದ್ಯೆಯೂ ಮಲಿನವಾಗುತ್ತಾ ಬಂದಿರುವದನ್ನು ಪುನರುಜ್ಜೀವನಗೊಳಿಸಬೇಕೆಂಬ ಕುತೂಹಲವು ದೇಶಾಭಿಮಾನಿಗಳೆಲ್ಲರಿಗೂ ಹುಟ್ಟಿ ಸಮಗ್ರ ಭರತಖಂಡವಲ್ಲಿ ಎಲ್ಲಾ ಕಡೆಯೂ ನಾನಾ ವಿಧವಾದ ಪ್ರಯತ್ನಗಳು ನಡಿಯುತ್ತಾ ಇರುವವು. ನಮ್ಮ ಕರ್ಣಾಟಕವೂ ಈ ಕಾರ್ಯದಲ್ಲಿ ಹಿಂದುಳಿದಿಲ್ಲ. ಮಹನೀಯರನೇಕರು ನಾನಾ ಪ್ರಯತ್ನಗಳ ಮೂಲಕ ಆಯುರ್ವೇದ ವಿದ್ಯಾಭಿವೃದ್ಧಿಗೆ ದುಡಿಯುತ್ತಿದ್ದಾರೆ. ನಾವೂ ನಮ್ಮ ಕೈಲಾದಮಟ್ಟಿಗೆ ನಮ್ಮ ಭಾಗದಸೇವೆಯನ್ನು ಮಾಡಬೇಕೆಂದುದ್ದೇಶಿಸಿ, ಸಂಸ್ಕೃತ ಭಾಷಾಭಿಜ್ಞರಲ್ಲದ ಜನಸಾಮಾನ್ಯರಿಗೆ ಆಯುರ್ವೇದ ಗ್ರಂಥಗಳನ್ನು ನೋಡಲು ಅವಕಾಶವಿಲ್ಲದಂತಾಗಿರುವ ಕೊರತೆಯನ್ನು ನೀಗಿ ಕನ್ನಡಿಗರಿಗೆ ಮುಖ್ಯಮುಖ್ಯಗ್ರಂಥಗಳು ಮಾತೃಭಾಷೆಯಲ್ಲಿನೋಡಲು ಸಿಕ್ಕರೆ ಆಯುರ್ವೇದ ವಿದ್ಯೆಯ ಜ್ಞಾನವು ಹರಡಲು ಹೆಚ್ಚು ಅನುಕೂಲವಾಗುತ್ತೇಂದೂ ಆ ಮೂಲಕ ನಮ್ಮಿಂದಾದಷ್ಟು ಸೇವೆಮಾಡಬಹುದೆಂದೂ ಈ ಕಾರ್ಯವನ್ನು ಪ್ರಾರಂಭಿಸುವಾಗ ದೈವಸಂಘಟನೆಯಿಂದ ವಿದ್ವಾನ್ ಪಟ್ಟಣಗೆರೆ ಸೂರ್ಯನಾರಾಯಣ ಶಾಸ್ತ್ರಿಗಳು ಸಿಕ್ಕು, ಆಯುರ್ವೇದ ಪತ್ರದ ಸಂಪಾದಕತ್ವವನ್ನು ಸ್ವೀಕರಿಸಿ ಈ ಕಾರ್ಯವನ್ನು ಸಾಂಗಗೊಳಿಸಿದರು. ಇವರ ಶ್ರಮ, ದೇಶಾಭಿಮಾನ, ಆಯುರ್ವೇದದಭಿವೃದ್ಧಿಯಲ್ಲಿ ಇವರಿಗಿರುವ ಉತ್ಸಾಹದಿಂದ ಈ ಕಾರ್ಯವು ನೆರವೇರಿ ಇಂದಿಗೆ ಕರ್ಣಾಟಕಸ್ಥರ ಕೈಗೆ ಈ ಪುಸ್ತಕವು ದೊರೆಯುವಂತಾಯಿತು. ಈ ಮಧ್ಯೆ ಅನೇಕ ಎಡರುಗಳು ಬಂದರೂ ಶ್ರೀಪರಮಾತ್ಮನ ಅನುಗ್ರಹದಿಂದ ಅವೆಲ್ಲವೂ ಪಾರಾಗಿ ನಮ್ಮ ಉದ್ದೇಶ್ಯವು ನೆರವೇರಿತು. ಈ ಗ್ರಂಥದ ಪ್ರಚಾರಕ್ಕೋಸ್ಕರ ನಾವು ಹೊರಡಿಸಿದ ಆಯುರ್ವೇದ ಪತ್ರಿಕೆಗೆ ಪೋಷಕರಾಗಿಯೂ ಚಂದಾದಾರರಾಗಿಯೂ ಸಹಾಯಮಾಡಿದ ಮಹನೀಯರುಗಳಿಗೆ ನಮ್ಮ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಆಯುರ್ವೇದದ ಪುನರುಜ್ಜೀವನಕಾರ್ಯವಲ್ಲಿ ತಮಗಿರುವ ಮಮತೆಯಿಂದ ತಮ್ಮ ಅಮೌಲ್ಯವಾದ ವೇಳೆಯನ್ನು ಉಪಯೋಗಿಸಿ ಈ ಗ್ರಂಥಕ್ಕೆ ಪ್ರಸ್ತಾವನೆಯನ್ನು ಬರೆದು ನಮಗೆ ಸಹಾಯಮಾಡಿದ ಬೆಳಗಾಮಿನ ಡಾಕ್ಟರ್ ಹನುಮಂತ ವೆಂಕಟೇಶ ಸವಣೂರ ಎಲ್. ಎಂ. ಅಂಡ್ ಎಸ್. ಇವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ಕರ್ಣಾಟಕಸ್ಥರ ಪ್ರೋತ್ಸಾಹ ದೊರೆತ ಹಾಗೆ ಇನ್ನೂ ಕೆಲವು ಗ್ರಂಥಗಳನ್ನು ಕನ್ನಡವಲ್ಲಿ ಪ್ರಚುರಗೊಳಿಸಬೇಕೆಂದಿದ್ದೇವೆ. ಮಹನೀಯರು ಉದಾರಾಶ್ರಯವನ್ನಿತ್ತು ನಮ್ಮೀ ಕಾರ್ಯಕ್ಕೆ ನೆರವಾಗುತ್ತಾರಾಗಿ ನಂಬಿದ್ದೇವೆ.

ತೀರ್ಥಹಳ್ಳಿ,
ತಾ. 4--12--1929.

*J. Raghupathi Rao Brothers.*
ಪ್ರಕಾಶಕರು.

# -: ಮುನ್ನುಡಿ :-

ಪರಮಾತ್ಮನ ದಯದಿಂದ ನಾವು ಕೈಕೊಂಡ ಆಯುರ್ವೇದ ಸೇವಾಕಾರ್ಯದಲ್ಲಿ ಮಾಧವನಿದಾನವೆಂಬ ರುಗ್ವಿನಿಶ್ಚಯಗ್ರಂಥದ ಭಾಷಾಂತರವನ್ನು ಸಂಪೂರ್ಣಗೊಳಿಸಿ ಅದಕ್ಕೊಂದು ಉಪೋದ್ಘಾತವನ್ನು ಬರೆಯುವ ಸುಯೋಗವನ್ನು ಕಂಡೆವು. 'ಶಿವನವಿನಾತೃಣಮಪಿನಚಲತಿ' ಎಂಬ ನ್ಯಾಯದಂತೆ ಆ ಪರಮಾತ್ಮನ ಸಹಾಯವಿಲ್ಲದೆ ಜಗತ್ತಿನಲ್ಲಿ ಒಂದು ಕೆಲಸವೂ ನಡೆಯಲಾರದು. ಹತ್ತುಹದಿನೈದು ವರುಷಗಳ ಹಿಂದೆ ಮದರಾಸಿನಲ್ಲಿ ಆಯುರ್ವೇದ ಕಾಲೇಜಿನಲ್ಲಿ ನಾವು ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿ ನಮ್ಮ ಗುರುಗಳಾದ ವೈದ್ಯರತ್ನ ಪಂಡಿತ ಗೋಪಾಲಾಚಾರ್ಯರು ಆಗ್ಯೆ ನಾವು ಬರೆಯುತ್ತಿದ್ದ ಯೋಗರತ್ನಾಕರದ ಭಾಷಾಂತರವನ್ನು ನೋಡಿ ಲೇಖನೋದ್ಯೋಗದಲ್ಲಿ ನಮ್ಮನ್ನು ಪ್ರೋತ್ಸಾಹಿಸಿ, ಮಾಧವನಿದಾನ, ಶಾರ್ಙ್ಗಧರಸಂಹಿತೆ ಎಂಬ ವೈದ್ಯಕ ಗ್ರಂಥಗಳು ಎಲ್ಲಾ ಭಾಷೆಗಳಲ್ಲಿಯೂ ಮಹನೀಯರುಗಳಿಂದ ಭಾಷಾಂತರೀಕರಿಸಲ್ಪಟ್ಟಿವೆ. ಕರ್ಣಾಟಕ ಭಾಷೆಯಲ್ಲಿ ಭಾಷಾಂತರವಾಗಿಲ್ಲ. ವೈದ್ಯರಿಗೆ ಅತ್ಯುಪಯುಕ್ತಗಳಾದ ಅವೆರಡನ್ನೂ ಭಾಷಾಂತರಿಸಿ ಕನ್ನಡದಲ್ಲಿ ಪ್ರಕಟಿಸಬೇಕು ಎಂಬದಾಗಿ ಆಜ್ಞಾಪಿಸಿದರು. ಅವರ ಆಜ್ಞೆಯಂತೆ ಕನ್ನಡದಲ್ಲಿ ಭಾಷಾಂತರಿಸಿದರೂ ಪ್ರಕಟನಕಾರ್ಯವು ದ್ರವ್ಯಸಾಧ್ಯವಾದುದರಿಂದ ನಿರ್ಧನರಾದ ನಮ್ಮಿಂದ ಆ ಕಾರ್ಯವು ಸಾಧ್ಯವಾಗದೆ ನಿಂತುಹೋಯಿತು. ಈಚೆಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿಯಲ್ಲಿ ಸ್ಥಾಪಿತವಾಗಿರುವ ಶ್ರೀ ಭುವನೇಂದ್ರ ಆಯುರ್ವೇದ ವೈದ್ಯಶಾಲೆಯ ಸ್ಥಾಪಕರೂ ಚಾಲಕರೂ ಪಾಲಕರೂ ಆದ ಶ್ರೀಮಂತರು ಜವಳಿ ರಘುಪತಿರಾಯರು ಆಯುರ್ವೇದ ಶಾಸ್ತ್ರದ ಮೇಲಣ ಮಮತೆಯಿಂದ ಈ ಗ್ರಂಥಗಳನ್ನು 'ಆಯುರ್ವೇದ' ಎಂಬ ಮಾಸಿಕ ಪತ್ರಿಕೆಯೊಂದನ್ನು ಕರ್ಣಾಟಕ ಭಾಷೆಯಲ್ಲಿ ಹೊರಡಿಸಿ ತನ್ಮೂಲಕ ಈ ಗ್ರಂಥಗಳನ್ನು ಪ್ರತಿ ತಿಂಗಳೂ ಕೆಲಕೆಲವು ಪುಟಗಳಾಗಿ ಪ್ರಕಟಿಸುತ್ತ ಹೋಗಬೇಕಾಗಿಯೂ ಪ್ರಾರಂಭದ ಅದರ ವೆಚ್ಚವನ್ನು ತಾವೇ ವಹಿಸಿಕೊಳ್ಳುವುದಾಗಿಯೂ ಕ್ರಮೇಣ ಅದರ ವೆಚ್ಚವು ಕರ್ಣಾಟಕದ ಮಹನೀಯರಿಂದ ಹುಟ್ಟಿ ಪತ್ರಿಕೆಯು ತಾನೇ ತನ್ನ ಖರ್ಚನ್ನು ಹುಟ್ಟಿಸಿಕೊಳ್ಳಬಹುದಾಗಿಯೂ ಸೂಚಿಸಿದರು. ಅವರ ಸೂಚನೆಯಂತೆ ಅವರ ಆಶ್ರಯದಲ್ಲಿ 'ಆಯುರ್ವೇದ'ವೆಂಬ ಮಾಸಿಕ ಪತ್ರಿಕೆಯನ್ನು ಹೊರಡಿಸಿ, ಅದರಲ್ಲಿ ಈ ಎರಡು ಗ್ರಂಥಗಳನ್ನೂ ಕೆಲ

ಕೆಲವು ಪುಟಗಳಾಗಿ ಕೊಡುತ್ತ ಬಂದೆವು. ಒಂದು ವರುಷ ನಿರೀಕ್ಷಿಸಿದರೂ ಕರ್ಣಾಟಕದಿಂದ ನಮಗೆ ತಕ್ಕ ಪ್ರೋತ್ಸಾಹವು ದೊರೆಯದೆ ಪತ್ರಿಕೆಯನ್ನು ನಡೆಯಿಸುವುದು ಬಹಳ ಬಿಕ್ಕಟ್ಟಿಗೆ ಬಂದಿತು. ಆದರೂ 'ಆರಬ್ಧಮುತ್ತಮ ಗುಣಾ ನಪರಿತ್ಯಜಂತಿ' ಎಂಬ ನ್ಯಾಯದಂತೆ ನಮಗೆ ಪ್ರೋತ್ಸಾಹಿಸಿದ ತೀರ್ಥ ಹಳ್ಳಿಯ ಶ್ರೀ ಭುವನೇಂದ್ರ ಆಯುರ್ವೇದ ವೈದ್ಯಶಾಲೆಯವರೇ ಇದರ ಎಲ್ಲಾ ಕಷ್ಟನಷ್ಟಗಳನ್ನೂ ಧೈರ್ಯದಿಂದ ವಹಿಸಿಕೊಂಡು 'ಆಯುರ್ವೇದ' ಮಾಸಿಕ ಪತ್ರದ ಹೆಸರಿನಿಂದಲೇ ಈ ಪುಸ್ತಕಗಳನ್ನು ಸಂಪೂರ್ಣವಾಗಿ ಮುದ್ರಿಸುವ ಸಾಹಸಕಾರ್ಯವನ್ನು ಕೊನೆಗಾಣಿಸಿದರು. ಇವತ್ತು ಕರ್ಣಾಟಕರ ಕೈಯಲ್ಲಿರುವ ಈ ಪುಸ್ತಕವು ಅವರ ಸ್ವಾರ್ಥತ್ಯಾಗದ ಪರಮಾವಧಿ ಎಂದರೂ ಅದೇನೂ ಅತಿಶಯೋಕ್ತಿಯಲ್ಲ. ಈ ಸಂದರ್ಭದಲ್ಲಿ ನಾವೊಬ್ಬರೇ ಏಕೆ ಇಡೀ ಕರ್ಣಾಟಕವೇ ಅವರಿಗೆ ಚಿರಋಣಿಯಾಗಿದೆ ಎಂದು ಹೇಳಬೇಕು.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ವಿಧ ಪುರುಷಾರ್ಥ ಗಳನ್ನು ಸಾಧಿಸುವುದಕ್ಕೆ ಮುಖ್ಯ ಸಾಧನಭೂತವಾದ ದೇಹವನ್ನು ಪ್ರತಿ ಕ್ಷಣ ದಲ್ಲಿಯೂ ಕಾಪಾಡಿಕೊಳ್ಳುವುದು ಮನುಷ್ಯನ ಪ್ರಥಮ ಕರ್ತವ್ಯವಾಗಿದೆ. ಈ ವಿಷಯವನ್ನೇ ವಾಗ್ಭಟಾಚಾರ್ಯರು—

ಆಯುಃಕಾಮಯಮಾನೇನಧರ್ಮಾರ್ಥಸುಖಸಾಧನಂ ॥
ಆಯುರ್ವೇದೋಪದೇಶೇಷುವಿಧೇಯಃಪರಮಾದರಃ ॥

ಎಂಬದಾಗಿ ಹೇಳಿದ್ದಾರೆ. ಮಾನವಪ್ರಾಣಿಗೆ ಊಟಮಾಡಿದರೂ ರೋಗ, ಉಪವಾಸವಿದ್ದರೂ ರೋಗ, ನಿದ್ರೆಮಾಡಿದರೂ ರೋಗ, ನಿದ್ರೆಗೆಟ್ಟರೂ ರೋಗ, ಸ್ನಾನಮಾಡಿದರೂ ರೋಗ, ಬಿಟ್ಟರೂ ರೋಗ, ಈ ರೀತಿಯಾಗಿ ಹೆಜ್ಜೆಹೆಜ್ಜೆಗೂ ಕ್ಷಣಕ್ಷಣಕ್ಕೂ ಈ ಮಾನುಷದೇಹಕ್ಕೆ ರೋಗವೆಂಬ ವಿಪತ್ತು ಬೆನ್ನುಹಿಡಿದು ಸಮಯಕಾಯ್ದು ಹೊಂಚುಹಾಕಿ ಕಾಯುತ್ತಿರುವಾಗ್ಯೆ ದೇಹವನ್ನು ರಕ್ಷಿಸಿಕೊಳ್ಳು ವುದು ಎಷ್ಟು ಕಷ್ಟವೆಂದು ತಿರಿಗಿ ಹೇಳಬೇಕಾಗಿಲ್ಲ. ತ್ರಿಕಾಲಜ್ಞಾನಿಗಳಾದ ಮಹರ್ಷಿಗಳು ಈ ವಿಷಯವನ್ನು ಸೃಷ್ಟಿಕರ್ತನಾದ ಬ್ರಹ್ಮದೇವನಲ್ಲಿ ವಿಜ್ಞಾಪಿಸಿ ಕೊಂಡು ಅವನಿಂದ ತ್ರಿಸ್ಕಂಧಾತ್ಮಕವಾದ ಆಯುರ್ವೇದ ಶಾಸ್ತ್ರವನ್ನು ಪಡೆದು ಕೊಂಡರು ಈ ಆಯುರ್ವೇದ ಶಾಸ್ತ್ರದಲ್ಲಿ ದೇಹಕ್ಕೆ ಸಂಭವಿಸಬಹುದಾದ ರೋಗಗಳು, ಆ ರೋಗಗಳು ಬಾರದಂತೆ ಮನುಷ್ಯನು ಆಚರಿಸಬೇಕಾದ ಉಪಾಯಗಳು, ಒಂದು ವೇಳೆ ಆಕಸ್ಮಿಕವಾಗಿ ಅಂತಹ ರೋಗಗಳು ಪ್ರಾಪ್ತ ವಾದರೂ ಅವುಗಳನ್ನು ನಿವಾರಣೆಮಾಡಿಕೊಳ್ಳಲು ಸಾಧನಭೂತಗಳಾದ ಮಂತ್ರ ಔಷಧ ಮೊದಲಾದ ಚಿಕಿತ್ಸೆಗಳೂ ಹೇಳಲ್ಪಟ್ಟಿವೆ. ಇಂತಹ ಅಮೂಲ್ಯವಾದ

ಆಯುರ್ವೇದದ ಸಹಾಯದಿಂದಲೇ ಸೃಷ್ಟಿಪ್ರಾರಂಭವಾದ ಮೊದಲಿನಿಂದ ಏತತ್ ಕ್ಷಣಪರ್ಯಂತವಾಗಿಯೂ ಮನುಷ್ಯರು ಅನೇಕ ದುರ್ನಿವಾರಗಳಾದ ರೋಗಗಳನ್ನು ನಿವಾರಣೆಮಾಡಿಕೊಂಡು ದೀರ್ಘಾಯುಗಳಾಗಿ ಜೀವಿಸುತ್ತ ಬಂದರು. ಇಂತಹ ಅಪವೌಲ್ಯವಾದ ಆಯುರ್ವೇದ ಶಾಸ್ತ್ರವು ದೇವಭಾಷೆಯಾದ ಸಂಸ್ಕೃತದಲ್ಲಿಯೇ ಇದೆ. ಒಂದಾನೊಂದು ಕಾಲದಲ್ಲಿ ಭರತಖಂಡದ ಮಾತೃಭಾಷೆಯು ದೇವಭಾಷೆಯಾದ ಸಂಸ್ಕೃತಭಾಷೆಯೇ ಆಗಿದ್ದಕಾಲದಲ್ಲಿ ಈ ಆಯುರ್ವೇದ ಶಾಸ್ತ್ರದ ಪ್ರಯೋಜನವನ್ನು ಪ್ರತಿಯೊಬ್ಬನೂ ತನಗೆ ಆವಶ್ಯಕಬಿದ್ದಾಗ್ಯೆ ಹೊಂದುತ್ತಿದ್ದನು. ಕಾಲಕ್ರಮೇಣ ಈ ಭಾಷೆಯು ಮಲಿನವಾದಂತೆಲ್ಲಾ ಇದರ ಪ್ರಯೋಜನವು ಈ ಭಾಷೆಯನ್ನರಿಯದ ಜನಸಾಮಾನ್ಯರಿಗೆ ಇಲ್ಲವಾಯಿತು. ಆದರೆ ಆಯುರ್ವೇದ ಚಿಕಿತ್ಸೆಯೇ ಲುಪ್ತವಾಗಿಹೋಯಿತೆ? ಎಂದರೆ ಹಾಗಾಗಲಿಲ್ಲ. ಜನಗಳ ಆಚರಣೆಯಲ್ಲಿ ಬಂದ ಆಯುರ್ವೇದ ಚಿಕಿತ್ಸಾ ಕ್ರಮವು ಪ್ರತಿಮನೆಯಲ್ಲಿಯೂ ಉಳಿದು ಅಂತಹ ಚಿಕಿತ್ಸೆಗೆ ಆಧಾರಭೂತವಾದ ಶಾಸ್ತ್ರಜ್ಞಾನವು ಮಾತ್ರ ಲುಪ್ತವಾಗಿ ಹೋಯಿತು. ಇಂತಹ ಆಯುರ್ವೇದ ಶಾಸ್ತ್ರವನ್ನು ಸರಿಯಾದ ಪ್ರೋತ್ಸಾಹವಿಲ್ಲದಿದ್ದರೂ ಈ ವರಿವಿಗೂ ಲಾಂಛನಮಾತ್ರವಾಗಿಯಾದರೂ ಕಾಪಾಡುತ್ತ ಬಂದ ಯಶಸ್ಸು ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಇರುವ ಆಯುರ್ವೇದ ವೈದ್ಯರುಗಳಿಗೆ ಸೇರತಕ್ಕದ್ದು. ಇಂತಹ ಆಯುರ್ವೇದ ಚಿಕಿತ್ಸಾ ಪದ್ಧತಿಯ ಮಹತ್ವವನ್ನರಿತುಕೊಂಡು ದೇಶಾಭಿಮಾನಿಗಳಾದ ಅನೇಕ ಮಹನೀಯರುಗಳು ಆ ಭರತಖಂಡದಲ್ಲಿರುವ ಆಯುರ್ವೇದ ವೈದ್ಯರುಗಳನ್ನೆಲ್ಲಾ ಒಟ್ಟುಗೂಡಿಸಿ "ನಿಖಿಲಭಾರತ ಆಯುರ್ವೇದ ಮಹಾಮಂಡಲ"ವೆಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡು ತನ್ಮೂಲಕ ಆಯುರ್ವೇದ ಪದ್ಧತಿಯನ್ನು ನಾನಾಮುಖವಾಗಿ ಅಭಿವೃದ್ಧಿಗೊಳಿಸಲು ಪ್ರಯತ್ನಪಡುತ್ತಿದ್ದಾರೆ. ದೇವಭಾಷೆಯನ್ನರಿಯದೆ ದೇಶಭಾಷಾ ಪರಿಚಯವುಳ್ಳವರಾಗಿ ಆಯುರ್ವೇದ ಚಿಕಿತ್ಸಾಪದ್ಧತಿಯನ್ನು ಅನುಸರಿಸುತ್ತಿರುವ ದೇಶೀಯ ವೈದ್ಯರುಗಳಿಗೆ ತಮ್ಮ ಚಿಕಿತ್ಸೆಗೆ ಆಧಾರಭೂತಗಳಾದ ಸಂಸ್ಕೃತಭಾಷಾಮಯ ಗ್ರಂಥಗಳನ್ನು ದೇಶಭಾಷೆಗೆ ಪರಿವರ್ತಿಸಿ ಅವರುಗಳಿಗೆ ಒದಗಿಸಿಕೊಡುವುದೊಂದು ಮುಖ್ಯ ಕರ್ತವ್ಯವಷ್ಟೆ. ತಾವು ನಡೆಯಿಸುತ್ತಿರುವ ಚಿಕಿತ್ಸಾಕ್ರಮಕ್ಕೆ ಆಧಾರಭೂತಗಳಾದ ಪುಸ್ತಕಗಳು ದೇಶಭಾಷೆಯಲ್ಲಿಯೇ ವಿಸ್ತಾರವಾಗಿ ದೊರೆಯುವುದಾದರೆ ಅವರ ಆನಂದಕ್ಕೆ ಪಾರವಿರಲಾರದು. ಈ ವಿಷಯಗಳನ್ನು ಪರ್ಯಾಲೋಚಿಸಿಯೇ ಕೆಲವುಜನ ಆಯುರ್ವೇದ ವೈದ್ಯರು ಸಂಸ್ಕೃತಭಾಷೆಯಲ್ಲಿ ಗುರುಸಂಪ್ರದಾಯಾನುಸಾರವಾಗಿ ತಾವು ಅಭ್ಯಾಸಮಾಡಿದ ಆಯುರ್ವೇದವೈದ್ಯಕ ಗ್ರಂಥಗಳನ್ನು ಆಯಾಯ ದೇಶಭಾಷೆಗಳಿಗೆ ಪರಿವರ್ತಿಸಿ ತಮ್ಮ ಸಹೋದರರಾದ ವೈದ್ಯಬಂಧು

ಗಳಿಗೆ ಅಮೂಲ್ಯವಾದ ಸಹಾಯವನ್ನು ಮಾಡಿಯೂ ಮಾಡುತ್ತಲೂ ಇದ್ದಾರೆ. ನಮ್ಮ ಕರ್ಣಾಟಕದಲ್ಲಿಯೂ ಕೆಲವುಜನ ಆಯುರ್ವೇದ ವೈದ್ಯರು ಕೆಲವು ವೈದ್ಯಕ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿದ್ದಾರೆ. ಆದರೆ ತೆಲಗು, ಮಹಾರಾಷ್ಟ್ರ, ಬಂಗಾಳಿ, ಗುಜರಾತಿ ಈ ಭಾಷೆಗಳಲ್ಲಿ ಪರಿವರ್ತಿತವಾಗಿರುವಷ್ಟು ಕನ್ನಡ ಭಾಷೆ ಯಲ್ಲಿ ಆಯುರ್ವೇದ ವೈದ್ಯಕ ಗ್ರಂಥಗಳು ಪರಿವರ್ತಿತವಾಗಿಲ್ಲ ಈ ಕೊರತೆ ಯನ್ನು ಪರಿಹರಿಸುವ ಸಲುವಾಗಿಯೇ ನಾವು ಆಯುರ್ವೇದ ವೈದ್ಯಕಗ್ರಂಥ ಗಳನ್ನು ಕನ್ನಡಕ್ಕೆ ಪರಿವರ್ತಿಸಲು ಪ್ರಾರಂಭಿಸಿದೆವು ತಮ್ಮಗಳ ಮುಂದಿರುವ ಈ ಪುಸ್ತಕಕ್ಕೆ ಮಾಧವನಿದಾನವೆಂದು ಹೆಸರು. ವೈದ್ಯನು ಮೊದಲು ರೋಗ ಲಕ್ಷಣವನ್ನು ತಿಳಿದುಕೊಂಡಲ್ಲವೆ ಅನಂತರ ಚಿಕಿತ್ಸೆಗೆ ಪ್ರಾರಂಭಿಸಬೇಕು. ರೋಗ ಸ್ವರೂಪವನ್ನೂ ರೋಗದ ಬಲಾಬಲಗಳನ್ನೂ ರೋಗವು ಸಾಧ್ಯವೇ ಅಸಾಧ್ಯವೇ ಎಂಬುವುದನ್ನೂ ಈ ಗ್ರಂಥವು ಸ್ಪಷ್ಟವಾಗಿ ತಿಳಿಸುತ್ತದೆ. ಇದರಲ್ಲಿ ಹೇಳಿರುವ ಲಕ್ಷಣಗಳಿಂದ ರೋಗವು ಇಂತಹುದು, ಇಂತಹ ಸ್ಥಿತಿಯಲ್ಲಿದೆ ಎಂಬುವುದನ್ನು ಮೊದಲು ಗೊತ್ತುಮಾಡಿಕೊಂಡರೆ ಮುಂದೆ ಚಿಕಿತ್ಸಾಕ್ರಮದಲ್ಲಿ ವೈದ್ಯನು ಭ್ರಾಂತಿಹೊಂದಲಾರನು. ವೈದ್ಯಾಭ್ಯಾಸಿಗಳಿಗೆ ಇದರಷ್ಟು ಉಪಯುಕ್ತವಾದ ಬೇರೊಂದು ಪುಸ್ತಕವಿಲ್ಲ. ಇದಕ್ಕಾಗಿಯೇ "ನಿದಾನೇಮಾಧವಃಶ್ರೇಷ್ಠಃ" ಎಂಬ ದಾಗಿ ಆಯುರ್ವೇದ ಪ್ರಪಂಚವೇ ಕೈಯೆತ್ತಿ ಸಾರುತ್ತಿದೆ ರೋಗಜ್ಞಾನವಿಲ್ಲದ ವೈದ್ಯನು ಚಿಕಿತ್ಸಾರಂಗಕ್ಕೆ ಇಳಿದರೆ ತಾನುಮಾಡಬೇಕಾದ ಕೆಲಸವೇ ಗೊತ್ತಿಲ್ಲದೆ ಗಡಬಿಡಿಪಡಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಆಯುರ್ವೇದ ವೈದ್ಯನೂ ನಿದಾನಜ್ಞಾನವನ್ನು ಮೊದಲು ಸಂಪಾದಿಸಿಕೊಂಡೇ ತೀರಬೇಕು. ಸಂಸ್ಕೃತ ಭಾಷೆಯಲ್ಲಿ ಸಾಕಾದಷ್ಟು ಪಾಂಡಿತ್ಯವಿಲ್ಲದ ಆಯುರ್ವೇದ ವೈದ್ಯರಿಗೆ ಉಪ ಯೋಗಕ್ಕೆ ಬರಲೆಂಬ ಉದ್ದಿಶ್ಯದಿಂದಲೇ ಈ ಗ್ರಂಥವನ್ನು ಮೊದಲು ಕನ್ನಡಿಸಿ ದ್ದೇವೆ. ಗ್ರಂಥರಚನೆಯಲ್ಲಿ ಇದೇ ಪ್ರಥಮ ಪ್ರಯತ್ನವಾದುದರಿಂದ ಇದರಲ್ಲಿ ಅನೇಕ ಲೋಪದೋಷಗಳಿರಬಹುದು. ಅಂತಹ ಲೋಪಗಳನ್ನು ಸಹೃದಯ ರಾದ ವೈದ್ಯಭ್ರಾತೃಗಳು ಸೂಚಿಸಿದಲ್ಲಿ ಅವುಗಳನ್ನು ಶಿರಸಾವಹಿಸಿ ತಿದ್ದಿಕೊಳ್ಳು ವೆವು. ಈ ಗ್ರಂಥವು ಪ್ರಿಂಟಾಗುತ್ತಿರುವಾಗ ತೀರ್ಥಹಳ್ಳಿಯ ಹೈಸ್ಕೂಲ್ ಪಂಡಿತರು ಬ್ರಹ್ಮಶ್ರೀ ಕೆ. ನರಸಿಂಹ ಶಾಸ್ತ್ರಿಗಳು ಇದರ ಪ್ರೂಫ್‌ಗಳನ್ನು ನೋಡುವುದರಲ್ಲಿ ಬಹಳ ಸಹಾಯಮಾಡಿರುತ್ತಾರೆ. ಅವರ ಉಪಕಾರವನ್ನು ಈ ಸಂದರ್ಭದಲ್ಲಿ ವಂದಿಸುವುದು ನಮ್ಮ ಮುಖ್ಯ ಕರ್ತವ್ಯವಾಗಿದೆ. ವಿಶೇಷತಃ ನಮ್ಮ ಮನವಿ ಯನ್ನು ಮನ್ನಿಸಿ, ಈ ಪುಸ್ತಕಕ್ಕೆ ಪ್ರಸ್ತಾವನೆಯನ್ನು ಬರೆಯುವುದರಲ್ಲಿ ತಮ್ಮ ಅಮೋಘವಾದ ಕಾಲವನ್ನು ಕಳೆದು ಪ್ರೋತ್ಸಾಹಿಸಿದ ವೈದ್ಯಶ್ರೇಷ್ಠ ಹನುಮಂತ ವೆಂಕಟೇಶ ಸವಣೂರ L. M. & S (ಬೆಳಗಾಂವಿಯ ಆಯುರ್ವೇದೋತ್ತೇಜಕ

ಮಂಡಲಿಯ ಉಪಾಧ್ಯಕ್ಷರು ಮತ್ತು ಆಯುರ್ವೇದ ವಿದ್ಯಾಲಯದ ಅಧ್ಯಕ್ಷರು) ಇವರಿಗೂ ತಮ್ಮ ಸಹಾನುಭೂತಿಯನ್ನೂ ಅಮೋಘವಾದ ಶ್ಲಾಘನಾ ಪತ್ರವನ್ನೂ ಕಳಿಸಿ ಉತ್ತೇಜಿಸಿದ ಮದ್ರಾಸಿನ ಕ್ಯಾಪ್ಟನ್ ಜಿ. ಶ್ರೀನಿವಾಸಮೂರ್ತಿ ಬಿ. ಎ. ಬಿ. ಎಲ್. ಎಂ. ಬಿ. ಸಿ. ಇವರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸುವೆವು. ತೀರ್ಥಹಳ್ಳಿಯ ಶ್ರೀ ರಾಧಾಕೃಷ್ಣ ಮುದ್ರಾಮಂದಿರದವರು ತಮ್ಮ ಅನೇಕ ಕೆಲಸಗಳಲ್ಲಿ ಇದೊಂದು ಮುಖ್ಯ ಕೆಲಸವೆಂದು ಗಣಿಸಿ ಅಂದವಾಗಿ ಮುದ್ರಿಸಿಕೊಟ್ಟು ಮಹೋಪಕಾರಮಾಡಿರುತ್ತಾರೆ. ಅವರ ಉಪಕಾರವು ಚಿರಸ್ಮರಣೀಯವಾಗಿದೆ. ಆಯುರ್ವೇದ ವೈದ್ಯರು ಈ ಪುಸ್ತಕವನ್ನು ಉಪಯೋಗಕ್ಕೆ ತಂದುಕೊಂಡು ತನ್ಮೂಲಕ ಅಲ್ಪಸ್ವಲ್ಪ ಉಪಕಾರವನ್ನು ಹೊಂದುವವರಾದರೆ ಅಲ್ಲಿಗೆ ನಮ್ಮ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಇತಿ

ಆಯುರ್ವೇದಾಶ್ರಮ,<br>ಪಟ್ಟಣಗೆರೆ, ಕಡೂರು

**ಪಂಡಿತ ಸೂರ್ಯನಾರಾಯಣ ಶಾಸ್ತ್ರಿ,**<br>ಆಯುರ್ವೇದಭೂಷಣ, ಸಾಹಿತ್ಯವಿದ್ವಾನ್, ಕಾವ್ಯತೀರ್ಥ,

Captain G. Srinivasa Murti,

B. A., B. L., M. B. & C. M.

ADYAR,

Madras, 12-8-29.

ಬ್ರಹ್ಮಶ್ರೀ ಆಯುರ್ವೇದ ಭೂಷಣ, ಸಾಹಿತ್ಯ ವಿದ್ವಾನ್, ಕಾವ್ಯತೀರ್ಥಾದಿ ಬಿರುದಾಂಕಿತರಾದ ಶ್ರೀಮಾನ್ ಸೂರ್ಯನಾರಾಯಣಶಾಸ್ತ್ರಿಗಳವರ ಸ. ಲ್ಲಿ. ಶ್ರೀನಿವಾಸಮೂರ್ತಿ ಕೃತಾನೇಕ ವಿಜ್ಞಾಪನೆಗಳು. ಉ. ಕು. ಸಂ.

ತಮ್ಮಿಂದ ಕನ್ನಡಿಸಲ್ಪಟ್ಟು ನನ್ನಲ್ಲಿಗೆ ಕಳುಹಿಸಲ್ಪಟ್ಟ ಶ್ರೀ ಮಾಧವನಿದಾನ ಗ್ರಂಥವನ್ನು ಆಮೂಲಾಗ್ರವಾಗಿ ನೋಡಿದೆನು. ಕರ್ಣಾಟಕ ಭೂಮಿಯಲ್ಲಿ ಆಯುರ್ವೇದ ವಿದ್ಯೆಯನ್ನು ಅಧೀತಿಬೋಧಾಚರಣ ಪ್ರಚಾರಣಾದಿಸಾಧನಗಳಿಂದ ಅಭಿವೃದ್ಧಿಪಡಿಸಲು ಬದ್ಧಾದರರಾದ ವಿದ್ವಜ್ಜನಗಳಿಗೆ ತಮ್ಮ ಈ ಸತ್ಕಾರ್ಯದಿಂದುಂಟಾದ ಮಹದುಪಕಾರಕ್ಕಾಗಿ ತಮ್ಮಲ್ಲಿ ಧನ್ಯವಾದಗಳನ್ನು ಶತಶಃ ಸಮರ್ಪಿಸುತ್ತೇನೆ.

ಜೀಯಾನ್ಮಾಧವನಿದಾನಕರ್ಣಾಟೀಕರಣಬದ್ಧದೀಕ್ಷೇಣ ।
ರಚಿತಸ್ಸದ್ಗ್ರಂಥೋಯಂಶ್ರೀಸೂರ್ಯನಾರಾಯಣಸದ್ವೈದ್ಯೇನ ॥
ಜಯತಾದಾಚಂದ್ರಾರ್ಕಂಹ್ಯಾಯುಶ್ಶ್ರುತಿಸಿದ್ಧಮಹರ್ಷಿ
ವಾಣೀಚ ।
ವೈದ್ಯಾಭ್ಯುದಯಾಶಂಸೀಶ್ರೀನಿವಾಸಮೂರ್ತಿರಿತ್ಯಾಶಾಸ್ತೇ ॥

ಇತಿ ಶಂ.

ಜಿ. ಶ್ರೀನಿವಾಸಮೂರ್ತಿ.

॥ ಶ್ರೀ ಧನ್ವಂತರೀ ಪ್ರಸನ್ನ ॥

# ಪ್ರಸ್ತಾವನೆ.

ರೋಗಮಾದೌಪರೀಕ್ಷೇತತತೋನಂತರವೌಷಧಂ ।
ತತಃಕರ್ಮಭಿಷಕ್‌ಪಶ್ಚಾತ್‌ಜ್ಞಾನಪೂರ್ವಂಸಮಾಚರೇತ್ ॥
(ಚರಕ)

ತಸ್ಮಾತ್‌ವಿಕಾರಪ್ರಕೃತೀರಧಿಷ್ಠಾನಾಂತರಾಣಿಚ ।
ಬುದ್ಧಿಹೇತುವಿಶೇಷಾಂಶ್ಚಶೀಘ್ರಂಕುರ್ಯಾದುಪಕ್ರಮಂ ॥
ದೂಷ್ಯಂದೇಶಂಬಲಂಕಾಲಂಅನಲಂಪ್ರಕೃತಿಂವಯಃ ।
ಸತ್ವಂಸಾತ್ಮ್ಯಂತಥಾಹಾರಂಅವಸ್ಥಾಶ್ಚಪೃಥಗ್ವಿಧಾಃ ॥
ಸೂಕ್ಷ್ಮಸೂಕ್ಷ್ಮಾಃಪರೀಕ್ಷ್ಯೈಷಾಂದೋಷೌಷಧನಿರೂಪಣೇ ।
ಯೋವರ್ತತೇಚಿಕಿತ್ಸಾಯಾಂನಸಸ್ಖಲತಿಜಾತುಚಿತ್ ॥
(ವಾಗ್ಭಟ)

ವಿಷಯಮಹತ್ವ ಮತ್ತು ಭಾಷಾಂತರ ಕರ್ತರಿಗೆ ಧನ್ಯವಾದ.

ರೋಗನಿದಾನವು ಅತಿ ಮಹತ್ವವುಳ್ಳ ವಿಷಯವು. ವಾಙ್ಮಯಕ್ಕೆ ವ್ಯಾಕರಣವು ಹೇಗೆ ಮೂಲಾಧಾರವಾಗಿರುವದೋ ಹಾಗೆಯೇ ವೈದ್ಯಶಾಸ್ತ್ರಕ್ಕೆ ನಿದಾನವು ಆಗಿರುವುದು. ಆಯುರ್ವೇದ ಗ್ರಂಥಗಳನ್ನು ಬರೆದ ಚರಕಾದಿ ಪುರಾತನ ಋಷಿಗಳೆಲ್ಲರೂ ನಿದಾನಕ್ಕೆ ಅಗ್ರಸ್ಥಾನವನ್ನು ಕೊಟ್ಟಿರುವರಲ್ಲದೆ ರೋಗವನ್ನು ತಿಳಿದುಕೊಳ್ಳದೆ ಔಷಧವನ್ನು ಕೊಡುವ ವೈದ್ಯನು ವೈದ್ಯನಲ್ಲದೆ ವೈರಿಯಾಗಿರುವನೆಂದು ವರ್ಣಿಸಿದ್ದಾರೆ. ಮೇಲೆಕಾಣಿಸಿದ ಶ್ಲೋಕಗಳನ್ನು ಓದಿದರೆ ಶಾಸ್ತ್ರಕಾರರ ಮನಸ್ಸಿನಲ್ಲಿಯ ಇಂಗಿತವು ಕೂಡಲೆ ತಿಳಿಯುವದು. ಪಾಶ್ಚಿಮಾತ್ಯ ಪಂಡಿತರು ಕೂಡ ಈ ಶ್ಲೋಕಗಳಿಗೆ ತಲೆದೂಗುವಂತಿದೆ. ಇಂಥ ಮಹತ್ವವುಳ್ಳ ವಿಷಯವನ್ನು ಕುರಿತು ಕನ್ನಡದಲ್ಲಿ ಒಂದು ಗ್ರಂಥವು ಬೇಕಾಗಿಯೇ ಇತ್ತು. ಈವರೆಗೆ "ಮಾಧವನಿದಾನ"ದ ಭಾಷಾಂತರವು ಕನ್ನಡದಲ್ಲಿ ಆಗಿರಲಿಲ್ಲ. ಈ ಕೊರತೆಯನ್ನು ಪೂರೈಸಿದ್ದಕ್ಕಾಗಿ ಕನ್ನಡಿಗರು ಭಾಷಾಂತರಕಾರರಿಗೆ ಅದೆಷ್ಟು ಋಣಿಯಾದರೂ ತೀರದು. ಇದಕ್ಕೂ ಮೊದಲು "ಶಾರಂಗಧರ"ದ ಭಾಷಾಂತರವನ್ನು ಗ್ರಂಥಕರ್ತರು ಮಾಡಿರುವರು. "ಯೋಗರತ್ನಾಕರ"ದ ಭಾಷಾಂತರವನ್ನು ಮೈಸೂರು ಸರಕಾರದವರು ಮಾಡಿಸಿದ್ದಾರೆ. ಶಾರೀರ ಮತ್ತು ಸೂತ್ರಸ್ಥಾನಗಳಲ್ಲಿಯ ವಿಷಯಗಳನ್ನು ಮಂಗಳೂರಿನ ಪಂಡಿತರಾದ ಶ್ರೀಯುತ ಬಿ ರಾಮಕೃಷ್ಣಯ್ಯನವರು ತಮ್ಮ "ಆಯುರ್ವೇದಸಾರ" ಎಂಬ ಗ್ರಂಥದಲ್ಲಿ

ಚನ್ನಾಗಿ ಮಂಡಿಸಿದ್ದಾರೆ. ಒಟ್ಟಿಗೆ ಶಾರೀರಸೂತ್ರಸ್ಥಾನ, ನಿದಾನ, ಚಿಕಿತ್ಸೆ, ಈ ಯಾವತ್ತು ಆಯುರ್ವೇದಾಂಗಗಳ ವಿಷಯಗಳಲ್ಲಿ ಪ್ರತ್ಯೇಕವಾಗಿ ಗ್ರಂಥಗಳು ಒದಗಿದ ಸಂಗತಿಯು ಕನ್ನಡದಲ್ಲಿಯು ಶಾಸ್ತ್ರೀಯ ವಾಙ್ಮಯಾಭಿವೃದ್ಧಿಗೆ ಪೋಷಕವೇ ಸರಿ.

ಆಯುರ್ವೇದದ ಮೇಲೆ ಆಕ್ಷೇಪಣೆ ಮಾಡುವವರ ಅಧಿಕಾರ ವಿಚಾರ.

ಆಯುರ್ವೇದವು ಅಶಾಸ್ತ್ರವು ಅದರಲ್ಲಿರುವ ವ್ಯುತ್ಪತ್ತಿಗೆ— ಬಹ್ವಂಶದಿಂದ ಕಾರಣೀಭೂತಗಳಾದ ಜಂತುಗಳ ಮೀಮಾಂಸೆಯೇ ಇಲ್ಲ? ಮತ್ತು ಶಾರೀರಕ ಅಂಗಪ್ರತ್ಯಂಗಗಳ ಜ್ಞಾನವು ಸುಶ್ರುತಾದಿ ಮೂಲಗ್ರಂಥಗಳ ಸಹಾಯದಿಂದ ಕೂಡ ಆಗದಿರುವದರಿಂದ ರೋಗಚಿಕಿತ್ಸೆಯ ಪದ್ಧತಿಯು ಅಸಂಬದ್ಧವೂ, ಸಂದಿಗ್ಧವೂ, ಇರುವದೆಂದು ಪಾಶ್ಚಿಮಾತ್ಯ ಪಂಡಿತರು ಅನ್ನುವುದುಂಟು. ಈ ಆಕ್ಷೇಪಣೆಗಳು ನಿಜವಾಗಿ ಸತ್ಯವಿದ್ದರೆ, ಅವರ ಅಭಿಪ್ರಾಯಗಳು ನಿರಾಧಾರವಾಗಿವೆಯೆಂದು ನಾವುಕೂಡ ಅನ್ನುವದಿಲ್ಲ. ಆದರೆ ಆಯುರ್ವೇದ ವಿದ್ಯೆಯ ಶಾಸ್ತ್ರೀಯತ್ವದ ಮೇಲೆ ಟೀಕಾತ್ಮಕ ಪ್ರಹಾರಗಳನ್ನು ಮಾಡುವವರು ನಿಜವಾದ ಶಾಸ್ತ್ರಿಗಳಿದ್ದು ಎರಡೂ ಶಾಸ್ತ್ರಗಳನ್ನು ಓದಿಕೊಂಡವರು—ಅರ್ಥಾತ್ ಅಧಿಕಾರಿಗಳು ಇರಬೇಕೆಂಬುದೇ ನಮ್ಮ ಮತವು. ಈತರದ ಅಧಿಕಾರವುಳ್ಳ ಪಂಡಿತರು ಎಷ್ಟುಜನ ಸಿಕ್ಕಬಹುದೆಂಬದರ ವಿಚಾರವನ್ನು ವಾಚಕರೇ ಮಾಡಬಹುದು. ಶಾಸ್ತ್ರದ ಶಾಸ್ತ್ರೀಯತ್ವದ ನಿಶ್ಚಯಕ್ಕೆ ದೇಶಾಭಿಮಾನ, ಭಾಷಾಭಿಮಾನ, ಧರ್ಮಾಭಿಮಾನ, ಮುಂತಾದುವುಗಳ ಸೋಂಕು ಎಳ್ಳಷ್ಟಾದರೂ ಇರತಕ್ಕದ್ದಲ್ಲ ಯಾಕಂದರೆ ಶಾಸ್ತ್ರಸಂಪಾದಿತ ಜ್ಞಾನವು ಇಂದಿನದಲ್ಲ. ಅದು ಪರಂಪರೆಯಿಂದ ಬಂದದ್ದು. ಈಗ ನಮ್ಮ ಕೈಗೆಬಂದ ಶಾಸ್ತ್ರಗಳು ಯುಗಯುಗಾಂತರಗಳಲ್ಲಿಯ ಅನುಭವಗಳಿಂದ ಮಾನ್ಯತೆಯನ್ನು ಪಡೆದಿರುವುವು ಆಯುರ್ವೇದವು ಇವುಗಳಲ್ಲಿ ಒಂದಾಗಿದೆ. ಅದು ನಿಸರ್ಗಶಾಸ್ತ್ರವು. "ಪುರುಷೋಯಂಲೋಕಸಮ್ಮಿತಃ" ಎಂಬ ಆತ್ರೇಯ ಋಷಿಗಳ ವಚನವು ಈವಿಧಾನಕ್ಕೆ ಪ್ರಮಾಣವಾಗಿದೆ. ಆದುದರಿಂದ ಅದು ಚತುರ್ವೇದಗಳಂತೆ ಸನಾತನವಾಗಿ ಹಿಂದಿನಂತೆ ಮುಂದಾದರೂ "ಯಾವಚ್ಚಂದ್ರದಿವಾಕರೌ" ಉಳಿಯುವದೆಂದು ಅನ್ನಲಿಕ್ಕೆ ಅಡ್ಡಿಯಿಲ್ಲ ಅದರೊಳಗಿನ ತತ್ವಗಳೂ, ಸಿದ್ಧಾಂತಗಳೂ, ಪ್ರಮೇಯಗಳೂ, ತ್ರಿಗುಣಾತ್ಮಕವಾದ ಪಂಚಮಹಾಭೂತಗಳನ್ನೊಳಗೊಂಡ ಸೃಷ್ಟಿಯ ನಿಯಮನ ತಳಹದಿಯ ಮೇಲೆ ನಿಂತಿರುವುದು. ಪದಾರ್ಥವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಇಂದ್ರಿಯವಿಜ್ಞಾನಶಾಸ್ತ್ರ, ಇವೇ ಮೊದಲಾದವುಗಳಲ್ಲಿಯ ಸಿದ್ಧಾಂತಗಳು ಸಾಂಖ್ಯದರ್ಶನಾಂತರಿತ ಭೌತಿಕ ಶಾಸ್ತ್ರವನ್ನು ಅವಲಂಬಿಸಿರುವವು ಆಯುರ್ವೇದದ ಉದ್ದೇಶವೊಂದನ್ನೇ ನೋಡಿದರೆ ಈ ಶಾಸ್ತ್ರವು ಎಷ್ಟು ವ್ಯಾಪಕಸ್ವರೂಪವುಳ್ಳದ್ದೆಂಬ ದು

ತಿಳಿಯುವುದು. "ಆಯುರ್ವೇದ" ಈ ಶಬ್ದದ ಅರ್ಥವೇ "ಜೀವಿತಜ್ಞಾನ" ವೆಂತಿರುವದು. ಇದಕ್ಕೆ ಸ್ವಾಸ್ಥ್ಯಾನುವೃತ್ತಿಕರ, ರೋಗಪರಿಹಾರಕ ಹೀಗೆ ಎರಡು ಅಂಗಗಳಿವೆ. ಹೇತು, ಲಿಂಗ, ಔಷಧಿವಿಜ್ಞಾನ ಎಂಬ ಮೂರು ಸ್ಕಂಧಗಳಾದರೂ, ಇವರಲ್ಲಿ ಅಂತರ್ಭೂತಗಳಾಗಿವೆ. ಮೊದಲಿನ ಎರಡು ಸ್ಕಂಧಗಳಲ್ಲಿ ನಿಧಾನ-ಶಾಸ್ತ್ರವು ಚರ್ಚಿಸಲ್ಪಟ್ಟಿರುವುದು. ಆಯುರ್ವೇದದ ಅರ್ಧಾಂಗವಾದ ಆರೋಗ್ಯ ಶಾಸ್ತ್ರದ ವಿಷಯಕ್ಕೆ ಸುಶ್ರುತಾಚಾರ್ಯರು ಬರೆಯುವದೇನಂದರೆ:—

"ಸಮದೋಷಸ್ಸಮಾಗ್ನಿಶ್ಚ ಸಮಧಾತುಮಲಕ್ರಿಯಃ ।
ಪ್ರಸನ್ನಾತ್ಮೇಂದ್ರಿಯಮನಾಃ ಸ್ವಸ್ಥ ಇತ್ಯಭಿಧೀಯತೇ" ॥

ಮತ್ತೆ ತದುದ್ದೇಶವಾಗಿ ಸ್ವಾಸ್ಥ್ಯಸಂರಕ್ಷಣದ ಸಂದರ್ಭದಲ್ಲಿ ಶಾಸ್ತ್ರಕಾರರು ಬರೆಯುವದೇನಂದರೆ:—

"ತಚ್ಚನಿತ್ಯಂಪ್ರಯುಂಜೀತ ಸ್ವಾಸ್ಥ್ಯಂಯೇನಾನುವರ್ತತೇ ।
ಅಜಾತಾನಾಂವಿಕಾರಾಣಾಮನುತ್ಪತ್ತಿಕರಂಚಯತ್" ॥

ಈ ಶ್ಲೋಕಗಳಿಂದ ನಮ್ಮ ದಿನಚರ್ಯೆಯ ಕ್ರಮವು ಹೇಗೆ ಇರಬೇಕೆಂಬದರ ವಿಷಯವಾಗಿ ಆಯುರ್ವೇದ ಪಂಡಿತರ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯುವದು.

ಆಯುರ್ವೇದಕ್ಕೆ ತ್ರಿದೋಷತತ್ವವೇ ಮೂಲಾಧಾರವು.

ಆಯುರ್ವೇದವು ಯಾವ ಮೂಲತತ್ವಗಳ ಮೇಲೆ ರಚಿಸಲ್ಪಟ್ಟಿದೆ—ಇದೊಂದನ್ನೇ ಮಾತ್ರ ಲಕ್ಷ್ಯಕ್ಕೆ ತಂದರೆ ಶರೀರ, ರೋಗ, ಪ್ರತಿಕ್ರಿಯೆ, ಇವುಗಳೊಳಗೆ ಅಂತರ್ಭೂತವಾದ ಸಾಮಾನ್ಯ ದ್ರವ್ಯಗಳಲ್ಲಿಯ ಪರಸ್ಪರ ಸಂಬಂಧವು ತಿಳಿಯುವದು.

ಗುಣಾಯುಉಕ್ತಾದ್ರವ್ಯೇಷುಶರೀರೇಷ್ವಪಿತೇತಥಾ ।
ಸ್ಥಾನವೃದ್ಧಿಕ್ಷಯಾಸ್ತಸ್ಮಾತ್ ದೇಹಿನಾಂದ್ರವ್ಯಹೇತುಕಾಃ ॥
(ಸುಶ್ರುತ ಸೂತ್ರ ಅ. ೪೧)

ಆಯುರ್ವೇದದಲ್ಲಿಯ ದ್ರವ್ಯಗುಣ, ನಿದಾನ, ಚಿಕಿತ್ಸೆ ಮೊದಲಾದ ಯಾವತ್ತು ಗ್ರಂಥ ವಿಭಾಗಗಳನ್ನು ನೋಡಿದರೆ— ಅವುಗಳಲ್ಲಿ ತ್ರಿದೋಷ ತತ್ವದ ಸಂಬಂಧವೇ ಕಾಣಿಸುವದಲ್ಲದೇ, ಇನ್ನಾವ ಇತರ ತತ್ವಗಳು ನಿರ್ದೇಶಿಸಲ್ಪಟ್ಟಿಲ್ಲ. ಇದರ ಕಾರಣ ವೇನೆಂದರೆ— ಆಯುರ್ವೇದ ಕಟ್ಟಡವು ಅತೀವ ವ್ಯಾಪಕಸ್ವರೂಪವುಳ್ಳ ಪಾಂಚಭೌತಿಕ ತತ್ವಗಳಮೇಲೆ ರಚಿಸಲ್ಪಟ್ಟಿದೆ. ಈ ಶಾಸ್ತ್ರದಲ್ಲಿ ಎಲ್ಲ ಆಧುನಿಕ ವೈದ್ಯಕ ಪಂಥಗಳು ಅಡಕವಾಗಿವೆ. ಕೆಲವುಪಾಶ್ಚಿಮಾತ್ಯ ಪದವೀಧರರು ತಿಳಿದುಕೊಂಡಂತೆ ಆಯುರ್ವೇದದಲ್ಲಿ ಕೇವಲ ಸಿದ್ಧೌಷಧಿಗಳೂ, ಇಲ್ಲವೆ ಉತ್ತಮೋತ್ತಮವಾದ ಯೋಗಗಳೂ, ಇಷ್ಟೇ ಇರುವದಿಲ್ಲ; ಮತ್ತೂ ಆಯುರ್ವೇದಕ್ಕೆ ಈ ತರದ ನಿಘಂಟುಗಳಿಂದ ಬೆಲೆಯೂ, ಬಂದಿಲ್ಲ. ಆದರೆ ಅದಕ್ಕೆ ಮೂಲಧಾರವಾದ ತ್ರಿದೋಷ

ತತ್ವದಿಂದಲೇ ಮಹತ್ವವು ಬಂದಿರುತ್ತದೆ ಇನ್ನು ಈ ತ್ರಿದೋಷ ತತ್ವಗಳಲ್ಲಿಯ ರಹಸ್ಯವನ್ನು ತಿಳಿಸಿ ಹೇಳುವ ಗುರುಗಳು ಮಾತ್ರ ಕಡಿಮೆಯಾಗಿರುವರು ಸಂಸ್ಕೃತ ವಿದ್ಯೆಯ ಅಭ್ಯಾಸವು ಕಡಿಮೆಯಾಗುತ್ತ ಹೋದಹಾಗೆ ಶಾಸ್ತ್ರೀಯ ಗ್ರಂಥಗಳನ್ನೂ, ಅವುಗಳ ಮೇಲಿನ ಟೀಕಾತ್ಮಕ ಗ್ರಂಥಗಳನ್ನೂ, ಓದುವ ರೂಢಿಯು ಅಲ್ಪವಾಗಿದೆ. ಇದು ಶಾಸ್ತ್ರಾಧ್ಯಯನಕ್ಕೂ, ಶಾಸ್ತ್ರಾಭ್ಯುದಯಕ್ಕೂ, ಅನಿಷ್ಟಕಾರಣವು.

ಆಯುರ್ವೇದವು ಸೂತ್ರ ಬದ್ಧವಾಗಿದ್ದು, ಅತೀವ ವ್ಯಾಪಕ ಸ್ವರೂಪವುಳ್ಳದ್ದಾಗಿದೆಯೆಂದು ಮೇಲೆ ಹೇಳಿದೆ ಅದರ ಮೂಲತತ್ವಗಳನ್ನು ಅರಿತವರಿಗೆ ನಿದಾನಶಾಸ್ತ್ರವು ಅಷ್ಟು ಕಠಿಣವೆನಿಸಲಾರದು. ಆಯುರ್ವೇದದ ಸೃಷ್ಟಿಯಿಂದ ಚರ್ಚೆಯನ್ನು ಮಾಡಲಿಚ್ಛಿಸುವರು. ಮೊದಲು ತ್ರಿದೋಷಾದಿಗಳ ಸ್ಥಿತ್ಯಂತರಗಳನ್ನು ಮನಸ್ಸಲ್ಲಿ ತಂದು, ಆ ಮೇಲೆ ಅಧಿಷ್ಠಾನಗಳ ಕಡೆಗೆ ಲಕ್ಷ್ಯವನ್ನು ಪೂರೈಸುವದು ನೆಟ್ಟಗೆ ಇದರಿಂದ ರೋಗದ ಉತ್ಥಾನ, ಗಂಭೀರಾದಿ ದೋಷಗಳೂ, ಅವುಗಳ ಸಾಮಾನ್ಯ ರೇಷೆಯೂ, ಬೇಗನೆ ತಿಳಿಯುವುದು. ಆಯುರ್ವೇದದಲ್ಲಿ ರೋಗದ ವ್ಯಾಖ್ಯೆಯನ್ನು

ರೋಗಸ್ತುದೋಷವೈಷಮ್ಯಂದೋಷಸಾಮ್ಯಮ-ರೋಗತಾ ||

ಎಂದು ಮಹರ್ಷಿಗಳು ಮಾಡಿಟ್ಟಿರುವರು ದೋಷಗಳು ಸಮವಿದ್ದಾಗ ಯಾವತ್ತು ಇಂದ್ರಿಯಗಳು ತಮ್ಮ ತಮ್ಮ ಕ್ರಿಯೆಗಳನ್ನು ಚನ್ನಾಗಿಮಾಡಲರ್ಹವಾಗಿರುತ್ತವೆ. ಅದೇ ಧಾತುಗಳಲ್ಲಿ ವೈಷಮ್ಯವು ಪ್ರಾಪ್ತವಾದಾಗ ರೋಗವುಂಟಾಗುತ್ತದೆ. ಈ ಧಾತುವೈಷಮ್ಯವನ್ನು ನಿಶ್ಚಿತಗೊಳಿಸುವ ಶಾಸ್ತ್ರಕ್ಕೆ ಸಂಪ್ರಾಪ್ತಿಶಾಸ್ತ್ರವೆಂದು ಆಯುರ್ವೇದದಲ್ಲಿ ಹೇಳಿದೆ. ಆಧುನಿಕ ಪದ್ಧತಿಯಲ್ಲಿ ಇದಕ್ಕೇ " Pathalogy " ಎಂದು ಕರೆಯುವರು.

ನಿದಾನ ಪದ್ಧತಿಯು ಸಶಾಸ್ತ್ರವು ಮತ್ತು ಪ್ರಮಾಣಬದ್ಧವು.

ಆಧುನಿಕ ಪದ್ಧತಿಯಲ್ಲಿಯ ಸಂಪ್ರಾಪ್ತಿಶಾಸ್ತ್ರವನ್ನು ತಿಳಿದುಕೊಳ್ಳಲಿಕ್ಕೆ ಶಾರೀರ, ಇಂದ್ರಿಯವಿಜ್ಞಾನ, ಹೇತು, ರಿಷ್ಟಾರಿಷ್ಟವಿಜ್ಞಾನ ಮುಂತಾದ ವಿಷಯಗಳ ಜ್ಞಾನವು ಬೇಕಾಗುವಂತೆ ಆಯುರ್ವೇದಶಾಸ್ತ್ರದ ಸಂದರ್ಭದಲ್ಲಿಯೂ ಅದು ಅವಶ್ಯವಾಗಿರುತ್ತದೆ. ಆರ್ಯಗ್ರಂಥಕಾರರಾದರೂ ತಮ್ಮ ಗ್ರಂಥಗಳಲ್ಲಿ ಅವುಗಳನ್ನು ಸೂತ್ರರೂಪವಾಗಿ ಕೊಟ್ಟಿದ್ದಾರೆ. ಮೇಲಾಗಿ ಪ್ರತ್ಯಕ್ಷ, ಅನುಮಾನ, ಮತ್ತು ಆಪ್ತವಚನ ಮೊದಲಾದ ಶಾಸ್ತ್ರಾಧ್ಯಯನಕ್ಕೆ ಅವಶ್ಯವಿದ್ದ ಪ್ರಮಾಣಗಳ ವಿಚಾರಗಳಿಗೂ ತಕ್ಕ ಸ್ಥಾನವು ಕೊಡಲ್ಪಟ್ಟಿದೆ. ನಿದಾನಶಾಸ್ತ್ರವು ಅತಿ ಗಹನವಾದವರಿಂದಲೂ, ವಿಶೇಷತಃ ಬುದ್ಧಿಗಮ್ಯ ಮತ್ತು ತರ್ಕಪ್ರಮಾಣ ಪ್ರತಿಷ್ಠಿತವಿರುವದರಿಂದಲೂ, ಅದಕ್ಕೆ ಈ ಪ್ರಮಾಣಗಳ ಆಧಾರವು ಧಾರಾಳವಾಗಿ ಬೇಕಾಗಿರುತ್ತದೆ.

ಸರ್ವೇಷಾಂಚವ್ಯಾಧೀನಾಂವಾತಪಿತ್ತಶ್ಲೇಷ್ಮ ಏವಮುಲಂ ।
ತಲ್ಲಿಂಗತ್ವಾತ್ ದೃಷ್ಟಫಲತ್ವಾತ್ ಆಗಮಾಚ್ಚ ॥ (ಸುಶ್ರುತ ಸೂತ್ರ ೨೪)

ಚರಕಾಚಾರ್ಯರು ಕೂಡ ಈ ತತ್ವವನ್ನು ಕಂಡುಹಿಡಿದು, ಪ್ರತ್ಯಕ್ಷಪ್ರಮಾಣಗಳ ಸಂದರ್ಭಗಳಲ್ಲಿ ಬರೆಯುವುದೇನೆಂದರೆ—

ಪ್ರತ್ಯಕ್ಷಂಖಲುರೋಗತತ್ವಂಬುಭುತ್ಸಮಾನಃಸರ್ವೈರಿಂದ್ರಿಯೈಸ್ಸರ್ವಾನಿಂದ್ರಿಯಾನಾತುರಶರೀರಗತಾನ್ ಪರೀಕ್ಷೇತಾನ್ಯತ್ರರಸಜ್ಞಾನಾತ್। ತದ್ಯಥಾಅಂತ್ರಕೂಜನಂಸಂಧಿಸ್ಫೋಟನಮಂಗುಳೀಪರ್ವಣಾಂಶ್ಚಸ್ವರವಿಶೇಷಾಂಶ್ಚಯೇ
ನ್ಯೇಪಿಕೇಚಿತ್ ಶರೀರೋಪಗತಾಶ್ಶಬ್ದಾಸ್ಸ್ಯುಸ್ತಾಞ್ಛ್ರೋತ್ರೇಣಪರೀಕ್ಷೇತ್ ।
ವರ್ಣಸಂಸ್ಥಾನಪ್ರಮಾಣಚ್ಛಾಯಾಃಶರೀರಪ್ರಕೃತಿವಿಕಾರೌಚಕ್ಷುರ್ವೈಷಯಿಕಾನಿಚಾನ್ಯಾನಿಕಾನಿಚಿತಾನಿಚಕ್ಷುಷಾಪರೀಕ್ಷೇತ್ ॥ (ಚರಕ-ವಿಮಾನ ೬೪)

ನಿದಾನ ಶಾಸ್ತ್ರದ ವ್ಯಾಪಕತೆಯು

ಪ್ರತ್ಯಕ್ಷ ಪ್ರಯೋಗಗಳಲ್ಲಿ ಅನುಭವ ಯೋಗಗಳ ಅಂತರ್ಭಾವವು ತಾನಾಗಿಯೇ ಆಗುತ್ತದೆ. ಒಟ್ಟಿಗೆ ಆಯುರ್ವೇದದ ನಿದಾನಪದ್ಧತಿಯ ವಿವೇಚನ, ಉಪಪತ್ತಿ, ಸಿದ್ಧಾಂತಗಳನ್ನು ನೋಡಿದರೆ ನಮ್ಮ ಪೂರ್ವಜರು ಪ್ರತ್ಯಕ್ಷ ಪ್ರಯೋಗಗಳನ್ನು ಮಾಡಿ ತದನಂತರ ಅವುಗಳ ಫಲಿತಾಂಶಗಳ ಮೇಲಿಂದ ಅನುಮಾನಗಳನ್ನು ತೆಗೆದರೆಂದು ಅನ್ನಬೇಕಾಗುತ್ತದೆ. ನಿದಾನ, ಪೂರ್ವರೂಪ, ರೂಪ, ಉಪಶಯ, ಸಂಪ್ರಾಪ್ತಿಗಳನ್ನೊಳಗೊಂಡ ನಿದಾನಶಾಸ್ತ್ರವು ಕಾಲ್ಪನಿಕ ವಾಗಬಹುದೇ? ಅದರಂತೆ ಚಯ, ಪ್ರಕೋಪ, ಪ್ರಸಾರ, ಸ್ಥಾನ, ಸಂಶ್ರಯ, ವ್ಯಕ್ತಿ, ಭೇದ ಮೊದಲಾದ ರೋಗಾವಸ್ಥೆಗಳನ್ನು ಮಾರ್ಮಿಕವಾಗಿ ವರ್ಣಿಸಿದ ರೋಗವಿಜ್ಞಾನ ಶಾಸ್ತ್ರವು ಅಸಂಬದ್ಧವಾದೀತೇ? ಇಲ್ಲವೆ ಲಂಘನ, ಬೃಂಹಣ, ರೂಕ್ಷಣ, ಸ್ನೇಹನ, ಸ್ವೇದನ, ಸ್ತಂಭನ ಮೊದಲಾದ ಯೋಜನಾ ಪದ್ಧತಿಗಳನ್ನು ವಿವೇಚಿಸುವ ಚಿಕಿತ್ಸಾಶಾಸ್ತ್ರವು ಸಂದಿಗ್ಧವಾದೀತೇ? ಒಟ್ಟಿಗೆ ವಿವೇಚನ ಪದ್ಧತಿಯು ಬೇರೆಯಾಗಿರುವುದರಿಂದ—ಅಂದರೆ—ಕೇವಲ ಇಂದ್ರಿಯ ವಿಕೃತಿಗಳ ಮೇಲೆ ಅವಲಂಬಿಸದೆ, ಅಧ್ಯಾತ್ಮಗಣ ಸಂಗ್ರಹದ ವಿಕಾರಗಳ ಮೇಲೆಯೂ, ತ್ರಿಧಾತುಗಳ ವೈಷಮ್ಯಗಳ ಮೇಲೆಯೂ ಸಪ್ತಧಾತುಗಳ ಕ್ಷಯ, ವೃದ್ಧಿಗಳ ಮೇಲೆಯೂ, ಆಶಯಗಳಲ್ಲಿಯ ಕ್ರಿಯಾಂತರಗಳ ಮೇಲೆಯೂ, ಸ್ರೋತಸ್ಸುಗಳ ಸ್ಥಿತ್ಯಂತರಗಳ ಮೇಲೆಯೂ, ಮಲಾಯತನಗಳ ಉತ್ಸರ್ಜನ ಕ್ರಿಯೆಗಳ ಮೇಲೆಯೂ ಭಾರವನ್ನಿಟ್ಟು ಆಯುರ್ವೇದ ಶಾಸ್ತ್ರಕಾರರು ತಮ್ಮ ನಿದಾನಶಾಸ್ತ್ರವನ್ನು ನಿರ್ಧರಿಸಿದ್ದಾರೆ.

ನಿದಾನಶಾಸ್ತ್ರದಲ್ಲಿ ಕಾರಣಮೀಮಾಂಸೆಯೂ, ಲಕ್ಷಣವರ್ಣನವೂ ಮತ್ತು ಈ ಉಭಯ ವಿಷಯಗಳ ಮೇಲೆ ಪ್ರಸ್ಥಾಪಿತವಾದ ಸಂಪ್ರಾಪ್ತಿಶಾಸ್ತ್ರವೂ ಅಂತ

ಭೂರ್ತವಾಗಿವೆ. ಈ ಶಾಸ್ತ್ರದ ರಚನೆಯು ತ್ರಿಧಾತುಮೀಮಾಂಸೆಗೆ ಅನುಸಾರವಾಗಿರುವದರಿಂದ ಹೇಳುವಪದ್ಧತಿಯು ಮಾತ್ರ ಸ್ವತಂತ್ರವಾಗಿರುತ್ತದೆ. ರೋಗಗಳ ವರ್ಗೀಕರಣವು ಸರ್ವಾಂಗ ಸಂಪೂರ್ಣವಾಗಿದೆ. ಚರಕಾಚಾರ್ಯರು—

ರೋಗೋತ್ಪತ್ತಿಗನುಸಾರವಾಗಿ ರೋಗವಿವರಣೆ.

ಪ್ರಭಾವಭೇದ, ಬಲಭೇದ, ಅಧಿಷ್ಠಾನಭೇದ, ನಿಮಿತ್ತಭೇದ, ಮತ್ತು ಆಶಯಭೇದ ಎಂಬ ಐದು ಪ್ರಕಾರಗಳಿಂದ ರೋಗಗಳ ಜ್ಞಾನವನ್ನು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. (ವಿಮಾನಸ್ಥಾನ) ಸುಶ್ರುತಾಚಾರ್ಯರು ಇದಕ್ಕೂ ಹೆಚ್ಚಿಗೆ ಸ್ಪಷ್ಟೀಕರಣವನ್ನು ಮಾಡಿ ರೋಗಗಳು—ಆದಿಬಲ, ಜನ್ಮಬಲ, ದೋಷಬಲ, ಸಂಘಾತಬಲ, ಕಾಲಬಲ, ದೈವಬಲ ಮತ್ತು ಸ್ವಭಾವಬಲಗಳಿಂದ ಪ್ರವೃತ್ತವಾಗಿರುತ್ತವೆಂದು ವರ್ಣಿಸಿರುತ್ತಾರೆ. ಮಾಧವಾಚಾರ್ಯರ ರೋಗಾನುಕ್ರಮಣಿಕೆಯು ಆಧುನಿಕ ಗ್ರಂಥಗಳಲ್ಲಿಯ ವಿಷಯಕ್ರಮವನ್ನು ಹೋಲುತ್ತದೆ. ರೋಗಚಿಕಿತ್ಸೆಯಲ್ಲಿ ಇವುಗಳ ಮಹತ್ವವು ಬಹಳವಾಗಿರುತ್ತದೆಂದು ಹೇಳುವ ಕಾರಣವಿಲ್ಲ. ಆಯುರ್ವೇದ ಚಿಕಿತ್ಸೆಯ ಮೂಲತತ್ವಗಳು ಅನೇಕ ಪ್ರಕಾರವುಳ್ಳವುಗಳಿದ್ದರೂ, ಪ್ರತ್ಯಕ್ಷ ಕ್ರಿಯೆಯನ್ನು ಮಾಡುವಾಗ ಸುಲಭವಾಗಬೇಕೆಂದು

"ನಚಸಂಖ್ಯೇಯಾಗ್ರೇಷು ಭೇದಪ್ರಕೃತ್ಯಂತರೀಯೇಷು" (ವಿಮಾನ ಅ೬)

ಹೇತುಲಕ್ಷಣಗಳ ಮೇಲೆ ನಿದಾನದ ಅವಲಂಬನೆ

ಎಂದು ನೆನಪುಕೊಟ್ಟು ಚರಕಾಚಾರ್ಯರು ದೋಷ ಮತ್ತು ವ್ಯಾಧಿ ಹೀಗೆ ಮುಖ್ಯವಾಗಿ ಎರಡು ಭೇದಗಳನ್ನು ಕಲ್ಪಿಸಿ, ಆ ಮೇಲೆ ಔಷಧಯೋಜನೆಯನ್ನಾರಂಭಿಸಬೇಕೆಂದು ಹೇಳಿದ್ದಾರೆ.

ತಾನ್ ದೋಷಾಂಸ್ತ್ರಿಧಾದಿಶ್ಯ ವ್ಯಾಧೀನ್ ಸಾಧ್ಯಾನ್ ಸಮಾಚರೇತ್ ।
ವ್ಯಾಧಿಹೇತುಪ್ರತಿದ್ವಂದ್ವೈರ್ಮಾತ್ರಾಕಾಲೌವಿಚಾರಯನ್॥ (ಚರಕಸೂತ್ರ ಅ೭)

ಹೇತುಮೀಮಾಂಸೆ.

ಕಾರಣಮೀಮಾಂಸೆಯಾದರೂ, ಆಯುರ್ವೇದ ಗ್ರಂಥಗಳಲ್ಲಿ ಬಹಳ ವಿಶದವಾಗಿ ಹೇಳಲ್ಪಟ್ಟಿದೆ. ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಹೇತುಗಳು ರೋಗಕ್ಕೆ ಯಾವ ಯಾವ ರೀತಿಯಾಗಿ ಕಾರಣೀಭೂತವಾಗಿರುತ್ತವೆಂಬದನ್ನು ಸರಸವಾಗಿ ಕೆಳಗಿನ ಶ್ಲೋಕಗಳಲ್ಲಿ ಆಯುರ್ವೇದಕಾರರು ಹೇಳಿದ್ದಾರೆ.

ಚತ್ವಾರೋವ್ಯಭಿಚಾರದೂರನಿಕಟಪ್ರಾಧಾನಿಕತ್ವಾತ್ಪುನಃ ।
ತೇಸಾತ್ಮ್ಯೇಂದ್ರಿಯಕಾರ್ಯಯುಕ್ಪರಿಣತಿಪ್ರಜ್ಞಾಪರಾಧಾತ್ತ್ರಿಧಾ ॥
ಋಗ್ದೋಷೋಭಯಕಾರಣಾದಪಿತಯಾದ್ವ್ಯಾವ್ಯಂಜಕೋತ್ಪಾದಕೌ ।
ಬಾಹ್ಯಾಭ್ಯಂತರಭೇದತೋಪಿದ್ವಿಧಾಹೇತೋಃಪ್ರಭೇದಾಇಮೇ ॥
ದೋಷಸ್ಯಚಪ್ರಕೃತಿವೈಕೃತಾಭ್ಯಾಂ ।
ಭೇದೋನುಬಂಧ್ಯಾದಪಿಚಾನುಬಂಧಾತ್ ॥
ತಥಾಪ್ರಕೃತ್ಯಪ್ರಕೃತಿತ್ವಯೋಗಾತ್ ।
ತಥಾಶಯಾಕರ್ಣವಶಾದ್ಗತೇಶ್ಚ ॥

(ಮಾಧವನಿದಾನ—ಮಧುಕೋಶವ್ಯಾಖ್ಯೆ)

ಧಾತು ವೈಷಮ್ಯ.

ಸೂಕ್ಷ್ಮವಾಗಿ ಮತ್ತು ಆಳವಾಗಿ ವಿಚಾರಮಾಡಿ ನೋಡಿದರೆ ಯಾವತ್ತು ರೋಗಕಾರಣಗಳು ಈ ಮೇಲಿನ ಅವತರಣದಲ್ಲಿ ಅಂತರ್ಭೂತವಾಗಿವೆಯೆಂದು ಯಾರಿಗಾದರೂ ತಿಳಿಯಬಹುದು. ಬಾಹ್ಯಕಾರಣಗಳಾದ ಜಂತುಗಳಾಗಲಿ ಅಭ್ಯಂತರ ಕಾರಣಗಳಿಂದ ಅಸಮ ಧಾತುಗಳಾಗಲಿ, ಈ ದ್ವಾರದಿಂದಲೇ ವ್ಯಾಧಿಗಳನ್ನು ಹೊರಗೆಡುವುವು. ರೋಗೋತ್ಪಾದಕಹೇತುವುಯಾವುದೇ ಇದ್ದರೂ, ಪರಿಣಾಮವು ತ್ರಿಧಾತುಗಳ ಮೇಲೆಯೇ ಆಗುವದಲ್ಲದೆ ಮತ್ತಾವ ಕ್ಷೇತ್ರದಲ್ಲಿಯೂ ಆಗಲಾಗದು. ಅಧ್ಯಾತ್ಮಗಣ ಸಂಗ್ರಹಯುಕ್ತವಾದ ಶರೀರವೇ ರೋಗಬೀಜಗಳ ಬೆಳವಣಿಗೆಗೆ ಕ್ಷೇತ್ರಸ್ಥಾನವು. ದೇಹ ಮನೋದೇಶಗಳಮೇಲೆ ಈ ಪರಿಪರಿಣಾಮವಾದ ಕೂಡಲೆ ಧಾತುವೈಷಮ್ಯವು ಉತ್ಪನ್ನವಾಗುತ್ತದೆ. ಇಲ್ಲಿಂದಲೇ ಮುಂದೆ ರೋಗಾದಿಗಳ ಉತ್ಪತ್ತಿಯು, ವೈಷಮ್ಯ ಉಂಟಾದಕೂಡಲೆ ಅದನ್ನು ಬೆಳೆಯದಂತೆಮಾಡುವ ಉಪಕ್ರಮಗಳು ಶರೀರದ ಧಾತುಗಳಲ್ಲಿಯೂ, ಸ್ರೋತಸ್ಸುಗಳಲ್ಲಿಯೂ, ಆರಂಭವಾಗುತ್ತವೆ. ಇದು ಮೂಲತಃ ವಾಯುಶಕ್ತಿಯಿಂದ—

ದೋಷಧಾತ್ವಗ್ನಿಸಮತಾಂಸಂಪ್ರಾಪ್ತಿವಿಷಯೇಷುಚ ।
ಕ್ರಿಯಾಣಾಮಾನುಲೋಮ್ಯಂಚಕರೋತ್ಯಕುಪಿತೋಽನಿಲಃ ॥

[ಸುಶ್ರುತ-ನಿದಾನ ೬೧]

ಅಧುನಿಕ ಶಾಸ್ತ್ರದಲ್ಲಿಯ ಧಾತು ಕ್ರಿಯೆಗಳ ವಿಚಾರ.

ಅಧುನಿಕ ಶಾಸ್ತ್ರವೂ ಕೂಡಾ ಇದನ್ನು ಪ್ರತಿಪಾದಿಸುತ್ತವೆ. ಶರೀರವು ಅನಂತ ಜೀವಂತ ಘಟಕಗಳಿಂದ ಅಥವಾ ಚೈತನ್ಯ ಪರಮಾಣುಗಳಿಂದ ತುಂಬಿಕೊಂಡಿದೆ. ಇವುಗಳಲ್ಲಿ ಒಂದು ಪ್ರಕಾರದ ಸಾಧರ್ಮ್ಯವೂ, ಸಂವೇದನಾಧರ್ಮವೂ, ಇರುತ್ತವೆ. ಯಾವದೇ ಕಾರಣದಿಂದ ಇವುಗಳ ಮೇಲೆ ಆಘಾತವು ಉಂಟಾಗಲು ಇವುಗಳಲ್ಲಿ ಒಂದು ಪ್ರಕಾರದ ನೈಸರ್ಗಿಕ ಪ್ರತಿಕಾರ ಶಕ್ತಿಯ ಬಲದಿಂದ ಕ್ರಿಯೆ, ಪ್ರತಿಕ್ರಿಯೆಗಳು ಪ್ರಾಪ್ತವಾಗುವವು. ಈ ಕ್ರಿಯೆ ಪ್ರತಿಕ್ರಿಯೆಗಳ ಅಥವಾ ಘಟನೆ-ವಿಘಟನೆಗಳ ಮೇಲೆ ರೋಗದ ವೃದ್ಧಿ, ಶಮನಗಳು ಅವಲಂಬಿಸಿರುವವು. ಘಟನೆ—ವಿಘಟನೆಗಳೆಂದರೆ—ಚೈತನ್ಯಪರಮಾಣುಗಳಲ್ಲಿ ಅಥವಾ ಕಣಗಳಲ್ಲಿ (Cells) ಉಂಟಾಗುವ ವೃದ್ಧಿ-ಕ್ಷಯಗಳು. ಈ ವೃದ್ಧಿ-ಕ್ಷಯಗಳನ್ನು ಹುಟ್ಟಿಸುವ ನಿಯಾಮಕ ಶಕ್ತಿಗೆ ನಿಸರ್ಗಪ್ರತಿಕಾರಕಶಕ್ತಿ (Vital force) ಎನ್ನುವರು. ಈ ಶಕ್ತಿಯ ಬಲದಿಂದ ಪಚನ, ಶೋಷಣ, ಪೋಷಣ, ರಕ್ತಾಭಿಸರಣ ಚಲನವಲನ, ಮನನ, ಚಿಂತನ, ಮುಂತಾದ ವ್ಯಾಪಾರಗಳು ನಡೆಯುತ್ತವೆ. ಈ ವ್ಯಾಪಾರಗಳಲ್ಲಿ ಕೆಲವು ಸೂಕ್ಷ್ಮಸ್ವರೂಪವುಳ್ಳವುಗಳೂ, ಕೆಲವು ಸ್ಥೂಲಸ್ವರೂಪವುಳ್ಳವುಗಳೂ ಇರುತ್ತವೆ. ಅವುಗಳ ಕ್ರಿಯೆಯು ರಸಾಯನಿಕ ಪದ್ಧತಿಯಿಂದಾಗಲಿ ಅಥವಾ ಭೌತಿಕ ಶಾಸ್ತ್ರಾನುಸಾರವಾಗಿಯಾಗಲಿ ನಡೆಯುತ್ತದೆ. ಈ ಪರಮಾಣು

ಗಳು ಚೈತನ್ಯವುಳ್ಳವುಗಳಾದ್ದರಿಂದ ಕೇವಲ ಪಂಚಭೂತಾತ್ಮಕ ದ್ರವ್ಯಗಳಂತೆ ಇವುಗಳ ಅವಸ್ಥೆಯು ಇರುವದಿಲ್ಲ. ಇವು ಸೇಂದ್ರಿಯವಾಗಿರುತ್ತವೆ. ಅಂದರೆ ತ್ರಿಧಾತುಗಳಿಂದ ಕೂಡಿರುತ್ತವೆ. ಇವುಗಳ ಕೇಂದ್ರಸ್ಥಾನಗಳೆಂದರೆ ಧಾತುಗಳು (Tissues) ಮತ್ತು ಇಂದ್ರಿಯಗಳು (Organ) ಈ ಪರಮಾಣುಗಳಲ್ಲಿ ಜೀವನ-ಬಿಂದು (Nuclens) ಮತ್ತು ಜೀವನರಸ (Proto plasm) ಹೀಗೆ ಎರಡು ದ್ರವ್ಯಗಳಿರುತ್ತವೆ. ಶರೀರದಲ್ಲಿ ಯಾವ ಕ್ರಿಯೆಯು ಘಟಿಸಿದರೂ ಇವುಗಳ ಮುಖಾಂತರವಾಗಿಯೇ ಆಗಬೇಕಾಗುತ್ತದೆ ನಾವು ಉಂಡ, ತಿಂದ ಅನ್ನದರೂಪಾಂತರವಾಗಿ ಅಲ್ಲಿಂಡ ಉತ್ಪನ್ನವಾದ ರಾಸಾಯನಿಕ ಘಟಕಗಳಿಂದ (Fats, Carbo-hydrates, Protuids, Weter and Salts) ರಸರಕ್ತಾದಿಗಳು ಹುಟ್ಟಿ ತದ್ರಕ್ತ ಮುಖಾಂತರವಾಗಿ ಎಲ್ಲ ಪರಮಾಣುಗಳಿಗೆ ಪೋಷಕವಾಗಿರುವ ದ್ರವ್ಯಗಳು ದೊರಕುತ್ತವೆ. ಈ ಪರಮಾಣುಗಳು ತಮ್ಮ ತಮ್ಮ ಕ್ರಿಯಾಭೇದದಿಂದಲೂ (Physiological differentiation) ಅವಸ್ಥಾಭೇದದಿಂದಲೂ, (Morpho-logical differentiation) ಬೇರೆ ಬೇರೆ ಆಶಯಗಳಲ್ಲಿ ಬೇರೆ ಬೇರೆ ಕರ್ಮಗಳನ್ನು ಮಾಡುತ್ತಿರುತ್ತವೆ. ಇದೇ ಶಾರೀರಕ ಕರ್ಮಗಳನ್ನು ವಾತ, ಪಿತ್ತ, ಕಫಗಳು ಷಡ್ರಸಯುಕ್ತವಾದ ಆಹಾರದಿಂದ ಪರಿಣತವಾದ ರಸರಕ್ತಾದಿಗಳ

ಎರಡೂ ಶಾಸ್ತ್ರಗಳ ತುಲನಾತ್ಮಕ ದೃಷ್ಟಿಯಿಂದ ವಿವೇಚನ,

ಸಹಾಯದಿಂದ ಮಾಡುವವು. ಸ್ವಲ್ಪದರಲ್ಲಿ ಹೇಳಬೇಕಾದರೆ—ಆಕೃತಿಭೇದದಿಂದ (ಅಪ್, ತೇಜ, ವಾಯು) ಕಫ, ಪಿತ್ತ, ವಾತಗಳು, ಅವಸ್ಥಾಭೇದವನ್ನೂ, ಪ್ರಕೃತಿಭೇದದಿಂದ ಕ್ರಿಯಾಭೇದವನ್ನೂ. ಮತ್ತು ವಿಕೃತಿಭೇದದಿಂದ ಧಾತುವೈಷಮ್ಯವನ್ನೂ ಸೂಚಿಸುತ್ತವೆ. ತ್ರಿಧಾತು ಎಂಬ ಸೂತ್ರಬದ್ಧವಾದ ಹೆಸರಿನ ರಹಸ್ಯವೇ ಇದು. ಆಯುರ್ವೇದಕಾರರು ಜೀವನಸೃಷ್ಟಿಯ ಉತ್ಪತ್ತಿ ಮೀಮಾಂಸೆಯನ್ನು ಜೀವನಶಾಸ್ತ್ರದ ಮುಖಾಂತರವೇ ಮಾಡಲುದ್ಯುಕ್ತರಾದ್ದರಿಂದ ಅವರಿಗೆ ಇತರ ಉಪಶಾಸ್ತ್ರಗಳ ವಿಷಯಕ್ಕೆ ಬೇರೆ ಬೇರೆ ವಿಚಾರಗಳನ್ನು ಮಾಡುವ ಪ್ರಸಂಗವು ಬಾರದೆ, ತ್ರಿಧಾತು ಎಂಬ ಹೆಸರಿನ ಒಂದೇ ಸೂತ್ರದಲ್ಲಿ ಯಾವತ್ತು ಮಣಿಗಳನ್ನು ಪೋಣಿಸಿ ತೋರಿಸಿ ತಮ್ಮ ಜಾಣತನವನ್ನು ವ್ಯಕ್ತಪಡಿಸಿರುವರು. ಚರಕಾಚಾರ್ಯರು ಶರೀರದಲ್ಲಿಯ ಅವಯವಗಳನ್ನು (೧) ಸ್ಥೂಲಭೇದದಿಂದ ಪಾರ್ಥಿವ, ಆಪ್ಯ, ಆಗ್ನೇಯ, ವಾಯುವ್ಯ, ಮತ್ತು ಅಂತರಿಕ್ಷಗಳೆಂದೂ (೨) ಸೂಕ್ಷ್ಮಭೇದದಿಂದ ಪರಮಾಣುಗಳೆಂದೂ ವರ್ಣಿಸಿದ್ದಾರೆ. (ಚರಕ-ಶಾರೀರ ಅ,೭) ರಸರಕ್ತಾದಿ ಸಪ್ತಧಾತುಗಳು ಮೊದಲನೆಯ ವರ್ಗದವು. ಮತ್ತು ಚೈತನ್ಯಾಯತನಗಳು ಎರಡನೆಯ ವರ್ಗದವು ಆಗಿರುತ್ತವೆ. ಚೈತ್ಯನ್ಯಾಯತನಗಳಿಗೆ ಮೂಲಚೈತನ್ಯದಾಯಕ ಶಕ್ತಿಯೆಂದರೆ ವಾಯುವು. ಇದು ಉಳಿದ ಎರಡೂ ಅಂದರೆ ಕಫ ಮತ್ತು ಪಿತ್ತ ಧಾತುಗಳನ್ನು ಕೂಡಿಕೊಂಡು ಶರೀರದಲ್ಲಿಯ ಯಾವತ್ತು ವ್ಯಾಪಾರಗಳನ್ನು ಸಾಗಿಸುತ್ತದೆ.

ವಾತಪಿತ್ತಕಫಾದೇಹೇಸರ್ವಶ್ರೋತೋನುಸಾರಿಣಃ ॥
ವಾಯುರೇವಹಿಸೂಕ್ಷ್ಮತ್ವಾತ್‌ದ್ವಯೋಸ್ತತ್ರಾಪ್ಯುದೀರಣಃ ॥
( ಚರಕ-ಚಿಕಿತ್ಸಾ ಅ ೨೮. )

ಆಧುನಿಕ ಶಾಸ್ತ್ರದಲ್ಲಿ ತ್ರಿದೋಷವಿಚಾರಾಭಾವವು ಸಂಸ್ಕೃತಿ ಬಿನ್ನತ್ವದ ಕಾರಣದಿಂದಲೇ

ವಾತ, ಪಿತ್ತ, ಕಫ, ಸಂಯುಕ್ತವುಳ್ಳ ತ್ರಿಕೂಟಕ್ಕೆನ್ನೇ ತ್ರಿದೋಷವೆಂಬ ಹೆಸರು. ಸ್ಥೂಲವಾನದಿಂದ ಶರೀರ ರಚನೆಯು ಸಂದರ್ಭದಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಕಲ್ಪನೆಗಳಲ್ಲಿ ವಿಶೇಷವಾದ ವ್ಯತ್ಯಾಸಗಳಿಲ್ಲ. ಆಯುರ್ವೇದದಲ್ಲಿಯ ಸೂಕ್ಷ್ಮಾವಯವ, ಧಾತು, ಆಶಯ ಮತ್ತು ಮಲಾಯತನ ಇವುಗಳಿಗೆ ಕ್ರಮಶಃ ಆಧುನಿಕ ಶಾಸ್ತ್ರದಲ್ಲಿ ( cells, tissues, organs and excretarypassages ) ಎಂದು ಅನ್ನಬಹುದು. ತ್ರಿದೋಷತತ್ವವು ಪಾತ್ಯ ಆಧುನಿಕ ಶಾಸ್ತ್ರದಲ್ಲಿ ಬೆರೆತಿಲ್ಲ. ಇದಕ್ಕೆ ಕಾರಣವೇನಂದರೆ ದೇಶ ವಿದೇಶಗಳಲ್ಲಿಯ ಸಂಸ್ಕೃತಿ ಭಿನ್ನತತ್ವವು. ವಿಚಾರ ಸರಣಿಯು ಯಾವಾಗಲೂ ಅವರವರ ಸಂಸ್ಕೃತಿಯನ್ನು ಅವಲಂಬಿಸುವುದು ಸ್ವಾಭಾವಿಕವು. ವಿಶ್ವ ಮತ್ತು ಶರೀರ ಇವುಗಳ ಉತ್ಪತ್ತಿಯನ್ನು ಶೋಧಿಸುವಾಗ ಪಾಶ್ಚಿಮಾತ್ಯರು ಸ್ಥೂಲಮೂಲತತ್ವಗಳಿಗೆ ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಆರ್ಯರು ಸೂಕ್ಷ್ಮ ಮೂಲತತ್ವಗಳಿಂದ ಸೃಷ್ಟಿಯು ಆರಂಭವಾಗಿರುತ್ತದೆಂದು ನಿರ್ಧರಿಸಿರುತ್ತಾರೆ.

ವಿಕಾರೋತ್ಪತ್ತಿಗೆ ಶರೀರ ಮತ್ತು ಸತ್ವ ಇವೆರಡೂ ಕ್ಷೇತ್ರಗಳು.

ನಮ್ಮ ಶಾಸ್ತ್ರಜ್ಞರು ಶರೀರದಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಹೀಗೆ ಎರಡು ಭಾಗಗಳನ್ನು ಮಾಡಿರುವರು. ಮಾಂಸಮಯ ಶರೀರವು ಸ್ಥೂಲದೇಹವು ವಾಸನಾಮಯ ಶರೀರವು ಸೂಕ್ಷ್ಮದೇಹವು ಇದೇ ಮಾನಸಶರೀರವು. ಇದರಲ್ಲಿ ಪಂಚ ಜ್ಞಾನೇಂದ್ರಿಯ, ಮನ, ಬುದ್ಧಿ, ಅಹಂಕಾರ ಇತ್ಯಾದಿ ಸೂಕ್ಷ್ಮತತ್ವಗಳು ಸಮಾವಿಷ್ಟವಾಗಿರುತ್ತವೆ. ಮನಸ್ಸು ಸ್ವತಂತ್ರವಾದ ದ್ರವ್ಯವಿದ್ದು ಅದಕ್ಕೆ ಸತ್ವ, ರಜ, ತಮ ಎಂಬ ಮೂರು ಗುಣಗಳಿರುತ್ತವೆ. ಸಮಸ್ಥಿತಿಯಲ್ಲಿದ್ದಾಗ ಅದು ಸತ್ವ ಗುಣ ವಿಶಿಷ್ಟವಾಗಿರುತ್ತದೆ. ಅಸಮಸ್ಥಿತಿಯು ಬಂದಕೂಡಲೇ ರಜಸ್ ಹಾಗು ತಮಸ್ ದೋಷಗಳು ಮುಂದರಿಯುತ್ತವೆ ಶರೀರದ ಶುಭಾಶುಭ ಪ್ರವೃತ್ತಿ ನಿವೃತ್ತಿ ಸ್ಥಿತಿಗಳು ಈ ಅಧ್ಯಾತ್ಮಗಣಸಂಗ್ರಹದ ಮೇಲೆ ಅವಲಂಬಿಸಿರುತ್ತವೆ. ಶರೀರದೋಷಗಳಾದರೂ ಮನಸ್ಸಿನಮೇಲೆ ಪರಿಣಾಮವನ್ನುಂಟುಮಾಡುವವು. ಸ್ಥೂಲದೇಹವು ಮುಖ್ಯತಃ ಪಂಚಭೂತಾತ್ಮಕವಾದದ್ದು. ಸೂಕ್ಷ್ಮದೇಹವು ಅಧ್ಯಾತ್ಮಗಣ ಸಂಗ್ರಹವುಳ್ಳದ್ದು. ಶರೀರವು ಇವೆರಡರ ಸಮ್ಮೇಳನದಿಂದಾದ ವಿಷಯವು. ತ್ರಿಧಾತುಗಳು ಪಂಚಭೂತ ವಿಕಾರ ಸಮುದಾಯರೂಪಗಳಾಗಿ ಜಡಶರೀರವನ್ನೂ

ಮತ್ತು ತ್ರಿಗುಣಾತ್ಮಕವಾಗಿ ಮಾನಸಶರೀರವನ್ನೂ ಆಕ್ರಮಿಸಿಕೊಂಡಿರುವವು. ಸ್ಥೂಲಶರೀರದಲ್ಲಿಯ ವ್ಯಾಪಾರಗಳನ್ನು ಪದಾರ್ಥವಿಜ್ಞಾನ ಹಾಗು ರಸಾಯನ ಶಾಸ್ತ್ರಗಳ ಸಹಾಯದಿಂದ ವಿವೇಚಿಸಬಹುದು. ಆದರೆ ಸೂಕ್ಷ್ಮಶರೀರದ ಗುಣ ಕರ್ಮಗಳನ್ನು ಈ ರೀತಿಯಿಂದ ಸ್ಪಷ್ಟೀಕರಿಸಲಾಗುವುದಿಲ್ಲ.

ಆದಕ್ಕಾಗಿಯೇ ಆಯುರ್ವೇದಕಾರರು ಇವೆರಡೂ ದೇಹಭಾಗಗಳಿಗೆ ಸಾಮಾನ್ಯವಾಗಿರುವ ತ್ರಿಧಾತುಗಳನ್ನು ಹಿಡಿದು ಅವುಗಳ ಗುಣಕರ್ಮಗಳಮೇಲೆ ತಮ್ಮ ತ್ರಿಧಾತುವಿಮಾಂಸೆಯನ್ನು ಕಲ್ಪಿಸಿದ್ದಾರೆ ಈ ಶಬ್ದಾಭಿದಾನವು ಕೇವಲ ವಿಷಯ ವಿವೇಚನ ಸೌಲಭ್ಯಕ್ಕೋಸ್ಕರವಾಗಿಯೇ ಇರದೆ ಶರೀರದಲ್ಲಿಯ ಯಾವತ್ತು ವ್ಯಾಪಾರಗಳನ್ನು ನಡೆಯಿಸುವ ಸಾಮರ್ಥ್ಯದದ್ಯೋತವಾಗಿದೆ. ಒಟ್ಟಿಗೆ ಜೀವಾತ್ಮನ ಸಾನ್ನಿಧ್ಯದಿಂದ ಶರೀರದೊಳಗಿನ ಪಾಂಚ ಭೌತಿಕದ್ರವ್ಯಗಳಿಗೆ ತ್ರಿಧಾತುತ್ವವು ಉಂಟಾಗಿರುತ್ತದೆ.

ಇಂದ್ರಿಯ ಉತ್ಪತ್ತಿಗಳಿಗೆ ಆಧುನಿಕ ಶಾಸ್ತ್ರದಲ್ಲಿ ವಿಶೇಷತಃ ಮಹತ್ವವನ್ನು ಕೊಟ್ಟ ಕಾರಣವು.

ಆಧುನಿಕ ವೈದ್ಯಶಾಸ್ತ್ರದಲ್ಲಿಯ ಇಂದ್ರಿಯಜ್ಞಾನಶಾಸ್ತ್ರವು ಇಂದ್ರಿಯ ಪ್ರಧಾನವೂ ಧಾತುಪ್ರಧಾನವೂ ಆಗಿರುತ್ತದೆ. ಅನೇಕ ಪ್ರಯೋಗಗಳನ್ನು ಮಾಡಿ ಆಧುನಿಕಪಂಡಿತರು ಈ ಶಾಸ್ತ್ರವನ್ನು ಈಗಿನ ವಿಶಾಲ ಸ್ವರೂಪಕ್ಕೆ ತಂದಿದ್ದಾರೆ. ಆದರೂ ತತ್ವಶಃ ಶರೀರದಲ್ಲಿಯ ಯಾವತ್ತು ಧಾತುಗಳ ಕ್ರಿಯೆಗಳನ್ನು ಸಮರ್ಥಿಸಲು ಅದು ಸಮರ್ಥವಾಗಿದೆ. ಹೀಗಿದ್ದರೂ ಆಧುನಿಕ ಇಂದ್ರಿಯ ವಿಜ್ಞಾನಶಾಸ್ತ್ರದ ಉಪಯೋಗವು ರೋಗಚಿಕಿತ್ಸೆಗೆ ಅತ್ಯಂತ ಅವಶ್ಯಕವಾಗಿರುತ್ತದೆ ತ್ರಿದೋಷವಿಮಾಂಸೆಯ ಕಲ್ಪನೆಯು ಉಚ್ಚತರದ್ದಿದ್ದರೂ ಅತಿವ್ಯಾಪಕ ಸ್ವರೂಪವುಳ್ಳದ್ದಿರುವುದರಿಂದ ಸಾಮಾನ್ಯಬುದ್ಧಿಯ ಚಿಕಿತ್ಸಕನಿಗೆ ಅಷ್ಟು ಅನುಕೂಲವಾಗಲಾರದು. ಹೀಗಿದ್ದದರಿಂದ ಅವನಿಗೆ ಇಂದ್ರಿಯಗಳ ಸ್ಥೂಲ ವ್ಯಾಪಾರಗಳಮೇಲೆ ಅವಲಂಬಿಸಿದ ಹೊರತು ನಿರ್ವಾಹವಿಲ್ಲ. ಆದುದರಿಂದ ಆಧುನಿಕ ಶಾಸ್ತ್ರಗಳಲ್ಲಿಯ ಮುಖ್ಯ ಭಾಗಗಳನ್ನು ತಿಳಿದುಕೊಳ್ಳುವದು. ಆಯುರ್ವೇದದ ಅಧ್ಯಯನವನ್ನು ಮಾಡುವವರಿಗೆ ಅವಶ್ಯಕವಿದೆ.

ಆಯುರ್ವೇದಕಾರರಾದರೂ ಇದರ ಮಹತ್ವವನ್ನು ಕಂಡುಹಿಡಿದಿಲ್ಲೆಂತಲ್ಲ. ಚಿಕಿತ್ಸೆಯ ಸೌಲಭ್ಯಕ್ಕೋಸ್ಕರ ಸಾಮಾನ್ಯಜ (ದ್ವಂದ್ವ) ದೋಷಗಳಿಂದ ಹುಟ್ಟಿದ ರೋಗಗಳ ಉಲ್ಲೇಖವನ್ನೂ ನಾನಾತ್ಮಜ (ಒಂದೊಂದೇ) ದೋಷದಿಂದ ಹುಟ್ಟಿದ ರೋಗಗಳ ಸಂಖ್ಯೆಯನ್ನೂ ಅದರಂತೆ ದೂಷಿತವಾದ ರಸಾದಿ ಸಪ್ತಧಾತುಗಳಲ್ಲಿ ಹುಟ್ಟಿದ ರೋಗಗಳ ನಿರ್ದೇಶವನ್ನೂ ವಿಶದವಾಗಿ ವರ್ಣಿಸಿದ್ದಾರೆ.

]ಚರಕ ಅತ್ರ್ಯೋದರೀಯ ಮತ್ತು ಮಹಾರೋಗ ಅಧ್ಯಾಯ-ಸೂತ್ರಸ್ಥಾನ; ಹಾಗೆಯೇ ಸುಶ್ರುತ ವ್ಯಾಧಿಸಮುದ್ದೇಶೀಯ ಸೂತ್ರಸ್ಥಾನ ಇವುಗಳನ್ನು ನೋಡಿ. ]

ಆಯುರ್ವೇದದಲ್ಲಿ ದೋಷ ಮತ್ತು ಸ್ಥಾನ ದುಷ್ಟಿಗಳ ವಿಚಾರ.

ವಸ್ತುತಃ ರೋಗನಿದಾನಕ್ಕೆ ಹೇತು, ಸ್ಥಾನದುಷ್ಟಿ ಮತ್ತು ಲಕ್ಷಣ ಇವುಗಳ ವಿಚಾರವು ಅವಶ್ಯವಾಗಿದೆ. ಇವೆಲ್ಲವುಗಳ ವರ್ಣನವನ್ನು ಆಯುರ್ವೇದಕಾರರು ತಮ್ಮ ಗ್ರಂಥಗಳಲ್ಲಿ ಬರೆದಿದ್ದಾರೆ ಆಧುನಿಕ ಚಿಕಿತ್ಸಾಪದ್ಧತಿಯಲ್ಲಿದ್ದಂತೆ ವಿಶೇಷವಾಗಿ ಇಂದ್ರಿಯ ವಿಕೃತಿಗಳ ಮೇಲೆ ತಮ್ಮ ಭಾರವನ್ನು ಹಾಕಿಲ್ಲ. ಶರೀರದಲ್ಲಿಯ ಆಯಾ ಸ್ಥಾನ ಆಶಯ, ಆಯತನ ಮೊದಲಾದುವುಗಳ ಮೇಲೆ ಕುಪಿತವಾದ ದೋಷಗಳು ( Morbid process ) ಹೇಗೆ ಪರಿಣಾಮವನ್ನುಂಟುಮಾಡುತ್ತವೆಂಬದನ್ನು ಕಂಡುಹಿಡಿದು ಲಾಕ್ಷಣಿಕ ಪದ್ಧತಿಗನುಸಾರವಾಗಿ ತಮ್ಮ ಚಿಕಿತ್ಸಾಕ್ರಮವನ್ನು ಸ್ಥಾಪಿಸಿದ್ದಾರೆ. "ಹೇತು ಸ್ಥಾನವಿಶೇಷಾಚ್ಚ ಭವೇದ್ರೋಗವಿಶೇಷಕೃತ್"

[ಚರಕ ಚಿಕಿತ್ಸಾ ಅ ೨೮]

ಆಶಯಾಧಿಷ್ಠಾನಗಳೆಂದರೆ— ಇಂದ್ರಿಯ ಗಳೇ ಸರಿ. ಮೇಲಾಗಿ ಶರೀರ ವರ್ಣನೆಯಲ್ಲಿ ವಾತ, ಪಿತ್ತ, ಕಫ ಇವುಗಳಿಗೆ ಸಂಬಂಧಿಸಿದ ಐದೈದು ಸ್ಥಾನಭೇದ ಗಳು ನಿಶ್ಚಯಿಸಲ್ಪಟ್ಟಿವೆ. ಇವು ಶರೀರದ ಎಲ್ಲ ವ್ಯಾಪಾರಗಳನ್ನು ಮಾಡುವವು ಶರೀರವು ತ್ರಿಧಾತುಗಳಿಂದ ತುಂಬಿರುವದು ನಿಜವಿದ್ದರೂ ಈ ಧಾತುಗಳ ಸಹಾ ಯದಿಂದ ಪ್ರತ್ಯೇಕ ಅವಯವ ಇಂದ್ರಿಯುಗಳು ಉತ್ಪನ್ನವಾಗಿ ಸ್ವತಂತ್ರಾವಸ್ಥೆ ಯನ್ನು ಪಡೆದಿರುತ್ತವೆ. ಇವುಗಳಿಗೆ ತ್ರಿಧಾತುಪೂರಿತವಾದ ಗುಣಕರ್ಮಗಳು ಇರುವವು, ಈ ರೀತಿ ಸ್ಥಿತ್ಯಂತರವನ್ನು ಪಡೆದ ಅವಯವ ಸಮೂಹಗಳು ಪಚನ ಪೋಷಣ ಮೊದಲಾದ ಕ್ರಿಯೆಗಳನ್ನು ತ್ರಿಧಾತುಗಳ ವಿದ್ಯಮಾನದಿಂದಲೇ ಮಾಡುತ್ತಿರುವವು. ಆದುದರಿಂದ ಧಾತು ವೈಷಮ್ಯವು ಪ್ರಾಪ್ತವಾದ ಕೂಡಲೇ ಸ್ವಾಭಾವಿಕವಾಗಿ ದೋಷಗಳ ಗುಣಗಳಲ್ಲಿ ಯಾವವು ಬೆಳೆದಿವೆ ಯಾವವು ದೂ ಷ್ಯಗಳಲ್ಲಿ ಸ್ಥಿತವಾಗಿವೆ ಯಾವವು ಮಲಾಯತನಗಳಲ್ಲಿ ಅಡಕವಾಗಿವೆ ಮತ್ತಾ ವವು ಮಲರೂಪಗಳಾಗಿ ಹೊರಬೀಳುತ್ತವೆ ಎಂಬೀ ಸಂಗತಿಗಳು ತಾವಾಗಿಯೇ ದೃಷ್ಟಿಗೋಚರವಾಗುವವು.

ಲಕ್ಷಣ ವರ್ಣನೆ.

ಆಯುರ್ವೇದದಲ್ಲಿ ಲಕ್ಷಣ ವರ್ಣನೆಯಾದರೂ ಚನ್ನಾಗಿದೆ ದೋಷಗಳು ಕುಪಿತವಾದಾಗ ಸಂಭವಿಸುವ ಸಾಧಾರಣ ಲಕ್ಷಣಗಳನ್ನು ಸ್ಪಷ್ಟ ವಾಗಿ ಶಾಸ್ತ್ರಜ್ಞರು ಹೇಳಿಟ್ಟಿರುವರು. ಕೆಳಗೆ ಬರೆದ ಮಧುಕೋಶಟೀಕೆಯಲ್ಲಿಯ ಸುದಾಂತ ಸೇನನ ಅವತರಣದಲ್ಲಿ ಲಕ್ಷಣಗಳು ಬಹಳ ಸುಬೋಧ್ಯವಾಗಿ ಹೇಳಲ್ಪ

ಟ್ಟಿವೆ. ಪ್ರತ್ಯಕ್ಷವಾಗಿ ರೋಗನಿಶ್ಚಯವನ್ನು ಮಾಡುವಾಗ ಇವುಗಳ ಉಪಯೋಗವು ವಿಪುಲವಾಗಿ ಆಗುತ್ತಿರುವದರಿಂದ ವಿದ್ಯಾರ್ಥಿಗಳು ಈ ಶ್ಲೋಕಗಳನ್ನು ಪಠನಮಾಡುವದು ಆವಶ್ಯವಿದೆ.

### ಕುಪಿತವಾತ.

ಆಧ್ಮಾನಸ್ತಂಭರೌಕ್ಷ್ಯಸ್ಫುಟನವಿಮಥನಕ್ಷೋಭಕಂಪಪ್ರತೋದಾಃ ।
ಕಂಠಧ್ವಂಸಾವಸಾದೌ ಶ್ರಮಕವಿಲಪನಂಸ್ರಂಸಶೂಲಪ್ರಭೇದಾಃ ||
ಪಾರುಷ್ಯಂಕರ್ಣನಾದೋವಿಷಯಪರಿಣತಿಭ್ರಂಶದೃಷ್ಟಿಪ್ರಮೋಹಾಃ ।
ವಿಸ್ಪಂದೋದ್ಘಟ್ಟನಾನಿಗ್ಲಪನಮಶಯನಂತಾಡನಂಪೀಡನಂಚ ॥
ನಾಮೋನ್ನಾಮೌವಿಷಾದೋಭ್ರಮಪರಿಪತನಂಜೃಂಭಣಂರೋಮಹರ್ಷೋ।
ವಿಕ್ಷೇಪಾಕ್ಷೇಪಶಗ್ರಹಣಶುಷಿರತಾಚ್ಛೇದನಂವೇಷ್ಟನಂಚ ॥
ವರ್ಣಃಶ್ಯಾವೋರುಣೋವಾತೃಡಪಿಚಮಹತಿಸ್ವಾಪವಿಶ್ಲೇಷಸಂಗಾಃ ।
ವಿದ್ಯಾತ್ಕರ್ಮಾಣ್ಯಮೂನಿಪ್ರಕುಪಿತಮರುತಸ್ತಸ್ಯತ್ಕಷಾಯೋರಸಶ್ಚ ॥

### ಕುಪಿತಪಿತ್ತ

ವಿಸ್ಫೋಟಾಮ್ಲಕಧೂಮಕಾಃಪ್ರಲಪನಂಸ್ವೇದಸ್ರುತಿರ್ಮೂರ್ಚ್ಛನಮ್ ।
ದೌರ್ಗಂಧ್ಯಂದರಣಂಮದೋವಿಸರಣಂಪಾಕೋರತಿಸ್ತೃಡ್ಭ್ರಮೌ ॥
ಊಷ್ಮಾತೃಪ್ತಿತಮಃಪ್ರವೇಶದಹನಂಕಟ್ವಮ್ಲತಿಕ್ತಾರಸಾಃ ।
ವರ್ಣಃಪಾಂಡುವಿವರ್ಜಿತಃಕ್ವಥಿತಥಾಕರ್ಮಾಣಿಪಿತ್ತಸ್ಯವೈ ॥

### ಕುಪಿತಕಫ.

ತೃಪ್ತಿಸ್ತಂದ್ರಾಗುರುತಾಸ್ತೈಮಿತ್ಯಂಕಠಿನತಾಮಲಾಧಿಕ್ಯಂ ॥
ಸ್ನೇಹಪಕ್ತ್ಯುಪಲೇಪಾಃಶೈತ್ಯಂಕಂಡೂಪ್ರಸೇಕಶ್ಚ ॥
ಚಿರಕರ್ತೃತ್ವಂಶೋಥೋನಿದ್ರಾಧಿಕ್ಯಂರಸೌಪಟುಸ್ವಾದೂ ।
ವರ್ಣಶ್ವೇತೋಲಸತಾಕರ್ಮಾಣಿಕಫಸ್ಯಜಾನೀಯಾತ್ ॥
ದ್ವಿದೋಷಲಿಂಗಃಸಂಸರ್ಗಃಸಂನಿಪಾತಸ್ತ್ರಿಲಿಂಗಕಃ ॥

ಚರಕಾಚಾರ್ಯರು ಹೇಳಿದ ವರ್ಣ, ವೇದನ, ರಾಗ, ಪಾಕ, ಶೋಫ, ರಸಾದಿಲಕ್ಷಣಗಳೆಲ್ಲವೂ ಈ ಮೇಲಿನ ಶ್ಲೋಕಗಳಲ್ಲಿ ಅಂತರ್ಭೂತವಾಗಿವೆ.

ಬಾಹ್ಯಹೇತುಗಳ ವಿಚಾರ. ಜಂತುಜನ್ಯಾದಿ ಆಗಂತುಕರೋಗಗಳ ಸಂದರ್ಭದಲ್ಲಿ ಅನುಬಂಧ್ಯಾನುಬಂಧಗಳ ವಿಚಾರವು ಆವಶ್ಯವಾಗಿರುವುದರಿಂದ ದೋಷದುಷ್ಟಿಯು ಸಂಬಂಧವು ಪರ್ಯಾಯದಿಂದ ಬರುತ್ತದೆ.

ದೋಷವೈಷಮ್ಯೋಸ್ತೈವಚಬಹುರೂಪಾರುಗನುಬಧ್ಯತೇಪ್ರವರ್ಧತೇಚ ।

ಏವಂಚಕೃತ್ವಾನದೋಷವ್ಯತಿರೇಕೇಣ ರೋಗಾನುಬಂಧಃಕೇವಲಂ
ಪೌರ್ವಾಪರ್ಯವಿಶೇಷಾಃ ॥

ಎಂದು ವಾಗ್ಭಟ ಪಂಡಿತರು ಸಂಗ್ರಹಗ್ರಂಥದಲ್ಲಿ ಹೇಳಿದ್ದಾರೆ ವಿಷಾದಿಗಳಂತೆ ಜಂತುಗಳು ಕೂಡ ರೋಗಕ್ಕೆ ನಿಮಿತ್ತಕಾರಣಗಳೆಂದೆನಿಸಿಕೊಳ್ಳುತ್ತವೆ ಇವು ಬಾಹ್ಯದೋಷಗಳು. ಆಹಾರದೋಷಗಳಂತೆಯೇ ಇವು ತಮ್ಮ ಗುಣ ಕರ್ಮಗಳ ಮೂಲಕವಾಗಿ ತ್ರಿಧಾತುಗಳಲ್ಲಿ ವೈಷಮ್ಯವನ್ನುಂಟುಮಾಡುವವು ಇವುಗಳ ಕ್ರಿಯೆಯು ವಿಷಮಯಪದಾರ್ಥಗಳಂತೆ ವಿಕಾಸೀ, ವ್ಯವಾಯೀ, ಆಶುಕಾರೀ ಗುಣಗಳುಳ್ಳದ್ದಾಗಿರುವದು. ಇವು ಸೂಕ್ಷ್ಮ ಶರೀರವುಳ್ಳವುಗಳಾದರೂ ತ್ರಿಧಾತುಮಯವಾದ ಸಜೀವೇಂದ್ರಿಯ ದ್ರವ್ಯಗಳೂ ತತ್ಸಂಬಂಧವಾದ ಭಾವಗಳೂ ಇವುಗಳಲ್ಲಿ ವಾಸಿಸಿರುತ್ತವೆ. ಅವು ತಮಗೆ ಸಮಾನಧರ್ಮವುಳ್ಳ ಮತ್ತು ಅನುಕೂಲವಿದ್ದ ಶರೀರ ಘಟಕಾವಯುವಗಳಲ್ಲಿ ಪ್ರವೇಶಮಾಡುವವು. "ಸಮಾನೇವೃದ್ಧಿಮಾಪ್ನೋತಿ" ಎಂಬ ನ್ಯಾಯವು ಇವುಗಳಿಗೂ ಹತ್ತುವುದುಂಟು- ನಿಸರ್ಗ ಪ್ರತಿಕಾರಶಕ್ತಿಯು ಬಲಉಳ್ಳದ್ದಿದ್ದಾಗ ಇವುಗಳ ಆಟವು ಸಾಗುವದಿಲ್ಲ. ಲಾಕ್ಷಣಿಕ ಮತ್ತುವ್ಯಾಧಿ ವಿಪರೀತ ಚಿಕಿತ್ಸೆಯಿಂದ ಇವುಗಳ ಪರಾಭವವನ್ನು ಮಾಡಬೇಕಾಗ ತ್ತದೆ.

ರೋಗಕ್ಕೆ ಮುಖ್ಯ ಕಾರಣಗಳು.

ಒಟ್ಟಿಗೆ ನಿಜರೋಗವೇ ಇರಲಿ ಆಗಂತುಕರೋಗವೇ ಇರಲಿ ಇವೆರಡಕ್ಕೂ ಪ್ರೇರಕಗಳಾದ ಸಾಮಾನ್ಯ ಕಾರಣಗಳಾವವೆಂದರೆ ಅಸಾತ್ಮ್ಯೇಂದ್ರಿಯಾರ್ಥ ಸಂಯೋಗ, ಪ್ರಜ್ಞಾಪರಾಧ ಮತ್ತು ಪರಿಣಾಮಾಹೇತುವ್ಯಾಧಿ-ವಿಪರೀತ-ಚಿಕಿತ್ಸಾಪದ್ಧತಿಯು ಇವೆರಡೂ ಬಾಹ್ಯಾಂಭ್ಯಂತರ ದೋಷಗಳಿಗೆ ಸಾಮಾನ್ಯವಾಗಿರುವದರಿಂದ ಗ್ರಹಣೀಯವಾಗಿದೆ. ಇನ್ನು ಚಿಕಿತ್ಸಕನು ಯಾವ ಚಿಕಿತ್ಸಾಕ ಪದ್ಧತಿಯನ್ನು ಅನುಸರಿಸಿದರೂ ನಿದಾನವನ್ನು ನಿಶ್ಚಯಿಸಿದ ಹೊರತು ಅವನಿಗೆ ಎರಡನೆಯ ಮಾರ್ಗವಿಲ್ಲ.

ಚಿಕಿತ್ಸೆಗೆ ಹೇತು ವ್ಯಾಧಿಗಳ ಜ್ಞಾನದ ಅವಶ್ಯಕತೆ.

ಹೇತು ಮತ್ತು ವ್ಯಾಧಿ ಇವೆರಡರನಡುವೆ ಕಾರ್ಯಕಾರಣ ಸಂಬಂಧವಿದ್ದರೂ ಚಿಕಿತ್ಸೆಯ ಕ್ಷೇತ್ರದಲ್ಲಿ ಇವೆರಡಕ್ಕೂ ಬೇರೆಬೇರೆ ಸ್ಥಾನಗಳಿರುತ್ತವೆ. ಕೆಲವರು "ದೋಷೇತಿಕರ್ತವ್ಯತಾರೂಪಾಸಂಪ್ರಾಪ್ತಿಃ" ಎಂದೆನ್ನುವರು ಮತ್ತು ಕೆಲವರು "ವ್ಯಾಧ್ಯುತ್ಪತ್ತಿಹೇತುರ್ನಿದಾನಮ್" ಎಂದೆನ್ನುವರು. ಔಷಧೀಕ್ರಿಯೆಗೆ ಎರಡೂ ಬೇಕಾಗಿರುತ್ತವೆ. ಹೇತು ಮತ್ತು ವ್ಯಾಧಿಸ್ಥಾನ ಇವುಗಳ ನಡುವಿನ ಅವಸ್ಥಾಭೇದಗಳನ್ನು ನಾವು ಅರಿತುಕೊಳ್ಳುವುದು ಅವಶ್ಯವಾಗಿರುವದು ಹೇತುವು ಲಕ್ಷಣ

ಗಳನ್ನು ( Signs ) ತೋರಿಸುತ್ತದೆ. ವ್ಯಾಧಿಯು ವೇದನೆಗಳನ್ನು (Symptoms) ಸೂಚಿಸುತ್ತದೆ. ದೋಷದುಷ್ಟಿಯೂ (Diseased processes) ದೂಷ್ಯದುಷ್ಟಿಯೂ (Diseased structures) ಮೊದಲನೆಯ ಲಕ್ಷಣಗಳಿಂದ ತಿಳಿದುಬರುತ್ತವೆ. ಆಯತನ ದುಷ್ಟಿಯು ವೇದನೆಗಳಿಂದ ತಿಳಿಸುಬರುತ್ತದೆ. ಆದುದರಿಂದ ರೋಗಚಿಕಿತ್ಸೆಗೆ ಇವೆರಡೂ ದುಷ್ಟಿಭೇದಗಳ ಅರಿವು ಅವಶ್ಯಕವಾಗಿದೆ ಆರ್ಯಾಂಗ್ಲ ಶಾಸ್ತ್ರಜ್ಞರು ಇವೆರಡರ ಉಪಯೋಗವನ್ನು ತಮ್ಮತಮ್ಮ ಯೋಜನಾಪದ್ಧತಿಯಲ್ಲಿ ನಿರ್ವಿವಾದವಾಗಿ ಮಾಡಿಕೊಂಡಿದ್ದಾರೆ. ಆದರೆ ಆರ್ಯವಿವೇಚನಾಪದ್ಧತಿಯು ಸೂಕ್ಷ್ಮಮೂಲ ಸಿದ್ಧಾಂತಗಳ ಮೇಲೆ ವಿಶೇಷವಾಗಿ ನೆಲಸಿರುವದರಿಂದ ಅವರು ತಮ್ಮ ಗ್ರಂಥಗಳಲ್ಲಿ ಇಂದ್ರಿಯ ವಿಕೃತಿಗಳ ಕಡೆಗೆ ಲಕ್ಷಕೊಡದೆ ದೋಷ—ದೂಷ್ಯ—ದುಷ್ಟಿಗಳನ್ನಷ್ಟು ವಿವರಿಸಿ ತತ್ಸಂಭೂತವಾದ ಲಕ್ಷಣಗಳನ್ನೂ ವೇದನೆಗಳನ್ನೂ ವರ್ಣಿಸಿರುವರು. ಸೂತ್ರಸ್ಥಾನದಲ್ಲಿ ಮಾತ್ರ ಇಂದ್ರಿಯವಿಕೃತಿಗಳ ವಿಷಯಕ್ಕೆ ಅಲ್ಲಲ್ಲಿಗೆ ಉಲ್ಲೇಖನವನ್ನು ಮಾಡಿದ್ದಾರೆ.

ವಿಕಾರಾಃಪುನರಪರಿಸಂಖ್ಯೇಯಾಃ ಪ್ರಕೃತ್ಯಧಿಷ್ಠಾನಲಿಂಗಾಯತನವಿಕಲ್ಪವಿಶೇಷಾತ್ ॥ ತೇಷಾಮಪರಿಸಂಖ್ಯೇಯತ್ವಾತ್ ॥

[ ಚರಕ-ಸೂತ್ರ-ಮಹಾರೋಗಾಧ್ಯಾಯ

**ವ್ಯಾಧಿಪ್ರತ್ಯನೀಕ ಚಿಕಿತ್ಸೆಯ ವೈಷಮ್ಯವು** ಆಧುನಿಕ ಶಾಸ್ತ್ರದಲ್ಲಿ ಈ ವಿಕಾರಗಳಿಗೆ ಚಿಕಿತ್ಸೆಯ ಸೌಲಭ್ಯಕ್ಕೋಸ್ಕರ ಹೆಚ್ಚಿಗೆ ಮಹತ್ವವು ದೊರೆತಿರುತ್ತದೆ ಇದು ಯೋಗ್ಯವೇ ಸರಿ ಯಾಕೆಂದರೆ ಈ ಮಾರ್ಗದಿಂದ ರೋಗ ಪರಿಚಯವು ತೀವ್ರವಾಗಿ ಆಗುವದರಿಂದ ಸಂಶಯದೋಷಗಳಿಗೆ ಅನುವು ದೊರೆಯಲಾರದು ಇತ್ತೀಚೆಯ ಆಯುರ್ವೇದ ಗ್ರಂಥಕಾರರು ಇದನ್ನು ಕಂಡುಹಿಡಿದು ತಮ್ಮ ಗ್ರಂಥಗಳಲ್ಲಿ ಕೆಲವು ಕಡೆಯಲ್ಲಿ ವಿಕಾರಭೇದಾನುಸಾರವಾಗಿ ರೋಗ ಭೇದಗಳನ್ನು ವರ್ಣಿಸಿದ್ದಾರೆ. ಉದಾಹರಣಾರ್ಥವಾಗಿ ಸನ್ನಿಪಾತ ಜ್ವರದ ಭೇದವನ್ನು ವಿವರಿಸುವಾಗ ಚಿತ್ತವಿಭ್ರಮ, ಕಂಠಕುಬ್ಜ, ಕರ್ಣಕ, ತಂದ್ರಿತ, ರಕ್ತಷ್ಠೀವೀ ಮೊದಲಾದುವುಗಳಿಂದು ಹೇಳಿದ್ದಾರೆ. ಚರಕಾಚಾರ್ಯರು ಇವೇ ಸನ್ನಿಪಾತಜ್ವರಭೇದಗಳನ್ನು ವ್ಯಾಧಿ ನಿರ್ದೇಶಪೂರ್ವಕವಾಗಿ ಮಾಡದೆ ವಾತೋತ್ತರಪಿತ್ತಮಧ್ಯಕಫಾನುಗ ಸನ್ನಿಪಾತ ಪಿತ್ತೋತ್ತರ ವಾತಮಧ್ಯ ಕಫಹೀನ ಸನ್ನಿಪಾತ ಎಂದು ಮುಂತಾದುವುಗಳನ್ನು ದೋಷ, ನಿರ್ದೇಶ ಪೂರ್ವಕವಾಗಿ ಮಾಡಿದ್ದಾರೆ ಇದು ಹೇಗಿದ್ದರೂ ಹೇತು ಮತ್ತು ವ್ಯಾಧಿ ಇವೆರಡರ ಕಡೆಗೂ ಲಕ್ಷಗೊಟ್ಟು ಚಿಕಿತ್ಸೆಯನ್ನು ಮಾಡುವದು ಉತ್ತಮ ವಿಷಯವು ಸುಶ್ರುತಾಚಾರ್ಯರು ನುಡಿದ ವಚನವನ್ನೇ ಮಂದಿಟ್ಟುಕೊಂಡು ಕಾರ್ಯಕ್ಷಮರಾಗಿ ಚಿಕಿತ್ಸೆಯ ಮಾರ್ಗವನ

ನಿಶ್ಚಯಿಸುವುದು ನೆಟ್ಟಗೆ. ಈ ಸಂದರ್ಭದಲ್ಲಿ ಅವರು ಅನ್ನುವದೇನಂದರೆ—

" ಶಾಸ್ತ್ರಿರೋಗೋವಿನಾದೊಷ್ಯೈರ್ಯಸ್ಮಾತ್ತ್ರಸ್ಮಾತ್ ವಿಚಕ್ಷಣಃ ।
ಅನುಕ್ತ್ರಮಪಿರೋಗಾಣಾಂಲಿಂಗೈರ್ವ್ಯಾಧಿಮುಪಾಚರೇತ್ ॥
(ಸುಶ್ರುತ-ಸೂತ್ರ ಅ. ೩೫.)

ಯಾಕಂದರೆ—

ದೋಷಪ್ರತ್ಯನೀಕ ಚಿಕಿತ್ಸೆಯು ತತ್ವಶಃ ಸಶಾಸ್ತ್ರವು.

ದೋಷ ಪ್ರತ್ಯನೀಕ ಚಿಕಿತ್ಸೆಯು ನಿಜವಾಗಿ ಸುಲಭವಾದ ಮಾರ್ಗವಲ್ಲ. ಅದು ಎಷ್ಟು ಶಾಸ್ತ್ರೋಕ್ತವಿರುತ್ತದೆಯೋ ಅಷ್ಟೇ ಕಠಿಣವೂ ಇರುತ್ತದೆ. ಅಷ್ಟ ವಿಧ ಪರೀಕ್ಷೆಯನ್ನೂ ದರ್ಶನ, ಸ್ಪರ್ಶನಾದಿ ಸಾಧನಗಳನ್ನೂ ಕೈಕೊಳ್ಳಬೇಕಾಗುತ್ತದೆ. ದೋಷಗಳ ಚಯ, ಪ್ರಕೋಪ ಪ್ರಶಮ, ಸ್ಥಾನ, ದೇಶ, ದೂಷ್ಯ ಮೊದಲಾದುವುಗಳನ್ನು ನೆಟ್ಟಗೆ ಪರೀಕ್ಷಿಸಿ ಆ ಮೇಲೆ ಯೋಚನೆಯನ್ನು ಮಾಡಬೇಕಾಗುತ್ತದೆ ಈ ಪ್ರಕಾರ ಚಿಕಿತ್ಸಾಪದ್ಧತಿಯನ್ನು ಅನುಸರಿಸಿದರೆ ಖಂಡಿತವಾಗಿ ಯಾವ ತರದ ತೊಂದರೆಗಳೂ ಬಾರವು. ಆದರೆ ಇದು ಎಲ್ಲ ಪ್ರಸಂಗಗಳಲ್ಲಿಯೂ ಮತ್ತು ಎಲ್ಲ ತರಗತಿಯ ವೈದ್ಯರಿಗೂ ಸಾಧ್ಯವಾಗಲಾರದು. ಆದುದರಿಂದ ಈಚೆಗಾದ ಆಯು ರ್ವೇದ ಗ್ರಂಥಕಾರರು ಮತ್ತು ಆಧುನಿಕ ಪಾಶ್ಚಿಮಾತ್ಯ ಪಂಡಿತರು ಸ್ವೀಕರಿಸಿದ ಮಾರ್ಗವು ಅಂಶತಃ ಅನುಕರಣೀಯವಾಗಿದೆ. ಎಂದೆನ್ನಲಿಕ್ಕೆ ಅಡ್ಡಿಯು ತೋರು ವದಿಲ್ಲ.

ವ್ಯಾಧಿಪ್ರತ್ಯನೀಕ ಚಿಕಿತ್ಸೆಯಲ್ಲಿಯ ದೋಷಗಳು

ಇನ್ನು ಕೇವಲ ವ್ಯಾಧಿಪ್ರತ್ಯನೀಕ ಚಿಕಿತ್ಸೆಯ ಮೇಲೆ ಅವ ಲಂಬಿಸಿರುವುದೂ ನೆಟ್ಟಗಿಲ್ಲ. ಯಾಕಂದರೆ ಹಾಗೆ ಮಾ ಡುವದರಿಂದ ರೋಗಹೇತುವಿನ ಕಡೆಗೆ ಹೋಗತಕ್ಕಷ್ಟು ಲಕ್ಷವು ಹೋಗದೆ ಅದು ವೇದನೆಗಳ ಉಪಶಮನದಕಡೆಗೆ ಮಾತ್ರ ಹರಿಯುತ್ತದೆ ಅದರಿಂದ ತಾತ್ಕಾಲಿಕ ಲಾಭವಾದರೂ, ಅವ್ಯಕ್ತವಾದ ದೋಷಗಳು ಹಾಗು ಉಳಿದು ಕಾಲಾಂತರದಲ್ಲಿ ಜೀರ್ಣರೋಗಗಳಿಗೆ ಕಾರಣೀಭೂತಗಳಾಗುತ್ತವೆ. ಆದುದರಿಂದ ವ್ಯಾಧಿಪ್ರತ್ಯನೀಕ ಚಿಕಿತ್ಸೆಯು ಸ್ವತಂತ್ರವಾಗಿ ಸಂಪೂರ್ಣವೆನಿಸ ಲಾರದು. ಮೇಲಾಗಿ ಒಂದೇ ವ್ಯಾಧಿಯು ಬೇರೆ ಬೇರೆ ವಿರುದ್ಧಕಾರಣಗಳಿಂದ ಹುಟ್ಟುವದುಂಟು. ಜ್ವರವು ಚಳಿ ಮತ್ತು ಉಷ್ಣತೆ ಇವೆರಡೂ ಕಾರಣಗಳಿಂದ ಬರಬಹುದು. ಅದರಂತೆ ಕೆಮ್ಮು, ವಾಂತಿ, ಬಿಕ್ಕು, ತಲೆಶೂಲೆ ಮುಂತಾದ ವೇದನೆಗಳು ಬೇರೆ ಬೇರೆ ಕಾರಣಗಳಿಂದ ಉದಯಿಸಬಹುದು. ಇಂಥ ಪ್ರಸಂಗ ಗಳಲ್ಲಿ ಕೇವಲ ಲಕ್ಷಣಗಳನ್ನು ನೋಡಿ ಇಲ್ಲವೆ ಸಜೀವ ಪರಮಾಣುಗಳನ್ನು ಪರೀಕ್ಷಿಸಿ ಔಷಧೋಪಚಾರವನ್ನು ಮಾಡಿದರೆ ಸಾಗದು. ಸಂಖ್ಯಾ, ಪ್ರಮಾಣ

ಉತ್ಪತ್ತಿ, ವ್ಯಾಧಿತರೂಪಹೇತು ಮೊದಲಾದುವುಗಳನ್ನು ತಿಳಿದುಕೊಂಡು; ಅವುಗಳನ್ನನುಸರಿಸಿ ಚಿಕಿತ್ಸೆಯನ್ನು ಮಾಡುವದೇ ಯೋಗ್ಯವಾಗುವದು. ಒಟ್ಟಿಗೆ ಹೇತುಜ್ಞಾನದಿಂದ ರೋಗಿಯ ಪರೀಕ್ಷೆಯು ಹೆಚ್ಚಿಗೆ ಆಗುವದು. ವ್ಯಾಧಿಜ್ಞಾನದಿಂದ ರೋಗಿಯ ಪರೀಕ್ಷೆಯು ಹೆಚ್ಚಿಗೆ ಆಗುವದು. ಹೇತುವ್ಯಾಧಿಗಳ ಸಂಬಂಧವನ್ನು ಚರಕಾಚಾರ್ಯರು ಯಥಾರ್ಥವಾಗಿ ಈ ಕೆಳಗಣ ವಾಕ್ಯದಲ್ಲಿ ಹೇಳಿರುವರು.

"ಕಾರ್ಯಯೋನಿರ್ಧಾತುವೈಷಮ್ಯಂ । ತಸ್ಯಲಕ್ಷಣಮ್ ವಿಕಾರಾಗಮಃ"

(ವಿಮಾನ ಅ ೮)

ನಿದಾನಕ್ಕೆ ಪೂರ್ವರೂಪ ರೂಪಾದಿಗಳ ಮಹತ್ವವು

ಪಂಚನಿದಾನದಲ್ಲಿಯ "ಪೂರ್ವರೂಪ" ಮತ್ತು 'ರೂಪ' ಇವುಗಳ ಜ್ಞಾನದಿಂದ ರೋಗಿಯ ಪ್ರಕೃತಿ ಮಾನವು ತಿಳಿಯುತ್ತದೆ. ನಿದಾನ ಶಾಸ್ತ್ರದಲ್ಲಿ ಪೂರ್ವರೂಪ, ರೂಪ ಉಪಶಯ, ಇವುಗಳನ್ನು ಬರೆಯಿಸಿದ ಕಾರಣವೇ ಇದು ಪ್ರಕೃತಿ ಮತ್ತು ವಿಕೃತಿ ಇವುಗಳ ಜ್ಞಾನವು ನಮಗೆ ಪೂರ್ಣವಾಗಿ ಆದ ಹೊರತು ರೋಗ—ರೋಗಿಗಳ ಪರಿಚಯವು ಆಗಲಾರದು. ರೋಗಿಯ ಪ್ರಕೃತಿಯು ಅವನ ಸತ್ವ, ಸಾತ್ಮ್ಯ, ಸಾರ, ಪ್ರಮಾಣ, ಆಹಾರ, ವ್ಯಾಯಾಮ, ವಯಸ್ಸು ಮೊದಲಾದುವುಗಳ ಮೇಲೆ ಅವಲಂಬಿಸಿರುತ್ತದೆ. ರೋಗವು ಧಾತುವೈಷಮ್ಯದಮೇಲೆ ಅವಲಂಬಿಸಿರುತ್ತದೆ ಆದುದರಿಂದ ರೋಗ—ರೋಗಿಗಳ ಲಕ್ಷಣಗಳನ್ನು ತೋರಿಸುವ ಪೂರ್ವರೂಪಾದಿಗಳ ವಿಚಾರವೂ ಕೂಡ ನಮಗೆ ಅವಶ್ಯವಾಗಿರುತ್ತದೆ.

ಸಾಮಾನ್ಯ ಪೂರ್ವರೂಪವು (ದೋಷದೂಷ್ಯಸಮ್ಮೂರ್ಛನಾವಸ್ಥಾ) ಅವ್ಯಕ್ತವು. ದೋಷಧಾತುಮಲಗಳ ಅನ್ಯೋನ್ಯ ಸಂಸರ್ಗದಿಂದ ಅಧಿಷ್ಠಾನಗಳಲ್ಲಿ ಮಲಧಾತುಗಳು ಉತ್ಪನ್ನವಾದಮೇಲೆ ಸಾಮಾನ್ಯ ಪೂರ್ವರೂಪವು ವಿಶಿಷ್ಟಲಕ್ಷಣ ರೂಪದಿಂದ ಹೊರಬೀಳುವದು. "ಪೂರ್ವರೂಪವು" ಅಲ್ಪಪ್ರಮಾಣದಲ್ಲಿ ಇಲ್ಲವೆ ನಿಮಿತ್ತ ಮಾತ್ರವಾಗಿ ಇದ್ದರೆ ವ್ಯಾಧಿಯು ಸುಖಸಾಧ್ಯವಿರುವದು. ಅದೇ "ಪೂರ್ವರೂಪವು" ಅವಕಾಶವನ್ನು ತಳೆಯದೆ ಒಮ್ಮೆಲೆ "ರೂಪ" ಗಳ ಜೊತೆಯಲ್ಲಿಯೇ ದುಮುಕಿದರೆ ಗಂಭೀರ ದೋಷಗಳ ಭಾವವನ್ನು ಸೂಚಿಸುವದು. ಪೂರ್ವರೂಪಗಳನ್ನು ತಿಳಿದುಕೊಳ್ಳುವದರಿಂದ ಮುಂದಾಗುವ ಅನರ್ಥಗಳನ್ನು ಒಮ್ಮೊಮ್ಮೆ ನಿಲ್ಲಿಸಬಹುದು.

"ಪೂರ್ವರೂಪಂವಿಕಾರಾಣಾಂದೃಷ್ಟ್ವಾಪ್ರಾದುರ್ಭವಿಷ್ಯತಾಂ ।
ಯಾಕ್ರಿಯಾಕ್ರಿಯತೇಸಾಚವೇದನಾಂಹಂತ್ಯನಾಗತಾಂ ॥

(ಚರಕ-ಶಾರೀರ ಅ, ೧)

ಆದರಂತೆ ಅನೇಕ ದೋಷಹೇತುಗಳಿದ್ದಲ್ಲಿ ವ್ಯಾಧಿಜ್ಞಾನವು ಆಗದಿದ್ದ ಪಕ್ಷಕ್ಕೆ ಪೂರ್ವರೂಪ ರೂಪಗಳ ಉಪಯೋಗವನ್ನು ಮಾಡಿಕೊಳ್ಳಬಹುದು.

ಉಪಶಯವೆಂದರೆ— ಸಾತ್ಮ್ಯಾಸಾತ್ಮ್ಯದ ವಿಚಾರವು "ಸಾತ್ಮ್ಯಾರ್ಥೋಹ್ಯುಪಶಯಾರ್ಥಃ" [ಚರಕ-ಸೂತ್ರ-೧೧.]

**ಉಪಶಯ ಮತ್ತು ಸಾತ್ಮ್ಯಾಸಾತ್ಮ್ಯ ವಿಚಾರ.**

ನಿದಾನಶಾಸ್ತ್ರನಲ್ಲಿ ಸಾತ್ಮ್ಯಾಸಾತ್ಮ್ಯದ ವಿಚಾರವನ್ನು ಸೇರಿಸಿದ್ದು ಚಿಕಿತ್ಸೆಯ ದೃಷ್ಟಿಯಿಂದಲೇ. ವ್ಯಾಧಿಯು ಧಾತು ವೈಷಮ್ಯದಿಂದ ಹುಟ್ಟುವುದಷ್ಟೇ ? ಈ ಧಾತು ವೈಷಮ್ಯವನ್ನು ಹೋಗಲಾಡಿಸಿ ಧಾತುಗಳನ್ನು ಸಂಪಡಿಸುವದೇ ಚಿಕಿತ್ಸೆಯ ಮೂಲ ಉದ್ದೇಶವು. ಈ ಉದ್ದೇಶವನ್ನು ಕೊನೆಗಾಣಿಸಲಿಕ್ಕೆ ವೈಷಮ್ಯ ಕಾರಣಗಳಾದ ಅಸಾತ್ಮ್ಯಾದಿ ಹೇತುಗಳನ್ನು ಇಲ್ಲದಂತೆ ಮಾಡುವದು ನಮ್ಮ ಮೊದಲನೆಯ ಕೆಲಸವು. ಶರೀರದೊಳಗಿನ ಧಾತುಗಳು ಯಾವಾಗಲೂ ಕಾರಣಾನುಸಾರವಾಗಿ ಮಾರ್ಪಾಟನ್ನು ಹೊಂದುತ್ತಿರುವವು. ಕಾರಣಗಳು ವಿಷಮವಾದರೆ ಆ ಧಾತುಗಳೂ ವಿಷಮವಾಗುವವು; ಸಮವಾದರೆ ಸಮವಾಗುವವು.

"ಹೇತುಭಿಃಸದೃಶಾನಿತ್ಯಂಜಾಯಂತೇದೇಹಧಾತವಃ"

(ಚರಕ-ಶಾರೀರ-ಅ. ೧)

ಬಾಹ್ಯಕಾರಣಗಳ ಸಂದರ್ಭದಲ್ಲಿ ಈ ಮೊದಲು ಉಲ್ಲೇಖವು ಮಾಡಲ್ಪಟ್ಟಿದೆಯಷ್ಟೆ ಅಭ್ಯಂತರ ಕಾರಣಗಳೆಂದರೆ ಶರೀರ ಗುಣಭಾವಗಳಲ್ಲಿ ಕಲೆತ ಆಹಾರ ಪರಿಣತವಾದ ಗುಣಗಳು. ಈ ಗುಣಗಳು ಸಮಾನಧರ್ಮವುಳ್ಳವುಗಳಿದ್ದಾಗ ಶರೀರದ ಧಾತುಗಳಿಗೆ ಸಾತ್ಮ್ಯವನ್ನು ಒದಗಿಸಿಕೊಟ್ಟು ಪುಷ್ಟಿಯನ್ನುಂಟುಮಾಡುತ್ತವೆ. ವಿರುದ್ಧ ಧರ್ಮವುಳ್ಳವುಗಳಿದ್ದಾಗ ಅಸಾತ್ಮ್ಯವನ್ನುಂಟುಮಾಡಿ ಹಾನಿಯನ್ನು ತರುತ್ತವೆ. (ಶರೀರಸ್ಥಾನ ಪ್ರ. ೬ನ್ನು ನೋಡಿ)

ಈ ಅಸಾತ್ಮ್ಯಭಾವಕ್ಕೆ ನಿದಾನಶಾಸ್ತ್ರದಲ್ಲಿ ಉಪಶಯವೆನ್ನುವರು. ರೋಗಿಯಸಂದರ್ಭದಲ್ಲಿ ಸಾತ್ಮ್ಯದ ವ್ಯಾಖ್ಯೆಯನ್ನು ಚರಕಾಚಾರ್ಯರು ಹೀಗೆ ಮಾಡಿರುವರು-

"ಸಾತ್ಮ್ಯಂನಾಮತತ್ ಯತ್ ಸಾತ್ಮ್ಯೇನಉಪಸೇವ್ಯಮಾನಂಉಪಶೇತೇ"

[ವಿಮಾನ ಅ. ೪]

ಅಂದರೆ—

ಯಾವ ಪದಾರ್ಥಗಳನ್ನು ಸತತವಾಗಿ ಸೇವನಮಾಡುವದರಿಂದ ಶರೀರಕ್ಕೆ

ಸುಖವು ಉಂಟಾಗುತ್ತದೆಯೋ ಅದೇ ಸಾತ್ಮ್ಯವು. ಹೀಗೆ ಉಪಶಯ ಮತ್ತು ಸಾತ್ಮ್ಯ ಇವೆರಡೂ ಪರ್ಯಾಯವಾಚಕ ಶಬ್ದಗಳಾಗಿರುತ್ತವೆ. ಇವುಗಳ ಜ್ಞಾನದಿಂದ ಗೂಢಲಿಂಗವುಳ್ಳ ಬೇನೆಯಮೇಲೆ ಔಷಧೋಪಚಾರವನ್ನು ಮಾಡಲಿಕ್ಕೆ ಬರುತ್ತದೆ

ಒಟ್ಟಿಗೆ ಉಪಶಯವೆಂದರೆ ವ್ಯಾಧಿಪ್ರಸಾರಕ್ಕೆ ಹಿತವಾದ ಆಹಾರ ವಿಹಾರಗಳನ್ನು ಕಲ್ಪಿಸಿ ಅವುಗಳ ಮೂಲಕವಾಗಿ ರೋಗವನ್ನು ಪರೀಕ್ಷಿಸಿ ನಿರ್ಣಯ ಮಾಡುವ ಕಲೆಯು.

ಸಂಪ್ರಾಪ್ತಿ ವಿಚಾರ. ಸಂಪ್ರಾಪ್ತಿಯೆಂದರೆ ದೇಶ, ಕಾಲ, ಆಹಾರ, ಅಭಿಘಾತ ಮೊದಲಾದ ದೋಷಪ್ರಕೋಪಕಾರಣಗಳಿಂದ ದುಷ್ಟಗಳಾದ ಮತ್ತು ಊರ್ಧ್ವಾಧಸ್ತಿರ್ಯಗ್ಗಾಮಿ ಮಾರ್ಗಗಳಲ್ಲಿ ಪಸರಿಸುವ ಸ್ವಭಾವವುಳ್ಳ ತ್ರಿದೋಷಗಳಿಂದ ಹುಟ್ಟುವ ರೋಗದ ಆಕ್ರಮಣಾವಸ್ಥೆಯು. ಇವರ ಜ್ಞಾನದಿಂದ ಧಾತುಗಳು ಎಷ್ಟೆಷ್ಟು ಮತ್ತು ಹೇಗೆಹೇಗೆ ದುಷ್ಟವಾಗುವವು; ವ್ಯಾಧಿಯು ಸಾನುಬಂಧವೋ ಅನನುಬಂಧವೋ, ಪ್ರಾಕೃತವೋ, ವಿಕೃತವೋ ಹಾಗೆಯೇ ಚಯ, ಪ್ರಕೋಪ, ಪ್ರಸಾರ, ಸ್ಥಾನ, ಸಂಶ್ರಯಾದಿಗಳು ಹೇಗೆ ಹೇಗೆ ಬೆಳೆಯುತ್ತಾಹೋಗುವವೆಂಬದು ಸ್ಪಷ್ಟವಾಗಿ ತಿಳಿಯುವದು. ಇದು ತತ್ವಶಃ ರೋಗಕಾರಣವೆನಿಸಿಕೊಳ್ಳಲಾರದಿದ್ದರೂ ರೋಗ ನಿಶ್ಚಯಕ್ಕೆ ಅತೀವ ಉಪಯೋಗವುಳ್ಳದ್ದು. ಸಾರಾಂಶ—ಸಂಪ್ರಾಪ್ತಿಯೆಂದರೆ— "ವಿಶಿಷ್ಟಮೇವವ್ಯಾಧಿಜನ್ಮ" (ವಾಗ್ಭಟ). ಈ ರೀತಿಯಾಗಿ ಆಯುರ್ವೇದಕಾರರು ನಿದಾನ ಶಾಸ್ತ್ರದ ವಿವೇಚನವನ್ನೂ ಆಧುನಿಕ ಶಾಸ್ತ್ರಕಾರರಂತೆಯೇ ಶಾಖೋಪಶಾಖೆಗಳಲ್ಲಿ ಸವಿಸ್ತಾರವಾಗಿ ಮಾಡಿರುವರು. ಆದರೆ.

"ಏಕಂಶಾಸ್ತ್ರಂಅಧೀಯಾನೋನವಿದ್ಯಾತ್‌ಶಾಸ್ತ್ರನಿಶ್ಚಯಮ್ ।
ತಸ್ಮಾತ್‌ಬಹುಶ್ರುತಾಶ್ಶಾಸ್ತ್ರಂವಿಜಾನೀಯಾತ್‌ಚಿಕಿತ್ಸಕಃ" ।

ಆಯುರ್ವೇದಾಧ್ಯಯನಕ್ಕೆ ಇತರ ಶಾಸ್ತ್ರಗಳ ಜ್ಞಾನದ ಆವಶ್ಯಕತೆ. ಎಂಬ ಚರಕಾಚಾರ್ಯರ ವಚನದಂತೆ ವಿದ್ಯಾರ್ಥಿಗಳು ನಿದಾನವಿಷಯವನ್ನು ತಿಳಿದುಕೊಳ್ಳಲಿಕ್ಕೆ ಅವಶ್ಯವಾಗಿರುವ ಇತರ ಶಾಸ್ತ್ರಗಳನ್ನು ಕೂಡ ಕಲಿಯುವದು ಒಳ್ಳೇದು ಶಾರೀರ ಮತ್ತು ಸೂತ್ರಸ್ಥಾನ ಇವೆರಡೂ ಭಾಗಗಳನ್ನು ಮೊದಲು ಓದಿ ಆನಂತರ ನಿದಾನವನ್ನು ಆರಂಭಿಸುವದು ನೆಟ್ಟಗೆ. ಅದರಂತೆ ಚರಕ ಮತ್ತು ಸುಶ್ರುತ ಗ್ರಂಥಗಳೊಳಗಿನ ರೋಗವಿಜ್ಞಾನದ ಸಂದರ್ಭದಲ್ಲಿಯ ಯಾವತ್ತು ಅಧ್ಯಾಯಗಳನ್ನು ಓದುವದು ಆವಶ್ಯವು. ಆಯುರ್ವೇದ ಗ್ರಂಥಗಳಲ್ಲಿ ಪಾರಿ

ಭಾಷಿಕ ಶಬ್ದಗಳು ಬಹಳವಾಗಿ ಉಪಯೋಗಿಸಲ್ಪಟ್ಟಿರುವದರಿಂದ ಅವುಗಳ ಪರಿಚಯವನ್ನು ಮಾಡಿಕೊಳ್ಳುವದು ನಮ್ಮ ಮೊದಲನೆಯ ಕರ್ತವ್ಯವು. ಅಧ್ಯಯನ ಅಧ್ಯಾಪನ ವಿಧಿಗಳ ಬಗ್ಗೆ ಚರಕಾಚಾರ್ಯರು ಹಾಕಿಕೊಟ್ಟ ನಿಯಮಗಳು ಮನನೀಯವಾಗಿವೆ. ವಿಮಾನಸ್ಥಾನದ ಅದೇ ಅಧ್ಯಾಯದಲ್ಲಿ ಹೇಳಿದ ತದ್ವಿದ್ಯ ಸಂಭಾಷಣಗಳ ಮಹತ್ವವು ಕಡಿಮೆಯಾದದ್ದಲ್ಲ. ವಾದವಿವಾದದಿಂದ ವಿಚಾರವಿನಿಮಯವು ಚನ್ನಾಗಿ ಆಗಿ ವಿಷಯಜ್ಞಾನವಾಗುವದಲ್ಲದೆ ಸಾಮಾನ್ಯ ತತ್ವಗಳ ಬೋಧವೂ ಕೂಡ ಆಗುವದು. ಆಯುರ್ವೇದವು ಅಪಾರವಾಗಿರುವದರಿಂದ ಅದನ್ನು ತಿಳಿದುಕೊಳ್ಳಲಿಕ್ಕೆ ಎಷ್ಟು ಪ್ರಯತ್ನಪಟ್ಟರೂ ಸ್ವಲ್ಪವೇ ಸರಿ. ಎಷ್ಟೋ ಗ್ರಂಥಗಳು ನಾಶವಾಗಿರುವದರಿಂದ ತೊಡಕಿನ ಪ್ರಶ್ನೆಗಳು ಬಿಡಿಸಲಸಾಧ್ಯವಾದವುಗಳಾಗಿ ಹಾಗೆ ಉಳಿದಿರುವವು. ಇಂಥ ಪ್ರಸಂಗಗಳಲ್ಲಿ ಸಚ್ಛಾಸ್ತ್ರದ ಉಪಯೋಗವನ್ನಾದರೂ ಮಾಡಿಕೊಳ್ಳಬಹುದು. ಚರಕಾಚಾರ್ಯರು ದಾಕ್ಷಿಣ್ಯವನ್ನೂ ಬದಿಗಿಟ್ಟು ಈ ಮಾತನ್ನು ನಿಸ್ಪೃಹೆಯಿಂದ ಹೇಳಿರುವರು

ಕೃತ್ಸ್ನೋಹಿಲೋಕೋಬುದ್ಧಿಮತಾಮಾಚಾರ್ಯಃಶಂಭುಶ್ಚಾಬುದ್ಧಿಮತಾಮ್ ( ಚರಕ ಅ ೮. )

ಈ ವಾಕ್ಯದಿಂದ ಎಷ್ಟೋ ಬೋಧಗಳನ್ನು ಸಮ್ಮೈದ್ಯರು ಕಲಿಯತಕ್ಕದ್ದಾಗಿದೆ. ಆಯುರ್ವೇದ ನಿದಾನವನ್ನು ತಿಳಿದುಕೊಳ್ಳಲಿಕ್ಕೆ ಆಧುನಿಕ ಇಂದ್ರಿಯ ವಿಜ್ಞಾನಶಾಸ್ತ್ರದ ಸಹಾಯವು ಅವಶ್ಯವಿದೆಯೆಂದು ಕಂಡರೆ ಅದನ್ನು ಕಲಿಯಲಿಕ್ಕೆ ಯಾವ ತರದ ಅಡ್ಡಿಯೂ ಇರತಕ್ಕದ್ದಲ್ಲ. ಸಂಪ್ರಾಪ್ತಿಯನ್ನು ತಿಳಿದುಕೊಳ್ಳಲಿಕ್ಕೆ ಅದು ನಿಜವಾಗಿಯೂ ಬಹು ಸಹಾಯಕಾರಿಯಾಗಿರುವದು. ದೋಷಧಾತು ಮಲಗಳಲ್ಲಿ ದುಷ್ಟಿಯು ಹೇಗೆ ಹೇಗೆ ಆಗುತ್ತದೆ ಮತ್ತು ಅಂಗ ಪ್ರತ್ಯಂಗಗಳಲ್ಲಿ ಕ್ರಿಯ ಪ್ರತಿಕ್ರಿಯೆಗಳು ಹೇಗೆ ಸಂಭವಿಸುತ್ತವೆಂಬುದು ಚನ್ನಾಗಿ ನಮ್ಮ ನಿದರ್ಶನಕ್ಕೆ ಬರುವದು ಎಂಬ ಸುಶ್ರುತಾಚಾರ್ಯರ ವಾಕ್ಯದೊಳಗಿನ ಇಂಗಿತವನ್ನು ನಾವು ಅರಿತಿರಲಿಕ್ಕೆ ಬೇಕು.

ಆಧುನಿಕ ಶಾಸ್ತ್ರಗಳು ಕೇವಲ ಸಹಾಯಕಾರಿಗಳಾಗಿ ಯಾಕೆ ಇರಬೇಕೆಂಬದರ ಕಾರಣಗಳು

ಇನ್ನು ಆರ್ಯ ವೈದ್ಯಕದ ವಿದ್ಯಾರ್ಥಿಗಳು ಆಧುನಿಕ ಶಾಸ್ತ್ರಗಳನ್ನು ಕಲಿತರೂ ಕೇವಲ ಸಹಾಯಕಾರಿ ಶಾಸ್ತ್ರಗಳಂತೆ ಅವುಗಳ ಉಪಯೋಗವನ್ನು ಮಾಡಿಕೊಳ್ಳಬೇಕು. ಯಾಕಂದರೆ ಎರಡೂ ಶಾಸ್ತ್ರಗಳ ಮೂಲ ಸಿದ್ಧಾಂತಗಳು ಬೇರೆ ಬೇರೆ ಕಲ್ಪನೆಗಳ ಮೇಲೆ ಪ್ರಸ್ಥಾಪಿಸಲ್ಪಟ್ಟಿದ್ದರಿಂದ ವಿದ್ಯಾರ್ಥಿಗಳಿಗೆ ತುಸ ಗೊಂದಲವಾಗುವ ಸಂಭವವುಂಟು. ಒಂದು ಸೂಕ್ಷ್ಮವಾದ ಮೂಲವಿದ್ದರೆ ಎರಡನೆಯದು

ಸ್ಥೂಲಮೂಲವಾಗಿದೆ. ಪಾಶ್ಚಿಮಾತ್ಯ ಸಿದ್ಧಾಂತಗಳು ಸ್ಥೂಲಮೂಲವಾಗಿರುವದ ರಿಂದ ಅವುಗಳಲ್ಲಿ ಅವ್ಯಾಪ್ತದೋಷವಿರುವದು ನ್ಯಾಯಶಾಸ್ತ್ರಕ್ಕೆ ಸಮ್ಮತಿಸಿದ ಮಾತು. ಆಧುನಿಕ ವೈದ್ಯಕದಲ್ಲಿ ಹೆಚ್ಚುಹೆಚ್ಚಿಗೆ ಹೊಸಹೊಸ ಉಪಶಾಸ್ತ್ರಗಳು ಹೊರಡುತ್ತಿರುವದು ಈ ವಿಧಾನಕ್ಕೆ ಪ್ರತ್ಯಕ್ಷಪ್ರಮಾಣವಾಗಿದೆ. ಈ ಹೊಸ ಶಾಸ್ತ್ರಗಳು ತ್ರಿದೋಷಾದಿ ತತ್ವಗಳ ಸ್ಪಷ್ಟೀಕರಣಕ್ಕೆ ಕೆಲವಂಶದಿಂದ ಪೋಷಕ ವಾಗಿರುವವಾದರೂ ಆಯುರ್ವೇದದೊಳಗಿನ ಇತರ ತತ್ವಾನ್ವೇಷಣಕ್ಕೆ ಮಾರ್ಗ ದರ್ಶಕವಾಗಲಾರವು. ಪಾಶ್ಚಿಮಾತ್ಯರಿಗೆ ಈಗೀಗ ಈ ಮಾತು ನಿಜವೆಂದು ಕಾಣುತ್ತದೆ. ಈಚೆಗೆ ಆದ ಮಾನಸಶಾಸ್ತ್ರದಲ್ಲಿಯ ಪ್ರಗತಿಯನ್ನು ನೋಡಿದರೆ ಅವರ ಪ್ರಯತ್ನಗಳ ಧೋರಣವು ಲಕ್ಷಕ್ಕೆ ಬರುವದು. ಚಿಚ್ಛಕ್ತಿಯ ನಾಲ್ಕು ಭೇದಗಳು ಇನ್ನೂ ಅವರಿಗೆ ಪೂರ್ಣವಾಗಿ ತಿಳಿದಿಲ್ಲ. ಮನಸ್ಸು ಜಡವೆಂದು ಅವರು ಮನ್ನಿಸುವುದಿಲ್ಲ. ಪಂಚಪ್ರಾಣ ಸಿದ್ಧಾಂತಕ್ಕೆ ಅವರ ಒಪ್ಪಿಗೆಯಿಲ್ಲ ಇಂದ್ರಿಯವಿಜ್ಞಾನ ಶಾಸ್ತ್ರದಲ್ಲಿ ಬೇರೆಬೇರೆ ಘಟಕಾವಯವಗಳ ಸೂಕ್ಷ್ಮವರ್ಣನೆ ಯನ್ನು ಕೊಟ್ಟರೂ ಅವುಗಳ ಸಜೀವ ಪರಮಾಣುಗಳ ರಚನೆಯಲ್ಲಿ ಕ್ರಿಯಾ ಭೇದಗಳೂ ಅವಸ್ಥಾಭೇದಗಳೂ ಯಾವ ಶಕ್ತಿಯಿಂದ ನಿರ್ಮಿತವಾದವೆಂಬದನ್ನು ವಿವೇಚಿಸಿಲ್ಲ, ಜ್ಞಾನೇಂದ್ರಿಯಗಳಿಗೆ ಹೋಗುವ ವಾತವಾಹಕ ನಾಡಿಗಳ ತಂತು ಗಳು ರಚನೆಯಲ್ಲಿ ಸಮಾನವಾಗಿದ್ದರೂ ಅವು ಬೇರೆ ಬೇರೆ ಇಂದ್ರಿಯಗಳನ್ನು ಕೂಡಿದಮೇಲೆ ಅವುಗಳಲ್ಲಿ ಕ್ರಿಯಾ ಭೇದಗಳು ಏಕೆ ಉತ್ಪನ್ನವಾಗಬೇಕೆಂಬದನ್ನು ಅವರು ಕಂಡು ಹಿಡಿದಿಲ್ಲ ಶಬ್ದಾಂತರದಲ್ಲಿ ಹೇಳಬೇಕಾದರೆ ಅವರಿಗೆ ಪಂಚ ಪಸ್ಮೃತ್ರಿ ಮತ್ತು ಇಂದ್ರಿಯಗಳಸಂಬಂಧವು ಹೊಳೆದಿಲ್ಲ. ಒಟ್ಟಿಗೆ ಸೂಕ್ಷ್ಮಸೃಷ್ಟಿಯ ಮತ್ತು ಮಾನಸಶರೀರದ ಸಂದರ್ಭಗಳಲ್ಲಿ ಆಗತಕ್ಕಷ್ಟು ಪರಿಶೋಧನಗಳು ಅವ ರಿಂದ ಹೊರಟಿಲ್ಲ. ವಸ್ತುತಃ ಮಾನಸರೋಗಗಳ ನಿದಾನದಲ್ಲಿ ಇವುಗಳ ಮಹತ್ವ ವು ಹೆಚ್ಚಿಗೆ ಇರುತ್ತದೆ. ಆಯುರ್ವೇದಕಾರರು ಇದನ್ನು ಕಂಡುಹಿಡಿದು ಶುದ್ಧ ಸತ್ವದ ಏಳುಭೇದಗಳನ್ನೂ ರಾಜಸಸತ್ವದ ಆರು ಭೇದಗಳನ್ನೂ ಮತ್ತು ತಾಮಸಸತ್ವದ ಮೂರು ಭೇದಗಳನ್ನೂ ಮಾಡಿರುತ್ತಾರೆ. ಈ ಸೂಕ್ಷ್ಮ ಸತ್ವ ಭೇದ ಕಲ್ಪನೆಯುಚಿಕಿತ್ಸೆಯ ಸೌಲಭ್ಯಕ್ಕೋಸ್ಕರ ಇರುತ್ತದೆಂದು ಬೇರೆ ಹೇಳು ವಕಾರಣವಿಲ್ಲ.

"ಶರೀರಮಪಿಸತ್ವಮನುವಿಧೀಯತೇ । ಸತ್ವಂಚಶರೀರಮ್" ॥

(ಚರಕ-ಶಾರೀರ-೧.)

ಅಂತಃಸ್ರಾವಕ ಪಿಂಡಗಳಾದರೂ ಪ್ರಸಾದಧಾತುಗಳೇ

ಇತ್ತಿತ್ತ ಅಂತಃಸ್ರಾವಕ ಗ್ರಂಥಿಗಳಿಂದ (Ductless glands) ಹುಟ್ಟುವ ಕಸದ ಪರಿಣಾಮವು ಶರೀರ ವ್ಯಾಪಾ ರಗಳ ಮೇಲೆಯೂ ಮನೋವ್ಯಾಪಾರಗಳ ಮೇಲೆಯೂ

ಆಗುತ್ತಿರುತ್ತದೆಂದು ಆಧುನಿಕ ಶಾಸ್ತ್ರಕಾರರು ವರ್ಣಿಸಿದ್ದಾರೆ. ಈ ಪಿಂಡಗಳಲ್ಲಿ ಅಥವಾ ಗ್ರಂಥಿಗಳಲ್ಲಿ ವಿಕಾರವು ಉತ್ಪನ್ನವಾಯಿತೆಂದರೆ ಅಥವಾ ಇವುಗಳನ್ನು ಶಸ್ತ್ರಕ್ರಿಯೆಯಿಂದ ತೆಗೆದುಬಿಟ್ಟರೆ ಬಲವತ್ತರವಾದ ದುಷ್ಪರಿಣಾಮಗಳು ಉಂಟಾಗುತ್ತವೆಯೆಂದು ಅವರು ಕಂಡುಹಿಡಿದಿದ್ದಾರೆ. ಈ ಉಪಪತ್ತಿಗೆ ಆಯುರ್ವೇದ ಶಾಸ್ತ್ರದ ಸಂಪೂರ್ಣವಾದ ಒಪ್ಪಿಗೆಯಿದೆ. ಈ ಪಿಂಡಗಳು ಶರೀರದಲ್ಲಿಯ ಮಹತ್ವವುಳ್ಳ ಪ್ರಸಾದಧಾತುಗಳು ಇತರ ಅವಯವಗಳಿಗಿದ್ದಂತೆ ಇವಕ್ಕೂ ತ್ರಿಧಾತುಗಳಿಂದ ಪೋಷಣವು ದೊರೆಯುವುದುಂಟು. ವಾಯುವಿನ ಚಲನಶಕ್ತಿಯಿಂದ ರಕ್ತ ಮತ್ತು ಪಿತ್ತಗಳ ಸಸ್ನೇಹವಾದ ಉಷ್ಣತೆಯು ಹಾಗು ಕಫ ಧಾತುವಿನ ಬಲವೂ ಇವುಗಳಿಗೆ ಸಿಗುವವು. ಶರೀರ ಸಂವರ್ಧನಕ್ಕೆ ಇವುಗಳ ಉಪಯೋಗವು ಸಪ್ತಧಾತುಗಳಂತೆ ದ್ರವ್ಯಭೇದಗಳ ಮೂಲಕ ಆಗದೆ "ಗುರ್ವಾದಿ" ಇಪ್ಪತ್ತು ಗುಣಗಳ ವಿದ್ಯಮಾನದಿಂದಾಗುವದು. ಇವುಗಳಿಂದ ಹೊರಡುವ ಸ್ರಾವವು ಅಂತಃಶೋಷಣ ಕ್ರಿಯೆಯಿಂದ ಶರೀರದಲ್ಲಿಯ ಗೌರವರ್ಣದ ಸಿರೆಗಳದ್ವಾರಾ ರಕ್ತಕ್ಕೆ ಮುಟ್ಟುತ್ತದೆ. ಅಲ್ಲಿಂದ ಮುಂದೆ ಇತರ ಅವಯವಗಳ ಕಡೆಗೆ ಹೋಗುತ್ತದೆ. "ಪರಸ್ಪರೋಪಸಂಸ್ತಂಭಾತ್ ಸ್ನೇಹಪರಂಪರಾ" (ವಾಗ್ಭಟ) ಎಂಬ ನ್ಯಾಯದಿಂದ ಈ ಸ್ರಾವಗಳಲ್ಲಿಯ ಭಾವಗಳು ಕಾರಣಾನುಸಾರವಾಗಿ ಧಾತುಗಳ ವೃದ್ಧಿ, ಕ್ಷಯಗಳನ್ನುಂಟುಮಾಡುವವು. "ಪ್ರಕೃತ್ಯಾ ಚಯೌಗಪದ್ಯೇನತ ವಿರೋಧಿನಾಂಧಾತೂನಾಂವೃದ್ಧಿಹ್ರಾಸೌಭವತಃ" (ಶರೀರಸ್ಥಾನ ೬) ಎಂಬ ಚರಕಾಚಾರ್ಯರ ವಚನವುಂಟು. ಈ ಉಪಪತ್ತಿಗನುಸಾರವಾಗಿ ಈ ಪಿಂಡಗಳಲ್ಲಿಯಷ್ಟೇ ವೃದ್ಧಿಕ್ಷಯಗಳು ಆಗುತ್ತವೆಂತಲ್ಲ ಆದರೆ ಶರೀರದಲ್ಲಿಯ ಯಾವತ್ತು ಪ್ರಸಾದ ಧಾತುಗಳಲ್ಲಿ ಇಂಥ ಕ್ರಿಯೆಗಳು ನಡೆದಿರುತ್ತವೆ. ಮೂಲತಃ ಈ ಕ್ರಿಯೆಗಳು ಆದ್ಯಧಾತುಗಳಿಂದ ಕಫ ಮತ್ತು ಪಿತ್ತ ಇವುಗಳ ಮುಖಾಂತರವೇ ಆಗುತ್ತಿರುವವು ಈ ಅಂತಃಸ್ರಾವಕಪಿಂಡಗಳ ನಿಯಮನವು ವಾತವಾಹಕಕೇಂದ್ರಗಳ ದ್ವಾರಾ (Sympathetic ganglia) ಯೋಗಾಭ್ಯಾಸಾದಿ ಸಾಧನಗಳಿಂದ ಶಕ್ಯವಿದೆಯೆಂಬು ಯೋಗಿಜನರ ಅನುಭವವಿರುವದು. "ಸರ್ವಾಂಗಾಸನ"ದ ಯೋಗದಿಂದ ನಿಕಂಠಮಣಿಯು (Thyroid gland) ಮೇಲೆ ಪರಿಣಾಮವನ್ನು ಮಾಡಿ ತದ್ವಾರಾ ಧಾತು ಪ್ರತಿಕ್ರಿಯೆಯಲ್ಲಿ ಆಗುವ ಸ್ವಾಭಾವಿಕ ವೈಷಮ್ಯವನ್ನು ತೆಗೆದುಹಾಕುವ ಕ್ರಮವನ್ನು ಕೆಲವು ಚಿಕಿತ್ಸಕರು ಈಗಾಗಲೇ ಆರಂಭಿಸಿದ್ದಾರೆ. ಈ ಸಂಗತಿಗಳ ಮೇಲಿಂದ ತ್ರಿಧಾತು ಮೀಮಾಂಸೆಯು ಎಷ್ಟು ವ್ಯಾಪಕ ಸ್ವರೂಪವುಳ್ಳದ್ದಾಗಿ ಭಿನ್ನ ಭಿನ್ನ ಉಪಪತ್ತಿಗಳಿಗೆ ಹೇಗೆ ಮೂಲಾಧಾರವಾಗಿದೆಯೆಂಬದು ಸ್ಪಷ್ಟವಾಗಿ ತಿಳಿಯುತ್ತದೆ.

ಉಪಸಂಹಾರ.

ಕೊನೆಗೆ ಹೇಳತಕ್ಕದ್ದೇನಂದರೆ ರೋಗ ನಿದಾನವನ್ನು ಶುದ್ಧವಾದ ಆಯುರ್ವೇದೋಕ್ತ ಪದ್ಧತಿಯಿಂದ ಮಾಡಿದರೆ ಬಹುಶಃ ಯಾವ ಅಡಚಣೆಗಳು ಬರುವದಿಲ್ಲ. ಒಂದುವೇಳೆ ಬಂದರೆ ಇಂಥ ಕಠಿಣ ಪ್ರಶ್ನೆಗಳನ್ನು ಬಿಡಿಸಲಿಕ್ಕೆ ಆಯುರ್ವೇದವು ಮಾರ್ಗವನ್ನು ತೋರಿಸಿಟ್ಟಿರುತ್ತದೆ. ಆಯುರ್ವೇದವು ನಿಜವಾಗಿ ಒಂದೇ ಶಾಸ್ತ್ರವಾಗದೆ ಅನೇಕಶಾಸ್ತ್ರಗಳನ್ನೊಳಗೊಂಡ ಒಂದು ಬಗೆಯ 'ವೇದ''ವೇ ಆಗಿರುತ್ತದೆಂಬಮಾತು ಸುಳ್ಳಲ್ಲ. ಶಾಸ್ತ್ರಕಾರರು ತಮ್ಮದೊಂದು ಮತವನ್ನು ಶಾಸ್ತ್ರರೂಪವಾಗಿಟ್ಟು ಅದರಂತೆಯೇ ಮಾಡಬೇಕೆಂದು ಹೇಳಿಲ್ಲ. ಕೇವಲ ನಿಸರ್ಗದ ನಿಯಮಗಳನ್ನು ಸರಿಯಾಗಿ ಮಂಡಿಸಿ ಅವುಗಳ ಮೇಲೆ ತಮ್ಮ ಸಿದ್ಧಾಂತಗಳನ್ನು ಸ್ಥಾಪಿಸಿದ್ದಾರೆ. ತ್ರಿಕಾಲಾಬಾಧಿತವಿರಬೇಕೆಂದು ಆ ಶಾಸ್ತ್ರದ ತತ್ವಗಳಿಗೆ ಆದಷ್ಟು ವ್ಯಾಪಕ ಸ್ವರೂಪವನ್ನು ಕೊಟ್ಟಿದ್ದಾರೆ. ಪಾಶ್ಚಿಮಾತ್ಯ ಪಂಡಿತರು ಇವೇ ತತ್ವಗಳನ್ನು ಸ್ಥೂಲಮಾನದಿಂದ ಒಡೆದು ಹೇಳುತ್ತಾರೆ, ಅವಶ್ಯವಿದ್ದಲ್ಲಿ ವಿಷಯಜ್ಞಾನದ ಅನುಕೂಲತೆಗಾಗಿ ಅವನ್ನು ಉಪಯೋಗಿಸಬಹುದು. ಜಂತುಶಾಸ್ತ್ರದ ಆಡಂಬರದಿಂದ ನಮ್ಮ ಕಣ್ಣುಗಳು ಉಬ್ಬುವ ಕಾರಣವಿಲ್ಲ. ಅದು ಎಷ್ಟಾದರೂ ಸಂಪ್ರಾಪ್ತಿಶಾಸ್ತ್ರದ ಒಂದು ಭಾಗವು. ಅದಕ್ಕೆ ತಕ್ಕಷ್ಟು ಅನುವನ್ನು ಆಯುರ್ವೇದವು ಸಲ್ಲಿಸಿರುತ್ತದೆ

ತುಲನಾತ್ಮಕದೃಷ್ಟಿಯಿಂದ ಸಾಧನಗಳಿಗಿಂತಲೂ ತತ್ವಗಳಿಗೆಯೇ ಮೇಲ್ಪಂಕ್ತಿ.

(ವಿಮಾನಸ್ಥಾನ ಅ. ೭ ಹಾಗೆಯೇ ಸುಶ್ರುತ ಉತ್ತರತಂತ್ರ ಅ. ೫೪)

ಇವನ್ನು ನೋಡಿ ಅವಶ್ಯವಿದ್ದಲ್ಲಿ ಅದನ್ನು ಉಪಯೋಗಿಸಬಹುದು. ಆದರೆ ಅದನ್ನು ಮಿತಿಮೀರಿ ಮನ್ನಿಸಿ ಮೂಲಸಿದ್ಧಾಂತಗಳನ್ನು ಬದಿಗೊತ್ತಬಾರದೆಂದೇ ನಮ್ಮ ಅಭಿಪ್ರಾಯವು.

''ಸರ್ವಥಾಸರ್ವಮಾಲೋಚ್ಯಯಥಾಸಂಭವಮರ್ಥವಿತ್ ।
ಅಥಾಧ್ಯವಸೇತ್ತತ್ವೇಚಕಾರ್ಯೇಚತದನಂತರಮ್'' ॥

(ಚರಕ-ವಿಮಾನ-ಅ ೪)

ಯಾಕಂದರೆ,

ಲೋಕೇವಾಯ್ವರ್ಕಸೋಮಾನಾಂದುರ್ವಿಜ್ಞೇಯಾಯಥಾಗತಿಃ ।
ತಥಾಃಶರೀರೇವಾತಸ್ಯಪಿತ್ತಸ್ಯಚಕಫಸ್ಯಚ ॥
ಕ್ಷಯಂವೃದ್ಧಿಂಸಮತ್ವಂಚತಥೈವಾವರಣಂಭಿಷಕ್ ।
ವಿಜ್ಞಾಯಪವನಾದೀನಾಂನಪ್ರಮುಹ್ಯತಿಕರ್ಮಸು ॥

(ಚರಕ-ಚಿಕಿತ್ಸಾ-ಅ ೨೮)

ಬೆಳಗಾಂ.
7—9—1929.

ಇತಿ ಶಂ.

H. V. Savanur.

# ಮಾಧವನಿದಾನ ಕರ್ಣಾಟಕಾನುವಾದ

## ವಿಷಯಗಳ ವರ್ಣಾನುಕ್ರಮಣಿಕೆ.


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| **ಅಗ್ನಿಮಾಂದ್ಯನಿದಾನ.** | | |
| ಅಗ್ನಿಗಳ ಪ್ರಕಾರ | ೪೮ | ೧ |
| ಅವುಗಳ ಲಕ್ಷಣ | ,, | ೨ |
| ಅಜೀರ್ಣಪ್ರಕಾರಗಳು | ೪೯ | ೫ |
| ಅಜೀರ್ಣ ಕಾರಣ | ,, | ೭ |
| ಆಮಾಜೀರ್ಣಲಕ್ಷಣ | ೫೦ | ೯ |
| ವಿದಗ್ಧಾಜೀರ್ಣ ,, | ,, | ೧೦ |
| ವಿಷ್ಟಬ್ಧಾಜೀರ್ಣ ,, | ,, | ೧೧ |
| ರಸಶೇಷಾಜೀರ್ಣ ಲಕ್ಷಣ | ,, | ೧೨ |
| ಅಜೀರ್ಣಕ್ಕೆ ಮುಖ್ಯಕಾರಣ | ೫೧ | ೧೩ |
| ಅಜೀರ್ಣದ ಉಪದ್ರವಗಳು | ,, | ೧೪ |
| ವಿಸೂಚಿಕೆ | ,, | ೧೫ |
| ವಿಸೂಚಿಕಾಸ್ವರೂಪ | ,, | ೧೭ |
| ಅಲಸಕದ ಲಕ್ಷಣ | ೫೨ | ೧೮ |
| ವಿಲಂಬಿಕೆಯ ಲಕ್ಷಣ | ,, | ೨೦ |
| ಆಮಾಜೀರ್ಣ ,, | ,, | ೨೧ |
| ಸಾಧ್ಯಾಸಾಧ್ಯ ವಿಚಾರ | ,, | ೨೨ |
| ಜೀರ್ಣಾಹಾರಲಕ್ಷಣ | ೫೩ | ೨೩ |
| **ಅತಿಸಾರನಿದಾನ.** | | |
| ಅತಿಸಾರ ಕಾರಣ | ೨೯ | ೧ |
| ಅತಿಸಾರ ಸಂಪ್ರಾಪ್ತಿ | ೩೦ | ೪ |
| ,, ಪೂರ್ವರೂಪ | ,, | ೫ |
| ವಾತಾತಿಸಾರಲಕ್ಷಣ | ,, | ೬ |
| ಪಿತ್ತಾತಿಸಾರ ,, | ೩೧ | ೭ |
| ಕಫಾತಿಸಾರ ,, | ,, | ೭ |
| ತ್ರಿದೋಷಾತಿಸಾರ ಲಕ್ಷಣ | ,, | ೮ |
| ಶೋಕಾತಿಸಾರ ,, | ,, | ೯ |
| ಆಮಾತಿಸಾರ ,, | ೩೨ | ೧೧ |
| ಅಪಕ್ವಾತಿಸಾರ ,, | ,, | ೧೨ |
| ಪಕ್ವಾತಿಸಾರ ,, | ,, | ೧೩ |
| ಅಸಾಧ್ಯ ಅತಿಸಾರ ,, | ,, | ೧೪ |
| ರಕ್ತಾತಿಸಾರನಿದಾನ | ೩೩ | ೨೦ |
| ಪ್ರವಾಹಿಕಾ ಸಂಪ್ರಾಪ್ತಿ | ೩೪ | ೨೧ |
| ,, ಲಕ್ಷಣ | ,, | ೨೨ |
| ಅತಿಸಾರ ನಿವೃತ್ತಿ ಲಕ್ಷಣ | ,, | ೨೩ |
| ಜ್ವರಾತಿಸಾರ ,, | ,, | ೨೪ |
| **ಅಪಸ್ಮಾರನಿದಾನ.** | | |
| ಅಪಸ್ಮಾರರೋಗದ ಸಂಪ್ರಾಪ್ತಿ | ೧೧೭ | ೧ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಪಸ್ಮಾರದ ಸಾಮಾನ್ಯ ಲಕ್ಷಣ | ೧೧೭ | ೨ |
| ಅಪಸ್ಮಾರದ ಪೂರ್ವರೂಪ | ,, | ೩ |
| ವಾತಜ ಅಪಸ್ಮಾರಲಕ್ಷಣ | ೧೧೮ | ೪ |
| ಪಿತ್ತಜ ,, | ,, | ೫ |
| ಕಫಜ ,, | ,, | ೬ |
| ತ್ರಿದೋಷಜ ,, | ,, | ೭ |
| ಅಪಸ್ಮಾರದಅಸಾಧ್ಯ ಲಕ್ಷಣ | ೧೧೯ | ೮ |
| ,, ಪ್ರಕೋಪಕಾಲ | ,, | ೯ |

## ಅರೋಚಕನಿದಾನ.

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅರುಚಿಯುಕಾರಣ | ೮೫ | ೧ |
| ವಾತಜ ಅರೋಚಕಲಕ್ಷಣ | ,, | ೧ |
| ಪಿತ್ತಜ ,, | ,, | ೨ |
| ಕಫಜ ,, | ,, | ೨ |
| ಆಗಂತುಕ ಮತ್ತು ತ್ರಿದೋಷಜ | ೮೬ | ೩ |
| ಇವುಗಳ ಉಪದ್ರವಗಳು | ,, | ೪ |

## ಅರ್ಶೋನಿದಾನ.

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮೂಲವ್ಯಾಧಿಯಸಂಪ್ರಾಪ್ತಿ | ೩೯ | ೧ |
| ,, ಸ್ವರೂಪ | ೪೦ | ೨ |
| ವಾತಜ ಮೂಲವ್ಯಾಧಿಯ ನಿದಾನ | ,, | ೩ |
| ಪಿತ್ತಜ ,, | ,, | ೫ |
| ಕಫಜ ,, | ೪೧ | ೭ |
| ದ್ವಂದ್ವಜ ,, | ,, | ೯ |
| ಸರ್ವಜ ಮೂಲವ್ಯಾಧಿ ನಿದಾನ | ೪೧ | ೯ |
| ವಾತಜ ಮೂಲವ್ಯಾಧಿಯ ಲಕ್ಷಣ | ೪೨ | ೧೦ |
| ಪಿತ್ತಜ ,, ,, | ೪೩ | ೧೬ |
| ಕಫಜ ,, ,, | ೪೪ | ೧೯ |
| ಸರ್ವಜ ಮತ್ತು ಸಹಜ ಲಕ್ಷಣ | ,, | ೨೪ |
| ರಕ್ತಜ ಮೂಲವ್ಯಾಧಿಯು ಲಕ್ಷಣ | ,, | ೨೪ |
| ಮೂಲವ್ಯಾಧಿಯ ಪೂರ್ವರೂಪ | ೪೬ | ೩೧ |
| ಮೂಲವ್ಯಾಧಿಯ ಸಾಧ್ಯಾಸಾಧ್ಯತ್ವ | ,, | ೩೫ |
| ಯಾಪ್ಯಲಕ್ಷಣ | ೪೭ | ೩೮ |
| ಅಸಾಧ್ಯ ,, | ,, | ೩೯ |
| ಮೇಢ್ರಾದಿಗಳಲ್ಲಿನ ಅರ್ಶಸ್ಸು | ,, | ೪೨ |

## ಅಶ್ಮರೀನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಶ್ಮರಿಯ ಪ್ರಕಾರಗಳು | ೧೬೮ | ೧ |
| ,, ಸಂಪ್ರಾಪ್ತಿ | ೧೬೯ | ೨ |
| ,, ಪೂರ್ವರೂಪ | ,, | ೩ |
| ,, ಸಾಮಾನ್ಯ ಲಕ್ಷಣ | ,, | ೪ |
| ವಾತಾಶ್ಮರೀ ಲಕ್ಷಣ | ೧೭೦ | ೬ |
| ಪಿತ್ತಾಶ್ಮರೀ ,, | ೧೭೧ | ೮ |
| ಕಫಾಶ್ಮರೀ ,, | ,, | ೯ |
| ಶುಕ್ರಾಶ್ಮರೀ ,, | ,, | ೧೧ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಶರ್ಕರಾಶ್ಮರಿ ಮತ್ತು ಇದರ ಉಪದ್ರವಗಳು | ೧೬೨ | ೧೪ |
| ಅಶ್ಮರಿಯ ಅಸಾಧ್ಯಲಕ್ಷಣ | ,, | ೧೭ |

## ಅಸೃಗ್ದರನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಸೃಗ್ದರನಿದಾನ | ೩೪೫ | ೧ |
| ಪ್ರದರದ ಸಾಮಾನ್ಯಲಕ್ಷಣ | ,, | ೨ |
| ಪ್ರದರದ ಉಪದ್ರವಗಳು | ,, | ೨ |
| ವಾತಪ್ರದರದಲಕ್ಷಣ | ,, | ೩ |
| ಕಫಪ್ರದರದ ಲಕ್ಷಣ | ೩೪೬ | ೪ |
| ಪಿತ್ತ ,, ,, | ,, | ೪ |
| ತ್ರಿದೋಷ ಪ್ರದರದ ಲಕ್ಷಣ | ,, | ೫ |
| ಪ್ರದರದ ಅಸಾಧ್ಯ ,, | ,, | ೬ |
| ಶುದ್ಧಾರ್ತವ ಲಕ್ಷಣ | ೩೪೭ | ೭ |

## ಆಮವಾತನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಆಮವಾತನಿದಾನ ಮತ್ತು ಸಂಪ್ರಾಪ್ತಿ | ೧೪೨ | ೧ |
| ಆಮವಾತದ ಸಾಮಾನ್ಯ ಲಕ್ಷಣ | ,, | ೬ |
| ಸರ್ವವ್ಯಾಪಿಯಾದ ಆಮವಾತದಲಕ್ಷಣ | ೧೪೩ | ೭ |
| ವಾತಾದಿಗಳು ವಿಶೇಷವಾಗಿದ್ದಲ್ಲಿ ಲಕ್ಷಣ | ,, | ೧೧ |
| ಆಮವಾತದಸಾಧ್ಯಾಸಾಧ್ಯತ್ವಗಳು | ೧೪೪ | ೧೨ |

## ಆಮ್ಲಪಿತ್ತನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಆಮ್ಲಪಿತ್ತಕ್ಕೆ ಕಾರಣ | ೨೫೮ | ೧ |
| ಆಮ್ಲಪಿತ್ತದ ಲಕ್ಷಣ | ೨೫೯ | ೨ |
| ಆಮ್ಲಪಿತ್ತದಲ್ಲಿನ ವಿಕಾರಗಳು | ,, | ೨ |
| ವಮನ ಲಕ್ಷಣ | ,, | ೪ |
| ಇದರ ಸಾಧ್ಯಾಸಾಧ್ಯ ವಿಚಾರ | ೨೬೦ | ೭ |
| ದೋಷಸಂಬಂಧ ವಿಚಾರ | ,, | ೮ |

## ಉದರನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಉದರ ಲಕ್ಷಣ | ೧೮೪ | ೧ |
| ಉದರ ಸಂಪ್ರಾಪ್ತಿ | ೧೮೫ | ೨ |
| ಉದರ ಸಾಮಾನ್ಯ ಲಕ್ಷಣ | ,, | ೩ |
| ಉದರ ಸಂಖ್ಯೆ | ,, | ೪ |
| ವಾತೋದರಲಕ್ಷಣ | ೧೮೬ | ೫ |
| ಪಿತ್ತೋದರ ,, | ,, | ೯ |
| ಕಫೋದರ ,, | ೧೮೭ | ೧೧ |
| ಸನ್ನಿಪಾತೋದರ ಲಕ್ಷಣ | ,, | ೧೩ |
| ಪ್ಲೀಹೋದರ ,, | ೧೮೮ | ೧೫ |
| ಯಕೃದುದರ ,, | , | ೧೭ |
| ದೋಷಸಂಬಂಧ ವಿಚಾರ | ೧೮೯ | ೧೮ |
| ಬದ್ಧಗುದೋದರ | ,, | ೧೯ |
| ಕ್ಷತೋದರ | ೧೯೦ | ೨೧ |
| ಜಲೋದರ | ,, | ೨೩ |
| ಸಾಧ್ಯಾಸಾಧ್ಯ ವಿಚಾರ | ೧೯೧ | ೨೫ |
| ತ್ಯಾಜ್ಯಲಕ್ಷಣ | ೧೯೨ | ೨೮ |

## ಉದಾವರ್ತನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಉದಾವರ್ತದ ಕಾರಣ | ೧೫೦ | ೧ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಧೋವಾತ, ಮಲ, ಮೂತ್ರ ಕಳಿಕೆ, ಕಣ್ಣೀರು, ಸೀನು, ೀಗು, ವಮನ, ಶುಕ್ರ. ಹಸಿವು, ಾಯಾರಿಕೆ, ಉಸಿರು, ನಿದ್ರೆ, ವುಗಳ ತಡೆಯಿಂದುಂಟಾಗುವ ದಾವರ್ತಗಳು | ೧೫೧ | ೨-೧೨ |
| ಪಿತ ವಾತಜ ಉದಾವರ್ತ | ೧೫೨ | ೧೩ |
| ನಾಹ ನಿದಾನ | ೧೫೩ | ೧೬ |
| ನಾಹದ ಲಕ್ಷಣ | ,, | ೧೮ |

## ಉನ್ಮಾದನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಉನ್ಮಾದ ಶಬ್ದಾರ್ಥ | ೧೦೭ | ೧ |
| ಉನ್ಮಾದ ಪ್ರಕಾರ | ,, | ೨ |
| ಉನ್ಮಾದ ಕಾರಣ | ೧೦೮ | ೪ |
| ,, ಸಂಪ್ರಾಪ್ತಿ | ,, | ೫ |
| ,, ಸಾಮಾನ್ಯ ಸ್ವರೂಪ | ೧೦೯ | ೬ |
| ವಾತಜ ಉನ್ಮಾದಲಕ್ಷಣ | ,, | ೭ |
| ಪಿತ್ತಜ ಉನ್ಮಾದಲಕ್ಷಣ | ೧೧೦ | ೯ |
| ಕಫಜ ,, | ೧೧೧ | ೧೧ |
| ಸನ್ನಿಪಾತಜ ,, | ,, | ೧೩ |
| ಶೋಕಜ ,, | ,, | ೧೪ |
| ವಿಷಜ ,, | ೧೧೨ | ೧೫ |
| ಉನ್ಮಾದದ ಅಸಾಧ್ಯಲಕ್ಷಣ | ,, | ೧೬ |
| ಭೂತೋನ್ಮಾದಲಕ್ಷಣ | ,, | ೧೭ |
| ದೇವಗ್ರಹಜುಷ್ಟ ,, | ೧೧೩ | ೧೮ |
| ಅಸುರಗ್ರಹಜುಷ್ಟ ,, | ,, | ೧೯ |
| ಗಂಧರ್ವಗ್ರಹಜುಷ್ಟ ,, | ೧೧೪ | ೨೦ |
| ಯಕ್ಷಗ್ರಹಜುಷ್ಟಲಕ್ಷಣ | ೧೧೪ | ೨೧ |
| ಪಿತೃ ,, | ,, | ೨೨ |
| ಸರ್ಪ ,, | ೧೧೫ | ೨೩ |
| ರಾಕ್ಷಸ ,, | ,, | ೨೪ |
| ಪಿಶಾಚ ,, | ,, | ೨೫ |
| ಅಸಾಧ್ಯಲಕ್ಷಣ | ೧೧೬ | ೨೬ |
| ಗ್ರಹಗಳ ಗ್ರಹಣಕಾಲ | ,, | ೨೭ |
| ಶರೀರಗತಗ್ರಹಗಳು ಕಾಣದಿರಲು ಕಾರಣ | ,, | ೨೯ |

## ಉಪದಂಶನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಉಪದಂಶಕ್ಕೆ ಕಾರಣ | ೨೩೯ | ೧ |
| ವಾತೋಪದಂಶಲಕ್ಷಣ | ೨೪೦ | ೨ |
| ಪಿತ್ತೋಪದಂಶ ಲಕ್ಷಣ | ,, | ೨ |
| ರಕ್ತೋಪದಂಶ ,, | ,, | ೨ |
| ಕಫಜೋಪದಂಶ ,, | ,, | ೩ |
| ಸನ್ನಿಪಾತೋಪದಂಶ,, | ,, | ೪ |
| ಉಪದಂಶದಅಸಾಧ್ಯ,, | ,, | ೪ |
| ಲಿಂಗವರ್ತಿ ,, | ೨೪೧ | ೬ |

## ಊರುಸ್ತಂಭನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಊರುಸ್ತಂಭ ಸಂಪ್ರಾಪ್ತಿ | ೧೪೦ | ೧ |
| ಊರುಸ್ತಂಭಪೂರ್ವರೂಪ | ೧೪೧ | ೬ |
| ಊರುಸ್ತಂಭ ಲಕ್ಷಣ | ,, | ೭ |
| ಸಾಧ್ಯಾಸಾಧ್ಯ ವಿಚಾರ | ,, | ೧೦ |

## ಕರ್ಣರೋಗನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕರ್ಣಶೂಲಲಕ್ಷಣ | ೩೦೧ | ೧ |
| ಕರ್ಣನಾದ ,, | ೩೦೨ | ೨ |
| ಬಾಧಿರ್ಯ ,, | ,, | ೩ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕರ್ಣಕ್ಷ್ವೇಡ ಲಕ್ಷಣ | ೩೦೨ | ೪ |
| ಕರ್ಣಸ್ರಾವ ,, | ,, | ೫ |
| ಕರ್ಣಕಂಡೂ ,, | ೩೦೩ | ೬ |
| ಕರ್ಣಗೂಥ ,, | ,, | ೬ |
| ಕರ್ಣಪ್ರತಿನಾಹ ಲಕ್ಷಣ | ,, | ೭ |
| ಕ್ರಿಮಿಕರ್ಣ ಲಕ್ಷಣ | ,, | ೮ |
| ಕರ್ಣವಿದ್ರಧಿಲಕ್ಷಣ | ೩೦೪ | ೧೦ |
| ಕರ್ಣ ಪಾಕಲಕ್ಷಣ | ೩೦೫ | ೧೨ |
| ಪೂತಿ ಕರ್ಣ ,, | ,, | ೧೩ |
| ವಾತಜ ಕರ್ಣರೋಗ | ,, | ೧೪ |
| ಪಿತ್ತಜ ,, ,, | ,, | ೧೪ |
| ಕಫಜ ,, ,, | ,, | ೧೫ |
| ಸನ್ನಿಪಾತಜ ಕರ್ಣರೋಗ ಲಕ್ಷಣ | ,, | ೧೫ |
| ಪರಿಪೋಟ ಲಕ್ಷಣ | ೩೦೬ | ೧೬ |
| ಉತ್ಪಾತ ಲಕ್ಷಣ | ,, | ೧೭ |
| ಸ್ತಬ್ಧಕ ಲಕ್ಷಣ | ೩೦೭ | ೧೯ |
| ಉನ್ಮಂಥಕ ಲಕ್ಷಣ | ,, | ೨೦ |
| ದುಃಖವರ್ಧನ ಲಕ್ಷಣ | ,, | ೨೧ |
| ಪರಿಲೇಹೀ ,, | ,, | ೨೨ |
| **ಕಾಸನಿದಾನ** | | |
| ಕಾಸಕಾರಣ ಮತ್ತು ಸಂಪ್ರಾಪ್ತಿ | ೭೧ | ೧ |
| ಕಾಸಗಳಸಂಖ್ಯೆ | ೭೨ | ೩ |
| ಕಾಸದಪೂರ್ವರೂಪ | , | ೪ |
| ವಾತಕಾಸದ ಲಕ್ಷಣ | ,, | ೫ |
| ಪಿತ್ತ ,, ,, | ೭೩ | ೬ |
| ಕಫ ,, ,, | ,, | ೭ |
| ಕ್ಷತ ,, ,, | ೭೩ | ೮ |
| ಕ್ಷಯ ,, ,, | ೭೪ | ೧೨ |
| ಸಾಧ್ಯಾಸಾಧ್ಯವಿಚಾರ | ,, | ೧೪ |
| **ಕುಷ್ಠನಿದಾನ** | | |
| ಕುಷ್ಠನಿದಾನ ಮತ್ತು ಸಂಪ್ರಾಪ್ತಿ | ೨೪೭ | ೧ |
| ಕುಷ್ಠದ ಏಳುಬೇಧಗಳು | ೨೪೮ | ೭ |
| ಕುಷ್ಠದ ಪೂರ್ವರೂಪ | ,, | ೮ |
| ಏಳು ಮಹಾಕುಷ್ಠಗಳು | ೨೪೯ | ೧೦ |
| ಕಪಾಲ ಕುಷ್ಠಲಕ್ಷಣ | ,, | ೧೦ |
| ಔದುಂಬರ ,, ,, | ,, | ೧೧ |
| ಮಂಡಲ ,, ,, | ,, | ೧೨ |
| ಋಷ್ಯಜಿಹ್ವ ಕುಷ್ಠ ಲಕ್ಷಣ | ,, | ೧೩ |
| ಪುಂಡರೀಕ ಕುಷ್ಠ ಲಕ್ಷಣ | ೨೫೦ | ೧೪ |
| ಸಿಧ್ಮ ಕುಷ್ಠಲಕ್ಷಣ | ,, | ೧೫ |
| ಕಾಕಣ ಕುಷ್ಠಲಕ್ಷಣ | ,, | ೧೬ |
| ಚರ್ಮ ,, ,, | ,, | ೧೭ |
| ಕಿಟಿಭ ,, ,, | ೨೫೧ | ೧೮ |
| ವೈಪಾದಿಕ ಕುಷ್ಠಲಕ್ಷಣ | ,, | ೧೮ |
| ಅಲಸಕ ,, ,, | ,, | ೧೯ |
| ದದ್ರು ಮಂಡಲಕುಷ್ಠಲಕ್ಷಣ | ,, | ೧೯ |
| ಚರ್ಮದಲ ಕುಷ್ಠ ಲಕ್ಷಣ | ,, | ೨೦ |
| ಪಾಮಕುಷ್ಠಲಕ್ಷಣ | ,, | ೨೧ |
| ಕಚ್ಛುಕುಷ್ಠ ಲಕ್ಷಣ | ,, | ೨೧ |
| ವಿಸ್ಫೋಟ ಕುಷ್ಠಲಕ್ಷಣ | ,, | ೨೨ |
| ಶತಾರು ಕುಷ್ಠಲಕ್ಷಣ | ,, | ೨೨ |
| ವಿಚರ್ಚಿಕ ಕುಷ್ಠಲಕ್ಷಣ | ೨೫೨ | ೨೩ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ದೋಷಬೇಧನಿಮಿತ್ತಕ ಕುಷ್ಠರೋಗ ಲಕ್ಷಣ | ೨೫೨ | ೨೩ |
| ರಸಾದಿ ಧಾತುಗತ ,, | ೨೫೩ | ೨೫ |
| ಸಾಧ್ಯಾಸಾಧ್ಯ ವಿಚಾರ | ೨೫೪ | ೩೧ |
| ಕುಷ್ಠಪ್ರಭೇದ ಗಳಲ್ಲಿನ ಮುಖ್ಯ ದೋಷ | ,, | ೩೩ |
| ಮಹಾ ಕುಷ್ಠಗಳು | ೨೫೫ | ೩೬ |
| ಕಿಲಾಸ ಕುಷ್ಠಲಕ್ಷಣ | ,, | ೩೭ |
| ದೋಷಭೇಧದಿಂದಇದರಲ್ಲಿ ಲಕ್ಷಣಗಳು | ,, | ೩೮ |
| ಶ್ವಿತ್ರದ ಅಸಾಧ್ಯಲಕ್ಷಣ | ೨೫೬ | ೪೦ |
| ಸಾಂಸರ್ಗಿಕ ರೋಗಗಳು | ,, | ೪೨ |


## ಕ್ರಿಮಿನಿದಾನ


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕ್ರಿಮಿಯ ಪ್ರಕಾರಗಳು | ೫೩ | ೧ |
| ಅವುಗಳ ಸಂಖ್ಯೆ | ,, | ೨ |
| ಬಾಹ್ಯ ಕ್ರಿಮಿ | ,, | ೩ |
| ಕ್ರಿಮಿಗಳಿಗೆ ಕಾರಣ | ೫೪ | ೪ |
| ಪುರೀಷಜ ಕ್ರಿಮಿಗಳು | ,, | ೫ |
| ಕಫಜ ,, | ,, | ೫ |
| ರಕ್ತಜ ,, | ,, | ೬ |
| ಸಂಜಾತ ಕ್ರಿಮಿಲಕ್ಷಣ | ,, | ೭ |
| ಕಫಜ ಕ್ರಿಮಿಲಕ್ಷಣ | ,, | ೮ |
| ರಕ್ತಜ ಕ್ರಿಮಿಲಕ್ಷಣ | ೫೫ | ೧೧ |
| ಪುರೀಷಜ ಕ್ರಿಮಿಲಕ್ಷಣ | ,, | ೧೩ |


## ಕ್ಷುದ್ರರೋಗನಿದಾನ


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಜಗಲ್ಲಿಕ ಲಕ್ಷಣ | ೨೭೫ | ೧ |
| ಯವಪ್ರಖ್ಯಾಲಕ್ಷಣ | ,, | ೨ |
| ಅಂತ್ರಾಲಜೀಲಕ್ಷಣ | ೨೭೫ | ೩ |
| ವಿವೃತದ ಲಕ್ಷಣ | ,, | ೪ |
| ಕಚ್ಛಪಿಕಾ ಲಕ್ಷಣ | ೨೭೬ | ೫ |
| ವಲ್ಮೀಕದಲಕ್ಷಣ | ,, | ೬ |
| ಇಂದ್ರವಿದ್ಧದಲಕ್ಷಣ | ,, | ೮ |
| ಗರ್ದಭಿಕಾ ,, | ೨೭೭ | ೯ |
| ಪಾಷಾಣಗರ್ದಭ ಲಕ್ಷಣ | ,, | ೧೦ |
| ಪನಸಿಕಾ ,, | ,, | ೧೧ |
| ಜಾಲಗರ್ದಭ ,, | ,, | ೧೨ |
| ಇರಿವೇಲ್ಲಿಕಾ ,, | ೨೭೮ | ೧೩ |
| ಕಕ್ಷಾ ,, | ,, | ೧೪ |
| ಗಂಧಮಾಲಾ ,, | ,, | ೧೫ |
| ಅಗ್ನಿರೋಹಿಣೀ ,, | ,, | ೧೬ |
| ಚಿಪ್ಪ ,, | ೨೭೯ | ೧೭ |
| ಕುನಖ ,, | ,, | ೧೯ |
| ಅನುಶಾಯಿ ,, | ,, | ೨೦ |
| ವಿದಾರಿಕಾ ,, | ,, | ೨೦ |
| ಶರ್ಕರಾ ,, | ,, | ೨೧ |
| ಶರ್ಕರಾರ್ಬುದ ,, | ,, | ೨೪ |
| ಪಾದದಾರೀ ,, | ೨೮೦ | ೨೪ |
| ಕದರ ,, | ,, | ೨೫ |
| ಅಲಸ ,, | ,, | ೨೬ |
| ಇಂದ್ರಲುಪ್ತ ,, | ೨೮೧ | ೨೭ |
| ದಾರುಣ ,, | ,, | ೨೯ |
| ಅರೂಂಷಿಕಾ ,, | ,, | ೩೦ |
| ಪಲಿತ ,, | ,, | ೩೧ |
| ಯುವಾನಪಿಡಕಾ ,, | ೨೮೨ | ೩೨ |
| ಪದ್ಮಿನೀ ಕಂಟಕ ,, | ,, | ೩೩ |

| ವಿಷಯ | | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|---|
| ಜತುಮಣಿ | ,, | ೨೮೨ | ೩೪ |
| ಮಷಕ | ,, | ,, | ೩೫ |
| ತಿಲಕಾಲಕ | ,, | ೨೮೩ | ೩೬ |
| ನ್ಯಚ್ಛ | ,, | ,, | ೩೭ |
| ವ್ಯಂಗ | ,, | ,, | ೩೮ |
| ನೀಲಿಕಾ | ,, | ,, | ೩೯ |
| ಪರಿವರ್ತಿಕಾ | ,, | ೨೮೪ | ೪೦ |
| ಅವಪಾಟಿಕಾ | ,, | ,, | ೪೩ |
| ನಿರುದ್ಧಪ್ರಕಾಶ | ,, | ,, | ೪೫ |
| ಸನ್ನಿರುದ್ಧಗುದ | ,, | ೨೮೫ | ೪೭ |
| ಅಹಿಪೂತನ | ,, | ,, | ೪೯ |
| ವೃಷಣಕಚ್ಛೂ | ,, | ೨೮೬ | ೫೧ |
| ಗುದಭ್ರಂಶ | ,, | ,, | ೫೩ |
| ವರಾಹದಂಷ್ಟ್ರ | ,, | ,, | ೫೪ |

## ಗಲಗಂಡನಿದಾನ

| ವಿಷಯ | | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|---|
| ಗಲಗಂಡದ ಸ್ವರೂಪ | | ೨೦೧ | ೧ |
| ಗಲಗಂಡದ ಸಂಪ್ರಾಪ್ತಿ | | ,, | ೨ |
| ವಾತಗಲಗಂಡ ಲಕ್ಷಣ | | ,, | ೩ |
| ಕಫಜ | ,, | ೨೦೨ | ೪ |
| ಮೇದೋಜ | ,, | ,, | ೬ |
| ಅಸಾಧ್ಯ | ,, | ೨೦೩ | ೭ |
| ಗಂಡಮಾಲಾ | ,, | , | ೮ |
| ಅಪಚೀ | ,, | ,, | ೯ |
| ಲಪಚಿಯ ಅಸಾಧ್ಯಲಕ್ಷಣ | | ೨೦೪ | ೧೦ |
| ಗ್ರಂಥಿನಿದಾನ | | ,, | ೧೧ |
| ವಾತಜಗ್ರಂಥಿ ಲಕ್ಷಣ | | ,, | ೧೨ |
| ಪಿತ್ತಜ | ,, | ೨೦೫ | ೧೩ |
| ಕಫಜ | ,, | ,, | ೧೪ |
| ಮೇದೋಜ | ,, | ೨೦೫ | ೧೫ |
| ಶಿರಾಜನ್ಯ | ,, | ೨೦೬ | ೧೬ |
| ಅರ್ಬುದನಿದಾನ | | ,, | ೧೮ |
| ಅರ್ಬುದಗಳ ಸಂಖ್ಯೆ | | ,, | ೧೯ |
| ರಕ್ತಾರ್ಬುದಲಕ್ಷಣ | | ೨೦೭ | ೨೦ |
| ಮಾಂಸಾರ್ಬುದ | | ,, | ೨೨ |
| ಸಾಧ್ಯಾಸಾಧ್ಯವಿಚಾರ | | ೨೦೮ | ೨೪ |
| ಅಧ್ಯರ್ಬುದಲಕ್ಷಣ | | ,, | ೨೫ |
| ದ್ವಿರರ್ಬುದ ಲಕ್ಷಣ | | ,, | ೨೫ |
| ಅರ್ಬುದವು ಪಕ್ವವಾಗದಿರಲು ಕಾರಣ | | ೨೦೯ | ೨೬ |

## ಗುಲ್ಮನಿದಾನ

| ವಿಷಯ | | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|---|
| ಗುಲ್ಮದ ಸಂಪ್ರಾಪ್ತಿ | | ೧೫೪ | ೧ |
| ಗುಲ್ಮದ ಸಾಮಾನ್ಯಲಕ್ಷಣ | | ,, | ೨ |
| ಗುಲ್ಮ ಪ್ರಕಾರಗಳು | | ,, | ೩ |
| ಗುಲ್ಮದ ಪೂರ್ವರೂಪ | | ೧೫೫ | ೪ |
| ಗುಲ್ಮದ ಸಾಮಾನ್ಯ ವಿಕಾರ | | ,, | ೫ |
| ವಾತಗುಲ್ಮದ ಕಾರಣ ಮತ್ತು ಲಕ್ಷಣ | | ,, | ೬ |
| ಪಿತ್ತ ಗುಲ್ಮದ ಕಾರಣಮತ್ತು ಲಕ್ಷಣ | | ೧೫೬ | ೯ |
| ಕಫಗುಲ್ಮದ ಕಾರಣ ಮತ್ತು ಲಕ್ಷಣ | | ,, | ೧೧ |
| ಸನ್ನಿಪಾತ ಗುಲ್ಮಕ್ಕೆ ಕಾರಣ | | ೧೫೭ | ೧೧ |
| ದ್ವಂದ್ವಜ ಗುಲ್ಮದ ಲಕ್ಷಣ | | ,, | ೧೩ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಸನ್ನಿಪಾತಜ ಗುಲ್ಮದ ಲಕ್ಷಣ | ೧೫೭ | ೧೪ |
| ರಕ್ತಗುಲ್ಮ ಲಕ್ಷಣ | ೧೫೮ | ೧೫ |
| ಅಸಾಧ್ಯ ಗುಲ್ಮ ಲಕ್ಷಣ | ೧೫೯ | ೧೭ |
| **ಗ್ರಹಣೀನಿದಾನ** | | |
| ಗ್ರಹಣಿಯ ಸಂಪ್ರಾಪ್ತಿ | ೩೫ | ೧ |
| ಗ್ರಹಣಿಯಸಾಮಾನ್ಯ ಲಕ್ಷಣ | ,, | ೨ |
| ಗ್ರಹಣಿಯ ಪೂರ್ವರೂಪ | ,, | ೪ |
| ವಾತಗ್ರಹಣೀ ಲಕ್ಷಣ | ೩೬ | ೫ |
| ಪಿತ್ತಗ್ರಹಣೀ ,, | ೩೭ | ೧೧ |
| ಕಫಗ್ರಹಣೀ ,, | ,, | ೧೩ |
| ತ್ರಿದೋಷಗ್ರಹಣೀ,, | ೩೮ | ೧೭ |
| ಆಮಸಂಗ್ರಹ ,, | ,, | ೧೮ |
| ಘಟೀಯಂತ್ರ ,, | ,, | ೨೦ |
| ಗ್ರಹಣಿಯಸಾಮ ನಿರಾಮ ಲಕ್ಷಣ | ೩೯ | ೨೨ |
| ಗ್ರಹಣಿಯ ಅಸಾಧ್ಯ ಲಕ್ಷಣ | ,, | ೨೩ |
| ಸಾಧ್ಯಾಸಾಧ್ಯ ವಿಚಾರ | ,, | ೨೪ |
| **ಛರ್ದಿನಿದಾನ** | | |
| ವಾಂತಿಯ ಪ್ರಕಾರಗಳು | ೮೭ | ೧ |
| ವಾಂತಿಯ ಕಾರಣಮತ್ತು ಸಂಪ್ರಾಪ್ತಿ | ,, | ೨ |
| ವಾಂತಿಯ ಪೂರ್ವರೂಪ | ೮೮ | ೫ |
| ವಾತಜ ವಾಂತಿಯಲಕ್ಷಣ | ,, | ೬ |
| ಪಿತ್ತಜ ,, ,, | ,, | ೭ |
| ಕಫಜ ,, ,, | ೮೯ | ೮ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ತ್ರಿದೋಷಜ ವಾಂತಿಯ ಲಕ್ಷಣ | ೮೯ | ೯ |
| ವಾಂತಿಯ ಅಸಾಧ್ಯ ,, | ,, | ೧೦ |
| ಆಗಂತುಕ ವಾಂತಿಯ ,, | ೯೦ | ೧೨ |
| ಕ್ರಿಮಿಜ ,, ,, | ,, | ೧೩ |
| ಸಾಧ್ಯಾಸಾಧ್ಯ ವಿಚಾರ | ,, | ೧೪ |
| **ಜ್ವರನಿದಾನ** | | |
| ಜ್ವರೋತ್ಪತ್ತಿ | ೧೨ | ೧ |
| ಜ್ವರದ ಸಂಪ್ರಾಪ್ತಿ | ,, | ೨ |
| ಜ್ವರದ ಲಕ್ಷಣ | ೧೩ | ೩ |
| ಜ್ವರದ ಪೂರ್ವರೂಪ | ,, | ೪ |
| ವಾತಜ ಲಕ್ಷಣ | ೧೪ | ೮ |
| ಪಿತ್ತ ಜ್ವರ ,, | ,, | ೧೦ |
| ಕಫ ಜ್ವರ ,, | ,, | ೧೨ |
| ವಾತಪಿತ್ತಜ್ವರ ಲಕ್ಷಣ | ೧೫ | ೧೪ |
| ವಾತ ಕಫಜ್ವರ ,, | ,, | ೧೫ |
| ಕಫಪಿತ್ತ ಜ್ವರ ,, | ,, | ೧೭ |
| ಸನ್ನಿಪಾತ ಜ್ವರ ,, | ೧೬ | ೧೮ |
| ಸನ್ನಿಪಾತದ ಸಾಧ್ಯಾಸಾಧ್ಯತ್ವ | ೧೭ | ೨೪ |
| ಸನ್ನಿಪಾತಜ್ವರವು ಕಡಿಮೆಯಾಗುವಕಾಲ | ,, | ೨೫ |
| ಕರ್ಣಮೂಲ ಶೋಥ ಲಕ್ಷಣ | ೧೮ | ೨೭ |
| ಅಭಿನ್ಯಾಸ ಜ್ವರ ,, | ,, | ೨೮ |
| ಆಗಂತು ಜ್ವರ ,, | ,, | ೩೩ |
| ವಿಷಜ ಜ್ವರ ,, | ೧೯ | ೩೪ |
| ಔಷಧಿಗಂಧಜ ಜ್ವರ ,, | ,, | ೩೫ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕಾಮಜ ಜ್ವರಲಕ್ಷಣ | ೧೮ | ೩೫ |
| ಭಯಾದಿ ಜ್ವರ ,, | ,, | ೩೬ |
| ಅಭಿಚಾರಾದಿಜಜ್ವರ | ೧೯ | ೩೬ |
| ಭೂತಜ್ವರಲಕ್ಷಣ | ,, | ೩೭ |
| ಆಗಂತುಕಜ್ವರಗಳಲ್ಲಿ ದೋಷಸಂಬಧವಿಚಾರ | ,, | ೩೮ |
| ವಿಷಮಜ್ವರಸಂಪ್ರಾಪ್ತಿ | ೨೦ | ೩೯ |
| ಸಂತತಾದಿಗಳ ಆಶ್ರಯಸ್ಥಾನ | ೨೧ | ೪೦ |
| ಅನ್ಯೇದ್ಯುಷ್ಕಲಕ್ಷಣ | ,, | ೪೩ |
| ತೃತೀಯಕಲಕ್ಷಣ | ,, | ೪೩ |
| ಚತುರ್ಥಕಲಕ್ಷಣ | ,, | ೪೩ |
| ತೃತೀಯಕಜ್ವರದ ವೇದನಾವಿಶೇಷ | ,, | ೪೪ |
| ಚತುರ್ಥಕಜ್ವರದ ವೇದನಾವಿಶೇಷ | ,, | ೪೫ |
| ವಿಷಮಜ್ವರದಲಕ್ಷಣ | ೨೨ | ೪೬ |
| ವಾತಬಲಾಸಕೀಜ್ವರಲಕ್ಷಣ | ,, | ೪೭ |
| ಪ್ರಲೇಪಕಲಕ್ಷಣ | ,, | ೪೮ |
| ವಿಷಮಜ್ವರದವಿಕಾರಗಳು | ,, | ೪೯ |
| ಶೀತಪೂರ್ವಕಜ್ವರ | ೨೩ | ೫೨ |
| ದಾಹಪೂರ್ವಕಜ್ವರ | ,, | ೫೩ |
| ಇವೆರಡರಸಾಧ್ಯಾಸಾಧ್ಯತ್ವ | ,, | ೫೪ |
| ರಸಗತಜ್ವರಲಕ್ಷಣ | ,, | ೫೫ |
| ರಕ್ತ ,, ,, | ,, | ೫೬ |
| ಮಾಂಸ ,, ,, | ,, | ೫೭ |
| ಮೇದೋ ,, ,, | ,, | ೫೮ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಸ್ಥಿ ಜ್ವರಲಕ್ಷಣ | ೨೩ | ೫೯ |
| ಮಜ್ಜಾ ,, | ೨೪ | ೬೦ |
| ಶುಕ್ರ ,, | ,, | ೬೧ |
| ಧಾತುಗತಜ್ವರದ ಸಾಧ್ಯಾಸಾಧ್ಯತ್ವ | ,, | ೬೨ |
| ಪ್ರಾಕೃತವೈಕೃತ ಜ್ವರಗಳು | ೨೫ | ೬೩ |
| ಪ್ರಾಕೃತಜ್ವರಗಳ ಉತ್ಪತ್ತಿಕ್ರಮ | ,, | ೬೪ |
| ಅಂತರ್ವೇಗಜ್ವರಲಕ್ಷಣ | ೨೬ | ೬೭ |
| ಬಹಿರ್ವೇಗಜ್ವರಲಕ್ಷಣ | ,, | ೬೯ |
| ಆಮಜ್ವರಲಕ್ಷಣ | ,, | ೭೦ |
| ಪಚ್ಯಮಾನ ,, | ,, | ೭೨ |
| ನಿರಾಮಜ್ವರ ,, | ,, | ೭೩ |
| ಸಾಧ್ಯಜ್ವರ ,, | ೨೭ | ೭೪ |
| ಅಸಾಧ್ಯಜ್ವರ ಲಕ್ಷಣ | ,, | ೭೫ |
| ಗಂಭೀರಜ್ವರ ,, | ,, | ೭೭ |
| ಜ್ವರದ ಅಸಾಧ್ಯ ,, | ೨೮ | ೭೮ |
| ಜ್ವರವು ಬಿಟ್ಟ ,, | ೨೯ | ೮೩ |


## ತೃಷ್ಣಾರೋಗನಿದಾನ


| | | |
|---|---|---|
| ತೃಷ್ಣಾ ಸಂಪ್ರಾಪ್ತಿ | ೯೧ | ೧ |
| ವಾತಜ ತೃಷ್ಣಾ ಲಕ್ಷಣ | ೯೨ | ೩ |
| ಪಿತ್ತಜ ,, | ,, | ೪ |
| ಕಫಜ ,, | ,, | ೫ |
| ಕ್ಷತಜ ,, | ೯೩ | ೬ |
| ಕ್ಷಯಜ ,, | ,, | ೭ |
| ಆಮಜ ,, | ,, | ೮ |
| ಅನ್ನಜ ,, | ,, | ೮ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಉಪಸರ್ಗಜ ತೃಷ್ಣಾಲಕ್ಷಣ | ೯೩ | ೯ |
| ಸಾಧ್ಯಾಸಾಧ್ಯವಿಚಾರ | ೯೪ | ೧೦ |

## ದಾಹನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮದಜದಾಹ ಲಕ್ಷಣ | ೧೦೫ | ೧ |
| ರಕ್ತಜ ,, ,, | ೧೦೬ | ೨ |
| ಪಿತ್ತಜ ,, ,, | ,, | ೩ |
| ತೃಷ್ಣಾನಿರೋಧಜ ಲಕ್ಷಣ | ,, | ೪ |
| ರಕ್ತಪೂರ್ಣಕೋಷ್ಠಜ ,, | ,, | ೫ |
| ಧಾತುಕ್ಷಯಜ ,, ,, | ೧೦೭ | ೬ |
| ಮರ್ಮಾಭಿಘಾತಜ ಲಕ್ಷಣ | ,, | ೭ |
| ದಾಹದ ಅಸಾಧ್ಯ ಲಕ್ಷಣ | ೧೦೭ | ೭ |

## ನಾಡೀವ್ರಣನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ನಾಡೀವ್ರಣಕ್ಕೆಕಾರಣ | ೨೩೪ | ೧ |
| ನಾಡೀವ್ರಣದಪ್ರಕಾರಗಳು | ,, | ೨ |
| ವಾತಜನಾಡೀಲಕ್ಷಣ | ೨೩೫ | ೩ |
| ಪಿತ್ತಜನಾಡೀ ,, | ,, | ೩ |
| ಕಫಜ ,, ,, | ,, | ೪ |
| ಸನ್ನಿಪಾತಜನಾಡೀಲಕ್ಷಣ | ,, | ೪ |
| ಶಲ್ಯಜನಾಡೀ ,, | ೨೩೬ | ೫ |
| ಅಸಾಧ್ಯಲಕ್ಷಣ | ,, | ೬ |

## ನಾಸಾರೋಗನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪೀನಸಲಕ್ಷಣ | ೨೦೮ | ೧ |
| ಪೂತಿನಸ್ಯಲಕ್ಷಣ | ,, | ೨ |
| ನಾಸಾಪಾಕ ,, | ,, | ೩ |
| ಪೂಯರಕ್ತ ,, | ೨೦೯ | ೪ |
| ದೋಷಜಕ್ಷವಥು ಲಕ್ಷಣ | ,, | ೫ |
| ಆಗಂತುಜಕ್ಷವಥುಲಕ್ಷಣ | ೨೦೯ | ೬ |
| ಭ್ರಂಶಥುಲಕ್ಷಣ | ,, | ೭ |
| ದೀಪ್ತಲಕ್ಷಣ | ೨೧೦ | ೮ |
| ಪ್ರತಿನಾಹಲಕ್ಷಣ | ,, | ೯ |
| ನಾಸಾಸ್ರಾವಲಕ್ಷಣ | ,, | ೯ |
| ನಾಸಾಶೋಷ ,, | ,, | ೧೦ |
| ಆಮಪೀನಸ ,, | ,, | ೧೧ |
| ಪಕ್ವಪೀನಸ ,, | ,, | ೧೨ |
| ಆಗಂತುಪ್ರತಿಶ್ಯಾಯ ನಿದಾನ | ೨೧೧ | ೧೩ |
| ದೋಷಜಪ್ರತಿಶ್ಯಾಯ ನಿದಾನ | ,, | ೧೪ |
| ಪ್ರತಿಶ್ಯಾಯದಪೂರ್ವರೂಪ ,, | | ೧೬ |
| ವಾತಪ್ರತಿಶ್ಯಾಯ ಲಕ್ಷಣ | ೨೧೨ | ೧೭ |
| ಪಿತ್ತ ,, ,, | ,, | ೧೯ |
| ಕಫ ,, ,, | ,, | ೨೦ |
| ಸನ್ನಿಪಾತಪ್ರತಿಶ್ಯಾಯ ಲಕ್ಷಣ | ೨೧೩ | ೨೨ |
| ದುಷ್ಟಪ್ರತಿಶ್ಯಾಯ ,, | ,, | ೨೩ |
| ರಕ್ತಜಪ್ರತಿಶ್ಯಾಯಲಕ್ಷಣ | ,, | ೨೫ |
| ಪ್ರತಿಶ್ಯಾಯದಲ್ಲಿನಕ್ರಿಮಿ | ,, | ೨೬ |
| ಉಪೇಕ್ಷೆಮಾಡಿದಲ್ಲಿ ಪರಿಣಾಮ | ೨೧೪ | ೨೮ |

## ನೇತ್ರರೋಗನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ನೇತ್ರರೋಗದಕಾರಣ | ೨೧೪ | ೧ |
| ಅಭಿಷ್ಯಂದದಸಂಖ್ಯೆ | ೨೧೫ | ೪ |
| ವಾತ ಭಿಷ್ಯಂದಲಕ್ಷಣ | ,, | ೫ |
| ಪಿತ್ತಾ ,, ,, | ೨೧೬ | ೬ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕಫಾಭಿಷ್ಯಂದದಲಕ್ಷಣ | ೩೧೬ | ೬ |
| ಅಧಿಮಂಥದಸಾಮಾನ್ಯ ಲಕ್ಷಣ | ೩೧೭ | ೧೦ |
| ಅಧಿಮಂಥರೋಗದಕಾಲ ಮರ್ಯಾದೆ | ,, | ೧೧ |
| ಸಾಮನೇತ್ರರೋಗಲಕ್ಷಣ | ,, | ೧೨ |
| ನಿರಾಮನೇತ್ರರೋಗ ,, | ೩೧೮ | ೧೩ |
| ಸಶೋಥನೇತ್ರಪಾಕ ,, | ,, | ೧೪ |
| ಅಶೋಥನೇತ್ರಪಾಕಲಕ್ಷಣ | ,, | ೧೪ |
| ಹತಾಧಿಮಂಥ ,, | ,, | ೧೫ |
| ವಾತಪರ್ಯಯ ,, | ,, | ೧೬ |
| ಶುಷ್ಕಾಕ್ಷಿಪಾಕ ,, | ,, | ೧೭ |
| ಅನ್ಯತೋವಾತ ,, | ೩೧೯ | ೧೮ |
| ಅಮ್ಲಾಧ್ಯುಷಿತ ,, | ,, | ೧೯ |
| ಶಿರೋತ್ಪಾತ ,, | ,, | ೨೦ |
| ಶಿರಾಪ್ರಹರ್ಷ ,, | ,, | ೨೧ |

## ಕೃಷ್ಣಗತರೋಗ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಸವ್ರಣಶುಕ್ರಲಕ್ಷಣ | ೩೨೦ | ೨೨ |
| ಸಾಧ್ಯಾಸಾಧ್ಯವಿಚಾರ | ,, | ೨೩ |
| ಅವ್ರಣಶುಕ್ಲಲಕ್ಷಣ | ,, | ೨೪ |
| ಕಷ್ಟಸಾಧ್ಯಅವ್ರಣಶುಕ್ರ | ೩೨೧ | ೨೫ |
| ಅಸಾಧ್ಯಶುಕ್ರ | ,, | ೨೫ |
| ಅಕ್ಷಿಪಾಕಾತ್ಯಯಲಕ್ಷಣ | ,, | ೨೭ |
| ಅಜಕಾಜಾತ | ೩೨೨ | ೨೮ |

## ದೃಷ್ಟಿಗತರೋಗ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪ್ರಥಮಪಟಲಗತದೋಷ ಲಕ್ಷಣ | ,, | ೨೭ |
| ದ್ವಿತೀಯ ಪಟಲಗತ ದೋಷ ಲಕ್ಷಣ | ೩೨೨ | ೩೦ |
| ತೃತೀಯ ,, ,, | ೩೨೩ | ೩೩ |
| ದೋಷಸ್ಥಿತಿಗೆ ಅನುರೂಪವಾಗಿಪದಾರ್ಥದಲಕ್ಷಣ | ,, | ೩೫ |
| ಚತುರ್ಥಪಟಲಗತದೋಷ ಲಕ್ಷಣ | ೩೨೪ | ೩೯ |
| ಲಿಂಗನಾಶಕ್ಕೆ ಬೇರೆ ಹೆಸರುಗಳು | ,, | ೪೧ |
| ಇದು ವಾತಪ್ರಾಧಾನ್ಯವಾದಲ್ಲಿ ರೂಪದರ್ಶನ | ,, | ೪೨ |
| ಪಿತ್ತ ಪ್ರಾಧಾನ್ಯವಾದಲ್ಲಿ ರೂಪದರ್ಶನ | ,, | ೪೩ |
| ಕಫ ಪ್ರಾಧಾನ್ಯವಾದಲ್ಲಿ ರೂಪದರ್ಶನ | ,, | ೪೪ |
| ತ್ರಿದೋಷಪ್ರಾಧಾನ್ಯವಾದಲ್ಲಿ ರೂಪದರ್ಶನ | ,, | ೪೫ |
| ಪರಿಮ್ಲಾಯೀತಿಮಿರ ಲಕ್ಷಣ | ೩೨೫ | ೪೮ |
| ಲಿಂಗನಾಶನ ಸ್ವರೂಪ | ೩೨೬ | ೪೯ |
| ಪರಿಮ್ಲಾಯೀತಿಮಿರ ಸ್ವರೂಪ | ,, | ೫೦ |
| ವಾತಾದಿ ಭೇದದಿಂದ ದೃಷ್ಟಿ ಮಂಡಲದಲ್ಲಿ ಕಾಣುವ ಸ್ವರೂಪ | ೩೨೭ | ೫೧ |
| ಪಿತ್ತವಿದಗ್ಧದೃಷ್ಟಿಲಕ್ಷಣ | ೩೨೮ | ೫೬ |
| ಕಫ ,, | ,, | ೫೮ |
| ಧೂಮದೃಷ್ಟಿ | ,, | ೫೯ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಹ್ರಸ್ವಜಾಡ್ಯ ಲಕ್ಷಣ | ೩೨೯ | ೬೦ |
| ಸಕುಲಾಂಧ್ಯ ,, | ,, | ೬೧ |
| ಗಂಭೀರದೃಷ್ಟಿ ,, | ,, | ೬೨ |
| ಆಗಂತುಕನೇತ್ರ ವಿಕಾರಗಳು | ೩೩೦ | ೬೩ |

## ಶುಕ್ಲಗತನೇತ್ರರೋಗ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪ್ರಸ್ತಾರ್ಯರ್ಮಲಕ್ಷಣ | ೩೩೦ | ೬೫ |
| ಶುಕ್ಲಾರ್ಮ ,, | ೩೩೧ | ೬೬ |
| ರಕ್ತಾರ್ಮ ,, | ,, | ೬೬ |
| ಅಧಿಮಾಂಸಾರ್ಮ ,, | ,, | ೬೭ |
| ಸ್ನಾಯ್ವರ್ಮ ,, | ,, | ೬೭ |
| ಶುಕ್ತ್ಯರ್ಮ ,, | ,, | ೬೮ |
| ಅರ್ಜುನಾರ್ಮ ,, | ,, | ೬೮ |
| ಪಿಷ್ಟಕಾರ್ಮ ,, | , | ೬೯ |
| ಶಿರಜಪಿಡಕಾ ,, | ೩೩೨ | ೭೦ |
| ಬಲಾಸಗ್ರಂಥಿಕ ,, | ,, | ೭೧ |

## ಸಂಧಿಗತರೋಗ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪೂಯಾಲಸಲಕ್ಷಣ | ೩೩೩ | ೭೧ |
| ಶ್ಲೇಷ್ಮೋಪನಾಹ ಲಕ್ಷಣ | ,, | ೭೨ |
| ನೇತ್ರನಾಡೀ ,, | ,, | ೭೩ |
| ಪೂಯಸ್ರಾವ ,, | ,, | ೭೩ |
| ಕಫಸ್ರಾವ ,, | ,, | ೭೩ |
| ರಕ್ತಸ್ರಾವ ,, | ,, | ೭೪ |
| ಪಿತ್ತಸ್ರಾವ ,, | ೩೩೪ | ೭೫ |
| ಪರ್ವಣೀ ,, | ,, | ೭೫ |
| ಅಲಜೀ ,, | ,, | ೭೬ |
| ಕ್ರಿಮಿಸಂಧಿ ,, | ,, | ೭೬ |

## ವರ್ತ್ಮಗತರೋಗ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಉತ್ಸಂಗಪಿಡಕಾಲಕ್ಷಣ | ೩೩೪ | ೭೭ |
| ಕುಂಭೀಕಾ ,, | ೩೩೫ | ೭೮ |
| ಪೋಥಕೀ ,, | ,, | ೭೯ |
| ವರ್ತ್ಮಶರ್ಕರಾ ,, | ,, | ೮೦ |
| ಅರ್ಶೋವರ್ತ್ಮ ,, | ,, | ೮೧ |
| ಶುಷ್ಕಾರ್ಶ ,, | ೩೩೬ | ೮೨ |
| ಅಂಜನಾನಾಮಿಕಾ ,, | ,, | ೮೩ |
| ಬಹುಲವರ್ತ್ಮ ,, | ,, | ೮೪ |
| ವರ್ತ್ಮಬಂಧಕ ,, | ,, | ೮೫ |
| ಕ್ಲಿಷ್ಟವರ್ತ್ಮ ,, | ,, | ೮೬ |
| ವರ್ತ್ಮಕರ್ದಮ ,, | ೩೩೭ | ೮೭ |
| ಶ್ಯಾವವರ್ತ್ಮ ,, | ,, | ೮೮ |
| ಪ್ರಕ್ಲಿನ್ನವರ್ತ್ಮ ,, | ,, | ೮೯ |
| ಅಕ್ಲಿನ್ನವರ್ತ್ಮ ,, | ,, | ೯೦ |
| ವಾತಹತವರ್ತ್ಮ ,, | ೩೩೮ | ೯೧ |
| ಅರ್ಬುದ ,, | ,, | ೯೨ |
| ನಿಮೇಷ ,, | ,, | ೯೩ |
| ಶೋಣಿತಾರ್ಶ ,, | ,, | ೯೪ |
| ನಗಣ ,, | ,, | ೯೫ |
| ಬಿಸವರ್ತ್ಮ ,, | ೩೩೯ | ೯೬ |
| ಕುಂಚನ ,, | ,, | ೯೭ |
| ಪಕ್ಷ್ಮಕೋಪ ,, | ,, | ೯೮ |
| ಪಕ್ಷ್ಮಶಾತ ,, | ೩೪೦ | ೧೦೦ |
| ನೇತ್ರರೋಗ ಸಂಖ್ಯೆ | ,, | ೧೦೧ |

## ಪಾಂಡುರೋಗನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪಾಂಡುರೋಗಪ್ರಕಾರ | ೫೬ | ೧ |
| ಪಾಂಡುರೋಗಸಂಪ್ರಾಪ್ತಿ | ,, | ೨ |
| ಪಾಂಡುರೋಗದಪೂರ್ವರೂಪ | ೫೭ | ೩ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಾತಜಪಾಂಡುರೋಗಲಕ್ಷಣ | ೫೭ | ೪ |
| ಪಿತ್ತಜ ,, ,, ,, | ,, | ೫ |
| ಕಫಜ ,, ,, ,, | ,, | ೫ |
| ಸಾನ್ನಿಪಾತಿಕಪಾಂಡುರೋಗ ಲಕ್ಷಣ | ೫೮ | ೭ |
| ಮೃತ್ತಿಕಾಜಪಾಂಡುರೋಗ ಲಕ್ಷಣ | ,, | ೮ |
| ಇದರ ವಿಶೇಷಲಕ್ಷಣ | ,, | ೧೧ |
| ಪಾಂಡುರೋಗದಅಸಾಧ್ಯ ಲಕ್ಷಣ | ೫೯ | ೧೨ |
| ಕಾಮಿಲೆಯಲಕ್ಷಣ | ,, | ೧೬ |
| ಕುಂಭಕಾಮಿಲಾಲಕ್ಷಣ | ,, | ೧೮ |
| ಕಾಮಿಲೆಯಅಸಾಧ್ಯ ಲಕ್ಷಣ | ೬೦ | ೧೯ |
| ಕುಂಭಕಾಮಿಲೆಯಅಸಾಧ್ಯ ಲಕ್ಷಣ | ,, | ೨೧ |
| ಹಲೀಮಕದಅಸಾಧ್ಯ ,, | ,, | ೨೨ |

## ಪಾನಾತ್ಯಯಾದಿನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮದಾತ್ಯಯದಕಾರಣ | ೯೯ | ೧ |
| ಮದ್ಯದಯೋಗ್ಯತೆ | ೧೦೦ | ೨ |
| ವಿಧಿಯುಕ್ತಮದ್ಯ ಸೇವನೆಯಫಲ | ,, | ೪ |
| ಪ್ರಥಮವರ್ಗದಲಕ್ಷಣ | ೧೦೧ | ೭ |
| ದ್ವಿತೀಯವರ್ಗದ ,, | ,, | ೮ |
| ತೃತೀಯ ,, ,, | ,, | ೯ |
| ಚತುರ್ಥ ,, ,, | ೧೦೨ | ೧೦ |
| ವಿಧಿವಿಹೀನತೆಯಿಂದಉಪಯೋಗಿಸುವಮದ್ಯಪಾನದ ಪರಿಣಾಮ | ೧೦೨ | ೧೨ |
| ಮದ್ಯಪಾನವನ್ನುಯಾವಾಗ ಮಾಡಕೂಡದು | ,, | ೧೩ |
| ವಾತಪ್ರಾಯಮದಾತ್ಯಯ ಲಕ್ಷಣ | ೧೦೩ | ೧೬ |
| ಪಿತ್ತ ,, ,, | ,, | ೧೭ |
| ಕಫ ,, ,, | ,, | ೧೮ |
| ತ್ರಿದೋಷಜ ,, ,, | ,, | ೧೮ |
| ಪರಮದ ಲಕ್ಷಣ | ೧೦೪ | ೧೯ |
| ಪಾನಾಜೀರ್ಣ ಲಕ್ಷಣ | ,, | ೨೦ |
| ಪಾನವಿಭ್ರಮ ,, | ,, | ೨೦ |
| ಮದಾತ್ಯಯದ ಅಸಾಧ್ಯ ಲಕ್ಷಣ | ,, | ೨೧ |
| ಮದಾತ್ಯಯದ ಉಪದ್ರವಗಳು | ೧೦೫ | ೨೨ |

## ಪ್ರಮೇಹಪಿಡಕಾ ನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪ್ರಮೇಹದ ಕಾರಣ | ೧೭೩ | ೧ |
| ಪ್ರಮೇಹದ ಸಂಪ್ರಾಪ್ತಿ | ,, | ೨ |
| ಸಾಧ್ಯಾಸಾಧ್ಯವಿಚಾರ | ೧೭೪ | ೩ |
| ಇಲ್ಲಿನ ದೋಷ ದೂಷ್ಯಗಳು | ೧೭೫ | ೪ |
| ಪ್ರಮೇಹ ಪೂರ್ವರೂಪ | ,, | ೫ |
| ಪ್ರಮೇಹದ ಸಾಮಾನ್ಯ ಲಕ್ಷಣ | ,, | ೬ |
| ಪ್ರಮೇಹದ ಬೇಧಗಳಿಗೆ ಕಾರಣ | ೧೭೬ | ೭ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕಫಜನ್ಯಮೇಹದ ಲಕ್ಷಣ | ೧೭೬ | ೮ |
| ಪಿತ್ತಜನ್ಯ ,, | ೧೭೭ | ೧೪ |
| ವಾತಜನ್ಯ ,, | ೧೭೮ | ೧೬ |
| ಕಫಜನ್ಯ ಮೇಹದ ಉಪದ್ರವಗಳು | ೧೭೯ | ೧೯ |
| ಪಿತ್ತಜನ್ಯ ಮೇಹದ ಉಪದ್ರವಗಳು | ,, | ೨೦ |
| ವಾತಜನ್ಯಮೇಹದ ಉಪದ್ರವಗಳು | ,, | ೨೧ |
| ಪ್ರಮೇಹದ ಅಸಾಧ್ಯಲಕ್ಷಣ | ,, | ೨೧ |
| ಮಧುಮೇಹದ ಲಕ್ಷಣ | ೧೮೦ | ೨೪ |
| ಪ್ರಮೇಹಪಿಡಕಾ ನಿದಾನ | ೧೮೧ | ೨೮ |
| ಎಲ್ಲಾ ಪಿಡಕೆಗಳ ಲಕ್ಷಣ | ೧೮೨ | ೩೦ |
| ಪಿಡಕೆಯ ಉತ್ಪತ್ತಿಕಾರಣ ಮತ್ತು ಲಕ್ಷಣ | ,, | ೩೬ |
| ಪಿಡಕೆಯ ಅಸಾಧ್ಯ ಲಕ್ಷಣ | ,, | ೩೭ |


## ಬಾಲರೋಗನಿದಾನ.


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಾತದೂಷಿತಸ್ತನ್ಯ | ೩೫೮ | ೧ |
| ಪಿತ್ತ ,, | ,, | ೨ |
| ಕಫ ,, | ,, | ೩ |
| ದ್ವಿತ್ರಿದೋಷ ,, | ,, | ೩ |
| ಬಾಲಕರ ಅಂತರ್ಗತ ರೋಗವನ್ನು ತಿಳಿಯುವ ಉಪಾಯ | ೩೫೯ | ೪ |
| ಕಕೂಣಿಕರೋಗದ ಲಕ್ಷಣ | ,, | ೮ |
| ಪಾರಿಗರ್ಭಿಕಲಕ್ಷಣ | ೩೬೦ | ೧೦ |
| ತಾಲುಕಂಟಕ ,, | ,, | ೧೨ |
| ಮಹಾಪದ್ಮವಿಸರ್ಪ ಲಕ್ಷಣ | ,, | ೧೪ |
| ಸ್ಕಂದಾದಿಗ್ರಹಚೇಷ್ಟೆಯ ಸಾಮಾನ್ಯ ಲಕ್ಷಣ | ೩೬೧ | ೧೭ |
| ಸ್ಕಂದಗ್ರಹದಲಕ್ಷಣ | ೩೬೨ | ೨೦ |
| ಸ್ಕಂದಾಪಸ್ಮಾರ ಲಕ್ಷಣ | ,, | ೨೨ |
| ಶಕುನಿಗ್ರಹಬಾಧಾಲಕ್ಷಣ | ,, | ೨೩ |
| ರೇವತೀ ,, ,, | ೩೬೩ | ೨೪ |
| ಪೂತನಾ ,, ,, | ,, | ೨೫ |
| ಅಂಧಪೂತನಾ ,, | ,, | ೨೬ |
| ಶೀತಪೂತನಾ ,, | ,, | ೨೭ |
| ಮುಖಮುಂಡತಿಕಾ ,, | ,, | ೨೮ |
| ನೈಗಮೇಯ ,, | ,, | ೨೯ |


## ಭಗಂದರನಿದಾನ.


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಭಗಂದರದ ಸ್ವರೂಪ | ೨೩೬ | ೧ |
| ಶತಪೋನಕ ಲಕ್ಷಣ | ೨೩೭ | ೨ |
| ಉಷ್ಟ್ರಶಿರೋಧರ ಲಕ್ಷಣ | ,, | ೩ |
| ಪರಿಸ್ರಾವಿ ,, | ,, | ೫ |
| ಶಂಬೂಕಾವರ್ತ ,, | ೨೩೮ | ೬ |
| ಉನ್ಮಾರ್ಗಿ ,, | ,, | ೭ |
| ಸಾಧ್ಯಾಸಾಧ್ಯವಿಚಾರ ,, | ,, | ೮ |
| ಭಗಂದರದ ಅಸಾಧ್ಯ ,, | ೨೩೯ | ೯ |


## ಭಗ್ನನಿದಾನ


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಭಗ್ನಪ್ರಕಾರಗಳು | ೨೩೦ | ೧ |
| ಸಂಧಿಭಂಗದ ಸಾಮಾನ್ಯ ಲಕ್ಷಣ | ೨೩೦ | ೨ |
| ಉತ್ಪಿಷ್ಟ ಭಂಗದ ಸಾಮಾನ್ಯ ಲಕ್ಷಣ | ,, | ೨ |
| ವಿಶ್ಲಿಷ್ಟಭಂಗದ ಸಾಮಾನ್ಯ ಲಕ್ಷಣ | ,, | ೩ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಿವರ್ತಿತ ಭಂಗದ ಸಾಮಾನ್ಯ ಲಕ್ಷಣ | ೨೩೦ | ೩ |
| ತಿರ್ಯಕ್‌ಸಂಧಿಭಂಗ ಲಕ್ಷಣ | ,, | ೩ |
| ಊರ್ಧ್ವಕ್ಷಿಪ್ತದ ,, | ೨೩೧ | ೪ |
| ಅಧಃಕ್ಷಿಪ್ತದ ,, | ,, | ೪ |
| ಕಾಂಡಭಂಗ ,, | ,, | ೪ |
| ಕಾಂಡಭಂಗದ ಅಸಾಧ್ಯಲಕ್ಷಣ | ೨೩೨ | ೫ |
| ಕಾಂಡಭಂಗದ ಅಧಿಕ ಪ್ರಕಾರಗಳು | ,, | ೭ |
| ಭಗ್ನದ ಕಷ್ಟಸಾಧ್ಯತ್ವ | ೨೩೩ | ೮ |
| ಭಗ್ನದ ಅಸಾಧ್ಯಲಕ್ಷಣ | ,, | ೯ |
| ಅಲಕ್ಷ್ಯಮಾಡಿದರೆ ಪರಿಣಾಮ | ೨೩೪ | ೧೧ |
| ಎಲಬುಗಳ ಪ್ರಭೇದಗಳು | ,, | ೧೨ |
| **ಮಂಗಳಾಚರಣ ಮತ್ತು ಪಂಚನಿದಾನ ಲಕ್ಷಣ** | | |
| ಮಂಗಳಾಚರಣೆ | ೧ | ೧ |
| ನಿದಾನ ಪಂಚಕ | ೨ | ೪ |
| ನಿದಾನ | ೪ | ೫ |
| ಪೂರ್ವರೂಪ | ,, | ೫ |
| ವಿಶಿಷ್ಟಪ್ರಾಗ್ರೂಪ | ,, | ೬ |
| ರೂಪ | ,, | ೭ |
| ಉಪಶಯ | ೫ | ೮ |
| ಸಂಪ್ರಾಪ್ತಿ | ೯ | ೧೦ |
| ಇದರ ಪ್ರಕಾರಗಳು | ,, | ೧೧ |
| ಸಂಖ್ಯಾಸಂಪ್ರಾಪ್ತಿ | ೯ | ೧೦ |
| ವಿಕಲ್ಪ ಸಂಪ್ರಾಪ್ತಿ | ೧೦ | ೧೨ |
| ಬಲಸಂಪ್ರಾಪ್ತಿ | , | ೧೩ |
| ಕಾಲ ಸಂಪ್ರಾಪ್ತಿ | ,, | ೧೩ |
| ನಿದಾನಪಂಚಕದ ಉಪಸಂಹಾರ | ೧೧ | ೧೪ |
| ರೋಗೋತ್ಪತ್ತಿಕಾರಣ | ,, | ೧೪ |
| ರೋಗವು ರೋಗಾಂತರವನ್ನು ಹುಟ್ಟಿಸುವುದು | ,, | ೧೫ |
| ರೋಗವು ರೋಗಾಂತರವನ್ನು ಯಾವಾಗ ಹುಟ್ಟಿಸುತ್ತದೆ? | ,, | ೧೯ |
| **ಮಸೂರಿಕಾನಿದಾನ** | | |
| ಮಸೂರಿಕೆಯ ಕಾರಣ ಮತ್ತು ಸಂಪ್ರಾಪ್ತಿ | ೨೬೯ | ೧ |
| ಇದರ ಪೂರ್ವರೂಪ | ,, | ೨ |
| ವಾತಜ ಮಸೂರಿಕಾ ಲಕ್ಷಣ | ೨೭೦ | ೪ |
| ಪಿತ್ತಜ ,, ,, | ,, | ೭ |
| ರಕ್ತಜ ,, ,, | ,, | ೮ |
| ಕಫಜ ,, ,, | ,, | ೯ |
| ತ್ರಿದೋಷಜ,, ,, | ೨೭೧ | ೧೧ |
| ಚರ್ಮಪಿಡಕಾ ,, | ,, | ೧೨ |
| ರೋಮಾಂತಿಕಾ ,, | ,, | ೧೩ |
| ರಸಾದಿಧಾತುಗತ ಮಸೂರಿಕಾ ,, | ,, | ೧೪ |
| ಸುಖಸಾಧ್ಯ ಮಸೂರಿಕಾ ,, | ,, | ೨೩ |
| ಕಷ್ಟಸಾಧ್ಯ ಮಸೂರಿಕಾ ,, | ೨೭೩ | ೨೪ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಸಾಧ್ಯಮಸೂರಿಕಾ ಲಕ್ಷಣ | ೨೭೩ | ೨೫ |
| ಮಸೂರಿಕೆಯ ಅವಸ್ಥಾ ವಿಶೇಷಗಳ ಲಕ್ಷಣ | ೨೭೪ | ೨೭ |
| ಮಸೂರಿಕೆಯ ಸಾಮಾನ್ಯ ಅಸಾಧ್ಯತ್ವ | ,, | ೩೦ |
| ಮಸೂರಿಕೆಯ ಉಪದ್ರವಗಳು | ,, | ೩೧ |
| **ಮುಖರೋಗನಿದಾನ** | | |
| ಮುಖರೋಗಕಾರಣ | ೨೮೬ | ೧ |
| ವಾತಜ ಓಷ್ಠರೋಗ | ೨೮೭ | ೨ |
| ಪಿತ್ತಜ ,, | ,, | ೩ |
| ಕಫಜ ,, | ,, | ೪ |
| ಸನ್ನಿಪಾತಜ ,, | ,, | ೫ |
| ರಕ್ತಜ ,, | ,, | ೬ |
| ಮಾಂಸಜ ,, | ೨೮೮ | ೭ |
| ಮೇದೋಜ ,, | ,, | ೮ |
| ಅಭಿಘಾತಜ ,, | ,, | ೯ |
| ಶೀತಾದಿಜ ,, | ,, | ೧೦ |
| ದಂತಪುಪ್ಪುಟಕ ,, | ೨೮೯ | ೧೨ |
| ದಂತವೇಷ್ಟ ,, | ,, | ೧೩ |
| ಶೌಷಿರ ,, | ,, | ೧೪ |
| ಮಹಾಶೌಷಿರ ,, | ,, | ೧೫ |
| ಪರಿದರ ,, | ,, | ೧೬ |
| ಉಪಕುಶ ,, | ೨೯೦ | ೧೭ |
| ವೈದರ್ಭ ,, | ,, | ೧೮ |
| ಖಲಿವರ್ಧನ ,, | ,, | ೧೯ |
| ಕರಾಳದಂತ ,, | ,, | ೨೦ |
| ಅಧಿಮಾಂಸಕ ,, | ,, | ೨೧ |
| ದಂತನಾಡೀ ,, | ,, | ೨೧ |
| **ಇದರಲ್ಲಿ ದಂತರೋಗ** | | |
| ದಾಲನ ಲಕ್ಷಣ | ೨೯೧ | ೨೩ |
| ಕ್ರಿಮಿದಂತ ,, | ,, | ೨೪ |
| ಭಂಜನಕ ,, | ,, | ೨೫ |
| ದಂತಹರ್ಷ ,, | ,, | ೨೬ |
| ದಂತಶರ್ಕರಾ ,, | ೨೯೨ | ೨೭ |
| ಕಪಾಲಿಕಾ ,, | ,, | ೨೮ |
| ಶ್ಯಾವದಂತಕ ,, | ,, | ೨೯ |
| ದಂತವಿದ್ರಧಿ ,, | ,, | ೩೦ |
| **ಜಿಹ್ವಾಗತ ಪಂಚರೋಗಗಳು** | | |
| ವಾತಜ ಜಿಹ್ವಾರೋಗ | ೨೯೩ | ೩೧ |
| ಪಿತ್ತಜ ,, | ,, | ೩೧ |
| ಕಫಜ ,, | ,, | ೩೧ |
| ಅಲಾಸ ಲಕ್ಷಣ | ,, | ೩೨ |
| ಉಪಜಿಹ್ವಾ ,, | ,, | ೩೩ |
| **ತಾಲುಗತನವರೋಗಗಳು** | | |
| ಕಂಠಶುಂಡೀಲಕ್ಷಣ | ೨೯೪ | ೩೪ |
| ಶುಂಡಿಕೇರೀ ,, | ,, | ೩೫ |
| ಅಧ್ರುಷ ,, | ,, | ೩೬ |
| ಕಚ್ಛಪ ,, | ,, | ೩೬ |
| ತಾಲ್ವರ್ಬುದ ,, | ೨೯೫ | ೩೭ |
| ಮಾಂಸಸಂಘಾತ ,, | ,, | ೩೭ |
| ತಾಲುಪುಪ್ಪುಟ ,, | ,, | ೩೮ |
| ತಾಲುಶೋಷ ,, | ,, | ೩೮ |
| ತಾಲುಪಾಕ ,, | ,, | ೩೯ |
| **ಕಂಠಗತರೋಗಗಳು** | | |
| ರೋಹಿಣಿಯ ಸಂಪ್ರಾಪ್ತಿ | ೨೯೬ | ೪೦ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಾತಜರೋಹಿಣೀಲಕ್ಷಣ | ೨೯೬ | ೪೧ |
| ಪಿತ್ತಜ ,, | ,, | ೪೧ |
| ಕಫಜ ,, | ,, | ೪೨ |
| ಸನ್ನಿಪಾತಜ ,, | ,, | ೪೨ |
| ಕಂಠಶಾಲೂಕ ,, | ,, | ೪೩ |
| ಅಧಿಜಿಹ್ವ ,, | ೨೯೭ | ೪೪ |
| ವಲಯ ,, | ,, | ೪೫ |
| ಬಲಾಸ ,, | ,, | ೪೬ |
| ಏಕವೃಂದ ,, | ೨೯೮ | ೪೭ |
| ವೃಂದ ,, | ,, | ೪೮ |
| ಶತಘ್ನೀ ,, | ,, | ೪೯ |
| ಗಲಾಯು ,, | ೨೯೯ | ೫೦ |
| ಗಲವಿದ್ರಧಿ ,, | ,, | ೫೧ |
| ಗಲೌಘ ,, | ,, | ೫೨ |
| ಸ್ವರಘ್ನ ,, | ,, | ೫೩ |
| ಮಾಂಸತಾನ ,, | ೩೦೦ | ೫೪ |
| ಉದಾರಿ ,, | ,, | ೫೫ |
| ಸರ್ವಸರ ,, | ,, | ೫೬ |
| ಅಸಾಧ್ಯಮುಖರೋಗ | ೩೦೧ | ೫೮ |
| **ಮೂಢಗರ್ಭನಿದಾನ** | | |
| ಗರ್ಭಪಾತಕಾರಣ ಮತ್ತು ಪೂರ್ವರೂಪ | ೩೫೧ | ೧ |
| ಗರ್ಭಸ್ರಾವ ಮತ್ತು ಗರ್ಭಪಾಕ ಇವುಗಳ ಕಾಲ | ೩೫೨ | ೨ |
| ಗರ್ಭವು ಯೋಗ್ಯಕಾಲದಲ್ಲಿ ಯಾದರೂ ಮೂಢ ಗರ್ಭವಾಗುವುದಕ್ಕೆ ಕಾರಣ | ,, | ೩ |
| ಮೂಢಗರ್ಭದ ಅಷ್ಟವಿಧಗಳು | ೩೫೩ | ೫ |
| ಮೂಢಗರ್ಭದ ನಾಲ್ಕು ಪ್ರಗತಿಗಳು | ೩೫೩ | ೬ |
| ಅಸಾಧ್ಯ ಮೂಢಗರ್ಭದ ಮತ್ತು ಗರ್ಭಿಣಿಯ ಲಕ್ಷಣ | ೩೫೪ | ೭ |
| ಮೃತಗರ್ಭದ ,, | ,, | ೮ |
| ಗರ್ಭಮೃತಿಗೆ ಕಾರಣ | ,, | ೯ |
| ಗರ್ಭಿಣಿಯ ಅಸಾಧ್ಯ ಲಕ್ಷಣ | ೩೫೫ | ೧೦ |


## ಮೂರ್ಛಾರೋಗನಿದಾನ


| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮೂರ್ಛೆಯ ಕಾರಣ | ೯೫ | ೧ |
| ಮೂರ್ಛೆಯ ಪೂರ್ವರೂಪ | ೯೬ | ೬ |
| ವಾತಜ ಮೂರ್ಛಾಲಕ್ಷಣ | ,, | ೭ |
| ಪಿತ್ತಜ ,, | ,, | ೯ |
| ಕಫಜ ,, | ,, | ೧೦ |
| ಸನ್ನಿಪಾತಜ ,, | ೯೭ | ೧೩ |
| ರಕ್ತಜ ,, | ,, | ೧೪ |
| ವಿಷಮದ್ಯಜ ,, | ೯೮ | ೧೫ |
| ವಿಷಾದಿಗಳಿಂದ ಮೂರ್ಛಿತನಾದವನ ಲಕ್ಷಣಗಳು | ,, | ೧೬ |
| ಭ್ರಮ ಮೂರ್ಛಾದಿಗಳ ವ್ಯತ್ಯಾಸ | ,, | ೧೩ |
| ಭ್ರಮೆಯಲಕ್ಷಣ | ,, | ೨೦ |
| ತಂದ್ರಾಲಕ್ಷಣ | ೯೯ | ೨೧ |
| ಮದ, ಮೂರ್ಛೆ, ಮತ್ತು ಸನ್ಯಾಸ ಇವುಗಳ ಭೇದಗಳು | ,, | ೨೨ |
| ಸನ್ಯಾಸದ ಲಕ್ಷಣ | ,, | ೨೮ |


## ಮೂತ್ರಕೃಚ್ಛ್ರನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮೂತ್ರಕೃಚ್ಛ್ರಕಾರಣ | ೧೬೧ | ೧ |
| ಮೂತ್ರಕೃಚ್ಛ್ರದಸಂಪ್ರಾಪ್ತಿ | ,, | ೨ |
| ವಾತಜ ಮೂತ್ರಕೃಚ್ಛ್ರದ ಕಾರಣ | ,, | ೩ |
| ಪಿತ್ತಜ ,, ,, | ,, | ೩ |
| ಕಫಜ ,, ,, | ೧೬೨ | ೪ |
| ಸನ್ನಿಪಾತಜ | ,, | ೪ |
| ಶಲ್ಯಜ ,, ,, | ,, | ೫ |
| ಪುರೀಷಜ ,, ,, | ,, | ೬ |
| ಅಶ್ಮರೀಜ ,, ,, | ,, | ೭ |
| ಶುಕ್ರಜ ,, ,, | ,, | ೮ |
| ಅಶ್ಮರೀಮತ್ತು ಶರ್ಕರಾ ಇವುಗಳಬೇಧ | ೧೬೩ | ೬ |

## ಮೂತ್ರಾಘಾತನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮೂತ್ರಾಘಾತದ ಕಾರಣ | ೧೬೩ | ೧ |
| ವಾತಕುಂಡಲಿಕಾಲಕ್ಷಣ | ೧೬೪ | ೨ |
| ಅಷ್ಠೀಲಾ ,, | ,, | ೩ |
| ವಾತಬಸ್ತಿ ,, | ,, | ೫ |
| ಮೂತ್ರಾತೀತ ,, | ೧೬೫ | ೭ |
| ಮೂತ್ರಜಠರ ,, | ,, | ೮ |
| ಮೂತ್ರೋತ್ಸಂಗ ,, | ,, | ೧೦ |
| ಮೂತ್ರಕ್ಷಯ ,, | ೧೬೬ | ೧೨ |
| ಮೂತ್ರಗ್ರಂಥಿ ,, | ,, | ೧೩ |
| ಮೂತ್ರಶುಕ್ರ ,, | ,, | ೧೪ |
| ಉಷ್ಣವಾತ ,, | ,, | ೧೫ |
| ಮೂತ್ರಸಾದ ,, | ೧೬೭ | ೧೭ |
| ವಿಡ್ವಿಘಾತ ,, | ,, | ೧೯ |
| ಬಸ್ತಿಕುಂಡಲ ,, | ,, | ೨೧ |
| ದೋಷಬೇಧಗಳಿಂದಾಗುವ ಲಕ್ಷಣಗಳು | ೧೬೮ | ೨೩ |
| ಸಾಧ್ಯಾಸಾಧ್ಯವಿಚಾರ | ,, | ೨೪ |
| ಕುಂಡಲೀಭೂತ ಬಸ್ತಿಲಕ್ಷಣ | | ೨೫ |

## ಮೇದೋರೋಗನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮೇದಸ್ಸಿನ ಉತ್ಪತ್ತಿ | ೧೮೩ | ೧ |
| ಮೇದಸ್ಸಿನ ಸ್ಥಾನ | ,, | ೪ |
| ಮೇದಸ್ಸಿನ ಪರಿಣಾಮ | ,, | ೫ |
| ಅತಿಶಯವಾಗಿ ಮೇದಸ್ಸು ಹೆಚ್ಚಿದರೆ ಪರಿಣಾಮ | ೧೮೪ | ೮ |
| ಅತಿಸ್ಥೂಲಮನುಷ್ಯರಲಕ್ಷಣ | ,, | ೯ |

## ಯೋನಿಕಂದನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಯೋನಿಕಂದಕ್ಕೆ ಕಾರಣ | ೩೫೦ | ೧ |
| ವಾತಜ ಯೋನಿಕಂದ ಲಕ್ಷಣ | ೩೫೧ | ೩ |
| ಪಿತ್ತಜ ,, ,, | ,, | ೩ |
| ಕಫಜ ,, ,, | ,, | ೪ |
| ತ್ರಿದೋಷಜ ,, ,, | ,, | ೪ |

## ಯೋನಿವ್ಯಾಪನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಯೋನಿವ್ಯಾಪತ್ತಿಗೆ ಕಾರಣ | ೩೪೭ | ೧ |
| ವಾತಿಕ ಯೋನಿರೋಗ | ೩೪೮ | ೨ |
| ಪೈತ್ತಿಕ ,, | ,, | ೫ |
| ಶ್ಲೈಷ್ಮಿಕ ,, | ೩೪೯ | ೮ |
| ಸಾನ್ನಿಪಾತಿಕ ,, | ೩೫೦ | ೧೧ |
| ಯೋನಿರೋಗದ ಅಸಾಧ್ಯತ್ವ | ,, | ೧೩ |

## ರಕ್ತಪಿತ್ತನಿದಾನ.

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ರಕ್ತಪಿತ್ತದಕಾರಣ | ೬೧ | ೧ |
| ರಕ್ತಪಿತ್ತದಪೂರ್ವರೂಪ | ,, | ೪ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕಫಾದಿರಕ್ತಪಿತ್ತಲಕ್ಷಣ | ೬೨ | ೫ |
| ವಾತಾದಿಕ ,, | ,, | ೬ |
| ದ್ವಂದ್ವಜ ಮತ್ತು ಸಾನ್ನಿಪಾತಿಕ ಲಕ್ಷಣ | ,, | ೬ |
| ದೋಷಾನುರೂಪವಾಗಿ ರಕ್ತ ಪಿತ್ತದ ಮಾರ್ಗ | ,, | ೭ |
| ಮಾರ್ಗ ಬೇಧದಿಂದ ರಕ್ತ ಪಿತ್ತದ ಸಾಧ್ಯಾಸಾಧ್ಯತ್ವ | ,, | ೮ |
| ಸಾಧ್ಯರಕ್ತಪಿತ್ತ | ,, | ೮ |
| ದೋಷಬೇಧದಿಂದ ಸಾಧ್ಯಾಸಾಧ್ಯತ್ವ | ೬೩ | ೯ |
| ರಕ್ತಪಿತ್ತದ ಉಪದ್ರವಗಳು | ,, | ೧೧ |
| ರಕ್ತ ಪಿತ್ತದ ಅಸಾಧ್ಯಲಕ್ಷಣ | ೬೪ | ೧೨ |

## ರಾಜಯಕ್ಷ್ಮನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಯಕ್ಷ್ಮದಕಾರಣ | ೬೫ | ೧ |
| ಯಕ್ಷ್ಮದಸಂಪ್ರಾಪ್ತಿ | ,, | ೨ |
| ಯಕ್ಷ್ಮದಪೂರ್ವರೂಪ | ೬೬ | ೩ |
| ತ್ರಿರೂಪಯಕ್ಷ್ಮದ ಲಕ್ಷಣ | ,, | ೫ |
| ತ್ರಿದೋಷಜಕ್ಷಯದ ಆಕಾರ ಮತ್ತು ರೂಪ | ,, | ೬ |
| ಅಸಾಧ್ಯಕ್ಷಯದ ಲಕ್ಷಣ | ೬೭ | ೮ |
| ಸಾಧ್ಯಾಸಾಧ್ಯವಿಚಾರ | ,, | ೧೦ |
| ಕ್ಷಯದ ಅಸಾಧ್ಯವಿಚಾರ | ,, | ೧೧ |
| ಹೇಗಿದ್ದರೆ ಚಿಕಿತ್ಸಸಾಧ್ಯ | ೬೮ | ೧೩ |
| ಕ್ಷಯದ ಇತರ ವಿಧಗಳು | ,, | ೧೪ |
| ವ್ಯವಾಯಶೋಷಿಯ ಲಕ್ಷಣ | ,, | ೧೫ |
| ಶೋಕ ,, ,, | ,, | ೧೬ |
| ಜರಾ ,, ,, | ,, | ೧೭ |
| ಅಧ್ವಶೋಷಿಯ ಲಕ್ಷಣ | ೬೯ | ೧೮ |
| ವ್ಯಾಯಾಮ ,, ,, | ,, | ೧೯ |
| ವ್ರಣ ,, ,, | ,, | ೨೦ |
| ಉರಃಕ್ಷತನಿದಾನ | ೭೦ | ೨೧ |
| ,, ಪೂರ್ವರೂಪ | ೭೧ | ೨೯ |
| ,, ವಿಶೇಷಲಕ್ಷಣ | ,, | ೩೦ |
| ಸಾಧ್ಯಾ ಸಾಧ್ಯವಿಚಾರ | ,, | ೩೧ |

## ವಾತರಕ್ತನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಾತರಕ್ತದ ಕಾರಣ | ೧೨೬ | ೧ |
| ವಾತರಕ್ತದ ಸಂಪ್ರಾಪ್ತಿ | ,, | ೪ |
| ,, ಪೂರ್ವರೂಪ | ೧೩೭ | ೫ |
| ವಾತಾಧಿಕ ವಾತರಕ್ತ ಲಕ್ಷಣ | ,, | ೮ |
| ರಕ್ತಾಧಿಕ ,, ,, | ,, | ೧೦ |
| ಪಿತ್ತಾಧಿಕ ,, ,, | ೧೩೮ | ೧೧ |
| ಸಂಸರ್ಗಜ ,, ,, | ,, | ೧೨ |
| ಉಪೇಕ್ಷಿಸಿದರೆ ಪರಿಣಾಮ | ,, | ೧೩ |
| ಅಸಾಧ್ಯಲಕ್ಷಣ | ೧೩೯ | ೧೪ |
| ವಾತರಕ್ತದ ಉಪದ್ರವಗಳು | ,, | ೧೫ |
| ಸಾಧ್ಯಾಸಾಧ್ಯವಿಚಾರ | ,, | ೧೬ |

## ವಾತವ್ಯಾಧಿನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಾತವ್ಯಾಧಿಯಕಾರಣ | ೧೧೯ | ೧ |
| ವಾತವಿಕಾರಗಳ ಪೂರ್ವರೂಪ | ೧೨೦ | ೫ |
| ವಾತವಿಕಾರಗಳ ರೂಪ | ,, | ೫ |
| ಪ್ರಕೋಪದಿಂದ ಹುಟ್ಟತಕ್ಕ ಹಿಂಸೆಗಳು | ೧೨೧ | ೬ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಕೋಷ್ಠಗತವಾತ ಲಕ್ಷಣ | ೧೨೧ | ೧೦ |
| ಸರ್ವಾಂಗ ಕುಪಿತ ,, | ,, | ೧೦ |
| ಗುದ ,, ,, | ೧೨೨ | ೧೨ |
| ಆಮಾಶಯಗತ ,, | ,, | ೧೩ |
| ಪಕ್ವಾಶಯಗತ ,, | ,, | ೧೪ |
| ಕರ್ಣಾದಿಗತ ,, | ,, | ೧೫ |
| ರಕ್ತಗತ ,, | ೧೨೩ | ೧೬ |
| ಮಾಂಸಮೇದೋಗತ,, | ,, | ೧೭ |
| ಅಸ್ಥಿಮಜ್ಜಾಗತ ,, | ,, | ೧೮ |
| ಶುಕ್ರಗತ ,, | ,, | ೧೯ |
| ಸಿರಾಗತ ,, | ೧೨೪ | ೨೦ |
| ಸ್ನಾಯುಗತ ,, | ,, | ೨೧ |
| ಸಂಧಿಗತ ,, | ,, | ೨೧ |
| ಪಿತ್ತಕಫಗಳಿಂದಕೂಡಿದ ಪ್ರಾಣಾದಿವಾಯುಗಳ ಲಕ್ಷಣ | ,, | ೨೨ |
| ಆಕ್ಷೇಪಕವಾಯುವಿನ ಸಾಮಾನ್ಯ ಲಕ್ಷಣ | ೧೨೫ | ೨೭ |
| ಅಪತಂತ್ರಕ ,, | ,, | ೩೧ |
| ಅಪತಾನಕ ,, | ,, | ೩೨ |
| ದಂಡಾಪತಾನಕ ,, | ೧೨೬ | ೩೩ |
| ಧನುಸ್ತಂಭ ,, | ,, | ೩೪ |
| ಅಂತರಾಯಾಮ ,, | ,, | ೩೫ |
| ಬಹ್ಯಾಯಾಮ ,, | ,, | ೩೭ |
| ಇವುಗಳಲ್ಲಿರುವ ದೋಷ ಸಂಬಂಧ | ೧೨೭ | ೩೮ |
| ಅಸಾಧ್ಯ ಅಪತಾನಕ | ,, | ೩೯ |
| ಪಕ್ಷವಧ ಲಕ್ಷಣ | ,, | ೪೦ |
| ಸರ್ವಾಂಗ ವಾತ ,, | ೧೨೮ | ೪೨ |
| ಸಾಧ್ಯಾಸಾಧ್ಯವಿಚಾರ | ೧೨೮ | ೪೩ |
| ಅರ್ದಿತ ಲಕ್ಷಣ | ,, | ೪೫ |
| ಅರ್ದಿತದ ಅಸಾಧ್ಯಲಕ್ಷಣ | ೧೨೯ | ೪೭ |
| ಹನುಗ್ರಹಲಕ್ಷಣ | ,, | ೪೯ |
| ಮನ್ಯಾಸ್ತಂಭಲಕ್ಷಣ | ೧೩೦ | ೫೧ |
| ಜಿಹ್ವಾಸ್ತಂಭ ,, | ,, | ೫೨ |
| ಶಿರಾಗ್ರಹ ,, | ,, | ೫೩ |
| ಗೃಧ್ರಸೀ ,, | ,, | ೫೪ |
| ವಿಶ್ವಾಚೀ ,, | ೧೩೧ | ೫೫ |
| ಕ್ರೋಷ್ಟುಕಶೀರ್ಷಕ ,, | ,, | ೫೭ |
| ಖಂಜಪಾದ ,, | ,, | ೫೮ |
| ಕಲಾಯಖಂಜ ,, | ,, | ೫೯ |
| ವಾತಕಂಟಕ ,, | ೧೩೨ | ೬೦ |
| ಪಾದದಾಹ ,, | ,, | ೬೧ |
| ಪಾದಹರ್ಷ ,, | ,, | ೬೨ |
| ಅಂಸಶೋಷ ,, | ,, | ೬೩ |
| ಅಪಬಾಹುಕ ,, | ,, | ೬೩ |
| ಮೂಕಾದಿ ,, | ,, | ೬೪ |
| ತೂನೀ ,, | ೧೩೩ | ೬೫ |
| ಪ್ರತೂನೀ , | ,, | ೬೬ |
| ಆಧ್ಮಾನ ,, | , | ೬೭ |
| ಪ್ರತ್ಯಾಧ್ಮಾನ ,, | ,, | ೬೮ |
| ವಾತಾಷ್ಠೀಲಾ ,, | ೧೩೪ | ೭೧ |
| ಮೂತ್ರರೋಧಾದಿ,, | ,, | ೭೧ |
| ಕಂಪವಾತ ,, | ,, | ೭೨ |
| ಖಲ್ವೀ ,, | ,, | ೭೩ |
| ಸಾಧ್ಯಾಸಾಧ್ಯ ವಿಚಾರ | ,, | ೭೪ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಾತರೋಗದ ಉಪದ್ರವಗಳು | ೧೩೫ | ೭೬ |
| ಅಸಾಧ್ಯಲಕ್ಷಣ | ,, | ೭೬ |
| ಪ್ರಕೃತಿಸ್ಥವಾಯುಲಕ್ಷಣ | ,, | ೭೮ |

## ವಿದ್ರಧಿನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಿದ್ರಧಿಯ ಸಂಪ್ರಾಪ್ತಿ | ೨೧೧ | ೧ |
| ವಾತಜ ವಿದ್ರಧಿ ಲಕ್ಷಣ | ,, | ೪ |
| ಪಿತ್ತಜ ,, ,, | ೨೧೨ | ೫ |
| ಕಫಜ ,, ,, | ,, | ೬ |
| ತ್ರಿದೋಷಜ,, ,, | ,, | ೭ |
| ಆಗಂತುಜ ,, ,, | ೨೧೩ | ೮ |
| ರಕ್ತಜ ,, ,, | ,, | ೧೦ |
| ಅಂತರ್ವಿದ್ರಧಿ ,, | ,, | ೧೧ |
| ಸ್ರಾವನಿರ್ಗಮಮಾರ್ಗ | ೨೧೪ | ೧೭ |
| ಸಾಧ್ಯಾಸಾಧ್ಯವಿಚಾರ | ,, | ೧೮ |

## ವಿಷನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಿಷಭೇದಗಳು | ೩೬೪ | ೧ |
| ಜಂಗಮವಿಷದ ಸಾಮಾನ್ಯಲಕ್ಷಣ | ,, | ೨ |
| ಸ್ಥಾವರ ವಿಷದ ,. | ೩೬೫ | ೩ |
| ವಿಷಕೊಟ್ಟವನ ,, | ,, | ೪ |
| ವಿಷಭಕ್ಷಕನ ,, | ೩೬೬ | ೮ |
| ವಿಷಯುಕ್ತ ಶಸ್ತ್ರಘಾತದ ,, | ೩೬೭ | ೧೩ |
| ವಿಷಭಕ್ಷಕನನ್ನು ಗುರ್ತಿಸುವುದು | ,, | ೧೫ |
| ಸರ್ಪಜಾತಿಗಳು | ೩೬೮ | ೧೬ |
| ಬೇರೆಬೇರೆ ಜಾತಿಗಳು ಕಡಿದದ್ದರ ಲಕ್ಷಣಗಳು | ,, | ೧೭ |
| ಸರ್ಪದಂಶದ ಅಸಾಧ್ಯತ್ವ | ,, | ೧೯ |
| ಅಸಾಧ್ಯಲಕ್ಷಣ | ೩೬೯ | ೨೧ |
| ದೂಷೀವಿಷಲಕ್ಷಣ | ೩೭೦ | ೨೫ |
| ,, ವಿಷಸ್ವರೂಪ | ೩೭೧ | ೨೬ |
| ವಿಷಗತಸ್ಥಾನಬೇದದಿಂದ ಕಾಣುವ ಲಕ್ಷಣ | ,, | ೨೮ |
| ಧಾತುಗತದೂಷೀ ವಿಷಲಕ್ಷಣ | ೩೭೨ | ೨೯ |
| ದೂಷೀವಿಷದಿಂದ ಉತ್ಪನ್ನವಾಗುವ ರೋಗಗಳು | ೩೭೩ | ೩೨ |
| ದೂಷೀವಿಷದವ್ಯಾಖ್ಯೆ | ,, | ೩೩ |
| ದೂಷೀವಿಷದ ಸಾಧ್ಯಾಸಾಧ್ಯತ್ವ | ,, | ೩೪ |
| ಮುದ್ದಿಕ್ಕುವುದು | ೩೭೪ | ೩೫ |
| ಲೂತಿಯ ಉತ್ಪತ್ತಿ | ,, | ೩೮ |
| ಲೂತಿಗಳು ಕಚ್ಚುವುದರ ಸಾಮಾನ್ಯಲಕ್ಷಣ | ೩೭೫ | ೩೯ |
| ದೂಷೀವಿಷಯುಕ್ತ ಲೂತಿಗಳು ಕಚ್ಚುವುದರ ಲಕ್ಷಣ | ,, | ೪೧ |
| ಅಸಾಧ್ಯಲಕ್ಷಣ | ೩೭೬ | ೪೩ |
| ಇಲಿ ಕಚ್ಚಿದ ವಿಷದ ಲಕ್ಷಣ | ,, | ೪೪ |
| ಇದರ ಅಸಾಧ್ಯ ,, | ,, | ೪೫ |
| ಕೃಕಲಾಸದಂಶ ,, | ,, | ೪೬ |
| ಚೇಳಿನ ವಿಷ ,, | ೩೭೭ | ೪೭ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಇದರ ಅಸಾಧ್ಯ ಲಕ್ಷಣ | ೩೭೭ | ೪೮ |
| ಕಣಜವು ಕಚ್ಚಿದುದರ ,, | ,, | ೪೯ |
| ಉಚ್ಚಿಟಿಂಗವು ,, | ,, | ೫೦ |
| ವಿಷದೋಷವಿರುವ ಕಪ್ಪೆಗಳು ಕಚ್ಚಿದುದರ ಲಕ್ಷಣ | ೩೭೮ | ೫೨ |
| ಹಲ್ಲಿಯು ಕಚ್ಚಿದುದರ ,, | ,, | ೫೩ |
| ಸಾಮಾನ್ಯಸೊಳ್ಳೆಗಳು,, | ,, | ೫೪ |
| ಜೇನುಹುಳುವು ,, | ,, | ೫೫ |
| ಸಾಮಾನ್ಯವಾಗಿ ಇತರ ಪ್ರಾಣಿಗಳು ,, | ೩೭೯ | ೫೬ |
| ವಿಷನಿವೃತ್ತಿ ,, | ,, | ೫೭ |
| ರೋಗಿಯ ಪರೀಕ್ಷೆ | ,, | ೫೮ |
| ವಿಷಯಾನುಕ್ರಮಣಿಕೆ | ೩೮೦ | |

## ವಿಸರ್ಪನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಿಸರ್ಪದ ನಿದಾನ | ೨೬೨ | ೧ |
| ವಿಸರ್ಪದ ಕಾರಣ | ,, | ೨ |
| ವಿಸರ್ಪದಲ್ಲಿ ದೋಷ ದೂಷ್ಯಗಳು | , | ೩ |
| ವಾತ ವಿಸರ್ಪಲಕ್ಷಣ | ,, | ೫ |
| ಪಿತ್ತ ,, | ,, | ೬ |
| ಕಫ ,, | ,, | ೭ |
| ಸಾನ್ನಿಪಾತಿಕ,, | ,, | ೭ |
| ಅಗ್ನಿ ,, | ೨೬೩ | ೮ |
| ಗ್ರಂಥಿ ,, | ೨೬೪ | ೧೪ |
| ಕರ್ದಮ ,, | ೨೬೫ | ೧೭ |
| ಕ್ಷತಜ ,, | ,, | ೨೧ |
| ವಿಸರ್ಪದಉಪದ್ರವಗಳು | ೨೬೬ | ೨೪ |
| ಸಧ್ಯಾಸಾಧ್ಯತ್ವ | ,, | ೨೫ |

## ವಿಸ್ಫೋಟನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವಿಸ್ಫೋಟಕಾರಣ ಮತ್ತು ಸಂಪ್ರಾಪ್ತಿ | ೨೬೬ | ೧ |
| ವಿಸ್ಫೋಟ ಸ್ವರೂಪ | ೨೬೭ | ೩ |
| ವಾತಜ ವಿಸ್ಫೋಟಲಕ್ಷಣ | ,, | ೪ |
| ಪಿತ್ತಜ ,, | ,, | ೫ |
| ಕಫಜ ,, | ,, | ೬ |
| ದ್ವಂದ್ವಜ ,, | ,, | ೭ |
| ಸನ್ನಿಪಾತಜ ,, | ೨೬೮ | ೮ |
| ರಕ್ತಜ ,, | ,, | ೧೦ |
| ಸಾಧ್ಯಾಸಾಧ್ಯವಿಚಾರ | ,, | ೧೦ |

## ವೃದ್ಧಿನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವೃದ್ಧಿರೋಗದ ಸಂಪ್ರಾಪ್ತಿ | ೧೯೮ | ೧ |
| ವೃದ್ಧಿಪ್ರಕಾರಗಳು | ,, | ೨ |
| ವಾತಜವೃದ್ಧಿಲಕ್ಷಣ | ೧೯೯ | ೩ |
| ಪಿತ್ತಜ ,, | ,, | ೪ |
| ಕಫಜ ,, | ,, | ೪ |
| ರಕ್ತಜ ,, | ,, | ೫ |
| ಮೇದೋಜ ,, | ,, | ೫ |
| ಮೂತ್ರಜ ,, | ,, | ೫ |
| ಅಂತ್ರವೃದ್ಧಿ ,, | ೨೦೦ | ೭ |
| ಉಪೇಕ್ಷಿಸಿದರೆ ಪರಿಣಾಮ | ,, | ೧೦ |

## ವ್ರಣಶೋಥನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವ್ರಣಶೋಥದ ಪೂರ್ವಲಕ್ಷಣ | ೨೧೫ | ೧ |
| ವಾತಾದಿಭೇದದಿಂದ ಪಕ್ವವಾದ ವ್ರಣಲಕ್ಷಣ | ೨೧೬ | ೩ |
| ಆಪಕ್ವವ್ರಣಲಕ್ಷಣ | ,, | ೪ |
| ಪಚ್ಯಮಾನವ್ರಣಲಕ್ಷಣ | ೨೧೭ | ೫ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಪಕ್ವವ್ರಣಲಕ್ಷಣ | ೨೧೭ | ೯ |
| ಪಕ್ವವ್ರಣಕ್ಕಿರುವಸರ್ವದೋಷಸಂಬಧ | ೨೧೮ | ೧೨ |
| ಶಶ್ಮಲವನ್ನುತೆಗೆಯದಿದ್ದರೆ ಪರಿಣಾಮ | ,, | ೧೩ |

## ಶರೀರವ್ರಣನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ವ್ರಣದಪ್ರಕಾರಗಳು | ೨೧೯ | ೧ |
| ವಾತಜವ್ರಣ ಲಕ್ಷಣ | ,, | ೨ |
| ಪಿತ್ತಜ ,, ,, | ,, | ೩ |
| ಕಫಜ ,, ,, | ,, | ೪ |
| ರಕ್ತಜ ,, ,, | ,, | ೫ |
| ತ್ರಿದೋಷಜವ್ರಣಲಕ್ಷಣ | ೨೨೦ | ೫ |
| ಸುಖಸಾಧ್ಯಲಕ್ಷಣ | ,, | ೫ |
| ಕಷ್ಟಸಾಧ್ಯ ,, | ,, | ೬ |
| ಅಸಾಧ್ಯ ,, | ೨೨೧ | ೭ |
| ದುಷ್ಟವ್ರಣ ,, | ,, | ೭ |
| ಶುದ್ಧ ,, ,, | ,, | ೮ |
| ಮಾಯುತ್ತಬರುವಲಕ್ಷಣ | ,, | ೯ |
| ಮಾದಿರುವ ,, | ,, | ೧೦ |
| ಕಷ್ಟಸಾಧ್ಯ ವ್ರಣ ,, | ೨೨೨ | ೧೧ |
| ಸಾಧ್ಯಾಸಾಧ್ಯವಿಚಾರ | ,, | ೧೩ |
| ಅಸಾಧ್ಯಲಕ್ಷಣ | ೨೨೩ | ೧೪ |

## ಶಿರೋರೋಗನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಶಿರೋರೋಗಪ್ರಕಾರಗಳು | ೩೪೦ | ೧ |
| ವಾತಜಶಿರೋರೋಗಲಕ್ಷಣ | ೩೪೧ | ೨ |
| ಪಿತ್ತಜಶಿರೋರೋಗಲಕ್ಷಣ | ,, | ೩ |
| ಕಫಜಶಿರೋರೋಗಲಕ್ಷಣ | ೩೪೧ | ೪ |
| ತ್ರಿದೋಷಜಶಿರೋರೋಗಲಕ್ಷಣ | ,, | ೫ |
| ರಕ್ತಜಶಿರೋರೋಗಲಕ್ಷಣ | ,, | ೫ |
| ಕ್ಷಯಜಶಿರೋರೋಗಲಕ್ಷಣ | ೩೪೨ | ೬ |
| ಕ್ರಿಮಿಜಶಿರೋರೋಗಲಕ್ಷಣ | ,, | ೮ |
| ಸೂರ್ಯಾವರ್ತಶಿರೋರೋಗಲಕ್ಷಣ | ,, | ೯ |
| ಅನಂತವಾತಶಿರೋರೋಗಲಕ್ಷಣ | ೩೪೩ | ೧೦ |
| ಅರ್ಧಾವಭೇದಕಶಿರೋರೋಗಲಕ್ಷಣ | ,, | ೧೨ |
| ಶಂಖಕಶಿರೋರೋಗಲಕ್ಷಣ | ೩೪೪ | ೧೪ |

## ಶೀತಪಿತ್ತಾದಿ ನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಸಂಪ್ರಾಪ್ತಿ | ೨೫೭ | ೧ |
| ಇದರಪೂರ್ವರೂಪ | ,, | ೨ |
| ಶೀತಪಿತ್ತದಲಕ್ಷಣ | ,, | ೩ |
| ಶೀತಪಿತ್ತಮತ್ತುಉದರ್ದಇವುಗಳಭೇಧ | ,, | ೪ |
| ಉದರ್ದಲಕ್ಷಣ | ೨೫೮ | ೫ |
| ಕೋಠಲಕ್ಷಣ | ,, | ೬ |

## ಶೂಕದೋಷನಿದಾನ

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಶೂಕದೋಷಕ್ಕೆಕಾರಣ | ೨೪೨ | ೧ |
| ಸರ್ಷಪಿಕಾಲಕ್ಷಣ | ೨೪೩ | ೨ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಅಸ್ಥಿಲಿಕಾ ಲಕ್ಷಣ | ೨೪೩ | ೩ |
| ಗ್ರಂಥಿಕಾ ,, | ,, | ೩ |
| ಕುಂಭಿಕಾ ,, | ,, | ೪ |
| ಅಲಜೀ ,, | ,, | ೪ |
| ಮೃದಿತಲಕ್ಷಣ | ೨೪೪ | ೫ |
| ಸಮೂಢಪಿಡಕಾಲಕ್ಷಣ | ,, | ೫ |
| ಅಧಿಮಂಥ ,, | ,, | ೬ |
| ಪುಷ್ಕರಿಕಾ ,, | ,, | ೭ |
| ಸ್ಪರ್ಶಹಾನಿ ,, | ೨೪೫ | ೮ |
| ಉತ್ತಮಾ ,, | ,, | ೮ |
| ಶತಪೋನಕ ,, | ,, | ೯ |
| ತ್ವಕ್ಪಾಕ ,, | ,, | ೧೦ |
| ಶೋಣಿತಾರ್ಬುದ ,, | ,, | ೧೧ |
| ಮಾಂಸಾರ್ಬುದಲಕ್ಷಣ | ,, | ೧೨ |
| ಮಾಂಸಪಾಕ ,, | ,, | ೧೨ |
| ವಿದ್ರಧಿ ,, | ೨೪೬ | ೧೩ |
| ತಿಲಕಾಲಕ ,, | ,, | ೧೪ |
| ಅಸಾಧ್ಯಶೂಕದೋಷ ಲಕ್ಷಣ | ,, | ೧೬ |
| **ಶೂಲನಿದಾನ** | | |
| ಶೂಲಪ್ರಕಾರ | ೧೪೪ | ೧ |
| ವಾತಶೂಲದಕಾರಣ ಮತ್ತು ಲಕ್ಷಣ | ,, | ೨ |
| ಪಿತ್ತಶೂಲದಕಾರಣಮತ್ತು ಲಕ್ಷಣ | ೧೪೫ | ೬ |
| ಕಫಶೂಲದಕಾರಣಮತ್ತು ಲಕ್ಷಣ | ೧೪೬ | ೯ |
| ತ್ರಿದೋಷಶೂಲದಕಾರಣ ಮತ್ತುಲಕ್ಷಣ | ೧೪೭ | ೧೧ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಆಮಶೂಲದಕಾರಣಮತ್ತು ಲಕ್ಷಣ | ೧೪೭ | ೧೨ |
| ದ್ವಂದ್ವಜಶೂಲ ,, | ,, | ೧೩ |
| ಸಾಧ್ಯಾಸಾಧ್ಯವಿಚಾರ | ೧೪೮ | ೧೪ |
| ಪರಿಣಾಮಶೂಲನಿದಾನ | ,, | ೧೭ |
| ಪಿತ್ತಜಶೂಲನಿದಾನ | ೧೪೯ | ೧೮ |
| ಕಫಜಶೂಲನಿದಾನ | ,, | ೧೯ |
| ದ್ವಿದೋಷಜಮತ್ತು ತ್ರಿದೋಷಜ | ,, | ೨೦ |
| ಅನ್ನದ್ರವಶೂಲಲಕ್ಷಣ | ,, | ೨೧ |
| **ಶೋಥನಿದಾನ** | | |
| ಶೋಥದಸಂಪ್ರಾಪ್ತಿ | ೧೯೨ | ೧ |
| ಶೋಥದಪೂರ್ವರೂಪ | ೧೯೩ | ೩ |
| ಶೋಥದಕಾರಣ | ,, | ೪ |
| ಶೋಥದಸಾಮಾನ್ಯಲಕ್ಷಣ | ೧೯೪ | ೬ |
| ವಾತಜಶೋಥಲಕ್ಷಣ | ,, | ೭ |
| ಪಿತ್ತಜ ,, ,, | ,, | ೮ |
| ಕಫಜ ,, ,, | ೧೯೫ | ೯ |
| ದ್ವಂದ್ವಜ ,, ,, | ,, | ೧೦ |
| ತ್ರಿದೋಷಜ,, ,, | ,, | ೧೦ |
| ಅಭಿಘಾತಜ ,, ,, | ,, | ೧೧ |
| ಆಗಂತುಕ ,, ,, | ೧೯೬ | ೧೨ |
| ವಿಷಜ ,, ,, | ,, | ೧೩ |
| ದೋಷಭೇದದಿಂದ ಸ್ಥಾನಭೇದ | ೧೯೭ | ೧೫ |
| ಸಾಧ್ಯಾಸಾಧ್ಯವಿಚಾರ | ,, | ೧೭ |
| ಅಸಾಧ್ಯಲಕ್ಷಣ | ,, | ೧೮ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| **ಶ್ಲೀಪದನಿದಾನ** | | |
| ಶ್ಲೀಪದದಸ್ವರೂಪ | ೨೦೯ | ೧ |
| ವಾತಜಶ್ಲೀಪದಲಕ್ಷಣ | ,, | ೨ |
| ಪಿತ್ತಜ ,, ,, | ೨೧೦ | ೩ |
| ಕಫಜ ,, ,, | ,, | ೩ |
| ಶ್ಲೀಪದದ ಅಸಾಧ್ಯ ಲಕ್ಷಣ | ,, | ೪ |
| ಶ್ಲೀಪದದ ದೋಷಾಧಿಕ್ಯ | ,, | ೪ |
| ಶ್ಲೀಪದವುಸಂಭವಿಸುವ ದೇಶ ಮತ್ತು ಕಾಲ | ,, | ೫ |
| ಶ್ಲೀಪದದ ಅಸಾಧ್ಯಲಕ್ಷಣ | ,, | ೬ |
| **ಸದ್ಯೋವ್ರಣನಿದಾನ** | | |
| ಸದ್ಯೋವ್ರಣಕ್ಕೆ ಕಾರಣ | ೨೨೩ | ೧ |
| ಸದ್ಯೋವ್ರಣದ ಪ್ರಕಾರಗಳು | ,, | ೨ |
| ಭಿನ್ನವ್ರಣಲಕ್ಷಣ | ೨೨೪ | ೩ |
| ಭಿನ್ನ ,, | ,, | ೪ |
| ಕೋಷ್ಠ ,, | ,, | ೫ |
| ಕೋಷ್ಠಭಿನ್ನದಲಕ್ಷಣ | ,, | ೬ |
| ಆಮಾಶಯಸ್ಥವ್ರಣ | ೨೨೫ | ೯ |
| ಪಕ್ವಾ ,, | ,, | ೧೦ |
| ವಿದ್ಧವ್ರಣಲಕ್ಷಣ | ೨೨೬ | ೧೧ |
| ಕ್ಷತ ,, | ,, | ೧೨ |
| ಪಿಚ್ಚಿತ ,, | ,, | ೧೩ |
| ಘೃಷ್ಟಿವ್ರಣಲಕ್ಷಣ | ,, | ೧೪ |
| ಸಶಲ್ಯ ,, | ೨೨೭ | ೧೫ |
| ಕೋಷ್ಠಗತಶಲ್ಯ ,, | ,, | ೧೬ |
| ಕೋಷ್ಠಭೇದದಅಸಾಧ್ಯ ಲಕ್ಷಣ | ,, | ೧೭ |
| ಮರ್ಮವಿದ್ಧದ ಸಾಮಾನ್ಯ ಲಕ್ಷಣ | ೨೨೮ | ೧೮ |
| ಮರ್ಮರಹಿತಶಿರಾವಿದ್ಧ ,, | ,, | ೨೦ |
| ಸ್ನಾಯುವಿದ್ಧ ,, | ,, | ೨೧ |
| ಸಂಧಿವಿದ್ಧ ,, | ೨೨೯ | ೨೨ |
| ಅಸ್ಥಿವಿದ್ಧ ,, | ,, | ೨೩ |
| ಶಿರಾದಿಮರ್ಮ ,, | ,, | ೨೪ |
| ವ್ರಣೋಪದ್ರವಗಳು | ,, | ೨೫ |
| **ಸೂತಿಕಾರೋಗನಿದಾನ** | | |
| ಮಕ್ಕಲ್ಲಶೂಲಲಕ್ಷಣ | ೩೫೫ | ೧ |
| ಸೂತಿಕಾರೋಗ ,, | ,, | ೨ |
| ಸೂತಿಕಾರೋಗನಿದಾನ | ,, | ೩ |
| **ಸ್ತನರೋಗನಿದಾನ** | | |
| ಸ್ತನರೋಗದ ಸಂಪ್ರಾಪ್ತಿ | ೩೫೬ | ೧ |
| ವಾತಾದಿಸ್ತನರೋಗನಿದಾನ | ,, | ೨ |
| **ಸ್ತನ್ಯದುಷ್ಟಿನಿದಾನ** | | |
| ಸ್ತನ್ಯದುಷ್ಟಿಯಕಾರಣ | ೩೫೭ | ೧ |
| ವಾತದೂಷಿತಸ್ತನ್ಯ ಲಕ್ಷಣ | ,, | ೨ |
| ಪಿತ್ತ ,, ,, | ,, | ೨ |
| ಕಫ ,, ,, | ,, | ೩ |
| ತ್ರಿದೋಷ ,, ,, | ,, | ೩ |
| ಅವಿಕೃತ ,, ,, | ,, | ೫ |
| **ಸ್ವರಭೇದನಿದಾನ** | | |
| ಸ್ವರಭೇದದಕಾರಣ | ೮೨ | ೧ |
| ಸ್ವರಭೇದದಸಂಖ್ಯೆ | ,, | ೧ |
| ವಾತಜಸ್ವರಭೇದಲಕ್ಷಣ | ೮೩ | ೨ |
| ಪಿತ್ತಜ ,, | ,, | ೬ |
| ಕಫಜ ,, | ,, | ೩ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಸನ್ನಿಪಾತಜಸ್ವರಭೇದಲಕ್ಷಣ ,, | ೮೩ | ೩ |
| ಕ್ಷಯಜ ,, ,, | ,, | ೪ |
| ಮೇದೋಜ ,, ,, | ,, | ೪ |
| ಸ್ವರಭೇದದ ಅಸಾಧ್ಯಲಕ್ಷಣ | ೮೪ | ೫ |
| **ಹಿಕ್ಕಾಶ್ವಾಸನಿದಾನ** | | |
| ಹಿಕ್ಕಾ ಶ್ವಾಸಕಾರಣ | ೭೫ | ೧ |
| ಬಿಕ್ಕಲಿನ ಸ್ವರೂಪ | ೭೬ | ೩ |
| ಇದರ ಪ್ರಕಾರಗಳು | ,, | ೪ |
| ಇದರ ಪೂರ್ವರೂಪ | ,, | ೫ |
| ಅನ್ನಜಹಿಕ್ಕಾಲಕ್ಷಣ | ,, | ೬ |
| ಯಮಲ ,, | ,, | ೭ |
| ಕ್ಷುದ್ರ ,, | ೭೭ | ೮ |
| ಗಂಭೀರ ,, | ,, | ೯ |
| ಮಹಾ ,, | ,, | ೧೦ |
| ಬಿಕ್ಕಲಿನಅಸಾಧ್ಯಲಕ್ಷಣ | ,, | ೧೦ |
| ಶ್ವಾಸದಪ್ರಕಾರಗಳು | ೭೮ | ೧೫ |
| ದೋಷಸಂಬಂಧ | ,, | ೧೬ |
| ಶ್ವಾಸದಪೂರ್ವರೂಪ | ,, | ೧೭ |
| ಶ್ವಾಸದ ಸಂಪ್ರಾಪ್ತಿ | ,, | ೧೮ |

| ವಿಷಯ | ಪುಟ ಸಂಖ್ಯೆ | ಶ್ಲೋಕ ಸಂಖ್ಯೆ |
|---|---|---|
| ಮಹಾಶ್ವಾಸಲಕ್ಷಣ | ೭೯ | ೧೯ |
| ಊರ್ಧ್ವ ,, | ,, | ೨೨ |
| ಛಿನ್ನ ,, | ೮೦ | ೨೫ |
| ತಮಕ ,, | ,, | ೨೮ |
| ಪ್ರತಮಕ ,, | ೮೧ | ೩೬ |
| ಸಂತಮಕ ,, | ,, | ೩೭ |
| ಕ್ಷುದ್ರ ,, | ೮೨ | ೩೮ |
| ಸಾಧ್ಯಾಸಾಧ್ಯವಿಚಾರ | ,, | ೪೦ |
| **ಹೃದ್ರೋಗನಿದಾನ** | | |
| ಹೃದ್ರೋಗಕಾರಣ | ೧೫೯ | ೧ |
| ಹೃದ್ರೋಗಸಂಪ್ರಾಪ್ತಿ | ,, | ೨ |
| ವಾತಜ ಹೃದ್ರೋಗಲಕ್ಷಣ | ೧೬೦ | ೩ |
| ಪಿತ್ತಜ ,, | ,, | ೪ |
| ಕಫಜ ,, | ,, | ೫ |
| ಸನ್ನಿಪಾತಜ ,, | ,, | ೬ |
| ಕ್ರಿಮಿಜ ,, | ,, | ೬ |
| ಕ್ರಿಮಿಜದ ವಿಶೇಷಲಕ್ಷಣ | ೧೬೧ | ೭ |
| **ಮಾಧವನಿದಾನಪರಿಶಿಷ್ಟ** | | |
| ೧ ಫಿರಂಗರೋಗನಿದಾನ | ೩೮೩ | |
| ೨ ಸೋಮರೋಗನಿದಾನ | ೩೮೫ | |

**ಓಂ ನಮಃ ಪ್ರಜಾಪತ್ಯಶ್ವಿಬಲಭಿದ್ಧನ್ವಂತರಿ ಚರಕ ಸುಶ್ರುತಪ್ರಭೃತಿಭ್ಯೋ ಮುನಿಭ್ಯೋಮಹದ್ಭ್ಯೋಗುರುಭ್ಯಃ.**

# ಮಾಧವನಿದಾನ

## ಮಧುಕೋಶಾನುಸಾರ ಕರ್ನಾಟಕಾನುವಾದ ಸಹಿತ.

**ಪ್ರಣಮ್ಯಜಗದುತ್ಪತ್ತಿಸ್ಥಿತಿಸಂಹಾರಕಾರಣಂ ||**
**ಸ್ವರ್ಗಾಪವರ್ಗಯೋರ್ದ್ವಾರಂ ತ್ರೈಲೋಕ್ಯಶರಣಂಶಿವಂ || ೧ ||**

ಮಾಧವಕರನೆಂಬ ವೈದ್ಯ ಶ್ರೇಷ್ಠನು ಮಹರ್ಷಿ ಪ್ರೋಕ್ತಗಳಾದ ಆಯುರ್ವೇದ ಗ್ರಂಥಗಳಲ್ಲಿ ಅಲ್ಲಲ್ಲಿ ಹೇಳಲ್ಪಟ್ಟಿರುವ ರೋಗಗಳ ಲಕ್ಷಣ ಮತ್ತು ಕಾರಣಗಳನ್ನು ಸಂಗ್ರಹಿಸಿಯೂ, ಎಲ್ಲಿಯೂ ಹೇಳಲ್ಪಡದೆ ಇರುವ ರೋಗಗಳ ಸ್ವರೂಪ ಮತ್ತು ಕಾರಣಗಳನ್ನು ತಾನೇ ಕಲ್ಪಿಸಿಯೂ, ರೋಗನಿರ್ಣಯ ವಿಷಯದಲ್ಲಿ ಅತ್ಯಂತ ಸಹಾಯಕವಾದ ಮಾಧವನಿದಾನವೆಂಬ ವೈದ್ಯ ಗ್ರಂಥವನ್ನು ರಚನೆಮಾಡಿದನು. ಗ್ರಂಥ ಪ್ರಾರಂಭದಲ್ಲಿ ಗ್ರಂಥಕಾರರ ಪದ್ಧತಿಯಂತೆ ಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿ ಹೊಂದಲೆಂಬ ಸಂಕಲ್ಪದಿಂದ ಪರಮೇಶ್ವರನ ನಮಸ್ಕಾರ ರೂಪವಾದ ಮಂಗಳ ಶ್ಲೋಕವನ್ನು ರಚಿಸಿ ಬರೆದಿದ್ದಾನೆ. ಪ್ರಪಂಚದ ಉತ್ಪತ್ತಿ, ಸ್ಥಿತಿ, ನಾಶ ಇವುಗಳಿಗೆ ಕಾರಣನಾಗಿಯೂ, ಸ್ವರ್ಗ ಮತ್ತು ಅಪವರ್ಗ ಎಂದರೆ ಮೋಕ್ಷ ಇವುಗಳಿಗೆ ದ್ವಾರ ಭೂತನಾಗಿಯೂ, ಸ್ವರ್ಗ ಮತ್ತು ಪಾತಾಳ ಲೋಕಗಳಿಗೆ ರಕ್ಷಕನಾಗಿಯೂ ಇರುವ ಪರಮೇಶ್ವರನನ್ನು ನಮಸ್ಕರಿಸಿ ಗ್ರಂಥವನ್ನು ಪ್ರಾರಂಭಿಸುವೆನು.

**ನಾನಾಮುನೀನಾಂವಚನೈರಿದಾನೀಂ |**
**ಸಮಾಸತಸ್ಸದ್ಭಿಷಜಾಂನಿಯೋಗಾತ್ ||**

**ಸೋಪದ್ರವಾರಿಷ್ಟನಿದಾನಲಿಂಗೋ |**
**ನಿಬಧ್ಯತೆರೋಗವಿನಿಶ್ಚಯೋಯಂ || ೨ ||**

ಗ್ರಂಥದಲ್ಲಿ ಸಂಗ್ರಹಿಸಿ ಬರೆದಿರುವ ವಿಷಯಗಳ ಸೂಚನೆಯನ್ನು ಮೊದಲು **ಹೇಳುತ್ತಾನೆ.** ಚರಕ, ಸುಶ್ರುತ ಮೊದಲಾದ ಆಯುರ್ವೇದಶಾಸ್ತ್ರ ಪ್ರವರ್ತಕರಾದ ಋಷಿಗಳ ವಚನಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚನೆಮಾಡಿ ಆಗಿನ ಕಾಲದಲ್ಲಿದ್ದ ವೈದ್ಯರುಗಳು ರೋಗಗಳ ವಿಷಯದಲ್ಲಿ ಹೇಳತಕ್ಕ ಅಭಿಪ್ರಾಯಗಳನ್ನು ತಿಳಿದುಕೊಂಡು, ಅವರುಗಳ ಅಪ್ಪಣೆಯನ್ನು ಸಹ ಪಡೆದು, ಉಪದ್ರವ ಎಂದರೆ ರೋಗವು ಹುಟ್ಟಿದ ನಂತರ **ಹುಟ್ಟತಕ್ಕ ವಿಕಾರಗಳು; ಅರಿಷ್ಟ** ಎಂದರೆ ರೋಗಿಯಲ್ಲಿ ಕಾಣಬರುವ ಮರಣ **ಚಿಹ್ನೆಗಳು; ನಿದಾನವೆಂದರೆ ರೋಗವನ್ನು ಹುಟ್ಟಿಸತಕ್ಕ ಕಾರಣಗಳು; ಲಿಂಗ** ಎಂದರೆ

ರೋಗವನ್ನು ಸ್ಪಷ್ಟವಾಗಿ ತೋರಿಸತಕ್ಕ ಕಾರಣಗಳು; ಇವುಗಳ ವಿವರಣೆಯೊಡ ಕೂಡಿರುವ ರೋಗನಿರ್ಣಯ ವಿಷಯದಲ್ಲಿ ಮುಖ್ಯ ಸಾಧನಭೂತವಾದ ಗ್ರಂಥವನ್ನು ಬರೆಯುತ್ತೇನೆ.

ನಾನಾತಂತ್ರವಿಹೀನಾನಾಂಭಿಷಜಾಮಲ್ಪಮೇಧಸಾಂ ||
ಸುಖಂವಿಜ್ಞಾತುಮಾತಂಕಮಯಮೇವಭವಿಷ್ಯತಿ || ೩ ||

ಪುರಾತನಗಳಾದ ಮಹರ್ಷಿಪ್ರಣೀತಗಳಾದ ಆಯುರ್ವೇದ ಗ್ರಂಥಗಳನ್ನೋದಿ ಕೊಂಡು ಅದರಿಂದಲೇ ರೋಗನಿಶ್ಚಯ ಮಾಡಬಹುದಾಗಿರುವಲ್ಲಿ ಹೊಸದಾಗಿ ಗ್ರಂಥ ರಚನಾ ಪ್ರಯತ್ನವೇಕೆ? ಎಂಬ ಪ್ರಶ್ನೆಯನ್ನು ಮನಸ್ಸಿನಲ್ಲಿ ತಂದುಕೊಂಡು ಈ ಶ್ಲೋಕ ವನ್ನು ಬರೆದಿರುತ್ತಾನೆ. ಋಷಿಪ್ರೋಕ್ತಗಳಾದ ಆಯುರ್ವೇದ ಸಂಹಿತೆಗಳು ದುರವಗಾಹ ಗಳಾಗಿವೆ, ಅಲ್ಲದೆ ರೋಗಲಕ್ಷಣಗಳು ಒಂದೇ ಕಡೆಯಲ್ಲಿರದೆ ಅಲ್ಲಲ್ಲಿ ವಿಶಕಲಿತಗಳಾ ಗಿವೆ. ಇವುಗಳನ್ನೆಲ್ಲಾ ಏಕೀಕರಿಸಿ ಅರ್ಥಮಾಡಿಕೊಳ್ಳಲು ಅಶಕ್ತರಾದ ವೈದ್ಯರಿಗೆ ಎಲ್ಲಾ ವಿಷಯಗಳಿಂದ ಕೂಡಿದ ರೋಗಲಕ್ಷಣಗಳನ್ನು ಒಂದೇಕಡೆಯಲ್ಲಿ ಸೇರಿಸಿ ಪುಸ್ತ ಕವಾಗಿ ಬರೆದಲ್ಲಿ ಸುಖವಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂಬ ಅಭಿಪ್ರಾಯ ದಿಂದ ಈ ನವೀನ ಗ್ರಂಥರಚನೆಯಲ್ಲಿ ಪ್ರಯತ್ನ ಮಾಡಲಾಗಿದೆ.

ನಿದಾನಂಪೂರ್ವರೂಪಾಣಿರೂಪಾಣ್ಯುಪಶಯಸ್ತಥಾ ||
ಸಂಪ್ರಾಪ್ತಿಶ್ಚೇತಿವಿಜ್ಞಾನಂರೋಗಾಣಾಂಪಂಚಧಾಸ್ಮೃತಂ ||೪||

ಗ್ರಂಥಾರಂಭದಲ್ಲಿ ಹೇಳಿದಮೇರೆಗೆ ರೋಗನಿಶ್ಚಯಮಾಡತಕ್ಕ ಉಪಾಯಗ ಳನ್ನು ವಿವರಿಸುತ್ತಾನೆ. ನಿದಾನ, ಪೂರ್ವರೂಪ, ರೂಪ, ಉಪಶಯ, ಸಂಪ್ರಾಪ್ತಿ ( ಇವು ಗಳ ಪ್ರತ್ಯೇಕ ವಿವರಣೆಯು ಮುಂದೆ ಕೊಡಲ್ಪಡುತ್ತದೆ. ) ಎಂಬದಾಗಿ ರೋಗಗಳನ್ನು ಇಂತಹ ರೋಗವೇ ಇದೆಂದು ಗುರ್ತಿಸಲು ಉಪಾಯಗಳು ಐದು ವಿಧವಾಗಿವೆ. ವಿಚಾರ- ರೋಗಗಳನ್ನು ಗುರ್ತಿಸಲು ಐದು ಉಪಾಯಗಳೆಂದು ಹೇಳಿದೆಯಷ್ಟೆ; ಈ ಐದು ಉಪಾಯಗಳೂ ಬೇರೆ ಬೇರೆಯಾಗಿ ರೋಗಗಳನ್ನು ಗುರ್ತಿಸಲು ಕಾರಣವಾಗುತ್ತ ವೆಯೇ, ಅಥವಾ ಎಲ್ಲವೂ ಕೂಡಿ ರೋಗಗಳನ್ನು ಗುರ್ತಿಸಲು ಕಾರಣವಾಗುತ್ತವೆಯೇ, ಎಂದು ಒಂದು ಪ್ರಶ್ನೆಯು ಬರುತ್ತದೆ. ಹಿಂದೆ ಹೇಳಿರುವ ನಿದಾನ, ಪೂರ್ವರೂಪ, ರೂಪ ಮೊದಲಾದ ಐದೂ ರೋಗನಿರ್ಣಯ ವಿಷಯದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿಯೂ ಮತ್ತು ಎಲ್ಲವೂ ಕೂಡಿಯೂ ಉಭಯ ವಿಧದಲ್ಲಿಯೂ ಕಾರಣಗಳಾಗುತ್ತವೆ. ಅಲ್ಲದೆ ನಿದಾನವೇ ಮೊದಲಾದ ಐದಕ್ಕೂ ರೋಗನಿಶ್ಚಯ ವಿಷಯದಲ್ಲಿ ಬೇರೆ ಬೇರೆ ಪ್ರಯೋಜ ನಗಳು ಸಹ ಇವೆ. ಪ್ರಯೋಜನಗಳಾವವೆಂದರೆ- ಮೊದಲು ನಿದಾನ ಒಂದನ್ನು ಇಟ್ಟು ಕೊಂಡಿದ್ದೇವೆ, ಮಿಕ್ಕವುಗಳಿಲ್ಲವೆಂದು ಭಾವಿಸೋಣ; ಹಾಗಾದರೆ ಪಾಂಡುರೋಗಕ್ಕೆ ಮೃದ್ಭಕ್ಷಣ ( ಮಣ್ಣನ್ನು ತಿನ್ನುವುದು ) ವು ಕಾರಣ; ಛರ್ದಿರೋಗಕ್ಕೆ ಮಕ್ಷಿಕ (ನೊಣ) ವನ್ನು ಭಕ್ಷಿಸುವುದು ಕಾರಣ ಎಂಬದಾಗಿ ಒಂದೇ ಕಾರಣದಿಂದ ರೋಗವು ಹುಟ್ಟತಕ್ಕ ಕಡೆಗಳಲ್ಲೆಲ್ಲಾ ನಿದಾನವನ್ನೊಂದನ್ನೇ ಹೇಳಿದರೂ ಸಾಕಾಗ ಬಹುದು. ಆದರೆ ಒಂದೇ ನಿದಾನ (ಕಾರಣ) ದಿಂದ ಹುಟ್ಟತಕ್ಕ ಜ್ವರ, ಗುಲ್ಮ ಮೊದಲಾದ ಎರಡೆರಡು ರೋಗಗ ಳನ್ನು ಗುರ್ತಿಸುವ ಸಂದರ್ಭದಲ್ಲಿ ಎರಡು ರೋಗಕ್ಕೂ ನಿದಾನ ಒಂದಾದರೂ ಪೂರ್ವರೂ

ಕವು ಪ್ರತ್ಯೇಕ ವಿರುವುದರಿಂದ ಅಂತಹ ರೋಗನಿಶ್ಚಯಕ್ಕಾದರೂ, ಪೂರ್ವರೂಪವನ್ನು ಖಂಡಿತವಾಗಿ ಅಂಗೀಕಾರ ಮಾಡಲೇಬೇಕಾಯಿತು. ಚಿಕಿತ್ಸಾಸೌಕರ್ಯಾರ್ಥವಾಗಿಯೂ ಒಂದೇ ಕಾರಣದಿಂದ ಹುಟ್ಟತಕ್ಕ ಅನೇಕ ರೋಗಗಳ ವಿಷಯದಲ್ಲಿ ನಿಸ್ಸಂಶಯವಾಗಿ ರೋಗಗಳನ್ನು ಗುರ್ತಿಸಿಕೊಳ್ಳುವುದಕ್ಕಾಗಿಯೂ, ಅದ್ಯಾಪಿ- ನಿದಾನ ಮತ್ತು ಪೂರ್ವರೂ ಎಂಬ ಎರಡನ್ನಿಟ್ಟುಕೊಂಡು ಮಿಕ್ಕವುಗಳನ್ನು ವಿಸರ್ಜಿಸುವ ಎಂಬದಾಗಿ ಭಾವಿಸಿದ ರೋಗನಿರ್ಣಯವೇನೋ ಈ ಎರಡರಿಂದಲೇ ಆದರೂ ರೋಗವು ಸಾಧ್ಯವೆ, ಅಸಾಧ್ಯವೆ ಎಂಬ ವಿಚಾರವನ್ನು ನಿರ್ಣಯ ಮಾಡುವಾಗ್ಗೆ "**ಹೇತವಃಪೂರ್ವರೂಪಾಣಿ ರೂಪಾಣ್ಯಲ್ಪಾನಿಯಸ್ಯವೈ**" ಎಂಬ ಶ್ಲೋಕದಲ್ಲಿ ನಿದಾನ, ಪೂರ್ವರೂಪ ಮತ್ತು ರೂಪಗಳು ಯಾವ ರೋಗದಲ್ಲಿ ಸ್ವಲ್ಪವಾಗಿ ಕಾಣುತ್ತವೋ ಅಂತಹ ರೋಗವನ್ನು ಸುಖಸಾಧ್ಯವೆಂದು ತಿಳಿಯಬೇಕು. ಎಂದು ಹೇಳಿರುವಂತೆ ರೋಗದ ಸಾಧ್ಯಾಸಾಧ್ಯತ್ವವನ್ನು ನಿರ್ಣಯಿಸುವಾಗ್ಯೆ ರೂಪವು ಅವಶ್ಯಕ. ಅಲ್ಲದೆ "**ನಿದಾನಪೂರ್ವರೂಪಾಣಾಂರೂಪಾಣಾಂಮಧ್ಯಮೇಬಲೆ**" ಎಂಬ ಶ್ಲೋಕದಲ್ಲಿ ಚರಕಾಚಾರ್ಯರು ನಿದಾನ, ಪೂರ್ವರೂಪ, ರೂಪ ಇವುಗಳು ಯಾವ ರೋಗದಲ್ಲಿ ಮಧ್ಯಮಬಲವಾಗಿರುತ್ತವೆಯೋ, ಅಂತಹ ರೋಗವು ಕಷ್ಟ ಸಾಧ್ಯವೆಂಬದಾಗಿ ಹೇಳಿರುವುದರಿಂದ ಕೂಡ ರೋಗಗಳ ಸುಖಸಾಧ್ಯತ್ವ, ಕಷ್ಟಸಾಧ್ಯತ್ವಗಳನ್ನು ನಿರ್ಣಯಿಸುವುದಕ್ಕೆ ರೂಪವನ್ನಿಟ್ಟುಕೊಳ್ಳಲೇಬೇಕು. ಇನ್ನು ಉಪಶಯ, ಸಂಪ್ರಾಪ್ತಿ ಈ ಎರಡರ ವಿಷಯಮಾತ್ರ ಉಳಿಯುತ್ತದೆ. ವ್ಯಾಧಿಯ ನಿದಾನ, ಪೂರ್ವರೂಪ, ರೂಪಾದಿಗಳು ಸ್ಪಷ್ಟವಾಗಿ ಗೊತ್ತಾಗದಿರುವಲ್ಲಿ ರೋಗವನ್ನು ನಿರ್ಣಯಿಸಬೇಕಾದರೆ "**ಗೂಢಲಿಂಗಂವ್ಯಾಧಿಮುಪಶಯಾನುಪಶಯಾಭ್ಯಾಂ ಪರೀಕ್ಷೇತ**" ಎಂಬುದರಲ್ಲಿ ಚರಕಾಚಾರ್ಯರು ಇನ್ನು ಯಾವ ರೀತಿಯಿಂದಲೂ ರೋಗನಿರ್ಣಯವು ಸ್ಪಷ್ಟವಾಗದೆಹೋದಲ್ಲಿ ಉಪಶಯ ( ರೋಗಕ್ಕೆ ಹಿತವಾದ ಔಷಧಾಹಾರ ವಿಹಾರಗಳು ) ಮತ್ತು ಅನುಪಶಯ ( ರೋಗಕ್ಕೆ ಹಿತವಲ್ಲದ ಆಹಾರ ವಿಹಾರಗಳು) ಇವುಗಳ ಮೂಲಕವಾಗಿ ಯಾಗಲಿ ರೋಗವನ್ನು ಪರೀಕ್ಷಿಸಿ ನಿರ್ಣಯಮಾಡಬೇಕು ಎಂಬದಾಗಿ ಹೇಳಿರುವಂತೆ ಉಪಶಯವುಸಹ ಕೆಲವು ಸಂದರ್ಭಗಳಲ್ಲಿ ಅವಶ್ಯಕವೆಂದಹಾಗಾಯಿತು. ಇನ್ನು ಸಂಪ್ರಾಪ್ತಿಯನ್ನು ಬಿಟ್ಟರೂ ನಿರ್ವಾಹವಿಲ್ಲ. ಹೇಗೆಂದರೆ ನಿದಾನ, ಪೂರ್ವರೂಪ, ರೂಪೋಪಶಯಾದಿಗಳಿಂದ ಸಂಪೂರ್ಣವಾಗಿ ರೋಗನಿಶ್ಚಯ ಮಾಡಿಕೊಂಡರೂ ಸಂಪ್ರಾಪ್ತಿಯಿಲ್ಲದಿದ್ದರೆ ಚಿಕಿತ್ಸೋಪಯೋಗಿಗಳಾದ ರೋಗವಿಭಾಗಗಳು ತಿಳಿಯುವುದಿಲ್ಲ. ಮತ್ತು ರೋಗಬಲಾಬಲಗಳು, ದಿನ, ರಾತ್ರಿ, ಋತು, ಅಯನಮೊದಲಾಗಿ ಚಿಕಿತ್ಸೋಪಯೋಗಿಗಳಾದ ಅನೇಕ ವಿಷಯಗಳು ತಿಳಿಯದೆ ಹೋಗುತ್ತವೆ. ಆದ್ದರಿಂದ ಸಂಪ್ರಾಪ್ತಿಯನ್ನು ಬಿಟ್ಟರೂ ನಿರ್ವಾಹವಿಲ್ಲ. ಇನ್ನೂ ಈ ಸಂಪ್ರಾಪ್ತಿಯ ವಿಷಯದಲ್ಲಿ ತಿಳಿಯಬೇಕಾದ ವಿಷಯಗಳಿವೆ. ಅವುಗಳನ್ನು ಪಂಚಲಕ್ಷಣ ನಿದಾನದಲ್ಲಿ ಸಂಪ್ರಾ[illegible] ಬರೆಯುವಾಗ ವಿಸ್ತರಿಸಿ ಬರೆಯಲಾಗುತ್ತದೆ. ಈ ನಿದಾ[illegible]
ಮಾಡತಕ್ಕ ವಿಷಯದಲ್ಲಿಯೂ [illegible]

ಇದರಿಂದ ಸೌಕರ್ಯ ಉಂಟಾಗಲೆಂಬುವುದೇ ಗ್ರಂಥಕಾರರ ಅಭಿಪ್ರಾಯವೆಂದು ತಿಳಿಯುತ್ತದೆ.

ನಿಮಿತ್ತಹೇತ್ವಾಯತನಪ್ರತ್ಯಯೋತ್ಥಾನಕಾರಣೈಃ ||
ನಿದಾನಮಾಹುಃಪರ್ಯಾಯೈಃ.........................

ಮೊದಲನೆಯದಾದ ನಿದಾನದ ಲಕ್ಷಣವೇನಂದರೆ 'ನಿಶ್ಚಿತ್ಯದೀಯತ ಇತಿನಿದಾನಂ' ಎಂಬ ಶಬ್ದವ್ಯುತ್ಪತ್ತಿಯಿಂದ ರೋಗವನ್ನು ನಿಶ್ಚಯಿಸಲು ಮುಖ್ಯ ಕಾರಣ ಎಂದರೆ ರೋಗೋತ್ಪತ್ತಿಗೆ ಮುಖ್ಯಕಾರಣವಾದದ್ದೇ ನಿದಾನವೆನ್ನಿಸಿಕೊಳ್ಳುತ್ತದೆ. ಈ ನಿದಾನವೆಂಬುವುದಕ್ಕೆ ಶಾಸ್ತ್ರದಲ್ಲಿ ನಿಮಿತ್ತ, ಹೇತು, ಆಯತನ, ಪ್ರತ್ಯಯ, ಉತ್ಥಾನಕಾರಣಗಳೆಂಬ ಪರ್ಯಾಯಪದಗಳನ್ನು ಶಾಸ್ತ್ರವ್ಯವಹಾರಾರ್ಥವಾಗಿ ನಿಶ್ಚಯಿಸಿದ್ದಾರೆ.

...... ....................ಪ್ರಾಗ್ರೂಪಂಯೇನಲಕ್ಷ್ಯತೆ || ೫ ||
ಉತ್ಪಿತ್ಸುರಾಮಯೋದೋಷವಿಶೇಷೇಣಾನಧಿಷ್ಠಿತಃ ||
ಲಿಂಗಮವ್ಯಕ್ತಮಲ್ಪತ್ವಾದ್ವ್ಯಾಧೀನಾಂತದ್ಯಥಾಯಥಂ || ೬ ||

ಪೂರ್ವರೂಪದ ಲಕ್ಷಣವನ್ನು ಹೇಳುತ್ತಾನೆ. ಪೂರ್ವರೂಪವು ಸಾಮಾನ್ಯಪೂರ್ವರೂಪ, ವಿಶೇಷಪೂರ್ವರೂಪ ಎಂಬದಾಗಿ ಎರಡು ವಿಧ. ಹುಟ್ಟತಕ್ಕ ರೋಗವು ಇಂತಹದೋಷವೈಷಮ್ಯದಿಂದಲೇ ಹುಟ್ಟಿತೆಂದು ನಿರ್ಣಯಿಸಲಶಕ್ಯವಾಗುವಷ್ಟುಮಟ್ಟಿಗೆ ಸೂಕ್ಷ್ಮವಾಗಿ ಇದ್ದುಕೊಂಡು ಆಯಾಸಾದಿಗಳಿಂದ ರೋಗವು ಹುಟ್ಟುತ್ತದೆಂದು ಮಾತ್ರ ಕಾಣಿಸಿಕೊಳ್ಳುತ್ತದೆಯೋ ಅಂತಹ ಆಯಾಸಾದಿಗಳು ಸಾಮಾನ್ಯಪೂರ್ವರೂಪಕ್ಕೆ ಉದಾಹರಣ. ಇನ್ನು, ಮುಂದೆ ಹೇಳತಕ್ಕ ವ್ಯಾಧಿಯ ಸಂಪೂರ್ಣ ಲಕ್ಷಣಗಳೇ ಸೂಕ್ಷ್ಮಾವಸ್ಥೆಯಲ್ಲಿದ್ದುಕೊಂಡು ಸ್ಪಷ್ಟವಾಗಿ ಕಾಣದಿರುವುದೇ ವಿಶೇಷಪೂರ್ವರೂಪಕ್ಕೆ ಉದಾಹರಣ.

ತದೇವವ್ಯಕ್ತತಾಂಯಾತಂರೂಪಮಿತ್ಯಭಿಧೀಯತೆ ||
ಸಂಸ್ಥಾನಂವ್ಯಂಜನಂಲಿಂಗಂಲಕ್ಷಣಂಚಿಹ್ನಮಾಕೃತಿಃ || ೭ ||

ಹಿಂದಿನ ಶ್ಲೋಕದಲ್ಲಿ ಹೇಳಿದ ಆಯಾಸಾದಿ ಸಾಮಾನ್ಯಪೂರ್ವರೂಪಗಳೂ, ಸೂಕ್ಷ್ಮಾವಸ್ಥೆಯಲ್ಲಿರುವ ವ್ಯಾಧಿಯ ಸಂಪೂರ್ಣ ಲಕ್ಷಣಾತ್ಮಕಗಳಾದ ವಿಶೇಷ ಪೂರ್ವರೂಪಗಳು ಕೂಡ ರೋಗಗಳನ್ನು ಸ್ಪಷ್ಟವಾಗಿ ತಿಳಿಯಿಸುವಷ್ಟುಮಟ್ಟಿಗೆ ವ್ಯಕ್ತಗಳಾದಲ್ಲಿ ಅಂತ ಅವಸ್ಥೆಗೆ ರೂಪವೆಂಬ ಹೆಸರು. ಶಾಸ್ತ್ರೀಯ ವ್ಯವಹಾರಾರ್ಥವಾಗಿ ರೂಪದ ಪರ್ಯಾಯಪದಗಳನ್ನು ಹೇಳುತ್ತಾನೆ. ಸಂಸ್ಥಾನ, ವ್ಯಂಜನ, ಲಿಂಗ, ಲಕ್ಷಣ, ಚಿಹ್ನ, ಆಕೃತಿ ಇಂಗಳು ರೂಪದ ಪರ್ಯಾಯಪದಗಳು.

ಹೇತುವ್ಯಾಧಿವಿಪರ್ಯಸ್ತವಿಪರ್ಯಸ್ತಾರ್ಥಕಾರಿಣಾಂ ||
ಔಷಧಾನ್ನವಿಹಾರಾಣಾಮುಪಯೋಗಂ ಸುಖಾವಹಂ || ೮ ||
...ನಾಂಧೇಸ್ಸಹಿಸಾತ್ಮ್ಯಮಿತಿಸ್ಮೃತಃ ||

... ರೋಗಿಗೆ ರೋಗದಿಂದುಂಟ

ರೋಗವನ್ನು ಹುಟ್ಟಿಸತಕ್ಕ ಪ್ರಕುಪಿತಗಳಾದ ವಾತ, ಪಿತ್ತ, ಕಫಗಳು, ವ್ಯಾಧಿ ಎಂದರೆ ಇಂತಹ ಪ್ರಕುಪಿತಗಳಾದ ದೋಷಗಳಿಂದ ಉತ್ಪನ್ನಗಳಾದ ಜ್ವರಾದಿ ವಿಕಾರಗಳು, ಇವುಗಳಿಗೆ ವಿಪರ್ಯಸ್ತವೆಂದರೆ ಪ್ರತಿಕೂಲವಾದವುಗಳು ಮತ್ತು ವಿಪರ್ಯಸ್ತಾರ್ಥಕಾರಿ ಎಂದರೆ ಪ್ರತಿಕೂಲವಾಗಿ ಕಾರ್ಯಮಾಡಿ ರೋಗಶಾಂತಿ ಮಾಡತಕ್ಕವುಗಳು ಇಂತಹ ಔಷಧ, ಆಹಾರ, ವಿಹಾರಗಳ ಉಪಯೋಗದಿಂದ ರೋಗನಿವೃತ್ತಿ ರೂಪವಾದ ಸುಖವುಂಟಾದರೆ ಅಂತಹ ಔಷಧಾಹಾರ ವಿಹಾರಗಳಿಗೆ ಉಪಶಯುವೆಂದೂ, ಸಾತ್ಮ್ಯವೆಂದೂ ಹೆಸರು. ಉದಾಹರಣಗಳನ್ನು ಹೇಳಿ ಆರು ವಿಧವಾದ ಉಪಶಯುಗಳನ್ನೂ ಕ್ರಮವಾಗಿ ವಿವರಿಸೋಣ.

(೧) ಹೇತು ವಿಪರ್ಯಸ್ತ ( ರೋಗಕಾರಣ ಪ್ರತಿಕೂಲ ) ವಾದ ಔಷಧರೂಪ ಉಪಶಯಕ್ಕೆ ಉದಾಹರಣ– ಶೀತದಿಂದ ಉತ್ಪನ್ನವಾದ ಜ್ವರಕ್ಕೆ ಉಷ್ಣವಾದ ಶುಂಠಿಯ ಕಷಾಯುವು ''ಯೇಚಶೀತಕೃತಾರೋಗಾಸ್ತೇಷಾಮುಷ್ಣಂಭಿಷಗ್ಜಿತಂ '' ಎಂದರೆ ಶೀತದಿಂದ ಹುಟ್ಟಿತಕ್ಕ ರೋಗಗಳಿಗೆ ಉಷ್ಣವಾದವುಗಳೇ ಔಷಧಗಳು ಎಂಬ ಪ್ರಮಾಣಾನುಗುಣವಾಗಿ ಕಾರಣಪ್ರತಿಕೂಲವಾದ ಔಷಧ.

ಹೇತುವಿಪರೀತವಾದಆಹಾರರೂಪಉಪಶಯಕ್ಕೆ ಉದಾಹರಣ.– ಹೆಚ್ಚಾದ ಶ್ರಮದಿಂದ ವಾಯುಪ್ರಕೋಪವಾಗಿ ಜ್ವರವನ್ನು ಹುಟ್ಟಿಸಿದ್ದಲ್ಲಿ ಅಂತಹ ಜ್ವರನಿವೃತ್ತಿಗಾಗಿ ಪ್ರಯೋಗಿಸತಕ್ಕ ಔಷಧದ ಜೊತೆಯಲ್ಲಿ ಉಪದೇಶಿಸತಕ್ಕ ಮಾಂಸರಸಯುಕ್ತವಾದ ಆಹಾರರೂಪವಾದ ಪಥ್ಯವು ಹೇತುವಿಪರ್ಯಸ್ತ ಆಹಾರರೂಪವಾದ ಉಪಶಯು.

ಹೇತುವಿಪರೀತವಾದವಿಹಾರರೂಪಉಪಶಯಕ್ಕೆ ಉದಾಹರಣ.– ಹಗಲು ಮಲಗೋಣದರಿಂದುಟಾದ ಕಫಪ್ರಕೋಪಜನ್ಯವಾದ ವ್ಯಾಧಿಗೆ ಪ್ರಯೋಗಿಸತಕ್ಕ ಔಷಧದ ಜೊತೆಯಲ್ಲಿ ಉಪದೇಶಿಸಬಹುದಾದ ರಾತ್ರಿ ಜಾಗರಣರೂಪವಾದರೂಕ್ಷವಾದವಿಹಾರವು ಹೇತುಪ್ರತಿಕೂಲವಿಹಾರರೂಪವಾದ ಉಪಶಯು.

(೨) ವ್ಯಾಧಿವಿಪರ್ಯಸ್ತಔಷಧರೂಪಉಪಶಯಕ್ಕೆ ಉದಾಹರಣ– ಅತಿಸಾರರೋಗದಲ್ಲಿ ಸ್ತಂಭನೌಷಧಗಳಾದ ಪಾಠಾ ಅಂದರೆ ಅಗುಳುಶುಂಠಿ ಮೊದಲಾದವುಗಳು ಅತಿಸಾರರೋಗವನ್ನು ಶಮನಮಾಡುವುದರಿಂದ ವ್ಯಾಧಿವಿಪರ್ಯಸ್ತೌಷಧರೂಪೋಪಶಯಕ್ಕೆ ಉದಾಹರಣವಾಯಿತು. ಹೀಗೆಯೇ ವಿಷಜನ್ಯರೋಗಗಳಿಗೆ ಶಿರೀಷ(ಬಾಗೆ)ವೂ. ಕುಷ್ಠರೋಗಕ್ಕೆ ಖದಿರ (ಕಗ್ಗಲಿ) ವೂ, ಮೇಹರೋಗಕ್ಕೆ ಅರಿಶಿನವೂ, ವ್ಯಾಧಿ ವಿಪರ್ಯಸ್ತೌಷಧರೂಪೋಪಶಯುಗಳು.

ವ್ಯಾಧಿವಿಪರ್ಯಸ್ತವಾದ ಅನ್ನರೂಪಉಪಶಯಕ್ಕೆ ಉದಾಹರಣ– ಅತಿಸಾರರೋಗದಲ್ಲಿ ರೋಗನಿವಾರಕವಾದ ಔಷಧದ ಜೊತೆಯಲ್ಲಿ ಪಥ್ಯವಾಗಿ ಉಪದೇಶಿಸುವ ಮಸೂರಧಾನ್ಯ ಎಂದರೆ ಒಂದು ಜಾತಿಯ ತೊಗರೀಬೇಳೆ; ಇದು ಅತಿಸಾರವನ್ನು ಪ್ರತಿಭಟಿಸಿ ನಿಗ್ರಹಿಸುವುದರಿಂದ ವ್ಯಾಧಿವಿಪರ್ಯಸ್ತವಾದ ಅನ್ನರೂಪಉಪಶಯಕ್ಕೆ ಉದಾಹರಣವಾಯಿತು.

ವ್ಯಾಧಿವಿಪರ್ಯಸ್ತವಾದವಿಹಾರರೂಪಉಪಶಯಕ್ಕೆ ಉದಾಹರಣ— ರೋಗನಿವರ್ತಕವೆಂದು ಪ್ರಸಿದ್ಧಗಳಾಗಿರುವ ಸೂರ್ಯನಮಸ್ಕಾರ, ಅಶ್ವತ್ಥಪ್ರದಕ್ಷಿಣಾದಿ

ಗಳು ವ್ಯಾಧಿನಿವರ್ತಕಗಳಾದುದರಿಂದ ವ್ಯಾಧಿವಿಪರ್ಯಸ್ತಗಳಾದ ವಿಹಾರರೂಪಉಪಶಯಕ್ಕೆ ಉದಾಹರಣವಾಗಬಹುದು.

(೩) ಹೇತುವಿಪರ್ಯಸ್ತಾರ್ಥಕಾರಿ ಔಷಧ ರೂಪವಾದ ಉಪಶಯಕ್ಕೆ ಉದಾಹರಣ- ಪಿತ್ತ ಪ್ರಧಾನವಾದ ಪಕ್ವವಾಗುತ್ತಿರುವ ವ್ರಣಶೋಥದಲ್ಲಿ ಉಷ್ಣವರ್ಧಕಗಳಾದ ದ್ರವ್ಯಗಳಿಂದ ಕೊಡತಕ್ಕ ಉಪನಾಹ ಎಂದರೆ ಶಾಖ, ಒತ್ತಡ ಮೊದಲಾದವುಗಳು. ಯದ್ಯಪಿ- ಉಷ್ಣವರ್ಧಕ ಪದಾರ್ಥಗಳ ಒತ್ತಡವು ನ್ಯಾಯವಾಗಿ ವ್ರಣ ಶೋಥಕ್ಕೆ ಕಾರಣವಾದ ಪಿತ್ತವರ್ಧಕವೇ ಆದರೂ ಫಲತಃ ಮಾತ್ರ ವ್ರಣಶೋಥವನ್ನು ಪಕ್ವಮಾಡಿ ಶಮನಮಾಡುವುದರಿಂದ, ಕಾರಣಭೂತವಾದ ಪಿತ್ತಕ್ಕೆ ಪ್ರತಿಕೂಲವಾದ ಕಾರ್ಯವನ್ನೇಮಾಡಿದ ಹಾಗಾಯಿತು. ಇದರಿಂದ ಹೇತು ವಿಪರ್ಯಸ್ತಾರ್ಥಕಾರಿ ಔಷಧರೂಪೋಪಶಯಕ್ಕೆ ಉದಾಹರಣ.

ಹೇತುವಿಪರ್ಯಸ್ತಾರ್ಥಕಾರಿ ಆಹಾರರೂಪಉಪಶಯಕ್ಕೆ ಉದಾಹರಣ- ಪಿತ್ತ ಪ್ರಧಾನವಾದ ವ್ರಣಶೋಥದಲ್ಲಿ ಪ್ರಯೋಗಮಾಡತಕ್ಕ ಔಷಧದ ಜೊತೆಗೆ ಪಥ್ಯವಾಗಿ ಉಪದೇಶಮಾಡತಕ್ಕ ವಿದಾಹಿ (ಉಷ್ಣವರ್ಧಕ) ಗಳಾದ ಆಹಾರ ವಿಹಾರಗಳು ಯದ್ಯಪಿ ಸ್ವಭಾವತಃ ವಿದಾಹಿ ಗುಣವುಳ್ಳವುಗಳಾದ್ದರಿಂದ ಪಿತ್ತವರ್ಧಕಗಳಾದರೂ ಕಾರ್ಯತಃ ಮಾತ್ರ ಪಿತ್ತಜನ್ಯ ವ್ರಣಶೋಥನಿವರ್ತಕಗಳೇ ಆದ್ದರಿಂದ ವ್ರಣಶೋಥಹೇತುಭೂತವಾದ ಪಿತ್ತರೂಪಹೇತುವಿಪರ್ಯಸ್ತಾರ್ಥಕಾರಿಆಹಾರರೂಪಉಪಶಯಕ್ಕೆ ಉದಾಹರಣ.

ಹೇತುವಿಪರ್ಯಸ್ತಾರ್ಥಕಾರಿ ವಿಹಾರರೂಪಉಪಶಯಕ್ಕೆ ಉದಾಹರಣ- ವಾತ ಪ್ರಧಾನವಾದ ಉನ್ಮಾದ ರೋಗದಲ್ಲಿ ವಾತವರ್ಧಕಗಳಾದ ತ್ರಾಸನಭರ್ತ್ಸನಾದಿಗಳು; ಯದ್ಯಪಿ- ವಾತವರ್ಧಕಗಳಾದರೂ ವಾತಪ್ರಧಾನವಾದ ಉನ್ಮಾದರೋಗದಲ್ಲಿ ಫಲತಃ ಉನ್ಮಾದ ಶಾಮಕಗಳಾದ್ದರಿಂದ ಕಾರಣಭೂತವಾದ ವಾತ ವಿಪರೀತಾರ್ಥಕಾರಿ ವಿಹಾರರೂಪಉಪಶಯವಾಗುತ್ತದೆ.

(೪) ವ್ಯಾಧಿವಿಪರೀತಾರ್ಥಕಾರಿಔಷಧರೂಪವಾದ ಉಪಶಯಕ್ಕೆ ವಮನರೋಗದಲ್ಲಿ ವಮನವನ್ನು ನಿಲ್ಲಿಸಲು ವಮನಮಾಡಿಸತಕ್ಕ ಮದನಫಲಚೂರ್ಣವನ್ನು ಪ್ರಯೋಗಿಸುವುದು; ಯದ್ಯಪಿ- ಈ ಮದನಫಲಚೂರ್ಣವು ಸ್ವಭಾವತಃ ವಮನಕರವೇ ಆದರೂ ಫಲತಃವಮನವನ್ನು ನಿಲ್ಲಿಸುವುದರಿಂದ ವ್ಯಾಧಿವರ್ಧಕವಾದದ್ದೇ ವ್ಯಾಧಿ ನಿವೃತ್ತಿಮಾಡಿದಂತಾದ್ದರಿಂದ ವ್ಯಾಧಿವಿಪರೀತಕಾರ್ಯಕಾರಿ ಔಷಧರೂಪಉಪಶಯಕ್ಕೆ ಉದಾಹರಣ.

ವ್ಯಾಧಿವಿಪರೀತಾರ್ಥಕಾರಿ ಆಹಾರರೂಪಉಪಶಯಕ್ಕೆ ಅತಿಸಾರರೋಗದಲ್ಲಿ ವಿರೇಚನಾರ್ಥವಾಗಿ ಔಷಧವನ್ನು ಪ್ರಯೋಗಿಸಿ ಅದರ ಜೊತೆಗೆ ಕ್ಷೀರಪಾನವನ್ನು ಪಥ್ಯವಾಗಿ ಉಪದೇಶಿಸುವುದು. ಕ್ಷೀರಪಾನವು ಅತಿಸಾರವನ್ನು ಹೆಚ್ಚಿಸುವುದಾಗಿದ್ದರೂ ಫಲತಃ ಔಷಧದೊಡನೆ ಶೀಘ್ರ ವಿರೇಚನಮಾಡಿಸಿ ಅತಿಸಾರವನ್ನು ನಿಲ್ಲಿಸುವುದರಿಂದ ವ್ಯಾಧಿವಿಪರೀತಕಾರ್ಯವನ್ನೇ ಮಾಡಿದಂತಾಯಿತು. ಇದು ವ್ಯಾಧಿವಿಪರ್ಯಸ್ತಾರ್ಥಕಾರಿ ಆಹಾರರೂಪಉಪಶಯಕ್ಕೆ ಉದಾಹರಣವಾಯಿತು.

ವ್ಯಾಧಿವಿಪರ್ಯಸ್ತಾರ್ಥಕಾರಿವಿಹಾರರೂಪಉಪಶಯಕ್ಕೆ, ವಮನರೋಗದಲ್ಲಿ ವಮನವನ್ನೇ ನಿಲ್ಲಿಸುವುದಕ್ಕಾಗಿ ಗಂಟಲಿಗೆ ಕೈಯ್ಯಿಕ್ಕಿ ಮತ್ತೆ ವಮನ ಮಾಡಿಸೋ

ಳ್ಳುವುದು; ಇದಕ್ಕೆ ವೈದ್ಯಶಾಸ್ತ್ರದಲ್ಲಿ ಪ್ರವಹಣವೆಂದು ಹೆಸರು. ಯದ್ಯಪಿ ಈರೀತಿ ಯಾಗಿ ಗಂಟಲಿಗೆ ಕೈಯಿಕ್ಕಿ ವಮನಮಾಡುವುದು ವ್ಯಾಧಿವರ್ಧಕವೆಂದು ಕಂಡುಬಂದರೂ ಫಲತಃ ವ್ಯಾಧಿ ನಾಶಕವೇ ಆಗಿರುವುದರಿಂದ ವ್ಯಾಧಿವಿಪರ್ಯಸ್ತಾರ್ಥಕಾರಿವಿಹಾರರೂಪೋಪಶಯವಾದಹಾಗಾಯಿತು.

(೫) ಹೇತುವ್ಯಾಧಿವಿಪರೀತಾರ್ಥಕರಔಷಧರೂಪಉಪಶಯಕ್ಕೆ ಅಗ್ನಿಯಿಂದ ಸುಡಲ್ಪಟ್ಟ ಉಷ್ಣವಾದ ವ್ರಣಶೋಥಕ್ಕೆ ಅಗುರುಗಂಧವನ್ನು ಉಷ್ಣವಾದದ್ದನ್ನೇ ಲೇಪನ ಮಾಡುವುದು. ಅಗ್ನಿಯಿಂದ ಸುಡಲ್ಪಟ್ಟು ಸ್ವಯಂ ಉಷ್ಣವಾಗಿಯೇ ಇರುವ ವ್ರಣಕ್ಕೆ ಕೇವಲ ಉಷ್ಣವಾದ ಅಗುರುಗಂಧದ ಲೇಪವು ವ್ರಣಕಾರಣ ಮತ್ತು ವ್ಯಾಧಿರೂಪವಾದ ವ್ರಣ ಇದೆರಡಕ್ಕೂ ವಿರುದ್ಧವಾದರೂ ಸ್ವಭಾವತಃ ಅಗುರುಗಂಧ ಲೇಪವು ಅಗ್ನಿಪ್ಲುಷ್ಟ ವ್ರಣ ಶಮನಮಾಡುವುದರಿಂದ ಹೇತು, ವ್ಯಾಧಿ ಈ ಎರಡಕ್ಕೂ ವಿರುದ್ಧಕಾರ್ಯಕಾರಿ ಔಷಧರೂಪಉಪಶಯಕ್ಕೆ ಉದಾಹರಣವಾಗುತ್ತದೆ.

ಹೇತುವ್ಯಾಧಿವಿಪರ್ಯಸ್ತಾರ್ಥಕಾರಿಆಹಾರರೂಪೋಪಶಯಕ್ಕೆ ಉದಾಹರಣ— ಮದ್ಯಪಾನ ಮಾಡಿದ್ದರಿಂದ ಉಂಟಾಗತಕ್ಕ ಮದಾತ್ಯಯರೋಗದಲ್ಲಿ ರೋಗ ನಿವೃತ್ತಿಗೋಸ್ಕರವಾಗಿ ಪುನಃ ಮದ್ಯವನ್ನೇ ಪಾನಮಾಡಿಸುವುದು; ಸ್ವತಃ ಮದ್ಯವು ಮಿತಿಮೀರಿ ಪಾನಮಾಡುವುದರಿಂದ ಮದಾತ್ಯಯವೆಂಬರೋಗವನ್ನು ಹುಟ್ಟಿಸುವುದಾದರೂ ಸರಿಯಾದಕ್ರಮವರಿತು ಪಾನಮಾಡಿದಲ್ಲಿ ಮದಾತ್ಯಯ ರೋಗವನ್ನು ನಿವೃತ್ತಿ ಮಾಡುವುದರಿಂದ ಹೇತುವ್ಯಾಧ್ಯುಭಯ ವಿಪರ್ಯಸ್ತಾರ್ಥಕಾರಿಆಹಾರರೂಪಉಪಶಯಕ್ಕೆ ಉದಾಹರಣ.

ಹೇತುವ್ಯಾಧಿವಿಪರ್ಯಸ್ತಾರ್ಥಕಾರಿವಿಹಾರರೂಪಉಪಶಯಕ್ಕೆ, ಅತಿಯಾಗಿ ವ್ಯಾಯಾಮ ಮಾಡಿದ್ದರಿಂದ ಹುಟ್ಟತಕ್ಕ ಸಂಮೂಢವಾತವೆಂಬ ವಾಯುರೋಗದಲ್ಲಿ ನೀರಿನಲ್ಲಿ ಈಜಾಡುವಂತಹ ವ್ಯಾಯಾಮವೇ ಉಪದೇಶಿಸಲ್ಪಡುತ್ತದೆ. ಈ ವ್ಯಾಯಾಮವೇ ಯದ್ಯಪಿ— ಸಂಮೂಢವಾತವೆಂಬ ವಾತರೋಗಕ್ಕೆ ಕಾರಣವಾಗಿದ್ದರೂ ಈಜಾಡುವಂತಹ ವ್ಯಾಯಾಮವು ರೋಗನಿವರ್ತಕವಾಗಿ ಅನುಭವದಲ್ಲಿರುವುದರಿಂದ ಹೇತುವ್ಯಾಧಿವಿಪರ್ಯಸ್ತಾರ್ಥಕಾರಿ ವಿಹಾರರೂಪ ಉಪಶಯಕ್ಕೆ ಉದಾಹರಣ. ಇನ್ನು ಉಪಶಯದ ಪರ್ಯಾಯನಾಮಗಳನ್ನು ಹೇಳುತ್ತಾನೆ. 'ಸಹಿಸಾತ್ಮ್ಯಮಿತಿಸ್ಮೃತಃ' ಈ ಉಪಶಯಕ್ಕೇನೇ ಸಾತ್ಮ್ಯವೆಂಬ ನಾಮಾಂತರವೂ ಇದೆ. ಯದ್ಯಪಿ ಔಷಧಪ್ರಯೋಗ ಮಾಡುವುದು ಸಾಮಾನ್ಯವಾಗಿ ರೋಗನಿವೃತ್ತಿ ಮಾಡಿಸುವುದಕ್ಕಾಗಿ; ಔಷಧವು ರೋಗವನ್ನು ನಿವೃತ್ತಿ ಮಾಡಬೇಕಾದರೆ ರೋಗಕಾರಣವನ್ನು ನಿವೃತ್ತಿ ಮಾಡದೆ ಉಪಾಯವೇ ಇಲ್ಲ; ಹೀಗಿರುವಲ್ಲಿ ಯಾವದಾದರೂ ಒಂದು ವಿಧವಾಗಿ ಉಪಶಯ (ಔಷಧ) ವನ್ನು ಹೇಳಿದರೆ ಸಾಕಾಗುತ್ತದೆ, ಇಷ್ಟೊಂದು ರಗಳೆಪಡುವುದೇಕೆ ಎಂಬ ಪ್ರಶ್ನವು ಸ್ವತಏವ ಹುಟ್ಟುತ್ತದೆ. ಆದರೆ ಆಂಗ್ಲೇಯ ವೈದ್ಯಶಾಸ್ತ್ರಾದಿಗಳು ಪ್ರಚಾರಕ್ಕೆ ಬರುವುದಕ್ಕಿಂತ ಎಷ್ಟೋ ಪೂರ್ವದಲ್ಲಿಯೇ ಆಯುರ್ವೇದ ವೈದ್ಯರು ತಮ್ಮ ವೈದ್ಯ ಪ್ರಕ್ರಿಯೆಗಳನ್ನು ಎಷ್ಟು ಮಟ್ಟಿಗೆ ವಿಸ್ತರಿಸಿಕೊಂಡು ಚಿಕಿತ್ಸಿಸುತ್ತಿದ್ದರೆಂಬ ವಿಷಯವನ್ನು ತಿಳಿದು ಕೊಳ್ಳಲು ಇದಕ್ಕಿಂತ ಬೇರೆ ಉಪಾಯಬೇಡ, ಅಲ್ಲದೆ ಇಷ್ಟೊಂದು ವಿಸ್ತರಿಸುವುದರಲ್ಲಿ ಪ್ರಯೋಜನವೂ ಇದ್ದೇ ಇದೆ. ನೋಡುವ! ಹೇತು ವಿಪರೀತ (ರೋಗದ ಕಾರಣವನ್ನು ನಾಶಪಡಿಸು

ವುದು)ಚಿಕಿತ್ಸೆಯಿಂದಲೇನೇ ರೋಗಶಮನವಾಗುತ್ತಿರಲಾಗಿ ಪುನಃ ವ್ಯಾಧಿವಿಪರೀತಚಿಕಿತ್ಸೆಯನ್ನೇಕೆ ಹೇಳಬೇಕೆನ್ನುವುದನ್ನು ವಿಚಾರಿಸುವ; ರೋಗಕ್ಕೆ ಕಾರಣಗಳಾದ ದೋಷಗಳ ಪ್ರಕೋಪವನ್ನು ಶಮನ ಮಾಡತಕ್ಕ ಔಷಧವು ಆ ದೋಷ ಪ್ರಕೋಪದಿಂದ ಹುಟ್ಟಿದ ರೋಗವನ್ನೂ ಶಮನವಮಾಡಲೇ ಬೇಕೆಂಬ ನಿಯಮವಿಲ್ಲ. ಕಫಪ್ರಕೋಪದಿಂದ ಜ್ವರ ಮತ್ತು ಗುಲ್ಮ ಎಂಬ ಎರಡು ರೋಗಗಳು ಹುಟ್ಟುತ್ತವೆಂದು ಭಾವಿಸುವ; ಕಫಜ್ವರ ವಿಷಯದಲ್ಲಿ ಕಫಹರಗಳಾದ ವಮನ, ಲಂಘನರೂಪಗಳಾದ ಚಿಕಿತ್ಸೆಗಳು ಸಂಮತಗಳಾದರೂ ಕಫ ಗುಲ್ಮ ವಿಷಯದಲ್ಲಿ ಮಾತ್ರ ಕಾರಣಭೂತವಾದ ಕಫವನ್ನು ನಾಶಪಡಿಸತಕ್ಕ ವಮನ, ಲಂಘನಗಳನ್ನು ಪ್ರಯೋಗಿಸಬಾರದು. '**ಕಫೇಲಂಘನಸಾಧ್ಯೇತುಕರ್ತರಿಜ್ವರಗುಲ್ಮಯೋಃ ॥ ತುಲ್ಯೇಪಿದೇಶಕಾಲಾದೌಲಂಘನಂನಸಮಾಚರೇತ್ ॥**' ಕಫಪ್ರಕೋಪದಿಂದ ಜ್ವರ ಮತ್ತು ಗುಲ್ಮ ಎಂಬ ಎರಡು ರೋಗಗಳು ಹುಟ್ಟಬಹುದು ಆದರೆ ಕಫ ಜ್ವರದಲ್ಲಿ ನಡಿಸತಕ್ಕ ವಮನ ಲಂಘನಗಳನ್ನು ಮಾತ್ರ ಕಫಗುಲ್ಮದಲ್ಲಿ ನಡಿಸಲಾಗದು. ಎಂಬ ಚರಕಾಚಾರ್ಯರ ಅಭಿಪ್ರಾಯಾನುಗುಣವಾಗಿ ಹೇತುಪ್ರತ್ಯನೀಕ ಚಿಕಿತ್ಸೆಯೊಂದರಿಂದಲೇ ನಿರ್ವಾಹವಾಗುವುದಿಲ್ಲವೆಂದಹಾಗಾಯಿತು. ಏವಂಚ ಈ ಹೇತುಪ್ರತ್ಯನೀಕ ವ್ಯಾಧಿಪ್ರತ್ಯನೀಕ ಚಿಕಿತ್ಸೆಗಳೇ ನಮ್ಮ ಭ್ರಾತೃಗಳಾದ ಆಂಗ್ಲೇಯ ಡಾಕ್ಟರರುಗಳು ಅನುಸರಿಸಿರುವ ಮಾರ್ಗ. ಹೇತುವಿಪರೀತಾರ್ಥಕಾರಿ ವ್ಯಾಧಿವಿಪರೀತಾರ್ಥಕಾರಿಗಳನ್ನು ಸಹ ಅಂಗೀಕಾರ ಮಾಡಲೇ ಬೇಕು. ಪಿತ್ತಜನ್ಯವಾದ ವ್ರಣಶೋಥದಲ್ಲಿ ಪಿತ್ತವನ್ನೇ ವೃದ್ಧಿಮಾಡತಕ್ಕ ಉಷ್ಣಗಳಾದ ಉಪನಾಹಗಳನ್ನೇ ( ಶಾಖಗಳು ) ಕೊಡಬೇಕು. ಈ ಚಿಕಿತ್ಸೆಯು ರೋಗಕ್ಕೆ ಹೇತುವಾದ ಪಿತ್ತಕ್ಕೆ ವರ್ಧಕವಾದರೂ ಫಲದಲ್ಲಿ ಮಾತ್ರ ಪಿತ್ತಜನ್ಯ ವ್ರಣಶೋಥನಾಶವನ್ನೇ ಮಾಡುವುದರಿಂದ ಹೇತು ವಿಪರೀತಾರ್ಥಕಾರಿ ವ್ಯಾಧಿವಿಪರೀತಾರ್ಥಕಾರಿಗಳನ್ನೂ ಇಟ್ಟುಕೊಳ್ಳಬೇಕು. ವಿಷಜನ್ಯರೋಗಕ್ಕೆ ವಿಷಪ್ರಯೋಗವೇ ಮಾಡುವುದು, ಇವುಗಳೆಲ್ಲಾ ಈ ವರ್ಗಕ್ಕೆ ಸೇರಿದವುಗಳು ( ಇದಕ್ಕೇನೇ ಹೋಮಿಯೋಪತಿ ಸಂಪ್ರದಾಯವೆಂಬ ಹೆಸರು. ) ಇನ್ನು ಹೇತುವ್ಯಾಧ್ಯುಭಯ ವಿಪರೀತಕಾರ್ಯಕಾರಿ ಔಷಧಗಳನ್ನೇಕೆ ಹೇಳಬೇಕೆಂದರೆ, ಬೆಂಕಿಯಿಂದ ಸುಟ್ಟುಕೊಂಡು ಗಾಯಮಾಡಿಕೊಂಡೆವೆಂದು ನೆನಸುವ ಅದಕ್ಕೆ ಅಗಿಲುಗಂಧವನ್ನು ತೇದುಹಚ್ಚಿದಲ್ಲಿ ಗುಣವಾಗುತ್ತದೆ. ಸ್ವಲ್ಪ ವಿಚಾರಮಾಡಿದಲ್ಲಿ ಬೆಂಕಿಯಿಂದ ಸುಟ್ಟ ಗಾಯವು ಸ್ವತಃ ಉಷ್ಣದಿಂದ ಹುಟ್ಟಿದ್ದೂ, ಉಷ್ಣವೂ ಆಗಿರುವಲ್ಲಿ ಅಗಿಲುಗಂಧವೂ ಉಷ್ಣವೇ ಆದ್ದರಿಂದ ಈ ಅಗಿಲುಗಂಧವು ರೋಗಕಾರಣ ಮತ್ತು ರೋಗ ಎರಡಕ್ಕೂ ಪ್ರತಿಕೂಲ ಕಾರ್ಯವನ್ನು ಮಾಡಿ ರೋಗವನ್ನು ಶಮನ ಮಾಡಿದ ಹಾಗಾಯಿತು. ಆದುದರಿಂದ ಹೇತುವ್ಯಾಧ್ಯುಭಯವಿಪರೀತಚಿಕಿತ್ಸಾಕ್ರಮವೂ ಅವಶ್ಯಕವಾಗಿ ಬೇಕೇ ಬೇಕು. ಮೇಲೆ ಹೇಳಿದ ನಾಲ್ಕೈದು ರೀತಿಯಿಂದ ಚಿಕಿತ್ಸಾ ಕ್ರಮವೂ, ರೋಗ ನಿವೃತ್ತಿ ರೂಪವಾದ ಫಲದಲ್ಲಿ ಒಂದೇ ಆದರೂ ಚಿಕಿತ್ಸಕರುಗಳ ತಿಳುವಳಿಕೆಗೋಸ್ಕರ ಔಷಧ ಪ್ರಕ್ರಿಯೆಯನ್ನು ಅನೇಕ ವಿಭಾಗಮಾಡಿ ಶಾಸ್ತ್ರಕಾರರು ವಿವರಿಸಿದ್ದಾರೆ. ದೋಷಗಳನ್ನಾಗಲಿ, ಚಿಕಿತ್ಸೆಗಳನ್ನಾಗಲಿ ಸಂಕೋಚ ಪಡಿಸುವುದಕ್ಕಿಂತ ವಿಶದಪಡಿಸುವುದರಲ್ಲಿ ಸೌಕರ್ಯಹೆಚ್ಚೆಂಬುವುದೇ ಶಾಸ್ತ್ರಕಾರರ ಮುಖ್ಯತಾತ್ಪರ್ಯ.

**ವಿಪರೀತೋಽನುಪಶಯೋವ್ಯಾಧ್ಯಸಾತ್ಮ್ಯಾಭಿಸಂಜ್ಞಿತಃ ।। ೯ ।।**

ಹಿಂದಿನ ಶ್ಲೋಕದಲ್ಲಿಹೇಳಿರತಕ್ಕ ರೋಗಜಯಕ್ಕೆ ಅನುಕೂಲಗಳಾದ ಔಷಧಾಹಾರವಿಹಾರಗಳಿಗೆ ವಿರುದ್ಧವಾದವುಗಳೆಲ್ಲಾ ಅನುಪಶಯಗಳೆಂದು ಹೆಸರು. ಇದಕ್ಕೇನೇ ಲೋಕದಲ್ಲಿ ಅಪಥ್ಯವೆಂಬ ವ್ಯವಹಾರವಿದೆ. ವ್ಯಾಧ್ಯಸಾತ್ಮ್ಯ ಎಂಬದೊಂದು ಪರ್ಯಾಯ ಪದವಿದೆ. ರೋಗನಿಶ್ಚಯಮಾಡಲು ರೋಗಕ್ಕೆ ಅನುಕೂಲಗಳಾದ ಆಹಾರ ವಿಹಾರಗಳು ಹೇಗೆ ಕಾರಣಗಳಾಗುತ್ತವೆಯೋ ಹಾಗೇನೇ ಪ್ರತಿಕೂಲಗಳಾದ ಆಹಾರ ವಿಹಾರಗಳೂ ಕೂಡ ಕಾರಣಗಳಾಗುತ್ತವೆಂಬುವುದೇ ತಾತ್ಪರ್ಯ.

**ಯಥಾದುಷ್ಟೇನದೋಷೇಣಯಥಾಚಾನುವಿಸರ್ಪತಾ ||**
**ನಿರ್ವೃತ್ತಿರಾಮಯಸ್ಯಾಸೌಸಂಪ್ರಾಪ್ತಿರ್ಜಾತಿರಾಗತಿಃ ॥ ೧೦ ॥**

ದೇಶ, ಕಾಲ, ಆಹಾರ, ಆಚಾರ, ಅಭಿಘಾತ ಮೊದಲಾದ ದೋಷಪ್ರಕೋಪ ಕಾರಣಗಳಿಂದ ದುಷ್ಟಗಳಾದ, ಮತ್ತು ಊರ್ಧ್ವಾಧೋಮಾರ್ಗಗಳಲ್ಲಿ ಪ್ರಸರಿಸುವ ಸ್ವಭಾವವುಳ್ಳ ವಾತ, ಪಿತ್ತ, ಕಫಗಳೆಂಬ ದೋಷಗಳಿಂದ ಸಂಪೂರ್ಣವಾಗಿ ರೋಗವು ಹುಟ್ಟುವುದಕ್ಕೆ ಸಂಪ್ರಾಪ್ತಿ ಎಂದು ಹೆಸರು. ಇದಕ್ಕೇನೇ ಜಾತಿ, ಆಗತಿ ಎಂಬದಾಗಿ ಪರ್ಯಾಯನಾಮಗಳುಂಟು.

ಸಂಪ್ರಾಪ್ತಿ ಎಂದರೆ ದೋಷದೂಷ್ಯಯುಕ್ತವಾದ ರೋಗದ ಸಂಪೂರ್ಣಸ್ವರೂಪಕ್ಕೇನೇ ಹೆಸರು. ಇಂತಹ ಸಂಪ್ರಾಪ್ತಿಯು ರೋಗನಿಶ್ಚಯಕಾರಣವಾದ ನಿದಾನದಲ್ಲಿ ಹೇಗೆ ಸೇರಬಹುದು ಎಂಬದಾಗಿ ಸಂದೇಹ ಬರುತ್ತದೆ. ಆದರೆ ಈ ಸಂಪ್ರಾಪ್ತಿಯು ರೋಗವನ್ನು ನಿರ್ಣಯಿಸುವುದಕ್ಕೆ ಕಾರಣವಾಗದಿದ್ದರೂ ಸಂಪೂರ್ಣಲಕ್ಷಣಯುಕ್ತವಾದ ರೋಗವನ್ನು ಗುರ್ತಿಸಿಕೊಂಡನಂತರ ರೋಗಗಳು ಶಾಖಾಶ್ರಿತಗಳೇ, ಕೋಷ್ಠಾಶ್ರಿತಗಳೇ ಎಂಬ ವಿಷಯವನ್ನು ನಿಶ್ಚಯಿಸಿಕೊಂಡು ಚಿಕಿತ್ಸೆಮಾಡಲು ಸೌಕರ್ಯವಿರುವುದರಿಂದ ಸಂಪ್ರಾಪ್ತಿಯನ್ನು ಸಹ ರೋಗನಿಶ್ಚಯ ಸಾಧನಗಳಾದ ನಿದಾನಾದಿಗಳ ಮಧ್ಯದಲ್ಲಿ ಸೇರಿಸಿರುತ್ತಾನೆ. ಪ್ರಕುಪಿತಗಳಾದ ದೋಷಗಳ ವ್ಯಾಪಾರವೇ ಈ ಸಂಪ್ರಾಪ್ತಿ ಎಂಬುವುದಾದ್ದರಿಂದ ದೋಷಗಳ ಸಂಗ್ರಹದಿಂದಲೇ ಇದಕ್ಕೂ ಸಂಗ್ರಹ ಬಂದಹಾಗಾಗುವುದರಿಂದ ಪುನಃಶ್ಚ ಸಂಪ್ರಾಪ್ತಿಯೇಕೆ ಎಂದರೆ ಪೂರ್ವರೂಪದಲ್ಲಿಯೇ ಭೇದವಾದ ರೂಪವನ್ನು ಚಿಕಿತ್ಸಕರ ಸೌಕರ್ಯಕ್ಕಾಗಿ ಹೇಳಿರುವಂತೆ ಚಿಕಿತ್ಸಕರ ಸೌಕರ್ಯಕ್ಕಾಗಿಯೇನೇ ಈ ಸಂಪ್ರಾಪ್ತಿಯನ್ನೂ ಹೇಳಿದೆ; ಎಂದು ತಿಳಿದುಕೊಂಡರೆ ಸಾಕು.

**ಸಂಖ್ಯಾವಿಕಲ್ಪಪ್ರಾಧಾನ್ಯಬಲಕಾಲ ವಿಶೇಷತಃ ||**
**ಸಾಭಿದ್ಯತೆಯಥಾತ್ರೈವವಕ್ಷ್ಯಂತೇಷ್ಟೌಜ್ವರಾಇತಿ ॥೧೧॥**

ಈ ಸಂಪ್ರಾಪ್ತಿಯು ಸಂಖ್ಯೆ, ವಿಕಲ್ಪ, ಪ್ರಾಧಾನ್ಯ, ಬಲ, ಕಾಲವಿಶೇಷ ಎಂಬದಾಗಿ ಅನೇಕ ವಿಧವಾಗಿದೆ. ಹೇಗೆಂದರೆ ಮುಂದೆ ಜ್ವರದನಿದಾನದಲ್ಲಿ ಹೇಳುವಂತೆ '**ಅಷ್ಟೌಜ್ವರಾಇತಿ**' ಎಂದರೆ ಜ್ವರವು ಎಂಟುವಿಧ ಎನ್ನುವುದು ಸಂಖ್ಯಾಸಂಪ್ರಾಪ್ತಿಗೆ ಉದಾಹರಣ.

**ದೋಷಾಣಾಂಸಮವೇತಾನಾಂವಿಕಲ್ಪೋಂಶಾಂಶಕಲ್ಪನಾ ||**

ವಿಕಲ್ಪಸಂಪ್ರಾಪ್ತಿ- ರೋಗವನ್ನು ಉತ್ಪತ್ತಿಮಾಡಲು ಕೂಡಿಕೊಂಡಿರುವ

ಪ್ರಕುಪಿತಗಳಾದ ದೋಷಗಳನಡುವೆ ಚಿಕಿತ್ಸಾಕ್ರಮವನ್ನು ಸರಿಯಾಗಿ ನಡೆಯಿಸಲು ಕುಪಿತಗಳಾದ ದೋಷಗಳೆಷ್ಟು? ಯಾವ್ಯಾವ ದೋಷಗಳು ಎಷ್ಟೆ ಎಷ್ಟುಮಟ್ಟಿಗೆ ಪ್ರಕುಪಿತಗಳಾಗಿವೆ? ಮುಖ್ಯದೋಷವಾವುದು? ಅಪ್ರಧಾನದೋಷವಾವುದು? ಈ ರೀತಿಯಾಗಿರೋಗವನ್ನು ವಿಭಾಗಮಾಡಿಕೊಳ್ಳುವುದೇ ವಿಕಲ್ಪಸಂಪ್ರಾಪ್ತಿ ಎನ್ನಿಸಿಕೊಳ್ಳುತ್ತದೆ. ಇದೇ ವಿಷಯವನ್ನೇ ಸುಶ್ರುತದಲ್ಲಿ ಮತ್ತಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. “ **ಸರ್ವೈರ್ಭಾವೈಸ್ತ್ರಿಭಿರ್ವಾಪಿದ್ವಾಭ್ಯಾಮೇಕೇನವಾಪುನಃ ॥ ಸಂಸರ್ಗೇಕುಪಿತಃಕ್ರುದ್ಧಂದೋಷಂದೋಷೋನುಧಾವತಿ** ॥ ” ಎಂದರೆ ರೌಕ್ಷ್ಯ, ತೈಕ್ಷ್ಣ್ಯ, ಶೈತ್ಯ, ಲಾಘವ ವೈಶದ್ಯ ಮೊದಲಾದ ಎಲ್ಲಾ ಗುಣಗಳಿಂದಲಾಗಲಿ ಅಥವಾ ಇವುಗಳನಡುವೆ ಯಾವದಾದರೂ ಎರಡುಮೂರು ಗುಣಗಳಿಂದಲಾಗಲಿ ಕೂಡಿ ಪ್ರಕುಪಿತವಾದ ದೋಷವನ್ನು ಅಲ್ಪಕಾರಣದಿಂದ ಪ್ರಕುಪಿತವಾದ ದೋಷವು ಹಿಂಬಾಲಿಸುತ್ತದೆ.

**ಸ್ವಾತಂತ್ರ್ಯಪಾರತಂತ್ರ್ಯಾಭ್ಯಾಂವ್ಯಾಧೇಃಪ್ರಾಧಾನ್ಯಮಾದಿಶೇತ್ ॥೧೨॥**

ರೋಗವನ್ನು ಉತ್ಪತ್ತಿಮಾಡಲು ಪ್ರಕುಪಿತಗಳಾಗಿ ಪರಸ್ಪರ ಕೂಡಿಕೊಂಡಿರುವದೋಷಗಳ ಮುಖ್ಯಗೌಣಭಾವವನ್ನು ಪರ್ಯಾಲೋಚಿಸಿಕೊಂಡು ವ್ಯಾಧಿಯಲ್ಲಿಯೂ ಕೂಡ ಗೌಣಮುಖ್ಯಭಾವವನ್ನು ಕಲ್ಪಿಸಿಕೊಳ್ಳಬೇಕು.

**ಹೇತ್ವಾದಿಕಾತ್ಸ್ನ್ಯಾವಯವೈರ್ಬಲಾಬಲವಿಶೇಷಣಂ ॥**

ರೋಗಗಳ ನಿದಾನಪೂರ್ವರೂಪ ಮೊದಲಾದ ಸಮಸ್ತ ಅವಯವಗಳೂ ಸಂಪೂರ್ಣವಾಗಿದ್ದಲ್ಲಿ ರೋಗವು ಬಲವತ್ತರವಾಗಿದೆ ಎಂಬದಾಗಿಯೂ, ನಿದಾನಾದಿಗಳ ಮಧ್ಯೆ ಕೆಲವು ಅವಯವಗಳು ಕಡಮೆಯಾಗಿದ್ದಲ್ಲಿ ವ್ಯಾಧಿಯು ಅಷ್ಟು ಬಲವತ್ತರವಾಗಿಲ್ಲವೆಂದೂ ನಿಶ್ಚಯಿಸಿಕೊಳ್ಳಬಹುದು.

**ನಕ್ತಂದಿನರ್ತುಭುಕ್ತಾಂಶೈರ್ವ್ಯಾಧಿಕಾಲೋಯಥಾಮಲಂ ॥ ೧೩ ॥**

ವ್ಯಾಧಿಗಳು ಪ್ರಬಲವಾಗುವುದಕ್ಕೂ, ದುರ್ಬಲವಾಗುವುದಕ್ಕೂ ಕೂಡ ಹಗಲು ರಾತ್ರಿ, ವಸಂತಗ್ರೀಷ್ಮಾದಿಋತುಗಳು ಮತ್ತು ಆಹಾರ ಇವುಗಳ ವ್ಯತ್ಯಾಸದಿಂದ ವ್ಯಾಧಿಗಳ ವೃದ್ಧಿಹ್ರಾಸಗಳಿಗೆ ಕಾರಣಭೂತಗಳಾದ ಕಾಲವಿಶೇಷಗಳನ್ನು ಮಲಾನುರೋಧೇನ ನಿಶ್ಚಯಿಸಬೇಕು. ಉದಾಹರಣಕೊಟ್ಟು ಕೊಂಚ ವಿಶದಪಡಿಸೋಣ; ರಾತ್ರಿಯ ಪ್ರಥಮ ಭಾಗದಲ್ಲಿ ಶ್ಲೇಷ್ಮ, ಮಧ್ಯಭಾಗದಲ್ಲಿ ಪಿತ್ತ, ಅಂತ್ಯಭಾಗದಲ್ಲಿ ವಾತ, ಇದೇ ರೀತಿ ವಸಂತಋತುವಿನಲ್ಲಿ ಕಫ, ಶರತ್‌ದೃತುವಿನಲ್ಲಿ ಪಿತ್ತ, ವರ್ಷಋತುವಿನಲ್ಲಿ ವಾತ, ಭೋಜನ ಪ್ರಾರಂಭಾವಸ್ಥೆಯಲ್ಲಿ ಕಫ, ಪಚ್ಯಮಾನಾವಸ್ಥೆಯಲ್ಲಿ ಪಿತ್ತ, ಪಕ್ವಾವಸ್ಥೆಯಲ್ಲಿ ವಾತ, ಈ ರೀತಿಯಲ್ಲಿ ಹಗಲು, ರಾತ್ರಿ, ಋತು, ಭೋಜನಕಾಲ ಮೊದಲಾದವುಗಳ ಭೇದದಿಂದ ಕಾಲರೂಪಸಂಪ್ರಾಪ್ತಿಯನ್ನು ನಿರ್ಣಯಿಸಿಕೊಳ್ಳತಕ್ಕದ್ದು.

**ಇತಿಪ್ರೋಕ್ತೋನಿದಾನಾರ್ಥಸ್ತದ್ವ್ಯಾಸೇನೋಪದೇಕ್ಷ್ಯತೆ ॥**

ಹಿಂದೆಹೇಳಿದ ನಿದಾನ, ಪೂರ್ವರೂಪ, ರೂಪಾದಿಗಳಿಗೆ ಸಾಮಾನ್ಯತಃ ಪ್ರಯೋಜನವನ್ನು ಹೇಳಿದಹಾಗಾಯಿತು; ಅಂದರೆ ರೋಗಗಳನ್ನು ಪ್ರತ್ಯೇಕಿಸದೇ ಸಾಮಾನ್ಯವಾಗಿ ಪ್ರಯೋಜನವನ್ನು ಹೇಳಿಯಾಯಿತು, ಇನ್ನುಮುಂದೆ ಪ್ರತ್ಯೇಕವಾಗಿ ರೋಗಗಳ ನಿದಾನ, ಪೂರ್ವರೂಪಾದಿಗಳನ್ನೆಲ್ಲಾ ವಿಸ್ತಾರವಾಗಿ ಒಂದೊಂದೇ ರೋಗಗಳಿಗೆ ಹೇಳುತ್ತಾನೆ.

**ಸರ್ವೇಷಾಮೇವರೋಗಾಣಾಂ ನಿದಾನಂ ಕುಪಿತಾಮಲಾಃ ॥ ೧೪ ॥**
**ತತ್ಪ್ರಕೋಪಸ್ಯತುಪ್ರೋಕ್ತಂವಿವಿಧಾಹಿತಸೇವನಂ ॥**

ಸಾಮಾನ್ಯವಾಗಿ ಎಲ್ಲಾ ರೋಗಗಳಿಗೂ ಸನ್ನಿಕೃಷ್ಟ ( ಅಂದರೆ ಸಮೀಪ ) ವಿಪ್ರಕೃಷ್ಟ ( ಅಂದರೆ ದೂರ ) ಎಂಬದಾಗಿ ಕಾರಣಗಳು ಎರಡು ವಿಧ. ಮೇಲಿನ ಶ್ಲೋಕದ ಪೂರ್ವಾರ್ಧದಲ್ಲಿ ಎಲ್ಲಾ ರೋಗಗಳಿಗೂ ಸಾಮಾನ್ಯವಾಗಿ ಸನ್ನಿಕೃಷ್ಟಕಾರಣ ಗಳನ್ನೂ, ಉತ್ತರಾರ್ಧದಲ್ಲಿ ವಿಪ್ರಕೃಷ್ಟಕಾರಣಗಳನ್ನೂ ಹೇಳುತ್ತಾನೆ. ಶರೀರದಲ್ಲಿ ಹುಟ್ಟತಕ್ಕ ಸಮಸ್ತರೋಗಗಳಿಗೂ ವಾತ, ಪಿತ್ತ, ಶ್ಲೇಷ್ಮಗಳೆಂಬ ತ್ರಿದೋಷಗಳ ಪ್ರಕೋಪವೇ ಸನ್ನಿಕೃಷ್ಟಕಾರಣ, ಅಂತಹ ವಾತಾದಿಪ್ರಕೋಪಗಳಿಗೆ ನಾನಾವಿಧಗಳಾದ ಅಹಿತಗಳಾದ ಆಹಾರವಿಹಾರಗಳನ್ನು ಸೇವಿಸುವುದು ವಿಪ್ರಕೃಷ್ಟಕಾರಣವಾಗುತ್ತದೆ.

**ನಿದಾನಾರ್ಥಕರೋರೋಗೋರೋಗಸ್ಯಾಪ್ಯುಪಜಾಯತೆ ॥೧೫॥**
**ತದ್ಯಥಾಜ್ವರಸಂತಾಪಾ ದ್ರಕ್ತಪಿತ್ತಮುದೀರ್ಯತೆ ॥**
**ರಕ್ತಪಿತ್ತಾಜ್ವರಸ್ತಾಭ್ಯಾಂಶೋಷಶ್ಚಾಪ್ಯುಪಜಾಯತೆ ॥೧೬॥**
**ಪ್ಲೀಹಾಭಿವೃದ್ಧ್ಯಾಜಠರಂಜಠರಾತ್ ಶೋಥಏವಚ ॥**
**ಅಶೋಭ್ಯೋಜಾಠರಂದುಃಖಂಗುಲ್ಮಶ್ಚಾಪ್ಯುಪಜಾಯತೆ ॥೧೭॥**
**ಪ್ರತಿಶ್ಯಾಯಾದಥೋಕಾಸಃಕಾಸಾತ್ ಸಂಜಾಯತೇಕ್ಷಯಃ ॥**
**ಕ್ಷಯೋರೋಗಸ್ಯಹೇತುತ್ವೇಶೋಷಶ್ಚಾಪ್ಯುಪಜಾಯತೆ ॥೧೮॥**

ಹಿಂದಿನ ಶ್ಲೋಕದಲ್ಲಿ ರೋಗಗಳಿಗೆ ಸಾಮಾನ್ಯವಾಗಿ ದೋಷಪ್ರಕೋಪವು ಕಾರಣವೆಂಬ ವಿಷಯವನ್ನು ಹೇಳಿ ಈ ಶ್ಲೋಕಗಳಲ್ಲಿ ಒಂದು ರೋಗವು ಮತ್ತೊಂದು ರೋಗಕ್ಕೆ ಕಾರಣವಾಗಿ ರೋಗವನ್ನು ಹುಟ್ಟಿಸುವುದೂ ಉಂಟೆಂಬ ವಿಷಯವನ್ನು ವಿಶದಪಡಿಸುತ್ತಾನೆ. ಅಧಿಕವಾದ ಜ್ವರದ ತಾಪದಿಂದ ರಕ್ತಪಿತ್ತ ಎಂದರೆ ಕಣ್ಣು, ಮೂಗು, ಬಾಯಿಗಳಿಂದ ರಕ್ತವು ಹೊರಡತಕ್ಕಂತಹ ಒಂದು ಬಗೆಯರೋಗವು ಹುಟ್ಟು ತ್ತದೆ. ಇದಕ್ಕೆ ತಲೆಕೆಳಗಾಗಿ ರಕ್ತಪಿತ್ತವೆಂಬ ರೋಗವು ಮೊದಲು ಹುಟ್ಟಿ ಅದರಿಂ ದಲೇ ಅತ್ಯಧಿಕವಾದ ಜ್ವರವೂ ಹುಟ್ಟಬಹುದು. ರಕ್ತಪಿತ್ತ ಮತ್ತು ಜ್ವರ ಎಂಬ ಈ ಎರಡು ರೋಗಗಳಿಂದ ಶೋಷ ಎಂದರೆ ರಾಜಯಕ್ಷ್ಮ, ಕ್ಷಯರೋಗವು ಹುಟ್ಟಬಹುದು, ಪ್ಲೀಹವೃದ್ಧಿಯಿಂದ ಉದರರೋಗವು ಹುಟ್ಟಬಹುದು, ಉದರರೋಗದಿಂದ ಶೋಥರೋ ಗವು ಹುಟ್ಟುತ್ತದೆ. ಮೂಲವ್ಯಾಧಿಯಿಂದ ಉದರರೋಗಗಳೂ ಗುಲ್ಮರೋಗವೂ ಹುಟ್ಟುತ್ತವೆ. ನೆಗಡಿಯಿಂದ ಕೆಮ್ಮು, ಕೆಮ್ಮಿನಿಂದ ಕ್ಷಯ, ಕ್ಷಯದಿಂದ ರಕ್ತಮಾಂ ಸಾದಿಧಾತುಗಳ ಶೋಷ ಈ ರೀತಿಯಾಗಿ ಹುಟ್ಟುತ್ತವೆ.

**ತೇಪೂರ್ವಂಕೇವಲಾರೋಗಾಃಪಶ್ಚಾದ್ಧೇತ್ವರ್ಥಕಾರಿಣಃ ॥**
**ಕಶ್ಚಿದ್ಧಿರೋಗೋರೋಗಸ್ಯಹೇತುಭೂತ್ವಾಪ್ರಶಾಮ್ಯತಿ ॥೧೯॥**
**ನಪ್ರಶಾಮ್ಯತಿಚಾಪ್ಯನ್ಯಃಹೇತುತ್ವಂಕುರುತೇಪಿಚ ॥**
**ಏವಂಕೃಚ್ಛ್ರತಮಾನೄಣಾಂದೃಶ್ಯಂತೆವ್ಯಾಧಿಸಂಕರಾಃ ॥೨೦॥**
**ತಸ್ಮಾದ್ಯತ್ನೇನಸದ್ವೈದ್ಯೈರಿಚ್ಛದ್ಭಿಸ್ಸಿದ್ಧಿಮುದ್ಧತಾಂ ॥**
**ಜ್ಞಾತವ್ಯೋವಕ್ಷ್ಯತೇಯೋಯಂಜ್ವರಾದೀನಾಂವಿನಿಶ್ಚಯಃ ॥೨೧॥**

ರೋಗವು ಉತ್ಪನ್ನವಾದಕೂಡಲೆ ರೋಗಾಂತರವನ್ನು ಹುಟ್ಟಿಸುತ್ತದೆಯೇ ಅಥವಾ ಕೊಂಚಕಾಲ ಕಳೆದಮೇಲೆ ರೋಗಾಂತರವನ್ನು ಹುಟ್ಟಿಸುತ್ತದೆಯೇ ಅಂದರೆ ರೋಗವು ಮೊದಲುಹುಟ್ಟಿ ಕೆಲವುಕಾಲರೋಗವಾಗಿಯೇ ಇದ್ದು ಅನಂತರ ರೋಗಾತರವನ್ನು ಹುಟ್ಟಿಸುತ್ತದೆ. ಹಾಗೆ ರೋಗಾಂತರವನ್ನು ಹುಟ್ಟಿಸಿ ಕೆಲವು ರೋಗಗಳು ತಮ್ಮಷ್ಟಕ್ಕೇನೇ ಶಾಂತವಾಗುತ್ತವೆ. ಕೆಲವು ರೋಗಗಳು ರೋಗಾಂತರವನ್ನು ಹುಟ್ಟಿಸಿದ ಮೇಲೂ ತಾವೂನೂ ಕಾರಣವಾಗಿ ಇದ್ದುಕೊಂಡೇ ಇರುತ್ತವೆ. ಹೀಗೆ ಬಹಳ ಕಷ್ಟತಮಗಳಾದ ವ್ಯಾಧಿಸಂಕರುಗಳು ಅಲ್ಲಲ್ಲಿ ಕಾಣಬರುತ್ತದೆ. ಇವುಗಳನ್ನೆಲ್ಲಾ ಜಯಿಸಿ ಯಶಸ್ವೀಗಳಾಗಬೇಕೆಂಬ ವೈದ್ಯರುಗಳು ಮುಂದೆ ನಾವುಹೇಳತಕ್ಕ ಜ್ವರಾದಿ ರೋಗಗಳ ಲಕ್ಷಣಗಳನ್ನು ಬಹಳಚನ್ನಾಗಿ ತಿಳಿದುಕೊಳ್ಳಬೇಕು.

**—: ಇಲ್ಲಿಗೆ ಪಂಚಲಕ್ಷಣನಿದಾನ ಸಮಾಪ್ತ. :—**

## * ಜ್ವರನಿದಾನ. *

**ದಕ್ಷಾಪಮಾನಸಂಕ್ರುದ್ಧರುದ್ರನಿಶ್ವಾಸಸಂಭವಃ ॥**
**ಜ್ವರೋಷ್ಟಧಾಪೃಥಗ್ದ್ವಂದ್ವಸಘಾತಾಗಂತುಜಸ್ಮೃತಃ ॥ ೧ ॥**

ದಕ್ಷಬ್ರಹ್ಮನು ಯಾಗಮಾಡುವಗ್ಯೆ ಅಳಿಯನಾದ ಪರಮೇಶ್ವರನನ್ನು ಕರೆಯದೆ ಉದಾಸೀನಮಾಡಿ ದೂಷಿಸಲು, ಅಂತಹ ದೂಷಣೆಯನ್ನು ಕೇಳಿ ಕುಪಿತನಾದ ಪರಮೇಶ್ವರನ ಕ್ರೋಧನಿಶ್ವಾಸಗಳಿಂದ ಪ್ರಥಮತಃ ಜ್ವರವು ಹುಟ್ಟಿತು. ಇದು ವಾತಜನ್ಯ, ಪಿತ್ತಜನ್ಯ, ಶ್ಲೇಷ್ಮಜನ್ಯ, ವಾತಪಿತ್ತಜನ್ಯ, ವಾತಶ್ಲೇಷ್ಮಜನ್ಯ, ಪಿತ್ತಶ್ಲೇಷ್ಮಜನ್ಯ, ತ್ರಿದೋಷಸನ್ನಿಪಾತಜನ್ಯ, ಆಗಂತುಕ ಎಂಬದಾಗಿ ಎಂಟುವಿಧ.

**ಮಿಥ್ಯಾಹಾರವಿಹಾರಾಭ್ಯಾಂ ದೋಷಾಹ್ಯಾಮಾಶಯಾಶ್ರಯಾಃ॥**
**ಬಹಿರ್ನಿರಸ್ಯಕೋಷ್ಠಾಗ್ನಿಂಜ್ವರದಾಸ್ಯುರಸಾನುಗಾಃ ॥ ೨ ॥**

ಮಿಥ್ಯಾಹಾರವಿಹಾರಗಳಿಂದ ಅಂದರೆ ಪ್ರಕೃತಿವಿರುದ್ಧಗಳಾದ ಆಹಾರ ಮತ್ತು ವ್ಯಾಯಾಮಗಳಿಂದ ವಾತ, ಪಿತ್ತ, ಕಫಗಳೆಂಬ ದೋಷಗಳು ಪ್ರಕುಪಿತಗಳಾಗಿ ಸ್ವಸ್ಥಾನದಿಂದ ಹೊರಹೊರಮ್ಮಿ ಆಮಾಶಯ (**ನಾಭಿಸ್ತನಾಂತರಂಜಂತೋರಾಮಾಶಯ ಇತಿಸ್ಮೃತಃ**) ವನ್ನು ಹೊಂದಿ ಕೋಷ್ಠಗತವಾದ ಪಾಚಕಾಗ್ನಿಯನ್ನು ಹೊರಪಡಿಸಿ ರಸಧಾತುವನ್ನನುಸರಿಸಿ ಜ್ವರವನ್ನುಂಟುಮಾಡುತ್ತವೆ. ಈಗಹೇಳಿದ ಜ್ವರದ ಉತ್ಪತ್ತಿ ಕ್ರಮವು ಶರೀರದಲ್ಲಿ ಹುಟ್ಟತಕ್ಕ ಜ್ವರದಕ್ರಮವಾಯಿತು. ಆಗಂತುಜ್ವರವು ಹುಟ್ಟತಕ್ಕಕ್ರಮವ್ಯಾವದೆಂದರೆ " ಸುಶ್ರುತಃ **ಶ್ರಮಕ್ಷತಾಭಿಘಾತೇಭ್ಯೋದೇಹಿನಾಂ ಕುಪಿತೋನಿಲಃ ॥ ಪೂರಯಿತ್ವಾಖಿಲಂದೇಹಂಜ್ವರಮಾಪಾದಯೇದ್ಭೃಶಂ** " ಅತ್ಯಧಿಕವಾದ ಶ್ರಮ, ಗಾಯ, ಪೆಟ್ಟು ಇವುಗಳಿಂದ ಶರೀರಗತವಾದ ವಾತವು ಪ್ರಕುಪಿತವಾಗಿ ಶರೀರ ಆದ್ಯಂತದಲ್ಲಿಯೂ ತುಂಬಿಕೊಂಡು ಉತ್ತರಕ್ಷಣದಲ್ಲಿಯೇ ಜ್ವರವನ್ನುಂಟುಮಾಡುತ್ತವೆ. ಸಹಜ ಜ್ವರದಲ್ಲಿ ತ್ರಿದೋಷಗಳು ಪ್ರಕುಪಿತಗಳಾಗಿ ಆಮಾಶಯವನ್ನುಪ್ರವೇಶಿಸಿ ಕೋಷ್ಠಗತವಾದ ಅಗ್ನಿಯನ್ನು ಹೊರಪಡಿಸಿ ಜ್ವರವನ್ನುಂಟುಮಾಡು

ತ್ತವೆ. ಸಹಜ ಮತ್ತು ಆಗಂತುಜನ್ಯ ಜ್ವರಗಳಿಗೆ ಇಷ್ಟೇಭೇದ. ಅಲ್ಲದೆ ಆಗಂತುಜ್ವರವು ಕೊಂಚಕಾಲ ಆಗಂತುಕವಾಗಿದ್ದು ನಂತರ ಅದೂ ಸಹಜವಾಗಿಯೇ ಹೋಗುತ್ತದೆ.

**ಸ್ವೇದಾವರೋಧಸ್ಸಂತಾಪಸ್ಸರ್ವಾಂಗಗ್ರಹಣಂತಥಾ ॥**
**ಯುಗಪದ್ಯತ್ರರೋಗೇಚಸಜ್ವರೋವ್ಯಪದಿಶ್ಯತೆ ॥ ೩ ॥**

ಜ್ವರದಲಕ್ಷಣವೇನಂದರೆ– ಮೈಯಲ್ಲಿ ಬೆವರುಬಾರದಂತೆ ತಡೆಯಾಗುವುದು, ಶರೀರ ಮತ್ತು ಮನಸ್ಸುಗಳಿಗೆ ಸಂತಾಪ ಅಂದರೆ ಮೈಬಿಸಿಯಾಗುವುದು, “ **ವೈಚಿತ್ಯಮರತಿರ್ಗ್ಲಾನಿರ್ಮನಸಸ್ತಾಪಲಕ್ಷಣಂ** ” ಎಂಬ ಶ್ಲೋಕದಲ್ಲಿ ಹೇಳಿರುವ ಮೇರೆಗೆ ಬುದ್ಧಿಕೆಟ್ಟುಹೋಗುವುದು, ಮನಸ್ಸಿಗೆ ಯಾವಕೆಲಸವೂ ಬೇಡದಂತಾಗುವುದು, ಮೊದಲಾದ ಮಾನಸಿಕ ಸಂತಾಪಗಳೂ, ಮೈಕೈಕಾಲುಗಳಲ್ಲೆಲ್ಲಾ ಹಿಡಿದುಕೊಂಡಂತೆ ತೋರುತ್ತಿರುವುದು, ಇಷ್ಟು ಲಕ್ಷಣಗಳೂ ಯಾವರೋಗದಲ್ಲಿ ಉಂಟಾಗುತ್ತವೋ ಅದಕ್ಕೆ ಜ್ವರವೆಂಬ ಹೆಸರು.

**ಶ್ರಮೋರತಿರ್ವಿವರ್ಣತ್ವಂವೈರಸ್ಯಂನಯನಪ್ಲವಃ ॥**
**ಇಚ್ಛಾದ್ವೇಷೌಮುಹುಶ್ಚಾಪಿಶೀತವಾತಾತಪಾದಿಷು ॥ ೪ ॥**
**ಜೃಂಭಾಂಗಮರ್ದೋಗುರುತಾರೋಮಹರ್ಷೋರುಚಿಸ್ತಮಃ ॥**
**ಅಪ್ರಹರ್ಷಶ್ಚಶೀತಂಚಭವತ್ಯುತ್ಪತ್ಸ್ಯತಿಜ್ವರೆ ॥ ೫ ॥**
**ಸಾಮಾನ್ಯತಃ**..............................................॥

ಜ್ವರವು ಹುಟ್ಟುವುದಕ್ಕೆ ಮೊದಲು ತೋರುವಲಕ್ಷಣಗಳು– ಆಯಾಸ, ಬುದ್ಧಿಸರಿಯಿಲ್ಲದಿರುವುದು, ಮೈಕೈಯೆಲ್ಲಾ ಬಾಡಿದಹಾಗೆ ತೋರುವುದು, ಬಾಯಿಕೆಟ್ಟುಹೋಗುವುದು, ಕಣ್ಣಿನಲ್ಲಿ ನೀರುತುಂಬಿಕೊಳ್ಳುವುದು, ಬಿಸಿಲು, ಗಾಳಿ, ನೆರಳು ಇವುಗಳಲ್ಲಿ ಪದೇಪದೇ ಇಚ್ಛೆ ಮತ್ತು ಅನಿಚ್ಛೆಗಳು ಅಂದರೆ ಬಿಸಿಲು ಗಾಳಿ ನೆರಳುಗಳು ಒಂದು ಸಾರಿ ಬೇಕಾದಹಾಗೆತೋರುವುದು ಕೂಡಲೇ ಬೇಡವಾಗಿಯೂತೋರುವುದು, ಆಕಳಿಕೆ, ಮೈಯನ್ನು ಮುರಿದುಕೊಳ್ಳುವುದು, ಮೈಭಾರಕಾಣುವುದು, ಮೈಕೂದಲುಗಳೆಲ್ಲಾ ನೆಟ್ಟಗಾದಂತೆ ತೋರುವುದು, ಅನ್ನಪಾನಾದಿಗಳಲ್ಲಿ ರುಚಿತಪ್ಪಿಹೋಗುವುದು, ಕತ್ತಲೆಯಲ್ಲಿ ತಿರುಗಾಡಿದಹಾಗೆ ಏನೂ ತೋಚದಿರುವುದು, ಮನಸ್ಸಿಗೆ ಸಂತೋಷವಿಲ್ಲದಿರುವುದು, ಕೊಂಚವಾಗಿ ಛಳಿತೋರುವುದು ಇವುಗಳು ಸಾಮಾನ್ಯವಾಗಿ ಜ್ವರವುಹುಟ್ಟುವುದಕ್ಕೆ ಅವ್ಯವಹಿತಪೂರ್ವಭಾವಿಯಾದ ಲಕ್ಷಣಗಳು.

....................**ವಿಶೇಷಾತ್ತುಜೃಂಭಾತ್ಯಂತಂಸಮೀರಣಾತ್ ॥**
**ಪಿತ್ತಾನ್ನಯನಯೋರ್ದಾಹಃಕಫಾದನ್ನಾರುಚಿರ್ಭವೇತ್ ॥೬॥**

ಈ ಜ್ವರದಲ್ಲಿ ಆಕಳಿಕೆ ಹೆಚ್ಚಾಗಿದ್ದರೆ ವಾತವು ವೃದ್ಧಿಯಾಗಿದೆ ಎಂಬದಾಗಿಯೂ ಕಣ್ಣುಉರಿ ಇದ್ದರೆ ಪಿತ್ತಪ್ರಕೋಪವಾಗಿದೆ ಎಂಬದಾಗಿಯೂ, ಅನ್ನದಲ್ಲಿ ರುಚಿತಪ್ಪಿಹೋಗಿದ್ದರೆ ಕಫಪ್ರಕೋಪವಿದೆ ಎಂಬದಾಗಿಯೂ ಭೇದವನ್ನು ತಿಳಿದುಕೊಳ್ಳಬೇಕು.

**ರೂಪೈರನ್ಯತರಾಭ್ಯಾಂತುಸಂಸೃಷ್ಟೈರ್ದ್ವಂದ್ವಜಂವಿದುಃ ॥**
**ಸರ್ವಲಿಂಗಸಮವಾಯಸ್ಸನ್ನಿಪಾತಪ್ರಕೋಪಜೆ ॥ ೭ ॥**

ಹಿಂದಿನ ಶ್ಲೋಕದಲ್ಲಿ ಹೇಳಿದ ವಾತ, ಪಿತ್ತ, ಶ್ಲೇಷ್ಮ ಪ್ರಕೋಪಗಳ ಲಕ್ಷಣಗಳನಡುವೆ ಎರಡೆರಡರ ಲಕ್ಷಣಗಳು ತೋರಿದರೆ ದ್ವಿದೋಷಜನ್ಯಜ್ವರವೆಂಬದಾಗಿಯೂ ಮೂರರ ಲಕ್ಷಣಗಳೂ ಕೂಡಿ ಕಂಡುಬಂದರೆ ದೋಷತ್ರಯಸನ್ನಿಪಾತಜನ್ಯಜ್ವರವೆಂಬದಾಗಿಯೂ ತಿಳಿಯುವದು.

**ವೇಪಥುರ್ವಿಷಮೋವೇಗಃಕಂಠೌಷ್ಠಪರಿಶೋಷಣಂ ||**
**ನಿದ್ರಾನಾಶಃಕ್ಷವಸ್ತಂಭೋಗಾತ್ರಾಣಾಂರೌಕ್ಷ್ಯಮೇವಚ ||೮||**
**ಶಿರೋಹೃದ್ಗಾತ್ರರುಗ್ವಕ್ತ್ರವೈರಸ್ಯಂಗಾಢವಿಟ್ಕತಾ ||**
**ಶೂಲಾಧ್ಮಾನೇಜೃಂಭಣಂಚಭವತ್ಯನಿಲಜೇಜ್ವರೇ || ೯ ||**

ವಾತಜ್ವರಲಕ್ಷಣ- ಮೈನಡಗುವಿಕೆ, ಕಾಲನಿಯಮವಿಲ್ಲದೆ ಜ್ವರಹೆಚ್ಚುವುದು, ಮತ್ತು ತಗ್ಗುವುದು, ಗಂಟಲು ಮತ್ತು ತುಟಿಗಳು ಒಣಗುವುದು, ನಿದ್ರೆಬಾರದಂತಾಗುವುದು, ಶೀನುಬಾರದೆನಿಂತು ಹೋಗುವುದು, ಜ್ವರಿತನ ಶರೀರವನ್ನು ಮುಟ್ಟಿನೋಡಿದರೆ ಒರಟಾಗಿ ತೋರುವುದು, ತಲೆ, ಎದೆ, ಮೈ ಇವುಗಳಲ್ಲಿ ನೋವಿರುವುದು, ಬಾಯಿರುಚಿ ಕೆಡುವುದು, ಮಲವು ಗಟ್ಟಿಯಾಗಿ ಬದ್ಧವಾಗಿರುವುದು, ಹೊಟ್ಟೆನೋವು, ಹೊಟ್ಟೆಯುಬ್ಬರ, ಆಕಳಿಕೆ ಇವು ವಾತಪ್ರಕೋಪಜನ್ಯಜ್ವರದ ಲಕ್ಷಣಗಳು.

**ವೇಗಸ್ತೀಕ್ಷ್ಣೋತಿಸಾರಶ್ಚನಿದ್ರಾಲ್ಪತ್ವಂವಮಿಸ್ತಥಾ ||**
**ಕಂಠೌಷ್ಠಮುಖನಾಸಾನಾಂಪಾಕಃಸ್ವೇದಶ್ಚಜಾಯತೇ ||೧೦||**
**ಪ್ರಲಾಪೋವಕ್ತ್ರಕಟುತಾಮೂರ್ಛಾದಾಹೋಮದಸ್ತೃಷಾ ||**
**ಪೀತವಿಣ್ಮೂತ್ರನೇತ್ರತ್ವಂಪೈತ್ತಿಕೇಭ್ರಮಏವಚ || ೧೧ ||**

ಪಿತ್ತಜ್ವರದ ಲಕ್ಷಣಗಳು- ಜ್ವರವೇಗವು ಅಧಿಕವಾಗಿರುವುದು, ಅತಿಸಾರಇರುವುದು, ನಿದ್ರೆಕಡಮೆಯಾಗುವುದು, ವಮನವಾಗುವುದು, ಗಂಟಲಿನಲ್ಲಿ, ತುಟಿಯಲ್ಲಿ, ಬಾಯಿಯಲ್ಲಿ, ಮೂಗಿನಲ್ಲಿ ಸಹ ವ್ರಣವಾಗುವುದು, ಬೆವರು ಬರುತ್ತಿರುವುದು, ಸಂಕಟವನ್ನು ತಡೆಯಲಾರದೆ ಅಳುವುದು, ಯಾವಾಗ್ಯೂ ಬಾಯಿಕಹಿಯಾಗಿರುವುದು, ಆಗಾಗ್ಯೆ ಮೂರ್ಛೆಬರುತ್ತಿರುವುದು, ಮೈಯ್ಯುರಿ, ಮದ್ಯಪಾನಮಾಡಿದವರಿಗೆ ಇರುವಂತೆ ಒಂದು ವಿಧವಾದ ಮತ್ತತೆಇರುವುದು, ಬಾಯಾರಿಕೆ ಇರುವುದು, ಮಲ, ಮೂತ್ರ, ಕಣ್ಣು ಇವುಗಳು ಹಳದಿಬಣ್ಣವಾಗುವುದು, ತಲೆತಿರುಗುವುದು ಇವು ಪಿತ್ತಜ್ವರದ ಲಕ್ಷಣಗಳು.

**ಸ್ತೈಮಿತ್ಯಂಸ್ತಿಮಿತೋವೇಗಃಆಲಸ್ಯಂಮಧುರಾಸ್ಯತಾ ||**
**ಶುಕ್ಲಮೂತ್ರಪುರೀಷತ್ವಂಸ್ತಂಭಸ್ತೃಪ್ತಿರಥಾಪಿಚ || ೧೨ ||**
**ನಾತ್ಯುಷ್ಣಗಾತ್ರತಾಛರ್ದಿರಂಗಸಾದೋವಿಪಾಕಿತಾ ||**
**ಗೌರವಂಶೀತಮುತ್ಕ್ಲೇದೋರೋಮಹರ್ಷೋತಿನಿದ್ರತಾ ||೧೩||**
**ಪ್ರತಿಶ್ಯಾಯೋರುಚಿಃಕಾಸಃಕಫಜೇಕ್ಷ್ಣೋಶ್ಚಶುಕ್ಲತಾ ||**

ಶ್ಲೇಷ್ಮಜ್ವರದ ಲಕ್ಷಣಗಳು- ಶರೀರವೆಲ್ಲವೂ ಒದ್ದೆಬಟ್ಟೆಯಿಂದ ಸುತ್ತಿಕೊಂಡಿರುವಂತೆ ಮನಸ್ಸಿಗೆತೋರುವುದು, ಜ್ವರವು ಮಂದವೇಗವಾಗಿರುವುದು, ಯಾವದಾದರೂ ಕೆಲಸಮಾಡಲು ಶಕ್ತಿಇದ್ದರೂ ಉತ್ಸಾಹವಿಲ್ಲದಿರುವುದು, ಬಾಯಿಯೂವಾಗ್ಯೂ ಸಿಹಿಯಾಗಿರುವುದು, ಮಲಮೂತ್ರಗಳು ಬೆಳ್ಳಗಿರುವುದು, ಅವಯವಗಳೆಲ್ಲಾ ನಿಶ್ಚೇಷ್ಟವಾಗಿ

ರುವದು, ಯಾವಾಗಲೂ ಹೊಟ್ಟೆತುಂಬಿಕೊಂಡಿರುವಂತೆ ಅನ್ನದಲ್ಲಿ ಅಪೇಕ್ಷೆಯಿಲ್ಲದಿರುವುದು, ಮೈ ಅಷ್ಟೊಂದು ಬಿಸಿಯಾಗಿರುವುದಕ್ಕಿಲ್ಲ, ವಮನವಾಗುವಹಾಗೆ ತೋರುತ್ತಿರುವದು, ಸೋಲು, ಆಹಾರವು ಜೀರ್ಣವಾಗುವುದಕ್ಕಿಲ್ಲ, ಮೈಯ್ಯಲ್ಲಿ ಭಾರ, ವ್ಯಥೆ, ರೋಮಾಂಚ, ಯಾವಾಗಲೂ ನಿದ್ರೆ, ನೆಗಡಿ, ಬಾಯಿಗೆ ಯಾವಪದಾರ್ಥವೂ ರುಚಿಸಲಿಕ್ಕಿಲ್ಲ, ಕೆಮ್ಮು, ಕಣ್ಣುಗಳು ಬೆಳ್ಳಗಿರುವುದು ಇವುಶ್ಲೇಷ್ಮಜ್ವರದ ಲಕ್ಷಣಗಳು.

ತೃಷ್ಣಾಮೂರ್ಛಾಭ್ರಮೋದಾಹಃಸ್ವಪ್ನನಾಶಶ್ಶಿರೋರುಜಾ ॥೧೬॥
ಕಂಠಾಸ್ಯಶೋಷೋವಮಥುಃರೋಮಹರ್ಷೋರುಚಿಸ್ತಮಃ ॥
ಪರ್ವಭೇದಶ್ಚ ಜೃಂಭಾಚವಾತಪಿತ್ತಜ್ವರಾಕೃತಿಃ ॥ ೧೭ ॥

ವಾತಪಿತ್ತಜ್ವರದ ಲಕ್ಷಣಗಳು- ಬಾಯಾರಿಕೆ, ಆಗಾಗ್ಗೆ ಮೂರ್ಛೆಬರುತ್ತಿರುವುದು, ಬುದ್ಧಿಭ್ರಮಣ, ಮೈಯ್ಯುರಿ, ತಲೆನೋವು, ನಿದ್ರೆಬಾರದೆಹೋಗುವುದು, ಬಾಯಿಮತ್ತು ಗಂಟಲು ಸಹ ಒಣಗುವುದು, ವಾಂತಿ, ರೋಮಾಂಚನ, ಅರುಚಿ, ಅಜ್ಞಾನ, ಶರೀರದಲ್ಲಿರತಕ್ಕ ಸಂಧಿಗಳೆಲ್ಲದರಲ್ಲಿಯೂ ವಡತ, ಆಕಳಿಕೆ ಇವುಗಳು ವಾತಪಿತ್ತಜ್ವರದ ಲಕ್ಷಣಗಳು.

ಸ್ತೈಮಿತ್ಯಂಪರ್ವಣಾಂಭೇದಃನಿದ್ರಾಗೌರವಮೇವಚ ॥
ಶಿರೋಗ್ರಹಃಪ್ರತಿಶ್ಯಾಯಃಕಾಸಃಸ್ವೇದಾಪ್ರವರ್ತನಂ ॥ ೧೬ ॥
ಸಂತಾಪೋಮಧ್ಯವೇಗಶ್ಚವಾತಶ್ಲೇಷ್ಮಜ್ವರಾಕೃತಿಃ ॥

ವಾತಶ್ಲೇಷ್ಮಜ್ವರದ ಲಕ್ಷಣಗಳು- ಮೈಗೆಲ್ಲಾ ಒದ್ದೆಬಟ್ಟೆಯನ್ನು ಹೊದ್ದುಕೊಂಡಂತೆ ಮನಸ್ಸಿಗೆತೋರುತ್ತಿರುವುದು, ಶರೀರದಕೀಲುಗಳಲ್ಲಿ ವಡತ, ನಿದ್ರೆ, ಮೈಯ್ಯಿಗೆ ಯಾವಾಗಲೂ ಜಡ್ಡಾಗಿರುವುದು, ತಲೆಭಾರ, ನೆಗಡಿ, ಕೆಮ್ಮು, ಬೆವರುಬಾರದೆನಿಂತುಹೋಗುವುದು, ಮೈಯ್ಯುರಿ, ಜ್ವರತಾಪವು ಅಷ್ಟುಹೆಚ್ಚಿಗೆ ಇರುವುದಿಲ್ಲ ಇದು ವಾತಶ್ಲೇಷ್ಮಜ್ವರದ ಲಕ್ಷಣಗಳು.

ಲಿಪ್ತತಿಕ್ತಾಸ್ಯತಾತಂದ್ರಾಮೋಹಃಕಾಸೋರುಚಿಸ್ತೃಷಾ ॥೧೭॥
ಮುಹುರ್ದಾಹೋಮುಹುಶ್ಶೀತಂಪಿತ್ತಶ್ಲೇಷ್ಮಜ್ವರಾಕೃತಿಃ ॥

ಬಾಯಿಗೆಲ್ಲಾ ಯಾವುದೋ ಒಂದು ಪದಾರ್ಥವನ್ನು ಲೇಪಮಾಡಿದಹಾಗೆಯೂ, ಮತ್ತು ಬಾಯೆಲ್ಲಾ ಕಹಿಯಾಗಿಯೂ ತೋರುತ್ತಿರುವುದು, ತೂಕಡಿಕೆ, ಅಜ್ಞಾನ, ಕೆಮ್ಮು, ಬಾಯಿರುಚಿಕೆಡುವುದು, ಬಾಯಾರಿಕೆ, ಕ್ಷಣಮಾತ್ರ ಮೈಯ್ಯುರಿ, ಉತ್ತರಕ್ಷಣದಲ್ಲಿಯೇ ಮೈಶೀತವಾದಂತಿರುವುದು ಇವು ಪಿತ್ತಶ್ಲೇಷ್ಮಜ್ವರದ ಲಕ್ಷಣಗಳು.

ಕ್ಷಣೇದಾಹಃಕ್ಷಣೇಶೀತಮಸ್ಥಿಸಂಧಿಶಿರೋರುಜಾ ॥ ೧೮ ॥
ಸಾಸ್ರಾವೇಕಲುಷೇರಕ್ತೇನಿರ್ಭುಗ್ನೇಚಾಪಿಲೋಚನೆ ॥
ಸಸ್ವನೌಸರುಜೌಕರ್ಣೌಕಂಠಶ್ಶೂಕೈರಿವಾವೃತಃ ॥ ೧೯ ॥
ತಂದ್ರಾಮೋಹಃ ಪ್ರಲಾಪಶ್ಚ ಕಾಸಶ್ಶ್ವಾಸೋರುಚಿರ್ಭ್ರಮಃ ॥
ಪರಿದಗ್ಧಾಖರಸ್ಪರ್ಶಾಜಿಹ್ವಾಸ್ರಸ್ತಾಂಗತಾಪರಂ ॥ ೨೦ ॥
ಠೀವನಂರಕ್ತಪಿತ್ತಸ್ಯಕಫೇನೋನ್ಮಿಶ್ರಿತಸ್ಯಚ ॥

ಶಿರಸೋಲೋಕಸಂತೃಷ್ಣಾನಿದ್ರಾನಾಶೋಹೃದಿವ್ಯಥಾ ॥ ೨೦ ॥
ಸ್ವೇದಮೂತ್ರಪುರೀಷಾಣಾಂಚಿರಾದ್ದರ್ಶನಮಲ್ಪಶಃ ॥
ಕೃಶತ್ವಂನಾತಿಗಾತ್ರಾಣಾಂಪ್ರತತಂಕಂಠಕೂಜನಂ ॥ ೨೧ ॥
ಕೋಠಾನಾಂಶ್ಯಾವರಕ್ತಾನಾಂಮಂಡಲಾನಾಂಚದರ್ಶನಂ ॥
ಮೂಕತ್ವಂಸ್ರೋತಸಾಂಪಾಕೋಗುರುತ್ವಮುದರಸ್ಯಚ ॥ ೨೩ ॥
ಚಿರಾತ್ಪಾಕಶ್ಚದೋಷಾಣಾಂಸನ್ನಿಪಾತಜ್ವರಾಕೃತಿಃ ॥

ಒಂದುಕ್ಷಣದಲ್ಲಿ ಮೈಯ್ಯೆಲ್ಲಾ ಉರಿಯಾದಂತೆ ತೋರುವುದು, ಉತ್ತರಕ್ಷಣದಲ್ಲಿಯೇ ಶೀತತೋರುವುದು, ಅಸ್ಥಿಗಳಲ್ಲಿ, ಸಂಧಿಗಳಲ್ಲಿ, ಅಂದರೆ ಕೀಲುಗಳಲ್ಲಿ, ತಲೆಯಲ್ಲಿಸಹಾ ನೋವು, ಕಣ್ಣುಗಳು ಕೆಂಪಾಗಿ ಪಿಸರುಸುತ್ತಿಕೊಂಡು ಅರಳಿಕೊಂಡಿರುವುದು, ಕಿವಿಯಲ್ಲಿ ಶಬ್ದವಾಗುತ್ತಲೂ ನೋವಾಗುತ್ತಲೂ ಇರುವುದು, ಗಂಟಲಿನಲ್ಲಿ ಭತ್ತದಮೊನೆಯಾದ ಮುಳ್ಳುಚುಚ್ಚಿದಂತಿರುವುದು, ತೂಕಡಿಕೆ, ಮತ್ತುಬರುವುದು, ವ್ಯಥೆ, ಕೆಮ್ಮು, ಉಬ್ಬಸ, ಅರುಚಿ, ಬುದ್ಧಿಭ್ರಮಣೆ ಇವುಗಳಿರುವುದು, ನಾಲಿಗೆಯು ಸುಟ್ಟುಹೋದಹಾಗೆ ಕಪ್ಪಾಗೂ, ಮುಟ್ಟಿದರೆ ಒರಟಾಗಿಯೂ ಇರುವುದು, ಅವಯವಗಳು ಯಾವಕೆಲಸವನ್ನೂ ಮಾಡಲಾರದಷ್ಟು ನಿತ್ರಾಣವಾಗಿರುವುದು, ಉಗುಳಿನಜೊತೆಯಲ್ಲಿ ರಕ್ತಮಿಶ್ರಿತವಾದ ಪಿತ್ತವಾಗಲಿ, ರಕ್ತಮಿಶ್ರಿತವಾದ ಕಫವಾಗಲಿ ಬರುವುದು, ತಲೆದೂಗುತ್ತಿರುವುದು, ಬಾಯಾರಿಕೆ, ನಿದ್ರೆಯಿಲ್ಲದೇಹೋಗುವುದು, ಎದೆಯಲ್ಲಿ ನೋವು, ಬೆವರು, ಮಲಮೂತ್ರಗಳುಸಹ ಬಹಳದಿವಸಕ್ಕೆ ಸ್ವಲ್ಪಸ್ವಲ್ಪವಾಗಿ ನಡೆಯುವುದು, ಶರೀರವು ಬಹಳವಾಗಿ ಕೃಶವಾಗಲಿಕ್ಕಿಲ್ಲ, ಗಂಟಲಿನಲ್ಲಿ ಯಾವಾಗಲೂ ಒಂದುವಿಧವಾದ ಸಣ್ಣಧ್ವನಿಯಾಗುತ್ತಿರುವುದು, ಮೈಯ್ಯಲ್ಲೆಲ್ಲಾ ಬೂದುಬಣ್ಣದ ಮತ್ತು ಕೆಂಪುಬಣ್ಣದ ಗಂದೆಗಳು ಗುಂಪುಗುಂಪಾಗಿ ಎದ್ದು ಕಾಣಿಸಿಕೊಳ್ಳುವುದು, ಕೆಲವುದಿವಸಗಳು ಮೂಗನಂತೆ ಮಾತಾಡದಿರುವುದು, ರಸರಕ್ತಾದಿಗಳನ್ನು ಶರೀರದ ಎಲ್ಲಾಭಾಗಕ್ಕೂ ಸಾಗಿಸತಕ್ಕ ಧಮನಿಗಳು ತಮ್ಮ ಕಾರ್ಯಗಳನ್ನು ಮಾಡಲು ಅಶಕ್ತಗಳಾಗುವುದು, ಹೊಟ್ಟೆಭಾರ, ರೋಗೋತ್ಪತ್ತಿಗೆ ಕಾರಣಗಳಾದ ದೋಷಗಳು ನಿದಾನವಾಗಿ ಪಕ್ವವಾಗುವುದು, ಇವುಗಳು ಸನ್ನಿಪಾತಜ್ವರದ ಲಕ್ಷಣಗಳು. ಈ ಸನ್ನಿಪಾತಜ್ವರದವಿಷಯದಲ್ಲಿ ವ್ಯಾಖ್ಯಾನಕಾರರು ಒಂದು ಸಂದೇಹವನ್ನು ಹಚ್ಚಿದ್ದಾರೆ. ಸನ್ನಿಪಾತಜ್ವರವೆಂದರೆ ವಾತ, ಪಿತ್ತ, ಶ್ಲೇಷ್ಮಗಳೆಂಬ ಮೂರು ದೋಷಗಳೂ ಪ್ರಕೋಪಕಾರಣಗಳಿಂದ ಕುಪಿತಗಳಾಗಿ ಜ್ವರವನ್ನುಂಟುಮಾಡಿದರೆ ಅದಕ್ಕೇನೇ ಸನ್ನಿಪಾತಜ್ವರವೆಂಬ ಹೆಸರು ಸಲ್ಲುತ್ತದೆ. ಆ ರೀತಿಯಾಗಿ ಪರಸ್ಪರವಿರುದ್ಧಧರ್ಮವುಳ್ಳ ಮೂರುದೋಷಗಳೂ ಕೂಡಿ ಜ್ವರವನ್ನು ಹುಟ್ಟಿಸಲಾರವು. ವಿರುದ್ಧಧರ್ಮವುಳ್ಳ ಕಾರಣಗಳು ಏಕೀಭವಿಸಿ ಒಂದುಕಾರ್ಯವನ್ನುಂಟುಮಾಡುವುದು ಅಸಂಭವವಾದದ್ದು ಎಂಬುವುದೇ ಸಂದೇಹ, ಇದಕ್ಕೆ ಸಮಾಧಾನ “ ವಿರುದ್ಧೈರಪಿನತ್ವೇತೇ ಗುಣೈರ್ಘ್ನಂತಿಪರಸ್ಪರಂ॥ದೋಷಾಸ್ಸಹಜಸಾತ್ಮ್ಯತ್ವಾದ್ಘೋರಂವಿಷಮಹೀನಿವ ॥ ” ಯದ್ಯಪಿ— ದೋಷಗಳು ಅಂದರೆ ವಾತ, ಪಿತ್ತ, ಕಫಗಳು, ಪರಸ್ಪರ ವಿರುದ್ಧಗುಣವುಳ್ಳವುಗಳೆಂಬುದು ನಿಶ್ಚಯ. ಆದರೂ ವಿರುದ್ಧಗಳಾದ ತಮ್ಮ ತಮ್ಮ ಗುಣಗಳಿಂದ ಪರಸ್ಪರಕ್ಕೆ ತೊಂದರೆಯನ್ನೇನೂ ಮಾಡಿಕೊಳ್ಳುವುದಿಲ್ಲ, ಹೇಗಂದರೆ ಹಾವಿನವಿಷವು ಇತರರಿಗೆ ಬಾಧಕವಾದರೂ ಹಾವಿಗೆಮಾತ್ರ ಯಾವತೊಂದರೆಯನ್ನೂ ಉಂಟುಮಾಡು

ವುದಿಲ್ಲವೋ ಅದರಂತೆಯೇ ವಾತಾದಿದೋಷಗಳು ಪರಸ್ಪರ ವಿರುದ್ಧಗಳಾದರೂ ಪರಸ್ಪರವಾಗಿ ತೊಂದರೆಯನ್ನೇನೂ ಮಾಡಿಕೊಳ್ಳುವುದಿಲ್ಲ "**ದೈವಾದ್ದೋಷಸ್ವಭಾವಾದ್ವಾ ದೋಷಾಣಾಂಸನ್ನಿಪಾತಿಕೆ ॥ ವಿರುದ್ಧೈಶ್ಚಗುಣೈಃಕಶ್ಚಿನ್ನೋಪಘಾತಃಪರಸ್ಪರಂ ॥**" ಸನ್ನಿಪಾತಜ್ವರದಲ್ಲಿ ದೈವನಿಯಮದಿಂದಲೋ ಅಥವಾ ದೋಷಗಳ ಸ್ವಭಾವದಿಂದಲೆಯೋ ಅಂತೂ ಯಾವದೋಕಾರಣದಿಂದ ಪರಸ್ಪರ ವಿರುದ್ಧಗುಣವುಳ್ಳ ವಾತ ಪಿತ್ತ ಕಫಗಳು ಪರಸ್ಪರವಿಘಾತಮಾಡದೆ ಸನ್ನಿಪಾತಜ್ವರವನ್ನು ಹುಟ್ಟಿಸುತ್ತವೆ. ಇದು ದೈವಿಕವಾದ ನಿಯಮ.

**ದೋಷೇವಿಬದ್ಧೇನಷ್ಟೇಗ್ನೌಸರ್ವಸಂಪೂರ್ಣಲಕ್ಷಣಃ ॥**
**ಸನ್ನಿಪಾತಜ್ವರೋಸಾಧ್ಯಃಕೃಚ್ಛ್ರಸಾಧ್ಯಸ್ತ್ವತೋನ್ಯಥಾ ॥೨೪॥**

ಸನ್ನಿಪಾತಜ್ವರದಲ್ಲಿ ಅಸಾಧ್ಯಕೃಚ್ಛ್ರಸಾಧ್ಯತ್ವಾದಿ ಲಕ್ಷಣಗಳನ್ನು ಹೇಳುತ್ತಾನೆ. ಸನ್ನಿಪಾತಜ್ವರವನ್ನು ಹುಟ್ಟಿಸಿದ ವಾತಾದಿದೋಷಗಳು ಹೊರಬೀಳದೆ ಸ್ತಬ್ಧವಾಗಿ ಶರೀರದಲ್ಲಿಯೇ ನಿಂತುಹೋಗಿ ಶರೀರಗತವಾದ ಜಠರಾಗ್ನಿಯು ಮಂದವಾಗಿ ಭೋಜನಮಾಡಿದ ಆಹಾರವು ಜೀರ್ಣವಾಗದೆ ಹಿಂದಿನ ಶ್ಲೋಕದಲ್ಲಿ ಹೇಳಿದ ಸನ್ನಿಪಾತಜ್ವರದ ಸಂಪೂರ್ಣಲಕ್ಷಣಗಳೂ ರೋಗಿಯಲ್ಲಿ ತೋರಿದರೆ ಅಂತಹ ಸನ್ನಿಪಾತಜ್ವರವು ಅಸಾಧ್ಯವೆಂದು ತಿಳಿಯಬೇಕು. ಮೇಲೆ ಹೇಳಿದ ಲಕ್ಷಣಗಳೆಲ್ಲಾ ಕೊಂಚಕಡಮೆಯಾಗಿದ್ದು ಅಂದರೆ ದೋಷಗಳು ಪಕ್ವವಾಗುತ್ತಿದ್ದು, ಆಹಾರವೂ ತಕ್ಕಮಟ್ಟಿಗೆ ಜೀರ್ಣವಾಗುತ್ತಿದ್ದು, ಸನ್ನಿಪಾತಜ್ವರದ ಲಕ್ಷಣಗಳು ಸಂಪೂರ್ಣವಾಗಿರದೆ ಇದ್ದಲ್ಲಿ ಅಂತಹ ಸನ್ನಿಪಾತಜ್ವರವು ಕಷ್ಟಸಾಧ್ಯವೆಂದು ತಿಳಿಯಬೇಕು. ಅಸಾಧ್ಯ ಮತ್ತು ಕಷ್ಟಸಾಧ್ಯ ಈ ಎರಡನ್ನೇ ವಿವರಿಸಿರುವುದರಿಂದ ಈ ಸನ್ನಿಪಾತಜ್ವರದಲ್ಲಿ ಸುಖಸಾಧ್ಯವೆಂಬುವುದು ಇಲ್ಲವೇ ಇಲ್ಲವೆಂದು ತಿಳಿಯಬಹುದು.

**ಸಪ್ತಮೇದಿವಸೇಪ್ರಾಪ್ತೇದಶಮೇದ್ವಾದಶೇಪಿವಾ ॥**
**ಪುನರ್ಘೋರತರೋಭೂತ್ವಾಪ್ರಶಮಂಯಾತಿಹಂತಿವಾ ॥೨೫॥**
**ಸಪ್ತಮೀದ್ವಿಗುಣಾಚೈವನವಮ್ಯೇಕಾದಶೀತಥಾ ॥**
**ಏಷಾತ್ರಿದೋಷಮರ್ಯಾದಾಮೋಕ್ಷಾಯಚವಧಾಯಚ ॥ ೨೬ ॥**

ಈ ಸನ್ನಿಪಾತಜ್ವರವು ಏಳನೆಯದಿವಸ, ಹತ್ತನೆಯದಿವಸ, ಹನ್ನೆರಡನೆಯ ದಿವಸ ಈ ದಿವಸಗಳಲ್ಲಿ ಅತ್ಯುಲ್ಬಣವಾಗಿ ಕಾಣಿಸಿಕೊಂಡು ಮುಂದೆ ಕಡಮೆಯಾಗುತ್ತ ಹೋದರೂ ಹೋಗಬಹುದು, ಪ್ರಾಣನಾಶವನ್ನಾದರೂ ಮಾಡಬಹುದು, ಏಳನೆಯ ದಿವಸ ದ್ವಿಗುಣಸಪ್ತಮಿ ಅಂದರೆ ಹದಿನಾಲ್ಕನೆಯದಿವಸ, ಈ ದ್ವಿಗುಣ ಎಂಬ ಶಬ್ದವನ್ನು ಮುಂದಿನ ಶಬ್ದಗಳಹಿಂದೆಯೂ ಪ್ರಕರಣಾನುರೋಧೇನ ಸೇರಿಸಿಕೊಳ್ಳಬೇಕು. ನವಮಿ ಅಂದರೆ ಒಂಬತ್ತನೆಯದಿವಸ, ಅಂತೇದ್ವಿಗುಣನವಮಿ ಅಂದರೆ ಹದಿನೆಂಟನೆಯದಿವಸ, ಏಕಾದಶಿ ಅಂದರೆ ಹನ್ನೊಂದನೆಯ ದಿವಸ, ಅದರಂತೆ ದ್ವಿಗುಣಏಕಾದಶಿ ಅಂದರೆ ಇಪ್ಪತ್ತೆರಡನೆಯ ದಿವಸ ಈ ದಿವಸಗಳಲ್ಲಿ ಅಂದರೆ ಏಳು, ಹದಿನಾಲ್ಕು, ಒಂಬತ್ತು, ಹದಿನೆಂಟು, ಹನ್ನೊಂದು, ಇಪ್ಪತ್ತೆರಡು ಇಷ್ಟುದಿವಸಗಳಲ್ಲಿ ಈ ಸನ್ನಿಪಾತಜ್ವರವು ಶಾಂತವಾದರೂ ಆಗಬಹುದು; ಮರಣದಲ್ಲಿ ಪರಿಣಮಿಸಿದರೂ ಪರಿಣಮಿಸಬಹುದು.

**ಸನ್ನಿಪಾತಜ್ವರಸ್ಯಾಂತೇಕರ್ಣಮೂಲೇಸುದಾರುಣಃ ||**
**ಶೋಥಸ್ಸಂಜಾಯತೇತೇನಕಶ್ಚಿದೇವಪ್ರಮುಚ್ಯತೇ || ೨೭ ||**

ಸನ್ನಿಪಾತಜ್ವರದಲ್ಲಿ ಅಸಾಧ್ಯಲಕ್ಷಣವೇನಂದರೆ; ಸನ್ನಿಪಾತಜ್ವರಕ್ಕೆ ಹೇಳುವ ಉಪದ್ರವಗಳೆಲ್ಲವೂ ಕಂಡಮೇಲೆ ರೋಗಿಯ ಕಿವಿಯಬುಡದಲ್ಲಿ ಭಯಂಕರವಾದ ಶೋಥ ಅಂದರೆ ಬಾವುಉಂಟಾಗುತ್ತದೆ. ಈ ರೀತಿಯಾಗಿ ಬಾವುಬಂದಲ್ಲಿ ಅದು ಅಸಾಧ್ಯವೆಂದು ತಿಳಿಯಬೇಕು. ಅದರಿಂದಲೇ " **ತೇನಕಶ್ಚಿದೇವಪ್ರಮುಚ್ಯತೆ** " ಅಂದರೆ ಯಾರಾದರೂ ಅಪರೂಪವಾಗಿ ಒಬ್ಬನು ಇಂತಹ ಅಸಾಧ್ಯವಾದ ಸನ್ನಿಪಾತಜ್ವರದಿಂದ ಮುಕ್ತನಾಗುತ್ತಾನೆಂದು ಹೇಳಿದ್ದಾರೆ.

**ತ್ರಯಃಪ್ರಕುಪಿತಾದೋಷಾಉರಸ್ರೋತೋನುಗಾಮಿನಃ ||**
**ಆಮಾಭಿವೃದ್ಧ್ಯಾಗ್ರಥಿತಾಬುದ್ಧೀಂದ್ರಿಯಮನೋನುಗಾಃ || ೨೮ ||**
**ಜನಯಂತಿಮಹಾಘೋರಮಭಿನ್ಯಾಸಂಜ್ವರಂದೃಢಂ ||**
**ಶ್ರುತೌನೇತ್ರೇಪ್ರಸುಪ್ತಿಸ್ಯಾನ್ನಚೇಷ್ಟಾಂಕಾಂಚಿದೀಹತೇ || ೨೯ ||**
**ನಚದೃಷ್ಟಿರ್ಭವೇತ್ತಸ್ಯಸಮರ್ಥಾರೂಪದರ್ಶನೇ ||**
**ನಘ್ರಾಣಂನಚಸಂಸ್ಪರ್ಶಂಶಬ್ದಂವಾನೈವಬುಧ್ಯತೆ || ೩೦ ||**
**ಶಿರೋಲೋಠಯತೇಭೀಕ್ಷ್ಣಮಾಹಾರಂನಾಭಿನಂದತಿ ||**
**ಕೂಜತಿತುದ್ಯತೇಚೈವಪರಿವರ್ತನಮೀಹತೆ || ೩೧ ||**
**ಅಲ್ಪಂಪ್ರಭಾಷತೇಕಿಂಚಿದಭಿನ್ಯಾಸಸ್ಸಉಚ್ಯತೇ ||**
**ಪ್ರತ್ಯಾಖ್ಯಾತಸ್ಸಭೂಯಿಷ್ಠಃಕಶ್ಚಿದೇವಾತ್ರಸಿದ್ಧ್ಯತಿ || ೩೨ ||**

ಅಭಿನ್ಯಾಸಜ್ವರವೆಂಬುದೊಂದು ಜ್ವರವು ಸನ್ನಿಪಾತಜ್ವರದಂತೆ ತ್ರಿದೋಷಜನ್ಯವಾದುದರಿಂದ ಸನ್ನಿಪಾತಜ್ವರವನ್ನು ಹೇಳಿದಮೇಲೆ ಇದನ್ನು ಹೇಳಿದ್ದಾರೆ. ಆಮಾಶಯಗತವಾದ ಆಹಾರವು ಚನ್ನಾಗಿಪಕ್ವವಾಗದೆ ಆಮವು ಅಭಿವೃದ್ಧಿಯಾಗಿ ಅಭಿವೃದ್ಧವಾದಆಮವು ಆಮಾಶಯಗತಗಳಾದ ಸ್ರೋತಸ್ಸುಗಳ ಮಾರ್ಗವಾಗಿಹೊರಟು, ದೋಷತ್ರಯಗಳನ್ನು ಪ್ರಕೋಪಗೊಳಿಸಿ, ಮನಸ್ಸು, ಬುದ್ಧಿ, ಇಂದ್ರಿಯಗಳನ್ನು ವ್ಯಾಕುಲಗೊಳಿಸಿ ಭಯಂಕರವಾದ ಅಭಿನ್ಯಾಸವೆಂಬ ಜ್ವರವನ್ನುಂಟುಮಾಡುತ್ತದೆ. ನೇತ್ರಪಾಟವ ಮತ್ತು ಶ್ರೋತ್ರೇಂದ್ರಿಯಪಾಟವಗಳು ಕಡಮೆಯಾಗುತ್ತವೆ. ದೃಷ್ಟಿಸಿ ಯಾವ ಪದಾರ್ಥವನ್ನೂ ನೋಡುವುದಕ್ಕಾಗುವುದಿಲ್ಲ, ವಾಸನೆ, ಶಬ್ದ, ಸ್ಪರ್ಶ ಇವುಗಳು ಗೊತ್ತಾಗುವುದಿಲ್ಲ, ಯಾವಾಗ್ಗೂ ತಲೆದೂಗುತ್ತಿರುವುದು, ಆಹಾರದಲ್ಲಿ ಅಭಿಲಾಷೆಯಿಲ್ಲದಿರುವುದು, ರೋಗಿಗೆ ಯಾವಾಗಲೂ ಹೊರಳಾಡಲು ಅಪೇಕ್ಷೆಯಾಗುತ್ತಿರುವುದು, ವ್ಯಥೆಪಡುತ್ತಿರುವುದು, ನರಳುತ್ತಿರುವುದು, ಮಿತವಾಗಿಮಾತನಾಡುತ್ತಿರುವುದ. ಇವು ಅಭಿನ್ಯಾಸಜ್ವರದ ಲಕ್ಷಣಗಳು. ಬಹು ದೋಷಪ್ರಕೋಪಜನ್ಯವಾದ್ದರಿಂದ ಈ ಅಭಿನ್ಯಾಸಜ್ವರವು ದುಶ್ಚಿಕಿತ್ಸ್ಯವೆಂದು ತಿರಸ್ಕರಿಸಿದ್ದಾರೆ. ಈ ಜ್ವರವನ್ನು ಚಿಕಿತ್ಸೆಮಾಡಿದ ವೈದ್ಯರಲ್ಲಿ ಸಿದ್ಧಿಹೊಂದಿದವರು ಅಪರೂಪ.

**ಅಭಿಘಾತಾಭಿಚಾರಾಭ್ಯಾಮಭಿಶಾಪಾಭಿಷಂಗತಃ ||**
**ಆಗಂತುರ್ಜಾಯತೇದೋಷೈರ್ಯಥಾಸ್ವಂತಂವಿಭಾವಯೇತ್ ||೩೩||**

ಸಹಜಜ್ವರಗಳನ್ನು ಹೇಳಿ ಆಗಂತುಜ್ವರಗಳನ್ನು ಹೇಳುತ್ತಾನೆ. ಆಕಸ್ಮಿಕವಾದ ಯಾವುದಾದರೂ ಪೆಟ್ಟುಗಳಿಂದಲೂ, ಶೂನ್ಯ, ಮಾಟ ಎಂಬದಾಗಿ ಲೋಕದಲ್ಲಿ ಪ್ರಸಿದ್ಧಗಳಾದ ಆಭಿಚಾರಿಕ ಕೃತ್ಯಗಳಿಂದಲೂ, ಯಾವುದಾದರೂ (ಸ್ತ್ರೀಬಂಧುಪುತ್ರಾದಿ ವಿಷಯ) ವ್ಯಾಮೋಹದಿಂದಲೂ, ಗ್ರಹಭೂತಾದಿಗಳ ಚೇಷ್ಟೆಗಳಿಂದಲೂ, ಬ್ರಾಹ್ಮಣರು, ಗುರುಗಳು, ವೃದ್ಧರು ಮೊದಲಾದವರುಗಳ ಅನಿಷ್ಟಾಶಂಸನಾದಿಗಳಿಂದಲೂ ಉಂಟಾಗ ತಕ್ಕ ಜ್ವರಗಳಿಗೆ ಆಗಂತುಜ್ವರಗಳೆಂಬ ಹೆಸರು. ಜ್ವರಸಾಮಾನ್ಯಸಂಪ್ರಾಪ್ತಿ ಲಕ್ಷಣಗಳನ್ನು ನೋಡಿಕೊಂಡು ಇಂತಹ ದೋಷಗಳು ಪ್ರಕೋಪವಾಗಿದೆ ಎಂಬುದನ್ನು ನಿರ್ಣಯಿಸಿಕೊಳ್ಳಬೇಕು.

**ಶ್ಯಾವಾಸ್ಯತಾವಿಷಕೃತೇತಥಾತೀಸಾರಏವಚ ||**
**ಭಕ್ತಾರುಚಿಃಪಿಪಾಸಾಚತೋದಶ್ಚ ಸಹಮೂರ್ಛಯಾ || ೩೪ ||**

ವಿಷಭಕ್ಷಣದಿಂದ ಉಂಟಾದ ಜ್ವರದಲ್ಲಿ ಮುಖವೆಲ್ಲ ಬೂದಿಯಬಣ್ಣವಾಗುವುದು, ಭೇದಿ, ಅನ್ನದಲ್ಲಿ ರುಚಿಇಲ್ಲದಿರುವುದು, ಬಾಯಾರಿಕೆ, ವ್ಯಥೆ ಮತ್ತು ಮೂರ್ಛೆ ಇವುಗಳು ಉಂಟಾಗುತ್ತವೆ.

**ಔಷಧಿಗಂಧಜೇಮೂರ್ಛಾಶಿರೋರುಗ್ವಮಥುಃಕ್ಷವಃ ||**
**ಕಾಮಜೇಚಿತ್ತವಿಭ್ರಂಶಸ್ತಂದ್ರಾಲಸ್ಯಮಭೋಜನಂ || ೩೫ ||**
**ಹೃದಯೇವೇದನಾಚಾಸ್ಯಗಾತ್ರಂಚಪರಿಶುಷ್ಯತಿ ||**
**ಭಯಾತ್ಪ್ರಲಾಪಶ್ಶೋಕಾಚ್ಚ ಭವೇತ್ಕೋಪಾಚ್ಚವೇಪಥುಃ ||೩೬||**
**ಅಭಿಚಾರಾಭಿಶಾಪಾಭ್ಯಾಂಮೋಹಸ್ತೃಷ್ಣಾಚಜಾಯತೆ ||**
**ಭೂತಾಭಿಷಂಗಾದುದ್ವೇಗೋಹಾಸ್ಯರೋದನಕಂಪನಂ || ೩೭ ||**

ಉಗ್ರಗಂಧವುಳ್ಳ ಔಷಧಗಳ ವಾಸನೆಯಿಂದುಂಟಾದ ಜ್ವರದಲ್ಲಿ- ಮೂರ್ಛೆ ವಮನ, ತಲೆನೋವು, ಪದೇಪದೇ ಸೀನುಬರುವುದು. ಕಾಮದಿಂದ ಉತ್ಪನ್ನವಾದ ಜ್ವರದಲ್ಲಿ- ಬುದ್ಧಿಭ್ರಂಶವಾಗುವುದು, ತೂಕಡಿಕೆ, ಕೆಲಸಮಾಡಲು ಉತ್ಸಾಹವಿಲ್ಲದಿರುವುದು, ಭೋಜನಮಾಡಲಪೇಕ್ಷೆಯಿಲ್ಲದಿರುವುದು, ಹೃದಯದಲ್ಲಿ ಒಂದು ವಿಧವಾದವೇದನೆಯುಂಟಾಗುತ್ತಿರುವುದು, ಮೈ ಒಣಗಿಕೊಂಡು ಶುಷ್ಕವಾಗಿಹೋಗುವುದು. ಭಯ ಮತ್ತು ದುಃಖದಿಂದ ಹುಟ್ಟಿದ ಜ್ವರದಲ್ಲಿ- ರೋದನಮಾಡುವುದು. ಕೋಪದಿಂದಹುಟ್ಟಿದ ಜ್ವರದಲ್ಲಿ- ಕಂಪ ಮತ್ತು ತಲೆನೋವು. ಶೂನ್ಯ, ಮಾಟ ಮತ್ತು ಗುರುಗಳು, ವೃದ್ಧರುಗಳು ಇಂತಹ ಪೂಜ್ಯರಾದವರಶಾಪ ಇವುಗಳಿಂದ ಉತ್ಪನ್ನವಾದ ಜ್ವರದಲ್ಲಿ- ಅಜ್ಞಾನ, ಬಾಯಾರಿಕೆ. ಭೂತಾದಿಶಂಕೆಗಳಿಂದ ಉತ್ಪನ್ನವಾದ ಜ್ವರದಲ್ಲಿ- ಅಳುವುದು, ನಗುವುದು, ವ್ಯಸನಪಡುವುದು, ಯಾವಾಗ್ಲೂ ನಡುಗುತ್ತಿರುವುದು ಇಂತಹಲಕ್ಷಣಗಳಿರುತ್ತವೆ.

**ಕಾಮಶೋಕಭಯಾದ್ವಾಯುಃಕ್ರೋಧಾತ್ಪಿತ್ತಂತ್ರಯೋಮಲಾಃ ||**
**ಭೂತಾಭಿಷಂಗಾತ್ಕುಪ್ಯಂತಿಭೂತಸಾಮಾನ್ಯಲಕ್ಷಣಾ: || ೩೮ ||**

ಆಗಂತುಕಜ್ವರದಲ್ಲಿ- ಇಂತಿಂತಹ ಜ್ವರದಲ್ಲಿ ಇಂತಿಂತಹ ದೋಷಗಳೇ ಪ್ರಕುಪಿತಗಳಾಗುತ್ತವೆ ಎಂಬ ವಿಷಯಗಳನ್ನು ನಿರ್ಣಯಿಸುತ್ತಾನೆ. ಕಾಮ, ಶೋಕ, ಭಯ ಇವುಗಳಿಂದ ಉತ್ಪನ್ನವಾದ ಜ್ವರದಲ್ಲಿ ವಾಯುವು ಪ್ರಕುಪಿತವಾಗುತ್ತದೆ. ಕೋಪದಿಂದ

ಹುಟ್ಟಿದಜ್ವರದಲ್ಲಿ ಪ್ರಾಧಾನ್ಯೇನ ಪಿತ್ತವೇ ಪ್ರಕುಪಿತವಾಗುತ್ತದೆ. ಭೂತಶಂಕೆಯಿಂದ ಉತ್ಪನ್ನವಾದಜ್ವರದಲ್ಲಿ ವಾತಾದಿತ್ರಿದೋಷಗಳು ಪ್ರಕುಪಿತವಾಗುವುದಲ್ಲದೆ ರೋಗಿಗೆ ಯಾವಭೂತಗ್ರಹವು ಆವಿಷ್ಟವಾಗಿದೆಯೋ ಆ ಭೂತಗ್ರಹದ ಲಕ್ಷಣಗಳು ಸಹ ತೋರುತ್ತಿರುತ್ತವೆ. ಭೂತಾಭಿಷಂಗಜನ್ಯಜ್ವರವು ಭೂತಲಕ್ಷಣ ದೋಷಲಕ್ಷಣೋಭಯ ಮಿಶ್ರಿತವಾದದ್ದೆಂದು ತಾತ್ಪರ್ಯ.

**ದೋಷೋಲ್ಪೋಹಿತಸಂಭೂತೋಜ್ವರೋತ್ಸೃಷ್ಟಸ್ಯವಾಪುನಃ ||**
**ಧಾತುಮನ್ಯತಮಂಪ್ರಾಪ್ಯಕರೋತಿವಿಷಮಂಜ್ವರಂ || ೩೯ ||**

ವಿಷಮಜ್ವರೋತ್ಪತ್ತಿ ಕ್ರಮವನ್ನು ಹೇಳುತ್ತಾನೆ. ಜ್ವರಬಂದು ಆಗತಾನೆ ಜ್ವರ ಬಿಟ್ಟಿರುವ ರೋಗಿಗೆ ವಿರುದ್ಧಗಳಾದ ಆಹಾರವಿಹಾರಗಳ ಸೇವನದಿಂದ ಪ್ರಕುಪಿತಗಳಾದ ಅಲ್ಪಪ್ರಮಾಣದಲ್ಲಿರುವ ದೋಷಗಳು ರಸರಕ್ತಾದಿಧಾತುಗಳಲ್ಲಿ ಯಾವದಾದರೂ ಒಂದರಸ್ಥಾನದಲ್ಲಿ ಸೇರಿಕೊಂಡು ಯಾವದರಸ್ಥಾನದಲ್ಲಿ ಸೇರಿದೆಯೋ ಅದನ್ನು ದೋಷಯುಕ್ತವಾಗುವಂತೆಮಾಡಿ ಜ್ವರವನ್ನು ಹುಟ್ಟಿಸುತ್ತದೆ. ಇದಕ್ಕೆ ವಿಷಮಜ್ವರವೆಂಬ ಹೆಸರು. ಮೇಲಿನ ಶ್ಲೋಕದಲ್ಲಿ ' ಜ್ವರೋತ್ಸೃಷ್ಟಸ್ಯವಾ ' ಎಂಬ ಶಬ್ದದಿಂದ ಜ್ವರದಿಂದಮುಕ್ತನಾದವನಿಗೂ ಕೂಡ ಎಂಬ ಅರ್ಥವನ್ನು ಸೂಚಿಸುವುದರಿಂದ ಒಂದುವೇಳೆ ಜ್ವರಬಂದುನಿಂತವನು ಅಪಥ್ಯಮಾಡಿದರೇನೇ ವಿಷಮಜ್ವರ ಬರುತ್ತದೆಂಬನಿಯಮವಿಲ್ಲ; ಸಾಮಾನ್ಯವಾಗಿ ವಿರುದ್ಧಾಹಾರವಿಹಾರಗಳನ್ನು ಸೇವಿಸುವುದರಿಂದ ಸಹ ದೋಷಗಳು ಪ್ರಕುಪಿತಗಳಾಗಿ ಧಾತುಸ್ಥಾನಗತಗಳಾಗಿ ವಿಷಮಜ್ವರವನ್ನು ಹುಟ್ಟಿಸಲೂ ಬಹುದು ಎಂದು ಸಹಾ ಕಲ್ಪಿಸಿಕೊಳ್ಳಬೇಕು.

**ಸಂತತಂರಸರಕ್ತಸ್ಥಸ್ಸೋನ್ಯೇದ್ಯುಃಪಿಶಿತಾಶ್ರಿತಃ ||**
**ಮೇದೋಗತಸ್ತೃತೀಯೇಹ್ನಿ ಅಸ್ಥಿಮಜ್ಜಗತಃಪುನಃ ||೪೦||**
**ಕುರ್ಯಾಚ್ಚತುರ್ಥಕಂಘೋರಮಂತಕಂರೋಗಸಂಕರಂ ||**

ವಿಷಮಜ್ವರದ ಒಳಭೇದಗಳನ್ನು ಹೇಳುತ್ತಾನೆ. ವಿರುದ್ಧಾಹಾರವಿಹಾರಗಳಿಂದ ಕುಪಿತಗಳಾದ ವಾತಾದಿಗಳು ರಸರಕ್ತಧಾತ್ವಾಶ್ರಿತಗಳಾಗಿ ರಸಧಾತು ಮತ್ತು ರಕ್ತಧಾತುಗಳನ್ನು ದುಷ್ಟವನ್ನಾಗಿಮಾಡಿದಲ್ಲಿ ಸಂತತಜ್ವರ ಹುಟ್ಟುತ್ತದೆ. ಪ್ರಕುಪಿತಗಳಾದದೋಷಗಳು ಮಾಂಸಾಶ್ರಿತಗಳಾದರೆ ಇವತ್ತು ಮತ್ತು ನಾಳೆಸಹ ಬಿಟ್ಟು ಬಿಟ್ಟು ಬರತಕ್ಕಂತಹ ಅನ್ಯೇದ್ಯುಷ್ಕವೆಂಬ ಜ್ವರವನ್ನು ಹುಟ್ಟಿಸುತ್ತವೆ. ಪ್ರಕುಪಿತಗಳಾದ ದೋಷಗಳು ಮೇದೋಧಾತುಗತಗಳಾದರೆ, ಇವತ್ತು ಬಂದು ನಾಳೆಬಾರದೆ ಮತ್ತೆ ನಾಡಿದ್ದುಬರತಕ್ಕ ತ್ರ್ಯಾಹಿಕವೆಂಬ ಹೆಸರಿನ ಜ್ವರವನ್ನು ಹುಟ್ಟಿಸುತ್ತವೆ. ಪ್ರಕುಪಿತಗಳಾದ ದೋಷಗಳು ಅಸ್ಥಿ ಮತ್ತು ಮಜ್ಜಧಾತುಗಳವರಿಗೂ ವ್ಯಾಪಿಸಿ ಅವುಗಳ ಸ್ಥಾನವನ್ನು ಕೆಡಿಸಿದರೆ ಮೃತ್ಯುವಿಗೆ ಸಮಾನವಾದ ಬಹಳ ಭಯಂಕರವಾದ ಮತ್ತು ನಾನಾ ರೋಗಸಂಕರದಷ್ಟು ಕಠಿನತಮವಾದ ಚತುರ್ಥಕ ಎಂದರೆ ನಾಲ್ಕುದಿವಸಕ್ಕೊಂದು ಬಾರಿಬರುವ ಜ್ವರವನ್ನು ಹುಟ್ಟಿಸುತ್ತವೆ.

**ಸಪ್ತಾಹಂವಾದಶಾಹಂವಾದ್ವಾದಶಾಹಮಥಾಪಿವಾ || ೪೧ ||**
**ಸಂತತ್ಯಾಯೋವಿಸರ್ಗೀಸ್ಯಾತ್ಸಂತತಸ್ಸನಿಗದ್ಯತೇ ||**

**ಅಹೋರಾತ್ರೇಸತತಕೋದ್ವೌಕಾಲಾವನುವರ್ತತೇ ॥ ೪೨ ॥**
**ಅನ್ಯೇದ್ಯುಷ್ಕಸ್ತ್ವಹೋರಾತ್ರೇಏಕಕಾಲಂಪ್ರವರ್ತತೇ ॥**
**ತೃತೀಯಕಸ್ತೃತೀಯೇಽಹ್ನಿ ಚತುರ್ಥೇಽಹ್ನಿ ಚತುರ್ಥಕಃ ॥ ೪೩ ॥**

ಸಂತತಾದಿಜ್ವರಗಳ ಲಕ್ಷಣಗಳನ್ನು ಹೇಳುತ್ತಾನೆ. ಏಳು, ಹತ್ತು, ಹನ್ನೆರಡುದಿವಸಗಳವರಿವಿಗೂ ಒಂದು ಕ್ಷಣಸಹ ಬಿಡದೆ ಬರುವ ಜ್ವರಕ್ಕೆ ಸಂತತಜ್ವರವೆಂದು ಹೆಸರು. ಹಗಲು ಮತ್ತು ರಾತ್ರಿಗಳಲ್ಲಿ ಎರಡೆರಡು ಸಲಬರುವುದು ಮತ್ತು ಒಂದೊಂದೇಸಲಬರುವುದು ಇಂತಹ ಜ್ವರಕ್ಕೆ ಸತತಜ್ವರವೆಂಬ ಹೆಸರು. ಒಂದು ಹಗಲು ರಾತ್ರಿಗಳಲ್ಲಿ ಒಂದೇಸಾರಿ ಬರುವುದಕ್ಕೆ ಅನ್ಯೇದ್ಯುಷ್ಕವೆಂಬ ಹೆಸರು. ಒಂದು ದಿವಸ ಬಿಟ್ಟು ಮಾರನೆಯ ದಿವಸ ಬರುವುದಕ್ಕೆ ತೃತೀಯಕವೆಂಬ ಹೆಸರು. ಎರಡುದಿವಸ ನಿಂತು ಒಂದು ದಿವಸ ಬರುವುದಕ್ಕೆ ಚತುರ್ಥಕವೆಂಬದಾಗಿ ಹೆಸರು.

**ಕೇಚಿದ್ಭೂತಾಭಿಷಂಗೋತ್ಥಂಬ್ರುವತೇವಿಷಮಂಜ್ವರಂ ||**

ಕೆಲವರು ಗ್ರಹಭೂತಾದಿಗಳ ಪ್ರಕೋಪಪ್ರಯುಕ್ತ ಸಂಬಂಧದಿಂದಲೂ ವಿಷಮಜ್ವರ ಹುಟ್ಟುತ್ತದೆಂದು ಹೇಳುತ್ತಾರೆ. ಈ ಅಭಿಪ್ರಾಯವು ಚರಕ, ಸುಶ್ರುತಗಳಿಗೂ ಸಮ್ಮತವೇ ಆಗಿದೆ, ಅಂದರೆ ಚಾತುರ್ಥಿಕಚಿಕಿತ್ಸೆಯನ್ನು ಹೇಳುವಾಗ್ಯೆ **'ದೈವವ್ಯಪಾಶ್ರಯಂಬಲಿಹೋಮಾದಿಭೂತೋಚಿತಂ || ಯುಕ್ತಿವ್ಯಪಾಶ್ರಯಂಕಷಾಯಪಾನಾದಿದೋಷೋಚಿತಂ'** ಎಂಬದಾಗಿ ಭೂತಚಿಕಿತ್ಸೆ, ದೋಷಚಿಕಿತ್ಸೆ ಎಂಬ ಎರಡು ವಿಧವಾದ ಚಿಕಿತ್ಸೆಯನ್ನೂ ಹೇಳಿದ್ದಾರೆ. ಚರಕದಲ್ಲಿ **'ಆಗಂತುರನುಬಂಧೋಹಿ ಪ್ರಾಯಶೋವಿಷಮಜ್ವರೇ'** ಅಂದರೆ ವಿಷಮಜ್ವರದಲ್ಲಿ ಆಗಂತುಕವಾದ ಗ್ರಹಭೂತಾದಿಗಳ ಸಮ್ಮಂಧವೂ ಪ್ರಾಯಶಃ ಅನುವರ್ತಿಸಿಕೊಂಡಿರುವುದುಂಟು ಎಂಬದಾಗಿಯೂ ಹೇಳಿರುತ್ತಾರೆ.

**ಕಫಪಿತ್ತಾತ್ತ್ರಿಕಗ್ರಾಹೀಪೃಷ್ಠಾದ್ವಾತಕಫಾತ್ಮಕಃ ॥ ೪೪ ||**
**ವಾತಪಿತ್ತಾತ್ ಶಿರೋಗ್ರಾಹೀತ್ರಿವಿಧಸ್ಯಾತ್ತೃತೀಯಕಃ ||**

ತೃತೀಯಕ, ಚತುರ್ಥಕಗಳು ಯದ್ಯಪಿ- ತ್ರಿದೋಷಜನ್ಯಗಳೇ ಆದರೂ ಉಲ್ಬಣದೋಷಾನುರೋಧೇನ ಲಕ್ಷಣಗಳು ಬೇರೆ ಬೇರೆ ವಿಧವಾಗಿರುತ್ತವೆಂದು ತಿಳಿಸುತ್ತಾನೆ. ಕಫ ಮತ್ತು ಪಿತ್ತ ಈ ದೋಷಗಳು ಪ್ರಧಾನವಾದ ತೃತೀಯಕಜ್ವರದಲ್ಲಿ ತ್ರಿಕಪ್ರದೇಶದಲ್ಲಿ ವೇದನೆಯೂ, ಕಫ ಮತ್ತು ವಾತಗಳು ಉಲ್ಬಣವಾದ ತೃತೀಯಕಜ್ವರದಲ್ಲಿ ಪೃಷ್ಠಭಾಗದಲ್ಲಿ ವೇದನೆಯೂ, ವಾತ ಮತ್ತು ಪಿತ್ತ ಪ್ರಧಾನವಾದ ತೃತೀಯಕಜ್ವರದಲ್ಲಿ ಶಿರೋಗ್ರಹವೆಂದರೆ ಶಿರೋವೇದನಾದಿಗಳೂ ಇರುತ್ತವೆ. ಈ ರೀತಿಯಾಗಿ ತೃತೀಯಕವು ಮೂರುವಿಧ.

**ಚತುರ್ಥಕೋದರ್ಶಯತಿಪ್ರಭಾವಂದ್ವಿವಿಧಂಜ್ವರಃ ॥ ೪೫ ॥**
**ಜಂಘಾಭ್ಯಾಂಶ್ಲೈಷ್ಮಿಕಃಪೂರ್ವಂಶಿರಸ್ತೋಽನಿಲಸಂಭವಃ॥**

ಚತುರ್ಥಕಜ್ವರವು ಸಹ ತ್ರಿದೋಷಪ್ರಕೋಪಜನ್ಯವಾದರೂ ದೋಷೋಲ್ಬಣಾನುರೋಧೇನ ಜ್ವರದ ಸಂಪ್ರಾಪ್ತಿಯನ್ನು ಹೇಳುತ್ತಾನೆ. ಶ್ಲೇಷ್ಮವು ಪ್ರಧಾನ ಅಂದರೆ ಉಲ್ಬಣವಾಗಿದ್ದರೆ ಜ್ವರವು ಪ್ರಾರಂಭವಾಗುವಾಗ್ಗೆ ಪಾದದಕಡೆಯಿಂದ ಪ್ರಾರಂ

ಭವಾಗುತ್ತದೆ; ಅಂದರೆ ಕಾಲಿನಕಡೆಯಿಂದ ಬೆಚ್ಚಗಾಗುತ್ತ ಹೋಗುತ್ತದೆ. ವಾತಪ್ರಧಾನ ಅಂದರೆ ವಾತಉಲ್ಬಣವಾಗಿಬರುವ ಚಾತುರ್ಥಿಕಜ್ವರವು ತಲೆಯಕಡೆಯಿಂದ ಆರಂಭವಾಗುತ್ತದೆ; ಅಂದರೆ ಮೊದಲು ತಲೆಕಾಯುತ್ತ ಜ್ವರಪ್ರಾರಂಭವಾಗುತ್ತದೆ.

**ವಿಷಮಜ್ವರವಿವಾನ್ಯಶ್ಚತುರ್ಥಕವಿಪರ್ಯಯಃ ॥ ೪೬ ॥**
**ಮಧ್ಯೇಽಹನೀಜ್ವರಯತಿಹ್ಯಾದಾವಂತೇಚಮುಂಚತಿ ॥**

ವಿಷಮಜ್ವರಗಳಲ್ಲಿ ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕಾದಿಗಳನ್ನು ನಿರೂಪಣೆಮಾಡಿ ತಂತ್ರಾಂತರಗಳಲ್ಲಿ ಹೇಳಿರುವ ವಿಷಮಜ್ವರವಿಪರ್ಯಸ್ತಗಳಾದ ಅಂದರೆ ವಿಷಮಜ್ವರಕ್ಕಿಂತ ವಿಪರೀತಗಳಾದ ಜ್ವರಗಳನ್ನು ಕೂಡ ವಿಷಮಜ್ವರಗಳಲ್ಲಿಯೇ ಸೇರಿಸಿರುವುದರಿಂದ ಅದೇ ವಿಷಯವನ್ನು ಇಲ್ಲಿಕೂಡ ದಿಙ್ಮಾತ್ರಪ್ರದರ್ಶನಮಾಡಿರುತ್ತಾನೆ. ಹಿಂದೆಹೇಳಿದ ಚತುರ್ಥಕಜ್ವರಕ್ಕೆ ಪೂರಾ ವಿರುದ್ಧವಾದ ( ಸಾಮಾನ್ಯವಾದ ಚತುರ್ಥಕಜ್ವರವು ನಡುವೆ ಎರಡುದಿವಸ ಬಿಡುವುದು ಒಂದುದಿವಸ ಬರುವುದು ಈ ರೀತಿ; ಈ ಶ್ಲೋಕದಲ್ಲಿ ಹೇಳುವ ಚತುರ್ಥಕ ವಿರುದ್ಧಜ್ವರವು ನಡುವೆ ಎರಡುದಿವಸ ಬರುವುದು ಕೊನೆಯ ದಿವಸ ಬಿಡುವುದು ಈ ರೀತಿಯಾಗಿ ) ವಿಷಮಜ್ವರವೆಂದು ವ್ಯವಹರಿಸಿ ಕೊಳ್ಳುವ ಒಂದು ಜ್ವರವಿದೆ. ಇದರ ಕ್ರಮವು ಹೇಗೆಂದರೆ– ಮಧ್ಯದ ಎರಡುದಿವಸ ಬರುವುದು ಕೊನೆಯ ಮತ್ತು ಮೊದಲನೆಯ ದಿವಸಗಳಲ್ಲಿ ಬಿಡುವುದು. ಈ ರೀತಿಯಾಗಿ ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕಾದಿಗಳಿಗೆ ಪ್ರತಿಯೋಗಿಗಳಾದ ವಿಷಮಜ್ವರಗಳನ್ನೂ ಊಹಿಸಿಕೊಳ್ಳಬೇಕು.

**ನಿತ್ಯಂಮಂದಜ್ವರೋರೂಕ್ಷಶ್ಶೂನಕಸ್ತೇನಸೀದತಿ ॥ ೪೭ ॥**
**ಸ್ತಬ್ಧಾಂಗಶ್ಲೇಷ್ಮಭೂಯಿಷ್ಠೋನರೋವಾತಬಲಾಸಕೀ ॥**

ವಾತಬಲಾಸಕ ಎಂಬ ಜ್ವರಯುಕ್ತನಾದ ಮನುಷ್ಯನು ಪ್ರತಿನಿತ್ಯವೂ ಮಂದವಾದ ಜ್ವರವೇಗವುಳ್ಳವನಾಗಿ, ಶ್ಲೇಷ್ಮಜ್ವರದ ಲಕ್ಷಣಗಳು ಹೆಚ್ಚಿಗೆ ಇದ್ದರೂ ವಾತಪಿತ್ತಗಳ ಸಂಪರ್ಕವೂ ಇರುವುದರಿಂದ ರೂಕ್ಷಸ್ವಭಾವವುಳ್ಳವನಾಗಿ ಸ್ತಬ್ಧವಾದ ಅಂಗಚೇಷ್ಟೆಯುಳ್ಳವನಾಗಿ ವಾತಬಲಾಸಕವೆಂಬ ಜ್ವರದಿಂದ ಮೈಕೈಯ್ಯಲ್ಲೆಲ್ಲಾ ಶೋಭೆಬಂದು ಅದರಿಂದ ಅವಸನ್ನನಾಗುತ್ತಾನೆ; ಅಂದರೆ ಮರಣಹೊಂದುತ್ತಾನೆಂಬ ತಾತ್ಪರ್ಯ.

**ಪ್ರಲಿಂಪನ್ನಿವಗಾತ್ರಾಣಿಘರ್ಮೇಣಗೌರವೇಣಚ ॥ ೪೮ ॥**
**ಮಂದಜ್ವರವಿಲೇಪೀಚಸಶೀತಸ್ಯಾತ್ಪ್ರಲೇಪಕಃ ॥**

ಶಾಖದಿಂದಲೂ ಮೈಭಾರದಿಂದಲೂ ಶರೀರಾದ್ಯಂತವೂ ಯಾವುದೋ ಪದಾರ್ಥದಿಂದ ಲೇಪಮಾಡಿಕೊಂಡಿರುವಂತೆ ತೋರುತ್ತ ಜ್ವರವೇಗವು ಮಂದವಾಗಿದ್ದುಕೊಂಡಿರುವುದು ಪ್ರಲೇಪಕವೆಂಬ ಶೀತಪ್ರಧಾನವಾದ ಜ್ವರ.

**ವಿದಗ್ಧೇನ್ನರಸೇದೇಹೇಶ್ಲೇಷ್ಮಪಿತ್ತೇವ್ಯವಸ್ಥಿತೇ ॥ ೪೯ ॥**
**ತೇನಾರ್ಧಂಶೀತಲಂದೇಹೇಚಾರ್ಧಂಚೋಷ್ಣಂಪ್ರಜಾಯತೇ ॥**

ಶರೀರದಲ್ಲಿ ಆಹಾರರಸವು ಅತಿಪಕ್ವವಾಗಿ ದುಷ್ಟವಾಗಲು ಶ್ಲೇಷ್ಮ ಮತ್ತು ಪಿತ್ತಗಳು ಸಹ ಅವ್ಯವಸ್ಥಿತಗಳಾಗಿ ದುಷ್ಟಗಳಾಗುತ್ತವೆ. ಈ ಅವ್ಯವಸ್ಥೆಯಿಂದ ಶರೀರದ ಆದ್ಯಂತವೂ, ಅರ್ಧಭಾಗ ತಣ್ಣಗೂ, ಮತ್ತರ್ಧಭಾಗ ಬಿಸಿಯಾಗಿಯೂ ಇರುತ್ತದೆ.

**ಕಾಯೇದುಷ್ಟಂಯದಾಪಿತ್ತಂಶ್ಲೇಷ್ಮಾಚಾಂತೇವ್ಯವಸ್ಥಿತಃ ॥ ೫೦ ॥**
**ತೇನೋಷ್ಣತ್ವಂಶರೀರಸ್ಯಶೀತತ್ವಂಹಸ್ತಪಾದಯೋಃ ॥**

ಶರೀರದಲ್ಲಿ ಕೋಷ್ಠಗತವಾದ ಪಿತ್ತವು ಪ್ರಕುಪಿತವಾಗಿ ಶರೀರಗತವಾದಶ್ಲೇಷ್ಮವನ್ನು ಶಾಖೆಗಳಿಗೆ ಅಂದರೆ ಶರೀರಶಾಖೆಗಳಾದ ಹಸ್ತಪಾದಗಳ ಕಡೆಗೆ ತಳ್ಳಿಬಿಡುತ್ತದೆ. ಇದರಿಂದಲೇ ಕೆಲವುಜ್ವರಗಳಲ್ಲಿ ಶರೀರವು ಉಷ್ಣವಾಗಿಯೂ, ಕೈಕಾಲುಗಳು ಶೀತವಾಗಿಯೂ ಇರುತ್ತವೆ.

**ಕಾಯೇದುಷ್ಟೋಯದಾಶ್ಲೇಷ್ಮಾಪಿತ್ತಂಚಾಂತೇವ್ಯವಸ್ಥಿತಂ ॥ ೫೧ ॥**
**ಶೀತತ್ವಂತೇನಗಾತ್ರಾಣಾಂಉಷ್ಣತ್ವಂಹಸ್ತಪಾದಯೋಃ ॥**

ಶರೀರಗತವಾದ ಶ್ಲೇಷ್ಮವು ಪ್ರಕುಪಿತವಾಗಿ ಪಿತ್ತವನ್ನೆಲ್ಲಾ ದೇಹದ ಶಾಖೆಗಳ ಕಡೆಗೆ ಅಂದರೆ ಕೈಕಾಲುಗಳಕಡೆಗೆ ತಳ್ಳಿದರೆ ಶರೀರವೆಲ್ಲಾ ಶೀತವಾಗಿಯೂ, ಕೈಕಾಲುಗಳು ಉಷ್ಣವಾಗಿಯೂ ಇರುತ್ತವೆ.

**ತ್ವಕ್‌ಸ್ಥೌಶ್ಲೇಷ್ಮಾನಿಲೌಶೀತಮಾದೌಜನಯತೋಜ್ವರೇ ॥ ೫೨ ॥**
**ತಯೋಃಪ್ರಶಾಂತಯೋಃಪಿತ್ತಮಂತೇದಾಹಂಕರೋತಿಚ ॥**
**ಕರೋತ್ಯಾದೌತಥಾಪಿತ್ತಂತ್ವಕ್‌ಸ್ಥಂದಾಹಮತೀವಚ ॥ ೫೩ ॥**
**ತಸ್ಮಿನ್ಪ್ರಶಾಂತೇತ್ವಿತರೌಕುರುತಶ್ಶೀತಮಂತತಃ ॥**
**ದ್ವಾವೇತೌದಾಹಶೀತಾದಿಜ್ವರೌಸಂಸರ್ಗಜೌಸ್ಮೃತೌ ॥ ೫೪ ॥**
**ದಾಹಪೂರ್ವಸ್ತಯೋಃಕಷ್ಟಃಕೃಚ್ಛ್ರಸಾಧ್ಯತಮಶ್ಚಸಃ ॥**

ಚರ್ಮಗತಗಳಾದ ವಾತ ಮತ್ತು ಶ್ಲೇಷ್ಮಗಳು ಪ್ರಕುಪಿತಗಳಾದರೆ ಜ್ವರದ ಪ್ರಾರಂಭದಲ್ಲಿ ಛಳಿಬಂದು ವಾತಶ್ಲೇಷ್ಮಗಳವೇಗ ಕಡಮೆಯಾದಮೇಲೆ ಪಿತ್ತವು ಶರೀರದಲ್ಲಿ ಉರಿಯನ್ನೂ, ಜ್ವರವನ್ನೂ ಉಂಟುಮಾಡುತ್ತದೆ. ಚರ್ಮಗತವಾದ ಪಿತ್ತವು ಪ್ರಥಮತಃ ಕುಪಿತವಾದರೆ ಮೊದಲೇ ಮೈಯುರಿ ಜ್ವರಸಹ ಪ್ರಾರಂಭವಾಗಿ ಪಿತ್ತದವೇಗ ಕಡಮೆಯಾಗಿ ವಾತಶ್ಲೇಷ್ಮಗಳವೇಗ ಪ್ರಾರಂಭವಾದ ಹಾಗೆಲ್ಲಾ ಶೈತ್ಯ, ಛಳಿಸಹ ಬರಹತ್ತುತ್ತದೆ. ಈ ಎರಡು ವಿಧವಾದ ಜ್ವರಗಳೂ ತ್ರಿದೋಷಸಂಸರ್ಗದಿಂದ ಹುಟ್ಟತಕ್ಕವುಗಳೇ, ಇವುಗಳಲ್ಲಿ ಛಳಿಬಂದು ಜ್ವರಬರುವುದು ಸುಖಸಾಧ್ಯವೆಂಬದಾಗಿಯೂ, ಜ್ವರಬಂದನಂತರ ಛಳಿಬರುವುದು ಕಷ್ಟಸಾಧ್ಯವೆಂಬದಾಗಿಯೂ ತಿಳಿಯಬೇಕು.

**ಗುರುತಾಹೃದಯೋತ್ಕ್ಲೇಶಸ್ಸದನಂಛರ್ದ್ಯರೋಚಕೌ ॥ ೫೫ ॥**
**ರಸಸ್ಥೇತುಜ್ವರೇಲಿಂಗಂದೈನ್ಯಂಚಾಸ್ಯೋಪಜಾಯತೇ ॥**
**ರಕ್ತನಿಷ್ಠೀವನಂದಾಹೋಮೋಹಶ್ಛರ್ದನವಿಭ್ರಮೌ ॥ ೫೬ ॥**
**ಪ್ರಲಾಪಃಪಿಡಕಾತೃಷ್ಣಾರಕ್ತಪ್ರಾಪ್ತೇಜ್ವರೇನೃಣಾಂ ॥**
**ಪಿಂಡಿಕೋದ್ವೇಷ್ಟನಂತೃಷ್ಣಾಸೃಷ್ಟಮೂತ್ರಪುರೀಷತಾ ॥ ೫೭ ॥**
**ಊಷ್ಮಾಂತರ್ದಾಹವಿಕ್ಷೇಪೌಗ್ಲಾನಿಸ್ಸ್ಯಾನ್ಮಾಂಸಗೇಜ್ವರೇ ॥**
**ಭೃಶಂಸ್ವೇದಸ್ತೃಷಾಮೂರ್ಛಾಪ್ರಲಾಪಶ್ಛರ್ದಿರೇವಚ ॥ ೫೮ ॥**
**ದೌರ್ಗಂಧ್ಯಾರೋಚಕೌಗ್ಲಾನಿರ್ಮೇದಸ್ಥೇಚಾಸಹಿಷ್ಣುತಾ ॥**
**ಭೇದೋಸ್ಥ್ನಾಂಕೂಜನಂಶ್ವಾಸೋವಿರೇಕಶ್ಛರ್ದಿರೇವಚ ॥ ೫೯ ॥**

**ವಿಕ್ಷೇಪಣಂಚಗಾತ್ರಾಣಾಮೇತದಸ್ಥಿಗತೇಜ್ವರೇ ||**
**ತಮಃಪ್ರವೇಶನಂಹಿಕ್ಕಾಕಾಸಶ್ಶೈತ್ಯಂವಮಿಸ್ತಥಾ || ೬೦ ||**
**ಅಂತರ್ದಾಹೋಮಹಾಶ್ವಾಸೋಮರ್ಮಛೇದಶ್ಚಮಜ್ಜಗೇ ||**
**ಮರಣಂಪ್ರಾಪ್ನುಯಾತ್ತತ್ರಶುಕ್ರಸ್ಥಾನಗತೇಜ್ವರೇ || ೬೧ ||**
**ಶೇಫಸಸ್ತಬ್ಧತಾಮೋಕ್ಷಶ್ಶುಕ್ರಸ್ಯತುವಿಶೇಷತಃ ||**

ಹಿಂದೆಹೇಳಿದ ತ್ರಿದೋಷಜನ್ಯಜ್ವರಗಳು ದೂಷ್ಯಗಳಾದ ಧಾತುಗಳ ಭೇದದಿಂದ ಭಿನ್ನಭಿನ್ನಗಳಾಗುತ್ತವೆಂಬ ವಿಷಯವನ್ನು ವಿಶದವಾಗಿ ಹೇಳುತ್ತಾನೆ. ಮೈಭಾರ, ವಮನವಾಗುವಂತೆ ತೋರುತ್ತಿರುವುದು, ಮೈ ನೋವು, ವಮನವೂ ಆಗುವುದು, ಭೋಜನದಲ್ಲಿ ರುಚಿತಪ್ಪಿಹೋಗುವುದು, ದೈನ್ಯಂ ಅಂದರೆ ಶರೀರದಲ್ಲಿ ಸಂಕಟವಾಗುತ್ತಿರುವಂತೆ ಮುಖಲಕ್ಷಣಗಳಿಂದ ತೋರುತ್ತಿರುವುದು, ಈ ಲಕ್ಷಣಗಳು ಜ್ವರವು ರಸಧಾತ್ವಾಶ್ರಿತಗಳಾದರೆ ಕಂಡುಬರುತ್ತವೆ. ಉಗುಳಿದರೆ ರಕ್ತಬರುವುದು, ಮೈಯ್ಯುರಿ, ಆಗಾಗ್ಗೆಮತ್ತತೆತೋರುವುದು, ವಮನವಾಗುತ್ತಿರುವುದು, ಬುದ್ಧಿ ಸರಿಯಿಲ್ಲದಿರುವುದು, ಸಂಕಟ, ರೋದನಮಾಡುವುದು, ಮೈಯ್ಯಲ್ಲಿ ಬೊಕ್ಕೆಗಳುಕಾಣುವುದು, ಬಾಯಾರಿಕೆ ಇವುಗಳುರಕ್ತಧಾತ್ವಾಶ್ರಿತಜ್ವರದ ಲಕ್ಷಣಗಳು. ಮೀನಖಂಡದ ಮಾಂಸಗಳು ಕೋಲಿನಿಂದ ಬಡದಂತೆ ನೋಯುತ್ತಿರುವುದು, ಬಾಯಾರಿಕೆ, ಮಲಮೂತ್ರಗಳು ನಡದಿರುವುದು, ಜ್ವರಿತನ ಹತ್ತರ ಕುಳಿತರೆ ಶಖೆಯಾಗುವುದು, ಅಂತರ್ದಾಹ, ವಿಕ್ಷೇಪವೆಂದರೆ ಸಂಕಟದಿಂದ ಹೊರಳಾಡುತ್ತಿರುವುದು, ಬಳಲಿಕೆ ಇವುಗಳು ಮಾಂಸಾಶ್ರಿತಜ್ವರದ ಲಕ್ಷಣಗಳು. ಪದೇಪದೇ ಬೆವರುಬರುವುದು, ಬಾಯಾರಿಕೆ, ಮೂರ್ಛೆ, ಸಂಕಟವನ್ನು ತಡೆಯಲಾರದೆ ಅಳುವುದು, ವಮನ, ಮೈ ದುರ್ವಾಸನೆ, ಅರುಚಿ, ಬಳಲಿಕೆ, ಅಸಹಿಷ್ಣುತಾ ಅಂದರೆ ಸ್ವಲ್ಪಕಾರಣದಿಂದಲೇ ಶಿಟ್ಟುಬರುವುದು ಇವುಗಳು ಮೇದೋಧಾತ್ವಾಶ್ರಿತಜ್ವರದ ಲಕ್ಷಣಗಳು. ಯಲುಬುಗಳಲ್ಲಿ ನೋವು, ವಡತ, ಗಂಟಲಿನಲ್ಲಿ ಸಣ್ಣನಾಗಿ ಸದ್ದಾಗುವುದು, ಊರ್ಧ್ವಶ್ವಾಸಬರುವುದು, ಭೇದಿ ಮತ್ತು ವಮನಸಹ ಉಂಟಾಗುವುದು, ಸಂಕಟತಡಿಯಲಾರದೆ ಸದಾ ಹೊರಳಾಡುತ್ತಿರುವುದು ಇವು ಅಸ್ಥಿಗತಜ್ವರದಲಕ್ಷಣಗಳು. ಕತ್ತಲೆಯಲ್ಲಿ ಸೇರಿರುವವರಿಗೆ ಆಗುವಂತೆ ರೋಗಿಗೆ ಕಣ್ಣುಸಹ ಕಾಣದಂತಾಗುವುದು, ಬಿಕ್ಕಳಿಕೆ, ಕೆಮ್ಮು, ಮೈಕೈಗಳೆಲ್ಲಾ ತಣ್ಣಗಾಗುವುದು, ವಮನ, ಅಂತರ್ದಾಹ, ಊರ್ಧ್ವಶ್ವಾಸ, ಮರ್ಮಸ್ಥಾನಕ್ಕೆ ಯಾತನೆಯಾದಂತೆ ವ್ಯಥೆಯಾಗುವುದು ಇವು ಮಜ್ಜಧಾತ್ವಾಶ್ರಿತಜ್ವರದ ಲಕ್ಷಣಗಳು. ಜ್ವರವು ಶುಕ್ರಧಾತ್ವಾಶ್ರಿತವಾದರೆ ಶಿಶ್ನವು ನಿಶ್ಚಲವಾಗುವುದು, ಶುಕ್ರವು ಸ್ರವಿಸುವುದು, ಕೊನೆಯಲ್ಲಿ ಮರಣ ಸಂಭವಿಸುವುದು ಇವು ಲಕ್ಷಣಗಳು.

**ರಸರಕ್ತಾಶ್ರಿತಸ್ಸಾಧ್ಯಃಮಾಂಸಮೇದೋಗತಶ್ಚಯಃ || ೬೨ ||**
**ಅಸ್ಥಿಮಜ್ಜಾಗತಃಕೃಚ್ಛ್ರಃಶುಕ್ರಸ್ಥಸ್ತುನಸಿಧ್ಯತಿ ||**

ಹಿಂದೆ ಹೇಳಿದ ಧಾತ್ವಾಶ್ರಿತಜ್ವರಗಳಮಧ್ಯೆ ರಸ, ರಕ್ತ, ಮಾಂಸ, ಮೇದಸ್ಸು ಈ ನಾಲ್ಕು ಧಾತುಗಳನ್ನಾಶ್ರಯಿಸಿದ ಜ್ವರವು ಸಾಧ್ಯವೆಂತಲೂ, ಅಸ್ಥಿ ಮತ್ತು ಮಜ್ಜಧಾತು ಇವುಗಳನ್ನನುಸರಿಸಿರುವ ಜ್ವರವು ಕಷ್ಟಸಾಧ್ಯವೆಂಬದಾಗಿಯೂ ಶುಕ್ರಧಾತ್ವಾ

ಶ್ರಿತವಾದ ಜ್ವರವು ಸಾಧ್ಯವೇ ಆಗುವುದಿಲ್ಲವೆಂಬದಾಗಿಯೂ ತಿಳಿದುಕೊಳ್ಳಬೇಕು.

**ವರ್ಷಾಶರದ್ವಸಂತೇಷುವಾತಾದ್ಯೈಃಪ್ರಾಕೃತಃಕ್ರಮಾತ್ ॥೬೨॥**
**ವೈಕೃತೋನ್ಯಸ್ಸದುಸ್ಸಾಧ್ಯಃಪ್ರಾಕೃತಶ್ಚಾನಿಲೋದ್ಭವಃ ॥**

ಕಾಲಭೇದದಿಂದಲೂ ಜ್ವರಗಳ ಸಾಧ್ಯ ಮತ್ತು ಅಸಾಧ್ಯತ್ವವನ್ನು ನಿಶ್ಚಯಿಸಬಹುದೆಂದು ಹೇಳುತ್ತಾನೆ. ವರ್ಷ, ಶರತ್, ವಸಂತ ಈ ಋತುಗಳಲ್ಲಿ ವಾತ, ಪಿತ್ತ, ಕಫ ಈ ದೋಷಗಳಿಂದ ಕ್ರಮವಾಗಿ ಉತ್ಪನ್ನಗಳಾದ ಜ್ವರಗಳು, ಪ್ರಾಕೃತಗಳು ಅಂದರೆ ರೋಗವು ಹುಟ್ಟಿರತಕ್ಕ ಕಾಲ ಮತ್ತು ರೋಗೋತ್ಪಾದಕಗಳಾದ ದೋಷಗಳು ಈ ಎರಡೂ ಸಮಾನ ಪ್ರಕೃತಿಕಗಳಾದ್ದರಿಂದ ಸುಖಸಾಧ್ಯಗಳೆಂದೂ, ವೈಕೃತಃ ಅಂದರೆ **ಕಾಲ** ಮತ್ತು ರೋಗೋತ್ಪಾದಕದೋಷ ಇವುಗಳು ಪರಸ್ಪರ ವಿರುದ್ಧಗಳಾಗಿರುವ **ಕಾಲ**ದಲ್ಲಿ ಅಂದರೆ ವರ್ಷಋತುವಿನಲ್ಲಿ ಪಿತ್ತಪ್ರಕೋಪಜನ್ಯ, ಶರದೃತುವಿನಲ್ಲಿ ವಾತಪ್ರಕೋಪಜನ್ಯ ಈ ರೀತಿಯಲ್ಲಿ ಉತ್ಪನ್ನವಾದ ಜ್ವರವು ವೈಕೃತವಾದ್ದರಿಂದ ದುಸ್ಸಾಧ್ಯವೆಂತಲೂ, ವಾತಜ್ವರವು ವರ್ಷಋತುವಿನಲ್ಲಿ ಪ್ರಾಕೃತವಾದರೂ ದುಸ್ಸಾಧ್ಯವೆಂತಲೇ ಹೇಳಬೇಕು. ಮಿಕ್ಕ ರೋಗಗಳೆಲ್ಲವೂ ಕಾಲದೋಷ ವೈಧರ್ಮ್ಯವಿದ್ದಲ್ಲಿ ಸುಖಸಾಧ್ಯವೆಂದು ತಿಳಿಯತಕ್ಕದ್ದು. ಜ್ವರದಲ್ಲಿ ಮಾತ್ರ **'ಜ್ವರೇತುಲ್ಯರ್ತುದೋಷತ್ವಂಪ್ರಮೇಹೇತುಲ್ಯದೂಷ್ಯತಾ ॥ ರಕ್ತಗುಲ್ಮೇಪುರಾಣತ್ವಂಸುಖಸಾಧ್ಯಸ್ಯಲಕ್ಷಣಂ"** ಎಂಬ ವಚನದಂತೆ ಕಾಲದೇಶಸಾಧರ್ಮ್ಯವು ಸುಖಸಾಧ್ಯಲಕ್ಷಣವೇ ಆಗುತ್ತದೆ.

**ವರ್ಷಾಸುಮಾರುತೋದುಷ್ಟಃಪಿತ್ತಶ್ಲೇಷ್ಮಾನ್ವಿತೋಜ್ವರಂ ॥೬೩॥**
**ಕುರ್ಯಾತ್ಪಿತ್ತಂಚಶರದಿತಸ್ಯಚಾನುಬಲಃಕಫಃ ॥**
**ತತ್ಪ್ರಕೃತ್ಯಾವಿಸರ್ಗಾಚ್ಚ ತತ್ರನಾನಶನಾದ್ಭಯಂ ॥ ೬೪ ॥**
**ಕಫೋವಸಂತೇತಮಪಿವಾತಪಿತ್ತಂಭವೇದನು ॥**

ಪ್ರಾಕೃತಜ್ವರಗಳ ಉತ್ಪತ್ತಿಕ್ರಮವನ್ನು ಹೇಳುತ್ತಾನೆ. ವರ್ಷಋತುವಿನಲ್ಲಿ ವಾತವು ಕುಪಿತವಾಗಿ ಪಿತ್ತ ಮತ್ತು ಶ್ಲೇಷ್ಮಗಳಿಂದ ಯುಕ್ತವಾಗಿ ಜ್ವರವನ್ನುಂಟುಮಾಡುತ್ತದೆ. ಶರದೃತುವಿನಲ್ಲಿ ಪಿತ್ತವು ಪ್ರಕುಪಿತವಾಗಿ ಕಫದಸಹಾಯದಿಂದ ಜ್ವರವನ್ನುಂಟುಮಾಡುತ್ತದೆ. ವಸಂತಋತುವಿನಲ್ಲಿ ಶ್ಲೇಷ್ಮವು ಪ್ರಕುಪಿತವಾಗಿ ವಾತ ಮತ್ತು ಪಿತ್ತಗಳೊಡನೆ ಕೂಡಿಕೊಂಡು ಜ್ವರವನ್ನುಂಟುಮಾಡುತ್ತದೆ.

**ಕಾಲೇಯಥಾಸ್ವಂಸರ್ವೇಷಾಂಪ್ರವೃತ್ತಿರ್ವೃದ್ಧಿರೇವವಾ ॥೬೫॥**
**ನಿದಾನೋಕ್ತಾನುಪಶಯೋವಿಪರೀತೋಪಶಾಯಿತಾ ॥**

ರೋಗವನ್ನು ಉತ್ಪತ್ತಿಮಾಡತಕ್ಕ ದೋಷಗಳ ಚಯಪ್ರಕೋಪ ಪ್ರಶಮಾದಿಗಳಿಗೆ ನಿರ್ದಿಷ್ಟವಾದ ಕಾಲಗಳಲ್ಲಿ ಆಯಾಯ ದೋಷಪ್ರಕೋಪದಿಂದ ಹುಟ್ಟತಕ್ಕ ರೋಗದ ಉತ್ಪತ್ತಿ ಮತ್ತು ಅಭಿವೃದ್ಧಿಸಹ ಉಂಟಾಗುತ್ತದೆ. ಅಂದರೆ ಅಂತಹ ರೋಗಾರಂಭಕ ದೋಷದ ಚಯಪ್ರಕೋಪಕಾಲಗಳು ಚಿಕಿತ್ಸಾನರ್ಹಗಳೆಂದು ತಾತ್ಪರ್ಯ. ರೋಗಕಾರಣಗಳೆಂದು ಹೇಳಲ್ಪಟ್ಟ ಆಹಾರಾಚಾರಾದಿಗಳಿಂದ ರೋಗಿಗೆ ಅನುಪಶಯಃ ಎಂದರೆ ದುಃಖವೂ, ರೋಗಾರಂಭಕ ದೋಷವಿರುದ್ಧಗಳಾದ ಆಹಾರಾಚಾರಾದಿಗಳಿಂದ ರೋಗಿಗೆ ಸುಖವಾಗುವಿಕೆಯೂ ಇವುಗಳೂ ರೋಗಸ್ಪಷ್ಟೀಕರಣ ಕಾರಣಗಳು.

ಅಂತರ್ದಾಹೋಧಿಕಸ್ತೃಷ್ಣಾ ಪ್ರಲಾಪಶ್ವಸನಂಭ್ರಮಃ ||೬೭||
ಸಂಧ್ಯಸ್ಥಿಶೂಲಮಸ್ವೇದೋದೋಷವರ್ಚೋವಿನಿಗ್ರಹಃ ||
ಅಂತರ್ವೇಗಸ್ಯಲಿಂಗಾನಿಜ್ವರಸ್ಯೈತಾನಿ ಲಕ್ಷಯೇತ್ || ೬೭ ||
ಸಂತಾಪೋಹ್ಯಧಿಕೋಬಾಹ್ಯಸ್ತೃಷ್ಣಾದೀನಾಂಚಮಾರ್ದವಂ ||
ಬಹಿರ್ವೇಗಸ್ಯಲಿಂಗಾನಿಸುಖಸಾಧ್ಯತ್ವಮೇವಚ || ೬೮ ||

ಅಂತರ್ವೇಗಜ್ವರದ ಲಕ್ಷಣಗಳೆಂದರೆ– ಜ್ವರದತಾಪವು ಅಂತರ್ಗತವಾಗಿಯೂ, ಅತ್ಯಧಿಕವಾಗಿಯೂ ಇರುವುದು. ಬಹಳ ಬಾಯಾರಿಕೆಯಾಗುತ್ತಿರುವುದು, ಸಂಕಟ ದಿಂದ ಗೋಳಾಡುವುದು, ಮೇಲುಸುರು, ಬುದ್ಧಿಭ್ರಮಣೆ, ಕೀಲುಗಳು ಮತ್ತು ಎಲುಬು ಗಳಲ್ಲಿ ವಡತ, ಬೆವರುಬಾರದಿರುವುದು, ರೋಗಾರಂಭಕದೋಷ ಮತ್ತು ಮಲಮೂತ್ರ ಗಳು ಬದ್ಧವಾಗಿ ಹೋಗುವುದು ಇವುಗಳು ಲಕ್ಷಣಗಳು. ಹೊರಗೆ ಅಧಿಕವಾಗಿ ತಾಪ ವಾಗೋಣ, ಬಾಯಾರಿಕೆ ಮೊದಲಾದ ದುರ್ಲಕ್ಷಣಗಳು ಕಡಮೆಯಾಗುವುದು, ಸುಖ ಸಾಧ್ಯತ್ವಲಕ್ಷಣಗಳು ತೋರುವುದು ಇವು ಬಹಿರ್ವೇಗಜ್ವರದ ಲಕ್ಷಣಗಳು.

ಲಾಲಾಪ್ರಸೇಕಹೃಲ್ಲಾಸಹೃದಶುದ್ಧ್ಯರೋಚಕಾಃ ||
ತಂದ್ರಾಲಸ್ಯಾವಿಪಾಕಾಸ್ಯವೈರಸ್ಯಂನಯನಪ್ಲವಃ || ೬೯ ||
ಕ್ಷುನ್ನಾಶೋಬಹುಮೂತ್ರತ್ವಂಸ್ತಬ್ಧತಾಬಲವಾನ್‌ಜ್ವರಃ ||
ಆಮಜ್ವರಸ್ಯಲಿಂಗಾನಿನದದ್ಯಾತ್ತತ್ರಭೇಷಜಂ || ೭೦ ||
ಭೇಷಜಂಹ್ಯಾಮದೋಷಸ್ಯಭೂಯೋಜ್ವಲಯತಿಜ್ವರಂ ||

ಚಿಕಿತ್ಸಾಸೌಕರ್ಯಾರ್ಥವಾಗಿ ಆಮಜ್ವರದಲಕ್ಷಣಗಳನ್ನು ಹೇಳುತ್ತಾನೆ. ಬಾಯ ಲ್ಲಿಜೊಲ್ಲು ನೀರುಸುರಿಯುತ್ತಿರುವುದು, ನಾಲಿಗೆಗೆ ಪದಾರ್ಥದರುಚಿ ತಪ್ಪಿಹೋಗುವುದು, ಯಾವಾಗ್ಲೂ ತೂಕಡಿಕೆ, ಸೋಮಾರಿತನ, ಆಹಾರಪಚನವಾಗದಿರುವುದು, ಬಾಯಿಸಪ್ಪೆ ಬೀಳುವುದು, ಕಣ್ಣು ಪಿಸರುಕಟ್ಟಿಕೊಳ್ಳುವದು, ಹಸಿವು ಮುಚ್ಚಿಹೋಗುವುದು, ಮೂತ್ರ ವು ಹೆಚ್ಚಾಗುವುದು, ರೋಗಿಯು ಯಾವಾಗಲೂ ಸ್ತಬ್ಧನಾಗಿರುವುದು ಅಂದರೆ ಮಂಕ ನಂತಿರುವುದು, ಜ್ವರವು ಬಹಳ ಬಲವಾಗಿರುವುದು ಈ ಲಕ್ಷಣಗಳೆಲ್ಲಾ ಜ್ವರವು ಅಪಕ್ವ ವಾಗಿರುವುದಕ್ಕೆ ಲಕ್ಷಣಗಳು. ಇಂತಹ ಆಮಾವಸ್ಥೆಯಲ್ಲಿ ಜ್ವರಕ್ಕೆ ಔಷಧವನ್ನು ಪ್ರಯೋಗಿಸಬಾರದು. ಒಂದುವೇಳೆ ತಿಳಿಯದೆ ಜ್ವರವು ಆಮವಾಗಿರುವಾಗ್ಗೆ ಔಷಧ ಪ್ರಯೋಗವನ್ನು ಮಾಡಿಯೇ ಮಾಡಿದರೆ ಜ್ವರವು ಮೊದಲಿಗಿಂತ ಹೆಚ್ಚಿಹೋಗುತ್ತದೆಯೇ ಹೊರ್ತು ಕಡಮೆಯಾಗುವುದಿಲ್ಲ.

ಜ್ವರವೇಗೋಧಿಕಸ್ತೃಷ್ಣಾಪ್ರಲಾಪಶ್ವಸನಂಭ್ರಮಃ || ೭೧ ||
ಮಲಪ್ರವೃತ್ತಿರುತ್ಕ್ಲೇಶಃಪಚ್ಯಮಾನಸ್ಯಲಕ್ಷಣಂ ||
ಕ್ಷುತ್‌ಕ್ಷಾಮತಾಲಘುತ್ವಂಚಗಾತ್ರಾಣಾಂಜ್ವರಮಾರ್ದವಂ ||೭೨||
ದೋಷಪ್ರವೃತ್ತಿರಷ್ಟಾಹೋನಿರಾಮಜ್ವರಲಕ್ಷಣಂ ||

ಪಚ್ಯಮಾನ ಮತ್ತು ಪಕ್ವಜ್ವರಗಳ ಲಕ್ಷಣವನ್ನು ಕ್ರಮವಾಗಿ ಹೇಳುತ್ತಾನೆ. ಜ್ವರದವೇಗವು ಅತ್ಯಧಿಕವಾಗಿರುವುದು, ಬಾಯಾರಿಕೆ, ಜ್ವರಸಂಕಟದಿಂದ ಪ್ರಲಾಪಮಾ ಡುವುದೆಂದರೆ ಅಳುವದು, ಶ್ವಾಸವೇಗ ಹೆಚ್ಚಿಗೆ ಇರುವುದು, ಬುದ್ಧಿಭ್ರಮಣೆಯಿರುವುದು,

ಮಲಮೂತ್ರಗಳು ನಡೆಯುತ್ತಿರುವುದು, ಶರೀರದಲ್ಲಿ ಸಂಕಟಹೆಚ್ಚಾಗಿರುವುದು ಇವುಗಳು ಪಕ್ವಾವಸ್ಥೆಗೆ ಬರಲಿರುವ ಜ್ವರಗಳ ಲಕ್ಷಣಗಳು. ಹಸಿವುಕಾಣುವುದು, ಮೈಹಗುರವಾಗುವುದು, ಜ್ವರವು ಕಡಮೆಯಾಗುತ್ತಬರುವುದು, ರೋಗಾರಂಭಕಗಳಾದ ದೋಷಗಳು ಶರೀರದ ಯಾವದಾದರೂ ಮಾರ್ಗದಿಂದ ಹೊರಬೀಳುವುದು, ಜ್ವರಪ್ರಾರಂಭವಾಗಿ ಒಂದುವಾರ ಕಳೆದಿರುವುದು ಇವು ಪಕ್ವವಾದಜ್ವರದ ಲಕ್ಷಣಗಳು.

**ಬಲವತ್ಸ್ವಲ್ಪದೋಷೇಷುಜ್ವರಸ್ಸಾಧ್ಯೋಽನುಪದ್ರವಃ ॥ ೭೩ ॥**

ಸಾಧ್ಯಲಕ್ಷಣವನ್ನು ಹೇಳುತ್ತಾನೆ. ರೋಗಿಗೆ ದೇಹಬಲವು ಚನ್ನಾಗಿದ್ದು ರೋಗಾರಂಭಕ ದೋಷಗಳು ಸ್ವಲ್ಪವಾಗಿ ಕಡಮೆಯಾಗಿದ್ದು ಉಪದ್ರವಗಳು ಎಂದರೆ ಉಪರೋಗಗಳಾದ ಕೆಮ್ಮು, ಮೂರ್ಛೆ, ಅರುಚಿ, ವಮನ, ಬಾಯಾರಿಕೆ, ಅತಿಸಾರ, ಮಲಬಂಧ, ಬಿಕ್ಕಳಿಕೆ, ಊರ್ಧ್ವಶ್ವಾಸ, ಮೈನಡತ ಮೊದಲಾದ ಉಪರೋಗಗಳಿಲ್ಲದಿದ್ದರೆ ಜ್ವರವು ಚಿಕಿತ್ಸೆಗೆ ಸಾಧ್ಯವೆಂದು ತಿಳಿಯಬೇಕು.

**ಹೇತುಭಿರ್ಬಹುಭಿರ್ಜಾತೋಬಲಿಭಿರ್ಬಹುಲಕ್ಷಣಃ ॥**
**ಜ್ವರಃಪ್ರಾಣಾಂತಕೃದ್ಯಶ್ಚಶೀಘ್ರಮಿಂದ್ರಿಯನಾಶನಃ ॥ ೭೪ ॥**

ಬಲವತ್ತರವಾದ ಅನೇಕ ಕಾರಣಗಳಿಂದ ಹುಟ್ಟಿರುವದಾಗಿಯೂ ಅಂದರೆ ತ್ರಿದೋಷಗಳೂ ಏಕಕಾಲದಲ್ಲಿ ಪ್ರಕೋಪವನ್ನು ಹೊಂದಿ ಹುಟ್ಟಿದವುಗಳಾಗಿಯೂ, ಜ್ವರಗಳಿಗೆ ಹೇಳಿರುವ ಸಂಪೂರ್ಣಲಕ್ಷಣಗಳಲ್ಲಿ ಮೂರು ಪಾಲಿಗಿಂತಲೂ ಹೆಚ್ಚಿಗೆ ಲಕ್ಷಣಗಳಿಂದ ಕೂಡಿದ್ದಾಗಿಯೂ ಇರುವ ಜ್ವರವು ಪ್ರಾಣನಾಶಕವೆಂದು ತಿಳಿಯಬೇಕು. ಚಿಕಿತ್ಸೆ ನಡೆಯುತ್ತಲೇ ಇದ್ದರೂ ಇಂದ್ರಿಯಶಕ್ತಿಯನ್ನು ನಾಶಮಾಡತಕ್ಕ ಜ್ವರವುಕೂಡ ಅಸಾಧ್ಯವೆಂಬದಾಗಿಯೇತಿಳಿಯಬೇಕು.

**ಜ್ವರಃಕ್ಷೀಣಸ್ಯಶೂನಸ್ಯಗಂಭೀರೋದೈರ್ಘರಾತ್ರಿಕಃ ॥**
**ಅಸಾಧ್ಯೋಽಬಲವಾನ್‌ಯಶ್ಚಕೇಶಸೀಮಂತಕೃಜ್ವರಃ ॥ ೭೫ ॥**

ಕೆಲವು ಅಸಾಧ್ಯಲಕ್ಷಣಗಳನ್ನು ಹೇಳುತ್ತಾನೆ. ರಕ್ತಮಾಂಸಗಳು ಮತ್ತು ದೇಹಬಲ ಇವುಗಳು ಕ್ಷಯಿಸಿ ಹೋದವರಿಗೂ, ಶೋಭೆಯಿರುವವರಿಗೂ ಬರುತ್ತಿರುವ ಜ್ವರಗಳು ಅಸಾಧ್ಯ. ಗಂಭೀರಃ ಅಂದರೆ ಇಂತಹ ದೋಷಪ್ರಕೋಪದಿಂದಲೇ ಹುಟ್ಟಿತೆಂದು ನಿಶ್ಚಯಿಸಬಾರದಂತಹ ಜ್ವರವೂ, ಬಹಳದಿವಸ ರಾತ್ರಿಗಳಲ್ಲಿಯೇ ಬಂದು ಪೀಡಿಸತಕ್ಕ ಜ್ವರವೂ ಅಸಾಧ್ಯವೆಂದು ತಿಳಿಯುವುದು. ಪ್ರಾರಂಭವಾಗುವಾಗಲೇ ಜ್ವರವೇಗವು ಅತ್ಯಧಿಕವಾಗಿರುವ ಜ್ವರವೂ, ಕೇಶಸೀಮಂತಕೃತ್ ಅಂದರೆ ಜ್ವರವೇಗದಿಂದ ಕೂದಲುಗಳು ಹೆಂಗಸರು ತಲೆಯಲ್ಲಿ ತೆಗೆದುಕೊಳ್ಳುವ ಬೈತಲೆಯಂತೆ ಅತ್ತಿತ್ತ ವಿಭಾಗವಾಗಿದ್ದರೆ ಅಂತಹ ಜ್ವರವೂ ಸಹಾ ಅಸಾಧ್ಯವೆಂಬದಾಗಿಯೇ ಅರಿಯಬೇಕು.

**ಗಂಭೀರಸ್ತುಜ್ವರೋಜ್ಞೇಯೋಹ್ಯಂತರ್ದಾಹೇನತೃಷ್ಣಯಾ ॥**
**ಆನದ್ಧತ್ವೇನಚಾತ್ಯರ್ಥಂಶ್ವಾಸಕಾಸೋದ್ಗಮೇನಚ ॥೭೬॥**

ಹಿಂದಿನಶ್ಲೋಕದಲ್ಲಿ ಹೇಳಿದ ಗಂಭೀರಜ್ವರದ ಸ್ವರೂಪವನ್ನು ವಿವರಿಸುತ್ತಾನೆ. ಅಂತರ್ಗತವಾದತಾಪದಿಂದಲೂ, ಬಾಯಾರಿಕೆಯಿಂದಲೂ, ಮಲಪ್ರವೃತ್ತಿ ಆಗದಿರೋಣದರಿಂದಲೂ, ಊರ್ಧ್ವಶ್ವಾಸ ಮತ್ತು ಕೆಮ್ಮು ಇವುಗಳ ಉತ್ಪತ್ತಿಯಿಂದಲೂ ಈ ಲಕ್ಷಣ

ಗಳಿಂದ ಜ್ವರವು ಅಂತರ್ವೇಗವಾಗಿದೆ ಎಂದು ತಿಳಿಯಬೇಕು.

**ಆರಂಭಾದ್ವಿಷಮೋಯಸ್ತುಯಶ್ಚವಾದೈರ್ಘರಾತ್ರಿಕಃ ||**
**ಕ್ಷೀಣಸ್ಯಚಾತಿರೂಕ್ಷಸ್ಯಗಂಭೀರೋಯಸ್ಯಹಂತಿತಂ || ೭೭ ||**

ಜ್ವರವು ಹುಟ್ಟಿದ ಪ್ರಾರಂಭದಿಂದಲೇ ಯಾವಜ್ವರವು ವಿಷಮಜ್ವರವಾಗಿರುವುದೋ, ಯಾವ ಜ್ವರವು ಅನೇಕ ರಾತ್ರಿಗಳವರಿಗೂ ಬಿಡದೇ ಅನುವರ್ತಿಸಿಕೊಂಡೇ ಬರುತ್ತಿರುವುದೋ, ಯಾವ ಜ್ವರವು ಹಿಂದೆ ಹೇಳಿದ ಗಂಭೀರಜ್ವರದ ಲಕ್ಷಣಗಳಿಂದ ಕೂಡಿರುವದೋ, ಮತ್ತು ರೋಗಿಯು ಇಂತಹ ಜ್ವರಗಳಲ್ಲಿ ಕ್ಷಯಿಸಿಹೋಗಿರುವದು, ರೋಗಿಯು ವಾತಪ್ರಕೃತಿಯುಳ್ಳವನಾಗಿರುವದು, ಹೀಗಿದ್ದರೆ ಜ್ವರವು ಅವನನ್ನು ಕೊಲ್ಲುತ್ತದೆಂದೇ ನಿಶ್ಚಯಿಸಬೇಕು.

**ವಿಸಂಜ್ಞಸ್ತಾಮ್ಯತೇಯಸ್ತು ಶೇತೇನಿಪತಿತೋಽಪಿವಾ ||**
**ಶೀತಾರ್ದಿತೋಂತರುಷ್ಣಶ್ಚ ಜ್ವರೇಣಮ್ರಿಯತೇನರಃ || ೭೮ ||**

ಯಾವರೋಗಿಯು ಜ್ವರವೇಗದಿಂದ ಜ್ಞಾನತಪ್ಪಿ ಸಂತಾಪಪಡುತ್ತಾನೆಯೋ, ಜ್ಞಾನವಿಲ್ಲದೆ ಮಲಗಿಯೇ ಇರುತ್ತಾನೆಯೋ, ಜ್ಞಾನವಿಲ್ಲದೆ ಬಿದ್ದುಕೊಳ್ಳುತ್ತಾನೆಯೋ; ಮತ್ತು ಜ್ವರವೇಗದಿಂದ ಒಳಗೆ ಪೀಡಿತನಾಗಿರುವುದು, ಶರೀರದಹೊರಭಾಗದಲ್ಲಿ ಮಾತ್ರ ತಣ್ಣಗಿರುವದು, ಈ ರೀತಿಯಲ್ಲಿರತಕ್ಕ ಮನುಷ್ಯನೂ ಜ್ವರದಿಂದ ಸಾಯುತ್ತಾನೆಂದು ನಿಶ್ಚಯಿಸಬಹುದು.

**ಯೋಽಹೃಷ್ಟರೋಮಾರಕ್ತಾಕ್ಷೋಽಹೃದಿಸಂಘಾತಶೂಲವಾನ್ ||**
**ವಕ್ತ್ರೇಣಚೈವೋಚ್ಛ್ವಸಿತಿತಂಜ್ವರೋಽಹಂತಿಮಾನವಂ || ೭೯ ||**

ರೋಗಿಯಾದವನಿಗೆ ಯಾವಾಗ್ಲೂ ರೋಮಾಂಚನವಾಗುತ್ತಿರುವುದು, ಕಣ್ಣು ಯಾವಾಗಲೂ ಕೆಂಪಾಗಿಯೇ ಇರುವುದು, ಹೊಟ್ಟೆಯಲ್ಲಿ ಅತಿಯಾಗಿ ಶೂಲೆ ಇರುವುದು, ಮೂಗಿನಿಂದ ಉಸಿರುಬಿಡಲಾರದೆ ಯಾವಾಗಲೂ ಬಾಯಿನಿಂದಲೇ ಉಸಿರುಬಿಡುತ್ತಿರುವುದು ಇಂತಹ ಲಕ್ಷಣಗಳುಳ್ಳ ಜ್ವರಿತನು ಸತ್ತುಹೋಗುತ್ತಾನೆಂದು ನಿಶ್ಚಯಿಸಬಹುದು,

**ಹಿಕ್ಕಾಶ್ವಾಸತೃಷಾಯುಕ್ತಂಮೂಢಂವಿಭ್ರಾಂತಲೋಚನಂ ||**
**ಸಂತತೋಚ್ಛ್ವಾಸಿನಂಕ್ಷೀಣಂನರಂಕ್ಷಪಯತಿಜ್ವರಃ || ೮೦ ||**

ರೋಗಿಗೆ ಬಿಕ್ಕಳಿಕೆ, ಊರ್ಧ್ವಶ್ವಾಸ, ಬಾಯಾರಿಕೆ, ಅಜ್ಞಾನ, ಹುಚ್ಚನಹಾಗೆ ಕಣ್ಣು ತಿರುಗಿಸುತ್ತಿರುವುದು, ಕ್ಷಯಿಸಿಹೋಗಿರುವುದು, ಯಾವಾಗಲೂ ಮೇಲಕ್ಕೆ ಶ್ವಾಸ ಎಳೆಯುತ್ತಿರುವುದು ಈ ಲಕ್ಷಣಗಳಿದ್ದರೆ ಸಾಯುತ್ತಾನೆಂದು ನಿಶ್ಚಯವಾಗಿ ತಿಳಿಯಬಹುದು.

**ಹತಪ್ರಭೇಂದ್ರಿಯಂಕ್ಷೀಣಂಅರೋಚಕನಿಪೀಡಿತಂ ||**
**ಗಂಭೀರತೀಕ್ಷ್ಣವೇಗಾರ್ತಂಜ್ವರಿತಂಪರಿವರ್ಜಯೇತ್ || ೮೧ ||**

ಇಂದ್ರಿಯಗಳ ಶಕ್ತಿ ಮತ್ತು ಶರೀರದ ಕಾಂತಿ ಇವು ಕುಗ್ಗಿ ಹೋದವನನ್ನೂ, ಕೃಶನಾಗಿರುವನನ್ನೂ, ತಿನ್ನುವುದಕ್ಕೆ ಯಾವ ಪದಾರ್ಥವೂ ಸೇರದವನನ್ನೂ, ಜ್ವರವೇಗವು ಗಂಭೀರವಾಗಿಯೂ, ಮತ್ತು ಕ್ರೂರವಾಗಿಯೂ ಇರುವನನ್ನೂ ಇಂತಹ ರೋಗಿಗಳನ್ನು ಚಿಕಿತ್ಸೆಗೆ ಅಸಾಧ್ಯರೆಂದು ನಿಶ್ಚಯಿಸಿ ಉಪೇಕ್ಷೆಮಾಡಿ ಬಿಟ್ಟುಬಿಡಬೇಕು.

**ದಾಹಃಸ್ವೇದೋಭ್ರಮುಸ್ತೃಷ್ಣಾ ಕಂಪವಿಡ್ಭೇದಸಂಜ್ಞತಾ ॥**
**ಕೂಜನಂಚಾಸ್ಯವೈಗಂಧ್ಯಮಾಕೃತಿರ್ಜ್ವರಮೋಕ್ಷಣೇ ॥ ೮೨ ॥**

ಅಂತರ್ದಾಹ, ಬೆವರುತ್ತಿರುವದು, ಬುದ್ಧಿಭ್ರಮಣೆ, ಬಾಯಾರಿಕೆ, ಮೈನಡುಕ, ಮಲಪ್ರವೃತ್ತಿ, ಸಂಜ್ಞಾನಾಶ ಅಂದರೆ ಜ್ಞಾನತಪ್ಪುವದು, ಗಂಟಲಿನಲ್ಲಿ ಅಸ್ಪಷ್ಟವಾದ ಒಂದು ಬಗೆಯಧ್ವನಿ, ಬಾಯಿ ಯಾವ ವಿಧವಾದ ಗಂಧವೂ ಇಲ್ಲದೆ ಸ್ವಚ್ಛವಾಗಿರುವದು ಇವು ಜ್ವರಬಿಟ್ಟುಹೋಗುವ ಲಕ್ಷಣಗಳು.

**ಸ್ವೇದೋಲಘುತ್ವಂಶಿರಸಃಕಂಡೂಃಪಾಕೋಮುಖಸ್ಯಚ ॥**
**ಕ್ಷವಥುಶ್ಚಾನ್ನಲಿಪ್ಸಾಚಜ್ವರಮುಕ್ತಸ್ಯಲಕ್ಷಣಂ ॥ ೮೩ ॥**

ಚನ್ನಾಗಿ ಮೈಬೆವರುವುದು, ಮೈಹಗುರವಾಗವುದು, ಶಿರಸ್ಸಿನಲ್ಲಿನವೆಯಾಗುತ್ತಿರುವುದು, ಮುಖಪಾಕವೆಂದರೆ ಬಾಯಿಹುಣ್ಣಾಗಿಹೋಗುವುದು, ಶೀನುಬರುತ್ತಿರುವುದು ಅನ್ನದಮೇಲೆ ಅಪೇಕ್ಷೆಯುಂಟಾಗುವುದು ಇವುಗಳು ಜ್ವರ ಬಿಟ್ಟುಹೋದದ್ದಕ್ಕೆ ಲಕ್ಷಣಗಳು.

† ಇಲ್ಲಿಗೆ ಜ್ವರನಿದಾನ ಸಮಾಪ್ತಿ †

## ಅತಿಸಾರನಿದಾನ.

**ಗುರ್ವತಿಸ್ನಿಗ್ಧರೂಕ್ಷೋಷ್ಣದ್ರವಸ್ಥೂಲಾತಿಶೀತಲೈಃ ॥**
**ವಿರುದ್ಧಾಧ್ಯಶನಾಜೀರ್ಣೈರ್ವಿಷಮೈಶ್ಚಾಪಿಭೋಜನೈಃ ॥ ೧ ॥**
**ಸ್ನೇಹಾದ್ಯೈರತಿಯುಕ್ತೈಶ್ಚಮಿಥ್ಯಾಯುಕ್ತೈರ್ವಿಷೈರ್ಭಯೈಃ ॥**
**ಶೋಕಾದ್ದುಷ್ಟಾಂಬುಮದ್ಯಾತಿಪಾನೈಸ್ಸಾತ್ಮ್ಯರ್ತುಪರ್ಯಯೈಃ ॥೨॥**
**ಬಲಾಭಿರಮಣೈರ್ವೇಗವಿಘಾತೈಃಕ್ರಿಮಿದೋಷತಃ ॥**
**ನೃಣಾಂಭವತ್ಯತೀಸಾರೋಲಕ್ಷಣಂತಸ್ಯವಕ್ಷ್ಯತೇ ॥ ೩ ॥**

ಸುಲಭವಾಗಿ ಜೀರ್ಣವಾಗದ ಉದ್ದು ಮೊದಲಾದ ಪದಾರ್ಥಗಳನ್ನು ಉಪಯೋಗಿಸುವುದು, ಹೆಚ್ಚಿಗೆ ಜಿಡ್ಡುಳ್ಳ ಪದಾರ್ಥಗಳನ್ನು ಉಪಯೋಗಿಸುವುದು, ಅತ್ಯಂತಕಠಿನಗಳಾದ ಅಂದರೆ ವಾತವರ್ಧಕಕಳಾದ ಪದಾರ್ಥಗಳನ್ನು ಉಪಯೋಗಪಡಿಸುವದು (ಭೋಜನಮಾಡುವದು) ಉಷ್ಣವನ್ನು ಹೆಚ್ಚಿಸತಕ್ಕ ಪದಾರ್ಥಗಳನ್ನುತಿನ್ನುವದು ಹೆಚ್ಚಿನ ದ್ರವ ವಸ್ತುಗಳನ್ನುಪಯೋಗಿಸುವದು, ಸ್ಥೂಲವಾದ ಆಹಾರ ಪದಾರ್ಥಗಳು, ಯಾವದಾದರೂ ಹಿಟ್ಟುಮೊದಲಾದವುಗಳ ಉಂಡೆಗಳನ್ನು ಹಲ್ಲಿನಿಂದ ಚೆನ್ನಾಗಿ ಅಗಿಯದೆ ಹಾಗೆಯೇ ನುಂಗಿಬಿಡುವದು, ಅತಿತಣ್ಣಗಿರುವ ಮತ್ತು ಕೇವಲ ಶೀತವೀರ್ಯಗಳಾದ ಪದಾರ್ಥಗಳನ್ನು ಭೋಜನಕ್ಕೆ ಹೆಚ್ಚಿಗೆ ಉಪಯೋಗಿಸುವದು, ತನ್ನ ಶರೀರ ಪ್ರಕೃತಿಗೆ ವಿರುದ್ಧಗಳಾದ ಪದಾರ್ಥಗಳನ್ನು ತಿನ್ನುವುದು, ಒಂದುಸಾರಿ ಭೋಜನಮಾಡಿದ್ದು ಜೀರ್ಣವಾಗುವುದರೊಳಗೇನೇ ಪುನಶ್ಚ ಭೋಜನಮಾಡುವದು, ಭೋಜನ ಮಾಡಿದ ಪದಾರ್ಥವು ಜೀರ್ಣವಾಗದೆ ಇರುವದು, ವಿಷಮಭೋಜನ ಅಂದರೆ ವಿರುದ್ಧ ಪದಾರ್ಥಗಳನ್ನು ಕೂಡಿಸಿ ಭೋಜನ ಮಾಡುವದು, ಹೊತ್ತುತಪ್ಪಿ ಭೋಜನಮಾಡುವದು, ಭೋಜನಸ್ಥಾನಾಸನಗಳು ಯಾವರೀತಿ ಇರಬೇಕೆಂದು ನಿಯಮವಿದೆಯೋ

ಅವಕ್ಕೆ ವಿರೋಧವಾಗಿ ವರ್ತಿಸುವುದು, ಸ್ನೇಹ, ಸ್ವೇದ ಮೊದಲಾದ ಪಂಚಕರ್ಮಗಳನ್ನು ಮಾಡುವಾಗ್ಗೆ ತದುಪಯೋಗಿಗಳಾದ ಸ್ನೇಹ ಪದಾರ್ಥಗಳನ್ನು ಅತಿಯಾಗಿ ಉಪಯೋಗಿಸುವದು, ( ಪಂಚಕರ್ಮಗಳ ಅತಿಯೋಗ, ಹೀನಯೋಗ, ಮಿಥ್ಯಾಯೋಗ,) ವಿಷಪಾನ ಮಾಡುವದು, ಭಯಕ್ಕೊಳಗಾಗುವದು, ದುಃಖಪಡುವದು, ಕೆಟ್ಟನೀರು ಮತ್ತು ಮದ್ಯ ಇವುಗಳನ್ನು ಪಾನಕ್ಕೆ ಉಪಯೋಗಿಸುವದು, ಶರೀರಕ್ಕೆ ಪಗ್ಗಿದಕಾಲ ಮತ್ತು ದೇಶಗಳ ವ್ಯತ್ಯಾಸದಿಂದಲೂ, (ಹವಾ ಬದಲಾವಣೆ) ನೀರಿನಲ್ಲಿ ಹೆಚ್ಚಿಗೆ ಈಜಾಡುವುದರಿಂದಲೂ, ಮಲಮೂತ್ರಗಳನ್ನು ಸಕಾಲದಲ್ಲಿ ವಿಸರ್ಜಿಸದ ತಡೆಯುವುದರಿಂದಲೂ, ಪಕ್ವಾಶಯದಲ್ಲಿ ಕ್ರಿಮಿಗಳು ಹೆಚ್ಚುವುದರಿಂದಲೂ ಕೋಪವನ್ನು ಹೊಂದಿದ ವಾತಾದಿ ದೋಷಗಳು ಮನುಷ್ಯರಿಗೆ ಅತಿಸಾರರೋಗವನ್ನು ಹುಟ್ಟಿಸುತ್ತವೆ.

ಸಂಶಂಮ್ಯಾಪಾಂಧಾತುರಗ್ನಿಂಪ್ರವೃದ್ಧಃ
ಶಕೃನ್ಮಿಶ್ರೋವಾಯುನಾಧಃಪ್ರಣುನ್ನಃ ॥
ಸರತ್ಯತೀವಾತಿಸಾರಂತಮಾಹುರ್ವ್ಯಾಧಿಂ
ಘೋರಂಷಡ್ವಿಧಂತಂವದಂತಿ ॥ ೪ ॥
ಏಕೈಕಶಸ್ಸರ್ವಶಶ್ಚಾಪಿದೋಷೈಃ
ಶೋಕೇನಾನ್ಯಷ್ಷಷ್ಠಆಮೇನಚೋಕ್ತಃ ॥

ಅತಿಸಾರವು ಉಂಟಾಗುವ ಕ್ರಮವನ್ನು ಹೇಳುತ್ತಾನೆ. ಶರೀರಗತವಾದ ರಸ, ರಕ್ತ, ಜಲ ಮೂತ್ರ, ಸ್ವೇದ ಮೇದಸ್ಸು, ಕಫ, ಪಿತ್ತ ಮೊದಲಾದ ದ್ರವರೂಪ ಪದಾರ್ಥಗಳು ಶರೀರದಲ್ಲಿ ಹೆಚ್ಚಿಹೋಗಿ ಜಠರಾಗ್ನಿ ಶಕ್ತಿಯು ಕುಂಠಿತವಾಗುವಂತೆ ಮಾಡಿ ಅಪಾನವಾಯುವಿನಿಂದ ಅಧೋದ್ವಾರದಕಡೆಗೆ ತಳ್ಳಲ್ಪಟ್ಟು ಮಲಸಹಿತವಾಗಿ ಮಲಮಾರ್ಗದಿಂದ ಹೊರಡುವುದು ಅತಿಯಾದರೆ ಅದಕ್ಕೆ ಅತಿಸಾರವ್ಯಾಧಿ ಎಂಬದಾಗಿ ಹೆಸರನ್ನು ಕೊಟ್ಟಿದ್ದಾರೆ. ಇದು ಆರುವಿಧ- ವಾತಜನ್ಯ, ಪಿತ್ತಜನ್ಯ, ಶ್ಲೇಷ್ಮಜನ್ಯ, ತ್ರಿದೋಷಸನ್ನಿಪಾತಜನ್ಯ, ಶೋಕಜನ್ಯ, ಅಪಕ್ವಪದಾರ್ಥಜನ್ಯ, ಎಂಬದಾಗಿ. ಇದು ಬಹಳ ಭಯಂಕರವಾದ ವ್ಯಾಧಿ.

ಹೃನ್ನಾಭಿಪಾಯೂದರಕುಕ್ಷಿತೋದ
ಗಾತ್ರಾವಸಾದಾನಿಲಸನ್ನಿರೋಧಾಃ ॥ ೫ ॥
ವಿಟ್ಸಂಗಆಧ್ಮಾನಮಥಾವಿಪಾಕೋ
ಭವಿಷ್ಯತಸ್ತಸ್ಯಪುರಸ್ಸರಾಣಿ ॥

ಹೃದಯ, ಹೊಕ್ಕಳು, ಗುದ, ಹೊಟ್ಟೆ, ಜಠರ ಇವುಗಳಲ್ಲೆಲ್ಲಾ ( ಪಟ್ಟನಲ್ಲಿ ಹೊಟ್ಟೆಯಲ್ಲೆಲ್ಲಾ) ವ್ಯಥೆಯಾಗುತ್ತಿರುವದು, ಮೈನೋವು ಮುರತ ಇರುವದು, ಅಪಾನ ವಾಯು ಬಂದಾಗಿಹೋಗುವದು, ಪ್ರಾರಂಭವಾಗುವಮೊದಲು ಮಲಬಂಧ, ಹೊಟ್ಟೆಯುಬ್ಬರ, ಅನ್ನವು ಪಚನವಾಗದಿರುವದು, ಇವುಗಳು ಅತಿಸಾರರೋಗವು ಹುಟ್ಟುವ ಮೊದಲು ಕಾಣುವ ಚಿಹ್ನೆಗಳು.

ಅರುಣಂಫೇನಿಲಂರೂಕ್ಷಮಲ್ಪಮಲ್ಪಂಮುಹುರ್ಮುಹುಃ
ಶಕೃದಾಮಂಸರುಕ್ಶಬ್ದಂಮಾರುತೇನಾತಿಸಾರ್ಯತೇ ॥ ೬ ॥

ಅತಿಸಾರದಲ್ಲಿ ಹೊಟ್ಟೆಯಿಂದ ಹೊರಡುವ ಮಲವು ಕೆಂಪಗೆ ಒರಟಾಗಿ ನೊರೆಯಿಂದಕೂಡಿ ಸ್ವಲ್ಪಸ್ವಲ್ಪವಾಗಿ ಅನೇಕಸಾರಿ ವೇದನೆ, ಶಬ್ದ, ಇವುಗಳೊಡನೆಕೂಡಿ ಹೊರಡುತ್ತಿದ್ದಲ್ಲಿ ವಾತಾತಿಸಾರವೆಂದು ತಿಳಿಯಬೇಕು.

ಪಿತ್ತಾತ್ಪೀತಂನೀಲಮಾಲೋಹಿತಂವಾ
ತೃಷ್ಣಾಮೂರ್ಛಾದಾಹಪಾಕೋಪಪನ್ನಂ ॥
ಶುಕ್ಲಂಸಾಂದ್ರಂಶ್ಲೇಷ್ಮಣಾಶ್ಲೇಷ್ಮಯುಕ್ತಂ ॥
ವಿಸ್ರಂಶೀತಂಹೃಷ್ಟರೋಮಾಮನುಷ್ಯಃ ॥ ೭ ॥

ಪಿತ್ತಪ್ರಕೋಪಜನ್ಯವಾದ ಅತಿಸಾರದಲ್ಲಿ ಹೊಟ್ಟೆಯಿಂದ ಹೊರಡುವ ಮಲವು ಹಳದಿ, ನೀಲ, ಕೊಂಚಕೆಂಪು ಈ ಬಣ್ಣಗಳಲ್ಲಿರುವುದು ಬಾಯಾರಿಕೆ, ಮೂರ್ಛೆ, ಮೈಯ್ಯುರಿ, ಪಾಕ ಅಂದರೆ ಗುದದ್ವಾರವು ವ್ರಣಗಳಿಂದ ತುಂಬಿಹೋಗಿರುವಂತೆ ನೋವಾಗುತ್ತಿರುವುದು, ಇವು ಲಕ್ಷಣಗಳು. ಶ್ಲೇಷ್ಮಪ್ರಕೋಪದಿಂದ ಹುಟ್ಟಿದ ಅತಿಸಾರದಲ್ಲಿ ಮಲವು ಬೆಳ್ಳಗೂ, ಕೊಂಚ ಗಟ್ಟಿಯಾಗಿಯೂ, ಶ್ಲೇಷ್ಮದಿಂದ ಕೂಡಿಕೊಂಡು ಆಮಗಂಧವುಳ್ಳದ್ದಾಗಿ ತಣ್ಣಗಿರುತ್ತದೆ, ರೋಗಿಯ ಶರೀರದಲ್ಲಿ ರೋಮಾಂಚವಾಗುತ್ತಿರುತ್ತದೆ.

ವರಾಹಸ್ನೇಹಮಾಂಸಾಂಬುಸದೃಶಂಸರ್ವರೂಪಿಣಂ ॥
ಕೃಚ್ಛ್ರಸಾಧ್ಯಮತೀಸಾರಂವಿದ್ಯಾದ್ದೋಷತ್ರಯೋದ್ಭವಂ ॥೮॥

ತ್ರಿದೋಷ ಪ್ರಕೋಪಜನ್ಯವಾದ ಅತಿಸಾರದಲ್ಲಿ ಮಲವು ಹಂದಿಯಕೊಬ್ಬು, ಮಾಂಸಪ್ರಕ್ಷಾಳನೋದಕ ಇವುಗಳಂತೆ ಕಾಣುತ್ತಿರುವುದು, ರೋಗಿಯಲ್ಲಿ ದೋಷತ್ರಯಪ್ರಕುಪಿತವಾದ ಲಕ್ಷಣಗಳೂ ಕಾಣುತ್ತಿರುವುದು, ಈ ರೀತಿಯಾಗಿದ್ದಲ್ಲಿ ಇಂತಹ ಅತಿಸಾರವನ್ನು ಸನ್ನಿಪಾತಜನ್ಯವೆಂಬದಾಗಿಯೂ, ಕಷ್ಟಸಾಧ್ಯವೆಂಬದಾಗಿಯೂ, ತಿಳಿಯಬಹುದು.

ತೈಸ್ತೈರ್ಭಾವೈಶ್ಶೋಚತೋಽಲ್ಪಾಶನಸ್ಯ
ಬಾಷ್ಪೋಷ್ಮಾವೈವಹ್ನಿಮಾವಿಶ್ಯಜಂತೋಃ ॥
ಕೋಷ್ಟಂಗತ್ವಾಕ್ಷೋಭಯೇತ್ತಸ್ಯರಕ್ತಂ
ತಚ್ಚಾಧಸ್ತಾತ್ಕಾಕಣಂತೀಪ್ರಕಾಶಂ ॥ ೯ ॥
ನಿರ್ಗಚ್ಛೇದ್ವೈವಿಡ್ವಿಮಿಶ್ರಂಹ್ಯವಿಡ್ವಾ
ನಿರ್ಗಂಧಂವಾಗಂಧವದ್ವಾತಿಸಾರಃ ॥
ಶೋಕೋತ್ಪನ್ನೋದುಶ್ಚಿಕಿತ್ಸ್ಯೋಽತಿಮಾತ್ರಂ
ರೋಗೋವೈದ್ಯೈಃಕಷ್ಟಏಷಪ್ರದಿಷ್ಟಃ ॥ ೧೦ ॥

ಶೋಕದಿಂದ ಹುಟ್ಟತಕ್ಕ ಅತಿಸಾರದ ಲಕ್ಷಣವನ್ನು ಹೇಳುತ್ತಾನೆ. ದ್ರವ್ಯನಾಶ, ಬಂಧುನಾಶ ಮೊದಲಾದ ಅತಿಯಾಗಿ ದುಃಖವನ್ನು ಹುಟ್ಟಿಸತಕ್ಕ ಕಾರಣಗಳಿಂದ ದುಃಖಿತನಾಗಿ ಸರಿಯಾಗಿ ಅನ್ನವನ್ನು ತಿನ್ನದೆ ಪ್ರತಿದಿವಸವೂ ದುಃಖಿಸುತ್ತಲೇ ಇರುವವನಿಗೆ ದುಃಖದಿಂದ ಹುಟ್ಟಿದ ಕಣ್ಣೀರು ದುಃಖಜನ್ಯವಾದ ಶರೀರದ ಉಷ್ಣದೊಡನೆ ಕೂಡಿಕೊಂಡು ಪಕ್ವಸ್ಥಾನ (ಪಚ್ಯಮಾನಾಶಯ)ವನ್ನುಹೊಂದಿ ಅಲ್ಲಿರತಕ್ಕ ಪಾಚಕಾಗ್ನಿಯೊ

ಡನೆ ಕೂಡಿ ಶೋಕಪೀಡಿತನಾದವನರಕ್ತಕ್ಕೆ ಕ್ಷೋಭೆಯನ್ನುಂಟುಮಾಡುತ್ತದೆ. ಕ್ಷುಬ್ಧವಾದ ರಕ್ತವು ಗುಲಗಂಜಿಯ ಬಣ್ಣಉಳ್ಳದ್ದಾಗಿ ಅಧೋಮುಖವಾಗಿ ಮಲಮಾರ್ಗವಾಗಿ ಮಲಸಹಿತವಾಗಿಯಾದರೂ, ಮಲರಹಿತವಾಗಿಯಾದರೂ, ಗಂಧವಿಲ್ಲದೆಯೂ, ಗಂಧಯುಕ್ತವಾಗಿಯಾದರೂ ಹೇಗಾದರೂ ಹೊರಡಬಹುದು. ಈ ರೀತಿಯಾಗಿ ಶೋಕಜನ್ಯವಾದ ಅತಿಸಾರವು ದುಶ್ಚಿಕಿತ್ಸ್ಯ ಅಂದರೆ ಬಹಳ ಕಷ್ಟಪಟ್ಟು ಚಿಕಿತ್ಸೆಮಾಡತಕ್ಕದ್ದೆಂಬದಾಗಿಯೂ, ಕಷ್ಟಕರವೇ ಎಂಬದಾಗಿಯೂ ವೈದ್ಯರು ಕರದಿರುತ್ತಾರೆ.

ಅನ್ನಾಜೀರ್ಣಾತ್ಪ್ರದ್ರುತಾಃ ಕ್ಷೋಭಯಂತೋ
ಕೋಷ್ಟಂದೋಷಾಧಾತುಸಂಘಾನ್ಮಲಾಂಶ್ಚ ||
ನಾನಾವರ್ಣಂನೈಕಶಸ್ಸಾರಯಂತಿ
ಶೂಲೋಪೇತಂಷಷ್ಠಮೇನಂವದಂತಿ || ೧೧ ||

ಅಜೀರ್ಣದಿಂದ ಹುಟ್ಟತಕ್ಕ ಅತಿಸಾರದ ಲಕ್ಷಣವನ್ನು ಹೇಳುತ್ತಾನೆ ಭೋಜನಮಾಡಿದ ಅನ್ನವು ಜೀರ್ಣವಾಗದಿರೋಣದರಿಂದ ದುರ್ಮಾರ್ಗಗತಗಳಾದ ದೋಷಗಳು ಅಮಾಶಯುವನ್ನು, ವಾತಾದಿದೋಷಗಳನ್ನೂ ಮತ್ತು ಮಲಗಳನ್ನೂ ಸಹ ಕ್ಷೋಭೆಗೊಳಿಸಿ ಹೊಟ್ಟೆಶೂಲೆಯನ್ನೂ, ನಾನಾ ವರ್ಣಯುಕ್ತವಾದ ಅತಿಸಾರವನ್ನೂ ಪದೇಪದೇ ಉಂಟುಮಾಡುತ್ತವೆ. ಇದಕ್ಕೆ ಆಮಾತಿಸಾರವೆಂದು ಹೆಸರು.

ಸಂಸೃಷ್ಟಮೇಭಿರ್ದೋಷೈಸ್ತುನ್ಯಸ್ತಮಪ್ಸ್ವವಸೀದತಿ ||
ಪುರೀಷಂಭೃಶದುರ್ಗಂಧಿಪಿಚ್ಛಿಲಂಚಾಮಸಂಜ್ಞಿತಂ || ೧೨ ||
ಏತಾನ್ಯೇವತುಲಿಂಗಾನಿವಿಪರೀತಾನಿಯಸ್ಯವೈ ||
ಲಾಘವಂಚವಿಶೇಷೇಣತಸ್ಯಪಕ್ವಂವಿನಿರ್ದಿಶೇತ್ || ೧೩ ||

ಚಿಕಿತ್ಸಾಸೌಕರ್ಯಾರ್ಥವಾಗಿ ಅತಿಸಾರದಲ್ಲಿರತಕ್ಕ ಆಮಪಕ್ವಾವಸ್ಥೆಗಳನ್ನು ಹೇಳುತ್ತಾನೆ. ಹಿಂದೆ ಹೇಳಿದ ವಾತಾದ್ಯತಿಸಾರಲಕ್ಷಣಗಳು ಕಾಣುತ್ತಲಿದ್ದು ಮಲವು ಅತಿದುರ್ಗಂಧದಿಂದ ಕೂಡಿಯೂ, ಆಮಯುಕ್ತವಾಗಿಯೂ ಪ್ರವೃತ್ತಿಯಾಗುತ್ತಿದ್ದು ಪ್ರವೃತ್ತಿಯಾದ ಮಲವನ್ನು ನೀರಿಗೆ ಹಾಕಿದಲ್ಲಿ ನೀರಿನಲ್ಲಿ ಮುಳುಗಿದರೆ ಅತಿಸಾರವು ಇನ್ನೂ ಆಮಾವಸ್ಥೆಯಲ್ಲಿದೆ ಎಂಬದಾಗಿಯೂ, ಆಮಯುಕ್ತವಾದ ಮಲಪ್ರವೃತ್ತಿ ಕಡಮೆಯಾಗಿದ್ದು ದುರ್ಗಂಧವೂ ಕಡಮೆಯಾಗಿದ್ದು ನೀರಿನಲ್ಲಿ ಹಾಕಿದರೆ ಮಲವು ತೇಲಿ ಶರೀರದಲ್ಲಿ ಲಾಘವವು ಕಂಡು ಬಂದಲ್ಲಿ ಅತಿಸಾರವು ಪಕ್ವವಾಯಿತೆಂದರಿಯಬೇಕು.

ಪಕ್ವಜಾಂಬವಸಂಕಾಶಂಯಕೃತ್ಪಿಂಡನಿಭಂತನು ||
ಘೃತತೈಲವಸಾಮಜ್ಜವೇಸವಾರಪಯೋದಧಿ || ೧೪ ||
ಮಾಂಸಧಾವನತೋಯಾಭಂಕೃಷ್ಣಂನೀಲಾರುಣಪ್ರಭಂ ||
ಮೇಚಕಂಸ್ನಿಗ್ಧಕರ್ಬೂರಂಚಂದ್ರಕೋಪಗತಂಘನಂ || ೧೫ ||
ಕುಣಪಂಮಸ್ತುಲುಂಗಾಭಂಸುಗಂಧಿಕುಥಿತಂಬಹು ||
ತೃಷ್ಣಾದಾಹತಮಶ್ವಾಸಹಿಕ್ಕಾಪಾರ್ಶ್ವಾಸ್ಥಿಶೂಲಿನಂ || ೧೬ ||
ಸಂಮೂರ್ಛಾರತಿಸಂಮೋಹಯುಕ್ತಂಪಕ್ವವಲೀಗುದಂ ||
ಪ್ರಲಾಪಯುಕ್ತಂಚಭಿಷಗ್ವರ್ಜಯೇದತಿಸಾರಿಣಂ || ೧೭ ||

**ಅಸಂವೃತಂಗುದಂಕ್ಷೀಣಂದೂರಾಧ್ಮಾತಮುಪದ್ರುತಂ ॥**
**ಗುದೇಪಾಕೇಗತೋಷ್ಮಾಣಮತಿಸಾರಕಿಣಂತ್ಯಜೇತ್ ॥ ೧೮ ॥**
**ಶ್ವಾಸಶೂಲಪಿಪಾಸಾರ್ತಂಕ್ಷೀಣಂಜ್ವರನಿಪೀಡಿತಂ ॥**
**ವಿಶೇಷೇಣನರಂವೃದ್ಧಮತಿಸಾರೋವಿನಾಶಯೇತ್ ॥ ೧೯ ॥**

ಪಕ್ವವಾದ ನೇರಳೆಯ ಹಣ್ಣಿನಹಾಗೆ ಕಪ್ಪುಬಣ್ಣವುಳ್ಳದಾಗಿಯೂ, ಯಕೃತ್ಪಿಂಡದ ಹಾಗೆ ಕಪ್ಪು ಕೆಂಪು ಮಿಶ್ರವಾಗಿಯೂ, ಸ್ವಚ್ಛವಾಗಿಯೂ, ತುಪ್ಪ, ಎಣ್ಣೆ, ಕೊಬ್ಬು ಗಂಜಿ, ಹಾಲು, ಮೊಸರು, ಮಾಂಸವನ್ನು ತೊಳದ ನೀರು ಇವುಗಳಂತೆ ಕಾಣುವುದಾಗಿಯೂ, ಕೇವಲ ಕಪ್ಪುಬಣ್ಣದ್ದಾಗಿಯೂ, ನೀಲಮತ್ತು ಕೆಂಪು ಬಣ್ಣದಿಂದ ಕೂಡಿದ್ದಾಗಿಯೂ, ಕಪ್ಪು ಮತ್ತು ಬಿಳುಪಿನಿಂದ ಕೂಡಿದ್ದಾಗಿಯೂ, ಜಿಡ್ಡುಳ್ಳದ್ದಾಗಿಯೂ. ಚಿತ್ರವರ್ಣಯುಕ್ತವಾಗಿಯೂ, ನವಿಲುಗರಿಯಲ್ಲಿರುವ ಚಂದ್ರಿಕೆಯಂತೆ ಮಲದಲ್ಲಿಯೂ ಚಂದ್ರಿಕೆಗಳು ಕಾಣುವುದಾಗಿಯೂ, ಸ್ವಲ್ಪ ಗಟ್ಟಿಯಾಗಿಯೂ, ಶವದ ವಾಸನೆಯಿಂದ ಕೂಡಿದ್ದಾಗಿಯೂ, ಮಸ್ತಿಷ್ಕಗತವಾದ ಮಸ್ತುಲುಂಗ ಎಂಬ ಸ್ನೇಹದ್ರವದಹಾಗೆಯೂ, ಸುಗಂಧಯುಕ್ತವಾಗಿಯೂ, ಪ್ರಮಾಣದಲ್ಲಿ ಅಧಿಕವಾಗಿಯೂ, ಬಾಯಾರಿಕೆ, ಮೈಯ್ಯುರಿ, ಅಜ್ಞಾನ, ಶ್ವಾಸ, ಬಿಕ್ಕಳಿಕೆ, ಪಾರ್ಶ್ವಶೂಲೆ, ಎಲುಬುಗಳಲ್ಲಿ ಶೂಲೆ ಇವುಗಳುಳ್ಳದ್ದಾಗಿಯೂ, ಮೂರ್ಛೆ, ಅರುಚಿ, ಜ್ಞಾನೇಂದ್ರಿಯ ಪಾಟವುತಪ್ಪುವುದು ಇಂತಹ ಉಪರೋಗಯುಕ್ತವಾಗಿಯೂ ಇರುವ ಅತಿಸಾರರೋಗವನ್ನು ಚಿಕಿತ್ಸೆಗೆ ಅಸಾಧ್ಯವೆಂದು ತ್ಯಜಿಸಬೇಕು. ಗುದದ್ವಾರದವಲಿಗಳು ಪಕ್ವವಾಗಿರುವ ಅಂದರೆ ಗುದದ್ವಾರಕ್ಕೆ ಸ್ವಾಭಾವಿಕವಾಗಿ ಇರತಕ್ಕ ಮಲನಿರೋಧಶಕ್ತಿ ನಾಶವಾಗಿಹೋಗಿರುವ ರೋಗಿಯನ್ನೂ ಮತ್ತು ಅತಿಸಾರದ ವೇಗವನ್ನು ತಡೆಯಲಾರದೆ ರೋದನಮಾಡುತ್ತಿರುವ ರೋಗಿಯನ್ನೂ ಸಹ ಚಿಕಿತ್ಸೆಗೆ ಅಸಾಧ್ಯವೆಂದು ತ್ಯಜಿಸತಕ್ಕದ್ದು. ದೇಹಬಲವಿಲ್ಲದವನನ್ನೂ, ಹೊಟ್ಟೆ ಉಬ್ಬರಿಸಿಕೊಂಡಿರುವವನನ್ನೂ “ **ಶೋಥಂಶೂಲಂಜ್ವರಂತೃಷ್ಣಾಂಶ್ವಾಸಂಕಾಸಮರೋಚಕಂ॥ ಛರ್ದಿಂಮೂರ್ಚ್ಛಾಂಚಹಿಕ್ಕಾಂಚದೃಷ್ಟ್ವಾತೀಸಾರಿಣಂತ್ಯಜೇತ್** ” ಎಂಬ ಶ್ಲೋಕದಲ್ಲಿ ಹೇಳಿರುವ ಶೋಭೆ, ಶೂಲೆ, ಜ್ವರ, ಬಾಯಾರಿಕೆ, ಶ್ವಾಸ, ಕಾಸ, ಅರುಚಿ, ವಮನ, ಮೂರ್ಛೆ, ಬಿಕ್ಕಳಿಕೆ ಇಂತಹ ಅತಿಸಾರದ ಉಪದ್ರವಗಳುಳ್ಳವನನ್ನೂ, ಗುದಪಾಕ ಅಂದರೆ ಗುದದ್ವಾರದಲ್ಲೆಲ್ಲಾ ವ್ರಣವಾಗಿ ಶರೀರದಲ್ಲಿ ಸ್ವಾಭಾವಿಕವಾಗಿ ಇರಬೇಕಾದಷ್ಟು ಉಷ್ಣವೇ ಇಲ್ಲದೇ ಇರುವವನನ್ನೂ ಇಂತಹ ಅತಿಸಾರರೋಗಿಗಳನ್ನು ಚಿಕಿತ್ಸೆಗೆ ಅಸಾಧ್ಯರೆಂದು ಬಿಡಬೇಕು. ಶ್ವಾಸ, ಹೊಟ್ಟೆಶೂಲೆ, ಬಾಯಾರಿಕೆ, ಜ್ವರ ಇವುಗಳಿದ್ದು ಅತಿಸಾರ ರೋಗಿಯು ಕೃಶನಾಗಿದ್ದಲ್ಲಿ ರೋಗವು ಅಸಾಧ್ಯವೆಂದು ಬಿಟ್ಟುಬಿಡಬೇಕು.

**ಪಿತ್ತಕೃಂತಿಯದಾತ್ಯರ್ಥಂದ್ರವ್ಯಾಣ್ಯಶ್ನಾತಿಪೈತ್ತಿಕೇ ॥**
**ತದೋಪಜಾಯತೇಭೀಕ್ಷ್ಣಂರಕ್ತಾತೀಸಾರಉಲ್ಬಣಃ ॥ ೨೦ ॥**

ರಕ್ತಾತಿಸಾರದ ಉತ್ಪತ್ತಿಕ್ರಮವು ಹೇಗಂದರೆ - ಪಿತ್ತಜನ್ಯವಾದ ಅತಿಸಾರರೋಗವು ದೇಹದಲ್ಲಿರುವಾಗ್ಗೆ ಪುನಶ್ಚ ಪಿತ್ತಪ್ರಕೋಪ ಮಾಡತಕ್ಕ ಆಹಾರವಿಹಾರಗಳನ್ನೇ ಅನುಸರಿಸಿದಲ್ಲಿ ಆಗ್ಯೆ ಅತ್ಯುಲ್ಬಣವಾದ ರಕ್ತಾತಿಸಾರವೆಂಬ ರೋಗವು ಹುಟ್ಟುತ್ತದೆ.

**ವಾಯುಃಪ್ರವೃದ್ಧೋನಿಚಿತಂಬಲಾಸಂ**
**ನುದತ್ಯಧಸ್ತಾದಹಿತಾಶನಸ್ಯ ||**
**ಪ್ರವಾಹತೋಲ್ಪಂಬಹುಶೋಮಲಾಕ್ತಂ**
**ಪ್ರವಾಹಿಕಾಂತಾಂಪ್ರವದಂತಿತಜ್ಜ್ಞಾಃ || ೨೦ ||**

ಪ್ರವಾಹಿಕೆ ಎಂಬ ಅತಿಸಾರಭೇದದ ಉತ್ಪತ್ತಿ ಕ್ರಮವನ್ನು ಹೇಳುತ್ತಾನೆ. ವಾತ ಮತ್ತು ಶ್ಲೇಷ್ಮಗಳ ಪ್ರಕೋಪಕ್ಕೆ ಕಾರಣಗಳಾದ ಆಹಾರ ವಿಹಾರಗಳನ್ನು ಅನುವರ್ತಿಸಿದವನಿಗೆ ವಾಯು ಮತ್ತು ಶ್ಲೇಷ್ಮಗಳು ವೃದ್ಧಿಯಾಗಿ ವಾಯುವು ಶ್ಲೇಷ್ಮವನ್ನು ಅಧೋದ್ವಾರದಿಂದ ಸ್ವಲ್ಪ ಸ್ವಲ್ಪವಾಗಿಯೂ, ಬಹಳವಾಗಿಯೂ, ಮಲದೊಡನೆಕೂಡಿಯೂ ಪ್ರವಾಹರೂಪವಾಗಿ ಹೊರಕ್ಕೆ ಹೊರಡಿಸಿದಲ್ಲಿ ಅದಕ್ಕೆ ಪ್ರವಾಹಿಕೆ ಎಂಬ ಹೆಸರು.

**ಪ್ರವಾಹಿಕಾವಾತಕೃತಾಸಶೂಲಾ**
**ಪಿತ್ತಾತ್ಸದಾಹಾಸಕಫಾಕಫಾಚ್ಚ ||**
**ಸಶೋಣಿತಾಶೋಣಿತಸಂಭವಾಚತಾಃ**
**ಸ್ನೇಹರೂಕ್ಷಪ್ರಭವಾಮತಾಸ್ತು || ೨೨ ||**
**ತಾಸಾಮತೀಸಾರವದಾದಿಶೇಚ್ಚ**
**ಲಿಂಗಂಕ್ರಮಂಚಾಮವಿಪಕ್ವತಾಂಚ ||**

ಪ್ರವಾಹಿಕೆಯು ವಾತಪ್ರಕೋಪದಿಂದ ಹುಟ್ಟಿದ್ದರೆ ಹೊಟ್ಟೆಶೂಲೆ ಇರುತ್ತದೆ. ಪಿತ್ತಪ್ರಕೋಪಜನ್ಯವಾಗಿದ್ದರೆ ಮೈಯ್ಯುರಿ ಇರುತ್ತದೆ; ಕಫಪ್ರಕೋಪಜನ್ಯವಾಗಿದ್ದಲ್ಲಿ ಮಲದ ಜೊತೆಯಲ್ಲಿ ಕಫಸಹ ಹೋಗುತ್ತಿರುತ್ತದೆ. ರಕ್ತಪ್ರಕೋಪದಿಂದ ಪ್ರವಾಹಿಕೆ ಹುಟ್ಟಿದರೆ ಮಲದಕೂಡೆ ರಕ್ತವೂ ಹೋಗುತ್ತಲೇ ಇರುತ್ತದೆ ಈ ರೀತಿಯಾಗಿ ಪ್ರವಾಹಿಕೆಯು (ಒಂದು ವಿಧವಾದ ಅತಿಸಾರಭೇದ ) ಸ್ನೇಹ ಎಂದರೆ ಕಫದಿಂದಲು ರೂಕ್ಷ ಅಂದರೆ ವಾತದಿಂದಲೂ, ಶ್ಲೋಕದ ಕೊನೆಯಲ್ಲಿರುವ " ತು " ಎಂಬ ಸಮುಚ್ಚಯದಿಂದ ರಕ್ತ, ಪಿತ್ತ, ಇವುಗಳಿಗೂ ಸಂಗ್ರಹಮಾಡಿಕೊಂಡಲ್ಲಿ ರಕ್ತ ಮತ್ತು ಪಿತ್ತಜನ್ಯ ಎಂಬದಾಗಿಯೂ ನಾಲ್ಕು ವಿಧವೆಂಬದಾಗಿ ವೈದ್ಯರಿಂದ ಒಪ್ಪಲ್ಪಟ್ಟಿದೆ. ಈ ಪ್ರವಾಹಿಕೆಗಳಿಗೆ ಅತಿಸಾರದಂತೆಯೇ ವಾತಪಿತ್ತಗಳ ಲಕ್ಷಣಗಳನ್ನೂ, ಚಿಕಿತ್ಸಾಕ್ರಮವನ್ನೂ ಮತ್ತು ಆಮವಿಪಕ್ವಭಾವವನ್ನೂ ಊಹಿಸಿಕೊಳ್ಳಬೇಕು.

**ಯಸ್ಯೋಚ್ಚಾರಂವಿನಾಮೂತ್ರಂಸಮ್ಯಗ್ವಾಯುಶ್ಚ ಗಚ್ಛತಿ ||**
**ದಿಪ್ತಾಗ್ನೇರ್ಲಘುಕೋಷ್ಠಸ್ಯಸ್ಥಿತಸ್ತಸ್ಯೋದರಾಮಯಃ ||೨೩||**

ಅತಿಸಾರವು ನಿವೃತ್ತಿಯಾಯಿತೆನ್ನುವುದಕ್ಕೆ ಲಕ್ಷಣವನ್ನು ಹೇಳುತ್ತಾನೆ. ಅಪಾನವಾಯು ಹೊರಡುವಾಗಲಾಗಲಿ, ಮೂತ್ರ ವಿಸರ್ಜನೆ ಮಾಡುವಾಗಲಾಗಲಿ ಮಲಶಂಕೆಯಿಲ್ಲದೆ ಈ ಎರಡೂ ಸರಾಗವಾಗಿ ನಡೆದಲ್ಲಿ ಅಂತವನಿಗೆ ಉದರರೋಗವಾದ ಅತಿಸಾರವು ನಿವೃತ್ತಿಯಾಯಿತೆಂದು ನಿಶ್ಚಯಿಸಿಕೊಳ್ಳಬಹುದು,

**ಜ್ವರಾತಿಸಾರಯೋರುಕ್ತಂನಿದಾನಂಯತ್ಪೃಥಕ್ಪೃಥಕ್ ||**
**ತತಸ್ಸ್ಯಾಜ್ಜ್ವರಾತಿಸಾರಸ್ಯತೇನನಾತ್ಯೋದಿತಂಪುನಃ || ೨೪ ||**

ಜ್ವರಯುಕ್ತವಾದ ಅತಿಸಾರದಲಕ್ಷಣವನ್ನು ಅತಿದೇಶರೂಪವಾಗಿ ಹೇಳುತ್ತಾನೆ. ಜ್ವರ ಮತ್ತು ಅತಿಸಾರ ಎಂಬ ರೋಗಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿರುವ ಲಕ್ಷಣಗಳು ಎರಡೂ ಕೂಡಿ ಕಂಡು ಬಂದರೆ ಅದಕ್ಕೆ ಜ್ವರಾತಿಸಾರವೆಂದು ಹೆಸರು. ಇದೇ ಅಭಿಪ್ರಾಯದಿಂದಲೇ ಜ್ವರಯುಕ್ತವಾದ ಅತಿಸಾರವನ್ನು ಬೇರೆಯಾಗಿ ಹೇಳಲಿಲ್ಲ.

§ ಇಲ್ಲಿಗೆ ಅತಿಸಾರನಿದಾನ ಸಂಪೂರ್ಣ. §

## — ಗ್ರಹಣೀನಿದಾನ. —

**ಅತಿಸಾರೇನಿವೃತ್ತೇಽಪಿಮಂದಾಗ್ನೇರಹಿತಾಶಿನಃ ॥**
**ಭೂಯಸ್ಸಂದೂಷಿತೋವಹ್ನಿರ್ಗ್ರಹಣೀಮಭಿದೂಷಯೇತ್ ॥೧॥**

ಜಠರಾಗ್ನಿಪಾಟವ ಕಡಮೆಯಾಗಿರುವ ಕಾಲದಲ್ಲಿ ವಿರುದ್ಧವಾದ ಆಹಾರಗಳನ್ನು ತಿನ್ನುವುದರಿಂದ ಮತ್ತು ಅತಿಸಾರರೋಗವು ಪ್ರಾಪ್ತವಾಗಿದ್ದು ಅದು ನಿವೃತ್ತಿಯಾದ ಸ್ವಲ್ಪಕಾಲದಲ್ಲಿಯೇ ವಿರುದ್ಧಗಳಾದ ಆಹಾರಗಳನ್ನು ತಿನ್ನೋಣದರಿಂದಲೂ ಜಠರಾಗ್ನಿಯು ದೂಷಿತವಾಗಿ ಅಂದರೆ ಜಠರಾಗ್ನಿ ಶಕ್ತಿಯು ಕಡಮೆಯಾಗಿ ಗ್ರಹಣಿಯನ್ನು ದೋಷಯುಕ್ತವಾಗಿ ಮಾಡುತ್ತದೆ.

**ಏಕೈಕಶಸ್ಸರ್ವಶಶ್ಚದೋಷೈರತ್ಯರ್ಥಮೂರ್ಛಿತೈಃ ॥**
**ಸಾದುಷ್ಟಾಬಹುಶೋಭುಕ್ತಮಾಮಮೇವವಿಮುಂಚತಿ ॥ ೨ ॥**
**ಪಕ್ವಂವಾಸರುಜಂಪೂತಿಮುಹುರ್ಬದ್ಧಂಮುಹುರ್ದ್ರವಂ ॥**
**ಗ್ರಹಣೀರೋಗಮಾಹುಸ್ತಮಾಯುರ್ವೇದವಿದೋಜನಾಃ ॥೩॥**

ವಾತ, ಪಿತ್ತ, ಕಫಗಳು ಶರೀರದಲ್ಲಿ ಎಷ್ಟು ಪ್ರಮಾಣದಲ್ಲಿರಬೇಕೋ ಅದಕ್ಕಿಂತ ಅತ್ಯಂತ ಹೆಚ್ಚು ಕಡಮೆಯಾಗೋಣದರಿಂದ ಗ್ರಹಣಿಯು ದೂಷಿತವಾಗಿ ಭೋಜನಮಾಡಿದ ಅನ್ನವನ್ನು ಜೀರ್ಣವಾಗುವವರಿವಿಗೂ ಹಿಡಿದು ನಿಲ್ಲಿಸತಕ್ಕ ತನ್ನ ಶಕ್ತಿಯನ್ನು ಕಳದು ಕೊಳ್ಳುತ್ತದೆ. ಈ ಶಕ್ತಿಯು ನಷ್ಟವಾದಮೇಲೆ ಭೋಜನಮಾಡಿದ ಆಹಾರವು ಜೀರ್ಣವಾಗದೇ ಆಮವಾಗಿಯೇ ಅನೇಕ ಸಾರಿ ಹೋಗುದಕ್ಕೆ ಪ್ರಾರಂಭವಾಗುತ್ತದೆ. ಗ್ರಹಣೀದೋಷದಿಂದ ಹುಟ್ಟುವ ಈ ರೋಗಕ್ಕೆ ಗ್ರಹಣೀರೋಗವೆಂದೇ ಹೆಸರು ಹಿಂದೆ ಹೇಳಿದಂತೆ ಈ ಗ್ರಹಣೀರೋಗವು ಆಮವಾಗಿಯೇ ಮಲವನ್ನು ಬಿಡಬಹುದು. ಒಂದು ವೇಳೆ ಭೋಜನಮಾಡಿದ ಆಹಾರವನ್ನು ಪಕ್ವವಾಗುವವರಿವಿಗೂ ನಿಲ್ಲಿಸಿಕೊಂಡಿದ್ದು ಕಡೆಗೆ ದುರ್ಗಂಧಯುಕ್ತವಾಗಿಯೂ, ಗುದದ್ವಾರ ಮತ್ತು ಹೊಟ್ಟೆಯಲ್ಲಿ ಸಹ ಅತ್ಯಂತವಾಗಿ ವೇದನೆಯಿಂದ ಕೂಡಿಯೂ, ಕೆಲವುವೇಳೆ ತಡೆದು ತಡೆದು ಬಿಡುವುದು, ಮತ್ತೆ ಕೆಲವುಸಾರಿ ದ್ರವವಾಗಿ ಪದೇ ಪದೇ ಮಲಪ್ರವೃತ್ತಿಯಾಗುತ್ತಿರುವದು, ಗ್ರಹಣೀರೋಗವು ಈ ರೀತಿಯಾಗಿ ಇರುತ್ತದೆ. ಈ ಗ್ರಹಣೀರೋಗವು ವಾತಜ, ಪಿತ್ತಜ, ಶ್ಲೇಷ್ಮಜ ಎಂಬದಾಗಿ ಮೂರು ವಿಧ.

**ಪೂರ್ವರೂಪಂತುತಸ್ಯೇದಂತೃಷ್ಣಾಲಸ್ಯಂಬಲಕ್ಷಯಃ ॥**
**ವಿದಾಹೋಽನ್ನಸ್ಯಪಾಕಶ್ಚ ಚಿರಾತ್ಕಾಯಸ್ಯಗೌರವಂ ॥ ೪ ॥**

ಈ ಗ್ರಹಣೀರೋಗದ ಪೂರ್ವರೂಪವು ಬಾಯಾರಿಕೆ, ಸೋಮಾರಿತನ, ದೇಹ

ದಲ್ಲಿ ಕ್ರಮೇಣ ಬಲತಗ್ಗುತ್ತ ಬರುವದು, ಜಠರಾಗ್ನಿ ಪಾಟವ ಕಡಮೆಯಾಗೋಣದರಿಂದ ಭೋಜನಮಾಡಿದ ಅನ್ನ ಪಚನವಾಗುವುದಕ್ಕಿಲ್ಲ; ಒಂದುವೇಳೆ ಪಕ್ವವಾದರೂ ಬಹಳ ಕಾಲ ಹಿಡಿಯಬಹುದು. ವೈಭಾರ ಇವುಗಳು ಗ್ರಹಣೀರೋಗ ಹುಟ್ಟುವ ಪೂರ್ವದಲ್ಲಿ ತೋರತಕ್ಕ ಲಕ್ಷಣಗಳು.

**ಕಟುತಿಕ್ತಕಷಾಯಾತಿರೂಕ್ಷಸಂದುಷ್ಟಭೋಜನೈಃ ||**
**ಪ್ರಮಿತಾನಶನಾತ್ಯಧ್ವವೇಗನಿಗ್ರಹಮೈಥುನೈಃ || ೫ ||**
**ಮಾರುತಃಕುಪಿತೋವಹ್ನಿಂಸಂಛಾದ್ಯಕುರುತೇಗದಾನ್ ||**
**ತಸ್ಯಾನ್ನಂಪಚ್ಯತೇದುಃಖಂಶುಕ್ತಪಾಕಂಖರಾಂಗತಾ || ೬ ||**
**ಕಂಠಾಸ್ಯಶೋಷಃಕ್ಷುತ್ತೃಷ್ಣಾತಿಮಿರಂಕರ್ಣಯೋಸ್ಸ್ವನಃ ||**
**ಪಾರ್ಶ್ವೋರುವಂಕ್ಷಣಗ್ರೀವಾರುಗಭೀಕ್ಷ್ಣಂವಿಸೂಚಿಕಾ || ೭ ||**
**ಹೃತ್ಪೀಡಾಕಾರ್ಶ್ಯದೌರ್ಬಲ್ಯಂವೈರಸ್ಯಂಪರಿಕರ್ತಿಕಾ ||**
**ಗೃದ್ಧಿಸ್ಸರ್ವರಸಾನಾಂಚಮನಸಸ್ಸದನಂತಥಾ || ೮ ||**
**ಜೀರ್ಣೇಜೀರ್ಯತಿಚಾಧ್ಮಾನಂಭುಕ್ತೇಸ್ವಾಸ್ಥ್ಯಮುಪೈತಿಚ ||**
**ಸವಾತಗುಲ್ಮಹೃದ್ರೋಗಪ್ಲೀಹಾಶಂಕೀಚಮಾನವಃ || ೯ ||**
**ಚಿರಾದ್ದುಃಖಂದ್ರವಂಶುಷ್ಕಂತನ್ವಾಮಂಶಬ್ದಫೇನವತ್ ||**
**ಪುನಃಪುನಸ್ಸೃಜೇದ್ವರ್ಚಃಕಾಸಶ್ವಾಸಾದಿತೋನಿಲಾತ್ || ೧೦ ||**

ಕಾರ, ಕಹಿ, ಒಗರು ಮತ್ತು ಅತಿರೂಕ್ಷ (ಉಷ್ಣವನ್ನು ವೃದ್ಧಿಮಾಡುವ) ಪದಾರ್ಥಗಳನ್ನು ಭೋಜನಮಾಡುವುದು, ಸಂದುಷ್ಟವೆಂದರೆ ಸಯೋಗದಿಂದ ದುಷ್ಟವಾದ ಪದಾರ್ಥಗಳನ್ನು ಭೋಜನಮಾಡುವುದು, ಉಪವಾಸಮಾಡುವುದು, ಪ್ರಮಾಣಕ್ಕಿಂತ ಹೆಚ್ಚಿಗೆಯಾಗಿ ತಿನ್ನುವುದು, ಹೆಚ್ಚಾಗಿ ದಾರಿನಡೆಯುವುದು, ಮಲಮೂತ್ರಗಳ ವೇಗವನ್ನು ನಿರೋಧಮಾಡುವದು, ಅತಿಯಾಗಿ ಸ್ತ್ರೀಸಂಗಮಾಡುವದು ಈ ಕಾರಣಗಳಿಂದ ವಾತಪ್ರಕೋಪವುಂಟಾಗಿ ಜಠರಾಗ್ನಿಯ ಪಚನಶಕ್ತಿಯು ಕಡಮೆಯಾಗುತ್ತದೆ. ಅಗ್ನಿಶಕ್ತಿ ಕಡಮೆಯಾಯಿತೆಂದರೆ ಊಟಮಾಡಿದ ಅನ್ನವು ಜೀರ್ಣವಾಗದಿರುವುದು ಮತ್ತು ಹುಳಿಯಾಗುವುದು. ದೇಹಗತವಾದಸ್ನೇಹವೆಲ್ಲಾ ಕ್ರಮವಾಗಿಶೋಷಿಸಿ ಹೋಗೋಣದರಿಂದ ಕ್ರಮೇಣ ಚರ್ಮವೆಲ್ಲಾ ತರಕಲಾಗುವದು, ಶುಷ್ಕವಾಗಿಹೋಗುವದು, ಬಾಯಿ ಮತ್ತು ಗಂಟಲು ಸಹ ಒಣಗುತ್ತಿರುವದು, ಹಸಿವು ಮತ್ತು ಬಾಯಾರಿಕೆಗಳುಂಟಾಗುವುದು, ದೃಷ್ಟಿ ಮಂದವಾಗುವದು, ಕಿವಿಯಲ್ಲಿ ಸದ್ದಾಗುವದು, ಪಾರ್ಶ್ವಗಳು, ತೊಡೆ, ಗೆಜ್ಜೆಕಟ್ಟು, ಕತ್ತು ಇವುಗಳಲ್ಲಿ ಅತಿಯಾಗಿ ನೋವಾಗುವದು, ವಮನ ಮತ್ತು ಭೇದಿ ಸಹ ಆಗುತ್ತಿರುವುದು, ಎದೆಯಲ್ಲಿ ನೋವಾಗುವದು, ದೇಹವು ಕೃಶವಾಗುತ್ತ ಬರುವದು, ಅಶಕ್ತಿ, ಬಾಯಿಗೆ ಯಾವರುಚಿಯೂ ತಿಳಿಯುವುದಕ್ಕಿಲ್ಲ, ಗುದದ್ವಾರವನ್ನು ಕತ್ತರಿಯಿಂದ ಕತ್ತರಿಸಿದಂತೆ ಗುದದ್ವಾರದಲ್ಲಿ ನೋವುಂಟಾಗುವದು, ಉಪ್ಪು, ಹುಳಿ, ಕಹಿ, ಕಾರ ಮೊದಲಾದ ಎಲ್ಲಾರಸಗಳನ್ನೂ ಹೆಚ್ಚಾಗಿ ತಿನ್ನಬೇಕೆಂಬ ಅಪೇಕ್ಷೆ, ಮನಸ್ಸಿಗೆಸೋಲು ಬೇಜಾರು, ಭೋಜನಮಾಡಿದ ಅನ್ನವು ಜೀರ್ಣವಾಗುವಾಗ ಮತ್ತು ಜೀರ್ಣವಾದಮೇಲೆ ಸಹ ಹೊಟ್ಟೆಉಬ್ಬರಿಸಿಕೊಳ್ಳುವುದು, ಭೋಜನಮಾಡಿದರೆ ಹೊಟ್ಟೆಯು

ಜ್ವರ ಮತ್ತು ಸಂಕಟಸಹ ಕಡಮೆಯಾಗುವದು, ರೋಗಿಗೆ ವಾತಗುಲ್ಮ, ಹೃದ್ರೋಗ ವೆಂದರೆ ಎದೆನೋವು, ಪ್ಲೀಹಾಭಿವೃದ್ಧಿ ಇವುಗಳು ಇರುವಂತೆ ತೋರುತ್ತಿರುವದು, ಬಹಳಹೊತ್ತಿಗೊಂದುಸಾರಿ ಸಂಕಟದೊಡನೆ ನೀರುನೀರಾಗಿಯೂ, ಶುಷ್ಕವಾದ ಮಲದೊಡನೆಕೂಡಿಯೂ, ಆಮದೊಡನೆಕೂಡಿಯೂ, ಶಬ್ದ ಮತ್ತು ನೊರೆಯಿಂದ ಸಹಕೂಡಿಕೊಂಡು ಮಲಪ್ರವೃತ್ತಿಯಾಗುವದು, ರೋಗಿಗೆ ಕೆಮ್ಮು ಮತ್ತು ಉಬ್ಬಸ ಇವುಗಳು ಇರುವುದು ಇಷ್ಟು ಲಕ್ಷಣಗಳಿದ್ದರೆ ವಾತಜನ್ಯಗ್ರಹಣೀ ರೋಗವೆನ್ನಬೇಕು.

ಕಟ್ವಜೀರ್ಣವಿದಾಹ್ಯಮ್ಲಕ್ಷಾರಾದ್ಯೈಃಪಿತ್ತಮುಲ್ಬಣಂ ||
ಅಪ್ಲಾವಯದ್ಧಂತ್ಯನಲಂಜಲಂತಪ್ತಮಿವಾನಲಂ || ೧೩ ||
ಸೋಜೀರ್ಣಂನೀಲಪೀತಾಭಂಪೀತಾಭಸ್ಸಾರ್ಯತೇದ್ರವಂ ||
ಪೂತ್ಯಮ್ಲೋದ್ಗಾರಹೃತ್ಕಂಠದಾಹಾರುಚಿತೃಡಾರ್ದಿತಃ || ೧೪ ||

ಕಾರ, ಅಜೀರ್ಣವಾಗತಕ್ಕ ಗುರುತ್ವಾಹಾರಗಳು, ಉಷ್ಣವನ್ನುಂಟುಮಾಡತಕ್ಕ ಆಹಾರಗಳು, ಹುಳಿ ಮತ್ತು ಉಪ್ಪು ಅಧಿಕವಾಗಿರುವ ವಸ್ತುಗಳು, ಇಂತಹ ವಸ್ತುಗಳ ಸೇವನೆಯಿಂದ ಪಿತ್ತವು ಉಲ್ಬಣವಾಗಿ ಬಿಸಿನೀರು ಬೆಂಕಿಯನ್ನುಕೆಡಿಸುವಂತೆ ಜಠರಾಗ್ನಿ ಪಾಟವವನ್ನು ಕಡಮೆಮಾಡಿ ಅಜೀರ್ಣಕ್ಕೆ ಕಾರಣವನ್ನುಂಟುಮಾಡುತ್ತದೆ. ರೋಗಿಗೆ ದುರ್ಗಂಧಯುಕ್ತವಾದ ಹುಳಿತೇಗು ಬರುವುದು, ಎದೆಯಲ್ಲಿಮತ್ತು ಹೊಟ್ಟೆಯಲ್ಲಿ ಸಹ ಉರಿಯಾಗುವುದು, ಅರುಚಿ, ಬಾಯಾರಿಕೆ ಇವುಗಳಿರುವುದು, ಚನ್ನಾಗಿ ಜೀರ್ಣವಾಗದ ಕಪ್ಪು, ಹಳದಿ ಬಣ್ಣಗಳಿಂದ ಮಿಶ್ರಿತವಾದ ಮಲವು ವಿಸರ್ಜನೆಯಾಗುತ್ತಿರುವುದು, ರೋಗಿಯ ಶರೀರವೂ ಸಹ ಹಳದಿಬಣ್ಣಕ್ಕೆ ತಿರುಗುವುದು ಇವು ಪಿತ್ತಜನ್ಯವಾದ ಗ್ರಹಣೀ ರೋಗದ ಲಕ್ಷಣಗಳು.

ಗುರ್ವತಿಸ್ನಿಗ್ಧಶೀತಾದಿಭೋಜನಾದತಿಭೋಜನಾತ್ ||
ಭುಕ್ತಮಾತ್ರಸ್ಯಚಸ್ವಪ್ನಾದ್ಧಂತ್ಯಗ್ನಿಂಕುಪಿತಃಕಫಃ || ೧೫ ||
ತಸ್ಯಾನ್ನಂಪಚ್ಯತೇದುಃಖ್ಖಂಹೃಲ್ಲಾಸಚ್ಛರ್ದ್ಯರೋಚಕಾಃ ||
ಆಸ್ಯೋಪದೇಹಮಾಧುರ್ಯಕಾಸಷ್ಠೀವನಪೀನಸಾಃ || ೧೬ ||
ಹೃದಯಂಮನ್ಯತೇಸ್ತ್ಯಾನಮುದರಂಸ್ತಿಮಿತಂಗುರು ||
ದುಷ್ಟೋಮಧುರಉದ್ಗಾರಃಸದನಂಸ್ತ್ರೀಷ್ವಹರ್ಷಣಂ || ೧೭ ||
ಭಿನ್ನಾಮಶ್ಲೇಷ್ಮಸಂಸೃಷ್ಟಗುರುವರ್ಚಃಪ್ರವರ್ತನಂ ||
ಅಕೃಶಸ್ಯಾಪಿದೌರ್ಬಲ್ಯಮಾಲಸ್ಯಂಚಕಫಾತ್ಮಕೇ || ೧೮ ||

ಸುಲಭವಾಗಿ ಜೀರ್ಣಕ್ಕೆ ಬಾರದ ಆಹಾರ, ಹೆಜ್ಜಿನ ಜಿಡ್ಡುಳ್ಳ ಆಹಾರ, ತಣ್ಣಗಿರುವ ಆಹಾರ, ಜಿಗಟಾದ ಮತ್ತು ಶೀಯಾದ ಆಹಾರ ಇಂತಹ ಆಹಾರಗಳನ್ನು ಮಿತಿಯಿಲ್ಲದೆ ತಿನ್ನುವುದು, ಭೋಜನವಾದವಡನೆಯೇ ಹಗಲು ಮಲಗುವುದು, ಈ ಕಾರಣಗಳಿಂದ ಕಫವು ಪ್ರಕುಪಿತವಾಗಿ ಜಠರಾಗ್ನಿಯ ಶಕ್ತಿಯನ್ನು ಕಡಮೆಮಾಡುತ್ತದೆ. ಇದರಿಂದ ಭೋಜನಮಾಡಿದ ಅನ್ನವು ಬಹಳ ಕಷ್ಟದಿಂದ ಜೀರ್ಣವಾಗುವುದು, ಬಾಯಿ ನೀರುಬರುತ್ತಿರುವುದು, ವಮನವಾಗುವುದು, ಅರುಚಿ, ಬಾಯಿ ಅಂಟುಸುತ್ತಿಕೊಳ್ಳುವದು, ಬಾಯಿ ಯಾವಾಗ್ಗೂ ಶೀಯಾಗಿರುತ್ತಿರುವುದು, ಕೆಮ್ಮಲು, ಯಾವಾಗಲೂ ಬಾ

ಯಿಂದ ಉಗುಳುವ ಅಪೇಕ್ಷೆಯಾಗುವುದು, ನೆಗಡಿಯಾಗುವುದು, ಹೊಟ್ಟೆಯಲ್ಲಿ ನೀರು ತುಂಬಿಕೊಂಡಿರುವಂತೆ ಮನಸ್ಸಿಗೆ ಭಾಸವಾಗುವುದು, ಹೊಟ್ಟೆಯಲ್ಲಿ ಸ್ತಿಮಿತವಾಗಿಯೂ (ಅಂದರೆ ನಿಶ್ಚಲವಾಗಿ) ಭಾರವಾಗಿಯೂ ಇರುವಂತೆ ತೋರುವುದು, ಸೀಯಾಗಿ ಕೆಟ್ಟ ತೇಗುಬರುವುದು, ಬಳಲಿಕೆ, ಸ್ತ್ರೀಯರವಿಷಯದಲ್ಲಿ ಮನಸ್ಸಿಲ್ಲದಿರುವುದು, ಆಮ ಮತ್ತು ಶ್ಲೇಷ್ಮಗಳೊಡನೆ ಕೂಡಿದ ಜೀರ್ಣವಾಗದ ಮಲವು ಪ್ರವೃತ್ತಿಯಾಗುವುದು, ಶರೀರದಲ್ಲಿ ಕೃಶತ್ವಾದಿಯಾವಲಕ್ಷಣಗಳೂ ಕಾಣದಿದ್ದರೂ ಶಕ್ತಿಮಾತ್ರ ಇಲ್ಲದಿರುವುದು, ಯಾವಾಗಲೂ ರೋಗಿಯು ಸೋಮಾರಿಯಾಗಿರುವುದು ಇವು ಶ್ಲೇಷ್ಮಪ್ರಕೋಪದಿಂದಹುಟ್ಟಿದ ಗ್ರಹಣೀ ರೋಗದ ಲಕ್ಷಣಗಳು.

**ಪೃಥಗ್ವಾತಾದಿನಿರ್ದಿಷ್ಟಹೇತುಲಿಂಗಸಮಾಗಮೇ ||**
**ತ್ರಿದೋಷಂನಿರ್ದಿಶೇದೇವಂತೇಷಾಂವಕ್ಷ್ಯಾಮಿಭೇಷಜಂ ||೧೯||**

ವಾತಾದಿಜನ್ಯ ಗ್ರಹಣೀರೋಗಗಳಿಗೆ ಹೇಳಿರುವ ಪ್ರತ್ಯೇಕ ಲಕ್ಷಣಗಳೆಲ್ಲಾ ಒಂದೇ ಕಡೆಯಲ್ಲಿ ಕೂಡಿರುವುದು ಕಂಡು ಬಂದರೆ ತ್ರಿದೋಷಜನ್ಯ ಗ್ರಹಣೀರೋಗ ವೆಂದು ತಿಳಿಯಬೇಕು.

**ಅಂತ್ರಕೂಜನಮಾಲಸ್ಯಂದೌರ್ಬಲ್ಯಂಸದನಂತಥಾ ||**
**ದ್ರವಂಶೀತಂಘನಂಸ್ನಿಗ್ಧಂಸಕಟೀವೇದನಂಶಕೃತ್ || ೨೦ ||**
**ಆಮಂಬಹುಸಶೈಚ್ಛಿಲ್ಯಂಸಶಬ್ದಂಮಂದವೇದನಂ ||**
**ಪಕ್ಷಾನ್ಮಾಸಾದ್ದಶಾಹಾದ್ವಾನಿತ್ಯಂವಾಪ್ಯಥಮುಂಚತಿ || ೨೧ ||**
**ದಿವಾಪ್ರಕೋಪೋಭವತಿರಾತ್ರೌಶಾಂತಿಂವ್ರಜೇಚ್ಚಸಾ ||**
**ದುರ್ವಿಜ್ಞೇಯಾದುಶ್ಚಿಕಿತ್ಸ್ಯಾಚಿರಕಾಲಾನುಬಂಧಿನೀ || ೨೨ ||**
**ಸಾಭವೇದಾಮವಾತೇನಸಂಗ್ರಹಗ್ರಹಣೀಮತಾ ||**

ಕರುಳಿನಲ್ಲಿ ಶಬ್ದವಾಗುತ್ತಿರುವುದು, ಸೋಮಾರಿತನ, ನಿಶ್ಶಕ್ತಿ, ಬಳಲಿಕೆ ನೀರುನೀರಾಗಿ, ತಣ್ಣಗೆ, ಒಂದೊಂದು ಸಾರಿ ಗಟ್ಟಿಯಾಗಿ, ಜಿಡ್ಡಾಗಿ, ಸೊಂಟನೋವಿನಿಂ ದಕೂಡಿಕೊಂಡು, ಆಮಯುಕ್ತವಾಗಿಯೂ, ಪ್ರಮಾಣದಲ್ಲಿ ಅಧಿಕವಾಗಿಯೂ, ಜಿಗಟಾ ಗಿಯೂ ಶಬ್ದಯುಕ್ತವಾಗಿಯೂ, ಹೆಚ್ಚಿನವೇದನೆಯಿಲ್ಲದೆ, ಹದಿನೈದುದಿನಕ್ಕೊ, ಒಂದು ತಿಂಗಳಿಗೋ, ಹತ್ತುದಿವಸಕ್ಕೊ ಅಥವಾ ಪ್ರತಿದಿವಸವೂನೋ, ಮಲವು ಪ್ರವೃತ್ತಿಯಾಗು ತ್ತಿರುವುದು. ಮಲಪ್ರವೃತ್ತಿ ಹಗಲುಆಗುವುದು, ರಾತ್ರಿಆಗುವುದಕ್ಕಿಲ್ಲ ಈ ರೀತಿಇರುವದು ಇದರ ವಿಚಾರವನ್ನು ಆಲೋಚಿಸ ಹೊರಟರೆ ಬಗೆ ಹರಿಯುವುದಕ್ಕೇ ಇಲ್ಲ, ಚಿಕಿತ್ಸೆಯೂ ಅಷ್ಟೇನೇ, ರೋಗ ಮಾತ್ರ ಬಹಳಕಾಲಬಾಧಿಸಿಕೊಂಡು ಅನುವರ್ತಿಸುವದು, ಈ ಅವ ವಸ್ಥೆಗಳೆಲ್ಲಾ ಇದ್ದರೆ ಸಂಗ್ರಹಗ್ರಹಣೀ ಎಂಬದಾಗಿ ಹೆಸರು. ಇದು ಆಮಾವಸ್ಥೆಯನ್ನು ಹೊಂದಿ ಪ್ರಬಲವಾದ ವಾತಪ್ರಕೋಪಜನ್ಯವೆಂದರಿಯಬೇಕು.

**ಸ್ವಪತಃಪಾರ್ಶ್ವಯೋಃಶೂಲಂಗಲಜ್ಜಲಘಟೀಧ್ವನಿಃ || ೨೩ ||**
**ತಂವದಂತಿಘಟೀಯಂತ್ರಮಸಾಧ್ಯಂಗ್ರಹಣೀಗದಂ ||**

ಮಲಗಿದರೆ ಪಾರ್ಶ್ವಗಳಲ್ಲಿ ಶೂಲೆಯುಂಟಾಗುವುದು, ಹೊಟ್ಟೆಯಲ್ಲಿ ಕೊಡ ದಿಂದ ನೀರನ್ನು ಸುರಿದರೆ ಆಗುವಹಾಗೆ ಶಬ್ದವಾಗುವುದು ಹೀಗಿರುವುದಕ್ಕೆ ಘಟೀಯ

ತ್ರಗ್ರಹಣೀ ಎಂದು ಹೆಸರು. ಇದು ಚಿಕಿತ್ಸೆಗೆ ಅಸಾಧ್ಯ.

**ದೋಷಂಸಾಮುಂನಿರಾಮುಂಚವಿದ್ಯಾದತ್ರಾತಿಸಾರವತ್ ॥ ೨೪ ॥**

ಹಿಂದೆ ಅತಿಸಾರರೋಗಕ್ಕೆ ಹೇಳಿದಂತೆಯೇ ಈ ರೋಗಕ್ಕೂನೂ ಸಾಮ ಮತ್ತು ನಿರಾಮ ಎಂಬ ಭೇದವನ್ನು ಊಹಿಸಿ ತಿಳಿದುಕೊಳ್ಳಬೇಕು.

**ಲಿಂಗೈರಸಾಧ್ಯೋಗ್ರಹಣೀವಿಕಾರೋ**
**ಯೈಸ್ತೈರತೀಸಾರಗತೋನಸಿಧ್ಯೇತ್ ॥**
**ವೃದ್ಧಸ್ಯನೂನಂಗ್ರಹಣೀವಿಕಾರೋ**
**ಹತ್ವಾತನುಂನೈವನಿವರ್ತತೇಚ ॥ ೨೫ ॥**

ಅತಿಸಾರರೋಗಕ್ಕೆ ಯಾವದ್ಯಾವದು ಅಸಾಧ್ಯಲಕ್ಷಣಗಳೆಂದು ಹೇಳಲ್ಪಟ್ಟಿದೆಯೋ ಆ ಲಕ್ಷಣಗಳೇ ಇದ್ದರೆ ಗ್ರಹಣೀರೋಗವುಕೂಡ ಅಸಾಧ್ಯವೆಂದೇ ತಿಳಿಯಬೇಕು. ಮುದುಕರಿಗೆ ಮಾತ್ರ ಈ ಗ್ರಹಣೀರೋಗ ಪ್ರಾಪ್ತವಾಯಿತೆಂದರೆ ಶರೀರ ಪಾತವಾಗುವವರಿಗೂ ಅದುಮಾತ್ರ ಬಿಟ್ಟುಹೋಗುವುದೇ ಇಲ್ಲ.

**ಬಾಲಕೇಗ್ರಹಣೀಸಾಧ್ಯಾಯೂನಿಕೃಚ್ಛ್ರಾಸಮೀರಿತಾ ॥**
**ವೃದ್ಧೇತ್ವಸಾಧ್ಯಾವಿಜ್ಞೇಯಾಮತಂಧನ್ವಂತರೇರಿದಂ ॥ ೨೬ ॥**

ವಯೋವಶಾನದಿಂದ ಈ ಗ್ರಹಣಿಗೆ ಅಸಾಧ್ಯತ್ವವನ್ನು ಹೇಳುತ್ತಾನೆ. ಈ ಗ್ರಹಣೀರೋಗವು ಮಕ್ಕಳಿಗೆ ಸಾಧ್ಯವಾಗುತ್ತದೆ, ಯೌವನಸ್ಥರಿಗೆ ಬಂದರೆ ಕಷ್ಟಸಾಧ್ಯವಾಗುತ್ತದೆ. ಮುದುಕರಾದವರಿಗೆ ಈ ರೋಗವು ಪ್ರಾಪ್ತವಾದರೆ ಅಸಾಧ್ಯವೆಂದು ಸಾಕ್ಷಾತ್ ಧನ್ವಂತರಿಯ ಅಭಿಪ್ರಾಯವೇ ಇದೆ.

**ಇಲ್ಲಿಗೆ ಗ್ರಹಣೀನಿದಾನ ಸಂಪೂರ್ಣ.**

## — ಅರ್ಶೋನಿದಾನ. —

**ಪೃಥಗ್ದೋಷೈಸ್ಸಮಸ್ತೈಶ್ಚಶೋಣಿತಾತ್ಸಹಜಾನಿಚ ॥**
**ಅರ್ಶಾಂಸಿಷಟ್ಪ್ರಕಾರಾಣಿವಿದ್ಯಾದ್ಗುದವಲಿತ್ರಯೇ ॥ ೧ ॥**

ಅರ್ಶೋರೋಗ(ಮೂಲವ್ಯಾಧಿ)ವನ್ನು ಹೇಳುತ್ತಾನೆ. ವಾತ, ಪಿತ್ತ, ಕಫಗಳೆಂಬ ಮೂರುದೋಷಗಳ ಪ್ರತ್ಯೇಕ ಪ್ರಕೋಪದಿಂದಲೂ, ಮೂರೂಕೂಡಿಯೇ ಪ್ರಕೋಪವಾಗೋಣದರಿಂದಲೂ, ರಕ್ತಪ್ರಕೋಪದಿಂದಲೂ ಯಾವದೋಷಪ್ರಕೋಪವನ್ನೂ ಅಪೇಕ್ಷಿಸದೇ ವಂಶಪರಂಪರೆಯಿಂದ ಪ್ರಾಪ್ತವಾದದ್ದೆಂಬದಾಗಿಯೂ ಈ ಅರ್ಶೋರೋಗವು ಆರುಪ್ರಕಾರವಾಗಿದೆ. ಈ ರೋಗವು ಹುಟ್ಟತಕ್ಕ ಸ್ಥಾನವು ಗುದದ್ವಾರ, ಗುದದ್ವಾರದ ಸ್ವರೂಪವು ವರ್ತುಲಾಕಾರವಾಗಿ ನಾಲ್ಕುವರೆ ಅಂಗುಲ ಆಳವುಳ್ಳದ್ದಾಗಿರುತ್ತದೆ. ಊದುವಶಂಖದದ್ವಾರವು ಆವರ್ತವಾಗಿ ಸುತ್ತಿಕೊಂಡು ಹೋಗಿರುವಂತೆ ಗುದದ್ವಾರವು ಸಹಒಳಕ್ಕೆ ಆವರ್ತವಾಗಿ ಸುತ್ತಿಕೊಂಡು ಹೋಗಿರುತ್ತದೆ. ಈ ಸುತ್ತುಗಳಿಗೇನೇ ವೈದ್ಯಕಭಾಷೆಯಲ್ಲಿ ವಳಿಗಳೆಂಬ ಹೆಸರು. ಇವು ಮೂರು, ಮೂರಕ್ಕೂ ಕ್ರಮವಾಗಿ ಪ್ರವಹಣಿ, ವಿಸರ್ಜನಿ, ಸಂವರಣಿ ಎಂಬ ಹೆಸರು. ಗುದದ್ವಾರದ ತುಟಿ ಅರ್ಧಅಂಗುಲ, ಅಲ್ಲಿಂದ ಮೇಲಕ್ಕೆ ಒಂದು ಅಂಗುಲದವರಿವಿಗೂ ,ಇರುವ ಮೊದಲನೆಯ ಸುತ್ತಿಗೆ ಪ್ರವ

ಹಣಿ ಎಂಬ ಹೆಸರು. ಅದರಮೇಲಿನ ಒಂದೂವರೆಅಂಗುಲದ ಒಂದುಸುತ್ತೇ ದ್ವಿತೀಯ ವಳಿ ಎಂಬ ಹೆಸರು. ಅಲ್ಲಿಂದ ಮೇಲಿನ ಸುತ್ತೇ ಪ್ರಥಮವಳಿ. ಈ ಮೂರುವಳಿಗಳಲ್ಲಿಯೂ ಈ ಅರ್ಶೋರೋಗವು ಉಂಟಾಗುತ್ತದೆ. ಇದಕ್ಕೆ ಭಾಷೆಯಲ್ಲಿ ಮೂಲವ್ಯಾಧಿ ಎಂಬ ಹೆಸರು. ಮೇಲೆ ಹೇಳಿರುವ ವಳಿಗಳನ್ನನುಸರಿಸಿ ಭಾಷೆಯಲ್ಲಿ ಒಳಮೂಲ, ಹೊರ ಮೂಲಗಳೆಂಬ ವ್ಯವಹಾರವಿದೆ.

**ದೋಷಾಸ್ತ್ವಙ್ಮಾಂಸಮೇದಾಂಸಿಸಂದೂಷ್ಯವಿವಿಧಾಕೃತೀನ್ ||**
**ಮಾಂಸಾಂಕುರಾನಪಾನಾದೌ ಕುರ್ವಂತ್ಯರ್ಶಾಂಸಿತಾಂಜಗುಃ || ೨||**

ವಾತ, ಪಿತ್ತ, ಕಫಗಳೆಂಬ ಮೂರುದೋಷಗಳು ಪ್ರಕುಪಿತಗಳಾಗಿ ಚರ್ಮ, ರಕ್ತ, ಮಾಂಸ, ಮೇದಸ್ಸು ಇವುಗಳುನ್ನ ರೋಗವನ್ನು ಉತ್ಪತ್ತಿ ಮಾಡುವಷ್ಟುಮಟ್ಟಿಗೆ ಕೆಡಿಸಿ ಅಪಾನದ್ವಾರವಲ್ಲಿ ನಾನಾವಿಧವಾದ ಆಕಾರಗಳುಳ್ಳ ಮಾಂಸದ ಮೊಳಿಕೆಗಳನ್ನುಂಟುಮಾಡುತ್ತವೆ. ಈ ಮಾಂಸದ ಮೊಳಿಕೆಗೇನೇ ಅರ್ಶಸ್ಸು ಎಂಬ ಹೆಸರು. ಅರ್ಶಸ್ಸು ಎಂಬ ಮಾತಿಗೆ ಶತ್ರುವಿನಹಾಗೆ ಗುದದ್ವಾರದಲ್ಲಿ ಸೇರಿಕೊಂಡು ಪ್ರಾಣಿಯನ್ನು ತೊಂದರೆಪಡಿಸುತ್ತವೆ ಎಂಬದಾಗಿ ಅವಯವಾರ್ಥವನ್ನು ಮಾಡಿದ್ದಾರೆ. 'ಅಪಾನಾದೌ' ಎಂಬದಾಗಿ ಆದಿಪದದಿಂದ ಅಪಾನದ್ವಾರಮೊದಲಾದ ಪ್ರದೇಶಗಳಲ್ಲಿ ಎಂಬ ಅರ್ಥವನ್ನು ತೋರಿಸಿರುವದರಿಂದ ಮೂಗು ಮತ್ತು ...ಗಳಲ್ಲಿ ಹುಟ್ಟತಕ್ಕ ಮಾಂಸಾಂಕುರಗಳಿಗೂ ಅರ್ಶಸ್ಸೆಂಬ ಹೆಸರನ್ನೇ ಕೊಡುತ್ತಾರೆ. ಮತ್ತೆ ಕೆಲವರು— ಗುದದ್ವಾರದಲ್ಲಿ ಹುಟ್ಟುವುದಕ್ಕೆ ಮಾತ್ರ ಈ ಅರ್ಶಸ್ಸೆಂಬ ಹೆಸರು ಸಲ್ಲುತ್ತದೆ; ಬೇರೆ ಸ್ಥಳಗಳಲ್ಲಿ ಹುಟ್ಟುವುದಕ್ಕೆ ಮಾಂಸಾಂಕುರವೆಂಬ ಹೆಸರು ಸಲ್ಲುತ್ತದೆನ್ನುತ್ತಾರೆ.

**ಕಷಾಯಕಟುತಿಕ್ತಾನಿರೂಕ್ಷಶೀತಲಘೂನಿಚ ||**
**ಪ್ರಮಿತಾಲ್ಪಾಶನಂತೀಕ್ಷ್ಣಮದ್ಯಂಮೈಥುನಸೇವನಂ || ೩ ||**
**ಲಂಘನಂದೇಶಕಾಲೌಚಶೀತೌವ್ಯಾಯಾಮಕರ್ಮಚ ||**
**ಶೋಕೋವಾತಾತಪಸ್ಪರ್ಶೋಹೇತುರ್ವಾತಾರ್ಶಸಾಂಮತಃ ||೪||**

ಒಗರು, ಕಾರ, ಕಹಿ ಇಂತಹ ರಸಪ್ರಧಾನಗಳಾದ ಪದಾರ್ಥಗಳನ್ನು ಪದೇ ಪದೇ ವಿಶೇಷವಾಗಿ ಉಪಯೋಗಿಸುವುದು, ರೂಕ್ಷ ಎಂದರೆ ವಾತವರ್ಧಕಪದಾರ್ಥಗಳು, ಶೀತವೀರ್ಯವಾದಪದಾರ್ಥಗಳು ಮತ್ತು ತಣ್ಣಗಿರುವ ಆಹಾರಗಳು ಇವುಗಳನ್ನುಪಯೋಗಿಸುವುದು, ಪ್ರಮಿತಾಶನವೆಂದರೆ ಹೊತ್ತುತಪ್ಪಿ ಭೋಜನ ಮಾಡುವುದು, ಅಲ್ಪಾಶನವೆಂದರೆ ಹೊಟ್ಟೆಗೆ ಸಾಕಾಗುವುದಕ್ಕಿಂತ ಕಡಮೆಯಾಗಿ ಭೋಜನಮಾಡುವುದು, ತೀಕ್ಷ್ಣವಾದ ಮದ್ಯಗಳನ್ನು ಪಾನಮಾಡುವುದು, ಅತಿಯಾದ ಸ್ತ್ರೀಸಂಗಮಾಡುವುದು, ಲಂಘನ ಕಾರಣವಿಲ್ಲದೇ ಲಂಘನಮಾಡುವುದು, ಶೀತಗಳಾದ ದೇಶಕಾಲಗಳು ಅಂದರೆ ಶೀತದೇಶದಲ್ಲಿವಾಸಮಾಡುವುದು, ಶೀತಕಾಲ ಇವುಗಳೂ, ಮಿತಿಮೀರಿ ವ್ಯಾಯಾಮಮಾಡುವುದು, ಅತಿಯಾಗಿ ದುಃಖಪಡುವುದು, ಹೆಚ್ಚಾದಗಾಳಿ ಮತ್ತು ಬಿಸಿಲಿನಲ್ಲಿತಿರುಗುವುದು ಇವುಗಳುವಾತೋಲ್ಬಣವಾದ ಅರ್ಶೋರೋಗ ಜನಕಗಳಾದ ಕಾರಣಗಳು.

**ಕಟ್ವಮ್ಲಲವಣೋಷ್ಣಾನಿವ್ಯಾಯಾಮಾಗ್ನ್ಯಾತಪಪ್ರಭಾಃ ||**
**ದೇಶಕಾಲಾವಶಿಶಿರೌಕ್ರೋಧೋಮದ್ಯಮಸೂಯನಂ || ೫ ||**

**ವಿದಾಹಿತೀಕ್ಷ್ಣಮುಷ್ಣಂಚಸರ್ವಂಪಾನಾನ್ನಭೇಷಜಂ ||**
**ಪಿತ್ತೋಲ್ಬಣಾನಾಂವಿಜ್ಞೇಯಃಪ್ರಕೋಪೇಹೇತುರರ್ಶಸಾಂ ||೬||**

ಕಾರ ಹುಳಿ, ಉಪ್ಪು ಇವುಗಳನ್ನು ಹೆಚ್ಚಾಗಿ ತಿನ್ನುವದು, ಉಷ್ಣಪದಾರ್ಥಗಳನ್ನುತಿನ್ನುವದು, ಮಿತಿತಪ್ಪಿ ವ್ಯಾಯಾಮಮಾಡುವುದು, ಬೆಂಕಿಯನ್ನುಕಾಯಿಸುವುದು, ಬಿಸಿಲನ್ನು ಕಾಯಿಸುವುದು, ಉಷ್ಣದೇಶದಲ್ಲಿ ವಾಸಮಾಡುವುದು, ಉಷ್ಣವಾದಕಾಲಸ್ಥಿತಿ, ಹೆಚ್ಚಿಗೆ ಸಿಟ್ಟು, ಅತಿಯಾದ ಮದ್ಯಪಾನ, ಅತಿಯಾಗಿ ಹೊಟ್ಟೆಕಿಚ್ಚುಪಡುವ ಸ್ವಭಾವ, ಅಜೀರ್ಣವನ್ನು ಉಂಟುಮಾಡತಕ್ಕಆಹಾರಗಳು, ಸ್ವತಃತೀಕ್ಷ್ಣವಾಗಿಯೂ, ಉಷ್ಣವನ್ನು ಹೆಚ್ಚಿಸತಕ್ಕದ್ದಾಗಿಯೂ ಇರುವ ಎಲ್ಲಾ ವಿಧವಾದ ಆಹಾರ, ವಿಹಾರ, ಅನ್ನ, ಪಾನ, ಔಷಧಗಳು ಇವುಗಳು ಪಿತ್ತಪ್ರಧಾನವಾದ ಅರ್ಶೋರೋಗದ ಉತ್ಪತ್ತಿಗೆ ಕಾರಣಗಳು.

**ಮಧುರಸ್ನಿಗ್ಧಶೀತಾನಿಲವಣಾಮ್ಲಗುರೂಣಿಚ ||**
**ಅವ್ಯಾಯಾಮೋದಿವಾಸ್ವಪ್ನಃಶಯ್ಯಾಸನಸುಖೇರತಿಃ || ೭ ||**
**ಪ್ರಾಗ್ವಾತಸೇವಾಶೀತೌಚದೇಶಕಾಲಾವಚಿಂತನಂ ||**
**ಶ್ಲೈಷ್ಮಿಕಾಣಾಂಸಮುದ್ದಿಷ್ಟಮೇತತ್ಕಾರಣಮರ್ಶಸಾಂ || ೮||**

ಮಧುರವಾದ ಆಹಾರ ಪದಾರ್ಥಗಳು, ಜಿಡ್ಡುಳ್ಳ ಆಹಾರ ಪದಾರ್ಥಗಳು, ಶೀತಗಳಾದ ಆಹಾರ ಪದಾರ್ಥಗಳು, ಹೆಚ್ಚು ಹುಳಿ, ಹೆಚ್ಚಿಗೆ ಉಪ್ಪು ಇವುಗಳುಳ್ಳ ಆಹಾರ ಪದಾರ್ಥಗಳು, ಗುರುವಾದ ಆಹಾರ ಪದಾರ್ಥಗಳು, ಇಂತಹ ಆಹಾರಗಳನ್ನು ನಿತ್ಯವೂ ಉಪಯೋಗಿಸುವುದು, ವ್ಯಾಯಾಮವಮಾಡದೆ ಯಾವಾಗಲೂ ಕುಳಿತಿರುವುದು, ಹಗಲು ನಿದ್ರೆಮಾಡುವುದು, ಸುಖವಾದಮೆತ್ತನ ಹಾಸಿಗೆ ಮತ್ತು ಸುಖವಾಗಿ ಕುಳಿತು ಕೊಳ್ಳುವ ಆಸನ ಇವುಗಳಲ್ಲಿ ಅಪೇಕ್ಷೆ, ಪೂರ್ವದಿಕ್ಕಿನ ಗಾಳಿಯಲ್ಲಿಯೇ ವಿಶೇಷವಾಗಿರುವುದು, ಶೀತದೇಶದಲ್ಲಿ ವಾಸಮಾಡುವುದು, ಶೀತವಾದ ಕಾಲಸ್ಥಿತಿ, ಅಚಿಂತನಂ ಎಂದರೆ ಯಾವಾಗಲೂ ಕಾರ್ಯವಿಲ್ಲದಿರುವುದು ಇವುಗಳು ಕಫಪ್ರಧಾನವಾದ ಅರ್ಶೋರೋಗಕ್ಕೆ ಕಾರಣಗಳು.

**ಹೇತುಲಕ್ಷಣಸಂಸರ್ಗಾದ್ವಿದ್ಯಾದ್ವಂದ್ವೋಲ್ಬಣಾನಿಚ ||**

ವಾತ, ಪಿತ್ತ, ಕಫಗಳಮಧ್ಯೆ ಎರಡರ ಲಕ್ಷಣವು ಕಂಡುಬರುವುದು ಮತ್ತು ಎರಡು ದೋಷಗಳು ಪ್ರಕುಪಿತಗಳಾಗಲು ಕಾರಣಗಳೂ ಇರುವುದು ಈ ರೀತಿಯಾಗಿ ಉತ್ಪನ್ನವಾದ ಅರ್ಶೋರೋಗವನ್ನು ದ್ವಂದ್ವದೋಷಜನ್ಯ ಅರ್ಶೋರೋಗವೆಂದು ತಿಳಿಯಬೇಕು.

**ಸರ್ವೋಹೇತುಸ್ತ್ರಿದೋಷಾಣಾಂಸಹಜೈರ್ಲಕ್ಷಣಂಸಮಂ || ೯ ||**

ವಾತ, ಪಿತ್ತ, ಶ್ಲೇಷ್ಮ ಇವುಗಳ ಪ್ರಕೋಪದಿಂದ ಪ್ರತ್ಯೇಕವಾಗಿ ಹುಟ್ಟತಕ್ಕ ಅರ್ಶೋರೋಗಕ್ಕೆ ಹೇಳಿರುವ ಪ್ರತ್ಯೇಕ ಕಾರಣಗಳು ಒಂದೇಕಡೆಯಲ್ಲಿ ಸೇರಿ ರೋಗವನ್ನು ಹುಟ್ಟಿಸಿರುವುದು ಕಂಡುಬಂದರೆ ಅದನ್ನು ತ್ರಿದೋಷಜನ್ಯವಾದ ಅರ್ಶೋರೋಗವೆಂದು ತಿಳಿಯಬೇಕು. ತ್ರಿದೋಷಜನ್ಯ ಅರ್ಶಸ್ಸಿನ ಸ್ವರೂಪವೇನೆಂದರೆ– ಆರುವಿಧವಾದ ಅರ್ಶೋರೋಗಗಳನಡುವೆ ಕೊನೆಯದಾದ ಸಹಜಾರ್ಶಸ್ಸಿನಲಕ್ಷಣಗಳೇ ಇದಕ್ಕೂ ಇರುತ್ತವೆ. ಸಹಜಾರ್ಶಸ್ಸಿನ ಲಕ್ಷಣಗಳನ್ನು . ಮಾಧವನಿದಾನಕಾರರು ಹೇಳಲಿಲ್ಲ

ತಿಳುವಳಿಕೆಗಾಗಿ ಸುಶ್ರುತದಲ್ಲಿ ಹೇಳಿರುವುದನ್ನೇ ಇಲ್ಲಿ ಹೇಳುತ್ತೇನೆ. “ **ದುರ್ದರ್ಶನಾನಿ ಪರುಷಾರುಣಪಾಂಡೂನಿ ದಾರುಣಾಂತರ್ಮುಖಾನಿ ತೈರುಪದ್ರುತಃಕೃಶೋಽಲ್ಪಭುಕ್ ಶಿರಾಸಂತತಗಾತ್ರೋಽಲ್ಪಪ್ರಜಃ ಕ್ಷೀಣರೇತಾಃಕ್ಷಾಮಸ್ವರಃ ಕ್ರೋಧನೋಽಲ್ಪಾಗ್ನಿ ಘ್ರಾಣಶಿರೋಕ್ಷಿಶ್ರವಣ ರೋಗವಾನ್ ಸತತಮಂತ್ರಕೂಜನಾಟೋಪಹೃದಯೋಪಲೇಪಾರೋಚಕಪ್ರಭೃತಿಭಿಃಪೀಡ್ಯತೇ** ” ಅಂದರೆ ಸಹಜಾರ್ಶಸ್ಸು ನೋಡುವುದಕ್ಕಾಗದಷ್ಟು ಭಯಂಕರಗಳಾಗಿರುತ್ತವೆ, ಮೊಳಕೆ ಕಠಿಣವಾಗಿ ಕೆಂಪಗೆ ಅಥವಾ ಬೆಳ್ಳಗೆ ಚೂಪಾದ ಒಳಮುಖವಾದ ಮೊನೆಯುಳ್ಳವುಗಳಾಗಿರುತ್ತವೆ, ಈ ವ್ಯಾಧಿಯಿಂದ ಪೀಡಿತನಾದವನು ಕೃಶನಾಗಿ ಯಾವಾಗಲೂ ಒಣಗಿಕೊಂಡುಹೋಗಿ ಸ್ವಲ್ಪವೇ ಭೋಜನಮಾಡುತ್ತ ಮೈತುಂಬ ನರಗಳು ಕಾಣುತ್ತಲಿರುವ ಆಕಾರವುಳ್ಳವನಾಗಿರುತ್ತಾನೆ. ಈ ರೋಗಿಗೆ ಪ್ರಜಾವೃದ್ಧಿ ಹೆಚ್ಚಿಗೆ ಇರುವುದಿಲ್ಲ, ಶುಕ್ರಧಾತು ಯಾವಾಗ್ಯೂ ಕ್ಷೀಣವಾಗಿಯೇ ಇರುತ್ತದೆ, ಕಂಠಧ್ವನಿಯು ಸಹ ಯಾವಾಗಲೂ ಕುಗ್ಗಿಹೋಗಿಯೇ ಇರುತ್ತದೆ, ಮುಂಗೋಪ ಬಹಳಜಾಸ್ತಿ, ಜಠರಾಗ್ನಿಶಕ್ತಿ ಬಹಳಸ್ವಲ್ಪ, ಇವನಿಗೆ ಮೂಗಿಗೆಸಂಬಂಧಿಸಿದ ರೋಗಗಳು, ಕಣ್ಣಿಗೆಸಂಬಂಧಿಸಿದ ರೋಗಗಳು, ಕಿವಿಗೆ ಸಂಬಂಧಪಟ್ಟ ರೋಗಗಳು, ಈ ರೋಗಗಳಿದ್ದೇ ಇರುವದಲ್ಲದೇ ಹೊಟ್ಟೆಯಲ್ಲಿ ಶಬ್ದವಾಗುವುದು, ಹೊಟ್ಟೆಯುಬ್ಬರ, ಹೊಟ್ಟೆಭಾರ, ಅರುಚಿ ಮಾದಲಾದ ರೋಗಗಳು ಸಹ ಅನುವರ್ತಿಸಿಕೊಂಡಿದ್ದೇ ಇರುತ್ತವೆ. ಈ ರೀತಿಯಾದ ಸಹಜಾರ್ಶಸ್ಸಿನ ಲಕ್ಷಣಗಳೇ ತ್ರಿದೋಷಜನ್ಯವಾದ ಅರ್ಶಸ್ಸಿಗೂ ಇರುತ್ತದೆ.

**ಗುದಾಂಕುರಾಬಹ್ವನಿಲಾಶ್ಶುಷ್ಕಾಶ್ಚಿಮಿಚಿಮಾನ್ವಿತಾಃ ||**
**ಮ್ಲಾನಾಶ್ಶ್ಯಾವಾರುಣಾಸ್ತಬ್ಧಾವಿಶದಾಃಪರುಷಾಃಖರಾಃ || ೧೦ ||**
**ಮಿಥೋವಿಸದೃಶಾವಕ್ರಾಸ್ತೀಕ್ಷ್ಣಾವಿಸ್ಫುಟಿತಾನನಾಃ ||**
**ಬಿಂಬೀಖರ್ಜೂರಕರ್ಕಂಧೂಕಾರ್ಪಾಸೀಫಲಸನ್ನಿಭಾಃ || ೧೧ ||**
**ಕೇಚಿತ್ಕದಂಬಪುಷ್ಪಾಭಾಃಕೇಚಿತ್ಸಿದ್ಧಾರ್ಥಕೋಪಮಾಃ ||**
**ಶಿರಃಪಾರ್ಶ್ವಾಂಸಕಟ್ಯೂರುವಂಕ್ಷಣಾದ್ಯಧಿಕವ್ಯಥಾಃ || ೧೨ ||**
**ಕ್ಷವಥೂದ್ಗಾರವಿಷ್ಟಂಭಹೃದ್ಗ್ರಹಾರೋಚಕಪ್ರದಾಃ ||**
**ಕಾಸಶ್ವಾಸಾಗ್ನಿವೈಷಮ್ಯಕರ್ಣನಾದಭ್ರಮಾವಹಾಃ || ೧೩ ||**
**ತೈರಾರ್ತೋಗ್ರಥಿತಂಸ್ತೋಕಂಸಶಬ್ದಂಸಪ್ರವಾಹಿಕಂ ||**
**ರುಕ್ಫೇನಪಿಚ್ಛಾನುಗತಂವಿಬದ್ಧಮುಪವೇಶ್ಯತೇ || ೧೪ ||**
**ಕೃಷ್ಣತ್ವಙ್ನಖವಿಣ್ಮೂತ್ರನೇತ್ರವಕ್ತ್ರಶ್ಚಜಾಯತೇ ||**
**ಗುಲ್ಮಪ್ಲೀಹೋದರಾಷ್ಠೀಲಾಸಂಭವಸ್ತತಏವಚ || ೧೫ ||**

ವಾತಪ್ರಕೋಪಜನ್ಯವಾದ ಅರ್ಶಸ್ಸಿನ ಲಕ್ಷಣಗಳು- ಗುದದ್ವಾರದಲ್ಲಿರುವ ಮಾಂಸಾಂಕುರಗಳು ಯಾವವಿಧವಾದ ಸ್ರಾವವು ಇಲ್ಲದೆ ಇರುತ್ತವೆ. ಚಿಮ.ಚಿಮ ಅಂದರೆ ಒಂದುವಿಧವಾದ ವೇದನೆಯಿಂದ ಕೂಡಿರುತ್ತವೆ, ಅಂಕುರಗಳು ಅಷ್ಟು ದೊಡ್ಡದಾಗಿರದೆ ಬಾಡಿದಹಾಗೆ ಕಾಣುತ್ತಿರುತ್ತವೆ, ಅವುಗಳ ಬಣ್ಣ ಧೂಮ್ರ ವರ್ಣವಾಗಿಯೂ, ಕೆಲವು ಸಂದರ್ಭಗಳಲ್ಲಿ ಕೆಂಪಾಗಿಯೂ ಇರುತ್ತವೆ. ಮೊಳಕೆಗಳು ಒಂದೇಕಡೆ ಕೂಡಿರದೆ

ವಿಶದವಾಗಿ ಅಂದರೆ ದೂರದೂರವಾಗಿ, ದೃಢವಾಗಿ, ಚೂಪಾಗಿ ಕಠಿನವಾಗಿರುತ್ತವೆ. ಈ ಮೊಳಕೆಗಳು ಒಂದರಂತೊಂದು ಇರುವುದಿಲ್ಲ. ಸೊಟ್ಟಸೊಟ್ಟನಾಗಿರುತ್ತವೆ. ಇವುಗಳವೊನೆ ಒಡೆದುಹೋಗಿರುತ್ತದೆ. ಕಲವು ತೊಂಡೆಯಹಣ್ಣಿನಂತೆ ಉದ್ದವಾಗಿ ದಪ್ಪವಾಗಿಯೂ, ಮತ್ತೆಕೆಲವು ಖರ್ಜೂರದಹಣ್ಣಿನಹಾಗೆಯೂ, ಇನ್ನೂ ಕೆಲವು ಹತ್ತಿಯಕಾಯಿಯಹಾಗೆಯೂ ಇರುತ್ತವೆ. ಮತ್ತೆಕೆಲವು ಕದಂಬಪುಷ್ಪದಹಾಗೆ ಅನೇಕ ಮೊನೆಗಳುಳ್ಳವುಗಳಾಗಿಯೂ, ಕೆಲವು ಕಜ್ಜಿಯಬೊಕ್ಕೆಗಳಷ್ಟು ಸೂಕ್ಷ್ಮವಾಗಿಯೂ ಇರುತ್ತವೆ. ರೋಗಿಯಾದವನಿಗೆ ತಲೆ, ಪಾರ್ಶ್ವಗಳು, ಭುಜ, ಸೊಂಟ, ತೊಡೆ, ಗೆಜ್ಜೆಗಳು ಈ ಪ್ರದೇಶಗಳಲ್ಲೆಲ್ಲಾ ಬಹಳವಾಗಿ ವ್ಯಥೆ, ನೋವು ಇರುತ್ತದೆ. ಶೀನು, ತೇಗು, ಮಲಬಂಧ, ಮಲಬಂಧದಿಂದ ಹೊಟ್ಟೆ ಹಿಡಿದಿರುವುದು, ಅರುಚಿ, ಕೆಮ್ಮು, ಉಬ್ಬಸ, ಜಠರಾಗ್ನಿ ವಿಷಮವಾಗಿರುವುದು, ಕಿವಿಯಲ್ಲಿ ಯಾವಾಗಲೂ ಒಂದುಬಗೆಯ ಸದ್ದಾಗುತ್ತಿರುವುದು, ಬುದ್ಧಿಭ್ರಮವೂ ಆಗುತ್ತದು ಇವುಗಳೆಲ್ಲಾ ಇರುತ್ತವೆ. ಈ ರೋಗಪೀಡಿತನಾದವನಿಗೆ ಗಂಟುಗಂಟಾಗಿ, ಕೊಂಚವಾಗಿ ಶಬ್ದಯುಕ್ತವಾಗಿ, ಪ್ರವಾಹರೂಪವಾಗಿ, ವೇದನೆಯನ್ನುಂಟುಮಾಡುತ್ತ, ನೊರೆಯಿಂದಕೂಡಿಯೂ, ಜಿಗಟಾಗಿಯೂ, ತಡದುತಡದು ಮಲವಿಸರ್ಜನೆಯಾಗುತ್ತಿರುತ್ತದೆ. ರೋಗಿಯ ಶರೀರ, ಉಗುರುಗಳು, ಮಲಮೂತ್ರಗಳು, ಕಣ್ಣು, ಮುಖ ಇವು ಕ್ರಮೇಣ ಕಪ್ಪಾಗುತ್ತವೆ. ಈ ವಾತಪ್ರಕೋಪಜನ್ಯವಾದ ಅರ್ಶೋರೋಗದಿಂದ ಕ್ರಮವಾಗಿ ವಾತಗುಲ್ಮ, ಪ್ಲೀಹಾಭಿವೃದ್ಧಿ, ಉದರ, ಅಷ್ಠೀಲಾ (ಇದೊಂದು ವಾತಜನ್ಯಗ್ರಂಥಿ) ಈರೋಗಗಳೆಲ್ಲಾ ಹುಟ್ಟುತ್ತವೆ.

ಪಿತ್ತೋತ್ತರಾನೀಲಮುಖಾರಕ್ತಪೀತಾಸಿತಪ್ರಭಾಃ ||
ತನ್ವಸ್ರಸ್ರಾವಿಣೋವಿಸ್ರಾಸ್ತನವೋಮೃದವಶ್ಲಥಾಃ || ೧೬ ||
ಶುಕಜಿಹ್ವಾಯಕೃತ್ಖಂಡಜಲೌಕೋವಕ್ತ್ರಸನ್ನಿಭಾಃ ||
ದಾಹಪಾಕಜ್ವರಸ್ವೇದತೃಣ್ಮೂರ್ಛಾರುಚಿಮೋಹದಾಃ || ೧೭ ||
ಸೋಷ್ಮಾಣೋದ್ರವನೀಲೋಷ್ಣಪೀತರಕ್ತಾಮವರ್ಚಸಃ ||
ಯವಮಧ್ಯಾಹರಿತ್ಪೀತಹಾರಿದ್ರತ್ವಙ್ನಖಾದಯಃ || ೧೮ ||

ಪಿತ್ತಪ್ರಧಾನವಾದ ಅರ್ಶೋರೋಗದಲ್ಲಿ ಮೊಳಕೆಗಳು ಕಪ್ಪಾದ ಮುಖವುಳ್ಳವುಗಳಾಗಿ ಕೆಂಪು, ಹಳದಿ, ಕಪ್ಪು ಇಂತಹ ಬಣ್ಣ ಉಳ್ಳವುಗಳಾಗಿರುತ್ತವೆ. ಸೂಕ್ಷ್ಮವಾಗಿ, ಆಮಗಂಧಯುಕ್ತವಾಗಿ ರಕ್ತವನ್ನು ಸ್ರವಿಸುತ್ತಿರುತ್ತವೆ. ಈ ಮೊಳಕೆಗಳು ಸಣ್ಣನಾಗಿ, ಮೃದುವಾಗಿ ಲಂಬಮಾನವಾಗಿ ಅಂದರೆ ಇಳಿಬಿದ್ದಿರುತ್ತವೆ ಗಿಣಿಯ ಮೂಗಿನಂತೆಯೂ, ಮಾಂಸಖಂಡದಂತೆಯೂ, ಜಿಗಳೆಯ ಮುಖದಂತೆಯೂ ಇರುತ್ತವೆ. ಈ ಮೊಳಕೆಗಳಿಂದ ಆಗತಕ್ಕ ಉಪದ್ರವಗಳೇನಂದರೆ– ಗುದದಲ್ಲಿ ಉರಿ, ಗುದಪಾಕ, ಜ್ವರ, ಬೆವರು, ಬಾಯಾರಿಕೆ, ಮೂರ್ಛೆ, ಅರುಚಿ, ಅಜ್ಞಾನ ಇವುಗಳನ್ನುಂಟುಮಾಡುತ್ತವೆ. ಮಲಪ್ರವೃತ್ತಿಯಾಗುವಾಗ್ಗೆ ಬಿಸಿಯಾಗಿಯೂ, ದ್ರವರೂಪವಾಗಿಯೂ, ಕಪ್ಪಗೂ, ಹಳದಿ ಮತ್ತು ಕೆಂಪುಬಣ್ಣದಿಂದ ಕೂಡಿಯೂ ಮಲವು ಹೊರಡುತ್ತಿರುತ್ತದೆ. ಮೊಳಕೆಯ ಆಕಾರವು ಗೋಧಿಯ ಕಾಳಿನಹಾಗೆ ಮಧ್ಯೆ ದಪ್ಪವಾಗಿ ತುದಿಯಲ್ಲಿ ಸಣ್ಣನಾಗಿರುತ್ತದೆ. ರೋಗಿಯ ಮೈಯ್ಯಿ ಮತ್ತು ಉಗುರುಗಳು ಹಳದಿಬಣ್ಣವಾಗಿರುತ್ತವೆ.

**ಶ್ಲೇಷ್ಮೋಲ್ಬಣಾ ಮಹಾಮೂಲಾ ಘನಾ ಮಂದರುಜಸ್ಸಿತಾಃ ||**
**ಉತ್ಸನ್ನೋಪಚಿತಸ್ನಿಗ್ಧಸ್ತಬ್ಧವೃತ್ತಗುರುಸ್ಥಿರಾಃ || ೧೯ ||**
**ಪಿಚ್ಛಿಲಾಸ್ತಿಮಿತಾಶ್ಲಕ್ಷ್ಣಾಃ ಕಂಡ್ವಾಢ್ಯಾಸ್ಪರ್ಶನಪ್ರಿಯಾಃ ||**
**ಕರೀರಪನಸಾಸ್ಥ್ಯಾಭಾಸ್ತಥಾಗೋಸ್ತನಸನ್ನಿಭಾಃ || ೨೦ ||**
**ವಂಕ್ಷಣಾನಾಹಿನಃಪಾಯುಬಸ್ತಿನಾಭಿವಿಕರ್ಷಿಣಃ ||**
**ಸಶ್ವಾಸಕಾಸಹೃಲ್ಲಾಸಪ್ರಸೇಕಾರುಚಿಪೀನಸಾಃ || ೨೧ ||**
**ಮೇಹಕೃಚ್ಛ್ರಶಿರೋಜಾಡ್ಯಶಿಶಿರಜ್ವರಕಾರಿಣಃ ||**
**ಕ್ಲೈಬ್ಯಾಗ್ನಿಮಾರ್ದವಚ್ಛರ್ದಿರಾಮಪ್ರಾಯವಿಕಾರದಾಃ || ೨೨ ||**
**ವಸಾಭಸಕಫಪ್ರಾಜ್ಯಪುರೀಷಾಸ್ಸಪ್ರವಾಹಿಕಾಃ ||**
**ನಸ್ರವಂತಿ ನಭಿದ್ಯಂತೇ ಪಾಂಡುಸ್ನಿಗ್ಧತ್ವಗಾದಯಃ || ೨೩ ||**

ಕಫಪ್ರಧಾನವಾದ ಮೂಲವ್ಯಾಧಿಯಲ್ಲಿ ಮೊಳಕೆಗಳು ಘನವಾಗಿ ಚೆನ್ನಾಗಿ ಬೇರು ಬಿಟ್ಟಿರುತ್ತವೆ, ಉಳಿದೆರಡು ವಿಧವಾದ ಅರ್ಶಸ್ಸುಗಳಿಗಿಂತ ನೋವು ಕಡಮೆ, ಮೊಳಕೆಗಳು ಉದ್ದವಾಗಿಯೂ, ದಪ್ಪವಾಗಿಯೂ, ಜಿಡ್ಡುಳ್ಳವುಗಳಾಗಿಯೂ, ಸೆಟೆಗೆ, ದುಂಡಗೂ, ಗುದದ್ವಾರದಲ್ಲಿ ಯಾವುದೋ ದಪ್ಪವಾದ ಪದಾರ್ಥ ಸೇರಿಕೊಂಡಿರುವಂತೆ ಮನಸ್ಸಿಗೆ ತೋರುತ್ತಲೂ, ಸ್ಥಿರವಾಗಿಯೂ ಇರುತ್ತವೆ. ಮೊಳಕೆಗಳು ಜಿಗಟಾದ ದ್ರವದಿಂದ ಕೂಡಿ ನಿಶ್ಚಲವಾಗಿ ನುಣುಪಾಗಿರುತ್ತವೆ. ಗುದದ್ವಾರದಲ್ಲಿ ಕಡಿತವಿರುತ್ತದೆ. ಗುದದ್ವಾರವನ್ನು ಆಗಾಗ್ಗೆ ಮುಟ್ಟಿನೋಡಿಕೊಳ್ಳುವಂತಾಗುತ್ತಿರುತ್ತದೆ. ಮೊಳಕೆ ಆಕಾರ ಬಿದರುಮೊಳಕೆಗಳ ಹಾಗೂ, ಹಲಸಿನಹಣ್ಣಿನೊಳಗಿನ ಬೀಜಗಳ ಹಾಗೂ, ಗೋವಿನ ಸ್ತನಗಳ ಹಾಗೂ ಆಕಾರವುಳ್ಳವುಗಳಾಗಿರುತ್ತವೆ. ಗೆಜ್ಜೆಕಟ್ಟಿನಲ್ಲಿ ಉಬ್ಬರಿಸುವ ಹಾಗೂ, ಗುದದ್ವಾರ, ಮೂತ್ರಾಶಯ, ನಾಭಿ ಇವುಗಳಲ್ಲಿ ಸೆಳೆತ ಉಂಟಾಗುತ್ತಿರುವ ಹಾಗೂ ರೋಗಿಗೆ ತೋರುತ್ತಿರುತ್ತವೆ. ಉಬ್ಬಸ, ಕೆಮ್ಮು, ಬಾಯುನೀರುಬರುತ್ತಿರುವುದು, ಗುದದ್ವಾರಕ್ಕೆ ತಣ್ಣೀರನ್ನು ಹಾಕಿಕೊಳ್ಳಲು ಅಪೇಕ್ಷೆಯಾಗುತ್ತಿರುವುದು, ಅರುಚಿ, ನೆಗಡಿ ಇರುವುದು, ಮೂತ್ರವು ಅತಿಯಾಗುವುದು, ಮೂತ್ರಹೊರಡುವುದು ಕಷ್ಟವಾಗುವುದು, ತಲೆಭಾರ, ಶೀತಜ್ವರ ಇವುಗಳುಂಟಾಗುವುದು, ರೋಗಿಗೆ ಕ್ಲೀಬತ್ವ ಅಂದರೆ ಪುಂಸ್ತ್ವಕಡಮೆಯಾಗುವುದು, ಅಗ್ನಿಮಾಂದ್ಯ ಉಂಟಾಗುವುದು, ವಮನ, ಆಮದೋಷದಿಂದ ಉಂಟಾಗತಕ್ಕ ವಿಕಾರಗಳೆಲ್ಲಾ ಹುಟ್ಟುವುದು, ಕೊಬ್ಬಿನಹಾಗಿರುವ ಕಫಪ್ರಚುರವಾದ ಪ್ರವಾಹಸದೃಶವಾದ ಮಲಪ್ರವೃತ್ತಿ ಇರುವುದು, ರಕ್ತಸ್ರಾವವಿರುವುದಿಲ್ಲ, ಮಲಬಂಧಾದಿಗಳಿದ್ದರೂ ಗುದದ್ವಾರಕ್ಕೆ ಮೊಳಕೆಗಳಿಂದ ಹಿಂಸೆಯೇನೂ ಇರುವುದಿಲ್ಲ, ಶರೀರವು ಬೆಳ್ಳಗಾಗುವುದು, ಮೈಮೇಲೆ ಜಿಡ್ಡು ಇರುವುದು ಈ ಲಕ್ಷಣಗಳಿರುತ್ತವೆ.

**ಸರ್ವೈಸ್ಸರ್ವಾತ್ಮಕಾನ್ಯಾಹುರ್ಲಕ್ಷಣೈಸ್ಸಹಜಾನಿಚ ||**

ಹಿಂದೆ ಹೇಳಿರುವ ವಾತ, ಪಿತ್ತ, ಶ್ಲೇಷ್ಮ ಇವುಗಳ ಪ್ರಕೋಪದಿಂದ ಪ್ರತ್ಯೇಕ ಪ್ರತ್ಯೇಕವಾಗಿ ಹುಟ್ಟುವ ಮೂರುವಿಧವಾದ ಅರ್ಶಸ್ಸಿನ ಲಕ್ಷಣಗಳೆಲ್ಲಾ ಏಕತ್ರ ಸೇರಿ ಕಂಡುಬಂದರೆ ಅದು ತ್ರಿದೋಷಸನ್ನಿಪಾತಜನ್ಯವಾದ ಅರ್ಶಸ್ಸೆಂದು ತಿಳಿಯಬೇಕು.

**ರಕ್ತೋಲ್ಬಣಾಗುದೇಕೀಲಾಃಪಿತ್ತಾಕೃತಿಸಮನ್ವಿತಾಃ || ೨೪ ||**

**ವಟಪ್ರರೋಹಸದೃಶಾಗುಂಜಾವಿದ್ರುಮಸನ್ನಿಭಾಃ ||**
**ತೇತ್ವರ್ಥಂದುಷ್ಟಮುಷ್ಣಂಚಗಾಢವಿಟ್ಕಪ್ರಪೀಡಿತಾಃ || ೨೫ ||**
**ಸ್ರವಂತಿಸಹಸಾರಕ್ತಂತಸ್ಯಚಾತಿಪ್ರವೃತ್ತಿತಃ ||**
**ಭೇಕಾಭಃಪೀಡ್ಯತೇದುಃಖೈಃಶೋಣಿತಕ್ಷಯಸಂಭವೈಃ ||೨೬||**
**ಹೀನವರ್ಣಬಲೋತ್ಸಾಹೋಹತೌಜಾಃಕಲುಷೇಂದ್ರಿಯಃ ||**
**ವಿಟ್ ಶ್ಯಾವಂಕಠಿನಂರೂಕ್ಷಮಧೋವಾಯುರ್ನವರ್ತತೇ || ೨೭ ||**
**ತನುಚಾರುಣವರ್ಣಂಚಫೇನಿಲಂಚಾಸೃಗರ್ಶಸಾಂ ||**

ರಕ್ತಪ್ರಕೋಪಜನ್ಯವಾದ ಗುದಕೀಲಗಳು (ಮೊಳಕೆಗಳು) ಪಿತ್ತಪ್ರಧಾನವಾದ ಅರ್ಶಸ್ಸಿನ ಕೀಲಗಳಂತೆಯೇ ಇರುತ್ತವೆ. ಅವುಗಳ ಆಕಾರ ಆಲದಮರದಲ್ಲಿರುವ ಕೊನೆಯತುದಿಯ ಮೊಳಕೆಗಳಂತಿರುತ್ತದೆ. ಗುಲಗಂಜಿ, ಹವಳ ಇವುಗಳ ಬಣ್ಣದಂತೆ ಅದರ ಬಣ್ಣವೂ ಇರುತ್ತದೆ. ರೋಗಿಗೆ ಮಲಬಂಧವಿರುತ್ತದೆ. ಮಲಪ್ರವೃತ್ತಿಯಾಗುವಾಗ್ಗೆ ದೋಷಯುಕ್ತವಾಗಿ ಬಿಸಿಯಾಗಿರುವ ರಕ್ತವು ಮಲದಜೊತೆಯಲ್ಲಿ ಹೊರಡುತ್ತದೆ. ಈ ರಕ್ತಸ್ರಾವವು ಅತಿಯಾಗಿ ಬಿಟ್ಟಮೇಲೆ ರೋಗಿಯು ಸಂಕಟದಿಂದ ಕಪ್ಪೆಯ ಹಾಗೆ ಬಿಳೀಬಣ್ಣಕ್ಕೆತಿರುಗಿ ಕೃಶನಾಗುತ್ತ ಬರುತ್ತಾನೆ, ಶರೀರದವರ್ಣಕುಂದುತ್ತದೆ, ಶಕ್ತಿ, ಮನಸ್ಸಿನ ಉತ್ಸಾಹ, ಓಜೋಧಾತು ಇವುಗಳೆಲ್ಲಾ ಕ್ಷಯಿಸಿಹೋಗುತ್ತವೆ. ಇಂದ್ರಿಯಗಳಪಟುತ್ವವು ಬಹಳ ಕಡಮೆಯಾಗುತ್ತದೆ. ಮಲದ ಬಣ್ಣವು ಧೂಮ್ರವರ್ಣವಾಗಿ ಕಠಿನವಾಗಿರುತ್ತದೆ. ಅಪಾನವಾಯು ಹೊರಡುವುದಿಲ್ಲ. ಸ್ರವಿಸತಕ್ಕ ರಕ್ತವು ನೀರಾಗಿ ಕೆಂಪುಬಣ್ಣವಾಗಿ ನೊರೆಯಿಂದ ಕೂಡಿರುತ್ತದೆ. ಇದಕ್ಕೇನೇ ರಕ್ತಮೂಲವೆಂಬದಾಗಿಯೂ ಹೆಸರಿದೆ.

**ಕಟ್ಯೂರುಗುದಶೂಲಂಚದೌರ್ಬಲ್ಯಂಯದಿಚಾಧಿಕಂ || ೨೮ ||**
**ತತ್ರಾನುಬಂಧೋವಾತಸ್ಯಹೇತುರ್ಯದಿಚರೂಕ್ಷಣಂ ||**

ಈ ರಕ್ತಾರ್ಶಸ್ಸಿನಲ್ಲಿಯೂ ವಾತಾದಿದೋಷಗಳ ಸಂಬಂಧವಿರುವ ಕ್ರಮವನ್ನು ಹೇಳುತ್ತಾನೆ. ತೊಡೆ, ಸೊಂಟ, ಗುದ ಇವುಗಳಲ್ಲಿ ಶೂಲೆ, ನಿಶ್ಶಕ್ತಿ ಇವುಗಳು ಹೆಚ್ಚಾಗಿದ್ದಲ್ಲಿ ಮತ್ತು ರೂಕ್ಷಗಳಾದ ಆಹಾರವಿಹಾರಗಳು ಕಾರಣವಾಗಿದ್ದು ಶರೀರವೂ ರೂಕ್ಷಸ್ವಭಾವವುಳ್ಳದ್ದೇ ಆಗಿದ್ದಲ್ಲಿ ವಾತವು ಅನುಬಂಧವಾಗಿದೆ ಎಂದು ತಿಳಿಯಬೇಕು.

**ಶಿಥಿಲಂಶ್ವೇತಪೀತಂಚವಿಟ್ ಸ್ನಿಗ್ಧಂಗುರುಶೀತಲಂ || ೨೯ ||**
**ಯದ್ಯರ್ಶಸಾಂಘನಂಚಾಸೃಕ್ತಂತುಮತ್ಪಾಂಡುಪಿಚ್ಛಿಲಂ ||**
**ಗುದಂಸಪಿಚ್ಛಂಸ್ತಿಮಿತಂಗುರುಸ್ನಿಗ್ಧಂಚಕಾರಣಂ || ೩೦ ||**
**ಶ್ಲೇಷ್ಮಾನುಬಂಧೋವಿಜ್ಞೇಯಸ್ತತ್ರರಕ್ತಾರ್ಶಸಾಂಬುಧೈಃ ||**

ಮಲವು ಗಟ್ಟಿಯಾಗಿಲ್ಲದೆ ಕೊಂಚದ್ರವವಾಗಿಯೇ ಇರುವುದು, ಮಲದಬಣ್ಣ ಬಿಳುಪು, ಹಳದಿಬಣ್ಣವೂ ಉಂಟು, ಮಲದಲ್ಲಿ ಜಿಡ್ಡಿರುವುದು, ಗುರುಗುಣವಿರುವುದು, ಅಂದರೆ ಮಲವು ನೀರಿನಲ್ಲಿ ಮುಳುಗುವುದು, ತಣ್ಣಗಿರುವುದು, ಸ್ರವಿಸತಕ್ಕರಕ್ತವು ಗಟ್ಟಿಯಾಗಿ ತಂತುಯುಕ್ತವಾಗಿ ಸ್ವಲ್ಪ ಬಿಳೀಛಾಯೆಯಿಂದಕೂಡಿ ಜಿಗಟಾಗಿರುವುದು, ಗುದದ್ವಾರವು ಕೂಡ ಜಿಗಟಾಗಿ, ಸ್ತಿಮಿತವಾಗಿ, ಸ್ವಲ್ಪಭಾರವಾಗಿರುವುದು ಈ ರೀತಿಯಾಗಿ

ಪ್ಪಲ್ಲಿ ರಕ್ತಾರ್ಶಸ್ಸಿಗೆ ಶ್ಲೇಷ್ಮದ ಅನುಬಂಧವಿದೆ ಎಂದು ತಿಳಿದುಕೊಳ್ಳಬೇಕು.

ವಿಷ್ಟಂಭೋನ್ನಸ್ಯದೌರ್ಬಲ್ಯಂಕುಕ್ಷೇರಾಟೋಪಏವಚ ॥ ೩೦ ॥
ಕಾರ್ಶ್ಯಮುದ್ಗಾರಬಾಹುಲ್ಯಂಸಕ್ಥಿಸಾದೋಲ್ಪವಿಟ್ಕತಾ ॥
ಗ್ರಹಣೀದೋಷಪಾಂಡ್ವರ್ತೇರಾಶಂಕಾಚೋದರಸ್ಯಚ ॥ ೩೨ ॥
ಪೂರ್ವರೂಪಾಣಿನಿರ್ದಿಷ್ಟಾನ್ಯರ್ಶಸಾಮಭಿವೃದ್ಧಯೆ ॥

ಅನ್ನವು ಜೀರ್ಣವಾಗದೆ ಆಮಾಶಯದಲ್ಲಿಯೇ ನಿಲ್ಲುವುದು, ಕ್ರಮೇಣ ಶಕ್ತಿ ಕಡಮೆಯಾಗುತ್ತಬರುವುದು, ಆಗಾಗ್ಗೆ ಹೊಟ್ಟೆಉಬ್ಬರಿಸುವುದು, ಕೈಯ್ಯಿ ಮತ್ತು ಕಾಲು ಸಹ ಕೃಶವಾಗುವುದು, ತೇಗುಬರುತ್ತಿರುವುದು, ಜಂಘಾಬಲ ಕಡಮೆಯಾಗುತ್ತಿರುವುದು, ಕೊಂಚವಾಗಿ ಮಲಪ್ರವೃತ್ತಿಯಾಗುವುದು, ಗ್ರಹಣೀದೋಷ, ಪಾಂಡುರೋಗ ಮತ್ತು ಉದರಸಹ ಹುಟ್ಟೀತೆಂಬ ಅನುಮಾನತೋರುತ್ತಿರುವುದು. ಇವುಗಳು ಮೂಲವ್ಯಾಧಿ ರೋಗದ ಪೂರ್ವರೂಪಗಳು.

ಪಂಚಾತ್ಮಾಮಾರುತಃಪಿತ್ತಂಕಫೋಗುದವಳಿತ್ರಯಂ ॥ ೩೩ ॥
ಸರ್ವಏವಪ್ರಕುಪ್ಯಂತಿಗುದಜಾನಾಂಸಮುದ್ಭವೇ ॥
ತಸ್ಮಾದರ್ಶಾಂಸಿದುಃಖಾನಿಬಹುವ್ಯಾಧಿಕರಾಣಿಚ ॥ ೩೪ ॥
ಸರ್ವದೇಹೋಪತಾಪೀನಿಪ್ರಾಯಃಕೃಚ್ಛ್ರತಮಾನಿಚ ॥

ಈ ಅರ್ಶೋರೋಗವು ಮಾತ್ರ ಶರೀರದಲ್ಲಿ ಹುಟ್ಟಿತೆಂದರೆ ಶರೀರಗತವಾದ ಐದುವಿಧವಾದ ವಾಯು, ಪಿತ್ತಗಳು, ಶ್ಲೇಷ್ಮ, ಗುದದ್ವಾರದಲ್ಲಿರುವ ಪ್ರವಾಹಿಕಾ ಮೊದಲಾದ ಮೂರುವಳಿಗಳು ಇವುಗಳೆಲ್ಲವೂ ಪ್ರಕೋಪವನ್ನು ಹೊಂದುತ್ತವೆ. ಆದ್ದರಿಂದಲೇ ಈ ಅರ್ಶೋರೋಗವು ದುಃಖಜನಕ, ಬಹಳವಾಗಿ ವ್ಯಾಧಿಯನ್ನು ಹುಟ್ಟಿಸತಕ್ಕದ್ದು, ಶರೀರವೆಲ್ಲವನ್ನೂ ಸಂಕಟಪಡಿಸತಕ್ಕದ್ದು, ಚಿಕಿತ್ಸೆಗೂಕೂಡ ಬಹಳಕಷ್ಟವಾದದ್ದು ಎಂಬದಾಗಿ ತಿಳಿದುಕೊಳ್ಳಬಹುದು.

ಬಾಹ್ಯಾಯಾಂತುವಳೌಜಾತಾನ್ಯೇಕದೋಷೋಲ್ಬಣಾನಿಚ ॥೩೫॥
ಅರ್ಶಾಂಸಿಸುಖಸಾಧ್ಯಾನಿನಚಿರೋತ್ಪತಿತಾನಿಚ ॥
ದ್ವಂದ್ವಜಾನಿದ್ವಿತೀಯಾಯಾಂವಳೌಯಾನ್ಯಾಶ್ರಿತಾನಿಚ ॥೩೬॥
ಕೃಚ್ಛ್ರಸಾಧ್ಯಾನಿತಾನ್ಯಾಹುಃಪರಿಸಂವತ್ಸರಾಣಿಚ ॥
ಸಹಜಾನಿತ್ರಿದೋಷಾನಿಯಾನಿಚಾಭ್ಯಂತರಾಂವಳಿಂ ॥ ೩೭ ॥
ಜಾಯಂತೇಶಾಂಸಿಸಂಶ್ರಿತ್ಯತಾನ್ಯಸಾಧ್ಯಾನಿನಿರ್ದಿಶೇತ್ ॥

ಈ ಅರ್ಶೋರೋಗದ ಸ್ವಭಾವಾನುಗುಣವಾಗಿ ಸಾಧ್ಯಾಸಾಧ್ಯತ್ವವನ್ನು ನಿರೂಪಣಮಾಡುತ್ತಾನೆ. ಮೊಳಕೆಗಳು ಹೊರಸುತ್ತಿನಲ್ಲಿರುವುದು, ಯಾವದಾದರೂ ಒಂದೇ ದೋಷಪ್ರಕೋಪದಿಂದ ಉತ್ಪನ್ನವಾಗಿರುವುದು, ಕೊಂಚವೇದಿವಸ ಎಂದರೆ ನಾಲ್ಕಾರು ತಿಂಗಳುಗಳೊಳಗೇನೇ ಇರುವುದು. ಹೀಗಿದ್ದಲ್ಲಿ ಅರ್ಶೋರೋಗವು ಸುಖಸಾಧ್ಯವೆಂಬದಾಗಿಯೂ; ಮೊಳಕೆಗಳು ಮಧ್ಯದಸುತ್ತಿನಲ್ಲಿ ಸೇರಿಕೊಂಡಿರುವುದು, ವಾತ ಪಿತ್ತಗಳ ಮಧ್ಯೆ ಯಾವುದಾದರೂ ಎರಡುದೋಷಗಳಿಂದ ರೋಗವು ಹುಟ್ಟಿರುವುದು, ರೋಗವು ಹುಟ್ಟಿ ಆಗಲೇ ಒಂದುವರುಷ ಕಳೆದುಹೋಗಿರುವುದು ಈ ರೀತಿಯಲ್ಲಿದ್ದರೆ ಕಷ್ಟಸಾಧ್ಯ

ವೆಂಬದಾಗಿಯೂ; ಮೊಳಕೆಗಳು ವಂಶಪರಂಪರೆಯಿಂದ ಬಂದವುಗಳಾಗಿದ್ದು, ತ್ರಿದೋಷ ಪ್ರಕೋಪವೂ ಇದ್ದು, ಮೊಳಕೆಗಳು ಒಳಗಿನ ಸುತ್ತಿನಲ್ಲಿಯೂ ಇದ್ದುಬಿಟ್ಟರೆ ಅಸಾಧ್ಯ ವೆಂಬದಾಗಿ ತಿಳಿದು ಚಿಕಿತ್ಸಿಸದೇ ಬಿಡಬೇಕು.

**ಶೇಷತ್ವಾದಾಯುಷಸ್ತಾನಿಚತುಷ್ಪಾದಸಮನ್ವಿತೆ ॥ ೩೮ ॥**
**ಯಾಪ್ಯಂತೇದೀಪ್ತಕಾಯಾಗ್ನೇಃಪ್ರತ್ಯಾಖ್ಯೇಯಾನ್ಯತೋನ್ಯಥಾ ॥**

ಅಸಾಧ್ಯವಾದ ಅರ್ಶೋರೋಗವು ಯಾಪ್ಯ, ಪ್ರತ್ಯಾಖ್ಯೇಯ ಎಂಬದಾಗಿ ಎರಡುವಿಧ. ಕೇವಲ ಅಸಾಧ್ಯವಾದ ಅರ್ಶೋರೋಗವು ಕೂಡ ಆಯುಶ್ಶೇಷವಿದ್ದು, ವೈದ್ಯನೇಮೊದಲಾದ ಚಿಕಿತ್ಸೆಗೆ ಉಪಯುಕ್ತಗಳಾದ ಎಲ್ಲಾ ಅಂಗಗಳೂ ಸರಿಯಾಗಿದ್ದು, ಅಗ್ನಿಬಲವೂ ಸರಿಯಾಗಿದ್ದಲ್ಲಿ, ದೇಹಪಾತವಾಗುವವರಿವಿಗೂ ಸುಖವಾಗಿಯೇ ಕಾಲ ಯಾಪನೆ ಮಾಡಬಹುದು. ಮೇಲೆಹೇಳಿದ ಸಹಾಯಸಂಪತ್ತಿ ಇಲ್ಲದಿದ್ದರೆ ಔಷಧಪ್ರ ಯೋಗದಿಂದಲೂ ಸಾಧ್ಯವಾಗುವುದಿಲ್ಲವೆಂದು ತಿರಸ್ಕರಿಸಬೇಕು.

**ಹಸ್ತೇಪಾದೇಮುಖೇನಾಭ್ಯಾಂಗುದೇವೃಷಣಯೋಸ್ತಥಾ ॥೩೯॥**
**ಶೋಥೋಹೃತ್ಪಾರ್ಶ್ವಶೂಲಂಚಯಸ್ಯಾಸಾಧ್ಯೋರ್ಶಸೋಹಿಸಃ॥**

ಕೈಯ್ಯಿ, ಕಾಲು, ಮುಖ, ನಾಭಿ, ಗುದ, ವೃಷಣ ಇವುಗಳಲ್ಲಿ ಶೋಭೆಯಿದ್ದು ಎದೆನೋವು, ಪಕ್ಕಗಳಲ್ಲಿ ಶೂಲೆ ಇವುಗಳಿದ್ದಲ್ಲಿ ಅಂತಹ ಅರ್ಶೋರೋಗವು ಅಸಾಧ್ಯ ವೆಂದು ತಿಳಿಯಬೇಕು.

**ಹೃತ್ಪಾರ್ಶ್ವಶೂಲಂಸಂಮೋಹಶ್ಛರ್ದಿರಂಗಸ್ಯರುಗ್ಜ್ವರಃ ॥೪೦॥**
**ತೃಷ್ಣಾಗುದಸ್ಯಪಾಕಶ್ಚನಿಹನ್ಯುರ್ಗುದಜಾತುರಂ ॥**
**ತೃಷ್ಣಾರೋಚಕಶೂಲಾರ್ತಮತಿಪ್ರಸೃತಶೋಣಿತಂ ॥ ೪೧ ॥**
**ಶೋಥಾತಿಸಾರಸಂಯುಕ್ತಮರ್ಶಾಂಸಿಕ್ಷಪಯಂತಿಹಿ ॥**

ಎದೆ ಮತ್ತು ಪಾರ್ಶ್ವಗಳಲ್ಲಿ ಶೂಲೆ, ಮೂರ್ಛೆಬರುತ್ತಿರುವುದು, ವಾಂತಿಯಾ ಗುವುದು, ಅವಯವಗಳಲ್ಲಿ ಬಹಳವಾಗಿ ನೋವಿರುವುದು, ಜ್ವರ ಬರುತ್ತಿರುವುದು, ಬಾಯಾರಿಕೆ, ಗುದಪಾಕವೆಂದರೆ ಗುದದ್ವಾರದಲ್ಲಿ ವ್ರಣವಾದಂತೆ ನೋವು ಮತ್ತು ಸ್ವಾಧೀನತಪ್ಪುವಿಕೆ ಈ ಲಕ್ಷಣಗಳೆಲ್ಲಾ ಸೇರಿಇದ್ದಲ್ಲಿ ಗುದರೋಗಿಯನ್ನು ಕೊಲ್ಲುವವು ಎಂದು ತಾತ್ಪರ್ಯ. ಬಾಯಾರಿಕೆ, ಅರುಚಿ, ಶೂಲೆ, ಬಹಳವಾಗಿ ಗುದದ್ವಾರದಿಂದ ರಕ್ತಸ್ರಾವವಾಗುವುದು, ಶೋಭೆ, ಅತಿಸಾರ ಈ ರೋಗಗಳಿದ್ದಲ್ಲಿ ಅಂತವನು ಮೂಲವ್ಯಾ ಧಿಯಿಂದ ಮರಣಹೊಂದುತ್ತಾನೆಂದು ತಿಳಿಯಬಹುದು.

**ಮೇಢ್ರಾದಿಷ್ವಪಿವಕ್ಷ್ಯಂತೆಯಥಾಸ್ವಂನಾಭಿಜಾನಿಚ ॥ ೪೨ ॥**
**ಗಂಡೂಪದಾಸ್ಯರೂಪಾಣಿ ಪಿಚ್ಛಿಲಾನಿಮೃದೂನಿಚ ॥**
**ವ್ಯಾನೋಗೃಹೀತ್ವಾಶ್ಲೇಷ್ಮಾಣಂಕರೋತ್ಯರ್ಶಸ್ತ್ವಚೋಬಹಿಃ ॥೪೩॥**
**ಕೀಲೋಪಮಂಸ್ಥಿರಖರಂಚರ್ಮಕೀಲಂತುತದ್ವಿದುಃ ॥**
**ವಾತೇನತೋದಪಾರುಷ್ಯಂಪಿತ್ತಾದಸಿತವಕ್ತ್ರತಾ ॥ ೪೪ ॥**
**ಶ್ಲೇಷ್ಮಣಾಸ್ನಿಗ್ಧತಾತಸ್ಯಗ್ರಥಿತತ್ವಂಸವರ್ಣತಾ ॥**
**ಗುದದ್ವಾರದಲ್ಲಿ ಹುಟ್ಟುವಂತೆಯೇ ಮೊಳಕೆಗಳು ಶಿಶ್ನ, ಹೊಕ್ಕಳುಮೊದಲಾ**

ಇನ್ನೂಕೆಲವು ಪ್ರದೇಶಗಳಲ್ಲಿ ಸಹ ಹುಟ್ಟುತ್ತವೆ. ಸ್ಥಾನಾನುಗುಣವಾಗಿ ಈ ಮೊಳಕೆಗಳಿಗೆ ಮೇಢ್ರಾರ್ಶಸ್ಸು, ನಾಸಾರ್ಶಸ್ಸು, ನಾಭ್ಯರ್ಶಸ್ಸು ಎಂಬದಾಗಿ ವ್ಯವಹರಿಸುತ್ತಾರೆ. ಮೊಳಕೆಗಳ ಆಕಾರವು ಗಂಡೂಪದವೆಂಬ ಹೆಸರಿನ ಕ್ರಿಮಿಯ ಮುಖದಹಾಗಿರುತ್ತವೆ. ಅಂದರೆ ಎರೆಹುಳದ ಮುಖದಂತೆಯೇ ಇರುತ್ತವೆ ಮತ್ತು ಜಿಗಟಾಗಿಯೂ, ಮೃದುವಾಗಿಯೂ ಇರುತ್ತವೆ. ಸರ್ವಶರೀರವ್ಯಾಪಿಯಾದ ವ್ಯಾನವೆಂಬ ವಾಯುವು ಪ್ರಕುಪಿತವಾಗಿ ಶ್ಲೇಷ್ಮವನ್ನು ಪ್ರಕೋಪಪಡಿಸಿ ಚರ್ಮದ ಹೊರಭಾಗದಲ್ಲಿ ಗೂಟದಂತೆ ನಿಶ್ಚಲವಾಗಿಯೂ, ಕಠಿನವಾಗಿಯೂ ಇರುವ ಮೊಳಕೆಯನ್ನುಂಟುಮಾಡುತ್ತದೆ. ಇದಕ್ಕೆ ಚರ್ಮಕೀಲವೆಂಬ ಹೆಸರು. ಇದುಕೂಡ ಗುದದ್ವಾರದ ಮುಂಭಾಗದ ತುಟಿಯಲ್ಲಿಯೇ ಎಂಬದಾಗಿಯೂ ಕೆಲವರು ಅಭಿಪ್ರಾಯಪಡುತ್ತಾರೆ. ವಾತದಿಂದ ಹುಟ್ಟಿದ ಈ ಗುದಕೀಲದಲ್ಲಿ ವ್ಯಥೆಹೆಚ್ಚು ಮತ್ತು ಮೊಳಕೆ ಕಠಿನವಿರುತ್ತದೆ. ಪಿತ್ತಜನ್ಯವಾದ ಚರ್ಮಕೀಲದಲ್ಲಿ ಕೀಲದ ಮುಖವು ಕಪ್ಪಾಗಿರುತ್ತದೆ. ಶ್ಲೇಷ್ಮಪ್ರಕೋಪಜನಿತವಾದ ಗುದಕೀಲವು ಜಿಡ್ಡಾಗಿಯೂ, ದೇಹವು ಯಾವಬಣ್ಣವೋ ಅದೇ ಬಣ್ಣವುಳ್ಳದ್ದಾಗಿಯೂ, ಮಲಬಂಧದೊಡನೆ ಕೂಡಿಯೂ ಇರುವುದು; ಇವು ಗುದಕೀಲದ ಲಕ್ಷಣಗಳು.

† ಇಲ್ಲಿಗೆ ಅರ್ಶೋನಿದಾನ ಸಂಪೂರ್ಣ †

## ‡‡ ಅಗ್ನಿಮಾಂದ್ಯನಿದಾನ. ‡‡

**ಮಂದಸ್ತೀಕ್ಷ್ಣೋಥವಿಷಮಸ್ಸಮಶ್ಚೇತಿಚತುರ್ವಿಧಃ ||**
**ಕಫಪಿತ್ತಾನಿಲಾಧಿಕ್ಯಾತ್ತತ್ಸಾಮ್ಯಾಜ್ಜಾಠರೋನಲಃ || ೧ ||**

ಅಗ್ನಿಮಾಂದ್ಯನಿದಾನವನ್ನು ಹೇಳುತ್ತಾನೆ. ಪ್ರಥಮತಃ ಜಠರಾಗ್ನಿಯು ಕಫಪ್ರಕೋಪವಿದ್ದಲ್ಲಿ ಮಂದವಾಗಿಯೂ, ಪಿತ್ತಪ್ರಕೋಪವಿದ್ದಲ್ಲಿ ತೀಕ್ಷ್ಣವಾಗಿಯೂ, ವಾತಪ್ರಕೋಪವಿದ್ದಲ್ಲಿ ವಿಷಮವಾಗಿಯೂ, ವಾತ, ಪಿತ್ತ, ಕಫಗಳೆಂಬ ಮೂರು ಧಾತುಗಳೂ ಶರೀರದಲ್ಲಿ ಸಮವಾಗಿರುವ ಕಾಲದಲ್ಲಿ ಜಠರಾಗ್ನಿಯುಕೂಡ ಸಮವಾಗಿಯೂ ಇರುತ್ತದೆ.

**ವಿಷಮೋವಾತಜಾನ್ ರೋಗಾನ್ ತೀಕ್ಷ್ಣಃಪಿತ್ತನಿಮಿತ್ತಜಾನ್ ||**
**ಕರೋತ್ಯಗ್ನಿಸ್ತಥಾಮಂದೋವಿಕಾರಾನ್ ಕಫಸಂಭವಾನ್ ||೨||**
**ಸಮಾಸಮಾಗ್ನೇರಶಿತಾಮಾತ್ರಾಸಮ್ಯಗ್ವಿಪಚ್ಯತೇ ||**
**ಸ್ವಲ್ಪಾಪಿನ್ನೈವಮಂದಾಗ್ನೇರ್ವಿಷಮಾಗ್ನೇಸ್ತುದೇಹಿನಃ || ೩ ||**
**ಕದಾಚಿತ್ಪಚ್ಯತೇಸಮ್ಯಕ್ಕದಾಚಿಚ್ಚನಪಚ್ಯತೇ ||**
**ಮಾತ್ರಾತಿಮಾತ್ರಾಪ್ಯಶಿತಾಸುಖಂಯಸ್ಯವಿಪಚ್ಯತೇ ||**
**ತೀಕ್ಷ್ಣಾಗ್ನಿರಿತಿತಂವಿದ್ಯಾತ್ಸಮಾಗ್ನಿಶ್ರೇಷ್ಠಉಚ್ಯತೇ || ೪ ||**

ಹಿಂದೆಹೇಳಿದಂತೆ ವಿಷಮಾಗ್ನಿಯಾಗಿದ್ದಲ್ಲಿ ವಾತರೋಗಗಳನ್ನು ಹುಟ್ಟಿಸುತ್ತದೆ, ತೀಕ್ಷ್ಣಾಗ್ನಿಯು ಪಿತ್ತರೋಗಗಳನ್ನು ಹುಟ್ಟಿಸುತ್ತದೆ, ಜಠರಾಗ್ನಿಯು ಸಮವಾಗಿದ್ದಲ್ಲಿ ಭೋಜನಮಾಡಿದ ಆಹಾರವು ಚೆನ್ನಾಗಿ ಜೀರ್ಣವಾಗುತ್ತದೆ, ಮಂದಾಗ್ನಿಯಾಗಿದ್ದಲ್ಲಿ ಸ್ವಲ್ಪ ಭೋಜನಮಾಡಿದರೂ ಜೀರ್ಣವಾಗುವುದೇ ಇಲ್ಲ, ಜಠರಾಗ್ನಿಯು ವಿಷಮಾಗ್ನಿಯಾಗಿದ್ದಲ್ಲಿ ಭೋಜನಮಾಡಿದ ಆಹಾರವು ಒಂದುಸಾರಿ ಜೀರ್ಣವಾಗುತ್ತದೆ, ಮತ್ತೊಂ

ದುಸಾರಿ ಜೀರ್ಣಕ್ಕೆ ಬರುವುದೇ ಇಲ್ಲ, ಜಠರಾಗ್ನಿಯು ತೀಕ್ಷ್ಣವಾಗಿದ್ದಲ್ಲಿ ಭೋಜನ ಮಾಡಿದ್ದು ಕೊಂಚ ಹೆಚ್ಚಾದರೂ ಸಹ ಸುಖವಾಗಿ ಜೀರ್ಣವಾಗುತ್ತದೆ. ಮಂದಾಗ್ನಿ, ವಿಷಮಾಗ್ನಿ, ತೀಕ್ಷ್ಣಾಗ್ನಿ, ಸಮಾಗ್ನಿ ಎಂಬ ನಾಲ್ಕು ವಿಧವಾದ ಜಠರಾಗ್ನಿಯುಳ್ಳವರ ನಡುವೆ ಸಮಾಗ್ನಿಯಾದವನೇ ಶ್ರೇಷ್ಠನೆಂದು ಆಯುರ್ವೇದಜ್ಞರ ಅಭಿಪ್ರಾಯ.

ಆಮಂವಿದಗ್ಧಂವಿಷ್ಟಬ್ಧಂಕಫಪಿತ್ತಾನಿಲೈಸ್ತ್ರಿಭಿಃ ||
ಅಜೀರ್ಣಂಕೇಚಿದಿಚ್ಛಂತಿಚತುರ್ಥಂರಸಶೇಷತಃ || ೫ ||
ಅಜೀರ್ಣಂಪಂಚಮಂಕೇಚಿನ್ನಿರ್ದೋಷಂದಿನಪಾಕಿಚ ||
ವದಂತಿಷಷ್ಠಂಚಾಜೀರ್ಣಂಪ್ರಾಕೃತಂಪ್ರತಿವಾಸರಂ || ೬ ||

ದೇಹದಲ್ಲಿ ಕಫಪ್ರಕೋಪದಿಂದ ಹುಟ್ಟತಕ್ಕ ಅಜೀರ್ಣಕ್ಕೆ ಆಮಾಜೀರ್ಣವೆಂಬದಾಗಿಯೂ, ಪಿತ್ತಪ್ರಕೋಪದಿಂದ ಹುಟ್ಟತಕ್ಕ ಅಜೀರ್ಣಕ್ಕೆ ವಿದಗ್ಧಾಜೀರ್ಣವೆಂಬದಾಗಿಯೂ, ವಾತಪ್ರಕೋಪದಿಂದ ಹುಟ್ಟತಕ್ಕ ಅಜೀರ್ಣಕ್ಕೆ ವಿಷ್ಟಬ್ಧಾಜೀರ್ಣವೆಂಬದಾಗಿಯೂ ಹೆಸರು. ಕೆಲವರು ರಸಶೇಷಾಜೀರ್ಣವೆಂಬದಾಗಿ ನಾಲ್ಕನೆಯದೊಂದು ಅಜೀರ್ಣವಿದೆಯೆಂದು ಹೇಳುತ್ತಾರೆ. ಅದರ ಲಕ್ಷಣವೇನಂದರೆ- "ಉದ್ಗಾರಶುದ್ಧಾವಪಿಭಕ್ತಕಾಂಕ್ಷಾನಜಾಯತೇಹೃದ್ಗುರುತಾಚಯಸ್ಯ || ರಸಾವಶೇಷೇಣತುಸಪ್ರಸೇಕಂಚತುರ್ಥಮೇನಂಪ್ರವದಂತ್ಯಜೀರ್ಣಂ ||" ಭೋಜನಮಾಡಿದ ಅನ್ನವು ಜೀರ್ಣವಾದ ಲಕ್ಷಣಗಳೆಲ್ಲವೂ ತೋರುತ್ತಿದ್ದರೂ ಊಟಮಾತ್ರ ಬೇಕಾಗುತ್ತಿರುವುದಿಲ್ಲ. ಅಜೀರ್ಣವಾಗಿದೆಯೋ ಅಂದರೆ ಹೊಟ್ಟೆಭಾರ ಮೊದಲಾದ ಅಜೀರ್ಣದ ಲಕ್ಷಣಗಳೂ ಇರುವುದಿಲ್ಲ. ಹೀಗಿರುವುದಕ್ಕೇನೇ ರಸಶೇಷಾಜೀರ್ಣವೆಂದು ಹೆಸರು. ಕೆಲವರು ಐದನೆಯದೊಂದು ಅಜೀರ್ಣವಿದೆಯೆಂದು ಹೇಳುತ್ತಾರೆ. ಅದರಲ್ಲಿ ಅಜೀರ್ಣಲಕ್ಷಣಾದಿಗಳೇನೂ ತೋರದಿದ್ದರೂ ಒಂದುಹಗಲು ಮತ್ತು ಒಂದುರಾತ್ರಿಸಹ ಕಳೆಯುವವರಿವಿಗೂ ಆಹಾರದಮೇಲೆ ಅಪೇಕ್ಷೆಯೇ ಉಂಟಾಗುವುದಿಲ್ಲ. ಕೆಲವರು ಆರನೆಯದೊಂದು ಅಜೀರ್ಣವಿದೆಯೆಂದು ಹೇಳುತ್ತಾರೆ. ಆ ಅಜೀರ್ಣವು ಪ್ರತಿಪ್ರಾಣಿಗೂ ಪ್ರತಿದಿವಸದಲ್ಲಿಯೂ ಸಂಭವಿಸುತ್ತಲೇ ಇರುತ್ತದೆ. ಹೇಗೆಂದರೆ- ಭೋಜನಮಾಡಿದಮೇಲೆ ಮತ್ತೆ ಭೋಜನಮಾಡುವ ಅಪೇಕ್ಷೆಹುಟ್ಟುವವರಿಗೂ ಇರತಕ್ಕ ಅವಸ್ಥೆಯೇ ಇದು; ಆದರೆ ಹಿಂದೆಹೇಳಿದ ಐದುವಿಧವಾದ ಅಜೀರ್ಣಗಳ ಲಕ್ಷಣವ್ಯಾವದೂ ಕಾಣದೆ ಒಂದು ಭೋಜನದಿಂದ ಮತ್ತೊಂದು ಭೋಜನಕಾಲದೊಳಗೆ ಕಾಣತಕ್ಕ ಈ ಆರನೆಯ ಅಜೀರ್ಣಕ್ಕೆ ಪ್ರಾಕೃತಾಜೀರ್ಣವೆಂದು ಹೇಳುತ್ತಾರೆ.

ಅತ್ಯಂಬುಪಾನಾದ್ವಿಷಮಾಶನಾಚ್ಚ
ಸಂಧಾರಣಾತ್ಸ್ವಪ್ನವಿಪರ್ಯಯಾಚ್ಚ ||
ಕಾಲೇಪಿಸಾತ್ಮ್ಯಂಲಘುಚಾಪಿಭುಕ್ತ
ಮನ್ನಂನಪಾಕಂಭಜತೇನರಸ್ಯ || ೭ ||
ಈರ್ಷ್ಯಾಭಯಕ್ರೋಧಪರಿಪ್ಲುತೇನ
ಲುಬ್ಧೇನಶುಗ್ದೈನ್ಯನಿಪೀಡಿತೇನ ||
ಪ್ರದ್ವೇಷಯುಕ್ತೇನಚಸೇವ್ಯಮಾನ

ಮನ್ನಂನಸಮ್ಯಕ್ಪರಿಪಾಕಮೇತಿ ॥ ೮ ॥

ಅಜೀರ್ಣ ಹುಟ್ಟುವ ಕ್ರಮವನ್ನು ಹೇಳುತ್ತಾನೆ. ಅತಿಯಾಗಿ ನೀರನ್ನುಕುಡಿಯುವುದು, ವಿಷಮಾಶನವೆಂದರೆ ಹೊತ್ತುತಪ್ಪಿ ಭೋಜನಮಾಡುವುದು ಮತ್ತು ಒಂದು ರೀತಿಯಿಲ್ಲದೆ ಹೆಚ್ಚುಕಡಮೆಯಾಗಿ ಭೋಜನಮಾಡುವುದು,, ಅಧೋವಾಯು, ಮಲ, ಮೂತ್ರ ಇವುಗಳವೇಗವನ್ನುತಡೆಯುವುದು, ಅಂದರೆ ಸಕಾಲದಲ್ಲಿ ವಿಸರ್ಜಿಸದಿರುವುದು, ನಿದ್ರಾವ್ಯತ್ಯಾಸ ಅಂದರೆ ಹಗಲು ಮಲಗುವುದು, ರಾತ್ರಿ ಜಾಗರಣಮಾಡುವುದು, ಈ ಕಾರಣಗಳಿಂದ ಭೋಜನಕಾಲದಲ್ಲಿಯೇ ತನ್ನಶರೀರಕ್ಕೆ ಒಗ್ಗಿದ ಪದಾರ್ಥಗಳನ್ನೇ ಲಘುವಾಗಿಯೇ ಭೋಜನಮಾಡಿದರೂ ಕೂಡ ಭೋಜನಮಾಡಿದ ಅನ್ನಾದಿ ಪದಾರ್ಥಗಳು ಜೀರ್ಣವಾಗುವುದಿಲ್ಲ. ಮತ್ತು ಹೊಟ್ಟೇಕಿಚ್ಚು ಅಂದರೆ ಅಸೂಯೆ, ಭಯ, ಸಿಟ್ಟು ಇಂತಹ ಮನೋವಿಕಾರಗಳನ್ನಿಟ್ಟುಕೊಂಡು ಭೋಜನಮಾಡಿದರೂ, ಲೋಭವೆಂದರೆ ಅತ್ಯಾಸೆ, ರೋಗ, ದೈನ್ಯವೆಂದರೆ ತನಗೆ ಪ್ರಾಪ್ತವಾಗಿರತಕ್ಕ ಅವಸ್ಥೆಯನ್ನು ಕುರಿತು ದುಃಖ ಇವುಗಳಿಂದ ಪೀಡಿತನಾಗಿ ಭೋಜನಮಾಡಿದರೂ, ದ್ವೇಷವನ್ನು ಮನಸ್ಸಿನಲ್ಲಿಟ್ಟುಕೊಂಡು ಭೋಜನಮಾಡಿದರೂ ಇಂತಹ ಕಾಲಗಳಲ್ಲಿ ಭೋಜನಮಾಡಿದ ಅನ್ನವು ಭೋಜನಕಾಲದಲ್ಲಿ ಮನಸ್ಸಿನಸ್ಥಿತಿ ಸರಿಯಾಗಿಲ್ಲದಿರೋಣದರಿಂದ "ನಸಮ್ಯಕ್ಪರಿಪಾಕಮೇತಿ" ಚೆನ್ನಾಗಿ ಜೀರ್ಣಕ್ಕೆ ಬರುವುದಿಲ್ಲ.

ತತ್ರಾಮೇಗುರುತೋತ್ಕ್ಲೇದಶ್ಯೋಥೋಗಂಡಾಕ್ಷಿಕೂಟಗಃ ॥
ಉದ್ಗಾರಶ್ಚಯಥಾಭುಕ್ತಮವಿದಗ್ಧಃಪ್ರವರ್ತತೇ ॥ ೯ ॥
ವಿದಗ್ಧೇಭ್ರಮತೃಣ್ಮೂರ್ಚ್ಛಾಪಿತ್ತಾಚ್ಚವಿವಿಧಾರುಜಃ ॥
ಉದ್ಗಾರಶ್ಚಸಧೂಮಾಮ್ಲಃಸ್ವೇದೋದಾಹಶ್ಚಜಾಯತೇ ॥೧೦॥
ವಿಷ್ಟಬ್ಧೇ ಶೂಲಮಾಧ್ಮಾನಂವಿವಿಧಾವಾತವೇದನಾಃ ॥
ಮಲವಾತಾಪ್ರವೃತ್ತಿಶ್ಚಸ್ತಂಭೋಮೋಹಾಂಗಪೀಡನಂ ॥ ೧೧ ॥

ಅಜೀರ್ಣದ ಆಮಾವಸ್ಥೆಯಲ್ಲಿ ಹೊಟ್ಟೆಭಾರ, ಆಯಾಸ, ಕಪಾಳಗಳು, ಕಣ್ಣು ಇವುಗಳಲ್ಲಿ ಬಾವು ಎಂದರೆ ಇವುಗಳು ಊದಿರುವುದು, ಊಟಮಾಡಿದಾಗ್ಗೆ ಬರುವಂತೆಯೇ ಹುಳಿಯಾಗದೇ ತೇಗುಬರುವುದು ಇವು ಲಕ್ಷಣಗಳು. ವಿದಗ್ಧಾವಸ್ಥೆಯಲ್ಲಿ ಬುದ್ಧಿಭ್ರಮ, ಬಾಯಾರಿಕೆ, ಮೂರ್ಛೆ, ಪಿತ್ತವಿಕಾರ ಸಮ್ಬಂಧವಾದ ನಾನಾ ರೋಗಗಳು ತೇಗುಬರುವಾಗ್ಗೆ ಹೊಗೆಯೊಡನೆಯೂ, ಹುಳಿಯೊಡನೆಯೂ ಕೂಡಿ ಬರುತ್ತಿರುವುದು, ಆಗಾಗ್ಗೆ ಬೆವರುಬರುವುದು, ಮೈಯ್ಯುರಿ ಇವುಗಳುಂಟಾಗುತ್ತವೆ. ವಿಷ್ಟಬ್ಧಾವಸ್ಥೆಯಲ್ಲಿ ಹೊಟ್ಟೆಶೂಲೆ, ಹೊಟ್ಟೆಯುಬ್ಬರ, ಇನ್ನೂ ನಾನಾವಿಧಗಳಾದ ವಾತವಿಕಾರಗಳು, ಅಪಾನವಾಯು ಮತ್ತು ಮಲಗಳ ಪ್ರವೃತ್ತಿಯಾಗದಿರುವುದು, ಶರೀರವು ಸ್ತಬ್ಧವಾಗಿರುವುದು, ಅಜ್ಞಾನ, ಮೈನೋವು ಇವುಗಳೆಲ್ಲಾ ಇರುತ್ತವೆ.

ರಸಶೇಷೇನ್ನವಿದ್ವೇಷೋಹೃದಯಾಶುದ್ಧಿಗೌರವೇ ॥
ಮೂರ್ಚ್ಛಾಪ್ರಲಾಪೋವಮಥುಃಪ್ರಸೇಕಸ್ಸದನಂಭ್ರಮಃ ॥೧೨॥
ಉಪದ್ರವಾಭವಂತ್ಯೇತೇಮರಣಂವಾಪ್ಯಜೀರ್ಣತಃ ॥

ರಸಶೇಷಾಜೀರ್ಣದಲ್ಲಿ ಅನ್ನದ್ವೇಷ, ಹೃದಯವು ಶುದ್ಧವಾಗಿರುವುದಕ್ಕಿಲ್ಲ, ಅಂ

ನೆರೆ ಉದ್ಗಾರಶುದ್ಧಿ ಮೊದಲಾದ ಅನ್ನಜೀರ್ಣದ ಲಕ್ಷಣಗಳು ತೋರುವುದಕ್ಕಿಲ್ಲ, ಹೊಟ್ಟೆ ಭಾರ, ಶರೀರದಲ್ಲಿ ಗೌರವ, ಜಾಡ್ಯ ಈ ಲಕ್ಷಣಗಳಿರುತ್ತವೆ. ಇನ್ನು ಅಜೀರ್ಣದ ಉಪದ್ರವಗಳು ಯಾವುವೆಂದರೆ- ಮೂರ್ಛೆ, ಸಂಕಟವನ್ನುತಡೆಯಲಾರದೆ ಗೋಳಾಡುವುದು, ವಮನ, ಬಾಯಿನೀರುಬರುವುದು, ಮೈಸಂಧಿಗಳಲ್ಲೆಲ್ಲಾ ನೋವು, ಬುದ್ಧಿ ಭ್ರಮಣೆ ಈ ಉಪದ್ರವಗಳಲ್ಲದೆ ಅಜೀರ್ಣದಿಂದ ಕ್ವಚಿತ್ ಮರಣವು ಸಹ ಸಂಭವಿಸುತ್ತದೆ.

ಅನಾತ್ಮವಂತಃಪಶುವದ್ಭುಂಜಂತೇಯೇಪ್ಯಕಾಮತಃ ॥ ೧೩ ॥
ರೋಗಾನೀಕಸ್ಯತೇಮೂಲಮಜೀರ್ಣಂಪ್ರಾಪ್ನುವಂತಿಹಿ ॥

ಜಠರಾಗ್ನಿ ಪಾಟವವೆಷ್ಟುಮಟ್ಟಿಗಿದೆ ಎಂಬ ವಿಷಯವನ್ನು ತಿಳಿದುಕೊಳ್ಳದೆ, ಪಶುಗಳು ತಿನ್ನುವಂತೆ ಮಿತಿಮಾರ್ಗವಿಲ್ಲದೆ ಹೊಟ್ಟೆಗೆ ಆಹಾರವನ್ನು ತುಂಬಿದರೆ ಅನೇಕ ರೋಗಗಳಿಗೆ ಮುಖ್ಯಬೀಜಭೂತವಾದ ಅಂದರೆ ಸಮಸ್ತರೋಗಗಳನ್ನೂ ಹುಟ್ಟಿಸತಕ್ಕ ಮೊದಲನೆಯ ಅಜೀರ್ಣರೋಗವನ್ನು ಹೊಂದುತ್ತಾರೆ.

ಅಜೀರ್ಣಮಾಮಂವಿಷ್ಟಬ್ಧಂವಿದಗ್ಧಂಚಯದೀರಿತಂ ॥ ೪ ॥
ವಿಸೂಚ್ಯಲಸಕೌತಸ್ಮಾದ್ಭವೇಚ್ಚಾಪಿವಿಲಂಬಿಕಾ ॥

ಆಮ, ವಿಷ್ಟಬ್ಧ, ವಿದಗ್ಧವೆಂಬದಾಗಿಹಿಂದೆಹೇಳಿದ ಅಜೀರ್ಣಗಳಿಂದ ವಿಸೂಚಿ, ಅಲಸಕ, ವಿಲಂಬಿಕಗಳೆಂಬ ರೋಗಗಳು ಸಹ ಹುಟ್ಟುತ್ತವೆ.

ಸೂಚೀಭಿರಿವಗಾತ್ರಾಣಿತುದನ್‌ಸಂತಿಷ್ಠತೇನಿಲಃ ॥ ೧೫ ॥
ಯತ್ರಾಜೀರ್ಣೇನಸಾವೈದ್ಯೈರ್ವಿಸೂಚೀತಿನಿಗದ್ಯತೇ ॥
ನತಾಂಪರಿಮಿತಾಹಾರಾಲಭಂತೇವಿದಿತಾಗಮಾಃ ॥ ೧೬ ॥
ಮೂಢಾಸ್ತಾಮಜಿತಾತ್ಮಾನೋಲಭಂತೇಽಶನಲೋಲುಪಾಃ ॥

ಅಜೀರ್ಣದಿಂದ ಅಭಿವೃದ್ಧವಾದ ವಾಯುವು ದೇಹವನ್ನೆಲ್ಲಾ ಸೂಜಿಯಿಂದ ಚುಚ್ಚಿದಂತೆ ವ್ಯಥೆಪಡಿಸುತ್ತಲಿದ್ದರೆ ಅದನ್ನು ವೈದ್ಯರುಗಳು ವಿಸೂಚಿರೋಗವೆಂದು ಕರೆಯುತ್ತಾರೆ. ಆಹಾರದ ವಿಷಯದಲ್ಲಿ ಮಿತಿಯನ್ನೂ, ದೇಹತತ್ವಶಾಸ್ತ್ರವನ್ನೂ ತಿಳಿದವರು, ಇಂತಹ ಅಜೀರ್ಣರೋಗಕ್ಕೆ ಅವಕಾಶವನ್ನು ಕೊಡುವುದಿಲ್ಲ. ಜಿಹ್ವಾಚಾಪಲ್ಯವುಳ್ಳ ಮೂಢರಾದ ಹೊಟ್ಟೆಬಾಕರು ಜಠರಾಗ್ನಿ ಎಷ್ಟುಮಟ್ಟಿನ ಆಹಾರವನ್ನು ಪಚನಮಾಡೀತೆಂಬ ಪರ್ಯಾಲೋಚನೆಯಿಲ್ಲದೆ ಸುಮ್ಮನೆ ಮಿತಿಮೀರಿತಿಂದು ಈ ಅಜೀರ್ಣರೋಗವನ್ನು ಹೊಂದುತ್ತಾರೆ.

ಮೂರ್ಛಾತಿಸಾರೋವಮಥುಃಪಿಪಾಸಾ
ಶೂಲೋಭ್ರಮೋದ್ವೇಷ್ಟನಜೃಂಭದಾಹಾಃ ॥
ವೈವರ್ಣ್ಯಕಂಪೌಹೃದಯೇರುಜಶ್ಚ
ಭವಂತಿತಸ್ಯಾಂಶಿರಸಶ್ಚಭೇದಃ ॥ ೧೭ ॥

ವಿಸೂಚಿರೋಗದ ಸ್ವರೂಪವೇನಂದರೆ- ಮೂರ್ಛೆ, ಅತಿಸಾರವೆಂದರೆ ನೀರಾಗಿ ಮಲಪ್ರವೃತ್ತಿಯಾಗುವುದು, ವಮನವಾಗುವುದು, ಅತಿಯಾಗಿ ಬಾಯಾರಿಕೆಯಾಗುತ್ತಿರುವುದು, ಹೊಟ್ಟೆಶೂಲೆ, ಬುದ್ಧಿಭ್ರಮಣೆ, ಸುತ್ತಿಕೊಂಡು ಬೀಳುವಂತಾಗುವುದು, ಆಕಳಿಕೆ, ಮೈಯ್ಯುರಿ, ದೇಹದವರ್ಣವೇ ಕೆಟ್ಟುಹೋಗುವುದು, ಮೈನಡುಕಬರುವುದು,

ಹೃದಯವೇದನೆ, ತಲೆನೋವು ಇವುಗಳುಂಟಾಗುತ್ತವೆ.

ಕುಕ್ಷಿರಾನಹ್ಯತೇತ್ಯರ್ಥಂಪ್ರತಾಮ್ಯೇತ್ಪರಿಕೂಜತಿ ||
ನಿರುದ್ಧೋಮಾರುತಶ್ಚೈವಕುಕ್ಷಾವುಪರಿಧಾವತಿ || ೧೮ ||
ವಾತವರ್ಚೋನಿರೋಧಶ್ಚಯಸ್ಯಾತ್ಯರ್ಥಂಭವೇದಪಿ ||
ತಸ್ಯಾಲಸಕಮಾಚಷ್ಟೇತೃಷ್ಣೋದ್ಗಾರೌಚಯಸ್ಯತು ||೧೯||

ಆಲಸಕ ಲಕ್ಷಣವನ್ನು ಹೇಳುತ್ತಾನೆ. ಹೊಟ್ಟೆಯುಬ್ಬರಿಸಿಕೊಳ್ಳುವುದು, ರೋಗಿಗೆ ಸಂಕಟ ತಡೆಯಲಾರದೆ ಮೂರ್ಛೆ ಬರುವುದು, ಸಂಕಟವನ್ನು ತಡೆಯಲಾರದೆ ಕೂಗಿಕೊಳ್ಳುವುದು, ಅಪಾನವಾಯುವು ತಡೆಯಲ್ಪಟ್ಟು ಹೊಟ್ಟೆಯಲ್ಲೆಲ್ಲಾ ಓಡಾಡುವುದು, ಅಧೋವಾಯು ಮತ್ತು ಮಲಸಹಬದ್ಧವಾಗಿರುವುದು, ಬಾಯಾರಿಕೆ ಮತ್ತು ತೇಗುಸಹ ಇರುವುದು ಈ ಲಕ್ಷಣಗಳಿದ್ದರೆ ಆಲಸಕವೆಂಬ ರೋಗವೆಂದರಿಯಬೇಕು

ದುಷ್ಟಂತುಭುಕ್ತಂಕಫಮಾರುತಾಭ್ಯಾಂ
ಪ್ರವರ್ತತೇನೋರ್ಧ್ವಮಧಶ್ಚಯಸ್ಯ||
ವಿಲಂಬಿಕಾಂತಾಂಭೃಶದುಶ್ಚಿಕಿತ್ಸಾಂ
ಮಾಚಕ್ಷತೇಶಾಸ್ತ್ರವಿದಃಪುರಾಣಾಃ || ೨೦ ||

ವಿಲಂಬಿಕಾ ಲಕ್ಷಣವನ್ನು ಹೇಳುತ್ತಾನೆ. ಭೋಜನಮಾಡಿದ ಅನ್ನವು ಕುಪಿತಗಳಾದ ವಾಯು ಮತ್ತು ಶ್ಲೇಷ್ಮಗಳಿಂದ ದೂಷಿಸಲ್ಪಟ್ಟು ಒಳಗೆ ಜೀರ್ಣವಾಗುವುದಿಲ್ಲ. ಊರ್ಧ್ವದ್ವಾರದಿಂದ ವಮನವಾಗುವುದಿಲ್ಲ, ಅಧೋದ್ವಾರದಿಂದ ವಿರೇಚನವೂ ಆಗುವುದಿಲ್ಲ. ಈ ರೀತಿಯಾಗಿ ಸಂಕಟಪಡಿಸತಕ್ಕ ರೋಗವನ್ನು ಚಿಕಿತ್ಸೆಗೆ ಅಸಾಧ್ಯವಾದ ವಿಲಂಬಿಕೆ ಎಂಬರೋಗವೆಂದು ಶಾಸ್ತ್ರಜ್ಞರು ನಿಶ್ಚಯಿಸಿದ್ದಾರೆ.

ಯತ್ರಸ್ಥಮಾಮಂವಿರುಜೇತ್ತಮೇವ
ದೇಶಂವಿಶೇಷೇಣವಿಕಾರಜಾತೈಃ ||
ದೋಷೇಣಯೇನಾವತತಂಶರೀರಂ
ತಲ್ಲಕ್ಷಣೈರಾಮಸಮುದ್ಭವೈಶ್ಚ || ೨೧ ||

ಅಜೀರ್ಣವಾಗೋಣದರಿಂದ ದೇಹದಲ್ಲಿ ಉತ್ಪನ್ನವಾದ ಆಮರಸವು ಶರೀರದ ಯಾವಭಾಗದಲ್ಲಿ ಇರುತ್ತದೆಯೋ ಆಭಾಗವನ್ನೇ ನಾನಾ ವಿಕಾರಗಳಿಂದ ಬಾಧೆಪಡಿಸುತ್ತದೆ. ಅಂದರೆ ಇತರ ಭಾಗದಲ್ಲಿ ಅಷ್ಟೊಂದು ಹಿಂಸೆಯಾಗುತ್ತಿರುವುದಿಲ್ಲ. ಯಾವ ದೋಷವು ಪ್ರಕುಪಿತವಾಗಿ ಅಜೀರ್ಣವನ್ನು ಹುಟ್ಟಿಸಿರುತ್ತದೆಯೋ ಆ ದೋಷದ ಲಕ್ಷಣಗಳೂ ಮತ್ತು ಶರೀರಗತವಾದ ಆಮದ ಲಕ್ಷಣಗಳೂ ಕೂಡಿಯೇ ವಿಕಾರಗಳಲ್ಲಿ ಉಂಟಾಗುತ್ತಿರುತ್ತವೆ. ಅಂದರೆ ಅಂತಹ ವಿಕಾರವನ್ನು ದೇಹದಲ್ಲಿ ಉಂಟುಮಾಡುತ್ತದೆಂಬುವುದು ತಾತ್ಪರ್ಯ.

ಯಶ್ಯಾವದಂತೌಷ್ಠನಖೋಲ್ಪಸಂಜ್ಞೋ
ವಮ್ಯರ್ದಿತೋಭ್ಯಂತರಯಾತನೇತ್ರಃ ||
ಕ್ಷಾಮಸ್ವರಸ್ಸರ್ವವಿಮುಕ್ತಸಂಧಿ
ರ್ಯಾಯಾನ್ನರಸ್ಸೋಪುನರಾಗಮಾಯ || ೨೨ ||

ವಿಸೂಚ್ಯಾದಿರೋಗಗಳ ಅಸಾಧ್ಯಲಕ್ಷಣವನ್ನು ಹೇಳುತ್ತಾನೆ- ರೋಗಿಯ ಹಲ್ಲುಗಳು, ತುಟಿಗಳು, ಉಗುರುಗಳು ಇವುಗಳು ಧೂಮ್ರವರ್ಣವಾಗಿರುವುದು, ಜ್ಞಾನ ಕಡಮೆಯಾಗಿರುವುದು, ವಮನವು ಅತ್ಯಧಿಕವಾಗಿರುವುದು, ಕಣ್ಣುಗಳು ಗುಂಡಿಬಿದ್ದು ಹೋಗಿರುವುದು, ಧ್ವನಿ ಕುಗ್ಗಿಹೋಗಿರುವುದು, ಸಂಧಿಬಂಧನಗಳೆಲ್ಲಾ ಕಳಚಿಹೋಗಿ ರುವಷ್ಟು ನಿಶ್ಶಕ್ತಿತೋರುವುದು ಹೀಗಿದ್ದಲ್ಲಿ ಅಂತಹ ಮನುಷ್ಯನು ಮರಣಹೊಂದುತ್ತಾನೆಂದು ತಿಳಿಯಬಹುದು.

ಉದ್ಗಾರಶುದ್ಧಿರುತ್ಸಾಹೋವೇಗೋತ್ಸರ್ಗೋಯಥೋಚಿತಃ ॥
ಲಘುತಾಕ್ಷುತ್ಪಿಪಾಸಾಚಜೀರ್ಣಾಹಾರಸ್ಯಲಕ್ಷಣಂ ॥ ೨೨ ॥

ಇಲ್ಲಿಯವರಿಗೂ ಅಜೀರ್ಣರೋಗಗಳೂ, ಅವುಗಳ ಉಪದ್ರವಗಳೂಸಹ ತಿಳಿಸಲ್ಪಟ್ಟವು. ಇನ್ನು ಜೀರ್ಣವಾದ ಆಹಾರವುಳ್ಳವನ ಲಕ್ಷಣವನ್ನು ಹೇಳುತ್ತಾನೆ. ಶುದ್ಧವಾದ ತೇಗುಬರುವುದು, ಕೆಲಸಮಾಡಲು ಮನಸ್ಸಿನಲ್ಲಿ ಉತ್ಸಾಹವಿರುವುದು, ಮಲಮೂತ್ರಗಳು ಚೆನ್ನಾಗಿನಿವೃತ್ತಿಯಾಗಿರುವುದು, ಮೈ ಹಗುರವಾಗಿರುವುದು, ಹಸಿವು ಮತ್ತು ಬಾಯಾರಿಕೆಗಳು ಚೆನ್ನಾಗಿರುವುದು ಇವುಗಳು ಆಹಾರ ಜೀರ್ಣವಾದದ್ದಕ್ಕೆ ಲಕ್ಷಣಗಳು.

ಇಲ್ಲಿಗೆ ಅಗ್ನಿಮಾಂದ್ಯಾದಿನಿದಾನ ಸಂಪೂರ್ಣ.

## * ಕ್ರಿಮಿನಿದಾನ. *

ಕ್ರಿಮಯಶ್ಚದ್ವಿಧಾಪ್ರೋಕ್ತಾಬಾಹ್ಯಾಭ್ಯಂತರಭೇದತಃ ॥
ಬಹಿರ್ಮಲಕಫಾಸೃಗ್ವಿಡ್ಜನ್ಮಭೇದಾಚ್ಚತುರ್ವಿಧಾಃ ॥ ೧ ॥

ಕ್ರಿಮಿರೋಗವನ್ನು ಹೇಳುತ್ತಾನೆ. ಕ್ರಿಮಿಗಳು ದೇಹದ ಹೊರಭಾಗದಲ್ಲಿ ಸೇರಿಕೊಂಡು ಹಿಂಸೆಪಡಿಸತಕ್ಕವುಗಳೆಂಬದಾಗಿಯೂ, ಒಳಭಾಗದಲ್ಲಿ ಸೇರಿಕೊಂಡು ಹಿಂಸೆಪಡಿಸತಕ್ಕವುಗಳೆಂಬದಾಗಿಯೂ ಎರಡುವಿಧ. ಈ ಎರಡುವಿಧವಾದ ಕ್ರಿಮಿಗಳೂ ಕೂಡ ಬಾಹ್ಯಮಲಗಳಾದ ಬೆವರು ಮೊದಲಾದವುಗಳಲ್ಲಿ ಹುಟ್ಟತಕ್ಕವುಗಳೆಂಬದಾಗಿಯೂ, ಶ್ಲೇಷ್ಮದಲ್ಲಿ ಹುಟ್ಟತಕ್ಕವುಗಳೆಂಬದಾಗಿಯೂ, ರಕ್ತದಲ್ಲಿ ಹುಟ್ಟತಕ್ಕವುಗಳೆಂಬದಾಗಿಯೂ, ಮಲದಲ್ಲಿ ಹುಟ್ಟತಕ್ಕವುಗಳೆಂಬದಾಗಿಯೂ ಪುನಃ ನಾಲ್ಕು ವಿಧ.

ನಾಮತೋವಿಂಶತಿವಿಧಾಬಾಹ್ಯಾಸ್ತತ್ರಮಲೋದ್ಭವಾಃ ॥
ತಿಲಪ್ರಮಾಣಸಂಸ್ಥಾನವರ್ಣಾಃಕೇಶಾಂಬರಾಶ್ರಯಾಃ ॥೨॥
ಬಹುಪಾದಾಶ್ಚಸೂಕ್ಷ್ಮಾಶ್ಚಯೂಕಾಲಿಕ್ಷಾಶ್ಚನಾಮತಃ ॥
ದ್ವಿಧಾತೇಕೋಠಪಿಡಕಾಕಂಡೂಗಂಡಾನ್ಪ್ರಕುರ್ವತೇ ॥ ೩ ॥

ಬಾಹ್ಯಕ್ರಿಮಿಗಳು ಅಂದರೆ- ಶರೀರದ ಹೊರಭಾಗದಲ್ಲಿ ಶರೀರಕ್ಕೆಸಂಬಂಧವಾದ ಬೆವರು ಮೊದಲಾದ ಮಲಗಳಿಂದ ಹುಟ್ಟಿದ ಕ್ರಿಮಿಗಳು ಇಪ್ಪತ್ತು ವಿಧವಾದ ಹೆಸರುಳ್ಳವುಗಳಾಗಿರುತ್ತವೆ. ಕೂದಲುಗಳು ಮತ್ತು ಧರಿಸತಕ್ಕ ಬಟ್ಟೆಬರೆಗಳು ಇವುಗಳನ್ನೇ ಆಶ್ರಯಿಸಿಕೊಂಡು ಅವುಗಳು ವಾಸಮಾಡುತ್ತವೆ. ಅನೇಕ ಕಾಲುಗಳುಳ್ಳವುಗಳಾಗಿಯೂ ಸೂಕ್ಷ್ಮಗಳಾಗಿಯೂ ಇರುತ್ತವೆ. ಕೆಲವಕ್ಕೆ ಯೂಕ ಎಂಬದಾಗಿಯೂ, ಕೆಲವಕ್ಕೆ

ಲಿಕ್ಷ ಎಂಬದಾಗಿಯೂ ಹೆಸರು. ಇವುಗಳು ಶರೀರದಲ್ಲಿ ಬಕ್ಕೆಗಳು, ಗಂಟುಗಳು, ಹುಣ್ಣುಗಳು, ನವೆ ಇವುಗಳನ್ನುಂಟುಮಾಡುತ್ತವೆ.

ಅಜೀರ್ಣಭೋಜೀಮಧುರಾಮ್ಲನಿತ್ಯೋ
ದ್ರವಪ್ರಿಯಃಪಿಷ್ಟಗುಡೋಪಭೋಕ್ತಾ ||
ವ್ಯಾಯಾಮವರ್ಜೀಚದಿವಾಶಯಾನೋ
ವಿರುದ್ಧಭುಕ್ ಸಂಲಭತೇಕ್ರಿಮೀಂಸ್ತು || ೪ ||

ಕ್ರಿಮಿಗಳು ಉತ್ಪತ್ತಿಯಾಗಲು ಕಾರಣವೇನಂದರೆ- ಜಠರಾಗ್ನಿಪಾಟವ ಕಡಮೆಯಾಗಿ ತಿಂದದ್ದು ಜೀರ್ಣವಾಗುವ ಮುಂಚಿತವಾಗಿ ಪುನಶ್ಚ ಭೋಜನಮಾಡುವುದು, ಯಾವಾಗಲೂ ಹೆಚ್ಚಿಗೆ ಸಿಹಿಪದಾರ್ಥಗಳನ್ನು ತಿನ್ನುವುದು, ಹೆಚ್ಚಿನ ಹುಳಿಯನ್ನು ತಿನ್ನುವುದು, ದ್ರವಪದಾರ್ಥಗಳಲ್ಲಿಯೇ ಹೆಚ್ಚಿನ ಪ್ರೀತಿ, ಹಿಟ್ಟು ಮತ್ತು ಬೆಲ್ಲ ಇವುಗಳನ್ನು ಸೇರಿಸಿತಿನ್ನುವುದು, ಬೇರೆ ಬೇರೆಯಾಗಿಯಾದರೂ ತಿನ್ನುವುದು, ವ್ಯಾಯಾಮ ಮಾಡದೆ ಸುಮ್ಮನೆಕುಳಿತು ಕಾಲಕಳೆಯುವುದು, ಹಗಲು ಮಲಗುವುದು, ಪರಸ್ಪರ ಸಂಯೋಗದಿಂದ ವಿರುದ್ಧವಾಗತಕ್ಕ ಪದಾರ್ಥಗಳನ್ನುತಿನ್ನುವುದು ಇವುಗಳೆಲ್ಲಾ ಶರೀರದಲ್ಲಿ ಕ್ರಿಮ್ಯುತ್ಪತ್ತಿಗೆ ಕಾರಣಗಳು.

ಮಾಷಪಿಷ್ಟಾಮ್ಲಲವಣಗುಡಶಾಕೈಃಪುರೀಷಜಾಃ ||
ಮಾಂಸಮತ್ಸ್ಯಗುಡಕ್ಷೀರದಧಿಶುಕ್ತೈಃಕಫೋದ್ಭವಾಃ || ೫ ||
ವಿರುದ್ಧಾಜೀರ್ಣಶಾಕಾದ್ಯೈಃಶೋಣಿತೋದ್ಭಾಭವಂತಿಹಿ ||

ಹೆಚ್ಚಾಗಿ ಉದ್ದನ್ನು ತಿನ್ನುವುದು. ಹೆಚ್ಚಿಗೆ ಹಿಟ್ಟುಗಳನ್ನು ತಿನ್ನುವುದು, ಹುಳಿಯನ್ನು ಮತ್ತು ಉಪ್ಪನ್ನು ಸಹ ಹೆಚ್ಚಿಗೆತಿನ್ನುವುದು, ಬೆಲ್ಲ ತರಕಾರಿ ಇವುಗಳನ್ನು ಅತಿಯಾಗಿ ತಿನ್ನುವುದು ಈ ಕಾರಣಗಳಿಂದ ಮಲದಲ್ಲಿ ಕ್ರಿಮಿಗಳುಂಟಾಗುತ್ತವೆ. ಮಾಂಸಗಳು, ಮೀನು, ಬೆಲ್ಲ, ಹೆಚ್ಚಿಗೆ ಹಾಲು, ಮೊಸರು, ಹಳಸಿದ ಪದಾರ್ಥ ಇವುಗಳನ್ನು ಹೆಚ್ಚು ಉಪಯೋಗಿಸುತ್ತ ಬಂದರೆ ಕಫದಲ್ಲಿ ಕ್ರಿಮಿಗಳಾಗುತ್ತವೆ. ಪರಸ್ಪರವಿರುದ್ಧವಸ್ತುಗಳನ್ನು ಒಂದೇಸಾರಿ ಭೋಜನಮಾಡುವುದು, ಅಜೀರ್ಣ, ತರಕಾರಿಗಳನ್ನು ಹೆಚ್ಚುತಿನ್ನುವುದು ಇಂತಹಕಾರಣಗಳಿಂದ ರಕ್ತದಲ್ಲಿ ಕ್ರಿಮಿಗಳು ಹುಟ್ಟುತ್ತವೆ.

ಜ್ವರೋವಿವರ್ಣತಾಶೂಲಂಹೃದ್ರೋಗಸ್ಸದನಂಭ್ರಮಃ ||೬||
ಭಕ್ತದ್ವೇಷೋತಿಸಾರಶ್ಚ ಸಂಜಾತಕ್ರಿಮಿಲಕ್ಷಣಂ ||

ಜ್ವರ, ದೇಹದಬಣ್ಣ ಕೆಟ್ಟುಹೋಗುವುದು, ಶೂಲೆ, ಎದೆನೋವು ಮೊದಲಾದ ಇತರ ಹೃದಯಸಂಬಂಧವಾದ ರೋಗಗಳು, ಮೈನೋವು, ಬುದ್ಧಿಭ್ರಮ, ಅನ್ನದ್ವೇಷ ಮತ್ತು ಅತಿಸಾರ ಇವುಗಳು ತೋರುತ್ತಬಂದಲ್ಲಿ ದೇಹದಲ್ಲಿ ಕ್ರಿಮಿಹುಟ್ಟಿದೆ ಎಂಬದಾಗಿ ತಿಳಿದುಕೊಳ್ಳಬಹುದು.

ಕಫಾದಾಮಾಶಯೇಜಾತಾವೃದ್ಧಾಸ್ಸರ್ಪಂತಿಸರ್ವತಃ || ೭ ||
ಪೃಥುಬ್ರಧ್ನನಿಭಾಃಕೇಚಿತ್ಕೇಚಿದ್ಗಂಡೂಪದೋಪಮಾಃ ||
ರೂಢಧಾನ್ಯಾಂಕುರಾಕಾರಾಸ್ತನುದೀರ್ಘಾಸ್ತಥಾಣವಃ || ೮ ||
ಶ್ವೇತಾಸ್ತಾಮ್ರಾವಭಾಸಾಶ್ಚ ನಾಮತಸ್ಸಪ್ತಧಾತುತೇ ||

ಅಂತ್ರಾದಾ ಉದರಾವೇಷ್ಟಾ ಹೃದಯಾದಾ ಮಹಾಗುದಾಃ ॥ ೯ ॥
ಚುರವೋ ದರ್ಭಕುಸುಮಾಸ್ಸುಗಂಧಾಸ್ತೇ ಚ ಕುರ್ವತೇ ॥
ಹೃಲ್ಲಾಸಮಾಸ್ಯಸ್ರವಣಮವಿಪಾಕಮರೋಚಕಂ ॥ ೧೦ ॥
ಮೂರ್ಛಾಛರ್ದಿಜ್ವರಾನಾಹಕಾರ್ಶ್ಯಕ್ಷವಥುಪೀನಸಾನ್ ॥

ಕಫದಲ್ಲಿಹುಟ್ಟುವ ಕ್ರಿಮಿಗಳು ಮೊದಲು ಆಮಾಶಯದಲ್ಲಿ ಹುಟ್ಟಿಕೊಂಡು ವೃದ್ಧಿಯಾಗಿ ದೇಹದ ಎಲ್ಲಾ ಕಡೆಯಲ್ಲಿಯೂ ಹರಿದಾಡುತ್ತವೆ. ಕೆಲವು ದೊಡ್ಡವುಗಳಾಗಿ ಚರ್ಮಲತೆ ಅಂದರೆ ಚರ್ಮದಿಂದ ಮಾಡಲ್ಪಟ್ಟ ಬಳ್ಳಿಯಹಾಗಿರುತ್ತವೆ. ಕೆಲವು ಗಂಡೂಪದವೆಂದರೆ ಒನಕೇಹುಳವೆಂಬ ಮುಟ್ಟಿದರೆ ಸುತ್ತಿಕೊಳ್ಳುವ ಒಂದು ಬಗೆಯ ಹುಳದಂತಿರುತ್ತವೆ, ಕೆಲವು ಬತ್ತದಮೊಳಕೆಯಂತೆ ಬೆಳ್ಳಗೆ, ಸಣ್ಣಗೆ, ಉದ್ದವಾಗಿಯೂ, ಚಿಕ್ಕಚಿಕ್ಕದಾಗಿಯೂ ಇರುತ್ತವೆ, ಕೆಲವು ಬೆಳ್ಳಗೂ ಮತ್ತೆ ಕೆಲವು ತಾಮ್ರದ ಛಾಯೆಯಿಂದ ಕೂಡಿಕೊಂಡೂ ಇರುತ್ತವೆ. ಇವುಗಳಿಗೆ ಅಂತ್ರಾದ, ಉದರಾವೇಷ್ಟ, ಹೃದಯಾದ, ಮಹಾಗುದ, ಚುರವ, ದರ್ಭಕುಸುಮ, ಸುಗಂಧ ಎಂಬದಾಗಿ ಏಳು ವಿಧವಾದ ಹೆಸರುಗಳಿವೆ. ಇವುಗಳು ಉದರದಲ್ಲಿ ಸೇರೋಣದರಿಂದ ಉಂಟಾಗತಕ್ಕಲಕ್ಷಣಗಳಾವವೆಂದರೆ- ವಾಂತಿಯಾಗುವಂತೆ ತೋರುವುದು, ಬಾಯಿನೀರುಬರುವುದು, ಅನ್ನ ಚೆನ್ನಾಗಿ ಜೀರ್ಣವಾಗುವುದಕ್ಕಿಲ್ಲ, ಬಾಯಿಯಲ್ಲಿ ರುಚಿಚೆನ್ನಾಗಿರುವುದಕ್ಕಿಲ್ಲ, ಮೂರ್ಛೆ, ವಮನ, ಜ್ವರ, ಹೊಟ್ಟೆಯುಬ್ಬರ, ಮೈಕೃಶವಾಗಿ ಕರಗುತ್ತಹೋಗುವುದು, ಯಾವಾಗಲೂ ಶೀನುಬರುವುದು, ನೆಗಡಿ ಈ ಲಕ್ಷಣಗಳು ತೋರುತ್ತಿರುತ್ತವೆ.

ರಕ್ತವಾಹಿಶಿರಾಸ್ಥಾನರಕ್ತಜಾ ಜಂತವೋಣವಃ ॥೧೧॥
ಅಪಾದಾವೃತ್ತತಾಮ್ರಾಶ್ಚ ಸೌಕ್ಷ್ಮ್ಯಾತ್ಕೇಚಿದದರ್ಶನಾಃ ॥
ಕೇಶಾದಾ ರೋಮವಿಧ್ವಂಸಾ ರೋಮದ್ವೀಪಾ ಉದುಂಬರಾಃ ॥೧೨॥
ಷಟ್ ತೇ ಕುಷ್ಠೈಕಕರ್ಮಾಣಸ್ಸಹಸೋರಸಮಾತರಃ ॥

ರಕ್ತಸಂಚಾರಮಾಡತಕ್ಕ ನಾಡಿಗಳ ಮೂಲದಲ್ಲಿ ರಕ್ತದಲ್ಲಿಯೇ ಹುಟ್ಟತಕ್ಕ ಕ್ರಿಮಿಗಳು ಬಹಳ ಸಣ್ಣಗಿರುತ್ತವೆ, ಕಾಲುಗಳಿರುವುದಿಲ್ಲ, ದುಂಡಗೆ ಕೆಂಪಗಾಗಿ ಕಾಣುತ್ತಿರುತ್ತವೆ, ಬಹಳ ಸಣ್ಣನಾದ್ದರಿಂದ ಕೆಲವು ಕಣ್ಣಿಗೆಸಹ ಕಾಣುವುದಿಲ್ಲ, ಕೇಶಾದ, ರೋಮವಿಧ್ವಂಸ, ರೋಮದ್ವೀಪ, ಉದುಂಬರ, ಸಹಸೋರಸ, ಮಾತರ ಎಂಬದಾಗಿ ಅವುಗಳು ಆರುಜಾತಿಯಾಗಿವೆ. ಇವುಗಳೆಲ್ಲಾ ಕುಷ್ಠರೋಗವನ್ನು ಹುಟ್ಟಿಸುವುದೊಂದೇ ಕೆಲಸಮಾಡುತ್ತವೆ.

ಪಕ್ವಾಶಯೇ ಪುರೀಷೋತ್ಥಾ ಜಾಯಂತೇಧೋವಿಸರ್ಪಿಣಃ ॥೧೩॥
ವೃದ್ಧಾಸ್ತೇ ಸ್ಯುರ್ಭವೇಯುಶ್ಚ ತೇ ಯದಾಮಾಶಯೋನ್ಮುಖಾಃ ॥
ತದಾಸ್ಯೋದ್ಗಾರನಿಶ್ವಾಸವಿಡ್ಗಂಧಾನುವಿಧಾಯಿನಃ ॥ ೧೪ ॥
ಪೃಥುವೃತ್ತತನುಸ್ಥೂಲಾಶ್ಶ್ಯಾವಪೀತಸಿತಾಸಿತಾಃ ॥
ತೇ ಪಂಚನಾಮ್ನಾ ಕ್ರಿಮಯಃ ಕಕೇರುಕಮಕೇರುಕಾಃ ॥ ೧೫ ॥
ಸೌಸುರಾದಾಸ್ಸಶೂಲಾಖ್ಯಾ ಲೇಲಿಹಾ ಜನಯಂತಿ ಹಿ ॥
ವಿಡ್ಭೇದಶೂಲವಿಷ್ಟಂಭಕಾರ್ಶ್ಯಪಾರುಷ್ಯಪಾಂಡುತಾಃ ॥೧೬॥

**ರೋಮಹರ್ಷಾಗ್ನಿಸದನಂಗುದಕಂಡೂರ್ವಿಮಾರ್ಗಗಾಃ ||**

ಪಕ್ವಾಶಯದಲ್ಲಿ ಮಲಜನ್ಯಗಳಾದ ಕ್ರಿಮಿಗಳು ಹುಟ್ಟಿ ಅಧೋಮುಖವಾಗಿ ಹೋಗತಕ್ಕ ಸ್ವಭಾವವುಳ್ಳವುಗಳಾಗಿರುತ್ತವೆ. ಈ ಕ್ರಿಮಿಗಳು ಹೆಚ್ಚಾಗಿ ಆಮಾಶಯದಕಡೆಗೆ ತಿರುಗಿದರೆ ಅಂದರೆ ಊರ್ಧ್ವಮುಖವಾದರೆ ಪದೇ ಪದೇ ತೇಗುಬರುವುದು, ಉಸುರುಗಳೆಳೆಯುತ್ತಿರುವುದು, ಉಸಿರಿನಲ್ಲಿ ಮಲದವಾಸನೆಸಹ ಬರುವುದು; ಕೆಲವು ದೊಡ್ಡದಾಗಿ ಹೊಗೆಯಬಣ್ಣದಲ್ಲಿರುತ್ತವೆ, ಕೆಲವು ದುಂಡಗೆ ಹಳದಿಬಣ್ಣವಾಗಿಯೂ, ಮತ್ತೆ ಕೆಲವು ಸಣ್ಣಗೆ ಬೆಳ್ಳಗೂ, ಇನ್ನೂ ಕೆಲವು ದಪ್ಪನಾಗಿ ಕಪ್ಪಗೂ ಹೀಗೆಲ್ಲಾ ನಾನಾವಿಧವಾಗಿರುತ್ತವೆ. ಕಕೇರುಕ, ಮಕೇರುಕ, ಸೌಸುರಾದ, ಸಶೂಲ, ಲೇಲಿಹ ಎಂಬದಾಗಿ ಮಲಜನ್ಯವಾದ ಕ್ರಿಮಿಗಳು ಐದುವಿಧ ಈ ಕ್ರಿಮಿಗಳು ಅಧೋಮಾರ್ಗವನ್ನು ಬಿಟ್ಟು ಊರ್ಧ್ವಮುಖಗಳಾದರೆ ಮಲಪ್ರವೃತ್ತಿ ಅಂದರೆ ಭೇದಿ, ಹೊಟ್ಟೆನೋವು, ಮಲಬಂಧ ಮೈಬಡವಾಗುವುದು, ಮೈಯೆಲ್ಲಾ ಬಿರುಸಾಗುವುದು, ಬೆಳ್ಳಗೂ ಆಗುವುದು, ಯಾವಾಗಲೂ ರೋಮಾಂಚವಾಗುವುದು, ಅಗ್ನಿಮಾಂದ್ಯ, ಗುದದ್ವಾರದಲ್ಲಿ ನವೆ ಇವುಗಳನ್ನೆಲ್ಲಾ ಉಂಟುಮಾಡುತ್ತವೆ.

**§ ಇಲ್ಲಿಗೆ ಕ್ರಿಮಿನಿದಾನ ಸಂಪೂರ್ಣ §**

## — ಪಾಂಡುರೋಗನಿದಾನ. —

**ಪಾಂಡುರೋಗಾಸ್ಮೃತಾಃಪಂಚವಾತಪಿತ್ತಕಫೈಸ್ತ್ರಯಃ ||**
**ಚತುರ್ಥಸನ್ನಿಪಾತೇನಪಂಚಮೋಭಕ್ಷಣಾನ್ಮೃದಃ || ೧ ||**

ಪಾಂಡುರೋಗವನ್ನು ಹೇಳುತ್ತಾನೆ. ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಕಫಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ಮೃದ್ಭಕ್ಷಣಜನ್ಯ ಎಂಬದಾಗಿ ಪಾಂಡುರೋಗವು ಐದುವಿಧ. ಸುಶ್ರುತದಲ್ಲಿ ಮೃದ್ಭಕ್ಷಣಜನ್ಯವಾದ (ಮಣ್ಣು ತಿಂದು ಹುಟ್ಟುವ) ಪಾಂಡುರೋಗವನ್ನು ಹೇಳಲಿಲ್ಲ. ಅಂದರೆ ಮಣ್ಣನ್ನು ತಿನ್ನುವುದು ಕೂಡ ದೋಷಪ್ರಕೋಪಕಾರಣವಾಗಿ ದೋಷಪ್ರಕೋಪಮಾಡಿ ತದ್ದ್ವಾರಾರೋಗವನ್ನು ಹುಟ್ಟಿಸುವುದೆಂದಮೇಲೆ ಇದೂನೂ ದೋಷಪ್ರಕೋಪಜನ್ಯ ಪಾಂಡುರೋಗವೇ ಆಯಿತು. ಮೃದ್ಭಕ್ಷಣಜನ್ಯ ಪಾಂಡುರೋಗವನ್ನು ಹೇಳುವುದು ಹೆಚ್ಚು ಎನ್ನುವುದೇ ಅಭಿಪ್ರಾಯ. ಆದರೆ ಚಿಕಿತ್ಸೆಯಲ್ಲಿ ಮಾತ್ರ ದೋಷಪ್ರಕೋಪಜನ್ಯ ಪಾಂಡುರೋಗ ಚಿಕಿತ್ಸೆ ಬೇರೆ. ಮೃದ್ಭಕ್ಷಣಜನ್ಯ ಪಾಂಡುರೋಗ ಚಿಕಿತ್ಸೆ ಬೇರೆಎಂದು ಬೇರೆ ಬೇರೆಯಾಗಿರುವುದರಿಂದ ದೋಷಪ್ರಕೋಪಜನ್ಯ ಪಾಂಡುರೋಗವನ್ನು ಮಾತ್ರಹೇಳಿದಲ್ಲಿ ಚಿಕಿತ್ಸೆಗೆ ತೊಂದರೆಯಾದೀತು. ಆದ್ದರಿಂದ ಚಿಕಿತ್ಸಕರಿಗೆ ಸೌಕರ್ಯಕ್ಕಾಗಿ ಮೃದ್ಭಕ್ಷಣಜನ್ಯ ಪಾಂಡುರೋಗವನ್ನೂ ಹೇಳಿರುತ್ತಾರೆ.

**ವ್ಯಾಯಾಮಮಮ್ಲಂಲವಣಾನಿಮದ್ಯಂ**
**ಮೃದಂದಿವಾಸ್ವಪ್ನಮತೀವತೀಕ್ಷ್ಣಂ ||**
**ನಿಷೇವಮಾಣಸ್ಯಪ್ರದೂಷ್ಯರಕ್ತಂ**
**ದೋಷಾಸ್ತ್ವಚಂಪಾಂಡುರತಾಂನಯಂತಿ ||೨||**

ಅತಿಯಾಗಿ ವ್ಯಾಯಾಮವಮಾಡುವುದು, ಅತಿಯಾಗಿ ಹುಳಿಯನ್ನು ತಿನ್ನುವುದು, ಲವಣಗಳನ್ನು ಅತಿಯಾಗಿ ಉಪಯೋಗಿಸುವುದು, ಮದ್ಯಪಾನ ಮಾಡುವುದು, ಮಣ್ಣನ್ನು ತಿನ್ನುವುದು, ಹಗಲು ಮಲಗುವುದು, ಅತ್ಯುಷ್ಣಗಳಾದ ಆಹಾರಾಚಾರ ವಿಹಾರಗಳು ಇಂತಹ ಕಾರಣಗಳಿಂದ ಪ್ರಕುಪಿತಗಳಾದ ವಾತಾದಿದೋಷಗಳು ದೇಹಗತಗಳಾದ ರಕ್ತ ಮಾಂಸಗಳನ್ನು ದೋಷಯುಕ್ತಗಳನ್ನಾಗಿ ಮಾಡಿ "ತ್ವಚಂಪಾಂಡುರತಾಂನಯಂತಿ" ಚರ್ಮವನ್ನು ಬೆಳ್ಳಗಾಗುವಂತೆ ಮಾಡುತ್ತದೆ, ಅಂದರೆ ಅಂತರ್ಗತವಾದರಕ್ತವು ಶೋಷಿಸಿಹೋಗಿ ಚರ್ಮವು ಬೆಳ್ಳಗಾಗುತ್ತದೆಂಬ ತಾತ್ಪರ್ಯ.

ತ್ವಕ್‌ಸ್ಫೋಟನಷ್ಠೀವನಗಾತ್ರಸಾದ
ಮೃದ್ಭಕ್ಷಣಪ್ರೇಕ್ಷಣಕೂಟಶೋಥಾಃ ||
ವಿಣ್ಮೂತ್ರಪೀತತ್ವಮಥಾವಿಪಾಕೋ
ಭವಿಷ್ಯತಸ್ತಸ್ಯಪುರಸ್ಸರಾಣಿ || ೨ ||

ತ್ವಕ್‌ಸ್ಫೋಟನವೆಂದರೆ ಮೈಯ್ಯಿ ಒರಟಾಗಿ ಕೊಂಚ ಒಡೆಯುವುದು, ಯಾವಾಗ್ಗೂ ಜೊಲ್ಲನ್ನು ಉಗುಳುತ್ತಿರುವುದು, ಮೈನೋವು ಒಡತ ಮೊದಲಾದವುಗಳು, ಕಣ್ಣಿನಸುತ್ತಲೂ ಊದಿಕೊಳ್ಳುವುದು, ಮಲಮೂತ್ರಗಳು ಹಳದಿಬಣ್ಣಕ್ಕೆ ಬರುವುದು, ತಿಂದದ್ದು ಜೀರ್ಣವಾಗುವುದಕ್ಕಿಲ್ಲ; ಇವುಗಳೆಲ್ಲಾ ಪಾಂಡುರೋಗವು ಹುಟ್ಟುವ ಪೂರ್ವದಲ್ಲಿ ಕಾಣಿಸಿಕೊಳ್ಳತಕ್ಕ ಲಕ್ಷಣಗಳಾಗಿವೆ.

ತ್ವಙ್ಮೂತ್ರನಯನಾದೀನಾಂರೂಕ್ಷಕೃಷ್ಣಾರುಣಾಭತಾಃ ||
ವಾತಪಾಂಡ್ವಾಮಯೇತೋದಕಂಪಾನಾಹಭ್ರಮಾದಯಃ || ೪ ||

ವಾತಪ್ರಕೋಪಜನ್ಯವಾದ ಪಾಂಡುರೋಗದ ಲಕ್ಷಣವನ್ನು ಹೇಳುತ್ತಾನೆ. ಚರ್ಮ, ರೋಗಿಯ ಮೂತ್ರ, ರೋಗಿಯ ಕಣ್ಣುಗಳು, ಇವುಗಳು ಕ್ರಮವಾಗಿ ರೂಕ್ಷ ಅಂದರೆ ಒರಟಾಗುವುದು, ಮೂತ್ರವು ಕಪ್ಪಾಗುವುದು, ಕಣ್ಣುಗಳು ಕೆಂಪಾಗುವುದು, ಮೈಕಡತ, ಮೈನಡುಕ, ವೈಯ್ಯೂದುವುದು, ಬುದ್ಧಿಭ್ರಮವಾಗುವುದು ಇವುಗಳೆಲ್ಲಾ ಲಕ್ಷಣಗಳು.

ಪೀತಮೂತ್ರಶಕೃನ್ನೇತ್ರೋದಾಹತೃಷ್ಣಾಜ್ವರಾನ್ವಿತಃ ||
ಭಿನ್ನವಿಟ್ಕೋತಿಪೀತಾಭಃಪಿತ್ತಪಾಂಡ್ವಾಮಯೀನರಃ || ೫ ||

ಪಿತ್ತಪ್ರಕೋಪದಿಂದ ಹುಟ್ಟಿದ ಪಾಂಡುರೋಗದಲ್ಲಿ ಮಲ, ಮೂತ್ರ, ಕಣ್ಣುಗುಡ್ಡೆ ಇವುಗಳೆಲ್ಲಾ ಹಳದಿಬಣ್ಣವಾಗುವುದು, ಮೈಯ್ಯುರಿ, ಬಾಯಾರಿಕೆ, ಜ್ವರ ಇವುಗಳಿರುವುದು, ಭಿನ್ನವಿಟ್ಕಃ ಎಂದರೆ ಒಂದುವಿಧವಾದ ಅತಿಸಾರವಿರುವುದು, ರೋಗಿಯು ದಿನೇ ದಿನೇ ಹಳದೀ ಬಣ್ಣಕ್ಕೆ ಬರುತ್ತಿರುವುದು ಇವುಗಳು ತೋರುತ್ತವೆ.

ಕಫಪ್ರಸೇಕಶ್ವಯಥುತಂದ್ರಾಲಸ್ಯಾತಿಗೌರವೈಃ ||
ಪಾಂಡುರೋಗೀಕಫಾತ್ ಶುಕ್ಲೈಸ್ತ್ವಙ್ಮೂತ್ರನಯನಾನನೈಃ || ೬ ||

ಗಂಟಲಿನಲ್ಲಿ ಕಫವು ಹೆಚ್ಚಾಗುತ್ತಿರುವುದು, ಮೈಯ್ಯಲ್ಲಿ ಶೋಭೆ, ಆಕಳಿಕೆ ಬರುತ್ತಿರುವುದು, ಸೋಮಾರಿತನ, ಮೈ ಬಹು ಭಾರವಾಗುವುದು, ಮೈಚರ್ಮ, ಮೂತ್ರ, ಕಣ್ಣು, ಮುಖ ಇವುಗಳೆಲ್ಲಾ ಬೆಳ್ಳಗಾಗಿ ಹೋಗುವುದು ಇವುಗಳು ಶ್ಲೇಷ್ಮಪ್ರ

ಕೋಪಜನ್ಯವಾದ ಪಾಂಡುರೋಗದ ಲಕ್ಷಣಗಳು.

ಜ್ವರಾರೋಚಕಹೃಲ್ಲಾಸಛರ್ದಿತೃಷ್ಣಾಕ್ಲಮಾನ್ವಿತಃ ||
ಪಾಂಡುರೋಗೀತ್ರಿಭಿರ್ದೋಷೈಸ್ತ್ಯಾಜ್ಯಃಕ್ಷೀಣೋಹತೇಂದ್ರಿಯಃ ||

ಜ್ವರ, ಅರುಚಿ, ಬಾಯಿನೀರುಬರುತ್ತಿರುವುದು, ವಮನ, ಬಾಯಾರಿಕೆ, ಅತ್ಯಂತವಾದ ಬಳಲಿಕೆ, ಅತಿಕೃಶತ್ವ, ಇಂದ್ರಿಯಪಾಟವ ತಪ್ಪಿಹೋಗಿರುವುದು- ಹೀಗಿದ್ದಲ್ಲಿ ಪಾಂಡುರೋಗವು ತ್ರಿದೋಷಪ್ರಕೋಪಜನ್ಯವೆಂಬದಾಗಿಯೂ,ಅಸಾಧ್ಯವೆಂಬದಾಗಿಯೂ ತಿಳಿಯಬೇಕು.

ಮೃತ್ತಿಕಾದನಶೀಲಸ್ಯಕಂಪ್ಯತ್ಯನ್ಯತಮೋಮಲಃ ||
ಕಷಾಯಾಮಾರುತಂಪಿತ್ತಮೂಷರಾಮಧುರಾಃಕಫಂ || ೮ ||
ಕೋಪಯೇನ್ಮೃದ್ರಸಾದೀಂಶ್ಚರೌಕ್ಷ್ಯಾದ್ಭುಕ್ತಂಚರೂಕ್ಷಯೇತ್ ||
ಪೂರಯತ್ಯವಿಪಕ್ವೈವಸ್ರೋತಾಂಸಿನಿರುಣದ್ಧ್ಯಪಿ || ೯ ||
ಇಂದ್ರಿಯಾಣಾಂಬಲಂಹತ್ವಾತೇಜೋವೀರ್ಯೌಜಸೀತಥಾ ||
ಪಾಂಡುರೋಗಂಕರೋತ್ಯಾಶುಬಲವರ್ಣಾಗ್ನಿನಾಶನಂ || ೧೦ ||

ಮಣ್ಣನ್ನು ತಿನ್ನುಪವರಿಗೆ ತಿನ್ನತಕ್ಕ ಮಣ್ಣಿನ ರುಚಿ ಯಾವದಿರುತ್ತದೆಯೋ ಅದಕ್ಕನುಗುಣವಾಗಿ ಅಂದರೆ ಮಣ್ಣು ಕಷಾಯರಸಪ್ರಧಾನವಾಗಿದ್ದಲ್ಲಿ ವಾತವೃದ್ಧಿಮಾಡಿ ಪಾಂಡುರೋಗವನ್ನು ಹುಟ್ಟಿಸುತ್ತದೆ. ಊಷರಕ್ಷೇತ್ರದ ಮಣ್ಣೆಂದರೆ ಚೌಳುಮಣ್ಣು ತಿನ್ನುವದಿದ್ದರೆ ಅದು ಪಿತ್ತವೃದ್ಧಿಮಾಡಿ ಪಾಂಡುರೋಗವನ್ನು ಹುಟ್ಟಿಸುತ್ತದೆ. ಸೀಮಣ್ಣು ತಿನ್ನುತ್ತಿದ್ದರೆ ಕಫವನ್ನು ಪ್ರಕೋಪಪಡಿಸಿ ಪಾಂಡುರೋಗವನ್ನು ಹುಟ್ಟಿಸುತ್ತದೆ. ಈರೀತಿ ಮಣ್ಣಿಂದು ಕುಪಿತಗಳಾದ ವಾತಾದಿದೋಷಗಳು ರಸರಕ್ತಾದಿಧಾತುಗಳನ್ನು ದೋಷಯುಕ್ತವಾಗಿ ಮಾಡಿ ಹಾಳುಮಾಡುತ್ತವೆ. ಮಣ್ಣೇ ತನ್ನಲ್ಲಿರುವ ರೂಕ್ಷ ಅಂದರೆ ಒರಟು ಗುಣದಿಂದ ಭೋಜನಮಾಡಿದ ಅನ್ನವನ್ನೆಲ್ಲಾ ರೂಕ್ಷವಾಗಿಸಿ ಕೆಡಿಸಿ ಹಾಳುಮಾಡುತ್ತದೆ. ಈರೀತಿ ಕೆಟ್ಟುಹೋದ ಅನ್ನರಸವು ಆಮವಾಗಿಯೇ ರಸಾದಿಧಾತುವಾಹಿಸ್ರೋತಸ್ಸುಗಳಲ್ಲಿತುಂಬಿಕೊಂಡು ಧಾತುಗಳು ದೇಹದಲ್ಲಿ ಸಂಚರಿಸದಂತೆ ತಡೆದು ನಿಲ್ಲಿಸುತ್ತದೆ. ಇದರಿಂದ ಇಂದ್ರಿಯಗಳ ಬಲ, ಶರೀರದಕಾಂತಿ, ದೇಹದಬಲ, ಓಜಸ್ಸೆಂಬ ಶುಕ್ರಧಾತುವಿಗೆ ಜನಕವಾದ ಒಂದುಬಗೆಯ ಧಾತು, ಜಠರಾಗ್ನಿಶಕ್ತಿ ಇವುಗಳೆಲ್ಲಾ ನಾಶವಾಗಿಹೋಗಿ ಕ್ರಮವಾಗಿ ಈ ಮಣ್ಣು ತಿನ್ನೋಣವು ಪಾಂಡುರೋಗವನ್ನು ಹಿಂದೆ ಹೇಳಿದ ಕ್ರಮದಿಂದ ಹುಟ್ಟಿಸುತ್ತದೆ.

ಶೂನಾಕ್ಷಿಕೂಟಗಂಡಭ್ರೂಶ್ಶೂನಪಾನ್ನಾಭಿಮೇಹನಃ ||
ಕ್ರಿಮಿಕೋಷ್ಠೋತಿಸಾರ್ಯೇತಮಲಂಸಾಸ್ರಕ್ಕಫಾನ್ವಿತಂ || ೧೧ ||

ಮಣ್ಣನ್ನು ತಿನ್ನುವುದರಿಂದ ಹುಟ್ಟುವ ಪಾಂಡುರೋಗದಲ್ಲಿ ಕಣ್ಣುರೆಪ್ಪೆ, ಕಪಾಳ, ಹುಬ್ಬು ಇವುಗಳು ಮತ್ತು ಹೆಜ್ಜೆ, ನಾಭಿ, ಶಿಶ್ನ ಮತ್ತು ವೃಷಣ ಇವುಗಳು ಊದುವುದು, ಮಲಕೋಶದಲ್ಲಿ ಕ್ರಿಮಿಗಳು ಹೆಚ್ಚಿ ರಕ್ತ ಮತ್ತು ಕಫದೊಡನೆ ಯುಕ್ತವಾದ ಮಲವು ಪ್ರವೃತ್ತಿಯಾಗುತ್ತಿರುವುದು ಈ ಲಕ್ಷಣಗಳಿರುತ್ತವೆ.

ಪಾಂಡುರೋಗಶ್ಚಿರೋತ್ಪನ್ನಃಖರೀಭೂತೋನಸಿದ್ಧ್ಯತಿ ||

**ಕಾಲಪ್ರಕರ್ಷಾತ್ ಶೂನಾನಾಂಯೋವಾಪೀತಾನಿಪಶ್ಯತಿ ॥ ೧೨ ॥**
**ಬದ್ಧಾಲ್ಪವಿಟ್ ಸಹರಿತಂಸಕಫಂಯೋತಿಸಾಧ್ಯತೆ ॥**
**ದೀನಶ್ವೇತಾತಿದಿಗ್ಧಾಂಗಶ್ಛರ್ದಿಮೂರ್ಛಾತೃಷರ್ದಿತಃ ॥ ೧೩ ॥**
**ಸನಾಸ್ತ್ಯಸೃಕ್ ಕ್ಷಯಾದ್ಯಶ್ಚ ಪಾಂಡುಶ್ವೇತತ್ವಮಾಪ್ನುಯಾತ್ ॥**
**ಪಾಂಡುದಂತನಖೋಯಸ್ತು ಪಾಂಡುನೇತ್ರಶ್ಚಯೋಭವೇತ್ ॥೧೪॥**
**ಪಾಂಡುಸಂಘಾತದರ್ಶೀಚಪಾಂಡುರೋಗೀವಿನಶ್ಯತಿ ॥**
**ಅಂತೇಷು ಶೂನಂಪರಿಹೀಣಮಧ್ಯಂಮ್ಲಾನಂತಥಾಂತೇಷುತುಮಧ್ಯ ಶೂನಂ ॥**
**ಗುದೇಚಶೇಫಸ್ಯಥಮುಷ್ಕಯೋಶ್ಚ ಶೂನಂಪ್ರತಾಮ್ಯಂತಮಸಂಜ್ಞಕಲ್ಪಂ ॥**
**ವಿವರ್ಜಯೇತ್ಪಾಂಡುಕಿನಂಯಶೋರ್ಥೀತಥಾತಿಸಾರಜ್ವರಪೀಡಿತಂ ಚ ॥ ೧೫ ॥**

ಪಾಂಡುರೋಗವು ಪ್ರಾಪ್ತವಾಗಿ ಬಹಳ ದಿವಸವಾಗಿದ್ದರೆ ಅದು ಉದರವಾಗಿ ಪರಿಣಮಿಸುವದೆಂಬ ಸಂದೇಹವಿರುವುದರಿಂದ ಚಿಕಿತ್ಸೆಗೆ ಒಳಗಾಗುವುದು ಕಷ್ಟ. ಒಂದು ವೇಳೆ ಹೊಸದಾಗಿದ್ದರೂ ಶರೀರದಲ್ಲಿ ಶೋಭೆಯಿದ್ದು ರೋಗಿಯಕಣ್ಣಿಗೆ ನೋಡಿದ ವಸ್ತುವೆಲ್ಲಾ ಹಳದಿಯಬಣ್ಣವಾಗಿ ಕಾಣಿಸುತ್ತ ಹೋದಲ್ಲಿ ಅದೂನೂ ಅಸಾಧ್ಯವೆಂಬದಾಗಿಯೇ ತಿಳಿಯಬೇಕು. ಮಲಬಂಧವಿರುವುದು, ಕೊಂಚಕೊಂಚವೇ ಮಲವು ಹೊರಡುತ್ತಿರುವುದು, ಹಳದಿಬಣ್ಣವಾದ ಮತ್ತು ಕಫಮಿಶ್ರಿತವಾದ ಅತಿಸಾರವಿರುವುದು, ಹೀಗಿದ್ದರೂ ಅಸಾಧ್ಯವೆಂದೇ ತಿಳಿಯಬೇಕು. ಬಳಲಿಕೆ, ಮೈಗೆಲ್ಲಾ ಬಿಳೀ ಬಣ್ಣವನ್ನು ಬಳಿದುಕೊಂಡಿರುವಷ್ಟು ಮೈ ಬೆಳ್ಳಗಾಗಿರುವುದು, ವಮನ, ಮೂರ್ಛೆ ಇವುಗಳಿರುವುದು, ಬಾಯಾರಿಕೆಯೂ ಇದ್ದಲ್ಲಿ ಅವನೂ ಬದುಕುವದಿಲ್ಲವೆಂದೇ ತಿಳಿಯಬೇಕು. ದೇಹದಲ್ಲಿರುವ ರಕ್ತಧಾತುವೆಲ್ಲಾ ಕ್ಷಯಿಸಿ ಬೆಳ್ಳಗಾದ ಪಾಂಡುರೋಗಿಯು ಬದುಕಲಾರ. ಪಾಂಡುರೋಗಿಯ ಹಲ್ಲುಗಳು, ಉಗುರುಗಳು, ಕಣ್ಣುಗಳು ಇವುಗಳೆಲ್ಲಾ ಪಾಂಡುವರ್ಣವಾಗಿರುವುದು, ನೋಡಿದ ವಸ್ತುಗಳೆಲ್ಲಾ ಪಾಂಡುವರ್ಣವಾಗಿಯೇ ಕಾಣುತ್ತಿರುವುದು ಹೀಗಿದ್ದಲ್ಲೂ ಅಂತಹ ಪಾಂಡುರೋಗಿಯು ಬದುಕಲಾರನೆಂದು ತಿಳಿಯಬೇಕು. ಕೈಯ್ಯಿ, ಕಾಲು, ಮತ್ತು ತಲೆ ಇವುಗಳಲ್ಲಿ ಶೋಭೆಯಿದ್ದು ಶರೀರವೆಲ್ಲಾ ಕೃಶವಾಗಿದ್ದರೂ, ಇದಕ್ಕೆ ವಿಪರೀತವಾಗಿ ಕೈಕಾಲು ತಲೆಗಳೆಲ್ಲಾ ಬತ್ತಿದ್ದು ಶರೀರವೆಲ್ಲಾ ಬಾತಿದ್ದರೂ, ಗುದ, ಶಿಶ್ನ, ವೃಷಣ ಇವುಗಳು ಬಾತು ಸಂಕಟ ಹೆಚ್ಚಾಗಿದ್ದು, ಮನುಷ್ಯನು ಸಂಕಟತಾಳಲಾರದೆ ಮೃತಪ್ರಾಯನಾಗಿದ್ದು, ಅತಿಸಾರ ಮತ್ತು ಜ್ವರಗಳಿದ್ದರೆ ಯಶಸ್ಸನ್ನು ಅಪೇಕ್ಷಿಸತಕ್ಕ ಮನುಷ್ಯನು ಅಂತಹ ಪಾಂಡುರೋಗಿಗೆ ಚಿಕಿತ್ಸೆಮಾಡುವ ಪ್ರಯತ್ನಮಾಡಬಾರದು. ಅಸಾಧ್ಯವೆಂಬುದಿಷ್ಟೇ ತಾತ್ಪರ್ಯ.

**ಪಾಂಡುರೋಗೀತುಯೋತ್ಯರ್ಥಂಪಿತ್ತಲಾನಿನಿಷೇವತೆ ॥**
**ತಸ್ಯಪಿತ್ತಮಸೃಜ್ಮಾಂಸಂದಗ್ಧ್ವಾರೋಗಾಯಕಲ್ಪತೆ ॥ ೧೬ ॥**
**ಹಾರಿದ್ರನೇತ್ರಸ್ಸಭೃಶಂಹಾರಿದ್ರತ್ವಙ್ನಖಾನನಃ ॥**

**ರಕ್ತಪೀತಶಕೃನ್ಮೂತ್ರೋಭೇಕವರ್ಣೋಹತೇಂದ್ರಿಯಃ ॥ ೧೭ ॥**
**ದಾಹಾವಿಪಾಕದೌರ್ಬಲ್ಯಸದನಾರುಚಿಕರ್ಷಿತಃ ॥**

ಪಾಂಡುರೋಗವಿರುವ ಮನುಷ್ಯನು ಪಿತ್ತವರ್ಧಕಗಳಾದ ಪದಾರ್ಥಗಳನ್ನು ಸೇವಿಸುತ್ತಬಂದಲ್ಲಿ ಉದ್ರಿಕ್ತವಾದ ಪಿತ್ತವು ರಕ್ತಮಾಂಸಗಳನ್ನು "ದಗ್ಧ್ವಾ" ಅಂದರೆ ಸುಟ್ಟು ಹಾಳುಮಾಡಿ ರೋಗವನ್ನುಂಟುಮಾಡುತ್ತದೆ. ಕಣ್ಣುಗಳು, ಮೈಚರ್ಮ, ಉಗುರು ಇವುಗಳೆಲ್ಲಾ ಹಳದಿಬಣ್ಣವಾಗುತ್ತವೆ, ಮಲಮೂತ್ರಗಳು ಕೆಂಪು ಮತ್ತು ಹಳದಿಬಣ್ಣವಾಗುವುದಲ್ಲದೆ ರೋಗಿಯು ಕಪ್ಪೆಯ ವರ್ಣಕ್ಕೆ ಬಂದು ಅಂದರೆ ಮೈತುಂಬ ಹಸರು ನರಗಳು ತುಂಬಿ ಮೈ ಬೆಳ್ಳಗಾಗಿ ಇಂದ್ರಿಯಗಳ ಶಕ್ತಿ ಎಲ್ಲಾ ಕೆಟ್ಟುಹೋಗಿ ಮೈಯುರಿ, ಅಜೀರ್ಣ, ದುರ್ಬಲತ್ವ, ಅಗ್ನಿಮಾಂದ್ಯ, ಅರುಚಿ ಇವುಗಳಿಂದ ಪೀಡಿತನಾಗುತ್ತಾನೆ. ಈ ರೋಗದ ಅವಸ್ಥೆಗೆ ಕಾಮಲಾ ಎಂಬ ಹೆಸರು.

**ಕಾಮಲಾಬಹುಪಿತ್ತೈಷಾಕೋಷ್ಠಶಾಖಾಶ್ರಯಾಮತಾ ॥ ೧೮ ॥**
**ಕಾಲಾಂತರಾತ್ ಖರೀಭೂತಾಕೃಚ್ಛ್ರಾಸ್ಯಾತ್ಕುಂಭಕಾಮಲಾ ॥**

ಈ ಕಾಮಲಾರೋಗವು ಕೇವಲ ಪಿತ್ತಪ್ರಚುರವಾಗಿ ಕೋಷ್ಠ ಮತ್ತು ಶಾಖೆಗಳನ್ನಾಶ್ರಯಿಸಿಕೊಂಡಿರುತ್ತದೆ. ಇದನ್ನು ಸ್ವಲ್ಪಕಾಲ ಚಿಕಿತ್ಸೆ ಮಾಡದೆ ಉಪೇಕ್ಷೆ ಮಾಡಿದರೆ ಬಹಳ ಬಲಿತುಹೋಗಿ ಕಷ್ಟಸಾಧ್ಯವಾದ ಕುಂಭಕಾಮಲಾ ಎಂಬ ರೋಗವಾಗಿ ಪರಿಣಮಿಸುತ್ತದೆ.

**ಕೃಷ್ಣಪೀತಶಕೃನ್ಮೂತ್ರೋಭೃಶಂಶೂನಶ್ಚಮಾನವಃ ॥ ೧೯ ॥**
**ಸರಕ್ತಾಕ್ಷಿಮುಖಚ್ಛರ್ದಿವಿಣ್ಮೂತ್ರೋಯಶ್ಚತಾಮ್ಯತಿ ॥**
**ದಾಹಾರುಚಿತೃಡಾನಾಹತಂದ್ರಾಮೋಹಸಮನ್ವಿತಃ ॥ ೨೦ ॥**
**ನಷ್ಟಾಗ್ನಿಸಂಜ್ಞಃಕ್ಷಿಪ್ರಂಹಿಕಾಮಲಾವಾನ್ವಿಪದ್ಯತೆ ॥**

ಕಪ್ಪಗೆ ಮತ್ತು ಹಳದಿ ಬಣ್ಣವಾದ ಮಲಮೂತ್ರಗಳುಳ್ಳ ಅತಿಯಾಗಿ ಊದಿರುವ ಮತ್ತು ಕಣ್ಣು ಮೂಗುಗಳಲ್ಲಿ ರಕ್ತಸ್ರಾವವಿರುವ, ವಮನ ಮತ್ತು ಮೂತ್ರಗಳಲ್ಲಿ ಸಹಾ ರಕ್ತ ಹೋಗುತ್ತಿರುವ, ಬಹಳ ಸಂಕಟವಿರುವ, ಮೈಯುರಿ, ಅರುಚಿ, ಬಾಯಾರಿಕೆ, ಹೊಟ್ಟೆಯುಬ್ಬರ, ಆಕಳಿಕೆ, ಅಜ್ಞಾನ ಇವುಗಳುಳ್ಳ, ಅಗ್ನಿಪಾಟವಶೂನ್ಯನಾದ ಮತ್ತು ಜ್ಞಾನಶಕ್ತಿಯೂ ನಾಶಹೊಂದಿದ ಕಾಮಲಾರೋಗಿಯು ಸಾಯುತ್ತಾನೆ.

**ಛರ್ದ್ಯರೋಚಕಹೃಲ್ಲಾಸಜ್ವರಕ್ಲಮನಿಪೀಡಿತಃ ॥ ೨೧ ॥**
**ನಶ್ಯತಿಶ್ವಾಸಕಾಸಾರ್ತೋವಿಡ್ಭೇದೀಕುಂಭಕಾಮಲೀ ॥**

ಕುಂಭಕಾಮಲಾರೋಗದ ಅಸಾಧ್ಯ ಲಕ್ಷಣವನ್ನು ಹೇಳುತ್ತಾನೆ. ವಮನ, ಅರುಚಿ, ಬಾಯಿನೀರುಬರುವುದು, ಜ್ವರ, ಬಳಲಿಕೆ, ಉಬ್ಬಸ, ಕೆಮ್ಮು, ಅತಿಸಾರ ಇವುಗಳು ಇದ್ದರೆ ಕುಂಭಕಾಮಲಾರೋಗವು ಅಸಾಧ್ಯವೆಂದು ತಿಳಿಯಬೇಕು.

**ಯದಾತುಪಾಂಡೋರ್ವರ್ಣಸ್ಸ್ಯಾದ್ಧರಿತಶ್ಯಾವಪೀತಕಃ ॥ ೨೨ ॥**
**ಬಲೋತ್ಸಾಹಕ್ಷಯಸ್ತಂದ್ರಾಮಂದಾಗ್ನಿತ್ವಂಮೃದುಜ್ವರಃ ॥**
**ಸ್ತ್ರೀಷ್ವಹರ್ಷೋಂಗಮರ್ದಶ್ಚದಾಹಸ್ತೃಷ್ಣಾರುಚಿಭ್ರಮಃ ॥೨೩॥**
**ಹಲೀಮಕಂತದಾತಸ್ಯವಿದ್ಯಾದನಿಲಪಿತ್ತತಃ ॥**

ಹಲೀಮಕವೆಂಬ ಪಾಂಡುರೋಗ ವಿಶೇಷವನ್ನು ಹೇಳುತ್ತಾನೆ. ಪಾಂಡುರೋಗಿಯಾದವನ ದೇಹದ ವರ್ಣವು ಹಸುರು, ಧೂಮ್ರ, ಹಳದಿ ಈ ಬಣ್ಣಗಳಿಗೆ ತಿರುಗುತ್ತದೋ, ಉತ್ಸಾಹ ಮತ್ತು ದೇಹಬಲಗಳು ಕ್ಷಯಿಸುತ್ತ ಹೋಗುತ್ತವೋ, ಸ್ತ್ರೀಸಂಸರ್ಗದಲ್ಲಿ ಆಸೆ ತಪ್ಪುತ್ತದೋ, ಮೈನೋವು, ಮೈಯ್ಯುರಿ, ಬಾಯಾರಿಕೆ, ಅರುಚಿ, ಬುದ್ಧಿಭ್ರಮಣೆ ಇವುಗಳಿರುತ್ತವೋ ಆಗ್ಗೆ ಪಾಂಡುರೋಗವೇ ವಾತ ಮತ್ತು ಪಿತ್ತ ಪ್ರಕೋಪದಿಂದ ಹುಟ್ಟತಕ್ಕ ಹಲೀಮಕವೆಂಬ ರೋಗವಾಗಿ ಪರಿಣಮಿಸಿತೆಂದು ತಿಳಿಯಬೇಕು.

† ಇಲ್ಲಿಗೆ ಪಾಂಡುರೋಗನಿದಾನ ಸಂಪೂರ್ಣ. †

## —: ರಕ್ತಪಿತ್ತನಿದಾನ. :—

ಘರ್ಮವ್ಯಾಯಾಮಶೋಕಾಧ್ವವ್ಯವಾಯೈರತಿಸೇವಿತೈಃ ॥
ತೀಕ್ಷ್ಣೋಷ್ಣಕ್ಷಾರಲವಣೈರಮ್ಲೈಃಕಟುಭಿರೇವಚ ॥ ೧ ॥
ಪಿತ್ತಂವಿದಗ್ಧಂಸ್ವಗುಣೈರ್ವಿದಹತ್ಯಾಶುಶೋಣಿತಂ ॥
ತತಃಪ್ರವರ್ತತೇರಕ್ತಮೂರ್ಧ್ವಂಚಾಧೋದ್ವಿಧಾಪಿವಾ ॥ ೨ ॥
ಊರ್ಧ್ವಂನಾಸಾಕ್ಷಿಕರ್ಣಾಸ್ಯೈರ್ಮೇಢ್ರಯೋನಿಗುದೈರಧಃ ॥
ಕುಪಿತಂರೋಮಕೂಪೈಶ್ಚಸಮಸ್ತೈಸ್ತತ್ಪ್ರವರ್ತತೆ ॥ ೩ ॥

ಹೆಚ್ಚಿಗೆ ಹೊತ್ತು ಬಿಸಲಿನಲ್ಲಿರುವುದು, ಮಿತಿಮೀರಿ ವ್ಯಾಯಾಮಮಾಡುವುದು, ಅತಿಯಾಗಿ ದುಃಖಪಡುವುದು, ಹೆಚ್ಚಿಗೆ ದಾರಿನಡೆಯುವುದು, ಮಿತಿಯಿಲ್ಲದ ಸ್ತ್ರೀಸಂಗ ಇವುಗಳಿಂದಲೂ, ತೀಕ್ಷ್ಣಗಳಾದ ಪದಾರ್ಥಗಳು ಅಂದರೆ ಉಷ್ಣವೀರ್ಯಗಳಾದ ವಸ್ತುಗಳನ್ನು ಉಪಯೋಗಿಸುವುದು, ಬಿಸಿಯಾದ ಪದಾರ್ಥಗಳನ್ನು ಭೋಜನಮಾಡುವುದು, ಯವಕ್ಷಾರ, ಸರ್ಜಕ್ಷಾರ ಮೊದಲಾದ ಕ್ಷಾರಗಳನ್ನು ಅತಿಯಾಗಿ ಉಪಯೋಗಿಸುವುದು, ಉಪ್ಪು, ಹುಳಿ, ಕಾರ ಇವುಗಳನ್ನು ಹೆಚ್ಚಾಗಿ ಉಪಯೋಗಿಸೋಣದರಿಂದಲೂ, ದೇಹಗತವಾದ ಪಿತ್ತವು ವಿದಗ್ಧಾವಸ್ಥೆಗೆ ಬಂದು ಅಂದರೆ ಕಟುಪಾಕಾವಸ್ಥೆಗೆ ಬಂದು ಸ್ವಗತಗಳಾದ ತೀಕ್ಷ್ಣತ್ವ ದ್ರವತ್ವಾದಿಗುಣಗಳಿಂದ ರಕ್ತವನ್ನು ಸಹ ದೂಷಿತವಾಗುವಂತೆ ಮಾಡುತ್ತದೆ. ದುಷ್ಟವಾದ ರಕ್ತವು ಊರ್ಧ್ವದ್ವಾರಗಳಾದ ಕಣ್ಣು, ಮೂಗು, ಕಿವಿ, ಬಾಯಿ ಇವುಗಳಿಂದಲೂ, ಅಧೋದ್ವಾರಗಳಾದ ಶಿಶ್ನ, ಯೋನಿ, ಗುದ ಇವುಗಳಿಂದಲೂ, ಈ ಉಭಯಮಾರ್ಗಗಳ ಮಧ್ಯೆ ಕೆಲವುವೇಳೆ ಒಂದೊಂದೇ ಮಾರ್ಗಗಳಿಂದಲೂ, ಕೆಲವುವೇಳೆ ಎರಡುಮಾರ್ಗಗಳಿಂದಲೂ ಹೊರಡುವುದಲ್ಲದೆ ಪ್ರಕುಪಿತವಾದ ರಕ್ತವು ಕೆಲವುವೇಳೆ ದೇಹಾದ್ಯಂತವಲ್ಲಿಯೂ ಇರುವ ರೋಮಕೂಪಗಳಿಂದಲೂ ಹೊರಡುತ್ತದೆ.

ಸದನಂಶೀತಕಾಮಿತ್ವಂಕಂಠಧೂಮಾಯನಂವಮಿಃ ॥
ಲೋಹಗಂಧಿಶ್ಚನಿಶ್ವಾಸೋಭವತ್ಯಸ್ಮಿನ್‌ಭವಿಷ್ಯತಿ ॥ ೪ ॥

ಅವಯವಗಳಲ್ಲಿ ಶಳತ, ಯಾವಾಗಲೂ ತಣ್ಣಗಿರುವ ಪದಾರ್ಥಗಳು ಮತ್ತು ಶೀತವೀರ್ಯಗಳಾದ ಪದಾರ್ಥಗಳು ಇಂತವುಗಳ ಮೇಲೆಯೇ ಅಪೇಕ್ಷೆ, ರೋಗದ ಸ್ವಭಾವದಿಂದ ಗಂಟಲಿನಲ್ಲಿ ಹೊಗೆ ಹೊರಡುವಂತೆ ಮನಸ್ಸಿಗೆ ತೋರುತ್ತಿರುವುದು, ವಮನವಾ

ಗುವುದು, ರೋಗಿಯ ಉಸಿರನ್ನು ಇತರರು ಆಘ್ರಾಣಿಸಿದರೆ ಕಬ್ಬಿಣದವಾಸನೆ ತೋರುವು ದು ಇವುಗಳು ಈ ರಕ್ತಪಿತ್ತರೋಗವು ಹುಟ್ಟುವ ಮೊದಲು ಕಾಣುವ ಲಕ್ಷಣಗಳು.

ಸಾಂದ್ರಂಸಪಾಂಡುಸಸ್ನೇಹಂಪಿಚ್ಛಿಲಂಚಕಫಾನ್ವಿತಂ ||
ಶ್ಯಾವಾರುಣಂಸಫೇನಂಚತನುರೂಕ್ಷಂಚವಾತಿಕಂ || ೫ ||
ರಕ್ತಪಿತ್ತಂಕಷಾಯಾಭಂಕೃಷ್ಣಂಗೋಮೂತ್ರಸನ್ನಿಭಂ ||
ಮೇಚಕಾಗಾರಧೂಮಾಭಮಂಜನಾಭಂಚಪೈತ್ತಿಕಂ || ೬ ||
ಸಂಸೃಷ್ಟಲಿಂಗಂಸಂಸರ್ಗಾತ್ರಿಲಿಂಗಂಸನ್ನಿಪಾತಿಕಂ ||

ಮೇಲೆ ಹೇಳಿದ ದ್ವಾರಗಳಿಂದ ಹೊರಬೀಳತಕ್ಕ ರಕ್ತವು ಮಂದವಾಗಿ ಕೊಂಚ ಬಿಳೀಬಣ್ಣದೊಡನೆ ಕೂಡಿ, ಜಿಡ್ಡಿನಿಂದ ಯುಕ್ತವಾಗಿ ಜಿಗಟಾಗಿದ್ದಲ್ಲಿ ಕಫದೋಷಯುಕ್ತವಾದ ರಕ್ತಪಿತ್ತವೆಂಬುದಾಗಿಯೂ, ಹೊಗೆಯಬಣ್ಣದಿಂದ ಮಿಶ್ರಿತವಾದ ಕೆಂಪುಬಣ್ಣ ಮತ್ತು ನೊರೆಯಿಂದ ಕೂಡಿ ಸ್ವಾಭಾವಿಕಸ್ಥಿತಿಗಿಂತ ನೀರಾಗಿ, ರೂಕ್ಷಗುಣವುಳ್ಳದಾಗಿ ಅಂದರೆ ಸ್ವಲ್ಪವೂ ಜಿಡ್ಡಿಲ್ಲದೆ ರಕ್ತವು ಹೊರಬೀಳುತ್ತಿದ್ದರೆ ವಾತಪ್ರಕೋಪಜನ್ಯವಾದ ರಕ್ತಪಿತ್ತವೆಂಬದಾಗಿಯೂ, ಕಷಾಯಗಳ ಬಣ್ಣ, ಕಪ್ಪುಬಣ್ಣ ಅಥವಾ ಗೋಮೂತ್ರದ ಬಣ್ಣ, ಶ್ಯಾಮಲವರ್ಣ, ಅಡಿಗೆಯ ಮನೆಯ ಇಲ್ಲಣದ ಬಣ್ಣ, ಕಾಡಿಗೆಯ ಬಣ್ಣ ಈ ಬಣ್ಣಗಳಿಂದ ಯುಕ್ತವಾದ ರಕ್ತವು ಹೊರಬೀಳುತ್ತಿದ್ದರೆ ಪಿತ್ತಪ್ರಧಾನವಾದ ರಕ್ತಪಿತ್ತವೆಂಬದಾಗಿಯೂ ತಿಳಿಯಬೇಕು. ಮೇಲೆ ಹೇಳಿದ ವಾತ ಪಿತ್ತಾದಿ ಮಿಶ್ರಿತ ರಕ್ತಪಿತ್ತದ ಲಕ್ಷಣಗಳ ಮಧ್ಯದಲ್ಲಿ ಎರಡೆರಡು ದೋಷಗಳ ಲಕ್ಷಣಗಳು ಕೂಡಿಕೊಂಡಿರುವ ಚಿಹ್ನೆಗಳು ಕಂಡರೆ ರೋಗವು ದ್ವಿದೋಷೋಲ್ಬಣವೆಂಬದಾಗಿಯೂ, ಮೂರುದೋಷಗಳ ಲಕ್ಷಣಗಳೂ ಕೂಡಿ ಕಂಡುಬಂದಲ್ಲಿ ಸನ್ನಿಪಾತಜನ್ಯ ರಕ್ತಪಿತ್ತರೋಗವೆಂಬದಾಗಿಯೂ ನಿಶ್ಚಯಿಸಬೇಕು.

ಊರ್ಧ್ವಗಂಕಫಸಂಸೃಷ್ಟಮಧೋಗಂಪವನಾನುಗಂ || ೭ ||
ದ್ವಿಮಾರ್ಗಂಕಫವಾತಾಭ್ಯಾಮುಭಾಭ್ಯಾಮನುವರ್ತತೆ ||

ಈ ರಕ್ತಪಿತ್ತದಲ್ಲಿ ಹಿಂದೆ ಹೇಳಿದ ಲಕ್ಷಣಗಳಲ್ಲದೆ ಬೇರೇ ಲಕ್ಷಣಗಳಿಂದಲೂ ದೋಷಸಂಬಂಧವನ್ನು ನಿಶ್ಚಯಿಸಬಹುದೆಂಬ ವಿಷಯವನ್ನು ಹೇಳುತ್ತಾನೆ. ರಕ್ತವು ಊರ್ಧ್ವಮಾರ್ಗಗಳಾದ ಕಣ್ಣು, ಕಿವಿ, ಮೂಗು, ಬಾಯಿಗಳಿಂದಲೇ ಹೊರಡುತ್ತಿದ್ದಲ್ಲಿ ಕಫದೋಷೋಲ್ಬಣವಾದ ರಕ್ತಪಿತ್ತವೆಂಬದಾಗಿಯೂ, ಅಧೋಮಾರ್ಗಗಳಾದ ಶಿಶ್ನ, ಯೋನಿ, ಗುದಗಳಿಂದಲೇ ಹೋಗುತ್ತಿದ್ದಲ್ಲಿ ವಾತದೋಷೋಲ್ಬಣವಾದ ರಕ್ತಪಿತ್ತವೆಂಬದಾಗಿಯೂ, ಊರ್ಧ್ವ ಮತ್ತು ಅಧೋದ್ವಾರಗಳೆರಡರಲ್ಲಿಯೂ ಹೊರಡುತ್ತಿದ್ದಲ್ಲಿ ದ್ವಿದೋಷ ಅಂದರೆ ಕಫ ಮತ್ತು ವಾತ ಎರಡರ ಸಂಪರ್ಕದಿಂದಲೂ ಹುಟ್ಟಿದ ರಕ್ತಪಿತ್ತರೋಗವೆಂಬದಾಗಿಯೂ ತಿಳಿಯಬೇಕು.

ಊರ್ಧ್ವಂಸಾಧ್ಯಮಧೋಯಾಪ್ಯಮಸಾಧ್ಯಂಯುಗಪದ್ಗತಂ || ೮ ||

ಮಾರ್ಗಾನುರೋಧೇನ ರೋಗದ ಸಾಧ್ಯಾಸಾಧ್ಯತ್ವವನ್ನು ಹೇಳುತ್ತಾನೆ. ಊರ್ಧ್ವಮಾರ್ಗದಿಂದ ಹೊರಡತಕ್ಕ ರಕ್ತವುಳ್ಳ ರಕ್ತಪಿತ್ತರೋಗವು ಚಿಕಿತ್ಸೆಗೆ ಸಾಧ್ಯವೆಂಬದಾಗಿಯೂ, ಅಧೋಮಾರ್ಗದಿಂದ ಹೊರಡುವ ರಕ್ತಪಿತ್ತರೋಗವು ಯಾಪ್ಯವೆಂದರೆ ಕಾ

ಲಹರಣವಾಗತಕ್ಕದ್ದೆಂಬದಾಗಿಯೂ, ಊರ್ಧ್ವದ್ವಾರ ಮತ್ತು ಅಧೋದ್ವಾರ ಈ ಎರಡ ರಿಂದಲೂ ಹೊರಡತಕ್ಕ ರಕ್ತಪಿತ್ತರೋಗವು ಚಿಕಿತ್ಸೆಗೆ ಅಸಾಧ್ಯವೆಂಬದಾಗಿಯೂ ನಿಶ್ಚ ಯಿಸಿಕೊಳ್ಳಬೇಕು.

**ಏಕಮಾರ್ಗಂಬಲವತೋನಾತಿವೇಗಂನವೋತ್ಥಿತಂ ||**
**ರಕ್ತಪಿತ್ತಂಸುಖೇಕಾಲೇಸಾಧ್ಯಂಸ್ಯಾನ್ನಿರುಪದ್ರವಂ || ೯ ||**

ರೋಗಿಗೆ ದೇಹಬಲ ಚೆನ್ನಾಗಿರಬೇಕು. ರಕ್ತವು ವೇಗವಿಲ್ಲದೆ ಊರ್ಧ್ವಾಧೋ ಮಾರ್ಗಗಳ ನಡುವೆ ಯಾವುದಾದರೂ ಒಂದೇ ಮಾರ್ಗದಿಂದ ಹೊರಡುತ್ತಿರಬೇಕು, ಮತ್ತು ರೋಗವು ಹೊಸದಾಗಿರಬೇಕು, ದೇಶಕಾಲಗಳು,ವಾಯುಗುಣ ಸಹ ಔಷಧ ಪ್ರ ಯೋಗಕ್ಕೆ ಅನುಕೂಲವಾಗಿರಬೇಕು, ರಕ್ತಪಿತ್ತದ ಉಪರೋಗಗಳು ಯಾವವೂ ಹುಟ್ಟಿ ರಬಾರದು; ಹೀಗಿದ್ದರೆ ಮಾತ್ರ ರಕ್ತಪಿತ್ತರೋಗವು ಸಾಧ್ಯವೆಂದು ನಿಶ್ಚಯಿಸಬೇಕು.

**ಏಕದೋಷಾನುಗಂಸಾಧ್ಯಂದ್ವಿದೋಷಂಯಾಪ್ಯಮುಚ್ಯತೆ ||**
**ಯತ್ರಿದೋಷಮಸಾಧ್ಯಂಸ್ಯಾನ್ಮಂದಾಗ್ನೇರತಿವೇಗವತ್ || ೧೦ ||**
**ವ್ಯಾಧಿಭಿಃಕ್ಷೀಣದೇಹಸ್ಯವೃದ್ಧಸ್ಯಾನಶ್ನತಶ್ಚಯತ್ ||**

ಪ್ರಕಾರಾಂತರದಿಂದ ಸಹ ಈ ರಕ್ತಪಿತ್ತರೋಗದ ಸಾಧ್ಯಾಸಾಧ್ಯತ್ವವನ್ನು ನಿರ್ಣಯಿಸುತ್ತಾನೆ. ವಾತ, ಪಿತ್ತ, ಕಫಗಳ ನಡುವೆ ಒಂದೇ ದೋಷವು ಪ್ರಧಾನವಾಗಿ ಹುಟ್ಟತಕ್ಕ ರಕ್ತಪಿತ್ತರೋಗವು ಸಾಧ್ಯವೆಂಬದಾಗಿಯೂ, ಎರಡುದೋಷಗಳು ಪ್ರಧಾನ ವಾಗಿ ಹುಟ್ಟತಕ್ಕ ರಕ್ತಪಿತ್ತರೋಗವು ಯಾಪ್ಯ ಅಂದರೆ ಕಾಲಹರಣವಾಗತಕ್ಕದ್ದೆಂಬ ದಾಗಿಯೂ, ತ್ರಿದೋಷೋಲ್ಬಣವಾದ ರಕ್ತಪಿತ್ತವು ಅತಿವೇಗವಾಗಿದ್ದು ರೋಗಿಗೆ ಅಗ್ನಿ ಮಾಂದ್ಯವೂ ಇದ್ದಲ್ಲಿ ಅಸಾಧ್ಯವೆಂಬದಾಗಿಯೂ ತಿಳಿಯಬೇಕು. ದೇಹವು ಕೃಶವಾಗಿ ಕ್ಷಯಿಸಿಹೋಗಿರುವುದು, ರೋಗಿಯು ಮುದುಕನಾಗಿರುವುದು, ಆಹಾರವು ಸರಿಯಾಗಿ ಹೋಗದಿರುವುದು ಹೀಗಿದ್ದರೂ ರಕ್ತಪಿತ್ತರೋಗವು ಅಸಾಧ್ಯವೆಂದೇ ತಿಳಿಯಬೇಕು.

**ದೌರ್ಬಲ್ಯಶ್ವಾಸಕಾಸಜ್ವರವಮಥುಮದಾಃ**
**ಪಾಂಡುತಾದಾಹಮೂರ್ಚ್ಛಾಭುಕ್ತೇಘೋರೋವಿದಾಹ**
**ಸ್ತ್ವಧೃತಿರಪಿಸದಾಹೃದ್ಯತುಲ್ಯಾಚಪೀಡಾ ||**
**ತೃಷ್ಣಾಕೋಷ್ಠಸ್ಯಭೇದಶ್ಶಿರಸಿಚತಪನಂ**
**ಪೂತಿನಿಷ್ಠೀವನತ್ವಂಭಕ್ತದ್ವೇಷಾವಿಪಾಕೌ**
**ವಿಕೃತಿರಪಿಭವೇದ್ರಕ್ತಪಿತ್ತೋಪಸರ್ಗಾತ್ || ೧೧ ||**

ರಕ್ತಪಿತ್ತರೋಗದ ಉಪದ್ರವಗಳು ( ಉಪರೋಗಗಳು ) ಯಾವುವೆಂದರೆ, ಶಕ್ತಿಕಡಮೆಯಾಗಿ ಹೋಗುವುದು, ಉಬ್ಬಸ, ಕೆಮ್ಮು, ಜ್ವರ, ವಮನ, ಮದ ಎಂದರೆ ಮೈಕ ಎಂಬ ಒಂದು ವಿಧವಾದ ಅಜ್ಞಾನ, ರಕ್ತವು ಶೋಷಿಸಿಹೋಗಿ ಮೈ ಬೆಳ್ಳಗಾಗು ವುದು, ಸರ್ವಾಂಗವೂ ಬೆಂಕಿಯಸ್ಪರ್ಶವಾದಂತೆ ಉರಿಯುತ್ತಿರುವುದು, ಮೂರ್ಛೆಪ್ರಾ ಪ್ತವಾಗುವುದು, ಭೋಜನಮಾಡಿದರೆ ಮೈಯ್ಯೆಲ್ಲೆಲ್ಲಾ ಉರಿ ಮತ್ತು ತೊಂದರೆ ಸಹ ಉಂಟಾಗುವುದು, ಯಾವಾಗಲೂ ಯಾವ ಕೆಲಸದಲ್ಲಿಯೂ ಮನಸ್ಸಿಗೆ ಒಂದುವಿಧವಾದ ಅಧೈರ್ಯವೇ ತೋರುತ್ತಿರುವುದು, ಹೃದಯದಲ್ಲಿ ಹೇಳುವುದಕ್ಕಾಗದಂತಹ ಒಂದು ಸಂಕ

ಟ, ಬಾಯಾರಿಕೆಯಾಗುತ್ತಿರುವುದು, ಆಗಾಗ್ಗೆ ಮಲಪ್ರವೃತ್ತಿಯಾಗುತ್ತಿರುವುದು, ತಲೆಯಲ್ಲಿ ತಾಪ ಅಂದರೆ ಉರಿ ಇರುವುದು, ಉಗುಳಿದರೆ ಉಗುಳು ದುರ್ವಾಸನೆಯಿರುವುದು, ಅನ್ನದಲ್ಲಿ ದ್ವೇಷಬರುವುದು ಮತ್ತು ಅನ್ನವು ಜೀರ್ಣಕ್ಕೆ ಬರುವುದೇ ಇಲ್ಲ, ಈ ಉಪದ್ರವಗಳಲ್ಲದೆ ಮುಂದಲ ಶ್ಲೋಕದಲ್ಲಿ ಹೇಳುವ ವಿಕಾರಗಳು ಸಹ ರಕ್ತಪಿತ್ತರೋಗದಿಂದ ಉಂಟಾಗುತ್ತವೆ.

ಮಾಂಸಪ್ರಕ್ಷಾಳನಾಭಂಕ್ವಥಿತಮಿವಚಯ
ತ್ಕರ್ದಮಾಂಭೋನಿಭಂವಾಮೇದಃಪೂಯಾಸ್ರಕಲ್ಪಂ
ಯಕೃದಿವಯದಿವಾಪಕ್ವಜಂಬೂಫಲಾಭಂ ||
ಯತ್ಕೃಷ್ಣಂಯಚ್ಚನೀಲಂಭೃಶಮತಿಕುಣಪಂ
ಯತ್ರಚೋಕ್ತಾವಿಕಾರಾಸ್ತದ್ವರ್ಜ್ಯಂರಕ್ತಪಿತ್ತಂ
ಸುರಪತಿಧನುಷಾಯಚ್ಚತುಲ್ಯಂವಿಭಾತಿ || ೧೨ ||

ಈ ರಕ್ತಪಿತ್ತರೋಗದ ಅಸಾಧ್ಯಲಕ್ಷಣಗಳನ್ನು ಹೇಳುತ್ತಾನೆ. ರಕ್ತಪಿತ್ತರೋಗವು ಊರ್ಧ್ವಾಧೋದ್ವಾರಗಳಿಂದ ಹೊರಕ್ಕೆ ಹೊರಡುವ ರಕ್ತವು ಮಾಂಸವನ್ನು ತೊಳೆದ ನೀರಿನಂತಿರುವುದು, ಯಾವುದಾದರೂ ಪದಾರ್ಥವನ್ನು ಕುದಿಸಿದ ನೀರಿನಂತಿರುವುದು, ಮೃಗಗಳ ಕೊಬ್ಬಿನಂತಿರುವುದು, ಕೆಸರುನೀರಿನಂತಿರುವುದು, ಮೇದಸ್ಸಿನಂತಿರುವುದು, ಕೀವಿನಂತಿರುವುದು, ಕೆಂಪಾಗಿ ರಕ್ತದಹಾಗೆಯೇ ಕಾಣುತ್ತಿರುವುದು, ಮಾಂಸಖಂಡದ ಹಾಗೆ ಗಟ್ಟಿಯಾದ ವಸ್ತುಗಳಿಂದ ಕೂಡಿಯೂ ಇರುವುದು, ಪಕ್ವವಾದ ನೇರಲಹಣ್ಣಿನ ಬಣ್ಣದಿಂದ ಕೂಡಿಕೊಂಡಿರುವುದು, ಶುದ್ಧವಾದ ಕಪ್ಪುಬಣ್ಣದಿಂದಲೇ ಕೂಡಿಕೊಂಡಿರುವುದು, ನೀಲೀಬಣ್ಣವಾಗಿರುವುದು, ಹೆಣದ ವಾಸನೆಯಿಂದಕೂಡಿದ್ದಾಗಿರುವುದು, ಕಾಮನಬಿಲ್ಲಿನ ಬಣ್ಣದಂತೆ ನಾನಾವರ್ಣಯುಕ್ತವಾಗಿಯೇ ರಕ್ತವು ಹೊರಬೀಳುತ್ತಿರುವುದು ಈರೀತಿಯಾಗಿ ರಕ್ತವು ಹೊರಕ್ಕೆ ಬರುತ್ತಿರುವಲ್ಲಿ ಅಂತಹ ರಕ್ತಪಿತ್ತರೋಗವು ಅಸಾಧ್ಯವೆಂದರಿತು ಚಿಕಿತ್ಸೆಮಾಡುವದನ್ನು ಬಿಟ್ಟುಬಿಡಬೇಕು.

ಯೇನಚೋಪಹತೋರಕ್ತಂರಕ್ತಪಿತ್ತೇನಮಾನವಃ ॥
ಪಶ್ಯೇದ್ದೃಶ್ಯಂವಿಯಚ್ಚಾಪಿತಚ್ಚಾಸಾಧ್ಯಮಸಂಶಯಂ ||
ಲೋಹಿತಂಛರ್ದಯೇದ್ಯಸ್ತುಬಹುಶೋಲೋಹಿತೇಕ್ಷಣಃ ॥
ಲೋಹಿತೋದ್ಗಾರದರ್ಶೀಚಮ್ರಿಯತೇರಕ್ತಪೈತ್ತಿಕಃ || ೧೪ ||

ರಕ್ತಪಿತ್ತರೋಗವುಳ್ಳ ಮನುಷ್ಯನಿಗೆ ತಾನು ಅನುಭವಿಸುತ್ತಿರುವ ರೋಗಸ್ವಭಾವದಿಂದ ನೋಡಿದ ಪದಾರ್ಥವೆಲ್ಲವೂ ರಕ್ತವರ್ಣವಾಗಿಯೇ ಕಾಣುತ್ತಿರುವುದು, ಆಕಾಶವನ್ನು ಸಹ ನೋಡಿದರೆ ಕೆಂಪಾಗಿಕಾಣುವುದು, ಅಂತಹ ಅವಸ್ಥೆಗೆ ಬಂದ ರಕ್ತಪಿತ್ತರೋಗವು ಅಸಾಧ್ಯವೆಂದು ತಿಳಿಯಬೇಕು. ಯಾವ ಮನುಷ್ಯನಿಗೆ ಈ ರಕ್ತಪಿತ್ತರೋಗದ ದೆಸೆಯಿಂದ ರಕ್ತವು ವಮನವಾಗುತ್ತಿರುವುದೋ ಕಣ್ಣುಗಳು ಕೆಂಪಗೆ ರಕ್ತವರ್ಣದಿಂದ ಕೂಡಿರುತ್ತವೆಯೋ, ತೇಗಿದರೆ ಸಹ ರಕ್ತದವಾಸನೆ, ರಕ್ತಗಳೇಹೊರಡುತ್ತಿರುತ್ತವೆಯೋ ಅಂತಹ ರಕ್ತಪಿತ್ತರೋಗಿಯೂ ಸಾಯುವುದೇ ಸರಿ.

**ಇಲ್ಲಿಗೆ ರಕ್ತಪಿತ್ತನಿದಾನ ಸಂಪೂರ್ಣ.**

## —: ರಾಜಯಕ್ಷ್ಮನಿದಾನ. :—

**ವೇಗರೋಧಾತ್ ಕ್ಷಯಾಚ್ಚೈವ ಸಾಹಸಾದ್ವಿಷಮಾಶನಾತ್ ॥**
**ತ್ರಿದೋಷೋ ಜಾಯತೇ ಯಕ್ಷ್ಮಾ ಗದೋ ಹೇತು ಚತುಷ್ಟಯಾತ್ ॥೧॥**

ರಾಜಯಕ್ಷ್ಮನಿದಾನವನ್ನು ಹೇಳಲು ಪ್ರಾರಂಭಿಸುತ್ತಾನೆ. ಮಲಮೂತ್ರಗಳ ವೇಗವನ್ನು ತಡೆಯೋಣದರಿಂದಲೂ ಅಂದರೆ ನಾಚಿಕೆ ಭಯ ಮೊದಲಾದ ಕಾರಣಗಳಿಂದ ಪ್ರಾಪ್ತವಾದ ಕಾಲದಲ್ಲಿ ಮಲಮೂತ್ರಗಳನ್ನು ವಿಸರ್ಜನೆ ಮಾಡದೆ ಇರೋಣದರಿಂದಲೂ, ಅಪಾನವಾಯುವನ್ನು ಸಹ ತಡೆಯೋಣದರಿಂದಲೂ, ಕ್ಷಯಾತ್ ಎಂದರೆ ಧಾತುಕ್ಷಯಕ್ಕೆ ಕಾರಣಗಳಾದ ಅತಿಮೈಥುನ, ಹೊಟ್ಟೆಕಿಚ್ಚುಪಡುವುದು ಈ ಕಾರಣಗಳಿಂದಲೂ, ಸಾಹಸವೆಂದರೆ ತನ್ನ ದೇಹಶಕ್ತಿಗೆ ಮೀರಿದ ಕೆಲಸವನ್ನು ಮಾಡುವುದು, ವಿಷಮಾಶನವೆಂದರೆ ಭೋಜನಪದಾರ್ಥಗಳಲ್ಲಿ ರಸವೀರ್ಯವಿಪಾಕಾದಿಗಳಿಂದ ಪರಸ್ಪರ ವಿರುದ್ಧಗಳಾದ ಪದಾರ್ಥಗಳನ್ನು ಪರಸ್ಪರ ವಿರೋಧ ಹುಟ್ಟುವಂತೆ ಕೂಡಿಸಿ ಭೋಜನಮಾಡುವುದು ಈ ನಾಲ್ಕುವಿಧವಾದ ಕಾರಣಗಳಿಂದ ತ್ರಿದೋಷಕಾರಣವಾದ ರಾಜಯಕ್ಷ್ಮರೋಗವು ಹುಟ್ಟುತ್ತದೆಂದು ತಾತ್ಪರ್ಯ.

**ಕಫಪ್ರಧಾನೈರ್ದೋಷೈಸ್ತು ರುದ್ಧೇಷು ರಸವರ್ತ್ಮಸು ॥**
**ಅತಿವ್ಯವಾಯಿನೋವಾಪಿ ಕ್ಷೀಣೇ ರೇತಸ್ಯನಂತರಾಃ ॥**
**ಕ್ಷೀಯಂತೇ ಧಾತವಸ್ಸರ್ವೇ ತತಶ್ಶುಷ್ಯತಿ ಮಾನವಃ ॥ ೨ ॥**

ಕ್ಷಯರೋಗವು ದೇಹದಲ್ಲಿ ಉತ್ಪನ್ನವಾಗತಕ್ಕ ರೀತ್ಯಂತರವನ್ನು ಸಹ ಹೇಳುತ್ತಾನೆ. ಶ್ಲೇಷ್ಮವೇ ಪ್ರಧಾನವಾದ ಇತರ ದೋಷಗಳು ಅಂದರೆ ಇತರ ದೋಷಗಳ ಪ್ರಕೋಪದ ಜೊತೆಯಲ್ಲಿ ಶ್ಲೇಷ್ಮವು ಹೆಚ್ಚಿಗೆ ಪ್ರಕುಪಿತವಾಗಿ ಶರೀರದಲ್ಲಿ ರಸರಕ್ತಾದಿಧಾತುಗಳ ಸಂಚಾರವಾಗದಂತೆ ರಸಾದಿಧಾತುವಾಹಿನಾಡಿಗಳನ್ನು ತಡದು, ಧಾತುಗಳು ಸಂಚರಿಸಿ ಶರೀರವನ್ನು ಪೋಷಣೆಮಾಡದಂತೆ ಮಾಡುವುದರಿಂದ ಕಾಲಕ್ರಮೇಣ ಧಾತು ಸಂಚಾರವು ಶರೀರದಲ್ಲಿ ನಿಂತುಹೋಗಿ ರಕ್ತ ಮಾಂಸ ಮೊದಲಾದವುಗಳು ಶೋಷಿಸಿ ಹೋಗುತ್ತವೆ. ಈ ರೀತಿಯಾಗಿ ಮನುಷ್ಯನು ಕ್ಷಯಿಸಿಹೋಗುವುದೊಂದು ವಿಧ, ಅತಿಯಾಗಿ ಸ್ತ್ರೀಸಂಗ ( ಮೈಥುನ ) ಮಾಡುವುದರಿಂದ ಶುಕ್ರಧಾತುವು ಕ್ಷಯಿಸಿ ಹೋಗುತ್ತದೆ. " ವಾಯೋರ್ಧಾತುಕ್ಷಯಾತ್ಕೋಪಃ " ಎಂಬ ಶಾಸ್ತ್ರಕ್ಕನುಗುಣವಾಗಿ ಶುಕ್ರಧಾತುಕ್ಷಯದಿಂದ ಕುಪಿತವಾದ ವಾಯುವು ಶುಕ್ರಧಾತುವಿನ ಉತ್ಪತ್ತಿಗೆ ಮೂಲಕಾರಣವಾದ ಮಜ್ಜಧಾತುವನ್ನೂ, ಮಜ್ಜಧಾತುವಿಗೆ ಆಶ್ರಯವಾಗಿ ಕಾರಣಭೂತವಾದ ಅಸ್ಥಿ, ಮೇದೋಧಾತು ಇವುಗಳನ್ನೆಲ್ಲಾ ಶೋಷಿಸಿ ಹಾಳುಮಾಡುತ್ತದೆ. ಏವಂಚ ರಸರಕ್ತಮಾಂಸಾದಿಯಾಗಿ ಉತ್ಪತ್ತಿಕ್ರಮದಿಂದಲಾಗಲಿ, ಶುಕ್ರ, ಮಜ್ಜ, ಅಸ್ಥಿ, ಮೇದಸ್ಸು ಈ ರೀತಿಯಾಗಿ ಕೊನೆಯಿಂದ ಪ್ರತಿಕೂಲಕ್ರಮದಿಂದಲಾಗಲಿ ಕ್ಷಯಿಸುತ್ತ ಬರಲಾರಂಭವಾದರೆ " ತತಶ್ಶುಷ್ಯತಿ ಮಾನವಃ " ಮನುಷ್ಯನು ಒಣಗಿಕೊಂಡು ಹೋಗುತ್ತಾನೆ.

**ಶ್ವಾಸಾಂಗಮರ್ದಕಫಸಂಸ್ರವತಾಲುಶೋಷ**
**ವಮ್ಯಗ್ನಿಸಾದಮದಪೀನಸಕಾಸನಿದ್ರಾಃ ॥**

ಶೋಷೇಭವಿಷ್ಯತಿಭವಂತಿಸಚಾಪಿಜಂತು
ಶ್ಶುಕ್ಲೇಕ್ಷಣೋಭವತಿಮಾಂಸಪರೋರಿರಂಸುಃ ॥ ೩ ॥
ಸ್ವಪ್ನೇಷುಕಾಕಶುಕಶಲ್ಲಕಿನೀಲಕಂಠಾ
ಗೃಧ್ರಾಸ್ತಥೈವಕಪಯಃಕೃಕಲಾಸಕಾಶ್ಚ ॥
ತಂವಾಹಯಂತಿಸನದೀರ್ವಿಜಲಾಶ್ಚಪಶ್ಯೇತ್
ಶುಷ್ಕಾಂಸ್ತರೂನ್ಪವನಧೂಮದವಾರ್ದಿತಾಂಶ್ಚ ॥ ೪ ॥

ಕ್ಷಯರೋಗ ಹುಟ್ಟುವುದಕ್ಕೆ ಮುಂಚಿತವಾಗಿಯೇ ತೋರತಕ್ಕ ಕೆಲವು ಲಕ್ಷಣಗಳನ್ನು ಹೇಳುತ್ತಾನೆ. ಇವುಗಳಿಗೇನೇ ಕ್ಷಯರೋಗದ ಪೂರ್ವರೂಪಗಳೆಂಬದಾಗಿಯೂ ಹೆಸರಿದೆ. ಉಬ್ಬಸ ಪ್ರಾರಂಭವಾಗುವುದು ಅಂದರೆ ಮೇಲುಬ್ಬಸ, ಯಾವಾಗಲೂ ಸಣ್ಣ ಮೈನೋವು ಇದ್ದೇಇರುವುದು, ಕಫವು ಅತಿಯಾಗಿ ವೃದ್ಧಿಯಾಗಿ ಯಾವಾಗಲೂ ಬಾಯಿಂದ ಕಫವನ್ನುಗುಳುತ್ತಲೇ ಇರುವುದು, ದಿನೇ ದಿನೇ ಮುಖ ಮತ್ತು ದವಡೆಗಳೆಲ್ಲಾ ಬತ್ತಿಹೋಗುತ್ತ ಬರುವುದು, ತಿಂದ ಆಹಾರವು ಜೀರ್ಣವಾಗದೆ ವಮನವಾಗುತ್ತಿರುವುದು, ಜಠರಾಗ್ನಿಪಾಟವವು ಕ್ರಮೇಣ ಕಡಮೆಯಾಗುತ್ತ ಬರುವುದು, ಮದ ಎಂದರೆ ಅಶಕ್ತಿಯಿಂದ ಒಂದು ಬಗೆಯ ಮಾಂದ್ಯ ಉಂಟಾಗುವುದು, ನೆಗಡಿ, ಕೆಮ್ಮು, ಅತಿನಿದ್ರೆ, ಇವುಗಳೆಲ್ಲಾ ಉಂಟಾಗುವುದು, ಶರೀರದಲ್ಲಿ ರಕ್ತವು ಕಡಮೆಯಾಗಿ ಹೋಗುವುದರಿಂದ ಕಣ್ಣಿನಲ್ಲಿ ರಕ್ತದಛಾಯೆಯು ಹೋಗಿ ಕಣ್ಣು ಬೆಳ್ಳಗೆ ಕಾಣುತ್ತ ಬರುವುದು ಮತ್ತು ಮಾಂಸಭೋಜನಮಾಡುವ ಅಪೇಕ್ಷೆ ಮತ್ತು ಮೈಥುನಾಪೇಕ್ಷೆ ಇವುಗಳು ಬೆಳೆಯುತ್ತ ಹೋಗುವುದು, ಮಲಗಿದರೆ ಸ್ವಪ್ನದಲ್ಲಿ ಕಾಗೆ, ಗಿಳಿಗಳು, ಶಲ್ಲಕಿ ಎಂದರೆ ಒಂದುಬಗೆಯ ಘಾತುಕಸ್ವಭಾವದ ಹದ್ದು, ನವಿಲು, ಸಾಮಾನ್ಯಗಳಾದ ಹದ್ದುಗಳು, ಕಪಿಗಳು, ಓತಿಕ್ಯಾತಗಳು, ಇವುಗಳು ತನ್ನನ್ನು ಹೊತ್ತುಕೊಂಡು ಹೋಗುವಂತೆ ಕಾಣುವುದು, ನೀರಿಲ್ಲದ ಹೊಳೆಗಳನ್ನು ಕಾಣುವುದು, ಒಣಗಿದ ಮರಗಳನ್ನು ಕಾಣುವುದು, ಸುಂಟರಗಾಳಿ, ಹೊಗೆ, ಕಾಡುಕಿಚ್ಚು ಇವುಗಳನ್ನು ಕಾಣುವುದು.

ಅಂಸಪಾರ್ಶ್ವಾಭಿತಾಪಶ್ಚಸಂತಾಪಃಕರಪಾದಯೋಃ ॥
ಜ್ವರಸ್ಸರ್ವಾಂಗಗಶ್ಚೇತಿಲಕ್ಷಣಂರಾಜಯಕ್ಷ್ಮಣಃ ॥ ೫ ॥

ಕ್ಷಯರೋಗದ ಸಾಮಾನ್ಯ ಲಕ್ಷಣವನ್ನು ಹೇಳುತ್ತಾನೆ. ಭುಜಗಳು, ಪಾರ್ಶ್ವಗಳು ಇವುಗಳಲ್ಲಿ ನೋವು ಮಡತ, ಅಂಗೈಯ್ಯಿ, ಅಂಗಾಲುಗಳಲ್ಲಿ ಉರಿ, ಸರ್ವಾವಯವಗಳಲ್ಲಿಯೂ ಸಣ್ಣಜ್ವರ ಯಾವಾಗ್ಲೂ ಇದ್ದೇಇರುವುದು ಇವುಗಳು ರಾಜಯಕ್ಷ್ಮವೆಂದರೆ ಕ್ಷಯರೋಗದ ಲಕ್ಷಣಗಳು.

ಸ್ವರಭೇದೋನಿಲಾತ್ ಶೂಲಂಸಂಕೋಚಶ್ಚಾಂಸಪಾರ್ಶ್ವಯೋಃ ॥
ಜ್ವರೋದಾಹೋತಿಸಾರಶ್ಚಪಿತ್ತಾದ್ರಕ್ತಸ್ಯಚಾಗಮಃ ॥ ೬ ॥
ಶಿರಸಃಪರಿಪೂರ್ಣತ್ವಮಭಕ್ತಚ್ಛಂದಏವಚ ॥
ಕಾಸಃಕಂಠಸ್ಯಚೋಧ್ವಂಸಃವಿಜ್ಞೇಯಃಕಫಕೋಪತಃ ॥ ೭ ॥

ತ್ರಿದೋಷಸನ್ನಿಪಾತದಿಂದ ಹುಟ್ಟಿತಕ್ಕ ಕ್ಷಯರೋಗದಲ್ಲಿ ಕಾಣತಕ್ಕ ಉಪದ್ರವಗಳು ಯಾವ ಯಾವ ದೋಷದಿಂದ ಹುಟ್ಟುತ್ತವೆಂಬ ವಿಷಯವನ್ನು ಪ್ರತ್ಯೇಕಿಸಿ

ತೋರಿಸುತ್ತಾನೆ. ಧ್ವನಿ ಒಡೆದುಹೋಗುವುದು, ಹೃದಯಶೂಲೆ, ಭುಜ ಮತ್ತು ಪಾರ್ಶ್ವಗಳು ಕುಗ್ಗಿಹೋಗುವುದು, ಇವುಗಳು ರೋಗಕ್ಕೆ ಕಾರಣವಾದ ತ್ರಿದೋಷಗಳ ಮಧ್ಯೆ ವಾತದಿಂದ ಹುಟ್ಟತಕ್ಕವುಗಳು; ಜ್ವರ, ಮೈಯುರಿ, ಅತಿಸಾರ, ಊರ್ಧ್ವಾಧೋದ್ವಾರಗಳಲ್ಲಿ ಯಾವುದರಿಂದಲಾದರೂ ರಕ್ತವುಹೊರಬೀಳುವುದು ಇವುಗಳು ಪಿತ್ತದಿಂದ ಹುಟ್ಟತಕ್ಕವುಗಳು; ತಲೆಯಲ್ಲಿ ಏನೋ ತುಂಬಿಕೊಂಡಹಾಗೆ ಭಾರ, ಅನ್ನದಲ್ಲಿ ರುಚಿ ತಪ್ಪುವುದು, ಕೆಮ್ಮು, ಗಂಟಲುಕೂತುಹೋಗುವುದು ಇವುಗಳು ಕಫದಿಂದ ಹುಟ್ಟತಕ್ಕವುಗಳು.

> ಏಕಾದಶಭಿರೇಭಿರ್ವಾಷಡ್ಭಿರ್ವಾಪಿಸಮನ್ವಿತಂ ||
> ಕಾಸಾತೀಸಾರಪಾರ್ಶ್ವಾರ್ತಿಸ್ವರಭೇದಾರುಚಿಜ್ವರೈಃ || ೮ ||
> ತ್ರಿಭಿರ್ವಾಪೀಡಿತಂಲಿಂಗೈಃಕಾಸಶ್ವಾಸಾಸೃಗಾಮಯೈಃ ||
> ಜಹ್ಯಾತ್ ಶೋಷಾರ್ದಿತಂಜಂತುಮಿಚ್ಛನ್ ಸುವಿಮಲಂಯಶಃ || ೯ ||
> ಸರ್ವೈರರ್ಧೈಸ್ತ್ರಿಭಿರ್ವಾಪಿಲಿಂಗೈರ್ಮಾಂಸಬಲಕ್ಷಯೇ ||
> ಯುಕ್ತೋವರ್ಜ್ಯಶ್ಚಿಕಿತ್ಸ್ಯಸ್ತುಸರ್ವರೂಪೋಪ್ಯತೋನ್ಯಥಾ ||೧೦||
> ಮಹಾಶನಂಕ್ಷೀಯಮಾಣಮತಿಸಾರನಿಪೀಡಿತಂ ||
> ಶೂನಮುಷ್ಕೋದರಂಚೈವಯಕ್ಷ್ಮಿಣಂಪರಿವರ್ಜಯೇತ್ || ೧೧ ||
> ಶುಕ್ಲಾಕ್ಷಮನ್ನದ್ವೇಷ್ಟಾರಂಊರ್ಧ್ವಶ್ವಾಸನಿಪೀಡಿತಂ ||
> ಕೃಚ್ಛ್ರೇಣಬಹುಮೇಹಂತಂಯಕ್ಷ್ಮಾಹಂತೀಹಮಾನವಂ ||೧೨||

ಚಿಕಿತ್ಸಕರ ಉಪಯೋಗಕ್ಕಾಗಿ ಕ್ಷಯರೋಗದ ಸಾಧ್ಯಾಸಾಧ್ಯತ್ವವನ್ನು ಹೇಳುತ್ತಾನೆ. ಹಿಂದಿನಶ್ಲೋಕದಲ್ಲಿ ಹೇಳಿದ ಮೂರುದೋಷಗಳ ಪ್ರತ್ಯೇಕ ಸ್ಥಿತಿಯನ್ನು ತೋರಿಸುವ ಹನ್ನೊಂದು ಲಕ್ಷಣಗಳೂ ಇದ್ದರಾಗಲಿ, ಅಥವಾ ಅದರಲ್ಲಿ ಅರ್ಧವಿದ್ದರೂ ಆಗಲಿ ಅಂದರೆ ಕೆಮ್ಮು, ಅತಿಸಾರ, ಪಾರ್ಶ್ವಗಳಲ್ಲಿ ನೋವು, ಧ್ವನಿ ಒಡೆದುಹೋಗಿರುವುದು, ಅನ್ನದಲ್ಲಿ ರುಚಿ ತಪ್ಪಿಹೋಗಿರುವುದು, ಜ್ವರ ಈ ಆರು ಇದ್ದರೂ, ಅಥವ ಕೆಮ್ಮು, ಉಬ್ಬಸ, ಊರ್ಧ್ವಾಧೋದ್ವಾರಗಳ ಮಧ್ಯೆ ಯಾವುದರಿಂದಲಾದರೂ ರಕ್ತವು ಹೋಗುವುದು, ಈ ಮೂರು ಲಕ್ಷಣಗಳಿದ್ದರೂ ಅಂತಹ ಕ್ಷಯರೋಗಿಗೆ ಯಶಸ್ಕಾಮನಾದ ವೈದ್ಯನು ಚಿಕಿತ್ಸೆಮಾಡದೆ ಬಿಟ್ಟುಬಿಡಬೇಕು. ರೋಗಿಗೆ ದೇಹಬಲ, ಮಾಂಸಬಲಗಳು, ದೇಹಪಾಟವ ಸಹ ಚೆನ್ನಾಗಿದ್ದು ಹಿಂದೆ ಹೇಳಿದ ಲಕ್ಷಣಗಳೆಲ್ಲಾ ಸಂಪೂರ್ಣವಾಗಿಯಾಗಲಿ, ಅದರಲ್ಲಿ ಅರ್ಧವಾಗಲಿ, ಅಥವಾ ಅದರಲ್ಲಿಯೇ ಅರ್ಧವಾಗಲಿ ಇದ್ದರೂ ಚಿಕಿತ್ಸೆ ಮಾಡಬಹುದು, ಆದರೆ ರೋಗಿಯ ದೇಹಮಾಂಸಬಲಗಳು ಕ್ಷಯಿಸಿಹೋಗಿದ್ದರೆ ಮಾತ್ರ ಹೇಗಿದ್ದರೂ ಚಿಕಿತ್ಸೆಮಾಡಲು ಪ್ರಯತ್ನಿಸಲೇ ಬಾರದು, ಇನ್ನೊಂದುವಿಧವಾದ ಅಸಾಧ್ಯಲಕ್ಷಣವೇನೆಂದರೆ, ಜಠರಾಗ್ನಿಪಾಟವ ಹೆಚ್ಚಾಗಿ ಅತಿಯಾಗಿ ಭೋಜನಮಾಡುತ್ತಿರುವುದು, ಅಷ್ಟು ತಿಂದರೂ ತಿಂದದ್ದು ಮೈಹತ್ತದೆ ಕ್ಷಯಿಸಿಹೋಗುತ್ತಿರುವುದು, ರೋಗಿಗೆ ಅತಿಸಾರದ ಉಪದ್ರವವಿರುವುದು, ವೃಷಣಗಳು ಮತ್ತು ಹೊಟ್ಟೆ ಇವುಗಳು ಊದಿರುವುದು, ಈ ಲಕ್ಷಣಗಳಿದ್ದಲ್ಲಿ ಅಂತಹ ಕ್ಷಯರೋಗಿಯನ್ನು ಚಿಕಿತ್ಸೆಮಾಡದೆ ಬಿಟ್ಟುಬಿಡತಕ್ಕದ್ದು. ದೇಹದಲ್ಲಿ ರಕ್ತಮಾಂಸಗಳು ಕ್ಷಯಿಸಿ ರಕ್ತಸಂಚಾರವಿಲ್ಲದೆ ಕಣ್ಣುಗಳು ಬೆಳ್ಳಗಾಗಿರುವುದು, ಅನ್ನದ್ವೇಷವಿರುವುದು, ಊರ್ಧ್ವಶ್ವಾಸವಿರುವುದು, ಮೂತ್ರ

ಪ್ರವೃತ್ತಿ ಅತಿಯಾಗಿರುವುದು ಮತ್ತು ಮೂತ್ರಹೊರಡಲು ಕಷ್ಟವೂ ಇರುವುದು, ಈ ಲಕ್ಷಣಗಳಿದ್ದರೂ ಕ್ಷಯರೋಗ ಕಷ್ಟವೆಂದೇ ತಿಳಿಯಬೇಕು.

**ಜ್ವರಾನುಬಂಧರಹಿತಂಬಲವಂತಂಕ್ರಿಯಾಸಹಂ ||**
**ಉಪಕ್ರಮೇದಾತ್ಮವಂತಂದೀಪ್ತಾಗ್ನಿವಕೃಶಂನರಂ || ೧೩ ||**

ಈ ಕ್ಷಯರೋಗವು ಹೇಗೆ ಇದ್ದರೆ ಚಿಕಿತ್ಸಾಸಾಧ್ಯವೆಂಬ ವಿಷಯವನ್ನು ಹೇಳುತ್ತಾನೆ. ಕ್ಷಯರೋಗಿಗೆ ಯಾವಾಗಲೂ ಸಣ್ಣ ಜ್ವರವಿರಬಾರದು, ದೇಹಬಲ ಚೆನ್ನಾಗಿರಬೇಕು, ಯಾವವಿಧವಾದ ಔಷಧವನ್ನು ಪ್ರಯೋಗಿಸಿದರೂ ಶರೀರ ತಡೆಯುವಂತಿರಬೇಕು. ಬುದ್ಧಿಶಕ್ತಿ ಮತ್ತು ಜ್ಞಾನ ಚೆನ್ನಾಗಿರಬೇಕು, ಜಠರಾಗ್ನಿಪಾಟವ ಚೆನ್ನಾರಬೇಕು, ದೇಹವು ಕ್ಷಯಿಸಿರಬಾರದು, ಇಷ್ಟು ಸ್ಥಿತಿಯೂ ಸರಿಯಾಗಿದ್ದರೆ ಮಾತ್ರ ಕ್ಷಯರೋಗಿಗೆ ಚಿಕಿತ್ಸಿಸಬೇಕು.

**ವ್ಯವಾಯಶೋಕವಾರ್ಧಕ್ಯವ್ಯಾಯಾಮಾಧ್ವಪ್ರಶೋಷಿತಾನ್ ||**
**ವ್ರಣೋರಃಕ್ಷತಸಂಜ್ಞೌಚಶೋಷಿಣೌಲಕ್ಷಣೈಶ್ಶ್ರುಣು || ೧೪ ||**

ಅತಿಯಾದ ಮೈಥುನ, ದುಸ್ಸಹವಾದ ಯಾವದಾದರೂ ದುಖ್ಖ, ವೃದ್ಧಾಪ್ಯ, ಅತಿಯಾದ ವ್ಯಾಯಾಮ, ದಾರಿ ನಡೆಯುವುದು, ದುಸ್ಸಹವಾದ ವ್ರಣವಿರುವುದು, ಎದೆಗೆ ಯಾವುದಾದರೂ ಬಲವಾದ ಪೆಟ್ಟು ಬೀಳುವುದು ಈ ಕಾರಣಗಳಿಂದ ಶರೀರವು ಶುಷ್ಕವಾಗಿ ಶೋಷರೋಗಕ್ಕೀಡಾಗಿರುವವರ ಲಕ್ಷಣಗಳನ್ನು ಹೇಳುತ್ತಾನೆ.

**ವ್ಯವಾಯಶೋಷೀಶುಕ್ರಸ್ಯಕ್ಷಯಲಿಂಗೈರುಪದ್ರುತಃ ||**
**ಪಾಂಡುದೇಹೋಯಥಾಪೂರ್ವಂಕ್ಷೀಯಂತೇಚಾಸ್ಯಧಾತವಃ ||೧೫||**

ಅತಿಯಾದ ಸ್ತ್ರೀಸಂಭೋಗದಿಂದ ಶುಕ್ರಧಾತು ಕ್ಷಯಿಸಿ ಶುಕ್ರಸ್ಥಾನಗತವಾದ ವಾಯುವು ಪ್ರಕುಪಿತವಾಗಿ ಮಜ್ಜ ಮೊದಲಾದ ಪೂರ್ವ ಪೂರ್ವಧಾತುಗಳ ಕ್ಷಯಕ್ಕೆ ಕಾರಣವಾಗುತ್ತದೆ. ಹಿಂದೆ ಹೇಳಿದ ಶುಕ್ರಕ್ಷಯಜನ್ಯಕ್ಷಯದ ಲಕ್ಷಣಗಳೇ ಇದರಲ್ಲಿಯೂ ಇರುತ್ತವೆ. ಶರೀರವು ಬೆಳ್ಳಗಾಗಿ ಹೋಗುತ್ತದೆ.

**ಪ್ರಧ್ಯಾನಶೀಲಸ್ರಸ್ತಾಂಗಶ್ಶೋಕಶೋಷ್ಯಪಿತಾದೃಶಃ ||**

ದುಸ್ಸಹವಾದ ದುಖ್ಖದಿಂದ ರಕ್ತಮಾಂಸಾದಿಗಳು ಶುಷ್ಕವಾಗಿ ಕ್ಷಯಿಸಿದ ಮನುಷ್ಯನು ಶುಕ್ರಶೋಷಿಯ ಹಾಗೆಯೇ ಇರುತ್ತಾನೆ. ಯಾವಾಗಲೂ ಹತ್ತದ ಹರಿಯದ ಧ್ಯಾನಮಾಡುತ್ತಿರುವುದು, ಅವಯವಗಳೆಲ್ಲಾ ತಮ್ಮಷ್ಟಕ್ಕೆ ತಾವು ಸಡಲಿಹೋದಂತೆ ಮನಸ್ಸಿಗೆ ತೋರುತ್ತಿರುವುದು.

**ಜರಾಶೋಷೀಕೃಶೋಮಂದಬುದ್ಧಿವೀರ್ಯಬಲೇಂದ್ರಿಯಃ || ೧೬ ||**
**ಕಂಪನೋರುಚಿಮಾನ್ ಭಿನ್ನಕಾಂಸ್ಯಪಾತ್ರಹತಸ್ವರಃ ||**
**ಷ್ಠೀವತಿಶ್ಲೇಷ್ಮಣಾಹೀನಂಗೌರವಾರತಿಪೀಡಿತಃ || ೧೭ ||**
**ಸಂಪ್ರಸ್ರುತಾಸ್ಯನಾಸಾಕ್ಷಃಶುಷ್ಕರೂಕ್ಷಮಲಚ್ಛವಿಃ ||**

ಮುಪ್ಪಿನಿಂದ ಶೋಷಿಸಿಹೋದ ಶೋಷರೋಗಿಯ ಲಕ್ಷಣಗಳೇನಂದರೆ:— ದೇಹವು ಕೃಶವಾಗಿ ಹೋಗುತ್ತಿರುವುದು, ದಿನೇ ದಿನೇ ಬುದ್ಧಿಯು ಮಂದವಾಗುತ್ತಿರು

ವುದು, ಶುಕ್ರಧಾತುವು ಕ್ಷಯಿಸುವುದು, ದೇಹಬಲವೂ ಹಾಳಾಗಿಹೋಗಿರುವುದು, ಇಂದ್ರಿಯಪಾಟವ ತಪ್ಪಿರುವುದು, ಯಾವಾಗಲೂ ನಡುಗುತ್ತಿರುವುದು, ಯಾವ ಪದಾರ್ಥವೂ ಬಾಯಿಗೆ ರುಚಿಸದಿರುವುದು, ಒಡಕು ಕಂಚಿನ ಪಾತ್ರೆಯನ್ನು ಶಬ್ದಮಾಡಿದಂತೆ ಕಂಠಧ್ವನಿ ಒಡೆದುಹೋಗುವುದು, ಶ್ಲೇಷ್ಮರಹಿತವಾದ ಒಣಕೆಮ್ಮನ್ನು ಯಾವಾಗಲೂ ಕೆಮ್ಮುತ್ತಿರುವುದು, ವೈಸಾರ, ಯಾವ ಕೆಲಸಮಾಡಲೂ ಮನಸ್ಸಿಲ್ಲದಿರುವುದು, ಯಾವಾಗಲೂ ಬಾಯಿ, ಕಣ್ಣು, ಮೂಗುಗಳಲ್ಲಿ ನೀರು ಸುರಿಯುತ್ತಲಿರುವುದು, ದೇಹದಲ್ಲಿ ಸ್ನಿಗ್ಧತ್ವವಿಲ್ಲದಿರೋಣದರಿಂದ ಮಲವು ಒಣಗಿಹೋಗಿ ಒರಟಾಗಿರುತ್ತದೆ. ಇವು ಜರಾಶೋಷಿಯ ಲಕ್ಷಣಗಳು.

**ಅಧ್ವಶೋಷೀಚಸ್ರಸ್ತಾಂಗಸ್ಸಂಭೃಷ್ಟಪರುಷಚ್ಛವಿಃ ॥ ೧೮ ॥**
**ಪ್ರಸುಪ್ತಗಾತ್ರಾವಯವಶ್ಶುಷ್ಕಕ್ಲೋಮಗಲಾನನಃ ॥**

ಅತಿಯಾಗಿ ಯಾವಾಗಲೂ ದಾರಿ ನಡೆಯುವುದರಿಂದ ಶೋಷಿಸಿಹೋದವನ ಲಕ್ಷಣಗಳೇನಂದರೆ, ನಡದು ನಡದು ಉಂಟಾದ ಶ್ರಮದಿಂದ ಅವಯವಗಳೆಲ್ಲಾ ಸಡಿಲಬಿದ್ದುಹೋಗಿರುತ್ತವೆ. ಹುರಿದ ಧಾನ್ಯದ ಹಾಗೆ ದೇಹದ ಕಾಂತಿಯು ನೋಡುವುದಕ್ಕೆ ಒರಟಾಗಿರುತ್ತದೆ. ಅವಯವಗಳಿಗೆ ಸ್ಪರ್ಶಜ್ಞಾನವಿರುವುದಿಲ್ಲ ಅಂದರೆ ಮುಟ್ಟಿದರೆ ತಿಳಿಯುವುದಿಲ್ಲ. ಗಂಟಲು, ದವಡೆ, ಮುಖ ಎಲ್ಲಾ ಒಣಗಿಹೋಗಿರುತ್ತದೆ. ಇವು ಅಧ್ವಶೋಷಿಯ ಲಕ್ಷಣಗಳು

**ವ್ಯಾಯಾಮಶೋಷೀಭೂಯಿಷ್ಠಮೇಭಿರೇವಸಮನ್ವಿತಃ ॥ ೧೯ ॥**
**ಲಿಂಗೈರುರಃಕ್ಷತಕೃತೈಸ್ಸಂಯುಕ್ತಶ್ಚಕ್ಷತಂವಿನಾ ॥**

ಮಿತಿಮೀರಿ ವ್ಯಾಯಾಮ ಮಾಡೋಣದರಿಂದ ಶೋಷಿಸಿಹೋದವನ ಲಕ್ಷಣಗಳೇನಂದರೆ, ವ್ಯಾಯಾಮ ಹೆಚ್ಚಿಗೆ ಮಾಡಿ ಶೋಷಿಸಿ ಹೋದವನು ಅಧ್ವಶೋಷಿಯ ಲಕ್ಷಣಗಳನ್ನೇ ವಿಶೇಷವಾಗಿ ಪಡೆದಿರುತ್ತಾನೆ. ಅಲ್ಲದೆ ಉರಃಕ್ಷತವೆಂದರೆ ಬಲವಾಗಿ ಎದೆಗೆ ಪೆಟ್ಟುಬಿದ್ದವನು ಕ್ಷಯಿಸಿದಂತೆಯೇ ಈ ವ್ಯಾಯಾಮಶೋಷಿಯು ಕೂಡ ದಿನೇ ದಿನೇ ಕ್ಷಯಿಸಿಹೋಗುತ್ತಿರುತ್ತಾನೆ.

**ರಕ್ತಕ್ಷಯಾದ್ವೇದನಾಭಿಸ್ತಥೈವಾಹಾರಯಂತ್ರಣಾತ್ ॥ ೨೦ ॥**
**ವ್ರಣಿತಸ್ಯಭವೇತ್ ಶೋಷಸ್ಸಚಾಸಾಧ್ಯತಮೋಮತಃ ॥**

ಅಗಾಧವಾದ ವ್ರಣದಿಂದ ಶೋಷಿಸಿಹೋದವನ ಲಕ್ಷಣಗಳೇನಂದರೆ, ವ್ರಣದ ದ್ವಾರಾ ರಕ್ತವೆಲ್ಲವೂ ಕ್ಷಯಿಸಿಹೋಗುವುದು ದುಸ್ಸಹವಾದ ವ್ರಣದವೇದನೆ, ಈ ಸಂಕಟಗಳಿಂದ ಆಹಾರವು ತಡೆದುಹೋಗುವುದು ಈರೀತಿಯಾಗುತ್ತದೆ. ಈ ವ್ರಣಶೋಷವು ಚಿಕಿತ್ಸೆಗೆ ಅಸಾಧ್ಯವೆಂದು ತಿಳಿಯಬೇಕು.

**ಧನುಷಾಯುಸ್ಯತೋತ್ಯರ್ಥಂಭಾರಮುದ್ವಹತೋಗುರುಂ ॥**
**ಯುಧ್ಯಮಾನಸ್ಯಬಲಿಭಿಃಪತತೋವಿಷಮೋಚ್ಛತಃ ॥ ೨೧ ॥**
**ವೃಷಂಹಯಂವಾಧಾವಂತಂದಮ್ಯಂವಾನ್ಯಂನಿಗೃಹ್ಣತಃ ॥**
**ಶಿಲಾಕಾಷ್ಠಾತ್ಮನಿಘಾತಾನ್ ಕ್ಷಿಪತೋನಿಘ್ನತಃಪರಾನ್ ॥ ೨೨ ॥**

ಅಧೀಯಾನಸ್ಯವಾತ್ಯುಚ್ಚೈರ್ದೂರಂವಾವ್ರಜತೋದ್ರುತಂ ||
ಮಹಾನದೀರ್ವಾತರತೋಹಯೈರ್ವಾಸಹಧಾವತಃ || ೨೩ ||
ಸಹಸೋತ್ಪತತೋದೂರಂತೂರ್ಣಂವಾಪಿಪ್ರನೃತ್ಯತಃ ||
ತಥಾನ್ಯೈಃಕರ್ಮಭಿಃಕ್ರೂರೈರ್ಭೃಶಮಭ್ಯಾಹತಸ್ಯವಾ || ೨೪ ||
ವಿಕ್ಷತೇವಕ್ಷಸಿವ್ಯಾಧಿರ್ಬಲವಾನ್ಸಮುದೀರ್ಯತೆ ||
ಸ್ತ್ರೀಷುಚಾತಿಪ್ರಸಕ್ತಸ್ಯರೂಕ್ಷಾಲ್ಪಪ್ರಮಿತಾಶಿನಃ || ೨೫ ||
ಉರೋವಿರುಜ್ಯತೇತ್ಯರ್ಥಂಭಿದ್ಯತೇಥವಿಭಜ್ಯತೆ ||
ಪ್ರಪೀಡ್ಯತೇತತಃಪಾರ್ಶ್ವೇಶುಷ್ಯತ್ಯಂಗಂಪ್ರವೇಪತೆ || ೨೬ ||
ಕ್ರಮಾದ್ವೀರ್ಯಂಬಲಂವರ್ಣೋರುಚಿರಗ್ನಿಶ್ಚಹೀಯತೆ ||
ಜ್ವರೋವ್ಯಥಾಮನೋದೈನ್ಯಂವಿಡ್ಭೇದಾಗ್ನಿವಧಾವಪಿ || ೨೭ ||
ದುಷ್ಟಶ್ಯಾವಸ್ಸುದುರ್ಗಂಧಃಪೀತೋವಿಗ್ರಥಿತೋಬಹುಃ ||
ಕಾಸಮಾನಸ್ಯಚಾಭೀಕ್ಷ್ಣಂಕಫಃಸ್ಸಾಸೃಕ್ಪ್ರವರ್ತತೆ || ೨೮ ||

ಉರಃಕ್ಷತವೆಂಬ ಕ್ಷಯರೋಗಜನಕವಾದ ರೋಗದ ಲಕ್ಷಣವನ್ನು ಹೇಳುತ್ತಾನೆ. ಬಲವಾದ ಬಿಲ್ಲನ್ನು ಬಗ್ಗಿಸಿ ಕಟ್ಟುವುದು, ಹೆದೆಯನ್ನು ಎಳದು ಅಂಬನ್ನು ಬಿಡುವುದು, ಇಂತಹ ಎದೆಗೆ ತೊಂದರೆಕೊಡುವ ಕೆಲಸಗಳನ್ನು ಪದೇ ಪದೇ ಮಾಡುವುದು. ಬಹಳ ಭಾರವನ್ನು ತಲೆಯಮೇಲಾಗಲಿ ಹೆಗಲಿನಮೇಲಾಗಲಿ ಪದೇ ಪದೇ ಹೊರುವುದು, ತನಗಿಂತಲೂ ಶಕ್ತಿಯಲ್ಲಿ ಮಿಗಿಲಾದವರೊಡನೆ ಕುಸ್ತಿಮಾಡುವುದು, ಎತ್ತರವಾದ ಪ್ರದೇಶದಿಂದ ಕೆಳಗೆ ಬೀಳುವುದು, ಮೇರೆದಪ್ಪಿ ಓಡುತ್ತಿರುವ ಬಲವಾದ ಎತ್ತು, ಕುದುರೆ ಮೊದಲಾದ ಪ್ರಾಣಿಗಳನ್ನೋ ಅದೇರೀತಿಯಾಗಿ ಓಡುತ್ತಲಿರುವ ಇತರ ಯಾವುದಾದರೂ ಪ್ರಾಣಿಯನ್ನೋ ಬಲಾತ್ಕಾರದಿಂದ ನಿಲ್ಲಿಸಲು ಸ್ವಶಕ್ತಿಯನ್ನುಪಯೋಗಿಸುವುದು, ಕೈಬೀಸಿ ಕಲ್ಲನ್ನೊಗೆಯುವುದು, ಸೌದೆಯನ್ನೊಡೆಯುವುದು, ಕಲ್ಲನ್ನೊಡೆಯುವುದು, ಯಾರನ್ನಾದರೂ ಬಲವಾಗಿ ಹೊಡೆಯುವುದು, ವೇದವೇ ಮೊದಲಾದ ಕಂಠಪಾಠಮಾಡತಕ್ಕ ವಿಷಯಗಳನ್ನು ಬಹಳ ಗಟ್ಟಿಯಾಗಿ ಯಾವಾಗಲೂ ಬಾಯಲ್ಲಿ ಹೇಳುತ್ತಿರುವುದು, ಬಹಳ ವೇಗವಾಗಿ ಬಹುದೂರ ಓಡುವುದು, ದೊಡ್ಡ ಹೊಳೆಯಲ್ಲಿ ಈಜಿಕೊಂಡು ದಾಟುವುದು, ಕುದುರೆ ಮೊದಲಾಗಿ ಅತಿದೂರವಾಗಿ ಓಡತಕ್ಕ ಪ್ರಾಣಿಗಳೊಡನೆ ಸರಿಗಟ್ಟಿ ಓಡುವುದು, ಬಹಳ ಜೋರಾಗಿ ನರ್ತನಮಾಡುವುದು, ಸಣ್ಣ ಹೊಳೆ, ಕಾಲ್ವೇ, ಗುಂಡಿ ಮೊದಲಾದವುಗಳನ್ನು ಒಂದುಕಡೆಯಿಂದ ಮತ್ತೊಂದುಕಡೆಗೆ ಹಾರಿದಾಟುವುದು ಇವುಗಳಲ್ಲದೆ ಎದೆಗೆ ಉಪಹತಿಯನ್ನು ಮಾಡುವ ಇನ್ನೂ ಯಾವುದಾದರೂ ಕಷ್ಟತರವಾದ ಮತ್ತು ಅಪಾಯಕರವಾದ ಕೆಲಸಗಳನ್ನು ಮಾಡುವುದು, ಇವುಗಳಿಂದ ಎದೆಗೆ ನೋವುಂಟಾಗಿ ಅದರಿಂದ ಬಲವತ್ತರವಾದ ವ್ಯಾಧಿ ಉಂಟಾಗುತ್ತದೆ ಎದೆಯು ಅತ್ಯಂತವಾಗಿ ನೋಯುತ್ತಿರುವುದು, ಕೊಡಲಿಯಿಂದ ಶೀಳಿದಂತೆ ತೋರುತ್ತಿರುವುದು, ಎರಡುಭಾಗವಾಗಿ ಒಡೆದುಹೋಗುವಂತೆ ತೋರುತ್ತಿರುವುದು ಹೀಗೆಲ್ಲಾ ಸಂಕಟಗಳಾಗುತ್ತವೆ. ಎರಡುಪಾರ್ಶ್ವಗಳಲ್ಲಿಯೂ ನೋವು ವಡತ ಸಹ ಬರುತ್ತದೆ. ಅವಯವಗಳೆಲ್ಲಾ ಕ್ರಮೇಣ ಶೋಷಿಸಿಹೋಗುತ್ತ ಬರುತ್ತವೆ, ಅಶಕ್ತಿಯಿಂದ ಮೈನಡುಕ ಬರುತ್ತದೆ. ಕ್ರಮವಾಗಿ ಶಕ್ತಿ ದೇಹಬಲ, ದೇಹದಕಾಂತಿ, ಬಾಯಿರುಚಿ, ಜಠರಾಗ್ನಿಶಕ್ತಿ

ಇವುಗಳೆಲ್ಲಾ ಕಡಮೆಯಾಗುತ್ತ ಹೋಗುತ್ತವೆ. ಜ್ವರ, ಸಂಕಟ, ಮನಸ್ಸಿಗೆ ಒಂದುವಿಧ ವಾದ ದೈನ್ಯ, ಅಗ್ನಿಮಾಂದ್ಯದಿಂದ ಅಜೀರ್ಣಭೇದಿ, ಕೆಮ್ಮಿ ಉಗುಳಿದರೆ ಧೂಮ್ರವರ್ಣ ವಾದ ಅತಿ ದುರ್ಗಂಧಯುಕ್ತವಾದ ಹಳದಿಬಣ್ಣ ಮಿಶ್ರವಾದ, ಗಂಟುಗಂಟಾದ ಕಫವು ರಕ್ತಮಿಶ್ರವಾಗಿ ಹೊರಬೀಳುತ್ತದೆ; ಉರಃಕ್ಷತವೆಂಬ ರೋಗವು ಈರೀತಿಯಾಗಿರುತ್ತದೆ. ಈ ಉರಃಕ್ಷತರೋಗದಿಂದ ರೋಗಿಯು ಕ್ರಮವಾಗಿ ಶುಕ್ರಧಾತು ಮತ್ತು ಓಜೋಧಾ ತುಗಳು ಕ್ಷಯಿಸಿ ಕ್ಷೀಣನಾಗಿ ಹೋಗುತ್ತಾನೆ.

ಉರೋರುಕ್ ಶೋಣಿತಚ್ಛರ್ದಿಃಕಾಸೋವೈಶೇಷಿಕಃಕ್ಷತೇ ||
ಕ್ಷೀಣೇಸರಕ್ತಮೂತ್ರತ್ವಂಪಾರ್ಶ್ವಪೃಷ್ಠಕಟೀಗ್ರಹಃ || ೨೯ ||

ಎದೆನೋವು, ರಕ್ತವು ವಾಂತಿಯಾಗುವುದು, ಕೆಮ್ಮು ಇವುಗಳು ಉರಃಕ್ಷತ ರೋಗದಲ್ಲಿ ವಿಶೇಷ ಲಕ್ಷಣಗಳು. ಉರಃಕ್ಷತದಿಂದ ಉತ್ಪನ್ನವಾದ ಕ್ಷಯರೋಗದಲ್ಲಿ ಮೂತ್ರದ ಜೊತೆಯಲ್ಲಿ ರಕ್ತವು ಹೋಗುವುದು, ಪಾರ್ಶ್ವಗಳು, ಸೊಂಟ, ಬೆನ್ನಿನ ಎಲು ಬುಗಳು ಇವುಗಳಲ್ಲಿ ನೋವಿದ್ದು ಹಿಡಿದಂತೆ ತೋರುವುದು ಇದೇ ಉರಃಕ್ಷತಕ್ಕೂ ಮತ್ತು ಉರಃಕ್ಷತಜನ್ಯವಾದ ಕ್ಷಯರೋಗಕ್ಕೂ ವ್ಯತ್ಯಾಸ.

ಅಲ್ಪಲಿಂಗಸ್ಯದೀಪ್ತಾಗ್ನೇಸ್ಸಾಧ್ಯೋಬಲವತೋನವಃ ||
ಪರಿಸಂವತ್ಸರೋಯಾಪ್ಯಸ್ಸರ್ವಲಿಂಗಂತುವರ್ಜಯೇತ್ || ೩೦ ||

ಹಿಂದೆ ಹೇಳಿದ ಉರಃಕ್ಷತಮತ್ತು ಉರಃಕ್ಷತಜನ್ಯಕ್ಷಯ ಇವುಗಳ ಸಾಧ್ಯಾ ಸಾಧ್ಯತ್ವ ಲಕ್ಷಣವನ್ನು ಹೇಳುತ್ತಾನೆ. ರೋಗಕ್ಕೆ ಹೇಳಿದ ಲಕ್ಷಣಗಳು ಸ್ವಲ್ಪವಾಗಿ ಯೇ ಇರುವುದು, ಜಠರಾಗ್ನಿಪಾಟವ ಚೆನ್ನಾಗಿರುವುದು, ದೇಹಶಕ್ತಿಯೂ ಚೆನ್ನಾಗಿದ್ದು ರೋಗವು ಹೊಸದಾಗಿದ್ದರೆ ಚಿಕಿತ್ಸೆಗೆ ಸಾಧ್ಯವೆಂಬದಾಗಿಯೂ ಇಷ್ಟು ಲಕ್ಷಣಗಳೂ ಇದ್ದು ಕಾಲಮಾತ್ರ ಒಂದುವರುಷ ಕಳೆದುಹೋಗಿದ್ದರೆ ಯಾಪ್ಯ ಎಂದರೆ ಕಾಲಹರಣ ಮಾಡತಕ್ಕದ್ದೆಂಬದಾಗಿಯೂ, ಸಂಪೂರ್ಣ ಲಕ್ಷಣಗಳೂ ಇದ್ದಲ್ಲಿ ಅಸಾಧ್ಯವೆಂಬದಾ ಗಿಯೂ ತಿಳಿದುಕೊಳ್ಳಬೇಕು.

ಇಲ್ಲಿಗೆ ರಾಜಯಕ್ಷ್ಮಾದಿನಿದಾನ ಸಂಪೂರ್ಣ.

## —: ಕಾಸನಿದಾನ. :—

ಧೂಮೋಪಘಾತಾದ್ರಜಸಸ್ತಥೈವವ್ಯಾಯಾಮರೂಕ್ಷಾನ್ನನಿಷೇವಣಾಚ್ಚ ||
ವಿಮಾರ್ಗಗತ್ವಾಚ್ಚಹಿಭೋಜನಸ್ಯವೇಗಾವರೋಧಾತ್ ಕ್ಷವಥೋಸ್ತಥೈವ || ೧ ||
ಪ್ರಾಣೋಹ್ಯುದಾನಾನುಗತಃಪ್ರದುಷ್ಟಸ್ಸಭಿನ್ನಕಾಂಸ್ಯಸ್ವನತುಲ್ಯಘೋಷಃ ||
ನಿರೇತಿವಕ್ತ್ರಾತ್ ಸಹಸಾಸದೋಷೋಮನೀಷಿಭಿಃಕಾಸಇತಿಪ್ರದಿಷ್ಟಃ || ೨ ||

ಕಾಸನಿದಾನವನ್ನು ಹೇಳುತ್ತಾನೆ. ಬಾಯಿ ಮತ್ತು ಮೂಗಿನಲ್ಲಿ ಸಹ ಉಸಿ ರಾಡದಂತೆ ಹೊಗೆ ತುಂಬಿಕೊಳ್ಳುವುದು, ಭೋಜನ ಮಾಡಿದ ಅನ್ನರಸವು ವಾಯುವಿ ನಿಂದ ಊರ್ಧ್ವಮುಖವಾಗಿ ಮಾಡಲ್ಪಡುವುದು, ಸ್ವಶಕ್ತಿಮೀರಿ ವ್ಯಾಯಾಮಮಾಡು ವುದು, ತುಪ್ಪವಾಗಲಿ ಎಣ್ಣೆಯಾಗಲಿ ಇಂತಹ ಜಿಡ್ಡಿಲ್ಲದ ಬರೀ ಅನ್ನವನ್ನು ತಿನ್ನುವುದು,

ಅವಸರವಾಗಿ ಭೋಜನಮಾಡಿ ನುಂಗುವಾಗ್ಗೆ ಭೋಜನಮಾಡಿದ ಆಹಾರವು ಒಳಕ್ಕೆ ಹೋಗುವ ಸರಿಯಾದ ಮಾರ್ಗದಲ್ಲಿ ಕೊಂಚ ದಾರಿತಪ್ಪಿದರೂ, ಅಧೋವಾಯು ಮತ್ತು ಮಲಮೂತ್ರಗಳ ವೇಗವನ್ನು ತಡೆಯುವುದರಿಂದಲೂ, ಶೀನುಬರುವಾಗ್ಗೆ ಅದರ ವೇಗವನ್ನು ತಡೆಯುವುದರಿಂದಲೂ, ಈ ಕಾರಣಗಳಿಂದ ಹೃದಯಗತವಾದ ಪ್ರಾಣವಾಯುವು ಕಂಠಸ್ಥಾನಗತವಾದ ಉದಾನವಾಯುವಿನೊಡನೆ ಕೂಡಿಕೊಂಡು ದುಷ್ಟವಾಗುತ್ತದೆ. ಕಾಸವು ಹುಟ್ಟಿ ಒಡಕುಕಂಚಿನ ಶಬ್ದದೊಡನೆ ಕೂಡಿಕೊಂಡು ಪ್ರಕುಪಿತವಾದ ದೋಷದೊಡನೆ ಮುಖ ಮಾರ್ಗದಿಂದ ಹೊರಕ್ಕೆ ಹೊರಡುತ್ತದೆ. ಇದಕ್ಕೇನೇ ವೈದ್ಯರುಗಳು ಕಾಸವೆಂಬದಾಗಿ ಹೆಸರು ಕರೆದಿರುತ್ತಾರೆ.

ಪಂಚಕಾಸಾಸ್ಸ್ಮೃತಾವಾತಪಿತ್ತಶ್ಲೇಷ್ಮಕ್ಷತಕ್ಷಯೈಃ ||
ಕ್ಷಯಾಯೋಪೇಕ್ಷಿತಾಸ್ಸರ್ವೆಬಲಿನಶ್ಚೋತ್ತರೋತ್ತರಂ || ೩ ||

ಈ ಕಾಸರೋಗವು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ಉರಃಕ್ಷತಾದಿಜನ್ಯ, ಕ್ಷಯ ಎಂದರೆ ಧಾತುಕ್ಷಯಾದಿಗಳಿಂದ ಉತ್ಪನ್ನವಾಗುವುದು ಎಂಬದಾಗಿ ಐದುವಿಧ. ಈ ಕಾಸಗಳು ವಾತಪ್ರಕೋಪಜನ್ಯವಾದ ಕಾಸಕ್ಕಿಂತ ಪಿತ್ತಪ್ರಕೋಪಜನ್ಯವಾದ ಕಾಸವು ಪ್ರಬಲ. ಅದಕ್ಕಿಂತ ಶ್ಲೇಷ್ಮಪ್ರಕೋಪಜನ್ಯಕಾಸ ಮತ್ತೂ ಪ್ರಬಲ. ಈರೀತಿಯಾಗಿ ಉತ್ತರೋತ್ತರ ಪ್ರಬಲತರಗಳೆಂಬದಾಗಿಯೂ, ಸಕಾಲದಲ್ಲಿ ಸರಿಯಾದ ಚಿಕಿತ್ಸೆ ನಡೆಯದಿದ್ದಲ್ಲಿ ಈ ಕಾಸಗಳೆಲ್ಲಾ ಕ್ರಮೇಣ ಕ್ಷಯರೋಗವನ್ನು ಹುಟ್ಟಿಸುತ್ತವೆಂದೂ ತಿಳಿದುಕೊಳ್ಳಬಹುದು.

ಪೂರ್ವರೂಪಂಭವೇತ್ತೇಷಾಂಶೂಕಪೂರ್ಣಗಳಾಸ್ಯತಾ ||
ಕಂಠೇಕಂಡೂಶ್ಚಭೋಜ್ಯಾನಾಮವರೋಧಶ್ಚಜಾಯತೆ || ೪ ||

ಈ ಕಾಸರೋಗವು ಹುಟ್ಟುವ ಪೂರ್ವದಲ್ಲಿ ತೋರುವ ಲಕ್ಷಣಗಳು ಯಾವುವೆಂದರೆ. ಬಾಯಲ್ಲಿ ಮತ್ತು ಗಂಟಲಿನಲ್ಲಿ ಸಹ ಶೂಕವೆಂದರೆ ಗೋಧಿ ಮತ್ತು ಭತ್ತದೆ ಕಾಳುಗಳ ಮುಂಭಾಗದಲ್ಲಿರುವ ಮುಳ್ಳುಗಳು ತುಂಬಿಕೊಂಡಿರುವಂತೆ ಹಿಂಸೆ ತೋರುತ್ತಿರುವುದು, ಗಂಟಲಿನಲ್ಲಿ ನವೆಯಾಗುತ್ತಿರುವುದು ಈ ತೊಂದರೆಗಳಿಂದಲೇ ಭೋಜನ ಪದಾರ್ಥಗಳು ಸರಿಯಾಗಿ ಒಳಗೆ ಹೋಗುವುದು ಸಹ ತೊಂದರೆಯಾಗುವುದು ಇದೆಲ್ಲಾ ಆಗುತ್ತದೆ.

ಹೃಚ್ಛಂಖಮೂರ್ಧೋದರಪಾರ್ಶ್ವಶೂಲೀಕ್ಷಾಮಾನನಃಕ್ಷೀಣಬಲ
ಸ್ವರೌಜಾಃ ||
ಪ್ರಸಕ್ತವೇಗಸ್ತುಸಮೀರಣೇನಭಿನ್ನಸ್ವರಃಕಾಸತಿಶುಷ್ಕಮೇವ || ೬ ||

ವಾತಪ್ರಕೋಪಜನ್ಯವಾದ ಕಾಸದಲ್ಲಿ ಎದೆ, ಕಿವಿಯ ಮುಂಭಾಗದಲ್ಲಿ ಕಣ್ಣಿನ ಮಗ್ಗಲಲ್ಲಿರುವ ಶಂಖವೆಂಬ ಹೆಸರಿನ ಮರ್ಮಸ್ಥಾನ, ತಲೆ, ಹೊಟ್ಟೆ, ಪಾರ್ಶ್ವಗಳು ಇವುಗಳಲ್ಲೆಲ್ಲಾ ಶೂಲೆ ಇರುತ್ತದೆ. ಮುಖವು ಕ್ಷಾಮ ಎಂದರೆ ಬಾಡಿ ಹೋಗಿರುತ್ತದೆ. ಶಕ್ತಿ, ಧ್ವನಿ, ಮಾಂಸಬಲ ಇವುಗಳೆಲ್ಲಾ ಕ್ರಮೇಣ ಕುಗ್ಗಿಹೋಗುತ್ತಿರುತ್ತವೆ. ಈರೀತಿಯಾಗಿದ್ದುಕೊಂಡು ಕೆಮ್ಮು ಬಂದಾಗ್ಗೆ ಒಡಕುಧ್ವನಿಯಿಂದ ಶ್ಲೇಷ್ಮರಹಿತವಾದ ಒಣಕೆಮ್ಮನ್ನೇ ಕೆಮ್ಮುತ್ತಿರುತ್ತಾನೆ.

**ಉರೋವಿದಾಹಜ್ವರವಕ್ತ್ರಶೋಷೈರಭ್ಯರ್ದಿತಸ್ತಿಕ್ತಮುಖಸ್ತೃಷಾರ್ತಃ ॥**

**ಪಿತ್ತೇನಪೀತಾನಿವಮೇತ್ಕಟೂನಿಕಾಸೇತ್ಸಪಾಂಡುಃಪರಿದಹ್ಯಮಾನಃ॥**

ಪಿತ್ತಪ್ರಕೋಪಜನ್ಯವಾದ ಕಾಸದಲ್ಲಿ ಎದೆಯಲ್ಲಿ ಉರಿ, ಜ್ವರ, ಬಾಯಿ ಒಣಗುವುದು, ಯಾವಾಗಲೂ ಬಾಯಿ ಕಹಿಯಾಗಿಯೇ ಇರುವುದು, ಬಾಯಾರಿಕೆ ಬಹಳವಾಗಿರುವುದು, ಹಳದಿ ಬಣ್ಣವಾಗಿ ಕಾರವಾಗಿ ಆಗಾಗ್ಗೆ ಕೊಂಚ ದ್ರವವನ್ನು ವಮನ ಮಾಡುವುದು, ಮೈಯ್ಯುರಿ, ಮೈಯ್ಯೆಲ್ಲಾ ಬೆಳ್ಳಗಾಗುವುದು ಇವುಗಳಿಂದ ಕೂಡಿಕೊಂಡು ಕೆಮ್ಮುತ್ತಿರುತ್ತಾನೆ.

**ಪ್ರಲಿಪ್ಯಮಾನೇನಮುಖೇನಸೀದನ್ ಶಿರೋರುಜಾರ್ತಃಕಫಪೂರ್ಣದೇಹಃ**

**ಅಭಕ್ತರುಗ್ಗೌರವಕಂಡುಯುಕ್ತಃಕಾಸೇದ್ಭೃಶಂಸಾಂದ್ರಕಫಃಕಫೇನ ॥ ೭ ॥**

ಶ್ಲೇಷ್ಮಪ್ರಕೋಪಜನ್ಯವಾದ ಕಾಸದಲ್ಲಿ-ಬಾಯಿ ಒಳಗೆಲ್ಲಾ ಶ್ಲೇಷ್ಮವು ಲೇಪವಾಗಿರುವಂತೆ ಮನಸ್ಸಿಗೆ ತೋರುತ್ತ ಸಂಕಟಪಡುತ್ತಿರುವುದು, ತಲೆನೋವು ಯಾವಾಗಲೂ ಇದ್ದೇ ಇರುವುದು, ಕಫವು ಮೈಯ್ಯಲ್ಲೆಲ್ಲಾ ತುಂಬಿರುವಂತೆ ಭಾಸವಾಗುತ್ತಿರುವುದು, ಅನ್ನದಲ್ಲಿ ಅಪೇಕ್ಷೆ ತಪ್ಪಿಹೋಗುವುದು, ಮೈಭಾರ, ಮೈಯ್ಯಲ್ಲೆಲ್ಲಾ ನವೆ ಇವುಗಳಿಂದ ಯುಕ್ತನಾಗಿ ದಪ್ಪವಾದ ಕಫದೊಡನೆ ಪದೇ ಪದೇ ಕೆಮ್ಮುತ್ತಿರುತ್ತಾನೆ.

**ಅತಿವ್ಯವಾಯಭಾರಾಧ್ವಯುದ್ಧಾಶ್ವಗಜವಿಗ್ರಹೈಃ ॥**
**ರೂಕ್ಷಸ್ಯೋರಃಕ್ಷತಂವಾಯುರ್ಗೃಹೀತ್ವಾಕಾಸಮಾಚರೇತ್ ॥ ೮ ॥**
**ಸಪೂರ್ವಂಕಾಸತೇಶುಷ್ಕಂತತಷ್ಠೀವೇತ್ಸಶೋಣಿತಂ ॥**
**ಕಂಠೇನರುಜತಾತ್ಯರ್ಥಂವಿರುಗ್ಣೇನೇವಚೋರಸಾ ॥ ೯ ॥**
**ಸೂಚೀಭಿರಿವತೀಕ್ಷ್ಣಾಭಿಸ್ತುದ್ಯಮಾನೇನಶೂಲಿನಾ ॥**
**ದುಃಖಸ್ಪರ್ಶೇನಶೂಲೇನಭೇದಪೀಡಾಭಿತಾಪಿನಾ ॥ ೧೦ ॥**
**ಪರ್ವಭೇದಜ್ವರಶ್ವಾಸತೃಷ್ಣಾವೈಸ್ವರ್ಯಪೀಡಿತಃ ॥**
**ಪಾರಾವತಇವಾಕೂಜನ್ ಕಾಸವೇಗಾತ್ಕ್ಷತೋದ್ಭವಾತ್ ॥ ೧೧ ॥**

ಕ್ಷತಜನ್ಯಕಾಸದ ಲಕ್ಷಣವನ್ನು ಹೇಳುತ್ತಾನೆ ಅತಿಮೀರಿ ಸ್ತ್ರೀಸಂಗವು ಮಾಡುವುದು, ಅತಿಯಾಗಿ ಭಾರವನ್ನು ಹೊರುವುದು, ದಾರಿ ನಡೆಯುವುದು, ತನಗಿಂತ ಬಲಿಷ್ಠರಾದವರೊಡನೆ ಕುಸ್ತಿ ಮಾಡುವುದು, ಮದಿಸಿದ ಆನೆ, ಕುದುರೆ ಇವುಗಳನ್ನು ವಶಮಾಡಿಕೊಳ್ಳುವುದಕ್ಕಾಗಿ ಸಾಹಸಮಾಡುವುದು, ಇಂತಹ ಕೇವಲ ಶಕ್ತಿಸಾಧ್ಯಗಳಾದ ಕೆಲಸಗಳನ್ನು ಮಾಡೋಣವರಿಂದ ಎದೆಗೆ ಅತಿಯಾಗಿ ಅಪಘಾತವುಂಟಾಗಿರುವಾಗ್ಗೆ ಪ್ರಕುಪಿತವಾದ ವಾಯುವು ಎದೆಯಲ್ಲಿ ವ್ಯಾಪಿಸಿ ಕೆಮ್ಮನ್ನು ಹುಟ್ಟಿಸುತ್ತದೆ. ಮೊದಲು ಒಣಕೆಮ್ಮು ಕೆಮ್ಮಿದರೂ ಉಗುಳುವಾಗ್ಗೆ ಮಾತ್ರ ರಕ್ತವನ್ನೇ ಉಗುಳುತ್ತಿರುವುದು. ಗಂಟಲಿನಲ್ಲಿ ಮತ್ತು ಎದೆಯಲ್ಲಿ ಸದಾ ನೋವಿರುವುದು, ಆಗಾಗ್ಗೆ ಮೊನೆಯಾದ ಸೂಜಿಯಿಂದ ಎದೆ ಮತ್ತು ಗಂಟಲನ್ನು ಸಹ ಚುಚ್ಚಿದಂತೆ ಶೂಲೆಯಾಗುತ್ತಿರುವುದು, ಎದೆಯನ್ನಾಗಲಿ ಗಂಟಲನ್ನಾಗಲಿ ಸ್ಪರ್ಶಮಾಡಿದರೆ ಬಹಳ ದುಃಖವಾಗುವುದು, ವಡತ,

ಉರಿ, ಇವುಗಳಿರುವುದು, ಕೀಲುಗಳಲ್ಲೆಲ್ಲಾ ನಡಕ, ಜ್ವರ, ಉಬ್ಬಸ, ಬಾಯಾರಿಕೆ, ಧ್ವನಿ ಕುಗ್ಗುವುದು, ಈ ತೊಂದರೆಗಳಿಂದ ಕಷ್ಟಪಡುತ್ತ ಈ ಕ್ಷತಕಾಸದ ಸಂಕಟ ಹೆಚ್ಚಾಗಿ ಪಾರಿವಾಳದ ಹಕ್ಕಿಯಂತೆ ಕೂಗಿಕೊಳ್ಳುತ್ತಾನೆ.

ವಿಷಮಾಸಾತ್ಮ್ಯಭೋಜ್ಯಾತಿವ್ಯವಾಯಾದ್ವೇಗನಿಗ್ರಹಾತ್ ||
ಘೃಣಿನಾಂಶೋಚತಾಂನೃಣಾಂವ್ಯಾಪನ್ನೇಗ್ನೌತ್ರಯೋಮಲಾಃ
|| ೧೨ ||
ಕುಪಿತಾಃಕ್ಷಯಜಂಕಾಸಂಕುರ್ಯುರ್ದೇಹಕ್ಷಯಪ್ರದಂ ||
ಸಗಾತ್ರಶೂಲಜ್ವರದಾಹಮೋಹಾನ್‌ಪ್ರಾಣಕ್ಷಯಂಚೋಪಲ
ಭೇತಕಾಸೀ ||
ಶುಷ್ಯನ್ನಿನಿಷ್ಠೀವತಿದುರ್ಬಲಸ್ತುಪ್ರಕ್ಷೀಣಮಾಂಸೋರುಧಿರಂ
ಸಪೂಯಂ ||
ತಂಸರ್ವಲಿಂಗಂಭೃಶದುಶ್ಚಿಕಿತ್ಸ್ಯಂಚಿಕಿತ್ಸಿತಜ್ಞಾಃಕ್ಷಯಜಂವದಂತಿ
|| ೧೩ ||

ಕ್ಷಯಕಾಸವನ್ನು ಹೇಳುತ್ತಾನೆ. ವಿಷಮಭೋಜನವೆಂದರೆ ಒಂದು ಹೊತ್ತು ಕಡಮೆ ಮತ್ತೊಂದು ಹೊತ್ತು ಹೆಚ್ಚು ಈ ರೀತಿಯಾಗಿ–ಹೀಗೆಯೇ ಭೋಜನಮಾಡ ತಕ್ಕ ಕಾಲದಲ್ಲಿಯೂ ವೈಷಮ್ಯವಾಗುವುದು. ಅಸಾತ್ಮ್ಯಭೋಜನವೆಂದರೆ ತನ್ನ ಶರೀರಕ್ಕೆ ಒಗ್ಗದ ವಸ್ತುಗಳನ್ನು ಭೋಜನಮಾಡುವುದು. ಅತಿಯಾಗಿ ಮೈಥುನ ಮಾಡುವುದು, ಅಧೋ ವಾಯು ಮತ್ತು ಮಲಮೂತ್ರಗಳ ವೇಗವನ್ನು ತಡೆಯುವುದು, ಮತ್ತು ಹಿಂದೆ ಹೇಳಿದಂತೆ ಮಾಡೋಣದರಿಂದುಂಟಾದ ಸಂಕಟಗಳನ್ನು ಹೇಳಲು ನಾಚುವುದು, ದುಃಖಪಡುವುದು; ಈ ಕಾರಣಗಳಿಂದ ಜಠರಾಗ್ನಿ ಶಕ್ತಿಯು ಕಡಿಮೆ ಯಾಗಲು ಶರೀರಗತಗಳಾದ ವಾತ ಪಿತ್ತ ಶ್ಲೇಷ್ಮಗಳು ಕುಪಿತಗಳಾಗಿ ದೇಹಕ್ಕೇನೇ ಕ್ಷಯಕರಗಳಾದ ಕ್ಷಯಕಾಸವನ್ನುಂಟುಮಾಡುತ್ತವೆ. ಈ ಕಾಸವು ಪ್ರಾಪ್ತವಾಯಿ ತೆಂದರೆ ರೋಗಿಗೆ ಮೈಯಲ್ಲಿ ಒಂದು ಬಗೆಯ ಶೂಲೆ, ಜ್ವರ, ಮೈಯುರಿ, ಅಜ್ಞಾನ ಇವುಗಳುಂಟಾಗುತ್ತವೆ. ಶರೀರವು ಶುಷ್ಕವಾಗುತ್ತ ಬರುತ್ತದೆ. ಕೆಮ್ಮು ಹೆಚ್ಚು ತ್ತದೆ. ಮಾಂಸವು ಕ್ಷಯಿಸುತ್ತ ಹೋಗುತ್ತದೆ. ಕೆಮ್ಮಿದರೆ ಶ್ಲೇಷ್ಮದ ಜೊತೆಯಲ್ಲಿ ರಕ್ತ ಕೀವು ಸಹ ಹೊರಡುವುದುಂಟು. ಇಂತಹ ಕ್ಷಯಕಾಸವು ಹಿಂದೆ ಹೇಳಿದ ಎಲ್ಲಾ ಲಕ್ಷಣಗಳಿಂದಲೂ ಯುಕ್ತವಾಗಿದ್ದಲ್ಲಿ ಇದಕ್ಕೆ ಚಿಕಿತ್ಸೆಮಾಡುವುದು ಅಸಾಧ್ಯವೆಂದು ವೈದ್ಯರ ಅಭಿಪ್ರಾಯ. ಇದರಿಂದ ಪ್ರಾಣಕ್ಷಯವೇ ಸಂಭವಿಸುತ್ತದೆ.

ಇತ್ಯೇಷಕ್ಷಯಜಃಕಾಸಃಕ್ಷೀಣಾನಾಂದೇಹನಾಶನಃ ||
ಸಾಧ್ಯೋಬಲವತಾಂವಾಸ್ಯಾದ್ಯಾಪ್ಯಸ್ತ್ವೇವಕ್ಷತೋತ್ಥಿತಃ || ೧೪ ||
ನವೌಕದಾಚಿತ್ಸಿಧ್ಯೇತಾಮಪಿಪಾದಗುಣಾನ್ವಿತೌ ||
ಸ್ಥವಿರಾಣಾಂಜರಾಕಾಸಸ್ಸರ್ವೋಯಾಪ್ಯಃಪ್ರಕೀರ್ತಿತಃ || ೧೫ ||
ತ್ರೀನ್ಪೂರ್ವಾನ್ಸಾಧಯೇತ್‌ಸಾಧ್ಯಾನ್ಪಥ್ಯೈರ್ಯಾಪ್ಯಾಂಸ್ತುಯಾಪ
ಯೇತ್ ||

ಹಿಂದೆ ಹೇಳಿದ ಎಲ್ಲಾ ಕಾಸರೋಗಗಳ ಸಾಧ್ಯಾಸಾಧ್ಯತ್ವವನ್ನು ತಿಳಿಸುತ್ತಾನೆ. ಕ್ಷಯಜನ್ಯಕಾಸವು ಕ್ಷೀಣ ದೇಹಿಗಳಿಗೆ ಅಂದರೆ ಕೃಶರಾದವರುಗಳಿಗೆ ಪ್ರಾಣನಾಶಕವೆಂದು ತಿಳಿಯಬೇಕು. ದೇಹಬಲ ಚೆನ್ನಾಗಿದ್ದರೆ ಒಂದು ವೇಳೆ ಚಿಕಿತ್ಸೆಗೆ ಸಾಧ್ಯವಾದರೂ ಆಗಬಹುದು. ಕ್ಷತಕಾಸವು ಕೂಡ ರೋಗಿಯು ದುರ್ಬಲನಾಗಿದ್ದರೆ ಕಾಲಹರಣವಾಗತಕ್ಕದ್ದೇ ಎಂದು ತಿಳಿಯಬೇಕು. ಹಿಂದೆ ಹೇಳಿದ ಕ್ಷತಜಕಾಸ ಮತ್ತು ಕ್ಷಯಜಕಾಸ ಈ ಎರಡೂ ಕೂಡ ಹೊಸತಾಗಿದ್ದು ರೋಗಿಯು ದೇಹಬಲವುಳ್ಳವನಾಗಿದ್ದರೆ ಚಿಕಿತ್ಸಾಸೌಕರ್ಯಗಳೆಲ್ಲವೂ ಅಂದರೆ ಔಷಧ, ಪಥ್ಯ, ಉಪಚಾರ ಇವುಗಳೂ ನಡೆದರೆ ಸಾಧ್ಯವಾದರೂ ಆಗಬಹುದು. ವಯಸ್ಸು ಹೋದ ಮುದುಕರಿಗೆ ಯಾವ ವಿಧವಾದ ಕೆಮ್ಮು ಬಂದರೂ ಅದು ಕಾಲಹರಣವಾಗತಕ್ಕದ್ದೇ. ದೋಷಪ್ರಕೋಪಜನ್ಯಗಳಾದ ಮೊದಲಿನ ಮೂರು ವಿಧವಾದ ಕಾಸಗಳನ್ನೂ ಸಾಧ್ಯವಾದವುಗಳನ್ನು ಚಿಕಿತ್ಸೆಮಾಡಿ ಸಾಧಿಸಬೇಕು. ಪಥ್ಯದಿಂದ ಕೊಂಚ ಕಡಮೆಯಾಗಿ ಅಷ್ಟರಿಂದಲೇ ರೋಗಿಗೆ ಸುಖವಾಗುವಂತಹ ಕಾಸಗಳನ್ನು ಪಥ್ಯಾಭ್ಯಾಸದಿಂದಲೇ ಸ್ವಾಧೀನಕ್ಕೆ ತಂದುಕೊಳ್ಳಬೇಕು.

ಇಲ್ಲಿಗೆ ಕಾಸನಿದಾನ ಸಂಪೂರ್ಣ.

## —: ಹಿ ಕ್ಕಾ ಶ್ವಾ ಸ ನಿ ದಾ ನ :—

ವಿದಾಹಿಗುರುವಿಷ್ಟಂಭಿರೂಕ್ಷಾಭಿಷ್ಯಂದಿಭೋಜನೈಃ ॥
ಶೀತಪಾನಾಶನಸ್ಥಾನರಜೋಧೂಮಾತಪಾನಿಲೈಃ ॥ ೧ ॥
ವ್ಯಾಯಾಮಕರ್ಮಭಾರಾಧ್ವವೇಗಾಘಾತಾಪತರ್ಪಣೈಃ ॥
ಹಿಕ್ಕಾಶ್ವಾಸಶ್ಚ ಕಾಸಶ್ಚ ನೃಣಾಂಸಮುಪಜಾಯತೆ ॥ ೨ ॥

ಅತ್ಯುಷ್ಣಮಾಡತಕ್ಕ ಆಹಾರ, ಗುರ್ವಾಹಾರ, ಮಲಮೂತ್ರಾದಿಗಳನ್ನು ಬಂಧಿಸತಕ್ಕ ಆಹಾರ, ಜಿಡ್ಡಿಲ್ಲದ ಆಹಾರ, ಶ್ಲೇಷ್ಮವರ್ಧಕವಾದ ಆಹಾರ, ಇಂತಹ ಆಹಾರಗಳನ್ನು ಭೋಜನಮಾಡೋಣದರಿಂದಲು, ತಣ್ಣೀರು ಕುಡಿಯುವುದು, ಆರಿ ತಣ್ಣಗಾದ ಆಹಾರಗಳನ್ನು ತಿನ್ನುವುದು, ಯಾವಾಗಲೂ ಶೀತವಾದ ಪ್ರದೇಶದಲ್ಲಿಯೇ ವಾಸಮಾಡುವುದು, ಧೂಳು ಮೂಗು ಬಾಯಿಗೆಲ್ಲಾ ತುಂಬಿಕೊಳ್ಳುವಂತೆ ಯಾವಾಗಲೂ ಧೂಳಿನಲ್ಲಿಯೇ ಓಡಾಡುವುದು, ಹೊಗೆಯನ್ನು ಸೇದುವುದು, ಬಿಸಿಲಿನಲ್ಲಿ ಹೆಚ್ಚಿಗೆ ತಿರುಗುವುದು, ಹೆಚ್ಚು ಹೊತ್ತು ಗಾಳಿಯಲ್ಲಿರುವುದು, ಶಕ್ತಿಮೀರಿ ವ್ಯಾಯಾಮ ಮಾಡುವುದು, ಶಕ್ತಿಗೆ ಮೀರಿ ಕೆಲಸಮಾಡುವುದು, ಭಾರ ಹೊರುವುದು, ದಾರಿ ಹೆಚ್ಚಿಗೆ ನಡೆಯುವುದು, ಮಲಮೂತ್ರಗಳ ವೇಗವನ್ನು ತಡೆಯುವುದು, ಯಾವ ಆಹಾರವನ್ನೂ ತೆಗೆದುಕೊಳ್ಳದೆ ಉಪವಾಸವಿರುವುದು, ಈ ಕಾರಣಗಳಿಂದ ವಾತಾದಿ ದೋಷಗಳು ಪ್ರಕುಪಿತಗಳಾಗಿ ಮನುಷ್ಯರಿಗೆ ಬಿಕ್ಕಳಿಕೆ, ಉಬ್ಬಸ, ಕೆಮ್ಮು ಇವುಗಳನ್ನು ಹುಟ್ಟಿಸುತ್ತವೆ.

**ಮುಹುರ್ಮುಹುರ್ವಾಯುರುದೇತಿಸಸ್ವನೋಯಕೃತ್ಪ್ಲೀಹಾಂತ್ರಾಣಿ ಮುಖಾದಿವಾಕ್ಷಿಪನ್ ॥**
**ಸಘೋಷವಾನಾಶುಹಿನಸ್ತ್ಯಸೂನ್ಯತಸ್ತತಸ್ತುಹಿಕ್ಕೇತ್ಯಭಿಧೀಯತೇ ಬುಧೈಃ ॥ ೩ ॥**

ಬಿಕ್ಕಳಿಕೆಯ ಸ್ವರೂಪವನ್ನು ಹೇಳುತ್ತಾನೆ. ಹೊಟ್ಟೆಯಲ್ಲಿರತಕ್ಕ ಯಕೃತ್ತು, ಪ್ಲೀಹ, ಕರುಳುಗಳು ಇವುಗಳನ್ನೆಲ್ಲಾ ಮುಖಮಾರ್ಗದಿಂದ ಹೊರಕ್ಕೆ ಕಿತ್ತುಹಾಕುವಷ್ಟು ರಭಸವಾಗಿ ಒಂದು ವಿಧವಾದ ಶಬ್ದದೊಡನೆ ವಾಯುವು ಮುಖಮಾರ್ಗದಿಂದ ಹೊರಡುತ್ತದೆ. ಈ ಧ್ವನಿಯುಕ್ತವಾದ ವಾಯುವು ಚಿಕಿತ್ಸೆಮಾಡದೆ ಉಪೇಕ್ಷಿಸಿದಲ್ಲಿ ಜಾಗ್ರತೆಯಾಗಿಯೇ ಪ್ರಾಣವನ್ನು ಹರಣಮಾಡುವುದರಿಂದ ಅದಕ್ಕೆ ಹಿಕ್ಕಾ-ಬಿಕ್ಕಳಿಕೆ ಎಂಬ ಹೆಸರುಗಳನ್ನು ಆಯುರ್ವೇದ ಶಾಸ್ತ್ರಜ್ಞರು ಕೊಟ್ಟಿರುತ್ತಾರೆ.

**ಅನ್ನಜಾಯಮಳಾಕ್ಷುದ್ರಾಗಂಭೀರಾಮಹತೀತಥಾ ॥**
**ವಾಯುಃಕಫೇನಾನುಗತಃಪಂಚಹಿಕ್ಕಾಃಕರೋತಿಹಿ ॥ ೪ ॥**

ಕಫದಿಂದ ಯುಕ್ತವಾದ ಅಂದರೆ ಅನುಸೃತವಾದ ವಾಯುವು ಅನ್ನಜ, ಯಮಳ, ಕ್ಷುದ್ರ, ಗಂಭೀರ, ಮಹತಿ ಎಂಬ ಐದು ವಿಧಗಳಾದ ಬಿಕ್ಕಳಿಕೆಗಳನ್ನು ಹುಟ್ಟಿಸುತ್ತದೆ. ಇವುಗಳ ಲಕ್ಷಣಗಳು ಮುಂದೆ ಕ್ರಮವಾಗಿ ಹೇಳಲ್ಪಡುತ್ತವೆ.

**ಕಂಠೋರಸೋರ್ಗುರುತ್ವಂಚವದನಸ್ಯಕಷಾಯತಾ ॥**
**ಹಿಕ್ಕಾನಾಂಪೂರ್ವರೂಪಾಣಿಕುಕ್ಷೇರಾಟೋಪಏವಚ ॥ ೫ ॥**

ಗಂಟಲು, ಎದೆ ಇವುಗಳು ಭಾರವಾಗಿರುವುದು ಅಂದರೆ ಸ್ವಾಭಾವಿಕಗಳಾದ ಇವುಗಳ ಕೆಲಸ ನಡೆಯುವಾಗ ಕೊಂಚ ಭಾರವಾಗಿರುವಂತೆ ಮನಸ್ಸಿಗೆ ತೋರುವುದು, ಬಾಯಿ ಒಗರಾಗಿರುವುದು, ಹೊಟ್ಟೆ ಉಬ್ಬರಿಸಿಕೊಂಡಿರುವುದು, ಇವುಗಳು ಬಿಕ್ಕಳಿಕೆ ರೋಗ ಹುಟ್ಟುವ ಮೊದಲು ಕಾಣುವ ಲಕ್ಷಣಗಳು.

**ಪಾನಾನ್ನೈರತಿಸಂಯುಕ್ತೈಸ್ಸಹಸಾಪೀಡಿತೋನಿಲಃ ॥**
**ಹಿಕ್ಕಯತ್ಯೂರ್ಧ್ವಗೋಭೂತ್ವಾತಾಂವಿದ್ಯಾದನ್ನಜಾಂಭಿಷಕ್ ॥ ೬ ॥**

ದ್ರವರೂಪವಾದ ಆಹಾರವನ್ನಾಗಲಿ ಗಟ್ಟಿಯಾದ ಆಹಾರವನ್ನಾಗಲಿ ಒಂದನ್ನೇ ಅತಿಯಾಗಿ ಸೇವಿಸೋಣದರಿಂದ ಪೀಡಿಸಲ್ಪಟ್ಟ ಕಂಠಸ್ಥಾನಗತವಾದ ಉದಾನ ವಾಯುವು ಪ್ರಕುಪಿತವಾಗಿ ಊರ್ಧ್ವಮುಖವಾಗಿ ಬಿಕ್ಕಳಿಕೆಯನ್ನುಂಟುಮಾಡುತ್ತದೆ. ಇದು ಭೋಜನದ ವ್ಯತ್ಯಾಸದಿಂದ ಬಂದದ್ದಾದ್ದರಿಂದ ಅನ್ನಜಾ ಎಂಬದಾಗಿ ಹೆಸರು.

**ಚಿರೇಣಯಮಳೈರ್ವೇಗೈರ್ಯಾಹಿಕ್ಕಾಸಂಪ್ರವರ್ತತೆ ॥**
**ಕಂಪಯಂತೀಶಿರೋಗ್ರೀವಾಂಯಮಳಾಂತಾಂವಿನಿರ್ದಿಶೇತ್ ॥ ೭ ॥**

ಬಹಳ ಹೊತ್ತಿಗೊಂದು ಬಾರಿ ತಲೆ ಮತ್ತು ಕೊರಳುಗಳನ್ನು ನಡುಗಿಸುವಷ್ಟು ವೇಗಯುಕ್ತವಾಗಿ ಜೋಡಿಜೋಡಿಯಾಗಿ ಬಿಕ್ಕಳಿಕೆಗಳು ಬರಹತ್ತಿದರೆ ಅದಕ್ಕೆ ಯಮಳಾ ಎಂಬದಾಗಿ ಹೆಸರು.

ವಿಕೃಷ್ಟಕಾಲೈರ್ಯಾವೇಗೈರ್ಮಂದೈಸ್ಸಮಭಿವರ್ತತೇ ॥
ಕ್ಷುದ್ರಿಕಾನಾಮಸಾಹಿಕ್ಕಾಜತ್ರುಮೂಲಾತ್ಪ್ರಧಾವಿತಾ ॥ ೮ ॥

ಬಹಳ ಹೊತ್ತಿಗೊಂದು ಸಾರಿ ನಿದಾನವಾಗಿ ಎದೆಯಿಂದ ಹೊರಡುವ ಬಿಕ್ಕಳಿಕೆಗೆ ಕ್ಷುದ್ರಹಿಕ್ಕಾ ಎಂಬದಾಗಿ ಹೆಸರು.

ನಾಭಿಪ್ರವೃತ್ತಾಯಾಹಿಕ್ಕಾಘೋರಾಗಂಭೀರನಾದಿನೀ ॥
ಅನೇಕೋಪದ್ರವವತೀಗಂಭೀರಾನಾಮಸಾಸ್ಮೃತಾ ॥ ೯ ॥

ನಾಭಿಮೂಲದಿಂದ ಹೊರಡುವುದಾಗಿಯೂ, ಗಂಭೀರವಾದ ಶಬ್ದವುಳ್ಳದ್ದಾಗಿಯೂ, ಭಯಂಕರವಾಗಿ ಅನೇಕ ಉಪರೋಗಗಳಿಂದ ಕೂಡಿರುವ ಬಿಕ್ಕಳಿಕೆಗೆ ಗಂಭೀರಾ ಎಂಬದಾಗಿ ಹೆಸರು.

ಮರ್ಮಾಣ್ಯುತ್ಪೀಡಯಂತೀವಸತತಂಯಾಪ್ರವರ್ತತೇ ॥
ಮಹಾಹಿಕ್ಕೇತಿಸಾಜ್ಞೇಯಾಸರ್ವಗಾತ್ರಪ್ರಕಂಪಿನೀ ॥ ೧೦ ॥

ಶರೀರದಲ್ಲಿರುವ ಮುಖ್ಯಗಳಾದ ಮರ್ಮಸ್ಥಾನಗಳನ್ನೆಲ್ಲಾ ಪೀಡಿಸುತ್ತ ಶರೀರಾದ್ಯಂತಕ್ಕು ಕಂಪವನ್ನುಂಟುಮಾಡುತ್ತ ಎಡೆಬಿಡದೆ ಹೊರಡುತ್ತಿರುವ ಬಿಕ್ಕಳಿಕೆಗೆ ಮಹಾಹಿಕ್ಕಾ ಎಂಬ ಹೆಸರು.

ಆಯಮ್ಯತೇಹಿಕ್ಕತೋಯಸ್ಯದೇಹೋದೃಷ್ಟಿಶ್ಚೋರ್ಧ್ವಂನಾಮ್ಯತೇ ಯಸ್ಯನಿತ್ಯಂ ॥
ಕ್ಷೀಣೋನ್ನದ್ವಿಟ್ಕಕ್ಷಯಶ್ಚಾತಿಮಾತ್ರಂತೌದ್ವೌಚಾಪ್ಯವ ರ್ಜಯೇದ್ಧಿಕ್ಕಮಾನೌ ॥ ೧೧ ॥

ಬಿಕ್ಕಳಿಕೆ ಬರುವ ಕಾಲದಲ್ಲಿ ಯಾವನ ಶರೀರವನ್ನು ನೋಡಿದರೆ ವಿಸ್ತರಿಸುವಂತೆಯೂ ಸಂಕೋಚ ಹೊಂದುವಂತೆಯೂ ಕಾಣುತ್ತದೆಯೊ, ಕಣ್ಣಿನ ನೋಟವು ಊರ್ಧ್ವದೃಷ್ಟಿಯಾಗಿಯೇ ಬರುತ್ತದೆಯೋ ಅಂತಹ ಹಿಕ್ಕಾರೋಗಿಯ ರೋಗವು ಅಸಾಧ್ಯವೆಂದು ತ್ಯಜಿಸತಕ್ಕದ್ದು. ದೇಹಬಲವು ಕ್ಷಯಿಸಿಹೋಗಿ ಅನ್ನದ್ವೇಷವೂ ಇದ್ದು ಅತಿಯಾಗಿ ಬಿಕ್ಕಳಿಕೆಯೂ ಬರುತ್ತಿದ್ದಲ್ಲಿ ಅದೂ ಅಸಾಧ್ಯವೆಂಬದಾಗಿಯೇ ತ್ಯಜಿಸತಕ್ಕದ್ದು.

ಅತಿಸಂಚಿತದೋಷಸ್ಯಭಕ್ತಚ್ಛೇದಕೃಶಸ್ಯಚ ॥
ವ್ಯಾಧಿಭಿಃಕ್ಷೀಣದೇಹಸ್ಯವೃದ್ಧಸ್ಯಾತಿವ್ಯವಾಯಿನಃ ॥ ೧೨ ॥
ಆಸಾಂಯಾಸಾಸಮುತ್ಪನ್ನಾಹಿಕ್ಕಾಹಂತ್ಯಾಶುಜೀವಿತಂ ॥
ಯಮಿಕಾಚಪ್ರಲಾಪಾರ್ತಿಮೋಹತೃಷ್ಣಾಸಮನ್ವಿತಾ ॥ ೧೩ ॥
ಅಕ್ಷೀಣಶ್ಚಾಪ್ಯದೀನಶ್ಚಸ್ಥಿರಧಾತ್ವಿಂದ್ರಿಯಶ್ಚಯಃ ॥
ತಸ್ಯಸಾಧಯಿತುಂಶಕ್ಯಾಯಮಿಕಾಹಂತ್ಯತೋನ್ಯಥಾ ॥ ೧೪ ॥

ವಾತಾದಿ ದೋಷಗಳು ಅತಿಯಾಗಿ ಕೂಡಿ ಹಾಕಿಕೊಂಡು ಪ್ರಕುಪಿತವಾಗಿರುವುದು, ಅನ್ನ ತಿನ್ನದೆ ಕೃಶನಾಗಿರುವುದು, ಯಾವುದಾದರೂ ವ್ಯಾಧಿಯಿಂದ ಕೃಶನಾಗಿರು

ವುದು, ವಯಸ್ಸು ಕಳೆದುಹೋಗಿ ಮುಪ್ಪು ಬಂದಿರುವುದು, ಅತಿಯಾಗಿ ಸ್ತ್ರೀಸಂಗ ಮಾಡುವ ಸ್ವಭಾವವುಳ್ಳವನಾಗಿರುವುದು, ಇಂತವರಿಗೆ ಹಿಂದೆ ಹೇಳಿದ ಐದು ವಿಧವಾದ ಬಿಕ್ಕಳಿಕೆಗಳ ಮಧ್ಯೆ ಯಾವುದು ಬಂದರೂ ಪ್ರಾಣವನ್ನು ಹರಣಮಾಡುತ್ತದೆ. ಜೋಡಿಯಾಗಿ ಬರುತ್ತಿರುವ ಯಮಿಕಾ ಎಂಬ ಬಿಕ್ಕಳಿಕೆಯು ಸಂಕಟ, ಅಜ್ಞಾನ, ಬಾಯಾರಿಕೆ ಇಂತಹ ಉಪರೋಗಗಳಿದ್ದರೆ ಪ್ರಾಣವನ್ನು ಕೊಲ್ಲುತ್ತದೆ. ರೋಗಿಗೆ ರಕ್ತಮಾಂಸಗಳ ಬಲ ಚೆನ್ನಾಗಿದ್ದು ದೈನ್ಯವಿಲ್ಲದೆ ಇಂದ್ರಿಯಪಾಟವ ಚೆನ್ನಾಗಿದ್ದು ಶರೀರದಲ್ಲಿ ಧಾತುವೃದ್ಧಿಯೂ ಚೆನ್ನಾಗಿದ್ದಲ್ಲಿ ಯಮಿಕಾ ಎಂಬ ಜೋಡಿಯಾಗಿ ಬರುವ ಬಿಕ್ಕಳಿಕೆಯು ಚಿಕಿತ್ಸೆಗೆ ಸಾಧ್ಯವಾಗುತ್ತದೆ. ಸ್ವಲ್ಪ ವ್ಯತ್ಯಾಸವಿದ್ದರೂ ನಿಸ್ಸಂಶಯವಾಗಿ ಪ್ರಾಣಹಾನಿಯನ್ನೇ ಉಂಟುಮಾಡುತ್ತದೆ.

ಮಹೋರ್ಧ್ವಚ್ಛಿನ್ನತಮಕಕ್ಷುದ್ರಭೇದೈಸ್ತುಪಂಚಧಾ ||
ಭಿದ್ಯತೇಸಮಹಾವ್ಯಾಧಿಶ್ವಾಸಏಕೋವಿಶೇಷತಃ || ೧೫ ||
ವಾತಾಧಿಕೋಭವೇತ್‌ಕ್ಷುದ್ರಸ್ತಮಕಸ್ತುಕಫೋದ್ಭವಃ ||
ಕಫವಾತಾಧಿಕಶ್ಛಿನ್ನಸಂಸೃಷ್ಟಶ್ಛಿನ್ನಸಂಜ್ಞಕಃ || ೧೬ ||
ಶ್ವಾಸೋಮಾರುತಸಂಸೃಷ್ಟೋಮಹಾನೂರ್ಧ್ವಸ್ತಮೋಮತಃ ||
ಪ್ರಾಗ್ರೂಪಂತಸ್ಯಹೃತ್ಪೀಡಾಶೂಲಮಾಧ್ಮಾನಮೇವಚ || ೧೭ ||
ಆನಾಹೋವಕ್ತ್ರವೈರಸ್ಯಂಶಂಖನಿಸ್ತೋದಏವಚ ||

ಶ್ವಾಸರೋಗವನ್ನು ಹೇಳುತ್ತಾನೆ. ಮಹಾಶ್ವಾಸ, ಊರ್ಧ್ವಶ್ವಾಸ, ಛಿನ್ನಶ್ವಾಸ, ತಮಕಶ್ವಾಸ, ಕ್ಷುದ್ರಶ್ವಾಸ ಎಂಬುದಾಗಿ ಶ್ವಾಸರೋಗವು ಐದು ವಿಧವಾಗಿದೆ. ಈ ಶ್ವಾಸರೋಗದಲ್ಲಿ ಪ್ರಕುಪಿತವಾದ ವಾತದ ಲಕ್ಷಣಗಳು ಅಧಿಕವಾಗಿದ್ದಲ್ಲಿ ಅದಕ್ಕೆ ಕ್ಷುದ್ರಶ್ವಾಸವೆಂಬದಾಗಿ ಹೆಸರು. ಕಫದ ಲಕ್ಷಣಗಳು ಅಧಿಕವಾಗಿ ಕಂಡುಬರುತ್ತಿದ್ದಲ್ಲಿ ತಮಕಶ್ವಾಸ, ಕಫ ಮತ್ತು ವಾತಗಳ ಲಕ್ಷಣಗಳು ಎರಡೂ ಅಧಿಕವಾಗಿ ಕಂಡುಬರುತ್ತಿದ್ದರೆ ಛಿನ್ನಶ್ವಾಸ, ವಾಯುವಿನ ಲಕ್ಷಣಗಳೂ ಹಿಂಸೆಗಳೂ ಹೆಚ್ಚಾಗಿ ಇದ್ದರೆ ಮಹಾಶ್ವಾಸ, ಮರಣಕಾಲದಲ್ಲಿ ಬರುವುದಕ್ಕೆ ಊರ್ಧ್ವಶ್ವಾಸವೆಂದು ಹೆಸರು. ಶ್ವಾಸರೋಗವು ಪ್ರಾಪ್ತವಾಗುವ ಪೂರ್ವಭಾವಿ ಕಾಣುವ ಲಕ್ಷಣಗಳಾವುವೆಂದರೆ ಎದೆನೋವು, ಹೊಟ್ಟೆಶೂಲೆ, ಹೊಟ್ಟೆಯುಬ್ಬರ, ಬಾಯಿಯಲ್ಲಿ ರುಚಿ ಕೆಡುವುದು, ಶಂಖ ಎಂಬ ಕಣ್ಣಿನ ಸೋಗೆಗೂ ಕಿವಿಗೂ ಮಧ್ಯಭಾಗದಲ್ಲಿರುವ ಮರ್ಮಸ್ಥಾನದಲ್ಲಿ ಅತಿಯಾಗಿ ವ್ಯಥೆ ಇವು ಲಕ್ಷಣಗಳು.

ಯದಾಸ್ರೋತಾಂಸಿಸಂರುಧ್ಯಮಾರುತಃಕಫಪೂರ್ವಕಃ || ೧೮ ||
ವಿಷ್ವಗ್ವ್ರಜತಿಸಂರುದ್ಧಸ್ತದಾಶ್ವಾಸಾನ್‌ಕರೋತಿಸಃ ||

ಕಫಪ್ರಧಾನವಾದ ವಾಯುವು ಪ್ರಕುಪಿತವಾಗಿ ಪ್ರಾಣ ಮತ್ತು ಉದಾನ ವಾಯುಗಳು ಸಂಚರಿಸತಕ್ಕ ಸ್ರೋತಸ್ಸುಗಳನ್ನು ನಿರೋಧಮಾಡಿ ತನ್ನ ಚಲನಕ್ಕೆ ಮಾರ್ಗವಿಲ್ಲದ್ದರಿಂದ ಸುತ್ತಲೂ ಮಾರ್ಗ ಸಿಕ್ಕಿದೆತ್ತ ಹೋಗುವುದಕ್ಕೆ ಪ್ರಾರಂಭಿಸಿದಲ್ಲಿ ಆಗ್ಯೆ ಶ್ವಾಸರೋಗವನ್ನು ಹುಟ್ಟಿಸುತ್ತದೆ.

ಉದ್ಧೂಯಮಾನವೇಗೋಯಶ್ಶಬ್ದವದ್ದುಃಖಿತೋನರಃ || ೧೯ ||
ಉಚ್ಚೈಶ್ಶ್ವಸಿತಿಸಂರುದ್ಧೋಮತ್ತರ್ಷಭಇವಾನಿಶಂ ||
ಪ್ರಣಷ್ಟಜ್ಞಾನವಿಜ್ಞಾನಸ್ತಥಾವಿಭ್ರಾಂತಲೋಚನಃ || ೨೦ ||
ವಿವೃತಾಕ್ಷ್ಯಾನನೋಬದ್ಧಮೂತ್ರವರ್ಚಾವಿಶೀರ್ಣವಾಕ್ ||
ದೀನಃಪ್ರಶ್ವಸಿತಂಚಾಸ್ಯದೂರಾದ್ವಿಜ್ಞಾಯತೇಭೃಶಂ || ೨೧ ||
ಮಹಾಶ್ವಾಸೋಪಸೃಷ್ಟಸ್ತುಕ್ಷಿಪ್ರಮೇವವಿಪದ್ಯತೆ ||

ಮಹಾಶ್ವಾಸದಲ್ಲಿ ಶ್ವಾಸದ ವೇಗವೆಲ್ಲವೂ ಊರ್ಧ್ವಮುಖವಾಗಿಯೇ ಇರೋಣದರಿಂದ ಉಸಿರನ್ನೇ ಹೊರಕ್ಕೆ ಕಿತ್ತುಹಾಕುವಷ್ಟು ವೇಗದೊಡನೆಯೂ ಮದಿಸಿದ ಗೂಳಿಯು ಗೊರಿಕೆ ಹೊಡೆಯುವಷ್ಟು ಶಬ್ದಯುಕ್ತವಾಗಿಯೂ ಉಸಿರು ಹೊಯ್ಯುತ್ತಿರುವುದು, ಬುದ್ಧಿ ಶಕ್ತಿ ಮತ್ತು ಜ್ಞಾನ ಸಹ ನಷ್ಟವಾಗಿ ಹೋಗಿರುವುದು, ದೃಷ್ಟಿಶಕ್ತಿಯು ಕೂಡ ಗುರಿತಪ್ಪಿ ಹೋಗಿರುವುದು, ಕಣ್ಣು ಮತ್ತು ಬಾಯಿಗಳನ್ನು ತೆರೆದುಕೊಂಡೇ ಇರುವುದು ಅಂದರೆ ಮುಚ್ಚುವ ಶಕ್ತಿ ಕಡಿಮೆಯಾಗಿರುವುದು. ಮಲ ಮತ್ತು ಮೂತ್ರಗಳು ರುದ್ಧವಾಗಿರುವುದು, ಧ್ವನಿ ಒಡದುಹೋಗಿರುವುದು, ಯಾವಾಗಲೂ ಬಹಳ ಕಷ್ಟಪಡುವವನಂತೆ ಮುಖ ಲಕ್ಷಣದಲ್ಲಿ ದೀನತ್ವ ತೋರುತ್ತಿರುವುದು, ಉಸಿರು ಬಿಡುವ ಶಬ್ದವು ಬಹಳ ದೂರಕ್ಕಾದರೂ ಕೇಳಿಸುತ್ತಿರುವುದು. ಈ ಲಕ್ಷಣಗಳುಳ್ಳ ಮಹಾಶ್ವಾಸವು ಪ್ರಾಪ್ತವಾಯಿತೆಂದರೆ ರೋಗಿಯು ಜಾಗ್ರತೆಯಾಗಿಯೇ ಸತ್ತುಹೋಗುತ್ತಾನೆಂದು ತಿಳಿಯಬಹುದು.

ಊರ್ಧ್ವಂಶ್ವಸಿತಿಯೋದೀರ್ಘಂನಚಪ್ರತ್ಯಾಹರತ್ಯಧಃ || ೨೨ ||
ಶ್ಲೇಷ್ಮಾವೃತಮುಖಸ್ರೋತಾಃಕ್ರುದ್ಧಗಂಧವಹಾರ್ದಿತಃ ||
ಊರ್ಧ್ವದೃಷ್ಟಿರ್ವಿಪಶ್ಯಂಸ್ತುವಿಭ್ರಾಂತಾಕ್ಷಇತಸ್ತತಃ || ೨೩ ||
ಪ್ರಮುಹ್ಯನ್ವೇದನಾರ್ತಶ್ಚಶುಷ್ಕಾಸ್ಯೋರತಿಪೀಡಿತಃ ||
ಊರ್ಧ್ವಶ್ವಾಸೇಪ್ರಕುಪಿತೇಹ್ಯಧಶ್ವಾಸೋನಿರುಧ್ಯತಿ || ೨೪ ||
ಮುಹ್ಯತಸ್ತಾಮ್ಯತಶ್ಚೋರ್ಧ್ವಂಶ್ವಾಸಸ್ತಸ್ಯೈವಹಂತ್ಯಸೂನ್ ||

ಶ್ವಾಸರೋಗದಲ್ಲಿ ಉಸಿರನ್ನು ಯಾವಾಗಲೂ ಮೇಲಕ್ಕೇ ಎಳೆಯುತ್ತಿರುವುದು ಅಧೋಮುಖವಾಗಿ ಹಿಂದಕ್ಕೆ ಉಸಿರೆಳೆಯುವುದೇ ಕಡಿಮೆಯಾಗಿರುವುದು, ಗಂಟಲು ಮತ್ತು ಬಾಯಿನಲ್ಲಿ ಶ್ಲೇಷ್ಮ ತುಂಬಿಕೊಂಡಿರುವುದು, ಪ್ರಕುಪಿತವಾದ ವಾತದ ವೇದನೆಗಳು ಅಂದರೆ ಪಾರ್ಶ್ವಶೂಲಾದಿಗಳು ಪೀಡಿಸುತ್ತಿರುವುದು, ಕಣ್ಣುಗುಡ್ಡೆಯು ಯಾವಾಗ್ಯೂ ಊರ್ಧ್ವದೃಷ್ಟಿಯನ್ನೇ ಸೂಚಿಸುತ್ತಿರುವುದು, ಭ್ರಾಂತಿ ಹೊಂದಿದವನಂತೆ ಸುತ್ತಲೂ ದೃಷ್ಟಿಯನ್ನು ತಿರುಗಿಸುತ್ತಿರುವುದು, ಸಂಕಟದಿಂದ ಆಗಾಗ್ಗೆ ಜ್ಞಾನ ಪಲ್ಲಟವಾಗುತ್ತಿರುವುದು, ಮುಖವು ಬೆಳ್ಳಗಾಗುವುದು, ಬಾಯಿಯಲ್ಲಿ ಅರುಚಿ ಇರುವುದು, ಈ ರೀತಿಯಾಗಿ ಊರ್ಧ್ವಶ್ವಾಸವು ವೃದ್ಧಿಯಾದಂತೆಲ್ಲಾ ಅಧೋ ವಾಯುವು ಬದ್ಧವಾಗುತ್ತ ಬರುವುದು, ಬಹಳವಾಗಿ ಸಂಕಟವೂ ಅಜ್ಞಾನವೂ ಹೆಚ್ಚುತ್ತ ಹೋಗಿ ಕ್ರಮೇಣ ಈ ಊರ್ಧ್ವಶ್ವಾಸವು ಪ್ರಾಣವನ್ನು ಕೊಲ್ಲುತ್ತದೆ.

ಯಸ್ತು ಶ್ವಸಿತಿವಿಚ್ಛಿನ್ನಂ ಸರ್ವಪ್ರಾಣೇನಪೀಡಿತಃ ॥ ೨೫ ॥
ನವಾಶ್ವಸಿತಿದುಃಖಾರ್ತೋ ಮರ್ಮಚ್ಛೇದರುಗರ್ದಿತಃ ॥
ಆನಾಹಸ್ವೇದಮೂರ್ಛಾರ್ತೋ ದಹ್ಯಮಾನೇನಬಸ್ತಿನಾ ॥ ೨೬ ॥
ವಿಪ್ಲುತಾಕ್ಷಃ ಪರಿಕ್ಷೀಣಃ ಶ್ವಸನ್ ರಕ್ತೈಕಲೋಚನಃ ॥
ವಿಚೇತಾಃ ಪರಿಶುಷ್ಕಾಸ್ಯೋ ವಿವರ್ಣಃ ಪ್ರಲಪನ್ನರಃ ॥ ೨೭ ॥
ಛಿನ್ನಶ್ವಾಸೇನವಿಚ್ಛಿನ್ನಸ್ಸಶೀಘ್ರಂ ವಿಜಹಾತ್ಯಸೂನ್ ॥

ಛಿನ್ನಶ್ವಾಸದ ಲಕ್ಷಣವನ್ನು ಹೇಳುತ್ತಾನೆ. ಬಹಳ ಸಂಕಟದಿಂದ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಗಳಿಗೆಗೆ ಒಂದು ಸಾರಿ ಉಸಿರುಬಿಡುವುದು, ಸಂಕಟ ಹೆಚ್ಚಾಗಿ ಒಂದೊಂದು ವೇಳೆ ಮರ್ಮಸ್ಥಾನಕ್ಕೇನೇ ಅಪಾಯವಾದಂತೆ ತೋರಿ ಉಸಿರು ಬಿಡುವುದಕಾಗದೇನೇ ಹೋಗ[illegible], ಹೊಟ್ಟೆಯು ಬ್ಬರಿಸಿಕೊಳ್ಳುವುದು. ಮೈ ಬೆವರುತ್ತಿರುವುದು, ಆಗಾಗ್ಗೆ ಮೂರ್ಛೆ ಬರುತ್ತಿರುವುದು, ಮೂತ್ರಾಶಯದಲ್ಲಿ [illegible] ಇರುವುದು, ಕಣ್ಣಿನಲ್ಲಿ ನೀರು ತುಂಬಿ ಹೊಂಡಿರುವುದು, ರೋಗಿಯು ದಿವಸ ದಿವಸಕ್ಕೆ ಕ್ಷೀಣನಾಗುತ್ತಿರುವುದು, ಬಹಳ ಕಷ್ಟದಿಂದ ಉಸಿರು ಬಿಡುತ್ತಿರುವುದು, ರೋಗದ ಸ್ವಭಾವದಿಂದ ಒಂದು ಕಣ್ಣು ಕೆಂಪಾಗಿರುವುದು, ಮನಸ್ಸು ಯಾವಾಗಲೂ ಸ್ವಸ್ಥವಾಗಿರುವುದಕ್ಕಿಲ್ಲ, ಬಾಯಿ ಒಣಗುತ್ತಿರುವುದು, ಮುಖದ ಸ್ವಾಭಾವಿಕವಾದ ತೇಜಸ್ಸು ಕೆಟ್ಟುಹೋಗುವುದು. [illegible]ಟದಿಂದ [illegible]ದು ಈ ರೀತಿಯಾಗಿ ಛಿನ್ನಶ್ವಾಸ ಪೀಡಿತನಾದವನು ಕ[illegible] ಪ್ರಾಣಬಿಟ್ಟವನಂತೆ ಬಹಳ ಬೇಗ ಸಾಯುತ್ತಾನೆ

ಪ್ರತಿಲೋಮಂಯದಾವಾಯುಸ್ಸ್ರೋತಾಂಸಿಪ್ರತಿಪದ್ಯತೇ ॥ ೨೮ ॥
ಗ್ರೀವಾಂಶಿರಶ್ಚ ಸಂಗೃಹ್ಯ ಶ್ಲೇಷ್ಮಾಣಂ ಸಮುದೀರ್ಯ ಚ ॥
ಕರೋತಿಪೀನಸಂತೇನರುದ್ಧೋಘುರ್ಘುರಕಂತಥಾ ॥ ೨೯ ॥
ಅತೀವತೀವ್ರವೇಗಂಚಶ್ವಾಸಂಪ್ರಾಣಪ್ರಪೀಡಕಂ ॥
ಪ್ರತಾಮ್ಯತಿಸವೇಗೇನತೃಷ್ಯತೇಸನ್ನಿರುಧ್ಯತೇ ॥ ೩೦ ॥
ಪ್ರಮೋಹಂಕಾಸಮಾನಶ್ಚ ಸಗಚ್ಛತಿಮುಹುರ್ಮುಹುಃ ॥
ಶ್ಲೇಷ್ಮಣ್ಯಮುಚ್ಯಮಾನೇತುಭೃಶಂಭವತಿದುಃಖಿತಃ ॥ ೩೧ ॥
ತಸ್ಯೈವಚವಿಮೋಕ್ಷಾಂತೇಮುಹೂರ್ತಂಲಭತೇಸುಖಂ ॥
ಅಥಾಸ್ಯೋದ್ಧ್ವಂಸತೇಕಂಠಃಕೃಚ್ಛ್ರಾಚ್ಛಕ್ನೋತಿಭಾಷಿತುಂ ॥ ೩೨ ॥
ನಚಾಪಿಲಭತೇನಿದ್ರಾಂಶಯಾನಶ್ವಾಸಪೀಡಿತಃ ॥
ಪಾರ್ಶ್ವೇತಸ್ಯಾವಗೃಹ್ಣಾತಿಶಯಾನಸ್ಯಸಮೀರಣಃ ॥ ೩೩ ॥
ಆಸೀನೋಲಭತೇಸೌಖ್ಯಂಉಷ್ಣಂಚೈವಾಭಿನಂದತಿ ॥
ಉಚ್ಛ್ರಿತಾಕ್ಷೋಲಲಾಟೇನಸ್ವಿದ್ಯತಾಭೃಶಮಾರ್ತಿಮಾನ್ ॥ ೩೪ ॥
ವಿಶುಷ್ಕಾಸ್ಯೋಮುಹುಶ್ವಾಸೋಮುಹುಶ್ಚೈವಾವಧಮ್ಯತೇ ॥
ಮೇಘಾಂಬುಶೀತಪ್ರಾಗ್ವಾತೈಶ್ಶ್ಲೇಷ್ಮಲೈಶ್ಚವಿವರ್ಧತೇ ॥ ೩೫ ॥
ಸಯಾಪ್ಯಸ್ತಮಕಶ್ವಾಸಸ್ಸಾಧ್ಯೋವಾಸ್ಯಾನ್ನವೋತ್ಥಿತಃ ॥ [illegible]

ತಮಕಶ್ವಾಸದ ಸ್ವರೂಪವನ್ನು ಹೇಳುತ್ತಾನೆ. ಶರೀರಗತವಾದ ವಾಯುವು ಪ್ರಕುಪಿತವಾಗಿ ಪ್ರತಿಲೋಮಗತಿಯಿಂದ ಸ್ರೋತಸ್ಸುಗಳಲ್ಲಿ ಸಂಚಾರಮಾಡುತ್ತ ಕತ್ತು ಮತ್ತು ತಲೆ ಇವುಗಳನ್ನು ಹಿಡಿದುಕೊಂಡು ಶ್ಲೇಷ್ಮವು ಪ್ರಕುಪಿತವಾಗುವಂತೆ ಮಾಡುತ್ತದೆ. ಈ ರೀತಿಯಾಗಿ ಶ್ಲೇಷ್ಮವು ಪ್ರಕುಪಿತವಾಗಿ ನೆಗಡಿಯನ್ನು ಹುಟ್ಟಿಸಿ ಗಂಟಲು ಕಟ್ಟಿಕೊಂಡು ಗಂಟಲಿನಲ್ಲಿ ಗುರು ಗುರು ಎಂಬ ಶಬ್ದಯುಕ್ತವಾದ ಉಸಿರು ಹೊರಡುವಂತೆ ಮಾಡುವುದಲ್ಲದೆ ಅತಿ ವೇಗಯುಕ್ತವಾದ ಪ್ರಾಣನಾಶಕವಾದ ಶ್ವಾಸವನ್ನು ಸಹ ಹುಟ್ಟಿಸುತ್ತದೆ. ಈ ಶ್ವಾಸವು ಹುಟ್ಟಿತೆಂದರೆ ರೋಗಿಯು ಕೆಮ್ಮಿನ ವೇಗದಿಂದ ಸಂಕಟಪಡುತ್ತಿರುತ್ತಾನೆ. ಬಾಯಾರಿಕೆ ಉಂಟಾಗುತ್ತದೆ. ಆಗಾಗ್ಯೆ ಉಸಿರುಕಟ್ಟುತ್ತಿರುತ್ತದೆ. ಕೆಮ್ಮುವಾಗ ಒಂದೊಂದು ವೇಳೆ ಜ್ಞಾನವಿಲ್ಲದವನಾಗುವುದೂ ಉಂಟು. ಕೆಮ್ಮಿ ಶ್ಲೇಷ್ಮವು ಹೊರಕ್ಕೆ ಹೊರಡುವವರೆವಿಗೂ ಬಹಳ ಸಂಕಟಪಡುತ್ತಿರುತ್ತಾನೆ. ಶ್ಲೇಷ್ಮವು ಹೊರಕ್ಕೆ ಬಂದ ಮೇಲೆ ಒಂದು ಗಳಿಗೆ ಸುಖವಾದಂತೆ ತೋರುತ್ತದೆ. ಗಂಟಲು ಕೂತುಹೋಗಿ ಮಾತಾಡಲು ಬಹಳ ಕಷ್ಟವಾಗುತ್ತದೆ. ಈ ಶ್ವಾಸದ ಬಾಧೆಯಿಂದ ಮಲಗಿ ನಿದ್ರಿಸುವುದಕ್ಕೆ ಆಗುವುದಿಲ್ಲ; ಮಲಗಿಕೊಂಡರೆ ವಾಯುವಿನಿಂದ ಪಕ್ಕಗಳು ಹಿಡಿದುಕೊಳ್ಳುತ್ತವೆ. ಯಾವಾಗ್ಯೂ ಕುಳಿತಿರುವುದರಿಂದಲೇ ರೋಗಿಗೆ ಕೊಂಚ ಹಿತ ಕಾಣುವುದರಿಂದ ಕುಳಿತಿರುವುದಕ್ಕೇನೆ ಅಪೇಕ್ಷಿಸುತ್ತಾನೆ. ಬಿಸಿನೀರು ಮೊದಲಾದ ಉಷ್ಣಪದಾರ್ಥಗಳ ಮೇಲೆಯೇ ಅಪೇಕ್ಷೆ ಹೆಚ್ಚಾಗಿರುತ್ತದೆ. ಕಣ್ಣಿನ ಸುತ್ತಲೂ ಬಾತು ಬರುತ್ತದೆ. ಹಣೆ ಬೆವರುತ್ತಿರುತ್ತದೆ. ಯಾವಾಗ್ಯೂ ಸಂಕಟವಾಗುತ್ತಲೇ ಇರುತ್ತದೆ, ಬಾಯಿ ಒಣಗುತ್ತಿರುತ್ತದೆ, ಉಸಿರು ವೇಗವಾಗುತ್ತದೆ, ಉಸಿರು ಬಿಟ್ಟಂತೆಯೇ ಶರೀರ ನಡುಗುವುದಕ್ಕಾರಂಭವಾಗುತ್ತದೆ. ಮಳೆಗಾಲ, ಶೀತಕಾಲ, ಶೀತಗಾಳಿ ಇವುಗಳಿಂದಲೂ ಶ್ಲೇಷ್ಮವರ್ಧಕಗಳಾದ ಆಹಾರ ವಿಹಾರಗಳಿಂದಲೂ ಈ ಉಬ್ಬಸ ಹೆಚ್ಚುತ್ತದೆ. ಇದಕ್ಕೆ ತಮಕಶ್ವಾಸವೆಂಬ ಹೆಸರು. ಈ ಶ್ವಾಸರೋಗವು ಕಾಲಹರಣಮಾಡತಕ್ಕದ್ದೇ ಸರಿ, ಹೊಸದಾಗಿದ್ದರೆ ಒಂದುವೇಳೆ ಸಾಧ್ಯವಾಗಲೂ ಬಹುದು.

ಜ್ವರಮೂರ್ಚ್ಛಾಪರೀತಸ್ಯ ವಿದ್ಯಾತ್ಪ್ರತಮಕಂತುತಂ ॥೩೭॥
ಉದಾವರ್ತರಜೋಽಜೀರ್ಣಕ್ಲಿನ್ನಕಾಯನಿರೋಧಜಃ ।
ತಮಸಾ ವರ್ಧತೇಽತ್ಯರ್ಥಂ ಶೀತೈಶ್ಚಾಶು ಪ್ರಶಾಮ್ಯತಿ ॥೩೮॥
ಮಜ್ಜತಸ್ತಮಸೀವಾಸ್ಯ ವಿದ್ಯಾತ್ಸಂತಮಕಂತುತಂ ।

ಹಿಂದೆ ಹೇಳಿದ ತಮಕಶ್ವಾಸವೇನೆ ಜ್ವರ ಮತ್ತು ಮೂರ್ಛೆ ಮೊದಲಾದ ಪಿತ್ತದ ಲಕ್ಷಣಗಳನ್ನೂ ಹೊಂದಿದ್ದರೆ ಪ್ರತಮಕವೆನ್ನಿಸಿಕೊಳ್ಳುತ್ತದೆ. ಉದಾವರ್ತವೆಂಬ ರೋಗ ಧೂಳು, ಅಜೀರ್ಣ, ವೃದ್ಧಾಪ್ಯ, ಮಲಮೂತ್ರಗಳ ವೇಗರೋಧ ಇವುಗಳಿಂದ ಈ ಪ್ರತಮಕಶ್ವಾಸವು ಹುಟ್ಟುತ್ತದೆ. ಈ ಪ್ರತಮಕಶ್ವಾಸವು ಮಾನಸಿಕವಾದ ತಮೋರೂಪವಾದ ದೋಷದಿಂದ ವೃದ್ಧಿಯಾಗುತ್ತದೆ. ಶೀತೋಪಚಾರಗಳಿಂದ ಜಾಗ್ರತೆಯಾಗಿ ಶಮನವನ್ನು ಹೊಂದುತ್ತದೆ. ಈ ತಮಕಶ್ವಾಸದಿಂದ ಪೀಡಿತನಾದ ಮನುಷ್ಯನು ಯಾವಾಗಲೂ ಕತ್ತಲೆಕೋಣೆಯಲ್ಲಿದ್ದವನಂತೆ ಬುದ್ಧಿಗೆ ಏನೂ ತೋರದವನಾಗಿರುತ್ತಾನೆ. ಹೀಗಿರುವ ತಮಕಶ್ವಾಸಕ್ಕೇನೆ ಸಂತಮಕವೆಂಬದಾಗಿ ಹೆಸರು.

ರೂಕ್ಷಾಯಾಸೋದ್ಭವಃಕೋಷ್ಠೇಕ್ಷುದ್ರೋವಾತಉದೀರಯನ್॥ ೩೮॥
ಕ್ಷುದ್ರಶ್ವಾಸೋ ನಸೋತ್ಯರ್ಥಂ ದುಃಖೇನಾಂಗಪ್ರಬಾಧಕಃ॥
ಹಿನಸ್ತಿನಸಗಾತ್ರಾಣಿ ನಸದುಃಖ್ಯೋಯಥೇತರೇ ॥೩೯॥
ನಚಭೋಜನಪಾನಾನಾಂ ನಿರುಣದ್ಧ್ಯುಚಿತಾಂಗತಿಂ॥
ನೇಂದ್ರಿಯಾಣಾಂ ವ್ಯಥಾಂನಾಪಿಕಾಂಚಿದಾಪಾದಯೇದ್ರುಜಂ ॥೪೦॥
ಸಸಾಧ್ಯಉಕ್ತೋಬಲಿನಃ ಸರ್ವೇಚಾವ್ಯಕ್ತಲಕ್ಷಣಾಃ॥
ಕ್ಷುದ್ರಸ್ಸಾಧ್ಯೋಮತಸ್ತೇಷಾಂತಮಕಃ ಕೃಚ್ಛ್ರಉಚ್ಯತೆ ॥೪೧॥
ತ್ರಯಶ್ವಾಸಾನಸಿದ್ಧ್ಯಂತಿತಮಕೋದುರ್ಬಲಸ್ಯಚ॥

ರೂಕ್ಷಗಳಾದ ಅನ್ನಪಾನಗಳು ಮತ್ತು ಶರೀರಾಯಾಸಜನಕಗಳಾದ ಕೆಲಸಗಳು ಇಂತಹ ಅಲ್ಪಕಾರಣಗಳಿಂದ ಕೋಷ್ಠಗತವಾದ ವಾಯುವು ಪ್ರಕುಪಿತವಾಗಿ ಶ್ವಾಸರೋಗವನ್ನು ಹುಟ್ಟಿಸುತ್ತದೆ. ಇದಕ್ಕೇನೆ ಕ್ಷುದ್ರಶ್ವಾಸವೆಂದು ಹೆಸರು. ಇದು ಶರೀರಕ್ಕೆ ಅಷ್ಟೊಂದು ದುಃಖಜನಕವಾಗುವುದಿಲ್ಲ. ಉಳಿದ ಶ್ವಾಸರೋಗಗಳಂತೆ ಹಿಂಸಿಸುವುದೂ ಇಲ್ಲ. ಅನ್ನಪಾನಗಳ ಮಾರ್ಗವನ್ನೂ ರೋಧಮಾಡುವುದಿಲ್ಲ. ಇಂದ್ರಿಯಗಳಿಗೆ ವ್ಯಥೆಯನ್ನಾಗಲಿ ಒಂದು ಬಗೆಯ ನೋವನ್ನಾಗಲಿ ಉಂಟುಮಾಡುವುದಿಲ್ಲ. ದೇಹಬಲ ಚೆನ್ನಾಗಿದ್ದಲ್ಲಿ ಕ್ಷುದ್ರಶ್ವಾಸವು ಸಾಧ್ಯವೆಂದು ತಿಳಿಯಬೇಕು. ಎಲ್ಲ ವಿಧವಾದ ಶ್ವಾಸರೋಗಗಳು ಸಂಪೂರ್ಣ ಲಕ್ಷಣಗಳೂ ಕಾಣುವುದರೊಳಗೆ ಅಂದರೆ ಪ್ರಾರಂಭದಲ್ಲಿಯೇ ಚಿಕಿತ್ಸೆಮಾಡಿದಲ್ಲಿ ಸಾಧ್ಯಗಳೆಂದು ತಿಳಿಯಬಹುದು. ಸಂಪೂರ್ಣ ಲಕ್ಷಣಗಳು ಕಂಡುಬಂದರೂ ಕ್ಷುದ್ರಶ್ವಾಸವು ಸಾಧ್ಯವೆಂದೇ ತಿಳಿಯಬಹುದು. ತಮಕಶ್ವಾಸವು ಕಷ್ಟಸಾಧ್ಯ, ಉಳಿದ ಮೂರು ವಿಧವಾದ ಶ್ವಾಸಗಳು ಅಸಾಧ್ಯಗಳೆಂದು ತಿಳಿಯಬೇಕು. ದೇಹ ಬಲ ಮಾತ್ರ ಇಲ್ಲದವರಿಗೆ ತಮಕಶ್ವಾಸವು ಕೂಡ ಅಸಾಧ್ಯವೆಂತಲೇ ತಿಳಿಯಬೇಕು.

ಕಾಮಂ ಪ್ರಾಣಹರಾರೋಗಾ ಬಹವೋನತುತೇತಥಾ॥
ಯಥಾಶ್ವಾಸಶ್ಚಹಿಕ್ಕಾಚ ಹರತಃ ಪ್ರಾಣಮಾಶುಚ ॥೪೨॥

ರೋಗಗಳೆಲ್ಲವೂ ಪ್ರಾಣನಾಶಕಗಳೇ ಆದರೂ ಬಿಕ್ಕಳಿಕೆ, ಶ್ವಾಸ ಇವೆರಡರಷ್ಟು ಜಾಗ್ರತೆಯಾಗಿ ಯಾವುದೂ ಪ್ರಾಣಹಾನಿ ಮಾಡಲಾರದು.

—: ಇಲ್ಲಿಗೆ ಹಿಕ್ಕಾಶ್ವಾಸನಿದಾನ ಸಮಾಪ್ತ :—

---

## ಸ್ವರಭೇದನಿದಾನ ೬

ಅತ್ಯುಚ್ಚಭಾಷಣ ವಿಷಾಧ್ಯಯನಾಭಿಘಾತಸಂದೂಷಣೈಃ
ಪ್ರಕುಪಿತಾಃಪವನಾದಯಸ್ತು॥ ಸ್ರೋತಸ್ಸುತೇ ಸ್ವರವಹೇಷು
ಗತಾಃ ಪ್ರತಿಷ್ಠಾಂ ಹನ್ಯುಸ್ಸ್ವರಂಭವತಿಚಾಪಿಹಿಷಡ್ವಿಧಸ್ಸಃ ॥೧॥

ಅತ್ಯಂತ ಗಟ್ಟಿಯಾಗಿ ಉಪನ್ಯಾಸಾದಿ ರೂಪವಾಗಿ ಭಾಷಣಮಾಡುವುದು, ವಿಷವನ್ನು ತಿನ್ನುವುದು, ವಿಷಧೂಮಾದಿಗಳು ಮೂಗು ಬಾಯಿಗಳಲ್ಲಿ ನುಗ್ಗುವುದು, ಸರ್ವದಾ ಉಚ್ಚಸ್ವರದಲ್ಲಿ ವೇದಮೊದಲಾದವುಗಳನ್ನು ಪಾಠಮಾಡುವುದು, ಕಂಠನಾಳಕ್ಕೆ ಕೋಲು ಮೊದಲಾದುವುಗಳಿಂದ ಪೆಟ್ಟುಬೀಳುವುದು, ಇಂತಹ ದೋಷಪ್ರಕೋಪ ಕಾರಣಗಳಿಂದ ಪ್ರಕುಪಿತಗಳಾದ ವಾತಾದಿದೋಷಗಳು ಸ್ವರವಾಹಿಗಳಾದ ನಾಡಿಗಳಲ್ಲಿ (ಸುಶ್ರುತಃ ದ್ವಾಭ್ಯಾಂಭಾಷತೇ ದ್ವಾಭ್ಯಾಂಘೋಷಂಕರೋತಿ ಎಂಬ ಪ್ರಮಾಣದಂತೆ) ಸೇರಿಕೊಂಡು ಇಂತು ಸ್ವರವನ್ನು ಕೆಡಿಸುತ್ತವೆ. ಈ ರೀತಿಯಾದ ಸ್ವರಭಂಗವು "ವಾತಾದಿಭಿಃಪೃಥಕ್‌ಸರ್ವೈರ್ಮೇದಸಾಚ ಕ್ಷಯೇಣಚ" ವಾತಜ, ಪಿತ್ತಜ, ಶ್ಲೇಷ್ಮಜ, ಸನ್ನಿಪಾತಜ, ಮೇದೋದೋಷಜ, ಕ್ಷಯಜ, ಎಂಬದಾಗಿ ಆರು ವಿಧ.

**ವಾತೇನಕೃಷ್ಣನಯನಾನನಮೂತ್ರವರ್ಚಾಭಿನ್ನಂಶನೈರ್ವದತಿಗದ್ಗದಭಿನತ್‌ಖರಂಚ॥**
**ಪಿತ್ತೇನ ಪೀತನಯನಾನನಮೂತ್ರ ವರ್ಚಾ ಬ್ರೂಯಾದ್ಗಲೇನಸಚ ದಾಹಸಮನ್ವಿತೇನ ॥೨॥**

ವಾತಪ್ರಕೋಪಜನಿತವಾದ ಸ್ವರಭಂಗ ರೋಗದಲ್ಲಿ ಮುಖ, ಕಣ್ಣು, ಮಲ, ಮೂತ್ರ ಇವುಗಳೆಲ್ಲಾ ಕಪ್ಪುಬಣ್ಣವಾಗುತ್ತವೆ. ಧ್ವನಿ ಒಡದುಹೋಗಿ ಮೆಲ್ಲಗೆ ಗಾರ್ಧಭಧ್ವನಿಯಂತೆ ಧ್ವನಿಯಿಂದ ಮಾತನಾಡುತ್ತಾನೆ. ಪಿತ್ತಪ್ರಕೋಪಜನಿತವಾದ ಸ್ವರಭಂಗರೋಗದಲ್ಲಿ ಮುಖ, ಕಣ್ಣು, ಮಲ, ಮೂತ್ರಗಳು ಹಳದಿ ಬಣ್ಣವಾಗುತ್ತವೆ. ಮಾತನಾಡುವಾಗ್ಯೆಗಂಟಲಿನಲ್ಲಿ ಉರಿಯಿರುತ್ತದೆ. ಇಂತಹ ಸ್ಥಿತಿಯಲ್ಲಿಯೆ ಮಾತನಾಡುತ್ತಿರುತ್ತಾನೆ.

**ಬ್ರೂಯಾತ್‌ಕಫೇನಸತತಂಕಫರುದ್ಧಕಂಠಃಸ್ವಲ್ಪಂಶನೈರ್ವದತಿಚಾಪಿ ದಿವಾವಿಶೇಷಾತ್॥**
**ಸರ್ವಾತ್ಮಕೇ ಭವತಿ ಸರ್ವವಿಕಾರಸಂಪತ್ತಂಚಾಪ್ಯಸಾಧ್ಯ ಮೃಷಯ ಸ್ವರಭೇದಮಾಹುಃ ॥೩॥**

ಕಫಪ್ರಕೋಪಜನ್ಯವಾದ ಸ್ವರಭಂಗರೋಗದಲ್ಲಿ ಗಂಟಲಿನಲ್ಲಿ ಯಾವಾಗಲೂ ಕಫ ಕಟ್ಟಿಕೊಳ್ಳುತ್ತಲೇ ಇರುತ್ತದೆ. ಕಂಠನಾಳವು ಕಫದಿಂದ ತಡದುಹೋಗಿ ಮಿತವಾಗಿ ಮೆಲ್ಲಗೆ ಮಾತನಾಡುತ್ತಿರುತ್ತಾನೆ. ಅದೂನೂ ಹಗಲು ಹೊತ್ತಿನಲ್ಲಿಯೇನೇ, ರಾತ್ರಿ ಹೊತ್ತಿನಲ್ಲಿ ಶ್ಲೇಷ್ಮಭಾದೆಯಿಂದ ಮಾತನಾಡುವುದೇ ಆಗುವುದಿಲ್ಲ. ತ್ರಿದೋಷಸನ್ನಿಪಾತಜನ್ಯವಾದ ಸ್ವರಭಂಗರೋಗದಲ್ಲಿ ಮೂರು ದೋಷಗಳ ಲಕ್ಷಣಗಳೂ ಒಡದು ಕಾಣುತ್ತಲಿರುತ್ತವೆ. ಅಂತಹ ತ್ರಿದೋಷಸನ್ನಿಪಾತಜನ್ಯವಾದ ಸ್ವರಭಂಗರೋಗವು ಅಸಾಧ್ಯವೆಂಬದಾಗಿಯೇ ಆಯುರ್ವೇದ ಸಂಪ್ರದಾಯಜ್ಞರಾದ ಋಷಿಗಳ ಅಭಿಪ್ರಾಯ.

**ಧೂಪ್ಯೇತವಾಕ್‌ಕ್ಷಯಕೃತೇಕ್ಷಯಮಾಪ್ನುಯಾಚ್ಚವಾಗೇಷಚಾಪಿಹತವಾಕ್‌ಪರಿವರ್ಜನೀಯಃ॥**
**ಅಂತರ್ಗತ ಸ್ವರಮಲಕ್ಷ್ಯಪದಂಚಿರೇಣಮೇದೋನ್ವಯಾದ್ವದತಿದಿಗ್ಧಗಲಸ್ತೃಷಾರ್ತಃ ॥೪॥**

ಧಾತುಕ್ಷಯಜನಿತವಾದ ಸ್ವರಭಂಗರೋಗದಲ್ಲಿ ಮಾತಾಡುವಾಗ್ಯೆ ಗಂಟಲಿನಿಂದ

ಹೊಗೆ ಹೊರಡುವಂತೆ ಮನಸ್ಸಿಗೆ ತೋರುತ್ತಿರುತ್ತದೆ. ಕ್ರಮವಾಗಿ ಮಾತಾಡುವ ಶಕ್ತಿಯೇ ಕಡಮೆಯಾಗಿಹೋಗುತ್ತ ಬರುತ್ತದೆ. ಈ ರೀತಿಯಾಗಿ ವಾಗಿಂದ್ರಿಯದ ಶಕ್ತಿ ಕಡಮೆಯಾಗುತ್ತ ಹೋದಮೇಲೆ ಆ ರೋಗವು ಚಿಕಿತ್ಸೆಗೆ ಅಸಾಧ್ಯವೆಂಬದಾಗಿ ತ್ಯಜಿಸ ತಕ್ಕದ್ದು. ಇನ್ನು ಮೇದೋವೃದ್ಧಿಯಿಂದ ಉಂಟಾದ ಸ್ವರಭಂಗರೋಗದಲ್ಲಿ ನಾಳು ಬಾಯಿಯಲ್ಲಿ ಮಾತನಾಡಿದಹಾಗೆ ತೋರುವಂತೆ ಮಾತುಗಳು ತಿಳಿಯದೇ ಇರುವಂತೆ ಮಾತನಾಡುತ್ತಿರುತ್ತಾನೆ. ಗಂಟಲಿನಲ್ಲಿ ಶ್ಲೇಷ್ಮವನ್ನು ಲೇಪಹಾಕಿದಹಾಗೆ ತೋರುತ್ತಿರುವುದಲ್ಲದೆ ಬಾಯಾರಿಕೆಯೂ ಇರುತ್ತದೆ.

**ಕ್ಷೀಣಸ್ಯವೃದ್ಧಸ್ಯಕೃಶಸ್ಯಚಾಪಿಚಿರೋತ್ಥಿತೋಯಶ್ಚ ಸಹೋಪಜಾತಃ॥**
**ಮೇದಸ್ವಿನಸ್ಸರ್ವಸಮುದ್ಭವಶ್ಚ ಸ್ವರಾಮಯೋಯೋನಸಸಿದ್ಧಿಮೇತಿ॥೫॥**

ಈ ಸ್ವರಭಂಗರೋಗವು ರಕ್ತಮಾಂಸಗಳು ಕ್ಷಯಿಸಿಹೋದವರಿಗೆ, ಮುದುಕರಿಗೆ ಕೃಶರಾದವರಿಗೆ ಸಹಸಂಭವಿಸಿದರೆ; ಮತ್ತು ಸ್ವರಭಂಗರೋಗವು ಹುಟ್ಟಿ ಬಹಳಕಾಲ ಕಳೆದು ಹೋಗಿದ್ದರೂ ಮತ್ತು ಜನ್ಮ ಪ್ರಭೃತಿ ಇರತಕ್ಕ ಸ್ವರಭಂಗರೋಗವೂ; ಮೇದಸ್ಸು ವೃದ್ಧಿಯಾಗಿ ಆದರಿಂದ ಹುಟ್ಟಿದ ಸ್ವರಭಂಗರೋಗವು, ತ್ರಿದೋಷಪ್ರಕೋಪಜನ್ಯವಾದ ಸ್ವರಭಂಗರೋಗವು ಇವುಗಳು ಅಸಾಧ್ಯಗಳೆಂದು ತಿಳಿಯಬೇಕು.

**ಟಿಪ್ಪಣಿ:**— ಆಯುರ್ವೇದ ವೈದ್ಯಕ ಚಿಕಿತ್ಸಾ ಪ್ರಪಂಚದಲ್ಲಿ ಸ್ವರಭೇದವೆಂಬ ರೋಗವನ್ನು ಪ್ರಾಯಿಕವಾಗಿ ಪ್ರತ್ಯೇಕರೋಗವೆಂದು ಗಣಿಸಿ ಚಿಕಿತ್ಸಿಸುವುದು ಅನುಭವದಲ್ಲಿ ಕಂಡುಬರುವುದಿಲ್ಲ. ಸ್ವರಭೇದವೆಂದರೆ ಧ್ವನಿ ಕುಗ್ಗಿಹೋಗುವುದೆಂಬ ಅಭಿಪ್ರಾಯವನ್ನು ಮಾತ್ರ ಚಿಕಿತ್ಸಕರು ಗಮನಿಸಿ ಶ್ಲೇಷ್ಮವೃದ್ಧಿಯಿಂದ ಸ್ವರಭಂಗವುಂಟಾಗಿದ್ದಲ್ಲಿ ಶ್ಲೇಷ್ಮಹರ ಚಿಕಿತ್ಸೆಗಳನ್ನೂ ಪಿತ್ತವೃದ್ಧಿಯಿಂದಾಗಿದ್ದಲ್ಲಿ ಸ್ನಿಗ್ಧಗಳಾದ [illegible] ಪ್ರಯೋಗಗಳನ್ನು ಮಾಡಿ ರೋಗಶಾಂತಿಮಾಡುವ ಸಂಪ್ರದಾಯವಿದೆ. ಮೇದಸ್ವಿಗಳಾದ ಕೆಲವರಿಗೆ ಸ್ವರ ಭಂಗವಿರುತ್ತದೆ. ಅವರುಗಳು ಅದನ್ನು ರೋಗವಾಗಿ ತಿಳಿದುಕೊಂಡು ಚಿಕಿತ್ಸೆ ಮಾಡಿಸಿಕೊಳ್ಳುವುದಿಲ್ಲ. ಒಟ್ಟಾರೆ ಈ ಸ್ವರಭಂಗವೆಂಬ ರೋಗವು ಪ್ರತ್ಯೇಕ ರೋಗವೆಂಬ ಭಾವನೆಯೇ ಯಾರಿಗೂ ಇದುವರೆಗೂ ಹುಟ್ಟಲಿಲ್ಲ. ಇದಕ್ಕನುಗುಣವಾಗಿಯೇ ವಾಗ್ಭಟಕಾರರು ರಾಜಯಕ್ಷ್ಮರೋಗದ ಉಪರೋಗವಾಗಿ ಇದನ್ನು ರಾಜಯಕ್ಷ್ಮ ಪ್ರಕರಣದಲ್ಲಿಯೇ ಸೇರಿಸಿಬಿಟ್ಟಿದ್ದಾರೆ ಪ್ರತ್ಯೇಕವಾಗಿ ಈ ರೋಗವನ್ನು ಗಣಿಸಲಿಲ್ಲ. ಚರಕದಲ್ಲಿ ನಿದಾನಸ್ಥಾನದಲ್ಲಿ ಈ ರೋಗದ ಪ್ರವೇಶವಿಲ್ಲ. ಚಿಕಿತ್ಸಾಸ್ಥಾನದಲ್ಲಿ ತ್ರಿಮರ್ಮೀಯ ಚಿಕಿತ್ಸಿತಾಧ್ಯಾಯದಲ್ಲಿ ಬಸ್ತಿ, ಹೃದಯ, ಶಿರಸ್ಸು ಇವು ಮೂರು ಮುಖ್ಯ ಮರ್ಮಸ್ಥಾನಗಳೆಂಬ ಅಭಿಪ್ರಾಯವನ್ನು ತೋರಿಸಿ ಮೂತ್ರಾಶಯಕ್ಕೆ ಸಂಬಂಧಿಸಿದ ರೋಗಗಳ ಚಿಕಿತ್ಸೆಗಳನ್ನು ಹೃದ್ರೋಗ ಚಿಕಿತ್ಸೆಗಳನ್ನೂ, ಶಿರಸ್ಸಿಗೆ ಸಂಬಂಧಿಸಿದ ಅಂದರೆ ಜತ್ರೂರ್ಧ್ವಜನ್ಯ ರೋಗಗಳಾದ ಕರ್ಣರೋಗ, ನಾಸಾರೋಗ, ನೇತ್ರರೋಗಗಳನ್ನು ನಿರೂಪಿಸಿ ಚಿಕಿತ್ಸೆಗಳನ್ನೂ ಹೇಳಿ ಸ್ವರ ಭಂಗರೋಗವು ಸ್ವರ ಪ್ರಕಾಶಕವಾದ ಕಂಠನಾಳಾಶ್ರಿತವಾದ್ದರಿಂದ ಇದೂ ಜತ್ರೂರ್ಧ್ವಗತವಾದ ರೋಗವೇ ಆದ ಹಾಗಾಯಿತೆಂಬ ಭಾವದಿಂದ ಸ್ವರಭಂಗಕ್ಕೆ ಚಿಕಿತ್ಸೆಯನ್ನು ಹೇಳಿದ್ದಾರೆ. ಆದರೆ ಮಾಧವನಿದಾನಕಾರರೂ ಯೋಗರತ್ನಾಕರಕಾರರೂ ಕೂಡ ಚಿಕಿತ್ಸಕರ ಸೌಕರ್ಯಾರ್ಥವಾಗಿಯೂ ಮತ್ತೂ ಸ್ವರಭಂಗರೋಗವು ಸ್ವತಂತ್ರ ರೋಗವಾಗಿಯೂ ಇರಬಹುದೆಂಬ

ಅಭಿಪ್ರಾಯವನ್ನು ಸೂಚಿಸುವುದಕ್ಕಾಗಿಯೂ ಪ್ರತ್ಯೇಕ ಲಕ್ಷಣಗಳನ್ನು ವಿಶದವಾಗಿ ಹೇಳಿದ್ದಾರೆ. ಆದ್ದರಿಂದ ಚಿಕಿತ್ಸಕರು ಈ ರೋಗವನ್ನು ನಿರ್ಣಯಮಾಡುವಾಗ್ಗೆ ಈ ರೋಗವು ಸ್ವತಂತ್ರ ಸ್ಥಿತಿಯಲ್ಲಿದೆಯೆ ಅಥವಾ ಯಾವದಾದರೂ ರೋಗದ ಉಪ ರೋಗವೆ ಎಂಬ ವಿಷಯವನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನಿಶ್ಚಯಿಸಿಕೊಂಡು ಚಿಕಿತ್ಸಿಸ ಬೇಕು.

— ಇಲ್ಲಿಗೆ ಸ್ವರಭೇದ ನಿದಾನಸಮಾಪ್ತ —

## ಅರೋಚಕ ನಿದಾನ

**ವಾತಾದಿ ಭಿಶ್ಶೋಕ ಭಯಾತಿಲೋಭ ಕ್ರೋಧೈರ್ಮನೋಘ್ನಾಶನ ರೂಪಗಂಧೈಃ ।**
**ಅರೋಚಕಾಸ್ಯುಃ ಪರಿಹೃಷ್ಟದಂತಃ ಕಷಾಯವಕ್ತ್ರಶ್ಚ ಮತೋ ನಿಲೇನ ॥ ೧ ॥**

ಅರೋಚಕ ರೋಗವನ್ನು ಹೇಳುತ್ತಾನೆ. ಈ ಅರೋಚಕ ರೋಗವು ವಾತ ಪ್ರಕೋಪ ಜನ್ಯ, ಪಿತ್ತ ಪ್ರಕೋಪ ಜನ್ಯ, ಶ್ಲೇಷ್ಮ ಪ್ರಕೋಪ ಜನ್ಯ, ತ್ರಿದೋಷ ಸನ್ನಿಪಾತಜನ್ಯ, ಆಗಂತುಕಗಳಾದ ಶೋಕ, ಭಯ, ಲೋಭ, ಮನಸ್ಸಿಗೆ ಜುಗುಪ್ಸೆಯನ್ನು ಹುಟ್ಟಿಸುವ ಭೋಜನ ಅಸಹ್ಯಕರಗಳಾದ ರೂಪ, ರಸ, ಗಂಧ ಇಂತಹ ಆಗಂತುಕ ಕಾರಣಗಳಿಂದ ಉತ್ಪನ್ನವಾದದ್ದು ಎಂಬದಾಗಿ ಅರೋಚಕ ರೋಗವು ಐದು ವಿಧ. ಅರೋಚಕ ರೋಗದಲ್ಲಿ ವಾತಪ್ರಕೋಪವಿದ್ದರೆ ಹುಳಿಗಾಯಿಗಳನ್ನು ತಿಂದವರಿಗೆ ಆಗುವಂತೆ ಹಲ್ಲು ಜುಮು ಗುಟ್ಟುತ್ತ ಬಾಯಿರುಚಿ ಯಾವಾಗಲೂ ಕಷಾಯರಸಯುಕ್ತವಾಗಿರುತ್ತದೆ.

**ಕಟ್ವಮ್ಲ ಮುಷ್ಣಂ ವಿರಸಂಚ ಪೂತಿ ಪಿತ್ತೇನ ವಿದ್ಯಾಲ್ಲವಣಂತ ವಕ್ತ್ರಂ ॥**
**ಮಾಧುರ್ಯ ಪೈಚ್ಛಿಲ್ಯಗುರುತ್ವಶೈತ್ಯ ವಿಬದ್ಧ ಸಂಬದ್ಧ ಯುತಂ ಕಫೇನ ॥ ೨ ॥**

ಪಿತ್ತ ಪ್ರಕೋಪ ಜನ್ಯವಾದ ಅರೋಚಕ ರೋಗದಲ್ಲಿ ಬಾಯಿರುಚಿ ಕಟು ವಾಗಿಯೂ ಹುಳಿಯಾಗಿಯೂ ಇರುವುದು, ಯಾವಾಗಲೂ ಬಾಯಿ ಬಿಸಿಯಾಗಿರುವ ತೋರುತ್ತ ಬಾಯಿ ಇಂತಹರುಚಿ ಉಳ್ಳದೆಂಬುವುದು ತಿಳಿಯುವುದ. ಇಲ್ಲ ಬಾಯಿ ದುರ್ವಾಸನೆಯಾಗಿರುವುದು, ಇಷ್ಟು ಪಿತ್ತ ಪ್ರಕೋಪಜನ್ಯವಾದ ಅರೋಚಕ ರೋಗದ ಲಕ್ಷಣ. ಬಾಯಿರುಚಿ ಉಪ್ಪಾಗಿಯಾಗಲಿ ಮಧುರವಾಗಿ ಯಾಗಲಿ ಇರುವುದು, ಬಾಯಿಯೊಳಗಿರುವ ಲಾಲಾ ದ್ರವವು ಜಿಗಟಾಗಿ ಮಂದವಾಗಿರುವುದು, ಬಾಯಿ ಯಾವಾಗ್ಗೂ ತಣ್ಣಗಾಗಿರುವುದು, ಮತ್ತು ಬಾಯಿ ಯಾವಾಗಲೂ 'ವಿಬದ್ಧ'

ಎಂದರೆ ಪದಾರ್ಥವನ್ನು ತಿನ್ನುವ ಅಪೇಕ್ಷೆಯಿಲ್ಲದ್ದಾಗಿಯೂ 'ಸಂಬದ್ಧಯತಂಕ ಫೇನ' ಎಂದರೆ ಕಫದಿಂದ ಲೇಪವಮಾಡಲ್ಪಟ್ಟಂತೆಯೂ ತೋರುತ್ತಿರುವುದು; ಇವುಗಳು ಕಫ ಪ್ರಕೋಪಜನಿತವಾದ ಅರೋಚಕ ರೋಗದ ಲಕ್ಷಣಗಳು.

**ಅರೋಚಕೇಶೋಕ ಭಯಾತಿಲೋಭ್ರಕ್ರೋಧಾ ದ್ಯಹೃದ್ಯಾಕ್ಯ ಶುಚಿ ಗಂಧಜೇಸ್ಯಾತ್ ||**

**ಸ್ವಾಭಾವಿಕಂಚಾಸ್ಯ ಮಧಾರುಚಿಶ್ಚ ತ್ರಿದೋಷಜೇನ್ನೈಕರಸಂಭ ವೇತ್ತು || ೩ ||**

ದುಃಖ, ಭಯ, ಅತಿಲೋಭ, ಸಿಟ್ಟು, ಮನಸ್ಸಿಗೆ ಹಿತವಿಲ್ಲದ ಆಹಾರ, ದುರ್ಗಂಧ ಯುಕ್ತವಾದ ಆಹಾರ ಇವುಗಳಿಂದ ಹುಟ್ಟಿದ ಆಗಂತುಕವಾದ ಅರೋಚಕ ರೋಗದಲ್ಲಿ ಬಾಯಿ ರುಚಿ ಕೆಡುವುದಿಲ್ಲ. ಸ್ವಾಭಾವಿಕ ವಾಗಿಯೇ ಇರುತ್ತದೆ. ಪಧಾರ್ಥಗಳಲ್ಲಿ ರುಚಿಮಾತ್ರ ಇರುವುದಿಲ್ಲ. ತ್ರಿದೋಷ ಪ್ರಕೋಪಜನ್ಯವಾದ ಅರೋಚಕ ರೋಗದಲ್ಲಿ ಬಾಯಿಯಲ್ಲಿ ಅನೇಕ ರಸದ ರುಚಿಗಳು ತೋರುತ್ತಿರುತ್ತವೆ

**ಹೃಚ್ಛೂಲ ಪೀಡನಯುತಂಪವನೇನ ಪಿತ್ತಾತ್ತೃಡ್ದಾಹ ಚೋಷ ಬಹುಳಂ ಸಕಫ ಪ್ರಸೇಕಂ ||**

**ಶ್ಲೇಷ್ಮಾತ್ಮಕಂಬಹುರುಜಂ ಬಹು ಭಿಶ್ಚ ವಿದ್ಯಾದ್ವೈಗುಣ್ಯ ಮೋಹ ಜಡತಾಭಿರಥಾಪರಂಚ || ೪ ||**

ವಾತಾದಿ ದೋಷ ಪ್ರಕೋಪಜನ್ಯಗಳಾದ ಅರೋಚಕ ರೋಗಗಳಲ್ಲಿ ಕಾಣ ಬರುವ ಬೇರೆ ಉಪದ್ರವಗಳನ್ನು ಹೇಳುತ್ತಾನೆ. ವಾತ ಪ್ರಕೋಪ ಜನ್ಯವಾದ ಅರೋಚಕ ರೋಗದಲ್ಲಿ ಹೃದಯ ಶೂಲೆ ಮತ್ತು ಇತರ ವಿಧಗಳಾದ ವಾತಜನ್ಯ ಹೃದಯ ವ್ಯಥೆಗಳು, ಪಿತ್ತ ಪ್ರಕೋಪ ಜನಿತವಾದ ಅರೋಚಕ ರೋಗದಲ್ಲಿ ಬಾಯಾರಿಕೆ,ಮೈಯ್ಯುರಿ ಮತ್ತು ಚೋಷ ಎಂದರೆ ವ್ಯಥೆ ಇವುಗಳೂ,ಶ್ಲೇಷ್ಮ ಪ್ರಕೋಪ ಜನಿತವಾದ ಅರೋಚಕ ರೋಗದಲ್ಲಿ ಬಾಯಿನಿಂದ ಯಾವಾಗಲೂ ಕಫವನ್ನು ಉಗು ಳುತ್ತಿರುವುದು, ತ್ರಿ ದೋಷ ಪ್ರಕೋಪ ಜನ್ಯವಾದ ಅರೋಚಕ ರೋಗದಲ್ಲಿ ನಾನಾ ವಿಧಗಳಾದ ರೋಗಗಳು ಕಾಣಿಸುವುದು, ಆಗಂತು ಕಾರಣ ಜನಿತವಾದ ಅರೋಚಕ ರೋಗದಲ್ಲಿ ವೈಗುಣ್ಯ ಎಂದರೆ ಮನೋವ್ಯಾಕುಲತೆ ಮೋಹ ಎಂದರೆ ಅಜ್ಞಾನ ಜಡತಾ ಎಂದರೆ ಒಂದು ವಿಧವಾದ ಜಾಡ್ಯ ಮಂಕುತನ ಇವುಗಳೂ ಇರುತ್ತವೆ.

**ಟಿಪ್ಪಣಿ:**—ಆಯುರ್ವೇದ ಚಿಕಿತ್ಸಕರು ಅರೋಚಕ ರೋಗವನ್ನು ಸ್ವತಂತ್ರ ರೋಗ ವೆಂದು ಚಿಕಿತ್ಸಿಸುವುದು ವಿರಳ ಎಲ್ಲಾ ರೋಗಗಳಲ್ಲಿಯೂ ಈಅರೋಚಕವು ಉಪರೋಗ ವಾಗಿ ಇದ್ದೇ ಇರುವುದು. ವಿಶೇಷತಃ ಅಗ್ನಿ ಮಾಂದ್ಯವಿರುವ ಕಡೆಯಲ್ಲಿ ಅರೋಚಕ ರೋಗವು ಇದ್ದೇ ಇರುವುದು. ರೋಗಿಗಳಲ್ಲಿ ಈ ಅರೋಚಕ ರೋಗವನ್ನು ಎರಡು ವಿಧವಾಗಿ ಕಾಣಬಹುದು, ಒಂದನೇಯದು ಅನ್ನದಲ್ಲಿ ರುಚಿ ತಪ್ಪುವುದು, ಎರಡನೇ ಯದು ಅನ್ನದಲ್ಲಿ ದ್ವೇಷಬರುವುದು. ಬಾಯಿಯಲ್ಲಿ ಯಾವ ಪದಾರ್ಥವನ್ನು ಹಾಕಿ ಕೊಂಡರೂ ಮನಸ್ಸಿಗೆ ಹರ್ಷವಿಲ್ಲದೆ ತಿನ್ನುವುದಕ್ಕೆ ಬೇಡವಾಗುವುದು. ಎರಡನೆಯದು

ಮನಸ್ಸಿನಲ್ಲಿ ಅನ್ನ ಪಾನಗಳ ವಿಷಯವನ್ನು ಆಲೋಚಿಸಿದರಾಗಲಿ ಅಥವಾ ದೂರದಲ್ಲಿ ಅನ್ನಪಾನಗಳನ್ನು ನಿರ್ಮಾಣ ಮಾಡುವ ವಾಸನೆಯು ಬಂದರಾಗಲಿ ಮನಸ್ಸಿಗೆ ಸಹನೆಯಿಲ್ಲದೆ ವಿಕಾರಗಳುಂಟಾಗುವುದು. ಇವೆರಡಕ್ಕೂ ಕಾರಣವನ್ನು ಕಂಡುಕೊಂಡು ಚಿಕಿತ್ಸಿಸುವುದೇ ಸಂಪ್ರದಾಯ. ವಾಗ್ಭಟಕಾರರು ಇದನ್ನು ಸ್ವತಂತ್ರ ರೋಗವಾಗಿ ಗಣನೆಮಾಡದೆ ರಾಜಯಕ್ಷ್ಮ ಪ್ರಕರಣದಲ್ಲಿಯೇ ಸೇರಿಸಿ ಬಿಟ್ಟರು. ಅಲ್ಲದೆ ರೋಗೋತ್ಪಾದಕ ದೋಷಗಳನ್ನು ಕೂಡ ಮಾಧವ ನಿದಾನದಲ್ಲಿ ಹೇಳಿರುವಂತೆ ನಾವು ನಿರ್ದೇಶ ಮಾಡಿ ಹೇಳದೆ 'ಅರೋಚಕೋಭವೇದ್ದೋಷೈರ್ಜಿಹ್ವಾ ಹೃದಯ ಸಂಶ್ರಯೈಃ ದೋಷೈಃ ಎಂಬದಾಗಿ ಸಾಮಾನ್ಯ ನಾಮವನ್ನೇ ಹೇಳಿದ್ದಾರೆ. ಚರಕಾಚಾರ್ಯರು ತ್ರಿಮರ್ಮೀಯ ಚಿಕಿತ್ಸೆಯಲ್ಲಿ ಈ ಅರೋಚಕ ರೋಗವನ್ನೂ ಚಿಕಿತ್ಸೆಯನ್ನೂ ಹೇಳಿರುತ್ತಾರೆ. ಅವರು ಹೇಳುವ ಶ್ಲೋಕಗಳೇ ಮಾಧವನಿದಾನದಲ್ಲಿಯೂ ಸಂಗೃಹೀತಗಳಾಗಿವೆ.

— ಇಲ್ಲಿಗೆ ಅರೋಚಕ ನಿದಾನ ಸಂಪೂರ್ಣ —

## ಛರ್ದಿನಿದಾನ

ದುಷ್ಟೈರ್ದೋಷೈಃ ಪೃಥಕ್ ಸರ್ವೈರ್ಭೀಭತ್ಸಾಲೋಚನಾದಿಭಿಃ ||
ಛರ್ದಯಃ ಪಂಚ ವಿಜ್ಞೇಯಾಸ್ತಾಸಾಂ ಲಕ್ಷಣಮುಚ್ಯತೇ || ೧ ||
ಅತಿದ್ರವೈರತಿಸ್ನಿಗ್ಧೈರಹೃದ್ಯೈರ್ಲವಣೈರತಿ ||
ಅಕಾಲೇ ಚಾತಿಮಾತ್ರೈಶ್ಚ ತಥಾಸಾತ್ಮ್ಯೈಶ್ಚ ಭೋಜನೈಃ || ೨ ||
ಶ್ರಮಾದ್ಭಯಾತ್ತಥೋದ್ವೇಗಾದಜೀರ್ಣಾತ್ ಕ್ರಿಮಿದೋಷತಃ ||
ನಾರ್ಯಾಶ್ಚಾಪನ್ನಸತ್ವಾಯಾಸ್ತಥಾತಿದ್ರುತಮಶ್ನತಃ || ೩ ||
ಭೀಭತ್ಸೈರ್ಹೇತುಭಿಶ್ಚಾನ್ಯೈಃ ದ್ರುತಮುತ್ಕ್ಲೇಶಿತೋ ಬಲಾತ್ ||
ಛಾದಯನ್ನಾನನಂ ವೇಗೈರರ್ದಯನ್ನಂಗಭಂಜನೈಃ || ೪ ||
ನಿರುಚ್ಯತೇ ಛರ್ದಿರಿತಿ ದೋಷೋ ವಕ್ತ್ರಂ ಪ್ರಧಾವಿತಃ ||

ಛರ್ದಿರೋಗನಿದಾನವನ್ನು ಹೇಳುತ್ತಾನೆ. ಪ್ರಕುಪಿತಗಳಾದ ವಾತ, ಪಿತ್ತ, ಕಫಗಳೆಂಬ ಮೂರು ದೋಷಗಳಿಂದ ಪ್ರತ್ಯೇಕವಾಗಿ ಹುಟ್ಟತಕ್ಕ ಛರ್ದಿ ರೋಗವು ಮೂರು ವಿಧ, ತ್ರಿದೋಷ ಸನ್ನಿಪಾತದಿಂದ ಹುಟ್ಟುವುದೊಂದು ವಿಧ, ಅಸಹ್ಯಕರಗಳಾದ ಆಹಾರಾದಿಗಳನ್ನು ಮನಸ್ಸಿನಲ್ಲಿ ಯೋಚಿಸಿ ಕೊಳ್ಳುವುದು, ಕಣ್ಣಿನಿಂದ ನೋಡುವುದು ಇಂತಹ ಕಾರಣಗಳಿಂದ ಹುಟ್ಟತಕ್ಕ ಆಗಂತುಕ ಛರ್ದಿರೋಗ ಒಂದು ವಿಧ, ಈ ರೀತಿಯಾಗಿ ಛರ್ದಿರೋಗವು ಐದು ಪ್ರಕಾರವಾಗಿ ಹುಟ್ಟುತ್ತದೆ. ದ್ರವರೂಪವಾದ ಆಹಾರವನ್ನು ಅತಿಯಾಗಿ ಸೇವಿಸುವುದು, ಸ್ನಿಗ್ಧ ಎಂದರೆ ಜಿಡ್ಡಿನಿಂದ ಯುಕ್ತವಾದ ಆಹಾರವನ್ನು ಅತಿಯಾಗಿ ಸೇವಿಸುವುದು, ಮನಸ್ಸಿಗೆ ಹಿತವಲ್ಲದ ಆಹಾರಗಳನ್ನು ಸೇವಿಸುವುದು, ಅತಿಯಾಗಿ ಉಪ್ಪನ್ನು ತಿನ್ನುವುದು, ಹೊತ್ತುತಪ್ಪಿ ಭೋಜನ

ಮಾಡುವುದು, ಪರಿಮಾಣಕ್ಕಿಂತ ಹೆಚ್ಚಿಗೆ ಆಹಾರವನ್ನು ತೆಗೆದುಕೊಳ್ಳುವುದು, ಶರೀರಕ್ಕೆ ಒಡಂಬಡದ ಆಹಾರವನ್ನು ತೆಗದುಕೊಳ್ಳುವುದು ಇಂತಹ ಆಹಾರ ದೋಷ ಗಳಿಂದಲೂ ಶ್ರಮ, ಭಯ, ದುಃಖ, ಅಜೀರ್ಣ, ಹೊಟ್ಟೆಯಲ್ಲಿ ಕ್ರಿಮಿಗಳು ಶೇರೋಣ, ಹೆಂಗಸರು ಗರ್ಭಿಣಿಯರಾಗೋಣ, ಅವಸರಪಟ್ಟು ಭೋಜನ ಮಾಡೋಣ, ಅತಿಯಾಗಿ ಅಸಹ್ಯವನ್ನುಂಟುಮಾಡುವ ಇನ್ನೂ ಕಾರಣಾಂತರಗಳು. ಇವುಗಳಿಂದ ದೇಹಗತಗ ಳಾದ ವಾತಾದಿ ದೋಷಗಳು ಪ್ರಕುಪಿತಗಳಾಗಿ ಬಾಯನ್ನೆಲ್ಲಾ ಸ್ವವೇಗದಿಂದ ವ್ಯಾಪಿಸಿ ಅಂದರೆ ಬಾಯಿಯಲ್ಲಿ ಒಂದು ವಿಧವಾದ ವಿಕಾರವನ್ನುಂಟುಮಾಡಿ ಮೈ ಕೈಗಳನ್ನೇ 'ಅರ್ದಯನ್ನ್' ಅಂದರೆ ಪೀಡಿಸುತ್ತ ಈ ರೋಗವು ಪ್ರಾರಂಭವಾಗುವುದರಿಂದ ಇದಕ್ಕೆ ಛರ್ದಿ ಎಂಬದಾಗಿ ಹೆಸರನ್ನು ಕೊಟ್ಟಿದ್ದಾರೆ.

ಹೃಲ್ಲಾಸೋದ್ಗಾರರೋಧೌಚಪ್ರಸೇಕೋಲವಣಸ್ತನುಃ ||
ದ್ವೇಷೋನ್ನಪಾನೇಚಭೃಶಂವಮೀನಾಂಪೂರ್ವಲಕ್ಷಣಂ || ೭ ||

ಹೃದಯದಲ್ಲಿ ಒಂದು ವಿಧವಾದ ಸಂಕಟವಾಗುವುದು, ತೇಗು ಬಂದಂತೆ ತಡೆದು ಹೋಗುವುದು. ಬಾಯಿ ನೀರು ಕರೆಯುವುದು, ಮೈಯಲ್ಲಾ ನೆಕ್ಕಿ ನೋಡಿ ದಲ್ಲಿ ಉಪ್ಪುಪ್ಪಾಗಿರುವುದು, ಅನ್ನಪಾನಗಳಲ್ಲಿ ಅತಿಯಾಗಿ ದ್ವೇಷವುಂಟಾಗುವುದು ಇವುಗಳು ಛರ್ದಿರೋಗದ ಪೂರ್ವ ಲಕ್ಷಣಗಳು ಅಂದರೆ ಛರ್ದಿರೋಗ ಹುಟ್ಟುವ ಪೂರ್ವದಲ್ಲಿ ಕಾಣತಕ್ಕ ಲಕ್ಷಣಗಳು.

ಹೃತ್ಪಾರ್ಶ್ವಪೀಡಾಮುಖಶೋಷಶೀರ್ಷನಾಭ್ಯರ್ತಿಕಾಸಸ್ವರಭೇದ ತೋದೈಃ ||
ಉದ್ಗಾರಶಬ್ದಪ್ರಬಲಂಸಫೇನಂವಿಚ್ಛಿನ್ನಕೃಷ್ಣಂತನುಕಂಷಾಯಂ ||
ಕೃಚ್ಛ್ರೇಣಚಾಲ್ಪಂಮುಹತಾಚವೇಗೇನಾರ್ತೋನಿಲಾಚ್ಛರ್ದಯತೀಹ ದುಃಖಂ || ೬

ವಾತಪ್ರಕೋಪಜನ್ಯ ಛರ್ದಿರೋಗದ ಲಕ್ಷಣಗಳೇನಂದರೆ– ಎದೆ ಮತ್ತು ಪಕ್ಕಗ ಳಲ್ಲಿ ನೋವು, ಬಾಯಿ ಒಣಗುತ್ತಿರುವುದು, ನಾಭಿ ಪ್ರದೇಶದಲ್ಲಿ ಮತ್ತು ತಲೆಯಲ್ಲಿ ಶೂಲೆ ಇರುವುದು, ಕೆಮ್ಮು, ಸ್ವರ,ಭಂಗ (ಧ್ವನಿ ಕುಗ್ಗಿ ಹೋಗುವುದು,) ವ್ಯಥೆ ಇವುಗಳಿರುವುದಲ್ಲದೆ ದೊಡ್ಡ ಧ್ವನಿಯೊಡನೆ ತೇಗು ಬರುತ್ತ ಬಾಯಲ್ಲೆಲ್ಲಾ ಒಗರಾ ಗಿದ್ದುಕೊಂಡು ಕಪ್ಪು ಒಣ್ಣಗ ದ್ರವಪದಾರ್ಥವು ಕೊಂಚ ಹೊತ್ತಿಗೆ ಒಂದು ಸಾರಿ ಬಹಳ ಕಷ್ಟದೊಡನೆ ಸ್ವಲ್ಪ ಸ್ವಲ್ಪವಾಗಿ ವಮನವಾಗುತ್ತಿದ್ದರೆ ವಾತಪ್ರಕೋಪಜನ್ಯ ಛರ್ದಿರೋಗವೆಂದು ತಿಳಿಯಬೇಕು.

ಮೂರ್ಛಾಪಿಪಾಸಾಮುಖಶೋಷಮೂರ್ಧತಾಲ್ವಕ್ಷಿಸಂತಾಪತ ಮೋಭ್ರಮಾರ್ತಃ ||
ಪೀತಂಭೃಶೋಷ್ಣಂಹರಿತಂಸತಿಕ್ತಂಧೂಮ್ರಂಚಪಿತ್ತೇನವಮೇತ್ಸ|| ದಾಹಂ || ೭ ||

ಪಿತ್ತಪ್ರಕೋಪ ಜನಿತವಾದ ಛರ್ದಿ ರೋಗದಲ್ಲಿ ಮೂರ್ಛೆ, ಬಾಯಾರಿಕೆ, ಬಾಯಿ ಒಣಗಿಹೋಗುವುದು, ಶಿರಸ್ಸು, ದವಡೆ, ಕಣ್ಣು ಇವುಗಳಲ್ಲಿ ಉರಿ ಇರುವುದು.

ಕಣ್ಣುಕತ್ತಲೆ, ತಲೆತಿರುಗುವುದು ಇವುಗಳಿಂದ ಕೂಡಿದವನಾಗಿ ಹಳದಿ, ಹಸುರು ಧೂಮ್ರ ಈ ಬಣ್ಣಗಳಿಂದ ಕೂಡಿದ ಕಹಿಯಾದ ಅತ್ಯಂತ ಬಿಸಿಯಾದ ದ್ರವ ಪದಾರ್ಥಗಳನ್ನು ವಮನ ಮಾಡುತ್ತಾನೆ. ಗಂಟಲಿನಲ್ಲಿ ಉರಿಯಿರುತ್ತದೆ.

**ತಂದ್ರಾಸ್ಯಮಾಧುರ್ಯಕಫಪ್ರಸೇಕಸಂತೋಷನಿದ್ರಾರುಚಿಗೌರವಾರ್ತಃ,**
**ಸ್ನಿಗ್ಧಂಘನಂಸ್ವಾದುಕಫಾದ್ವಿಶುದ್ಧಂಸರೋಮಹರ್ಷೋಲ್ಪರುಜಂವ**
**ಮೇತ್ತು ||೮||**

ಕಫ ಪ್ರಕೋಪಜನ್ಯವಾದ ಛರ್ದಿರೋಗದಲ್ಲಿ ತೂಕಡಿಕೆ, ಬಾಯಿಸಿಹಿಯಾಗಿರುವುದು, ಕಫವು ಬಾಯಿಯಿಂದ ಹೊರಡುತ್ತಿರುವುದು. ಯಾವಾಗಲೂ ಹೊಟ್ಟೆತುಂಬಿದಂತೆಯೇ ಇರುವುದು. ಯಾವಾಗ್ಯೂ ನಿದ್ರೆ ಅರುಚಿ ಮೈಭಾರ ಇವುಗಳಿಂದೆ, ಯುಕ್ತನಾಗಿರುತ್ತಾ ಜಿಡ್ಡಿನಿಂದ ಕೂಡಿ ಬೆಳ್ಳಗೆ ಸಿಹಿಯಾಗಿ ಗಟ್ಟಿಯಾಗಿ ವಮನಮಾಡುತ್ತಾನೆ. ಮೈಯ್ಯಲ್ಲೆಲ್ಲ ರೋಮಾಂಚವಾಗುತ್ತಿರುತ್ತದೆ. ಇದು ಶ್ಲೇಷ್ಮಪ್ರಕೋಪಜನ್ಯವಾದ ಛರ್ದಿರೋಗದ ಲಕ್ಷಣಗಳು.

**ಶೂಲಾವಿಪಾಕಾರುಚಿದಾಹತೃಷ್ಣಾಶ್ವಾಸಪ್ರಮೋಹಪ್ರಬಲಾ**
**ಪ್ರಸಕ್ತಂ ||**
**ಛರ್ದಿಸ್ತ್ರಿದೋಷಾಲ್ಲವಣಾಮ್ಲನೀಲಸಾಂದ್ರೋಷ್ಣರಕ್ತಂವಮತಾಂನೃ**
**ಣಾಂಸ್ಯಾತ್ || ೯ ||**

ತ್ರಿದೋಷ ಪ್ರಕೋಪ ಜನಿತವಾದ ಛರ್ದಿರೋಗದ ಲಕ್ಷಣವೇನಂದರೆ, ಉದರ ಶೂಲೆ ಅಜೀರ್ಣ ಅರುಚಿ ಮೈಯ್ಯುರಿ ಬಾಯಾರಿಕೆ ಉಬ್ಬಸ ಪದೇ ಪದೇ ಮೂರ್ಛೆಬರುತ್ತಿರುವುದು. ಈ ಉಪದ್ರವಗಳು ಯಾವಾಗಲೂ ಪ್ರಬಲವಾಗಿ ಇದ್ದೇ ಇರುವುದು. ವಮನಮಾಡುತ್ತಿರುವಾಗ್ಯೆ ಬಾಯಿ ಕೆಲವು ಸಮಯದಲ್ಲಿ ಹುಳಿಯಾಗಿಯೂ ಇರುವುದು. ನೀಲವರ್ಣವಾಗಿ ಸ್ವಲ್ಪಗಟ್ಟಿಯಾಗಿಯೂ ಕೆಲವು ವೇಳೆ ರಕ್ತವರ್ಣವಾಗಿಯೂ ವಮನಮಾಡುತಿದ್ದಲ್ಲಿ ಛರ್ದಿರೋಗವು ತ್ರಿದೋಷಪ್ರಕೋಪಜನಿತವೇಂಬುದಾಗಿ ತಿಳಿಯಬೇಕು.

**ವಿಟ್ಸ್ವೇದಮೂತ್ರಾಂಬುವಹಾನಿವಾಯುಸ್ರೋತಾಂಸಿಸಂರುದ್ಧ್ಯಯು**
**ದೊರ್ಧ್ವಮೇತಿ ||**
**ಉತ್ಸನ್ನದೋಷಸ್ಯಸಮಾಚಿತಂತಂದೋಷಂಸಮುದ್ಧೂಯನರಸ್ಯಕೋ**
**ಷ್ಠಾತ್ || ೧೦ ||**
**ವಿಣ್ಮೂತ್ರಯೋಸ್ತತ್ಸಮಗಂಧವರ್ಣಂತೃಟ್ಶ್ವಾಸಹಿಕ್ಕಾರ್ತಿಯುತಂ**
**ಪ್ರಸಕ್ತಂ ||**
**ಪ್ರಚ್ಛರ್ದಯೇದ್ದುಷ್ಟಮಿಹಾತಿವೇಗಾತ್ತಯಾರ್ದಿತಶ್ಚಾಶುವಿನಾಶ**
**ಮೇತಿ|| ೧೧ ||**

ಅಸಾಧ್ಯಛರ್ದಿರೋಗದ ಲಕ್ಷಣವನ್ನು ತಿಳಿಸುತ್ತಾನೆ. ಪ್ರಕೋಪ ಕಾರಣಗಳಿಂದ ಪ್ರಕುಪಿತವಾದವಾಯುವು ಮಲ, ಮೂತ್ರ, ಬೆವರು, ಜಲ ಇವುಗಳನ್ನು ಅಲ್ಲಿಂದಿಲ್ಲಿಗೆ ಒಯ್ಯತಕ್ಕ ನಾಡಿಗಳನ್ನು ನಿರೋಧಮಾಡಿ ಊರ್ಧ್ವಮುಖವಾಗುವಂತೆ ಮಾಡಿ ಬಾಯಾರಿಕೆ ಬಿಕ್ಕಳಿಕೆ ಉಬ್ಬಸ ಇವುಗಳನ್ನು ಹುಟ್ಟಿಸಿ ಅತಿವೇಗದಿಂದ ಮಲಮೂತ್ರಗಳಿಗೆ ಗಂಧವರ್ಣಗಳಿಂದ ಸಮಾನವಾದ ಪದಾರ್ಥವನ್ನು ವಮನಮಾಡಿಸುತ್ತದೆ. ಈ ವಮನ ಸಂಕಟದಿಂದ ಪೀಡಿತನಾಗಿ ಮರಣವನ್ನೂ ಹೊಂದುತ್ತಾನೆ. ಈ ರೀತಿಯಾದ ಛರ್ದಿರೋಗವು ಅಸಾಧ್ಯವೆನ್ನುವುದೇ ಅಭಿಪ್ರಾಯ

**ಬೀಭತ್ಸಜಾದೌಹೃದಜಾಮಜಾಚಅಸಾತ್ಮ್ಯಜಾಚಕ್ರಿಮಿಜಾಚಯಾಹಿ॥**
**ಸಾಪಂಚಮೀತಾಂಚವಿಭಾವಯೇಚ್ಚ ದೋಷೋಛ್ರಯೇಣೈವಯಥೋ**
**ಕ್ತಮಾದೌ ॥ ೧೨ ॥**

ಅಸಹ್ಯಕರಗಳಾದ ವಸ್ತುಗಳನ್ನು ನೋಡಿ ಜುಗುಪ್ಸೆಯಿಂದುಂಟಾದ ವಮನ, ಗರ್ಭಿಣಿಯರಿಗೆ ಉಂಟಾಗುವ ಗರ್ಭದ ಸಂಬಂಧವಾದ ವಮನ, ಅಜೀರ್ಣದಿಂದ ಉಂಟಾಗುವ ವಮನ, ಮೈಗೆ ಮತ್ತು ಮನಸ್ಸಿಗೆ ಒಗ್ಗದ ಪದಾರ್ಥಗಳನ್ನು ತಿನ್ನುವುದರಿಂದ ಉಂಟಾಗುವ ವಮನ, ಆಮಾಶಯದಲ್ಲಿ ಕ್ರಿಮಿಗಳು ಸೇರುವುದರಿಂದ ಉಂಟಾಗುವ ವಮನ ಈ ಐದುವಿಧವಾದ ವಮನ, ರೋಗವೂ ಆಗಂತುಕ ಕಾರಣಜನ್ಯ ವಮನರೋಗವೆಂದು ತಿಳಿಯಬೇಕು. ಈ ವಮನಗಳಲ್ಲಿಯು ಕೂಡ ಹಿಂದೆ ಹೇಳಿದ ದೋಷಪ್ರಕೋಪಜನ್ಯ ವಮನ ಲಕ್ಷಣಗಳನ್ನು ಸರಿಹೋಲಿಸಿ ನೋಡಿಕೊಂಡು ಯಾವದೋಷ ಲಕ್ಷಣವು ಹೆಚ್ಚಿಗೆ ಕಾಣುತ್ತದೆಯೋ ಅಂತಹ ದೋಷವೇ ಪ್ರಕುಪಿತವಾಗಿದೆಯೆಂದು ನಿರ್ಣಯಿಸಿಕೊಳ್ಳಬೇಕು.

**ಶೂಲಹೃಲ್ಲಾಸಬಹುಳಾಕ್ರಿಮಿಜಾಚವಿಶೇಷತಃ ॥**
**ಕ್ರಿಮಿಹೃದ್ರೋಗತುಲ್ಯೇನಲಕ್ಷಣೇನಚಲಕ್ಷಿತಾ ॥ ೧೩ ॥**

ಕ್ರಿಮಿಜನ್ಯವಾದ ಛರ್ದಿರೋಗದ ಲಕ್ಷಣವೇನಂದರೆ ಹೃದಯಶೂಲೆ ಹೃಲ್ಲಾಸವೆಂದರೆ ಎದೆಯಲ್ಲಿ ಒಂದು ವಿಧವಾದ ಸಂಕಟದೊಡನೆ ಬಾಯಿ ನೀರು ಬರುವುದು. ಕ್ರಿಮಿಜನ್ಯವಾದ ಹೃದ್ರೋಗದ ಲಕ್ಷಣಗಳೆಲ್ಲಾ ಇರುವುದು. ಇವು ಕ್ರಿಮಿಜನ್ಯ ಛರ್ದಿರೋಗದ ಲಕ್ಷಣಗಳು.

**ಕ್ಷೀಣಸ್ಯಯಾಛರ್ದಿರತಿಪ್ರಸಕ್ತಾಸೋಪದ್ರವಾಶೋಣಿತಪೂಯ**
**ಯುಕ್ತಾ ॥**
**ಸಚಂದ್ರಿಕಾಂತಾಂಪ್ರವದೇದಸಾಧ್ಯಾಂಸಾಧ್ಯಾಂಚಿಕಿತ್ಸೆನ್ನಿರುಪದ್ರ**
**ವಾಂಚ ॥ ೧೪ ॥**

ಛರ್ದಿರೋಗದ ಅಸಾಧ್ಯ ಲಕ್ಷಣವನ್ನು ಹೇಳುತ್ತಾನೆ. ರೋಗಿಯು ಕ್ಷೀಣನಾಗಿದ್ದು ವಾಂತಿಯು ಅತಿಯಾಗಿರುವುದು. ವಮನವಾಗುವ ಪದಾರ್ಥದೊಂದಿಗೆ ಕೀವು ರಕ್ತಗಳು ಹೋಗುತ್ತಿರುವುದು. ಇನ್ನೂಯಾವುದಾದರೂ ಉಪರೋಗಗಳು

ಸಹ ಇದರೊಟ್ಟಿಗಿರುವುದು, ವಮನದಲ್ಲಿ ಧಾತುಗತವಾದ ಸ್ನೇಹವು ಹೊರಬಿದ್ದು ವಮನಮಾಡಿದ ಪದಾರ್ಥದಲ್ಲಿ ಚಂದ್ರಿಕೆಯಂತೆ ಮಿಂಚುತ್ತಲಿರುತ್ತಿರುವುದು. ಈ ಲಕ್ಷಣಗಳು ಕಂಡುಬಂದಲ್ಲಿ ಛರ್ದಿರೋಗವು ಅಸಾಧ್ಯವೆಂದು ತಿಳಿಯಬೇಕು. ಚಿಕಿತ್ಸೆಗೆ ಅನರ್ಹವೆಂದೂ ತಾತ್ಪರ್ಯ.

**ಟಿಪ್ಪಣಿ:**—ಮೊದಲು ಛರ್ದಿ ಎಂದರೆ ಈ ವಮನ ರೋಗವನ್ನು ಸ್ವತಂತ್ರ ರೋಗವೇ ಅಥವಾ ಉಪಯೋಗವೇ ಎಂದು ಕಂಡುಕೊಳ್ಳುವುದೇ ಅಸಾಧ್ಯವಾಗುತ್ತದೆ. ಅನೇಕ ರೋಗಗಳಲ್ಲಿ ಇದು ಉಪರೋಗತ್ವೇನ ಪ್ರಾಪ್ತವಾಗುವುದರಿಂದಲೂ ಇಂತಹ ಸಂದೇಹ ಬರುತ್ತದೆ. ಸ್ವತಂತ್ರರೋಗವಾಗಿಲ್ಲದ ಕಡೆಗಳಲ್ಲಿ ಪ್ರಾಯಶಃ ಮುಖ್ಯರೋಗಚಿಕಿತ್ಸೆಯಿಂದಲೇ ಇದೂ ಶಾಂತವಾಗುತ್ತದೆ. ವಮನವೇ ಸ್ವತಂತ್ರ ರೋಗವಾಗಿರುವ ಕಡೆಯಲ್ಲಿ ಮಾತ್ರ ಉತ್ತಮವಾದ ಚಿಕಿತ್ಸೆಗಳನ್ನು ನಡೆಯಿಸಬೇಕು. ಯಾವ ವಿಧವಾದ ವಮನವಾದರೂ ಸರಿಯೆ ಎರಡುಮೂರುಸಾರಿ ಆಗುವುದರೊಳಗಾಗಿ ಚಿಕಿತ್ಸಿಸಿ ಸ್ವಾಧೀನಕ್ಕೆ ಬಂದರೆ ಬರುತ್ತದೆ. ಇಲ್ಲವಾದರೆ ನಿಲ್ಲದೆ ಬಹಳ ತೊಂದರೆಪಡಿಸುತ್ತದೆ. ಕ್ರಿಮಿಜನ್ಯವಾದ ವಮನರೋಗ ಒಂದುಂಟೆಂದು ಕೆಲವರು ಹೇಳಿದ್ದಾರೆ. ಕೆಲವರು ಬಿಟ್ಟಿದ್ದಾರೆ. ಅನುಭವದಲ್ಲಿ ಹೊಟ್ಟೆಯಲ್ಲಿ ಹುಳ ಹೆಚ್ಚಾದರೆ ಬಾಯಿನೀರು ಬರುವುದು. ವಮನವಾಗುವುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇದೆ. ಅಲ್ಲದೆ ಆಯುರ್ವೇದ ಪದ್ಧತಿಯಲ್ಲಿ "ಛರ್ದ್ಯಾಂ ಛರ್ದನಮತಿಸಾರೆ ಅತಿಸರಣಂ" ಎನ್ನುವದೊಂದು ಸಾಂಪ್ರದಾಯವಿದೆ. ಅಂದರೆ ವಮನ ರೋಗದಲ್ಲಿ ತನ್ನಿವರ್ತಕವಾಗಿ ವಮನವನ್ನೇ ಮಾಡಿಸಬೇಕೆಂಬ ಹೇಳಿಕೆಯಿದೆ. ಈ ವಮನರೋಗವನ್ನು ನಿರ್ಣಯಿಸುವ ಕಾಲದಲ್ಲಿ ಇದೆಲ್ಲವನ್ನೂ ಜ್ಞಾಪಕದಲ್ಲಿಟ್ಟುಕೊಂಡು ಈ ವಮನ ರೋಗವು ಸ್ವತಂತ್ರವೇ ಉಪರೋಗವೇ ಊರ್ಧ್ವದ್ವಾರದಿಂದ ಹೊರಪಡಿಸಬಹುದಾದ ದೋಷಗಳ ಪ್ರಕೋಪದಿಂದ ಹುಟ್ಟಿದೆಯೇ ಅಧೋದ್ವಾರದಿಂದ ಹೊರಪಡಿಸಬಹುದಾದ ದೋಷಪ್ರಕೋಪವೂ ಕಾರಣವೇ ಎಂಬ ವಿಷಯವನ್ನು ಸಹ ಬಹಳ ಚೆನ್ನಾಗಿ ಪರೀಕ್ಷಿಸಿ ಕೊಳ್ಳಬೇಕು.

—ಇಲ್ಲಿಗೆ ಛರ್ದಿರೋಗನಿದಾನ ಸಂಪೂರ್ಣ—

## :—ತೃಷ್ಣಾರೋಗ ನಿದಾನ—:

ಭಯಶ್ರಮಾಭ್ಯಾಂಬಲಸಂಕ್ಷಯಾದ್ವಾಊರ್ಧ್ವಂಚಿತಂಪಿತ್ತವಿವರ್ಧನೈಶ್ಚ ॥

ಪಿತ್ತಸವಾತಂಕುಪಿತಂನರಾಣಾಂತಾಲುಪ್ರಪನ್ನಂಜನಯೇತ್ಪಿಪಾಸಾಂ ॥ ೧ ॥

ಸ್ರೋತಸ್ಸಪಾಂವಾಹಿಷುದೂಷಿತೇಷುದೋಷೈಶ್ಚತೃಟ್ ಸಂಭವತೀಹ ಜಂತೋಃ ॥

ತಿಸ್ರಸ್ಸ್ಮೃತಾಸ್ತಾಕ್ಷತಜಾಚತುರ್ಥೀಕ್ಷಯಾತ್ತಥಾಹ್ಯಾಮಸಮುದ್ಭ

ನಾಚ ॥

ಭಕ್ತೊದ್ಭವಾಸಪ್ತನಿಬೋಧತಾಸಾಂನಿಬೋಧಲಿಂಗಾನ್ಯನುಪೂರ್ವ
ಶಸ್ತು ॥ ೨ ॥

ಪಿತ್ತವರ್ಧಕಗಳಾದ ಅನ್ನಪಾನಗಳಿಂದ ಸ್ವಸ್ಥಾನದಲ್ಲಿಯೇ ಅಭಿವೃದ್ಧವಾದ ಪಿತ್ತವು ಭಯ, ಶ್ರಮ, ಬಲ ಕ್ಷಯ ಇವುಗಳಿಂದ ಪ್ರಕುಪಿದವಾದ ವಾಯುವಿನೊಡನೆ ಕೂಡಿಕೊಂಡು ತಾಲು ಸ್ಥಾನ (ದವಡೆಯನ್ನು)ವನ್ನು ಹೊಂದಿ ಬಾಯಾರಿಕೆಯನ್ನು ಹುಟ್ಟಿಸುತ್ತದೆ. ಅಲ್ಲದೆ ಜಲವಹನಾಡಿಗಳು ಕಫ ಆಮ ಅಂದರೆ ಅಪಕ್ವವಾದ ಅನ್ನರಸ ಅನ್ನ ಇವುಗಳಿಂದ ತಡೆಯಲ್ಪಟ್ಟರೂ ಬಾಯಾರಿಕೆ ಹುಟ್ಟುತ್ತದೆ. ಈ ತೃಷ್ಣಾರೋಗವು ವಾತಪ್ರಕೋಪಜನ್ಯ ಪಿತ್ತಪ್ರಕೋಪಜನ್ಯ ಶ್ಲೇಷ್ಮ ಪ್ರಕೋಪ ಜನ್ಯ ಉರಕ್ಷತವೇ ಮೊದಲಾದಯಾವುದಾದರೂ ಅಭಿಘಾತಾದಿಗಳಿಂದ ಹುಟ್ಟತಕ್ಕದ್ದು. ಭೋಜನ ಮಾಡಿದ ಪದಾರ್ಥವು ಜೀರ್ಣವಾಗದೆ ನಿಲ್ಲುವುದರಿಂದ ಹುಟ್ಟತಕ್ಕದ್ದು. ಧಾತುಕ್ಷಯ ದಿಂದ ಹುಟ್ಟತಕ್ಕದ್ದು. ಎಂಬದಾಗಿ ತೃಷ್ಣಾರೋಗವು ಏಳು ವಿಧ.

ಕ್ಷಾಮಾಸ್ಯತಾಮಾರುತಸಂಭವಾಯಾಂತೋದಸ್ತಥಾಂಶಂಖಶಿರಸ್ಸು
ಚಾಪಿ ॥

ಸ್ರೋತೋನಿರೋಧೋವಿರಸಂಚವಕ್ತ್ರಂಶೀತಾಭಿರದ್ಭಿಶ್ಚವಿವೃದ್ಧಿ
ಮೇತಿ ॥ ೩ ॥

ವಾತಜನಿತವಾದ ತೃಷ್ಣಾರೋಗದ ಲಕ್ಷಣಗಳೇನಂದರೆ ಮುಖವು ಒಣಗಿಕೊಂಡು ಬತ್ತಿ ಹೋಗುವುದು. ಕಣ್ಣು ಹುಬ್ಬು ಕಣ್ಣಿನ ಪಕ್ಕಗಳು ಮತ್ತು ತಲೆ ಇವುಗಳಲ್ಲಿ ನೋವು, ರಸ ಮತ್ತು ಜಲ ವಹನಾಡಿಗಳು ಬಾಯಲ್ಲಿ ತಮ್ಮ ಕೆಲಸಮಾಡಲಾರದೆ ರುದ್ಧವಾಗಿ ಹೋಗುವುದು. ಬಾಯಿಗೆ ಯಾವವಿಧವಾದ ರಸಜ್ಞಾನವೂ ಗೊತ್ತೇ ಆಗದಿರುವುದು. ತಣ್ಣೀರು ಕುಡಿದಷ್ಟೂ ಬಾಯಾರಿಕೆ ಹೆಚ್ಚುತ್ತಿರುವುದು. ಇವು ಲಕ್ಷಣಗಳು.

ಮೂರ್ಛಾನ್ನವಿದ್ವೇಷವಿಲಾಪದಾಹಾರಕ್ತೇಕ್ಷಣತ್ವಂಪ್ರತತಶ್ಚಶೋಷಃ॥
ಶೀತಾಭಿನಂದಾಮುಖತಿಕ್ತತಾಚಪಿತ್ತಾತ್ಮಿಕಾಯಾಂಪರಿದೂಯ
ನಂಚ ॥ ೪ ॥

ಮೂರ್ಛೆಬರುವುದು ಅನ್ನದ್ವೇಷ ಸಂಕಟವನ್ನು ತಡೆಯಲಾರದೆ ರೋದನಾದಿಗಳನ್ನು ಮಾಡುವುದು. ಮೈಯುರಿ ಕಣ್ಣು ಕೆಂಪಾಗಿರುವುದು. ಅತಿಯಾಗಿ ಗಂಟಲು ಒಣಗುತ್ತಿರುವುದು. ತಂಪಾದ ಗಾಳಿ ತಣ್ಣಗಿರುವ ನೀರು ಇವುಗಳಲ್ಲಿ ಅಪೇಕ್ಷೆ. ಬಾಯಿ ಕಹಿಯಾಗಿರುವುದು. ಅತಿಯಾದ ಸಂಕಟ ಇವು ಪಿತ್ತಪ್ರಕೋಪ ಜನ್ಯಗಳಾದ ತೃಷ್ಣಾರೋಗದ ಲಕ್ಷಣಗಳು.

ಬಾಷ್ಪಾವರೋಧಾತ್ಕಫಸಂವೃತೇಗ್ನೌತೃಷ್ಣಾಬಲಾಸೇನಭವೇತ್ತ
ಥಾತು ॥

ನಿದ್ರಾಗುರುತ್ವಂಮಧುರಾಸ್ಯತಾಚತೃಷ್ಣಾರ್ದಿತಶ್ಶುಷ್ಯತಿಚಾತಿ
ಮಾತ್ರಂ ॥ ೫ ॥

ಕಫ ಪ್ರಕೋಪ ಕಾರಣಗಳಿಂದ ಪ್ರಕುಪಿತವಾದ ಕಫವು ಜಠರಾಗ್ನಿಯನ್ನು ಮುಚ್ಚಿಹಾಕಿಕೊಂಡು ಅದರ ಶಾಖವನ್ನು ಒಳಗೇ ಅಡಗಿಸಿದ್ದರಿಂದ ಒಳಗೆ ಅಡಗಿಕೊಂಡು ಆ ಶಾಖವು ಕಫಜಲವಹನಾಡಿಗಳನ್ನು ಶೋಷಿಸಿ ತೃಷ್ಣಾ ರೋಗವನ್ನುಂಟುಮಾಡುತ್ತದೆ. ಇದರಿಂದ ಯಾವಾಗ್ಯೂ ನಿದ್ರೆ ಮೈಭಾರ ಬಾಯಿ ಸಿಹಿಯಾಗಿರುವುದು. ಈ ಲಕ್ಷಣಗಳಿರುತ್ತವೆ. ಈ ಶ್ಲೇಷ್ಮ ಪ್ರಕೋಪಜನ್ಯವಾದ ತೃಷ್ಣಾ ರೋಗದಿಂದ ಪೀಡಿತನಾದ ರೋಗಿಯು ಕ್ರಮೇಣ ಶೋಷಿಸಿ ಹೋಗುತ್ತಿರುತ್ತಾನೆ.

**ಕ್ಷತಸ್ಯರುಕ್ಶೋಣಿತನಿರ್ಗಮಾಭ್ಯಾಂತೃಷ್ಣಾಚತುರ್ಥೀಕ್ಷತಜಾಮ ತಾತು ॥**

**ರಸಕ್ಷಯಾದ್ಯಾಕ್ಷಯಸಂಭವಾಸಾತಯಾಭಿಭೂತಶ್ಚ ನಿಶಾದಿನೇಷು ॥ ೬ ॥**

**ಪೇಪಿಯತೇಂಭಸ್ಸುಖಂನಯಾತಿತಾಂಸನ್ನಿಪಾತಾದಿಕೇಚಿದಾಹುಃ ।**
**ರಸಕ್ಷಯೋಕ್ತಾನಿಚಲಕ್ಷಣಾನಿತಸ್ಯಾಮಶೇಷೇಣಭಿಷಗ್ವ್ಯವಸ್ಯೇತ್ ॥**

ದೇಹದಲ್ಲಿ ಉಂಟಾದ ವ್ರಣದ ನೋವು ಮತ್ತು ವ್ರಣದಿಂದ ರಕ್ತಸೋರುವುದು. ಈ ಕಾರಣಗಳಿಂದ ಹುಟ್ಟತಕ್ಕ ಬಾಯಾರಿಕೆಗೆ ಕ್ಷತಜನ್ಯ ತೃಷ್ಣಾರೋಗವೆಂದು ಹೆಸರು. ರಸಧಾತುವಿನ ಕ್ಷಯದಿಂದ ಹುಟ್ಟಿದ ಬಾಯಾರಿಕೆಗೆ ಕ್ಷಯಜವೆಂಬ ಹೆಸರು. ಈ ಬಾಯಾರಿಕೆಯಿಂದ ಪೀಡಿತನಾದ ಮನುಷ್ಯನು ಹಗಲು ಮತ್ತು ರಾತ್ರಿಗಳಲ್ಲಿ ಪದೇ ಪದೇ ನೀರು ಕುಡಿಯುತ್ತಿರುತ್ತಾನೆ. ಎಷ್ಟು ನೀರು ಕುಡಿದರೂ ತೃಪ್ತಿಮಾತ್ರ ಆಗುತ್ತಿರುವುದಿಲ್ಲ ಈ ಬಾಯಾರಿಕೆಯನ್ನು ತ್ರಿದೋಷಸನ್ನಿಪಾತ ಜನ್ಯವೆಂದು ಕೆಲವರು ಹೇಳುತ್ತಾರೆ. ಇದರಲ್ಲಿ ರಸಧಾತು ಕ್ಷಯಜನ್ಯವಾದ ಕ್ಷಯರೋಗದ ಲಕ್ಷಣಗಳೇ ಕಾಣುತ್ತಿರುತ್ತವೆ.

**ತ್ರಿದೋಷಲಿಂಗಾಮಸಮುದ್ಭವಾಚಹೃಚ್ಛೂಲನಿಷ್ಠೀವನಸಾದಕೃತ್ರೀ ॥**

**ಸ್ನಿಗ್ಧಂತಥಾಮ್ಲಂಲವಣಂಚಭುಕ್ತಂಗುರ್ವನ್ನಮೇವಾಶುತೃಷಾಂಕರೋತಿ ॥ ೮ ॥**

ಅಜೀರ್ಣದಿಂದ ಹುಟ್ಟಿದ ಬಾಯಾರಿಕೆಯಲ್ಲಿ ತ್ರಿದೋಷಲಕ್ಷಣಗಳೂ ತೋರುತ್ತಿರುತ್ತವೆ. ಹೊಟ್ಟೆಶೂಲೆ ಬಾಯಿನಲ್ಲಿ ಉಗುಳು ಬರುತ್ತಿರುವುದು. ಅಗ್ನಿಮಾಂದ್ಯ ಇವುಗಳಿರುತ್ತವೆ.

ಸ್ನೇಹ ಪ್ರಚುರವಾದ ಆಹಾರ, ಹುಳಿಯಾದ ಆಹಾರ, ಉಪ್ಪಾದಆಹಾರ ಇವುಗಳಿಂದ ಕೂಡಿದ ಗುರ್ವಾಹಾರಗಳು ಇವುಗಳು ಸ್ವತ ಏವ ಬಾಯಾರಿಕೆಯನ್ನು ಹುಟ್ಟಿಸುತ್ತವೆ.

**ದೀನಸ್ಸ್ವರಃಪ್ರತಾಮ್ಯನ್‌ದೀನಃಸಂಶುಷ್ಕವಕ್ತ್ರಗಳತಾಲುಃ ॥**
**ಭವತಿಖಲುಯೋಪಸರ್ಗಾತ್ತೃಷ್ಣಾಸಾಶೋಷಿಣೀಕಷ್ಟಾ ॥ ೯ ॥**

ಕಂಠಧ್ವನಿ ಕುಗ್ಗಿಹೋಗಿರುವುದು, ಸಂಕಟ ಪಡುತ್ತಿರುವುದು ರೋಗಿಯ

ಛಿನ್ನನಾಗಿರುವುದು. ಮುಖ ದವಡೆ ಎಲ್ಲಾ ಶೋಷಿಸಿ ಹೋಗಿರುವುದು. ಈ ಲಕ್ಷಣಗಳಿಂದ ಕೂಡಿರುವ ತೃಷ್ಣಾರೋಗವು ಧಾತುಶೋಷ ಮಾಡತಕ್ಕದಾದ್ದರಿಂದ ಕಷ್ಟಸಾಧ್ಯವೆಂದರಿಯಬೇಕು.

ಜ್ವರಮೊಹಕ್ಷಯಕಾಸಶ್ವಾಸಾದ್ಯುಪಸೃಷ್ಟದೇಹನಾಂ॥
ಸರ್ವಾಸ್ತ್ವತಿಪ್ರಸಕ್ತಾರೋಗಕೃಶಾನಾಂವಮಿಪ್ರ
ಯುಕ್ತಾನಾಂ॥ ೧೦ ॥
ಘೋರೋಪದ್ರವಯುಕ್ತಾಸ್ತೃಷ್ಣಾಮರಣಾಯವಿಜ್ಞೇಯಾಃ॥

ಜ್ವರ, ಮೂರ್ಛೆ, ಧಾತುಕ್ಷಯ ಕೆಮ್ಮು, ಉಬ್ಬಸ ಇವುಗಳು ತೃಷ್ಣಾರೋಗದ ಉಪದ್ರವಗಳು ಪೂರ್ವೋಕ್ತಗಳಾದ ಎಲ್ಲಾ ತೃಷ್ಣಾರೋಗಗಳು ಅತಿಯಾಗಿ ಹೆಚ್ಚಿ ಹೋಗಿದ್ದು ರೋಗಿಯು ಕೃಶನಾಗಿದ್ದು ವಮನವೂ ಇದ್ದಲ್ಲಿ ಇಂತಹ ಘೋರವಾದ ಮತ್ತು ಉಪದ್ರವಗಳಿಂದ ಕೂಡಿರುವ ತೃಷ್ಣಾರೋಗವು ಚಿಕಿತ್ಸೆಗೆ ಅಸಾಧ್ಯವೆಂದು ತಿಳಿಯಬೇಕು.

**ಟಿಪ್ಪಣಿ**—: ತೃಷ್ಣಾರೋಗವೆಂದರೆ ಅತ್ಯುತ್ಕಟವಾದ ಬಾಯಾರಿಕೆ ಪ್ರತಿ ದಿವಸದಲ್ಲಿ ಪ್ರತಿಮನುಷ್ಯನೂ ಬಾಯಾರುವುದು ನೀರು ಕುಡಿಯುವುದು. ಈ ಕೆಲಸಗಳನ್ನು ಸ್ವಾಭಾವಿಕವಾಗಿಯೇ ಮಾಡುತ್ತಲಿರುವುದರಿಂದ ಈ ಬಾಯಾರಿಕೆ ಹೆಚ್ಚಾದರೂ ಇದೊಂದು ರೋಗವೆಂದು ತಿಳಿದುಕೊಳ್ಳುವುದು ಪದ್ಧತಿಯಾಗಿಲ್ಲ. ಇದೇ ರೀತಿಯಾಗಿಯೇ ವೈದ್ಯರುಗಳು ಕೂಡ ಈ ರೋಗವು ಸ್ವತಂತ್ರ ರೋಗವೆಂದು ಭಾವಿಸುವುದಿಲ್ಲ. ಮೇಲೆ ಹೇಳಿದ ಈ ರೋಗದ ಉಪರೋಗಗಳಾದ ಜ್ವರ ಮೊದಲಾದುವುಗಳನ್ನೇ ಸ್ವತಂತ್ರ ರೋಗವಾಗಿ ಭಾವಿಸಿ ಈ ತೃಷ್ಣಾರೋಗವನ್ನು ಅವುಗಳ ಉಪರೋಗದ ಗುಂಪಿಗೆ ಎಳೆದು ಚಿಕಿತ್ಸಿಸುವುದೇ ಇವತ್ತಿಗೂ ಅನುಭವದಲ್ಲಿ ಬಂದಿದೆ. ಹೀಗೆಮಾಡುವುದರಿಂದ ಸರ್ವತ್ರ ತೊಂದರೆಯೇನೂ ಕಂಡುಬರದಿದ್ದರೂ ತೃಷ್ಣಾರೋಗಕ್ಕೆ ಉಪದ್ರವ ಭೂತವಾದ ಧಾತುಕ್ಷಯವನ್ನು ಮಾತ್ರ ಸ್ವತಂತ್ರರೋಗವೆಂದು ತಿಳಿದುಕೊಂಡು ತೃಷ್ಣಾರೋಗವನ್ನು ಬಿಟ್ಟು ಧಾತುಕ್ಷಯಕ್ಕೆ ಉಕ್ತಗಳಾದ ಚಿಕಿತ್ಸೆಗಳನ್ನೆ ಮಾಡುತ್ತ (ಬೃಂಹಣ ಚಿಕಿತ್ಸೆ) ಬರುವುದರಿಂದ ತೊಂದರೆಯಾಗುತ್ತದೆ. ವಾಗ್ಭಟಕಾರರು ಈ ತೃಷ್ಣಾರೋಗವನ್ನು ಕ್ಷಯರೋಗಪ್ರಕರಣದಲ್ಲಿ ಸೇರಿಸಿಬಿಟ್ಟಿದ್ದಾರೆ. ಚರಕ ಚಿಕಿತ್ಸಾ ಪ್ರಕರಣದಲ್ಲಿ ಈ ರೋಗವನ್ನು ಪ್ರತ್ಯೇಕವಾಗಿಯೇ ಹೇಳಿ ಚಿಕಿತ್ಸೆಯನ್ನೂ ಹೇಳಿದ್ದಾರೆ. ಚರಕದವರು ಸ್ವತಂತ್ರವಾಗಿರಲಿ ಉಪರೋಗವಾಗಿರಲಿ ಹ್ಯಾಗಿದ್ದರೂ ಈ ತೃಷ್ಣಾರೋಗವನ್ನು ಮೊದಲು ಚಿಕಿತ್ಸಿಸಿ ಜಯಿಸಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ.

"ತಸ್ಮಾತ್ತೃಷ್ಣಾಂಪೂರ್ವಂಜಯೇದ್ಬಹುಭ್ಯೋಪಿರೋಗೇಭ್ಯಃ"॥

:—ಇಲ್ಲಿಗೆ ತೃಷ್ಣಾರೋಗನಿದಾನ ಸಮಾಪ್ತಿ—

## —: ಮೂರ್ಛಾರೋಗ ನಿಧಾನ :—

ಕ್ಷೀಣಸ್ಯಬಹುದೋಷಸ್ಯವಿರುದ್ಧಾಹಾರಸೇವಿನಃ ।
ವೇಗಾಘಾತದಭೀಘಾತಾದ್ಧೀನಸತ್ವಸ್ಯವಾಪುನಃ ॥ ೧ ॥
ಕರಣಾಯತನೇಷೂಗ್ರಬಾಹ್ಯೇಷ್ವಾಭ್ಯಂತರೇಷುಚ ॥
ನಿವಿಶಂತೆಯದಾದೋಷಾಸ್ತದಾಮೂರ್ಛಂತಿಮಾನವಾಃ ॥ ೨ ॥
ಸಂಜ್ಞಾವಹಾಸುನಾಡೀಷುಪಿಹಿತಾಸ್ವನಿಲಾದಿಭಿಃ ।
ತಮೋಭ್ಯುಪೈತಿಸಹಸಾಸುಖದುಃಖವ್ಯಪೋಹಕೃತ್ ॥ ೩ ॥
ಸುಖದುಃಖವ್ಯಪೋಹಾಚ್ಚ ನರಃಪತತಿಕಾಷ್ಠವತ್ ।
ಮೋಹೋಮೂರ್ಛೇತಿತಾಮಾಹುಷ್ಷಡ್ವಿಧಾಸಾಪ್ರಕೀರ್ತಿತಾ । ೪ ।
ವಾತಾದಿಭಿಶ್ಶೋಣಿತೇನಮದ್ಯೇನಚವಿಷೇಣಚ ।
ಷಟ್ಸ್ವಪ್ಯೇತಾಸುಪಿತ್ತಂತುಪ್ರಭುತ್ವೇನಾವತಿಷ್ಠತೆ ॥ ೫ ॥

ಮೂರ್ಛಾರೋಗನಿದಾನವನ್ನು ಹೇಳುತ್ತಾನೆ. ಶರೀರದಲ್ಲಿ ರಕ್ತಮಾಂಸಗಳು ಕಡಮೆಯಾಗೋಣದರಿಂದ ಕೃಶನಾದವನಿಗೆ ಒಂದೇಕಾಲದಲ್ಲಿ ಅನೇಕದೋಷಗಳು ಪ್ರಕುಪಿತಗಳಾಗಿ ಅವುಗಳಿಂದ ವ್ಯಾಪ್ತನಾದವನಿಗೆ ತಾತ್ಕಾಲಿಕಪ್ರಕೃತಿವಿರುದ್ಧಗಳಾದ ಆಹಾರಗಳನ್ನು ಸೇವಿಸತಕ್ಕವನಿಗೆ. ಮಲಮೂತ್ರಗಳವೇಗವನ್ನು ತಡೆಯೋಣದರಿಂದ ಮತ್ತು ಅಭಿಘಾತವೆಂದರೆ ಪೆಟ್ಟುಬೀಳುವುದು ಇವುಗಳಿಂದ ಪೀಡಿತನಾದವನಿಗೆ, ಶರೀರದಲ್ಲಿ ಸತ್ವಗುಣಕಡಮೆಯಾದವನಿಗೆ, ಇಂತವರುಗಳಿಗೆ ದೇಹದಲ್ಲಿ ಪ್ರಕುಪಿತಗಳಾದ ವಾತಾದಿದೋಷಗಳು ಬಾಹ್ಯೇಂದ್ರಿಯಗಳಸ್ಥಾನಗಳಲ್ಲಿ ಅಂದರೆ ಕರ್ಮೇಂದ್ರಿಯಗಳಲ್ಲಿ, ಅಂತರಿಂದ್ರಿಯಗಳಸ್ಥಾನಗಳಲ್ಲಿ ಅಂದರೆ ಜ್ಞಾನೇಂದ್ರಿಯಗಳಸ್ಥಾನಗಳಲ್ಲಿ ಸಹ ತಮ್ಮ ವ್ಯಾಪ್ತಿಯನ್ನುಂಟುಮಾಡಿದಲ್ಲಿ ಆಗ್ಯೆ ಮೂರ್ಛೆಹೊಂದುತ್ತಾನೆ. ಸಂಜ್ಞಾವಾಹಿಗಳಾದಸಿರ. ಧಮನಿ. ಸ್ರೋತಸ್ಸುಗಳೆಂಬ ಮನೋವಹಗಳಾದನಾಡಿಗಳು ಪ್ರಕುಪಿತಗಳಾದವಾತಾದಿಗಳಿಂದ ಆವರಿಸಿಕೊಳ್ಳಲ್ಪಟ್ಟರೆ ಅಂದರೆ ನಿಶ್ಚೇಷ್ಟಗಳಾಗುವಸ್ಥಿತಿಗೆ ತರಲ್ಪಟ್ಟರೆ, ಇದು ಸುಖ ಅದು ದುಃಖ ಎಂಬ ವ್ಯವಸ್ಥೆಗೆ ಮುಖ್ಯಕಾರಣವಾದ ಜ್ಞಾನತಂತುವಿನ ಕಾರ್ಯವೆನಿಸಿ ಹೋಗಿತವನ್ನು ಆವರಿಸಿಕೊಳ್ಳುತ್ತದೆ. ಈರೀತಿಯಾದ ತಮೋಗುಣದ ಆವರಣದಿಂದ ಸುಖದುಃಖಜ್ಞಾನಶೂನ್ಯನಾದಮೇಲೆ ಮನುಷ್ಯನು ಕಾಷ್ಠವತ್ ಎಂದರೆ ಸೌದೆಯಕೊರಡಿನಂತೆ ನಿಶ್ಚೇಷ್ಟನಾಗಿಬಿದ್ದುಹೋಗುತ್ತಾನೆ. ಈಅವಸ್ಥೆಗೇನೇ ಮೊಹ. ಮೂರ್ಛೆಎಂಬಹೆಸರುಗಳು ಸಲ್ಲುತ್ತವೆ. ಈಮೂರ್ಛಾರೋಗವುಆರುವಿಧ. ವಾತಪ್ರಕೋಪಜನ್ಯ. ಪಿತ್ತಪ್ರಕೋಪಜನ್ಯ. ಶ್ಲೇಷ್ಮಪ್ರಕೋಪಜನ್ಯ. ರಕ್ತದೋಷದಿಂದಹುಟ್ಟತಕ್ಕದ್ದು. ಮದ್ಯದಿಂದಹುಟ್ಟತಕ್ಕದ್ದು. ವಿಷಸಂಸರ್ಗಜನ್ಯಎಂಬದಾಗಿ. ಈ ಆರುವಿಧವಾದ ಮೂರ್ಛಾರೋಗದಲ್ಲಿಯೂ ಪಿತ್ತವೇ ಪ್ರಧಾನವಾದದ್ದು. ಅಂದರೆ ಪಿತ್ತದಯೂಜಮಾನ್ಯವೇ ಹೆಚ್ಚುಎಂಬಭಾವ.

ಹೃತ್ಪೀಡಾ ಜೃಂಭಣಂಗ್ಲಾನಿಸ್ಸಂಜ್ಞಾದೌರ್ಬಲ್ಯಮೇವಚ ॥
ಸರ್ವಾಸಾಂಪೂರ್ವರೂಪಾಣಿಯಥಾಸ್ವಂಚವಿಭಾವಯೇತ್ ॥ ೬ ॥

ಹಿಂದೆಹೇಳಿದ ಎಲ್ಲಾ ವಿಧವಾದ ಮೂರ್ಛಾರೋಗದ ಪ್ರಥಮಾವಸ್ಥೆಯಲ್ಲಿಯೂ ಹೃದಯುದಲ್ಲಿನೋವು. ಆಕಳಿಕೆ. ಬಳಲಿಕೆ. ಜ್ಞಾನತಂತುಗಳ ಶಕ್ತಿಕ್ರಮೇಣ ಕಡಮೆಯಾಗುತ್ತಬರುವುದು ಇವುಗಳುಕಾಣುತ್ತಿರುತ್ತವೆ.

ನೀಲಂ ವಾಯುದಿವಾಕೃಷ್ಣಮಾಕಾಶಮಥವಾರುಣಂ॥
ಪಶ್ಯಂಸ್ತಮಃಪ್ರವಿಶತಿ ಶೀಘ್ರಂಚಪ್ರತಿಬುಧ್ಯತೆ ।। ೭ ।।
ವೇಪಥುಶ್ಯಾಂಗಮರ್ದಶ್ಚಪ್ರಪೀಡಾಹೃದಯಸ್ಯಚ ।।
ಕಾರ್ಶ್ಯಂಶ್ಯಾವಾರುಣಾ ಛಾಯಾಮೂರ್ಛಾಯೇವಾತಸಂಭವೆ ।। ೮ ।।

ವಾತಪ್ರಕೋಪಜನ್ಯವಾದ ಮೂರ್ಛಾರೋಗದಲ್ಲಿ ಮೂರ್ಛೆಬರುವಪ್ರಾರಂಭದಲ್ಲಿ ಆಕಾಶದಕಡೆಗೆನೋಡಿದರೆ ನೀಲವರ್ಣ. ಅಚ್ಚಕಪ್ಪು. ಕೆಂಪು ಈರೀತಿಯಾಗಿ ಕಾಣುವುದಕ್ಕೆ ಆರಂಭವಾಗುತ್ತದೆ. ನಂತರ ಮೂರ್ಛೆಬರುತ್ತದೆ. ಜಾಗ್ರತೆಯಲ್ಲಿಯೇ ಎಚ್ಚರವಾಗಿಬಿಡುತ್ತವೆ. ರೋಗಿಗೆ ಮೈ ನಡತವಿರುತ್ತದೆ ಮೈ ನಡಕವೂ ಇರುತ್ತದೆ. ಹೃದಯ ವೇದನೆಯಿರುತ್ತದೆ ದೇಹವು ಕೃಶವಾಗಿರುತ್ತದೆ. ಶರೀರದ ಹೊರಬಣ್ಣವು ಧೂಮ್ರವರ್ಣವಾಗಿಯಾಗಲಿ ಕೆಂಪಾಗಿಯಾಗಲಿ ಅಥವಾ ಎರಡೂ ಬಣ್ಣಕೂಡಿಯಾಗಲಿ ಇರುತ್ತದೆ.

ರಕ್ತಂಹರಿತವರ್ಣಂವಾವಿಯತ್ಪೀತಮಥಾಪಿವಾ ॥
ಪಶ್ಯಂಸ್ತಮಃಪ್ರವಿಶತಿಸಸ್ವೆದಶ್ಚಪ್ರಬುದ್ಧ್ಯತೇ ॥ ೯ ॥
ಸಪಿಪಾಸಸ್ಸಸಂತಾಪೊರಕ್ತಪೀತಾರುಣೇಕ್ಷಣಃ ॥
ಸಂಭಿನ್ನವರ್ಚಾಃಪೀತಾಭೊಮೂರ್ಛಾಯೇಪಿತ್ತಸಂಭವೇ ॥ ೧೦ ॥

ಪಿತ್ತಪ್ರಕೋಪದಿಂದ ಉತ್ಪನ್ನವಾದ ಮೂರ್ಛಾರೋಗದ ಲಕ್ಷಣಗಳನ್ನು ಹೇಳುತ್ತಾನೆ. ರೋಗಿಯು ಆಕಾಶದ ಕಡೆಗೆ ನೋಡಿದರೆ ಕೆಂಪು ಹಸರು ಹಳದಿ ಈ ಬಣ್ಣಗಳು ಕಾಣುವುದು. ಈ ಬಣ್ಣಗಳು ಕಾಣುತ್ತಲಿದ್ದಂತೆಯೇ ಮೂರ್ಛಿತನಾಗಿ ಬೀಳುವುದು. ಎಚ್ಚರವಾಗುವಾಗ್ಯೆ ಮೈ ಚೆನ್ನಾಗಿ ಬೆವರಿರುವುದು, ಬಾಯಾರಿಕೆ ಮೈತಾಪ ಕಣ್ಣು ಕೆಂಪಗಾಗುವುದು ಮಲಪ್ರವೃತ್ತಿಯು ನೀರಾಗಿಆಗುವದು(ಅಂದರೆ ಭೇಧಿ) ರೋಗಿಯು ಪಾಂಡುವರ್ಣವದನಂತೆ ಬೆಳ್ಳಗಾಗುತ್ತ ಹೋಗುವುದು ಇವು ಲಕ್ಷಣಗಳು

ಮೇಘಸಂಕಾಶಮಾಕಾಶಮಾವೃತಂವಾತನೊಘಾನ್ಯೈಃ ॥
ಪಶ್ಯಂಸ್ತಮಃಪ್ರವಿಶತಿಚಿರಾಚ್ಚಪ್ರತಿಬುಧ್ಯತೇ ॥ ೧೧ ॥
ಗುರುಭಿಃಪ್ರಾವೃತೈರಂಗೈರ್ಯಥಾವಾರ್ದ್ರೇಣಚರ್ಮಣಾ ॥
ಸಪ್ರಸೇಕಸ್ಸಹೃಲ್ಲಾಸೋಮೂರ್ಛಾಯೇಕಫಸಂಭವೇ ॥ ೧೨ ॥

ಕಫ ಪ್ರಕೋಪಜನಿತವಾದ ಮೂರ್ಛಾರೋಗದಲ್ಲಿ ಆಕಾಶದ ಕಡೆಗೆ ನೋಡಿದರೆ ಮೊಡದಂತೆ ಕಾಣುವುದು ಮತ್ತು ಮಳೆ ಬರಲು ಮೊಡ ಕವಿದಿರುವಂತೆ ಕಾಣುತ್ತಿರುವುದು ಈ ರೀತಿ ಕಾಣುತ್ತಿರುವ ಹಾಗೆಯೆ ಮೂರ್ಛಿತನಾಗುವುದು ಎಚ್ಚರವಾಗುವುದಕ್ಕೆ ಬಹಳ ಹೊತ್ತಾಗುವುದು ಮೈಮೇಲೆ ದಪ್ಪವಾದ ಕಂಬಳಿಯನ್ನು ಹೊದ್ದಿರ್ರು

ವಂತೆಯಾಗಲಿ ಒದ್ದೆಯ ಬಟ್ಟೆ ಹಸಿಯಚರ್ಮ ಇವುಗಳನ್ನು ಹೊದ್ದುಕೊಂಡಿರುವಂತೆ ಯಾಗಲಿ ಕಾಣುತ್ತಿರುವುದು ಗಂಟಲಿನಲ್ಲಿ ಶ್ಲೇಷ್ಮ ತುಂಬಿಕೊಂಡು ಬಾಯಿ ನೀರು ಕರೆ ಯುತ್ತಿರುವುದುಇವು ಕಾಣತಕ್ಕ ಲಕ್ಷಣಗಳು.

**ಸರ್ವಾಕೃತಿಸನ್ನಿಪಾತಾದಪಸ್ಮಾರಇವಾಗತಃ||**
**ಸಜಂತುಂಪಾತಯತ್ಯಾಶುವಿನಾಬೀಭತ್ಸಚೇಷ್ಟಿತೈ|| ೧೩ ||**

ತ್ರಿದೋಷಗಳು ಏಕಕಾಲಲ್ಲಿ ಪ್ರಕುಪಿತಗಳಾಗಿ ಹುಟ್ಟಿತಕ್ಕ ಮೂರ್ಛಾರೋಗ ದಲ್ಲಿ ಮೂರು ದೋಷಗಳ ಲಕ್ಷಣಗಳೂ ಕಾಣುತ್ತಲಿರುವುದಲ್ಲದೆ ರೋಗಿಯು ಅಪಸ್ಮಾ ರದಲ್ಲಿ ಬೀಳುವಂತೆ ನಾವಕಾಶವಿಲ್ಲದೆ ಬೀಳುತ್ತಾನೆ. ಆದರೆ ಅಪಸ್ಮಾರದ ಲಕ್ಷಣಗ ಳಾದ ಬಾಯಿಯಲ್ಲಿ ನೊದಲೆ ಬರುವುದು. ಕಣ್ಣು ಮೇಲಕ್ಕೆ ಶಿಕ್ಕಿಕೊಳ್ಳುವುದು. ಹಲ್ಲು ಕಡಿಯುವುದು ಮೊದಲಾದ ಬೀಭತ್ಸ ಚೇಷ್ಟೆಗಳಿರುವುದಿಲ್ಲ-

**ಪೃಥಿವ್ಯಾಪಸ್ತಮೋರೂಪಂರಕ್ತಗಂಧಸ್ತದನ್ವಯಃ ||**
**ತಸ್ಮಾದ್ರಕ್ತಸ್ಯಗಂಧೇನಮೂರ್ಛಂತಿಭುವಿಮಾನವಾಃ|| ೧೪ ||**
**ದ್ರವ್ಯಸ್ವಭಾವಇತ್ಯೇಕೇದೃಷ್ಟ್ವಾಯದಭಿಮೂರ್ಛತಿ ||**

ರಕ್ತದೋಷದಿಂದ ಹುಟ್ಟಿತಕ್ಕ ಮೂರ್ಛಾರೋಗವನ್ನು ಹೇಳುತ್ತಾನೆ. ಪಂಚ ಭೂತಾತ್ಮಕವಾದ ಈ ಪ್ರಪಂಚದಲ್ಲಿ ಪೃಥಿವಿ ಮತ್ತು ಅಪ್ ಎಂಬ ಎರಡು ಭೂತಗಳೂ ತಮೋಗುಣ ಭೂಯಿಷ್ಠವಾದವುಗಳು- ರಕ್ತದ ವಾಸನೆಯು ಪಂಚಭೂತಗಳ ನಡುವೆ ಪೃಥವಿ ಮತ್ತು ಅಪ್ ಎಂಬ ಭೂತಗಳ ಸ್ವಭಾವವನ್ನೇ ವಿಶೇಷತಃ ಹೊಂದಿರುತ್ತದೆ. ಅಂದರೆ ರಕ್ತದ ವಾಸನೆಯು ತಮೋಗುಣ ಭೂಯಿಷ್ಠವೆಂದು ತಾತ್ಪರ್ಯ. ಏವಂಚ ಮೂರ್ಛೆಯು ತಮಃ ಪ್ರಚುರವಾದುದರಿಂದಲೂ ರಕ್ತದ ವಾಸನೆಯೂ ತಮೋಗುಣ ವರ್ಧಕವಾದ್ದರಿಂದಲೂ ರಕ್ತದವಾಸನೆಯನ್ನಾಘ್ರಾಣಿಸಿ ಮೂರ್ಛೆಯನ್ನು ಹೊಂದುತ್ತಾ ರೆನ್ನುವುದೊಂದು ಮತ ಕೆಲವರಿಗೆ ರಕ್ತವನ್ನು ಕಂಡಮಾತ್ರದಿಂದಲೇ ಮೂರ್ಛೆ ಬರುವುದುಂಟು ಮತ್ತೆ ಕೆಲವರು, ಪದಾರ್ಥಗಳ ವಾಸನೆಯಿಂದ ಮತ್ತು ಪದಾರ್ಥ ಗಳನ್ನು ನೋಡೋಣದರಿಂದ ಮೂರ್ಛೆಬರುತ್ತದೆಂಬುವುದು ಅಯಾ ದ್ರವ್ಯಗಳ ಸ್ವಭಾ ವವೆಂದೇ ಹೇಳುತ್ತಾರೆ.

**ಗುಣಾಸ್ತೀವ್ರತರತ್ವೇನಸ್ಥಿತಾಸ್ತುವಿಷಮದ್ಯಯೋಃ ||**
**ತಏವತಸ್ಮಾತ್ತಾಭ್ಯಾಂತುಮೋಹೌಸ್ಯಾತಾಂಯಥೇರಿತೌ || ೧೫ ||**

ವಿಷಮತ್ತುಮದ್ಯ ಈಪದಾರ್ಥಗಳಲ್ಲಿ ಲಘು,ರೂಕ್ಷ,ವಿಶದ, ಆಶುಕಾರಿಗಳೆಂಬ ಗುಣಗಳು ಇತರ ವಸ್ತುಗಳಲ್ಲಿರುವುದಕ್ಕಿಂತ ಅತ್ಯಂತ ತೀವ್ರವಾಗಿರುತ್ತವೆ. ಆದ್ದರಿಂ ದಲೇ ಈ ಎರಡು ಪದಾರ್ಥಗಳನ್ನೂ ಎಷ್ಟು ಉಪಯೋಗಿಸ ಬಹುದೆಂಬದಾಗಿ ಶಾಸ್ತ್ರ ಕಾರರು ಅನುಜ್ಞೆಕೊಟ್ಟಿದ್ದಾರೆಯೋ ಆದಕ್ಕಿಂತ ಹೆಚ್ಚಿಗೆ ಉಪಯೋಗಿಸೋಣದರಿಂದ ಮೂರ್ಛಾರೋಗವು ಪ್ರಾಪ್ತವಾಗುತ್ತದೆ.

ಸ್ತಬ್ಧಾಂಗದೃಷ್ಟಿಸ್ತ್ವಸೃಜಾಗೂಢೋಚ್ಛ್ವಾಸಶ್ಚ ಮೂರ್ಛಿತಃ ॥
ಮದ್ಯೇನವಿಲಪನ್ ಶೇತೇನಷ್ಟವಿಭ್ರಾಂತಮಾನಸಃ ॥ ೧೭ ॥
ಗಾತ್ರಾಣಿವಿಕ್ಷಿಪನ್ ಭೂಮೌಜರಾಂಯಾವನ್ನಯಾತಿತತ್ ॥
ವೇಪಥುಸ್ವಪ್ನತೃಷ್ಣಾಸ್ಯುಸ್ತಮಶ್ಚ ವಿಷಮೂರ್ಛಿತೇ ॥ ೧೭ ॥
ವೇದಿತವ್ಯಂತೀವ್ರತರಂಯಥಾಸ್ವಂವಿಷಲಕ್ಷಣೈಃ ॥

ರಕ್ತದರ್ಶನಾದಿಗಳಿಂದ ಹುಟ್ಟಿದ ಮೂರ್ಛೆಯಲ್ಲಿ ಮೂರ್ಛಿತನ ದೃಷ್ಟಿ ಮತ್ತು ಅವಯವಗಳು ಸಹ ಸ್ತಬ್ಧವಾಗಿರುತ್ತವೆ- ಉಛ್ವಾಸ ನಿಶ್ವಾಸಗಳು ಸ್ತಬ್ಧವಾಗಿ ಅಂದರೆ ನಿದಾನವಾಗಿಯೇ ಇರುತ್ತವೆ. ಮದ್ಯಪಾನ ಮಾಡಿದ್ದರಿಂದ ಉಂಟಾಗುವ ಮೂರ್ಛೆಯಲ್ಲಿ ಪಾನಮಾಡಿದ ಮದ್ಯವು ಜೀರ್ಣವಾಗುವ ತನಕ ಕೈ ಕಾಲುಗಳನ್ನು ಎತ್ತಿಹಾಕುತ್ತ ಭ್ರಾಂತನಾದವನ ಹಾಗಾಗಿ ಬುದ್ಧಿಶಕ್ತಿಯನ್ನು ಕಳೆದುಕೊಂಡು ನೆಲದ ಮೇಲೆ ಬಿದ್ದು ಉರುಳಾಡುತ್ತಿರುತ್ತಾನೆ. ವಿಷಸಂಪರ್ಕದಿಂದ ಉಂಟಾಗುವಮೂರ್ಛೆಯಲ್ಲಿ ನಡುಗುತ್ತಿರುವುದು ನಿದ್ರೆ, ಬಾಯಾರಿಕೆ, ಜ್ಞಾನತಪ್ಪುವುದು, ಈ ಲಕ್ಷಣಗಳಿರುತ್ತವೆ. ಮೂರ್ಛೆಯ ವೇಗ ಮತ್ತು ಲಕ್ಷಣಗಳನ್ನು ಸಂಪರ್ಕವಾಗಿರುವ ವಿಷದಸ್ವಭಾವದ ಮೇಲೆಯೇ ನಿರ್ಧರಿಸಬೇಕು.

ಮೂರ್ಛಾಪಿತ್ತತಮಃಪ್ರಾಯಾರಜಃಪಿತ್ತನಿಲಾದ್ಭ್ರಮಃ ॥
ತಮೋವಾತಕಫಾತ್ತಂದ್ರಾನಿದ್ರಾಶ್ಲೇಷ್ಮತಮೋಭವಾ ॥ ೧೭ ॥

ಮೂರ್ಛೆ ಭ್ರಮ ಮೊದಲಾದಶಬ್ದಗಳು ಈ ರೋಗಲಕ್ಷಣವನ್ನು ಹೇಳುವಾಗ್ಯೆ ಪದೇ ಪದೇ ಬರುತ್ತಿರುವುದರಿಂದ ಆ ಶಬ್ದಗಳ ಪರಸ್ಪರ ಅರ್ಥವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾನೆ. ಪಿತ್ತ ಮತ್ತು ತಮೋಗುಣಗಳು ಹೆಚ್ಚಾಗಿ ಬುದ್ಧಿ ಭ್ರಂಶವಾದರೆ ಅದಕ್ಕೆ ಮೂರ್ಛೆಎಂಬದಾಗಿಯೂ ರಜೋಗುಣ ಮತ್ತು ಪಿತ್ತಸಹಸೇರಿ ಬುದ್ಧಿಭ್ರಂಶವಾದರೆ ಅದಕ್ಕೆ ಬುದ್ಧಿಭ್ರಮವೆಂಬುದಾಗಿಯೂ ತಮೋಗುಣ ಮತ್ತು ವಾತ ಶ್ಲೇಷ್ಮಗಳು ಸೇರಿ ಬುದ್ಧಿಗೆ ಭ್ರಂಶಬಂದರೆ ಅದಕ್ಕೆ ಆಳಿಕೆ ಎಂಬದಾಗಿಯೂ ಶ್ಲೇಷ್ಮ ಮತ್ತು ತಮೋಗುಣಗಳೇ ಪ್ರಚುರವಾಗಿ ಬುದ್ಧಿಗೆ ಭ್ರಂಶವಾದಲ್ಲಿ ಅದನ್ನೇ ನಿದ್ರೆಎಂಬದಾಗಿಯೂ ತಿಳಿಯಬೇಕು.

ಚಕ್ರವದ್ಭ್ರಮತೋಗಾತ್ರಂಭೂಮೌಪತತಿಸರ್ವದಾ ॥
ಭ್ರಮರೋಗಇತಿಜ್ಞೇಯಃರಜಃಪಿತ್ತನಿಲಾತ್ಮಕಃ ॥೧೯ ॥

ಜ್ಞಾನವಿಲ್ಲದೆ ನೆಲದಮೇಲೆ ಬಿದ್ದುಕೊಂಡು ಗಾಡಿಯಚಕ್ರದಂತೆ ತಿರುಗಾಡುತ್ತ ಜ್ಞಾನಶೂನ್ಯನಾಗಿರುವುದಕ್ಕೆ ಭ್ರಮರೋಗವೆಂಬುದಾಗಿ ಹೆಸರು. ಈ ರೋಗದಲ್ಲಿ ರಜೋಗುಣವು ವಾತ ಮತ್ತು ಪಿತ್ತಗಳು ಪ್ರಕುಪಿತಗಳಾಗಿವೆ ಎಂದು ನಿಶ್ಚಯಿಸಿಕೊಳ್ಳಬೇಕು.

ಇಂದ್ರಿಯಾರ್ಥೇಷ್ವಸಂವಿತ್ತಿರ್ಗೌರವಂಜೃಂಭಣಂಕ್ಲಮಃ ॥
ನಿದ್ರಾರ್ತಸ್ಯೇವಯಸ್ಯೇಹಾತಸ್ಯತಂದ್ರಾಂವಿನಿರ್ದಿಶೇತ್ ॥ ೨೦ ॥
ತಂದ್ರಾ ಎಂದರೆ ಹೊರಗೆಕಾಣತಕ್ಕ ವಿಷಯಗಳ್ಯಾವವೂ ಜ್ಞಾನತಂತುಸಂ

ಯಿಲ್ಲದಿರೋಣದರಿಂದ ಸ್ಪಷ್ಟವಾಗಿ ತಿಳಿಯದಿರುವುದು, ಮೈಭಾರ, ಆಕಳಿಕೆ ಬರುತ್ತಿರುವುದು, ಆಯಾಸ, ನಿದ್ರಿತನಹಾಗೆ ಅರ್ಧಮರ್ಧ ಎಚ್ಚರಿಕೆ - ಈ ಅವಸ್ಥೆಗೆ ತಂದ್ರಾ ಎಂಬುದಾಗಿ ಹೆಸರು.

**ದೋಷೇಷು ಮದಮೂರ್ಛಾಯಾಃ ಕೃತವೇಗೇಷು ದೇಹಿನಾಂ ॥**
**ಸ್ವಯಮೇವೋಪಶಾಮ್ಯಂತಿ ಸನ್ನ್ಯಾಸೋ ನೌಷಧೈರ್ವಿನಾ ॥ ೨೦ ॥**

ಮದ ಮತ್ತು ಮೂರ್ಛೆ ಈ ರೋಗಗಳು ರೋಗಾರಂಭಕಗಳಾದ ಪ್ರಕುಪಿತಗಳಾದ ದೋಷಗಳ ಶಕ್ತಿ ಕಡಮೆಯಾದಕೂಡಲೆ ರೋಗಗಳೂಕೂಡ ಸ್ವಯಂ ಶಾಂತವಾಗುತ್ತವೆ. ಆದರೆ ಮುಂದಿನಶ್ಲೋಕದಲ್ಲಿ ಹೇಳುವ ಸನ್ನ್ಯಾಸವೆಂಬ ರೋಗವು ಮಾತ್ರ ( ಮೂರ್ಛಾರೋಗ ಭೇದ. ) ಔಷಧ ಪ್ರಯೋಗಮಾಡದೆ ಶಾಂತಿಯಾಗುವುದಿಲ್ಲ.

**ವಾಗ್ದೇಹಮನಸಾಂ ಚೇಷ್ಟಾಮಾಕ್ಷಿಪ್ಯಾತಿಬಲಾ ಮಲಾಃ ॥**
**ಸನ್ನ್ಯಸ್ಯಂತ್ಯಬಲಂ ಜಂತುಂ ಪ್ರಾಣಾಯತನಮಾಶ್ರಿತಾಃ ॥ ೨೧ ॥**
**ಸ ನಾ ಸನ್ನ್ಯಾಸಸನ್ನ್ಯಸ್ತಃ ಕಾಷ್ಠೀಭೂತೋ ಮೃತೋಪಮಃ ॥**
**ಪ್ರಾಣೈರ್ವಿಮುಚ್ಯತೇ ಶೀಘ್ರಂ ಮುಕ್ತ್ವಾ ಸದ್ಯಃ ಫಲಾಂ ಕ್ರಿಯಾಂ ॥ ೨೨ ॥**

ಸನ್ನ್ಯಾಸರೋಗವನ್ನು ಹುಟ್ಟಿಸತಕ್ಕ ವಾತಾದಿದೋಷಗಳು ಪ್ರಕುಪಿತಗಳಾಗಿ ವಾಕ್‌ಶಕ್ತಿ, ದೇಹಶಕ್ತಿ, ಮನಶ್ಶಕ್ತಿ ಇವುಗಳನ್ನೆಲ್ಲಾ ನಾಶಮಾಡಿ " ದಶೈವ ಪ್ರಾಣಾಯತನಾನಿ " ಎಂದು ಹೇಳಿರುವ ಪ್ರಾಣಸ್ಥಾನಗಳನ್ನೆಲ್ಲಾ ಆಕ್ರಮಿಸಿಕೊಂಡು ಪ್ರಾಣಿಯನ್ನು ದುರ್ಬಲನನ್ನಾಗಿ ಮಾಡಿ ಮೂರ್ಛಿತನಾಗಿ ಬೀಳುವಂತೆಮಾಡುತ್ತವೆ. ಈ ಸನ್ನ್ಯಾಸ ರೋಗಗ್ರಸ್ತನಾದವನು ಸೌದೆಯ ಕೊರಡಿನಂತೆ ಬಿದ್ದಿರುತ್ತಾನೆ. ಶೀಘ್ರವಾಗಿ ಫಲಕೊಡತಕ್ಕ ಚಿಕಿತ್ಸಾಕ್ರಮವನ್ನನುಸರಿಸದಿದ್ದಲ್ಲಿ ಈ ರೋಗಪೀಡಿತನು ಸತ್ತುಹೋಗುತ್ತಾನೆ.

**ಟಿಪ್ಪಣಿ.** ಸಾಮಾನ್ಯವಾಗಿ ಜ್ಞಾನತಪ್ಪಿಬಿದ್ದುಕೊಳ್ಳುವುದಕ್ಕೆ **ಮೂರ್ಛೆ** ಎಂಬದಾಗಿಹೆಸರು ಇದೇ ಒಂದು ರೋಗವಾಗಿಯೂ ಇರುತ್ತದೆ. ಮದ್ಯಪಾನಾದಿಗಳಿಂದ ಮತ್ತು ಅಪಸ್ಮಾರ ರೋಗದಸಂಬಂಧವಾಗಿ ಸಹಾ ಪ್ರಾರಂಭದಲ್ಲಿ ಮೂರ್ಛೆಯೇ ಪ್ರಾರಂಭವಾಗುವುದು. ಆದುದರಿಂದ ಮೊದಲು ಮೂರ್ಛೆಉಂಟಾಗಿರುವುದೇತರಿಂದ ಎಂಬುವುದನ್ನು ಗೊತ್ತುಪಡಿಸಿಕೊಂಡು ಚಿಕಿತ್ಸಿಸಬೇಕು. ಸಾಮಾನ್ಯವಾಗಿ ಪಿತ್ತಪ್ರಕೋಪಾದಿಜನ್ಯವಾದ ಮೂರ್ಛೆಗೆ ಶೈತ್ಯೋಪಚಾರದಿಂದಲೇ ಪ್ರತೀಕಾರ ವಾಗುತ್ತದೆ.

ಇಲ್ಲಿಗೆ ಮೂರ್ಛಾರೋಗ ನಿದಾನ ಸಮಾಪ್ತ

## ಮದಾತ್ಯಯನಿದಾನ

**ಯೇ ವಿಷಸ್ಯ ಗುಣಾಃ ಪ್ರೋಕ್ತಾಸ್ತೇಪಿ ಮದ್ಯೇ ಪ್ರತಿಷ್ಠಿತಾಃ ॥**
**ತೇನ ಮಿಥ್ಯೋಪಯುಕ್ತೇನ ಭವತ್ಯುಗ್ರೋ ಮದಾತ್ಯಯಃ ॥ ೧ ॥**

ಲಘುತ್ವ, ರೂಕ್ಷತ್ವ, ಆಶುಕಾರಿತ್ವಾದಿಗುಣಗಳು ವಿಷದಲ್ಲಿರುವಂತೆಯೇ ಮ

ದ್ಯದಲ್ಲಿಯೂ ಇರುತ್ತವೆ. ಆದಕಾರಣ ಮುಂದೆಹೇಳುವ ಕ್ರಮಗಳನ್ನೆಲ್ಲಾ ಚನ್ನಾಗಿ ನೋಡಿಕೊಂಡು ಔಷಧರೂಪವಾಗಿ ಯಾಗಲಿ, ರಸಾಯನ, ವಾಜೀಕರಣರೂಪವಾಗಿ ಯಾಗಲಿ ಮದ್ಯವನ್ನು ಬಹಳ ಜಾಣತನದಿಂದ ಉಪಯೋಗಿಸಬೇಕು. ಹೆಚ್ಚುಕಡಮೆಯಾಗಿ ಉಪಯೋಗಿಸಿದಲ್ಲಿ ಭಯಂಕರವಾದ ಮದಾತ್ಯಯ ವೆಂಬರೋಗವು ಸಿದ್ಧವಾಗಿ ಪ್ರಾಪ್ತವಾಗುವುದು.

ಕಿಂತುಮದ್ಯಂಸ್ವಭಾವೇನಯಥೈವಾನ್ನಂತಥಾಸ್ಮೃತಂ ॥
ಅಯುಕ್ತಿಯುಕ್ತಂರೋಗಾಯಯುಕ್ತಿಯುಕ್ತಂಯಥಾಮೃತಂ ॥೨॥
ಪ್ರಾಣಾಃಪ್ರಾಣಭೃತಾಮನ್ನಂತದಯುಕ್ತ್ಯಾನಿಹಂತ್ಯಸೂನ್ ॥
ವಿಷಂಪ್ರಾಣಹರಂತಚ್ಚಯುಕ್ತಿಯುಕ್ತಂರಸಾಯನಂ ॥ ೩ ॥

ಸ್ವಾಭಾವಿಕವಾಗಿ ಮನುಷ್ಯರಿಗೆ ದೇಹಧಾರಣೆಗೆ ಅನ್ನವು ಎಷ್ಟುಮಟ್ಟಿಗೆ ಹಿತಕರವೂ ಆವಶ್ಯಕವೂ ಆಗಿದೆಯೋ ಮದ್ಯವೂಸಹ ಅಷ್ಟುಹಿತಕರವೂ ಆವಶ್ಯಕವೂ ಆಗಿದೆ ಆದರೆ ಅನ್ನವು ಶರೀರಕ್ಕೆ ಹಿತಕರವೆಂದಮಾತ್ರವೇ ಉಪಯೋಗಿಸತಕ್ಕ ಪ್ರಮಾಣ ವಿಧಾನ ಇವುಗಳಲ್ಲಿ ಸರಿಯಾದ ಯುಕ್ತಿಯಿಲ್ಲದಿದ್ದಲ್ಲಿ ಅನ್ನವೇ ಪ್ರಾಣಾಪಾಯಕರಗಳಾದ ರೋಗಗಳನ್ನುಹುಟ್ಟಿಸುವಂತೆ ವಿಷವಾದರೂ ಕೂಡಾ ಉಪಯೋಗಿಸುವಕಾಲ, ಉಪಯೋಗಿಸತಕ್ಕವರ ವಯಸ್ಸು, ಉಪಯೋಗಿಸತಕ್ಕ ಪ್ರಮಾಣ ಇವುಗಳಲ್ಲಿ ಸರಿಯಾದ ಅಂದರೆ ಶಾಸ್ತ್ರೋಕ್ತವಾದ ಯುಕ್ತಿಯನ್ನು ಅನುಸರಿಸಿದಲ್ಲಿ ಅಮೃತವಾಗಿ ಪರಿಣಮಿಸುತ್ತದೆ. ಯುಕ್ತಿತಪ್ಪಿ ಸ್ವೇಚ್ಛೆಯಾಗಿ ಉಪಯೋಗಿಸಿದಲ್ಲಿ ಘೋರವಾದ ತನ್ನ ವಿಷಕಾರ್ಯವನ್ನು ನಿರ್ವಹಿಸಿ ಮನುಷ್ಯನಿಗೆ ನಾಶವನ್ನುಂಟುಮಾಡುತ್ತದೆ.

ವಿಧಿನಾಮಾತ್ರಯಾಕಾಲೇಹಿತೈರನ್ನೈರ್ಯಥಾಬಲಂ ॥
ಪ್ರಹೃಷ್ಟೋಯಃಪಿಬೇನ್ಮದ್ಯಂತಸ್ಯಸ್ಯಾದಮೃತೋಪಮಂ ॥ ೪ ॥
ಸ್ನಿಗ್ಧೈಸ್ತದನ್ನೈರ್ಮಾಂಸೈಶ್ಚಭಕ್ಷ್ಯೈಶ್ಚಸಹಸೇವಿತಂ ॥
ಭವೇದಾಯುಃಪ್ರಕರ್ಷಾಯಬಲಾಯೋಪಚಯಾಯಚ ॥ ೫ ॥
ಕಾಮ್ಯತಾಮನಸಸ್ತುಷ್ಟಿಸ್ತೇಜೋವಿಕ್ರಮಏವಚ ॥
ವಿಧಿವತ್ಸೇವ್ಯಮಾನೇತುಮದ್ಯೇಸನ್ನಿಹಿತಾಗುಣಾಃ ॥ ೬ ॥

ಮದ್ಯಪಾನೋಕ್ತವಿಧಿಯನ್ನನುಸರಿಸಿ ಸರಿಯಾದಕಾಲದಲ್ಲಿ ಉಕ್ತವಾದ ಪ್ರಮಾಣದಲ್ಲಿ ಅದಕ್ಕೆ ಅನುಗುಣವಾದ ಆಹಾರಗಳಜೊತೆಯಲ್ಲಿ ಸಂತುಷ್ಟವಾದ ಮನಸ್ಸಿನಿಂದ ಮದ್ಯಪಾನಮಾಡಿದಲ್ಲಿ ಮದ್ಯವುಶರೀರಕ್ಕೆ ಅಮೃತದಂತೆ ಹಿತಕರವಾಗಿ ಪರಿಣಮಿಸುತ್ತದೆ. ಮದ್ಯಪಾನದಜೊತೆಗೆ ಅನುಕೂಲಗಳಾದ ಅನ್ನಗಳ್ಯಾವವೆಂದರೆ. ಮದ್ಯವು ರೂಕ್ಷಗುಣವುಳ್ಳದ್ದಾದ್ದರಿಂದ ಅದಕ್ಕೆ ಪ್ರತಿಕೂಲಗಳಾದ ಅಂದರೆ ಸ್ನಿಗ್ಧಗುಣವಿಶಿಷ್ಟಗಳಾದ ಅನ್ನಗಳು. ಮಾಂಸಗಳು ಸ್ನಿಗ್ಧಗಳಾದ ಭಕ್ಷ್ಯಭೋಜ್ಯಗಳು ಇವುಗಳೊಡನೆ ಮದ್ಯವನ್ನುಸೇವಿಸಿದಲ್ಲಿ ಆಯುಸ್ಸು ಮತ್ತು ಬಲಗಳನ್ನು ವೃದ್ಧಿಪಡಿಸಿ ದೇಹವನ್ನು ಒಳ್ಳೆ ದಷ್ಟಪುಷ್ಟವಾಗಿಮಾಡಿ ಶರೀರಕ್ಕೆ ಕಾಂತಿಯನ್ನೂ ಮನಸ್ಸಿಗೆ ಹರ್ಷವನ್ನೂ ವೃದ್ಧಿಮಾಡುತ್ತದೆ. ವಿಧ್ಯುಕ್ತವಾಗಿ ಮದ್ಯಸೇವನೆಮಾಡುವುದರಿಂದ ಮನು

ಸ್ಯದಲ್ಲಿ ಅಡಗಿರುವ ಪರಾಕ್ರಮ, ತೇಜಸ್ಸು ಇವುಗಳೆಲ್ಲಾ ಪ್ರಕಾಶಕ್ಕೆ ಬರುತ್ತವೆ.

ಬುದ್ಧಿಸ್ಮೃತಿಪ್ರೀತಿಕರಸ್ಸುಖಶ್ಚ ಪಾನಾನ್ನನಿದ್ರಾರತಿವರ್ಧನಶ್ಚ ||
ಸಂಪಾಠಗೀತಸ್ವರವರ್ಧನಶ್ಚ ಪ್ರೋಕ್ತೋತಿರಮ್ಯಃ ಪ್ರಥಮೋ ಮದೋಹಿ ||

ಮದ್ಯವನ್ನು ಎಷ್ಟುಮಟ್ಟಿಗೆ ಪಾನಮಾಡಬಹುದು ಎಂಬವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಮದ್ಯಪಾನಜನಿತವಾದ ಮದವನ್ನು ನಾಲ್ಕುವರ್ಗವನ್ನಾಗಿ ವಿಭಾಗಮಾಡಿದರೆ — ಪ್ರಥಮವರ್ಗದಲ್ಲಿ ಮದ್ಯಪಾನದಿಂದ ಕಾಣತಕ್ಕಲಕ್ಷಣಗಳನ್ನು ಹೇಳುತ್ತಾನೆ. ಬುದ್ಧಿ ಶಕ್ತಿ ಜ್ಞಾಪಕಶಕ್ತಿಗಳು ಹೆಚ್ಚುತ್ತಿರುತ್ತವೆ. ದೇಹಕ್ಕೆ ಒಂದುವಿಧವಾದ ಸುಖಉಂಟಾಗುತ್ತದೆ. ಅನ್ನ, ಪಾನ, ನಿದ್ರೆ, ಸ್ತ್ರೀಸಂಭೋಗ ಇವುಗಳಲ್ಲಿ ರುಚಿಯೂ ಆಸಕ್ತಿಯೂ ಹೆಚ್ಚುತ್ತದೆ. ಸಂಗೀತಗಾನಮಾಡುವುದು. ಸುಸ್ವರವಾಗಿ ಉಪನ್ಯಾಸಮಾಡುವುದು ಇವುಗಳಲ್ಲಿ ಉತ್ಸಾಹವೃದ್ಧಿಗುಣಿತವಾಗುತ್ತಿರುತ್ತದೆ. ಇದು ಮದ್ಯಪಾನದ ಮೊದಲನೆಯವರ್ಗದಲ್ಲಿ ತೋರುವ ಲಕ್ಷಣಗಳು, ಇದೇ ಮನುಷ್ಯನಿಗೆ ಅತಿ ಹಿತಕರವಾದ ಅವಸ್ಥೆ.

ಅವ್ಯಕ್ತಬುದ್ಧಿಸ್ಮೃತಿವಾಗ್ವಿಚೇಷ್ಟಸ್ಸೋನ್ಮತ್ತಲೀಲಾಕೃತಿರಪ್ರಶಾಂತಃ ||
ಆಲಸ್ಯನಿದ್ರಾಭಿಹತೋಮುಹುಶ್ಚ ಮಧ್ಯೇನ ಮತ್ತಃ ಪುರುಷೋ ಮದೇನ || ೮ ||

ಮದ್ಯಪಾನದ ಎರಡನೆಯವರ್ಗದ ಮದದಲಕ್ಷಣವನ್ನು ಹೇಳುತ್ತಾನೆ. ಬುದ್ಧಿಶಕ್ತಿ, ಜ್ಞಾಪಕಶಕ್ತಿ, ವಾಕ್ಚಾತುರ್ಯವಶಕ್ತಿ, ಇವುಗಳು ಸ್ಪಷ್ಟವಾಗಿ ಇರುವುದಿಲ್ಲ ಅಂದರೆ ವಾತುತಿಳಿಯುವುದಿಲ್ಲ. ಬುದ್ಧಿಶಕ್ತಿಯು, ಜ್ಞಾಪಕಕಡಮೆ, ಈರೀತಿ ಇರುವುದು, ಆ ಕಾಲದಲ್ಲಿ ಮಾಡತಕ್ಕ ಕೆಲಸಗಳನ್ನು ಹುಚ್ಚನಂತೆ ಮಾಡುತ್ತಿರುವುದು, ಇವನ ಆ ಕಾಲದ ನಡೆಗೆ ಅನುಸಾರವಾದ ಆಕೃತಿಯೇ ಆಗಿಹೋಗುವುದು. ಮನಸ್ಸಿಗೆ ಶಾಂತಿಯಿಲ್ಲ, ಪದೇಪದೇ ಬುದ್ಧಿಮಂದವಾಗುತ್ತಿರುವುದು ತೂಕಡಿಕೆ ನಿದ್ರೆಸಹ ಬರುತ್ತಿರುವುದು, ಇವುಗಳು ಎರಡನೆಯ ಮದದಲಕ್ಷಣಗಳು

ಗಚ್ಛೇದಗಮ್ಯಾನ್ನಗುರೂಂಶ್ಚ ಮನ್ಯೇತ್ ಖಾದೇದಭಕ್ಷ್ಯಾಣಿ ಚ ನಷ್ಟಸಂಜ್ಞಃ ||
ಬ್ರೂಯಾಚ್ಚ ಗುಹ್ಯಾನಿ ಹೃದಿಸ್ಥಿತಾನಿ ಮದೇ ತೃತೀಯೇ ಪುರುಷೋಸ್ವತಂತ್ರಃ || ೯ ||

ಮದ್ಯಪಾನದಿಂದ ಹುಟ್ಟಿದ ಮೂರನೆಯ ವರ್ಗದ ಮದದಲಕ್ಷಣವನ್ನು ಹೇಳುತ್ತಾನೆ. ಈ ಮದದಲ್ಲಿ ಬುದ್ಧಿಗತವಾದ ಯುಕ್ತಾಯುಕ್ತವಿವೇಚನ ಶಕ್ತಿಯು ನಾಶವಾಗಿ ಹೋಗಿರುತ್ತದೆ. ಮತ್ತನಾಗಿ ಅಗಮ್ಯಾಗಮನಾದಿಗಳು ಅಂದರೆ ಕಾಮಸಂಪೂರ್ತಿಗಾಗಿ ಇಂತಹ ಸ್ತ್ರೀಯಲ್ಲಿಯೆ ಗಮನಮಾಡಬೇಕೆಂಬ ನಿಯಮವನ್ನುಲಂಘಿಸಿ ಸ್ವೇಚ್ಛೆಯಾಗಿ ನಡೆಯುತ್ತಿರುವುದು ಗುರುಗಳು ಮತ್ತು ಹಿರಿಯರು ಎಂಬ ಭೇದವನ್ನುಲ್ಲಂಘಿಸಿ ವರ್ತಿಸುತ್ತಿರುವುದು ಭೋಜನದಲ್ಲಿಯೂ ಹೀಗೆಯೇ ವ್ಯವಸ್ಥೆತಪ್ಪಿ ಅಭಕ್ಷ್ಯಭಕ್ಷಣ, ಅಭೋಜ್ಯ ಭೋಜನಾದಿಗಳನ್ನೆಲ್ಲಾ ಮಾಡುತ್ತಿರುವುದು. ಎಷ್ಟುಮಾತ್ರವೊ

ಜ್ಞಾನವಾಗಲಿ ವಿವೇಕವಾಗಲಿ ನಷ್ಟವಾಗಿಹೋಗುವುದು. ಗೋಪ್ಯವಾಗಿ ಇಟ್ಟುಕೊಳ್ಳಬೇಕಾದ ವಿಷಯಗಳನ್ನು ಸಹ ಸಂಕೋಚವಿಲ್ಲದೆ ಹೇಳಿಕೊಳ್ಳುವುದು. ಇವು ಮೂರನೆಯ ಮದದಲ್ಲಿ ತೋರುವ ಲಕ್ಷಣಗಳು.

**ಚತುರ್ಥೇತುಮದೇಮೂಢೋಭಗ್ನದಾರ್ವಿವನಿಷ್ಕ್ರಿಯಃ ||**
**ಕಾರ್ಯಾಕಾರ್ಯವಿಭಾಗಜ್ಞಃಮೃತಾದಪ್ಯಪರೋಮೃತಃ || ೧೦ ||**
**ಕೋಮದಂತಾದೃಶಂಗಚ್ಛೇದುನ್ಮಾದಮಿವಚಾಪರಂ ||**
**ಬಹುದೋಷಮಿವಾಮೂಢಾಃಕಾಂತಾರಂಸ್ವವಶಃಕೃತೀ || ೧೧ ||**

ಇನ್ನೂಉಳಿದಿರುವ ನಾಲ್ಕನೆಯಮದದಲಕ್ಷಣವನ್ನು ಹೇಳುತ್ತಾನೆ. ಮದದ ತುರೀಯಾವಸ್ಥೆಯು ಪ್ರಾಪ್ತವಾಯಿತೆಂದರೆ ಮನುಷ್ಯನು ಕೇವಲ ಜ್ಞಾನಶೂನ್ಯನಾಗಿ ಬುಡಸಮೇತ ಕಡಿದುರುಳಿಸಿದ ಮರದಹಾಗೆ ಯಾವಕೆಲಸವೂ ಮಾಡದೆಸತ್ತವನಂತೆ ದೇಹಚೇಷ್ಟೆ ಸಹ ಇಲ್ಲದೆಬಿದ್ದಿರುತ್ತಾನೆ. ಈ ಅವಸ್ಥೆಯು ಮದಬರುವಷ್ಟು ಮದ್ಯಪಾನ ಮಾಡಲು ಮುಳ್ಳುಕಲ್ಲುಗಳಿಂದಲೂ ದುಷ್ಟಮೃಗಗಳಿಂದಲೂ ವ್ಯಾಪ್ತವಾಗಿ ಸರಿಯಾಗಿ ಒಂದು ಮಾರ್ಗವಿಲ್ಲದ ಅರಣ್ಯಕ್ಕೆನುಗ್ಗಲು ಒಪ್ಪನಂತೆ ತಪ್ಪುವುದಿಲ್ಲ. ಅಂದರೆ ಹಿಂದೆ ನಾಲ್ಕುರೀತಿಯಾದ ಮದ್ಯಪಾನದಅವಸ್ಥೆಗಳೂ ಪಾನಮಾಡಬೇಕಾದ ಮದ್ಯದಪರಿಮಾಣವನ್ನು ನಿರ್ಧರವಾಗಿ ಮನಸ್ಸಿಗೆ ತೋರಿಸಲು ಹೇಳಿದವುಗಳಾಗಿರುತ್ತವೆ. ಆದ್ದರಿಂದ ಮದ್ಯಪಾನಮಾಡಲೇಬೇಕಾದ ಸಂದರ್ಭ ಬಂದರೆ ಪ್ರಥಮಮದಕ್ಕೆ ಎಷ್ಟುಮಟ್ಟಿನ ಪಾನವು ಆವಶ್ಯಕವೊ ಅಷ್ಟೇಪಾನಮಾಡುವುದುತ್ತಮ.

**ನಿರ್ಭಕ್ತಮೇಕಾಂತತಏವಮದ್ಯಂನಿಷೇವ್ಯಮಾನಂಮನುಜೇನನಿತ್ಯಂ।**
**ಆಪಾದಯೇತ್ಕಷ್ಟತಮಾನ್ವಿಕಾರಾನಾಪಾದಯೇಚ್ಚಾಪಿಶರೀರಭೇದಂ**
**|| ೧೨ ||**

ಮದ್ಯಪಾನ ಮಾಡಬೇಕಾದರೆ ಆಹಾರವನ್ನು ಸ್ವೀಕರಿಸಿ ನಂತರವೇಮದ್ಯವನ್ನು ತೆಗೆದುಕೊಳ್ಳಬೇಕೆಂಬ ನಿಯಮವನ್ನು ಸೂಚಿಸಲು ಆಹಾರವಿಲ್ಲದೆ ಮದ್ಯಪಾನ ಮಾಡುವುದರಿಂದ ಸಂಭವಿಸತಕ್ಕ ದುರ್ಗುಣಗಳನ್ನು ಸೂಚಿಸುತ್ತಾನೆ. ಸ್ನಿಗ್ಧಗಳಾದ ಭಕ್ಷ್ಯಭೋಜ್ಯ ಮುಂತಾದ ಸರಿಯಾದ ಆಹಾರಗಳಿಲ್ಲದೆ, ಕೇವಲ ಮದ್ಯ ಒಂದನ್ನೇ ನಿತ್ಯವೂ ಸೇವಿಸುತ್ತಬಂದಲ್ಲಿ ಅದರಿಂದ ಕಷ್ಟತರಗಳಾದ ಮತ್ತು ದುರ್ನಿವಾರಗಳಾದ ವಿಕಾರಗಳು ಸಹ ಉಂಟಾಗುವುದಲ್ಲದೆ ಕೊನೆಗೆ ದೇಹಪಾತವು ಸಹ ಆಗುತ್ತದೆ.

**ಕ್ರುದ್ಧೇನಭೀತೇನಪಿಪಾಸಿತೇನಶೋಕಾಭಿತಪ್ತೇನಬುಭುಕ್ಷಿತೇನ ॥**
**ವ್ಯಾಯಾಮಭಾರಾಧ್ವಪರಿಕ್ಷತೇನವೇಗಾವರೋಧಾಭಿಹತೇನಚಾಪಿ॥**
**ಅತ್ಯಂಬುಭಕ್ಷಾವತತೋದರೇಣಸಾಜೀರ್ಣಭುಕ್ತೇನತಥಾಬಲೇನ ॥**
**ಉಷ್ಣಾಭಿತಪ್ತೇನಚಸೇವ್ಯಮಾನಂಕರೋತಿಮದ್ಯಂವಿವಿಧಾನ್ವಿಕಾರಾನ್ ॥ ೧೪ ॥**

ಇನ್ನು ಮದ್ಯಪಾನಮಾಡಲು ಸರಿಯಾದ ಕಾಲವಾವುದೆಂಬ ಪ್ರಶ್ನೆಗೆಉತ್ತರ ಕೊಡಲು ಮದ್ಯಪಾನಕ್ಕೆ ವಿರುದ್ಧವಾದಕಾಲಗಳೆನ್ನೆಲ್ಲಾ ಸೂಚಿಸುತ್ತಾನೆ, ಸಿಟ್ಟುಬಂ

ದಿರುವಾಗ್ಯೆ ಮದ್ಯಪಾನಮಾಡಬಾರದು, ಹಾಗೆಯೇ ಭಯಭ್ರಾಂತನಾಗಿರುವಾಗಲೂ ಮದ್ಯಪಾನಮಾಡಬಾರದು. ಬಾಯಾರಿಕೆ, ದುಖ್ಖ, ಹಸಿವು ಇವುಗಳಿಂದ ಪೀಡಿತನಾಗಿರುವಾಗಲೂ ಮದ್ಯಪಾನ ಮಾಡಬಾರದು. ಕೆಲಸಮಾಡಿ ಅತಿಯಾಗಿ ಆಯಾಸಪಟ್ಟಿರುವಾಗ್ಯೆ, ಭಾರವನ್ನು ಹೊತ್ತು ಆಯಾಸಪಟ್ಟಿರುವಾಗ್ಯೆ, ಹಾಗೆಯೇ ದಾರಿನಡೆದು ಆಯಾಸಹೊಂದಿರುವಾಗ್ಯೆ, ಮಲಮೂತ್ರಗಳ ವೇಗವನ್ನು ನಿರೋಧಮಾಡಿ ತೊಂದರೆಪಡುತ್ತಿರುವಾಗ್ಯೆ, ಅತಿಭೋಜನಮಾಡಿರುವಾಗ್ಯೆ ಮತ್ತು ನೀರನ್ನುಕುಡಿದಿರುವಾಗ್ಯೆ, ಅಜೀರ್ಣವಿರುವಾಗವುನಃ ಭೋಜನಮಾಡಿದಮೇಲೆ, ಶರೀರವು ದುರ್ಬಲವಾಗಿರುವಾಗ್ಯೆ. ದೇಹದಲ್ಲಿ ಅತ್ಯುಷ್ಣಸಿರುವಾಗ್ಯೆ, ಇಂತಹ ಸಂದರ್ಭಗಳಲ್ಲಿ ಮದ್ಯಪಾನ ಮಾಡಿದಲ್ಲಿ ಮದ್ಯವು ನಾನಾ ವಿಧಗಳಾದ ರೋಗಗಳನ್ನೂ ವಿಕಾರಗಳನ್ನೂ ಉಂಟುಮಾಡುತ್ತದೆ.

ಪಾನಾತ್ಯಯಂಪರಮದಂಪಾನಾಜೀರ್ಣಮಥಾಪಿವಾ ॥
ಪಾನವಿಭ್ರಮಮುಗ್ರಂಚತೇಷಾಂವಕ್ಷ್ಯಾಮಿಲಕ್ಷಣಂ ॥ ೧೫ ॥

ಮದ್ಯಪಾನದಿಂದ ಹುಟ್ಟಿತಕ್ಕವಿಕಾರಗಳುಸಹ ಪಾನಾತ್ಯಯ, ಪರಮದ ಪಾನಾಜೀರ್ಣ, ಪಾನವಿಭ್ರಮ ಎಂಬದಾಗಿ ನಾಲ್ಕುವಿಧವಾಗಿರುತ್ತವೆ. ಇವುಗಳ ಲಕ್ಷಣವನ್ನು ಕ್ರಮವಾಗಿಪೇಳುತ್ತಾನೆ.

ಹಿಕ್ಕಾಶ್ವಾಸಶಿರಃಕಂಪಪಾರ್ಶ್ವಶೂಲಪ್ರಜಾಗರೈಃ
ವಿದ್ಯಾದ್ಬಹುಪ್ರಲಾಪಸ್ಯವಾತಪ್ರಾಯಂಮದಾತ್ಯಯಂ ॥ ೧೬ ॥
ತೃಷ್ಣಾದಾಹಜ್ವರಸ್ವೇದಮೋಹಾತೀಸಾರವಿಭ್ರಮೈಃ ॥
ವಿದ್ಯಾದ್ಧರಿತವರ್ಣಸ್ಯಪಿತ್ತಪ್ರಾಯಂಮದಾತ್ಯಯಂ ॥ ೧೭ ॥
ಛರ್ದ್ಯರೋಚಕಹೃಲ್ಲಾಸತಂದ್ರಾಸ್ತೈಮಿತ್ಯಗೌರವೈಃ ॥
ವಿದ್ಯಾತ್ ಶೀತಪರೀತಸ್ಯಕಫಪ್ರಾಯಂಮದಾತ್ಯಯಂ ॥
ಜ್ಞೇಯಸ್ತ್ರಿದೋಷಜಶ್ಚಾಪಿಸರ್ವಲಿಂಗೈರ್ಮದಾತ್ಯಯಃ ॥ ೧೮ ॥

ಪಾನಾತ್ಯಯದ ಲಕ್ಷಣಗಳನ್ನು ಹೇಳುತ್ತಾನೆ. ಬಿಕ್ಕಳಿಕೆ, ಊರ್ಧ್ವಶ್ವಾಸ, ತಲೆನಡುಕ ಪಕ್ಕಗಳಲ್ಲಿ ಶೂಲೆ, ನಿದ್ರೆಬಾರದೆಹೋಗುವುದು, ಬಹಳವಾಗಿಹರಟುವುದು ಈ ಲಕ್ಷಣಗಳು ಮದ್ಯಪಾನದಿಂದ ವಾತವು ಪ್ರಕುಪಿತವಾಗಿ ಹುಟ್ಟಿತಕ್ಕಮದಾತ್ಯಯದ ಲಕ್ಷಣಗಳು. ಬಾಯಾರಿಕೆ, ಮೈಯುರಿ, ಜ್ವರ, ಮೈಬೆವರುವುದು, ಆಗಾಗ್ಯೆಮೂರ್ಛೆಬರುತ್ತಿರುವುದು, ಅತಿಸಾರ, ಬುದ್ಧಿಭ್ರಮ, ಇವುಗಳಿರುವುದಲ್ಲದೆ ಮನುಷ್ಯನಶರೀರದವರ್ಣವು ಹಳದಿಬಣ್ಣಕ್ಕೆ ತಿರುಗುತ್ತಿರುವುದು ಈ ಲಕ್ಷಣಗಳು ಮದ್ಯಪಾನಜನಿತ ಪಿತ್ತಪ್ರಕೋಪದಿಂದ ಉಟಾಗುವ ಮದಾತ್ಯಯದ ಲಕ್ಷಣಗಳು. ವಮನ, ಅರುಚಿ, ಬಾಯಿನೀರುಬರುವುದು, ಆಕಳಿಕೆ, ಒಂದು ವಿಧವಾದಮಂಕು, ಮೈಭಾರ, ಮೈಯೂವಾಗ್ಯೂ ಶೀತವಾಗಿರುವುದು, ಹೀಗಿದ್ದಲ್ಲಿ ಮದ್ಯಪಾನದಿಂದ ಕಫವು ಪ್ರಕುಪಿತವಾಗಿ ಮದಾತ್ಯಯ ರೋಗವನ್ನು ಹುಟ್ಟಿಸಿರುವುದಾಗಿ ತಿಳಿಯಬೇಕು. ಹಿಂದೆಹೇಳಿದ ಪ್ರಕುಪಿತ ತ್ರಿದೋಷಗಳ ಲಕ್ಷಣಗಳೂ ಕಂಡುಬಂದಲ್ಲಿ ಅಂತಹ ಮದಾತ್ಯಯ

ರೋಗವು ತ್ರಿದೋಷಪ್ರಕೋಪಜನ್ಯವೆಂದು ನಿರ್ಧರಿಸಬೇಕು.

**ಶ್ಲೇಷ್ಮೋಚ್ಛ್ರಯೋಂಗಗುರುತಾವಿರಸಾಸ್ಯತಾಚವಿಣ್ಮೂತ್ರಸಕ್ತಿರಥ**
**ತಂದ್ರಿರರೋಚಕಶ್ಚ ॥**
**ಲಿಂಗಂಪರಸ್ಯಚಮದಸ್ಯವದಂತಿತದ್ಜ್ಞಾಸ್ತೃಷ್ಣಾರುಜಾಶಿರಸಿಸಂಧಿ**
**ಷುಚಾಪಿಭೇದಃ ॥ ೧೯ ॥**

ಪರಮದ ವೆಂಬ ಮದ್ಯಪಾನ ಜನಿತರೋಗದ ಲಕ್ಷಣವನ್ನು ಹೇಳುತ್ತಾನೆ. ಅತಿಯಾಗಿ ಶ್ಲೇಷ್ಮವೃದ್ಧಿಯಾಗುವುದು, ಮೈಭಾರ, ಬಾಯಿಗೆ ಯಾವರುಚಿಯೂ ತಿಳಿಯದೆಹೋಗುವುದು, ಮಲಮೂತ್ರಗಳು ಬದ್ಧವಾಗುವುದು, ತೂಕಡಿಕೆ, ಅರುಚಿ, ಬಾಯಾರಿಕೆ, ತಲೆಯಲ್ಲಿನೋವು, ಕೀಲುಗಳಲ್ಲೆಲ್ಲಾ ಒಂದುವಿಧವಾದ ಪಡತ, ಇವುಗಳು ಪರಮದದಲಕ್ಷಣಗಳು.

**ಆಧ್ಮಾನಮುಗ್ರಮಥಚೋದ್ಗಿರಣಂವಿದಾಹಃಪಾನೇಜರಾಂಸಮುಪ**
**ಚ್ಛತಿಲಕ್ಷಣಾನಿ ॥**
**ಹೃದ್ಗಾತ್ರತೋದಕಫಸಂಸ್ರವಕಂಠಧೂಮಮೂರ್ಚ್ಛಾವಮಿಜ್ವರಶಿ**
**ರೋರುಜನಪ್ರದಾಹಾಃ ॥ ೨೦ ॥**
**ದ್ವೇಷಸ್ಸುರಾನ್ನವಿಕೃತೇಷ್ವಪಿತೇಷುತೇಷುತಂಪಾನವಿಭ್ರಮಮುಶಂ**
**ತ್ಯಖಿಲೇನಧೀರಾಃ ॥**

ಮದ್ಯಪಾನದಿಂದ ಹುಟ್ಟುವ ಪಾನಾಜೀರ್ಣರೋಗದ ಲಕ್ಷಣಗಳನ್ನು ಹೇಳುತ್ತಾನೆ. ಹೊಟ್ಟೆಯುಬ್ಬರ, ಯಾವಾಗ್ಯೂ ತೇಗುಬರುತ್ತಿರುವುದು, ಹೊಟ್ಟೆಯಲ್ಲಿ ಉರಿ, ಇವು ಪಾನಾಜೀರ್ಣದ ಲಕ್ಷಣಗಳು. ಪಾನವಿಭ್ರಮದ ಲಕ್ಷಣಗಳ್ಯಾವವೆಂದರೆ, ಮೈನೋವು, ಎದೆನೋವು, ಕಫವು ಮೂಗು ಮತ್ತು ಬಾಯಿಗಳಲ್ಲಿ ಹೊರಡುತ್ತಿರುವುದು. ಗಂಟಲಿನಲ್ಲಿ ಹೊಗೆಹೊರಡುತ್ತಿರುವಂತೆ ತೋರುವುದು, ಮೂರ್ಛೆಬರುವುದು, ವಮನ, ಜ್ವರ ತಲೇನೋವು, ಮೈಯ್ಯುರಿ, ಮದ್ಯ ಮತ್ತು ಅನ್ನಪಾನ ಇವುಗಳಲ್ಲಿ ಇಚ್ಛೆತಪ್ಪಿ ದ್ವೇಷಉಂಟಾಗುವುದು; ಇವು ಪಾನವಿಭ್ರಮದ ಲಕ್ಷಣಗಳು.

**ಹೀನೋತ್ತರೋಷ್ಠಮತಿಶೀತಮಮಂದದಾಹಂತೈಲಪ್ರಭಾಸ್ಯಮಪಿಪಾ**
**ನಹತಂತ್ಯಜೇತ್ತು ॥**
**ಜಿಹ್ವೋಷ್ಠದಂತಮಸಿತಂತ್ವಥವಾಪಿನೀಲಂಪೀತೇಚಯಸ್ಯನಯನೇರು**
**ಧಿರಪ್ರಭೇವಾ ॥ ೨೧ ॥**

ಮದ್ಯಪಾನ ಜನ್ಯವಾದ ರೋಗದ ಅಸಾಧ್ಯಲಕ್ಷಣಗಳಾವವೆಂದರೆ– ತುಟಿಗಳು ಜೋಲುಬೀಳುವುದು, ಮೈಯಲ್ಲಾ ಅತಿಯಾಗಿ ತಣ್ಣಗಾಗುವುದು, ಅಂತರ್ದಾಹಮಾತ್ರ ಕಡಮೆಯಾಗದೆಇರುವುದು, ಮುಖಕ್ಕೆ ಎಣ್ಣೆಯನ್ನು ಬಳಿದುಕೊಂಡವನಂತೆ ಮುಖದಮೇಲೆ ಜಿಡ್ಡುತೇಲುತ್ತಿರುವುದು, ನಾಲಿಗೆ, ತುಟಿ, ಹಲ್ಲು, ಇವುಗಳು

ಕಪ್ಪಾಗಿರುವುದು, ಅಥವಾ ನೀಲೀ ಬಣ್ಣವಾಗಿರುವುದು, ಕಣ್ಣುಗಳು ಹಳದಿ ಬಣ್ಣ ಅಥವಾ ಕೆಂಪು ಬಣ್ಣವಾಗಿರುವುದು, ಈ ಲಕ್ಷಣಗಳು ರೋಗಿಯಲ್ಲಿ ಕಂಡು ಬಂದಲ್ಲಿ ಮದ್ಯಪಾನದಿಂದ ಹುಟ್ಟಿದ ರೋಗವು ಅಸಾಧ್ಯವೆಂದು ತಿಳಿಯಬೇಕು.

**ಹಿಕ್ಕಾಜ್ವರೌವಮಥುವೇಪಥುಪಾರ್ಶ್ವಶೂಲಾಃಕಾಸಭ್ರ**
**ಮಾವಪಿಚಪಾನಹತಂಭಜಂತೆ ॥**

ಉಪರೋಗಗಳನ್ನು ತಿಳಿಸುತ್ತಾನೆ—ಹಿಂದೆ ಹೇಳಿದ ಮದ್ಯಪಾನದಿಂದ ಹುಟ್ಟತಕ್ಕ ರೋಗಗಳಿಗೆ ಬಿಕ್ಕಳಿಕೆ, ಜ್ವರ, ವಮನ, ಮೈನಡುಗುತ್ತಿರುವುದು, ಪಾರ್ಶ್ವಶೂಲಿ, ಕೆಮ್ಮು, ತಲೆತಿರುಗುವುದು, ಇವು ಉಪರೋಗಗಳಾಗಿ ಕಾಣಿಸಿ ಕೊಳ್ಳುತ್ತವೆ.

**ಟಿಪ್ಪಣಿ:**—ಈ ಮದ್ಯಪಾನದಿಂದ ಉತ್ಪನ್ನವಾಗುವ ರೋಗಗಳಿಗೆ ಚಿಕಿತ್ಸೆ ಯನ್ನು ಬಯಸಿ ಬರುವವರೇ ವಿರಳ. ಏಕೆಂದರೆ ಮದ್ಯಪಾನವು ಮಾತ್ರ ಅಭ್ಯಾಸ ವಾಯಿತೆಂದರೆ ಮದ್ಯಪಾನ ಮಾಡತಕ್ಕವನಿಗೆ ಅದರಿಂದ ಉತ್ಪನ್ನವಾಗುವ ರೋಗಗಳನ್ನು ನಿವಾರಣೆಮಾಡಿಕೊಳ್ಳುವ ಮನಸ್ಸೇ ಆಗುವುದಿಲ್ಲ. ಚಿಕಿತ್ಸೆ ಎಂದರೆ ಮದ್ಯಪಾನವನ್ನು ವಿರೋಧಮಾಡುವುದೇ, ಇದು ಮಾತ್ರ ಅಭ್ಯಾಸ ಮಾಡಿದವ ರಿಂದ ಆಗುವುದಿಲ್ಲ. ಆದ್ದರಿಂದ ಅವರಿಗೆ ಚಿಕಿತ್ಸೆಮಾಡುವುದಕ್ಕಿಂತ ಪಾನದ ದುರಭ್ಯಾಸವನ್ನು ವರ್ಜಮಾಡುವುದೊಳಿತು, ಆದರೆ ಆಯುರ್ವೇದಶಾಸ್ತ್ರದಲ್ಲಿ ಮದ್ಯವನ್ನು ಅಮೃತಕ್ಕೆ ಸಮವೆಂದು ಹೋಲಿಸಿದ್ದಾರೆ, ಮಾತ್ರ, ದೇಶ, ಕಾಲ, ವಯಸ್ಸು, ಪ್ರಕೃತಿ, ಪಾನಮಾಡತಕ್ಕ ಪ್ರಮಾಣ, ಅದಕ್ಕೆ ತಕ್ಕ ಆಹಾರ ವಿಹಾರ ಗಳು ಈ ಎಲ್ಲಾ ನಿಯಮಗಳನ್ನೂ ಸ್ಪಷ್ಟವಾಗಿ ಸೂಚಿಸಿದ್ದಾರೆ. ನಿಯಮಾನು ಸಾರವಾಗಿ ಪಾನಮಾಡುವುದರಿಂದ ಉತ್ತಮೋತ್ತಮ ಗುಣವೂ, ನಿಯಮಭಂಗ ದಿಂದ ವಿಶೇಷ ದುರ್ಗುಣಗಳೂ ಸಂಭವಿಸುತ್ತವೆ, ಅಂತಹ ದುರ್ಗುಣಗಳಿಗೆ ರೋಗಗಳೆಂದು ಹೆಸರು ಕೊಟ್ಟಿರುತ್ತಾರೆ. ಆಯುರ್ವೇದದಲ್ಲಿ ಹೇಳಿರುವ ಮದ್ಯ ಗಳೆಂದರೆ ಆಸವ, ಅರಿಷ್ಟಗಳೆಂಬದಾಗಿ ವ್ಯವಹಾರದಲ್ಲಿರುವವುಗಳೇ, ಅವುಗಳಿಂದ ಯಾವ ರೋಗವೂ ಹುಟ್ಟುವದಕ್ಕವಕಾಶವಿಲ್ಲ, ಅದರಲ್ಲಿ ಸೇರಿರುವ ಮಾದಕ ಪದಾರ್ಥಗಳು ಬಹು ಕಡಮೆ, ಅದು ಕೂಡ ಪ್ರಮಾಣಕ್ಕೆ ಮಿಕ್ಕಿ ಸೇವಿಸಲು ಆಯುರ್ವೇದವು ಅನುಜ್ಞೆಕೊಡುವುದಿಲ್ಲ.

ಇಲ್ಲಿಗೆ ಪಾನಾತ್ಯಯಾದಿ ನಿದಾನ ಸಂಪೂರ್ಣ.

---

## ದಾ ಹ ನಿ ದಾ ನ .

**ತ್ವಚಂಪ್ರಾಪ್ತಸ್ಸಪಾನೋಷ್ಮಾಪಿತ್ತರಕ್ತಾಭಿಮೂರ್ಛಿತಃ ॥**
**ದಾಹಂಪ್ರಕುರುತೇಘೋರಂಪಿತ್ತವತ್ತತ್ರಭೇಷಜಂ ॥ ೧ ॥**

ಅತಿಮದ್ಯಪಾನದಿಂದ ಉಂಟಾದ ಉಷ್ಣವು ತ್ವಗಿಂದ್ರಿಯವನ್ನು ಹೊಂದಿ ಪಿತ್ತ ಮತ್ತು ರಕ್ತಗಳಿಂದ ಮತ್ತಷ್ಟು ವೇಗಿತವಾಗಿ ಮೈಯಲ್ಲಿ ಭಯಂಕರವಾದ ಉರಿಯನ್ನು ಹುಟ್ಟಿಸುತ್ತದೆ. ಪಿತ್ತದಿಂದ ಉತ್ಪನ್ನವಾದ ದಾಹದಂತೆ ಅದಕ್ಕೆ ಔಷಧವನ್ನು ಮಾಡಬೇಕು.

**ಕೃತ್ಸ್ನದೇಹಾನುಗಂರಕ್ತಮುದ್ರಿಕ್ತಂದಹತಿಧ್ರುವಂ ||**
**ಸಉಷ್ಯತೆತೃಷ್ಯತೇಚತಾಮ್ರಾಭಸ್ತಾಮ್ರಲೋಚನಃ || ೨ ||**

ಶರೀರಾದ್ಯಂತದಲ್ಲಿಯೂ ಸಂಚರಿಸುತ್ತಿರುವ ರಕ್ತವು ಉದ್ರಿಕ್ತವಾಗಿ ಅಂದರೆ ಪ್ರಕೋಪಕಾರಣಗಳಿಂದ ಪ್ರಕುಪಿತವಾಗಿ ಶರೀರದಲ್ಲಿ ದಾಹವನ್ನುಂಟುಮಾಡು ತ್ತವೆ. ಈ ರಕ್ತಪ್ರಕೋಪಜನ್ಯವಾದ ದಾಹದಲ್ಲಿ ರೋಗಿಯು ಮೈಯ್ಯೆಲ್ಲಾ ಕೆಂಪಾಗುವುದು, ಕಣ್ಣು ಕೆಂಪಗಿರುವುದು, ಬಾಯಾರಿಕೆ, ಹತ್ತಿರದಲ್ಲಿ ಬೆಂಕಿ ಯನ್ನು ಹಾಕಿ ಕಾಯಿಸಿದಂತಾಗುತ್ತಿರುವುದು, ಶರೀರದಲ್ಲಿ ಮತ್ತು ಉಸಿರಿನಲ್ಲಿ ಸಹ ಕಬ್ಬಿಣದ ವಾಸನೆ ಬರುತ್ತಿರುವುದು, ಬೆಂಕಿಯಲ್ಲಿ ಬಿದ್ದವನಂತೆ ಸಂಕಟ ಪಡುವುದು, ಇವುಗಳು ಪಿತ್ತಪ್ರಕೋಪಜನ್ಯ ದಾಹದ ಲಕ್ಷಣಗಳು.

**ಪಿತ್ತಜ್ವರಸಮಃಪಿತ್ತಾತ್ಸಚಾಪ್ಯಸ್ಯವಿಧಿಸ್ಮೃತಃ ||**

ಪಿತ್ತಪ್ರಕೋಪಜನ್ಯದಾಹ ರೋಗದಲ್ಲಿ ಪಿತ್ತಪ್ರಕೋಪಜನ್ಯ ಜ್ವರದ ಲಕ್ಷಣ ಗಳೇ ತೋರುತ್ತಿರುವುದರಿಂದ ಚಿಕಿತ್ಸಾ ವಿಷಯದಲ್ಲಿಯೂ ಪಿತ್ತಜ್ವರ ಚಿಕಿತ್ಸೆ ಯನ್ನೇ ಮಾಡಬೇಕು.

**ತೃಷ್ಣಾನಿರೋಧಾದಬ್ಧಾತೌಕ್ಷೀಣೇತೇಜಸ್ಸಮುದ್ಧತಂ || ೩ ||**
**ಸಬಾಹ್ಯಾಭ್ಯಂತರಂದೇಹಂಪ್ರದಹೇನ್ಮಂದಚೇತಸಃ ||**
**ಸಶುಷ್ಕಗಲತಾಲ್ವೋಷ್ಠೋಜಿಹ್ವಾಂನಿಷ್ಕೃಷ್ಯವೇಪತೆ || ೪ ||**

ತೃಷ್ಣಾ (ಬಾಯಾರಿಕೆಯ) ನಿರೋಧದಿಂದ ಉತ್ಪನ್ನವಾದದಾಹರೋಗದಲ್ಲಿ ಬಾಯಾರಿಕೆಯನ್ನು ತಡೆದದ್ದರಿಂದ ಶರೀರಗತವಾದ ಅಬ್ಧಾತುವು ಕ್ಷಯಿಸಿ ಶರೀ ರದಲ್ಲಿ ತೇಜಸ್ಸು ವೃದ್ಧಿಯಾಗಿ ಬುದ್ಧಿಮಂದವಾಗುವಂತೆ ಮಾಡಿ ಶರೀರದ ಒಳಗೆ ಹೊರಗೆ ಸಹ ಉರಿಯನ್ನುಂಟುಮಾಡುತ್ತಿರುತ್ತದೆ. ಗಂಟಲು, ದವಡೆ, ತುಟಿಗ ಳೆಲ್ಲಾ ಒಣಗಿ ಹೋಗಿ ನಾಲಿಗೆಯನ್ನು ಹೊರಕ್ಕೆ ಚಾಚಿಕೊಂಡು ನಡುಗು ತ್ತಿರುತ್ತಾನೆ.

**ಅಸೃಜಃಪೂರ್ಣಕೋಷ್ಠಸ್ಯದಾಹೊನ್ಯಸ್ಯಾತ್ಸುದುಸ್ತರಃ ||**

ಜಲಾವಗಾಹನ, ಶಸ್ತ್ರಗಳ ಘಾಯ, ಇವುಗಳಿಂದ ಶರೀರದಲ್ಲಿ ಸಂಚಾರ ಮಾಡುತ್ತಿರುವ ರಕ್ತವು ಕೋಷ್ಠದಲ್ಲಿ ಒಂದೇ ಕಡೆಯಲ್ಲಿ ಹೋಗಿ ತುಂಬಿ

ಕೊಳ್ಳುವುದರಿಂದ ಉತ್ಪನ್ನವಾಗತಕ್ಕ ದಾಹರೋಗವು ಚಿಕಿತ್ಸೆಗೆ ಅಸಾಧ್ಯವೆಂದು ತಿಳಿಯಬೇಕು.

ಧಾತುಕ್ಷಯೋತ್ಥೋಯೋದಾಹಸ್ತೇನಮೂರ್ಛಾತೃಡರ್ದಿತಃ ॥
ಕ್ಷಾಮಸ್ವರಃಕ್ರಿಯಾಹೀನಸ್ಸಸೀದೇದ್ಭೃಶಪೀಡಿತಃ ॥ ೬ ॥

ರಸ, ರಕ್ತ, ಮೊದಲಾದ ಧಾತುಗಳು ಕ್ಷಯಿಸುವುದರಿಂದ ಉಂಟಾಗುವ ದಾಹರೋಗದಲ್ಲಿ ಮೂರ್ಛೆ, ಬಾಯಾರಿಕೆ, ಧ್ವನಿಕುಗ್ಗುವುದು, ಕೆಲಸಮಾಡಲು ಶಕ್ತಿಯಿಲ್ಲದಿರುವುದು, ಈ ರೀತಿಯಾಗಿ ಸಂಕಟಪಡುತ್ತ ಮರಣಹೊಂದುವುದು.

ಮರ್ಮಾಭಿಘಾತಜೋಪ್ಯಸ್ತಿಸೋಸಾಧ್ಯಸ್ಸಪ್ತಮೋಮತಃ ॥
ಸರ್ವಏವಚವರ್ಜ್ಯಾಸ್ಯುಶ್ಶೀತಗಾತ್ರಸ್ಯದೇಹಿನಃ ॥ ೭ ॥

ಮರ್ಮಸ್ಥಾನಗಳಿಗೆ ಯಾವುದಾದರೂ ಪೆಟ್ಟು ಬಿದ್ದದ್ದರಿಂದಲೂ ಈ ದಾಹರೋಗವು ಹುಟ್ಟುತ್ತದೆ, ಇದು ಅಸಾಧ್ಯವೆಂದು ತಿಳಿಯಬೇಕು, ದಾಹರೋಗದಲ್ಲಿ ಶರೀರವು ಶೀತವಾಗಿದ್ದಲ್ಲಿ ಎಲ್ಲಾ ದಾಹರೋಗಗಳೂ ಅಸಾಧ್ಯಗಳೆಂದೇ ತಿಳಿದು ಬಿಟ್ಟುಬಿಡತಕ್ಕದ್ದು.

ಇಲ್ಲಿಗೆ ದಾಹನಿದಾನ ಸಮಾಪ್ತಿ.

## ಉನ್ಮಾದನಿದಾನ.

ಮದಯಂತ್ಯುದ್ಧತಾದೋಷಾಯಸ್ಮಾದುನ್ಮಾರ್ಗಮಾಗತಾಃ ॥
ಮಾನಸೋಯಮತೋವ್ಯಾಧಿರುನ್ಮಾದಃಪರಿಕೀರ್ತಿತಃ ॥ ೧ ॥

ದೋಷಪ್ರಕೋಪಕಾರಣಗಳಿಂದ ಪ್ರಕುಪಿತಗಳಾದ ವಾತ, ಪಿತ್ತ, ಕಫಗಳೆಂಬ ದೋಷಗಳು ಉನ್ಮಾರ್ಗಗಾಮಿನಃ ಎಂದರೆ ಮಾರ್ಗವನ್ನು ಬಿಟ್ಟು ತಪ್ಪು ಮಾರ್ಗದಲ್ಲಿ ಪ್ರವೃತ್ತಗಳಾಗಿ ಮನಸ್ಸಿನ ಸ್ಥಿತಿಯನ್ನು ಕೆಡಿಸಿ ಒಂದು ವಿಧವಾದ ಭ್ರಾಂತಿಯನ್ನುಂಟುಮಾಡುತ್ತವೆ, ಮಾನಸಿಕವಾದ ಈ ವ್ಯಾಧಿಗೆ ಉನ್ಮಾದವೆಂಬದಾಗಿ ಹೆಸರು

ಏಕೈಕಶಸ್ಸರ್ವಶಶ್ಚದೋಷೈರತ್ಯರ್ಥಮೂರ್ಛಿತೈಃ ॥
ಮಾನಸೇನಚದುಃಖೇನಸಚಪಂಚವಿಧೋಮತಃ ॥ ೨ ॥

ಈ ಉನ್ಮಾದರೋಗವು ಅತಿಯಾಗಿ ಪ್ರಕುಪಿತಗಳಾದ ತ್ರಿದೋಷಗಳಿಂದ ಪ್ರತ್ಯೇಕ ಒಂದೊಂದು ವಿಧ, ತ್ರಿದೋಷಸನ್ನಿಪಾತದಿಂದ ಒಂದು ವಿಧ, ಮನ

ಸ್ಸಿಗೆ ಸಹಿಸಲಸಾಧ್ಯವಾದ ಯಾವುದಾದರೂ ದುಃಖವು ಒದಗೋಣದರಿಂದ ಒಂದು ವಿಧ ಈ ರೀತಿಯಾಗಿ ಐದು ವಿಧವಾಗಿದೆ.

ವಿಷಾದ್ಭವತಿಷಷ್ಠಶ್ಚಯಥಾಸ್ವಂತಸ್ಯಭೇಷಜಂ ॥
ಸಚಪ್ರವೃದ್ಧಸ್ತರುಣೋಮದಸಂಜ್ಞಾಂಬಿಭರ್ತಿಚ ॥ ೩ ॥

ವಿಷಪ್ರಾಶನದಿಂದ ಹುಟ್ಟತಕ್ಕ ಆರನೆಯದೊಂದು ವಿಧವಾದ ಉನ್ಮಾದ ರೋಗವಿದೆ, ಈ ವಿಷಪ್ರಾಶನಜನ್ಯವಾದ ಉನ್ಮಾದ ರೋಗವು ಕ್ರಮೇಣ ವೃದ್ಧಿ ಹೊಂದಿ ತರುಣಾವಸ್ಥೆಗೆ ಬಂದರೆ ಆಗ್ಯೆ ಅದಕ್ಕೆ ಮದನೆಂಬ ಹೆಸರನ್ನು ಕೊಡುತ್ತಾರೆ.

ವಿರುದ್ಧದುಷ್ಟಾಶುಚಿಭೋಜನಾದಿಪ್ರಧರ್ಷಣಾಂದೇವ
ಗುರುದ್ವಿಜಾನಾಂ ॥
ಉನ್ಮಾದಹೇತುರ್ಭಯಹರ್ಷಪೂರ್ವೋಮನೋಭಿಘಾತೋ
ವಿಷಮಾಶ್ಚಚೇಷ್ಟಾಃ ॥ ೪ ॥

ವಿರುದ್ಧವಾದ ಆಹಾರ, ವಿಷಾದಿಗಳಿಂದ ದೂಷಿತವಾದ ಆಹಾರ, ಅಶುಚಿ ಅಂದರೆ ಹಳಸುವುದು, ಹುಳಿಯುವುದು ಇಂತಹ ಆಹಾರಗಳು, ದೇವತೆಗಳು, ಗುರುಗಳು, ಉತ್ತಮ ತಪಸ್ವಿ ಬ್ರಾಹ್ಮಣರು, ಇವರುಗಳ ತಿರಸ್ಕಾರ ಅಂದರೆ ಶಾಪಕೊಡೋಣ, ಅತಿಯಾದ ಭಯ ಮತ್ತು ಸಂತೋಷ ಇವುಗಳಿಂದ ಮನೋವೃತ್ತಿಯೇ ಕೆಟ್ಟು ಹಾಳಾಗಿಹೋಗುವುದು. ವಿಷಮಚೇಷ್ಟೆಗಳೆಂದರೆ ದೇಹದ ಅವಯವಗಳ ಸ್ವಾಭಾವಿಕ ಚೇಷ್ಟೆಗೆ ವಿರುದ್ಧವಾದ ಕೆಲಸಗಳ ಕಡೆಗೆ ಅವುಗಳನ್ನು ಪ್ರೇರಿಸುವುದು, ಬಲಾಧಿಕರಾದವರೊಡನೆ ಬಾಹುಯುದ್ಧಾದಿಗಳನ್ನು ಮಾಡುವುದು ಇವುಗಳು ಉನ್ಮಾದರೋಗದ ಕಾರಣಗಳು.

ತೈರಲ್ಪಸತ್ವಸ್ಯಮಲಾಃಪ್ರದುಷ್ಟಾಃಬುದ್ಧೇರ್ನಿವಾಸಂಹೃ
ದಯಂಪ್ರದುಷ್ಯ ॥
ಸ್ರೋತಾಂಸ್ಯಧಿಷ್ಠಾಯಮನೋವಹಾನಿಪ್ರಮೋಹಯಂತ್ಯಾ
ಶುನರಸ್ಯಚೇತಃ ॥ ೫ ॥

ಹಿಂದಲ ಶ್ಲೋಕದಲ್ಲಿ ಉನ್ಮಾದರೋಗದ ಕಾರಣಗಳೆಂದು ಹೇಳಲ್ಪಟ್ಟವುಗಳಿಂದ ವಾತಾದಿಗಳು ಪ್ರಕುಪಿತಗಳಾಗಿ ಸತ್ವಭಾಗ ಕಡಮೆಯಾಗಿ ಕೇವಲ ರಜಸ್ತಮೋಗುಣಗಳ ಭಾಗಗಳೇ ಹೆಚ್ಚಾಗಿರುವ ಬುದ್ಧಿಯ ಸ್ಥಾನವಾದ ಹೃದಯವನ್ನು ದೋಷಯುಕ್ತವನ್ನಾಗಿ ಮಾಡಿ ಮನೋವಾಹಿಗಳಾದ ಸ್ರೋತಸ್ಸುಗಳಲ್ಲಿ ಸೇರಿ ಮನುಷ್ಯನ ಮನೋವೃತ್ತಿಯನ್ನು ಹಾಳುಮಾಡಿ ಹುಚ್ಚು ಹಿಡಿಸುತ್ತವೆ.

**ಧೀವಿಭ್ರಮಸ್ಸತ್ವಪರಿಪ್ಲವಶ್ಚ ಪರ್ಯಾಕುಲಾದೃಷ್ಟಿರಧೀರತಾಚ ॥**
**ಅಬದ್ಧವಾಕ್ತ್ವಂಹೃದಯಂಚಶೂನ್ಯಂಸಾಮಾನ್ಯಮುನ್ಮಾದ**
**ಗದಸ್ಯಲಿಂಗಂ ॥ ೬ ॥**

ಉನ್ಮಾದರೋಗದ ಸಾಮಾನ್ಯ ಲಕ್ಷಣಗಳಾವುವೆಂದರೆ—ಬುದ್ಧಿಭ್ರಮಣೆ, ಮನಸ್ಸು ಚಂಚಲವಾಗುವುದು. ದೃಷ್ಟಿಯು, ಬುದ್ಧಿ ಮತ್ತು ಮನಸ್ಸಿನ ಸ್ಥಿತಿಗನುಸಾರವಾಗಿ ಚಂಚಲವಾಗುವುದು, ಅಧೈರ್ಯದಿಂದ ಎದೆ ಒಡೆದುಕೊಳ್ಳುತ್ತಿರುವುದು, ಒಂದಕ್ಕೊಂದು ಸಂಬಂಧವಿಲ್ಲದಂತೆ ಮಾತಾಡುತ್ತಿರುವುದು, ಹೃದಯದಲ್ಲಿ ಯಾವ ವಿಧವಾದ ತಿಳುವಳಿಕೆಯಾಗಲಿ ನಿಶ್ಚಯವಾಗಲಿ ಇಲ್ಲದಿರುವುದು—ಇವುಗಳು ಉನ್ಮಾದರೋಗದ ಸಾಮಾನ್ಯ ಲಕ್ಷಣಗಳು.

ರೂಕ್ಷಾಲ್ಪಶೀತಾನ್ನವಿರೇಕಧಾತುಕ್ಷಯೋಪವಾಸ್ಯೈರ
ನಿಲೋಽತಿವೃದ್ಧಃ ॥
ಚಿಂತಾದಿದುಷ್ಟಂಹೃದಯಂಪ್ರದೂಷ್ಯಬುದ್ಧಿಂಸ್ಮೃತಿಂಚಾಪ್ಯು
ಪಹಂತಿಶೀಘ್ರಂ ॥ ೭ ॥
ಅಸ್ಥಾನಹಾಸ್ಯಸ್ಮಿತನೃತ್ಯಗೀತವಾಗಂಗವಿಕ್ಷೇಪಣರೋದನಾನಿ ॥
ಪಾರುಷ್ಯಕಾರ್ಶ್ಯಾರುಣವರ್ಣತಾಸ್ಯುರ್ಜೀರ್ಣೇಬಲಂಚಾ
ನಿಲಜಸ್ಯರೂಪಂ ॥ ೮ ॥

ವಾತಪ್ರಕೋಪಜನ್ಯವಾದ ಉನ್ಮಾದರೋಗದ ಲಕ್ಷಣಗಳನ್ನು ಹೇಳುತ್ತಾನೆ—ರೂಕ್ಷವಾದ ಭೋಜನವೆಂದರೆ ಜಿಡ್ಡಿಲ್ಲದ ಭೋಜನ. ಅಲ್ಪಭೋಜನವೆಂದರೆ ಕಡಮೆಯಾದ ಭೋಜನ, ಶೀತಾನ್ನವೆಂದರೆ ಶೀತವೀರ್ಯವಾದ ಪದಾರ್ಥಗಳನ್ನು ಭೋಜನಮಾಡುವುದು, ತಂಗಳನ್ನ ತಿನ್ನುವುದು. ವಮನ ಮತ್ತು ವಿರೇಚನೌಷಧಗಳ ಪ್ರಯೋಗದಿಂದಲಾಗಲಿ ಹಾಗೆಯೇ ಆಗಲಿ ವಮನ ಮತ್ತು ಭೇದಿಗಳು ಅತಿಯಾಗಿ ಆಗೋಣ, ಯಾವುದಾದರೂ ಕಾರಣಗಳಿಂದ ರಸಾದಿ ಧಾತುಗಳು ಕ್ಷಯಿಸುವುದು, ಉಪವಾಸ ಬೀಳುವುದು, ಈ ಕಾರಣಗಳಿಂದ ಶರೀರಗತವಾದ ವಾಯುವು ಪ್ರಕುಪಿತವಾಗಿ ಪ್ರಮಾಣಕ್ಕಿಂತ ಹೆಚ್ಚಾಗಿ ವೃದ್ಧಿ ಹೊಂದಿ ಚಿಂತೆ, ಭಯ, ಶೋಕ, ಈ ಕಾರಣಗಳಿಂದ ದೂಷಿತವಾಗಿರುವ ಮನಸ್ಸನ್ನು ಕೆಡಿಸಿ ಬುದ್ಧಿ, ಶಕ್ತಿ, ಮತ್ತು ಮನಸ್ಸಿನ ಶಕ್ತಿಯನ್ನು ಜಾಗ್ರತೆಯಾಗಿ ಕೆಡಿಸುತ್ತದೆ. ಈ ರೀತಿಯಾಗಿ ಬುದ್ಧಿ ಶಕ್ತಿ ಮತ್ತು ಮನಸ್ಸಿನ ಶಕ್ತಿಗಳು ಹಾಳಾಗಿ ಹೋದಮೇಲೆ ಕಾರಣವಿಲ್ಲದೆ ನಗುವುದು, ಹಾಸ್ಯಮಾಡುವುದು, ಕುಣಿಯುವುದು ಸಂಗೀತಹೇಳುವುದು, ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುವುದು, ಅಂಗವಿಕ್ಷೇಪವೆಂದರೆ ಕೈಕಾಲು ಮೊದಲಾದ ಅವಯವಗಳನ್ನು ಕುಣಿಸುವುದು, ಅಳುವುದು

ಇಂತಹ ವಿಕಾರಗಳನ್ನು ಮಾಡಲು ಆರಂಭಿಸುವುದಲ್ಲದೆ, ಶರೀರವನ್ನು ಮುಟ್ಟಿ ನೋಡಿದರೆ ಶರೀರವೆಲ್ಲಾ ಒರಟಾಗಿಯೂ ತರಕಲಾಗಿಯೂ ಇರುತ್ತದೆ. ದಿನೇ ದಿನೇ ಶರೀರವು ಕೃಶವಾಗುತ್ತ ಹೋಗುತ್ತದೆ, ಶರೀರದ ವರ್ಣವು ಕೆಂಪು ಬಣ್ಣ ವಾಗುತ್ತಿರುವುದು, ಭೋಜನ ಮಾಡಿದ ಆಹಾರವು ಜೀರ್ಣವಾದ ಹಾಗೆಲ್ಲಾ ರೋಗದ ವಿಕಾರಗಳು ಪ್ರಬಲವಾಗುತ್ತ ಹೋಗುವುದು, ಇವು ವಾತಪ್ರಕೋಪ ಜನಿತವಾದ ಉನ್ಮಾದರೋಗದ ಲಕ್ಷಣಗಳು.

ಅಜೀರ್ಣಕಟ್ವಮ್ಲವಿದಾಹ್ಯಶೀತೈರ್ಭೋಜ್ಯೈಶ್ಚಿತಂಪಿತ್ತ
ಮುದೀರ್ಣವೇಗಂ ॥
ಉನ್ಮಾದಮುತ್ಯುಗ್ರಮನಾತ್ಮಕಸ್ಯಹೃದಿಸ್ಥಿತಂಪೂರ್ವವದಾಶು
ಕುರ್ಯಾತ್ ॥ ೯ ॥
ಅಮರ್ಷಸಂರಂಭವಿನಗ್ನಭಾವಾಸ್ಸಂತರ್ಜನಾತಿದ್ರವಣೌಷ್ಣ್ಯ
ರೋಷಾಃ ॥
ಪ್ರಚ್ಛಾಯಶೀತಾನ್ನಜಲಾಭಿಲಾಷಃಪೀತಾಚಭಾಃಪಿತ್ತ
ಕೃತಸ್ಯಲಿಂಗಂ ॥ ೧೦ ॥

ಪಿತ್ತಪ್ರಕೋಪಜನಿತವಾದ ಉನ್ಮಾದರೋಗದ ಲಕ್ಷಣಗಳೇನಂದರೆ—ಅಜೀರ್ಣ ಎಂದರೆ ಜೀರ್ಣವಾಗದ ಗುರ್ವಾಹಾರಗಳು, ಖಾರ, ಹುಳಿ, ವಿದಾಹಿ ಎಂದರೆ ರೂಕ್ಷಗಳಾದ ಆಹಾರಗಳು, ಅತ್ಯಂತ ಬಿಸಿಯಾದ ಆಹಾರಗಳು, ಇವುಗಳಿಂದ ಪಿತ್ತವು ಕುಪಿತವಾಗಿ ಮೊದಲಿನಿಂದಲೂ ದೂಷಿತವಾಗಿಯೇ ಇರುವ ಮನಸ್ಸನ್ನು ಕೆಡಿಸಿ ಮನಸ್ಸಿನ ಸ್ಥಾನವಾದ ಹೃದಯವನ್ನು ವ್ಯಾಪಿಸಿಕೊಂಡು ಬಾಲುಮಾಡಿ ಭಯಂಕರವಾದ ಹುಚ್ಚನ್ನು ಹಿಡಿಸುತ್ತದೆ. ಪಿತ್ತಪ್ರಕೋಪಜನಿತವಾದ ಉನ್ಮಾದದಿಂದ ಪೀಡಿತರಾದವರು ಶೀಘ್ರಕೋಪಿಗಳಾಗಿಯೂ, ಆರ್ಭಟ ಮಾಡುವವರಾಗಿಯೂ, ಬತ್ತಲೆ ತಿರುಗುವವರಾಗಿಯೂ, ಎಲ್ಲರನ್ನೂ ಹೆದರಿಸುವುದು, ಓಡ್ಯಾಡುವುದು, ಇಂತಹ ಸ್ವಭಾವವುಳ್ಳವರಾಗಿಯೂ ಇರುತ್ತಾರೆ. ಇವರ ಶರೀರವು ಯಾವಾಗ್ಯೂ ಬಿಸಿಯಾಗಿಯೇ ಇರುತ್ತದೆ, ಯಾವಾಗ್ಯೂ ನೆರಳಿನಲ್ಲಿಯೇ ಇರುವುದಕ್ಕೆ ಅಪೇಕ್ಷೆಯುಳ್ಳವರಾಗಿರುತ್ತಾರೆ. ಶೀತಾನ್ನವೆಂದರೆ ತಂಗಳನ್ನದ ವಿಷಯದಲ್ಲಿಯೇ ಅಭಿರುಚಿಯುಳ್ಳವರಾಗಿರುತ್ತಾರೆ, ತಣ್ಣೀರನ್ನು ಪ್ರೀತಿಸುತ್ತಾರೆ, ಮೈಯೆಲ್ಲಾ ಅರಿಸಿನದ ಬಣ್ಣಕ್ಕೆ ತಿರಿಗಿ ಹೋಗಿರುತ್ತದೆ, ಇದು ಪಿತ್ತಪ್ರಕೋಪ ಜನ್ಯವಾದ ಉನ್ಮಾದರೋಗದ ಲಕ್ಷಣಗಳು.

ಸಂಪೂರಣೈರ್ಮಂದವಿಚೇಷ್ಟಿತಸ್ಯಸೋಷ್ಮಾಕಫೋಮರ್ಮಣಿ
ಸಂಪ್ರದುಷ್ಟಃ ॥

**ಬುದ್ಧಿಂಸ್ಮೃತಿಂಚಾಪ್ಯುಪಹತ್ಯಚಿತ್ತಂಪ್ರಮೋಹಯನ್‌ಸಂಜನಯೇದ್ವಿಕಾರಾನ್ ॥ ೧೧ ॥**
**ವಾಕ್‌ಚೇಷ್ಟಿತಂಮಂದಮರೋಚಕಶ್ಚನಾರೀವಿವಿಕ್ತಪ್ರಿಯತಾತಿನಿದ್ರಾ ॥**
**ಛರ್ದಿಶ್ಚಲಾಲಾಚಬಲಂಚಭುಕ್ತೇನಖಾದಿಶೌಕ್ಲ್ಯಂಚಕಫಾತ್ಮಕೇಸ್ಯಾತ್ ॥ ೧೨ ॥**

ಕಫಪ್ರಕೋಪಜನ್ಯವಾದ ಉನ್ಮಾದರೋಗದ ಲಕ್ಷಣಗಳೇನಂದರೆ—ಭೋಜನ ಮಾಡುವುದು, ಆದರೆ ತಕ್ಕಷ್ಟು ವ್ಯಾಯಾಮ ಮಾಡುವುದಕ್ಕಿಲ್ಲ, ಇಂತವರಿಗೆ ಪಿತ್ತಸಹಿತವಾದ ಕಫವು ಪ್ರಕುಪಿತವಾಗಿ ಬುದ್ಧಿ, ಶಕ್ತಿ, ಮತ್ತು ಸ್ಮರಣಶಕ್ತಿಗಳನ್ನು ಹಾಳುಮಾಡಿ ಮನಸ್ಸಿಗೆ ಅಜ್ಞಾನವನ್ನುಂಟುಮಾಡಿ ವಿಕಾರಗಳನ್ನು ಹುಟ್ಟಿಸುತ್ತದೆ, ಮಾತನ್ನಾಡುವುದು ಮತ್ತು ಕೆಲಸ ಮಾಡುವುದು ಇವುಗಳು ಚಟುವಟಿಕೆಯಿಂದ ನಡೆಯದೆ ನಿಧಾನವಾಗಿ ನಡೆಯುವವು, ಅರುಚಿ ಇರುವದು, ಸ್ತ್ರೀಸಂಭೋಗದಲ್ಲಿ ಅಪೇಕ್ಷೆ ಹೆಚ್ಚು, ವಿಜನವಾದ ಪ್ರದೇಶದಲ್ಲಿರಲು ಪ್ರೀತಿ ಹೆಚ್ಚು, ಹೆಚ್ಚು ನಿದ್ರೆ, ವಮನವಾಗುವುದು, ಬಾಯಿಯಲ್ಲಿ ಜೊಲ್ಲು ಸುರಿಯುತ್ತಿರುವುದು, ಹೀಗಿರುವುದಲ್ಲದೆ ಈ ವಿಕಾರಗಳೆಲ್ಲವೂ ಭೋಜನ ಮಾಡಿದ ಮೇಲೆ ಅಧಿಕವಾಗುವುದು, ಉಗುರು, ಮೈ, ಇವುಗಳೆಲ್ಲವೂ ಬೆಳ್ಳಗಾಗುವುದು, ಇವುಗಳು ಶ್ಲೇಷ್ಮಪ್ರಕೋಪಜನ್ಯವಾದ ಉನ್ಮಾದರೋಗದ ಲಕ್ಷಣಗಳು.

**ಯಸ್ಸನ್ನಿಪಾತಪ್ರಭವೋತಿಘೋರಸ್ಸರ್ವೈಸ್ಸಮಸ್ತೈಸ್ಸಚಹೇತುಭಿಸ್ಸ್ಯಾತ್ ॥**
**ಸರ್ವಾಣಿರೂಪಾಣಿಬಿಭರ್ತಿತಾದೃಗ್ವಿರುದ್ಧಭೈಷಜ್ಯವಿಧಿರ್ವಿವರ್ಜ್ಯಃ ॥ ೧೩ ॥**

ತ್ರಿದೋಷಸನ್ನಿಪಾತಜನ್ಯವಾದ ಉನ್ಮಾದರೋಗವು ಅತಿಭಯಂಕರವಾಗಿರುತ್ತದೆ, ತ್ರಿದೋಷಪ್ರಕೋಪಹೇತುಗಳೂ ಪ್ರತ್ಯೇಕವಾಗಿ ಅದರಲ್ಲಿ ಕಾಣುತ್ತಿರುತ್ತವೆ. ಹಿಂದೆ ಹೇಳಿದ ಮೂರು ವಿಧವಾದ ಉನ್ಮಾದದ ಲಕ್ಷಣಗಳೂ ಪ್ರತ್ಯೇಕ ಕಾಣುತ್ತಿರುತ್ತವೆ, ಚಿಕಿತ್ಸಾ ಕ್ರಮದಲ್ಲಿ ಮಾತ್ರ ಈ ರೋಗಕ್ಕೆ ಚಿಕಿತ್ಸೆಮಾಡುವಾಗ್ಯೆ ದೋಷಪ್ರತ್ಯನೀಕ ಚಿಕಿತ್ಸಾ ಕ್ರಮವನ್ನು ಅನುಸರಿಸಕೂಡದು.

**ಚೋರೈರ್ನರೇಂದ್ರಪುರುಷೈರರಿಭಿಸ್ತಥಾನ್ಯೈರ್ವಿತ್ರಾಸಿತಸ್ಯಧನಬಾಂಧವಸಂಕ್ಷಯಾದ್ವಾ ॥**
**ಗಾಢಂಕ್ಷತೇಮನಸಿಚಪ್ರಿಯಯಾರಿರಂಸೋರ್ಜಾಯೇತಚೋತ್ಕಟತಮೋಮನಸೋವಿಕಾರಃ ॥ ೧೪ ॥**

ಕಳ್ಳರಿಂದಲಾಗಲಿ, ರಾಜಪುರುಷರಿಂದಲಾಗಲಿ, ಶತ್ರುಗಳಿಂದಲಾಗಲಿ, ಅಥವಾ ಬೇರೆ ಯಾರಿಂದಲಾಗಲಿ ಬಲವಾಗಿ ಹೆದರಿಸಲ್ಪಡುವುದು, ತನ್ನ ಸರ್ವಸ್ವವನ್ನೂ ಕಳದುಕೊಳ್ಳುವುದು, ಇಷ್ಟರಾದ ಬಂಧುಗಳು ಮೃತರಾಗುವುದು, ಮನಸ್ಸಿಗೆ ತಲ್ಲಣವನ್ನು ಹುಟ್ಟಿಸುವಷ್ಟು ಸಂಕಟವಾಗುವುದು, ಪ್ರಿಯಳಾದ ಸ್ತ್ರೀಯೊಡನೆ ಸಂಭೋಗಿಸಬೇಕೆಂಬ ಉತ್ಕಟವಾದ ಅಪೇಕ್ಷೆಯುಂಟಾಗಿ ಅದು ಸಾಧ್ಯವಾಗದೆ ಹೋಗುವುದು, ಈ ಕಾರಣಗಳಿಂದ ಮನಸ್ಸಿಗೆ ವಿಕಾರ ಉಂಟಾಗಿ ಅದರಿಂದ ಭಯಂಕರವಾದ ಉನ್ಮಾದರೋಗವು ಹುಟ್ಟುತ್ತದೆ.

ಚಿತ್ರಂಬ್ರವೀತಿಚಮನೋನುಗತಂವಿಸಂಜ್ಞೋಗಾಯತ್ಯಥೊಹ
ಸತಿರೊದಿತಿಚಾಪಿಮೂಢಃ ॥
ರಕ್ತೇಕ್ಷಣೊಹತಬಲೇಂದ್ರಿಯಭಾಸ್ಸುದೀನೊಶ್ಯಾವಾನನೊ
ವಿಷಕೃತೇಥಭವೇದ್ವಿಸಂಜ್ಞಃ ॥ ೧೫ ॥

ವಿಷಪ್ರಯೋಗಜನಿತವಾದ ಉನ್ಮಾದರೋಗದಲ್ಲಿ ಜ್ಞಾನಸ್ವಾಧೀನವಿಲ್ಲದೆ ಮನಸ್ಸಿಗೆ ಬಂದಂತೆ ಚಿತ್ರವಿಚಿತ್ರವಾಗಿ ಮಾತನಾಡುತ್ತಿರುವುದು, ಸಂಗೀತ ಹೇಳುವುದು, ನಗುವುದು, ಅಳುವುದು, ಕೆಲವು ವೇಳೆ ಮೂಢನಂತಿರುವುದು, ಜೊತೆಗೆ ಕಣ್ಣು ಕೆಂಪಗಿರುವುದು, ಇಂದ್ರಿಯಗಳ ಪಾಟವ, ಕಾಯಶಕ್ತಿ ಇವುಗಳೆಲ್ಲಾ ಹಾಳಾಗಿ ಹೋಗಿರುವುದು, ಮುಖವನ್ನು ನೋಡಿದಲ್ಲಿ ಅತ್ಯಂತ ದೈನ್ಯ ತೋರುತ್ತಿರುವುದು, ಮುಖವು ಕೊಂಚ ಬಿಳುಪು ಸೇರಿದ ಕಪ್ಪು ವರ್ಣಕ್ಕೆ ತಿರಿಗಿ ಹೋಗಿರುವುದು, ಸಂಜ್ಞಾ ಶಕ್ತಿ ಇಲ್ಲದಿರುವುದು ಅಂದರೆ ಜ್ಞಾನವಿಲ್ಲದಿರುವುದು ಈ ಲಕ್ಷಣಗಳು ಕಾಣುತ್ತವೆ.

ಅವಾಂಚೀವಾಪ್ಯುದಂಚೀವಾಕ್ಷೀಣಮಾಂಸಬಲೋನರಃ ॥
ಜಾಗರೂಕೊಹ್ಯಸಂದೇಹಮುನ್ಮಾದೇನವಿನಶ್ಯತಿ ॥ ೧೬ ॥

ಉನ್ಮಾದರೋಗಿಯು ನೆಲಕ್ಕೆ ಮುಖಮಾಡಿಯಾಗಲಿ, ಅಂಗತಂಕನಾಗಿಯಾಗಲೀ ಬಿದ್ದುಕೊಳ್ಳುವ ಸ್ವಭಾವದವನಾಗಿದ್ದು ರಕ್ತಮಾಂಸಗಳು ಕ್ಷಯಿಸಿ ನಿದ್ರೆ ಖಂಡಿತವಾಗಿ ಬಾರದಂತಾಗಿದ್ದಲ್ಲಿ ಅವನು ಆ ಹುಚ್ಚಿನಿಂದ ಸತ್ತು ಹೋಗುತ್ತಾನೆ.

ಅಮರ್ತ್ಯವಾಗ್ವಿಕ್ರಮವೀರ್ಯಚೇಷ್ಟೋಜ್ಞಾನಾದಿವಿಜ್ಞಾನ
ಬಲಾದಿಭಿರ್ಯಃ ।
ಉನ್ಮಾದಕಾಲೊನಿಯತಶ್ಚಯಸ್ಯಭೂತೊತ್ಥಮುನ್ಮಾದ
ಮುದಾಹರೇತ್ತಂ ॥ ೧೭ ।

ಭೂತೋನ್ಮಾದವೆಂದರೆ ಭೂತಪ್ರೇತಗಳಿಂದ ಆಕ್ರಾಂತನಾಗಿ ಹುಚ್ಚನಾದವನ ಲಕ್ಷಣಗಳೇನೆಂದರೆ—ಅವನ ವಾಗ್ವ್ಯಾಪಾರಗಳು ಮಾನುಷಲೋಕದ ಸಂಬಂಧವನ್ನೇ ಬಿಟ್ಟು ಕೇವಲ ದೇವಲೋಕ ಮತ್ತು ಲೋಕಾಂತರವನ್ನೇ ಅವಲಂಬಿಸಿಕೊಂಡಿರುತ್ತವೆ, ಬುದ್ಧಿ ಮತ್ತು ಶಕ್ತಿ ಸಹ ಅದೇ ಸಂಬಂಧದವಿರುತ್ತವೆ, ಹುಚ್ಚು ರೇಗುವುದು ಕೂಡ ಕಾಲನಿಯಮವಿಲ್ಲ, ಇದಕ್ಕೆ ಭೂತೋನ್ಮಾದವೆಂದು ಹೆಸರು.

**ಸಂತುಷ್ಟಶ್ಶುಚಿರತಿದಿವ್ಯಮಾಲ್ಯಗಂಧೋನಿಸ್ತಂದ್ರೀರವಿತಥ**
**ಸಂಸ್ಕೃತಪ್ರಭಾಷೀ ॥**
**ತೇಜಸ್ವೀಸ್ಥಿರನಯನೋವರಪ್ರದಾತಾಬ್ರಹ್ಮಣ್ಯೋಭವತಿನರಸ್ಸ**
**ದೇವಜುಷ್ಟಃ ॥ ೧೮ ॥**

ದೇವಗಣಪೀಡಿತನಾಗಿ ಹುಚ್ಚನಾದವನು ಯಾವಾಗಲೂ ಸಂತೋಷಚಿತ್ತನಾಗಿರುವುದು, ಶೌಚ, ಆಚಾರ, ಇವುಗಳುಳ್ಳವನಾಗಿರುವುದು, ದಿವ್ಯವಾದ ಪುಷ್ಪಮಾಲೆ ಗಂಧ, ಇವುಗಳನ್ನು ಧರಿಸಿಕೊಳ್ಳುವ ಅಪೇಕ್ಷೆಯುಳ್ಳವನಾಗಿರುವುದು, ನಿದ್ರೆ ಮಾಡುವುದು ಕಡಿಮೆ, ಸುಳ್ಳು, ಮೋಸ, ಇಂತಹ ಮಾತುಗಳಿಲ್ಲ, ಬಹಳವಾಗಿ ಸಂಸ್ಕೃತ ಮಾತುಗಳನ್ನೇ ಆಡುತ್ತಿರುವುದು, ತೇಜಸ್ವಿಯಾಗಿರುವುದು, ಗಂಭೀರವಾದ ಮುಖಮುದ್ರೆಯುಳ್ಳವನಾಗಿರುವುದು, ಕೇಳಿದ್ದನ್ನೆಲ್ಲಾ ಸಾಧ್ಯವಿದ್ದರೆ ಇದಿರಲ್ಲಿ ಕೊಡುತ್ತೇನೆಂಬ ಸಂಕಲ್ಪವುಳ್ಳವನಾಗಿಯೇ ಇರುವುದು, ಬ್ರಾಹ್ಮಣರುಗಳಲ್ಲಿ ಸದಾ ವಿಶ್ವಾಸವುಳ್ಳವನಾಗಿರುವುದು. ಈ ಲಕ್ಷಣಗಳಿಂದ ಯುಕ್ತನಾಗಿರುತ್ತಾನೆ.

**ಸಂಸ್ವೇದೀದ್ವಿಜಗುರುದೇವದೋಷವಕ್ತಾಜಿಹ್ಮಾಕ್ಷೋವಿಗತ**
**ಭಯೋವಿಮಾರ್ಗದೃಷ್ಟಿಃ ॥**
**ಸಂತುಷ್ಟೋನಭವತಿಚಾನ್ನಪಾನಜಾತೈರ್ದುಷ್ಟಾತ್ಮಾಸಭವತಿ**
**ದೇವಶತ್ರುಜುಷ್ಟಃ ॥ ೧೯ ॥**

ರಾಕ್ಷಸಗಣಪೀಡಿತನಾಗಿ ಹುಚ್ಚನಾದವನು ಯಾವಾಗ್ಯೂ ಬೆವರುವ ಸ್ವಭಾವವುಳ್ಳವನಾಗಿರುವುದು. ಬ್ರಾಹ್ಮಣರು, ಗುರುಗಳು, ದೇವತೆಗಳು, ಇವರುಗಳನ್ನು ಸದಾ ನಿಂದಿಸುತ್ತಿರುವುದು, ಕಣ್ಣಿನಲ್ಲಿ ಒಂದು ವಿಧವಾದ ಕಪಟವನ್ನು ತೋರಿಸುತ್ತಿರುವುದು, ಯಾವ ಕಾರಣದಿಂದಲಾಗಲಿ ಕೊಂಚವೂ ಭಯಪಡುವ ಸ್ವಭಾವವೇ ಇರುವುದಕ್ಕಿಲ್ಲ, ವಕ್ರದೃಷ್ಟಿ, ವಕ್ರಸ್ವಭಾವ ಇವುಗಳುಳ್ಳವನಾಗಿರುವುದು. ಭೋಜನದ ವಿಷಯದಲ್ಲಿಯಾಗಲಿ ತಿಂಡಿಯ ವಿಷಯದಲ್ಲಿಯಾಗಲಿ ಎಷ್ಟು ತಿಂದರೂ ತೃಪ್ತಿಯಿಲ್ಲದವನಾಗಿಯೇ ಇರುವುದು, ಯಾವಾಗ್ಯೂ ದುಸ್ವಭಾವ ದುರ್ಮಾರ್ಗಗಳನ್ನೇ ಮಾಡುತ್ತಿರುವುದು, ಇವು ರಾಕ್ಷಸಗಣಪೀಡಿತನಾದ ಹುಚ್ಚನ ಲಕ್ಷಣಗಳು

**ಹೃಷ್ಟಾತ್ಮಾಪುಲಿನವನಾಂತರೋಪಸೇವೀಸ್ವಾಚಾರಃಪ್ರಿಯ**
**ಪರಿಗೀತಗಂಧಮಾಲ್ಯಃ ||**
**ನೃತ್ಯನ್ಪ್ರಹಸತಿಚಾರುಚಾಲ್ಪಶಬ್ದಂಗಂಧರ್ವಗ್ರಹಪರಿ**
**ಪೀಡಿತೋಮನುಷ್ಯಃ || ೨೦ ||**

ಗಂಧರ್ವಗ್ರಹಪೀಡಿತನಾಗಿ ಹುಚ್ಚನಾದವನು ಯಾವಾಗ್ಯೂ ಸಂತುಷ್ಟ ಚಿತ್ತನಾಗಿಯೇ ಇರುವುದು, ನದಿಯ ತೀರಗಳು ಗುಡ್ಡಗಳು, ಉಪವನಗಳು ಇವುಗಳಲ್ಲಿಯೇ ಹೆಚ್ಚಾಗಿ ವಾಸಮಾಡಲು ಅಭಿಪ್ರಾಯಪಡುತ್ತಿರುವುದು, ಸದಾಚಾರವುಳ್ಳವನಾಗಿರುವುದು, ಸಂಗೀತ, ಪುಷ್ಪ, ಗಂಧ ಇವುಗಳಲ್ಲಿ ಅಪೇಕ್ಷೆಯುಳ್ಳವನಾಗಿರುವುದು, ಮನೋಹರವಾಗಿ ನರ್ತನಮಾಡುತ್ತಲೂ, ಅಲ್ಪಶಬ್ದಯುಕ್ತವಾದ ಮುಗುಳು ನಗೆಯನ್ನು ನಗುತ್ತಲೂ ಇರುವುದು, ಇವು ಗಂಧರ್ವಗ್ರಹಪೀಡಿತನಾದ ಹುಚ್ಚನ ಲಕ್ಷಣಗಳು.

ತಾಮ್ರಾಕ್ಷಃಪ್ರಿಯತನುರಕ್ತವಸ್ತ್ರಧಾರೀಗಂಭೀರೋದ್ರು
ತಗತಿರಲ್ಪವಾಕ್ಸಹಿಷ್ಣುಃ ||
ತೇಜಸ್ವೀವದತಿಚಕಿಂದದಾಮಿಕಸ್ಮೈಯೋಯಕ್ಷಗ್ರಹಪರಿಪೀಡಿ
ತೋಮನುಷ್ಯಃ || ೨೧ ||

ಯಕ್ಷಗ್ರಹಪೀಡಿತನಾಗಿ ಹುಚ್ಚನಾದವನು ಕೆಂಪುಬಣ್ಣಕ್ಕೆ ತಿರುಗಿದ ಕಣ್ಣುಳ್ಳವನಾಗಿರುವುದು, ತನ್ನ ಶರೀರದ ಮೇಲೆ ಬಹಳ ವಿಶ್ವಾಸವುಳ್ಳವನಾಗಿರುವುದು, ಅಂದರೆ ದೇಹಶೃಂಗಾರದ ವಿಷಯದಲ್ಲಿ ಆಸ್ಥೆ ಬಹಳ, ಕೆಂಗಿನ ಬಟ್ಟೆಗಳ ಮೇಲೆ ಬಹಳ ಆಸೆ, ಮುಖವು ಗಂಭೀರವಾಗಿರುವುದು. ಯಾವಾಗಲೂ ಸಂಚಾರ ಮಾಡುವುದು ಅತಿವೇಗ, ಮಿತವಾದಿಯಾಗಿರುವುದು, ಏನು ಬಂದಗೂ ಸಹಿಸತಕ್ಕ ಸ್ವಭಾವವಿರುವುದು, ತೇಜಸ್ವಿಯಾಗಿರುವುದು, ಯಾರು ಏನನ್ನು ಯಾಚಿಸಿಯಾರು, ಯಾರಿಗೆ ಏನನ್ನು ಕೊಡಲಿ ಎಂಬದಾಗಿ ಯಾವಾಗ್ಯೂ ಅದೇ ಕುತೂಹಲವುಳ್ಳವನಾಗಿರುವುದು, ಇಂತಹ ಲಕ್ಷಣಗಳಿಂದ ಯುಕ್ತನಾಗಿರುತ್ತಾನೆ.

**ಪ್ರೇತಾನಾಂಸದಿಶತಿಸಂಸ್ತರೇಷುಪಿಂಡಾನ್‌ಶಾಂತಾತ್ಮಾಜಲ**
**ಮಪಿಚಾಪಸವ್ಯವಸ್ತ್ರಃ ||**
**ಮಾಂಸೇಪ್ಸುಸ್ತಿಲಗುಡಪಾಯಸಾಭಿಕಾಮಸ್ತದ್ಭಕ್ತೋಭವತಿ**
**ಪಿತೃಗ್ರಹಾಭಿಜುಷ್ಟಃ || ೨೨ ||**

**ಪಿತೃಗ್ರಹಪೀಡಿತನಾಗಿ ಹುಚ್ಚನಾದವನು ಯಾವಾಗ್ಯೆ ನೋಡಿದರೂ ದರ್ಭಾಸ್ತರಣಗಳನ್ನು ಹಾಸಿ ಪಿಂಡವನ್ನುರುಡಿಸುತ್ತಿರುತ್ತಾನೆ, ಶಾಂತನಾಗಿರುವುದು, ಯಾವಾಗ್ಯೂ ತರ್ಪಣಮಾಡುವಂತೆ ಕೈಯ್ಯಿಂದ ನೀರುಬಿಡುತ್ತಿರುವುದು, ವಸ್ತ್ರ**

ವನ್ನು ಅಪಸವ್ಯವಾಗಿ ಧರಿಸುವುದು, ಮಾಂಸ, ಎಳ್ಳು, ಬೆಲ್ಲ, ಪಾಯಸ, ಇವುಗಳಲ್ಲಿ ಅಪೇಕ್ಷೆಯುಳ್ಳವನಾಗಿರುವುದು, ಯಾವಾಗಲೂ ಪಿತೃಗಣಗಳಲ್ಲಿ, ಪಿತೃದೇವತೆಗಳಲ್ಲಿ ಸಹ ಭಕ್ತಿಯುಳ್ಳವನಾಗಿರುವುದು, ಇವು ಪಿತೃಗ್ರಹಪೀಡಿತನಾದವನ ಲಕ್ಷಣಗಳು.

ಯಸ್ತೂರ್ವ್ಯಾಂ ಪ್ರಸರತಿ ಸರ್ಪವತ್ ಕದಾಚಿತ್ ಸೃಕ್ಕಿಣ್ಯೌ ವಿಲಿಹತಿ
ಜಿಹ್ವಯಾ ತಥೈವ ॥
ಕ್ರೋಧಾಲುರ್ಗುಡಮಧುದುಗ್ಧಪಾಯಸೇಪ್ಸುರ್ಜ್ಞಾತವ್ಯೋ ಭವತಿ
ಭುಜಂಗಮೇನ ಜುಷ್ಟಃ ॥ ೨೩ ॥

ಸರ್ಪಗ್ರಹಪೀಡಿತನಾಗಿ ಹುಚ್ಚನಾದವನು ಭೂಮಿಯ ಮೇಲೆ ಬಿದ್ದು ಹಾವಿನ ಹಾಗೆ ಹೊರಳಾಡುತ್ತ ಮುಂದಕ್ಕೆ ಹೋಗುವುದು, ತುಟಿಯನ್ನು ಆಗಾಗ್ಯೆ ನಾಲಿಗೆಯಿಂದ ನೆಕ್ಕಿಕೊಳ್ಳುವುದು, ಅತಿ ಶಿಟ್ಟಾಗಿರುವುದು, ಬೆಲ್ಲ, ಜೇನು, ತುಪ್ಪ, ಪಾಯಸ, ಇವುಗಳ ಮೇಲೆ ಅಪೇಕ್ಷೆಯುಳ್ಳವನಾಗಿರುವುದು, ಈ ಲಕ್ಷಣಗಳಿಂದ ಯುಕ್ತನಾಗಿರುತ್ತಾನೆ.

ಮಾಂಸಾಸೃಗ್ವಿವಿಧಸುರಾವಿಕಾರಲಿಪ್ಸುರ್ನಿರ್ಲಜ್ಜೋ ಭೃಶಮತಿ
ನಿಷ್ಠುರೋತಿಶೂರಃ ॥
ಕ್ರೋಧಾಲುರ್ವಿಪುಲಬಲೋ ನಿಶಾವಿಹಾರೀ ಶೌಚದ್ವಿಡ್ಭವತಿ
ಸ ರಾಕ್ಷಸೈರ್ಗೃಹೀತಃ ॥ ೨೪ ॥

ರಾಕ್ಷಸಗ್ರಹಪೀಡಿತನಾಗಿ ಹುಚ್ಚನಾದವನು ಮಾಂಸ, ರಕ್ತ, ನಾನಾ ವಿಧ ಗಾಂಜಾ ಮದಗಳು ಇವುಗಳಲ್ಲಿಯೇ ಅಪೇಕ್ಷೆಯುಳ್ಳವನಾಗಿರುವುದು. ನಾಚಿಕೆಯಿಲ್ಲದವನಾಗಿರುವುದು, ಶೂರನಾಗಿಯೂ ನಿಷ್ಠುರವಾದ ಮಾತನ್ನಾಡುವವನಾಗಿಯೂ ಇರುವುದು, ಅತಿಬಲಶಾಲಿಯಾಗಿಯೂ, ಬಹಳ ಶಿಟ್ಟಿನವನಾಗಿಯೂ, ರಾತ್ರಿಯಲ್ಲಿ ಸಂಚಾರಮಾಡುವ ಸ್ವಭಾವವುಳ್ಳವನಾಗಿಯೂ, ಶುಚಿಯಾಗಿರುವಿಕೆಯನ್ನು ದ್ವೇಷಿಸುವವನಾಗಿಯೂ ಇರುತ್ತಾನೆ.

ಉದ್ಧಸ್ತಃ ಕೃಶಪರುಷೋ ಚಿರಪ್ರಲಾಪೀ ದುರ್ಗಂಧೋ ಭೃಶಮ
ಶುಚಿಸ್ತಥಾತಿಲೋಲಃ ॥
ಬಹ್ವಾಶೀ ವಿಜನವನಾಂತರೋಪಸೇವೀ ವ್ಯಾಚೇಷ್ಟನ್ ಭ್ರಮತಿ
ರುದನ್ ಪಿಶಾಚಜುಷ್ಟಃ ॥ ೨೫ ॥

ಪಿಶಾಚಗ್ರಹಬಾಧೆಯಿಂದ ಹುಚ್ಚನಾದವನು ಕೈಯ್ಯನ್ನು ಮೇಲಕ್ಕೆ ಎತ್ತಿಕೊಂಡು ತಿರುಗುವುದು, ಕೃಶನಾಗಿರುವುದು, ಯಾವಾಗ್ಯೂ ಬಗಳುತ್ತಿರುವುದು.

ದುರ್ವಾಸನೆಯುಳ್ಳವನಾಗಿಯೂ, ಕೋಳಕನಾಗಿಯೂ, ಚಂಚಲನಾಗಿಯೂ ಇರುವುದು, ಯಾವಾಗ್ಯೂ ಮಿತಿಮೀರಿ ಭೋಜನ ಮಾಡುತ್ತಿರುವುದು, ಜನರಹಿತವಾದ ಕಾಡುಗಳಲ್ಲಿ ಯಾವಾಗ್ಯೂ ವಾಸಮಾಡಲು ಇಷ್ಟಪಡುತ್ತಿರುವುದು, ಅಳುತ್ತಲೂ ವಿರುದ್ಧ ಚೇಷ್ಟೆಗಳನ್ನು ಮಾಡುತ್ತಲೂ ತಿರುಗುತ್ತಿರುವುದು, ಈ ರೀತಿಯಾಗಿರುತ್ತಾನೆ.

**ಸ್ಥೂಲಾಕ್ಷೋದ್ರುತಮುಟನಸ್ಸಫೇನಲೇಹೀನಿದ್ರಾಳುಃಪತತಿಚ**
**ಕಂಪತೇಚಯೋಹಿ ॥**
**ಯಶ್ಚಾದ್ರಿದ್ವಿರದನಗಾದಿವಿಚ್ಯುತಸ್ಯಾತ್ಸೋಸಾಧ್ಯೋಭವತಿ**
**ತಥಾತ್ರಯೋದಶಾಬ್ದೇ ॥ ೨೬ ॥**

ಉನ್ಮಾದರೋಗದ ಅಸಾಧ್ಯಲಕ್ಷಣಗಳೇನಂದರೆ—ಕಣ್ಣು ಕೆಂಡದಂತೆ ಅರಳಿಕೊಂಡಿರುವುದು, ಯಾವಾಗ್ಯೂ ಓಡ್ಯಾಡುತ್ತಿರುವುದು, ಬಾಯಿ ನಲ್ಲಿ ಜೊಲ್ಲು ಸುರಿಸುತ್ತಲೂ ಪುನಹ್ಹ ಅದನ್ನೇ ನೆಕ್ಕುತ್ತಲೂ ಇರುವುದು, ತೂಕಡಿಸುತ್ತಲೂ ಪದೇ ಪದೇ ಬೀಳುತ್ತಲೂ ನಡುಗುತ್ತಲೂ ಇರುವುದು, ಈ ರೀತಿಯಿದ್ದಲ್ಲಿ ಅಸಾಧ್ಯಲಕ್ಷಣಗಳೆಂದರಿಯಬೇಕು. ಬೆಟ್ಟದ ಮೇಲಿನಿಂದ ಬಿದ್ದು ಹುಚ್ಚು ಬಂದಿರುವುದು, ಆನೆ, ಕುದುರೆ, ಮೊದಲಾದ ವಾಹನಗಳ ಮೇಲಿನಿಂದ ಬಿದ್ದು ಹುಚ್ಚು ಹಿಡಿದಿರುವುದು, ಮರದ ಮೇಲಿನಿಂದ ಬಿದ್ದು ಹುಚ್ಚು ಹಿಡಿದಿರುವುದು, ಇವುಗಳು ಅಸಾಧ್ಯ, ಯಾವ ವಿಧದ ಹುಚ್ಚಾದರೂ ಹನ್ನೆರಡು ವರುಷ ಕಳದು ಹೋಗಿದ್ದಲ್ಲಿ ಅಸಾಧ್ಯವೆಂದು ತಿಳಿಯಬೇಕು.

**ದೇವಗ್ರಹಾಃಪೌರ್ಣಮಾಸ್ಯಾಮಸುರಾಸ್ಸಂಧ್ಯಯೋರಪಿ ॥**
**ಗಂಧರ್ವಾಃಪ್ರಾಯಶೋಷ್ಟಮ್ಯಾಂಯಕ್ಷಾಶ್ಚಪ್ರತಿಪದ್ಯಥ ॥೨೭॥**
**ಪಿತ್ರ್ಯಾಃಕೃಷ್ಣಕ್ಷಯೇಹಿಂಸ್ಯುಃಪಂಚಮ್ಯಾಮಪಿಚೋರಗಾಃ ॥**
**ರಕ್ಷಾಂಸಿರಾತ್ರೌಪೈಶಾಚಾಶ್ಚತುರ್ದಶ್ಯಾಂವಿಶಂತಿಹಿ ॥ ೨೮ ॥**

ಹಿಂದೆ ಹೇಳಿದ ದೇವಗ್ರಹಾದಿಗಳು ಮನುಷ್ಯರನ್ನು ಆಕ್ರಮಿಸಿ ಹುಚ್ಚರನ್ನು ಮಾಡುವ ಕಾಲವನ್ನು ಹೇಳುತ್ತಾನೆ—ದೇವಗ್ರಹಗಳು ಪೂರ್ಣಿಮೆಯಲ್ಲಿಯೂ ಅಸುರಗ್ರಹಗಳು ಸಂಧ್ಯಾಕಾಲಗಳಲ್ಲಿಯೂ ಗಂಧರ್ವಗ್ರಹಗಳು ಅಷ್ಟಮಿಯಲ್ಲಿಯೂ, ಯಕ್ಷಗ್ರಹಗಳು ಪಾಡ್ಯದ ದಿವಸದಲ್ಲಿಯೂ, ಪಿತೃಗ್ರಹಗಳು ಕೃಷ್ಣಪಕ್ಷದ ಅಮಾವಾದಸೆಯಲ್ಲಿಯೂ, ಸರ್ಪಗ್ರಹಗಳು ಪಂಚಮಿಯಲ್ಲಿಯೂ, ರಾಕ್ಷಸಗ್ರಹಗಳು ರಾತ್ರಿವೇಳೆಯಲ್ಲಿಯೂ, ಪಿಶಾಚಗ್ರಹಗಳು ಚತುರ್ದಶಿಯಲ್ಲಿಯೂ ಈ ಕಾಲಗಳಲ್ಲಿ ಮನುಷ್ಯರನ್ನು ಆಕ್ರಮಿಸಿ ಹುಚ್ಚರನ್ನಾಗಿ ಮಾಡುತ್ತವೆ.

**ದರ್ಪಣಾದೀನ್‌ಯಥಾಛಾಯಾಶೀತೋಷ್ಣಂಪ್ರಾಣಿನೋಯಥಾ॥**
**ಸ್ವಮಣಿಂಭಾಸ್ಕರಾರ್ಚಿಶ್ಚಯಥಾದೇಹಂಚದೇಹಭೃಕ್ ॥ ೨೯ ॥**
**ವಿಶಂತಿಚನದೃಶ್ಯಂತೆಗ್ರಹಾಸ್ತದ್ವತ್‌ಶರೀರಿಣಃ ॥**

ಗ್ರಹಾದಿಗಳು ಮನುಷ್ಯರನ್ನು ಆಕ್ರಮಿಸಿ ಹುಚ್ಚರನ್ನು ಮಾಡುವುದಾದಲ್ಲಿ ಗ್ರಹಗಳು ಕಾಣದಿರಲು ಕಾರಣವೇನು ಎಂಬ ಆಕ್ಷೇಪವನ್ನು ಮನಸ್ಸಿನಲ್ಲಿಟ್ಟು ಕೊಂಡು ಹೇಳುತ್ತಾನೆ—ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬವು ಹೋಗುವುದು ಹೇಗೆ ಕಾಣುವುದಿಲ್ಲವೋ ಶೀತೋಷ್ಣಗಳು ಪ್ರಾಣಿಗಳ ಶರೀರವನ್ನು ವ್ಯಾಪಿಸುವುದು ಹೇಗೆ ಕಾಣುವುದಿಲ್ಲವೊ, ಸೂರ್ಯನ ಕಿರಣಗಳು ಸೂರ್ಯಕಾಂತಮಣಿಯನ್ನು ಪ್ರವೇಶಿಸುವುದು ಹೇಗೆ ಕಾಣುವುದಿಲ್ಲವೊ ಹಾಗೆ ಗ್ರಹಗಳು ಮನುಷ್ಯ ಶರೀರವನ್ನು ವ್ಯಾಪಿಸುವುದು ಕಾಣುವುದಿಲ್ಲ, ಅಂದರೆ ನೋಡುವುದಕ್ಕೆ ಆಗುವುದಿಲ್ಲವೆಂದು ತಾತ್ಪರ್ಯ.

ಇಲ್ಲಿಗೆ ಉನ್ಮಾದನಿದಾನ ಸಂಪೂರ್ಣ.

## ಅಪಸ್ಮಾರನಿದಾನ.

**ಚಿಂತಾಶೋಕಾದಿಭಿರ್ದೋಷಾಃಕ್ರುದ್ಧಾಹೃತ್ಸ್ರೋತಸಿಸ್ಥಿತಾಃ ||**
**ಕೃತ್ವಾಸ್ಮೃತೇರಪಧ್ವಂಸಂಅಪಸ್ಮಾರಂಪ್ರಕುರ್ವತೆ ||೧||**

ಅಪಸ್ಮಾರರೋಗದ ನಿದಾನವನ್ನು ಹೇಳುತ್ತಾನೆ—ಚಿಂತೆ, ದುಃಖ, ಇವುಗಳಿಂದ ವಾತ, ಪಿತ್ತ, ಶ್ಲೇಷ್ಮಗಳೆಂಬ ತ್ರಿದೋಷಗಳು ಪ್ರಕುಪಿತಗಳಾಗಿ ಹೃದಯಗತಗಳಾದ ಮನೋವಹನಾಡಿಗಳಲ್ಲಿ ಸೇರಿಕೊಂಡು ಸ್ಮರಣ ಶಕ್ತಿಗೆ ಧ್ವಂಸ ಮಾಡಿ ಅಪಸ್ಮಾರರೋಗವನ್ನು ಹುಟ್ಟಿಸುತ್ತವೆ.

**ತಮಃಪ್ರವೇಶಸ್ಸಂರಂಭೋದೋಷೋದ್ರೇಕಹತಸ್ಮೃತೇಃ ||**
**ಅಪಸ್ಮಾರಇತಿಜ್ಞೇಯೋಗದೋಘೋರಶ್ಚತುರ್ವಿಧಃ ||೨||**

ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳ ಉದ್ರೇಕದಿಂದ ಸ್ಮರಣ ಶಕ್ತಿ ಕೆಟ್ಟು ಹೋಗುತ್ತವೆ, ಈ ರೀತಿ ಸ್ಮರಣಶಕ್ತಿ ಕೆಡೋಣದರಿಂದ ಮನುಷ್ಯನು ಕತ್ತಲೆಯಲ್ಲಿರುವವನಂತೆ ಏನು ವಿಷಯವೂ ತಿಳಿಯದ ಹಾಗಿರುವುದು, ಸಂರಂಭವೆಂದರೆ ಕೈಕಾಲು ಕಣ್ಣುಗಳನ್ನು ವಿಕೃತವನ್ನಾಗಿ ಮಾಡುವುದು, ಇಂತಹ ಭಯಂಕರವಾದ ರೋಗಕ್ಕೆ ಅಪಸ್ಮಾರವೆಂದು ಹೆಸರು, ಇದು ನಾಲ್ಕು ವಿಧ.

**ಹೃತ್ಕಂಪಶ್ಶೂನ್ಯತಾಸ್ವೇದೋಧ್ಯಾನಂಮೂರ್ಛಾಪ್ರಮೂಢತಾ ||**
**ನಿದ್ರಾನಾಶಶ್ಚತಸ್ಮಿಂಶ್ಚಭವಿಷ್ಯತಿಭವತ್ಯಥ ||೩||**

ಅಪಸ್ಮಾರರೋಗದಲ್ಲಿ ಮೊದಲು ತೋರುವ ಲಕ್ಷಣಗಳು—ಎದೆ ನಡುಗುವುದು, ಮನಸ್ಸಿಗೆ ಏನೂ ತೋರದಿರುವುದು, ಬೆವರು ಬರುವುದು, ಏನೋ ಆಲೋಚನೆಮಾಡುತ್ತಿರುತ್ತ ಹಾಗೆಯೇ ಮೂರ್ಛೆ ಹೋಗುವುದು, ಪ್ರಮೂಢತಾ ಎಂದರೆ ಇಂದ್ರಿಯ ವ್ಯಾಪಾರಗಳೆಲ್ಲಾ ನಿಂತುಹೋಗುವುದು, ನಿದ್ರೆಯೇ ಬಾರದೆ ಹೋಗುವುದು, ಇವು ಅಪಸ್ಮಾರರೋಗದ ಪೂರ್ವಲಕ್ಷಣಗಳು.

**ಕಂಪತೇ ಪ್ರದಶೇದ್ದಂತಾನ್ ಫೇನೋದ್ವಾಮೀ ಶ್ವಸಿತ್ಯಪಿ ॥**
**ಪರುಷಾರುಣಕೃಷ್ಣಾನಿ ಪಶ್ಯೇದ್ರೂಪಾಣಿ ಚಾನಿಲಾತ್ ॥ ೩ ॥**

ವಾತಪ್ರಬಲವಾದ ಅಪಸ್ಮಾರರೋಗದಲ್ಲಿ ರೋಗಿಯು ನಡುಗುವುದು, ಹಲ್ಲು ಕಡಿಯುವುದು, ಬಾಯಿನಿಂದ ನೊರೆ ಸುರಿಸುತ್ತ ಬುಸುಗುಟ್ಟುತ್ತ ಉಸಿರುಬಿಡುವುದು, ಭಯಂಕರಗಳಾದ ಕೆಂಪು ಮತ್ತು ಕಪ್ಪು ಬಣ್ಣದ ಆಕಾರಗಳನ್ನು ನೋಡುತ್ತ ಮೂರ್ಛೆಹೋಗಿ ಬಿದ್ದುಕೊಳ್ಳುತ್ತಾನೆ.

**ಪೀತಫೇನಾಂಗವಕ್ತ್ರಾಕ್ಷಃ ಪೀತಾಸೃಗ್ರೂಪದರ್ಶನಃ ॥**
**ಸತೃಷ್ಣೋಷ್ಣಾನಲವ್ಯಾಪ್ತಲೋಕದರ್ಶೀ ಚ ಪೈತ್ತಿಕಃ ॥ ೪ ॥**

ಪಿತ್ತವು ಪ್ರಬಲವಾದ ಅಪಸ್ಮಾರರೋಗದಲ್ಲಿ ರೋಗಿಯ ಬಾಯಿನಿಂದ ಹೊರಡುವ ನೊರೆ, ಮತ್ತು ರೋಗಿಯ ಶರೀರ, ಮುಖ, ಕಣ್ಣು, ಇವುಗಳು ಹಳದಿಯ ಬಣ್ಣವಾಗಿರುತ್ತವೆ. ಕೆಲವು ವೇಳೆ ಕೆಂಪಗೂ ಕಾಣುವುದುಂಟು, ಬಾಯಾರಿಕೆ ಬಹಳವಾಗಿರುತ್ತದೆ, ಶರೀರವು ಅತ್ಯುಷ್ಣವಾಗಿರುತ್ತದೆ, ಯಾವ ಕಡೆಗೆ ನೋಡಿದರೂ ಬೆಂಕಿ ಹತ್ತಿಕೊಂಡು ಉರಿಯುತ್ತಿರುವಂತೆ ಕಣ್ಣಿಗೆ ಕಾಣುತ್ತಿರುತ್ತದೆ, ಹಾಗೆಯೇ ಮೂರ್ಛೆಹೋಗುತ್ತಾನೆ.

**ಶುಕ್ಲಫೇನಾಂಗವಕ್ತ್ರಾಕ್ಷಃ ಶೀತಹೃಷ್ಟಾಂಗಜೋ ಗುರುಃ ॥**
**ಪಶ್ಯೇತ್ ಶುಕ್ಲಾನಿ ರೂಪಾಣಿ ಶ್ಲೈಷ್ಮಿಕೋ ಮುಚ್ಯತೇ ಚಿರಾತ್ ॥ ೫ ॥**

ಶ್ಲೇಷ್ಮಪ್ರಕೋಪಜನ್ಯವಾದ ಅಪಸ್ಮಾರರೋಗದಲ್ಲಿ ರೋಗಿಯ ಬಾಯಿನಿಂದ ಹೊರಡುವ ನೊರೆ, ರೋಗಿಯ ಶರೀರ, ಮುಖ, ಕಣ್ಣು ಇವುಗಳೆಲ್ಲಾ ಬೆಳ್ಳಗಾಗಿರುತ್ತವೆ, ಮೈ ಯಾವಾಗ್ಯೂ ಥಂಡಿಯಾಗಿರುತ್ತದೆ, ರೋಮಗಳು ನೆಟ್ಟಗಾಗಿರುತ್ತವೆ, ಮೈ ಭಾರವಿರುತ್ತದೆ, ನೋಡಿದತ್ತೆಲ್ಲ ಸುತ್ತಲೂ ಬೆಳ್ಳಗಿರುವಂತೆಯೇ ನೋಡುತ್ತ ಮೂರ್ಛಿತನಾಗುತ್ತಾನೆ, ಜ್ಞಾನವಾಗಬೇಕಾದರೆ ಹಿಂದಲ ಅಪಸ್ಮಾರಗಳಿಗಿಂತ ಸಾವಕಾಶ.

**ಸರ್ವೈರೇತೈಸ್ಸಮಸ್ತೈಶ್ಚ ಲಿಂಗೈರ್ಜ್ಞೇಯಸ್ತ್ರಿದೋಷಜಃ ॥**
**ಅಪಸ್ಮಾರಸ್ಸ ಚಾಸಾಧ್ಯೋ ಯಃ ಕ್ಷೀಣಸ್ಯಾನವಶ್ಚ ಯಃ ॥ ೬ ॥**

ತ್ರಿದೋಷಪ್ರಕೋಪಜನ್ಯವಾದ ಅಪಸ್ಮಾರ ರೋಗದಲ್ಲಿ ಮೂರು ದೋಷಗಳ ಲಕ್ಷಣಗಳೂ ಕಾಣುತ್ತಿರುತ್ತವೆ, ಇದು ಅಸಾಧ್ಯ, ಮತ್ತೂ ರಕ್ತಮಾಂಸಗಳು

ಕ್ಷಯಿಸಿಹೋಗಿರುವವರಿಗೂ ಅಪಸ್ಮಾರರೋಗವು ಅಸಾಧ್ಯವೆಂದೇ ತಿಳಿಯಬೇಕು. ಈ ಅಪಸ್ಮಾರರೋಗವು ಹಳತಾದಷ್ಟೂ ಅಸಾಧ್ಯವೆಂದೇ ತಿಳಿಯಬೇಕು.

**ಪ್ರಸ್ಫುರಂತಂಸುಬಹುಶಃಕ್ಷೀಣಂಪ್ರಚಲಿತಭ್ರುವಂ ॥**
**ನೇತ್ರಾಭ್ಯಾಂಚವಿಕುರ್ವಾಣಮಪಸ್ಮಾರೋವಿನಾಶಯೇತ್ ॥ ೭ ॥**

ಯಾವಾಗ್ಯೂ ಅವಯವಗಳು ಹಾರುತ್ತಲೂ ನಡುಗುತ್ತಲೂ ಇರುವುದು. ರಕ್ತಮಾಂಸಗಳು ಕ್ಷಯಿಸಿ ಕೃಶನಾಗಿರುವುದು, ರೋಗಿಯ ಹುಬ್ಬುಗಳು ಯಾವಾಗಲೂ ಮಿಡಿಯುತ್ತಿರುವುದು, ಕಣ್ಣುಗಳು ನಾನಾ ವಕ್ರಕ್ಕೆ ತಿರಿಗಿಹೋಗಿರುವುದು, ಈ ಲಕ್ಷಣಗಳಿರುವವನನ್ನು ಅಪಸ್ಮಾರರೋಗವು ಹಾಳುಮಾಡುತ್ತದೆ.

**ಪಕ್ಷಾದ್ದ್ವಾದಶಾಹಾದ್ವಾಮಾಸಾದ್ವಾಕುಪಿತಾಮಲಾಃ ॥**
**ಅಪಸ್ಮಾರಾಯಕುರ್ವಂತಿವೇಗಂಕಿಂಚಿದಥಾಂತರಂ ॥ ೮ ॥**
**ದೇವೇವರ್ಷತ್ಯಪಿಯಥಾಭೂಮೌಬೀಜಾನಿಕಾನಿಚಿತ್ ॥**
**ಶರದಿಪ್ರತಿರೋಹಂತಿತಥಾವ್ಯಾಧಿಸಮುಚ್ಛ್ರಯಾಃ ॥ ೯ ॥**

ಹದಿನೈದು ದಿನಕ್ಕೊಂದು ಬಾರಿ, ಹನ್ನೆರಡು ದಿನಕ್ಕೊಂದು ಬಾರಿ, ತಿಂಗಳಿಗೊಂದು ಬಾರಿ, ಈ ರೀತಿಯಾಗಿ ದೋಷಗಳು ಪ್ರಕುಪಿತಗಳಾಗಿ ಅಪಸ್ಮಾರರೋಗವನ್ನುಂಟುಮಾಡುತ್ತವೆ, ಈ ಕಾಲವಲ್ಲದೆ ಇನ್ನೂ ಮಧ್ಯ ಮಧ್ಯ ಕಾಲಗಳಲ್ಲಿ ಕೂಡ ದೋಷಗಳ ತಾರತಮ್ಯಾನುಸಾರವಾಗಿ ದೋಷಗಳು ಕುಪಿತಗಳಾಗಿ ಅಪಸ್ಮಾರವನ್ನುಂಟುಮಾಡಬಹುದು, ಹೇಗೆಂದರೆ ಮಳೆ ಚನ್ನಾಗಿ ಬಂದು, ಭೂಮಿಯು ಚನ್ನಾಗಿ ಪರಿಪಕ್ವವಾಗಿದ್ದರೂ ಕೆಲಕೆಲವು ಬೀಜಗಳು ಕೆಲಕೆಲವು ಕಾಲಗಳಲ್ಲಿಯೇ ಪರಿಪಕ್ವಗಳಾಗಿ ಹುಟ್ಟುವಂತೆ ದೋಷಗಳು ಕೂಡ ಕೆಲಕೆಲವು ಕಾಲಗಳಲ್ಲಿಯೇ ಕುಪಿತಗಳಾಗಿ ರೋಗೋತ್ಪಾದಕಗಳಾಗುತ್ತವೆ

ಇಲ್ಲಿಗೆ ಅಪಸ್ಮಾರನಿದಾನ ಸಂಪೂರ್ಣ.

## ವಾ ತ ವ್ಯಾ ಧಿ ನಿ ದಾ ನ .

**ರೂಕ್ಷಶೀತಾಲ್ಪಲಘ್ವಾನ್ನವ್ಯವಾಯಾತಿಪ್ರಜಾಗರೈಃ ॥**
**ವಿಷಮಾದುಪಚಾರಾಚ್ಚದೋಷಾಸೃಕ್ಸ್ರವಣಾದಪಿ ॥ ೧ ॥**
**ಲಂಘನಪ್ಲವನಾತ್ಯಧ್ವವ್ಯಾಯಾಮಾದವಿಚೇಷ್ಟಿತೈಃ ॥**
**ಧಾತೂನಾಂಸಂಕ್ಷಯಾಚ್ಚಿಂತಾಶೋಕರೋಗಾತಿಕರ್ಷಣಾತೇ॥೨॥**

ವೇಗಸಂಧಾರಣಾದಾಮಾದಭಿಘಾತಾದಭೋಜನಾತ್ ॥
ಮರ್ಮಬಾಧಾದ್ಗಜೋಷ್ಟ್ರಾಶ್ವಶೀಘ್ರಯಾನಾಪತಂಸನಾತ್ ॥೩॥
ದೇಹೇಸ್ರೋತಾಂಸಿರಿಕ್ತಾನಿಪೂರಯಿತ್ವಾನಿಲೋಬಲೀ ॥
ಕರೋತಿವಿವಿಧಾನ್ವ್ಯಾಧೀನ್ ಸರ್ವಾಂಗೈಕಾಂಗಸಂ
ಶ್ರಯಾನ್ ॥ ೪ ॥

ವಾತರೋಗ ನಿದಾನವನ್ನು ಪ್ರಾರಂಭಿಸುತ್ತಾನೆ. ರೂಕ್ಷ ಎಂದರೆ ಸ್ನೇಹ ರಹಿತವಾದ (ತುಪ್ಪ ಎಣ್ಣೆ ಮೊದಲಾದ, ಜಿಡ್ಡಿಲ್ಲದ) ಆಹಾರ. ಶೀತವೀರ್ಯವಾದ ಮತ್ತು ತಣ್ಣಗಾದ ಆಹಾರ, ಭೋಜನಕ್ಕೆ ಸಾಕಾಗುವದಕ್ಕಿಂತಲೂ ಕಡಮೆಯ ಪ್ರಮಾಣದಲ್ಲಿ ಆಹಾರವನ್ನು ತೆಗೆದುಕೊಳ್ಳುವುದು. ಕೇವಲ ಲಘುವಾದ ಆಹಾರವನ್ನೇ ಭೋಜನ ಮಾಡುವದು, ಇಂತಹ ಆಹಾರಗಳಿಂದಲೂ ಮತ್ತು ಅತಿಯಾಗಿ ಮೈಥುನ ಮಾಡೋಣ, ನಿದ್ರೆಗೆಡುವದು ಪ್ರಕೃತಿ ವಿರುದ್ಧಗಳಾದ ಉಪಚಾರಗಳು, ದೋಷಗಳು ಮತ್ತು ರಕ್ತ ಇವುಗಳು ಅತಿಯಾಗಿ ಸ್ರವಿಸೋಣ, ದೊಡ್ಡಗುಂಡಿ, ಕಾಲುವೆ ಮೊದಲಾದುವುಗಳನ್ನು ಈ ಕಡೆಯಿಂದಾಚೆಗೆ ದಾಟುವುದು, ಈಜುವದು, ಅತಿಯಾಗಿ ನಡೆಯುವದು, ಅತಿಯಾದ ವ್ಯಾಯಾಮ ಮಾಡುವದು, ಧಾತುಕ್ಷಯ, ಚಿಂತೆ, ದುಃಖ, ರೋಗ ಇವುಗಳಿಂದ ಅತಿಯಾಗಿ ಕೃಶನಾಗುವುದು, ಮಲಮೂತ್ರಗಳ ವೇಗವನ್ನು ತಡೆಯುವುದು, ಶರೀರದಲ್ಲಿ ಆಮವು ವೃದ್ಧಿಯಾಗುವುದು, ಬಲವಾದ ಏಟು ಶರೀರದ ಯಾವ ಭಾಗಕ್ಕಾದರೂ ಬೀಳುವುದು, ಉಪವಾಸ ಬೀಳುವುದು, ಮರ್ಮಸ್ಥಾನಕ್ಕೆ ಪೆಟ್ಟು ಬೀಳುವುದು, ಆನೆ, ಕುದುರೆ ಒಂಟೆ ಮೊದಲಾದ ವಾಹನಗಳ ಮೇಲೆ ಸವಾರಿಮಾಡಿ ಬೀಳುವುದು, ಈ ಕಾರಣಗಳಿಂದ ದೇಹಗತಗಳಾದ ಸ್ರೋತಸ್ಸು (ನಾಡಿಗಳು)ಗಳು ಬರಿದಾಗುತ್ತವೆ, ಬರಿದಾದ ನಾಡಿಗಳಲ್ಲಿ ವಾಯುವು ತುಂಬಿಕೊಂಡು ವಾತರೋಗಗಳನ್ನುಂಟುಮಾಡುತ್ತವೆ. ಈ ವಾತರೋಗಗಳು ಒಂದೇ ಅವಯವಕ್ಕೆ ಸಂಬಂಧಿಸಿ ಇರಬಹುದು. ಅಥವಾ ನಾನಾ ಅವಯವಗಳಿಗೆ ಸಂಬಂಧಿಸಿದವಾಗಿಯೂ ಇರಬಹುದು.

ಅವ್ಯಕ್ತಂಲಕ್ಷಣಂತೇಷಾಂಪೂರ್ವರೂಪಮಿತಿಸ್ಮೃತಂ ॥
ಆತ್ಮರೂಪಂತುಯದ್ವ್ಯಕ್ತಮಪಾಯೋಲಘುತಾಪುನಃ ॥ ೫ ॥

ಮುಂದೆ ಹೇಳುವ ವಾತವಿಕಾರಗಳು ಇನ್ನೂ ಸ್ಪಷ್ಟವಾಗಿ ತೋರುವ ಮುಂಚಿನ ಅವಸ್ಥೆಯೇ ಪೂರ್ವರೂಪವೆನ್ನಿಸುತ್ತದೆ. ವಾತವಿಕಾರಗಳು ಸ್ಪಷ್ಟವಾಗಿ ತೋರಿದರೆ ಅದಕ್ಕೆ ರೂಪವೆಂಬ ಹೆಸರು ಪೂರ್ವ ರೂಪ ರೂಪಾದಿ ಯುಕ್ತವಾದ ವಾತರೋಗದ “ ಅಪಾಯಃ ” ಎಂದರೆ ಅಭಾವವೇ ಲಾಘವವೆನ್ನಿಸುತ್ತದೆ.

ಸಂಕೋಚಃಪರ್ವಣಾಂಸ್ತಂಭೋಭಂಗೋಸ್ಥ್ನಾಂಪರ್ವಣಾಮಪಿ॥
ರೋಮಹರ್ಷಃಪ್ರಲಾಪಶ್ಚಪಾಣಿಪೃಷ್ಠಶಿರೋಗ್ರಹಃ ॥ ೬ ॥
ಖಾಂಜ್ಯಪಾಂಗುಲ್ಯಕುಬ್ಜತ್ವಂಶೋಷೋಂಗಾನಾಮನಿದ್ರತಾ ॥
ಗರ್ಭಶುಕ್ರರಜೋನಾಶಃಸ್ಪಂದನಂಗಾತ್ರಸುಪ್ತತಾ ॥ ೭ ॥
ಶಿರೋನಾಸಾಕ್ಷಿಜತ್ರೂಣಾಂಗ್ರೀವಾಯಾಶ್ಚಾಪಿಹುಂಡನಂ ॥
ಭೇದಸ್ತೋದೋರ್ತಿರಾಕ್ಷೇಪೋಮುಹುಶ್ಚಾಯಾಸಏವಚ ॥ ೮ ॥
ಏವಂವಿಧಾನಿರೂಪಾಣಿಕರೋತಿಕುಪಿತೋನಿಲಃ ॥

ವಾತಪ್ರಕೋಪದಿಂದ ಹುಟ್ಟತಕ್ಕ ಹಿಂಸೆಗಳನ್ನು ಹೇಳುತ್ತಾನೆ—ಕೀಲುಗಳು ಮುದುರಿಕೊಳ್ಳುವುದು, ಕೀಲುಗಳು ಹಿಡಿದುಕೊಳ್ಳುವುದು, ಅವಯವಗಳಲ್ಲಿ ವಡತ, ಯಲುಬಿನಲ್ಲಿ ಕೀಲುಗಳಲ್ಲಿ ಸಹ ವಡತ, ರೋಮಾಂಚವಾಗುತ್ತಿರುವುದು, ನೋವನ್ನು ತಡೆಯಲಾರದೆ ಅಳುವುದು, ಕೈಗಳು, ಸೊಂಟ, ತಲೆ, ಇವುಗಳು ಹಿಡಿದುಕೊಳ್ಳುವುದು, ಹೆಳವನಾಗುವುದು, ಕುಂಟನಾಗುವುದು, ಒಂದು ಬಗೆಯ ಗುಜ್ಜಾರಿಯಾಗುವುದು, ಅವಯವಗಳೆಲ್ಲಾ ಶೋಷಿಸಿ ಒಣಗಿಹೋಗುವುದು, ನಿದ್ರೆಯಿಲ್ಲದೆ ಹೋಗುವುದು, ಗರ್ಭಿಣಿಯರಿಗೆ ಗರ್ಭಸ್ರಾವ ಪಾತಗಳಾಗುವುದು, ಪುರುಷರಿಗೆ ಶುಕ್ರನಾಶವಾಗಿ ಹೋಗುವುದು, ಸ್ತ್ರೀಯರಿಗೆ ರಜಸ್ಸು ನಿಂತು ಹೋಗುವುದು, ಪ್ಯೆನಡುಕ, ಶರೀರದಲ್ಲಿ ಸ್ಪರ್ಶಜ್ಞಾನವು ಪೂರಾ ನಾಶವಾಗಿ ಹೋಗುವುದು, ತಲೆ, ಮೂಗು, ಕಣ್ಣು, ಕೊರಳು, ಭುಜ ಇವುಗಳೆಲ್ಲಾ ವಕ್ರವಾಗಿ ವಿಕಾರವಾಗುವುದು ಅಂದರೆ ತಲೆಯಲ್ಲಿ ಕೂದಲು ಹುಟ್ಟದೆ ಪಟ್ಟದಲೆ ಬೀಳುವುದು, ತಲೆವಡತ, ಮೂಗು ಮೇಲಕ್ಕೆ ಎಳದುಹೋಗಿ ಅವಲಕ್ಷಣವಾಗುವುದು, ಕಂಠಸೊಟ್ಟನಾಗುವುದು ಇತ್ಯಾದಿ. ಹಲ್ಲು ಇರತ, ಕಿವಿಶೂಲೆ, ಮ್ಯೆಯ್ಯೆಲ್ಲಾ ನೋವು, ಆಯಾಸ, ಇವೆಲ್ಲಾ ವಾತಪ್ರಕೋಪವಾದ್ದರ ಲಕ್ಷಣಗಳು.

ಹೇತುಸ್ಥಾನವಿಶೇಷಾಚ್ಚಭವೇದ್ರೋಗವಿಶೇಷಕೃತ್ ॥ ೯ ॥
ತತ್ರಕೋಷ್ಠಾಶ್ರಿತೇದುಷ್ಟೇನಿಗ್ರಹೋಮೂತ್ರವರ್ಚಸೋಃ ॥
ಬ್ರಧ್ನಹೃದ್ರೋಗಗುಲ್ಮಾರ್ಶಃಪಾರ್ಶ್ವಶೂಲಂಚಮಾರುತೆ ॥ ೧೦ ॥

ಪ್ರಕುಪಿತವಾದ ವಾಯುವು ತಾನು ಇರತಕ್ಕ ಸ್ಥಾನವಿಶೇಷದಿಂದಲೂ ಮತ್ತು ಪ್ರಕೋಪಕಾರಣ ಪ್ರಭೇದದಿಂದಲೂ ಬೇರೆಬೇರೆ ರೋಗಗಳನ್ನು ಹುಟ್ಟಿಸುತ್ತದೆ. ಕೋಷ್ಠಗತವಾದ ವಾಯುವು ಪ್ರಕುಪಿತವಾಗಿ ಮಲಮೂತ್ರಗಳನ್ನು ತಡೆಯುತ್ತದೆ. ವೃಷಣವಡತ ಬರುವುದು, ಹೃದಯಶೂಲೆ, ವಾತಗುಲ್ಮ, ಮೂಲವ್ಯಾಧಿ, ಪಾರ್ಶ್ವಶೂಲೆ ಇವುಗಳನ್ನುಂಟುಮಾಡುತ್ತದೆ.

ಸರ್ವಾಂಗಕುಪಿತೇವಾತೇಗಾತ್ರಸ್ಫುರಣಭಂಜನಂ ॥
ವೇದನಾಭಿಃಪರೀತಶ್ಚಸ್ಫುಟಂತೀವಾಸ್ಯಸಂಧಯಃ ॥ ೧೧ ॥

ಸಮಗ್ರ ಅವಯವಗಳಲ್ಲಿಯೂ ಸಂಚಾರವಾಡುವ ವಾಯುವು ಪ್ರಕುಪಿತ ವಾದಲ್ಲಿ ಮೈಯೆಲ್ಲಾ ನಡರುವುದು, ಮೈಮುರಿದುಕೊಳ್ಳುವುದು, ಮೈಯ್ಯಲ್ಲೆಲ್ಲಾ ನೋವು, ಸಂಧಿಬಂಧಗಳೆಲ್ಲಾ ಒಡೆದುಹೋಗುವ ಹಾಗೆ ತೋರುವುದು, ಇವು ಗಳುಂಟಾಗುತ್ತವೆ.

ಗ್ರಹೋವಿಣ್ಮೂತ್ರವಾತಾನಾಂಶೂಲಾಧ್ಮಾನಾಶ್ಮಶರ್ಕರಾಃ ||
ಜಂಘೋರುತ್ರಿಕಪಾತಪೃಷ್ಠರೋಗಶೋಷೌಗುದೇಸ್ಥಿತೇ || ೧೨ ||
ರುಕ್ಪಾರ್ಶ್ವೋದರಹೃನ್ನಾಭೇಸ್ತೃಷ್ಣೋದ್ಗಾರವಿಸೂಚಿಕಾಃ ||
ಕಾಸಃಕಂಠಾಸ್ಯಶೋಷಶ್ಚಶ್ವಾಸಶ್ಚಾವಮಾಶಯಸ್ಥಿತೆ || ೧೩ ||

ಗುದಸ್ಥಾನಗತವಾದ ವಾಯುವು ಪ್ರಕುಪಿತವಾದರೆ ಮಲಮೂತ್ರಗಳು ಮತ್ತು ಅಪಾನವಾಯು ಇವು ತಡೆದುಹೋಗುವುದು, ಶೂಲೆ, ಹೊಟ್ಟೆಯುಬ್ಬರ, ಮೂತ್ರದಶ್ಮರದಲ್ಲಿ ಕಲ್ಲು ಬರುವುದು, ಮಳಕಾಲು, ತೊಡೆ, ಅಂಡು, ಕಾಲು, ಹಿಂಭಾಗ ಇವುಗಳಿಗೆ ಸಂಬಂಧಿಸಿದ ರೋಗಗಳು ಹುಟ್ಟುವುದು, ಇವುಗಳೆಲ್ಲಾ ಬತ್ತಿಹೋಗುವುದು, ಆಮಾಶಯಗತವಾದ ವಾಯುವು ಪ್ರಕುಪಿತವಾದಲ್ಲಿ ಪಾರ್ಶ್ವ ಗಳು, ಹೊಟ್ಟೆ, ಎದೆ, ನಾಭಿ ಇವುಗಳಲ್ಲೆಲ್ಲಾ ನೋವು, ಬಾಯಾರಿಕೆ, ತೇಗು, ವಿಸೂಚಿ ಅಂದರೆ ಭೇದಿ, ಕೆಮ್ಮು, ಗಂಟಲು ಮತ್ತು ಬಾಯಿ ಸಹ ಒಣಗು ವುದು, ಉಬ್ಬಸ ಇವುಗಳನ್ನು ಉಂಟುಮಾಡುತ್ತದೆ.

ಪಕ್ವಾಶಯಸ್ಥೋಂತ್ರಕೂಜಂಶೂಲಾಟೋಪೌಕರೋತಿಚ ||
ಕೃಚ್ಛ್ರಮೂತ್ರಪುರೀಷತ್ವಮಾನಾಹಂತ್ರಿಕವೇದನಾಂ || ೧೪ ||

ಪಕ್ವಾಶಯಗತವಾದ ವಾಯುವು ಪ್ರಕುಪಿತವಾದರೆ ಹೊಟ್ಟೆಯಲ್ಲಿ ಶಬ್ದ, ಹೊಟ್ಟೆಯಲ್ಲಿ ಶೂಲೆ, ಸಂಕಟ, ಮಲಮೂತ್ರಗಳು ಹೊರಡುವುದು ಕಷ್ಟವಾಗು ವುದು, ಹೊಟ್ಟೆಯುಬ್ಬರ, ತ್ರಿಕಪ್ರದೇಶದಲ್ಲಿ ಅಂದರೆ ಪೃಷ್ಠಭಾಗದಲ್ಲಿ ವೇದನೆ ಇವುಗಳನ್ನುಂಟುಮಾಡುತ್ತದೆ.

ಶ್ರೋತ್ರಾದಿಷ್ವಿಂದ್ರಿಯವಧಂಕುರ್ಯಾದ್ದುಷ್ಟಸ್ಸಮಾರಣಃ ||
ತ್ವಗ್ರೂಕ್ಷಾಸ್ಫುಟಿತಾಸುಪ್ತಾಕೃಶಾಕೃಷ್ಣಾಚತುದ್ಯತೆ || ೧೫ ||
ಆತನ್ಯತೇಸರಾಗಾಚಪರ್ವರುಕ್ತ್ವಗ್ಗತೇನಿಲೆ ||

ಕಣ್ಣು, ಕಿವಿ, ಮೊದಲಾದ ಇಂದ್ರಿಯಸ್ಥಾನಗತಗಳಾದ ವಾತಗಳು ಪ್ರಕು ಪಿತಗಳಾದಲ್ಲಿ ಇಂದ್ರಿಯಗಳನ್ನೇ ಹಾಳುಮಾಡುತ್ತದೆ. ತ್ವಗ್ಗತವಾದ ವಾಯು ವು ಪ್ರಕುಪಿತವಾದರೆ ಚರ್ಮವು ಒರಟಾಗುವುದು, ಅಲ್ಲಲ್ಲಿ ಬಿರುಬಿಟ್ಟಂತೆ ಕಾಣು ವುದು, ಸ್ಪರ್ಶಜ್ಞಾನ ಹೋಗುವುದು, ಕೃಶನಾಗುವುದು, ಚರ್ಮವು ಕಪ್ಪಗಾಗು ವುದು, ಯಾವಾಗ್ಯೂ ಚರ್ಮಕ್ಕೆ ವ್ಯಥೆಯಾಗುತ್ತಿರುವುದು, ಚರ್ಮವು ಅಲ್ಲಲ್ಲಿ ಕೆಂಪಗಾಗುವುದು, ಕಾಲುಗಳಲ್ಲಿ ವ್ಯಥೆಯಾಗುವುದು ಈ ಹಿಂಸೆಗಳನ್ನುಂಟು ಮಾಡುತ್ತದೆ.

**ರುಜಸ್ತೀವ್ರಾಸ್ಸಸಂತಾಪಾವೈವರ್ಣ್ಯಂಕೃಶತಾರುಚಿಃ ॥ ೧೬ ॥**
**ಗಾತ್ರೇಚಾರೂಂಷಿಭುಕ್ತಸ್ಯಸ್ತಂಭಶ್ಚಾಸೃಗ್ಗತೇನಿಲೇ ॥**

ರಕ್ತಗತವಾದ ವಾಯುವು ಪ್ರಕುಪಿತವಾದರೆ ಮೈಯ್ಯುರಿ ಮತ್ತು ಮೈಯ್ಯೆಲ್ಲಾ ತಡೆಯಲಾರದಷ್ಟು ನೋವು, ಮೈಬಣ್ಣ ಕೆಟ್ಟುಹೋಗುವುದು, ಕೃಶನಾಗುವುದು, ಅರುಚಿ, ಮೈಯ್ಯೆಲ್ಲೆಲ್ಲಾ ವ್ರಣಗಳು, ಊಟಮಾಡಿದರೆ ಅಂದರೆ ಆಹಾರ ಹೊಟ್ಟೆಗೆ ಬಿದ್ದರೆ ಶರೀರವೆಲ್ಲಾ ಕೊಂಚ ಹೊತ್ತು ಯಾವ ವಿಧವಾದ ಚಲನವೂ ಇಲ್ಲದೆ ಮಂದವಾಗಿರುವುದು, ಇವು ಲಕ್ಷಣಗಳು.

**ಗುರ್ವಂಗಂತುದ್ಯತೇತ್ಯರ್ಥಂದಂಡಮುಷ್ಟಿಹತಂಯಥಾ ॥ ೧೭ ॥**
**ಸರುಕ್‌ಶ್ರಮಿತಮತ್ಯರ್ಥಂಮಾಂಸಮೇದೋಗತೇನಿಲೆ ॥**

ಮಾಂಸ ಮತ್ತು ಮೇದೋಧಾತುಗತವಾದ ವಾತವು ಪ್ರಕುಪಿತವಾದರೆ ಮೈಭಾರ, ಗುದ್ದಿದಂತೆಯೂ, ಕೋಲಿನಿಂದ ಹೊಡೆದಂತೆಯೂ ಮೈಯ್ಯೆಲ್ಲಾ ನೋವಾಗುವುದು, ಬಹಳ ಆಯಾಸವಾಗಿ ಯಾವ ವಿಧವಾದ ಕೆಲಸಮಾಡುವುದಕ್ಕೂ ಕೂಡದೆಂತಾಗುವುದು, ಇವು ಲಕ್ಷಣಗಳು.

**ಭೇದೋಸ್ಥಿಪರ್ವಣಾಂಸಂಧಿಶೂಲಂಮಾಂಸಬಲಕ್ಷಯಃ ॥ ೧೮ ॥**
**ಅಸ್ವಪ್ನಸ್ಸಂತತಾರುಕ್ಚಮಜ್ಜಾಸ್ಥಿಕುಪಿತೇನಿಲೇ ॥**

ಮಜ್ಜ ಮತ್ತು ಅಸ್ಥಿಧಾತುಗತವಾದ ವಾಯುವು ಪ್ರಕುಪಿತವಾದರೆ ಎಲುಬುಗಳಲ್ಲಿ ಮತ್ತು ಗೆಣ್ಣುಗಳಲ್ಲಿ ಸಹ ಒಡತ, ಶರೀರ ಸಂಧಿಗಳಲ್ಲಿ ಶೂಲೆ, ದೇಹದಲ್ಲಿ ಮಾಂಸವು ಕ್ಷಯಿಸುತ್ತಹೋಗುವುದಲ್ಲದೆ ದೇಹಬಲವು ಸಹ ಕಡಮೆಯಾಗುತ್ತ ಹೋಗುವುದು, ಶುದ್ಧಾಂಗವಾಗಿ ನಿದ್ರೆಯೇ ಇಲ್ಲವಾಗುವುದು, ಯಾವಾಗ್ಲೂ ಮೈನೊಯ್ಯುತ್ತಲೇ ಇರುವುದು, ಇವು ಲಕ್ಷಣಗಳು.

**ಕ್ಷಿಪ್ರಂಮುಂಚತಿಬಧ್ನಾತಿಶುಕ್ರಂಗರ್ಭಮಥಾಪಿವಾ ॥ ೧೯ ॥**
**ವಿಕೃತಿಂಜನಯೇಚ್ಚಾಪಿಶುಕ್ರಸ್ಥಃಕುಪಿತೋನಿಲಃ ॥**

ಶುಕ್ರಸ್ಥಾನಗತವಾದ ವಾಯುವು ಪ್ರಕುಪಿತವಾದರೆ ಶುಕ್ರಸ್ರಾವವಾಗುವುದೂ, ಗರ್ಭಸ್ರಾವವಾಗುವುದು, ಈ ರೀತಿ ಮಾಡಬಹುದು, ಅಥವಾ ಇದಕ್ಕೆ ಪ್ರತಿಕೂಲವಾಗಿ ಎಷ್ಟು ಪ್ರಯತ್ನಪಟ್ಟರೂ ಶುಕ್ರವು ಹೊರಕ್ಕೆ ಹೊರಡುವುದಕ್ಕೇ ಇಲ್ಲ. ಸರಿಯಾದ ಕಾಲಬಂದರೂ ಗರ್ಭವು ಪ್ರಸವವೇ ಆಗಲಿಕ್ಕಿಲ್ಲ, ಹೀಗಾದರೂ ಮಾಡಬಹುದು, ಮತ್ತು ಶುಕ್ರವನ್ನು ವಿಕಾರವನ್ನೇ ಮಾಡಿಬಿಡಬಹುದು, ಅಂದರೆ ಪ್ರಜೋತ್ಪಾದನಾಸಮರ್ಥವನ್ನಾಗಿಯಾಗಲಿ, ಬೇರೆ ಯಾವದಾದರೂ ರೀತಿ ವಿಕಾರವನ್ನಾಗಲಿ ಮಾಡುತ್ತದೆ.

ಕುರ್ಯಾಚ್ಛಿರಾಗತಶ್ಶೂಲಂಶಿರಾಕುಂಚನಪೂರಣಂ ॥ ೨೦ ॥
ಸಬಾಹ್ಯಾಭ್ಯಂತರಾಯಾಮಂಖಲ್ಲೀಂಕೌಬ್ಜ್ಯಮಥಾಪಿವಾ ॥

ಸಿರಾಗತವಾದ ವಾಯುವು ಪ್ರಕುಪಿತವಾಗಿ, ನರಗಳ ವಡತ, ನರಗಳು ಕುಗ್ಗಿಹಿಡಿದುಕೊಳ್ಳುವುದು, ನರಗಳು ಉಬ್ಬುವುದು, ಮನುಷ್ಯನನ್ನು ಹೊರ ಮುಖವಾಗಿ ಬಿಲ್ಲುಬಗ್ಗುವಂತೆ ಬಗ್ಗಿಸುವುದು, ಇದಕ್ಕೆ ಪ್ರತಿಯಾಗಿ ಒಳಮುಖ ವಾಗಿ ಬಗ್ಗಿಸುವುದು, ಮನುಷ್ಯನೇ ಗುಜ್ಜಾರಿಯಾಗಿ ಕುಗ್ಗಿಹೋಗುವುದು, ಕೈ ಕಾಲುಗಳೆಲ್ಲಾ ಅಷ್ಟಾವಕ್ರವಾಗಿ ಹೋಗುವುದು ಈ ರೀತಿ ತೊಂದರೆ ಪಡಿಸುತ್ತದೆ.

ಸರ್ವಾಂಗೈಕಾಂಗರೋಗಾಂಶ್ಚಕುರ್ಯಾತ್ಸ್ನಾಯುಗತೋನಿಲಃ॥೨೧
ಹಂತಿಸಂಧಿಗತಸ್ಸಂಧೀನ್ ಶೂಲಾಟೋಪೌಕರೋತಿಚ ॥

ಸ್ನಾಯುಗತವಾದ ವಾಯುವು ಪ್ರಕುಪಿತವಾದರೆ—ಸರ್ವಾಂಗಗಳಲ್ಲಿಯೂ ವಡತ, ಅಥವಾ ಒಂದೇ ಅವಯವದಲ್ಲಿ ವಡತ, ಇವುಗಳಲ್ಲಿ ಯಾವದನ್ನಾದರೂ ಉಂಟುಮಾಡಬಹುದು. ಅವಯವ ಸಂಧಿಗತವಾದ ವಾಯುವು ಪ್ರಕುಪಿತ ವಾದರೆ—ಸಂಧಿಗಳಲ್ಲಿ ವಡತ, ಬಾಕು, ಇವುಗಳನ್ನು ಹುಟ್ಟಿಸಿ ಸಂಧಿಗಳನ್ನೇ ಹಾಳು ಮಾಡಿಬಿಡುತ್ತದೆ.

ಪ್ರಾಣೇಪಿತ್ತಾವೃತೆಛರ್ದಿರ್ದಾಹಶ್ಚೈವೋಪಜಾಯತೆ ॥ ೨೨ ॥
ದೌರ್ಬಲ್ಯಂಸದನಂತಂದ್ರಾವೈರಸ್ಯಂಚಕಫಾವೃತೆ ॥
ಉದಾನೇಪಿತ್ತಯುಕ್ತೇತುದಾಹೊಮೂರ್ಛಾಭ್ರಮಃಕ್ಲಮಃ॥೨೩
ಅಸ್ವೇದಹರ್ಷೌಮಂದೋಗ್ನಿಶ್ಶೀತತಾಚಕಫಾವೃತೆ ॥
ಸ್ವೇದದಾಹೌಷ್ಣ್ಯಮೂರ್ಛಾಸ್ಸ್ಯುಸ್ಸಮಾನೇಪಿತ್ತಸಂವೃತೆ ॥ ೨೪ ॥
ಕಫೇನಸಕ್ತೇವಿಣ್ಮೂತ್ರೆಗಾತ್ರಹರ್ಷಶ್ಚಜಾಯತೆ ॥
ಅಪಾನೇಪಿತ್ತಯುಕ್ತೇತುದಾಹೌಷ್ಣ್ಯಂರಕ್ತಮೂತ್ರತಾ ॥ ೨೫ ॥
ಅಧಃಕಾಯೇಗುರುತ್ವಂಚಶೀತತಾಚಕಫಾವೃತೆ ॥
ವ್ಯಾನೇಪಿತ್ತಾವೃತೇದಾಹೊಗಾತ್ರವಿಕ್ಷೇಪಣಂಕ್ಲಮಃ ॥ ೨೬ ॥
ಸ್ತಂಭನೋದಂಡಕಶ್ಚಾಪಿಶೂಲಶೋಥೌಕಫಾವೃತೆ ॥

ಶರೀರದಲ್ಲಿರುವ ಪಿತ್ತದಿಂದ ಯುಕ್ತವಾದ ಪ್ರಾಣವಾಯುವು ದೂಷಿತ ವಾದರೆ—ವಮನ ಮತ್ತು ವೈಯ್ಯುರಿ ಸಹ ಹುಟ್ಟುತ್ತದೆ. ಪ್ರಾಣವಾಯುವೇ ಕಫದೊಡನೆ ಸೇರಿ ಪ್ರಕುಪಿತವಾದರೆ—ಶರೀರದಲ್ಲಿ ಬಲಕಡಮೆಯಾಗುವದು, ಅಗ್ನಿಮಾಂದ್ಯ, ಆಕಳಿಕೆ, ಬಾಯಿಗೆ ಯಾವ ರಸವೂ ತೋರದೆ ಹೋಗುವುದು, ಈ ವಿಕಾರಗಳು ಉಂಟಾಗುತ್ತವೆ. ಉದಾನವಾಯುವು ಪಿತ್ತಸೊಡನೆ ಸೇರಿ ದುಷ್ಟ

ವಾದರೆ—ಮೈಯ್ಯುರಿ, ಮೂರ್ಛೆ, ಬುದ್ಧಿಭ್ರಮ, ಆಯಾಸ ಇವುಗಳುಂಟಾಗುತ್ತವೆ. ಉದಾನವಾಯುವೇ ಕಫದೊಡನೆ ಕೂಡಿ ಪ್ರಕುಪಿತವಾದರೆ ಬೆವರು ಬಾರದಿರುವದು, ರೋಮಾಂಚ, ಅಗ್ನಿಮಾಂದ್ಯ, ಶರೀರದಲ್ಲಿ ಶೈತ್ಯ ಇವುಗಳನ್ನು ಹುಟ್ಟಿಸುತ್ತದೆ. ಸಮಾನವಾಯುವು ಪಿತ್ತದಿಂದ ಯುಕ್ತವಾಗಿ ಪ್ರಕುಪಿತವಾದರೆ—ಯಾವಾಗ್ಯೂ ಮೈಬೆವರುತ್ತಿರುವುದು, ಮೈಯ್ಯುರಿ, ಶರೀರದಲ್ಲಿ ಔಷ್ಣ್ಯ, ಮೂರ್ಛೆ ಇವುಗಳುಂಟಾಗುತ್ತವೆ. ಸಮಾನವಾಯುವೇ ಕಫವ್ಯಾಪ್ತವಾಗಿ ದುಷ್ಟವಾದರೆ—ಮಲಮೂತ್ರಗಳು ಬದ್ಧವಾಗುವುದಲ್ಲದೆ ರೋಮಾಂಚವಾಗುತ್ತದೆ. ಅಪಾನವಾಯುವು ಪಿತ್ತದಿಂದ ಯುಕ್ತವಾಗಿ ದುಷ್ಟವಾದರೆ—ಮೈಯ್ಯುರಿ, ಶರೀರದಲ್ಲಿ ಉಷ್ಣತೆ, ಮೂತ್ರವು ಕೆಂಪಾಗುವುದು ಈ ರೀತಿಯಾಗುತ್ತದೆ. ಅಪಾನವಾಯುವೇ ಕಫಯುಕ್ತವಾಗಿ ದುಷ್ಟವಾದರೆ ಶರೀರದ ಅಧೋಭಾಗವು ಭಾರವಾಗುವುದು, ಶರೀರದ ಕೆಳಭಾಗವು ಶೀತವಾಗಿರುವುದು. ವ್ಯಾನವಾಯುವು ಪಿತ್ತಯುಕ್ತವಾಗಿ ಕುಪಿತವಾದರೆ—ಮೈಯ್ಯುರಿ, ಮೈನಡುಕ, ಆಯಾಸ ಇವುಗಳುಂಟಾಗುತ್ತವೆ. ವ್ಯಾನವಾಯುವೇ ಕಫಯುಕ್ತವಾಗಿ ದುಷ್ಟವಾದರೆ—ಯಾವ ಕೆಲಸವನ್ನೂ ಮಾಡುವುದಕ್ಕಾಗದ ಹಾಗೆ ಶರೀರವು ಸ್ತಬ್ಧವಾಗುವುದು, ಮತ್ತು ದಂಡದ ಹಾಗೆ ಬಗ್ಗದೆ ನೆಟ್ಟಗಿರುವುದು, ಮೈವಡತ, ಮೈಯ್ಯೂದುವುದು, ಇವುಗಳು ಲಕ್ಷಣಗಳು.

ಯದಾತುಧಮನೀಸ್ಸರ್ವಾಃಕುಪಿತೋಭ್ಯೇತಿಮಾರುತಃ || ೨೭ ||
ತದಾಕ್ಷಿಪತ್ಯಾಶುಮುಹುರ್ಮುಹುರ್ದೇಹಂಮುಹುಶ್ಚರಃ ||
ಮುಹುರ್ಮುಹುಶ್ಚಾಕ್ಷೇಪಣಾದಾಕ್ಷೇಪಕಇತಿಸ್ಮೃತಃ || ೨೮ ||

ಶರೀರದ ಎಲ್ಲಾ ನಾಡಿಗಳಲ್ಲಿಯೂ ಪ್ರಕುಪಿತವಾದ ವಾಯುವು ಪ್ರವೇಶಿಸಿದಲ್ಲಿ ಶರೀರವನ್ನು ಬಾರಿಬಾರಿಗೂ ಅದುರಿಸುತ್ತದೆ. ಪದೇ ಪದೇ ಮೈಯ್ಯನ್ನೂ "ಆಕ್ಷೇಪಣಾತ್" ಎಂದರೆ ನಡುಗಿಸುವುದರಿಂದ ಈ ವಾಯುವಿಗೆ ಆಕ್ಷೇಪಕವೆಂಬ ಹೆಸರು.

ಕ್ರುದ್ಧಸ್ಸ್ವೈಃಕೋಪನೈರ್ವಾಯುಃಸ್ಥಾನಾದೂರ್ಧ್ವಂಪ್ರಪದ್ಯತೇ ||
ಪೀಡಯನ್ ಹೃದಯಂಗತ್ವಾಶಿರಶ್ಯಂಖೌಚಪೀಡಯನ್ || ೨೯ ||
ಧನುರ್ವನ್ನಾಮಯೇದ್ಗಾತ್ರಾಣ್ಯಾಕ್ಷಿಪೇನ್ಮೋಹಯೇತ್ತದಾ ||
ಸಕೃಚ್ಛ್ರಾದುಚ್ಛ್ವಸೇಚ್ಚಾಪಿಸ್ತಬ್ಧಾಕ್ಷೋಥನಿಮೀಲಕಃ || ೩೦ ||
ಕಪೋತಇವಕೂಜೇಚ್ಚನಿಸ್ಸಂಜ್ಞಸ್ಸೋಪತಂತ್ರಕಃ ||
ದೃಷ್ಟಿಂಸಂಸ್ತಭ್ಯಸಂಜ್ಞಾಂಚಹತ್ವಾಕಂಠೇನಕೂಜತಿ || ೩೦ ||
ಹೃದಿಮುಕ್ತೇನರಸ್ಸ್ವಾಸ್ಥ್ಯಂಯಾತಿಮೋಹಂವೃತೇಪುನಃ ||
ವಾಯುನಾದಾರುಣಂಪ್ರಾಹುರೇಕೇತದಪತಾನಕಂ ||೩೧ ||

ಸ್ವಪ್ರಕೋಪಕಾರಣಗಳಿಂದ ಕುಪಿತವಾದ ವಾಯುವು ಸ್ವಸ್ಥಾನದಿಂದಲೂರ್ಧ್ವಮುಖವಾಗಿ ಹೊರಟು ಹೃದಯವನ್ನು ಪೀಡಿಸಿ ಇನ್ನೂ ಮೇಲಕ್ಕೆ ಹೋಗಿ ಶಿರಸ್ಸು, ಶಂಖ ಎಂದರೆ ಕಣ್ಣು ಸೋಗೆಯ ಹತ್ತರ ನೋವನ್ನುಂಟುಮಾಡಿ ಮನುಷ್ಯನ ಶರೀರವನ್ನು ಧನುಸ್ಸಿನ ಹಾಗೆ ಬಗ್ಗಿಸುತ್ತದೆ, ಅದುರಿಸುತ್ತದೆ, ಮೂರ್ಛೆಯನ್ನುಂಟುಮಾಡುತ್ತದೆ; ಈ ರೀತಿ ಆಗಿ ರೋಗಿಯು ಬಹಳ ಹೊತ್ತಿಗೆ ಉಸಿರು ಬಿಡುತ್ತಾನೆ, ಕಣ್ಣುಗಳು ಸ್ತಬ್ಧವಾಗಿಯೇ ಇರುತ್ತವೆ, ಇದಕ್ಕೆ ನಿಮಿಲಕ ಎಂದು ಹೆಸರು. ಜ್ಞಾನವಿಲ್ಲದೆ ಗಂಟಲಿನಲ್ಲಿ ಪಾರಿವಾಳಹಕ್ಕಿಯ ಹಾಗೆ ಕೂಗುತ್ತಲಿರುವುದು ಅಪತಂತ್ರಕವೆಂಬ ಹೆಸರು. ಕಣ್ಣು ನೆಟ್ಟುಹೋಗಿ ಜ್ಞಾನವಿಲ್ಲದೆ ಗಂಟಲಿನಲ್ಲಿ ಕೂಗುತ್ತಿರುವುದು, ವಾಯುವಿನ ವೇಗವು ಹೃದಯದಲ್ಲಿ ಕಡಮೆಯಾದರೆ ಮನುಷ್ಯನು ಸ್ವಸ್ಥವಾಗುವುದು, ವಾಯುವೇಗ ಶುರುವಾದರೆ ಮತ್ತೆ ಜ್ಞಾನ ತಪ್ಪುವುದು, ಈ ರೋಗಕ್ಕೆ ಅಪತಾನಕವೆಂದು ಹೆಸರು.

ಕಫಾನ್ವಿತೋಭೃಶಂವಾಯುಸ್ತಾಸ್ವೇವಯದಿತಿಷ್ಠತಿ ॥
ದಂಡವತ್‌ಸ್ತಂಭಯೇದ್ದೇಹಂಸತುದಂಡಾಪತಾನಕಃ ॥ ೩೩ ॥

ಪ್ರಕುಪಿತವಾದ ವಾಯುವು ಕಫದೊಡನೆ ಯುಕ್ತವಾಗಿ ಧಮನಿಗಳಲ್ಲಿಯೇ ನಿಂತು ಶರೀರವನ್ನು ಯಾವ ಕಡೆಗೂ ಬಗ್ಗದಂತೆ ದಂಡದಹಾಗೆ ನೆಟ್ಟಗೇನೇ ನಿಲ್ಲಿಸಿಬಿಟ್ಟರೆ ದಂಡಾಪತಾನಕ ಎಂಬ ಹೆಸರು.

ಧನುಸ್ತುಲ್ಯಂನಮೇದ್ಯಸ್ತುಸಧನುಸ್ತಂಭಸಂಜ್ಞಕಃ ॥

ಪ್ರಕುಪಿತವಾದ ವಾಯುವು ಧಮನಿಗಳಲ್ಲಿ ಸೇರಿ ಶರೀರವನ್ನು ಬಿಲ್ಲಿನಂತೆ ಬಗ್ಗಿಸುತ್ತಿದ್ದರೆ ಧನುಸ್ತಂಭವೆಂದು ಹೆಸರು.

ಅಂಗುಲೀಗುಲ್ಫಜಠರಹೃದ್ವಕ್ಷೋಗಳಸಂಶ್ರಿತಃ ॥ ೩೪ ॥
ಸ್ನಾಯುಪ್ರತಾನಮನಿಲೋಯದಾಕ್ಷಿಪತಿವೇಗವಾನ್ ॥
ವಿಷ್ಟಬ್ಧಾಕ್ಷಸ್ತಬ್ಧಹನುರ್ಭಗ್ನಪಾರ್ಶ್ವಃಕಫಂವಮನ್ ॥ ೩೫ ॥
ಅಭ್ಯಂತರಂಧನುರಿವಯದಾನಮತಿಮಾನವಂ ॥
ತದಾಸ್ಯಾಭ್ಯಂತರಾಯಾಮಂಕುರುತೇಮಾರುತೋಬಲೀ ॥ ೩೬ ॥
ಬಾಹ್ಯಸ್ನಾಯುಪ್ರತಾನಸ್ಥೋಬಾಹ್ಯಾಯಾಮಂಕರೋತಿಚ ॥
ತಮಸಾಧ್ಯಂಬುಧಾಃಪ್ರಾಹುರ್ವಕ್ಷಃಕಟ್ಯೂರುಭಂಜನಂ ॥ ೩೭ ॥

ಬೆರಳುಗಳು, ಕಾಲಹರಡು, ಹೊಟ್ಟೆ, ಹೃದಯ, ಎದೆ, ಈ ಸ್ಥಳಗಳಲ್ಲಿರುವ ವಾಯುವು ಪ್ರಕುಪಿತವಾಗಿ ಆಯಾಯ ಸ್ಥಾನಗಳಲ್ಲಿರುವ ನರಗಳನ್ನು ವೇಗವಾಗಿ ಅದುರಿಸಿದರೆ ಕಣ್ಣು ಮುಚ್ಚಿಹೋಗುತ್ತದೆ, ಗದ್ದವು ಅಲ್ಲಾಡದಂತೆ ಹಾಗೇ ನಿಲ್ಲು

ತ್ತದೆ, ಪಾರ್ಶ್ವಗಳು ಮುಂದು ಹೋದ ಹಾಗೆ ತೋರುತ್ತವೆ, ಕಫವು ಬಾಯಿ ಯಿಂದ ನೊದಲೆಯ ಹಾಗೆ ಹೊರಡುತ್ತಿರುತ್ತದೆ, ಈ ರೀತಿಯಾದ ವಿಕಾರಗಳ ನ್ನೆಲ್ಲಾ ಉಂಟುಮಾಡಿ ಮನುಷ್ಯನನ್ನು ಒಳಮುಖವಾಗಿ ಬಗ್ಗಿಸಿದರೆ ಅಭ್ಯಂತರಾ ಯಾಮವೆಂದು ಹೆಸರು. ಹೀಗೆಯೇ ಹೊರಭಾಗದ ನರಗಳನ್ನು ಆದುರಿಸಿ ಶರೀರವನ್ನು ಹೊರಕ್ಕೆ ಬಗ್ಗಿಸಿದರೆ ಅದಕ್ಕೆ ಬಹಿರಾಯಾಮವೆಂದು ಹೆಸರು, ಇದು ಅಸಾಧ್ಯವಾದ ರೋಗ, ಇದರಿಂದ ಸೊಂಟ, ಎದೆ, ತೊಡೆ ಇವುಗಳೆಲ್ಲಾ ಮುರಿಯುತ್ತಿರುತ್ತವೆ.

**ಕಫಪಿತ್ತಾನ್ವಿತೋವಾಯುರ್ವಾಯುರೇವಚಕೇವಲಃ ||**
**ಕುರ್ಯಾದಾಕ್ಷೇಪಕಂತ್ವನ್ಯಂಚತುರ್ಥಮಭಿಘಾತಜಂ || ೩೮ ||**

ಅಭಿಘಾತವೆಂದರೆ ಪೆಟ್ಟು ಮೊದಲಾದ ಆಗಂತುಕ ಕಾರಣಗಳಿಂದ ಹುಟ್ಟುವ ನಾಲ್ಕನೆಯದೊಂದು ಆಕ್ಷೇಪಕವೆಂಬ ವಾತರೋಗವುಂಟು. ಕಫ ಮತ್ತು ಪಿತ್ತ ಗಳಿಂದ ಯುಕ್ತವಾದ ವಾಯು ಅಂದರೆ ಕುಪಿತಗಳಾದ ತ್ರಿದೋಷಗಳು ಆಕ್ಷೇಪಕ ವಾತವನ್ನು ಹುಟ್ಟಿಸಬಹುದು, ಅಥವಾ ಕೇವಲ ವಾಯು ಒಂದೇ ಆದರೂ ಹುಟ್ಟಿಸಬಹುದು. ಕೆಲವರು ಈ ಶ್ಲೋಕಕ್ಕೆ ಕಫಯುಕ್ತವಾದ ವಾಯುವಿನಿಂದ ಹುಟ್ಟತಕ್ಕ ಆಕ್ಷೇಪಕವಾತ ಒಂದು, ಪಿತ್ತಯುಕ್ತವಾದ ವಾಯುವಿನಿಂದ ಹುಟ್ಟ ತಕ್ಕ ಆಕ್ಷೇಪಕವಾತ ಒಂದು, ಕೇವಲ ವಾಯುವಿನಿಂದಲೇ ಹುಟ್ಟತಕ್ಕ ಆಕ್ಷೇಪಕ ವಾತ ಒಂದು, ಅಭಿಘಾತದಿಂದ ಹುಟ್ಟತಕ್ಕ ಆಗಂತುಕವಾದ ಆಕ್ಷೇಪಕವಾತ ಒಂದು, ಈ ರೀತಿಯಾಗಿ ಆಕ್ಷೇಪಕವಾಯುವು ನಾಲ್ಕು ವಿಧವೆಂದು ಅರ್ಥ ಮಾಡುತ್ತಾರೆ.

**ಗರ್ಭಪಾತನಿಮಿತ್ತಶ್ಚ ಶೋಣಿತಾತಿಸ್ರವಾಚ್ಚಯಃ ||**
**ಅಭಿಘಾತನಿಮಿತ್ತಶ್ಚ ನಸಿದ್ಧ್ಯತ್ಯಪತಾನಕಃ || ೩೯ ||**

ಗರ್ಭಪಾತರೂಪವಾದ ಆಗಂತುಕ ಕಾರಣದಿಂದ ಹುಟ್ಟುವ ಅಪತಾನಕ ವೆಂಬ ವಾತರೋಗವೂ, ದೇಹದಿಂದ ಅತಿಯಾಗಿ ರಕ್ತವು ಗರ್ಭಪಾತಾದಿಕಾರಣ ಗಳಿಂದಲೂ, ಬೇರೆ ಕಾರಣಾಂತರಗಳಿಂದಲೂ ಹೋಗೋಣದರಿಂದ ಹುಟ್ಟುವ ಅಪತಾನಕವೆಂಬ ವಾತರೋಗವೂ, ಯಾವುದಾದರೂ ಬಲವಾದ ಪೆಟ್ಟು ಬೀಳೋಣ ದರಿಂದ ಹುಟ್ಟುವ ಅಪತಾನಕವೆಂಬ ವಾತರೋಗವೂ ಅಸಾಧ್ಯವೆಂದೇ ತಾತ್ಪರ್ಯ.

**ಗೃಹೀತ್ವಾರ್ಧಂತನೋರ್ವಾಯುಃ ಶಿರಾಸ್ನಾಯೂರ್ವಿಶೋಷ್ಯಚ ||**
**ಪಕ್ಷಮನ್ಯತರಂಹಂತಿಸಂಧಿಬಂಧಾನ್ವಿಮೋಕ್ಷಯನ್ || ೪೦ ||**
**ಕೃತ್ಸ್ನೋರ್ಧಕಾಯಸ್ತಸ್ಯಸ್ಯಾದಕರ್ಮಣ್ಯೋವಿಚೇತನಃ ||**

ಏಕಾಂಗರೋಗಂತಂಕೇಚಿದನ್ಯೇಪಕ್ಷವಧಂವಿದುಃ ॥ ೪೧ ॥
ಸರ್ವಾಂಗರೋಗಸ್ತದ್ವಚ್ಚ ಸರ್ವಕಾಯಾಶ್ರಿತೇನಿಲೇ ॥

ಶರೀರದ ಅರ್ಧಭಾಗದಲ್ಲಿರುವ ನರಗಳನ್ನೆಲ್ಲಾ ವಾಯುವು ಆಕ್ರಮಿಸಿಕೊಂಡು ಶೋಷಿಸಿ ಹೋಗುವಂತೆ ಮಾಡಿ ಆ ಭಾಗಕ್ಕೆ ಶೇರಿದ ಕೀಲುಗಳನ್ನೆಲ್ಲಾ ಸಡಿಲಹುಟ್ಟಿಸಿ ಆ ಭಾಗವು ಸ್ವಾಧೀನವಿಲ್ಲದಂತೆಯೇ ಮಾಡಿಬಿಡುತ್ತದೆ. ಹೀಗಾದ ಮೇಲೆ ಆ ಭಾಗವು ಯಾವ ಕೆಲಸವೂ ಮಾಡಲು ಉಪಯೋಗಕ್ಕೆ ಬಾರದೆ—ಸ್ಪರ್ಶಜ್ಞಾನವೂ ಹೋಗಿ ಬಿಡುತ್ತದೆ, ಇದಕ್ಕೆ ಏಕಾಂಗರೋಗವೆಂಬದಾಗಿಯೂ ಕೆಲವರು ಪಕ್ಷವಧವೆಂಬದಾಗಿಯೂ ಹೇಳುತ್ತಾರೆ. ಮೇಲೆ ಹೇಳಿದಂತೆ ವಾತದೋಷದಿಂದ ಅವಯುವವೆಲ್ಲವೂ (ಸರ್ವಾಂಗವೂ) ಕೆಲಸಕ್ಕೆ ಬಾರದಂತಾಗಿ ಹೋದಲ್ಲಿ ಸರ್ವಾಂಗವಾತವೆಂದು ಹೇಳುತ್ತಾರೆ.

ದಾಹಸಂತಾಪಮೂರ್ಛಾಸ್ಯುರ್ವಾಯೌಪಿತ್ತಸಮನ್ವಿತೆ ॥ ೪೨ ॥
ಶೈತ್ಯಶೋಥಗುರುತ್ವಾನಿತಸ್ಮಿನ್ನೇವಕಫಾನ್ವಿತೆ ॥
ಶುದ್ಧವಾತಹತಂಪಕ್ಷಂಕೃಚ್ಛ್ರಸಾಧ್ಯತಮಂವಿದುಃ ॥ ೪೩ ॥
ಸಾಧ್ಯಮನ್ಯೇನಸಂಯುಕ್ತಂಅಸಾಧ್ಯಂಕ್ಷಯಹೇತುಕಂ ॥

ಪ್ರಕುಪಿತವಾದ ವಾಯುವು ಪಿತ್ತದೊಡನೆ ಕೂಡಿಕೊಂಡು ವಾತರೋಗವನ್ನು ಹುಟ್ಟಿಸಿದಲ್ಲಿ ಮೈಉರಿ, ಸಂಕಟ, ಮೂರ್ಛೆ ಇವುಗಳುಂಟಾಗುತ್ತವೆ. ಪ್ರಕುಪಿತವಾದ ವಾತದ ಜೊತೆಗೆ ಶ್ಲೇಷ್ಮವು ಶೇರಿ ರೋಗವನ್ನುಂಟುಮಾಡಿದಲ್ಲಿ ಮೈಯು ಯಾವಾಗ್ಯೂ ತಣ್ಣಗಿರುವುದು. ಮೈನೋವಿನ ಜೊತೆಗೆ ಮೈ ಬಾಕು ಸಹ ಇರುವುದು, ಮೈಭಾರವಿರುವುದು, ಈ ರೀತಿ ಇರುತ್ತವೆ. ಪಕ್ಷವಧ (ಪಾರ್ಶ್ವವಾಯು) ರೋಗದಲ್ಲಿ ಕೇವಲ ವಾತವು ಮಾತ್ರವೇ ಕಾರಣವಾಗಿದ್ದಲ್ಲಿ ಸಾಧ್ಯವಾಗುವುದು ಕಷ್ಟವಾಗುತ್ತದೆ. ಬೇರೇ ದೋಷಗಳಿಂದ ಸಮನ್ವಿತವಾದ ವಾಯುವು ಪಕ್ಷವಧಕ್ಕೆ ಕಾರಣವಾಗಿದ್ದಲ್ಲಿ ಸಾಧ್ಯವೆಂದು ತಿಳಿಯಬೇಕು. ದೇಹವು ಕ್ಷಯಿಸಿ ಆದರಿಂದ ಪಕ್ಷವಧವು ಉತ್ಪನ್ನವಾಗಿದ್ದಲ್ಲಿ ಅಸಾಧ್ಯವೆಂಬದಾಗಿಯೇ ತಿಳಿಯಬೇಕು.

ಉಚ್ಚೈರ್ವ್ಯಾಹರತೋತ್ಯರ್ಥಂಖಾದತಃಕಠಿನಾನಿವಾ ॥ ೪೪ ॥
ಹಸತೋಜೃಂಭತೋವಾಪಿಭಾರಾದ್ವಿಷಮಶಾಯಿನಃ ॥
ಶಿರೋನಾಸೌಷ್ಠಚಿಬುಕಲಲಾಟೇಕ್ಷಣಸಂಧಿಗಃ ॥ ೪೫ ॥
ಅರ್ದಯತ್ಯನಿಲೋವಕ್ತ್ರಮರ್ದಿತಂಜನಯತ್ಯತಃ ॥
ವಕ್ರೀಭವತಿವಕ್ತ್ರಾರ್ಧಂಗ್ರೀವಾಚಾಪ್ಯಪವರ್ತತೆ ॥ ೪೬ ॥
ಶಿರಶ್ಚಲತಿವಾಕ್‌ಸಂಗೋನೇತ್ರಾದೀನಾಂಚವೈಕೃತಂ ॥

**ಗ್ರೀವಾಚುಬುಕದಂತಾನಾಂತಸ್ಮಿನ್ ಪಾರ್ಶ್ವೇಚವೇದನಾ ||**
**ತಮರ್ದಿತಮಿತಿಪ್ರಾಹುರ್ವ್ಯಾಧಿಂವ್ಯಾಧಿವಿಚಕ್ಷಣಾಃ || ೪೭ ||**

ಅರ್ದಿತವಾತದ ಲಕ್ಷಣವೇನಂದರೆ— ಗಟ್ಟಿಯಾಗಿ ಮಾತನಾಡುವುದು, ಗಟ್ಟಿಯಾದ ಪದಾರ್ಥಗಳನ್ನು ಅಗಿಯುವುದು, ಗಟ್ಟಿಯಾಗಿ ನಗುವುದು, ಆಕಳಿಸುವುದು, ತಲೆಯ ಮೇಲೆ ಹೆಚ್ಚು ಭಾರವನ್ನು ಹೊರುವುದು, ತಗ್ಗುತಿಟ್ಟಾದ ಜಾಗದಲ್ಲಿ ಇತರ ಯಾವ ರೀತಿಯಿಂದಲಾಗಲಿ ಸ್ವಭಾವ ವಿರುದ್ಧವಾಗಿ ಶಯನ ಮಾಡುವುದು, ತಲೆ, ಮೂಗು, ತುಟಿ, ಕಣ್ಣು, ಇವುಗಳ ಸಂಧಿಸ್ಥಾನದಲ್ಲಿರತಕ್ಕ ವಾಯುವು ಮುಖವನ್ನು ಪೀಡಿಸುತ್ತದೆ, ಇದರಿಂದ ಮುಖದ ಅರ್ಧಭಾಗವು ಸೊಟ್ಟನಾಗುತ್ತದೆ, ಕಂಠವು ತಿರುಗಿ ಸೊಟ್ಟನಾಗುತ್ತದೆ, ತಲೆ ನಡುಗುವುದಕ್ಕೆ ಆರಂಭವಾಗುತ್ತದೆ, ಮಾತಾಡುವುದು ತಡೆಯಾಗುತ್ತ ಬರುತ್ತದೆ, ಕಣ್ಣು, ಮೂಗು ಸಹ ವಿಕಾರವಾಗುತ್ತವೆ. ಕಂಠ, ಗಲ್ಲ, ಹಲ್ಲು ಇವುಗಳು ಅರ್ದಿತವಾತವಿರುವ ಕಡೆಯಲ್ಲಿ ನೋವಾಗುತ್ತವೆ, ಇಂತಹ ವ್ಯಾಧಿಗೆ ಅರ್ದಿತವಾತವೆಂದು ಹೆಸರು.

**ಕ್ಷೀಣಸ್ಯಾನಿಮಿಷಾಕ್ಷಸ್ಯಪ್ರಸಕ್ತಾವ್ಯಕ್ತಭಾಷಿಣಃ ||**
**ನಸಿಧ್ಯತ್ಯರ್ದಿತಂಗಾಢಂತ್ರಿವರ್ಷಂವೇಪನಸ್ಯಚ || ೪೮ ||**

ವಾತರೋಗಿಯು ಕೃಶನಾಗಿ ಹೋಗಿರುವುದು, ಕಣ್ಣುರೆಪ್ಪೆ ಹೊಯ್ಯುವುದಕ್ಕಾಗದಿರುವುದು, ಮಾತನ್ನಾಡಬೇಕಾದರೆ ಹಿಡದುಹಿಡದು ಅಸ್ಪಷ್ಟವಾಗಿ ಮಾತನ್ನಾಡುವುದು, ಮೂರು ವರುಷಕಾಲ ಹಳೇದಾಗುವವರಿಗೂ ಕಠಿನವಾಗಿ ನಡುಗುತ್ತ ವಾತರೋಗವನ್ನನುಭವಿಸುವುದು, ಇಂತವರಿಗೆ ಈ ವಾಯುರೋಗವು ಚಿಕಿತ್ಸೆಗೆ ಸಾಧ್ಯವಾಗುವುದಿಲ್ಲ.

**ಗತೇವೇಗೇಭವೇತ್ ಸ್ವಾಸ್ಥ್ಯಂಸರ್ವೇಷ್ವಾಕ್ಷೇಪಕಾದಿಷು ||**

ಹಿಂದೆ ಹೇಳಿದ ಆಕ್ಷೇಪಕಾದಿವಾತರೋಗಗಳಲ್ಲಿ ವಾತವೇಗವು ಕಡಮೆಯಾದಲ್ಲಿ ರೋಗಿಯು ಸ್ವಸ್ಥನಂತೆಯೇ ಕಾಣಿಸಿಕೊಳ್ಳುತ್ತಾನೆ.

**ಜಿಹ್ವಾನಿರ್ಲೇಖನಾಚ್ಛುಷ್ಕಭಕ್ಷಣಾದಭಿಘಾತತಃ || ೪೯ ||**
**ಕುಪಿತೋಹನುಮೂಲಸ್ಥೋಸ್ರಂಸಯಿತ್ವಾನಿಲೋಹನೂ ||**
**ಕರೋತಿವಿವೃತಾಸ್ಯತ್ವಮಥವಾಸಂವೃತಾಸ್ಯತಾಂ || ೫೦ ||**
**ಹನುಗ್ರಹಸ್ಸತೇನಸ್ಯಾತ್ಕೃಚ್ಛ್ರಾಚ್ಚರ್ವಣಭಾಷಣಂ ||**

ನಾಲಿಗೆಯನ್ನು ಕೆರೆಯುವುದು, ಒಣಗಿದ ವಸ್ತುಗಳನ್ನು ತಿನ್ನುವುಧು, ದವಡೆಗೆ ಯಾವುದಾದರೂ ಪೆಟ್ಟುಬೀಳುವುದು. ಈ ಕಾರಣಗಳಿಂದ ದವಡೆಯ ಮೂಲದಲ್ಲಿರುವ ವಾಯುವು ಪ್ರಕುಪಿತವಾಗಿ ದವಡೆಯ ಕೀಲನ್ನು ಬಿಗಿಮಾಡಿ ಬಾಯಿ

ತೆರೆದಿದ್ದರೆ ಹಾಗೆಯೇ ಇರುವುದು, ಅಥವಾ ಮುಚ್ಚಿದ್ದರೆ ಹಾಗೆಯೇ ಇರುವುದು ಈ ರೀತಿಯಾಗಿ ತೊಂದರೆ ಮಾಡಿದರೆ ಇದಕ್ಕೆ ಹನುಗ್ರಹ (ದವಡೆ ಹಿಡಿದು ಕೊಳ್ಳುವುದು)ವೆಂದು ಹೆಸರು; ಇದರಿಂದ ಏನಾದರೂ ಅಗಿಯುವುದು, ಮಾತ ನಾಡುವುದು ಇವು ಬಹಳ ಕಷ್ಟವಾಗುತ್ತವೆ.

ದಿವಾಸ್ವಪ್ನಾಸಮಸ್ಥಾನವಿವೃತೋರ್ಧ್ವನಿರೀಕ್ಷಣೈಃ ॥ ೩೧ ॥
ಮನ್ಯಾಸ್ತಂಭಂಪ್ರಕುರುತೆಸಏವಶ್ಲೇಷ್ಮಣಾವೃತಃ ॥

ಹಗಲು ಮಲಗುವುದು, ವಿಷಮಪ್ರದೇಶಗಳಲ್ಲಿ ಕುಳಿತುಕೊಳ್ಳುವುದು, ಬಾಯಿ ತೆರದುಕೊಂಡೇ ಮೇಲಕ್ಕೆ ನೋಡುವುದು, ಈ ಕಾರಣಗಳಿಂದ ಪ್ರಕುಪಿತ ವಾದ ವಾಯುವು ಶ್ಲೇಷ್ಮದೊಡನೆ ಕೂಡಿಕೊಂಡು ಕಂಠದ ಕೀಲನ್ನು ಹಾಗೆಯೇ ಹಿಡಿದುಕೊಳ್ಳುವಂತೆ ಮಾಡುತ್ತದೆ, ಇದಕ್ಕೆ ಮನ್ಯಾಸ್ತಂಭವೆಂದು ಹೆಸರು.

ವಾಗ್ವಾಹಿನೀಶಿರಾಸಂಸ್ಥೋಜಿಹ್ವಾಂಸ್ತಂಭಯತೇನಿಲಃ ॥ ೩೨ ॥
ಜಿಹ್ವಾಸ್ತಂಭಸ್ಸತೇನಾನ್ನಪಾನವಾಕ್ಯೇಷ್ವನೀಶತಾ ॥

ಮಾತನಾಡುವುದಕ್ಕನುಕೂಲವನ್ನುಂಟುಮಾಡತಕ್ಕ ನಾಲಿಗೆಯ ನರಗಳಲ್ಲಿ ಸಂಚರಿಸತಕ್ಕ ವಾಯುವು ಪ್ರಕುಪಿತವಾಗಿ ನಾಲಿಗೆಯನ್ನೇ ಚಲಿಸದಂತೆ ಮಾಡಿ ಬಿಡುತ್ತದೆ. ಇದರಿಂದ ನಾಲಿಗೆಗೆ ಚಲನವಿಲ್ಲದೆ ಆಹಾರ ಅನ್ನಪಾನಗಳು ಹೋಗು ವುದು ಕಷ್ಟವಾಗುವುದು, ಮತ್ತು ಮಾತನಾಡುವುದಕ್ಕೆ ಆಗದೆ ಹೋಗುವುದು, ಹೀಗಾದರೆ ಇದಕ್ಕೆ ಜಿಹ್ವಾಸ್ತಂಭವೆಂಬ ಹೆಸರು.

ರಕ್ತಮಾಶ್ರಿತ್ಯಪವನಃಕುರ್ಯಾನ್ಮೂರ್ಧಧರಾಃಶಿರಾಃ ॥ ೩೩ ॥
ರೂಕ್ಷಾಸ್ಸವೇದನಾಃಕೃಷ್ಣಾಃಸೋಸಾಧ್ಯಸ್ಯಾಚ್ಛಿರಾಗ್ರಹಃ ॥

ರಕ್ತಗತವಾದ ವಾಯುವು ಪ್ರಕುಪಿತವಾಗಿ ತಲೆಯನ್ನು ಬಿಗಿಯಾಗಿ ಹಿಡಿದಿರುವ ಕಂಠಗತವಾದ ನಾಡಿಗಳನ್ನು ಒರಟಾಗಿಯೂ ವೇದನಾಯುಕ್ತವಾಗಿಯೂ ಕಪ್ಪುಬಣ್ಣಕ್ಕೂ ತಿರುಗಿಸಿ ಕೊರಳು ಅತ್ತಿತ್ತ ತಿರುಗದಂತೆ ಮಾಡುತ್ತದೆ. ಇದಕ್ಕೆ ಶಿರಾಗ್ರಹವೆಂಬ ಹೆಸರು.

ಸ್ಫಿಕ್ಪೂರ್ವಾಕಟಿಪೃಷ್ಠೋರುಜಾನುಜಂಘಾಪದಂಕ್ರಮಾತ್॥ ೩೪ ॥
ಗೃಧ್ರಸೀಸ್ತಂಭರುಕ್ತೋದೈರ್ಗೃಹ್ಣಾತಿಸ್ಪಂದತೇಮುಹುಃ ॥

ಹಿಂಭಾಗವು ವಾಯುವಿನಿಂದ ಹಿಡದುಕೊಳ್ಳುವುದಕ್ಕೆ ಪ್ರಾರಂಭವಾಗಿ ಸೊಂಟ, ಪೃಷ್ಠ, ತೊಡೆ, ಮಂಡಿ, ಮೊಳಕಾಲು ಮೊದಲಾದವುಗಳು ಕ್ರಮವಾಗಿ

ಹಿಡಿದುಕೊಳ್ಳುವುದು, ನಿಶ್ಚಲವಾಗುವುದು, ನೋವು ವ್ಯಥೆ ಇವುಗಳು ಹೆಚ್ಚಾಗಿರುವುದು, ಪದೇಪದೇ ನಡತಬರುತ್ತಿರುವುದು, ಇದಕ್ಕೆ ಗೃಧ್ರಸಿ ಎಂದು ಹೆಸರು.

ವಾತಾದ್ವಾತಕಫಾತ್ತಂದ್ರಾಗೌರವಾರೋಚಕಾನ್ವಿತಾ || ೫೫ ||
ತಲಂಪ್ರತ್ಯಂಗುಲೀನಾಂಯಾಃಕಂಡರಾಬಾಹುಪೃಷ್ಠತಃ ||
ಬಾಹ್ವೋಃಕರ್ಮಕ್ಷಯಕರೀವಿಶ್ವಾಚೀಚೇತಿಸೋಚ್ಯತೆ || ೫೬ ||

ವಾಯು ಒಂದೇ ಪ್ರಕುಪಿತವಾಗಿಯಾಗಲಿ, ವಾಯು ಮತ್ತು ಕಫ ಈ ಎರಡೂ ಪ್ರಕುಪಿತವಾಗಿಯಾಗಲಿ, ತೂಕಡಿಕೆ, ಮೈಭಾರ, ಅರುಚಿ, ಇವುಗಳಿಂದ ಕೂಡಿಕೊಂಡು ಮುಂಗೈಯ್ಯಿ ಮತ್ತು ಪ್ರತಿ ಬೆರಳಿನ ಮಾಂಸಗಳನ್ನು ತೋಳಿನ ಮಾಂಸಗಳನ್ನು ಸಹ ಹಿಡಿದುಕೊಂಡು ಕೈಯ್ಯಿನಿಂದ ಯಾವ ಕೆಲಸವೂ ನಡೆಯದಂತೆ ಮಾಡಿದರೆ ಅದಕ್ಕೆ ವಿಶ್ವಾಚಿ ಎಂಬ ಹೆಸರು.

ವಾತಶೋಣಿತಜಶ್ಶೋಥೋಜಾನುಮಧ್ಯೇಮಹಾರುಜಃ ||
ಜ್ಞೇಯಃಕ್ರೋಷ್ಟುಕಶೀರ್ಷಸ್ತುಸ್ಥೂಲಃಕ್ರೋಷ್ಟುಕಶೀರ್ಷವತ್ || ೫೭ ||

ಪ್ರಕುಪಿತವಾದ ವಾಯು ಮತ್ತು ರಕ್ತ ಇವುಗಳಿಂದ ಮೊಳಕಾಲಿನಲ್ಲಿ ಬಹಳ ನೋವಾಗಿ ಊದಿ ಚಂಡುಕಟ್ಟಿಕೊಂಡು ದಪ್ಪನಾಗಿ ಹಿಡಿದುಕೊಂಡಲ್ಲಿ ಇದಕ್ಕೆ ಕ್ರೋಷ್ಟುಕ ಶೀರ್ಷಕ ಎಂಬದಾಗಿ ಹೆಸರು.

ವಾಯುಃಕಟ್ಯಾಶ್ರಿತಸ್ಸಕ್ಥ್ನಃಕಂಡರಾಮಾಕ್ಷಿಪೇದ್ಯದಾ ||
ಖಂಜಸ್ತದಾಭವೇಜ್ಜಂತುಃಪಂಗುಸ್ಸಕ್ಥ್ನೋರ್ದ್ವಯೋರ್ವಧಾತ್ || ೫೮ ||

ಸೊಂಟದಲ್ಲಿರತಕ್ಕ ವಾಯುವು ಪ್ರಕುಪಿತವಾಗಿ ತೊಡೆಯ ಮಾಂಸವನ್ನು ಕೆಲಸ ಮಾಡದಂತೆ ಮಾಡಿದರೆ ಅಂದರೆ ಚಲನಶಕ್ತಿಯನ್ನು ಕಡಮೆ ಮಾಡಿದರೆ ಮನುಷ್ಯನು ಕುಂಟನಾಗುತ್ತಾನೆ, ಎರಡು ತೊಡೆಗಳ ಮಾಂಸವನ್ನೂ ಚಲಿಸದಂತೆ ಮಾಡಿದಲ್ಲಿ ಅಗ್ಯೆ ಹೆಳವನಾಗುತ್ತಾನೆ; ಇದು ಖಂಜವಾತ.

ಪ್ರಕ್ರಾಮನ್ವೇಪತೇಯಸ್ತುಖಂಜನ್ನಿವಚಗಚ್ಛತಿ ||
ಕಲಾಯಖಂಜಂತಂವಿದ್ಯಾನ್ಮುಕ್ತಸಂಧಿಪ್ರಬಂಧನಂ || ೫೯ ||

ನಡೆಯುವುದಕ್ಕೆ ಪ್ರಾರಂಭಮಾಡಿದಾಗ್ಯೆ ನಡುಗುವುದು, ಕಾಲನ್ನು ಎಳೆಯುತ್ತ ಹೋಗುವುದು ಈ ರೀತಿಯಾಗಿರುವುದಲ್ಲದೆ ಸಂಧಿಬಂಧನಗಳೆಲ್ಲಾ ಸಡಿಲಬಿದ್ದು ಹೋಗಿದ್ದಲ್ಲಿ ಕಲಾಯಖಂಜ ಎಂಬ ಹೆಸರು, ಇದೊಂದು ವಾತರೋಗ ಪ್ರಭೇದವೇ ಎಂದರಿಯಬೇಕು.

**ರುಕ್ಪಾದೇವಿಷಮನ್ಯಸ್ತೇಶ್ರಮಾದ್ವಾಜಾಯತೇಯದಾ ॥**
**ವಾತೇನಗುಲ್ಫಮಾಶ್ರಿತ್ಯತಮಾಹುರ್ವಾತಕಂಟಕಂ ॥ ೬೦ ॥**

ಪಾದಗತವಾದ ವಾಯುವು ಪ್ರಕುಪಿತವಾಗಿ ಸ್ವಲ್ಪ ತಗ್ಗುತಿಟ್ಟಾದ ಪ್ರದೇಶ ದಲ್ಲಿ ಕಾಲಿಟ್ಟರೂ ನೋವು, ಸ್ವಲ್ಪ ಶ್ರಮಪಟ್ಟು ನಡದರೂ ನೋವು, ಕಾಲಿಗೆ ಮುಳ್ಳು ಚುಚ್ಚಿದಂತೆ ವ್ಯಥೆ ಸಹ ಆಗುತ್ತಿರುತ್ತದೆ, ಕಾಲುಹರಡಿನಲ್ಲಿರುವ ವಾಯು ವು ಪ್ರಕುಪಿತವಾಗೋಣದರಿಂದ ಈ ರೋಗವುಂಟಾಗುತ್ತದೆ ಇದಕ್ಕೆ ವಾತ ಕಂಟಕವೆಂದು ಹೆಸರು.

**ಪಾದಯೋಃಕುರುತೇದಾಹಂಪಿತ್ತಾಸೃಕ್‍ಸಹಿತೋನಿಲಃ ॥**
**ವಿಶೇಷತಶ್ಚಂಕ್ರಮತಃಪಾದದಾಹಂತಮಾದಿಶೇತ್ ॥ ೬೧ ॥**

ಪಾದದಾಹವೆಂಬ ವಾತರೋಗ ಲಕ್ಷಣವೇನಂದರೆ— ಪ್ರಕುಪಿತವಾದ ವಾಯುವು ಪಿತ್ತ ಮತ್ತು ರಕ್ತಗಳೊಡನೆ ಕೂಡಿಕೊಂಡು ವಿಶೇಷ ತಿರುಗಾಡುವ ಸ್ವಭಾವದವರಿಗೆ ಅಂಗಾಲಿನಲ್ಲಿ ಉರಿಯನ್ನು ಹುಟ್ಟಿಸುತ್ತದೆ.

**ಹೃಷ್ಯೇತೇಚರಣೌಯಸ್ಯಭವೇತಾಂಚಾಪಿಸುಪ್ತಕೌ ॥**
**ಪಾದಹರ್ಷಸ್ಸವಿಜ್ಞೇಯಃಕಫವಾತಪ್ರಕೋಪತಃ ॥ ೬೨ ॥**

ಪಾದಹರ್ಷದ ಲಕ್ಷಣವೇನಂದರೆ—ಪಾದಗತವಾದ ವಾಯುವು ಪ್ರಕುಪಿತ ವಾಗಿ ಕಫದೊಡನೆ ಕೂಡಿಕೊಂಡು ಕಾಲಿನಲ್ಲಿ ಆಗಾಗ್ಯೆ ಜವ್ವುಹಿಡಿಯುವುದು, ಸ್ಪರ್ಶಜ್ಞಾನವಿಲ್ಲದೆ ಹೋಗುವುದು ಇವುಗಳು.

**ಅಂಸದೇಶಸ್ಥಿತೋವಾಯುಶ್ಶೋಷಯೇದಂಸಬಂಧನಂ ॥**
**ಶಿರಾಶ್ಚಾಕುಂಚ್ಯತತ್ರಸ್ಥೋಜನಯೇದಪಬಾಹುಕಂ ॥ ೬೩ ॥**

ಅಪಬಾಹುಕವೆಂಬ ವಾತರೋಗದ ಲಕ್ಷಣ—ಭುಜಪ್ರದೇಶದಲ್ಲಿರುವ ವಾ ಯುವು ಪ್ರಕುಪಿತವಾಗಿ ಅಲ್ಲಿರತಕ್ಕ ನರಗಳು ಹಿಡಿದುಕೊಳ್ಳುವಂತೆ ಮಾಡಿ ಭುಜವನ್ನೇ ಬತ್ತಿಹೋಗುವಂತೆ ಮಾಡಿದಲ್ಲಿ ಅದಕ್ಕೆ ಅಪಬಾಹುಕವೆಂಬ ಹೆಸರು.

**ಆವೃತ್ಯವಾಯುಸ್ಸಕಫೋಧಮನೀಶ್ಶಬ್ದವಾಹಿನೀಃ ॥**
**ನರಾನ್ಕರೋತ್ಯಕ್ರಿಯಾಕಾನ್ಮೂಕಮಿನ್ಮಿನಗದ್ಗದಾನ್ ॥ ೬೪ ॥**

ಕಫಯುಕ್ತವಾದ ವಾಯುವು ಪ್ರಕುಪಿತವಾಗಿ ಶಬ್ದವಾಹಿನಿಗಳಾದ ಧಮನಿ ಗಳನ್ನು ದೋಷಯುಕ್ತಗಳನ್ನಾಗಿ ಮಾಡಿ ಮನುಷ್ಯರ ವಾಕ್ ಶಕ್ತಿಯನ್ನು ಹಾಳು

ಮಾಡಿ ಮನುಷ್ಯರನ್ನು ಮೂಗರನ್ನಾಗಿಯೂ, ಉಗ್ಗ (ಬಿಕ್ಕಲ)ರನ್ನಾಗಿಯೂ ಗದ್ಗದಧ್ವನಿ (ಧ್ವನಿನಡುಗುವುದು)ಯುಳ್ಳವರನ್ನಾಗಿಯೂ ಮಾಡುತ್ತದೆ.

**ಅಧೋಯಾವೇದನಾಯಾತಿವರ್ಚೋಮೂತ್ರಾಶಯೋತ್ಥಿತಾ ॥**
**ಭಿಂದತೀವಗುದೋಪಸ್ಥಂಸಾತೂನೀನಾಮನಾಮತಃ ॥ ೬೫ ॥**

ತೂನೀ ಎಂಬ ವಾತರೋಗದ ಲಕ್ಷಣ—ಮಲ ಮತ್ತು ಮೂತ್ರಾಶಯಗಳಲ್ಲಿ ವೇದನೆ ಪ್ರಾರಂಭವಾಗಿ ಗುದದ್ವಾರವನ್ನು ಮತ್ತು ಮೂತ್ರದ್ವಾರವನ್ನು ಸಹ ಬಡದುಹಾಕುವಂತಹ ತೊಂದರೆ ಮಾಡುತ್ತಲಿದ್ದಲ್ಲಿ ಅದಕ್ಕೆ ತೂನೀವಾತವೆಂದು ಹೆಸರು.

**ಗುದೋಪಸ್ಥೋತ್ಥಿತಾಯಾತುಪ್ರತಿಲೋಮಂಪ್ರಧಾವಿತಾ ॥**
**ವೇಗೈಃಪಕ್ವಾಶಯಂಯಾತಿಪ್ರತಿತೂನೀತಿಸೋಚ್ಯತೆ ॥ ೬೬ ॥**

ಹಿಂದಿನ ಶ್ಲೋಕದಲ್ಲಿ ಹೇಳಿರುವುದಕ್ಕೆ ಪ್ರತಿಯಾಗಿ ಅಂದರೆ ಗುದದ್ವಾರ ಮತ್ತು ಮೂತ್ರದ್ವಾರಗಳಲ್ಲಿ ವೇದನೆ ಪ್ರಾರಂಭವಾಗಿ ಪಕ್ವಾಶಯ ಮತ್ತು ಮೂತ್ರಕೋಶಗಳವರೆಗೂ ತೊಂದರೆ ಮಾಡುತ್ತ ತಲಪಿದಲ್ಲಿ ಅದು ಪ್ರತಿತೂನಿ ಎಂಬ ವಾತರೋಗವೆನ್ನಿಸಿಕೊಳ್ಳುತ್ತದೆ.

**ಸಾಟೋಪಮತ್ಯುಗ್ರರುಜಮಾಧ್ಮಾತಮುದರಂಭೃಶಂ ॥**
**ಆಧ್ಮಾನಮಿತಿತಂವಿದ್ಯಾದ್ಘೋರಂವಾತನಿರೋಧಜಂ ॥ ೬೭ ॥**

ಅಧೋವಾಯುವು ತಡೆಯಲ್ಪಡುವುದರಿಂದ ಹೊಟ್ಟೆಯು ಅತ್ಯಂತ ಆರ್ಭಟದೊಡನೆಯೂ ಅತಿಯಾದ ನೋವಿನೊಡನೆಯೂ ಊದುತ್ತ ಬಂದರೆ ಭಯಂಕರವಾದ ಈ ರೋಗವನ್ನು ಆಧ್ಮಾನವಾತವೆಂದು ತಿಳಿಯಬೇಕು.

**ವಿಮುಕ್ತಪಾರ್ಶ್ವಹೃದಯಂತದೇವಾಮಾಶಯೋತ್ಥಿತಂ ॥**
**ಪ್ರತ್ಯಾಧ್ಮಾನಂವಿಜಾನೀಯಾತ್ಕಫವ್ಯಾಕುಲಿತಾನಿಲಂ ॥ ೬೮ ॥**

ಪಾರ್ಶ್ವಗಳು ಮತ್ತು ಹೃದಯ ಪ್ರದೇಶಗಳನ್ನು ವಿನಹ ಹಿಂದಲ ಶ್ಲೋಕದಲ್ಲಿ ಹೇಳಿದ ಹೊಟ್ಟೆಯುಬ್ಬರವೇ ಆಮಾಶಯದಲ್ಲಿ ಹುಟ್ಟಿದರೆ ಅದಕ್ಕೆ ಪ್ರತ್ಯಾಧ್ಮಾನವೆಂದು ಹೆಸರು. ಈ ರೋಗವು ಕಫಪ್ರಕೋಪದಿಂದ ವಾಯುವು ಪ್ರಕುಪಿತವಾಗಿ ಉತ್ಪನ್ನವಾಗುತ್ತದೆಂದು ತಿಳಿಯಬೇಕು.

**ನಾಭೇರಧಸ್ತಾತ್‌ಸಂಜಾತಸ್ಸಂಚಾರೀಯದಿವಾಚಲಃ ॥**
**ಅಷ್ಠೀಲಾವದ್ಘನೋಗ್ರಂಥಿರೂರ್ಧ್ವಮಾಯತಉನ್ನತಃ ॥ ೬೯ ॥**

**ವಾತಾಷ್ಠೀಲಾಂವಿಜಾನೀಯಾದ್ಬಹಿರ್ಮಾರ್ಗಾವರೋಧಿನೀಂ ॥**
**ಏತಾಮೇವರುಜೋಪೇತಾಂವಾತವಿಣ್ಮೂತ್ರರೋಧಿನೀಂ ॥ ೭೦ ॥**
**ಪ್ರತ್ಯಷ್ಠೀಲಾಮಿತಿವದೇಜ್ಜಠರೇತಿರ್ಯಗುತ್ಥಿತಾಂ ॥**

ಅಷ್ಠೀಲಾ ಎಂದರೆ ಚರ್ಮಕಾರರು (ಜೋಡುಹೊಲಿಯುವವರು) ಚರ್ಮವನ್ನು ಇಟ್ಟುಕೊಂಡು ಕುಟ್ಟುವುದಕ್ಕೆ ಉಪಯೋಗಿಸುವ ಅಡಿಗಲ್ಲಿಗೆ ಹೆಸರು. ಹೊಕ್ಕುಳಿನಿಂದ ಕೆಳಭಾಗದಲ್ಲಿ ಈ ಕಲ್ಲಿನ ಹಾಗೆ ಊರ್ಧ್ವಮುಖವಾಗಿ ದಪ್ಪವಾಗಿ ಒಂದು ಗಂಟು ಉಂಟಾಗುತ್ತದೆ. ಈ ಗಂಟು ಬಹಳ ಗಟ್ಟಿಯಾಗಿ ಹೊಟ್ಟೆಯಲ್ಲೆಲ್ಲಾ ಚಲಿಸುತ್ತಲಿರುವುದೂ ಉಂಟು, ಒಂದೇ ಕಡೆಯಲ್ಲಿ ನಿಂತಿರುವುದೂ ಉಂಟು, ಮಲಮೂತ್ರಗಳ ಮಾರ್ಗವನ್ನು ತಡದು ಬಂಧಿಸುತ್ತದೆ, ಇದಕ್ಕೆ ವಾತಾಷ್ಠೀಲಾ ಎಂಬದಾಗಿ ಹೆಸರು. ಈ ರೋಗದಲ್ಲಿಯೇ ಗ್ರಂಥಿಯು ನೋವಾಗಿ ಅಡ್ಡಲಾಗಿದ್ದು ಮಲಮೂತ್ರಗಳು ತಡದು ಹೋಗಿರುವುದು, ಹೀಗಿದ್ದಲ್ಲಿ ಪ್ರತ್ಯಷ್ಠೀಲಾ ಎಂಬದಾಗಿ ಹೆಸರು.

**ಮಾರುತೇವಿಗುಣೇಬಸ್ತೌಮೂತ್ರಂಸಮ್ಯಕ್ಪ್ರವರ್ತತೆ ॥ ೭೧ ॥**
**ವಿಕಾರಾವಿವಿಧಾಶ್ಚಾತ್ರಪ್ರತಿಲೋಮೇಭವಂತಿಚ ॥**

ಮೂತ್ರಾಶಯಗತವಾದ ವಾಯುವು ಅನುಕೂಲವಾಗಿದ್ದಲ್ಲಿ ಮೂತ್ರವು ಚೆನ್ನಾಗಿ ವಿರೇಚನವಾಗುತ್ತದೆ. ಪ್ರತಿಕೂಲವಾಗಿದ್ದರೆ ನಾನಾ ವಿಧಗಳಾದ ವಿಕಾರಗಳು ಅಂದರೆ ಮೂತ್ರಾಶ್ಮರಿ ಮೊದಲಾದವುಗಳು ಉಂಟಾಗುತ್ತವೆ.

**ಸರ್ವಾಂಗಕಂಪಶ್ಶಿರಸೋವಾಯುರ್ವೇಪಥುಸಂಜ್ಞಿಕಃ ॥ ೭೨ ॥**
**ಖಲ್ಲೀತುಪಾದಜಂಘೋರುಕರಮೂಲಾವಮೋಟನೀ ॥**

ತಲೆ ಮೊದಲಾದ ಎಲ್ಲಾ ಅವಯವಗಳೂ ನಡುಗುತ್ತಲಿದ್ದಲ್ಲಿ ಅಂತಹ ವಾಯುವಿಗೆ ವೇಪಥು ಎಂಬದಾಗಿ ಹೆಸರು. ಕಾಲು, ಮೊಳಕಾಲು, ಮೊಳಕೈ ಮೊದಲಾದವುಗಳನ್ನು ಹಾಳುಮಾಡುವ ವಾಯುವಿಗೆ ಖಲ್ಲೀ ಎಂದು ಹೆಸರು.

**ಸ್ಥಾನನಾಮಾನುರೂಪೈಶ್ಚಲಿಂಗೈಶ್ಶೇಷಾನ್ವಿನಿರ್ದಿಶೇತ್ ॥ ೭೩ ॥**
**ಸರ್ವೇಷ್ವೇತೇಷುಸಂಸರ್ಗಂಪಿತ್ತಾದ್ಯೈರುಪಲಕ್ಷಯೇತ್ ॥**
**ಹನುಸ್ತಂಭಾರ್ದಿತಾಕ್ಷೇಪಪಕ್ಷಾಘಾತಾಪತಾನಕಾಃ ॥ ೭೪ ॥**
**ಕಾಲೇನಮಹತಾಘ್ನಾನಾಂಯತ್ನಾತ್ಸಿಧ್ಯಂತಿವಾನವಾ ॥**
**ನರಾನ್ಬಲವತಸ್ತ್ವೇತಾನ್ಸಾಧಯೇನ್ನಿರುಪದ್ರವಾನ್ ॥ ೭೫ ॥**

ವಾತವಿಕಾರಗಳು ಕೆಲವು ಹೇಳಲ್ಪಟ್ಟಿವೆ. ಇವುಗಳಲ್ಲದೆ ಇನ್ನೂ ಅನೇಕ ಗಳಾದ ವಾತವಿಕಾರಗಳು ಪ್ರಾಪ್ತಗಳಾಗಬಹುದು. ಅವುಗಳು ಹುಟ್ಟತಕ್ಕ ಸ್ಥಾನ ಗಳಿಗೆ ಅನುಸಾರವಾಗಿಯೂ ತೋರತಕ್ಕ ಲಕ್ಷಣಗಳಿಗೆ ಅನುಸಾರವಾಗಿಯೂ ಹೆಸರಿಡತಕ್ಕದ್ದು, ಮತ್ತು ರೋಗದಲ್ಲಿ ತೋರುವ ಲಕ್ಷಣಗಳನ್ನು ನೋಡಿ ಕೊಂಡು ವಾಯುವಿನೊಂದಿಗೆ ಸೇರಿರುವ ಇತರ ದೋಷಗಳನ್ನೂ ನಿಶ್ಚಯಿಸಿ ಕೊಳ್ಳಬೇಕು. ಹನುಸ್ತಂಭ, ಅರ್ದಿತ, ಆಕ್ಷೇಪಕ, ಪಕ್ಷಾಘಾತ, ಅಪತಾನಕ ಮೊದಲಾದ ಕೆಲವು ವಾತವ್ಯಾಧಿಗಳು ಬಹಳ ಕಾಲದವರಿಗೂ ಚಿಕಿತ್ಸೆ ಮಾಡಿ ದರೂ ಶ್ರೀಮಂತರಾದವರಿಗೆ ಎಂದರೆ ಎಲ್ಲಾ ಅನುಕೂಲಗಳನ್ನೂ ಸಂಪಾದಿಸಿ ಕೊಳ್ಳುವಷ್ಟು ದ್ರವ್ಯ ಬಲವುಳ್ಳವರಿಗೆ ಬಹಳ ಪ್ರಯತ್ನದಿಂದ ಒಂದು ವೇಳೆ ಸಾಧ್ಯವಾದರೆ ಆಗಬಹುದು. ವಾತರೋಗಗಳಲ್ಲಿ ಮಾತ್ರ ದೇಹಬಲ ಚನ್ನಾಗಿರು ವವರಿಗೆ ಉಪರೋಗಗಳು ಹುಟ್ಟುವ ಮೊದಲಿಗೆ ಹೊಸತರಲ್ಲಿ ಔಷಧಪ್ರಯೋಗ ಮಾಡಬಹುದು.

ವಿಸರ್ಪದಾಹರುಕ್‌ಸಂಗಮೂರ್ಛಾರುಚ್ಯಗ್ನಿಮಾರ್ದವೈಃ ॥
ಕ್ಷೀಣಮಾಂಸಬಲಂವಾತಾಘ್ನಂತಿಪಕ್ಷವಧಾದಯಃ ॥ ೭೬ ॥
ಶೂನಂಸುಪ್ತತ್ವಚಂಭಗ್ನಂಕಂಪಾಧ್ಮಾನನಿಪೀಡಿತಂ ॥
ರುಜಾರ್ತಿಮಂತಂಚನರಂವಾತವ್ಯಾಧಿರ್ವಿನಾಶಯೇತ್ ॥ ೭೭ ॥

ಮೈಯ್ಯೆಲ್ಲೆಲ್ಲಾ ಉರಿಬಕ್ಕೆಗಳೇಳುವುದು, ಮೈಯ್ಯುರಿ, ಮೈನೋವು, ಮಲ ಮೂತ್ರರೋಧ, ಮೂರ್ಛೆ, ಅರುಚಿ, ಅಗ್ನಿಮಾಂದ್ಯ ಇವುಗಳಿರುವುದು; ರಕ್ತ ಮಾಂಸಗಳು ಕ್ಷಯಿಸಿ ಬಲತಗ್ಗಿದ್ದಲ್ಲಿ ಈ ಪಕ್ಷಾಘಾತಾದಿ ವಾತರೋಗಗಳು ಬಂದಲ್ಲಿ ಕೊಂದುಹಾಕುತ್ತವೆ. ಮೈಯ್ಯೆಲ್ಲಾ ಊದಿರುವುದು, ದೇಹಕ್ಕೆ ಸ್ಪರ್ಶ ಜ್ಞಾನವಿಲ್ಲದಂತಾಗಿರುವುದು, ಅಂಗಗಳು ಮುರಿದುಹೋಗಿರುವುದು, ಮೈ ಸದಾ ನಡುಗುತ್ತಿರುವುದು, ಹೊಟ್ಟೆಯುಬ್ಬರವಿರುವುದು, ಮೈಯ್ಯೆಲ್ಲಾ ನೋವಿರುವುದು ಇಷ್ಟು ಲಕ್ಷಣಗಳಿದ್ದಲ್ಲಿ ವಾತರೋಗವು ಗುಣವಾಗುವುದಿಲ್ಲ.

ಅವ್ಯಾಹತಗತಿರ್ಯಸ್ಯಸ್ಥಾನಸ್ಥಃಪ್ರಕೃತಿಸ್ಥಿತಃ ॥
ವಾಯುಸ್ಯಾತ್ಸೋಧಿಕಂಜೀವೇದ್ವೀತರೋಗಸ್ಸಮಾಶ್ಶತಂ ॥ ೭೮ ॥

ಯಾವ ಮನುಷ್ಯನಿಗೆ ಶರೀರಗತವಾದ ಪ್ರಾಣಾಪಾನಗಳು ತಡೆಯಿಲ್ಲದೆ ದೇಹದಲ್ಲಿ ತಮ್ಮ ತಮ್ಮ ಕ್ಲಪ್ತಸ್ಥಾನಗಳಲ್ಲಿ ಸಂಚರಿಸುತ್ತ ವಿಕಾರವನ್ನು ಹೊಂದ ದೆ ಇದ್ದಲ್ಲಿ ಅಂತಹ ಮಾನವನು ಯಾವ ರೋಗದ ಬಾಧೆಗೂ ಶಿಕ್ಕದೆ ಒಂದು ನೂರು ವರುಷ ಸುಖವಾಗಿ ಬದುಕುತ್ತಾನೆ.

ಇಲ್ಲಿಗೆ ವಾತವ್ಯಾಧಿ ಸಮಾಪ್ತ.

## ವಾತರಕ್ತನಿದಾನ.

ಲವಣಾಮ್ಲಕಟುಕ್ಷಾರಸ್ನಿಗ್ಧೋಷ್ಣಾಜೀರ್ಣಭೋಜನೈಃ ॥
ಕ್ಲಿನ್ನಶುಷ್ಕಾಂಬುಜಾನೂಪಮಾಂಸಪಿಣ್ಯಾಕಮೂಲಕೈಃ ॥ ೧ ॥
ಕುಳುತ್ಥಮಾಷನಿಷ್ಪಾವಶಾಕಾದಿಪಲಲೇಕ್ಷುಭಿಃ ॥
ದಧ್ಯಾರನಾಳಸೌವೀರಶುಕ್ತತಕ್ರಸುರಾಸವೈಃ ॥ ೨ ॥
ವಿರುದ್ಧಾಧ್ಯಶನಕ್ರೋಧದಿವಾಸ್ವಪ್ನಪ್ರಜಾಗರೈಃ ॥
ಪ್ರಾಯಶಸ್ಸುಕುಮಾರಾಣಾಂಮಿಥ್ಯಾಹಾರವಿಹಾರಿಣಾಂ ॥ ೩ ॥
ಸ್ಥೂಲಾನಾಂಸುಖಿನಾಂಚಾಪಿಕುಪ್ಯತೇವಾತಶೋಣಿತಂ ॥

ಉಪ್ಪು, ಹುಳಿ, ಖಾರ, ಯವಕ್ಷಾರಾದಿಕ್ಷಾರಗಳು, ಜಿಡ್ಡು, ಹೆಚ್ಚಾದ ಭೋಜನ, ಬಿಸಿಯಾದ ಭೋಜನ, ಅಜೀರ್ಣವಾಗತಕ್ಕ ಗುರ್ವಾಹಾರಗಳನ್ನು ಭೋಜನಮಾಡುವುದು, ಹಳಸಿಹೋದ ಆಹಾರಗಳನ್ನಾಗಲಿ ಒಣಗಿಹೋದ ಆಹಾರಗಳನ್ನಾಗಲೀ ತಿನ್ನುವುದು, ಜವುಗು ನೆಲದಲ್ಲಿ ಬೆಳೆಯುವ ಪ್ರಾಣಿಗಳ ಮಾಂಸ, ನೀರಿನಲ್ಲಿ ಹುಟ್ಟುವ ಮೀನು ಮೊದಲಾದವುಗಳ ಮಾಂಸ, ಎಳ್ಳು, ಚಿಗಳಿ, ಮೂಲಂಗಿ, ಹುರಳಿ, ಉದ್ದು, ಅವರೆ, ತರಕಾರಿಗಳು, ಮಾಂಸಗಳು, ಕಬ್ಬಿನಹಾಲು, ಮೊಸರು, ಗಂಜಿ (ಅಂಬಲಿ) ಸೌವೀರವೆಂದರೆ ಅದೊಂದು ಬಗೆಯ ಹುಳಿ ಅಂಬಲಿ, ಹಳಸಿ ಹುಳಿಯಾದ ಆಹಾರಗಳನ್ನು ತಿನ್ನುವುದು, ಮಜ್ಜಿಗೆ, ಮದ್ಯಗಳು ಇವುಗಳನ್ನು ಮಿತಿಯಿಲ್ಲದೆ ಸೇವಿಸುವುದು, ಪರಸ್ಪರ ವಿರುದ್ಧಗಳಾದ ಪದಾರ್ಥಗಳನ್ನು (ವೈದ್ಯಶಾಸ್ತ್ರೋಕ್ತಿಯಂತೆ) ಸೇರಿಸಿ ಭೋಜನಮಾಡುವುದು, ಬೇಕಾಗುವುದಕ್ಕಿಂತಲೂ ಹೆಚ್ಚಾಗಿ ತಿನ್ನುವುದು, ಅತಿಯಾಗಿ ಸಿಟ್ಟು ಮಾಡುವುದು, ಹಗಲು ಮಲಗುವುದು, ರಾತ್ರಿವೇಳೆಯಲ್ಲಿ ನಿದ್ರೆಗೆಟ್ಟು ಜಾಗರಣೆಮಾಡುವುದು, ಈ ಕಾರಣಗಳಿಂದ ಮತ್ತು ಮಿಥ್ಯಾಹಾರವಿಹಾರಗಳು ಅಂದರೆ ಆಹಾರವನ್ನು ವರ್ಜ್ಯಮಾಡುವುದು, ವ್ಯಾಯಾಮವನ್ನೇ ವರ್ಜ್ಯಮಾಡುವುದು ಇಂತಹ ಕಾರಣಗಳಿಂದಲೂ ಕೂಡ ಸುಕುಮಾರಪ್ರಕೃತಿಯುವರಿಗೆ, ಸ್ಥೂಲದೇಹಿಗಳಿಗೆ, ಯಾವಾಗ್ಯೂ ಸುಖವನ್ನೇ ಬಯಸುವವರಿಗೂ ದೇಹಗತವಾಗವಾದ ವಾಯು ಮತ್ತು ರಕ್ತ ಸಹ ಪ್ರಕೋಪವನ್ನು ಹೊಂದುತ್ತವೆ.

ಹಸ್ತ್ಯಶ್ವೋಷ್ಟ್ರೈರ್ಗಚ್ಛತಶ್ಚಾಶ್ನತಶ್ಚವಿದಾಹ್ಯನ್ನಂಸ
ವಿದಾಹೋಶನಸ್ಯ ॥
ಕೃತ್ಸ್ನಂರಕ್ತಂವಿದಹತ್ಯಾಶುತಚ್ಚದುಷ್ಟಂಸ್ರುತಂಪಾದ
ಯೋಶ್ಚೀಯತೇತು ॥
ತತ್ಸಂಪೃಕ್ತಂವಾಯುನಾದೋಷಿತೇನತತ್ಪ್ರಾಬಲ್ಯಾದುಚ್ಯತೆ
ವಾತರಕ್ತಂ ॥ ೪ ॥

ವಾತರಕ್ತವೆಂದು ಹೆಸರು ಬರಲು ಕಾರಣವನ್ನು ಹೇಳುತ್ತಾನೆ—ಆನೆ, ಕುದುರೆ, ಒಂಟೆ ಇವುಗಳ ಮೇಲೆ ಸವಾರಿ ಮಾಡುವುದು, ವಿದಾಹಿ ಪದಾರ್ಥಗಳನ್ನು ಅಂದರೆ ಅತ್ಯುಷ್ಣ ಮಾಡತಕ್ಕ ಪದಾರ್ಥಗಳನ್ನು ಭೋಜನಮಾಡುವುದು, ಇವೆರಡೂ ಶರೀರಗತವಾದ ರಕ್ತವನ್ನು ವಿದಹತಿ ಅಂದರೆ ಅತ್ಯುಷ್ಣ ಗುಣವುಳ್ಳದ್ದಾಗಿ ಮಾಡುತ್ತದೆ, ಅಂತಹ ದುಷ್ಟ ರಕ್ತವು ಕಾಲಿನ ಕಡೆಗೆ ಓಡಿ ಅಲ್ಲಿ ದುಷ್ಟ ವಾಯುವಿನೊಡನೆ ಸಂಪರ್ಕವನ್ನು ಹೊಂದಿ ಜಮೆಯಾಗುತ್ತದೆ. ವಾತವು ಪ್ರಧಾನದೋಷವಾಗಿಯೂ ರಕ್ತವು ಉಪದೋಷವಾಗಿಯೂ ಇರುವುದರಿಂದ ಈ ರೋಗಕ್ಕೆ ವಾತರಕ್ತರೋಗವೆಂಬ ಹೆಸರು.

ಸ್ವೇದೋತ್ಯರ್ಥಂನವಾಕಾಷ್ರ್ಣ್ಯಂಸ್ಪರ್ಶಾಜ್ಞತ್ವಂಕ್ಷತೇತಿರುಕ್ ||
ಸಂಧಿಶೈಥಿಲ್ಯಮಾಲಸ್ಯಂಸದನಂಪಿಡಕೋದ್ಗಮಃ || ೫ ||
ಜಾನುಜಂಘೋರುಕಟ್ಯಂಸಹಸ್ತಪಾದಾಂಗಸಂಧಿಷು ||
ನಿಸ್ತೋದಸ್ಫುರಣಂಭೇದೋಗುರುತ್ವಂಸುಪ್ತಿರೇವಚ || ೬ ||
ಕಂಡೂಸ್ಸಂಧಿಷುರುಗ್ಭೂತ್ವಾಭೂತ್ವಾನಶ್ಯತಿಚಾಸಕೃತ್ ||
ವೈವರ್ಣ್ಯಂಮಂಡಲೋತ್ಪತ್ತಿರ್ವಾತಾಸೃಕ್ಪೂರ್ವಲಕ್ಷಣಂ || ೭ ||

ಈ ರೋಗದ ಲಕ್ಷಣವೇನಂದರೆ—ಅತಿಯಾಗಿ ಬೆವರುವುದು, ಸುತರಾಂ ಬೆವರು ಬಾರದೆ ನಿಂತುಹೋದರೂ ಹೋಗುವುದು, ಮೈ ಕಪ್ಪಗಾಗುವುದು, ಮುಟ್ಟಿದರೆ ತಿಳಿಯದೆ ಹೋಗುವುದು, ಒಂದು ಕಡ್ಡಿ ಗೀರಿದರೂ ಗಾಯವಾಗಿ ಅತಿಶಯವಾದ ವೇದನೆಯಾಗುವುದು, ಕೀಲುಗಳು ಸಡಿಲವಾದ ಹಾಗೆ ತೋರುವುದು, ಆಲಸ್ಯ, ಸೋಲು, ಮೊಳಕಾಲು, ತೊಡೆ, ಸೊಂಟ, ಭುಜಗಳು, ಕೈಕಾಲುಗಳ ಕೀಲುಗಳು ಇವುಗಳಲ್ಲೆಲ್ಲಾ ಹುಳಕಡ್ಡಿಯ ಬೊಕ್ಕೆಗಳಂತಹ ಬೊಕ್ಕೆಗಳೇಳುವುದು, ವ್ಯಥೆ, ಶಿಡತ, ವಡತಗಳಿರುವುದು, ಮೈಭಾರ, ಅವಯವಗಳಲ್ಲಿ ಜವ್ವು ಹಿಡಿಯುವುದು, ಕೀಲುಗಳಲ್ಲಿ ನವೆ, ಕೆರದರೆ ಬಹಳ ವ್ಯಥೆಯಾಗುವುದು, ಮತ್ತು ಹಾಗೆಯೇ ಸುಮ್ಮನಾಗುವುದು, ಪುನಃ ಪುನಃ ಇದೇ ರೀತಿಯಾಗುತ್ತಿರುವುದು, ಶರೀರದ ವರ್ಣ ಕೆಡುವುದು, ಕೀಲುಗಳಲ್ಲಿ ಆಗುವ ಬುಕ್ಕೆಗಳು ಮಂಡಲಾಕಾರವಾಗಿ ಅಂದರೆ ಗುಂಡುಗುಂಡಗೆ ಇರುವುದು, ಇವು ವಾತರಕ್ತರೋಗದ ಪೂರ್ವಲಕ್ಷಣಗಳು.

ವಾತೇಧಿಕೇಧಿಕಂತತ್ರಶೂಲಸ್ಫುರಣಭಂಜನಂ ||
ಶೋಥಸ್ಯರೌಕ್ಷ್ಯಂಕೃಷ್ಣತ್ವಂಶ್ಯಾವತಾವೃದ್ಧಿಹಾನಯಃ || ೮ ||
ಧಮನ್ಯಂಗುಲಿಸಂಧೀನಾಂಸಂಕೋಚೋಂಗಗ್ರಹೋತಿರುಕ್ ||
ಶೀತದ್ವೇಷಾನುಪಶಯೌಸ್ತಂಭವೇಪಥುಸುಪ್ತಯಃ || ೯ ||
ರಕ್ತೇಶೋಥೋತಿರುಕ್ ತೋದಸ್ತಾಮ್ರಶ್ಚಿಮುಚಿಮಾಯತೆ ||
ಸ್ನಿಗ್ಧರೂಕ್ಷೈಶ್ಶಮಂನೈತಿಕಂಡೂಕ್ಲೇದಸಮನ್ವಿತಃ || ೧೦ ||

**ಪಿತ್ತೇವಿದಾಹಸ್ಸಂಮೋಹಃಸ್ವೇದೋಮೂರ್ಛಾಮದಸ್ತೃಷಾ ॥**
**ಸ್ಪರ್ಶಾಸಹತ್ವಂರುಗ್ರಾಗಃಶೋಥಃಪಾಕೋಭೃಶೋಷ್ಮತಾ ॥೧೧॥**
**ಕಫೇಸ್ತೈಮಿತ್ಯಗುರುತಾಸುಪ್ತಿಸ್ನಿಗ್ಧತ್ವಶೀತತಾಃ ॥**
**ಕಂಡೂರ್ಮಂದಾಚರುಗ್ದ್ವಂದ್ವಂಸರ್ವಲಿಂಗಂಚಸಂಕರಾತ್ ॥೧೨॥**

ಈ ವಾತರಕ್ತರೋಗದಲ್ಲಿ ಪ್ರಕುಪಿತವಾಗಿರುವ ವಾಯುವಿನ ಶಕ್ತಿಯೇ ಅಧಿಕವಾಗಿದ್ದಲ್ಲಿ ನೋವು, ಮಿಡಿಯುವುದು, ಸಡತ, ಇವುಗಳು ಉಲ್ಬಣವಾಗಿ ಇರುವುದು, ಊದಿರತಕ್ಕ ಭಾಗವು ಬಹಳ ವರಟಾಗಿರುವುದು, ಆದರ ವರ್ಣವು ಕರ್ರಗೊ ಹೊಗೆಯ ಬಣ್ಣವಾಗಿಯೋ ಇರುವುದು, ಈ ಊದು ಆಗಾಗ್ಯೆ ಇಳಿಯುವುದು ಮತ್ತು ಹೆಚ್ಚುವುದು ಈ ರೀತಿಯಾಗುವುದು, ನರಗಳು ಬೆರಳಿನ ಕೀಲುಗಳು ಬಗ್ಗಿಹೋಗುವುದು, ಮೈಯೆಲ್ಲಾ ಹಿಡಿದುಕೊಳ್ಳುವುದು, ಅತಿಯಾಗಿ ನೋವು, ತಣ್ಣಗಿರುವ ವಸ್ತುಗಳಲ್ಲಿ ಅತಿಯಾಗಿ ದ್ವೇಷ, ಶೀತವೀರ್ಯಗಳಾದ ಔಷಧಗಳಿಂದ ಯಾವ ಪ್ರಯೋಜನವೂ ಆಗುವುದಕ್ಕಿಲ್ಲ, ಅವಯವಗಳು ನಿಶ್ಚಲಗಳಾಗುವುದು, ನಡುಕ ಬರುವುದು, ಅವಯವಗಳಲ್ಲಿ ಜವ್ವು ಹಿಡಿಯುವುದು ಇವು ಲಕ್ಷಣಗಳು. ವಾತರಕ್ತರೋಗದಲ್ಲಿ ಪ್ರಕುಪಿತವಾದ ವಾಯುವಿಗಿಂತ ರಕ್ತವೇ ಪ್ರಧಾನವಾಗಿದ್ದಲ್ಲಿ ಕೀಲುಗಳು ಬಾತುಹೋಗುವುದು, ಅತಿಯಾಗಿ ನೋವಾಗುವುದು, ವ್ಯಥೆ, ಊದಿರುವ ಭಾಗ ಕೆಂಪಗೆ ಜುಮುಗುಟ್ಟುತ್ತಿರುವುದು, ಸ್ನಿಗ್ಧವಾದ ಔಷಧಿಗಳಿಂದಲೂ-ರೂಕ್ಷಗಳಾದ ಪ್ರತಿಕ್ರಿಯೆಗಳಿಂದಲೂ ಏನೂ ಪ್ರಯೋಜನ ಬರುವುದಿಲ್ಲ, ನವೆಯಿರುವುದು, ಬೆವರು ಬರುತ್ತಿರುವುದು ಇವು ಲಕ್ಷಣಗಳು, ವಾತರಕ್ತದಲ್ಲಿ ಪಿತ್ತವು ಪ್ರಧಾನವಾಗಿದ್ದಲ್ಲಿ ಅಂಗಗಳಲ್ಲಿ ಉರಿ, ಆಗಾಗ್ಯೆ ಅಜ್ಞಾನ ಬರುತ್ತಿರುವುದು, ಬೆವರು, ಮೂರ್ಛೆ, ಒಂದು ಬಗೆಯ ಮದ, ಬಾಯಾರಿಕೆ, ಇವುಗಳು ಕಾಣಿಸುತ್ತಿರುವುದು, ಶರೀರವನ್ನು ಮುಟ್ಟಿದರೇನೇ ತಡೆಯುವುದಕ್ಕಾಗುವುದಿಲ್ಲ, ನೋವು, ಕೀಲುಗಳು ಊದುವುದು, ಬಾವುಗಳೆದ್ದು ಹಣ್ಣಾಗುವುದು, ಯಾವಾಗ್ಯೂ ಶರೀರವು ಬೆಚ್ಚಗಿರುವುದು ಇವು ಲಕ್ಷಣಗಳು. ವಾತರಕ್ತರೋಗದಲ್ಲಿ ಕಫವು ಪ್ರಧಾನವಾದರೆ ಅವಯವಗಳಲ್ಲಿ ಸ್ಪಂದನಾದಿಗಳಿಲ್ಲದೆ ಮಂದವಾಗಿರುವುದು, ಭಾರ, ಸ್ಪರ್ಶಜ್ಞಾನವಿಲ್ಲದಿರುವುದು, ಅವಯವಗಳನ್ನು ಮುಟ್ಟಿನೋಡಿದರೆ ಜಿಡ್ಡಾಗಿಯೂ ತಣ್ಣಗೂ ಇರುವುದು, ನವೆ ಇರುವುದು ಇವು ಲಕ್ಷಣಗಳು. ಈ ವಾತರಕ್ತರೋಗದಲ್ಲಿ ಎರಡೆರಡು ದೋಷಗಳ ಲಕ್ಷಣಗಳು ಕಂಡು ಬಂದಲ್ಲಿ ದ್ವಂದ್ವದೋಷಜನ್ಯಗಳೆಂಬದಾಗಿಯೂ ಎಲ್ಲಾ ದೋಷಗಳ ಲಕ್ಷಣಗಳೂ ಕಂಡು ಬಂದಲ್ಲಿ ಸನ್ನಿಪಾತಜನ್ಯ ವಾತರಕ್ತವೆಂಬದಾಗಿಯೂ ತಿಳಿಯಬೇಕು.

**ಪಾದಯೋರ್ಮೂಲಮಾಸ್ಥಾಯಕದಾಚಿದ್ಧಸ್ತಯೋರಪಿ ॥**
**ಆಖೋರ್ವಿಷಮಿವಕ್ರುದ್ಧಂತದ್ದೇಹಮುಪಸರ್ಪತಿ ॥೧೩॥**

ಈ ವಾತರಕ್ತರೋಗವು ಇಲಿಯ ವಿಷದ ಹಾಗೆ ಕಾಲಿನಿಂದ ಪ್ರಾರಂಭ ವಾಗಿ ಶರೀರವನ್ನೆಲ್ಲಾ ವ್ಯಾಪಿಸುತ್ತದೆ, ಕೆಲವು ವೇಳೆ ಕೈಯ್ಯಿಂದ ಪ್ರಾರಂಭ ವಾಗಿ ಶರೀರವನ್ನೆಲ್ಲಾ ವ್ಯಾಪಿಸುವುದೂ ಉಂಟು.

ಆಜಾನುಸ್ಫುಟಿತಂಯಚ್ಚ ಪ್ರಭಿನ್ನಂಪ್ರಸ್ರುತಂಚಯತ್ ॥
ಉಪದ್ರವೈಶ್ಚಯಜ್ಜುಷ್ಟಂಪ್ರಾಣಮಾಂಸಕ್ಷಯಾದಿಭಿಃ ॥ ೧೪ ॥
ವಾತರಕ್ತಮಸಾಧ್ಯಂಸ್ಯಾದ್ಯಾಪ್ಯಂಸಂವತ್ಸರೋತ್ಥಿತಂ ॥
ಅಸ್ವಪ್ನಾರೋಚಕಶ್ವಾಸಮಾಂಸಕೋಥಶಿರೋಗ್ರಹಾಃ ॥ ೧೫ ॥
ಮೂರ್ಚ್ಛಾರ್ತಿಮದರುಕ್ತೃಷ್ಣಾಜ್ವರಮೋಹಪ್ರವೇಪಕಾಃ ॥
ಹಿಕ್ಕಾಪಾಂಗುಲ್ಯವೀಸರ್ಪಪಾಕತೋದಭ್ರಮಕ್ಲಮಾಃ ॥ ೧೬ ॥
ಅಂಗುಲೀವಕ್ರತಾಸ್ಫೋಟದಾಹಮರ್ಮಗ್ರಹಾರ್ಬುದಾಃ ॥
ಏತೈರುಪದ್ರವೈರ್ವರ್ಜ್ಯಂಮೋಹೇನೈಕೇನವಾಪಿಯತ್ ॥ ೧೭ ॥
ಅಕೃತ್ಸ್ನೋಪದ್ರವಂಯಾಪ್ಯಂಸಾಧ್ಯಂಸ್ಯಾನ್ನಿರುಪದ್ರವಂ ॥
ಏಕದೋಷಾನುಗಂಸಾಧ್ಯಂನವಂಯಾಪ್ಯಂದ್ವಿದೋಷಜಂ ॥ ೧೮ ॥
ತ್ರಿದೋಷಜಮಸಾಧ್ಯಂಸ್ಯಾದ್ಯಸ್ಯಚಸ್ಯುರುಪದ್ರವಾಃ ॥

ಮೊಣಕಾಲಿನವರಿಗೂ ಬೊಕ್ಕೆಗಳಾಗಿ ಒಡದು ಸೋರುತ್ತಲಿರುವುದು, ಬಲ ಮತ್ತು ರಕ್ತಮಾಂಸಗಳು ಕ್ಷಯಿಸಿ ಉಪದ್ರೋಗಗಳು ಹುಟ್ಟಿರುವುದು, ಹೀಗಿದ್ದರೆ ಅಸಾಧ್ಯವೆಂದು ತಿಳಿಯುವುದು, ರೋಗವು ಶರೀರದಲ್ಲಿ ಕಾಣಿಸಿಕೊಂಡು ಒಂದು ವರುಷವಾಗಿದ್ದರೆ ಯಾಪ್ಯ ಎಂದರೆ ಕಾಲಹರಣಮಾಡತಕ್ಕದ್ದೆಂದು ತಾತ್ಪರ್ಯ. ನಿದ್ರೆಯಿಲ್ಲದಿರುವುದು, ಅರೋಚಕ, ಉಬ್ಬಸ, ಮಾಂಸಗಳು ಕೊಳತು ಹೋಗಿರು ವುದು, ಶಿರೋಗ್ರಹವೆಂದರೆ ತಲೆಪಡತ, ಮೂರ್ಛೆ, ಉನ್ಮಾದ, ಬಾಯಾರಿಕೆ, ಜ್ವರ, ಅಜ್ಞಾನ, ಮೈನಡುಕ, ಬಿಕ್ಕಳಿಕೆ, ಮನುಷ್ಯನು ಕುಂಟನಾಗುವುದು, ಮೈಯ್ಯಲ್ಲೆಲ್ಲಾ ಬೊಕ್ಕೆಗಳೇಳುವುದು, ವ್ಯಥೆಯಾಗುತ್ತಿರುವುದು, ಬುದ್ಧಿಭ್ರಮಣೆ, ಆಯಾಸ, ಬೆರಳುಗಳೆಲ್ಲಾ ಒಡೆದುಹೋಗುವುದು ಮತ್ತು ಸೊಟ್ಟವಾಗುವುದು, ಮೈಯ್ಯುರಿ, ಮರ್ಮಸ್ಥಳದಲ್ಲಿ ನೋವು, ಮೈಯ್ಯಲ್ಲೆಲ್ಲಾ ಗಂಟುಗಳಾಗುವುದು ಇಂತಹ ಉಪದ್ರವಗಳಿದ್ದರೆ ಅಂತಹ ವಾತರಕ್ತರೋಗವು ಅಸಾಧ್ಯವೆಂದು ತಿಳಿದು ತ್ಯಜಿಸಬೇಕು. ಹಿಂದೆ ಹೇಳಿದ ಉಪದ್ರವಗಳ ಮಧ್ಯೆ ಕೆಲವಿದ್ದು ಕೆಲ ವಿಲ್ಲದಿದ್ದಲ್ಲಿ ಯಾಪ್ಯ ಎಂದರೆ ಕಾಲಹರಣಮಾಡತಕ್ಕದ್ದೆಂದು ತಿಳಿಯಬೇಕು. ಉಪದ್ರವಗಳೇನೂ ಇಲ್ಲದಿದ್ದಲ್ಲಿ ಸಾಧ್ಯವೆಂದು ತಿಳಿಯಬೇಕು, ಅಜ್ಞಾನವೊಂದಿ ದ್ದರೂ ಅಸಾಧ್ಯವೆಂದೇ ತಿಳಿಯಬೇಕು. ತ್ರಿದೋಷಗಳ ಮಧ್ಯೆ ಯಾವುದಾದರೂ ಒಂದು ದೋಷವು ಪ್ರಕುಪಿತವಾಗಿ ರೋಗವು ಉತ್ಪನ್ನವಾಗಿರುವುದು, ರೋಗವು ಹೊಸತಾಗಿರುವುದು, ಹೀಗಿದ್ದಲ್ಲಿ ಸಾಧ್ಯವೆಂದು ತಿಳಿಯಬೇಕು, ಎರಡು ದೋಷ

ಗಳು ಪ್ರಕುಪಿತಗಳಾಗಿ ರೋಗವು ಹುಟ್ಟಿದ್ದಲ್ಲಿ ಯಾಪ್ಯ ಎಂದರೆ ಕಾಲಹರಣ ಮಾಡತಕ್ಕದ್ದೆಂದು ತಿಳಿಯಬೇಕು. ಮೂರು ದೋಷಗಳ ಲಕ್ಷಣಗಳೂ ಇದ್ದು ಉಪದ್ರವಗಳೂ ಇದ್ದರೆ ಅಸಾಧ್ಯವೆಂಬದಾಗಿಯೂ ತಿಳಿಯಬೇಕು.

ಇಲ್ಲಿಗೆ ವಾತರಕ್ತನಿದಾನ ಸಂಪೂರ್ಣ.

---

## ಊರುಸ್ತಂಭನಿದಾನ.

**ಶೀತೋಷ್ಣದ್ರವಸಂಶುಷ್ಕಗುರುಸ್ನಿಗ್ಧೈರ್ನಿಷೇವಿತೈಃ ॥**
**ಜೀರ್ಣಾಜೀರ್ಣೇತಥಾಯಾಸಸಂಕ್ಷೋಭಸ್ವಪ್ನಜಾಗರೈಃ ॥ ೧ ॥**
**ಸಶ್ಲೇಷ್ಮಮೇದಃಪವನಃಸಾಮಮತ್ಯರ್ಥಸಂಚಿತಂ ॥**
**ಅಭಿಭೂಯೇತರಂದೋಷಮೂರುಚೇತ್ಪ್ರತಿಪದ್ಯತೇ ॥ ೨ ॥**
**ಸಕ್ಥ್ಯಸ್ಥೀನಿಪ್ರಪೂರ್ಯಾಂತಶ್ಲೇಷ್ಮಣಾಸ್ತಿಮಿತೇನಚ ॥**
**ತದಾಸ್ತಭ್ನಾತಿತೇನೋರೂಸ್ತಬ್ಧೌಶೀತಾವಚೇತನೌ ॥ ೩ ॥**
**ಪರಕೀಯಾವಿವಗುರೂಸ್ಯಾತಾಮತಿದೃಢವ್ಯಥೌ ॥**
**ಧ್ಯಾನಾಂಗಮರ್ದಸ್ತೈಮಿತ್ಯತಂದ್ರಾಛರ್ದ್ಯರುಚಿಜ್ವರೈಃ ॥ ೪ ॥**
**ಸಂಯುಕ್ತೌಪಾದಸದನಕೃಚ್ಛ್ರೋದ್ಧರಣಸುಪ್ತಿಭಿಃ ॥**
**ತಮೂರುಸ್ತಂಭಮಿತ್ಯಾಹುರಾಢ್ಯವಾತಮಥಾಪರೇ ॥ ೫ ॥**

ತಣ್ಣಗಿರುವ ಆಹಾರಗಳು, ಬಿಸಿಯಾದ ಆಹಾರಗಳು, ದ್ರವರೂಪವಾದ ಆಹಾರಗಳು, ಒಣಗಿ ಗಟ್ಟಿಯಾದ ಆಹಾರಗಳು, ಗುರ್ವಾಹಾರಗಳೆಂದರೆ ಜಾಗ್ರತೆಯಾಗಿ ಜೀರ್ಣಕ್ಕೆ ಬಾರದಂತಹ ಆಹಾರಗಳು, ಹೆಚ್ಚಿಗೆ ಜಿಡ್ಡನ್ನು ಆಹಾರದ ಜೊತೆಯಲ್ಲಿ ತಿನ್ನುವುದು ಈ ಕಾರಣಗಳಿಂದಲೂ, ಮತ್ತು ಭೋಜನವಾಡಿದ ಆಹಾರವಸ್ತುವು ಚನ್ನಾಗಿ ಜೀರ್ಣವಾದ ಮೇಲೆ ಅತಿಯಾಗಿ ಹಸಿದು ಭೋಜನ ಮಾಡುವುದು, ಚನ್ನಾಗಿ ಜೀರ್ಣವಾಗುವ ಮುಂಚಿತವಾಗಿಯೇ ಭೋಜನ ಮಾಡುವುದು, ಅತಿಯಾಗಿ ಆಯಾಸಪಟ್ಟು ಕೆಲಸಮಾಡುವುದು, ಮನಸ್ಸಿಗೆ ವ್ಯಾಕುಲವನ್ನು ಹುಟ್ಟಿಸತಕ್ಕ ಇತರ ಕಾರಣಗಳು, ನಿದ್ರೆಗೆಡುವುದು, ಅತಿಯಾಗಿ ನಿದ್ರೆಮಾಡುವುದು ಈ ಕಾರಣಗಳಿಂದ ಶ್ಲೇಷ್ಮ ಮೇದಸ್ಸು ಇವುಗಳೊಡನೆ ಕೂಡಿಕೊಂಡು ವಾಯುವು ಪ್ರಕುಪಿತವಾಗಿ ಪಿತ್ತದ ಕಾರ್ಯವೇನೂ ನಡೆಯದಂತೆ ತಡದು ಆಮವಾದ ಅಂದರೆ ಅಪಕ್ವವಾದ ದೋಷವನ್ನು ತೊಡೆಯಲ್ಲಿ ತಂದು ನಿಲ್ಲಿಸಿ ತೊಡೆಯಲ್ಲಿರುವ ಅಸ್ಥಿಗಳನ್ನು ಶ್ಲೇಷ್ಮದಿಂದ ತುಂಬಿಕೊಳ್ಳುವಂತೆ ಮಾಡಿ ತೊಡೆಯನ್ನು ಸ್ತಂಭದಂತೆ ಯಾವ ಕೆಲಸಕ್ಕೂ ಬಾರದಂತೆ ಮಾಡಿಬಿಡುತ್ತವೆ. ಇದರಿಂದ ಮನುಷ್ಯನಿಗೆ ತೊಡೆಯಿದ್ದರೂ ತೊಡೆಯಿಲ್ಲದಂತಾಗಿ ಸತ್ತವರ ಶರೀರದಂತೆ ಯಾವಾಗಲೂ ತಣ್ಣಗಾಗಿ ಹೋಗುತ್ತವೆ, ಯಾವಾಗ್ಯೂ ಬಹಳ ಭಾರ

ವಾಗಿ ನೋಯುತ್ತಿರುತ್ತವೆ, ರೋಗಿಯು ಯಾವಾಗ ನೋಡಿದರೂ ಅರ್ಥವಿಲ್ಲದ ಆಲೋಚನೆಯಲ್ಲಿ ಮಗ್ನನಾಗಿ ಹೋಗಿರುವುದು, ಮೈನೋವು, ಶರೀರವು ಸ್ತಿಮಿತವಾಗಿರುವುದು ಅಂದರೆ ಯಾವ ಕೆಲಸಮಾಡುವುದಕ್ಕೂ ಮನಸ್ಸಿನಲ್ಲಿ ಉತ್ಸಾಹವಿಲ್ಲದಿರುವುದು, ತೂಕಡಿಕೆ, ವಮನ, ಅರುಚಿ, ಜ್ವರ, ಕಾಲನ್ನು ಮೇಲಕ್ಕೆತ್ತುವುದಕ್ಕೂ ಇಡುವುದಕ್ಕೂ ಬಹಳ ಕಷ್ಟ, ಚರ್ಮದಲ್ಲಿ ಸ್ಪರ್ಶಜ್ಞಾನವಿರುವುದಕ್ಕಿಲ್ಲ ಈ ಲಕ್ಷಣಗಳೆಲ್ಲಾ ಕಾಣಬರುತ್ತಿದ್ದಲ್ಲಿ ಅಂತಹ ರೋಗವನ್ನು ಊರುಸ್ತಂಭವೆಂದು ಕೆಲವರೂ ಆಢ್ಯವಾತವೆಂದು ಮತ್ತೆ ಕೆಲವರೂ ಹೇಳುತ್ತಾರೆ.

ಪ್ರಾಗ್ರೂಪಮಸ್ಯನಿದ್ರಾತಿಧ್ಯಾನಂಸ್ತಿಮಿತತಾಜ್ವರಃ ||
ರೋಮಹರ್ಷೋರೋಚಿಶ್ಛರ್ದಿರ್ಜಂಘೋರ್ವೋಸ್ಸದನಂತಥಾ||೬||
ವಾತಶಂಕಿಭಿರಜ್ಞಾನಾತ್ತಸ್ಯಸ್ಯಾತ್ಸ್ನೇಹನಾತ್ಪುನಃ ||
ಪಾದಯೋಸ್ಸದನಂಸುಪ್ತಿಂಕೃಚ್ಛ್ರಾದುದ್ಧರಣಂತಥಾ || ೭ ||
ಜಂಘೋರುಗ್ಲಾನಿರತ್ಯರ್ಥಂಶಶ್ವಚ್ಚಾದಾಹವೇದನೇ ||
ಪಾದಂಚವ್ಯಥತೇನ್ಯಸ್ತಂಶೀತಸ್ಪರ್ಶಂನವೇತ್ತಿಚ || ೮ ||
ಸಂಸ್ಥಾನೇಪೀಡನೇಗತ್ಯಾಂಚಲನೇಚಾಪ್ಯನೀಶ್ವರಃ ||
ಅನ್ಯನೇಯೋಹಿಸಂಭಗ್ನಾವೂರೂಪಾದೌಚಮನ್ಯತೇ || ೯ ||
ಯದಾದಾಹಾರ್ತಿತೋದಾರ್ತೋವೇಪನಃಪುರುಷೋಭವೇತ್ ||
ಊರುಸ್ತಂಭಸ್ತದಾಹನ್ಯಾತ್ಸಾಧಯೇದನ್ಯಥಾನವಂ || ೧೦ ||

ಊರುಸ್ತಂಭವಾತದ ಪೂರ್ವರೂಪ—ನಿದ್ರೆಹೆಚ್ಚು, ಯಾವಾಗ್ಯೂ ಏನೋ ಆಲೋಚನೆ ಮಾಡುತ್ತಿರುವುದು, ಅವಯವಗಳು ಚಲನಶೂನ್ಯವಾಗಿ ಸ್ತಬ್ಧವಾಗಿರುವುದು, ಜ್ವರ, ರೋಮಾಂಚ, ಅರುಚಿ, ವಮನ, ಮೊಳಕಾಲು ಮತ್ತು ತೊಡೆಗಳು ಹಿಡಿದುಕೊಳ್ಳುವುದು, ವಾತರೋಗದ ಚಿಕಿತ್ಸೆಕಳಾದ ಸ್ನೇಹನ ಸ್ವೇದನಾದಿಗಳನ್ನು ಮಾಡಿದರೆ ರೋಗವು ಹೆಚ್ಚುತ್ತಲೇ ಹೋಗುವುದು, ಕಾಲು ನೆಲದ ಮೇಲೆ ಇಡುವುದೇ ಆಗುವುದಕ್ಕಿಲ್ಲ. ಸ್ಪರ್ಶಜ್ಞಾನ ತಪ್ಪಿಹೋಗುವುದು, ಕಾಲನ್ನು ಮೇಲಕ್ಕೆತ್ತುವುದೆಂದರೆ ಅದೊಂದು ಪ್ರಯತ್ನವೇ ಆಗುವುದು, ಕಾಲುಗಳು ಬಳಲಿ ಬರುತ್ತಿರುವುದು, ಉರಿ ನೋವುಗಳಿರುವುದು, ಕಾಲೂರಿದರೆ ನೋವು ತಣ್ಣಗಿರುವ ಯಾವ ವಸ್ತುವನ್ನು ಮುಟ್ಟಿದರೂ ಗೊತ್ತೇ ಆಗುವುದಕ್ಕಿಲ್ಲ, ಬಿಗಿಯಾಗಿ ಕಾಲೂರಿ ನಿಲ್ಲುವುದು, ನಡೆಯುವುದು, ಅಲ್ಲಾಡಿಸುವುದು ಇವುಗಳೆಲ್ಲಾ ಅಸಾಧ್ಯವಾಗಿ ಚಲನವಲನಾದಿಗಳಿಗೆಲ್ಲಾ ಇತರರ ಸಹಾಯವನ್ನೇ ಅಪೇಕ್ಷಿಸುವಂತಾಗುವುದು. ಈ ಊರುಸ್ತಂಭವಾತದಲ್ಲಿ ಇದು ಅಸಾಧ್ಯ ಲಕ್ಷಣ, ಕಾಲುರಿ, ವಡತ, ನಡುಕ ಇವುಗಳಿದ್ದರೂ ಅಸಾಧ್ಯ ಲಕ್ಷಣವೇ, ಈ ಅಸಾಧ್ಯ ಲಕ್ಷಣಗಳ್ಯಾವವೂ ಇಲ್ಲದೆ ರೋಗವು ಹೊಸತಾಗಿದ್ದಲ್ಲಿ ಅದನ್ನು ಚಿಕಿತ್ಸೆಗೆ ಸಾಧ್ಯವೆಂದು ತಿಳಿಯಬೇಕು.

ಇಲ್ಲಿಗೆ ಊರುಸ್ತಂಭನಿದಾನ ಸಂಪೂರ್ಣ.

# ಆ ಮ ವಾ ತ ನಿ ದಾ ನ.

ವಿರುದ್ಧಾಹಾರಚೇಷ್ಟಸ್ಯಮಂದಾಗ್ನೇರ್ನಿಶ್ಚಲಸ್ಯಚ ||
ಸ್ನಿಗ್ಧಂಭುಕ್ತವತೋಹ್ಯನ್ನಂವ್ಯಾಯಾಮಂಕುರ್ವತಸ್ತಥಾ || ೧ ||
ವಾಯುನಾಪ್ರೇರಿತೋಹ್ಯಾಮಃಶ್ಲೇಷ್ಮಸ್ಥಾನಂಪ್ರಧಾವತಿ ||
ತೇನಾತ್ಯರ್ಥಂವಿದಗ್ಧೋಸಾಧಮನೀಃಪ್ರತಿಪದ್ಯತೇ || ೨ ||
ವಾತಪಿತ್ತಕಫೈರ್ಭೂಯೋದೂಷಿತಸ್ಸೋನ್ನಜೋರಸಃ ||
ಸ್ರೋತಾಂಸ್ಯಭಿಷ್ಯಂದಯತಿನಾನಾವರ್ಣೋತಿಪಿಚ್ಛಿಲಃ || ೩ ||
ಜನಯತ್ಯಾಶುದೌರ್ಬಲ್ಯಂಗೌರವಂಹೃದಯಸ್ಯಚ ||
ವ್ಯಾಧೀನಾಮಾಶ್ರಯೋಹ್ಯೇಷಆಮಸಂಜ್ಞೋತಿದಾರುಣಃ || ೪ ||
ಯುಗಪತ್ಕುಪಿತಾವಂತಸ್ತ್ರಿಕಸಂಧಿಪ್ರವೇಶಕೌ ||
ಸ್ತಬ್ಧಾಂನಾಕುರುತೋಗಾತ್ರಮಾಮವಾತಸ್ಸಉಚ್ಯತೇ || ೫ ||

ಪ್ರಕೃತಿ ವಿರುದ್ಧಗಳಾದ ಮತ್ತು ಆಹಾರ ವಸ್ತುಗಳಲ್ಲಿಯೇ ಪರಸ್ಪರ ವಿರುದ್ಧಗಳಾದ ವಸ್ತುಗಳನ್ನು ಭೋಜನಮಾಡುವುದು, ವಿರುದ್ಧ ಚೇಷ್ಟೆಗಳೆಂದರೆ "ಅಜೀರ್ಣೇವ್ಯಾಯಾಮವ್ಯವಾಯಜಲಪ್ರತರಣಾದಿ" ಎಂಬ ಶಾಸ್ತ್ರವಚನದಲ್ಲಿ ಹೇಳಿರುವಂತೆ ಅಜೀರ್ಣವಿರುವಾಗ್ಯೆ ವ್ಯಾಯಾಮ ಮಾಡುವುದೇ ಮೊದಲಾದ ವಿರುದ್ಧ ಚೇಷ್ಟೆಗಳು ಇವುಗಳನ್ನು ಮಾಡುವುದು. ಅಗ್ನಿಮಾಂದ್ಯವಿರುತ್ತಿರುವುದು ಕುಳಿತ ಕಡೆಯೇ ಕುಳಿತಿರುವುದು, ತುಪ್ಪ ಮೊದಲಾದ ಜಿಡ್ಡನ್ನು ಹೆಚ್ಚಿಗೆ ತಿಂದು ಅದು ಜೀರ್ಣವಾಗಲೆಂದು ವ್ಯಾಯಾಮ ಮಾಡುವುದು ಈ ಕಾರಣಗಳಿಂದ ವಾಯುವು ಪ್ರಕುಪಿತವಾಗಿ ಅಪಕ್ವವಾದ ಅನ್ನರಸವನ್ನು ಮಾರ್ಗ ತಪ್ಪಿಸಿ ಶ್ಲೇಷ್ಮಸ್ಥಾನಕ್ಕೆ ಓಡಿಸುತ್ತದೆ. ಅಲ್ಲಿಗೆ ಓಡಿದ ಅನ್ನರಸವು ಮತ್ತೆ ಅಲ್ಲಿಯೂ ವಾತಶ್ಲೇಷ್ಮಗಳಿಂದ ವಿದಗ್ಧಾವಸ್ಥೆಯನ್ನು ಹೊಂದಿ ರಸವಾಹಿನಾಡಿಗಳಲ್ಲಿ ಪ್ರವೇಶಿಸಿ, ಪ್ರವಹಿಸತಕ್ಕ ಕಾಲದಲ್ಲಿಯೂ ಕೂಡ ತ್ರಿದೋಷಗಳಿಂದಲೇ ಕೆಡಿಸಲ್ಪಟ್ಟು ನಾನಾ ವಿಧವಾದ ವರ್ಣಗಳುಳ್ಳದ್ದಾಗಿಯೂ ಅತಿಜಿಟಾಗಿಯೂ ಆಗಿ ರಸವಹನಾಡಿಗಳನ್ನೆಲ್ಲಾ ಕೆಡಿಸುತ್ತದೆ. ರೋಗಿಯು ಬಹಳ ಜಾಗ್ರತೆಯಾಗಿ ದುರ್ಬಲನಾಗುತ್ತ ಬರುತ್ತಾನೆ, ಹೃದಯವು ಅತಿ ಭಾರವಾಗುತ್ತದೆ, ಈ ಆಮರಸವು ಸಕಲ ವ್ಯಾಧಿಗಳನ್ನೂ ಹುಟ್ಟಿಸುತ್ತದೆ, ಈ ಆಮರಸವು ಪ್ರಕುಪಿತಗಳಾದ ವಾತಾದಿ ತ್ರಿದೋಷಗಳೊಡನೆ ಸೇರಿ ಸೊಂಟವನ್ನು ಅಲ್ಲಾಡದಂತೆ ಮಾಡುತ್ತದೆ, ಶರೀರವೆಲ್ಲಾ ನಿಶ್ಚಲವಾಗುವಂತೆಯಾದರೂ ಮಾಡಬಹುದು, ಇದಕ್ಕೇನೇ ಆಮವಾತವೆಂಬ ಹೆಸರು.

ಅಂಗಮರ್ದೋರುಚಿಸ್ತೃಷ್ಣಾಆಲಸ್ಯಂಗೌರವಂಜ್ವರಃ ||
ಅಪಾಕಶ್ಶೂನತಾಂಗಾನಾಮಾಮವಾತಸ್ಯಲಕ್ಷಣಂ || ೬ ||

ಆಮವಾತರೋಗದ ಸಾಮಾನ್ಯ ಲಕ್ಷಣವೇನಂದರೆ—ಮೈಯ್ಯನ್ನೆಲ್ಲಾ ಹಿಸಿಕಿದಂತೆ ಮೈನೋವು, ಅರುಚಿ, ಬಾಯಾರಿಕೆ, ಆಲಸ್ಯ (ಸೋಮಾರಿತನ), ಮೈಭಾರ, ಜ್ವರ, ಅಜೀರ್ಣ, ಅವಯವಗಳು ಊದಿಹೋಗಿರುವುದು, ಇವು ಆಮವಾತರೋಗದ ಸಾಮಾನ್ಯ ಲಕ್ಷಣಗಳು.

ಸಕಷ್ಟಸ್ಸರ್ವರೋಗಾಣಾಂಯದಾಪ್ರಕುಪಿತೋಭವೇತ್ ||
ಹಸ್ತಪಾದಶಿರೋಗುಲ್ಫತ್ರಿಕಜಾನೂರುಸಂಧಿಷು || ೭ ||
ಕರೋತಿಸರುಜಂಶೋಥಂಯತ್ರದೋಷಃಪ್ರಪದ್ಯತೆ ||
ಸದೇಶೋರುಜ್ಯತೇತ್ಯರ್ಥಂವ್ಯಾವಿದ್ಧಇವವೃಶ್ಚಿಕೈಃ || ೮ ||
ಜನಯೇತ್ಸೋಗ್ನಿದೌರ್ಬಲ್ಯಂಪ್ರಸೇಕಾರುಚಿಗೌರವಂ ||
ಉತ್ಸಾಹಹಾಸಂವೈರಸ್ಯಂದಾಹಂಚಬಹುಮೂತ್ರತಾಂ || ೯ ||
ಕುಕ್ಷೌಕಠಿನತಾಶೂಲಂತಥಾನಿದ್ರಾವಿಪರ್ಯಯಃ ||
ತೃಟ್ಛರ್ದಿಭ್ರಮಮೂರ್ಚ್ಛಾಶ್ಚಹೃದ್ಗ್ರಹಂವಿಡ್ವಿಬದ್ಧತಾಂ|೧೦|
ಜಾಡ್ಯಾಂತ್ರಕೂಜಮಾನಾಹಂಕಷ್ಟಾಂಶ್ಚಾನ್ಯಾನುಪದ್ರವಾನ್ ||

ಅತ್ಯಂತ ಕಷ್ಟಕರವಾದ ಈ ರೋಗವು ಕೈ, ಕಾಲು, ಹರಡು, ತಲೆ, ಪೊಳಕಾಲು, ಸೊಂಟ, ತೊಡೆ ಇವುಗಳ ಕೀಲುಗಳಲ್ಲೆಲ್ಲಾ ವ್ಯಾಪಿಸಿ ಪ್ರಕುಪಿತವಾದ ದೋಷವು ಯಾವ ಪ್ರದೇಶದಲ್ಲಿ ಬಂದು ಕೂಡುತ್ತವೆಯೋ ಆ ಸ್ಥಳದಲ್ಲಿ ಯಾವಾಗಲೂ ಚೇಳು ಕಡಿದಂತೆ ನೋಯುತ್ತಿರುವುದು. ಅಗ್ನಿಮಾಂದ್ಯ, ಬಾಯಿನೀರು ಬರುತ್ತಿರುವುದು, ಬಾಯಿರುಚಿ ತಪ್ಪಿಹೋಗುವುದು, ಮೈಭಾರ, ಕೆಲಸಮಾಡಲು ಉತ್ಸಾಹ ತಪ್ಪಿಹೋಗುವುದು, ಬಾಯಿಗೆ ಯಾವ ರಸವೂ ತೋರುವುದಕ್ಕಿಲ್ಲ, ಮೈಯ್ಯುರಿ, ಮೂತ್ರವು ವೃದ್ಧಿಯಾಗುವುದು, ಹೊಟ್ಟೆ ಗಟ್ಟಿಯಾಗಿರುವುದು, ಹೊಟ್ಟೆಶೂಲೆ, ನಿದ್ರೆ ಬಾರದೆಹೋಗುವುದು. ಬಾಯಾರಿಕೆ, ವಮನ, ಬುದ್ಧಿಭ್ರಮಣೆ, ಮೂರ್ಛೆ, ಎದೆಹಿಡಿದುಕೊಳ್ಳುವುದು, ಮಲಬಂಧ, ಜಡತ್ವವನ್ನು ಹುಟ್ಟಿಸುವುದು, ಹೊಟ್ಟೆಯಲ್ಲಿ ಶಬ್ದ, ಹೊಟ್ಟೆಯುಬ್ಬರ, ಇಂತಹ ತೊಂದರೆಗಳನ್ನೆಲ್ಲಾ ಉಂಟುಮಾಡುತ್ತದೆ.

ಪಿತ್ತಾತ್ಸದಾಹರಾಗಂಚಸಶೂಲಂಪವನಾನುಗಂ || ೧೧ ||
ಸ್ತಿಮಿತಂಗುರುಕಂಡೂಂಚಕಫದುಷ್ಟಂತಮಾದಿಶೇತ್ ||

ಆಮವಾತರೋಗದಲ್ಲಿ ಪಿತ್ತವು ಅಧಿಕವಾಗಿದ್ದಲ್ಲಿ ಊದಿರತಕ್ಕ ಭಾಗದಲ್ಲಿ ಉರಿ ಮತ್ತು ಕೆಂಪು ವರ್ಣ ಸಹ ಇರುತ್ತದೆ, ವಾತವು ಅಧಿಕವಾಗಿದ್ದಲ್ಲಿ ವಡತ, ಶೂಲೆ ಇವುಗಳಿರುತ್ತವೆ, ಕಫವು ಹೆಚ್ಚಿಗೆ ಇದ್ದಲ್ಲಿ ಅತಿಯಾಗಿ ಊದಿಕೊಂಡು ಸ್ತಿಮಿತವಾಗಿ ಭಾರವಾಗಿ ನವೆಯುಳ್ಳದ್ದಾಗಿರುತ್ತದೆ.

ಏಕದೋಷಾನುಗಸ್ಸಾಧ್ಯೋದ್ವಿದೋಷೋಯಾಪ್ಯ ಉಚ್ಯತೇ॥೧೨॥
ಸರ್ವದೇಹಚರಶ್ಯೋಥಸ್ಸಕೃಚ್ಛ್ರಸ್ಸಾನ್ನಿಪಾತಿಕಃ ॥

ಈ ಆಮವಾತರೋಗವು ಒಂದೇ ದೋಷವು ಅಧಿಕವಾಗಿ ಹುಟ್ಟಿದ್ದಲ್ಲಿ ಸಾಧ್ಯವೆಂಬದಾಗಿಯೂ ಎರಡು ದೋಷಗಳು ಅಧಿಕವಾಗಿ ಉತ್ಪನ್ನವಾಗಿದ್ದಲ್ಲಿ ಯಾಪ್ಯವೆಂಬದಾಗಿಯೂ (ಕಾಲಹರಣವಾಗತಕ್ಕದ್ದು) ಮೂರು ದೋಷಗಳೂ ಸಮವಾಗಿ ಪ್ರಕುಪಿತವಾಗಿದ್ದು ಬಾಕು (ಶೋಥೆ) ಮೈಯ್ಯಲ್ಲೆಲ್ಲಾ ಇದ್ದಲ್ಲಿ ಕೃಚ್ಛ್ರಸಾಧ್ಯ ಎಂದರೆ ಕಷ್ಟವೆಂಬದಾಗಿಯೂ ತಿಳಿಯಬೇಕು.

ಇಲ್ಲಿಗೆ ಆಮವಾತನಿದಾನ ಸಂಪೂರ್ಣ.

---

## ಶೂಲನಿದಾನ.

ದೋಷೈಃಪೃಥಕ್ಸಮಸ್ತಾಮದ್ವಂದ್ವೈಶ್ಶೂಲೋಷ್ಟಧಾಭವೇತ್ ॥
ಸರ್ವೇಷ್ವೇತೇಷುಶೂಲೇಷುಪ್ರಾಯೇಣಪವನಃಪ್ರಭುಃ ॥ ೧ ॥

ಶೂಲೆ ಎಂದರೆ ದೇಹದ ಯಾವ ಭಾಗದಲ್ಲಿಯಾದರೂ ಬರುವ ನೋವು ಮತ್ತು ಶಿಡಶಗಳಿಗೆ ಹೆಸರು. ಸಾಮಾನ್ಯವಾಗಿ ಹೊಟ್ಟೆಶೂಲೆ, ಹಲ್ಲುಶೂಲೆ, ತಲೆಶೂಲೆ ಎಂಬದಾಗಿ ಅನೇಕವಿಧ. ಇಲ್ಲಿ ಹೇಳುವುದು ಹೊಟ್ಟೆಶೂಲೆ ರೋಗದ ನಿದಾನ, ಈ ಶೂಲರೋಗವು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ವಾತಪಿತ್ತಜನ್ಯ, ವಾತಶ್ಲೇಷ್ಮಜನ್ಯ, ಪಿತ್ತಶ್ಲೇಷ್ಮಜನ್ಯ, ಆಮರಸಜನ್ಯ ಎಂಬದಾಗಿ ಎಂಟುವಿಧ. ಈ ಶೂಲರೋಗದಲ್ಲೆಲ್ಲಾ ವಾತವೇ ಪ್ರಧಾನ ಅಂದರೆ ವಾತಸಂಬಂಧವಾದ ಹಿಂಸೆಯೇ ಹೆಚ್ಚು.

ವ್ಯಾಯಾಮಯಾನಾದತಿಮೈಥುನಾಚ್ಚಪ್ರಜಾಗರಾತ್
ಶೀತಜಲಾತಿಪಾನಾತ್ ॥
ಕಲಾಯಮುದ್ಗಾಢಕಿಕೋರದೂಷಾದತ್ಯರ್ಥರೂಕ್ಷಾಧ್ಯಶ
ನಾಭಿಘಾತಾತ್ ॥ ೨ ॥
ಕಷಾಯತಿಕ್ತಾತಿವಿರೂಢಜಾನ್ನವಿರುದ್ಧವಲ್ಲೂರಕ
ಶುಷ್ಕಶಾಕಾತ್ ।
ವಿಟ್‌ಶುಕ್ರಮೂತ್ರಾನಿಲವೇಗರೋಧಾತ್‌ಶೋಕೋಪ
ವಾಸಾದತಿಹಾಸ್ಯಭಾಷಾತ್ ॥ ೩ ॥
ವಾಯುಃಪ್ರವೃದ್ಧೋಜನಯೇದ್ಧಿಶೂಲಂಹೃತ್ಪಾರ್ಶ್ವಪೃಷ್ಠತ್ರಿಕ
ಬಸ್ತಿದೇಶೇ ॥

**ಜೀರ್ಣೇಪ್ರದೋಷೇಚಘನಾಗಮೇಚಶೀತೇಚಕೋಪಂಸಮು**
**ಪೈತಿಗಾಢಂ ॥ ೪ ॥**

**ಮುಹುರ್ಮುಹುಶ್ಚೋಪಶಮಪ್ರಕೋಪೌವಿಡ್ವಾತಸಂಸ್ತಂಭನ**
**ತೋದಭೇದೈಃ ॥**

**ಸಂಸ್ವೇದನಾಭ್ಯಂಜನಮರ್ದನಾದ್ಯೈಸ್ನಿಗ್ಧೋಷ್ಣಭೋಜ್ಯೈಶ್ಚ**
**ಶಮಂಪ್ರಯಾತಿ ॥ ೫ ॥**

ಅತಿಯಾಗಿ ವ್ಯಾಯಾಮಮಾಡುವುದು, ಯಾನಾಗ್ಯಾ ವಾಹನದ ಮೇಲೆ ಪ್ರಯಾಣಮಾಡುವುದು, ಅತಿಯಾದ ಸ್ತ್ರೀಸಂಗಮಾಡುವುದು, ನಿದ್ದೆಗೆಡುವುದು, ತಣ್ಣೀರನ್ನು ಹೆಚ್ಚಾಗಿ ಕುಡಿಯುವುದು, ಬಟಾಣಿ, ಹೆಸರು, ಅವರೆ, ನೆಲಗಡಲೆ ಇವುಗಳನ್ನು ಹೆಚ್ಚಾಗಿ ತಿನ್ನುವುದು, ಅತಿರೂಕ್ಷವಾದ ಆಹಾರವನ್ನು ತಿನ್ನುವುದು, ಭೋಜನದ ಮೇಲೆ ಮತ್ತೆ ಭೋಜನಮಾಡುವುದು, ಯಾವುದಾದರೂ ಪೆಟ್ಟು ಬೀಳುವುದು, ಒಗರು, ಕಹಿ, ರಸವುಳ್ಳ ಪದಾರ್ಥಗಳನ್ನು ಉಪಯೋಗಿಸುವುದು, ಮೊಳಕೆಬಂದ ಧಾನ್ಯಗಳನ್ನು ಪಕ್ವಮಾಡಿಕೊಂಡು ತಿನ್ನುವುದ, ಪರಸ್ಪರ ವಿರುದ್ಧ ವಸ್ತುಗಳನ್ನು ಕೂಡಿಸಿ ತಿನ್ನುವುದು, ಒಣಗಿದ ಮಾಂಸ, ಒಣಗಿದ ತರಕಾರಿಗಳು ಇವುಗಳನ್ನು ತಿನ್ನುವುದು, ಮಲಮೂತ್ರಗಳು. ಅಧೋವಾಯು, ಶುಕ್ರ ಎಂದರೆ ಪುರುಷವೀರ್ಯ, ಇವುಗಳನ್ನು ಸಕಾಲದಲ್ಲಿ ನಿವೃತ್ತವಾಗದೆ ತಡೆಯುವುದು, ಹೆಚ್ಚಾದ ದುಃಖವನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು, ಉಪವಾಸ ಮಾಡುವುದು, ಅತಿಯಾಗಿ ನಗುತ್ತ ಮಾತನ್ನಾಡುವುದು, ಈ ಕಾರಣಗಳಿಂದ ಪ್ರಕುಪಿತವಾದ ವಾಯುವು—ಹೃದಯ, ಪಾರ್ಶ್ವಗಳು, ಪೃಷ್ಠಭಾಗ, ಸೊಂಟ, ಮೂತ್ರಾಶಯ ಇವುಗಳಲ್ಲಿ ಶೂಲೆಯನ್ನುಂಟುಮಾಡುತ್ತದೆ, ಆಹಾರ ಜೀರ್ಣವಾದಾಗ, ಸಾಯಂಕಾಲದ ಹೊತ್ತಿನಲ್ಲಿ, ಮಳೆಗಾಲದಲ್ಲಿ ಶೀತಕಾಲದಲ್ಲಿ ಸಹ ಶೂಲೆಯು ಹೆಚ್ಚಾಗುತ್ತದೆ, ವೇದನೆಯು ಪದೇ ಪದೇ ಹೆಚ್ಚುತ್ತಲೂ ಕಡಮೆಯಾಗುತ್ತಲೂ ಇರುತ್ತದೆ, ಅಪಾನವಾಯು ಮತ್ತು ಮಲಪ್ರವೃತ್ತಿ ಸಹ ತಡೆದು ಹೋಗಿರುವುದು, ಹೊಟ್ಟೆನೋವು, ಶೂಲೆ ಇವುಗಳುಂಟಾಗುವುದು, ಮೈಯನ್ನು ಬೆವರಿಸುವ ಉಪಾಯಗಳು, ಅಭ್ಯಂಜನಮಾಡಿಕೊಳ್ಳುವುದು, ಮೈಯಿಸಿಕಿಸಿಕೊಳ್ಳುವುದು, ಬಿಸಿಯಾಗಿಯೂ ಸ್ನೇಹಪ್ರಚುರವಾಗಿಯೂ ಇರುವ ಆಹಾರಗಳಿಂದಲೂ ಭೋಜನಗಳಿಂದಲೂ ಶಾಂತವಾಗುತ್ತದೆ.

**ಕ್ಷಾರಾತಿತೀಕ್ಷ್ಣೋಷ್ಣವಿದಾಹಿತೈಲನಿಷ್ಪಾವಪಿಣ್ಯಾಕ**
**ಕುಲಿತ್ಥಯೂಷೈಃ ॥**

**ಕಟ್ವಮ್ಲಸೌವೀರಸುರಾವಿಕಾರೈಃಕ್ರೋಧಾನಲಾಯಾ**
**ಸರವಿಪ್ರತಾಪೈಃ ॥ ೬ ॥**

**ಗ್ರಾಮ್ಯಾತಿಯೋಗಾದಶನೈರ್ವಿದಗ್ಧೈಃಪಿತ್ತಂಪ್ರಕುಪ್ಯಾಶು**
**ಕರೋತಿಶೂಲಂ ॥**

ತೃಷ್ಣಾಮೋಹದಾಹಾರ್ತಿಕರಂಹಿನಾಭ್ಯಾಂಸಸ್ವೇದಮೂರ್ಛಾ
ಭ್ರಮಶೋಷಯುಕ್ತಂ ॥ ೭ ॥
ಮಧ್ಯಂದಿನೇಕುಪ್ಯತಿಚಾರ್ಧರಾತ್ರೌವಿದಾಹಕಾಲೇಜಲ
ದಾತ್ಯಯೇಚ ॥
ಶೀತೇಚಶೀತೈಸ್ಸಮುಪೈತಿಶಾಂತಿಂಸುಸ್ವಾದುಶೀತೈರಪಿ
ಭೋಜನೈಶ್ಚ ॥ ೮ ॥

ಪಿತ್ತಪ್ರಕೋಪಜನ್ಯ ಶೂಲೆಯ ಲಕ್ಷಣಗಳು—ಯವಕ್ಷಾರ ಸರ್ಜಕ್ಷಾರ ಮೊದಲಾದ ಕ್ಷಾರಗಳು, ಅತ್ಯಂತ ತೀಕ್ಷ್ಣವಾಗಿಯೂ ಉಷ್ಣವಾಗಿಯೂ ಇರುವ ಸಾಸುವೆ, ಮೆಣಸಿನಕಾಯಿ ಮೊದಲಾದ ಪದಾರ್ಥಗಳು, ಉಷ್ಣವೀರ್ಯಗಳಾದ ಬಿದಿರು ಕಳಿಲೆ ಮೊದಲಾದ ಪದಾರ್ಥಗಳು, ಎಣ್ಣೆ, ಅವರೇಕಾಳು, ಚಿಗಳಿ, ಹುರಳೀಕಾಳು ಸೇರಿದ ಆಹಾರಗಳು, ಖಾರ, ಹುಳಿ, ಹುಳಿಗಂಜಿ, ಆಸವ ಅರಿಷ್ಟ ಮೊದಲಾದ ಮದ್ಯಭೇದಗಳು, ಅತಿಯಾಗಿ ಸಿಟ್ಟುಮಾಡುವುದು, ಬೆಂಕಿಕಾಯಿಸುವುದರಿಂದ ಹುಟ್ಟಿದ ಆಯಾಸ, ಬಿಸಿಲು ಕಾಯಿಸುವುದು, ಅತಿಯಾಗಿ ಸ್ತ್ರೀಸಂಗ ಮಾಡುವುದು, ಭೋಜನಮಾಡಿದ ಪದಾರ್ಥವು ವಿದಾಹಿ (ಉಷ್ಣಮಾಡತಕ್ಕ) ಸ್ವಭಾವದ್ದಲ್ಲದಿದ್ದರೂ ದೇಹದಲ್ಲಿ ದೋಷಪ್ರಕೋಪವಾಗಿರುವ ಸಮಯಗಳಲ್ಲಿ ವಿದಾಹಿಗಳೆನ್ನಿಸಿಕೊಳ್ಳುತ್ತವೆ, ಇಂತಹ ದೋಷವಿರುವುದು, ಈ ಹಿಂದೆ ಹೇಳಿದ ಕಾರಣಗಳಿಂದ ಪಿತ್ತವು ಪ್ರಕುಪಿತವಾಗಿ ಶೂಲೆಯನ್ನು ಹುಟ್ಟಿಸುತ್ತದೆ, ಬಾಯಾರಿಕೆ, ಬವಳಿಬರುವುದು, ಮೈಯುರಿ, ಹೊಕ್ಕಳಿನ ಹತ್ತಿರ ಬಹಳ ವ್ಯಥೆ, ಮೈ ಬೆವರುತ್ತಿರುವುದು, ಮೂರ್ಛೆ, ಬುದ್ಧಿಭ್ರಮಣೆ, ಮೈಯಲ್ಲಿ ಉರಿಹೊರಟ ಹಾಗೆ ತೋರುತ್ತಿರುವುದು, ಈ ತರದ ಹಿಂಸೆಗಳಾಗುತ್ತಿರುತ್ತವೆ, ಶೂಲೆಯು ಮಧ್ಯಾನದ ಹೊತ್ತು, ಅರ್ಧರಾತ್ರಿ, ಮಳೆಗಾಲ ಕಳದು ಶೀತಕಾಲ ಪ್ರಾರಂಭವಾದಾಗ್ಯೆ ಆಹಾರ ಜೀರ್ಣಕ್ಕೆ ಬರತಕ್ಕ ಕಾಲ ಇಂತಹ ಸಮಯಗಳಲ್ಲಿ ಹೆಚ್ಚಾಗುತ್ತದೆ, ಶೀತಕಾಲದಲ್ಲಿ ಶೀತವೀರ್ಯಗಳಾದ ಔಷಧಗಳಿಂದ, ಮಧುರ ಮತ್ತು ಶೀತಗಳಾದ ಆಹಾರಗಳಿಂದ ಶಾಂತವಾಗುತ್ತದೆ.

ಆನೂಪವಾರಿಜಕಿಲಾಟಪಯೋವಿಕಾರೈರ್ಮಾಂಸೇಕ್ಷುಪಿಷ್ಟ
ಕೃಸರಾತಿಲಶಷ್ಕುಲೀಭಿಃ ॥
ಅನ್ಯೈರ್ಬಲಾಸಜನಕೈರಪಿಹೇತುಭಿಶ್ಚ ಶ್ಲೇಷ್ಮಾಪ್ರಕೋಪ
ಮುಪಗಮ್ಯಕರೋತಿಶೂಲಂ ॥ ೯ ॥
ಹೃಲ್ಲಾಸಕಾಸಸದನಾರುಚಿಸಂಪ್ರಸೇಕೈರಾಮಾಶಯೇಸ್ತಿಮಿತ
ಕೋಷ್ಠಶಿರೋಗುರುತ್ವೈಃ ॥
ಭುಕ್ತೇಸದೈವಹಿರುಜಂಕುರುತೇತಿಮಾತ್ರಂಸೂರ್ಯೋದಯೇಥ
ಶಿಶಿರೇಕುಸುಮಾಗಮೇಚ ॥ ೧೦ ॥

ಜವುಗು ಪ್ರದೇಶದಲ್ಲಿ ಹುಟ್ಟಿ ವಾಸವಾಗಿರುವ ಪ್ರಾಣಿಗಳ ಮಾಂಸ, ನೀರಿನಲ್ಲಿ ಹುಟ್ಟಿದ ಮೀನು ಮೊದಲಾದ ಪ್ರಾಣಿಗಳ ಮಾಂಸ, ಮಜ್ಜಿಗೆ, ಮೊಸರು, ಶ್ಲೇಷ್ಮವರ್ಧಕಗಳಾದ ಇತರ ಮಾಂಸಗಳು, ಕಬ್ಬು, ಕಬ್ಬಿನಹಾಲು, ಹಿಟ್ಟುಗಳು ಕಿಚ್ಚಡಿ, ಎಳ್ಳು ಸೇರಿದ ವಸ್ತುಗಳು, ಚಕ್ಕುಲಿ ಎಂಬ ಭಕ್ಷ್ಯ, ಇಂತಹ ಶ್ಲೇಷ್ಮವರ್ಧಕಗಳಾದ ಪದಾರ್ಥಗಳಿಂದ ಶ್ಲೇಷ್ಮವು ಪ್ರಕುಪಿತವಾಗಿ ಶೂಲೆಯನ್ನು ಹುಟ್ಟಿಸುತ್ತದೆ, ಬಾಯಿ ನೀರುಬರುತ್ತಿರುವುದು, ಕೆಮ್ಮು, ಅಗ್ನಿಮಾಂದ್ಯ, ಅರುಚಿ ಅವಿಪಾಕವೆಂದರೆ ಆಹಾರದ ಚೀಲವು ಮಂದವಾಗಿ ಕೆಲಸಮಾಡುತ್ತಿರುವುದು, ಕೋಷ್ಠವು ಸ್ತಿಮಿತವಾಗಿ ಅಂದರೆ ಮಂದವಾಗಿಯೇ ಇರುವುದು, ತಲೆನೋವು, ತಲೆಭಾರ. ಇಂತಹ ವಿಕಾರಗಳಾಗುತ್ತಿರುತ್ತವೆ, ಸೂರ್ಯೋದಯ ಕಾಲದಲ್ಲಿ ಶೀತಕಾಲದಲ್ಲಿ, ವಸಂತಋತುವಿನಲ್ಲಿ ಈ ಶೂಲೆಯು ಪ್ರಬಲವಾಗಿರುತ್ತದೆ.

**ಸರ್ವೇಷುದೋಷೇಷುಚಸರ್ವಲಿಂಗಂವಿದ್ಯಾದ್ಭಿಷಕ್‌ಸರ್ವ**
**ಭವಂಹಿಶೂಲಂ ॥**
**ಸುಕಷ್ಟಮೇನಂವಿಷವಜ್ರಕಲ್ಪಂವಿವರ್ಜನೀಯಂಪ್ರವದಂ**
**ತಿತದ್‌ಜ್ಞಾಃ ॥ ೧೧ ॥**

ತ್ರಿದೋಷಗಳು ಪ್ರಕುಪಿತಗಳಾದ ಕಾಲದಲ್ಲಿ ತ್ರಿದೋಷಗಳ ಲಕ್ಷಣಗಳೂ ಮಿಶ್ರವಾಗಿ ಕಾಣುತ್ತಲೇ ಶೂಲ ಉಂಟಾಗುತ್ತದೆ, ಇಂತಹ ತ್ರಿದೋಷಜನ್ಯವಾದ ಶೂಲೆಯನ್ನು ಚಿಕಿತ್ಸೆಗೆ ಅಸಾಧ್ಯವೆಂದು ತಿಳಿದು ವರ್ಜಮಾಡತಕ್ಕದ್ದು.

**ಆಟೋಪಹೃಲ್ಲಾಸವಮೀಗುರುತ್ವಸ್ತೈಮಿತ್ಯಕಾನಾಹಕಫ**
**ಪ್ರಸೇಕೈಃ ॥**
**ಕಫಸ್ಯಲಿಂಗೇನಸಮಾನಲಿಂಗಂಆಮೋದ್ಭವಂಶೂಲಮುದಾ**
**ಹರಂತಿ ॥ ೧೨ ॥**

ಅಜೀರ್ಣದ ಶೂಲೆಯ ಲಕ್ಷಣಗಳು—ಶೂಲೆಯು ಪ್ರಾರಂಭವಾಗುವಾಗ್ಯೆ ಬಹಳ ಜೋರಾಗಿ ಪ್ರಾರಂಭವಾಗುವುದು, ಬಾಯಿನೀರು ಬರುತ್ತಿರುವುದು, ವಮನ, ಮೈಭಾರ, ಹೊಟ್ಟೆಮಂದವಾಗಿರುವುದು, ಹೊಟ್ಟೆಯುಬ್ಬರವಿರುವುದು, ಆಗಾಗ್ಯೆ ಶ್ಲೇಷ್ಮವು ಬಾಯಿನಿಂದ ಹೊರಕ್ಕೆ ಬರುತ್ತಿರುವುದು, ಹಿಂದೆ ಹೇಳಿದ ಲಕ್ಷಣಗಳ ಜೊತೆಗೆ ಕಫಜನ್ಯ ಶೂಲೆಯ ಲಕ್ಷಣಗಳೂ ಕಾಣುತ್ತಲಿದ್ದರೆ ಆಮಶೂಲೆ ಎಂದು ತಿಳಿಯಬೇಕು.

**ಬಸ್ತೌಹೃತ್ಪಾರ್ಶ್ವಪೃಷ್ಠೇಷುಸಶೂಲಃಕಫವಾತಿಕಃ ॥**
**ಕುಕ್ಷೌಹೃನ್ನಾಭಿಮಧ್ಯೇಷುಸಶೂಲಃಕಫಪೈತ್ತಿಕಃ ॥ ೧೩ ॥**

ಕಫವಾತಜನ್ಯ, ಕಫಪಿತ್ತಜನ್ಯ ಈ ಶೂಲೆಗಳ ಲಕ್ಷಣವೇನೆಂದರೆ—ಮೂತ್ರಾಶಯ. ಹೃದಯದ ಪಾರ್ಶ್ವಗಳು, ಪೃಷ್ಠಭಾಗ ಈ ಪ್ರದೇಶಗಳಲ್ಲಿ ಹುಟ್ಟತಕ್ಕ ಶೂಲೆಯು ಕಫ ಮತ್ತು ವಾತಪ್ರಧಾನವಾದದ್ದು, ಹೊಟ್ಟೆಯಲ್ಲಿ (ಅಡಿಹೊಟ್ಟೆ) ಹೃದಯ ಮತ್ತು ಹೊಕ್ಕುಳಗಳ ನಡುವೆ ಹುಟ್ಟತಕ್ಕ ಶೂಲೆಯು ಕಫ ಮತ್ತು ಪಿತ್ತ ಪ್ರಧಾನವಾದದ್ದು.

ದಾಹಜ್ವರಕರೋ ಘೋರೋ ವಿಜ್ಞೇಯೋ ವಾತಪೈತ್ತಿಕಃ ॥
ಏಕದೋಷೋತ್ಥಿತಸ್ಸಾಧ್ಯಃ ಕೃಚ್ಛ್ರಸಾಧ್ಯೋ ದ್ವಿದೋಷಜಃ ॥೧೪॥
ಸರ್ವದೋಷೋತ್ಥಿತೋ ಘೋರಸ್ತ್ವಸಾಧ್ಯೋ ಭೂರ್ಯುಪದ್ರವಃ ॥

ವಾಯು ಮತ್ತು ಪಿತ್ತ ಇವುಗಳು ಪ್ರಧಾನವಾದ ಶೂಲೆಯು ದಾಹ, ಜ್ವರ ಇವುಗಳನ್ನುಂಟುಮಾಡುತ್ತಾ, ಬಹು ಭಯಂಕರವಾಗಿಯೂ ಇರುತ್ತದೆ. ಯಾವುದಾದರೂ ಒಂದು ದೋಷವು ಪ್ರಕುಪಿತವಾಗಿ ಶೂಲೆ ಉಂಟಾಗಿದ್ದಲ್ಲಿ ಸುಖವಾಗಿ ಸಾಧ್ಯವಾಗುತ್ತದೆ. ಒಂದರ ಜೊತೆಗೆ ಇನ್ನೊಂದು ದೋಷ ಸಹ ಕೂಡಿದ್ದಲ್ಲಿ ಗುಣವಾಗುವುದು ಕಷ್ಟಸಾಧ್ಯ, ಮೂರು ದೋಷಗಳೂ ಕೂಡಿ ಶೂಲೆಯು ಉತ್ಪನ್ನವಾಗಿದ್ದಲ್ಲಿ ಅದು ಅಸಾಧ್ಯವೆಂಬದಾಗಿಯೂ ಬಹು ಭಯಂಕರವೆಂಬದಾಗಿಯೂ ತಿಳಿಯಬೇಕು.

ಸ್ವೈರ್ನಿದಾನೈಃ ಪ್ರಕುಪಿತೋ ವಾಯುಃ ಸನ್ನಿಹಿತಸ್ತದಾ ॥ ೧೫ ॥
ಕಫಪಿತ್ತೇ ಸಮಾವೃತ್ಯ ಶೂಲಕಾರೀ ಭವೇದ್ಬಲೀ ॥
ಭುಕ್ತೇ ಜೀರ್ಯತಿ ಯಚ್ಛೂಲಂ ತದೇವ ಪರಿಣಾಮಜಂ ॥ ೧೬ ॥
ತಸ್ಯ ಲಕ್ಷಣಮಪ್ಯೇತತ್ಸಮಾಸೇನಾಭಿಧೀಯತೇ ॥
ಆಧ್ಮಾನಾಟೋಪವಿಣ್ಮೂತ್ರವಿಬಂಧಾರತಿವೇಪನೈಃ ॥ ೧೭ ॥

ಪರಿಣಾಮ ಶೂಲೆಯ ಲಕ್ಷಣವೇನೆಂದರೆ—ವಾತಪ್ರಕೋಪಕಾರಣಗಳಿಂದ ಪ್ರಕುಪಿತವಾದ ವಾಯುವು ಕಫ ಮತ್ತು ಪಿತ್ತಗಳೊಡನೆ ಕೂಡಿಕೊಂಡು ಶೂಲೆಯನ್ನುಂಟುಮಾಡುತ್ತದೆ, ಭೋಜನ ಮಾಡಿದ ಭೋಜನವು ಜೀರ್ಣವಾಗುವಾಗ್ಯೆ ಶೂಲೆ ಬರುತ್ತದೆ, ಇದಕ್ಕೇನೇ ಪರಿಣಾಮಶೂಲೆ ಎಂಬ ಹೆಸರು, ಇದರಲ್ಲಿ ಹೊಟ್ಟೆಯುಬ್ಬರ, ವೇದನೆ ಇವುಗಳು ಭಯಂಕರವಾಗಿರುವವು, ಮಲಮೂತ್ರಗಳು ಬದ್ಧವಾಗಿ ಹೋಗಿರುವುದು, ಅರುಚಿ ಇರುತ್ತದೆ, ರೋಗಿಯು ಹಿಂಸೆಯನ್ನು ತಡೆಯಲಾರದೆ ಯಾವಾಗಲೂ ನಡುಗುತ್ತಿರುತ್ತಾನೆ.

ಸ್ನಿಗ್ಧೋಷ್ಣೋಪಶಮಪ್ರಾಯಂ ವಾತಿಕಂ ತದ್ವದೇದ್ಭಿಷಕ್ ॥
ತೃಷ್ಣಾದಾಹಾರತಿಸ್ವೇದಂ ಕಟ್ವಮ್ಲಲವಣೋತ್ತರಂ ॥ ೧೮ ॥

ಶೂಲಂಶೀತಶಮಪ್ರಾಯಂಪೈತ್ತಿಕಂಲಕ್ಷಯೇದ್ಬುಧಃ ॥
ಛರ್ದಿಹೃಲ್ಲಾಸಸಂಮೋಹಂಸ್ವಲ್ಪರುಗ್ದೀರ್ಘಸಂತತಿ ॥ ೧೯ ॥
ಕಟುತಿಕ್ತೋಪಶಾಂತಂಚತಚ್ಚಜ್ಞೇಯಂಕಫಾತ್ಮಕಂ ॥

ಈ ಪರಿಣಾಮಶೂಲೆಯು ಸ್ನೇಹಯುಕ್ತವಾಗಿಯೂ ಉಷ್ಣವಾಗಿಯೂ ಇರುವ ಔಷಧಾದಿಗಳಿಂದ ಶಮನೆಯಾದರೆ ಅದನ್ನು ವಾತಪ್ರಬಲವಾದ ಪರಿಣಾಮಶೂಲವೆಂಬದಾಗಿಯೂ, ಬಾಯಾರಿಕೆ, ಮೈಯುರಿ, ಅರುಚಿ, ಮೈಬೆವರುವುದು, ಇಂತಹ ವಿಕಾರಗಳಿದ್ದು ಖಾರ, ಉಪ್ಪು, ಹುಳಿ ಇವುಗಳನ್ನು ತಿಂದರೆ ಹೆಚ್ಚುತ್ತಾ ಶೀತಪದಾರ್ಥಗಳನ್ನು ತಿನ್ನುವದರಿಂದ ಶಮನೆಯಾಗುತ್ತಲೂ ಇದ್ದಲ್ಲಿ ಪಿತ್ತಪ್ರಬಲವಾದ ಪರಿಣಾಮಶೂಲೆ ಎಂತಲೂ, ವಾಂತಿ, ಬಾಯಿನೀರು ಬರುವುದು, ಮತ್ತೆ ಅಂದರೆ ಒಂದು ಬಗೆಯ ಮದ ಬಂದಂತೆ ತೋರುವುದು, ಶೂಲೆಯ ವೇದನೆ ಅತಿಯಾಗಿಲ್ಲದಿರುವುದು, ವೇದನೆ ಮಾತ್ರ ದೀರ್ಘಕಾಲ ಅನುವರ್ತಿಸಿಕೊಂಡಿರುವುದು, ಖಾರ, ಕಹಿ ಇವುಗಳನ್ನು ತಿನ್ನೋಣದರಿಂದ ಶಮನೆಯಾಗುವುದು ಈ ರೀತಿ ಇದ್ದಲ್ಲಿ ಕಫಪ್ರಧಾನವಾದ ಪರಿಣಾಮಶೂಲೆ ಎಂಬದಾಗಿಯೂ ತಿಳಿಯಬೇಕು.

ಸಂಸೃಷ್ಟಲಕ್ಷಣಾಂಬುದ್ಧ್ವಾದ್ವಿದೋಷಂಪರಿಕಲ್ಪಯೇತ್ ॥ ೨೦ ॥
ತ್ರಿದೋಷಜಮಸಾಧ್ಯಂಚಕ್ಷೀಣಮಾಂಸಬಲಾನಲಂ ॥

ಎರಡೆರಡು ದೋಷಗಳ ಲಕ್ಷಣಗಳು ಕೂಡಿರುವುದು ಕಂಡುಬಂದಲ್ಲಿ ದ್ವಿದೋಷಜನ್ಯವೆಂದು ತಿಳಿದುಕೊಳ್ಳಬೇಕು. ಮೂರು ದೋಷಗಳ ಲಕ್ಷಣಗಳು ಕೂಡಿದ್ದು ಜಠರಾಗ್ನಿಶಕ್ತಿ ಕಡಮೆಯಾಗಿದ್ದು ರಕ್ತಮಾಂಸಗಳು ಕ್ಷಯಿಸಿ ಕಾಯಶಕ್ತಿ ಸಹ ಕಡಮೆಯಾಗಿದ್ದರೆ ಅಸಾಧ್ಯವೆಂದು ತಿಳಿಯಬೇಕು.

ಜೀರ್ಣೇಜೀರ್ಯತ್ಯಜೀರ್ಣೇವಾಯಚ್ಛೂಲಮುಪಜಾಯತೇ ॥ ೨೧ ॥
ಪಥ್ಯಾಪಥ್ಯಪ್ರಯೋಗೇಣಭೋಜನಾಭೋಜನೇನಚ ॥
ನಶಮಂಯಾತಿನಿಯಮಾತ್ಸೋನ್ನದ್ರವಉದಾಹೃತಃ ॥ ೨೨ ॥
ಅನ್ನದ್ರವಾಖ್ಯಶೂಲೇಷುನತಾವತ್ಸ್ವಾಸ್ಥ್ಯಮಶ್ನುತೇ ॥
ವಾಂತಮಾತ್ರೇಜರತ್ಪಿತ್ತಂಶೂಲಮಾಶುವ್ಯಪೋಹತಿ • ॥ ೨೩ ॥

ಅನ್ನ ಜೀರ್ಣವಾದ ಮೇಲೆಯೂ ಜೀರ್ಣವಾಗುತ್ತಿರುವಾಗಲೂ ಜೀರ್ಣವಾಗುವುದಕ್ಕೆ ಮುಂಚಿತವಾಗಿಯೂ ನಿಯಮವಿಲ್ಲದೆ ಬರುತ್ತಿರುವುದು, ಪಥ್ಯಮಾಡಲಿ ಅಪಥ್ಯಮಾಡಲಿ ಭೋಜನಮಾಡಲಿ ಮಾಡದಿರಲಿ ಶಮನವಾಗದಿರುವುದು, ಇಂತಹ ಅನಿಯತವಾದ ಶೂಲೆಗೆ ಅನ್ನದ್ರವಶೂಲವೆಂದು ಹೆಸರು. ಇದರಲ್ಲಿ ರೋಗಿಗೆ ಯಾವಾಗ್ಯೂ ಆರೋಗ್ಯವಿರುವುದೇ ಇಲ್ಲ, ವಮನವಾದರೆ ಮಾತ್ರ ಪಿತ್ತವು ಜೀರ್ಣವಾಗಿ ಶೂಲೆಯು ಆಗ್ಯೆ ಶಮನವಾಗುತ್ತದೆ.

ಇಲ್ಲಿಗೆ ಪರಿಣಾಮಶೂಲನಿದಾನ ಸಂಪೂರ್ಣ.

# ಉದಾವರ್ತನಿದಾನ.

ವಾತವಿಣ್ಮೂತ್ರಜೃಂಭಾಶ್ರುಕ್ಷವೋದ್ಗಾರವಮೀಂದ್ರಿಯೈಃ ॥
ಕ್ಷುತ್ತೃಷ್ಣೋಚ್ಛ್ವಾಸನಿದ್ರಾಣಾಂಧೃತ್ಯೋದಾವರ್ತಸಂಭವಃ ॥೧॥

ಅಪಾನವಾಯು, ಮಲಮೂತ್ರಗಳು ಆಕಳಿಕೆ, ಕಣ್ಣೀರು, ಶೀನು, ತೇಗು, ವಮನ, ಶುಕ್ರ, ಹಸಿವು, ಬಾಯಾರಿಕೆ, ಉಸಿರು, ನಿದ್ರೆ, ಇವುಗಳ ವೇಗವು ಪ್ರಾರಂಭವಾದಾಗ್ಯೆ ಅಂದರೆ ಇವು ಹೊರಕ್ಕೆ ಹೊರಡುವ ಸೂಚನೆ ತೋರಿದಾಗ್ಯೆ ಹೊರಕ್ಕೆ ಹೊರಡದಂತೆ ಮಾಡಿ ವೇಗವನ್ನು ತಡದು ಅವುಗಳನ್ನು ಒಳಗೇ ನಿಲ್ಲಿಸೋಣವರಿಂದ ಅಂದರೆ ಪ್ರತಿಬಂಧಕ ಮಾಡೋಣದರಿಂದ ಉದಾವರ್ತವೆಂಬ ರೋಗವು ಹುಟ್ಟುತ್ತದೆ.

ವಾತಮೂತ್ರಪುರೀಷಾಣಾಂಸಂಗಾಧ್ಮಾನಾಕ್ಲಮೋರುಜಾ ॥
ಜಠರೇವಾತಜಾಶ್ಚಾನ್ಯೇರೋಗಾಸ್ಯುರ್ವಾತನಿಗ್ರಹಾತ್ ॥ ೨ ॥
ಆಟೋಪಶೂಲೌಪರಿಕರ್ತಿಕಾಚಸಂಗಃಪುರೀಷಸ್ಯತಥೋರ್ಧ್ವ
ವಾತಃ ॥
ಪುರೀಷಮಾಸ್ಯಾದಥವಾನಿರೇತಿಪುರೀಷವೇಗಾಭಿಹತೇನರಸ್ಯ ॥ ೩ ॥
ಬಸ್ತಿಮೇಹನಯೋಶ್ಶೂಲಂಮೂತ್ರಕೃಚ್ಛ್ರಂಶಿರೋರುಜಾ ॥
ವಿನಾಮೋವಂಕ್ಷಣಾನಾಹಃಸ್ಯಾಲ್ಲಿಂಗಂಮೂತ್ರನಿಗ್ರಹೇ ॥ ೪ ॥
ಮನ್ಯಾಗಲಸ್ತಂಭಶಿರೋವಿಕಾರಾಜೃಂಭೋಪಘಾತಾತ್ಪವ
ನಾತ್ಮಕಾಸ್ಯುಃ ॥
ತಥಾಕ್ಷಿನಾಸಾವದನಾಮಯಾಶ್ಚಭವಂತಿತೀವ್ರಾಸ್ಸಹಕರ್ಣ
ರೋಗೈಃ ॥ ೫ ॥
ಆನಂದಜಂವಾಪ್ಯಥಶೋಕಜಂವಾನೇತ್ರೋದಕಂಪ್ರಾಪ್ತಮ
ಮುಂಚತೋಹಿ ॥
ಶಿರೋಗುರುತ್ವಂನಯನಾಮಯಾಶ್ಚಭವಂತಿತೀವ್ರಾಸ್ಸಹಪೀನ
ಸೇನ ॥ ೬ ॥
ಮನ್ಯಾಸ್ತಂಭಶ್ಶಿರಶ್ಶೂಲಂಅರ್ದಿತಾರ್ಧಾವಭೇದಕೌ ॥
ಇಂದ್ರಿಯಾಣಾಂಚದೌರ್ಬಲ್ಯಂಕ್ಷವಥೋಸ್ಸ್ಯಾದ್ವಿಧಾರಣಾತ್ ॥ ೭ ॥
ಕಂಠಾಸ್ಯಪೂರ್ಣತ್ವಮತೀವತೋದಃಕೂಜಶ್ಚವಾಯೋರಥವಾ
ಪ್ರವೃತ್ತಿಃ ॥
ಉದ್ಗಾರವೇಗೇಭಿಹತೇಭವಂತಿಘೋರಾವಿಕಾರಾಃಪವನ
ಪ್ರಸೂತಾಃ ॥ ೮ ॥
ಕಂಡೂಕೋಠಾರುಚಿವ್ಯಂಗಶೋಥಪಾಂಡ್ವಾಮಯಜ್ವರಾಃ ॥

**ಕುಷ್ಠವೀಸರ್ಪಹೃಲ್ಲಾಸಾಶ್ಛರ್ದಿನಿಗ್ರಹಜಾಗದಾಃ ॥ ೯ ॥**
**ಮೂತ್ರಾಶಯೇವೈಗುದಮುಷ್ಕಯೋಶ್ಚ ಶೋಥೋರುಜಾಮೂತ್ರ ವಿನಿಗ್ರಹಶ್ಚ ।**
**ಶುಕ್ರಾಶ್ಮರೀತತ್ಸ್ರವಣಂಭವೇಚ್ಚ ತೇತೇವಿಕಾರಾವಿಹತೇಚ ಶುಕ್ರೇ ॥ ೧೦ ॥**
**ತಂದ್ರಾಂಗಮರ್ದಾವರುಚಿಃಶ್ರಮಶ್ಚ ಕ್ಷುಧಾಭಿಘಾತಾತ್ಕೃಶ ತಾಚದೃಷ್ಟೇಃ ।**
**ಕಂಠಾಸ್ಯಶೋಷಶ್ರವಣಾವರೋಧಸ್ತೃಷ್ಣಾವಿಘಾತಾದ್ಧೃದಯೇ ವ್ಯಥಾಚ ॥ ೧೧ ॥**
**ಶ್ರಾಂತಸ್ಯನಿಶ್ವಾಸವಿನಿಗ್ರಹೇಣಹೃದ್ರೋಗಮೋಹಾವಥವಾಪಿ ಗುಲ್ಮಃ ॥**
**ಜೃಂಭಾಂಗಮರ್ದೋಕ್ಷಿಶಿರೋತಿಜಾಡ್ಯಂನಿದ್ರಾಭಿಘಾತಾದ ಥವಾಪಿತಂದ್ರಾ ॥ ೧೨ ॥**

ಅಪಾನವಾಯು ಮೊದಲಾದುವನ್ನು ತಡೆಯುವುದರಿಂದ ಉದಾವರ್ತ ರೋಗವು ಹುಟ್ಟುತ್ತದೆಂದು ಹೇಳಿ ಇನ್ನೂ ಅವುಗಳಿಂದ ಹುಟ್ಟಬಹುದಾದ ರೋಗಗಳನ್ನು ಹೇಳುತ್ತಾನೆ— ಅಪಾನವಾಯುವನ್ನು ತಡೆಯುತ್ತ ಬಂದರೆ ಕ್ರಮೇಣ ಸರಾಗವಾಗಿ ಅಪಾನವಾಯು ಹೊರಡುವುದೇ ನಿಂತುಹೋಗುತ್ತದೆ. ಮಲಮೂತ್ರಗಳು ತಡೆಯುವುದು, ಹೊಟ್ಟೆಯುಬ್ಬರ, ಹೊಟ್ಟೆನೋವು, ಆಯಾಸ ಇನ್ನೂ ನಾನಾ ವಿಧಗಳಾದ ವಾತವಿಕಾರಗಳು ಉಂಟಾಗುತ್ತವೆ. ಮಲವನ್ನು ತಡೆಯುವುದನ್ನು ಅಭ್ಯಾಸಮಾಡುವುದರಿಂದ ಹೊಟ್ಟೆಯುಬ್ಬರ, ಹೊಟ್ಟೆಶೂಲೆ, ಕತ್ತರಿಯಿಂದ ಕತ್ತರಿಸಿದಂತೆ ಹೊಟ್ಟೆಯಲ್ಲಿ ವೇದನೆ, ಮಲವು ಬದ್ಧವಾಗಿಯೇ ಹೋಗುವುದು, ತೇಗು ಬರುತ್ತಿರುವುದು, ಒಂದೊಂದು ವೇಳೆ ಮಲವೇ ಮುಖ ಮಾರ್ಗದಿಂದ ಹೊರಕ್ಕೆ ಬರುವುದು, ಈ ರೋಗಗಳು ಉಂಟಾಗುತ್ತವೆ. ಮೂತ್ರ ವನ್ನು ತಡೆಯುವುದರಿಂದ ಮೂತ್ರಾಶಯ (ಕಿಬ್ಬೊಟ್ಟೆ) ಶಿಶ್ನ ಇವುಗಳು ಊತ ಬರುವುದು, ಮೂತ್ರಹೊರಡುವುದೇ ಕಷ್ಟವಾಗುವುದು, ತಲೆನೋವು, ಕಿಬ್ಬೊಟ್ಟೆ ಹಿಡಿದುಕೊಂಡು ಮನುಷ್ಯನೇ ಬಗ್ಗಿಹೋಗುವಂತಾಗುವುದು, ಗೆಜ್ಜೆಕಟ್ಟು ಮತ್ತು ಕಿಬ್ಬೊಟ್ಟೆ ಸಹ ಊದುವುದು ಇವುಗಳುಂಟಾಗುತ್ತವೆ. ಆಕಳಿಕೆಯನ್ನು ತಡೆದರೆ ದವಡೆಗಳು ಗಂಟಲು ಇವು ಸ್ತಂಭಿತವಾಗುವವು, ತಲೆನೋವು ಮೊದಲಾದ ಶಿರೋವಿಕಾರಗಳು, ನೇತ್ರರೋಗಗಳು, ನಾಸಿಕಾರೋಗಗಳು, ಮುಖರೋಗಗಳು ಕರ್ಣರೋಗಗಳು ಇವುಗಳೆಲ್ಲಾ ಉಂಟಾಗುತ್ತವೆ ಸಂತೋಷದಿಂದಾಗಲೀ ದುಃಖದಿಂದಾಗಲೀ ಹೊರಡತಕ್ಕ ಕಣ್ಣುನೀರನ್ನು ತಡೆದರೆ ತಲೆಭಾರ, ಕಣ್ಣಿನ ರೋಗಗಳು, ಮತ್ತು ಪೀನಸಿ ಸಹ ಉಂಟಾಗುತ್ತವೆ. ಸೀನು ಬರುವುದನ್ನು

ತಡೆಯುವುದರಿಂದ ದವಡೆಗಳಾಡುವುದೇ ನಿಂತುಹೋಗುವುದು. ತಲೆಶೂಲೆ, ಅರ್ಧಿತವೆಂಬ ಶಿರೋಽರ್ಧತಲೆನೋವು, ಇಂದ್ರಿಯಗಳು ದುರ್ಬಲವಾಗುವುದು, ಇವುಗಳುಂಟಾಗುತ್ತವೆ. ತೇಗಿನ ವೇಗವನ್ನು ತಡೆಯುವುದರಿಂದ ಗಂಟಲು ಮತ್ತು ಬಾಯಿ ಸಹ ತುಂಬಿಕೊಂಡಂತೆ ತೋರುವುದು, ಹೊಟ್ಟೆಯಲ್ಲಿ ವ್ಯಥೆ, ಶಬ್ದವಾಗುತ್ತಿರುವುದು, ಉಸುರು ತಡೆದಂತಾಗುವುದು, ಇನ್ನೂ ಭಯಂಕರಗಳಾದ ವಾತವಿಕಾರಗಳೆಲ್ಲಾ ಉಂಟಾಗುತ್ತವೆ. ವಾಂತಿಯನ್ನು ತಡೆಯುವುದರಿಂದ—ಮೈನವೆ, ಗಂಧೆಗಳೇಳುವುದು, ಅರುಚಿ, ಶೋಭೆ, ಪಾಂಡುರೋಗ, ಜ್ವರ, ಕುಷ್ಠ ವಿಸರ್ಪವೆಂಬದೊಂದು ಬಗೆಯ ಕುಷ್ಠ, ಬಾಯುನೀರು ಬರುವುದು, ಈ ವಿಕಾರಗಳುಂಟಾಗುತ್ತವೆ. ಶುಕ್ರವೇಗವನ್ನು ತಡೆಯುವುದರಿಂದ— ಮೂತ್ರಾಶಯ, ಗುದ, ವೃಷಣ, ಇವುಗಳಲ್ಲಿ ಶೋಭೆ, ನೋವು, ಮೂತ್ರ ತಡೆದುಹೋಗುವುದು, ಮೂತ್ರದ್ವಾರದಲ್ಲಿ ಮರಳುಕಲ್ಲು ಬರುವುದು, ಶುಕ್ರವು ಸ್ರವಿಸುವುದು ಎಂದರೆ ಹೊರಬೀಳುವುದು, ಇಂತಹ ವಿಕಾರಗಳೇ ಉಂಟಾಗುತ್ತವೆ. ಬಾಯಾರಿಕೆಯನ್ನು ತಡೆದರೆ ಬಾಯಿಗಂಟಲು ಸಹ ಒಣಗುವುದು, ಕಿವಿ ಕೇಳದ ಹೋಗುವುದು, ಹೃದಯವೇದನೆ . ಇವುಗಳುಂಟಾಗುತ್ತವೆ. ಹಸಿವೆಯನ್ನು ತಡೆದರೆ—ಆಕಳಿಕೆ, ಮೈನೋವು, ಅರುಚಿ, ಶ್ರಮ, ಕಣ್ಣು ಮಬ್ಬಾಗುವುದು ಇವುಗಳುಂಟಾಗುತ್ತವೆ. ಶ್ವಾಸವನ್ನು ತಡೆಯುವುದರಿಂದ ಹೃದಯರೋಗ, ಮೂರ್ಛೆ, ಗುಲ್ಮ ಇವುಗಳುಂಟಾಗುತ್ತವೆ. ನಿದ್ರೆಯನ್ನು ತಡೆದರೆ ಆಕಳಿಕೆ, ಮೈನೋವು, ಕಣ್ಣು ತಲೆ ಇವುಗಳಲ್ಲಿ ಜಾಡ್ಯ, ತೂಕಡಿಕೆ ಇವುಗಳುಂಟಾಗುತ್ತವೆ.

ವಾಯುಃಕೋಷ್ಠಾನುಗೋರೂಕ್ಷೈಃಕಷಾಯಕಟುತಿಕ್ತಕೈಃ ||
ಭೋಜನೈಃಕುಪಿತಸ್ಸದ್ಯಉದಾವರ್ತಂಕರೋತಿಚ || ೧೩ ||
ವಾತಮೂತ್ರಪುರೀಷಾಸೃಕ್ಕಫಮೇದೋವಹಾನಿವೈ ||
ಸ್ರೋತಾಂಸ್ಯುದಾವರ್ತಯತಿಪುರೀಷಂಚಾತಿವರ್ತಯೇತ್ || ೧೪ ||
ತತೋಹೃದ್ಬಸ್ತಿಶೂಲಾರ್ತೋಹೃಲ್ಲಾಸಾರತಿಪೀಡಿತಃ ||
ವಾತಮೂತ್ರಪುರೀಷಾಣಿಕೃಚ್ಛ್ರೇಣಲಭತೇನರಃ || ೧೫ ||
ಶ್ವಾಸಕಾಸಪ್ರತಿಶ್ಯಾಯದಾಹಮೋಹತೃಷಾಜ್ವರಾನ್ ||
ವಮಿಹಿಕ್ಕಾಶಿರೋರೋಗಮನಶ್ರವಣವಿಭ್ರಮಾನ್ || ೧೬ ||
ಬಹೂನನ್ಯಾಂಶ್ಚಲಭತೇವಿಕಾರಾನ್ವಾತಕೋಪಜಾನ್ ||

ಉದಾವರ್ತರೋಗದ ಸ್ವರೂಪವನ್ನು ಹೇಳುತ್ತಾನೆ—ರೂಕ್ಷಗಳಾದ, ವಗರು, ಖಾರ, ಕಹಿ, ಇಂತಹ ರುಚಿವುಳ್ಳ ಆಹಾರಗಳಿಂದ ಕೋಷ್ಠಗತವಾದ ವಾಯುವು ಪ್ರಕುಪಿತವಾಗಿ ಉದಾವರ್ತರೋಗವನ್ನು ಹುಟ್ಟಿಸುತ್ತದೆ. ಅಪಾನವಾಯು, ಮಲ, ಮೂತ್ರ, ರಕ್ತ, ಕಫ, ಮೇದಸ್ಸು ಇವುಗಳು ಪ್ರವಹಿಸತಕ್ಕ

ನಾಡಿಗಳನ್ನು ಪ್ರಕುಪಿತವಾದ ವಾಯುವು ಉದಾವರ್ತಗತಿ ಎಂದರೆ ಆವರಿಸಿ ಕೊಂಡು ಅವುಗಳ ಕೆಲಸ ನಡೆಯದಂತೆ ಮಾಡುತ್ತದೆ. ಉದರದಲ್ಲಿರುವ ಮಲ ವನ್ನು ಶೋಷಿಸಿ ಬಿಡುತ್ತದೆ. ಹೀಗಾದ ಮೇಲೆ ರೋಗಿಯ ಹೊಟ್ಟೆಯಲ್ಲಿ ಮತ್ತು ಮೂತ್ರಾಶಯದಲ್ಲಿ ಸಹ ಶೂಲೆ, ಬಾಯಿನೀರು ಬರುವುದು, ಬಾಯಿ ರುಚಿ ಕೆಟ್ಟು ಹೋಗುವುದು, ಇವುಗಳಿಂದ ಪೀಡಿತನಾಗಿ ಅಧೋವಾಯು, ಮಲ, ಮೂತ್ರಗಳನ್ನು ವಿಸರ್ಜಿಸಲು ಬಹಳ ತೊಂದರೆ ಪಡುತ್ತಾನೆ. ಉಬ್ಬಸ, ಕೆಮ್ಮು, ನೆಗಡಿ, ಮೈಯ್ಯುರಿ, ಅಜ್ಞಾನ, ಬಾಯಾರಿಕೆ, ಜ್ವರ, ವಮನ, ಬಿಕ್ಕಳಿಕೆ, ಶಿರೋ ರೋಗಗಳು, ಬುದ್ಧಿ ಕೆಟ್ಟುಹೋಗುವುದು, ಕಿವಿ ಕಿವುಡಾಗುವುದು, ಇವುಗಳಲ್ಲದೆ ಇನ್ನೂ ಅನೇಕ ವಿಧಗಳಾದ ವಾತವಿಕಾರಗಳನ್ನೆಲ್ಲಾ ಉಂಟುಮಾಡುತ್ತದೆ.

ಆಮಂಶಕೃದ್ವಾನಿಚಿತಂಕ್ರಮೇಣಭೂಯೋವಿಬದ್ಧಂವಿಗುಣಾ
ನಿಲೇನ ||
ಪ್ರವರ್ತಮಾನಂನಯಥಾಸ್ವಮೇನಂವಿಕಾರಮಾನಾಹಮುದಾ
ಹರಂತಿ || ೧೭ ||
ತಸ್ಮಿನ್ಭವಂತ್ಯಾಮಸಮುದ್ಭವೇತುತೃಷ್ಣಾಪ್ರತಿಶ್ಯಾಯಶಿರೋ
ವಿದಾಹಾಃ ||
ಆಮಾಶಯೇಶೂಲಮಥೋಗುರುತ್ವಂಹೃತ್ಸ್ತಂಭಉದ್ಗಾರ
ವಿಘಾತನಂಚ || ೧೮ ||
ಸ್ತಂಭಃಕಟೀಪೃಷ್ಠಪುರೀಷಮೂತ್ರೇಶೂಲೋಥಮೂರ್ಛಾಶ
ಕೃತಶ್ಚಛರ್ದಿಃ ||
ಶೋಥಶ್ಚಪಕ್ವಾಶಯಜೇಭವಂತಿತಥಾಲಸೋಕ್ತಾನಿಚಲಕ್ಷಣಾನಿ
|| ೧೯ ||

ಆನಾಹರೋಗದ ಲಕ್ಷಣವನ್ನು ಹೇಳುತ್ತಾನೆ—ಅಪಕ್ವವಾದ ಅನ್ನರಸ ವಾಗಲಿ, ಮಲವಾಗಲಿ ಹೊಟ್ಟೆಯಲ್ಲಿ ನಿಂತು ಕ್ರಮೇಣ ಅಭಿವೃದ್ಧಿಯಾಗಿ ವಿರುದ್ಧ ವಾದ ಅಂದರೆ ಪ್ರಕುಪಿತವಾದ ವಾಯುವಿನಿಂದ ಬಂಧಿಸಲ್ಪಟ್ಟು ಸ್ವಸ್ವಕಾಲದಲ್ಲಿ ನಿವೃತ್ತಿಯಾಗದೆ ಹೊಟ್ಟೆಯಲ್ಲಿ ವಿಕಾರಗಳನ್ನುಂಟು ಮಾಡಿದಲ್ಲಿ ಇದಕ್ಕೆ ಆನಾಹ ವೆಂದು ಹೆಸರು. ಅಪಕ್ವವಾದ ಆಮರಸದಿಂದ ಉತ್ಪನ್ನವಾದ ಆನಾಹರೋಗ ದಲ್ಲಿ ಬಾಯಾರಿಕೆ, ನೆಗಡಿ, ತಲೆಯಲ್ಲಿ ಉರಿ, ನೋವು, ಆಮಾಶಯದಲ್ಲಿ ಶೂಲೆ, ಹೊಟ್ಟೆಭಾರ, ಹೊಟ್ಟೆಯುಬ್ಬರ, ಹೃದಯವು ನಿಶ್ಚಲವಾಗಿರುವುದು, ತೇಗು ಬಾರದೆ ಊರ್ಧ್ವವಾತವು ಬಂದಾಗಿ ಹೋಗುವುದು, ಸೊಂಟ ಮತ್ತು ಪೃಷ್ಠ ಭಾಗ ಸಹ ಹಿಡಿದುಕೊಳ್ಳುವುದು, ಮಲವು ಹೊಟ್ಟೆಯಲ್ಲಿ ಸಿಲ್ಲುವುದರಿಂದುಂಟಾ ಗುವ ಆನಾಹರೋಗದ ಲಕ್ಷಣವೇನಂದರೆ—ಮಲಮೂತ್ರಗಳು ಬಂದಾಗಿ ತಡೆದು ಹೋಗುವುದು, ಹೊಟ್ಟೆನೋವು, ಮೂರ್ಛೆ, ವಮನದಲ್ಲಿ ಮಲವು ಬರುವುದು,

ಪಕ್ವಾಶಯವೆಂದರೆ ಕರುಳುಗಳೆಲ್ಲಾ ಊದಿಕೊಳ್ಳುವುದು, ಅಲಸಕರೋಗಕ್ಕೆ ಹೇಳಿರುವ ಲಕ್ಷಣಗಳೆಲ್ಲಾ ತೋರುತ್ತಿರುವುದು.

ಇಲ್ಲಿಗೆ ಉದಾವರ್ತನಿದಾನ ಸಂಪೂರ್ಣ.

---

## ಗುಲ್ಮನಿದಾನ-

ದುಷ್ಟಾವಾತಾದಯೋತ್ಯರ್ಥಂಮಿಥ್ಯಾಹಾರವಿಹಾರತಃ ॥
ಕುರ್ವಂತಿಪಂಚಧಾಗುಲ್ಮಂಕೋಷ್ಠಾಂತರ್ಗ್ರಂಥಿರೂಪಿಣಂ ॥ ೧ ॥
ತಸ್ಯಪಂಚವಿಧಂಸ್ಥಾನಂಪಾರ್ಶ್ವೇಹೃನ್ನಾಭಿಬಸ್ತಯಃ ॥

ಮಿಥ್ಯಾಹಾರವಿಹಾರಗಳಿಂದ ಎಂದರೆ ಹೊಟ್ಟೆಗೆ ತಿನ್ನದೆ ಇರೋಣ ಮತ್ತು ವ್ಯಾಯಾಮ ಮಾಡದಿರೋಣಗಳಿಂದ ಪ್ರಕುಪಿತಗಳಾದ ವಾತಾದಿ ದೋಷಗಳು ಹೊಟ್ಟೆಯಲ್ಲಿ ಆವಾಶಯಾದಿಗಳ ನಡುವೆ ಗಂಟಿನ ಹಾಗೆ ಗುಂಡಗಿರತಕ್ಕ ಒಂದು ಪದಾರ್ಥವನ್ನುಂಟು ಮಾಡುತ್ತವೆ. ಇದಕ್ಕೆ ಗುಲ್ಮವೆಂಬ ಹೆಸರು. ಹೊಟ್ಟೆಯಲ್ಲಿ ಇದು ಇರತಕ್ಕ ಸ್ಥಾನಗಳು ಐದು. ಯಾವುವೆಂದರೆ—ಎಡಬಲ ಪಕ್ಕಗಳು, ಹೃದಯ, ನಾಭಿ, ಮೂತ್ರಾಶಯ.

ಹೃನ್ನಾಭ್ಯೋರಂತರೇದೇಶೇಸಂಚಾರಿಯದಿವಾಚಲಃ ॥ ೨ ॥
ವೃತ್ತಶ್ಚಯೋಪಚಯವಾನ್ಸಗುಲ್ಮ ಇತಿಕೀರ್ತಿತಃ ॥

ಹೃದಯ ಮತ್ತು ನಾಭಿ ಇವುಗಳ ಮಧ್ಯಭಾಗದಲ್ಲಿದ್ದುಕೊಂಡು ದುಂಡಗೆ ಕೆಲವು ವೇಳೆ ದೊಡ್ಡದಾಗುವುದು, ಮತ್ತೆ ಕೆಲವು ವೇಳೆ ಸಣ್ಣನಾಗುವುದು, ಈ ರೀತಿ ಇದ್ದುಕೊಂಡು ಹೊಟ್ಟೆಯಲ್ಲೆಲ್ಲಾ ತಿರುಗಾಡಬಹುದು ಅಥವಾ ಇದ್ದಲ್ಲಿಯೇ ಇರಬಹುದು, ಇಂತಹ ಮಾಂಸಗ್ರಂಥಿಗೆ ಗುಲ್ಮವೆಂದು ಹೆಸರು.

ಸವ್ಯಸ್ತೈರ್ಜಾಯತೇದೋಷೈಸ್ಸಮಸ್ತೈರಪಿಚೋಚ್ಛ್ರಿತೈಃ ॥ ೩ ॥
ಪುರುಷಾಣಾಂತಥಾಸ್ತ್ರೀಣಾಂಜ್ಞೇಯೋರಕ್ತೇನಚಾಪರಃ ॥

ಗುಲ್ಮರೋಗವು ಪ್ರಕುಪಿತಗಳಾದ ತ್ರಿದೋಷಗಳ ಮಧ್ಯೆ ಒಂದೊಂದು ದೋಷಗಳಿಂದಲೂ ತ್ರಿದೋಷ ಸನ್ನಿಪಾತದಿಂದಲೂ ನಾಲ್ಕು ವಿಧವಾಗಿ ಗಂಡಸರಿಗೆ ಉಂಟಾಗುತ್ತವೆ. ಹೆಂಗಸರಿಗೆ ಆರ್ತವರೂಪವಾದ ರಕ್ತವು ದುಷ್ಟವಾಗಿ ಗುಲ್ಮವನ್ನುಂಟುಮಾಡುತ್ತದೆ, ಪುರುಷರಿಗೆ ಹಿಂದೆ ಹೇಳಿದವು ನಾಲ್ಕೇ ವಿಧವಾದ ಗುಲ್ಮಗಳು, ಸ್ತ್ರೀಯರಿಗೆ ಕೊನೆಯಲ್ಲಿ ಹೇಳಿದ್ದೊಂದೂ ಸೇರಿ ಐದು ವಿಧವಾದ ಗುಲ್ಮರೋಗಗಳೆಂಬುವುದು ತಾತ್ಪರ್ಯ.

ಉದ್ಗಾರಬಾಹುಲ್ಯಪುರೀಷಬಂಧತೃಪ್ತ್ಯಕ್ಷಮತ್ವಾಂತ್ರವಿಕೂಜನಾನಿ ॥
ಆಟೋಪಮಾಧ್ಮಾನಮಪಕ್ತಿಶಕ್ತಿರಾಸನ್ನಗುಲ್ಮಸ್ಯವದಂತಿಲಿಂಗಂ ॥ ೪ ॥

ಬಹಳವಾಗಿ ತೇಗು ಬರುವುದು, ಮಲಬಂಧ, ಯಾವಾಗ್ಯೂ ಹೊಟ್ಟೆ ತುಂಬಿ ದಂತಿರುವುದು, ಸಾಮರ್ಥ್ಯವಿಲ್ಲದಿರುವುದ , ಕರುಳು ಶಬ್ದಮಾಡುವುದು, ಹೊಟ್ಟೆ ನುಲಿಯುತ್ತಿರುವುದು, ಹೊಟ್ಟೆ ಉಬ್ಬರಿಸಿಕ್ಕೊಳ್ಳುವುದು. ತಿಂದದ್ದು ಜೀರ್ಣವಾಗುವುದಕ್ಕಿಲ್ಲ, ಇವುಗಳು ಗುಲ್ಮವು ಹುಟ್ಟುವುದಕ್ಕೆ ಪೂರ್ವಭಾವಿಯಾಗಿ ತೋರುವ ಲಕ್ಷಣಗಳು.

ಅರುಚಿಃಕೃಚ್ಛ್ರವಿಣ್ಮೂತ್ರವಾತತಾಂತ್ರವಿಕೂಜನಂ ॥
ಆನಾಹಶ್ಚೋರ್ಧ್ವವಾತತ್ವಂಸರ್ವಗುಲ್ಮೇಷುಲಕ್ಷಯೇತ್ ॥ ೫ ॥

ಅರುಚಿ, ಮಲಮೂತ್ರಗಳು ಕಷ್ಟದಿಂದಾಗುವುದು, ಅಧೋವಾಯು ಸಡಲದಿರುವುದು, ಹೊಟ್ಟೆಯೊಳಗೆ ಶಬ್ದವಾಗುವುದು, ಹೊಟ್ಟೆಯುಬ್ಬರ, ತೇಗು ಬರುತ್ತಿರುವುದು. ಈ ಲಕ್ಷಣಗಳು ಎಲ್ಲಾ ಗುಲ್ಮದಲ್ಲಿಯೂ ಇದ್ದೇ ಇರುತ್ತವೆ.

ರೂಕ್ಷಾನ್ನಪಾನಂವಿಷಮಾತಿಮಾತ್ರಂವಿಚೇಷ್ಟನಂವೇಗವಿನಿಗ್ರಹಶ್ಚ ॥
ಶೋಕೋಭಿಘಾತೋತಿಮಲಕ್ಷಯಶ್ಚನಿರನ್ನತಾಚಾನಿಲಗುಲ್ಮಹೇತುಃ ॥ ೬ ॥
ಯಃಸ್ಥಾನಸಂಸ್ಥಾನರುಜಾವಿಕಲ್ಪಂವಿಡ್ವಾತಸಂಗಂಗಲವಕ್ತ್ರಶೋಷಂ ॥
ಶ್ಯಾವಾರುಣತ್ವಂಶಿಶಿರಜ್ವರಂಚಹೃತ್ಕುಕ್ಷಿಪಾರ್ಶ್ವಾಂಸಶಿರೋರುಜಂಚ ॥ ೭ ॥
ಕರೋತಿಜೀರ್ಣೇಭ್ಯಧಿಕಂಪ್ರಕೋಪಂಭುಕ್ತೇಮೃದುತ್ವಂಸಮುಪೈತಿಯಶ್ಚ ॥
ವಾತಾತ್ಸಗುಲ್ಮೋನಚತತ್ರರೂಕ್ಷಂಕಷಾಯತಿಕ್ತಂಕಟುಚೋಪಶೇತೇ ॥ ೮ ॥

ರೂಕ್ಷಗಳಾದ ಅಂದರೆ ಸ್ನೇಹರಹಿತಗಳಾದ ಅನ್ನಪಾನಗಳನ್ನು ವಿಷಮವಾಗಿ ಅಂದರೆ ಒಂದು ಕ್ರಮವಿಲ್ಲದೆ ಮತ್ತು ಅತಿಯಾಗಿ ಸಹ ಉಪಯೋಗಿಸುವುದು, ವಿಚೇಷ್ಟನಂ ಅಂದರೆ ತನ್ನ ಶಕ್ತಿಗೆ ಮೀರಿ ಕೆಲಸಮಾಡುವುದು, ವಾತಾದಿಗಳ ವೇಗವನ್ನು ತಡೆಯುವುದು, ಅತಿಯಾಗಿ ದುಃಖಪಡುವುದು, ಬಲವಾದ

ಪೆಟ್ಟುಬೀಳುವುದು, ಅತಿಯಾಗಿ ಮಲಪ್ರವೃತ್ತಿಯಾಗುವುದು, ನಿರಾಹಾರ ಮಾಡುವುದು, ಇವುಗಳು ವಾತಗುಲ್ಮದ ಕಾರಣಗಳು, ಈ ಗುಲ್ಮವು ಎಂದರೆ ಗ್ರಂಥಿಯು ಸ್ಥಾನನಿಯಮವೂ ಆಕಾರನಿಯಮವೂ ಒಂದೇ ವಿಧವಾದ ವೇದನೆ ಎಂಬ ನಿಯಮವೂ ಇಲ್ಲದೆ ಇರುವುದಲ್ಲದೆ, ಅಧೋವಾಯು ಮತ್ತು ಮಲ ಈ ಎರಡನ್ನೂ ತಡದು ತೊಂದರೆ ಪಡಿಸುತ್ತದೆ, ಗಂಟಲು ಮತ್ತು ಬಾಯಿ ಸಹ ಒಣಗಿ ಹೋಗುತ್ತಿರುತ್ತದೆ, ಶರೀರವು ಧೂಮ್ರವರ್ಣವಾಗಿಯೂ ಕೆಂಪು ವರ್ಣವಾಗಿಯೂ ಇರುವುದು, ಸುಮಾರಾದ ಜ್ವರ, ಎದೆ, ಹೊಟ್ಟೆ, ಪಾರ್ಶ್ವ, ಭುಜಗಳು, ತಲೆ ಇವುಗಳಲ್ಲಿ ನೋವು, ಭೋಜನಮಾಡಿದ್ದು ಜೀರ್ಣವಾದರೆ ಗುಲ್ಮದ ಹಿಂಸೆ, ಹೊಟ್ಟೆನೋವು ಹೆಚ್ಚಾಗುತ್ತದೆ, ಕೂಡಲೇ ಭೋಜನ ಮಾಡಿದರೆ ಬಾಧೆ ಕಡಮೆಯಾಗುತ್ತದೆ, ಇದೆಲ್ಲಾ ವಾತಗುಲ್ಮದ ಸ್ವಭಾವಗಳು. ಈ ಗುಲ್ಮ ಚಿಕಿತ್ಸೆಯಲ್ಲಿ ರೂಕ್ಷಗಳಾದ ಔಷಧಗಳು ಕಷಾಯ, ಕಹಿ, ಕಾರ ಈ ರಸಗಳುಳ್ಳ ಔಷಧಗಳು ಸಹ ಉಪಯೋಗಕ್ಕೆ ಬರುವುದಿಲ್ಲ.

**ಕಟ್ವಮ್ಲತೀಕ್ಷ್ಣೋಷ್ಣವಿದಾಹಿರೂಕ್ಷಕ್ರೋಧಾತಿಮದ್ಯಾರ್ಕಹುತಾಶಸೇವಾ ॥**
**ಆಮಾಭಿಘಾತೋರುಧಿರಂಚದುಷ್ಟಂಪೈತ್ತಸ್ಯಗುಲ್ಮಸ್ಯನಿಮಿತ್ತಮುಕ್ತಂ ॥ ೯ ॥**
**ಜ್ವರಃಪಿಪಾಸಾವದನಾಂಗರಾಗಃಶೂಲಂಮಹಜ್ಜೀರ್ಯತಿಭೋಜನೇಚ ॥**
**ಸ್ವೇದೋವಿದಾಹೋವ್ರಣವಚ್ಚ ಗುಲ್ಮಃಸ್ಪರ್ಶಾಸಹಃಪೈತ್ತಿಕಗುಲ್ಮರೂಪಂ ॥ ೧೦ ॥**

ಕಾರವಾದ ಪದಾರ್ಥ, ಹುಳಿಯಾದ ಪದಾರ್ಥ, ತೀಕ್ಷ್ಣಗುಣವುಳ್ಳ ಪದಾರ್ಥ, ಬಿಸಿಯಾದ ವಸ್ತುಗಳು, ವಿದಾಹಿ ವಸ್ತುಗಳು, ರೂಕ್ಷವಸ್ತುಗಳು ಇಂತವುಗಳನ್ನು ಅತಿಯಾಗಿ ಸೇವಿಸುವುದು, ಅತಿಯಾಗಿ ಸಿಟ್ಟುಮಾಡುವುದು, ಬಿಸಿಲು ಕಾಯಿಸುವುದು, ಬೆಂಕಿಯನ್ನು ಕಾಯಿಸುವುದು, ಅಪಕ್ವವಾದ ಅನ್ನರಸದಿಂದ ಉಂಟಾಗುವ ತೊಂದರೆ, ರಕ್ತವು ದುಷ್ಟವಾಗುವುದು ಇವುಗಳು ಪಿತ್ತಗುಲ್ಮಕೆ ಕಾರಣಗಳು. ಜ್ವರ, ಬಾಯಾರಿಕೆ, ಮೈಯ್ಯಿ, ಮುಖ, ಇವುಗಳು ಕೆಂಪಾಗುವುದು, ಭೋಜನ ಮಾಡಿದ ಪದಾರ್ಥಗಳು ಜೀರ್ಣಕ್ಕೆ ಬರುವಾಗ್ಯೆ ಶೂಲೆ ಬರುವುದು, ಮೈ ಬೆವರುವುದು, ಮೈಯ್ಯುರಿ, ಒಳಗೆ ವ್ರಣವಾಗಿರುವ ಹಾಗೆ ಗುಲ್ಮವು ಮುಟ್ಟಿದರೆ ನೋಯುತ್ತಿರುವುದು ಇವು ಪಿತ್ತಗುಲ್ಮದ ಲಕ್ಷಣಗಳು.

**ಶೀತಂಗುರುಸ್ನಿಗ್ಧಮಚೇಷ್ಟನಂಚಸಂಪೂರಣಂಪ್ರಸ್ವಪನಂದಿವಾಚ॥**
**ಗುಲ್ಮಸ್ಯಹೇತುಃಕಫಸಂಭವಸ್ಯಸರ್ವಸ್ತುದುಷ್ಟೋನಿಚಯಾತ್ಮಕಸ್ಯ ॥ ೧೧ ॥**

**ಸ್ತೈಮಿತ್ಯಶೀತಜ್ವರಗಾತ್ರಸಾದಹೃಲ್ಲಾಸಕಾಸಾರುಚಿಗೌರವಾಣಿ ॥**
**ಶೈತ್ಯಂರುಗಲ್ಪಾಕಠಿನೋನ್ನತತ್ವಂಗುಲ್ಮಸ್ಯರೂಪಾಣಿಕಫಾತ್ಮಕಸ್ಯ ॥ ೧೨ ॥**

ಶೀತವೀರ್ಯವಾದ ಆಹಾರಗಳು, ಗುರ್ವಾಹಾರ, ಸ್ನೇಹಪ್ರಚುರವಾದ ಆಹಾರ, ಸರಿಯಾಗಿ ವ್ಯಾಯಾಮ ಮಾಡದಿರುವುದು, ಆಹಾರವನ್ನು ಹೆಚ್ಚಾಗಿ ಹೊಟ್ಟೆಗೆ ತುಂಬುವುದು, ಹಗಲು ಮಲಗುವುದು, ಇವು ಕಫಗುಲ್ಮಕ್ಕೆ ಕಾರಣಗಳು. ತ್ರಿದೋಷ ಸನ್ನಿಪಾತ ಜನ್ಯವಾದ ಗುಲ್ಮಕ್ಕೆ ತ್ರಿದೋಷ ಪ್ರಕೋಪವೂ ಕಾರಣ, ಹೊಟ್ಟೆ ಮಂದವಾಗಿರುವುದು, ಛಳಿ ಬಂದು ಜ್ವರ ಬರುತ್ತಿರುವುದು, ಅವಯವಗಳು ನಿಶ್ಚೇಷ್ಟವಾಗಿರುವುದು, ಬಾಯಿನೀರು ಬರುತ್ತಿರುವುದು, ಕೆಮ್ಮು, ಅರುಚಿ, ಮೈಭಾರ, ಮೈಯೆಲ್ಲಾ ಯಾವಾಗ್ಯೂ ತಣ್ಣಗಿರುವುದು, ಹೊಟ್ಟೆಯಲ್ಲಿ ಸ್ವಲ್ಪವಾದ ನೋವು, ಗುಲ್ಮವು ಗಟ್ಟಿಯಾಗಿಯೂ ದಪ್ಪನಾಗಿಯೂ ಇರುವುದು, ಇವು ಕಫಗುಲ್ಮದ ಲಕ್ಷಣಗಳು.

**ನಿಮಿತ್ತರೂಪಾಣ್ಯುಪಲಭ್ಯಗುಲ್ಮೇದ್ವಿದೋಷಜೇದೋಷಬಲಾಬಲಂಚ ॥**
**ವ್ಯಾಮಿಶ್ರಲಿಂಗಾನಪರಾಶ್ಚಗುಲ್ಮಾನ್ ಸ್ತ್ರೀನಾದಿಶೇದೌಷಧಕಲ್ಪನಾರ್ಥಂ ॥ ೧೩ ॥**

ಎರಡೆರಡು ದೋಷಗಳ ಲಕ್ಷಣ ತೋರುವ ಗುಲ್ಮರೋಗದಲ್ಲಿ ಗುಲ್ಮದ ಕಾರಣ ಮತ್ತು ಗುಲ್ಮದ ಲಕ್ಷಣ ಇವುಗಳನ್ನು ಆಲೋಚಿಸಿಕೊಂಡು ಪ್ರಕುಪಿತಗಳಾದ ದೋಷಗಳ ಪ್ರಬಲ ದುರ್ಬಲತ್ವವನ್ನೂ ಪರ್ಯಾಲೋಚಿಸಿ ಚಿಕಿತ್ಸಾ ಸೌಕರ್ಯಾರ್ಥವಾಗಿ ದ್ವಿದೋಷಜನ್ಯ ಗುಲ್ಮವನ್ನು (೧) ವಾತಪಿತ್ತಜನ್ಯ, (೨) ವಾತಶ್ಲೇಷ್ಮಜನ್ಯ, (೩) ಪಿತ್ತಶ್ಲೇಷ್ಮಜನ್ಯ ಎಂಬದಾಗಿ ಮೂರು ವಿಧವಾಗಿ ಕಲ್ಪಿಸಿಕೊಳ್ಳಬೇಕು.

**ಮಹಾರುಜಂದಾಹಪರೀತಮಶ್ಮವದ್ಘನೋನ್ನತಂಶೀಘ್ರವಿದಾಹಿದಾರುಣಂ ॥**
**ಮನಶ್ಶರೀರಾಗ್ನಿಬಲಾಪಹಾರಿಣಂತ್ರಿದೋಷಜಂಗುಲ್ಮಮಸಾಧ್ಯಮಾದಿಶೇತ್ ॥ ೧೪ ॥**

ಗ್ರಂಥಿಯು ಬಹಳ ವೇದನೆಯುಳ್ಳದ್ದಾಗಿರುವದು, ಗ್ರಂಥಿ ಇರತಕ್ಕ ಪ್ರದೇಶದಲ್ಲಿ ಉರಿಯಿರುವುದು, ಗ್ರಂಥಿಯು ಕಲ್ಲಿನ ಹಾಗೆ ಗಟ್ಟಿಯಾಗಿಯೂ ದಪ್ಪವಾಗಿಯೂ ಇರುವುದು, ಗ್ರಂಥಿಯು ಭಯಂಕರವಾದ ವೇದನೆ ಭಯಂಕರವಾದ ಸಂಕಟಗಳಿಂದ ಕೂಡಿರುವುದು, ಮನಸ್ಸಿನ ಶಕ್ತಿಯನ್ನು ಅಂದರೆ ಯುಕ್ತಾಯುಕ್ತ ವಿವೇಕ ಜ್ಞಾನವನ್ನೂ, ದೇಹಶಕ್ತಿಯನ್ನೂ ಮತ್ತು ಜಠರಾಗ್ನಿಯ ಶಕ್ತಿಯನ್ನೂ

ಕೆಡಿಸತಕ್ಕದ್ದಾಗಿಯೂ ಇರುವ ಗುಲ್ಮರೋಗವನ್ನು ತ್ರಿದೋಷಜನ್ಯವೆಂಬದಾ ಗಿಯೂ ಅಸಾಧ್ಯವೆಂಬದಾಗಿಯೂ ತಿಳಿಯಬೇಕು.

ನವಪ್ರಸೂತಾಹಿತಭೋಜನಾಯಾಯಾಚಾಮಗರ್ಭಂವಿಸೃಜೇದೃತೌವಾ ॥
ವಾಯುರ್ಹಿತಸ್ಯಾಃಪರಿಗೃಹ್ಯರಕ್ತಂಕರೋತಿಗುಲ್ಮಂಸರುಜಂಸದಾಹಂ ॥ ೧೫ ॥
ಪೈತ್ತಸ್ಯಲಿಂಗೇನಸಮಾನಲಿಂಗಂವಿಶೇಷಣಂಚಾಪ್ಯಪರಂನಿಬೋಧ ॥
ಯಃಸ್ಪಂದತೇಪಿಂಡಿತಏವನಾಂಗೈಶ್ಚಿರಾತ್ಸಶೂಲಸ್ಸಮಗರ್ಭಲಿಂಗಃ ॥ ೧೬ ॥
ಸರೌಧಿರಃಸ್ತ್ರೀಭವಏವಗುಲ್ಮೋಮಾಸೇವ್ಯತೀತೇದಶಮೇಚಿಕಿತ್ಸ್ಯಃ

ರಕ್ತಗುಲ್ಮ ಸ್ವರೂಪವನ್ನು ಹೇಳುತ್ತಾನೆ—ಆಗ ತಾನೆ ಪ್ರಸವಿಸಿದ ಸ್ತ್ರೀಯು ಅಪಥ್ಯಭೋಜನ ಮಾಡುವುದರಿಂದಲೂ, ನವಮಾಸ ತುಂಬುವ ಮೊದಲು ಗರ್ಭವು ಪಕ್ವವಾಗದೆ ಪ್ರಸವವಾಗೋಣದರಿಂದಲೂ, ತಿಂಗಳು ಕಟ್ಟಿ ಮುಟ್ಟಾ ದಾಗ್ಯೆ ಅಪಥ್ಯಭೋಜನ ಮಾಡೋಣದರಿಂದಲೂ ವಾಯುವು ಪ್ರಕುಪಿತವಾಗಿ ಆರ್ತವರೂಪವಾದ ರಕ್ತವನ್ನು ಕೆಡಿಸಿ ಗುಲ್ಮರೋಗವನ್ನು ಹುಟ್ಟಿಸುತ್ತದೆ. ಇದರ ಲಕ್ಷಣಗಳು ಪಿತ್ತಗುಲ್ಮದ ಲಕ್ಷಣಗಳಂತಿರುತ್ತವೆ, ನೋವು, ಉರಿ ಸಹ ಇರುತ್ತವೆ. ಗುಲ್ಮವು ಗರ್ಭಪಿಂಡದಂತೆ ಹೊಟ್ಟೆಯಲ್ಲಿ ಚಲಿಸುತ್ತಿರುತ್ತದೆ, ಅವಯವಗಳು ಇರುವಂತೆ ಮಾತ್ರ ತೋರುತ್ತಿರುವುದಿಲ್ಲ, ಶೂಲೆ ಇರುತ್ತದೆ, ಗರ್ಭಿಣಿ ಸ್ತ್ರೀಯರಿ ಗಾಗುವಂತೆಯೇ ಮುಟ್ಟು ನಿಂತು ಹೋಗುವುದು, ಸ್ತನಗಳು ದಪ್ಪವಾಗುವುದು, ಬಯಕೆಗಳು ಹುಟ್ಟುವುದು, ಇತ್ಯಾದಿ ಗರ್ಭಲಕ್ಷಣಗಳೆಲ್ಲಾ ಕಾಣುತ್ತಿರುತ್ತದೆ, ಈ ರೋಗವು ಹೆಂಗಸರಿಗೆ ಮಾತ್ರ ಉಂಟಾಗುತ್ತದೆ, ಹತ್ತು ತಿಂಗಳು ಕಳೆಯುವ ವರಿಗೂ ಗರ್ಭವೆಂಬ ಅನುಮಾನದ ಮೇಲೆ ಚಿಕಿತ್ಸೆ ಮಾಡದೆ ನಂತರ ಚಿಕಿತ್ಸೆ ಮಾಡಬೇಕು.

ಸಂಚಿತಃಕ್ರಮಶೋಗುಲ್ಮೋಮಹಾಪಾಸ್ತುಪರಿಗ್ರಹಃ ॥ ೧೭ ॥
ಕೃತಮೂಲಶ್ಶಿರಾನದ್ಧೋಯದಾಕೂರ್ಮಇವೋತ್ಥಿತಃ ॥
ದೌರ್ಬಲ್ಯಾರುಚಿಹೃಲ್ಲಾಸಕಾಸಛರ್ದ್ಯರತಿಜ್ವರೈಃ ॥ ೧೮ ॥
ತೃಷ್ಣಾತಂದ್ರಾಪ್ರತಿಶ್ಯಾಯೈರ್ಯುಜ್ಯತೇನಸಸಿದ್ಧ್ಯತಿ ॥
ಗೃಹೀತ್ವಾಸಜ್ವರಶ್ವಾಸಛರ್ದ್ಯತೀಸಾರಪೀಡಿತಂ ॥ ೧೯ ॥
ಹೃನ್ನಾಭಿಹಸ್ತಪಾದೇಷುಶೋಥಃಕರ್ಷತಿಗುಲ್ಮಿನಂ ॥
ಶ್ವಾಸಶ್ಶೂಲಂಪಿಪಾಸಾನ್ನವಿದ್ವೇಷೋಗ್ರಂಥಿಮೂಢತಾ ॥ ೨೦ ॥
ಜಾಯತೇದುರ್ಬಲತ್ವಂಚಗುಲ್ಮಿನೋಮರಣಾಯವೈ ॥

ಅಸಾಧ್ಯ ಗುಲ್ಮಲಕ್ಷಣ—ಕ್ರಮವಾಗಿ ಗುಲ್ಮವು ದೊಡ್ಡದಾಗಿ ಉದರದ ಹೆಚ್ಚು ಭಾಗವನ್ನು ಆಕ್ರಮಿಸಿಕ್ಕೊಂಡು ಸಿರಾ, ಧಮನಿಗಳಿಂದ ವ್ಯಾಪ್ತವಾಗಿ ಸ್ವಲ್ಪ ಹೆಚ್ಚು ಕಡಮೆ ಆಮೆಯಷ್ಟು ದೊಡ್ಡದಾಗುತ್ತದೆ, ಶರೀರವು ದುರ್ಬಲವಾಗುವುದು, ಅರುಚಿ, ಬಾಯಿನೀರು ಬರುತ್ತಿರುವುದು, ಕೆಮ್ಮು, ಕೆಲಸಮಾಡಲು ಅಪೇಕ್ಷೆ ತಪ್ಪಿಹೋಗುವುದು, ಜ್ವರ, ಬಾಯಾರಿಕೆ, ತೂಕಡಿಕೆ, ನೆಗಡಿ, ಇವುಗಳೊಡನೆ ಹಿಂದೆ ಹೇಳಿದ ಲಕ್ಷಣಗಳೂ ಕೂಡಿದ್ದಲ್ಲಿ ಗುಲ್ಮರೋಗವು ಚಿಕಿತ್ಸೆಗೆ ಅಸಾಧ್ಯವೆಂದು ತಿಳಿಯಬೇಕು. ಗುಲ್ಮರೋಗಿಗೆ ಜ್ವರ, ವಮನ, ಉಬ್ಬಸ, ಅತಿಸಾರ, ಕೈಕಾಲು ಹೊಟ್ಟೆಗಳಲ್ಲಿ ಶೋಭೆ ಇವುಗಳಿದ್ದಲ್ಲಿ ಅಸಾಧ್ಯವೆಂದು ತಿಳಿಯಬೇಕು. ಗುಲ್ಮರೋಗಿಗೆ—ಉಬ್ಬಸ, ಶೂಲೆ, ಬಾಯಾರಿಕೆ, ಅನ್ನದ್ವೇಷ, ಹೊಟ್ಟೆಯಲ್ಲಿರುವ ಗ್ರಂಥಿಯು ದೊಡ್ಡದಾಗಿರುವುದು. ಶರೀರವು ಬಲಹೀನವಾಗುತ್ತ ಬರುವುದು, ಈ ಲಕ್ಷಣಗಳು ಪ್ರಬಲವಾಗುತ್ತ ಬಂದಲ್ಲಿ ಗುಲ್ಮರೋಗವು ಅಸಾಧ್ಯವೆಂದು ನಿರ್ಣಯಿಸತಕ್ಕದ್ದು.

ಇಲ್ಲಿಗೆ ಗುಲ್ಮರೋಗನಿದಾನ ಸಂಪೂರ್ಣ.

---

## ಹೃದ್ರೋಗನಿದಾನ.

**ಅತ್ಯುಷ್ಣಗುರ್ವನ್ನಕಷಾಯತಿಕ್ತಶ್ರಮಾಭಿಘಾತಾಧ್ಯಶನಪ್ರಸಂಗೈಃ।**
**ಸಂಚಿಂತನೈರ್ವೇಗವಿಧಾರಣೈಶ್ಚ ಹೃದಾಮಯಃ ಪಂಚವಿಧಃ**
**ಪ್ರದಿಷ್ಟಃ ॥ ೧ ॥**

ಉಷ್ಣವನ್ನು ವೃದ್ಧಿಮಾಡತಕ್ಕ ಪದಾರ್ಥಗಳು—ಗುರ್ವಾಹಾರಗಳು, ಕಷಾಯರಸಪ್ರಧಾನವಾದ ಆಹಾರಗಳು, ಕಹಿಯಾದ ಆಹಾರಗಳು, ಅತಿಯಾಗಿ ಶ್ರಮ, ಎದೆಗೆ ಯಾವದಾದರೂ ಪೆಟ್ಟು ತಗಲುವುದು, ವಿರಾಮವಿಲ್ಲದೆ ಪದೇ ಪದೇ ಭೋಜನಮಾಡುವುದು, ಯಾವದಾದರೂ ಚಿಂತೆಯನ್ನು ಹಚ್ಚಿಕೊಳ್ಳುವುದು, ಮಲಮೂತ್ರಗಳ ವೇಗವನ್ನು ತಡೆಯುವುದು. ಈ ಕಾರಣಗಳಿಂದ ಹೃದಯರೋಗವು ಹುಟ್ಟುತ್ತದೆ. ಇದು ಐದು ವಿಧ—ವಾತಜನ್ಯ, ಪಿತ್ತಜನ್ಯ, ಶ್ಲೇಷ್ಮಜನ್ಯ, ಸನ್ನಿಪಾತಜನ್ಯ, ಕ್ರಿಮಿಜನ್ಯ, ಎಂಬದಾಗಿ.

**ದೂಷಯಿತ್ವಾರಸಂದೋಷಾವಿಗುಣಾಹೃದಯಂಗತಾಃ ॥**
**ಹೃದಿಬಾಧಾಂಪ್ರಕುರ್ವಂತಿಹೃದ್ರೋಗಂತಂಪ್ರಚಕ್ಷತೆ ॥ ೨ ॥**

ಸ್ವಸ್ವಪ್ರಕೋಪ ಕಾರಣಗಳಿಂದ ಕುಪಿತಗಳಾದ ವಾತಾದಿದೋಷಗಳು ಹೃದಯವನ್ನು ಹೊಂದಿ ತದ್ಗತವಾದ ರಸಧಾತುವನ್ನು ದೋಷಯುಕ್ತವಾಗಿ ಮಾಡಿ ಹೃದಯದಲ್ಲಿ ಬಾಧೆಯನ್ನುಂಟುಮಾಡುತ್ತವೆ, ಇದಕ್ಕೆ ಹೃದ್ರೋಗವೆಂದು ಹೆಸರು.

**ಆಯಮ್ಯತೇಮಾರುತಜೇಹೃದಯಂತುದ್ಯತೇತಥಾ ||**
**ನಿರ್ಮಥ್ಯತೇದೀರ್ಯತೇಚಸ್ಫೋಟ್ಯತೇಪಾಟ್ಯತೇಪಿಚ || ೩ ||**

ವಾತಪ್ರಕೋಪಜನ್ಯವಾದ ಹೃದ್ರೋಗದಲ್ಲಿ ಹೃದಯವು ಮುರಿದು ಬಗ್ಗಿಸಿದ ಹಾಗೆ ಹಿಂಸೆಯಾಗುತ್ತಿರುವುದು, ಸೂಜಿಯಿಂದ ಎದೆಯನ್ನು ಚುಚ್ಚಿದ ಹಾಗಾಗುವುದು, ಎದೆಯಲ್ಲಿ ಮುಸರನ್ನು ಕಡದ ಹಾಗೆ ಹಿಂಸೆಯಾಗುವುದು, ಎದೆಯು ಶೀಳುವ ಹಾಗೆಯೂ ಉಬ್ಬಿ ಒಡೆದು ಹೋಗುವ ಹಾಗೆಯೂ ಕೊಡಲಿಯಿಂದ ಕಡಿದ ಹಾಗೆಯೂ ತೋರುತ್ತಿರುತ್ತದೆ.

**ತೃಷ್ಣೋಷ್ಮಾದಾಹಚೋಷಾಸ್ಯುಃಪೈತ್ತಿಕೇಹೃದಯಕ್ಲಮಃ ||**
**ಧೂಮಾಯನಂಚಮೂರ್ಛಾಚಸ್ವೇದಶ್ಶೋಷೋಮುಖಸ್ಯಚ ||೪||**

ಪಿತ್ತಪ್ರಕೋಪಜನ್ಯವಾದ ಹೃದಯರೋಗದಲ್ಲಿ—ಬಾಯಾರಿಕೆ, ಮೈಬಿಸಿಯಾಗಿರುವುದು, ಮೈಯ್ಯುರಿ, ಹೃದಯವು ಬಳಲುತ್ತಿರುವುದು, ಮೈಯ್ಯೆಲ್ಲಲ್ಲಾ ಹೊಗೆ ಹೊರಡುವಂತೆ ತೋರುತ್ತಿರುವುದು, ಮೂರ್ಛೆ ಬರುವುದು, ಮೈಬೆವರುತ್ತಿರುವುದು ಇವು ಲಕ್ಷಣಗಳು.

**ಗೌರವಂಕಫಸಂಸ್ರಾವೋರುಚಿಸ್ತಂಭೋಗ್ನಿಮಾರ್ದವಂ ||**
**ಮಾಧುರ್ಯಮಪಿಚಾಸ್ಯಸ್ಯಬಲಾಸಾವತತೆಹೃದಿ || ೫ ||**

ಕಫಪ್ರಕೋಪಜನ್ಯವಾದ ಹೃದಯರೋಗದಲ್ಲಿ ಯಾವಾಗಲೂ ಕಫವು ಬಾಯಿಂದ ಬರುತ್ತಿರುವುದು, ಅರುಚಿ, ರೋಗಿಯು ಸ್ತಂಭಿತನಾದಂತೆ ತೋರುತ್ತಿರುವುದು, ಅಗ್ನಿಮಾಂದ್ಯ, ಬಾಯಿ ಶೀಯಾಗಿರುವುದು, ಇವು ಲಕ್ಷಣಗಳು.

**ವಿದ್ಯಾತ್‌ತ್ರಿದೋಷಂತ್ವಪಿಸರ್ವಲಿಂಗಂತೀವ್ರಾರ್ತಿತೋದಂಕ್ರಿಮಿಜಂಸಕಂಡೂಂ ||**
**ಉತ್‌ಕ್ಲೇದಃಷ್ಠೀವನಂತೋದಃಶೂಲಂಹೃಲ್ಲಾಸಕಸ್ತಮಃ || ೬ ||**
**ಅರುಚಿಶ್ಯಾವನೇತ್ರತ್ವಂಶೋಥಶ್ಚಕ್ರಿಮಿಜೇಭವೇತ್ ||**

ಮೂರು ದೋಷಗಳೂ ಪ್ರಕುಪಿತಗಳಾಗಿ ಹುಟ್ಟುವ ಹೃದಯರೋಗದಲ್ಲಿ ತ್ರಿದೋಷದ ಲಕ್ಷಣಗಳೂ ಸೇರಿ ಕಾಣುತ್ತಿರುತ್ತವೆ. ಕ್ರಿಮಿಜನ್ಯವಾದ ಹೃದಯರೋಗದಲ್ಲಿ ಹೃದಯದಲ್ಲಿ ವೇದನೆ, ವ್ಯಥೆ, ನವೆ, ಬಾಯಿನೀರು ಕರೆಯುವುದು, ಉಗುಳು, ಶೂಲೆ, ಆಗಾಗ್ಯೆ ಅಜ್ಞಾನ ಬರುತ್ತಿರುವುದು, ಅರುಚಿ, ಕಣ್ಣು ಹೊಗೆಯ ಬಣ್ಣಕ್ಕೆ ತಿರುಗುವುದು, ಶೋಭೆ, ಇವು ಕ್ರಿಮಿಜನ್ಯ ಹೃದ್ರೋಗದ ಲಕ್ಷಣಗಳು.

**ಕ್ಲಮುಸ್ಸಾದೋಭ್ರಮುಶ್ಯೋಷೋಜ್ಞೇಯಾಸ್ತೇಷಾಮುಪದ್ರವಾಃ**
**ಕ್ರಿಮಿಜೇಕ್ರಿಮಿಜಾತೀನಾಂಶ್ಲೇಷ್ಮಿಕಾಣಾಂಚಯೇಮತಾಃ ॥ ೭ ॥**

ಬಳಲಿಕೆ, ಅಗ್ನಿಮಾಂದ್ಯ, ಬುದ್ಧಿಭ್ರಮ, ಶರೀರ ಶೋಷಿಸಿ ಹೋಗುವುದು, ಇವು ಕ್ರಿಮಿರೋಗದ ಉಪದ್ರವಗಳು, ಕ್ರಿಮಿಜನ್ಯವಾದ ಹೃದಯರೋಗದಲ್ಲಿ ಹಿಂದೆ ಹೇಳಿದ ಉಪದ್ರವಗಳ ಜೊತೆಗೆ ಶ್ಲೇಷ್ಮಜನ್ಯ ಕ್ರಿಮಿರೋಗದ ಉಪದ್ರವಗಳು ಸಹ ಕಾಣುತ್ತಿರುತ್ತವೆ.

ಇಲ್ಲಿಗೆ ಹೃದ್ರೋಗನಿದಾನ ಸಂಪೂರ್ಣ.

## ಮೂತ್ರಕೃಚ್ಛ್ರನಿದಾನ.

**ವ್ಯಾಯಾಮತೀಕ್ಷ್ಣೌಷಧರೂಕ್ಷಮದ್ಯಪ್ರಸಂಗನಿತ್ಯದ್ರುತ**
**ಪೃಷ್ಠಯಾನಾತ್ ॥**
**ಆನೂಪಮಾಂಸಾಧ್ಯಶನಾದಜೀರ್ಣಾತ್ಸ್ಯುರ್ಮೂತ್ರಕೃಚ್ಛ್ರಾಣಿ**
**ನೃಣಾಂತಥಾಷ್ಟೌ ॥ ೧ ॥**
**ಪೃಥಙ್ಮಲಾಸ್ಸ್ವೈಃಕುಪಿತಾನಿದಾನೈಃಸರ್ವೇಥವಾಕೋಪಮು**
**ಪೇತ್ಯಬಸ್ತೌ ॥**
**ಮೂತ್ರಸ್ಯಮಾರ್ಗಂಪರಿಪೀಡಯಂತಿಯದಾತದಾಮೂತ್ರಯ**
**ತೀಹಕೃಚ್ಛ್ರಾತ್ ॥ ೨ ॥**

ಅತಿಯಾಗಿ ವ್ಯಾಯಾಮ ಮಾಡುವುದು, ತೀಕ್ಷ್ಣಗಳಾದ ಔಷಧಗಳನ್ನು ತೆಗದುಕೊಳ್ಳುವುದು, ಸ್ನೇಹರಹಿತವಾದ ಆಹಾರ, ಮದ್ಯಪಾನ, ಕುದುರೆ ಮೊದಲಾಗಿ ಜಾಗ್ರತೆಯಾಗಿ ಪ್ರಯಾಣ ಮಾಡತಕ್ಕ ವಾಹನಗಳನ್ನು ಹತ್ತಿಕೊಂಡು ಪ್ರಯಾಣ ಮಾಡುವುದು, ಜೌಗು ನೆಲದಲ್ಲಿ ಹುಟ್ಟಿದ ಮೃಗಗಳ ಮಾಂಸವನ್ನು ತಿನ್ನುವುದು, ಊಟ ಮಾಡಿದ ನಂತರ ಸಾಕಾದಷ್ಟು ವಿರಾಮ ತೆಗದುಕೊಳ್ಳದೆ ಪುನಃ ಭೋಜನಮಾಡುವುದು, ಅಜೀರ್ಣ, ಈ ಕಾರಣಗಳಿಂದ ಕುಪಿತಗಳಾದ ವಾತಾದಿದೋಷಗಳು ಪ್ರತ್ಯೇಕ ಪ್ರತ್ಯೇಕವಾಗಿ ಆಗಲಿ ಅಥವಾ ಕೂಡಿಯೇ ಆಗಲಿ ಪ್ರಧಾನ ಮರ್ಮಸ್ಥಾನವಾದ ಮೂತ್ರಾಶಯದಲ್ಲಿರುವ ಮೂತ್ರಮಾರ್ಗವನ್ನು ಪೀಡಿಸಿದರೆ ಆಗ್ಯೆ ಮೂತ್ರವಿಸರ್ಜನೆ ಮಾಡುವುದು ಕಷ್ಟವಾಗುತ್ತದೆ, ಇದಕ್ಕೇನೇ ಮೂತ್ರಕೃಚ್ಛ್ರವೆಂಬ ಹೆಸರು. ಇದು ಎಂಟು ವಿಧ—(೧) ವಾತಜನ್ಯ, (೨) ಪಿತ್ತಜನ್ಯ, (೩) ಕಫಜನ್ಯ, (೪) ಸನ್ನಿಪಾತಜನ್ಯ, (೫) ಪುರೀಷಜನ್ಯ, (೬) ಶುಕ್ರಜನ್ಯ, (೭) ಅಶ್ಮರೀಜನ್ಯ, (೮) ಶಲ್ಯಜನ್ಯ.

**ತೀವ್ರಾರ್ತಿರುಗ್ವಂಕ್ಷಣಬಸ್ತಿಮೇಢ್ರೇಸ್ವಲ್ಪಂಮುಹುರ್ಮೂತ್ರ**
**ಯತೀಹವಾತಾತ್ ॥**
**ಪೀತಂಸರಕ್ತಂಸರುಜಂಸದಾಹಂಕೃಚ್ಛ್ರಂಮುಹುರ್ಮೂತ್ರ**
**ಯತೀಹಪಿತ್ತಾತ್ ॥ ೩ ॥**

**ಬಸ್ತೌಸ್ಸಲಿಂಗಸ್ಯಗುರುತ್ವಶೋಥೌಮೂತ್ರಂಸಪಿಚ್ಛಂಕಫ**
**ಮೂತ್ರಕೃಚ್ಛ್ರೇ ॥**
**ಸರ್ವಾಣಿರೂಪಾಣಿತುಸನ್ನಿಪಾತಾದ್ಭವಂತಿತತ್ ಕೃಚ್ಛ್ರತಮಂ**
**ಹಿಕೃಚ್ಛ್ರಂ ॥ ೪ ॥**

ಗೆಜ್ಜೆಕಟ್ಟು, ಮೂತ್ರಕೋಶ, ಶಿಶ್ನ ಇವುಗಳು ಪಡತ ಮತ್ತು ನೋವು ಂದ ಕೂಡಿರುವುದು, ಸ್ವಲ್ಪಸ್ವಲ್ಪವಾಗಿ ಅನೇಕ ಸಾರಿ ಮೂತ್ರಿಸುತ್ತಿರುವುದು ು ವಾತಪ್ರಕೋಪಜನ್ಯವಾದ ಮೂತ್ರಕೃಚ್ಛ್ರದ ಲಕ್ಷಣ. ಹಳದಿಯ ಬಣ್ಣ ಗಿ, ಕೆಲವು ಸಾರಿ ಹಳದಿ ಮಿಶ್ರವಾದ ಕೆಂಪು ಬಣ್ಣವಾಗಿಯೂ ನೋವು, ಉರಿ ್ರಗಳಿಂದ ಕೂಡಿ ಬಹು ಕಷ್ಟದೊಡನೆ ಪದೇ ಪದೇ ಸ್ವಲ್ಪವಾಗಿ ಮೂತ್ರವು ೇಗುತ್ತಿರುವುದು. ಪಿತ್ತಪ್ರಕೋಪಜನ್ಯವಾದ ಮೂತ್ರಕೃಚ್ಛ್ರದ ಲಕ್ಷಣಗಳು— ೂತ್ರಕೋಶ ಮತ್ತು ಶಿಶ್ನ ಸಹ ಬಾತುಹೋಗುವುದು, ಭಾರವಾಗಿರುವುದು. ೂತ್ರವು ಜಿಗಟಾಗಿ ಹೊರಡುವುದು, ಇವು ಕಫಜನ್ಯವಾದ ಮೂತ್ರಕೃಚ್ಛ್ರದ ್ಷಣಗಳು. ಸನ್ನಿಪಾತಜನ್ಯವಾದ ಮೂತ್ರಕೃಚ್ಛ್ರದಲ್ಲಿ ತ್ರಿದೋಷದ ಲಕ್ಷಣ ೂ ಕಾಣುತ್ತಲೇ ಇರುತ್ತವೆ, ಇದು ಕಷ್ಟಸಾಧ್ಯವೆಂದು ತಿಳಿಯಬೇಕು.

**ಮೂತ್ರವಾಹಿಷುಶಲ್ಯೇಸಕ್ಷತೇಷ್ವಭಿಹತೇಷುವಾ ॥**
**ಮೂತ್ರಕೃಚ್ಛ್ರಂತದಾಘಾತಾಜ್ಜಾಯತೇಭೃಶದಾರುಣಂ ॥ ೫ ॥**
**ವಾತಕೃಚ್ಛ್ರೇಣತುಲ್ಯಾನಿತಸ್ಯಲಿಂಗಾನಿನಿರ್ದಿಶೇತ್ ॥**
**ಶಕೃತಸ್ತುಪ್ರತೀಘಾತಾದ್ವಾಯುರ್ವಿಗುಣತಾಂಗತಃ ॥ ೬ ॥**
**ಆಧ್ಮಾನಂವಾತಶೂಲಂಚಮೂತ್ರಸಂಗಂಕರೋತಿಚ ॥**
**ಅಶ್ಮರೀಹೇತುತತ್ಪೂರ್ವಂಮೂತ್ರಕೃಚ್ಛ್ರಮುದಾಹರೇತ್ ॥ ೭ ॥**
**ಶುಕ್ರೇದೋಷೈರುಪಹತೇಮೂತ್ರಮಾರ್ಗೇವಿಧಾವಿತೇ ॥**
**ಸಶುಕ್ರಂಮೂತ್ರಯೇತ್ ಕೃಚ್ಛ್ರಾದ್ಬಸ್ತಿಮೇಹಸಶೂಲವಾನ್**
**॥ ೮ ॥**

ಮೂತ್ರವಾಹಿಗಳಾದ ನಾಡಿಗಳಿಗೆ ಶಲ್ಯ ಎಂದರೆ ಮುಳ್ಳು ಮತ್ತು ಕಡ್ಡಿ ೂದಲಾದವುಗಳಿಂದ ಪೆಟ್ಟು ತಗಲಿದಲ್ಲಿ ಮೂತ್ರ ಹೊರಡುವುದು ಕಷ್ಟವಾಗು ದೆ, ಇದು ಶಲ್ಯಜನ್ಯವಾದ ಮೂತ್ರಕೃಚ್ಛ್ರ, ಇದು ಬಹು ಕಷ್ಟಸಾಧ್ಯ, ವಾತ ್ರಕೋಪಜನ್ಯವಾದ ಮೂತ್ರಕೃಚ್ಛ್ರದ ಲಕ್ಷಣಗಳೇ ಇದರಲ್ಲಿಯೂ ಕಾಣುತ್ತಿರು ್ವೆ. ಮಲಪ್ರವೃತ್ತಿಯು ಸರಿಯಾಗಿ ಆಗದೆ ಮಲಬಂಧವಾದರೆ ವಾಯುವು ್ರಕುಪಿತವಾಗಿ ಹೊಟ್ಟೆಯುಬ್ಬರ, ಹೊಟ್ಟೆಶೂಲೆ, ಮೂತ್ರಕೃಚ್ಛ್ರ, ಇವುಗಳನ್ನು ುಟ್ಟಿಸುತ್ತದೆ, ಇದಕ್ಕೆ ಪುರೀಷಜನ್ಯಮೂತ್ರಕೃಚ್ಛ್ರ ಎಂದು ಹೆಸರು. ಅಶ್ಮರಿ ಂದರೆ ಮೂತ್ರಮಾರ್ಗವನ್ನು ತಡದು ಮೂತ್ರವನ್ನು ಹೊರಡದಂತೆ ಮಾಡುವ

ಕಲ್ಲಿನಂತಹ ಒಂದು ಪದಾರ್ಥ, ಅದರಿಂದ ತಡೆಯಲ್ಪಟ್ಟು ಮೂತ್ರ ಹೊರಡುವುದು ಕಷ್ಟವಾದರೆ ಅಶ್ಮರೀಜನ್ಯಮೂತ್ರಕೃಚ್ಛ್ರವೆಂದು ಹೆಸರು, ಇದರ ಲಕ್ಷಣ ಮತ್ತು ಪೂರ್ವರೂಪಗಳು ಅಶ್ಮರೀ ರೋಗದಂತೆಯೇ ಇರುತ್ತವೆ. ಪ್ರಕುಪಿತಗಳಾದ ವಾತಾದಿಗಳು ಶುಕ್ರಸ್ಥಾನಗತಗಳಾಗಿ ಶುಕ್ರಧಾತುವನ್ನು ಮೂತ್ರಮಾರ್ಗಕ್ಕೆ ಹೊರಡಿಸಿ ಮೂತ್ರಾಶಯ ಮತ್ತು ಶಿಶ್ನಗಳಲ್ಲಿ ಶೂಲೆಯನ್ನುಂಟುಮಾಡಿ ಮೂತ್ರ ದೊಡನೆ ಕೊಂಚ ಕೊಂಚವಾಗಿ ಶುಕ್ರವನ್ನೂ ಹೊರಡಿಸುತ್ತ ಬಂದರೆ ಅದಕ್ಕೆ ಶುಕ್ರಜನ್ಯವಾದ ಮೂತ್ರಕೃಚ್ಛ್ರವೆಂದು ಹೆಸರು.

ಅಶ್ಮರೀಶರ್ಕರಾಚೈವತುಲ್ಯಸಂಭವಲಕ್ಷಣೇ ॥
ವಿಶೇಷಣಂಶರ್ಕರಾಯಾಶ್ರುಣುಕೀರ್ತಯತೋಮಮ ॥ ೯ ॥
ಪಚ್ಯಮಾನಾಶ್ಮರೀಪಿತ್ತಾತ್ ಚೋಷ್ಯಮಾಣಾಚವಾಯುನಾ ॥
ವಿಮುಕ್ತಕಫಸಂಧಾನಾಕ್ಷರಂತೀಶರ್ಕರಾಮತಾ ॥ ೧೦ ॥
ಹೃತ್ಪೀಡಾವೇಪಥುಃಶೂಲಂಕುಕ್ಷಾವಗ್ನಿಶ್ಚದುರ್ಬಲಃ ॥
ತಯಾಭವತಿಮೂರ್ಚ್ಛಾಚಮೂತ್ರಕೃಚ್ಛ್ರಂಚದಾರುಣಂ॥ ೧೧ ॥
ಮೂತ್ರವೇಗನಿರಸ್ತಾಭಿಃಪ್ರಶಮಂಯಾತಿವೇದನಾ ॥
ಯಾವದಸ್ಯಾಃಪುನರ್ನೈತಿಗುಟಿಕಾಸ್ರೋತಸೋಮುಖಂ ॥ ೧೨ ॥

ಅಶ್ಮರಿಯಿಂದ ಮೂತ್ರಕೃಚ್ಛ್ರವು ಹುಟ್ಟುವ ವಿಷಯವನ್ನೇ ಸ್ಪಷ್ಟಪಡಿಸು ತ್ತಾನೆ. ಅಶ್ಮರಿ ಎಂದರೆ ಮೂತ್ರಾಶಯಗತವಾದ ಬೋಳದ ಕಾಳಿನಂತಹ ಒಂದು ಬಗೆಯ ಗಟ್ಟಿ ಪದಾರ್ಥ. ಶರ್ಕರ ಎಂದರೆ ಇದರ ಒಡಕು ಚೂರುಗಳು, ಈ ಎರ ಡಕ್ಕೂ ಕಾರಣಗಳು ಮತ್ತು ಲಕ್ಷಣಗಳು ಸಹ ಒಂದೇ ಆಗಿರುತ್ತವೆ. ಎರಡನೆಯ ದಾದ ಶರ್ಕರಾ ಎಂಬವರ ವಿಶೇಷಲಕ್ಷಣಗಳೇನಂದರೆ— ಹಿಂದೆ ಹೇಳಿದ ಅಶ್ಮರಿಯು ಪಿತ್ತಜನ್ಯವಾದ ಉಷ್ಣದಿಂದ ಪಕ್ವವಾಗಿ ವಾತದಿಂದ ಶೋಷಿಸಲ್ಪಟ್ಟು ಕಫಗತ ವಾದ ಸಂಧಾನ ಗುಣಕಡಮೆಯಾಗಿ ಚೂರಾಗುತ್ತದೆ, ಈ ಚೂರುಗಳಿಗೆ ಶರ್ಕರೆ ಎಂಬ ಹೆಸರು, ಇವು ಮೂತ್ರಮಾರ್ಗದಲ್ಲಿ ಸೇರಿ ಸಂಕಟ ಪಡಿಸುತ್ತವೆ, ಇದರ ಉಪದ್ರವಗಳೇನಂದರೆ—ಹೃದಯವೇದನೆ, ಮೈನಡುಕ, ಶೂಲೆ, ಅಗ್ನಿಮಾಂದ್ಯ, ಮೂರ್ಛೆ, ಮೂತ್ರಹೊರಡುವುದು ಕಷ್ಟವಾಗುವುದು, ಮೂತ್ರವು ಹೊರಡು ವುದರ ಜೊತೆಯಲ್ಲಿ ಮೂತ್ರವೇಗದಿಂದ ತಳ್ಳಲ್ಪಟ್ಟ ಈ ಶರ್ಕರೆಗಳು ಹೊರಗೆ ಹೊರಟರೆ ವೇದನೆ ಶಮನವಾಗುವುದು, ಪುನಃ ತಡದಾಗ್ಯೆ ವೇದನೆಯಾಗುವುದು ಈ ರೀತಿ ಆಗುತ್ತದೆ.

ಇಲ್ಲಿಗೆ ಮೂತ್ರಕೃಚ್ಛ್ರನಿದಾನ ಸಂಪೂರ್ಣ.

---

## ಮೂತ್ರಾಘಾತನಿದಾನ.

ಜಾಯಂತೇಕುಪಿತೈರ್ದೋಷೈರ್ಮೂತ್ರಾಘಾತಾಸ್ತ್ರಯೋದಶ ॥
ಪ್ರಾಯೋಮೂತ್ರವಿಘಾತಾದ್ಯೈರ್ವಾತಕುಂಡಲಿಕಾದಯಃ ॥

ಸ್ವಸ್ವಪ್ರಕೋಪಕಾರಣಗಳಿಂದ ಪ್ರಕುಪಿತಗಳಾದ ವಾತಾದಿದೋಷಗಳಿಂದ ಹದಿಮೂರು ವಿಧವಾದ ಮೂತ್ರಾಘಾತಗಳು ಉಂಟಾಗುತ್ತವೆ, ಇವುಗಳು ಉಂಟಾಗಬೇಕಾದರೆ ಪ್ರಾಯಿಕವಾಗಿ ಮಲಮೂತ್ರಾದಿಗಳ ವೇಗ ನಿರೋಧದಿಂದಲೇ ಎಂದು ತಿಳಿಯಬೇಕು. ಮೂತ್ರಕೃಚ್ಛ್ರ ಮೂತ್ರಾಘಾತಗಳಿಗೆ ಪರಸ್ಪರ ವ್ಯತ್ಯಾಸವೇನಂದರೆ—ಮೂತ್ರಕೃಚ್ಛ್ರದಲ್ಲಿ ಮೂತ್ರವು ತೊಂದರೆಯೊಡನೆ ಹೊರ ಹುತ್ತಿರುತ್ತದೆ, ಮೂತ್ರಾಘಾತದಲ್ಲಿ ಮೂತ್ರವು ತಡದೇ ಹೋಗಿರುತ್ತದೆ.

ರೌಕ್ಷ್ಯಾದ್ವೇಗವಿಘಾತಾದ್ವಾವಾಯುರ್ಬಸ್ತೌಸವೇದನಃ ॥
ಮೂತ್ರಮಾವಿಶ್ಯಚರತಿವಿಗುಣಃಕುಂಡಲೀಕೃತಃ ॥ ೨ ॥
ಮೂತ್ರಮಲ್ಪಾಲ್ಪಮಥವಾಸರುಜಂಸಂಪ್ರವರ್ತತೇ ॥
ವಾತಕುಂಡಲಿಕಾಂತಾಂತುವ್ಯಾಧಿಂವಿದ್ಯಾತ್ಸುದಾರುಣಾಂ ॥ ೩ ॥

ಅತ್ಯುಷ್ಣವಾಗುವುದರಿಂದಲೂ ಮಲಮೂತ್ರಗಳ ವೇಗವನ್ನು ತಡೆಯುವುದರಿಂದಲೂ ಮೂತ್ರಾಶಯಗತವಾದ ವಾಯುವು ಪ್ರಕುಪಿತವಾಗಿ ಮೂತ್ರವನ್ನು ಹೊರಕ್ಕೆ ಹೊರಡಿಸುವುದಕ್ಕೆ ಬದಲಾಗಿ ಮೂತ್ರಾಶಯದಲ್ಲಿಯೇ ಅತ್ಯಂತ ವೇದನೆಯೊಡನೆ ಕುಂಡಲಾಕಾರವಾಗಿ ಸುತ್ತು ಬಡಿಸಿ ವೇದನೆಯೊಡನೆ ಸ್ವಲ್ಪಸ್ವಲ್ಪವಾಗಿ ಹೊರಡಿಸಿದರೆ ಅದಕ್ಕೆ ವಾತಕುಂಡಲಿಕಾ ಎಂದು ಹೆಸರು.

ಆಧ್ಮಾಪಯನ್ಬಸ್ತಿಗುದಂರುದ್ಧ್ವಾವಾಯುಶ್ಚಲೋನ್ನತಾಂ ॥
ಕುರ್ಯಾತ್ತೀವ್ರಾರ್ತಿಮಷ್ಠೀಲಾಂಮೂತ್ರವಿಣ್ಮಾರ್ಗರೋಧಿನೀಂ॥೪॥

ಬಸ್ತಿಗತವಾದ ವಾಯುವು ಪ್ರಕುಪಿತವಾಗಿ ಬಸ್ತಿಯನ್ನು ಮತ್ತು ಗುದವನ್ನೂ ಉಬ್ಬರಿಸಿಕೊಳ್ಳುವಂತೆ ಮಾಡಿ ಉನ್ನತಾಂ ಎಂದರೆ ದೊಡ್ಡದಾಗಿ ಮಲಮೂತ್ರಗಳನ್ನು ಮಾರ್ಗರೋಧಮಾಡಿ ನಿಲ್ಲಿಸುವಷ್ಟು ದೊಡ್ಡದಾದ ಅಷ್ಠೀಲಾಂ ಎಂದರೆ ಕಲ್ಲಿನಂತಹ ಗ್ರಂಥಿಯನ್ನು ಉಂಟುಮಾಡುತ್ತದೆ, ಇದರಿಂದ ಹುಟ್ಟಿದ ಮೂತ್ರಾಘಾತಕ್ಕೆ ಅಷ್ಠೀಲಾಜನ್ಯ ಮೂತ್ರಾಘಾತವೆಂದು ಹೆಸರು.

ವೇಗಂವಿಧಾರಯೇದ್ಯಸ್ತುಮೂತ್ರಸ್ಯಾಕುಶಲೋನರಃ ॥
ನಿರುಣದ್ಧಿಮುಖಂತಸ್ಯಬಸ್ತೇರ್ಬಸ್ತಿಗತೋನಿಲಃ ॥ ೫ ॥
ಮೂತ್ರಸಂಗೋಭವೇತ್ತೇನಬಸ್ತಿಕುಕ್ಷಿನಿಪೀಡಿತಃ ॥
ವಾತಬಸ್ತಿಸ್ಸವಿಜ್ಞೇಯೋವ್ಯಾಧಿಃಕೃಚ್ಛ್ರಪ್ರಸಾಧನಃ ॥ ೬ ॥

ಬುದ್ಧಿ ತಿಳುವಳಿಕೆ ಕಾಲದೆ ಯಾವ ಮನುಷ್ಯನು ಪ್ರಾಪ್ತವಾದ ಮೂತ್ರದ ವೇಗವನ್ನು ತಡೆಯುತ್ತಾನೆಯೋ ಅಂತವನಿಗೆ ಮೂತ್ರಾಶಯಗತವಾದ ವಾಯುವು

ಪ್ರಕುಪಿತವಾಗಿ ಬಸ್ತಿಯ ಮುಖವನ್ನು ನಿರೋಧವಮಾಡುತ್ತದೆ. ಇದರಿಂದ ಬಸ್ತಿ ಮತ್ತು ಉದರಗಳಿಗೆ ಪೀಡೆಯನ್ನುಂಟುಮಾಡತಕ್ಕ ಮೂತ್ರರೋಧ ಉಂಟಾಗುತ್ತದೆ ಇದಕ್ಕೆ ವಾತಬಸ್ತಿ ಎಂಬ ಹೆಸರು, ಇದು ಚಿಕಿತ್ಸೆಗೆ ಕಷ್ಟಸಾಧ್ಯವೆಂದು ತಿಳಿಯುವುದು.

ಚಿರಂಧಾರಯತೋವಮೂತ್ರಂತ್ವರಯಾನಪ್ರವರ್ತತೇ ||
ಮೇಹಮಾನಸ್ಯಮಂದಂವಾಮೂತ್ರಾತೀತಸ್ಸಉಚ್ಯತೇ || ೭ ||

ಪ್ರವೃತ್ತವಾದ ಮೂತ್ರವನ್ನು ಬಹಳ ಹೊತ್ತು ತಡದು ನಿಲ್ಲಿಸುವುದರಿಂದ ಮೂತ್ರವಿಸರ್ಜನೆಯು ಸರಿಯಾಗಿ ಆಗುವುದಿಲ್ಲ, ಅಥವಾ ಸಾವಕಾಶವಾಗಿ ಆಗುತ್ತದೆ, ಇದಕ್ಕೆ ಮೂತ್ರಾತೀತವೆಂದು ಹೆಸರು.

ಮೂತ್ರಸ್ಯವೇಗೇಭಿಹತೇತದುದಾವರ್ತಸಂಜ್ಞಿಕಃ ||
ಅಪಾನಃಕುಪಿತೋವಾಯುರುದರಂಪೂರಯೇದ್ಭೃಶಂ || ೮ ||
ನಾಭೇರಧಸ್ತಾದಾಧ್ಮಾನಂಜನಯೇತ್ತೀವ್ರವೇದನಂ ||
ತನ್ಮೂತ್ರಜಠರಂವಿದ್ಯಾದಧೋವಸ್ತಿನಿರೋಧಜಂ || ೯ ||

ಪ್ರವೃತ್ತವಾದ ಮೂತ್ರದ ವೇಗವನ್ನು ತಡೆಯುವುದರಿಂದ ಅಧಃ ಪ್ರವೃತ್ತವೇಗವಾದ ಮೂತ್ರವು ಊರ್ಧ್ವಮುಖವಾಗೋಣದರಿಂದ ಪ್ರಕುಪಿತವಾದ ಅಪಾನವಾಯುವು ಹೊಟ್ಟೆಯಲ್ಲಿ ತುಂಬಿಕೊಂಡು ಹೊಕ್ಕಳಿನಿಂದ ಕೆಳಭಾಗದಲ್ಲಿ ಉಬ್ಬರವನ್ನುಂಟುಮಾಡುತ್ತದೆ, ಇದರಿಂದ ಬಹಳ ವೇದನೆಯಾಗುತ್ತದೆ, ಮೂತ್ರನಿರೋಧಜನ್ಯವಾದ ಈ ಉದರರೋಗಕ್ಕೆ ಮೂತ್ರಜಠರವೆಂಬ ಹೆಸರು.

ಬಸ್ತೌವಾಪ್ಯಥವಾನಾಳೇಮಣೌವಾಯಸ್ಯದೇಹಿನಃ ||
ಮೂತ್ರಂಪ್ರವೃತ್ತಂಸಜ್ಜೇತಸರಕ್ತಂವಾಪ್ರವಾಹತಃ || ೧೦ ||
ಸ್ರವೇತ್ ಶನೈರಲ್ಪಮಲ್ಪಂಸರುಜಂವಾಥನೀರುಜಂ ||
ವಿಗುಣಾನಿಲಜೋವ್ಯಾಧಿಸ್ಸಮೂತ್ರೋತ್ಸಂಗಸಂಜ್ಞಿತಃ || ೧೧ ||

ಮೂತ್ರಾಶಯದಲ್ಲಿಯಾಗಲಿ, ದಂಡಾಕಾರವಾದ ಶಿಶ್ನದ ಭಾಗದಲ್ಲಿಯಾಗಲಿ, ಉತ್ಪನ್ನವೇಗವಾದ ಮೂತ್ರವು ತಡದುನಿಲ್ಲುವುದು, ಅಥವಾ ಮೂತ್ರವನ್ನು ಬಿಡುವಾಗ್ಯೆ ಜೊತೆಯಲ್ಲಿ ಸ್ವಲ್ಪವಾಗಿ ರಕ್ತವೂ ಹೊರಡುತ್ತಿರುವುದು. ಸರಿಯಾದ ವೇಗದಿಂದ ಮೂತ್ರವು ಹೊರಡುವುದಕ್ಕಿಲ್ಲ, ಮೂತ್ರ ಹೊರಡುವಾಗ್ಯೆ ಸ್ವಲ್ಪ ಉರಿಯಿರುವುದು, ಹೀಗಿದ್ದಲ್ಲಿ ವಾತಪ್ರಕೋಪಜನ್ಯವಾದ ಈ ವ್ಯಾಧಿಗೆ ಮೂತ್ರೋತ್ಸಂಗವೆಂದು ಹೆಸರು.

**ರೂಕ್ಷಸ್ಯಕ್ಲಾಂತದೇಹಸ್ಯಬಸ್ತಿಸ್ಥೌಪಿತ್ತಮಾರುತೌ ॥**
**ಮೂತ್ರಕ್ಷಯಂಸರುಗ್ದಾಹಂಜನಯೇತಾಂತದಾಹ್ವಯಂ ॥೧೨॥**

ಶರೀರದಲ್ಲಿ ಸ್ನೇಹವಿಲ್ಲದವನಾಗಿಯೂ (ಅಂದರೆ ನೆಣವಿಲ್ಲದವನಾಗಿಯೂ) ಬಳಲಿದವನಾಗಿಯೂ ಇರುವ ಮನುಷ್ಯನ ಬಸ್ತಿಗತಗಳಾದ ವಾತಪಿತ್ತಗಳು ಪ್ರಕುಪಿತಗಳಾಗಿ ಮೂತ್ರವು ಕ್ಷಯಿಸಿ ಹೋಗುವಂತೆ ಮಾಡಿ ಬಸ್ತಿಯಲ್ಲಿ ಉರಿ ಮತ್ತು ನೋವುಗಳನ್ನುಂಟುಮಾಡುತ್ತವೆ, ಇದಕ್ಕೆ ಮೂತ್ರಕ್ಷಯವೆಂಬ ಹೆಸರು.

**ಅಂತರ್ಬಸ್ತಿಮುಖೇವೃತ್ತಸ್ಥಿರೋಲ್ಪಸ್ಸಹಸಾಭವೇತ್ ॥**
**ಅಶ್ಮರೀತುಲ್ಯರುಗ್ರಂಥಿರ್ಮೂತ್ರಗ್ರಂಥಿಸ್ಸಉಚ್ಯತೇ ॥೧೩॥**

ಮೂತ್ರಾಶಯದ ಒಳಭಾಗದಲ್ಲಿ ಮುಖದ ಹತ್ತರ ದುಂಡಗೆ ಗಟ್ಟಿಯಾಗಿ ಅಶ್ಮರೀರೋಗದಲ್ಲಿ ಹೇಳುವ ಕಲ್ಲಿನಂತಹ ಒಂದು ಗಂಟು ಹುಟ್ಟುತ್ತದೆ, ಇದರ ನೋವು ಕೂಡ ಅಶ್ಮರಿಯ ನೋವಿನಂತೆಯೇ ಇರುತ್ತದೆ, ಇದು ಬಸ್ತಿಗತನಾದ ರಕ್ತಪ್ರಕೋಪದಿಂದ ಉಂಟಾಗುತ್ತದೆ. ಇದಕ್ಕ ಮೂತ್ರಗ್ರಂಥಿ ಎಂಬ ಹೆಸರು.

**ಮೂತ್ರಿತಸ್ತ್ಯಸ್ತ್ರಿಯಂಯಾತೋವಾಯುನಾಶುಕ್ರಮುದ್ಧತಂ ॥**
**ಸ್ಥಾನಾಚ್ಯುತಂಮೂತ್ರಯುತಃಸ್ರಾಕ್ಪಶ್ಚಾದ್ವಾಪ್ರವರ್ತತೇ॥ ೧೪ ॥**
**ಭಸ್ಮೋದಕಪ್ರತೀಕಾಶಂಮೂತ್ರಶುಕ್ರಂತದಾದಿಶೇತ್ ॥**

ಮೂತ್ರಶಂಕೆ ಇರುವ ಕಾಲದಲ್ಲಿ ಸ್ತ್ರೀಗಮನ ಮಾಡಿದವನ ಶುಕ್ರವು ಸ್ವಸ್ಥಾನದಿಂದ ಜಾರಿ ಮಧ್ಯೆ ಮೂತ್ರದಿಂದ ತಡೆಯಲ್ಪಟ್ಟು ಮೂತ್ರವಿಸರ್ಜನಾನಂತರದಲ್ಲಿಯಾಗಲಿ ಮುಂಚಿತವಾಗಿಯೇ ಆಗಲಿ ಬೂದಿಯನ್ನು ಕದಡಿದ ನೀರಿನಂತೆ ಹೊರಕ್ಕೆ ಹೊರಡುತ್ತದೆ, ಇದಕ್ಕೆ ಮೂತ್ರಶುಕ್ರವೆಂಬ ಹೆಸರು.

**ವ್ಯಾಯಾಮಾಧ್ವಾತಪೈಃಪಿತ್ತಂಬಸ್ತಿಂಪ್ರಾಪ್ಯಾನಿಲಾನ್ವಿತಂ ॥ ೧೫ ॥**
**ಬಸ್ತಿಂಮೇಢ್ರಂಗುದಂಚೈವಪ್ರದಹೇತ್ಸ್ರಾವಯೇದಧಃ ॥**
**ಮೂತ್ರಂಹರಿದ್ರಮಥವಾಸರಕ್ತಂರಕ್ತಮೇವವಾ ॥ ೧೬ ॥**
**ಕೃಚ್ಛ್ರಾತ್ಪುನಃಪುನರ್ಜಂತೋರುಷ್ಣವಾತಂಬ್ರುವಂತಿತಂ ॥ ೧೭ ॥**

ಅತಿಯಾಗಿ ವ್ಯಾಯಾಮ ಮಾಡುವುದು, ದಾರಿ ನಡೆಯುವುದು, ಬಿಸಿಲಲ್ಲಿರುವುದು, ಈ ಕಾರಣಗಳಿಂದ ಪಿತ್ತವು ಪ್ರಕುಪಿತವಾಗಿ ಮೂತ್ರಾಶಯವನ್ನು ಹೊಂದಿ ವಾಯುವಿನೊಡನೆ ಸೇರಿ ಬಸ್ತಿ, ಶಿಶ್ನ, ಗುದ ಇವುಗಳಲ್ಲಿ ಉರಿಯನ್ನುಂಟುಮಾಡುತ್ತ ಹಳದಿ ಬಣ್ಣದಿಂದಿರುವ ಮೂತ್ರವನ್ನಾಗಲಿ, ರಕ್ತಮಿಶ್ರಿತವಾದ ಮೂತ್ರವನ್ನಾಗಲಿ, ರಕ್ತವನ್ನೇ ಆಗಲಿ ಬಹಳ ಕಷ್ಟದೊಡನೆ ಪದೇ ಪದೇ ಹೊರಡಿಸುತ್ತಿದ್ದರೆ ಉಷ್ಣವಾತವೆಂಬ ಹೆಸರು.

ಪಿತ್ತಂಕಫೋದ್ವಾವಪಿವಾಸಂಹನ್ಯೇತೇನಿಲೇನಚೇತ್ ॥ ೧೭ ॥
ಕೃಚ್ಛ್ರಾನ್ಮೂತ್ರಂತದಾಪೀತಂಶ್ವೇತಂರಕ್ತಂಘನಂಸೃಜೇತ್ ॥
ಸದಾಹಂರೋಚನಾಶಂಖಚೂರ್ಣವರ್ಣಭವೇತ್ತುತತ್ ॥ ೧೮ ॥
ಶುಷ್ಕಂಸಮಸ್ತವರ್ಣಂವಾಮೂತ್ರಸಾದಂವದಂತಿತಂ ॥

ಪ್ರಕುಪಿತವಾದ ವಾಯುವಿನಿಂದ ಬಸ್ತಿಗತವಾದ ಪಿತ್ತವಾಗಲಿ ಅಥವಾ ಪಿತ್ತ ಕಫಗಳೆರಡೂ ಆಗಲಿ ಕೂಡಿಸಲ್ಪಟ್ಟರೆ ಆಗ್ಯೆ ಬಹಳ ಕಷ್ಟದೊಡನೆ ಬೆಳ್ಳಗೆ ಕೆಂಪಗೆ, ಸ್ವಲ್ಪ ಮಂದವಾಗಿ ಮೂತ್ರವು ಹೊರಡುತ್ತದೆ, ಮೂತ್ರವು ಹೊರಡು ವಾಗ್ಯೆ ಉರಿ, ಪಿತ್ತ ಹೆಚ್ಚಿದರೆ ಮೂತ್ರವು ಗೋರೋಚನದ ಬಣ್ಣವಿರುತ್ತದೆ, ಕಫ ಹೆಚ್ಚಾಗಿದ್ದಲ್ಲಿ ಮೂತ್ರವು ಶಂಖಚೂರ್ಣದ ಬಣ್ಣವಿರುತ್ತದೆ, ಸನ್ನಿಪಾತದಲ್ಲಿ ಮೂತ್ರವು ಶುಷ್ಕಂ ಆದರೆ ಶೋಷಿಸಿ ಹೋಗಿ ಎಲ್ಲಾ ಬಣ್ಣಗಳಿಂದಲೂ ಕೂಡಿ ಕೊಂಡಿರುತ್ತದೆ, ಇದಕ್ಕೆ ಮೂತ್ರಸಾದವೆಂಬ ಹೆಸರು.

ರೂಕ್ಷದುರ್ಬಲಯೋರ್ವಾತೇನೋದಾವರ್ತಂಶಕೃದ್ಯದಾ ॥ ೧೯ ॥
ಮೂತ್ರಸ್ರೋತೋನುಪದ್ಯೇತವಿಟ್ಸಂಸೃಷ್ಟಂತದಾನರಃ ॥
ವಿಡ್ಗಂಧಂಮೂತ್ರಯೇತ್ಕೃಚ್ಛ್ರಾತ್ವಿಡ್ವಿಘಾತಂವಿನಿರ್ದಿಶೇತ್
॥ ೨೦ ॥

ರೂಕ್ಷನಾಗಿಯೂ ದುರ್ಬಲನಾಗಿಯೂ ಇರತಕ್ಕವನಿಗೆ ಬಸ್ತಿಗತವಾದ ವಾಯುವು ಪ್ರಕುಪಿತವಾಗಿ ಮಲಾಶಯಗತವಾದ ಮಲವನ್ನು ಆವರಿಸಿಕೊಂಡು ಮಲದ ಅಂಶಗಳನ್ನು ತೆಗದುಕೊಂಡು ಮೂತ್ರಮಾರ್ಗದಲ್ಲಿ ನುಗ್ಗಿದಲ್ಲಿ ಬಹಳ ಕಷ್ಟದೊಡನೆ ಮಲದ ವಾಸನೆಯಿಂದ ಯುಕ್ತವಾದ ಮೂತ್ರವನ್ನು ವಿಸರ್ಜಿಸು ತ್ತಾನೆ, ಇದಕ್ಕೆ ವಿಡ್ವಿಘಾತವೆಂದು ಹೆಸರು.

ದ್ರುತಾಧ್ವಲಂಘನಾಯಾಸೈರಭಿಘಾತಾತ್ಪ್ರಪೀಡನಾತ್ ॥
ಸ್ವಸ್ಥಾನಾದ್ಬಸ್ತಿರುದ್ವೃತ್ತಃಸ್ಥೂಲಸ್ತಿಷ್ಠತಿಗರ್ಭವತ್ ॥ ೨೧ ॥
ಶೂಲಸ್ಪಂದನದಾಹಾರ್ತೋಬಿಂದುಂಬಿಂದುಂಸ್ರವತ್ಯಪಿ ॥
ಪೀಡಿತಸ್ತುಸೃಜೇದ್ಧಾರಾಂಸಂಸ್ತಂಭೋದ್ವೇಷ್ಟನಾರ್ತಿಮಾನ್ ॥೨೨॥
ಬಸ್ತಿಕುಂಡಲಮಾಹುಸ್ತಂಘೋರಂಶಸ್ತ್ರವಿಷೋಪಮಂ ॥

ಜಾಗ್ರತೆಯಾಗಿ ದಾರಿನಡೆಯುವುದು, ಹಾರುವುದು, ಆಯಾಸಕರವಾದ ಕೆಲಸಗಳನ್ನು ಮಾಡುವುದು, ಮೂತ್ರಾಶಯಕ್ಕೆ ಯಾವುದಾದರೂ ಪೆಟ್ಟುಬೀಳು ವುದು, ಹೊಟ್ಟೆನೋವು, ಮೊದಲಾದವುಗಳನ್ನು ತಡೆಯಲಾರದೆ ಕೆಳಹೊಟ್ಟೆ ಯನ್ನು ಕಿವಿಚಿಕೊಳ್ಳುವುದು, ಇಂತಹ ಕಾರಣಗಳಿಂದ ಮೂತ್ರಾಶಯವು ತನ್ನ ಸ್ಥಾನದಿಂದ ಮೇಲಕ್ಕೆ ತಳ್ಳಲ್ಪಟ್ಟು ಉದರದಲ್ಲಿ ಸ್ತ್ರೀಯರ ಗರ್ಭದ ಹಾಗೆ ನಿಂತು

ಬಿಡುತ್ತದೆ. ಇದರಿಂದ ಹೊಟ್ಟೆಯಲ್ಲಿ ಶೂಲೆ, ಗರ್ಭದ ಹಾಗೆ ಬಸ್ತಿಯೂ ಕೊಂಚ ಕೊಂಚ ಚಲಿಸುತ್ತಿರುವುದು, ಉರಿಯೊಡನೆ ಕೂಡಿ ಒಂದೊಂದೇ ಬಿಂದು ಮೂತ್ರವು ಹೊರಡುತ್ತಿರುವುದು, ಬಸ್ತಿ ಇರತಕ್ಕ ಪ್ರದೇಶದಲ್ಲಿ ಹೊಟ್ಟೆಯನ್ನವು ಕಿದರೆ ಧಾರಾಕಾರವಾಗಿ ಮೂತ್ರವು ಹೊರಡುವುದು, ಕಿಬ್ಬೊಟ್ಟೆಯಲ್ಲಿ ಸುಕ್ಕು ಹಿಡಿದಂತೆ ವ್ಯಥೆಯಾಗುತ್ತಿರುವುದು, ಹೀಗಿದ್ದರೆ ಬಸ್ತಿ ಕುಂಡಲಿಕಾ ಎಂಬ ಹೆಸರು ಇದು ಕೇವಲ ಅಪಾಯಕರವಾದದ್ದು.

**ಪವನಪ್ರಬಲಂಪ್ರಾಯೋದುರ್ನಿವಾರಮಬುದ್ಧಿಭಿಃ ॥ ೨೩ ॥**
**ತಸ್ಮಿನ್ಪಿತ್ತಾನ್ವಿತೇದಾಹಃಶೂಲಂಮೂತ್ರವಿವರ್ಣತಾ ॥**
**ಶ್ಲೇಷ್ಮಣಾಗೌರವಂಶೋಥಃಸ್ನಿಗ್ಧಂಮೂತ್ರಂಘನಂಸಿತಂ ॥ ೨೪ ॥**

ಈ ಮೂತ್ರಾಘಾತರೋಗದಲ್ಲಿ ವಾತಪ್ರಕೋಪ ಲಕ್ಷಣಗಳು ಹೆಚ್ಚಾಗಿ ಕಂಡು ಬಂದಲ್ಲಿ ಚಿಕಿತ್ಸೆಗೆ ಅಸಾಧ್ಯ. ಪಿತ್ತಪ್ರಕೋಪವಿದ್ದಲ್ಲಿ ಮೂತ್ರ ಹೊರಡುವಾಗ್ಯೆ ಉರಿ, ಬಸ್ತಿಶೂಲೆ, ಮೂತ್ರದ ವರ್ಣ ಬದಲಾಗಿರುವುದು, ಈ ಲಕ್ಷಣಗಳಾಗುತ್ತವೆ. ಶ್ಲೇಷ್ಮಪ್ರಕೋಪವಿದ್ದರೆ ಬಸ್ತಿ ಮತ್ತು ಶಿಶ್ನಗಳಲ್ಲಿ ಶೋಭೆ ಇರುತ್ತದೆ, ಮೂತ್ರವು ಜಿಗಟಾಗಿಯೂ ಮಂದವಾಗಿಯೂ ಬೆಳ್ಳಗೂ ಇರುತ್ತದೆ.

**ಶ್ಲೇಷ್ಮರುದ್ಧಬಿಲೋಬಸ್ತಿಃಪಿತ್ತೋದೀರ್ಣೋನಸಿದ್ಧ್ಯತಿ ॥**
**ಅವಿಭ್ರಾಂತಬಿಲಸ್ಸಾಧ್ಯೋನತುಯಃಕುಂಡಲೀಕೃತಃ ॥ ೨೫ ॥**
**ಸ್ಯಾದ್ವಸ್ತಿಕುಂಡಲೀಭೂತೇತೃಣ್ಮೋಹಶ್ವಾಸಏವಚ ॥**

ಬಸ್ತಿದ್ವಾರವು ಶ್ಲೇಷ್ಮಪ್ರಕೋಪದಿಂದ ರುದ್ಧವಾಗಿದ್ದರೂ, ಪಿತ್ತಪ್ರಕೋಪದಿಂದ ರುದ್ಧವಾಗಿದ್ದರೂ ಚಿಕಿತ್ಸೆಗೆ ಸಾಧ್ಯವಾಗುವುದಿಲ್ಲ, ದ್ವಾರವು ರುದ್ಧವಾಗದಿದ್ದಲ್ಲಿ ಸಾಧ್ಯವಾಗುತ್ತದೆ, ಬಸ್ತಿಯು ಕುಂಡಲಾಕಾರವಾಗಿ ಅಂದರೆ ಗಂಟಿಕ್ಕಿಕೊಂಡು ಉದರವನ್ನು ಸೇರಿ ಹೋಗಿದ್ದರೆ ಬಾಯಾರಿಕೆ, ಅಜ್ಞಾನ, ಉಬ್ಬಸ ಇವುಗಳೆಲ್ಲಾ ಹುಟ್ಟುತ್ತವೆ. ಇದು ಅಸಾಧ್ಯ.

ಇಲ್ಲಿಗೆ ಮೂತ್ರಾಘಾತನಿದಾನ ಸಂಪೂರ್ಣ.

---

## ಅಶ್ಮರೀನಿದಾನ.

**ವಾತಪಿತ್ತಕಫೈಸ್ತಿಸ್ರಶ್ಚತುರ್ಥೀಶುಕ್ರಜಾಪರಾ ॥**
**ಪ್ರಾಯಃಶ್ಲೇಷ್ಮಾಶ್ರಯಾಸ್ಸರ್ವಾಅಶ್ಮರ್ಯಸ್ಸ್ಯುರ್ಯಮೋಪಮಾಃ ॥ ೧ ॥**

ಅಶ್ಮರೀ ರೋಗವನ್ನು ಹೇಳುತ್ತಾನೆ—ಅಶ್ಮರಿ ಎಂದರೆ ಮೂತ್ರಮಾರ್ಗದಲ್ಲಿ ಮೂತ್ರವು ಹೊರಡದಂತೆ ತಡೆಯುತಕ್ಕ ಕಲ್ಲಿನಂತಹ ಒಂದು ಪದಾರ್ಥ. ಈ ರೋಗವು ವಾತಪ್ರಕೋಪದಿಂದ ಹುಟ್ಟತಕ್ಕದ್ದು, ಪಿತ್ತಪ್ರಕೋಪದಿಂದ ಹುಟ್ಟತಕ್ಕದ್ದು, ಶ್ಲೇಷ್ಮಪ್ರಕೋಪದಿಂದ ಹುಟ್ಟತಕ್ಕದ್ದು, ಎಂಬದಾಗಿ ಮೂರು ವಿಧ. ಈ ಮೂರು ವಿಧವಾದ ಅಶ್ಮರಿಗೂ ಶ್ಲೇಷ್ಮವೇ ಮುಖ್ಯ ಕಾರಣವಾಗಿರುತ್ತದೆ. ಶುಕ್ರಾಶ್ಮರಿ ಎಂದರೆ ಶುಕ್ರವೆಂಬ ಪುರುಷವೀರ್ಯವನ್ನು ಸಕಾಲದಲ್ಲಿ ವಿಸರ್ಜನೆ ಮಾಡದಿರೋಣದರಿಂದ ಅದೇ ಗಟ್ಟಿಯಾಗಿ ಕ್ರಮವಾಗಿ ಕಲ್ಲಿನಂತೆ ಪರಿಣಮಿಸಿ ಮೂತ್ರದ್ವಾರವನ್ನು ತಡದುಕೊಳ್ಳುತ್ತದೆ, ಇದೊಂದು ನಾಲ್ಕನೆಯದಾದ ಅಶ್ಮರೀ ರೋಗ, ಇವುಗಳೆಲ್ಲಾ ಯಮೋಪಮಾಃ ಅಂದರೆ ಇವುಗಳಿಂದ ಆಗತಕ್ಕ ಹಿಂಸೆಯು ಯಮಲೋಕದಲ್ಲಿ ಆಗುವ ಹಿಂಸೆಗೆ ಸಮನಾದದ್ದೆಂದು ತಾತ್ಪರ್ಯ.

ವಿಶೋಷಯೇದ್ವಸ್ತಿಗತಂಸಶುಕ್ರಂಮೂತ್ರಂಸಪಿತ್ತಂಪವನಃ ಕಫಂವಾ ॥
ಯದಾತದಾಶ್ಮರ್ಯುಪಜಾಯತೇತುಕ್ರಮೇಣಪಿತ್ತೇಷ್ವಿವ ರೋಚನಾಗೌಃ ॥ ೨ ॥
ನೈಕದೋಷಾಶ್ರಯಾಸ್ಸರ್ವಾಃ.......................... ॥

ಮೂತ್ರಮಾರ್ಗದಲ್ಲಿ ಕಲ್ಲಿನಂತಹ ವಸ್ತು ಬರತಕ್ಕ ತರಹವನ್ನು ಹೇಳುತ್ತಾನೆ—ಪ್ರಥಮದಲ್ಲಿ ಮೂತ್ರಾಶಯಗತವಾದ ವಾಯುವು ಪ್ರಕುಪಿತವಾಗಿ ಬಸ್ತಿ (ಮೂತ್ರಾಶಯ) ಗತವಾದ ಮೂತ್ರಸಮೇತವಾದ ಶುಕ್ರವನ್ನಾಗಲಿ, ಮೂತ್ರ ಒಂದನ್ನೇ ಆಗಲಿ, ಪಿತ್ತದ ಜೊತೆಯಲ್ಲಿ ಮೂತ್ರವನ್ನಾಗಲಿ, ಕಫದ ಜೊತೆಯಲ್ಲಿ ಮೂತ್ರವನ್ನಾಗಲಿ ಶೋಷಿಸಿ, ಹಸುವಿನ ಹೊಟ್ಟೆಯಲ್ಲಿ ಗೋರೋಚನವೆಂಬ ಕಲ್ಲಿನಂತಹ ಪದಾರ್ಥವು ಹುಟ್ಟುವಂತೆ ಮನುಷ್ಯರ ಮೂತ್ರಪಿಂಡದಲ್ಲಿಯೂ ಕಲ್ಲಿನಂತಹ ಒಂದು ಪದಾರ್ಥವನ್ನು ಹುಟ್ಟಿಸುತ್ತದೆ ಈ ಪದಾರ್ಥವು ಒಂದೇ ಬಾರಿಗೆ ಹುಟ್ಟಬಿಡದ ಕ್ರಮೇಣ ಅಂದರೆ ಸಾವಕಾಶವಾಗಿ ಹುಟ್ಟುತ್ತದೆ. ಈ ನಾಲ್ಕು ವಿಧವಾದ ಅಶ್ಮರೀ ರೋಗವೂ ಒಂದೇ ದೋಷದಿಂದ ಹುಟ್ಟುವುದಿಲ್ಲ, ಎಲ್ಲಾ ದೋಷಗಳೂ ತಕ್ಕಷ್ಟು ಕೂಡಿಯೇ ಹುಟ್ಟಬೇಕೆಂದು ತಾತ್ಪರ್ಯ.

ಅಥಾಸಾಂಪೂರ್ವಲಕ್ಷಣಂ ॥

ಬಸ್ತ್ಯಾಧ್ಮಾನಂತದಾಸನ್ನದೇಶೇಷುಪರಿತೋತಿರುಕ್ ॥ ೩ ॥
ಮೂತ್ರೇಬಸ್ತಸಗಂಧತ್ವಂಮೂತ್ರಕೃಚ್ಛ್ರಂಜ್ವರೋರುಚಿಃ ॥
ಸಾಮಾನ್ಯಲಿಂಗಂರುಜ್ನಾಭಿಸೇವನೀಬಸ್ತಿಮೂರ್ಧಸು ॥ ೪ ॥
ವಿಶೀರ್ಣಧಾರಂಮೂತ್ರಸ್ಯಾತ್ತಯಾಮಾರ್ಗೇನಿರೋಧಿತೇ ॥

**ತದ್ವ್ಯಥಾಯಾತ್ಸುಖಂ ಮೇಹೇದಚ್ಛಂ ಗೋಮೇದಕೋಪಮಂ ||೫||**
**ತತ್ಸಂಕ್ಷೋಭಾತ್ ಕ್ಷತೇ ಸಾಸ್ರಮಾಯಾಸಾಚ್ಚಾತಿರುಗ್ಭವೇತ್ ||**

ಹಿಂದೆ ಹೇಳಿದ ಅಶ್ಮರೀ ರೋಗದ ಲಕ್ಷಣಗಳನ್ನು ಹೇಳುತ್ತಾನೆ—ಮೂತ್ರ ಕೋಶವು ಊದಿಹೋಗುವುದು, ಮೂತ್ರಕೋಶದ ಸುತ್ತಲೂ ಅತಿಯಾಗಿ ನೋವು, ಮೂತ್ರದಲ್ಲಿ ಆಡಿನ ಮೂತ್ರದ ವಾಸನೆಯಿರುವುದು, ಮೂತ್ರವು ಹೊರಡುವುದು ಕಷ್ಟವಾಗುವುದು, ಜ್ವರ, ಬಾಯಿರುಚಿ ತಪ್ಪಿಹೋಗುವುದು, ಇವು ಸಾಮಾನ್ಯ ಲಕ್ಷಣಗಳು. ಇನ್ನೂ ಕೆಲವು ಲಕ್ಷಣಗಳೆಂದರೆ ಹೊಕ್ಕಳು, ಸೀವನಿ ಎಂದರೆ ಪುರುಷರ ಶಿಶ್ನದ ಕೆಳಭಾಗವನ್ನು ಎತ್ತಿ ಹಿಡಿದು ನೋಡಿದರೆ ಅಲ್ಲಿ ಕಾಣುವ ಉದ್ದಕ್ಕೂ, ಹೊಲಿದಿರುವಂತಹ ಭಾಗ, ಕಿಬ್ಬೊಟ್ಟೆ. ಇವುಗಳಲ್ಲಿ ನೋವು, ಇವುಗಳು ಸಹಾ ಇರುತ್ತವೆ. ಕಲ್ಲಿನಂತಹ ಪದಾರ್ಥವು ಮೂತ್ರದ್ವಾರದಲ್ಲಿ ಬಂದು ತಡೆದುಕೊಂಡು ಹೋದಲ್ಲಿ ಮೂತ್ರದ ಧಾರೆಯು ಸಲೀಸಾಗಿ ಹೊರಡದೆ ಹರಕು ಹರಕಾಗಿ ಹೊರಡುತ್ತಿರುವುದು. ಮೂತ್ರದ್ವಾರದಲ್ಲಿ ತಡೆಯುವ ತಡೆಯನ್ನು ಕೊಂಚ ಮಾತ್ರ ಅಲುಗುವಮಾಡಿದರೆ ಸುಖವಾಗಿ ಮೂತ್ರ ಹೊರಡುವುದು, ಹೊರಡುವ ಮೂತ್ರವು ಸ್ವಚ್ಛವಾಗಿ ಮತ್ತು ಗೋಮೇದಕದಂತೆ ಅಂದರೆ ಕೊಂಚ ಮಾತ್ರ ನೀಲವರ್ಣವಾಗಿ ಸಹಾ ಇರುವುದು, ಮೂತ್ರದ್ವಾರದಲ್ಲಿ ಸಿಕ್ಕಿಕೊಂಡಿರುವ ಪದಾರ್ಥವು ಹಿಂದಕ್ಕೂ ಮುಂದಕ್ಕೂ ಹೋಗದೆ ಅಲ್ಲಿಯೇ ಸಿಕ್ಕಿಕೊಂಡು ತಿಕ್ಕಾಡಿ ರಕ್ತ ಹೊರಡುವಂತಹ ಗಾಯವನ್ನು ಮಾಡಿದರೆ ಮೂತ್ರದೊಡನೆ ರಕ್ತವೂ ಹೊರಡುವುದು, ಆಯಾಸದಿಂದ ಅತಿಯಾದ ನೋವೂ ಇವುಗಳೆಲ್ಲಾ ಉಂಟಾಗುವವು.

**ತತ್ರ ವಾತಾದ್ಭೃಶಂ ಚಾರ್ತೋ ದಂತಾನ್ ಖಾದತಿ ವೇಪತೇ || ೧ ||**
**ಗೃಹ್ಣಾತಿ ಮೇಹನಂ ನಾಭಿಂ ಪೀಡಯತ್ಯನಿಶಂ ಕ್ವಣನ್ ||**
ಸಾನಿಲಂ ಮುಂಚತಿ ಶಕೃನ್ಮುಹುರ್ಮೇಹತಿ ಬಿಂದುಶಃ || ೨ ||
ಶ್ಯಾವಾರುಣಾಶ್ಮರೀ ಚಾಸ್ಯ ಸ್ಯಾಚ್ಚಿತಾ ಕಂಟಕೈರಿವ ||

ವಾತದ ಕೋಪದಿಂದ ಹುಟ್ಟಿದ ಅಶ್ಮರೀ ರೋಗದ ಲಕ್ಷಣವನ್ನು ಹೇಳುತ್ತಾನೆ—ಕಿಬ್ಬೊಟ್ಟೆಯಲ್ಲಿ ನೋವು ಮತ್ತು ನಡತ ನಡ ಬಹಳವಾಗಿರುತ್ತದೆ, ತಡೆಯಲಾರದೆ ಪದೇ ಪದೇ ಹಲ್ಲು ಕಡಿಯುತ್ತಿರುತ್ತಾನೆ, ಮೈಯೆಲ್ಲಾ ನಡುಗುತ್ತಿರುತ್ತದೆ, ಶಿಶ್ನವನ್ನು ಮತ್ತು ಕಿಬ್ಬೊಟ್ಟೆಯನ್ನು ಸಹಾ ಪದೇ ಪದೇ ಅದುಮಿಕೊಳ್ಳುತ್ತಿರುವುದು, ಹೊಟ್ಟೆಯಲ್ಲಿ ಶಬ್ದವಾಗುತ್ತಿರುವುದು, ಮಲವಿಸರ್ಜನೆಯಾಗುತ್ತಿರುವಾಗ ಜೊತೆಯಲ್ಲಿ ವಾಯುವೂ ಶಬ್ದಯುಕ್ತವಾಗಿ ಹೊರಡುತ್ತಿರುವುದು, **ತೊಟ್ಟು ತೊಟ್ಟಾಗಿ ಮೂತ್ರವನ್ನು ಹೊಯ್ಯುತ್ತಿರುವುದು ಈ ಲಕ್ಷಣಗಳಿರುತ್ತವೆ. ತಡದುಕೊಂಡಿರುವ ಅಶ್ಮರಿಯು ಹೊರಕ್ಕೆ ಬಿದ್ದಲ್ಲಿ ಅದನ್ನು ನೋಡಿದರೆ ಅದರ ಬಣ್ಣವು ಹೊಗೆಯಂತಹ ಕಂದು ಬಣ್ಣದ್ದಾಗಿಯಾಗಲಿ ಸ್ವಲ್ಪ ಬಿಳುಪು ಕೂಡಿದ**

ಕೆಂಪು ಬಣ್ಣದ್ದಾಗಿಯಾಗಲಿ ಆಗಿರುವುದು, ಅದಕ್ಕೆ ಸುತ್ತಲೂ ನೆಗ್ಗಲು ಮುಳ್ಳಿಗಿರುವಂತಹ ತರಕಲು ಮುಳ್ಳುಗಳಿರುವುದು, ಈ ಲಕ್ಷಣಗಳೆಲ್ಲಾ ಇದ್ದರೆ ಇದನ್ನು ವಾತಪ್ರಕೋಪಜನ್ಯವಾದ ಅಶ್ಮರೀ ರೋಗವೆಂದು ತಿಳಿಯಬೇಕು.

ಪಿತ್ತೇನದಹ್ಯತೇಬಸ್ತಿಃಪಚ್ಯಮಾನಇವೋಷ್ಮವಾನ್ ॥ ೮ ॥
ಭಲ್ಲಾತಕಾಸ್ಥಿಸಂಸ್ಥಾನಾರಕ್ತಾಪೀತಾಸಿತಾಶ್ಮರೀ ॥

ಪಿತ್ತಪ್ರಕೋಪದಿಂದ ಉಂಟಾದ ಅಶ್ಮರೀರೋಗದಲ್ಲಿ ಮೂತ್ರಕೋಶದಲ್ಲಿ ಉರಿ ಇರುತ್ತದೆ, ಮೂತ್ರಕೋಶವನ್ನೇ ಬೇಯಿಸಿದಂತೆ ತೋರುತ್ತಿರುತ್ತದೆ, ಮೂತ್ರದ್ವಾರವನ್ನು ತಡೆಯುವ ಕಲ್ಲು (ಅಶ್ಮರಿ) ಗೇರು ಪಪ್ಪಿನಂತಿದ್ದು ಕೆಂಪು, ಹಳದಿ, ಕಪ್ಪು, ಇಂತಹ ಬಣ್ಣಗಳಿಂದ ಕೂಡಿಕೊಂಡಿರುತ್ತದೆ.

ಬಸ್ತಿರ್ನಿಸ್ತುದ್ಯತಇವಶ್ಲೇಷ್ಮಣಾಶೀತಲೋಗುರುಃ ॥ ೯ ॥
ಅಶ್ಮರೀಮಹತೀಶ್ಲಕ್ಷ್ಣಾಮಧುವರ್ಣಾಥವಾಗುರುಃ ॥
ಏತಾಭವಂತಿಬಾಲಾನಾಂತೇಷಾಮೇವಚಭೂಯಸಾ ॥ ೧೦ ॥
ಆಶ್ರಯೋಪಚಯಾಲ್ಪತ್ವಾದ್ಗ್ರಹಣಾಹರಣೇಸುಖಾಃ ॥

ಶ್ಲೇಷ್ಮಪ್ರಕೋಪಜನ್ಯವಾದ ಅಶ್ಮರೀ ರೋಗದಲ್ಲಿ ಮೂತ್ರಕೋಶದಲ್ಲಿ ವ್ಯಥೆಯಿರುತ್ತದೆ, ಮೂತ್ರಕೋಶವು ತಣ್ಣಗೆ ಭಾರವಾಗಿರುತ್ತದೆ, ಅಶ್ಮರಿಯು ದಪ್ಪವಾಗಿರುತ್ತದೆ ಮತ್ತು ನುಣುಪಾಗಿಯೂ ಮಧುವರ್ಣ ಅಂದರೆ ಜೇನುತುಪ್ಪದ ವರ್ಣಕ್ಕೂ ಭಾರವಾಗಿಯೂ ಇರುತ್ತದೆ. ಹಿಂದೆ ಹೇಳಿದ ಮೂರು ವಿಧವಾದ ಅಶ್ಮರಿರೋಗವೂ ಮಕ್ಕಳಿಗೆ ಸಹ ಬರುವುದುಂಟು. ಹೇಗಂದರೆ—ಮಕ್ಕಳುಗಳು ಹಗಲು ರಾತ್ರಿನಲ್ಲಿ ಮಲಗುವುದು, ಕ್ಲೇಷವಿಲ್ಲದ ಮನಸ್ಸು ಹೆಚ್ಚು ಕಡಮೆಯಾಗಿ ಭೋಜನಮಾಡುವುದು, ಮಧುರಾಹಾರ, ತುಪ್ಪ ಮೊದಲಾದ ಜಿಡ್ಡುಗಳು ಇವುಗಳನ್ನು ವಿಶೇಷವಾಗಿ ಪ್ರೀತಿಸುತ್ತಾರೆ, ಈ ಕಾರಣಗಳಿಂದ ಅಶ್ಮರೀರೋಗವು ಮಕ್ಕಳಿಗೆ ವಿಶೇಷವಾಗಿ ಸಂಭವಿಸುತ್ತದೆ, ಮಕ್ಕಳಿಗೆ ಬಂದರೂ ಚಿಕಿತ್ಸೆ ಮಾಡುವುದು ಅಂದರೆ ಬಸ್ತಿಯಿಂದ (ಮೂತ್ರಕೋಶದಿಂದ) ಅಶ್ಮರಿಯನ್ನು ಹೊರಕ್ಕೆ ತೆಗೆಯುವುದು ಸುಲಭ, ಹೇಗೆಂದರೆ ಮಕ್ಕಳ ಮೂತ್ರಕೋಶವು ಚಿಕ್ಕದಾಗಿರುತ್ತದೆ, ಅಲ್ಲದೆ ಅಶ್ಮರಿಯು ಕೂಡ ಬಹಳ ದೊಡ್ಡದಾಗಿರುವುದಿಲ್ಲ

ಶುಕ್ರಾಶ್ಮರೀತುಮಹತಾಂಜಾಯತೇಶುಕ್ರಧಾರಣಾತ್ ॥ ೧೧ ॥
ಸ್ಥಾನಾಚ್ಚ್ಯುತಮಮುಕ್ತಂಹಿಮುಷ್ಕಯೋರಂತರೇನಿಲಃ ॥
ಶೋಷಯತ್ಯುಪಸಂಗೃಹ್ಯಶುಕ್ರಂತತ್ಶುಕ್ರಮಶ್ಮರೀ ॥ ೧೨ ॥
ಬಸ್ತಿರುಜಾಮೂತ್ರಕೃಚ್ಛ್ರಶ್ವಮುಷ್ಕಶ್ವಯಥುಕಾರಿಣೀ ॥

**ತಸ್ಯಾಮುತ್ಪನ್ನಮೂತ್ರಾಯಾಂಶುಕ್ರಮೇತಿವಿಲೀಯತೇ ॥ ೧೩ ॥**
**ಪೀಡಿತೇತ್ವವಕಾಶೇಸ್ಮಿ€............................... ॥**

ಶುಕ್ರಾಶ್ಮರಿ ಎಂದರೆ ಶುಕ್ರವೆಂಬ ಪುರುಷವೀರ್ಯವನ್ನು ತಡೆಯುವುದರಿಂದ ಹುಟ್ಟತಕ್ಕ ಅಶ್ಮರೀರೋಗವು ದೊಡ್ಡವರಿಗೆ ಅಂದರೆ ವಯಸ್ಕರಾದವರಿಗೇನೇ ಉಂಟಾಗತಕ್ಕದ್ದು, ಇದು ಉಂಟಾಗತಕ್ಕ ಕ್ರಮವ್ಯಾವುದೆಂದರೆ—ಶುಕ್ರವು ಸ್ವಸ್ಥಾನದಿಂದ ಹೊರಟು ಹೊರಕ್ಕೆ ಬಿಡಲ್ಪಡದೆ ವೃಷಣ ಮತ್ತು ಶಿಶ್ನಗಳ ನಡುಭಾಗದಲ್ಲಿ ಬಸ್ತಿಯು (ಮೂತ್ರಾಶಯದ) ಮುಖದ್ವಾರದಲ್ಲಿ ವಾಯುವಿನಿಂದ ಶೋಷಿಸಲ್ಪಟ್ಟು ಗಟ್ಟಿಯಾಗಿ ಕಲ್ಲಿನಂತಾಗುತ್ತದೆ. ಇದಕ್ಕೇನೇ ಶುಕ್ರಾಶ್ಮರೀ ಎಂಬದಾಗಿ ಹೆಸರು. ಬಸ್ತಿಯಲ್ಲಿ ನೋವು, ಮೂತ್ರವು ಬಹಳ ಕಷ್ಟದಿಂದ ಹೊರಡುವುದು, ವೃಷಣಗಳು ಬಾತುಹೋಗುವುದು, ಇಂತಹ ಹಿಂಸೆಗಳಾಗುತ್ತವೆ. ಈ ಶುಕ್ರಾಶ್ಮರಿಯು ಉಂಟಾಯಿತೆಂದರೆ ಆ ಕೂಡಲೆ ಅದು ಯಾವ ಸ್ಥಳದಲ್ಲಿ ತಡೆದಿದೆ ಎಂಬುವುದನ್ನು ಗೊತ್ತುಮಾಡಿಕೊಂಡು ಕೈಯ್ಯಿಂದ ಹಿಸುಕಿಕೊಂಡಲ್ಲಿ ಶುಕ್ರವು ಹೊರಕ್ಕೆ ಹೊರಡುತ್ತದೆ, ಅಥವಾ ಅಲ್ಲಿಯೇ ವಿಲಯಹೊಂದಿ ಅಂದರೆ ಘಟ್ಟಿಯಾಗಿದ್ದದ್ದು ಪುನಶ್ಚ ಅವುಕಿಕೊಳ್ಳೋಣದರಿಂದ ನೀರಾಗಿ ಮೂತ್ರಮಾರ್ಗವನ್ನು ತಡೆಯದೆ ಬಿಟ್ಟು ಬಿಡುತ್ತದೆ.

**ಅಶ್ಮರ್ಯೇವಚಶರ್ಕರಾ ॥**
**ಅಣುಶೋವಾಯುನಾಭಿನ್ನಾ ಸಾತಸ್ಮಿನ್ನನುಲೋಮಗೇ ॥ ೧೪ ॥**
**ಸಿರೇತಿಸಹಮೂತ್ರೇಣಪ್ರತಿಲೋಮೇನಿರುಧ್ಯತೇ ॥**
**ಮೂತ್ರಸ್ರೋತಃಪ್ರವೃತ್ತಾ ಸಾಸಕ್ತಾಕುರ್ಯಾದುಪದ್ರವಾನ್॥ ೧೫ ॥**
**ದೌರ್ಬಲ್ಯಂಸದನಂಕಾರ್ಶ್ಯಂಕುಕ್ಷಿಶೂಲಮಥಾರುಚಿಂ ॥**
**ಪಾಂಡುತ್ವಮುಷ್ಣವಾತಂಚತೃಷ್ಣಾಂಹೃತ್ಪೀಡನಂವಮಿಂ ॥ ೧೬ ॥**

ಹಿಂದೆ ಹೇಳಿದ ಅಶ್ಮರಿಯೇ ವಾತದಿಂದ ಚೂರುಚೂರಾಗಿ ಮಾಡಲ್ಪಟ್ಟರೆ ಶರ್ಕರೆಯೆನ್ನಿಸಿಕೊಳ್ಳುತ್ತದೆ, ದೇಹದಲ್ಲಿ ವಾಯುವು ಅನುಕೂಲವಾಗಿದ್ದಲ್ಲಿ ಶರ್ಕರೆಯೇ ಮೂತ್ರದೊಡನೆ ಹೊರಕೆ ಬಂದು ಬಿಡುತ್ತದೆ, ಒಂದುವೇಳೆ ವಾಯುವು ಪ್ರತಿಕೂಲವಾಗಿದ್ದಲ್ಲಿ ಮೂತ್ರದೊಡನೆ ಹೊರಗೆ ಬಾರದೆ ಮೂತ್ರಮಾರ್ಗದಲ್ಲಿ ತಡಮಕೊಂಡು ಮುಂದೆ ಹೇಳುವ ಉಪದ್ರವಗಳನ್ನೆಲ್ಲಾ ಮಾಡಬಹುದು, ಉಪದ್ರವಗಳೆಂದರೆ—ಶರೀರದೌರ್ಬಲ್ಯ, ಅಗ್ನಿಮಾಂದ್ಯ, ಶರೀರವು ಕೃಶವಾಗಿ ಹೋಗೋಣ, ಹೊಟ್ಟೆನೋವು, ಅರುಚಿ, ಶರೀರವೆಲ್ಲವೂ ಬೆಳ್ಳಗಾಗಿ ಹೋಗುವುದು, ಉಷ್ಣವಾತ, ಬಾಯಾರಿಕೆ, ಎದೆನೋವು, ವಮನ, ಈ ಉಪದ್ರವಗಳೆಲ್ಲಾ ಉಂಟಾಗುತ್ತವೆ.

**ಪ್ರಶೂನನಾಭಿವೃಷಣಂಬದ್ಧಮೂತ್ರಂರುಜಾತುರಂ ॥**
**ಅಶ್ಮರೀಕ್ಷಪಯತ್ಯಾಶುಸಿಕತಾಶರ್ಕರಾನ್ವಿತಾ ॥ ೧೭ ॥**

ಅಶ್ಮರೀರೋಗದ ಅಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ—ನಾಭಿ ಅಂದರೆ ಕಿಬ್ಬೊಟ್ಟೆ ಮತ್ತು ವೃಷಣಗಳು ಬಾತಿರುವುದು, ಮೂತ್ರ ತಡದು ಹಿಂಸೆ ಪಡುತ್ತಿರುವುದು, ಇಂತಹ ಉಪದ್ರವಗಳಿರುವ ಅಶ್ಮರೀ ರೋಗಿಯನ್ನು ಈ ಅಶ್ಮರಿ ಮತ್ತು ಶರ್ಕರೆಗಳು ಕೊಲ್ಲುತ್ತವೆ.

ಇಲ್ಲಿಗೆ ಅಶ್ಮರೀರೋಗನಿದಾನ ಸಂಪೂರ್ಣ.

---

## ಪ್ರಮೇಹಪಿಡಕಾನಿದಾನ.

**ಆಸ್ಯಾಸುಖಂಸ್ವಪ್ನಸುಖಂದಧೀನಿಗ್ರಾಮ್ಯೌದಕಾನೂಪರಸಾಃ**
**ಪಯಾಂಸಿ ॥**
**ನವಾನ್ನಪಾನಂಗುಡವೈಕೃತಂಚಪ್ರಮೇಹಹೇತುಃಕಫಕೃಚ್ಚ**
**ಸರ್ವಂ ॥ ೧ ॥**

ಮೇಹರೋಗವನ್ನು ಹೇಳುತ್ತಾನೆ—ಯಾವಾಗ್ಯೂ ಕುಳಿತು ಕೆಲಸಮಾಡುವುದು, ಯಾವಾಗ್ಯೂ ಮಲಗಿರುವುದು, ಹೆಚ್ಚಾಗಿ ಮೊಸರನ್ನುಪಯೋಗಿಸುವುದು, ಗ್ರಾಮ್ಯಗಳೆಂದರ ಗ್ರಾಮದಲ್ಲಿ ವಾಸಮಾಡುವ ಮೃಗಪಕ್ಷಿಗಳ ಮಾಂಸರಸವನ್ನು ಹೆಚ್ಚಿಗೆ ಉಪಯೋಗಿಸುವುದು, ಔದಕಗಳೆಂದರೆ ನೀರಿನಲ್ಲಿರುವ ಮೀನುಗಳನ್ನು ಹೆಚ್ಚಾಗಿ ತಿನ್ನುವುದು, ಆನೂಪವೆಂದರೆ ಜೌಗುಪ್ರದೇಶದಲ್ಲಿ ವಾಸಮಾಡುವ ಮೃಗಗಳ ಮಾಂಸಗಳನ್ನು ಹೆಚ್ಚಿಗೆ ತಿನ್ನುವುದು, ಹಾಲನ್ನು ಹೆಚ್ಚಿಗೆ ಕುಡಿಯುವುದು, ಹೊಸದಾದ ಅನ್ನಪಾನಗಳು ಅಂದರೆ ಹೊಸ ಧಾನ್ಯಗಳು, ಹೊಸ ನೀರು ಮೊದಲಾದವುಗಳು, ಗುಡವೈಕೃತವೆಂದರೆ ಬೆಲ್ಲ, ಸಕ್ಕರೆ ಮೊದಲಾದ ಮಧುರ ಪದಾರ್ಥಗಳು ಮತ್ತು ಅವುಗಳಿಂದ ಮಾಡಲ್ಪಟ್ಟ ಭಕ್ಷ್ಯಗಳು ಇವುಗಳು ಮತ್ತು ಕಫಕರಗಳಾದ ಅಂದರೆ ಕಫವೃದ್ಧಿಮಾಡತಕ್ಕ ಸಮಸ್ತ ಪದಾರ್ಥಗಳೂ ಮೇಹರೋಗವನ್ನುಂಟುಮಾಡುತ್ತವೆ.

**ಮೇದಶ್ಚಮಾಂಸಂಚಶರೀರಜಂಚಕ್ಲೇದಂಕಫೋಬಸ್ತಿಗತಃ**
**ಪ್ರದೂಷ್ಯ ॥**
**ಕರೋತಿಮೇಹಾನ್‌ಸಮುದೀರ್ಣಮುಷ್ಣೈಸ್ತಾನೇವಪಿತ್ತಂಪರಿ**
**ದೂಷ್ಯಚಾಪಿ ॥ ೨ ॥**
**ಕ್ಷೀಣೇಷುದೋಷೇಷ್ವವಕೃಷ್ಯಧಾತೂನ್‌ಸಂದೂಷ್ಯಮೇಹಾನ್**
**ಕುರುತೇನಿಲಶ್ಚ ॥**
**ಸಾಧ್ಯಾಃಕಫೋತ್ಥಾದಶಪಿತ್ತಜಾಷ್ಷಡ್ಯಾಪ್ಯಾನಸಾಧ್ಯಾಃಪವ**
**ನಾಚ್ಚತುಷ್ಕಾಃ ॥ ೩ ॥**

**ಸಮಕ್ರಿಯತ್ವಾದ್ವಿಷಮಕ್ರಿಯತ್ವಾನ್ಮಹಾತ್ಯಯತ್ವಾಚ್ಚ ಯಥಾಕ್ರಮಂತೇ ॥**

ಮೇಹರೋಗವು ಹುಟ್ಟುವ ವಿಧಾನವನ್ನು ಹೇಳುತ್ತಾನೆ—ಮೂತ್ರಕೋಶಗತವಾದ ಕಫವು ಸ್ವಪ್ರಕೋಪ ಕಾರಣಗಳಾದ ವಿರುದ್ಧಾಹಾರಾದಿಗಳಿಂದ ಪ್ರಕುಪಿತವಾಗಿ ಮೂತ್ರಾಶಯಗತಗಳಾದ ಮೇದೋಧಾತು, ಮಾಂಸ ಮತ್ತು ಜಲಭಾಗಗಳನ್ನು ದೋಷಯುಕ್ತವಾಗಿಮಾಡಿ ಹಾಳುಮಾಡಿ ಮೇಹರೋಗವನ್ನು ಹುಟ್ಟಿಸುತ್ತದೆ. ಉಷ್ಣವನ್ನು ವೃದ್ಧಿಮಾಡತಕ್ಕ ಆಹಾರವಿಹಾರಗಳಿಂದ ಪ್ರಕುಪಿತವಾದ ಪಿತ್ತವು ಹಿಂಪೆ ಹೇಳಿದ ಮೇದಸ್ಸು ಮಾಂಸ ಮತ್ತು ಜಲಭಾಗಗಳನ್ನೇ ಕಡಿಸಿ ಮೇಹರೋಗವನ್ನುಂಟು ಮಾಡುತ್ತದೆ, ಪಿತ್ತ ಮತ್ತು ಶ್ಲೇಷ್ಮ ಈ ಎರಡೂ ದೋಷಗಳೂ ಕ್ಷಯಿಸಿರುವಾಗ್ಯೆ ವಾತಪ್ರಕೋಪ ಕಾರಣಗಳಿಂದ ಪ್ರಕುಪಿತವಾದ ವಾಯುವು ವಸ, ಮಜ್ಜ, ಮೊದಲಾದ ಧಾತುಗಳನ್ನೇ ಬಸ್ತಿ (ಮೂತ್ರಾಶಯ)ಯ ಕಡೆಗೆ ಎಳೆದುಕೊಂಡು ಬಂದು ಮೇಹರೋಗವನ್ನು ಹುಟ್ಟಿಸುತ್ತದೆ, ಈ ರೀತಿಯಾಗಿ ಹಿಂದೆ ಹೇಳಿದ ಮೂರು ದೋಷಗಳಿಂದ ಹುಟ್ಟತಕ್ಕ ಮೇಹರೋಗಗಳಲ್ಲಿ ಕಫ ಪ್ರಕೋಪದಿಂದ ಹುಟ್ಟತಕ್ಕ ಹತ್ತು ವಿಧವಾದ ಮೇಹರೋಗವು ಚಿಕಿತ್ಸೆಗೆ ಸಾಧ್ಯ ಎಂದರೆ ಗುಣವಾಗುತ್ತವೆ. ಪಿತ್ತಪ್ರಕೋಪದಿಂದ ಹುಟ್ಟತಕ್ಕ ಆರು ವಿಧವಾದ ಮೇಹರೋಗಗಳು ಯಾಪ್ಯ ಎಂದರೆ ಕಾಲಹರಣವಾಗತಕ್ಕವುಗಳು; ಗುಣವಾಗುವುದು ಕಷ್ಟ. ವಾತಪ್ರಕೋಪದಿಂದ ಹುಟ್ಟತಕ್ಕ ನಾಲ್ಕು ವಿಧವಾದ ಮೇಹಗಳೂ ಸಾಧ್ಯವಾಗತಕ್ಕವುಗಳೇ ಅಲ್ಲ, ಕ್ರಮೇಣ ಇವುಗಳಿಗೆ ಕಾರಣವನ್ನು ಹೇಳುತ್ತಾನೆ—ಕಫಪ್ರಕೋಪಜನ್ಯವಾದ ಮೇಹವು ಸಾಧ್ಯವಾಗಲು ಕಾರಣವೇನಂದರೆ ಚಿಕಿತ್ಸಾ ಕ್ರಮದಲ್ಲಿ ಕಫಜನ್ಯಮೇಹದಲ್ಲಿ ಮೇಹವನ್ನು ಹುಟ್ಟಿಸಲು ಕಾರಣಭೂತವಾದ ದೋಷವಾದ ಕಫವೂ ದೂಷ್ಯಗಳಾದ ಅಂದರೆ ವಯಸ್ಸಾಗಿ ಕೆಟ್ಟುಹೋಗತಕ್ಕ ಶರೀರಗತಗಳಾದ ಮೇದೋಮಾಂಸಾದಿಗಳೂ ಕೂಡ, ಕಟು ಅಂದರೆ ಕಾರತಿಕ್ತ ಅಂದರೆ ಕಹಿ ಇಂತಹ ರಸಯುಕ್ತಗಳಾದ ಔಷಧೋಪಚಾರಗಳಿಂದಲೇ ಉಪಚರಿಸಲ್ಪಟ್ಟು ವಿರೋಧವಿಲ್ಲದೆ ಗುಣವನ್ನು ಹೊಂದುತ್ತವೆ. ಹೀಗಿರುವುದರಿಂದಲೇ ಕಫಪ್ರಕೋಪಜನ್ಯವಾದ ಮೇಹಗಳು ಸುಲಭಸಾಧ್ಯಗಳೆಂದರ್ಥ. ಪಿತ್ತಪ್ರಕೋಪಜನ್ಯಗಳಾದ ಮೇಹಗಳ ವಿಷಯದಲ್ಲಿ ಚಿಕಿತ್ಸಾಕ್ರಮದಲ್ಲಿ ದೋಷವಾದ ಪಿತ್ತಕ್ಕೂ, ದೂಷ್ಯಗಳಾದ ಮೇದೋಮಾಂಸಾದಿಗಳಿಗೂ, ಪರಸ್ಪರ ವಿರೋಧ ಬರುತ್ತದೆ. ಹೇಗೆಂದರೆ ಪ್ರಕುಪಿತದೋಷವನ್ನು ಸರಿಪಡಿಸಲು ಪಿತ್ತಹರವಾದ ಮಧುರ ರಸವನ್ನು ಉಪಯೋಗಿಸಬೇಕು, ಮಧುರ ರಸವನ್ನು ಉಪಯೋಗಿಸೋಣದರಿಂದ ಯದ್ಯಪಿ ಪಿತ್ತಪ್ರಕೋಪವನ್ನು ಕಡಿಮೆ ಮಾಡಬಹುದಾದರೂ ಮೇಹರೋಗವನ್ನುಂಟುಮಾಡಲು ದೂಷ್ಯವಾದ ಅಂದರೆ ಕೆಟ್ಟುಹೋಗಿರುವ ಶರೀರದಲ್ಲಿರುವ ಮೇದೋಧಾತುವನ್ನು ಈ ಮಧುರರಸವು ವೃದ್ಧಿಪಡಿಸಿ ಮೇಹರೋಗವನ್ನು ಮತ್ತಷ್ಟು ಹೆಚ್ಚಿಸಲು ಕಾರಣವಾಗುತ್ತದೆ. ಆದ್ದರಿಂದ

ಚಿಕಿತ್ಸಾ ಕ್ರಮದಲ್ಲಿ ಪರಸ್ಪರ ವಿರೋಧ ಬರುವುದರಿಂದ ಪಿತ್ತಪ್ರಕೋಪಜನ್ಯವಾದ ಮೇಹರೋಗವು ಯಾಪ್ಯ ಎಂದರೆ ಕಾಲಹರಣ ಮಾಡುವುದು ವಿನಹಾ ಗುಣವಾಗುವುದಿಲ್ಲವೆಂದು ಹೇಳಿರುತ್ತಾರೆ, ವಾತಪ್ರಕೋಪಜನ್ಯವಾದ ಮೇಹವು ಈ ಪಿತ್ತ ಶ್ಲೇಷ್ಮಜನ್ಯಮೇಹಗಳಂತಲ್ಲದೆ ಮಜ್ಜಾಧಾತು ಮೊದಲಾದ ಅಂತಹ ಧಾತುಗಳನ್ನೇ ಮುಖ್ಯವಾಗಿ ಕೆಳಕ್ಕೆ ತಂದು ಬಾಧಿಸುವುದರಿಂದ ಚಿಕಿತ್ಸೆಯಿಂದ ಗುಣಪಡಿಸಲು ಸಾಧ್ಯವಾಗುವುದಿಲ್ಲವೆಂಬ ಭಾವ.

**ಕಫಸ್ಸಪಿತ್ತಃಪವನಸ್ತ್ರಯೋದೋಷಾಮೇದೋಸ್ರಶುಕ್ರಾಂಬುವಸಾಲಸೀಕಾಃ || ೪ ||**
**ಮಜ್ಜಾರಸೌಜಃಪಿಶಿತಂಚದೂಷ್ಯಾಃಪ್ರಮೇಹಿಣಾಂವಿಂಶತಿರೇವಮೇಹಾಃ ||**

ಈ ಮೇಹರೋಗದಲ್ಲಿ ದೋಷದೂಷ್ಯಗಳನ್ನು ಹೇಳುತ್ತಾನೆ—ವಾತ, ಪಿತ್ತ, ಶ್ಲೇಷ್ಮಗಳೇ ದೋಷಗಳು; ಮೇದಸ್ಸು, ರಕ್ತ, ಶುಕ್ರಧಾತು, ದೇಹಗತವಾದ ಅಬ್ಧಾತು, ಮಾಂಸಸ್ನೇಹ, ಲಸೀಕಾ ಎಂದರೆ ಚರ್ಮ ಮತ್ತು ಮಾಂಸಗಳ ಮಧ್ಯಗತವಾದ ಜಲರೂಪವಾದ ದ್ರವ, ಮಜ್ಜಾಧಾತು, ರಸಧಾತು, ಓಜಃ ಎಂದರೆ ದೇಹಗತಗಳಾದ ಶುಕ್ರಾಂತಗಳಾದ ಧಾತುಗಳ ಮುಖ್ಯವಾದ ಭಾಗ, ಮಾಂಸ ಇವಿಷ್ಟು ದೂಷ್ಯಗಳು ಅಂದರೆ ಕೆಡತಕ್ಕವುಗಳು; ಮೂರು ದೋಷಗಳಿಂದ ದೇಹಗತಗಳಾದ ಹಿಂದೆ ಹೇಳಿದ ಕೆಡತಕ್ಕ ಹತ್ತು ಪದಾರ್ಥಗಳು ಕೆಡೋಣದರಿಂದ ಹುಟ್ಟತಕ್ಕ ಮೇಹರೋಗವು ಇಪ್ಪತ್ತು ವಿಧ.

**ದಂತಾದೀನಾಂಮಲಾಢ್ಯತ್ವಂಪ್ರಾಗ್ರೂಪಂಪಾಣಿಪಾದಯೋಃ || ೫ ||**
**ದಾಹಶ್ಚಿಕ್ಕಣತಾದೇಹೇತೃಟ್ ಸ್ವಾದ್ವಾಸ್ಯಂಚಜಾಯತೇ ||**

ಮೇಹರೋಗವು ಹುಟ್ಟುವ ಮೊದಲು ತೋರುವ ಲಕ್ಷಣಗಳು—ಹಲ್ಲುಗಳು, ಕಿವಿ, ಕಣ್ಣು, ಮೂಗುಗಳಲ್ಲಿ ಅಕಾರಣವಾಗಿ ಕೊಳೆ ಸೇರಿಕೊಳ್ಳುವುದು; ಕೈ ಮತ್ತು ಕಾಲುಗಳಲ್ಲಿ ಉರಿಯಾಗುವುದು, ಮೈಯೆಲ್ಲಾ ಜಿಡ್ಡಾದಂತೆ ತೋರುತ್ತಿರುವುದು, ಬಾಯಾರಿಕೆ, ಯಾವಾಗ್ಯೂ ಬಾಯಿ ಸಿಹಿಯಾಗಿರುವುದು ಇವು ಲಕ್ಷಣಗಳು.

**ಸಾಮಾನ್ಯಂಲಕ್ಷಣಂತೇಷಾಂಪ್ರಭೂತಾವಿಲಮೂತ್ರತಾ || ೬ ||**
**ದೋಷದೂಷ್ಯಾವಿಶೇಷೇಪಿತತ್ಸಂಯೋಗವಿಶೇಷತಃ ||**

ಮೇಹರೋಗದಲ್ಲಿ ಸಾಮಾನ್ಯವಾಗಿ ಮೂತ್ರವು ಪ್ರಮಾಣದಲ್ಲಿ ಅಧಿಕವಾಗಿರುವುದು ಮತ್ತು ಮೂತ್ರದಲ್ಲಿ ಬಹಳವಾಗಿ ಕಲ್ಮಷಗಳಿರುವುದು.

**ದೋಷದೂಷ್ಯಾವಿಶೇಷೇಪಿತತ್ಸಂಯೋಗವಿಶೇಷತಃ || ೭ ||**
**ಮೂತ್ರವರ್ಣಾದಿಭೇದೇನಭೇದೋಮೇಹೇಷುಕಲ್ಪ್ಯತೇ ||**

ಈ ಮೇಹರೋಗದಲ್ಲಿ ದೋಷಗಳು ಮತ್ತು ದೂಷ್ಯಗಳು ಹಿಂದೆ ಹೇಳಿದವುಗಳೇ ಆಗಿದ್ದರೂ ಅವುಗಳು ಪರಸ್ಪರ ಸಂಯೋಗವಾಗುವ ರೀತಿಯಲ್ಲಿ ತೋರುವ ವ್ಯತ್ಯಾಸಗಳಿಂದಲೂ ಮತ್ತು ಮೂತ್ರದ ವರ್ಣಾದಿಗಳಲ್ಲಿ ಕಂಡು ಬರುವ ವ್ಯತ್ಯಾಸಗಳಿಂದ ಮೇಹರೋಗವನ್ನು ನಾನಾ ವಿಧವಾಗಿ ಕಲ್ಪಿಸಿದ್ದಾರೆ.

**ಅಚ್ಛಂಬಹುಸಿತಂಶೀತಂನಿರ್ಗಂಧಮುದಕೋಪಮಂ || ೮ ||**
**ಮೇಹತ್ಯುದಕಮೇಹೇನ................................ ||**

ಸ್ವಚ್ಛವಾಗಿ, ಪ್ರಮಾಣದಲ್ಲಿ ಹೆಚ್ಚಾಗಿ, ಬಿಳುಪಾಗಿ, ತಣ್ಣಗೆ, ಯಾವ ವಾಸನೆಯೂ ಇಲ್ಲದೆ, ನೀರಿನಂತೆ ಮೂತ್ರವನ್ನು ಬಿಡುವುದು ಉದಕಮೇಹವೆನ್ನಿಸುತ್ತದೆ.

**ಕಿಂಚಿದಾವಿಲಪಿಚ್ಛಿಲಂ ||**
**ಇಕ್ಷೋರಸಮಿವಾತ್ಯರ್ಥಂಮಧುರಂಚೇಕ್ಷುಮೇಹತಃ || ೯ ||**

ಕಶ್ಮಲಯುಕ್ತವಾಗಿಯೂ ಜಿಗಟಾಗಿಯೂ ಕಬ್ಬಿನ ರಸದಂತೆ ಅತಿ ಶಿಯ್ಯಾಗಿಯೂ ಮೂತ್ರಿಸಿದರೆ ಅದಕ್ಕೆ ಇಕ್ಷುಮೇಹವೆಂದು ಹೆಸರು.

**ಸಾಂದ್ರೀಭವೇತ್ಪರ್ಯುಷಿತಂಸಾಂದ್ರಮೇಹೇನಮೇಹತಿ ||**

ಮೂತ್ರವು ಸ್ವಭಾವಕ್ಕಿಂತಲೂ ದಪ್ಪವಾಗಿ ಹಳದಾಗಿಯೂ ಅಂದರೆ ಮೂತ್ರ ತಡದು ಸಾವಕಾಶವಾಗಿಯೂ ಮೂತ್ರಿಸುತ್ತಿದ್ದರೆ ಅದಕ್ಕೆ ಸಾಂದ್ರಮೇಹವೆಂದು ಹೆಸರು.

**ಸುರಾಮೇಹೀಸುರಾತುಲ್ಯಮುಪರ್ಯಚ್ಛಮಧೋಘನಂ || ೧೦ ||**

ಸುರಾಮೇಹವೆಂಬುವುದರಲ್ಲಿ ಮೂತ್ರಿಸಿದ ಮೂತ್ರವನ್ನು ಒಂದು ಪಾತ್ರೆಯಲ್ಲಿಟ್ಟರೆ ಆ ಮೂತ್ರವು ಮೇಗಡೆಯಲ್ಲಿ ತಿಳಿಯಾಗಿಯೂ ಪಾತ್ರೆಯ ಬುಡದಲ್ಲಿ ಹೆಂಡದ ಮಡ್ಡಿಯಂತೆ ಗಟ್ಟಿಯಾಗಿಯೂ ಇರುತ್ತದೆ.

**ಸಂಹೃಷ್ಟರೋಮಾಪಿಷ್ಟೇನಪಿಷ್ಟವದ್ಬಹುಲಂಸಿತಂ ||**

ಪಿಷ್ಟಮೇಹವೆಂಬುವುದರಲ್ಲಿ ರೋಗಿಗೆ ಮೂತ್ರಿಸುವ ಕಾಲದಲ್ಲಿ ರೋಮಾಂಚವಾಗುವುದಲ್ಲದೆ ಹಿಟ್ಟನ್ನು ಕದರಿದ ನೀರಿನಂತೆ ಬೆಳ್ಳಗೆ ಮೂತ್ರವು ಹೋಗುತ್ತದೆ.

**ಶುಕ್ರಾಭಂಶುಕ್ರಮಿಶ್ರಂವಾಶುಕ್ರಮೇಹೀಪ್ರಮೇಹತಿ || ೧೧ ||**

ಶುಕ್ರಮೇಹವೆಂಬುವುದರಲ್ಲಿ ಮೂತ್ರದೊಡನೆ ಪುರುಷವೀರ್ಯದಂತಹ ಬಿಳಿಯ ದ್ರವವಾಗಲಿ ವೀರ್ಯವೇ ಆಗಲಿ ಹೋಗುತ್ತಿರುತ್ತದೆ.

**ಮೂತ್ರಾಣೂನ್ ಸಿಕತಾಮೇಹೀ ಸಿಕತಾರೂಪಿಣೋಮಲಾನ್ ||**

ಸಿಕತಾಮೇಹವೆಂಬುವುದರಲ್ಲಿ ಮೂತ್ರದ ಜೊತೆಯಲ್ಲಿ ಮರಳಿನಂತಹ ಕಣ್ಣಿಗೆ ಕಾಣುವ ಮತ್ತು ಕೈಯ್ಯಿಂದ ಮುಟ್ಟಬಹುದಾದ ಮಲದ ಕಣಗಳು ಹೊರಡುತ್ತಿರುತ್ತವೆ.

**ಶೀತಮೇಹೀಸುಬಹುಶೋಮಧುರಾಭ್ಯಶಶೀತಲಂ || ೧೨ ||**

ಶೀತಮೇಹದಲ್ಲಿ ಮೂತ್ರವು ಮಧುರವಾಗಿರುವುದು, ಅತಿಯಾಗಿ ತಣ್ಣಗಿರುವುದು, ಅಲ್ಲದೆ ಒಂದೇ ಸಾರಿ ಮೂತ್ರಿಸದೆ ಅನೇಕ ಸಾರಿ ಮೂತ್ರಿಸುತ್ತಿರುವುದು.

**ಶನೈಶ್ಶನೈಶ್ಶನೈರ್ಮೇಹೀಮಂದಂಮಂದಂಪ್ರಮೇಹತಿ ||**

ಶನೈರ್ಮೇಹವೆಂಬುವುದರಲ್ಲಿ ಮೂತ್ರವು ಸರಿಯಾದ ವೇಗದೊಡ ಹೊರಡದೆ ನಿಧಾನವಾಗಿ ತೊಟ್ಟು ತೊಟ್ಟಾಗಿ ಹೊರಡುತ್ತಿರುತ್ತದೆ.

**ಲಾಲಾತಂತುಯುತಂಮೂತ್ರಂಲಾಲಾಮೇಹೇನಪಿಚ್ಛಿಲಂ || ೧೩ ||**

ಲಾಲಾಮೇಹವೆಂಬುವುದರಲ್ಲಿ ಮೂತ್ರವು ಜಿಗಟಾಗಿ ಜೊಲ್ಲು ಹೊರಡುವಂತೆ ಧಾರೆಯ ಹಾಗೆ ಹೋಗುತ್ತಿರುತ್ತದೆ.

**ಗಂಧವರ್ಣರಸಸ್ಪರ್ಶೈಃಕ್ಷಾರೇಣಕ್ಷಾರತೋಯವತ್ ||**

ಈ ವರಿಗೂ ಹೇಳಿದ ಮೇಹಗಳೆಲ್ಲಾ ಶ್ಲೇಷ್ಮಪ್ರಕೋಪದಿಂದ ಉತ್ಪನ್ನವಾದವುಗಳು, ಮುಂದೆ ಹೇಳುವವುಗಳು ಪಿತ್ತಪ್ರಕೋಪಜನ್ಯವಾದವುಗಳು, ಅವುಗಳಲ್ಲಿ ಕ್ಷಾರಮೇಹವೆನ್ನುವುದರಲ್ಲಿ ಮೂತ್ರವು ವಾಸನೆ, ಬಣ್ಣ ಮೊದಲಾಗಿ ಯಾವ ವಿಧದಲ್ಲಿ ಪರೀಕ್ಷಿಸಿದರೂ ಚೌಳು ನೀರಿನಂತೆಯೇ ಇರುತ್ತದೆ.

**ನೀಲಮೇಹೇನನೀಲಾಭಂಕಾಲಮೇಹೀಮಸೀನಿಭಂ || ೧೪ ||**

ನೀಲಮೇಹವೆನ್ನುವುದರಲ್ಲಿ ಮೂತ್ರವು ನೀಲೀಬಣ್ಣವನ್ನು ಕದರಿದಂತಿರುತ್ತದೆ, ಕಾಲಮೇಹವೆನ್ನುವುದರಲ್ಲಿ ಮೂತ್ರವು ಮಶಿಯನ್ನು ಕದರಿದ ನೀರಿನಂತಿರುತ್ತದೆ.

**ಹಾರಿದ್ರಮೇಹೀಕಟುಕಂಹರಿದ್ರಾಸನ್ನಿಭಂದಹತ್ ||**

ಹರಿದ್ರಾಮೇಹವೆನ್ನುವುದರಲ್ಲಿ ಮೂತ್ರವು ಅರಿಸಿನವನ್ನು ಕದರಿದ ನೀರಿನಂತೆ ಬಣ್ಣವುಳ್ಳದ್ದಾಗಿ ಕಾರವಾಗಿ ಉರಿಯೊಡನೆ ಕೂಡಿರುತ್ತದೆ.

ವಿಸ್ರಂಮಂಜಿಷ್ಠಮೇಹೇನಮಂಜಿಷ್ಠಾಸಲಿಲೋಪಮಂ || ೧೫ ||

ಮಂಜಿಷ್ಠಾಮೇಹವೆನ್ನುವುದರಲ್ಲಿ ಮೂತ್ರವು ದುರ್ಗಂಧಯುಕ್ತವಾಗಿರುವುದಲ್ಲದೆ ಮೂತ್ರದ ಬಣ್ಣವು ಮಂಜಿಷ್ಠೆಯನ್ನು ಕದರಿದ ನೀರಿನಂತಿರುತ್ತದೆ.

ವಿಸ್ರಮುಷ್ಣಂಸಲವಣಂರಕ್ತಾಭಂರಕ್ತಮೇಹತಃ ||

ರಕ್ತಮೇಹವೆಂಬುವುದರಲ್ಲಿ ಮೂತ್ರವು ದುರ್ಗಂಧಯುಕ್ತವಾಗಿಯೂ, ಉಪ್ಪಾಗಿಯೂ, ಬಿಸಿಯಾಗಿಯೂ, ರಕ್ತದ ಬಣ್ಣದಂತಹ ಕೆಂಪು ಬಣ್ಣದ್ದಾಗಿಯೂ ಇರುತ್ತದೆ.

ವಸಾಮೇಹೀವಸಾಮಿಶ್ರಂವಸಾಭಂಮೂತ್ರಯೇನ್ಮುಹುಃ || ೧೬ ||

ವಾತಪ್ರಕೋಪಜನ್ಯಗಳಾದ ಮೇಹಗಳನ್ನು ಹೇಳುತ್ತಾನೆ—ವಸಾಮೇಹವೆಂಬುವುದರಲ್ಲಿ ಮೂತ್ರಿಸುವಾಗ್ಯೆ ವಸ ಎಂಬ ದೇಹಗತವಾದ ಶುದ್ಧ ಮಾಂಸದ ಸ್ನೇಹ ದ್ರವವು ಮೂತ್ರದೊಂದಿಗೆ ಹೋಗುತ್ತಿರುತ್ತದೆ. ಮೂತ್ರವೇ ವಸೆಯ ಹಾಗಿರಲೂ ಬಹುದು, ಅಲ್ಲದೆ ಅನೇಕ ಸಾರಿ ಮೂತ್ರಿಸುತ್ತಿರುತ್ತಾನೆ.

ಮಜ್ಜಾಭಂಮಜ್ಜಮಿಶ್ರಂನಾಮಜ್ಜಮೇಹೀಮುಹುರ್ಮುಹುಃ ||

ಮಜ್ಜಮೇಹವೆನ್ನುವುದರಲ್ಲಿ ಮೂತ್ರದೊಡನೆ ಮಜ್ಜಧಾತುವು ಕೂಡಿಕೊಂಡಿರುತ್ತದೆ, ಮೂತ್ರವು ಮಜ್ಜಧಾತುವಿನಂತೆಯಾದರೂ ಇರುತ್ತದೆ. ಇದರಲ್ಲಿಯೂ ಕೂಡ ಪದೇ ಪದೇ ಮೂತ್ರಿಸುತ್ತಿರುತ್ತಾನೆ.

ಕಷಾಯಂಮಧುರಂರೂಕ್ಷಂಕ್ಷೌದ್ರಮೇಹಂವದೇದ್ಬುಧಃ || ೧೭ ||

ಕ್ಷೌದ್ರಮೇಹವೆಂದರೆ ಮಧುಮೇಹದಲ್ಲಿ ಮೂತ್ರವು ಕಷಾಯದ ಹಾಗೆಯೂ. ಶೀತವಾಗಿ ಮಧುವರ್ಣವಾಗಿಯೂ ಇದ್ದರೆ ಮಧುಮೇಹವೆಂದು ಹೇಳಬೇಕು.

ಹಸ್ತೀಮತ್ತಇವಾಜಸ್ರಂಮೂತ್ರಂವೇಗವಿವರ್ಜಿತಂ ||
ಸಲಸೀಕಂವಿಬದ್ಧಂಚಹಸ್ತಿಮೇಹೀಪ್ರಮೇಹತಿ || ೧೮ ||

ಹಸ್ತಿಮೇಹವೆನ್ನುವುದರಲ್ಲಿ ಮೂತ್ರವು ಹೊರಡುವಾಗ್ಯೆ ವೇಗರಹಿತವಾಗಿರುತ್ತದೆ, ಅಂದರೆ ಮೂತ್ರವು ವೇಗಯುಕ್ತವಾಗಿ ಹೊರಡುತ್ತಿರುವುದಿಲ್ಲ, ಮೂತ್ರ

ದ ಜೊತೆಯಲ್ಲಿ ದೇಹಧಾತು ಸಂಬಂಧವಾದ ದ್ರವಗಳೂ ಸೇರಿರುತ್ತವೆ, ಆಗಾಗ್ಯೆ ಮೂತ್ರವು ತಡೆದು ತಡೆದು ಹೊರಡುತ್ತಿರುತ್ತದೆ, ಈ ಲಕ್ಷಣಗಳಿರುತ್ತವೆ.

ಅವಿಪಾಕೋರುಚಿಶ್ಛರ್ದಿರ್ನಿದ್ರಾಕಾಸಸ್ಸಪೀನಸಃ ॥
ಉಪದ್ರವಾಃಪ್ರಜಾಯಂತೇಮೇಹಾನಾಂಕಫಜನ್ಮನಾಂ ॥ ೧೯ ॥

ಕಫಪ್ರಕೋಪದಿಂದ ಉತ್ಪನ್ನವಾದ ಮೇಹರೋಗದಲ್ಲಿ ಕಾಣಬರುವ ಇತರ ಉಪದ್ರವಗಳನ್ನು ವಿವರಿಸುತ್ತಾನೆ—ಆಹಾರ ಜೀರ್ಣವಾಗುತ್ತಿರುವುದಿಲ್ಲ, ಬಾಯಿರುಚಿ ತಪ್ಪಿಹೋಗಿರುತ್ತದೆ, ವಮನವಾಗುತ್ತಿರುತ್ತದೆ, ನಿದ್ರೆ ಹೆಚ್ಚು, ನೆಗಡಿ ಕೆಮ್ಮು ಇದ್ದೇ ಇರುತ್ತದೆ.

ಬಸ್ತಿಮೇಹನಯೋಸ್ತೋದೋಮುಷ್ಕಾವದರಣಂಜ್ವರಃ ॥
ದಾಹಸ್ತೃಷ್ಣಾಮ್ಲಿಕಾಮೂರ್ಛಾವಿಡ್ಭೇದಃಪಿತ್ತಜನ್ಮನಾಂ ॥ ೨೦ ॥

ಪಿತ್ತಪ್ರಕೋಪಜನ್ಯವಾದ ಮೇಹರೋಗದಲ್ಲಿ ಕಾಣಬರುವ ಇತರ ಉಪದ್ರವಗಳೆಂದರೆ ಮೂತ್ರಕೋಶ ಮತ್ತು ಶಿಶ್ನ ಇವುಗಳಲ್ಲಿ ನೋವು, ವೃಷಣಗಳು ಒಡೆತ ಬರುವುದು, ಜ್ವರ, ಮೈಯ್ಯುರಿ, ಬಾಯಾರಿಕೆ, ಹುಳಿತೇಗು, ಮೂರ್ಛೆ ಬರುವುದು, ಮಲಪ್ರವೃತ್ತಿ ಪದೇ ಪದೇ ಆಗುವುದು ಈ ಲಕ್ಷಣಗಳಿರುತ್ತವೆ.

ವಾತಜಾನಾಮುದಾವರ್ತಃಕಂಪಹೃದ್ಗ್ರಹಲೋಲತಾಃ ॥
ಶೂಲಮುನ್ನಿದ್ರತಾಶೋಷಃಕಾಸಶ್ವಾಸಶ್ಚಜಾಯತೆ ॥ ೨೧ ॥

ವಾತಪ್ರಕೋಪಜನ್ಯವಾದ ಮೇಹರೋಗದಲ್ಲಿ ತೋರಿ ಬರುವ ಇತರ ಉಪದ್ರವಗಳೆಂದರೆ ಉದಾವರ್ತವೆಂಬ ವಾತರೋಗದ ಲಕ್ಷಣಗಳು, ಮೈನಡುಗುವುದು, ಎದೆ ಹಿಡಿದುಕೊಳ್ಳುವುದು, ಬುದ್ಧಿ ಸ್ತಿಮಿತವಾಗಿರುವುದಕ್ಕಿಲ್ಲ, ಶೂಲೆ, ನಿದ್ರಾನಾಶ, ಕ್ರಮೇಣ ದೇಹವೆಲ್ಲಾ ಶುಷ್ಕವಾಗುತ್ತ ಬರುವುದು, ಕೆಮ್ಮು, ಉಬ್ಬಸ, ಇವುಗಳೆಲ್ಲವೂ ಉಂಟಾಗುತ್ತವೆ.

ಯಥೋಕ್ತೋಪದ್ರವಾರಿಷ್ಟಮತಿಪ್ರಸ್ರುತಮೇವಚ ॥
ಪಿಡಕಾಪೀಡಿತಂಗಾಢಃಪ್ರಮೇಹೋಹಂತಿಮಾನವಂ ॥ ೨೨ ॥

ಹಿಂದೆ ಹೇಳಿದ ಉಪದ್ರವಗಳು ಮತ್ತು ಅಸಾಧ್ಯ ಲಕ್ಷಣಗಳು ಇವುಗಳಿರುವುದು, ಮೂತ್ರವು ಅತಿಯಾಗಿರುವುದು, ಮೈಯ್ಯಲ್ಲಿ ಕುರುಗಳೆದ್ದಿರುವುದು, ಹೀಗಿರುವವನನ್ನು ಮೇಹರೋಗನು ಕೊಂದುಹಾಕುತ್ತದೆ.

**ಜಾತಃಪ್ರಮೇಹೀಮಧುಮೇಹಿನೋವಾನಸಾಧ್ಯಉಕ್ತಸ್ಸಹಿ ಬೀಜದೋಷಾತ್ ॥**
**ಯೇಚಾಪಿಕೇಚಿತ್ಕುಲಜಾವಿಕಾರಾಭವಂತಿತಾಂಸ್ತಾನ್ಪ್ರವದಂತ್ಯ ಸಾಧ್ಯಾನ್ ॥ ೨೩ ॥**

ಮಧುಮೇಹವುಳ್ಳವನು ಗರ್ಭಾದಾನ ಮಾಡೋಣದರಿಂದ ಹುಟ್ಟತಕ್ಕವನಿಗೆ ಮೇಹರೋಗವು ಪ್ರಾಪ್ತವಾದರೆ ಅದು ಗುಣವಾಗುವುದಿಲ್ಲ, ಅಸಾಧ್ಯವೆಂದು ತಿಳಿಯಬೇಕು. ಏತಕ್ಕೆಂದರೆ ಮೇಹರೋಗವು ಬೀಜದಲ್ಲಿಯೇ ಅನುವರ್ತಿಸಿಕೊಂಡು ಬಂದಿರುವುದರಿಂದ ಗುಣವಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು. ಇನ್ನೂ ಇದರಂತೆಯೇ ವಂಶಪರಂಪರೆಯಿಂದ ಬಂದ ಶ್ವಾಸ, ಅರ್ಶಸ್ಸು ಮೊದಲಾದ ವಿಕಾರಗಳು ಕೂಡ ಅಸಾಧ್ಯಗಳೆಂದೇ ನಿರ್ಣಯಿಸಿಕೊಳ್ಳತಕ್ಕದ್ದು.

**ಸರ್ವಏವಪ್ರಮೇಹಾಸ್ತುಕಾಲೇನಾಪ್ರತಿಕಾರಿಣಃ ॥**
**ಮಧುಮೇಹತ್ವಮಾಯಾಂತಿತದಾಸಾಧ್ಯಾಭವಂತಿಹಿ ॥ ೨೪ ॥**
**ಮಧುಮೇಹೇಮಧುಸಮಂಜಾಯತೇಸಕಿಲದ್ವಿಧಾ ॥**
**ಕ್ರುದ್ಧೇಧಾತುಕ್ಷಯಾದ್ವಾಯೌದೋಷಾವೃತಪಥೇಥವಾ ॥ ೨೫ ॥**
**ಆವೃತೋದೋಷಲಿಂಗಾನಿಸೋನಿಮಿತ್ತಂಪ್ರದರ್ಶಯನ್ ॥**
**ಕ್ಷಣಾತ್ಕ್ಷೀಣಃಕ್ಷಣಾತ್ಪೂರ್ಣೋಭಜತೇಕೃಚ್ಛ್ರಸಾಧ್ಯತಾಂ ೨೬**
**ಮಧುರಂಯಚ್ಚಮೇಹೇಷುಪ್ರಾಯೋಮಧ್ವಿವಮೇಹತಿ ॥**
**ಸರ್ವೇಽಪಿಮಧುಮೇಹಾಖ್ಯಾಮಾಧುರ್ಯಾಚ್ಚತನೋರತಃ ॥ ೨೭ ॥**

ಹಿಂದೆ ಹೇಳಿದ ಇಪ್ಪತ್ತು ವಿಧವಾದ ಮೇಹರೋಗವೂ ಸಕಾಲದಲ್ಲಿ ಚಿಕಿತ್ಸೆ ಮಾಡದೆ ಹೋದಲ್ಲಿ ಮಧುಮೇಹವಾಗಿ ಪರಿಣಮಿಸಿ ಚಿಕಿತ್ಸೆಗೆ ಅಸಾಧ್ಯವೆಂಬ ಸ್ಥಿತಿಯನ್ನು ಹೊಂದುತ್ತವೆ, ಮಧುಮೇಹದ ಸ್ಥಿತಿಗೆ ಬಂದರೆ ಚಿಕಿತ್ಸೆಯಿಂದ ಫಲವಿಲ್ಲವೆಂದು ತಾತ್ಪರ್ಯ, ಮಧುಮೇಹದಲ್ಲಿ ಮೂತ್ರವು ಜೇನುತುಪ್ಪದ ಬಣ್ಣಕ್ಕೆ ಬರುತ್ತದೆ, ಈ ಮಧುಮೇಹವು ಎರಡು ವಿಧವಾಗಿ ಉಂಟಾಗಬಹುದು. ದೇಹಗತಗಳಾದ ಧಾತುಗಳು ಕ್ಷಯಿಸಿ ವಾತವು ಪ್ರಕುಪಿತನಾಗಿ ಮೇಹರೋಗವನ್ನು ಹುಟ್ಟಿಸುವುದು ಒಂದು ವಿಧ. ವಾಯುವಿನ ಮಾರ್ಗವನ್ನೇ ದೋಷಗಳು ಆವರಿಸಿಕೊಂಡು ಮೇಹರೋಗವನ್ನು ಹುಟ್ಟಿಸುವುದು ಮತ್ತೊಂದು ವಿಧ ಇವುಗಳ ನಡುವೆ ದೋಷಗಳಿಂದ ವಾಯುವು ಆವರಿಸಲ್ಪಟ್ಟು ಮೇಹರೋಗವನ್ನುಂಟುಮಾಡಿ ಕೆಲವು ವೇಳೆ ಪ್ರಕುಪಿತ ದೋಷಗಳ ಲಕ್ಷಣಗಳನ್ನು ತೋರಿಸುತ್ತಲೂ ಮತ್ತೆ ಕೆಲವು ವೇಳೆ ಲಕ್ಷಣಗಳನ್ನು ತೋರಿಸದೇನೂ ಕ್ಷಣಮಾತ್ರದಲ್ಲಿ ಕಡಮೆಯಾಗುತ್ತಲೂ ಉತ್ತರ ಕ್ಷಣದಲ್ಲಿಯೇ ಹೆಚ್ಚಾಗುತ್ತಲೂ ಕಷ್ಟಸಾಧ್ಯಸ್ಥಿತಿಗೆ ಬರುತ್ತದೆ. ಮಧುಮೇಹವೆಂಬ ಹೆಸರು ಬರಲು ಕಾರಣವೇನಂದರೆ ಈ ಮಧು

ಮೇಹದಲ್ಲಿ ಮೂತ್ರವು ಸೀಯಾಗಿರುವುದರಿಂದಲೂ ಮತ್ತು ಜೇನಿನ ಬಣ್ಣದಂತಹ ಬಣ್ಣವೇ ಮೂತ್ರಕ್ಕೂ ಇರುವುದರಿಂದಲೂ ಮಧುಮೇಹರೋಗಿಯ ಶರೀರಗತವಾದ ರಕ್ತಮಾಂಸಗಳೆಲ್ಲವೂ ಮಧುರವೇ ಆಗಿರುವುದರಿಂದಲೂ ಇದಕ್ಕೆ ಮಧುಮೇಹವೆಂಬ ಹೆಸರು.

ಶರಾವಿಕಾಕಚ್ಛಪಿಕಾಜಾಲಿನೀವಿನತಾಲಜಿ ॥
ಮಸೂರಿಕಾಸರ್ಷಪಿಕಾಪುತ್ರಿಣೀಸವಿದಾರಿಕಾ ॥ ೨೮ ॥
ವಿದ್ರಧಿಶ್ಚೇತಿಪಿಟಿಕಾಃಪ್ರಮೇಹೋಪೇಕ್ಷಯಾದಶ ॥
ಸಂಧಿಮರ್ಮಸುಜಾಯಂತೆಮಾಂಸಲೇಷುಚಧಾಮಸು ॥ ೨೯ ॥

ಮೇಹರೋಗವನ್ನು ಸಕಾಲದಲ್ಲಿ ಚಿಕಿತ್ಸೆ ಮಾಡದೆ ಉಪೇಕ್ಷೆಮಾಡೋಣದರಿಂದ ರೋಗದ ವಿಷವು ದೇಹಾದ್ಯಂತ ರಕ್ತದಲ್ಲಿಯೂ ವ್ಯಾಪಿಸಿ ಶರಾವಿಕ, ಕಚ್ಛಪಿಕ, ಜಾಲಿನಿ, ವಿನತ, ಅಲಜಿ, ಮಸೂರಿಕ, ಸರ್ಷಪಿಕ, ಪುತ್ರಿಣಿ, ವಿದಾರಿಕ, ವಿದ್ರಧಿ ಎಂಬ ಹೆಸರಿನ ಹತ್ತು ವಿಧಗಳಾದ ಹುಣ್ಣುಗಳನ್ನು ಉಂಟುಮಾಡುತ್ತದೆ. ಈ ಹುಣ್ಣುಗಳು ದೇಹದ ಸಂಧಿ ಪ್ರದೇಶಗಳಲ್ಲಿ ಮರ್ಮಸ್ಥಾನಗಳಲ್ಲಿ ಮಾಂಸವು ಹೆಚ್ಚಾಗಿರುವ ಪ್ರದೇಶಗಳಲ್ಲಿ ಹೀಗೆ ಅವಕಾಶ ಸಿಕ್ಕಿದ ಕಡೆಯಲ್ಲೆಲ್ಲಾ ಉಂಟಾಗುತ್ತವೆ.

ಅಂತೋನ್ನತಾತುತದ್ರೂಪಾನಿಮ್ನಾಮಧ್ಯಾಶರಾವಿಕಾ ॥
ಗೌರಸರ್ಷಪಸಂಸ್ಥಾನಾತತ್ಪ್ರಮಾಣಾಚಸರ್ಷಪೀ ॥ ೩೦ ॥
ಸದಾಹಾಕೂರ್ಮಸಂಸ್ಥಾನಾಜ್ಞೇಯಾಕಚ್ಛಪಿಕಾಬುಧೈಃ ॥
ಜಾಲಿನೀತೀವ್ರದಾಹಾತುಮಾಂಸಜಾಲಸಮಾವೃತಾ ॥ ೩೧ ॥
ಅವಗಾಢರುಜಾಕ್ಲೇದಾಪೃಷ್ಠೇವಾಪ್ಯುದರೇಪಿವಾ ॥
ಮಹತೀಪಿಡಕಾನೀಲಾವಿನತಾನಾಮಸಾಸ್ಮೃತಾ ॥ ೩೨ ॥
ಮಹತ್ಯಲ್ಪಚಿತಾಜ್ಞೇಯಾಪಿಡಕಾಚಾಪಿಪುತ್ರಿಣೀ ॥
ಮಸೂರಾಕೃತಿಸಂಸ್ಥಾನಾವಿಜ್ಞೇಯಾತುಮಸೂರಿಕಾ ॥ ೩೩ ॥
ರಕ್ತಾಸಿತಾಸ್ಫೋಟಚಿತಾದಾರುಣಾತ್ವಲಜೀಭವೇತ್ ॥
ವಿದಾರೀಕಂದವದ್ವೃತ್ತಾಕಠಿನಾಚವಿದಾರಿಕಾ ॥ ೩೪ ॥
ವಿದ್ರಧೇರ್ಲಕ್ಷಣೈರ್ಯುಕ್ತಾಜ್ಞೇಯಾವಿದ್ರಧಿಕಾತುಸಾ ॥
ಯೇಯನ್ಮಯಾಸ್ಮೃತಾಮೇಹಾಸ್ತೇಷಾಮೇತಾಸ್ತುತನ್ಮಯಾಃ ೩೫
ವಿನಾಪ್ರಮೇಹಮಪ್ಯೇತಾಜಾಯಂತೆದುಷ್ಟಮೇದಸಃ ॥
ತಾವಚ್ಚೈತಾನಲಕ್ಷ್ಯಂತೆಯಾವದ್ವಾಸ್ತುಪರಿಗ್ರಹಾಃ ॥ ೩೬ ॥

ಮೇಹರೋಗದ ಹುಣ್ಣುಗಳ ಲಕ್ಷಣವನ್ನು ಹೇಳುತ್ತಾನೆ. ಶರಾವೆ ಎಂಬ ಮಣ್ಣಿನ ಪಾತ್ರೆಯನ್ನು ಮಗುಚಿ ಹಾಕಿದ ಹಾಗಿರುವ ವ್ರಣಕ್ಕೆ ಶರಾವಿಕಾ ಎಂದು ಹೆಸರು. ಇದು ಕೊನೆ ಸುತ್ತಿನಲ್ಲಿ ಎತ್ತರವಾಗಿಯೂ ಮಧ್ಯದಲ್ಲಿ ತಗ್ಗಾಗಿಯೂ ಇರುತ್ತದೆ. ಸರ್ಷಪಿಕಾ ಎಂಬ ಮೇಹವ್ರಣವು ಬಿಳಿಯ ಸಾಸುವೆಯ ಕಾಳಿನ ಹಾಗೆ ದುಂಡಾಗಿ ಅದೇ ಆಕಾರವುಳ್ಳದ್ದಾಗಿರುತ್ತದೆ. ಕಚ್ಛಪಿಕಾ ಎಂಬ ವ್ರಣವು ಆಮೆಯಂತೆ ಶರೀರದ ಮೇಲಿದ್ದುಕೊಂಡು ಉರಿಯಿಂದ ಕೂಡಿಕೊಂಡಿರುತ್ತದೆ. ಜಾಲಿನೀ ಎಂಬ ಮೇಹವ್ರಣವು ಬಲೆಯಂತಿರುವ ಮಾಂಸಖಂಡಗಳಿಂದ ವ್ಯಾಪ್ತವಾಗಿ ಅತ್ಯಂತ ಉರಿಯಿಂದ ಕೂಡಿರುತ್ತದೆ. ವಿನತಾ ಎಂಬ ಮೇಹವ್ರಣವು ಬೆನ್ನಿನ ಮೇಲಾಗಲೀ ಹೊಟ್ಟೆಯ ಮೇಲಾಗಲೀ ನೀಲವರ್ಣವಾಗಿ ಏಳುತ್ತದೆ, ವ್ರಣವು ಬಹಳ ದೊಡ್ಡದಾಗಿರುತ್ತದೆ, ನೋವು ಬಹಳವಾಗುತ್ತದೆ, ಕೀವು ಸಹ ಬಹಳವಾಗಿರುತ್ತದೆ. ಪುತ್ರಿಣೀ ಎಂಬ ವ್ರಣವು ಒಂದು ದೊಡ್ಡ ವ್ರಣ, ಅದರ ಹತ್ತರ ಮತ್ತೊಂದು ಸಣ್ಣ ವ್ರಣ ಈ ರೀತಿಯಾಗಿರುತ್ತದೆ. ಮಸೂರ ಎಂಬ ಧಾನ್ಯದ ಕಾಳಿನಷ್ಟು ಆಕಾರವುಳ್ಳ ಮತ್ತು ಅದರಂತಹ ಬಣ್ಣವೇ ಉಳ್ಳ ವ್ರಣಗಳಿಗೆ ಮಸೂರಿಕ ಎಂಬದಾಗಿ ಹೆಸರು. ಕೆಲವು ಕೆಂಪು ವರ್ಣದ ಗುಳ್ಳೆಗಳು ಮತ್ತೆ ಕೆಲವು ಬಿಳಿಯ ಗುಳ್ಳೆಗಳು ಹೀಗಿದ್ದುಕೊಂಡು ಭಯಂಕರವಾದ ವೇದನೆಗಳಿಂದ ಕೂಡಿರುವುದಕ್ಕೆ ಅಲಜಿ ಎಂಬದಾಗಿ ಹೆಸರು. ಭೂಸಕ್ಕರೆಯ ಗೆಡ್ಡೆಯಂತೆ ದುಂಡಗೆ ದಪ್ಪವಾಗಿ ಕಠಿನವಾಗಿರುವ ವ್ರಣಕ್ಕೆ ವಿದಾರಿಕಾ ಎಂಬದಾಗಿ ಹೆಸರು. ವಿದ್ರಧಿ ಎಂಬ ಬಾವಿನ ಲಕ್ಷಣಗಳಿಂದ ಕೂಡಿಕೊಂಡಿರುವ ಮೇಹವ್ರಣಕ್ಕೆ ವಿದ್ರಧಿ ಎಂಬದಾಗಿ ಹೆಸರು. ಮೇಹರೋಗಿಗಳಿಗೆ ಯಾವ ದೋಷಪ್ರಕೋಪದಿಂದ ಮೇಹರೋಗವು ಹುಟ್ಟಿರುತ್ತದೆಯೋ ಅದೇ ದೋಷಯುಕ್ತವಾಗಿಯೇ ಮೇಹವ್ರಣಗಳೂ ಹುಟ್ಟುತ್ತವೆ, ಈ ಮೇಹವ್ರಣಗಳು ಪ್ರಮೇಹವೆಂಬ ಮೇಹರೋಗವಿಲ್ಲದಿದ್ದರೂ ಶರೀರಗತವಾದ ಮೇದಸ್ಸು ದುಷ್ಟವಾಯಿತೆಂದರೆ ಹುಟ್ಟುತ್ತವೆ, ಆದರೆ ಹುಣ್ಣುಗಳು ದೊಡ್ಡದಾಗುವವರೆವಿಗೂ ಕಾಣುವುದಿಲ್ಲ.

ಗುದೇಹೃದಿಶಿರಸ್ಯಂಸೇಪೃಷ್ಠೇಮರ್ಮಸುಚೋತ್ಥಿತಾಃ ॥
ಸೋಪದ್ರವಾದುರ್ಬಲಾಗ್ನೇಃಪೀಡಕಾಃಪರಿವರ್ಜಯೇತ್ ॥ ೩೭ ॥

ಗುದದ್ವಾರದಲ್ಲಿ, ಹೃದಯಪ್ರದೇಶದಲ್ಲಿ, ತಲೆಯಲ್ಲಿ, ಭುಜದಮೇಲೆ, ಅಂಡಿನ ಮೇಲೆ, ಮರ್ಮಸ್ಥಾನಗಳಲ್ಲಿ ಈ ವ್ರಣಗಳೆದ್ದು ದುಶ್ಚಿನ್ಹೆಗಳು ಕಾಣುತ್ತಲಿದ್ದು ಅಗ್ನಿಮಾಂದ್ಯವೂ ಇದ್ದಲ್ಲಿ ಅಂತಹ ಪ್ರಮೇಹದ ಹುಣ್ಣುಗಳನ್ನು ಬಿಟ್ಟುಬಿಡತಕ್ಕದ್ದು. ಅಂದರೆ ಚಿಕಿತ್ಸೆಯಿಂದ ವಾಸಿಯಾಗುವುದಿಲ್ಲವೆಂಬ ಭಾವ.

ಇಲ್ಲಿಗೆ ಪ್ರಮೇಹಪಿಡಕಾನಿದಾನ ಸಂಪೂರ್ಣ.

# ಮೇದೋರೋಗನಿದಾನ.

**ಅವ್ಯಾಯಾಮದಿವಾಸ್ವಪ್ನ ಶ್ಲೇಷ್ಮಲಾಹಾರಸೇವಿನಃ ॥**
**ಮಧುರೋನ್ನರಸಃಪ್ರಾಯಃಸ್ನೇಹಾನ್ಮೇದಃಪ್ರವರ್ಧಯೇತ್ ॥೧॥**
**ಮೇದಸಾವೃತಮಾರ್ಗತ್ವಾತ್ಪುಷ್ಯಂತ್ಯನ್ಯೇನಧಾತವಃ ॥**
**ಮೇದಸ್ತು ಚೀಯತೇತಸ್ಮಾದಶಕ್ತಸ್ಸರ್ವಕರ್ಮಸು ॥ ೨ ॥**
**ಕ್ಷುದ್ರಶ್ವಾಸತೃಷಾಮೋಹಸ್ವಪ್ನಕ್ರಥನಸಾದನೈಃ ॥**
**ಯುಕ್ತಃಕ್ಷುತ್ ಸ್ವೇದದುರ್ಗಂಧೈರಲ್ಪಪ್ರಾಣೋಲ್ಪಮೈಥುನಃ ।೩।**
**ಮೇದಸ್ತುಸರ್ವಭೂತಾನಾಮುದರೇಷ್ವೇವತಿಷ್ಠತಿ ॥**
**ಅತಏವೋದರೇವೃದ್ಧಿಃಪ್ರಾಯೋಮೇದಸ್ವಿನೋಭವೇತ್ ॥ ೪ ॥**

ಮೇದೋರೋಗವೆಂದರೆ ಕೊಬ್ಬು ಹೆಚ್ಚಿ ಮನುಷ್ಯನಿಗೆ ಬೊಜ್ಜು ಬರುವುದು. ಇದೊಂದು ರೋಗ. ಇದಕ್ಕೆ ಕಾರಣಗಳೇನೆಂದರೆ ಶರೀರಕ್ಕೆ ಆಯಾಸವನ್ನು ಕೊಡತಕ್ಕ ಕೆಲಸಗಳನ್ನು ಮಾಡದೆ ಸುಮ್ಮನೆ ಕುಳಿತಿರುವುದು. ಹಗಲುಹೊತ್ತು ನಿದ್ರೆ ಮಾಡುವುದು. ಶ್ಲೇಷ್ಮವರ್ಧಕಗಳಾದ ಆಹಾರಗಳನ್ನು ತಿನ್ನುವುದು. ಸೀಯನ್ನು ಹೆಚ್ಚಿಗೆ ತಿನ್ನುವುದು. ಈ ಕಾರಣಗಳಿಂದ ಶರೀರದಲ್ಲಿ ಜಿಡ್ಡು ಹೆಚ್ಚಾಗಿ ಮೇದಸ್ಸು ವೃದ್ಧಿಯಾಗುತ್ತದೆ. ಅಭಿವೃದ್ಧಿಯಾದ ಮೇದಸ್ಸು ಧಾತುಗಳ ಸ್ಥಾನವನ್ನೆಲ್ಲಾ ತಾನೇ ಆಕ್ರಮಿಸುವುದರಿಂದ ಇತರ ಧಾತುಗಳು ವೃದ್ಧಿಯಾಗುವುದಕ್ಕೆ ಮಾರ್ಗವೇ ಇರುವುದಿಲ್ಲ. ಪ್ರತಿ ದಿವಸದಲ್ಲಿಯೂ ಕ್ರಮವಾಗಿ ಮೇದಸ್ಸು ವೃದ್ಧಿಯಾಗುತ್ತ ಬಂದು ಶರೀರವು ಸ್ಥೂಲವಾಗಿ ಸ್ವಾಧೀನತಪ್ಪಿಹೋಗುತ್ತದೆ. ಯಾವ ಕೆಲಸಮಾಡುವುದಕ್ಕೂ ಶಕ್ತಿಯಾಗಲೀ ಉತ್ಸಾಹವಾಗಲೀ ಇರುವುದಿಲ್ಲ. ಸ್ವಲ್ಪ ಕೆಲಸಮಾಡಿದರೂ ಉಬ್ಬಸ ಬರುವುದು. ಬಾಯಾರಿಕೆಯಾಗುವುದು. ಒಂದು ಬಗೆಯ ಮತ್ತತೆ ಬರುವುದು; ನಿದ್ರೆ ಬರುವುದು; ಅಕಸ್ಮಾತ್ತಾಗಿ ಉಸಿರು ಕಟ್ಟಿಹೋಗುವುದು; ಜೀರ್ಣಶಕ್ತಿ ಕೆಟ್ಟುಹೋಗುವುದು; ಯಾವಾಗ್ಯೂ ಶೀತನು ಬರುತ್ತಿರುವುದು; ಬೆವರು ಹೆಚ್ಚು; ಬೆವರಿನಲ್ಲಿ ದುರ್ಗಂಧ ಜಾಸ್ತಿ; ಈ ಲಕ್ಷಣಗಳೆಲ್ಲಾ ತೋರುತ್ತವೆ. ಶರೀರದಲ್ಲಿ ಶಕ್ತಿ ಮಕ್ಕಳಿಗಿರುವಷ್ಟು ಕೂಡಾ ಇರುವುದಿಲ್ಲ. ಮೈಥುನವೆಂದರೆ ಸ್ತ್ರೀಸಂಗದಲ್ಲಿ ಸರಿಯಾದ ಅಪೇಕ್ಷೆ ಇರುವುದಿಲ್ಲ. ಮೇದಸ್ಸು ಯಾವಾಗಲೂ ಶರೀರದ ಇತರ ಭಾಗಗಳಿಗಿಂತ ಹೊಟ್ಟೆಯಲ್ಲಿಯೇ ಜಮೆಯಾಗುವುದು ಜಾಸ್ತಿ; ಆದ್ದರಿಂದಲೇ ಮೇದೋರೋಗಿಗಳಿಗೆ ಹೊಟ್ಟೆಯೇ ದಪ್ಪನಾಗಿ ಬೊಜ್ಜು ಬೆಳೆಯುತ್ತ ಬರುತ್ತದೆ.

**ಮೇದಸಾವೃತಮಾರ್ಗತ್ವಾದ್ವಾಯುಃಕೋಷ್ಠೇವಿಶೇಷತಃ ॥**
**ಚರನ್‌ಸಂಧುಕ್ಷಯತ್ಯಗ್ನಿಮಾಹಾರಂಶೋಷಯತ್ಯಪಿ ॥ ೫ ॥**
**ತಸ್ಮಾತ್‌ಸಶೀಘ್ರಂಜರಯತ್ಯಾಹಾರಮಭಿಕಾಂಕ್ಷತಿ ॥**

**ವಿಕಾರಾಂಶ್ಚಾಪ್ಯತೋಘೋರಾನ್ ಕಾಂಶ್ಚಿತ್ಕಾಲವ್ಯತಿಕ್ರಮಾತ್ ।೬।**
**ಏತಾವುಪದ್ರವಕರೌ ವಿಶೇಷಾದಗ್ನಿಮಾರುತೌ ॥**
**ಏತೌ ತು ದಹತಃ ಸ್ಥೂಲಂ ವನದಾವೋ ವನಂ ಯಥಾ ॥ ೭ ॥**
**ಮೇದಸ್ಯತೀವ ಸಂವೃದ್ಧೇ ಸಹಸೈವಾನಿಲಾದಯಃ ॥**
**ವಿಕಾರಾನ್ ದಾರುಣಾನ್ ಕೃತ್ವಾ ನಾಶಯಂತ್ಯಾಶು ಜೀವಿತಂ ॥ ೮ ॥**
**ಮೇದೋಮಾಂಸಾತಿವೃದ್ಧತ್ವಾಚ್ಚಲಸ್ಫಿಗುದರಸ್ತನಃ**
**ಅಯಥೋಪಚಯೋತ್ಸಾಹೋ ನರೋಽತಿಸ್ಥೂಲ ಉಚ್ಯತೇ ॥ ೯ ॥**

ಈ ಮೇದೋರೋಗಿಗಳಿಗೆ ಮೇದಸ್ಸು ಶರೀರದ ಮಾರ್ಗಗಳನ್ನೆಲ್ಲಾ ಆವರಿಸಿಕೊಂಡು ತುಂಬಿಕೊಂಡಿರೋಣದರಿಂದ ವಾಯುವು ಕೋಷ್ಠದಲ್ಲಿ ಸಂಚರಿಸುತ್ತ ಜಠರಾಗ್ನಿಯು ಅತಿಯಾಗಿ ವೃದ್ಧಿಯಾಗುವಂತೆ ಮಾಡಿ ಆಹಾರವನ್ನು ಶೋಷಿಸುತ್ತದೆ. ಈ ಕಾರಣದಿಂದಲೇ ಮೇದೋ ರೋಗಿಗಳಿಗೆ ಆಹಾರವು ಜೀರ್ಣವಾಗುವುದು ಬಹು ಬೇಗ ಮತ್ತು ಹಸಿವಾಗುವುದೂ ಬೇಗವೇ ಸ್ವಲ್ಪ ಮಾತ್ರ ಆಹಾರ ತೆಗೆದುಕೊಳ್ಳುವುದಕ್ಕೆ ಸಾವಕಾಶವಾದರೂ ಅದರಿಂದ ಭಯಂಕರಗಳಾದ ಉದರ ಬಾಧ ಮೊದಲಾದ ವಿಕಾರಗಳನ್ನು ಹೊಂದುತ್ತಾನೆ. ಈ ಮೇದೋ ರೋಗಿಗಳಿಗೆ ಉಂಟಾಗತಕ್ಕ ಅತ್ಯಗ್ನಿ ಮತ್ತು ಅತಿವಾಯುಗಳು ಕೆಟ್ಟ ಉಪದ್ರವಗಳನ್ನೆಲ್ಲಾ ಉಂಟುಮಾಡುತ್ತವೆ. ಈ ಅಗ್ನಿ ವಾಯುಗಳು ಕಾಳ್ಗಿಚ್ಚು ಕಾಡನ್ನು ಸುಡುವಂತೆ ಕ್ರಮೇಣ ಈ ಶರೀರವನ್ನೇ ಸುಡುತ್ತವೆ. ಶರೀರದಲ್ಲಿ ಮೇದಸ್ಸು ಹೆಚ್ಚು ಪ್ರಮಾಣದಿಂದ ಕೂಡುತ್ತ ಬಂದಿತೆಂದರೆ ದೇಹಗತಗಳಾದ ವಾತ ಪಿತ್ತ ಶ್ಲೇಷ್ಮಗಳು ಏಕದಾ ಪ್ರಕೋಪವನ್ನು ಹೊಂದಿ ನಾನಾ ವಿಧಗಳಾದ ವಿಕಾರಗಳನ್ನುಂಟುಮಾಡಿ ಪ್ರಾಣವನ್ನೇ ನಾಶಮಾಡಿ ಬಿಡುತ್ತವೆ. ಮೇದಸ್ಸು ವೃದ್ಧಿಯಾಯಿತೆಂದರೆ ದೇಹದಲ್ಲಿರುವ ಮಾಂಸಗಳೆಲ್ಲಾ ವೃದ್ಧಿಯಾಗಿ ಅಂಡುಗಳು, ಹೊಟ್ಟೆ, ಸ್ತನಗಳು ಇವುಗಳು ಎಲ್ಲಾ ದಪ್ಪವಾಗಿ ತಿರುಗಾಡುವಾಗಲೆಲ್ಲಾ ಕುಲುಕುತ್ತ ಒಂದು ಬಗೆಯ ವಿಕಾರವನ್ನುಂಟುಮಾಡುತ್ತವೆ. ಮೊದಲಿನ ಉತ್ಸಾಹ, ಲವಲವಿಕೆ ಇವುಗಳಿಲ್ಲದೆ ಮನುಷ್ಯನು ಬೊಜ್ಜನೆಂದು ಹೇಳಿಸಿಕೊಳ್ಳುತ್ತ ಕಾಲಕಳೆಯಬೇಕಾಗುತ್ತದೆ.

ಇಲ್ಲಿಗೆ ಮೇದೋರೋಗನಿದಾನ ಸಂಪೂರ್ಣ.

---

## ಉದರನಿದಾನ.

**ರೋಗಾಸ್ಸರ್ವೇಽಪಿ ಮಂದೇಽಗ್ನೌ ಸುತರಾಮುದರಾಣಿ ಚ ॥**
**ಅಜೀರ್ಣಾನ್ಮಲಿನೈಶ್ಚಾನ್ನೈರ್ಜಾಯಂತೇ ಮಲಸಂಚಯಾತ್ ॥೧॥**

ಉದರನಿದಾನವನ್ನು ಹೇಳುತ್ತಾನೆ. ಉದರವೆಂದರೆ ಸಾಮಾನ್ಯವಾಗಿ ಕೈ ಕಾಲುಗಳೆಲ್ಲಾ ಕೃಶವಾಗುತ್ತ ಹೊಟ್ಟೆ ದಪ್ಪನಾಗುತ್ತ ಬರುವ ರೋಗಕ್ಕೆ ಹೆಸರು.

ಈ ರೀತಿಯಾಗಲು ಕಾರಣವೇನೆಂದರೆ—ಜಠರಾಗ್ನಿ ಪಾಟವ ಕಡಮೆಯಾಯಿತೆಂದರೆ ಆಗ್ಯೆ ಸಮಸ್ತ ರೋಗಗಳೂ ಹುಟ್ಟುತ್ತವೆ. ಉದರರೋಗವಂತೂ ಅಗ್ನಿಮಾಂದ್ಯದಿಂದಲೇ ಹುಟ್ಟತಕ್ಕದ್ದೆಂಬ ವಿಚಾರದಲ್ಲಿ ಅನುಮಾನವಿಲ್ಲ. ಅಜೀರ್ಣದೋಷದಿಂದಲೂ ಮಲಿನಗಳಾದ ಆಹಾರಗಳಿಂದಲೂ ಹೊಟ್ಟೆಯಲ್ಲಿ ಮಲಸಂಚಯವಾಗೋಣದರಿಂದಲೂ ಅಂದರೆ ಆಗಾಗ್ಯೆ ಹೊಟ್ಟೆಯಲ್ಲಿ ನಿಲ್ಲಬಹುದಾದ ಮಲಗಳನ್ನು ಕ್ರಮವಾಗಿ ನಿವೃತ್ತಿ ಮಾಡಿಕೊಳ್ಳದೆ ಅಲ್ಲಿಯೇ ಸೇರುವುದಕ್ಕವಕಾಶಕೊಡೋಣದರಿಂದಲೂ ಉದರರೋಗವು ಹುಟ್ಟುತ್ತದೆ.

ರುಧ್ವಾಸ್ವೇದಾಂಬುವಾಹೀನಿದೋಷಾಸ್ರೋತಾಂಸಿಸಂಚಿತಾಃ ॥
ಪ್ರಾಣಾಗ್ನ್ಯಪಾನಾನ್ ಸಂದೂಷ್ಯಜನಯಂತ್ಯುದರಂನೃಣಾಂ ॥ ೨ ॥

ಈ ಉದರವು ಹುಟ್ಟತಕ್ಕ ಕ್ರಮವನ್ನು ಹೇಳುತ್ತಾನೆ—ಪ್ರಕೋಪಕಾರಣಗಳಿಂದ ಅಭಿವೃದ್ಧಿ ಹೊಂದಿದ ದೋಷಗಳು ದೇಹಗತಗಳಾದ ಬೆವರು ಬರುವ ನಾಡಿಗಳನ್ನು ಮತ್ತು ಜಲವಹಗಳಾದ ನಾಡಿಗಳನ್ನು ಸಹ ರೋಧಮಾಡಿ ಅಂದರೆ ಅವುಗಳ ಕಾರ್ಯ ನಡೆಯದಂತೆ ಮಾಡಿ ಪ್ರಾಣ ಮತ್ತು ಅಪಾನವಾಯುಗಳನ್ನು ಜಠರಾಗ್ನಿಯನ್ನು ಸಹ ಕೆಡಿಸಿ ಉದರರೋಗವನ್ನು ಉಂಟುಮಾಡುತ್ತವೆ.

ಆಧ್ಮಾನಂಗಮನೇಶಕ್ತಿರ್ದೌರ್ಬಲ್ಯಂದುರ್ಬಲಾಗ್ನಿತಾ ॥
ಶೋಥಸ್ಸದನಮಂಗಾನಾಂಸಂಗೋವಾತಪುರೀಷಯೋ ॥ ೩ ॥
ದಾಹಸ್ತಂದ್ರಾಚಸರ್ವೇಷುಜಠರೇಷುಭವಂತಿಹಿ ॥
ಪೃಥಗ್ದೋಷೈಸ್ಸಮಸ್ತೈಶ್ಚಪ್ಲೀಹಬದ್ಧಕ್ಷತೋದಕೈಃ ॥ ೪ ॥
ಸಂಭವಂತ್ಯುದರಾಣ್ಯಷ್ಟೌತೇಷಾಂಲಿಂಗಂಪೃಥಕ್ ಶೃಣು ॥

ಇದರ ಲಕ್ಷಣಗಳೇನೆಂದರೆ—ಹೊಟ್ಟೆ ಉಬ್ಬಿಕೊಂಡಿರುವುದು. ತಿರುಗಾಡಲು ಶಕ್ತಿಯಿರುವುದಿಲ್ಲ. ಶರೀರದಲ್ಲಿ ಬಲವಿರುವುದಕ್ಕಿಲ್ಲ—ಜಠರಾಗ್ನಿಪಾಟವವೂ ತಪ್ಪಿಹೋಗಿರುವುದು—ಕೈಕಾಲುಗಳಲ್ಲಿ ಬಾವು ಬಂದಿರುವುದು—ಅವಯವಗಳು ಕೃಶವಾಗುತ್ತಿರುವುದು, ಮಲಮೂತ್ರಗಳು ತಡದುಹೋಗಿರುವುದು, ಮೈಯಲ್ಲಿ ಉರಿಯುವುದು, ಆಲಸ್ಯ ಈ ಲಕ್ಷಣಗಳು ಸಾಮಾನ್ಯವಾಗಿ ಎಲ್ಲಾ ಉದರಗಳಲ್ಲಿಯೂ ಇರುತ್ತದೆ. ಈ ಉದರಗಳು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ. ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ಪ್ಲೀಹಾಭಿವೃದ್ಧಿಯಿಂದ ಹುಟ್ಟುವ ಉದರ, ಮಲಮೂತ್ರಗಳು ಬದ್ಧವಾಗಿ ಹುಟ್ಟುವ ಉದರ, ಕ್ಷತೋದರ, ಉದಕೋದರ ಎಂಬದಾಗಿ ಎಂಟು ವಿಧ. ಇವುಗಳ ಪ್ರತ್ಯೇಕ ಲಕ್ಷಣಗಳನ್ನು ಮುಂದೆ ಹೇಳುತ್ತಾನೆ.

ತತ್ರವಾತೋದರೇ ಶೋಥಃ ಪಾಣಿಪಾನ್ನಾಭಿಕುಕ್ಷಿಷು || ೫ ||
ಕುಕ್ಷಿಪಾರ್ಶ್ವೋದರಕಟೀಪೃಷ್ಠರುಕ್ ಪರ್ವಭೇದನಂ ||
ಶುಷ್ಕಕಾಸೋಂಗಮರ್ದೋಧೋಗುರುತಾಮಲಸಂಚಯಃ || ೬ ||
ಶ್ಯಾವಾರುಣತ್ವಗಾದಿತ್ವಮಕಸ್ಮಾದ್ವೃದ್ಧಿಹ್ರಾಸವತ್ ||
ಸತೋದಭೇದಮುದರಂ ತನುಕೃಷ್ಣಶಿರಾತತಂ || ೭ ||
ಆಧ್ಮಾತದೃತಿವಚ್ಛಬ್ದಮಾಹತಂ ಪ್ರಕರೋತಿ ಚ ||
ವಾಯುಶ್ಚಾತ್ರ ಸರುಕ್ ಶಬ್ದೋ ವಿಚರೇತ್ಸರ್ವತೋಗತಿಃ || ೮ ||

ಉದರರೋಗದ ಸಾಮಾನ್ಯ ಲಕ್ಷಣವನ್ನು ಹೇಳಿ ವಾತಪ್ರಕೋಪಜನ್ಯವಾದ ಉದರರೋಗದ ಲಕ್ಷಣವನ್ನು ಹೇಳುತ್ತಾನೆ. ವಾತಪ್ರಕೋಪಜನ್ಯವಾದ ಉದರರೋಗದಲ್ಲಿ ಕೈಯ್ಯಿ, ಕಾಲು, ಹೊಕ್ಕಳು, ಹೊಟ್ಟೆ ಇವುಗಳಲ್ಲಿ ಶೋಥವಿರುತ್ತದೆ. ಹೊಟ್ಟೆಯ ಪಾರ್ಶ್ವಗಳು—ಹೊಟ್ಟೆ, ಸೊಂಟ, ಪೃಷ್ಠಭಾಗ ಇವುಗಳಲ್ಲಿ ವೇದನೆಯಿರುತ್ತದೆ. ಕೀಲುಗಳಲ್ಲಿ ವಡತವಿರುತ್ತದೆ, ಒಣಕೆಮ್ಮಿರುತ್ತದೆ, ಮೈನೋತವಿರುತ್ತದೆ, ಶರೀರದ ಕೆಳಭಾಗದಲ್ಲಿ ಭಾರವಿರುತ್ತದೆ, ಹೊಟ್ಟೆಯಲ್ಲಿ ಮಲವು ಜಮೆಯಾಗಿರುತ್ತದೆ, ಚರ್ಮವು ಹೊಗೆಯ ಬಣ್ಣವಾಗುವುದು ಒಂದು ವೇಳೆ ಕೆಂಪು ಬಣ್ಣವಾಗುವುದು, ಹೊಟ್ಟೆಯು ಅಕಸ್ಮಾತ್ತಾಗಿ ದೊಡ್ಡದಾಗುವುದು ಹಾಗೆ ಕಡಮೆಯೂ ಆಗಿಬಿಡುವುದು ಎಂದರೆ ವೃದ್ಧಿಹ್ರಾಸಗಳು ನಿಯತವಿಲ್ಲ—ಹೊಟ್ಟೆಯಲ್ಲಿ ವ್ಯಥೆಯೂ ಶೂಲೆಯೂ ಉಂಟಾಗುವುದು, ಹೊಟ್ಟೆಯ ಮೇಲೆಲ್ಲಾ ಸೂಕ್ಷ್ಮಗಳಾದ ಕಪ್ಪು ನರಗಳು ಕಾಣಿಸಿಕೊಳ್ಳುವುದು, ಹೊಟ್ಟೆಯ ಮೇಲೆ ಚಿಟಿಗೆ ಹೊಡೆದರೆ ಗಾಳಿ ತುಂಬಿದ ಚರ್ಮದ ಚೀಲದಂತೆ ಶಬ್ದವಾಗುವುದು, ಹೊಟ್ಟೆಯಲ್ಲಿ ಗಾಳಿಯು ನೋವನ್ನೂ ಶಬ್ದವನ್ನೂ ಉಂಟುಮಾಡುತ್ತ ಸಂಚಾರ ಮಾಡುತ್ತಿರುವುದು ಈ ಲಕ್ಷಣಗಳೆಲ್ಲವೂ ಕಾಣುತ್ತಿರುತ್ತವೆ.

ಪಿತ್ತೋದರೇ ಜ್ವರೋ ಮೂರ್ಛಾ ದಾಹಸ್ತೃಟ್ ಕಟುಕಾಸ್ಯತಾ ||
ಭ್ರಮೋತಿಸಾರಃ ಪೀತತ್ವಂ ತ್ವಗಾದಾವುದರಂ ಹರಿತ್ || ೯ ||
ಪೀತತಾಮ್ರಶಿರಾನದ್ಧಂ ಸಸ್ವೇದಂ ಸೋಷ್ಮ ದಹ್ಯತೇ ||
ಧೂಮಾಯತೇ ಮೃದುಸ್ಪರ್ಶಂ ಕ್ಷಿಪ್ರಪಾಕಂ ಪ್ರದೂಯತೇ || ೧೦ ||

ಪಿತ್ತಪ್ರಕೋಪಜನ್ಯವಾದ ಉದರ ರೋಗದಲ್ಲಿ ಜ್ವರ, ಆಗಾಗ್ಯೆ ಮೂರ್ಛೆ ಬರುವುದು, ಮೈಯುರಿಯಾಗುತ್ತಿರುವುದು, ಬಾಯಿ ಕಹಿಯಾಗಿರುವುದು, ಬುದ್ಧಿ ಭ್ರಮೆಯಾಗುವುದು, ಅತಿಸಾರವೆಂಬ ಒಂದು ಬಗೆಯ ಭೇದಿಯಾಗುತ್ತಿರುವುದು, ಮೈಚರ್ಮ ಉಗುರು ಮೊದಲಾದುವುಗಳೆಲ್ಲಾ ಹಳದಿ ಬಣ್ಣವಾಗುವುದು, ಹೊಟ್ಟೆಯೂ ಹಳದಿ ಬಣ್ಣವಾಗುವುದು, ಹೊಟ್ಟೆಯ ಮೇಲೆಲ್ಲಾ ಹಳದಿ ಬಣ್ಣದ ಮತ್ತು ಕೆಂಪು ಬಣ್ಣದ ನರಗಳು ಕಾಣುತ್ತಿರುವುದು, ಹೊಟ್ಟೆಯು ಯಾವಾಗಲೂ

ಬೆವರುತ್ತಿರುವುದು, ಮುಟ್ಟಿ ನೋಡಿದರೆ ಬಿಸಿಯಾಗಿರುವುದು, ಒಳಗೆ ಸುಡುತ್ತಲೂ ಇರುವುದು, ಹೊಟ್ಟೆಯಲ್ಲೆಲ್ಲಾ ಹೊಗೆ ಹಾಯುವಂತೆ ತೋರುತ್ತಿರುವುದು, ಮುಟ್ಟಿದರೆ ಮೃದುವಾಗಿರುವುದು, ಕ್ಷಿಪ್ರಪಾಕಂ ಎಂದರೆ ಉದರವು ಜಾಗ್ರತೆಯಾಗಿ ಜಲೋದರವಾಗಿ ಪರಿಣಮಿಸಿ ಬಿಡುವುದು. ಯಾವಾಗ್ಯೂ ಹೊಟ್ಟೆಯಲ್ಲಿ ವ್ಯಥೆಯಾಗುತ್ತಿರುತ್ತದೆ—ಇವು ಲಕ್ಷಣಗಳು

ಶ್ಲೇಷ್ಮೋದರೇಂಗಸದನಂಸ್ವಾಪಶ್ವಯಥುಗಾರವಂ ||
ನಿದ್ರೋತ್ಕ್ಲೇಶೋರುಚಿಶ್ವಾಸಃಕಾಸಃಶುಕ್ಲತ್ವಗಾದಿತಾ || ೧೧ ||
ಉದರಂಸ್ತಿಮಿತಂಸ್ನಿಗ್ಧಂಶುಕ್ಲರಾಜೀತತಂಮಹತ್ ||
ಚಿರಾಭಿವೃದ್ಧಂಕಠಿನಂಶೀತಸ್ಪರ್ಶಂಗುರುಸ್ಥಿರಂ || ೧೨ ||

ಶ್ಲೇಷ್ಮ ಪ್ರಕೋಪಜನಿತವಾದ ಉದರರೋಗದಲ್ಲಿ ಅವಯವಗಳು ಚಟುವಟಿಕೆಯಿಲ್ಲದ್ದಾಗುವುದು, ಸ್ಪರ್ಶಜ್ಞಾನ ತಪ್ಪಿಹೋಗುವುದು, ಮೈಯೆಲ್ಲಾ ಶೋಭೆಯಿರುವುದು, ಭಾರವೂ ಇರುವುದು, ಯಾವಾಗಲೂ ನಿದ್ರೆ, ಶರೀರಕ್ಕೆ ಹಿಂಸೆಯಾಗುತ್ತಿರುವುದು, ಬಾಯಿರುಚಿ ಕೆಟ್ಟು ಹೋಗುವುದು, ಉಬ್ಬಸ, ಕೆಮ್ಮು, ಮೈಯೆಲ್ಲಾ ಬೆಳ್ಳಗಾಗುವುದು, ಕಣ್ಣು, ಉಗುರು, ಸಹ ಬೆಳ್ಳಗಾಗುವುದು, ಹೊಟ್ಟೆಯು ಯಾವಾಗಲೂ ಸ್ತಿಮಿತವಾಗಿರುವುದು, ಎಂದರೆ ತುಂಬಿಕೊಂಡಂತಿರುವುದು, ಹೊಟ್ಟೆಯ ಮೇಲೆಲ್ಲಾ ಜಿಡ್ಡು ತೇಲುತ್ತಿರುವುದು, ಬಿಳಿಯ ನರಗಳು ಹೊಟ್ಟೆಯ ಮೇಲೆಲ್ಲಾ ಕಾಣುತ್ತ ಹೊಟ್ಟೆ ಭೇರಿಯಂತೆ ದೊಡ್ಡದಾಗಿರುವುದು, ಹೊಟ್ಟೆಯು ನಿದಾನವಾಗಿ ದೊಡ್ಡದಾಗುವುದು, ಯಾವಾಗ್ಯೂ ಗಟ್ಟಿಯಾಗಿರುವುದು, ಮುಟ್ಟಿದರೆ ತಣ್ಣಗೂ ಭಾರವಾಗಿಯೂ ಮೊದ್ದಾಗಿಯೂ ಇರುವುದು ಇವು ಲಕ್ಷಣಗಳು.

ಸ್ತ್ರಿಯೋನ್ನಪಾನಂನಖಲೋಮಮೂತ್ರವಿಡಾರ್ತವನ್ಯೈಯರ್ಯುಕ್ತಮಸಾಧುವೃತ್ತಾಃ ||
ಯಸ್ಮೈಪ್ರಯಚ್ಛಂತ್ಯರಯೋಗರಾಂಶ್ಚದುಷ್ಟಾಂಬುದೂಷೀವಿಷಸೇವನಾದ್ವಾ || ೧೩ ||
ತೇನಾಶುರಕ್ತಂಕುಪಿತಾಶ್ಚದೋಷಾಃಕುರ್ಯುಸ್ಸುಘೋರಂಜಠರಂತ್ರಿಲಿಂಗಂ ||
ತಚ್ಛೀತಭಾವೇಭೃಶದುರ್ದಿನೇಚವಿಶೇಷತಃಕುಪ್ಯತಿದಹ್ಯತೇಚ ೧೪ ||
ಸಚಾತುರೋಮುಹ್ಯತಿಹಿಪ್ರಸಕ್ತಂಪಾಂಡುಃಕೃಶಶ್ಶುಷ್ಯತಿತೃಷ್ಣಯಾಚ ||
ದೂಷ್ಯೋದರಂಕೀರ್ತಿತಮೇತದೇವ

ತ್ರಿದೋಷಸನ್ನಿಪಾತಜನ್ಯವಾದ ಉದರವನ್ನು ವಿವರಿಸುತ್ತಾನೆ—ಲೋಕದಲ್ಲಿ ಕೆಟ್ಟನಡತೆಯುಳ್ಳ ಸ್ತ್ರೀಯರು ತಮಗೆ ಪ್ರೀತಿಪಾತ್ರರಾದ ಪುರುಷರ ಪ್ರೀತಿಯು ತಮ್ಮನ್ನು ಬಿಟ್ಟು ಅನ್ಯತ್ರ ಕದಲದೆ ಹಾಗಿರಲಿ ಎಂಬ ಭಾವನೆಯಿಂದ ಮೆಚ್ಚು ಮದ್ದು ಎಂಬದಾಗಿ ಅನ್ನಪಾನಗಳ ಜೊತೆಯಲ್ಲಿ ಉಗುರು, ಕೂದಲು, ಮಲಮೂತ್ರಗಳು, ತಿಂಗಳುಕಟ್ಟಲೆ ಆಗತಕ್ಕ ಋತುಸ್ರಾವದ್ರವ ಇವುಗಳನ್ನು ತಿನ್ನಿಸುತ್ತಾರೆ, ಇಂತವುಗಳಿಂದಲೂ ಮತ್ತು ಶತ್ರುಗಳಾದವರು ಪ್ರಯೋಗಮಾಡುವ ಗರವೆಂಬ ಕೃತ್ರಿಮ ವಿಷದಿಂದಲೂ (ಇದಕ್ಕೆ ಮದ್ದುಹಾಕುವುದೆಂದು ಲೋಕದಲ್ಲಿ ವ್ಯವಹಾರವಿದೆ) ಕೆಟ್ಟ ಪದಾರ್ಥಗಳು ಬಿದ್ದು ಕರಗಿ ಗಬ್ಬಾಗಿ ವಿಷಮಯವಾಗಿರುವ ನೀರನ್ನು ಕುಡಿಯುವುದರಿಂದಲೂ, ದೂಷಿವಿಷವೆಂದರೆ ಉತ್ಪನ್ನವಾದ ವಿಷವು ಯಾವುದಾದರೂ ಕಾರಣದಿಂದ ಮಂದವೇಗವಾಗಿ ಅಂದರೆ ವೇಗವಲ್ಲದೆ ಕಡಮೆಯಾಗಿ ಸೌಮ್ಯವಾಗಿದ್ದಲ್ಲಿ ಅದಕ್ಕೆ ಹೆಸರು, ಅಂತಹ ವಿಷವು ಉದರಗತವಾಗೋಣದರಿಂದಲೂ ಈ ಕಾರಣಗಳಿಂದ ದೇಹಗತವಾದ ರಕ್ತವು ಮತ್ತು ಶರೀರಗತಗಳಾದ ತ್ರಿದೋಷಗಳು ಸಹ ಪ್ರಕುಪಿತಗಳಾಗಿ ಭಯಂಕರವಾದ ಉದರವನ್ನುಂಟುಮಾಡುತ್ತವೆ. ಈ ಉದರದಲ್ಲಿ ತ್ರಿದೋಷ ಲಕ್ಷಣಗಳೂ ಕಾಣುತ್ತಿರುತ್ತವೆ, ಈ ಉದರವು ಶೀತಕಾಲದಲ್ಲಿಯೂ, ವಾಯು ಹೆಚ್ಚಾದಾಗ್ಯೂ, ಸೂರ್ಯರಶ್ಮಿಯೇ ಕಾಣದೆ ಮೋಡಮುಸುಕಿಕೊಂಡಿರುವಾಗಲೂ ವಿಶೇಷವಾಗಿ ತೊಂದರೆಪಡಿಸುತ್ತದೆ, ಹೊಟ್ಟೆಯಲ್ಲಿ ಉರಿಯಾಗುತ್ತದೆ, ರೋಗಿಯು ಯಾವಾಗಲೂ ಮೂರ್ಛೆ ಹೋಗುತ್ತಿರುತ್ತಾನೆ. ಬೆಳ್ಳಗಾಗಿ ಕೃಶನಾಗಿ ಅತಿಯಾಗಿ ಬಾಯಾರಿಕೆಯುಳ್ಳವನಾಗಿ ಒಣಗಿಕೊಂಡು ಹೋಗುತ್ತಾನೆ, ಇದಕ್ಕೇನೇ ದೂಷ್ಯೋದರವೆಂಬದಾಗಿಯೂ ಹೆಸರಿದೆ.

ಪ್ಲೀಹೋದರಂಕೀರ್ತಯತೋನಿಬೋಧ ॥ ೧೫ ॥

ವಿದಾಹ್ಯಭಿಷ್ಯಂದಿರತಸ್ಯಜಂತೋಃಪ್ರದುಷ್ಟಮತ್ಯರ್ಥಮಸೃಕ್
ಕಫಶ್ಚ ॥

ಪ್ಲೀಹಾಭಿವೃದ್ಧಿಂಕುರುತಃಪ್ರವೃದ್ಧೌಪ್ಲೀಹೋತ್ಥಮೇತಜ್ಜ
ಠರಂವದಂತಿ ॥ ೧೬ ॥

ತದ್ವಾಮಪಾರ್ಶ್ವೇಪರಿವೃದ್ಧಿಮೇತಿವಿಶೇಷತಸ್ಸೀದತಿಚಾತುರೋತ್ರ॥
ಮಂದಜ್ವರಾಗ್ನಿಃಕಫಪಿತ್ತಲಿಂಗೈರುಪದ್ರುತಃಕ್ಷೀಣಬಲೋತಿ
ಪಾಂಡುಃ ॥ ೧೭ ॥

ಸವ್ಯಾನ್ಯಪಾರ್ಶ್ವೇಯಕೃತಿಪ್ರವೃದ್ಧೇಜ್ಞೇಯಂಯಕೃದ್ದಾಲ್ಯುದ
ರಂತದೇವ ॥

ಪ್ಲೀಹೋದರದ ಲಕ್ಷಣವನ್ನು ಹೇಳುತ್ತಾನೆ—ವಿದಾಹಿ ಪದಾರ್ಥಗಳು, ಮತ್ತು ಅಭಿಷ್ಯಂದಿ ಪದಾರ್ಥಗಳೆಂದರೆ ಮೊಸರು ಮೊದಲಾದ ಶ್ಲೇಷ್ಮವರ್ಧಕ ಪದಾರ್ಥಗಳು, ಇಂತಹ ವಸ್ತುಗಳಲ್ಲಿಯೇ ಯಾವಾಗಲೂ ಆಸಕ್ತನಾದ ಅಂದರೆ

ಇಂತಹ ವಸ್ತುಗಳನ್ನೇ ಉಪಯೋಗಿಸುವ ಸ್ವಭಾವವುಳ್ಳ ಮನುಷ್ಯನಿಗೆ ರಕ್ತ ಮತ್ತು ಕಫಗಳು ಪ್ರಕುಪಿತಗಳಾಗಿ ಪ್ಲೀಹವೆಂಬ ಉದರಗತವಾದ ಅವಯವದ ಅಭಿವೃದ್ಧಿಯನ್ನು ಮಾಡುತ್ತವೆ. ಉದರದ ಒಂದು ಭಾಗದಲ್ಲಿರುವ ಈ ಅವಯವವು ಅಭಿವೃದ್ಧಿಯಾದ ಹಾಗೆಲ್ಲಾ ಉದರವೂ ವೃದ್ಧಿಯಾಗುತ್ತ ಬರುತ್ತದೆ. ಇದಕ್ಕೇನೇ ಪ್ಲೀಹೋದರವೆಂಬದಾಗಿ ಹೆಸರು. ಈ ಉದರವು ಹೊಟ್ಟೆಯ ಬಲಭಾಗದಲ್ಲಿ ವೃದ್ಧಿಹೊಂದುತ್ತದೆ, ರೋಗಿಗೆ ಯಾವಾಗ್ಯೂ ಹೊಟ್ಟೆಯಲ್ಲಿ ಬಹಳವಾಗಿ ಸಂಕಟವಾಗುತ್ತಿರುತ್ತದೆ, ಅಗ್ನಿಮಾಂದ್ಯ ಉಂಟಾಗುತ್ತದೆ, ಸಣ್ಣ ಜ್ವರವು ಬರುವುದಕ್ಕೆ ಆರಂಭವಾಗುತ್ತದೆ, ಕಫ ಮತ್ತು ಪಿತ್ತದ ಲಕ್ಷಣಗಳು ಕಾಣಬರುತ್ತಿರುತ್ತವೆ. ದೇಹಬಲವು ತಗ್ಗಿಹೋಗಿರುತ್ತದೆ, ರೋಗಿಯು ಪಾಂಡುರೋಗದವನಂತೆ ಬೆಳ್ಳಗಾಗುತ್ತ ಹೋಗುತ್ತಾನೆ, ಎಡಪಾರ್ಶ್ವದಲ್ಲಿ ಹೊಟ್ಟೆಯಲ್ಲಿರುವ ಯಕೃತ್ ಎಂಬ ಅವಯವವು ವೃದ್ಧಿಯಾಗಿ ಕ್ರಮೇಣ ಅದರಿಂದ ಉದರವು ಪ್ರಾಪ್ತವಾದರೆ ಅದಕ್ಕೆ ಯಕೃದ್ದಾಲ್ಯುದರವೆಂಬದಾಗಿ ಹೆಸರು.

ಉದಾವರ್ತರುಜಾನಾಹೈರ್ಮೋಹತೃಡ್ದಹನಜ್ವರೈಃ ॥ ೧೮ ॥
ಗೌರವಾರುಚಿಕಾಠಿನ್ಯೈರ್ವಿದ್ಯಾತ್ತತ್ರಮಲಾನ್ಕ್ರಮಾತ್ ॥

ಈ ಉದರಗಳಲ್ಲಿ ವಾತಾದಿದೋಷ ಸಂಬಂಧವನ್ನು ಗುರ್ತಿಸತಕ್ಕ ಕ್ರಮವನ್ನು ಹೇಳುತ್ತಾನೆ—ಉದಾವರ್ತವೆಂಬ ವಾಯು, ಹೊಟ್ಟೆನೋವು, ಹೊಟ್ಟೆಯುಬ್ಬರ ಇವುಗಳಿದ್ದರೆ ವಾತವು ವಿಶೇಷವಾಗಿ ಕುಪಿತವಾಗಿದೆ ಎಂದೂ, ಅಜ್ಞಾನ, ಬಾಯಾರಿಕೆ, ಬೆಂಕಿಸುಟ್ಟಂತೆ ವ್ಯಸುಡುವುದು, ಜ್ವರ ಇವುಗಳಿಂದ ಪಿತ್ತ ಸಂಬಂಧವನ್ನೂ, ಭಾರ, ಅರುಚಿ, ರೋಗವಿರುವ ಭಾಗವು ಕಠಿನವಾಗಿರುವುದು ಇಂತಹ ಲಕ್ಷಣಗಳಿರುವುದರಿಂದ ಶ್ಲೇಷ್ಮ ಸಂಬಂಧವನ್ನೂ ವೈದ್ಯನು ಊಹಿಸಿಕೊಳ್ಳಬೇಕು.

ಯಸ್ಯಾಂತ್ರಮನ್ನೈರುಪಲೇಪಿಭಿರ್ವಾಬಾಲಾಶ್ಮಭಿರ್ವಾಪಿಹಿತಂ ಯಥಾವತ್ ॥ ೧೯ ॥
ಸಂಚೀಯತೇತಸ್ಯ ಮಲಃಸದೋಷಃಶನೈಶ್ಶನೈಸ್ಸಂಕರವಚ್ಚ ನಾಡ್ಯಾಂ ॥
ನಿರುಧ್ಯತೇತಸ್ಯಗುದೇಪುರೀಷಂನಿರೇತಿಕೃಚ್ಛ್ರಾದಪಿಚಾಲ್ಪ ಮಲ್ಪಂ ॥ ೨೦ ॥
ಹೃನ್ನಾಭಿಮಧ್ಯೇಪರಿವೃದ್ಧಿಮೇತಿತಸ್ಯೋದರಂಬದ್ಧಗುದಂವದಂತಿ ॥

ಬದ್ಧಗುದೋದರದ ಲಕ್ಷಣವನ್ನು ಹೇಳುತ್ತಾನೆ—ಕರುಳಿನೊಳಗೆ ಜಿಗಟಾದ ಶರ್ಕರಿ ಆಹಾರ ಮೊದಲಾದವುಗಳು ತುಂಬಿಕೊಂಡಿರುವುದು, ಸಣ್ಣ ಸಣ್ಣ ಕಲ್ಲು ಕಸಗಳಿಂದ ತುಂಬಿಕೊಂಡಿರುವುದು, ಈ ಕಾರಣಗಳಿಂದ ಕರುಳಿನಲ್ಲಿ ಸೇರಿಕೊಂಡಿರುವ ಮಲವು ವಾತಾದಿದೋಷಸಹಿತವಾಗಿ ಕಸಬರಲಿನಿಂದ ಗುಡಿಸಿದ

ಕಸವು ಸ್ವಲ್ಪ ಸ್ವಲ್ಪವಾಗಿಯೇ ಇದ್ದು ದೊಡ್ಡ ತಿಪ್ಪೆಯಾಗುವಂತೆ ಅಭಿವೃದ್ಧವಾಗಿ ಹೊರಕ್ಕೆ ಹೊರಡದೆ ಹೊಟ್ಟೆಯಲ್ಲಿಯೇ ತಡದು ಹೋಗುವುದುಂಟು ಅಥವಾ ಬಹಳ ಕಷ್ಟದೊಡನೆ ಕೊಂಚ ಕೊಂಚವಾಗಿ ಮಲವು ಹೊರಡುವುದೂ ಉಂಟು. ಎದೆಗೂ ಹೊಕ್ಕುಳಿಗೂ ಮಧ್ಯೆ ಮಲವು ಸೇರಿ ಉದರವು ವೃದ್ಧಿಯಾಗುತ್ತದೆ, ಇದಕ್ಕೇನೇ ಬದ್ಧಗುದೋದರವೆಂದು ಹೇಳುತ್ತಾರೆ.

ಶಲ್ಯಂತಥಾನ್ನೋಪಹಿತಂಯದಾತ್ರಂಭುಕ್ತಂಭಿನತ್ತ್ಯಾಗ
ತಮನ್ಯಥಾವಾ ॥ ೨೦ ॥
ತಸ್ಮಾತ್ಸ್ರುತೋಂತ್ರಾತ್ಸಲಿಲಪ್ರಕಾಶಸ್ಸ್ರಾವಸ್ರವೇದ್ವೈಗು
ದತಸ್ತುಭೂಯಃ ॥
ನಾಭೇರಧಶ್ಚೋದರಮೇತಿವೃದ್ಧಿಂನಿಸ್ತುದ್ಯತೇದಾಲ್ಯತಿಚಾತಿ
ಮಾತ್ರಂ ॥ ೨೨ ॥
ಏತತ್ಪರಿಸ್ರಾವ್ಯುದರಂಪ್ರದಿಷ್ಟಂ................................

ಕ್ಷತೋದರದ ಲಕ್ಷಣವನ್ನು ಹೇಳುತ್ತಾನೆ—ಭೋಜನಮಾಡುವ ಅನ್ನದೊಡನೆ ಕಾಣದೆ ಶಲ್ಯದಂತಹ ಕಡ್ಡಿಯು ಒಳಕ್ಕೆ ಹೋಗಿ ಕರುಳನ್ನು ತೂತು ಬೀಳಿಸುವುದು, ಅನ್ಯಥಾವಾ ಎಂದರೆ ಭೋಜನಮಾಡಿದ ಅನ್ನಪಾನಗಳೇ ಹೆಚ್ಚಾಗಿ ಕರುಳು ಒಡೆದು ತೂತು ಬೀಳುವುದು, ಇಂತಹ ತೂತುಗಳಿಂದ ನೀರಿನಂತಹ ದ್ರವವು ತೊಟ್ಟು ತೊಟ್ಟಾಗಿ ಹೊರಹೊರಟು ಗುದದ್ವಾರದಿಂದ ಜಿನುಗುತ್ತಿರುವುದು, ಹೊಕ್ಕುಳಿನಿಂದ ಕೆಳಭಾಗದಲ್ಲಿ ಹೊಟ್ಟೆಯು ದೊಡ್ಡದಾಗುವುದು, ವ್ಯಥೆಯಾಗುತ್ತಿರುವುದು, ಹೊಟ್ಟೆಯನ್ನು ಶೀಳಿದಂತೆ ಭಾಸವಾಗುತ್ತಿರುವುದು, ಇದಕ್ಕೇನೇ ಪರಿಸ್ರಾವ್ಯುದರವೆಂದು ಹೆಸರು.

.................................ದಕೋದರಂಕೀರ್ತಯತೋನಿಬೋಧ ॥
ಯಸ್ನೇಹಪೀತೋಪ್ಯನುವಾಸಿತೋವಾವಾಂತೋವಿರಿಕ್ತೋ
ಪ್ಯಥವಾನಿರೂಢಃ ॥ ೨೩ ॥
ಪಿಬೇಜ್ಜಲಂಶೀತಲಮಾಶುತಸ್ಯಸ್ರೋತಾಂಸಿದೂಷ್ಯಂತಿಹಿತದ್ವಹಾನಿ
ಸ್ನೇಹೋಪಲಿಪ್ತೇಷ್ವಥವಾಪಿತೇಷುದಕೋದರಂಪೂರ್ವವ
ದಭ್ಯುಪೈತಿ ॥ ೨೪ ॥
ಸ್ನಿಗ್ಧಂಮಹತ್ತತ್ಪರಿವೃತ್ತನಾಭಿಸಮಾತತಂಪೂರ್ಣಮಿ
ವಾಂಬುನಾಚ ॥
ಯಥಾದೃತಿಃಕ್ಷುಭ್ಯತಿಕಂಪತೇಚಶಬ್ದಾಯತೇಚಾಪಿದಕೋದ
ರಂತತ್ ॥ ೨೫ ॥

ಜಲೋದರದ ಲಕ್ಷಣವನ್ನು ಹೇಳುತ್ತಾನೆ—ಸ್ನೇಹಪಾನ ಮಾಡಿದವನು ಅಂದರೆ ರೋಗನಿವೃತ್ತಿಗಾಗಿಯಾಗಲಿ ಅಥವಾ ಬೇರೇ ಯಾವುದಾದರೂ ಉದ್ದಿಶ್ಯ ದಿಂದಾಗಲಿ ಎಣ್ಣೆ, ತುಪ್ಪ ಮೊದಲಾದವುಗಳನ್ನು ಕ್ಲುಪ್ತಕಾಲದಲ್ಲಿ ಕುಡಿದವನು, ಅನುವಾಸಿತಃ ಎಂದರೆ ಸ್ನೇಹಗಳಿಂದಲೇ ಬಸ್ತಿ (ಎನಿಮಾ) ಯನ್ನು ತೆಗದು ಕೊಂಡವನು, ವಾಂತಃ ಎಂದರೆ ವಮನೌಷಧಗಳನ್ನು ತೆಗದುಕೊಂಡವನು, ವಿರಿಕ್ತಃ ಎಂದರೆ ವಿರೇಚನೌಷಧವನ್ನು ತೆಗದುಕೊಂಡವನು, ನಿರೂಢಃ ಎಂದರೆ ಕಷಾಯಗಳಿಂದ, ಹಾಲಿನಿಂದ, ಹಾಲು ಮತ್ತು ತೈಲಗಳನ್ನು ಕೂಡಿಸಿ ಈ ರೀತಿ ಯಾಗಿ ನಿರೂಹ ಬಸ್ತಿಯನ್ನು (ಎನಿಮಾ) ತೆಗದುಕೊಂಡವನು, ಇವರುಗಳು ತಣ್ಣೀರನ್ನು ಕುಡಿದರೆ ದೇಹಗತಗಳಾದ ಜಲವಹನಾಡಿಗಳು ದೂಷ್ಯಂತಿ ಎಂದರೆ ತಾವು ಮಾಡಬಹುದಾದ ಕೆಲಸಗಳನ್ನು ಮಾಡಲಶಕ್ತಗಳಾಗುತ್ತವೆ, ಅಥವಾ ಆ ಜಲವಹನಾಡಿಗಳು ಸ್ನೇಹೋಪಲಿಪ್ತೇಷು ಮೇಲೆ ಹೇಳಿದ ಸ್ನೇಹಗಳಿಂದ ವ್ಯಾಪಿಸ ಲ್ಪಟ್ಟಿದ್ದಾಗ್ಯೂ ಜಲೋದರವು ಉಂಟಾಗುತ್ತವೆ, ಉದರದಲ್ಲಿ ಜಿಡ್ಡು ತೇಲುತ್ತಿರು ತ್ತದೆ, ಹೊಕ್ಕಳನ್ನು ಮುಂದಕ್ಕೆ ಎಬ್ಬಿಸಿಕೊಂಡು ಹೊಟ್ಟೆಯು ದೊಡ್ಡದಾಗಿ ನೀರಿನಿಂದ ತುಂಬಿಕೊಳ್ಳುತ್ತದೆ. ಹೇಗೆ ನೀರು ತುಂಬಿದ ತತ್ತಿಯು ಹೊರಳಾಡಿಸಿ ದರೆ ಶಬ್ದಮಾಡುತ್ತಲು ಅಲ್ಲಾಡಿಸಿದರೆ ಅಲ್ಲಾಡುತ್ತಲೂ ಇರುತ್ತದೆಯೋ ಹೊಟ್ಟೆ ಯು ಸಹ ಹಾಗೆಯೇ ಇರುತ್ತದೆ, ಇದಕ್ಕೇನೇ ಜಲೋದರವೆಂದು ಹೆಸರು.

ಜನ್ಮನೈವೋದರಂಸರ್ವಂಪ್ರಾಯಃಕೃಚ್ಛ್ರತಮಂಮತಂ ॥
ಬಲಿನಸ್ತದಜಾತಾಂಬುಯತ್ನಸಾಧ್ಯಂನವೋತ್ಥಿತಂ ॥ ೨೬ ॥
ಪಕ್ಷಾದ್ಬದ್ಧಗುದಂತೂರ್ಧ್ವಂಸರ್ವಂಜಾತೋದಕಂತಥಾ ॥
ಪ್ರಾಯೋಭವತ್ಯಭಾವಾಯಚ್ಛಿದ್ರಾಂತ್ರಂಚೋದರಂನೃಣಾಂ ॥೨೭॥

ಉದರಗಳ ಸಾಧ್ಯಾಸಾಧ್ಯತ್ವವನ್ನು ಹೇಳುತ್ತಾನೆ–ಉದರಗಳೆಲ್ಲವೂ ಸಾಮಾ ನ್ಯವಾಗಿ ಉಂಟಾದ ಮಾತ್ರದಿಂದಲೇ ಕಷ್ಟಸಾಧ್ಯಗಳೆಂದು ತಿಳಿಯಬಹುದು, ಅಂದರೆ ಉದರರೋಗವು ಹಿಂದೆ ಹೇಳಿದ ಭೇದಗಳಲ್ಲಿ ಯಾವ ಭೇದಕ್ಕೆ ಸೇರಿರಲಿ ಪ್ರಾಯಶಃ ಗುಣವಾಗುವುದು ಕಷ್ಟವೆಂದು ತಿಳಿದುಕೊಳ್ಳಬಹುದು, ಆದರೆ ರೋಗಿಗೆ ದೇಹದಲ್ಲಿ ಶಕ್ತಿಯಿದ್ದು ಉದರದಲ್ಲಿ ನೀರು ಸೇರದಿರುವವರಿವಿಗೂ ಹೊಸ ದಾಗಿದ್ದಲ್ಲಿ ಪ್ರಯತ್ನಮಾಡಿದಲ್ಲಿ ಸಾಧ್ಯವಾಗಬಹುದು. ಹಿಂದೆ ಹೇಳಿದ ಬದ್ಧ ಗುದೋದರವೆಂಬ ಉದರರೋಗವು ಹದಿನೈದು ದಿವಸ ಕಳದ ಮೇಲೆಯೂ, ಉದರರೋಗ ಸಾಮಾನ್ಯವೂ ಉದರದಲ್ಲಿ ನೀರು ಕಾಣಿಸಿಕೊಂಡ ಮೇಲೆಯೂ "ಪ್ರಾಯೋಭವತ್ಯಭಾವಾಯ" ಎಂದರೆ ರೋಗಿಯು ಇಲ್ಲದಂತೆ ಮಾಡಲು ಕಾರಣವಾಗುತ್ತವೆ ಎಂದರೆ ಪ್ರಾಯಶಃ ಕೊಲ್ಲುತ್ತವೆಂಬ ಭಾವ, ಛಿದ್ರಾಂತ್ರೋ ದರವೂ ಕೂಡ ಹದಿನೈದು ದಿವಸ ಕಳದ ಮೇಲೆ ಅಸಾಧ್ಯವೆಂದೇ ತಿಳಿಯಬೇಕು.

ಶೂನಾಕ್ಷಂಕುಟಿಲೋಪಸ್ಥಮುಪಕ್ಲಿನ್ನತನುತ್ವಚಂ ||
ಬಲಶೋಣಿತಮಾಂಸಾಗ್ನಿಪರಿಕ್ಷೀಣಂಚವರ್ಜಯೇತ್ || ೨೮ ||
ಪಾರ್ಶ್ವಭಂಗಾನ್ನವಿದ್ವೇಷಶೋಥಾತೀಸಾರಪೀಡಿತಂ ||
ವಿರಿಕ್ತಂಚಾಪ್ಯುದರಿಣಂಪೂರ್ಯಮಾಣಂವಿವರ್ಜಯೇತ್ || ೨೯ ||

ಕಣ್ಣುಗಳು ಊದಿಹೋಗಿರುವುದು, ನೀರು ತುಂಬಿಕೊಳ್ಳೋಣದರಿಂದ ಉಪಸ್ಥ, ಶಿಶ್ನ, ವೃಷಣಗಳು ವಕ್ರವಾಗಿ ಹೋಗಿರುವುದು, ಶರೀರದ ಚರ್ಮವೆಲ್ಲಾ ಸವೆದು ಹೋಗಿ ತೆಳ್ಳಗಾಗಿರುವಂತೆ ತೋರುತ್ತಿರುವುದು, ದೇಹಬಲ, ರಕ್ತ ಪಾಟವ, ಮಾಂಸಗಳು, ಜಠರಾಗ್ನಿ ಅಂದರೆ ಜೀರ್ಣಶಕ್ತಿ ಇವುಗಳೆಲ್ಲಾ ಕಡಮೆಯಾಗಿ ಹೋಗಿದ್ದಲ್ಲಿ ಅಂತಹ ರೋಗಿಯನ್ನು ವರ್ಜ್ಯಮಾಡಿ ಬಿಡತಕ್ಕದ್ದು, ಪಾರ್ಶ್ವಗಳು ಮುರಿದುಹೋದಂತೆ ತೋರುತ್ತಿರುವುದು, ಅನ್ನದ್ವೇಷ, ಶೋಥೆ ಅತಿಸಾರ ಇವುಗಳಿರುವುದು, ಮಲಪ್ರವೃತ್ತಿ ಹೆಚ್ಚಾಗಿರುವುದು, ಹೊಟ್ಟೆಯಲ್ಲಿ ನೀರು ಕಡಮೆಯಾದಂತೆ ಮತ್ತೆ ಮತ್ತೆ ತುಂಬಿಕೊಳ್ಳುತ್ತಿರುವುದು, ಇಂತಹ ಉದರ ರೋಗಿಗಳನ್ನು ಬಿಡತಕ್ಕದ್ದು.

ಇಲ್ಲಿಗೆ ಉದರರೋಗನಿದಾನ ಸಂಪೂರ್ಣ.

## ಶೋಥನಿದಾನ.

ರಕ್ತಪಿತ್ತಕಫಾನ್ವಾಯುರ್ದುಷ್ಟೋದುಷ್ಟಾನ್ಬಹಿಃಶಿರಾಃ ||
ನೀತ್ವಾರುದ್ಧಗತಿಸ್ತೈರ್ಹಿಕುರ್ಯಾತ್ತ್ವಙ್ಮಾಂಸಸಂಶ್ರಯಂ || ೧ ||
ಉತ್ಸೇಧಂಸಂಹತಂಶೋಥಂತಮಾಹುರ್ನಿಚಯಾದತಃ ||
ಸರ್ವಂಹೇತುವಿಶೇಷೈಸ್ತುರೂಪಭೇದಾನ್ನವಾತ್ಮಕಂ || ೨ ||
ದೋಷೈಃಪೃಥಗ್ದ್ವಯೈಸ್ಸರ್ವೈರಭಿಘಾತಾದ್ವಿಷಾದಪಿ ||

ಶೋಥನಿದಾನವನ್ನು ಪ್ರಾರಂಭಿಸುತ್ತಾನೆ—ವಾತಪ್ರಕೋಪಕಾರಣಗಳಿಂದ ಪ್ರಕುಪಿತವಾದ ವಾಯುವು ಸ್ವಸ್ವಪ್ರಕೋಪಕಾರಣಗಳಿಂದ ಪ್ರಕುಪಿತಗಳಾದ ರಕ್ತ, ಪಿತ್ತ, ಕಫಗಳನ್ನು ಬಹಿರ್ಗತಗಳಾದ ಧಮನಿಗಳನ್ನು ಹೊಂದಿಸಿ ಆ ಪ್ರಕುಪಿತಗಳಾದ ರಕ್ತ ಪಿತ್ತ ಕಫಗಳಿಂದಲೆ ತಡೆಯಲ್ಪಟ್ಟ ಗತಿಯುಳ್ಳದ್ದಾಗಿ ಒಂದೇ ಕಡೆಯಲ್ಲಿ ತುಂಬಿಕೊಂಡು ಆ ಪ್ರದೇಶವನ್ನು ಇತರ ಪ್ರದೇಶಗಳಿಗಿಂತ ಉನ್ನತವನ್ನಾಗಿ ಅಂದರೆ ಉಬ್ಬಿದ್ದನ್ನಾಗಿ ಮಾಡುತ್ತದೆ, ಆ ಉಬ್ಬಿರುವಿಕೆಯನ್ನೇ ನಿಚಯಾತ್ ದೋಷಗಳು ಕೂಡಿಕೊಂಡಿರುವುದರಿಂದ ಶೋಥಂಶೋಥವೆಂಬದಾಗಿ ಹೇಳುತ್ತಾರೆ. ಈ ಶೋಥರೋಗವು ಸ್ವೋತ್ಪತ್ತಿಕಾರಣಗಳಾದ ದೋಷಗಳ ರೂಪಭೇದದಿಂದ ಒಂಭತ್ತು ವಿಧವೆಂದು ತಿಳಿದುಕೊಳ್ಳಬೇಕು. ವಾತಪ್ರಕೋಪಜನ್ಯ ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ವಾತ

ಪಿತ್ತಪ್ರಕೋಪಜನ್ಯ, ವಾತಶ್ಲೇಷ್ಮಪ್ರಕೋಪಜನ್ಯ, ಪಿತ್ತಶ್ಲೇಷ್ಮಪ್ರಕೋಪಜನ್ಯ, ಅಭಿಘಾತಜನ್ಯ, ವಿಷಜನ್ಯ ಎಂಬದಾಗಿ ಶೋಥವು ಒಂಭತ್ತು ವಿಧ.

**ತತ್ಪೂರ್ವರೂಪಂದವಥುಶ್ಶಿರಾಯಾಮೋಂಗಗೌರವಂ ॥ ೩ ॥**

ಶೋಥದ ಪೂರ್ವರೂಪವೆಂದರೆ ಶೋಥವು ಬರುವ ಕಡೆಯಲ್ಲಿ ಉರಿಯುಂಟಾಗುವುದು, ನರಗಳೆಲ್ಲವೂ ನೋವಾಗುವುದು, ಆ ಅವಯವವು ಭಾರವಾಗುವುದು, ಇವುಗಳು.

**ಶುದ್ಧ್ಯಾಮಯಾಭುಕ್ತಕೃಶಾಬಲಾನಾಂಕ್ಷಾರಾಮ್ಲತೀಕ್ಷ್ಣೋಷ್ಣಗುರೂಪಸೇವಾ ॥**
**ದಧ್ಯಾಮಮೃಚ್ಛಾಕವಿರೋಧಿದುಷ್ಟಗರೋಪಸೃಷ್ಟಾನ್ನನಿಷೇವಿಣಾಂಚ ॥ ೪ ॥**
**ಅರ್ಶಾಂಸ್ಯಚೇಷ್ಟಾನಚದೇಹಶುದ್ಧಿರ್ಮರ್ಮೋಪಘಾತೋವಿಷಮಾಪ್ರಸೂತಿಃ ॥**
**ಮಿಥ್ಯೋಪಚಾರಃಪ್ರತಿಕರ್ಮಣಾಂಚನಿಜಸ್ಯಹೇತುಶ್ವಯಥೋಃಪ್ರದಿಷ್ಟಃ ॥ ೫ ॥**

ಶೋಥರೋಗದ ಕಾರಣವನ್ನು ಹೇಳುತ್ತಾನೆ—ಶುದ್ಧಿ ಎಂದರೆ ದೇಹಶೋಧನೆಗೋಸ್ಕರವಾಗಿ ವಮನೌಷಧ, ವಿರೇಚನೌಷಧಗಳನ್ನು ತೆಗದುಕೊಳ್ಳುವದು. ಆಮಯವೆಂದರೆ ಜ್ವರ ಮೊದಲಾದ ರೋಗಗಳಿಂದ ಪೀಡಿತರಾಗುವದು. ಅಭುಕ್ತವೆಂದರೆ ಭೋಜನ ಮಾಡದಿರುವದು, ಅಂದರೆ ಕಾರಣಾಂತರಗಳಿಂದ ಭೋಜನಮಾಡದಿರುವದು, ಮತ್ತು ತಮ್ಮ ಪ್ರಕೃತಿ ವಿರುದ್ಧವಾದ ಆಹಾರಗಳನ್ನು ತೆಗದುಕೊಳ್ಳುವುದು, ಈ ಕಾರಣಗಳಿಂದ ಕೃಶರಾಗಿಯೂ ದುರ್ಬಲರಾಗಿಯೂ ಆದವರುಗಳು—ಕ್ಷಾರಗಳು, ಹುಳಿ, ತೀಕ್ಷ್ಣ ಪದಾರ್ಥಗಳು, ಉಷ್ಣವೀರ್ಯಗಳಾದ ಪದಾರ್ಥಗಳು, ಗುರುಗುಣವುಳ್ಳ ಪದಾರ್ಥಗಳು ಇಂತಹ ಪದಾರ್ಥಗಳನ್ನು ತಿನ್ನುವುದು, ಮೊಸರನ್ನು ಹೆಚ್ಚಿಗೆ ತಿನ್ನುವುದು. ಅಪಕ್ವ ವಸ್ತುಗಳನ್ನು ತಿನ್ನುವುದು, ಮಣ್ಣನ್ನು ತಿನ್ನುವುದು, ಕೆಟ್ಟ ತರಕಾರಿಗಳನ್ನು ತಿನ್ನುವುದು, ಪರಸ್ಪರ ವಿರುದ್ಧಗಳೆಂದು ಹೇಳಿರುವ ಪದಾರ್ಥಗಳನ್ನು ತಿನ್ನುವುದು, ಕೆಟ್ಟುಹೋದ ಪದಾರ್ಥಗಳನ್ನು ತಿನ್ನುವುದು, ಕೃತ್ರಿಮ ವಿಷಯುಕ್ತಗಳಾದ ಪದಾರ್ಥಗಳನ್ನು ತಿನ್ನುವುದು, ಮೂಲವ್ಯಾಧಿ ಇರುವುದು, ಯಾವ ವಿಧವಾದ ಅಂಗಸಾಧನೆಯೂ ಇಲ್ಲದೆ ಕುಳಿತೆಂತೆ ಇರುವುದು, ವಮನ ವಿರೇಚನಾದಿಗಳಿಂದ ದೇಹಶುದ್ಧಿಮಾಡಿಕೊಳ್ಳಬಹುದಾದ ಸಂದರ್ಭಗಳಲ್ಲಿಯೂ ಮಾಡಿಕೊಳ್ಳದಿರುವುದು, ಮರ್ಮಸ್ಥಾನಕ್ಕೆ ಪೆಟ್ಟು ತಗಲುವುದು, ವಿಷಮಾಪ್ರಸೂತಿಃ ಎಂದರೆ ಕಾರಣಾಂತರಗಳಿಂದ ಪ್ರಸವಕಾಲವಾಗದೆ ಅಂದರೆ ಪಕ್ವವಾಗದೆ ಗರ್ಭವಿಮೋಚನವಾಗುವುದು, ಪ್ರತಿ

ಕರ್ಮಣಾಂ ಅಂದರೆ ವಮನ ವಿರೇಚನಗಳ ಮಿಥ್ಯೋಪಚಾರಃ ಅಂದರೆ ಸರಿಯಾಗಿ ಮಾಡಿಕೊಳ್ಳದಿರೋಣ ಇವುಗಳು ಸ್ವಾಭಾವಿಕವಾದ ಶೋಥರೋಗಕ್ಕೆ ಕಾರಣವೆಂದು ತಿಳಿಯಬೇಕು.

**ಸಗೌರವಂಸ್ಯಾದನವಸ್ಥಿತತ್ವಂಸೋತ್ಸೇಧಮೂಷ್ಮಾಥಶಿರಾತನುತ್ವಂ**
**ಸಲೋಮಹರ್ಷಶ್ಚವಿವರ್ಣತಾಚಸಾಮಾನ್ಯಲಿಂಗಂಶ್ವಯಥೋಃ**
**ಪ್ರದಿಷ್ಟಂ ॥ ೬ ॥**

ಶೋಥದ ಸಾಮಾನ್ಯ ಲಕ್ಷಣವನ್ನು ಹೇಳುತ್ತಾನೆ—ಶೋಥವಿರುವ ಅವಯವ ಭಾರವಾಗಿರುವುದು ಮತ್ತು ಬುದ್ಧಿಯು ಕೂಡ ಅವ್ಯವಸ್ಥಿತವಾಗಿರುವುದು, ಶರೀರದ ಭಾಗವು ಬಾತುಹೋಗಿರುವುದಲ್ಲದೆ ಬಿಸಿಯಾಗಿರುವುದು, ಅಲ್ಲಿರತಕ್ಕ ನರಗಳೆಲ್ಲಾ ಸ್ವಾಭಾವಿಕ ಸ್ಥಿತಿಗಿಂತ ಸಣ್ಣನಾಗಿರುವುದು, ಮೈಯ್ಯಲ್ಲಿ ರೋಮಾಂಚವಾಗುತ್ತಿರುವುದು, ದೇಹದ ವರ್ಣವು ಬದಲಾಯಿಸುವುದು ಇವುಗಳು ಸಾಮಾನ್ಯವಾಗಿ ಶೋಥರೋಗದ ಲಕ್ಷಣಗಳು.

**ಚಲಸ್ತನುತ್ವಕ್ ಪರುಷೋಽರುಣೋಽಸಿತಃಸುಷುಪ್ತಿಹರ್ಷಾರ್ತಿಯು**
**ತೋಽನಿಮಿತ್ತತಃ ॥**
**ಪ್ರಶಾಮ್ಯತಿಪ್ರೋನ್ನಮತಿಪ್ರಪೀಡಿತೋದಿವಾಬಲೀಚಶ್ವಯಥುಸ್ಸ**
**ಮೀರಣಾತ್ ॥ ೭ ॥**

ವಾತಪ್ರಕೋಪಜನ್ಯವಾದ ಶೋಥದ ಲಕ್ಷಣವನ್ನು ಹೇಳುತ್ತಾನೆ—ಶೋಥೆಯು ದೇಹದ ಭಾಗಗಳಲ್ಲಿ ಓಡಾಡುತ್ತಿರುತ್ತದೆ, ಚರ್ಮವು ತೆಳುವಾದಂತೆ ಕಾಣುತ್ತಿರುತ್ತದೆ, ಶೋಥೆಯು ಪರುಷಃ ಎಂದರೆ ಕೊಂಚ ಒರಟಾಗಿರುವಂತೆ ತೋರುತ್ತಿರುತ್ತದೆ, ಶೋಥೆಯು ಕೆಂಪಾಗಿರಬಹುದು, ಒಂದು ವೇಳೆ ಕಪ್ಪಾಗಿಯಾದರೂ ಇರಬಹುದು, ಚರ್ಮದಲ್ಲಿ ಸ್ಪರ್ಶಜ್ಞಾನವು ತಪ್ಪಿಹೋಗಿರುವುದು, ರೋಮಾಂಚವಾಗುತ್ತಿರುವುದು, ಕಾರಣವಿಲ್ಲದೇನೇ ವ್ಯಥೆಯಾಗುತ್ತಿರುವುದು, ಶೋಥವನ್ನು ಕೈಯ್ಯಿಂದ ಒತ್ತಿದಲ್ಲಿ ಕಡಮೆಯಾಗುವುದು, ಬಿಟ್ಟರೆ ಮತ್ತೆ ಯಥಾಸ್ಥಿತವಾಗುವುದು, ಹಗಲು ಹೊತ್ತಿನಲ್ಲಿ ಬಾತು ಹೆಚ್ಚಾಗಿ ರಾತ್ರಿ ಹಗಲಿಗಿಂತ ಕೊಂಚ ಕಡಮೆಯಾಗುವುದು, ಇದು ವಾತಪ್ರಕೋಪಜನ್ಯವಾದ ಶೋಥದ ಲಕ್ಷಣಗಳು.

**ಮೃದುಸ್ಸಗಂಧೋಽಸಿತಪೀತರಾಗವಾನ್‌ಭ್ರಮಜ್ವರಸ್ವೇದತೃ**
**ಷಾಮದಾನ್ವಿತಃ ।**
**ಯಉಷ್ಯತೇಸ್ಪೃಷ್ಟರುಗಕ್ಷಿರಾಗಕೃತ್‌ಸಪಿತ್ತಶೋಥೋಭೃಶದಾಹ**
**ಪಾಕವಾನ್ ॥ ೮ ॥**

ಪಿತ್ತಪ್ರಕೋಪಜನ್ಯವಾದ ಶೋಥದ ಲಕ್ಷಣಗಳು—ಊದಿರತಕ್ಕ ಭಾಗವು ಮೃದುವಾಗಿರುವುದು, ಒಂದು ವಿಧವಾದ ವಾಸನೆ ಇರುವುದು, ಶೋಥವಿರುವ ಭಾಗವು ಕಪ್ಪಗಾಗಲಿ ಹಳದಿಯ ಬಣ್ಣವುಳ್ಳದ್ದಾಗಿಯಾಗಲಿ ಇರುವುದು, ರೋಗಿಗೆ ಬುದ್ಧಿಭ್ರಮ, ಜ್ವರ, ಬೆವರುತ್ತಿರುವುದು, ಬಾಯಾರಿಕೆ, ಒಂದು ವಿಧವಾದ ಮದ ಬಂದಂತೆ ಇರುವುದು, ಈ ಲಕ್ಷಣಗಳೆಲ್ಲವೂ ತೋರುತ್ತಿರುವುದು, ಶೋಥವು ಸುಟ್ಟಂತೆ ತೋರುತ್ತಿರುವುದು, ಕಣ್ಣುರಿ ಕಣ್ಣು ಕೆಂಪಾಗಿರುವುದು, ಈ ಲಕ್ಷಣಗಳಿರುವುದು, ಅತಿಯಾದ ವ್ಯೆಯ್ಯುರಿ, ವ್ಯೆಯ್ಯೆಲ್ಲಾ ಹಣ್ಣಾದಂತೆ ತೋರುತ್ತಿರುವುದು, ಇವು ಪಿತ್ತಪ್ರಕೋಪಜನ್ಯ ಶೋಥದ ಲಕ್ಷಣಗಳು.

**ಗುರುಸ್ಥಿರಃಪಾಂಡುರರೋಚಕಾನ್ವಿತಃಪ್ರಸೇಕನಿದ್ರಾವಮಿ
ವಹ್ನಿಮಾಂದ್ಯಕೃತ್ ॥
ಸಕೃಚ್ಛ್ರಜನ್ಮಪ್ರಶಮೋನಿಪೀಡಿತೋನಚೋನ್ನಮೇದ್ರಾತ್ರಿ
ಬಲೀಕಫಾತ್ಮಕಃ ॥ ೯ ॥**

ಕಫಪ್ರಕೋಪಜನ್ಯವಾದ ಶೋಥರೋಗದ ಲಕ್ಷಣ—ಶೋಥವು ದೊಡ್ಡದಾಗಿರುವುದು, ಸ್ಥಿರಃ ಎಂದರೆ ವಾತಪ್ರಕೋಪಜನ್ಯವಾದ ಶೋಥದಂತೆ ಶೋಥವು ಶರೀರದಲ್ಲೆಲ್ಲಾ ಹರಿದಾಡದೆ ಒಂದೇ ಕಡೆ ಸ್ಥಿರವಾಗಿರುವುದು, ಶೋಥವು ಪಾಂಡುವರ್ಣವುಳ್ಳದ್ದಾಗಿರುವುದು, ಈ ಶೋಥರೋಗದ ಜೊತೆಗೆ ಅರುಚಿಯೂ ಇರುವುದು, ಬಾಯಿನೀರು ಬರುತ್ತಿರುವುದು, ಯಾವಾಗ್ಯೂ ತೂಕಡಿಕೆ ಇದ್ದೇ ಇರುವುದು, ವಮನವೂ ಇರುವುದು, ಅಗ್ನಿಮಾಂದ್ಯವಿರುವುದು, ಈ ಶೋಥ ಬರುವುದೂ ಕಷ್ಟ, ಬಂದ ಮೇಲೆ ಗುಣವಾಗುವುದೂ ಕಷ್ಟ, ಕೈಯ್ಯಿಂದ ಅಮುಕಿದರೆ ತಗ್ಗುವುದಕ್ಕಿಲ್ಲ, ರಾತ್ರಿ ವೇಳೆಯಲ್ಲಿ ಶೋಥವು ಹೆಚ್ಚಾಗುವುದು, ಇವು ಕಫಪ್ರಕೋಪಜನ್ಯ ಶೋಥರೋಗದ ಲಕ್ಷಣಗಳು.

**ನಿದಾನಾಕೃತಿಸಂಸರ್ಗಾಛ್ಛ್ವಯಥುಸ್ಸ್ಯಾದ್ದ್ವಿದೋಷಜಃ ॥
ಸರ್ವಾಕೃತಿಸ್ಸನ್ನಿಪಾತಾಚ್ಛೋಥೋವ್ಯಾಮಿಶ್ರಲಕ್ಷಣಃ ॥ ೧೦ ॥**

ರೋಗ ಕಾರಣಗಳು, ರೋಗ ಲಕ್ಷಣಗಳು ಇವುಗಳು ಎರಡೆರಡು ಮಿಶ್ರಗಳಾಗಿದ್ದರೆ ಅಂದರೆ ವಾತಜನ್ಯಶೋಥ ಮತ್ತು ಪಿತ್ತಜನ್ಯಶೋಥ ಇವುಗಳ ಲಕ್ಷಣಗಳು ಮತ್ತು ಕಾರಣಗಳು ಕೂಡ ಮಿಶ್ರವಾಗಿ ಕಂಡುಬಂದಲ್ಲಿ ಅಂತಹ ಶೋಥವನ್ನು ದ್ವಿದೋಷಜನ್ಯಶೋಥವೆಂಬದಾಗಿಯೂ ಮೂರು ದೋಷಗಳ ಲಕ್ಷಣಗಳು ಮತ್ತು ಕಾರಣಗಳು ಸಹ ಕೂಡಿ ಕಂಡುಬಂದರೆ ತ್ರಿದೋಷಸನ್ನಿಪಾತಜನ್ಯಶೋಥವೆಂಬದಾಗಿಯೂ ತಿಳಿದುಕೊಳ್ಳಬೇಕು.

**ಅಭಿಘಾತೇನಶಸ್ತ್ರಾದಿಚ್ಛೇದಭೇದಕ್ಷತಾದಿಭಿಃ ॥
ಹಿಮಾನಿಲೋದಧ್ಯನಿಲೈರ್ಭಲ್ಲಾತಕಕಪಿಕಚ್ಛುಜೈಃ ॥ ೧೧ ॥**

ರಸ್ಯೈಶ್ಶೂಕೈಶ್ಚ ಸಂಸ್ಪರ್ಶಾಚ್ಛ್ವಯಥುಸ್ಸ್ಯಾದ್ವಿಸರ್ಪವಾನ್ ॥
ಭೃಶೋಷ್ಮಾ ಲೋಹಿತಾಭಾಸಃ ಪ್ರಾಯಶಃ ಪಿತ್ತಲಕ್ಷಣಃ ॥ ೧೨ ॥

ಆಗಂತುಶೋಥರೋಗವನ್ನು ಹೇಳುತ್ತಾನೆ—ಯಾವುದಾದರೂ ಆಕಸ್ಮಿಕ ವಾದ ಪೆಟ್ಟುಬೀಳುವುದು, ಆಯುಧಗಳಿಂದ ಕಡಿದುಕೊಳ್ಳುವುದು, ಕೊಯ್ದು ಕೊಳ್ಳುವುದು, ಗಾಯಮಾಡಿಕೊಳ್ಳುವುದು, ಇಂತಹ ಕಾರಣಗಳಿಂದ ಉಂಟಾ ಗುವ ಶೋಥವೂ, ಶೀತದಗಾಳಿ, ಸಮುದ್ರಗಾಳಿ, ಗೇರು, ತುರಚಿ, ಇನ್ನೂ ಯಾವುದಾದರೂ ಮೂಲಿಕೆಗಳ ರಸಗಳು, ಕೆಲವು ವಿಷಪ್ರಾಣಿಗಳನ್ನು ಅರದು ಹಚ್ಚೋಣ, ಈ ಕಾರಣಗಳಿಂದ ಉಂಟಾಗುವ ಶೋಥವೂ ಆಗಂತುಕಶೋಥ ವೆನ್ನಿಸಿಕೊಳ್ಳುತ್ತವೆ, ಈ ಶೋಥದ ಜೊತೆಯಲ್ಲಿ ವಿಸರ್ಪವೆಂಬ ಸಣ್ಣ ಬಕ್ಕೆಗಳು ಇರುತ್ತವೆ, ಈ ಶೋಥವು ಯಾವಾಗಲೂ ಸುಡುತ್ತಿರುತ್ತದೆ, ಕೆಂಪು ಬಣ್ಣವಾಗಿ ರುತ್ತದೆ, ಬಹುಶಃ ಹೆಚ್ಚಾಗಿ ಪಿತ್ತಪ್ರಕೋಪಜನ್ಯಶೂಲದ ಲಕ್ಷಣಗಳೇ ಇರುತ್ತವೆ.

ವಿಷಜಃ ಸವಿಷಪ್ರಾಣಿಪರಿಸರ್ಪಣಮೂತ್ರಣಾತ್ ॥
ದಂಷ್ಟ್ರಾದಂತನಖಾಘಾತಾದವಿಷಪ್ರಾಣಿನಾಮಪಿ ॥ ೧೩ ॥
ವಿಣ್ಮೂತ್ರಶುಕ್ರೋಪಹತಮಲವದ್ವಸ್ತ್ರಸಂಕರಾತ್ ॥
ವಿಷವೃಕ್ಷಾನಿಲಸ್ಪರ್ಶಾದ್ಗರಯೋಗಾವಚೂರ್ಣನಾತ್ ॥ ೧೪ ॥
ಮೃದುಶ್ಚಲೋಽವಲಂಬೀ ಚ ಶೀಘ್ರೋ ದಾಹರುಜಾಕರಃ ॥

ವಿಷಜನ್ಯಶೋಥದ ಸ್ವರೂಪವನ್ನು ಹೇಳುತ್ತಾನೆ—ವಿಷಪ್ರಾಣಿಗಳು ದೇ ಹದ ಮೇಲೆ ಹರಿದಾಡೋಣ, ದೇಹದ ಯಾವುದಾದರೂ ಭಾಗದ ಮೇಲೆ ಮೂತ್ರಿಸೋಣ. ಈ ಕಾರಣಗಳಿಂದ ಉಂಟಾಗುವ ಶೋಥವು, ಮತ್ತು ವಿಷ ಯುಕ್ತ ಪ್ರಾಣಿಗಳಲ್ಲದ ಸಾಮಾನ್ಯ ಪ್ರಾಣಿಗಳು ಸಹ ಹಲ್ಲಿನಿಂದ ಕಚ್ಚುವುದು, ಕೋರೆಹಲ್ಲಿನಿಂದ ಹೊಡೆಯುವುದು, ಉಗುರಿನಿಂದ ಪರಚುವುದು, ಇಂತಹ ಕಾರಣಗಳಿಂದ ಉಂಟಾಗುವ ಶೋಥವು, ಮತ್ತು ಮಲ, ಮೂತ್ರ, ಶುಕ್ರ, ಇವು ಗಳ ಲೇಪವುಳ್ಳ ಮಲಿನಗಳಾದ ಅಂದರೆ ಒಗೆಯಲ್ಪಡದೆ ಮಲಿನಗಳಾಗಿರುವ ವಸ್ತ್ರ ಗಳನ್ನು ಧರಿಸೋಣದರಿಂದ ಉಂಟಾಗುವ ಶೋಥಗಳು, ವಿಷವೃಕ್ಷಗಳೆಂದರೆ ಮುಷ್ಟಿ ಕಳ್ಳಿ ಮೊದಲಾದವುಗಳ ವಿಷ ದ್ರವಯುಕ್ತವಾದ ಗಾಳಿ ಶರೀರಕ್ಕೆ ಸೋಕುವುದರಿಂದ ಉಂಟಾಗುವ ಶೋಥಗಳು, ಕೃತ್ರಿಮ ವಿಷಗಳು ಶರೀರದ ಯಾವ ಭಾಗಕ್ಕಾದರೂ ತಗಲುವುದು, ಕೃತ್ರಿಮ ವಿಷಯುಕ್ತ ಚೂರ್ಣಗಳನ್ನು ಶರೀರದ ಮೇಲೆ ಚಲ್ಲುವುದು, ಧರಿಸುವ ಬಟ್ಟೆಗಳ ಮೇಲೆ ಚಲ್ಲುವುದು, ಅಂತಹ ಬಟ್ಟೆಗಳನ್ನು ಧರಿಸುವುದು, ಇಂತಹ ಸಂದರ್ಭಗಳಿಂದ ಉಂಟಾಗುವ ಶೋಥ ಗಳು ಇವುಗಳೆಲ್ಲಾ ವಿಷಜನ್ಯ ಶೋಥದ ವರ್ಗಕ್ಕೆ ಸೇರುತ್ತವೆ, ಈ ವಿಷಜ ಶೋಥವು ಮೃದುವಾಗಿರುತ್ತದೆ, ಚಲಃ ಎಂದರೆ ಅಲ್ಲಾಡುತ್ತಿರುತ್ತದೆ, ಜೋತು

ಬೇಳುವುದೂ ಉಂಟು, ಈ ಶೋಥವು ಬಹು ಬೇಗ ಬರುತ್ತದೆ, ಉರಿ, ನೋವು ಇವುಗಳಿರುತ್ತವೆ.

ದೋಷಾಶ್ಶಯಥುಮೂರ್ಧ್ವಂಹಿಕುರ್ವಂತ್ಯಾಮಾಶಯಸ್ಥಿತಾಃ ॥
ಪಕ್ವಾಶಯಸ್ಥಾಮಧ್ಯೇತುವರ್ಚಸ್ಥಾನಗತಾಸ್ತ್ವಧಃ ॥
ಕೃತ್ಸ್ನದೇಹಮನುಪ್ರಾಪ್ತಾಃಕುರ್ಯುಸ್ಸರ್ವಸರಂತಥಾ ॥ ೧೬ ॥

ದೋಷಗಳ ಸ್ಥಾನಭೇದದಿಂದ ಶೋಥವು ಉಂಟಾಗತಕ್ಕ ಕ್ರಮವನ್ನು ಹೇಳುತ್ತಾನೆ— ಆಮಾಶಯಗತಗಳಾದ ದೋಷಗಳು ಪ್ರಕುಪಿತಗಳಾಗಿದ್ದಲ್ಲಿ ಊರ್ಧ್ವ ಭಾಗದಲ್ಲಿ ಶೋಥವನ್ನುಂಟುಮಾಡುತ್ತವೆ. ಪಕ್ವಾಶಯಗತಗಳಾದ ದೋಷಗಳು ಪ್ರಕುಪಿತಗಳಾದರೆ ದೇಹದ ಮಧ್ಯಭಾಗದಲ್ಲಿ ಶೋಥವನ್ನುಂಟು ಮಾಡುತ್ತವೆ. ಮಲಾಶಯಗತಗಳಾದ ದೋಷಗಳು ಪ್ರಕುಪಿತಗಳಾಗಿದ್ದಲ್ಲಿ ದೇಹದ ಕೆಳಭಾಗದಲ್ಲಿ ಶೋಥವನ್ನುಂಟುಮಾಡುತ್ತವೆ, ದೇಹದ ಎಲ್ಲಾ ಭಾಗದಲ್ಲಿಯೂ ಇರುವ ದೋಷಗಳು ಪ್ರಕುಪಿತಗಳಾಗಿದ್ದಲ್ಲಿ ದೇಹಾದ್ಯಂತದಲ್ಲಿಯೂ ಓಡಾಡುವಂತಹ ಶೋಥವನ್ನುಂಟುಮಾಡುತ್ತವೆ.

ಯೋಮಧ್ಯದೇಶೇಶ್ವಯಥುಸ್ಸಕಷ್ಟಸ್ಸರ್ವಗಶ್ಚಯಃ ॥
ಅರ್ಧಾಂಗೇರಿಷ್ಟಭೂತಸ್ಯಾದ್ಯಶ್ಚೋರ್ಧ್ವಂಪರಿಸರ್ಪತಿ ॥ ೧೭ ॥
ಶ್ವಾಸಃಪಿಪಾಸಾಛರ್ದಿಶ್ಚದೌರ್ಬಲ್ಯಂಜ್ವರಏವಚ ॥
ಯಸ್ಯಚಾನ್ನೇರುಚಿರ್ನಾಸ್ತಿಶ್ವಯಥುಂತಂವಿವರ್ಜಯೇತ್ ॥ ೧೮ ॥
ಅನನ್ಯೋಪದ್ರವಕೃತಶ್ಶೋಥಃಪಾದಸಮುತ್ಥಿತಃ ॥
ಪುರುಷಂಹಂತಿನಾರೀಂಚಮುಖಜೋಗುಹ್ಯಜೋದ್ವಯಂ ॥ ೧೯ ॥
ಸರ್ವೋನುಪದ್ರವಶ್ಶೋಥಃಸಾಧ್ಯೋಸಾಧ್ಯಃಪುರೇರಿತಃ ॥
ವಿವರ್ಜಯೇತ್ಕುಕ್ಷ್ಯುದರಾಶ್ರಿತಂಚತಥಾಗಳೇಮರ್ಮಣಿಸಂಶ್ರಿತಂಚ ॥ ೨೦ ॥
ಸ್ಥೂಲಃಖರಶ್ಚಾಪಿಭವೇದ್ವಿವರ್ಜ್ಯೋಯಶ್ಚಾಪಿಬಾಲಸ್ಥವಿರಾಬಲಾನಾಂ ॥

ಈ ಶೋಥರೋಗದ ಕೃಚ್ಛ್ರಸಾಧ್ಯ ಸುಖಸಾಧ್ಯ ಅಸಾಧ್ಯಾದಿ ಲಕ್ಷಣಗಳನ್ನು ಹೇಳುತ್ತಾನೆ—ಶರೀರದ ಮಧ್ಯಭಾಗದಲ್ಲಿ ಬಂದಿರುವ ಶೋಭೆಯು ಕಷ್ಟಸಾಧ್ಯವೆಂದು ತಿಳಿಯಬೇಕು. ಶರೀರದ ಎಲ್ಲಾ ಅವಯವಗಳಲ್ಲಿಯೂ ಶೋಭೆಯು ಬಂದಿದ್ದರೆ ಅದೂ ಕಷ್ಟಸಾಧ್ಯವೆಂಬದಾಗಿಯೇ ತಿಳಿಯಬೇಕು, ಶರೀರದ ಅರ್ಧ ಅವಯವಗಳಲ್ಲಿ ಶೋಭೆಯು ಬಂದಿದ್ದರೆ ಅಂದರೆ ಒಂದು ಪಾರ್ಶ್ವದಲ್ಲಿ ಶೋಭೆಯು ಕಾಣಿಸಿಕೊಂಡಲ್ಲಿ ಆ ಶೋಭೆಯು ಮರಣಸೂಚಕವೆಂದು ತಿಳಿಯಬೇಕು. ಪುರುಷರಿಗೆ ಶರೀರದ ಕೆಳಭಾಗದಲ್ಲಿ ಪ್ರಾರಂಭವಾಗಿ ಮೇಲು ಮುಖ

ವಾಗಿ ಅಡರುತ್ತಿರುವ ಶೋಥವು ಅರಿಷ್ಟಸೂಚಕವೆಂದು ತಾತ್ಪರ್ಯ—ಶೋಥ ರೋಗಿಗೆ ಉಬ್ಬಸ, ಬಾಯಾರಿಕೆ, ವಮನ, ದೇಹದಲ್ಲಿ ಬಲವಿಲ್ಲದೆ ಹೋಗುವುದು, ಜ್ವರ, ಅನ್ನದಲ್ಲಿ ರುಚಿ ತಪ್ಪಿಹೋಗುವುದು, ಈ ಲಕ್ಷಣಗಳಿದ್ದಲ್ಲಿ ಅಂತಹ ಶೋಥ ರೋಗವನ್ನು ಚಿಕಿತ್ಸೆಗೆ ಅಸಾಧ್ಯವೆಂದು ತ್ಯಜಿಸಬೇಕು, ಶೋಥರೋಗದ ಉಪ ದ್ರವಗಳೆಂದು ಹಿಂದೆ ಹೇಳಿದ ಉಬ್ಬಸ, ಬಾಯಾರಿಕೆ ಇವುಗಳಿಂದ ಕೂಡಿ ಕೊಂಡು ಶೋಥವು ಗಂಡಸರಿಗೆ ಪಾದದಿಂದ ಪ್ರಾರಂಭವಾಗಿ ಊರ್ಧ್ವಮುಖ ವಾಗಿ ವ್ಯಾಪಿಸುತ್ತ ಬಂದಲ್ಲಿ ಗಂಡಸರನ್ನು ಕೊಲ್ಲುತ್ತದೆಂದು ತಿಳಿದುಕೊಳ್ಳ ಬಹುದು, ಇದಕ್ಕೆ ವ್ಯತಿರಿಕ್ತವಾಗಿ ಹೆಂಗಸರಿಗೆ ಉಪದ್ರವಯುಕ್ತವಾದ ಶೋಥ ವು ಮುಖದಲ್ಲಿ ಪ್ರಾರಂಭವಾಗಿ ಅಧೋಮುಖವಾಗಿ ವ್ಯಾಪಿಸುತ್ತ ಬಂದಲ್ಲಿ ಕೊಲ್ಲುತ್ತದೆಂದು ತಿಳಿಯಬೇಕು. ಮರ್ಮಸ್ಥಾನದಲ್ಲಿ ಶೋಥವು ಪ್ರಾರಂಭ ವಾಗಿ ಉಪದ್ರವಗಳಿಲ್ಲದರಿಂದಲೂ ಕೂಡಿದ್ದರೆ ಅದೂ ಅಸಾಧ್ಯವೇದೇ ತಿಳಿಯ ಬೇಕು, ಶೋಥವು ಹೊಸದಾಗಿ ಹುಟ್ಟಿದ್ದು ಉಪದ್ರವಗಳ್ಯಾವವೂ ಇಲ್ಲದಿದ್ದರೆ ಸಾಧ್ಯವೆಂದು ತಿಳಿಯಬೇಕು. ಹಿಂದೆ ಹೇಳಿದ ಶೋಥಗಳು ಅಸಾಧ್ಯಗಳು. ಶೋಭೆಯು ಕಿಬ್ಬೊಟ್ಟೆಯಲ್ಲಿ ಆಗಲಿ ಹೊಟ್ಟೆಯಲ್ಲಿಯೇ ಆಗಲಿ ಇರುವುದು, ಗಂಟಲಿನಲ್ಲಿ ಶೋಭೆಯಿರುವುದು, ಮರ್ಮಸ್ಥಾನದಲ್ಲಿ ಶೋಭೆಯಿರುವದು, ಶೋಭೆಯು ಅತಿ ದಪ್ಪನಾಗಿ ಕಠಿಣವಾಗಿರುವುದು. ಇಂತಹ ಲಕ್ಷಣಗಳಿಂದ ಕೂಡಿದ ಶೋಥವನ್ನು ಅಸಾಧ್ಯವೆಂದು ಬಿಟ್ಟುಬಿಡಬೇಕು. ಮುದುಕರು, ಹುಡುಗರು, ದುರ್ಬಲರಾದವರು ಇಂತವರಿಗೆ ಪ್ರಾಪ್ತವಾದ ಶೋಥರೋಗವನ್ನೂ ಅಸಾಧ್ಯವೆಂದೇ ತಿಳಿದುಬಿಡಬೇಕು.

ಇಲ್ಲಿಗೆ ಶೋಥರೋಗನಿದಾನ ಸಂಪೂರ್ಣ.

---

## ವೃದ್ಧಿ ನಿದಾನ.

**ಕ್ರುದ್ಧೋಽನೂರ್ಧ್ವಗತಿರ್ವಾಯುಶ್ಶೋಥಶೂಲಕರಶ್ಚರನ್ ॥**
**ಮುಷ್ಕೌವಂಕ್ಷಣತಃಪ್ರಾಪ್ಯಫಲಕೋಶಾಭಿವಾಹಿನೀಃ ॥ ೧ ॥**
**ಪ್ರಪೀಡ್ಯಧಮನೀರ್ವೃದ್ಧಿಂಕರೋತಿಫಲಕೋಶಯೋಃ ॥**
**ದೋಷಾಸ್ರಮೇದೋಮೂತ್ರಾಂತ್ರೈಃಸವೃದ್ಧಿಸ್ಸಪ್ತಧಾಗದಃ ॥೨॥**

ವೃದ್ಧಿರೋಗ ನಿದಾನವನ್ನು ಹೇಳುತ್ತಾನೆ—ವೃದ್ಧಿರೋಗವೆಂದರೆ ತರಡು ಬಾತುಕೊಳ್ಳುವುದಕ್ಕೆ ಹೆಸರು, ಅಧೋಮಾರ್ಗದಲ್ಲಿ ಸಂಚಾರಮಾಡುವ ವಾಯು ವು ಅಂದರೆ ಅಪಾನವಾಯುವು ಪ್ರಕುಪಿತವಾಗಿ ಹೊಟ್ಟೆಯುಬ್ಬರ ಹೊಟ್ಟೆಶೂಲೆ ಇವುಗಳನ್ನುಂಟುಮಾಡುತ್ತ ಕಿಬ್ಬೊಟ್ಟೆಯಲ್ಲಿ ಸಂಚರಿಸಲು ಪ್ರಾರಂಭಮಾಡಿ ಗೆಜ್ಜೆಕಟ್ಟಿನ ಮಾರ್ಗವಾಗಿ ಎರಡು ವೃಷಣಗಳಲ್ಲಿಯೂ ಪ್ರವೇಶಿಸಿ ಫಲಕೋಶ

ವೆಂದರೆ ತರಡಿನ ಬೀಜಗಳನ್ನು ಸುತ್ತಿಕೊಂಡಿರುವ ನರಗಳನ್ನು ಪೀಡೆಗೊಳಿಸಿ ಅಂದರೆ ನೋಯಿಸಿ ಬೀಜಗಳು ಬಾತುಹೋಗುವಂತೆ ಮಾಡುತ್ತದೆ, ಈ ವೃದ್ಧಿ ರೋಗವು ವಾತಜನ್ಯವೃದ್ಧಿ, ಪಿತ್ತಜನ್ಯವೃದ್ಧಿ, ಶ್ಲೇಷ್ಮಜನ್ಯವೃದ್ಧಿ, ರಕ್ತಜನ್ಯ ವೃದ್ಧಿ ಮೇದೋಜನ್ಯವೃದ್ಧಿ, ಮೂತ್ರಜನ್ಯವೃದ್ಧಿ, ಅಂತ್ರಜನ್ಯವೃದ್ಧಿ ಅಂದರೆ ಕರುಳು ವೃಷಣದೊಳಗೆ ಹೊಕ್ಕು ತರಡು ಬಾತುಹೋಗುವುದು, ಈ ರೀತಿಯಾಗಿ ಏಳು ವಿಧವಾಗಿರುತ್ತದೆ.

ಮೂತ್ರಾಂತ್ರಜಾವಪ್ಯನಿಲಾದ್ಧೇತುಭೇದಸ್ತು ಕೇವಲಂ ||
ವಾತಪೂರ್ಣದೃತಿಸ್ಪರ್ಶೋರೂಕ್ಷೋವಾತಾದಹೇತುರುಕ್ || ೩ ||
ಪಕ್ವೋದುಂಬರಸಂಕಾಶಃಪಿತ್ತಾದ್ದಾಹೋಷ್ಮಪಾಕವಾನ್ ||
ಕಫಾಚ್ಛೀತೋಗುರುಸ್ನಿಗ್ಧಃಕಂಡೂಮಾನ್ಕಠಿನೋಲ್ಪರುಕ್ || ೪ ||
ಕೃಷ್ಣಸ್ಫೋಟಾವೃತಃಪಿತ್ತವೃದ್ಧಿಲಿಂಗಶ್ಚರಕ್ತಜಃ ||
ಕಫವನ್ಮೇದಸಾವೃದ್ಧಿರ್ಮೃದುಸ್ತಾಲಫಲೋಪಮಃ || ೫ ||
ಮೂತ್ರಧಾರಣಶೀಲಸ್ಯಮೂತ್ರಜಸ್ಸತುಗಚ್ಛತಃ ||
ಅಂಭೋಭಿಃಪೂರ್ಣದೃತಿವತ್ಕ್ಷೋಭಂಯಾತಿಸರುಙ್ಮೃದುಃ ||೬||
ಮೂತ್ರಕೃಚ್ಛ್ರಮಧಸ್ಯಾಚ್ಚ ಚಾಲಯನ್ಫಲಕೋಶಯೋಃ ||

ಈ ಏಳು ವಿಧವಾದ ವೃದ್ಧಿರೋಗಗಳ ನಡುವೆ ಮೂತ್ರಜನ್ಯವಾದ ವೃದ್ಧಿ, ಅಂತ್ರಜನ್ಯವಾದ ವೃದ್ಧಿ ಇವೆರಡೂ ವಾತಪ್ರಕೋಪದಿಂದ ಉಂಟಾಗತಕ್ಕವುಗಳೇ, ಆದರೂ ಕಾರಣಗಳು ಮಾತ್ರ ಬೇರೆಯಾಗಿ ಕಾಣುವುದರಿಂದ ಅವುಗಳನ್ನು ಬೇರೆ ಯಾಗಿಯೇ ಎಣಿಸಿಕೊಂಡಿರುತ್ತೇವೆ. ವಾತಪ್ರಕೋಪಜನ್ಯವಾದ ವೃದ್ಧಿರೋಗ ದಲ್ಲಿ ವೃಷಣಗಳನ್ನು ಮುಟ್ಟಿ ನೋಡಿದರೆ ಗಾಳಿ ತುಂಬಿದ ಚೀಲದಂತೆಯೂ ರೂಕ್ಷವಾಗಿಯೂ ಇರುತ್ತವೆ, ಕಾರಣ ಗೊತ್ತಾಗದೇನೇ ನೋವಾಗುತ್ತಿರುತ್ತದೆ. ಪಿತ್ತಪ್ರಕೋಪಜನ್ಯವಾದ ವೃದ್ಧಿರೋಗದಲ್ಲಿ ವೃಷಣಗಳು ಪಕ್ವವಾದ ಅತ್ತಿಯ ಹಣ್ಣಿನಂತಿರುತ್ತವೆ, ಅಂದರೆ ಕೆಂಪು ಬಣ್ಣವಾಗಿ ಮುಟ್ಟಿದರೆ ಮೆತ್ತಗಿರುತ್ತವೆ, ಉರಿ ಇರುತ್ತದೆ, ಬೆಚ್ಚಗಿರುತ್ತದೆ, ಪಕ್ವವಾಗಿ ಹಣ್ಣಾಗಿ ಹೋಗಿರುತ್ತದೆ, ಕಫ ಪ್ರಕೋಪಜನ್ಯವಾದ ವೃದ್ಧಿರೋಗದಲ್ಲಿ ವೃಷಣಗಳು ಮುಟ್ಟಿ ನೋಡಿದರೆ ತಣ್ಣಗೂ, ಭಾರವಾಗಿಯೂ, ಜಿಗಟಾಗಿಯೂ, ನವೆ ಉಳ್ಳದ್ದಾಗಿಯೂ, ಗಟ್ಟಿ ಯಾಗಿಯೂ, ಸ್ವಲ್ಪ ಮಾತ್ರ ನೋವು ಉಳ್ಳದ್ದಾಗಿಯೂ ಇರುತ್ತವೆ. ರಕ್ತ ಪ್ರಕೋಪಜನ್ಯವಾದ ವೃದ್ಧಿರೋಗದಲ್ಲಿ ಪಿತ್ತಪ್ರಕೋಪಜನ್ಯ ವೃದ್ಧಿರೋಗದ ಲಕ್ಷಣಗಳೇ ಇರುವುದಲ್ಲದೆ ಅದರ ಜೊತೆಗೆ ವೃಷಣದ ಮೇಲೆಲ್ಲಾ ಕಪ್ಪಾದ ಗುಳ್ಳೆಗಳಿರುತ್ತವೆ. ಮೇದೋಜನ್ಯವಾದ ವೃದ್ಧಿರೋಗದಲ್ಲಿ ಕಫಜನ್ಯ ವೃದ್ಧಿಯ ಲಕ್ಷಣಗಳೇ ಕಾಣುತ್ತಿರುತ್ತವೆ, ಆದರೆ ವೃಷಣಗಳು ಮಾತ್ರ ಮೆತ್ತಗೆ ತಾಳೇ ಕಾಯಿನಷ್ಟು ಗಾತ್ರವಾಗಿ ಇರುತ್ತವೆ, ಯಾವಾಗಲೂ ಮೂತ್ರವೇಗವನ್ನು ತಡೆ

ಯುವ ಸ್ವಭಾವವುಳ್ಳವರಿಗೆ ಮೂತ್ರಜನ್ಯವೃದ್ಧಿರೋಗವು ಪ್ರಾಪ್ತವಾಗುತ್ತದೆ, ಈ ಮೂತ್ರಜನ್ಯ ವೃದ್ಧಿರೋಗದಲ್ಲಿ ರೋಗಿಯು ಅತ್ತಿತ್ತ ತಿರುಗಾಡುವಾಗ್ಯೆ ವೃಷಣಗಳು ನೀರಿನಿಂದ ತುಂಬಿರುವ ಚೀಲದಂತೆ ತಳಕಾಡುತ್ತ ನೋವುಳ್ಳದ್ದಾಗಿ ಮೃದುವಾಗಿರುತ್ತದೆ, ಮೂತ್ರಕೃಚ್ಛ್ರದಂತಹ ನೋವಿನಿಂದ ಕೂಡಿಕೊಂಡು ಮೂತ್ರವು ಬೊಟ್ಟು ಬೊಟ್ಟಾಗಿ ಬೀಳುತ್ತ ವೃಷಣಗಳು ಅಲ್ಲಾಡುತ್ತಿರುತ್ತವೆ.

ವಾತಕೋಪಿಭಿರಾಹಾರೈಶ್ಶೀತತೋಯಾವಗಾಹನೈಃ ॥ ೭ ॥
ಧಾರಣೇರಣಭಾರಾಧ್ವವಿಷಮಾಂಗಪ್ರವರ್ತನೈಃ ॥
ಕ್ಷೋಭಣೈಃ ಕ್ಷೋಭಿತೋಽನ್ಯೈಶ್ಚ ಕ್ಷುದ್ರಾಂತ್ರಾವಯವಂಯದಾ
ಪವನೋವಿಗುಣೀಕೃತ್ಯಸ್ವನಿವೇಶಾದಧೋನಯೇತ್ ॥
ಕುರ್ಯಾದ್ವಂಕ್ಷಣಸಂಧಿಸ್ಥೋಗ್ರಂಥ್ಯಾಭಂಶ್ವಯಥುಂತದಾ ॥ ೯ ॥
ಉಪೇಕ್ಷಮಾಣಸ್ಯಚಮುಷ್ಕವೃದ್ಧಿಮಾಧ್ಮಾನರುಕ್‌ಸ್ತಂಭವತೀಂ ಸವಾಯುಃ ॥
ಪ್ರಪೀಡಿತೋಂತಸ್ಸನವಾನ್ ಪ್ರಯಾತಿಪ್ರಧ್ಮಾಪಯನ್ನೇತಿಪುನಶ್ಚ ಮುಕ್ತಂ ॥ ೧೦ ॥
ಅಂತ್ರವೃದ್ಧಿರಸಾಧ್ಯೋಽಯಂವಾತವೃದ್ಧಿಸಮಾಕೃತಿಃ ॥

ಅಂತ್ರವೃದ್ಧಿ ಸ್ವರೂಪವನ್ನು ಹೇಳುತ್ತಾನೆ—ವಾತಪ್ರಕೋಪವನ್ನುಂಟುಮಾಡತಕ್ಕ ಆಹಾರಗಳಿಂದಲೂ ತಣ್ಣೀರಿನಲ್ಲಿ ಸ್ನಾನಮಾಡುವುದರಿಂದಲೂ ಉಪಸ್ಥಿತಗಳಾದ ಮಲಮೂತ್ರಗಳ ವೇಗವನ್ನು ತಡೆಯೋಣದಿಂದಲೂ, ಮಲಮೂತ್ರಗಳ ಶಂಕೆಯಿಲ್ಲದಿದ್ದರೂ ಬಲವಂತದಿಂದ ವಿಸರ್ಜನೆಮಾಡುವ ಪ್ರಯತ್ನ ಮಾಡುವುದು, ಭಾರವನ್ನು ಹೊರುವುದು, ದಾರಿ ನಡೆಯುವುದು, ಅವಯವಗಳನ್ನು ಸ್ವಾಭಾವಿಕ ಸ್ಥಿತಿಗೆ ವ್ಯತಿರಿಕ್ತವಾಗಿ ಇರಿಸಿಕೊಳ್ಳೋಣದರಿಂದಲೂ, ಇನ್ನೂ ವಾತಪ್ರಕೋಪಕರಗಳಾದ ಇತರ ಕಾರಣಗಳಿಂದಲೂ ಪ್ರಕುಪಿತವಾದ ವಾಯುವು ಸೂಕ್ಷ್ಮಾಂತ್ರ (ಸಣ್ಣ ಕರುಳು) ಎಂಬ ಅವಯವವನ್ನು ಸ್ಥಳ ತಪ್ಪಿಸಿ ತನ್ನ ಜಾಗದಿಂದ ಅಧೋಮುಖವಾಗಿ ಎಳೆದುಕೊಂಡು ಹೋಗಿ ಗೆಜ್ಜೆ ಕಟ್ಟಿನ ಸಂಧಿಯಲ್ಲಿ ಸೇರಿಸಿಕೊಂಡು ಗಂಟಿನಂತಹ ಶೋಭೆಯನ್ನು ಉಂಟುಮಾಡಿ ವೃಷಣಗಳನ್ನು ದಪ್ಪವಾಗಿ ಬಾಯಿಸುತ್ತದೆ, ಈ ವೃಷಣವೃದ್ಧಿಯನ್ನು ಆಕ್ಷಣದಲ್ಲಿಯೇ ಚಿಕಿತ್ಸೆಗೆ ಗುರಿಪಡಿಸದೆ ಉದಾಸೀನ ಮಾಡಿದಲ್ಲಿ ವೃಷಣಗಳು ದಪ್ಪದಾಗಿ ಊದುವುದು, ನೋಯುವುದು, ಸ್ತಬ್ಧವಾಗಿರುವುದು. ವೃಷಣಗಳನ್ನು ಹಿಡಿದು ಹಿಸಿಕಿದಲ್ಲಿ ವಾಯುವು ಶಬ್ದಮಾಡಿಕೊಂಡು ಮೇಲಕ್ಕೆ ಹೋಗುವುದು, ಕೈಬಿಟ್ಟಕೂಡಲೆ ಮತ್ತೆ ವಾಯುವು ತುಂಬಿಕೊಂಡು ಬಾತುಹೋಗುವುದು, ಈ ರೀತಿ ಆಗುತ್ತಲಿರುತ್ತದೆ, ಈ ಅಂತ್ರಜನ್ಯವಾದ ವೃದ್ಧಿರೋಗವು ವಾತಪ್ರಕೋಪಜನ್ಯವಾದ ವೃದ್ಧಿರೋಗದಂತಿರುತ್ತದೆ, ಇದು ಅಸಾಧ್ಯವಾದ ರೋಗವೆಂದು ತಿಳಿಯಬೇಕು.

ಇಲ್ಲಿಗೆ ವೃದ್ಧಿರೋಗನಿದಾನ ಸಂಪೂರ್ಣ.

## ಗಳಗಂಡಗಂಡಮಾಲಾಪಚೀಗ್ರಂಥ್ಯರ್ಬುದನಿದಾನ.

**ನಿಬದ್ಧಃಶ್ವಯಥುರ್ಯಸ್ಯಮುಷ್ಕವಲ್ಲಂಬತೇಗಳೇ ॥**
**ಮಹಾನ್ವಾಸದಿವಾಹ್ರಸ್ವೋಗಲಗಂಡಂತಮಾದಿಶೇತ್ ॥ ೧ ॥**

ಗಳಗಂಡನಿದಾನವನ್ನು ಹೇಳುತ್ತಾನೆ—ಗಳಗಂಡವೆಂದರೆ ಕಂಠಪ್ರದೇಶದಲ್ಲಿ ವೃಷಣದಂತೆ ಊದಿಕೊಂಡು ಜೋತುಬೀಳುವ ಗಂಟಿಗೆಗಳ ಗಂಡವೆಂದು ಹೆಸರು ಈ ಗಂಟು ದೊಡ್ಡದಾಗಿಯಾದರೂ ಇರಬಹುದು, ಸಣ್ಣದಾಗಿಯಾದರೂ ಇರಬಹುದು.

**ವಾತಃಕಫಶ್ಚಾಪಿಗಳೇಪ್ರದುಷ್ಟೋಮನ್ಯೇಚಸಂಶ್ರಿತ್ಯತಥೈವ ಮೇದಃ ॥**
**ಕುರ್ವಂತಿಗಂಡಂಕ್ರಮಶಃಸ್ವಲಿಂಗೈಸ್ಸಮನ್ವಿತಂತಂಗಲಗಂಡ ಮಾಹುಃ ॥ ೨ ॥**

ಕಂಠಪ್ರದೇಶಗತವಾದ ವಾಯು ಮತ್ತು ಕಫಗಳು ಪ್ರಕುಪಿತಗಳಾಗಿ ಮೇದಸ್ಸನ್ನೂ ಕೆಡಿಸಿ ಕಂಠಸ್ಥಾನವಲ್ಲಿರುವ ಮನ್ಯಾ ಎಂಬ ಎರಡು ಕಡೆಯಲ್ಲಿರುವ ಅವಯವವನ್ನೂ ಆಶ್ರಯಿಸಿಕೊಂಡು ಅಲ್ಲಿ ಗಂಟನ್ನು ಹುಟ್ಟಿಸುತ್ತವೆ, ಅವುಗಳಲ್ಲಿ ವಾತಪ್ರಕೋಪಜನ್ಯವಾದ ಗಲಗಂಡದಲ್ಲಿ ವಾತದ ಲಕ್ಷಣಗಳೂ ಶ್ಲೇಷ್ಮಪ್ರಕೋಪಜನ್ಯವಾದ ಗಲಗಂಡದಲ್ಲಿ ಶ್ಲೇಷ್ಮಲಕ್ಷಣಗಳೂ ಮೇದೋಜನ್ಯ ಗಲಗಂಡದಲ್ಲಿ ಮೇದಸ್ಸಿನ ಲಕ್ಷಣಗಳೂ ಸ್ಪಷ್ಟವಾಗಿ ಕಾಣುತ್ತಿರುತ್ತವೆ.

**ತೋದಾನ್ವಿತಃಕೃಷ್ಣಶಿರಾವನದ್ಧಃಶ್ಯಾವೋರುಣೋವಾಪವನಾತ್ಮಕಸ್ತು ॥**
**ಪಾರುಷ್ಯಯುಕ್ತಶ್ಚಿರವೃದ್ಧ್ಯಪಾಕೋಯದೃಚ್ಛಯಾಪಾಕಮಿಯಾತ್ಕದಾಚಿತ್ ॥ ೩ ॥**
**ವೈರಸ್ಯಮಾಸ್ಯಸ್ಯಚತಸ್ಯಜಂತೋರ್ಭವೇತ್ತಥಾತಾಲುಗಲಪ್ರಶೋಷಃ ॥**

ವಾತಪ್ರಕೋಪಜನ್ಯವಾದ ಗಲಗಂಡರೋಗದ ಲಕ್ಷಣವನ್ನು ಹೇಳುತ್ತಾನೆ—ಗಂಟಲಿನಲ್ಲಿರುವ ಗಂಟಿನಲ್ಲಿ ನೋವಿರುತ್ತದೆ, ಗಂಟಿನ ಮೇಲೆಲ್ಲಾ ಕಪ್ಪು ನರಗಳು ಕಾಣುತ್ತಿರುತ್ತವೆ, ಗಂಟಿನ ಬಣ್ಣವು ಧೂಮ್ರವರ್ಣವಾಗಿಯಾಗಲಿ ಕೆಂಪಾಗಿಯಾಗಲಿ ಇರಬಹುದು, ಗಂಟು ಕಠಿಣವಾಗಿರುತ್ತದೆ ಅಂದರೆ ಅದುಮಿದರೆ ಗಟ್ಟಿಯಾಗಿರುತ್ತದೆ, ದೊಡ್ಡದಾಗಬೇಕಾದರೆ ಬಹಳ ನಿಧಾನವಾಗಿ ದೊಡ್ಡದಾಗುವುದು, ಜಾಗ್ರತೆಯಾಗಿ ಪಕ್ವವಾಗುವುದಕ್ಕಿಲ್ಲ, ಯಾವ ಚಿಕಿತ್ಸೆಯೂ ಇಲ್ಲದೇನೇ

ಒಂದೊಂದು ವೇಳೆ ಪಕ್ವವಾಗುವುದು, ಈ ರೀತಿಯಾಗಿರುತ್ತದೆ. ಬಾಯಿರುಚಿ ಕೆಟ್ಟುಹೋಗುತ್ತದೆ, ದವಡೆ ಮತ್ತು ಕಂಠ ಇವುಗಳು ಬತ್ತಿಹೋಗುತ್ತವೆ.

**ಸ್ಥಿರಸ್ಸವರ್ಣೋಗುರುರುಗ್ರಕಂಡೂಃಶೀತೋಮಹಾಂಶ್ಚಾಪಿ**
**ಕಫಾತ್ಮಕಸ್ತು ॥ ೪ ॥**
**ಚಿರಾಭಿವೃದ್ಧಿಂಭಜತೇಚಿರಾದ್ವಾಪ್ರಪಚ್ಯತೇಮಂದರುಜಃ**
**ಕದಾಚಿತ್ ।।**
**ಮಾಧುರ್ಯಮಾಸ್ಯಸ್ಯಚತಸ್ಯಜಂತೋರ್ಭವೇತ್ತಥಾತಾಲು**
**ಗಲಪ್ರಲೇಪಃ ॥ ೫ ॥**

ಶ್ಲೇಷ್ಮಪ್ರಕೋಪಜನ್ಯವಾದ ಗಲಗಂಡದ ಲಕ್ಷಣವನ್ನು ಹೇಳುತ್ತಾನೆ—ಗಂಟು ಗಟ್ಟಿಯಾಗಿರುತ್ತದೆ, ಮತ್ತು ದೇಹವು ಯಾವ ಬಣ್ಣವಿರುತ್ತದೋ ಗಂಟು ಸಹಾ ಅದೇ ವರ್ಣವೇ ಇರುತ್ತದೆ, ಭಾರವಾಗಿರುವಂತೆ ತೋರುತ್ತಿರುತ್ತದೆ, ನವೆ ಇರುತ್ತದೆ, ಮುಟ್ಟಿ ನೋಡಿದರೆ ತಣ್ಣಗಿರುತ್ತದೆ. ಗಂಟು ದೊಡ್ಡದಾಗಿರುತ್ತದೆ. ನಿದಾನವಾಗಿ ದೊಡ್ಡದಾಗುವುದುಂಟು. ಜಾಗ್ರತೆಯಾಗಿಯೇ ದೊಡ್ಡದಾಗಿ ಬಿಡುವುದೂ ಉಂಟು. ವೇದನೆ ಹೆಚ್ಚಾಗಿ ಇರುವುದಿಲ್ಲ. ಅಕಸ್ಮಾತ್ತಾಗಿಯೇ ಪಕ್ವಕ್ಕೆ ಬಂದುಬಿಡುತ್ತದೆ. ರೋಗಿಯ ಬಾಯಿ ಯಾವಾಗ್ಯೂ ಸೀಯಾಗಿರುತ್ತದೆ. ದವಡೆಯಲ್ಲಿ ಮತ್ತು ಗಂಟಲಿನಲ್ಲಿ ಸಹಾ ಏನೋ ಮೆತ್ತಿಕೊಂಡಿರುವಂತೆ ತೋರುತ್ತಿರುತ್ತದೆ.

**ಸ್ನಿಗ್ಧೋಗುರುಃಪಾಂಡುರನಿಷ್ಟಗಂಧೋಮೇದೋಭವಃ**
**ಕಂಡೂಯುತೋಲ್ಪರುಕ್ಚ ।।**
**ಪ್ರಲಂಬತೇಲಾಬುವದಲ್ಪಮೂಲೋದೇಹಾನುರೂಪಕ್ಷಯ**
**ವೃದ್ಧಿಯುಕ್ತಃ ॥ ೬ ॥**
**ಸ್ನಿಗ್ಧಾಸ್ಯತಾತಸ್ಯಭವೇಚ್ಚ ಜಂತೋರ್ಗಲೋನುಶಬ್ದಂಕುರು**
**ತೇಚನಿತ್ಯಂ ।।**

ಮೇದೋದೋಷಜನ್ಯವಾದ ಗಳಗಂಡ ಲಕ್ಷಣವೇನಂದರೆ—ಗಂಟು ಜಿಗಟಾಗಿರುತ್ತದೆ, ದಪ್ಪವಾಗಿರುತ್ತದೆ, ಬೆಳ್ಳಗೆ ದುರ್ವಾಸನೆಯಿಂದ ಕೂಡಿರುತ್ತದೆ, ನವೆ ಮತ್ತು ಸ್ವಲ್ಪವಾಗಿ ನೋವು ಇವುಗಳಿರುತ್ತವೆ, ಈ ಗಂಟು ಬುಡದಲ್ಲಿ ಸಣ್ಣನಾಗಿ ತುದಿಯ ಕಡೆಯಲ್ಲಿ ದಪ್ಪನಾಗಿ ಹಾಲುಸೋರೇಕಾಯಿನಂತೆ ಜೋತುಬೀಳುತ್ತದೆ, ಮೇದಸ್ಸು ಶರೀರದಲ್ಲಿ ವೃದ್ಧಿಯಾಗಿ ಅದರಿಂದ ಬೊಜ್ಜು ಬೆಳೆದರೆ ಈ ಗಂಟು ಕೂಡಾ ವೃದ್ಧಿಯಾಗುತ್ತ ಬರುತ್ತದೆ, ಮೇದಸ್ಸು ಕ್ಷಯಿಸಿ ದೇಹವು ಕೃಶವಾದಂತೆ

ಎಲ್ಲಾ ಈ ಗಂಟೂ ಕರಗುತ್ತ ಹೋಗುತ್ತದೆ, ರೋಗಿಗೆ ಬಾಯಿ ಯಾವಾಗ್ಯೂ ಜಿಗಟಾಗಿರುತ್ತದೆ, ಗಂಟಲಿನಲ್ಲಿ ಒಂದು ವಿಧವಾದ ಸಣ್ಣ ಶಬ್ದವು ಹುಟ್ಟುತ್ತಲೇ ಇರುತ್ತದೆ.

**ಕೃಚ್ಛ್ರಾಚ್ಛ್ವಸಂತಂಮೃದುಸರ್ವಗಾತ್ರಂಸಂವತ್ಸರಾತೀತಮ**
**ರೋಚಕಾರ್ತಂ ॥ ೭ ॥**

**ಕ್ಷೀಣಂಚವೈದ್ಯೋಗಲಗಂಡಯುಕ್ತಂಭಿನ್ನಸ್ವರಂಚಾಪಿವಿವರ್ಜ**
**ಯೇಚ್ಚ ॥**

ಗಲಗಂಡರೋಗದ ಅಸಾಧ್ಯ ಲಕ್ಷಣವನ್ನು ಹೇಳುತ್ತಾನೆ—ಉಛ್ವಾಸ ನಿಶ್ವಾಸಗಳು ಬಹಳ ಕಷ್ಟವಾಗಿರುವುದು, ಸಮಸ್ತ ಅವಯವಗಳೂ ಮೃದುವಾಗಿ ರುವುದು, ರೋಗವು ಪ್ರಾಪ್ತವಾಗಿ ಒಂದು ವರುಷ ಕಳೆದು ಹೋಗಿರುವುದು, ಬಾಯಿರುಚಿ ಕೆಟ್ಟುಹೋಗಿರುವುದು, ರಕ್ತಮಾಂಸಗಳು ಕ್ಷಯಿಸಿ ಹೋಗಿರುವುದು, ಧ್ವನಿ ಒಡದು ಹೋಗಿರುವುದು ಈ ದುರ್ಲಕ್ಷಣಗಳು ಕಂಡುಬರುತ್ತಿರುವ ಗಲ ಗಂಡರೋಗವು ಚಿಕಿತ್ಸೆಗೆ ಅಸಾಧ್ಯವೆಂದು ತ್ಯಜಿಸಬೇಕು.

**ಕರ್ಕಂಧುಕೋಲಾಮಲಕಪ್ರಮಾಣೈಃಕಕ್ಷಾಂಸಮನ್ಯಾಗಲವಂ**
**ಕ್ಷಣೇಷು ॥ ೮ ॥**

**ಮೇದಃಕಫಾಭ್ಯಾಂಚಿರಮಂದಪಾಕೈಃಸ್ಯಾದ್ಗಂಡಮಾಲಾಬಹು**
**ಭಿಶ್ಚಗಂಡೈಃ ॥**

ಗಂಡಮಾಲಾ ರೋಗದ ಲಕ್ಷಣವನ್ನು ಹೇಳುತ್ತಾನೆ—ಬೋರೆ ಹಣ್ಣಿನ ಗಾತ್ರವಾಗಿ, ದೊಡ್ಡ ಜಾತಿಗೆ ಸೇರಿದ ಬೋರೇಹಣ್ಣಿನ ಗಾತ್ರವಾಗಿ, ನೆಲ್ಲಿಯು ಕಾಯಿನ ಗಾತ್ರವಾಗಿ ಇರತಕ್ಕ ಸಣ್ಣ ಗಂಟುಗಳು, ಕಂಕಳು, ಭುಜ, ಮನ್ಯಾ ಎಂಬ ಮರ್ಮಸ್ಥಾನ, ಗಂಟಲು, ಗೆಣ್ಣೆಗಟ್ಟು ಈ ಪ್ರದೇಶಗಳಲ್ಲಿ ಕಾಣಿಸಿಕೊಳ್ಳು ತ್ತವೆ. ಈ ಗಂಟುಗಳು ಮೇದಸ್ಸು ಮತ್ತು ಕಫ ಈ ಎರಡು ದೋಷಗಳ ಪ್ರಕೋಪ ದಿಂದ ಉಂಟಾಗುವುವೆಂದು ತಿಳಿಯಬೇಕು, ಈ ಗಂಟುಗಳು ಬಹಳ ದಿವಸಕ್ಕೆ ನಿಧಾನವಾಗಿ ಪಕ್ವವಾಗಿ ಬರುತ್ತವೆ, ಅನೇಕ ಗಂಟುಗಳಿರುವುದರಿಂದ ಇವುಗಳಿಗೆ ಗಂಡಮಾಲಾ ಎಂಬದಾಗಿ ಹೆಸರು.

**ತೇಗ್ರಂಥಯಃಕೇಚಿದವಾಪ್ತಪಾಕಾಃಸ್ರವಂತಿನಶ್ಯಂತಿಭವಂತಿ**
**ಚಾನ್ಯೇ ॥ ೯ ॥**

**ಕಾಲಾನುಬಂಧಂಚಿರಮಾದಧಾತಿಸೈವಾಪಚೀತಿಪ್ರವದಂತಿ**
**ತದ್ ಜ್ಞಾಃ ॥**

**ಸಾಧ್ಯಾಸ್ಮೃತಾಃಪೀನಸಪಾರ್ಶ್ವಶೂಲಕಾಸಜ್ವರಛರ್ದಿಯು**
**ತಾಸ್ತ್ವಸಾಧ್ಯಾಃ ॥ ೧೦ ॥**

ಅಪಚಿ ಎಂಬ ಗಂಡಮಾಲಾ ಪ್ರಭೇದದ ಲಕ್ಷಣವನ್ನು ವಿವರಿಸುತ್ತಾನೆ— ಹಿಂದೆ ಹೇಳಿದ ಗಂಡಮಾಲಾರೋಗದ ಗಂಟಿನಂತಹ ಗಂಟುಗಳೇನೇ ಕೆಲವು ಪಕ್ವವಾಗಿ ಒಡದು ಸೋರುತ್ತಿರುವುದು, ಅದರ ಮಗ್ಗುಲಲ್ಲಿಯೇ ಮತ್ತೆ ಕೆಲವು ಹೊಸತಾಗಿ ಹುಟ್ಟುವುದು, ಈ ರೀತಿಯಾಗುತ್ತಿದ್ದು ಬಹಳ ಕಾಲ ಇದೇ ಕ್ರಮವೇ ನಡೆವಲ್ಲಿ ಅವುಗಳಿಗೆ ಅಪಚೀ ಎಂಬ ಗ್ರಂಥಿರೋಗವೆಂದು ಹೆಸರಿಟ್ಟಿದ್ದಾರೆ. ಈ ರೋಗವು ಬೇರೆ ಯಾವ ರೋಗವೂ ಹುಟ್ಟದಿದ್ದಲ್ಲಿ ಸಾಧ್ಯವೆಂದು ತಿಳಿಯಬೇಕು. ನೆಗಡಿ, ಪಾರ್ಶ್ವಶೂಲ, ಕೆಮ್ಮು, ಜ್ವರ, ವಮನ ಇಂತಹ ಉಪರೋಗಗಳಿದ್ದರೆ ಅಸಾಧ್ಯವೆಂದು ತಿಳಿಯಬೇಕು.

**ವಾತಾದಯೋಮಾಂಸಮಸೃಕ್ಪ್ರದುಷ್ಟಾಃಸಂದೂಷ್ಯಮೇದಶ್ಚ ತಥಾಶಿರಾಶ್ಚ ॥**
**ವೃತ್ತೋನ್ನತಂವಿಗ್ರಥಿತಂಚಶೋಥಂಕುರ್ವಂತ್ಯತೋಗ್ರಂಥಿ ರಿತಿಪ್ರದಿಷ್ಟಃ ॥ ೧೧ ॥**

ಗ್ರಂಥಿರೋಗನಿದಾನವನ್ನು ಹೇಳುತ್ತಾನೆ—ಸ್ವಸ್ವಪ್ರಕೋಪ ಕಾರಣಗಳಿಂದ ಪ್ರಕುಪಿತಗಳಾದ ವಾತಾದಿದೋಷಗಳು ಮಾಂಸ, ರಕ್ತ, ಮೇದಸ್ಸು, ರಕ್ತನಾಳಗಳು ಇವುಗಳನ್ನು ಕೆಡಿಸಿ ದುಂಡಾದ ದಪ್ಪವಾದ ಗಂಟಿನಂತಹ ಶೋಭೆಯನ್ನುಂಟು ಮಾಡುತ್ತವೆ. ಗಂಟಿನ ಆಕಾರವಾಗಿರೋಣದರಿಂದಲೇ ಈ ಶೋಥಕ್ಕೆ ಗ್ರಂಥಿ ಎಂಬದಾಗಿ ಹೆಸರಿಟ್ಟಿದ್ದಾರೆ.

**ಆಯಮ್ಯತೇತುದ್ಯತಿವೃಶ್ಚ್ಯತೇಚಪ್ರತ್ಯಸ್ಯತೇಮಥ್ಯತಿಭಿದ್ಯತೇಚ॥**
**ಕೃಷ್ಣೋಮೃದುರ್ಬಸ್ತಿರಿವಾತತಶ್ಚಭಿನ್ನಃಸ್ರವೇಚ್ಚಾನಿಲಜೋ ಸ್ರಮಚ್ಛಂ ॥ ೧೨ ॥**

ವಾತಪ್ರಕೋಪಜನ್ಯವಾದ ಗ್ರಂಥಿಯ ಲಕ್ಷಣಗಳೇನಂದರೆ—ಗ್ರಂಥಿಯು ವಡತವುಳ್ಳದ್ದಾಗಿರುತ್ತದೆ, ಕತ್ತರಿಸಿದಂತೆ ವ್ಯಥೆಯಾಗುತ್ತಿರುತ್ತದೆ, ಸೀಳಿದಂತೆಯೂ ಮಥನ ಮಾಡಿದಂತೆಯೂ ಹಿಂಸೆಯಾಗುತ್ತಿರುತ್ತದೆ, ಗ್ರಂಥಿಯು ಕಪ್ಪು ಬಣ್ಣವುಳ್ಳದ್ದಾಗಿ ಮೃದುವಾಗಿ ಚರ್ಮದ ಚೀಲದಂತೆ ಉಬ್ಬಿರುತ್ತದೆ, ಒಡದು ಹೋದರೆ ಸ್ವಚ್ಛವಾದ ರಕ್ತವು ಮಾತ್ರ ಸುರಿಯುತ್ತದೆ, ಇದಕ್ಕೆ ವಾತಪ್ರಕೋಪ ಜನ್ಯಗ್ರಂಥಿ ಎಂದು ಹೆಸರು.

**ದಂದಹ್ಯತೇಧೂಪ್ಯತಿವೃಶ್ಚ್ಯತೇಚಪಾಪಚ್ಯತೇಪ್ರಜ್ವಲತೀವಚಾಪಿ॥**
**ರಕ್ತಸ್ಸಪೀತೋಪ್ಯಥವಾಪಿಪಿತ್ತಾದ್ಭಿನ್ನಃಸ್ರವೇದುಷ್ಣಮತೀ ವಚಾಸ್ರಂ ॥ ೧೩ ॥**

ಪಿತ್ತಪ್ರಕೋಪಜನ್ಯವಾದ ಗ್ರಂಥಿಯ ಲಕ್ಷಣಗಳೇನಂದರೆ—ಗ್ರಂಥಿಯು ಬಿಸಿಯಾಗಿ ಸುಡುತ್ತಿರುತ್ತದೆ. ಹೊಗೆಹಾಯುವಂತೆ ತೋರುತ್ತಿರುತ್ತದೆ, ಕತ್ತರಿಸಿದಂತೆಯೂ ಬೇಯಿಸಿದಂತೆಯೂ ಉರಿಯಲ್ಲಿ ಸುಡುವಂತೆಯೂ ಹಿಂಸೆಯಾಗುತ್ತಿರುತ್ತದೆ, ಗಂಟು ಒಡೆದುಹೋದ ಕಾಲದಲ್ಲಿ ಕೆಂಪಗೆ ಅಥವಾ ಸ್ವಲ್ಪ ಹಳದಿ ಬಣ್ಣ ಮಿಶ್ರವಾಗಿ ಬಿಸಿಯಾಗಿರುವ ರಕ್ತವನ್ನು ಅತಿಯಾಗಿ ಸುರಿಸುತ್ತದೆ.

**ಶೀತೋವಿವರ್ಣೋಲ್ಪರುಜೋತಿಕಂಡುಃಪಾಷಾಣವತ್ ಸಂಹನನೋಪಪನ್ನಃ ।**
**ಚಿರಾಭಿವೃದ್ಧಶ್ಚಕಫಪ್ರಕೋಪಾದ್ಭಿನ್ನಃಸ್ರವೇತ್ ಶುಕ್ಲಘನಂಚಪೂಯಂ ॥ ೧೪ ॥**

ಕಫಪ್ರಧಾನವಾದ ಗ್ರಂಥಿರೋಗದ ಲಕ್ಷಣವೇನಂದರೆ—ಗ್ರಂಥಿಯು ಮುಟ್ಟಿ ನೋಡಿದರೆ ತಣ್ಣಗಿರುತ್ತದೆ, ಅದರ ಬಣ್ಣವು ಶರೀರದ ಬಣ್ಣದಂತೆಯೇ ಇರುತ್ತದೆ, ನೋವು ಸ್ವಲ್ಪವಾಗಿಯೂ ನವೆ ಹೆಚ್ಚಾಗಿಯೂ ಇರುತ್ತದೆ, ಕಲ್ಲಿನಂತೆ ಯಾವಾಗ್ಯೂ ಗಟ್ಟಿಯಾಗಿರುತ್ತದೆ, ಗ್ರಂಥಿಯು ದೊಡ್ಡದಾಗಬೇಕಾದರೆ ಸಾವಕಾಶವಾಗಿ ವೃದ್ಧಿಯಾಗುತ್ತದೆ, ಒಡದು ಸೋರಬೇಕಾದರೆ ಶುಭ್ರವಾಗಿ ಗಟ್ಟಿಯಾಗಿರುವ ಕೀವನ್ನು ಸೋರಿಸುತ್ತದೆ.

**ಶರೀರವೃದ್ಧಿಕ್ಷಯವೃದ್ಧಿಹಾನಿಃಸ್ನಿಗ್ಧೋಮಹಾನ್ ಕಂಡುಯುತೋರುಜಶ್ಚ ।**
**ಮೇದಃಕೃತೋಗಚ್ಛತಿಚಾತ್ರಭಿನ್ನೇಪಿಣ್ಯಾಕಸರ್ಪಿಃಪ್ರತಿಮಂತುಮೇದಃ ॥ ೧೫ ॥**

ಮೇದೋದೋಷದಿಂದ ಹುಟ್ಟಿತಕ್ಕ ಗ್ರಂಥಿಗಳು ಮೇದಸ್ಸು ವೃದ್ಧಿಯಾಗಿ ಅದರಿಂದ ಶರೀರವು ವೃದ್ಧಿಹೊಂದಿದರೆ ಗ್ರಂಥಿಗಳೂ ವೃದ್ಧಿಹೊಂದುತ್ತವೆ, ಶರೀರವು ಕ್ಷಯಿಸಿದರೆ ಗ್ರಂಥಿಗಳೂ ಕ್ಷಯಿಸುತ್ತವೆ, ಗ್ರಂಥಿಯು ಜಿಡ್ಡಿನಿಂದ ಕೂಡಿರುತ್ತದೆ, ದೊಡ್ಡದಾಗಿ ನವೆಯಿಂದ ಕೂಡಿ ನೋವಿಲ್ಲದೆ ಇರುತ್ತದೆ, ಇದನ್ನು ಒಡದು ನೋಡಿದರೆ ಬೆಳ್ಳಗೆ ಗಟ್ಟಿಯಾಗಿಯಾಗಲಿ ಗಟ್ಟಿಯಾದ ತುಪ್ಪದಂತಹ ದ್ರವರೂಪವಾಗಿಯಾಗಲಿ ಮೇದಸ್ಸು ಹೊರಡುತ್ತದೆ.

**ವ್ಯಾಯಾಮಜಾತ್ಯೈರಬಲಸ್ಯತೈಸ್ತೈರಾಕ್ಷಿಪ್ಯವಾಯುಸ್ತುಶಿರಾಪ್ರತಾನಂ ।**
**ಸಂಕುಚ್ಯಸಂಪಿಂಡ್ಯವಿಶೋಷ್ಯಚಾಪಿಗ್ರಂಥಿಂಕರೋತ್ಯುನ್ನತಮಾಶುವೃತ್ತಂ ॥ ೧೬ ॥**

ಗ್ರಂಥಿಶ್ಶಿರಾಜಸ್ಸತುಕೃಚ್ಛ್ರಸಾಧ್ಯೋಭವೇದ್ಯದಿಸ್ಯಾತ್ಸ
ರುಜಶ್ಚಲಶ್ಚ ॥
ಸಚಾರುಜಶ್ಚಾಪ್ಯಚಲೋಮಹಾಂಶ್ಚಮರ್ಮೋತ್ಥಿತಶ್ಚಾಪಿ
ವಿವರ್ಜನೀಯಃ ॥ ೧೭ ॥

ಶಿರಾಜನ್ಯಗ್ರಂಥಿರೋಗದ ಲಕ್ಷಣವೇನಂದರೆ—ದುರ್ಬಲನಾದವನು ತನ್ನ ಶಕ್ತಿಗೆ ವಿೂರಿ ವ್ಯಾಯಾಮ ಮಾಡಿದರೆ ದೇಹಗತವಾದ ವಾಯುವು ಪ್ರಕುಪಿತವಾಗಿ ನರಗಳು ಸಂಕೋಚ ಹೊಂದಿ ಉಂಡೆ ಕಟ್ಟಿಕೊಂಡು ಶೋಷಿಸಿ ಹೋಗಿ ದೊಡ್ಡದಾದ ಮತ್ತು ದುಂಡಾದ ಗಂಟುಕಟ್ಟಿಕೊಳ್ಳುವಂತೆ ಮಾಡುತ್ತದೆ, ಇಂತಹ ಗ್ರಂಥಿಯು ನೋವಿನಿಂದ ಕೂಡಿ ಚಲಿಸುತ್ತಿದ್ದರೆ ಕಷ್ಟಸಾಧ್ಯವೆಂಬದಾಗಿಯೂ, ನೋವೂ ಚಲನವೂ ಇಲ್ಲದೆ ಗ್ರಂಥಿಯು ದೊಡ್ಡದಾಗಿರುವುದು ಮತ್ತು ಮರ್ಮಸ್ಥಾನದಲ್ಲಿರುವುದು ಹೀಗಿದ್ದಲ್ಲಿ ಅಸಾಧ್ಯವೆಂಬದಾಗಿಯೂ ತಿಳಿಯಬೇಕು.

ಗಾತ್ರಪ್ರದೇಶೇಕ್ವಚಿದೇವದೋಷಾಃಸಂಮೂರ್ಛಿತಾಮಾಂಸ
ಮಸೃಕ್ಪ್ರದೂಷ್ಯ ॥
ವೃತ್ತಾಸ್ಥಿರಂಮಂದರುಜಂಮಹಾಂತಮನಲ್ಪಮೂಲಂಚಿರ
ವೃದ್ಧ್ಯಪಾಕಂ ॥ ೧೮ ॥
ಕುರ್ವಂತಿಮಾಂಸೋಚ್ಛ್ರಯಮತ್ಯಗಾಧಂತದರ್ಬುದಂಶಾಸ್ತ್ರ
ವಿದೋವದಂತಿ ॥
ವಾತೇನಪಿತ್ತೇನಕಫೇನಚಾಪಿರಕ್ತೇನಮಾಂಸೇನಮೇದಸ
ಸಾಚ ॥ ೧೯ ॥
ತಜ್ಜಾಯತೇತಸ್ಯಚಲಕ್ಷಣಾನಿಗ್ರಂಥೇಸ್ಸಮಾನಾನಿಸದಾಭವಂತಿ ॥

ಅರ್ಬುದರೋಗದ ಲಕ್ಷಣವನ್ನು ಹೇಳುತ್ತಾನೆ—ಮಾಂಸಯುತವಾದ ಶರೀರದ ಯಾವುದಾದರೂ ಭಾಗದಲ್ಲಿ ದೋಷಗಳು ಶೇರಿಕೊಂಡು ಪ್ರಕುಪಿತಗಳಾಗಿ ಮಾಂಸ ಮತ್ತು ರಕ್ತಗಳನ್ನು ಕೆಡಿಸಿ ದುಂಡಗೆ ಗಟ್ಟಿಯಾದ ನೋವು ಕಡಮೆಯಾಗಿಯೂ ದೊಡ್ಡದಾಗಿಯೂ ಬಹಳ ದಿವಸದ ವರಿವಿಗೂ ಬೆಳೆಯುತ್ತಲೇ ಇರುವ ಮತ್ತು ಅಗ್ರತೆಯಾಗಿ ಸಕ್ವನಾಗದಂತಹ ಒಂದು ಗಂಟನ್ನುಂಟುಮಾಡುತ್ತವೆ, ಇದಕ್ಕೆ ಬಾವು ಎಂಬದಾಗಿ ಹೆಸರು, ಇದು ಅತಿ ಭಯಂಕರವಾಗಿರುತ್ತದೆ. ಶಾಸ್ತ್ರದಲ್ಲಿ ಇದನ್ನೇ ಅರ್ಬುದವೆಂದು ಕರೆಯುತ್ತಾರೆ, ಈ ಅರ್ಬುದವೆಂಬ ಬಾವು ರೋಗವು ವಾತಾರ್ಬುದ, ಪಿತ್ತಾರ್ಬುದ, ಶ್ಲೇಷ್ಮಾರ್ಬುದ, ರಕ್ತಾರ್ಬುದ, ಮಾಂಸಾರ್ಬುದ, ಮೇದೋರ್ಬುದವೆಂಬದಾಗಿ ಆರು ವಿಧ, ಇವರ ಲಕ್ಷಣಗಳೆಲ್ಲಾ ಗ್ರಂಥಿಯ ಲಕ್ಷಣಗಳಂತೆಯೇ ಇರುತ್ತವೆ.

**ದೋಷಃ ಪ್ರದುಷ್ಟೋ ರುಧಿರಂ ಶಿರಾಶ್ಚ ಸಂಕುಚ್ಯ ಸಂಪಿಂಡ್ಯ**
**ತತಸ್ತ್ವಪಾಕಂ ॥ ೨೦ ॥**
**ಸಾಸ್ರಾವಮುನ್ನಹ್ಯತಿ ಮಾಂಸಪಿಂಡಂ ಮಾಂಸಾಂಕುರೈರಾಚಿ**
**ತಮಾಶುವೃದ್ಧಂ ॥**
**ಕರೋತ್ಯಜಸ್ರಂ ರುಧಿರಪ್ರವೃತ್ತಿಮಸಾಧ್ಯಮೇತದ್ರುಧಿರಾತ್ಮ**
**ಕಂ ತು ॥ ೨೧ ॥**
**ರಕ್ತಕ್ಷಯೋಪದ್ರವಪೀಡಿತತ್ವಾತ್ಪಾಂಡುರ್ಭವೇದರ್ಬುದ**
**ಪೀಡಿತಸ್ತು ॥**

ಹಿಂದೆ ಹೇಳಿದ ಆರು ವಿಧವಾದ ಅರ್ಬುದಗಳ ನಡುವೆ ಅಸಾಧ್ಯವಾದ ರಕ್ತಾರ್ಬುದದ ಸ್ವರೂಪವನ್ನು ಹೇಳುತ್ತಾನೆ—ಅರ್ಬುದವನ್ನು ಹುಟ್ಟಿಸತಕ್ಕ ದೋಷವು ಪ್ರಕುಪಿತವಾಗಿ ರಕ್ತವನ್ನು ಗಟ್ಟಿಗೊಳಿಸಿ ರಕ್ತನಾಡಿಗಳನ್ನು ಸಂಕುಚಿತವಾಗುವಂತೆ ಮಾಡಿ ಉಂಡೆಗಟ್ಟಿಸಿ ಅಪಕ್ವವಾದ ರಕ್ತವರ್ಣದ ದ್ರವವನ್ನು ಸ್ರವಿಸುವ ಮತ್ತು ಮಾಂಸದ ಮೊಳಕೆಗಳಂತಹ ಗುಳಿಕೆಗಳಿಂದ ತುಂಬಿಕೊಂಡಿರುವ ಜಾಗ್ರತೆಯಾಗಿಯೂ ದೊಡ್ಡದಾಗುವ ಮಾಂಸದ ಉಂಡೆಯನ್ನು ಹುಟ್ಟಿಸುತ್ತದೆ. ಇದರಿಂದ ಯಾವಾಗ್ಯೂ ರಕ್ತವು ಸೋರುತ್ತಲೇ ಇರುತ್ತದೆ, ಈ ರಕ್ತಾರ್ಬುದವು ಅಸಾಧ್ಯವೆಂದು ತಿಳಿಯಬೇಕು, ಈ ರೀತಿಯಾಗಿ ರಕ್ತವು ಕ್ಷಯಿಸುತ್ತ ಹೋಗಿ ಈ ಅರ್ಬುದ ರೋಗಿಯು ಕ್ರಮೇಣ ಬೆಳ್ಳಗಾಗಿ ಹೋಗುತ್ತಾನೆ.

**ಮುಷ್ಟಿಪ್ರಹಾರಾದಿಭಿರರ್ದಿತೇಂಗೇ ಮಾಂಸಂ ಪ್ರದುಷ್ಟಂ ಜನ**
**ಯೇದ್ಧಿ ಶೋಥಂ ॥ ೨೨ ॥**
**ಅವೇದನಂ ಸ್ನಿಗ್ಧಮನನ್ಯವರ್ಣಮಪಾಕಮಶ್ಮೋಪಮಮ**
**ಪ್ರಚಾಲ್ಯಂ ॥**
**ಪ್ರದುಷ್ಟಮಾಂಸಸ್ಯ ನರಸ್ಯ ಗಾಢಮೇತದ್ಭವೇನ್ಮಾಂಸಪರಾಯ**
**ಣಸ್ಯ ॥ ೨೩ ॥**
**ಮಾಂಸಾರ್ಬುದಂ ತ್ವೇತದಸಾಧ್ಯಮುಕ್ತಂ....................**

ಅಸಾಧ್ಯವಾದ ಮಾಂಸಾರ್ಬುದದ ಸ್ವರೂಪವನ್ನು ಹೇಳುತ್ತಾನೆ—ಕೈಯ್ಯ ಮುಷ್ಟಿಯಿಂದ ಗುದ್ದುವುದು ಮೊದಲಾದ ಮೂಗಗಾಯವಾಗಬಹುದಾದ ಅಭಿಘಾತಗಳಿಂದ ದೇಹದ ಭಾಗವು ಪೀಡಿಸಲ್ಪಟ್ಟು ಆದರಿಂದ ಮಾಂಸವು ಕೆಟ್ಟು ಹೋಗಿ ಬಾತು ಶೋಭೆ ಬರುತ್ತದೆ, ನೋವು ಇರುವುದಿಲ್ಲ, ಚರ್ಮದ ಮೇಲೆ ಮಾತ್ರ ಜಿಡ್ಡಿರುತ್ತದೆ, ಶೋಭೆ ಇರುವ ಭಾಗವು ದೇಹದ ವರ್ಣದಂತಹ ವರ್ಣವೇ ಉಳ್ಳದ್ದಾಗಿರುತ್ತದೆ, ಬಾತಿರುವ ಭಾಗವು ಪಕ್ವವಾಗುವುದೇ ಇಲ್ಲ

ಅಂದರೆ ಮೆತ್ತಗಾಗುವುದು ಒಡೆಯುವುದು ಇಂತಹ ಲಕ್ಷಣಗಳೊಂದೂ ಕಂಡು ಬರುವುದಿಲ್ಲ, ಕಲ್ಲಿನಂತೆ ಅಲ್ಲಾಡದೆ ಶೋಭೆಯು ಗಟ್ಟಿಯಾಗಿರುತ್ತದೆ, ಈ ರೀತಿ ಯಾಗಿ ಮಾಂಸವು ಕೆಟ್ಟುಹೋಗಿ ಹುಟ್ಟತಕ್ಕ ಮಾಂಸಾರ್ಬುದವೆಂಬ ರೋಗವು ಪ್ರಾಯಿಕವಾಗಿ ಮಾಂಸವನ್ನು ತಿನ್ನತಕ್ಕ ಸ್ವಭಾವವುಳ್ಳವರಿಗೇನೇ ಉಂಟಾಗು ತ್ತದೆ, ಇದು ಅಸಾಧ್ಯ.

..............................ಸಾಧ್ಯೇಷ್ವಪೀಮಾನಿತುವರ್ಜಯೇಚ್ಚ ॥
ಸಂಪ್ರಸ್ರುತಂಮರ್ಮಣಿಯಚ್ಚಜಾತಂಸ್ರೋತಸ್ಸುವಾಯಚ್ಚ
ಭವೇದಚಾಲ್ಯಂ ॥ ೨೪ ॥

ಅಸಾಧ್ಯಗಳೆಂದು ಹಿಂದೆ ಹೇಳಿದ ರಕ್ತಾರ್ಬುದ ಮಾಂಸಾರ್ಬುದಗಳನ್ನು ಬಿಟ್ಟು ಉಳಿದ ನಾಲ್ಕು ವಿಧಗಳಾದ ಅರ್ಬುದಗಳಲ್ಲಿ ಕೂಡ ಈ ಕೆಳಗೆ ಹೇಳುವ ದುರ್ಲಕ್ಷಣಗಳು ಕಂಡುಬಂದಲ್ಲಿ ಅವುಗಳನ್ನೂ ಅಸಾಧ್ಯಗಳೆಂದೇ ತಿಳಿದುಕೊಳ್ಳ ತಕ್ಕದ್ದು, ಲಕ್ಷಣಗಳ್ಯಾವುವೆಂದರೆ—ರಕ್ತವಾಗಲಿ ನೀರಿನಂತಹ ದ್ರವವಾಗಲಿ ಯಾವಾಗ್ಲೂ ತೊಟ್ಟಿಕ್ಕುತ್ತಿರುವುದು, ಅರ್ಬುದವು ಮರ್ಮಸ್ಥಾನದಲ್ಲಿ ಇದ್ದು ಕೊಂಡಿರುವುದು, ಮೂಗು ಕಿವಿ ಮೊದಲಾದ ಸ್ರೋತೋ ಮಾರ್ಗಗಳಲ್ಲಿ ಇದ್ದು ಕೊಂಡಿರುವುದು, ಅರ್ಬುದವು ನಿಶ್ಚಲವಾಗಿ ಸ್ಥಿರವಾಗಿರುವುದು, ಇವು ಅಸಾಧ್ಯ ಲಕ್ಷಣಗಳು.

ಯಜ್ಜಾಯತೇನ್ಯತ್ ಖಲುಪೂರ್ವಜಾತೇಜ್ಞೇಯಂತದಧ್ಯ
ರ್ಬುದಮರ್ಬುದಜ್ಞೈಃ ॥
ಯದ್ದ್ವಂದ್ವಜಾತಂಯುಗಪತ್ ಕ್ರಮಾದ್ವಾದ್ವಿರರ್ಬುದಂತಚ್ಚ
ಭವೇದಸಾಧ್ಯಂ ॥ ೨೫ ॥

ಈ ಅರ್ಬುದ ರೋಗದಲ್ಲಿ ಮೊದಲು ಒಂದು ಅರ್ಬುದವು ಹುಟ್ಟಿ ನಂತರ ಕೆಲವು ಕಾಲ ಕಳೆದ ಮೇಲೆ ಅದರ ಮಗ್ಗಲಿನಲ್ಲಿಯೇ ಮತ್ತೊಂದು ಅಂತಹ ಮಾಂಸ ಗ್ರಂಥಿಯೇ ಹುಟ್ಟಿದಲ್ಲಿ ಅದಕ್ಕೆ ಅಧ್ಯರ್ಬುದವೆಂಬದಾಗಿ ಅರ್ಬುದ ರೋಗದ ಮರ್ಮವನ್ನು ತಿಳಿದವರು ಹೇಳುತ್ತಾರೆ, ಅರ್ಬುದಗಳೆಂಬ ಮಾಂಸ ಗ್ರಂಥಿಗಳು ಎರಡೆರಡಾಗಿ ಒಂದೇ ಸಾರಿಯಾಗಲಿ ಕ್ರಮವಾಗಿಯಾಗಲಿ ಏಳುತ್ತ ಬಂದಲ್ಲಿ ಅದಕ್ಕೆ ದ್ವಿರರ್ಬುದವೆಂದು ಹೆಸರು, ಅದು ಕೂಡ ಅಸಾಧ್ಯವಾದ ರೋಗವೆಂದೇ ತಿಳಿಯಬೇಕು.

ನಪಾಕಮಾಯಾಂತಿಕಫಾಧಿಕತ್ವಾನ್ಮೇದೋಬಹುತ್ವಾಚ್ಚವಿಶೇಷ
ತಸ್ತು ॥
ದೋಷಸ್ಥಿರತ್ವಾದ್ಗ್ರಥನಾಚ್ಚತೇಷಾಂಸರ್ವಾರ್ಬುದಾನ್ಯೇವ
ನಿಸರ್ಗತಸ್ತು ॥ ೨೬ ॥

ಹಿಂದೆ ಹೇಳಿದ ಆರು ವಿಧವಾದ ಅರ್ಬುದಗಳೆಂಬ ಮಾಂಸ ಗ್ರಂಥಿಗಳೂ, ಕಫವು ಅಧಿಕವಾಗಿರೋಣವರಿಂದಲೂ, ಮೇದಸ್ಸು ಸಹ ಕಫದಂತೆಯೇ ಹೆಚ್ಚಾಗಿಯೇ ಇರೋಣದರಿಂದಲೂ, ಅರ್ಬುದಗಳನ್ನು ಹುಟ್ಟಿಸತಕ್ಕ ದೋಷಗಳು ಯಾವಾಗ್ಯೂ ಹೆಚ್ಚುಕಡಮೆಯಾಗದೆ ಸ್ಥಿರವಾಗಿಯೇ ಇರೋಣದರಿಂದಲೂ, ದೋಷಗಳು ಕೂಡ ಒಂದೊಂದು ಗಂಟುಹಾಕಿಕೊಂಡೇ ಇರೋಣದರಿಂದಲೂ ರೋಗಸ್ವಭಾವದಿಂದಲೂ ಪಕ್ವವಾಗುವುದೇ ಇಲ್ಲ.

ಇಲ್ಲಿಗೆ ಗಲಗಂಡಗಂಡಮಾಲಾಪಚೀಗ್ರಂಥ್ಯಾದಿನಿದಾನ ಸಂಪೂರ್ಣ.

---

## ಶ್ಲೀಪದನಿದಾನ.

ಯಸ್ಸಜ್ವರೋವಂಕ್ಷಣಜೋಭೃಶಾರ್ತಿಶ್ಶೋಥೋನೃಣಾಂಪಾದಗತಃಕ್ರಮೇಣ ॥
ತತ್‌ಶ್ಲೀಪದಂಸ್ಯಾತ್ಕರಕರ್ಣನೇತ್ರಶಿಶ್ನೌಷ್ಠನಾಸಾಸ್ವಪಿಕೇಚಿದಾಹುಃ ॥ ೧ ॥
ವಾತಜಂಕೃಷ್ಣರೂಕ್ಷಂಚಸ್ಫುಟಿತಂತೀವ್ರವೇದನಂ ॥
ಅನಿಮಿತ್ತರುಜಂತಸ್ಯಬಹುಶೋಜ್ವರಏವಚ ॥ ೨ ॥
ಪಿತ್ತಜಂಪೀತಸಂಕಾಶಂದಾಹಜ್ವರಯುತಂಮೃದುಃ ॥

ಶ್ಲೀಪದರೋಗ ನಿದಾನವನ್ನು ಹೇಳುತ್ತಾನೆ—ಶ್ಲೀಪದವೆಂದರೆ ನಾವು ನೋಡುವ, ಕಾಲು ಬಾತುಕೊಂಡಿರುವ ಒಂದು ಬಗೆಯ ರೋಗ, "ಆನೆಕಾಲು" ಎಂಬದಾಗಿ ಭಾಷೆಯಲ್ಲಿ ವ್ಯವಹರಿಸುತ್ತಾರೆ, ಈ ರೋಗಿಗಳನ್ನು ನಮ್ಮ ಪ್ರಾಂತ್ಯದಲ್ಲಿ ನೋಡುವುದು ಸಾಧ್ಯವಾಗುವುದಿಲ್ಲ, ಆದರೆ ಮದರಾಸಿನಲ್ಲಿ ಅರ್ಧ ಜನರೇ ಈ ರೋಗದವರಾಗಿರುತ್ತಾರೆ, ಈ ರೋಗದ ಲಕ್ಷಣವೇನಂದರೆ—ತೊಡೆಯಲ್ಲಿ ಗೆಜ್ಜೆಕಟ್ಟಿನ ಹತ್ತಿರ ಬಾವು ಪ್ರಾರಂಭವಾಗಿ ಬಹಳ ನೋವಿನೊಡನೆಯೂ ಜ್ವರದೊಡನೆಯೂ ಕೂಡಿಕೊಂಡು ಆ ಶೋಭೆಯೇ ಕ್ರಮೇಣ ಮೊಣಕಾಲಿನಿಂದ ಕೆಳಭಾಗಕ್ಕೆ ಇಳಿದು ನಿಲ್ಲುತ್ತದೆ. ಈ ರೀತಿಯಾಗಿ ಕಾಲು ಬೋದು ಬರುವುದಕ್ಕೇನೇ ಶ್ಲೀಪದರೋಗವೆಂದು ಹೆಸರು, ಇಂತಹ ಬೋದು ಕೈ, ಕಿವಿ, ಕಣ್ಣು, ಶಿಶ್ನ (ಪುಂಜನನೇಂದ್ರಿಯ) ತುಟಿಗಳು, ಮೂಗು ಇವುಗಳಲ್ಲೆಲ್ಲಾ ಬರುತ್ತದೆಂದು ಕೆಲವರು ಹೇಳುತ್ತಾರೆ, ವಾತಪ್ರಕೋಪಜನ್ಯವಾದ ಶ್ಲೀಪದರೋಗದಲ್ಲಿ ರೋಗವಿರತಕ್ಕ ಭಾಗವು ಕಪ್ಪಾಗಿ ಒರಟಾಗಿರುವುದಲ್ಲದೆ ಒಡೆದು ಹೋಗಿರುತ್ತದೆ, ಬಹಳ ನೋವಿರುತ್ತದೆ, ನೋವಿನ ಕಾರಣವೇ ಗೊತ್ತಾಗುತ್ತಿರುವುದಿಲ್ಲ, ಜ್ವರವು ಬಹಳ ಹೆಚ್ಚಾಗಿರುತ್ತದೆ, ಪಿತ್ತಪ್ರಕೋಪಜನಿತವಾದ ಶ್ಲೀಪದರೋಗದಲ್ಲಿ ರೋಗವಿರುವ

ಭಾಗವು ಹಳದಿಯ ಬಣ್ಣವಾಗಿರುತ್ತದೆ, ಮೆತ್ತಗಿರುತ್ತದೆ, ಉರಿಯೂ ಜ್ವರವೂ ಇರುತ್ತವೆ, ಶ್ಲೇಷ್ಮಪ್ರಕೋಪಜನ್ಯವಾದ ಶ್ಲೀಪದರೋಗದಲ್ಲಿ ರೋಗವಿರುವ ಭಾಗವು ಜಿಡ್ಡಾಗಿ ಬೆಳ್ಳಗಿರುತ್ತದೆ, ಭಾರವಾಗಿ ಗಟ್ಟಿಯಾಗಿರುತ್ತದೆ.

ವಲ್ಮೀಕಮಿವಸಂಜಾತಂಕಂಟಕೈರುಪಚೀಯತೇ ॥ ೩ ॥
ಅಬ್ದಾತ್ಮಕಂಮಹತ್ತಚ್ಚವರ್ಜನೀಯಂವಿಶೇಷತಃ ॥

ಶ್ಲೀಪದರೋಗದ ಅಸಾಧ್ಯ ಲಕ್ಷಣವನ್ನು ಹೇಳುತ್ತಾನೆ— ಈ ಶ್ಲೀಪದ ರೋಗವು ಹುಟ್ಟುವಾಗಲೇ ಹುತ್ತದ ಕೋವೆಯಂತೆ ಅನೇಕ ಗಂಟುಗಳಿಂದ ಕೂಡಿಕೊಂಡಿರುವುದು, ಕೈಯಿಂದ ಸವರಿ ನೋಡಿದರೆ ಮುಳ್ಳುಗಳಂತೆ ತಡೆಯುತ್ತಿರುವುದು, ಇದು ಪ್ರಾಪ್ತವಾಗಿ ಒಂದು ವರುಷವಾಗಿ ಹೋಗಿರುವುದ, ಮತ್ತು ಬಹಳ ದೊಡ್ಡದಾಗಿರುವುದು, ಹೀಗಿದ್ದಲ್ಲಿ ಚಿಕಿತ್ಸೆಗೆ ಅಸಾಧ್ಯವೆಂದಾಗಿ ಬಿಡತಕ್ಕದ್ದು.

ತ್ರೀಣ್ಯಪ್ಯೇತಾನಿಜಾನೀಯಾತ್ಶ್ಲೀಪದಾನಿಕಫೋಚ್ಛ್ರಯಾತ್ ।
ಗುರುತ್ವಂಚಮಹತ್ವಂಚಯಸ್ಮಾನ್ನಾಸ್ತಿಕಫಂವಿನಾ ॥

ಹಿಂದೆ ಹೇಳಿದ ಮೂರು ವಿಧವಾದ ಶ್ಲೀಪದದಲ್ಲಿಯೂ ಪ್ರಧಾನವಾಗಿ ಕಫವೇ ಉಲ್ಬಣವಾಗಿರುವುದಾಗಿ ತಿಳಿಯಬೇಕು. ಯಾತಕ್ಕೆಂದರೆ ಈ ಮೂರು ವಿಧವಾದ ಶ್ಲೀಪದರೋಗದಲ್ಲಿಯೂ ಕಂಡು ಬರುವ ಕಾಲಿನ ಭಾರವೂ ದಪ್ಪನಾಗುವಿಕೆಯೂ ಈ ಎರಡೂ ಕಫಕಾರ್ಯಗಳೇ ಆಗಿವೆ.

ಪುರಾಣೋದಕಭೂಯಿಷ್ಠಾಃಸರ್ವರ್ತುಷುಚಶೀತಲಾಃ ॥ ೫ ॥
ಯೇದೇಶಾಸ್ತೇಷುಜಾಯಂತೇಶ್ಲೀಪದಾನಿವಿಶೇಷತಃ ॥

ಈ ಶ್ಲೀಪದವೆಂಬ ರೋಗವು ಜವುಗು ಪ್ರದೇಶದಲ್ಲಿ ವಾಸಮಾಡುವ ಜನರಿಗೂ ಮತ್ತು ಋತುಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಒಂದೇ ವಿಧವಾದ ಶೀತವಾದ ದೇಶದಲ್ಲಿ ವಾಸಮಾಡುವ ಜನಗಳಿಗೂ ವಿಶೇಷವಾಗಿ ಬರುತ್ತವೆ.

ಯತ್ಶ್ಲೇಷ್ಮಲಾಹಾರವಿಹಾರಜಾತಂಪುಂಸಃಪ್ರಕೃತ್ಯಾಪಿ
ಕಫಾತ್ಮಕಸ್ಯ ॥ ೬ ॥
ಸಾಸ್ರಾವಮತ್ಯುನ್ನತಸರ್ವಲಿಂಗಂಸಕಂಡುರಂಶ್ಲೇಷ್ಮಯುತಂ
ವಿವರ್ಜ್ಯಂ ॥

ಅಸಾಧ್ಯ ಲಕ್ಷಣವನ್ನು ಹೇಳುತ್ತಾನೆ—ಸ್ವಭಾವತಃ ಶ್ಲೇಷ್ಮಪ್ರಕೃತಿಯವರಿಗೆ ಈ ರೋಗವು ಪ್ರಾಪ್ತವಾದರೂ ಶ್ಲೇಷ್ಮ ವೃದ್ಧಿಮಾಡತಕ್ಕ ಆಹಾರವಿಹಾರ

ಗಳಲ್ಲಿ ಆಸಕ್ತರಾದವರಿಗೆ ಪ್ರಾಪ್ತವಾದರೂ ಯಾಪಾಗ್ಯೂ ಶಕ್ತಕೀವುಗಳು ಸ್ರವಿಸುತಲಿದ್ದರೂ ರೋಗಕ್ಕೆ ಹೇಳಿರುವ ಸಮಸ್ತ ಲಕ್ಷಣಗಳೂ ಸಂಪೂರ್ಣವಾಗಿದ್ದು ನೆವೆಯಿದ್ದರೂ ಅಸಾಧ್ಯವೆಂದು ತಿಳಿದುಬಿಟ್ಟು ಬಿಡತಕ್ಕದ್ದು.

ಇಲ್ಲಿಗೆ ಶ್ಲೀಪದನಿದಾನ ಸಂಪೂರ್ಣ.

---

## ವಿದ್ರಧಿನಿದಾನ.

ತ್ವಗ್ರಕ್ತಮಾಂಸಮೇದಾಂಸಿಸಂದೂಷ್ಯಾಸ್ಥಿಸಮಾಶ್ರಿತಾಃ ॥
ದೋಷಾಶ್ಯೋಥಂಶನೈರ್ಘೋರಂಜನಯಂತ್ಯುಚ್ಛ್ರಿತಾಂಭೃಶಂ ೧
ಮಹಾಮೂಲಂರುಜಾವಂತಂವೃತ್ತಂವಾಪ್ಯಥವಾಯತಂ ॥
ಸವಿದ್ರಧಿರಿತಿಖ್ಯಾತೋವಿಜ್ಞೇಯಃಷಡ್ವಿಧಶ್ಚಸಃ ॥ ೨ ॥
ಪೃಥಗ್ದೋಷೈಸ್ಸಮಸ್ತೈಶ್ಚಕ್ಷತೇನಾಪ್ಯಸೃಜಾತಥಾ ॥
ಷಣ್ಣಾಮಪಿಹಿತೇಷಾಂತುಲಕ್ಷಣಂಸಂಪ್ರಚಕ್ಷತೇ ॥ ೩ ॥

ವಿದ್ರಧಿರೋಗದ ನಿದಾನವನ್ನು ಹೇಳುತ್ತಾನೆ—ಪ್ರಕೋಪಕಾರಣಗಳಿಂದ ಪ್ರಕುಪಿತಗಳಾದ ವಾತಾದಿ ದೋಷಗಳು ಚರ್ಮ, ರಕ್ತ, ಮಾಂಸ, ಮೇದಸ್ಸು ಇವುಗಳನ್ನು ದೋಷಯುಕ್ತಗಳನ್ನಾಗಿ ಮಾಡಿ ಅಸ್ಥಿಯನ್ನಾಶ್ರಯಿಸಿಕೊಂಡು ಮೆಲ್ಲಗೆ ಭಯಂಕರವಾದ ಮತ್ತು ಉನ್ನತವಾದ ಶೋಭೆಯನ್ನು ಉಂಟುಮಾಡುತ್ತವೆ, ಈ ಶೋಭೆಯು ಮಹತ್ತರವಾದ ಆರ್ಭಟನೊಡನೆ ಏಳುವುದಕ್ಕೆ ಪ್ರಾರಂಭವಾಗುತ್ತದೆ, ನೋವು ವೇದನೆ ಬಹಳವಾಗಿರುತ್ತದೆ. ದುಂಡಗಿರುತ್ತದೆ, ಒಂದೊಂದು ವೇಳೆ ಹರಡಿಕೊಂಡಿರುವುದೂ ಉಂಟು, ಹೀಗಿರುವ ಬಾವಿಗೆ ವಿದ್ರಧಿ ಎಂಬದಾಗಿ ಹೆಸರು, ಇದು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ಕ್ಷತಜನ್ಯ, ರಕ್ತಜನ್ಯ ಎಂಬದಾಗಿ ಆರು ವಿಧ.

ಕೃಷ್ಣೋರುಣೋವಾವಿಷಮೋಭೃಶಮತ್ಯರ್ಥವೇದನಃ ॥
ಚಿತ್ರೋತ್ಥಾನಪ್ರಪಾಕಶ್ಚವಿದ್ರಧಿರ್ವಾತಸಂಭವಃ ॥ ೪ ॥

ವಾತಪ್ರಕೋಪಜನ್ಯ ವಿದ್ರಧಿಯ ಲಕ್ಷಣಗಳ್ಯಾವವೆಂದರೆ—ಬಾವು ಕಪ್ಪುಬಣ್ಣವಾಗಿಯೂ ಸ್ವಲ್ಪ ಬಿಳುಪು ಮಿಶ್ರವಾದ ಕೆಂಪು ಬಣ್ಣವಾಗಿಯೂ ಇರುವುದು ಜಾಗ್ರತೆಯಾಗಿ ಚಿಕ್ಕದು ದೊಡ್ಡದು ಆಗುವುದು, ಅತಿಯಾಗಿ ವೇದನೆಯಿರುವುದು ಈ ಬಾವು ಏಳುವುದಾಗಲಿ ಪಕ್ವವಾಗುವುದಾಗಲಿ ಹೇಳುವುದಕ್ಕಸಾಧ್ಯವಾಗುವಷ್ಟು ವಿಚಿತ್ರವಾಗಿರುವುದು, ಹೀಗಿದ್ದಲ್ಲಿ ವಾತವಿದ್ರಧಿ ಎಂದು ತಿಳಿಯಬೇಕು.

**ಪಕ್ವೋದುಂಬರಸಂಕಾಶಃ ಶ್ಯಾವೋ ವಾ ಜ್ವರದಾಹವಾನ್ ॥**
**ಕ್ಷಿಪ್ರೋತ್ಥಾನಪ್ರಪಾಕಶ್ಚ ವಿದ್ರಧಿಃ ಪಿತ್ತಸಂಭವಃ ॥ ೫ ॥**

ಪಿತ್ತಪ್ರಕೋಪಜನ್ಯವಿದ್ರಧಿಯ ಲಕ್ಷಣಗಳೇನಂದರೆ—ಪಕ್ವವಾದ ಅತ್ತಿಯ ಹಣ್ಣಿನ ಬಣ್ಣದಲ್ಲಿಯಾಗಲಿ ಧೂಮ್ರವರ್ಣವಾಗಿಯಾಗಲಿ ಇರುವುದು, ಜ್ವರ ಮತ್ತು ಉರಿ ಸಹ ಇರುವುದು, ಏಳುವುದು ಮತ್ತು ಪಕ್ವವಾಗುವುದು ಸಹ ಅತಿ ಜಾಗ್ರತೆಯಾಗಿಯೇ ನಡೆಯುತ್ತಿರುವುದು, ಇವು ಪಿತ್ತ ವಿದ್ರಧಿಯ ಲಕ್ಷಣಗಳು.

**ಶರಾವಸದೃಶಃ ಪಾಂಡುಃ ಶೀತಸ್ನಿಗ್ಧೋಽಲ್ಪವೇದನಃ ॥**
**ಚಿರೋತ್ಥಾನಪ್ರಪಾಕಶ್ಚ ವಿದ್ರಧಿಃ ಕಫಸಂಭವಃ ॥ ೬ ॥**

ಕಫವಿದ್ರಧಿಯ ಲಕ್ಷಣಗಳು—ಶರಾವೆಯ ಆಕಾರವಾಗಿ ಏಳುವುದು, ಬೆಳ್ಳಗಿರುವುದು, ಮುಟ್ಟಿ ನೋಡಿದರೆ ತಣ್ಣಗೂ ನುಣ್ಣಗಾಗಿಯೂ ಇರುವುದು, ನೋವು ಬಹಳವಾಗಿರುವುದಕ್ಕಿಲ್ಲ, ಸಾವಕಾಶವಾಗಿ ಏಳುವುದು ಮತ್ತು ಸಾವಕಾಶವಾಗಿಯೇ ಪಕ್ವವಾಗುವುದು, ಹೀಗಿರುವುದು ಕಫವಿದ್ರಧಿಯ ಲಕ್ಷಣಗಳು.

**ತನುಪೀತಸಿತಾಶ್ಚೈಷಾಮಾಸ್ರಾವಾಃ ಕ್ರಮಶಃ ಸ್ಮೃತಾಃ ॥**

ಹಿಂದೆ ಹೇಳಿದ ಮೂರು ವಿಧವಾದ ವಿದ್ರಧಿಗಳಿಂದಲೂ ಸ್ರವಿಸುವ ದ್ರವವು ಕ್ರಮವಾಗಿ ಮೊದಲನೆಯುದರಲ್ಲಿ ಸ್ವಲ್ಪವಾಗಿ ವಾತಾನುರೂಪವಾದ ವರ್ಣವುಳ್ಳದ್ದಾಗಿಯೂ, ಎರಡನೆಯದರಲ್ಲಿ ಹಳದಿ ಬಣ್ಣದ್ದಾಗಿಯೂ, ಮೂರನೆಯದರಲ್ಲಿ ಬೆಳ್ಳಗೂ ಇರುತ್ತದೆ.

**ನಾನಾವರ್ಣರುಜಾಸ್ರಾವೋ ಘಾಟಾಲೋ ವಿಷಮೋ ಮಹಾನ್ ।೭।**
**ವಿಷಮಂ ಪಚ್ಯತೇ ಚಾಪಿ ವಿದ್ರಧಿಸ್ಸಾನ್ನಿಪಾತಿಕಃ ॥**

ತ್ರಿದೋಷಸನ್ನಿಪಾತಜನ್ಯವಾದ ವಿದ್ರಧಿಯ ಲಕ್ಷಣವನ್ನು ಹೇಳುತ್ತಾನೆ—ವಿದ್ರಧಿಯು ವೇದನೆಯೂ ಮತ್ತೂ ಸ್ರಾವವೂ ಸಹ ನಾನಾ ವಿಧವಾಗಿಯೂ ವಿಚಿತ್ರ ವರ್ಣಗಳುಳ್ಳದ್ದಾಗಿಯೂ ಇರುವುದು, ಅದರ ಅಗ್ರಭಾಗವು ಬಹಳ ದೊಡ್ಡದಾಗಿರುವುದು, ವಿದ್ರಧಿಯು ಕೂಡ ಒಂದೊಂದು ವೇಳೆ ದೊಡ್ಡದಾಗಿಯೂ ಮತ್ತೊಂದೊಂದು ವೇಳೆ ಚಿಕ್ಕದಾಗಿಯೂ ಇರುವುದು, ಭಯಂಕರವಾಗಿರುವುದು, ಪರಿಪಕ್ವವಾಗಬೇಕಾದರೆ ಕೂಡ ಒಂದು ವೇಳೆ ಜಾಗ್ರತೆಯಾಗಿಯೂ ಮತ್ತೊಂದು ವೇಳೆ ನಿಧಾನವಾಗಿಯೂ ಪರಿಪಕ್ವವಾಗುವುದು, ಹೀಗಿದ್ದರೆ ಅದಕ್ಕೆ ಸನ್ನಿಪಾತ ಜನ್ಯ ವಿದ್ರಧಿ ಎಂಬುದಾಗಿ ಹೆಸರು.

ತೈಸ್ತೈರ್ಭಾವೈರಭಿಹತೇಕ್ಷತೇವಾಪಥ್ಯಕಾರಿಣಃ ॥ ೮ ॥
ಕ್ಷತೋಷ್ಮಾವಾಯುವಿಸೃತಃಸರಕ್ತಂಪಿತ್ತಮೀರಯೇತ್ ॥
ಜ್ವರಸ್ತೃಷ್ಣಾ ಚದಾಹಶ್ಚ ಜಾಯತೇತಸ್ಯದೇಹಿನಃ ॥ ೯ ॥
ಆಗಂತುರ್ವಿದ್ರಧಿರ್ಜ್ಞೇಯಃಪಿತ್ತವಿದ್ರಧಿಲಕ್ಷಣಃ ॥

ಆಗಂತುಕಕಾರಣಜನ್ಯವಾದ ವಿದ್ರಧಿಯ ಲಕ್ಷಣಗಳನ್ನು ಹೇಳುತ್ತಾನೆ— ಯಾವ ಭಾಗದಲ್ಲಿಯಾದರೂ ಪೆಟ್ಟು ಬಿದ್ದು ರಕ್ತ ಸೋರದೆ ಹಾಗೆ ಗಾಯವಾಗುವುದು, ಒಂದು ವೇಳೆ ರಕ್ತವೂ ಸೋರುವುದು, ಈ ರೀತಿಯಲ್ಲಿರುವಾಗ್ಯೆ ಅಪಥ್ಯಕಾರಿಣಃ ಅಂದರೆ ವಿರುದ್ಧಗಳಾದ ಆಹಾರವಿಹಾರಗಳನ್ನು ಸೇವಿಸೋಣದರಿಂದ ಗಾಯದ ಉಷ್ಣವು ಪ್ರಕೋಪ ಹೊಂದಿದ ವಾಯುವಿನಿಂದ ವಿಸ್ತರಿಸಲ್ಪಟ್ಟು ರಕ್ತ ಮತ್ತು ಪಿತ್ತಗಳಿಗೆ ಚಲನೆಕೊಟ್ಟು ಬಾವನ್ನುಂಟುಮಾಡುತ್ತದೆ. ಜ್ವರ, ಬಾಯಾರಿಕೆ, ಮೈಯುರಿ ಇವುಗಳೆಲ್ಲಾ ಉಂಟಾಗುತ್ತವೆ, ಇದಕ್ಕೆ ಆಗಂತುಕ ಕಾರಣಜನ್ಯವಿದ್ರಧಿ ಎಂಬದಾಗಿ ಹೆಸರು, ಇದರ ಲಕ್ಷಣಗಳೆಲ್ಲಾ ಪಿತ್ತವಿದ್ರಧಿಯ ಲಕ್ಷಣಗಳಂತೆಯೇ ಇರುತ್ತವೆ.

ಕೃಷ್ಣಸ್ಫೋಟಾವೃತಶ್ಯಾವಸ್ತೀವ್ರದಾಹರುಜಾಕರಃ ॥ ೧೦ ॥
ಪಿತ್ತವಿದ್ರಧಿಲಿಂಗಸ್ತುರಕ್ತವಿದ್ರಧಿರುಚ್ಯತೇ ॥

ರಕ್ತವಿದ್ರಧಿಯ ಲಕ್ಷಣಗಳನ್ನು ಹೇಳುತ್ತಾನೆ—ಬಾವಿನ ಮೇಲೆ ಕಪ್ಪಾದ ಗುಳ್ಳೆಗಳಿರುತ್ತವೆ, ಬಾವಿನ ಬಣ್ಣವು ಹೊಗೆಯ ಬಣ್ಣವಾಗಿರುತ್ತದೆ. ಬಹಳ ಉರಿ, ನೋವು ಇರುತ್ತವೆ, ಇವುಗಳಲ್ಲದೆ ಪಿತ್ತವಿದ್ರಧಿಯ ಲಕ್ಷಣಗಳು ಇರುತ್ತವೆ, ಇದಕ್ಕೆ ರಕ್ತವಿದ್ರಧಿ ಎಂಬದಾಗಿ ಹೆಸರು

ಪೃಥಕ್ಸಂಭೂಯವಾದೋಷಾಃಕುಪಿತಾಗುಲ್ಮರೂಪಿಣಂ ॥ ೧೧ ॥
ವಲ್ಮೀಕವತ್ಸಮುನ್ನದ್ಧಮಂತಃಕುರ್ವಂತಿವಿದ್ರಧಿಂ ॥
ಗುದೇಬಸ್ತಿಮುಖೇನಾಭ್ಯಾಂಕುಕ್ಷೌವಂಕ್ಷಣಯೋಸ್ತಥಾ ॥ ೧೨ ॥
ವೃಕ್ಕಯೋಃಪ್ಲೀಹ್ನಿಯಕೃತಿಹೃದಿವಾಕ್ಲೋಮ್ನಿವಾಪ್ಯಥ ॥
ತೇಷಾಮುಕ್ತಾನಿಲಿಂಗಾನಿಬಾಹ್ಯವಿದ್ರಧಿಲಕ್ಷಣೈಃ ॥ ೧೩ ॥
ಅಧಿಷ್ಠಾನವಿಶೇಷೇಣಲಿಂಗಂಶೃಣುವಿಶೇಷತಃ ॥
ಗುದೇವಾತನಿರೋಧಶ್ಚಬಸ್ತೌಕೃಚ್ಛ್ರಾಲ್ಪಮೂತ್ರತಾ ॥ ೧೪ ॥
ನಾಭ್ಯಾಂಹಿಕ್ಕಾತಥಾಟೋಪಃಕುಕ್ಷೌಮಾರುತಕೋಪನಂ ॥
ಕಟೀಪೃಷ್ಠಗ್ರಹಸ್ತೀವ್ರೋವಂಕ್ಷಣೋತ್ಥೇತುವಿದ್ರಧೌ ॥ ೧೫ ॥

ವೃಕ್ಕಯೋಃಪಾರ್ಶ್ವಸಂಕೋಚಃಪ್ಲೀಹ್ನ್ಯುಚ್ಛ್ವಾಸಾವರೋಧನಂ ॥
ಸರ್ವಾಂಗಪ್ರಗ್ರಹಸ್ತ್ರೀವ್ರೋಹೃದಿಕಾಸಶ್ಚಜಾಯತೇ ॥ ೧೬ ॥
ಶ್ವಾಸೋಯಕೃತಿಹಿಕ್ಕಾಚಕ್ಲೋಮ್ನಿಪೇಪೀಯತೇಪಯಃ ॥

ಅಂತರ್ವಿದ್ರಧಿಯ ಲಕ್ಷಣಗಳನ್ನು ಹೇಳುತ್ತಾನೆ—ವಾತ ಪಿತ್ತ ಕಫಗಳೆಂಬ ದೋಷಗಳು ಪ್ರಕುಪಿತಗಳಾಗಿ ಬೇರೆ ಬೇರೆಯಾಗಿಯಾಗಲಿ ಒಟ್ಟಿಗೆ ಕೂಡಿ ಕೊಂಡೇ ಆಗಲಿ ಹೊಟ್ಟೆಯ ಒಳಭಾಗದಲ್ಲಿ ಗುಲ್ಮದಂತಹ ಮತ್ತು ಹುತ್ತದ ಹಾಗೆ ಪ್ರತಿ ಕ್ಷಣದಲ್ಲಿಯೂ ದೊಡ್ಡದಾಗುತ್ತಲಿರುವ ವಿದ್ರಧಿ ಎಂಬ ವ್ರಣ ವನ್ನುಂಟುಮಾಡುತ್ತವೆ, ಶರೀರದ ಒಳಭಾಗದಲ್ಲಿ ಇಂತಹ ವ್ರಣಗಳು ಹುಟ್ಟ ತಕ್ಕ ಪ್ರದೇಶಗಳು ಯಾವುವೆಂದರೆ—ಗುದದಲ್ಲಿ, ಮೂತ್ರಾಶಯದ ಮುಖದ ಹತ್ತಿರ, ಹೊಕ್ಕುಳಿನ ಹತ್ತಿರ, ಅನ್ನಾಶಯದಲ್ಲಿ, ತೊಡೆಯಲ್ಲಿ ಗಜ್ಜೆಕಟ್ಟಿನ ಹತ್ತಿರ ಒಳಭಾಗದಲ್ಲಿ, ಮೂತ್ರವಹನಾಡಿಗಳ ಮೂಲದಲ್ಲಿ, ಪ್ಲೀಹವಿರುವ ಭಾಗ ದಲ್ಲಿ, ಕಾಲಖಂಡವಿರುವ ಭಾಗದಲ್ಲಿ, ಹೃದಯದಲ್ಲಿ, ಕ್ಲೋಮ್ನಿ ಅಂದರೆ ಪಿಪಾಸಾ ಸ್ಥಾನ ಇವರಲ್ಲಿಯೂ ಈ ವ್ರಣಗಳು ಹುಟ್ಟುತ್ತವೆ, ಶರೀರದ ಒಳಭಾಗದಲ್ಲಿ ಹುಟ್ಟತಕ್ಕ ಸ್ಥಾನಭೇದದಿಂದ ಅವುಗಳಲ್ಲಿ ಕಾಣಬರುವ ಲಕ್ಷಣಗಳೇನೆಂದರೆ—ಗುದದಲ್ಲಿ ಈ ಅಂತರ್ವಿದ್ರಧಿಯು ಉತ್ಪನ್ನವಾಯಿತೆಂದರೆ ಅಪಾನವಾಯು ಮತ್ತು ಅದರ ಕಾರ್ಯಗಳು ಬಂದಾಗಿ ಹೋಗುತ್ತವೆ, ಮೂತ್ರಾಶಯದಲ್ಲಿ ವ್ರಣವಾದರೆ ಮೂತ್ರವು ಪ್ರಮಾಣದಲ್ಲಿ ಅತ್ಯಲ್ಪವಾಗಿಯೂ ಕಷ್ಟವಾಗಿಯೂ ಹೊರಡುತ್ತಿರು ವುದು, ನಾಭಿಸ್ಥಾನದಲ್ಲಿ ವ್ರಣವಾದರೆ ಬಿಕ್ಕಳಿಕೆ, ಹೊಟ್ಟೆಯುಬ್ಬರ, ಅನ್ನಾಶಯ ದಲ್ಲಿ ವ್ರಣವಾದರೆ ವಾತವು ಪ್ರಕುಪಿತವಾಗುವುದು, ವಂಕ್ಷಣಸ್ಥಾನವೆಂದರೆ ಗಜ್ಜೆ ಕಟ್ಟಿನಲ್ಲಿ ಈ ಅಂತರ್ವಿದ್ರಧಿ ಎಂಬ ವ್ರಣವು ಸಂಭವಿಸಿದರೆ ಸೊಂಟ ಮತ್ತು ಅಂಡುಗಳು ಹಿಡಿದುಕೊಳ್ಳುವುದು, ಮೂತ್ರವಾಹಿನಿಗಳಾದ ನಾಡಿಗಳ ಮೂಲ ದಲ್ಲಿ ವ್ರಣ ಹುಟ್ಟಿದರೆ ಪಕ್ಕಗಳು ಕುಗ್ಗಿಹೋಗಿ ಸಂಕುಚಿತವಾಗುವುದು, ಪ್ಲೀಹ ವಿರುವ ಭಾಗದಲ್ಲಿಯಾದರೆ ಉಚ್ಛ್ವಾಸನಿಶ್ವಾಸಗಳು ತಡೆಯುವುದು, ಹೃದಯ ದಲ್ಲಿ ವ್ರಣವಾದರೆ ಎಲ್ಲಾ ಅವಯವಗಳೂ ಕುಗ್ಗಿ ಹಿಡಿಯುವುದಲ್ಲದೆ ಕೆಮ್ಮು ಸಹಾ ಉಂಟಾಗುವುದು, ಕಾಲಖಂಡವಿರುವ ಭಾಗದಲ್ಲಿಯಾದರೆ ಬಿಕ್ಕಳಿಕೆ ಮತ್ತು ಉಬ್ಬಸಗಳು ಕಾಣಿಸಿಕೊಳ್ಳುತ್ತವೆ, ಪಿಪಾಸಾಸ್ಥಾನದಲ್ಲಿಯಾದರೆ ಬಾಯಾ ರಿಕೆ ಹೆಚ್ಚಾಗಿ ಆಗುವುದು, ಈ ಲಕ್ಷಣಗಳೆಲ್ಲಾ ಕಾಣಿಸಿಕೊಳ್ಳುತ್ತವೆ.

ನಾಭೇರುಪರಿಜಾಃಪಕ್ವಾಯಾಂತ್ಯೂರ್ಧ್ವಮಿತರೇತ್ವಧಃ ॥ ೧೭ ॥
ಅಧಃಸ್ರುತೇಷುಜೀವೇತ್ತುಸ್ರುತೇಷೂರ್ಧ್ವಂನಜೀವತಿ ॥
ಹೃನ್ನಾಭಿಬಸ್ತಿವರ್ಜ್ಯಾಯೇತೇಷುಭಿನ್ನೇಷುಬಾಹ್ಯತಃ ॥ ೧೮ ॥

ಜೀವೇತ್ ಕದಾಚಿತ್ಪುರುಷೋ ನೇತರೇಷು ಕದಾಚನ ||
ಸಾಧ್ಯಾ ವಿದ್ರಧಯಃ ಪಂಚ ವಿವರ್ಜ್ಯಃ ಸಾನ್ನಿಪಾತಿಕಃ || ೧೯ ||
ಆಮಪಕ್ವವಿದಗ್ಧತ್ವಂ ತೇಷಾಂ ಶೋಥವದಾದಿಶೇತ್ ||
ಆಧ್ಮಾತಂ ಬದ್ಧನಿಷ್ಯಂದಂ ಛರ್ದಿಹಿಕ್ಕಾತೃಷಾನ್ವಿತಂ || ೨೦ ||
ರುಜಾಶ್ವಾಸಸಮಾಯುಕ್ತಂ ವಿದ್ರಧಿರ್ನಾಶಯೇನ್ನರಂ ||

ನಾಭಿಯಿಂದ ಮೇಲುಭಾಗದಲ್ಲಿ ಉತ್ಪನ್ನಗಳಾದ ಅಂತರ್ವಿದ್ರಧಿಗಳು ಪಕ್ವವಾದ ಮೇಲೆ ಒಡೆದು ಊರ್ಧ್ವಮಾರ್ಗದಿಂದ ಸೋರುತ್ತವೆ, ಕೆಳಭಾಗದಲ್ಲಿರುವವುಗಳೆಲ್ಲವೂ ಅಧೋಭಾಗ ಎಂದರೆ ಹೊರಡುತ್ತವೆ, ಅಂತರ್ವಿದ್ರಧಿ ವ್ರಣಗಳು ಒಡೆದು ಸೋರುವಾಗ್ಯೆ ಅಧೋಮಾರ್ಗದಿಂದ ಸೋರಿದಲ್ಲಿ ಮನುಷ್ಯನು ಬದುಕುತ್ತಾನೆ, ಊರ್ಧ್ವಮಾರ್ಗವನ್ನು ಹಿಡಿದರೆ ಅನುಪಶಾನವೆಂದು ತಿಳಿಯಬೇಕು, ಹೃದಯ, ನಾಭಿಸ್ಥಾನ, ಮೂತ್ರಕೋಶ ಈ ಪ್ರದೇಶ ವಿನಹಾ ಬಾಕಿಯುಳಿದ ಪ್ರದೇಶದಲ್ಲಿ ಏಳುವ ಅಂತರ್ವಿದ್ರಧಿಗಳು ಬಹಿರ್ಮುಖವಾಗಿ ಶರೀರದ ಹೊರಭಾಗದಲ್ಲಿ ಒಡೆದರೆ ರೋಗಿಯು ಕ್ವಚಿತ್ ಬದುಕಬಹುದು, ಉಳಿದವುಗಳು ಹೊರಮುಖವಾಗಿ ಒಡೆದರೂ ಬದುಕುವ ಸಂಭವವಿಲ್ಲ, ಹಿಂದೆ ಹೇಳಲ್ಪಟ್ಟ ವಿದ್ರಧಿಗಳಲ್ಲಿ ವಾತವಿದ್ರಧಿ, ಪಿತ್ತವಿದ್ರಧಿ, ಶ್ಲೇಷ್ಮವಿದ್ರಧಿ, ಕ್ಷತಾದಿಗಳಿಂದ ಹುಟ್ಟಿದ ಆಗಂತುಕವಾದ ವಿದ್ರಧಿ, ರಕ್ತವಿದ್ರಧಿ, ಈ ಐದೂ ಸಾಧ್ಯಗಳೆಂದೂ ತ್ರಿದೋಷಸನ್ನಿಪಾತಜನ್ಯವಾದ ವಿದ್ರಧಿ ಯು ತ್ಯಾಜ್ಯ ಎಂದರೆ ಅಸಾಧ್ಯವೆಂಬದಾಗಿಯೂ ತಿಳಿಯಬೇಕು, ಶೋಥನಿದಾನದಲ್ಲಿ ಹೇಳಿರುವಂತೆಯೇ ಈ ವಿದ್ರಧಿಗಳ ಆಮಪಕ್ವ ಲಕ್ಷಣಗಳನ್ನೂ ಊಹಿಸಿ ತಿಳಿದುಕೊಳ್ಳಬೇಕು. ಈ ವಿದ್ರಧಿಯಲ್ಲಿ ಅಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ—ಬಹಳವಾಗಿ ಊದಿರುವುದು ಮಲಮೂತ್ರಗಳು ಸರಿಯಾಗಿ ನಡೆಯದೆ ತಡೆದುಹೋಗಿರುವುದು, ರೋಗಿಗೆ ಪದೇ ಪದೇ ವಮನವಾಗುತ್ತಿರುವುದು, ಬಿಕ್ಕಳಿಕೆ, ಬಾಯಾರಿಕೆ ಇವುಗಳಿರುವುದು, ಬಹಳ ನೋವು ಮತ್ತು ಊರ್ಧ್ವಶ್ವಾಸ ಇವುಗಳಿರುವುದು, ಈ ಲಕ್ಷಣಗಳಿದ್ದರೆ ವಿದ್ರಧಿಯು ರೋಗಿಯನ್ನು ಕೊಲ್ಲುತ್ತದೆಂಬ ಭಾವ.

ಇಲ್ಲಿಗೆ ವಿದ್ರಧಿನಿದಾನ ಸಂಪೂರ್ಣ.

---

## ವ್ರಣಶೋಥನಿದಾನ.

ಏಕದೇಶೋತ್ಥಿತಃ ಶೋಥೋ ವ್ರಣಾನಾಂ ಪೂರ್ವಲಕ್ಷಣಂ ||
ಷಡ್ವಿಧಃ ಸ್ಯಾತ್ಪೃಥಕ್ ಸರ್ವೈ ರಕ್ತಾಗಂತುನಿಮಿತ್ತಜಃ || ||

**ಶೋಥಾಷ್ಷಡೇತೇವಿಜ್ಞೇಯಾಃಪ್ರಾಗುಕ್ತೈಃಶೋಥಲಕ್ಷಣೈಃ ॥**
**ವಿಶೇಷಃಕಥ್ಯತೇಚೈಷಾಂಪಕ್ವಾಪಕ್ವಾದಿನಿಶ್ಚಯೇ ॥ ೨ ॥**

ವ್ರಣಶೋಥ ನಿದಾನವನ್ನು ಪ್ರಾರಂಭಿಸುತ್ತಾನೆ—ವ್ರಣಶೋಥವೆಂದರೆ ವ್ರಣವು ಹುಟ್ಟುವ ಪೂರ್ವ ಭಾವಿಯಾಗಿ ದೇಹದ ಒಂದು ಭಾಗದಲ್ಲಿ ಕಾಣುವ ಬಾವಿಗೆ ಹೆಸರು, ಶರೀರದ ಯಾವುದಾದರೂ ಒಂದು ಭಾಗದಲ್ಲಿ ಬಾವು ಉಂಟಾದರೆ ಆ ಬಾವನ್ನು ವ್ರಣದ ಪೂರ್ವಲಕ್ಷಣವೆಂದು ತಿಳಿಯಬೇಕು, ಅಂದರೆ ಅಕಸ್ಮಾತ್ತಾಗಿ ಬಾಕು ಬಂದರೆ ಅಲ್ಲಿ ವ್ರಣ ಹುಟ್ಟುತ್ತದೆಂದು ತಿಳಿಯಬೇಕು, ಆ ರೀತಿಯಾಗಿ ಹುಟ್ಟತಕ್ಕ ಶೋಥೆಯು ಆರು ವಿಧ, ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷ ಸನ್ನಿಪಾತಜನ್ಯ, ರಕ್ತಪ್ರಕೋಪಜನ್ಯ, ಆಗಂತುಕವಾದ ಕಾರಣದಿಂದ ಉತ್ಪನ್ನವಾದ ಶೋಥೆ ಎಂಬದಾಗಿ ಸಾಮಾನ್ಯ ಶೋಥದ ಲಕ್ಷಣಗಳಂತೆಯೇ ಈ ಆರು ವಿಧವಾದ ವ್ರಣಶೋಥದ ಲಕ್ಷಣಗಳನ್ನೂ ಊಹಿಸಿಕೊಳ್ಳಬೇಕು, ಆದರೆ ಈ ವ್ರಣವನ್ನು ಹುಟ್ಟಿಸತಕ್ಕ ಶೋಥಗಳು ಪಕ್ವಗಳಾಗಿವೆಯೇ ಇಲ್ಲವೇ ಎಂಬುವುದನ್ನು ತಿಳಿದುಕೊಳ್ಳುವುದಕ್ಕಾಗಿ ಕೆಲವು ವಿಶೇಷ ಲಕ್ಷಣಗಳನ್ನು ಮಾತ್ರ ಇಲ್ಲಿ ಹೇಳುತ್ತಾನೆ.

**ವಿಷಮಂಪಚ್ಯತೇವಾತಾತ್ ಪಿತ್ತೋತ್ಥಶ್ಚಾಚಿರಾಚ್ಚಿರಂ ॥**
**ಕಫಜಃಪಿತ್ತವಚ್ಛೋಥೋರಕ್ತಾಗಂತುಸಮುದ್ಭವಃ ॥ ೩ ॥**
**ಮಂದೋಷ್ಮಕಾಲ್ಪಶೋಥತ್ವಂಕಾಠಿನ್ಯಂತ್ವಕ್ಸವರ್ಣತಾ ॥**
**ಮಂದವೇದನತಾಚೈತಚ್ಛೋಥಾನಾಮಾಮಲಕ್ಷಣಂ ॥ ೪ ॥**

ವಾತಪ್ರಕೋಪಜನ್ಯವಾದ ವ್ರಣಶೋಥವು ಕಾಲವ್ಯವಸ್ಥೆಯಿಲ್ಲದೆ ಕ್ವಚಿತ್ ಜಾಗ್ರತೆ ಕೆಲವು ವೇಳೆ ಸಾವಕಾಶವಾಗಿ ಪಕ್ವವಾಗುತ್ತದೆ, ಪಿತ್ತಪ್ರಕೋಪಜನ್ಯವಾದ ಶೋಥವು ಜಾಗ್ರತೆಯಾಗಿ ಪಕ್ವಕ್ಕೆ ಬರುತ್ತದೆ, ಕಫಪ್ರಕೋಪಜನ್ಯವಾದ ಶೋಥವು ಸಾವಕಾಶವಾಗಿ ಪಕ್ವಕ್ಕೆ ಬರುತ್ತದೆ, ರಕ್ತಪ್ರಕೋಪಜನ್ಯ ಮತ್ತು ಆಗಂತುಕಾರಣಜನ್ಯಗಳಾದ ಶೋಥಗಳು ಪಿತ್ತಜಶೋಥದಂತೆ ಜಾಗ್ರತೆಯಾಗಿಯೇ ಪಕ್ವಕ್ಕೆ ಬರುತ್ತವೆ, ಶೋಥೆಯನ್ನು ಕೈಯಿಂದ ಮುಟ್ಟಿನೋಡಿದರೆ ಬಿಸಿ ಕೊಂಚವಾಗಿರುವುದು, ಬಾವು ಕಡಮೆಯಾಗಿಯೇ ಇರುವುದು, ಬಾವನ್ನು ಮುಟ್ಟಿ ನೋಡಿದರೆ ಗಟ್ಟಿಯಾಗಿರುವುದು, ಬಾವು ಕಣ್ಣಿನಿಂದ ನೋಡಿದರೆ ಬೇರೆ ಪ್ರದೇಶಗಳ ಚರ್ಮದ ಬಣ್ಣವೇ ಕಾಣುತ್ತಿರುವುದು, ನೋವು ಮತ್ತು ವ್ಯಥೆಗಳೂ ಕಡಮೆಯಾಗಿಯೇ ಇರುವುದು, ಇವುಗಳು ಅಪಕ್ವಗಳಾದ ವ್ರಣಶೋಥಗಳ ಲಕ್ಷಣಗಳು.

**ದಹ್ಯತೇದಹನೇನೇವಕ್ಷಾರೇಣೇವಚಪಚ್ಯತೇ ॥**
**ಪಿಪೀಲಿಕಾಗಣೇನೇವದಶ್ಯತೇಭಿದ್ಯತೇತಥಾ ॥ ೫ ॥**

ಭಿದ್ಯತೇಚೈವಶಸ್ತ್ರೇಣದಂಡೇನೇವಚತಾಡ್ಯತೇ ॥
ಪೀಡ್ಯತೇಪಾಣಿನೇವಾಂತಸ್ಸೂಚೀಭಿರಿವತುದ್ಯತೇ ॥ ೬ ॥
ಸೋಷಾಚೋಷೋವಿವರ್ಣಸ್ಸ್ಯಾದಂಗುಲ್ಯೇವಾವಘಟ್ಟ್ಯತೇ ॥
ಆಸನೇಶಯನೇಸ್ಥಾನೇಶಾಂತಿಂವೃಶ್ಚಿಕವಿದ್ಧವತ್ ॥ ೭ ॥
ನಗಚ್ಛೇದಾತತಶ್ಶೋಥೋಭವೇದಾಧ್ಮಾತಬಸ್ತಿವತ್ ॥
ಜ್ವರಸ್ತೃಷ್ಣಾರುಚಿಶ್ಚೈವಪಚ್ಯಮಾನಸ್ಯಲಕ್ಷಣಂ ॥ ೮ ॥

ವ್ರಣಶೋಥವು ಪಕ್ವವಾಗುತ್ತಿರುವಾಗ್ಯೆ ತೋರುವ ಲಕ್ಷಣಗಳ್ಯಾವುವೆಂದರೆ-ಶೋಥವಿರುವ ಭಾಗವು ಬೆಂಕಿಯಿಂದ ಸುಟ್ಟ ಹಾಗೆ ಮನಸ್ಸಿಗೆ ತೋರುತ್ತಿರುವುದು, ಯಾವುದಾದರೂ ತೀಕ್ಷ್ಣವಾದ ಕ್ಷಾರವನ್ನು ಪ್ರಯೋಗಮಾಡಿದಲ್ಲಿ ಉಂಟಾಗುವ ವ್ಯಥೆಯು ಕಾಣಬರುತ್ತಿರುವುದು, ಕಟ್ಟಿರುವೆ ಕಡಿದಂತೆ ಹಿಂಸೆಯಾಗುತ್ತಿರುವುದು, ಶಸ್ತ್ರಗಳಿಂದ ಕತ್ತರಿಸಿದಂತೆ, ಕುಕ್ಕಿದಂತೆ, ಕೋಲಿನಿಂದ ಹೊಡೆದಂತೆ, ಕೈಯಿಂದ ಅಮುಕಿ ಹಿಸಿಕಿದಂತೆ, ಸೂಜಿಯಿಂದ ಇರಿದಂತೆ ಮನಸ್ಸಿಗೆ ತೋರುತ್ತಿರುವುದು. ಉರಿ, ಬಿಸಿ ಇವುಗಳಿರುವುದು. ಶೋಥದ ವರ್ಣ ಬದಲಾಯಿಸುತ್ತಿರುವುದು, ಬೆರಳಿನಿಂದ ಚಿಟಿಗೆ ಹೊಡೆದ ಹಾಗೆ ಹಿಂಸೆಯಾಗುತ್ತಿರುವುದು, ರೋಗಿಯು ಚೇಳು ಕಡಿದವನಂತೆ ಕುಳಿತುಕೊಳ್ಳುವುದು, ಮಲಗುವುದು, ನಿಲ್ಲುವುದು, ಈ ಯಾವುದರಲ್ಲಿಯೂ ಇಷ್ಟವಿಲ್ಲದವನಾಗಿ ಸಂಕಟ ಪಡುತ್ತಿರುವುದು, ವ್ರಣಶೋಥವು ದೊಡ್ಡದಾಗುತ್ತ ಕ್ರಮೇಣ ನೀರು ತುಂಬಿದ ಚರ್ಮದ ಚೀಲದಂತೆ ಕಾಣುವುದು, ರೋಗಿಗೆ ಜ್ವರ, ಬಾಯಾರಿಕೆ, ಅರುಚಿ ಇವುಗಳಿರುವುದು. ಇವು ಪಚ್ಯಮಾನವ್ರಣಶೋಥದಲ್ಲಿ ಕಾಣಬರುವ ಲಕ್ಷಣಗಳು.

ವೇದನೋಪಶಮಶ್ಶೋಥೋಲೋಹಿತೋಲ್ಪೋನಚೋನ್ನತಃ ॥
ಪ್ರಾದುರ್ಭಾವೋವಲೀನಾಂಚತೋದಃಕಂಡೂರ್ಮುಹುರ್ಮುಹುಃ ॥ ೯ ॥
ಉಪದ್ರವಾಣಾಂಪ್ರಶಮೋನಿಮ್ನತಾಸ್ಫುಟನಂತ್ವಚಾಂ ॥
ಬಸ್ತಾವಿವಾಂಬುಸಂಚಾರಃಸ್ಯಾಚ್ಛೋಥೇಂಗುಲಿಪೀಡಿತೇ ॥ ೧೦ ॥
ಪೂಯಸ್ಯಪೀಡಯತ್ಯೇಕಮಂತಮಂತೇಚಪೀಡಿತೇ ॥
ಭುಕ್ತ್ಯಾಕಾಂಕ್ಷಾಭವೇಚ್ಚೈತಚ್ಛೋಥಾನಾಂಪಕ್ವಲಕ್ಷಣಂ ॥ ೧೧ ॥

ಪಕ್ವವ್ರಣಶೋಥದ ಲಕ್ಷಣವನ್ನು ಹೇಳುತ್ತಾನೆ—ಕ್ರಮೇಣ ಹಿಂದೆ ಹೇಳಿದ ವೇದನೆಗಳು ಕಡಮೆಯಾಗುತ್ತ ಬರುವುದು, ಶೋಥದಲ್ಲಿ ರಕ್ತಭಾಗವು ಕಡಮೆಯಾಗುತ್ತ ಕೀವು ಹೆಚ್ಚುತ್ತಿರುವುದು, ಶೋಥವು ದೊಡ್ಡದಾಗುವುದು ನಿಲ್ಲುವುದು, ಶೋಥವು ಬತ್ತಿ ಅದರ ಮೇಲೆಲ್ಲಾ ಸುಕ್ಕು ಕಾಣುವುದು, ದುಡತ ಮತ್ತು ನವೆ

ಸಹ ಉಂಟಾಗುವುದು, ಕ್ರಮವಾಗಿ ಎಲ್ಲಾ ಹಿಂಸೆಗಳೂ ನಿಂತುಹೋಗುವುದು, ಬಾಕು ಕಡಮೆಯಾಗುವುದು, ಶೋಥದ ಭಾಗದಲ್ಲಿ ಒಡೆಯುವುದು, ಬೆರಳಿನಿಂದ ಅದುಮಿ ನೋಡಿದರೆ ಅದರೊಳಗೆ ಜಲಸಂಚಾರವಾದಂತೆ ತೋರುವುದು, ಶರೀರದ ಯಾವ ಭಾಗವಲ್ಲಿ ವ್ರಣಶೋಥವಿರುತ್ತದೋ ಆ ಅವಯವವನ್ನು ಸ್ವಲ್ಪ ಅದುಮಿದರೂ ಅಲ್ಲಾಡಿಸಿದರೂ ಇನ್ನೊಂದು ಭಾಗದಲ್ಲಿರುವ ಕೀವು ಅಲ್ಲಾಡಿದಂತೆ ತೋರುತ್ತದೆ, ರೋಗಿಗೆ ಹಿಂಸೆಗಳಿಲ್ಲಾ ಕಡಮೆಯಾಗಿ ಊಟಮಾಡಬೇಕೆಂಬ ಅಪೇಕ್ಷೆಯುಂಟಾಗುತ್ತದೆ, ಇವು ಪಕ್ವವ್ರಣಶೋಥ ಲಕ್ಷಣಗಳು.

ನರ್ತೇನಿಲಾದ್ರುಙ್ನವಿನಾಚಪಿತ್ತಂಪಾಕಃಕಫಂಚಾಪಿವಿನಾನ
ಪೂಯಃ ॥
ತಸ್ಮಾದ್ಧಿಸರ್ವೇಪರಿಪಾಕಕಾಲೇಪಚಂತಿಶೋಥಾಸ್ತ್ರಿಭಿರೇವ
ದೋಷೈಃ ॥ ೧೨ ॥

ವ್ರಣಶೋಥವು ಹುಟ್ಟಬೇಕಾದರೆ ವಾತ, ಪಿತ್ತ, ಶ್ಲೇಷ್ಮಗಳೆಂಬ ದೋಷಗಳು ಪ್ರತ್ಯೇಕ ಪ್ರತ್ಯೇಕವಾಗಿಯೇ ಕಾರಣಗಳಾಗಿ ಹುಟ್ಟಿಸಿದರೂ ಪಕ್ವವಾಗಬೇಕಾದರೆ ಮಾತ್ರ ಮೂರು ದೋಷಗಳೂ ಕೂಡಿಯೇ ಶೋಥವನ್ನು ಪಕ್ವಮಾಡಬೇಕೆಂಬ ಅಭಿಪ್ರಾಯವನ್ನು ಸೂಚಿಸುತ್ತಾನೆ— ವಾತಸಂಪರ್ಕವಿಲ್ಲದೆ ಶೋಥದಲ್ಲಿ ನೋವು ವಡತಗಳುಂಟಾಗುವುದಿಲ್ಲ, ಪಿತ್ತಸಂಪರ್ಕವಿಲ್ಲದೆ ಅಂದರೆ ಪಿತ್ತವೆಂದು ಹೇಳಿಸಿಕೊಳ್ಳುವ ದೇಹಗತನಾದ ಉಷ್ಣಸಂಪರ್ಕವಿಲ್ಲದೆ ಶೋಥವು ಪಕ್ವವಾಗುವುದಿಲ್ಲ, ಕಫಸಂಪರ್ಕವಿಲ್ಲದೆ ಕೀವು ಹುಟ್ಟುವುದಿಲ್ಲ, ಆದ್ದರಿಂದ ವ್ರಣಶೋಥಗಳು ಹುಟ್ಟುವ ಕಾಲದಲ್ಲಿ ಮತ್ತು ಪಚ್ಯಮಾನಾವಸ್ಥೆಯಲ್ಲಿ ಒಂದೇ ದೋಷದ ಲಕ್ಷಣವು ಕಂಡುಬಂದರೂ ಪಕ್ವಕಾಲದಲ್ಲಿ ಮಾತ್ರ ದೋಷತ್ರಯಗಳ ಸಹಾಯವಿಲ್ಲದೆ ಪಕ್ವವಾಗುವುದಿಲ್ಲ.

ಕಕ್ಷಂಸಮಾಸಾದ್ಯಯಥೈವವಹ್ನಿರ್ವಾಯ್ವೀರಿತಸ್ಸಂದಹತಿ
ಪ್ರಸಹ್ಯ ॥
ತಥೈವಪೂಯೋಽಹ್ಯವಿನಿಸ್ಸೃತಾಹಿಮಾಂಸಂಶಿರಾಸ್ನಾಯುಚ
ಖಾದತೀಹ ॥ ೧೩ ॥

ವ್ರಣಶೋಥದಲ್ಲಿ ಕೀವಾದ ಮೇಲೆ ಕೀವನ್ನು ಹೊರಡಿಸದಿದ್ದಲ್ಲಿ ಸಂಭವಿಸಬಹುದಾದ ತೊಂದರೆಗಳನ್ನು ಹೇಳುತ್ತಾನೆ—ಬೆಂಕಿಯು ಕೆಂಡವು ಒಣಹುಲ್ಲಿನ ಕಂತೆಯಲ್ಲಿಡಲ್ಪಟ್ಟರೆ ಗಾಳಿ ಬರುವುದನ್ನೇ ನಿರೀಕ್ಷಿಸಿಕೊಂಡಿದ್ದು ಗಾಳಿ ಬಂದ ಕೂಡಲೇ ಹೇಗೆ ಹೊತ್ತಿಕೊಂಡು ತನ್ನ ಹೊಡೆತಕ್ಕೆ ಸಿಕ್ಕಿದ್ದನ್ನೆಲ್ಲಾ ಯಾವ ಲಕ್ಷ್ಯವೂ ಇಲ್ಲದೆ ಸುಟ್ಟುಹಾಕಿ ಬಿಡುವಂತೆ ಕೀವನ್ನು ಕೂಡ ಹೊರಹೊರಡಿಸದೆ

ಒಳಗೇನೇ ಬಿಟ್ಟಲ್ಲಿ ಸಮಯವನ್ನು ನೋಡಿ ಅನುಕೂಲ ಸಿಕ್ಕಿದ ಕೂಡಲೇ ಮಾಂಸ, ಶಿರಾ, ಸ್ನಾಯುಗಳನ್ನೆಲ್ಲಾ ಕೆಡಿಸಿ ಹಾಳುಮಾಡುತ್ತದೆ.

ಯಶ್ಛಿನತ್ಯಾಮಮಜ್ಞಾನಾದ್ಯೋವಾಪಕ್ವಮುಪೇಕ್ಷತೇ ॥
ಶ್ವಪಚಾವಿವಮಂತವ್ಯೌತಾವನಿಶ್ಚಿತಕಾರಿಣೌ ॥ ೧೪ ॥
ಆಮಂವಿದಹ್ಯಮಾನಂಚಸಮ್ಯಕ್ಪಕ್ವಂಚಯೋಭಿಷಕ್ ॥
ಜಾನೀಯಾತ್ಸಭವೇದ್ವೈದ್ಯಶ್ಶೇಷಾಸ್ತಸ್ಕರವೃತ್ತಯಃ ॥ ೧೫ ॥

ವೈದ್ಯರು ವ್ರಣಶೋಥವನ್ನು ಚಿಕಿತ್ಸಿಸುವಾಗ್ಯೆ ಶಸ್ತ್ರಕರ್ಮವನ್ನು ನಡೆಯಿಸ ಬೇಕಾದರೆ ಅಪಕ್ವವಾಗಿರುವ ವ್ರಣವನ್ನು ಛೇದಿಸಬಾರದು, ಪಕ್ವವಾದ ವ್ರಣ ವನ್ನು ಉಪೇಕ್ಷೆಯೂ ಮಾಡಬಾರದು. ವ್ರಣಶೋಥದ ಆಮಾವಸ್ಥೆ, ಪಚ್ಯ ಮಾನಾವಸ್ಥೆ, ಪಕ್ವಾವಸ್ಥೆಗಳನ್ನು ಕಂಡುಹಿಡಿಯುವುದನ್ನು ವೈದ್ಯನು ಬಹು ಸೂಕ್ಷ್ಮ ರೀತಿಯಿಂದ ಮಾಡಬೇಕು, ಈ ಭಾಗದಲ್ಲಿ ಕೊಂಚ ಉದಾಸೀನ ಮಾಡಿ ದರೂ ವೈದ್ಯರಿಗೆ ಖಂಡಿತವಾಗಿಯೂ ಅಪಯಶಸ್ಸು ಬಂದೇ ಬರುತ್ತದೆ.

ಇಲ್ಲಿಗೆ ವ್ರಣಶೋಥನಿದಾನ ಸಂಪೂರ್ಣ.

---

## ಶರೀರವ್ರಣನಿದಾನ.

ದ್ವಿಧಾವ್ರಣಸ್ಸವಿಜ್ಞೇಯಶ್ಶಾರೀರಾಗಂತುಭೇದತಃ ॥
ದೋಷೈರಾದ್ಯಸ್ತಯೋರಂತ್ಯಶ್ಶಸ್ತ್ರಾದಿಕ್ಷತಸಂಭವಃ ॥ ೧ ॥
ಸ್ತಬ್ಧಃಕಠಿನಸಂಸ್ಪರ್ಶೋಽಲ್ಪಸ್ರಾವೋಮಹಾರುಜಃ ॥
ತುದ್ಯತೇಸ್ಫುರತಿಶ್ಯಾವೋವ್ರಣೋಮಾರುತಸಂಭವಃ ॥ ೨ ॥
ತೃಷ್ಣಾಮೋಹಜ್ವರಕ್ಲೇದದಾಹದುಷ್ಟ್ಯವದಾರಣೈಃ ॥
ವ್ರಣಂಪಿತ್ತಕೃತಂವಿದ್ಯಾದ್ಗಂಧೈಃಸ್ರಾವೈಶ್ಚಪೂತಿಕೈಃ ॥ ೩ ॥
ಬಹುಪಿಚ್ಛೋಗುರುಸ್ನಿಗ್ಧಃಸ್ತಿಮಿತೋಮಂದವೇದನಃ ॥
ಪಾಂಡುವರ್ಣೋಽಲ್ಪಸಂಕ್ಲೇದಶ್ಚಿರಪಾಕೀಕಫವ್ರಣಃ ॥ ೪ ॥

ಶರೀರದಲ್ಲಿ ಹುಟ್ಟುವ ವ್ರಣಗಳನ್ನು ಹೇಳುತ್ತಾನೆ—ಪ್ರಥಮತಃ ವ್ರಣ ಗಳನ್ನು ಎರಡು ವಿಧವಾಗಿ ವಿಭಾಗಿಸಬೇಕು, ಶಾರೀರವ್ರಣ, ಆಗಂತುವ್ರಣವೆಂಬ ದಾಗಿ. ಶಾರೀರವ್ರಣವೆಂದರೆ ಶರೀರಗತಗಳಾದ ವಾತಾದಿದೋಷಗಳ ಪ್ರಕೋಪ ದಿಂದ ಹುಟ್ಟುವ ವ್ರಣಗಳಿಗೆ ಹೆಸರು, ಆಗಂತುವ್ರಣವೆಂದರೆ ಆಗಂತುಕಗಳಾದ ಶಸ್ತ್ರಾದಿಗಳ ಪೆಟ್ಟು ಮುಂತಾದ ಆಗಂತುಕವಾದ ಕಾರಣಗಳಿಂದ ಹುಟ್ಟುವ

ವ್ರಣಗಳಿಗೆ ಹೆಸರು. ದೋಷಪ್ರಕೋಪಜನ್ಯ ವ್ರಣಗಳನ್ನು ಕ್ರಮವಾಗಿ ಹೇಳುತ್ತಾನೆ—ವ್ರಣವು ಮೊದ್ದಾಗಿರುವುದು, ಮುಟ್ಟಿನೋಡಿದರೆ ಕಠಿನವಾಗಿರುವುದು, ಕೀವು ಮೊದಲಾದ ದ್ರವಗಳೇನಾದರೂ ಹೊರಡುತ್ತಿದ್ದರೆ ನಿದಾನವಾಗಿ ಹೊರಡುವುದು, ವ್ರಣದಲ್ಲಿ ವೇದನೆಯು ಭಯಂಕರವಾಗಿರುವುದು, ವ್ಯಥೆಯಾಗುತ್ತಿರುವುದು, ವ್ರಣದಲ್ಲಿ ಒಂದು ವಿಧವಾದ ವಡತವಿರುವುದು, ವ್ರಣದ ವರ್ಣವು ಹೊಗೆಯ ಬಣ್ಣವಾಗಿರುವುದು, ಇಂತಹ ವ್ರಣವು ವಾತಪ್ರಕೋಪಜನ್ಯವೆಂದು ತಿಳಿಯಬೇಕು. ವ್ರಣವು ದುರ್ಗಂಧವಾಗಿರುವುದು, ಅದರಿಂದ ಹೊರಡತಕ್ಕ ದ್ರವವೂ ದುರ್ಗಂಧಯುಕ್ತವಾಗಿಯೇ ಇರುವುದು. ರೋಗಿಗೆ ಬಾಯಾರಿಕೆ, ಅಜ್ಞಾನ, ಜ್ವರ, ವ್ರಣವಿರುವ ಭಾಗದಲ್ಲಿ ಉರಿ, ವ್ರಣವು ಶೀಳಿಹೋಗುವಂತೆ ತೋರುತ್ತಿರುವುದು, ಈ ಲಕ್ಷಣಗಳು ಕಂಡುಬರುವುದು ಪಿತ್ತಪ್ರಕೋಪಜನ್ಯ ವ್ರಣದ ಲಕ್ಷಣಗಳು. ವ್ರಣವು ಬಹಳ ದಪ್ಪನಾಗಿ ಮತ್ತು ಭಾರವಾಗಿರುವುದು, ವ್ರಣದ ಮೇಲೆ ಜಿಡ್ಡು ತೇಲುವಂತೆ ತೋರುತ್ತಿರುವುದು, ವಡತ ಪಿಡಿತ ಮೊದಲಾದದ್ದೇನೂ ಇಲ್ಲದಿರುವುದು, ವೇದನೆಯೂ ಕಡಮೆಯಾಗಿಯೇ ಇರುವುದು, ವ್ರಣದ ವರ್ಣವು ಬಿಳುಪಾಗಿರುವುದು, ಸ್ರಾವವು ಸ್ವಲ್ಪವಾಗಿರುವುದು, ನಿದಾನವಾಗಿ ಪಕ್ವಕ್ಕೆ ಬರುವುದು, ಇವು ಕಫಪ್ರಕೋಪಜನ್ಯವ್ರಣದ ಲಕ್ಷಣಗಳು.

ರಕ್ತೋರಕ್ತಸ್ರುತೀರಕ್ತಾತ್ ದ್ವಿತ್ರಿಜಸ್ಸ್ಯಾತ್ತದನ್ವಯೈಃ ॥
ತ್ವಜ್ಮಾಂಸಜಸ್ಸುಖೇದೇಶೇತರುಣಸ್ಯಾನುಪದ್ರವಃ ॥ ೫ ॥
ಧೀಮತೋಭಿನವಃಕಾಲೇಸುಖೇಸಾಧ್ಯಸ್ಸುಖಂವ್ರಣಃ ॥
ಗುಣೈರನ್ಯತಮೈರ್ಹೀನಸ್ತತಃಕೃಚ್ಛ್ರೋವ್ರಣಸ್ಮೃತಃ ॥ ೬ ॥

ರಕ್ತವು ಪ್ರಕುಪಿತವಾಗಿ ಹುಟ್ಟುವ ವ್ರಣವು ರಕ್ತವರ್ಣವಾಗಿರುತ್ತದೆ ಮತ್ತು ಅದರಿಂದ ರಕ್ತವು ಸುರಿಯುತ್ತಿರುತ್ತದೆ. ಎರಡು ದೋಷಗಳ ಪ್ರಕೋಪದಿಂದ ಮತ್ತು ಮೂರು ದೋಷಗಳ ಪ್ರಕೋಪದಿಂದ ಹುಟ್ಟತಕ್ಕ ವ್ರಣಗಳಲ್ಲಿಯೂ ರಕ್ತಪ್ರಕೋಪ ರೂಪ ಸಂಬಂಧವು ಇದ್ದೇ ಇರುತ್ತದೆ. ಸಾಧ್ಯಾಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ—ಚರ್ಮ ಮತ್ತು ಮಾಂಸಗಳಲ್ಲಿರಬೇಕು, ಮರ್ಮಸ್ಥಾನಗಳನ್ನು ಬಿಟ್ಟು ಇತರ ಸ್ಥಳಗಳಲ್ಲಿ ವ್ರಣವಿರಬೇಕು, ರೋಗಿಯು ತರುಣನಾಗಿರಬೇಕು, ಉಪದ್ರವಗಳು ಇರಬಾರದು ಅಂದರೆ ಜ್ವರ ಕಾಸಾದಿ ಉಪರೋಗಗಳಿರಬಾರದು, ರೋಗಿಗೆ ಬುದ್ಧಿ ಸ್ವಾಧೀನವಿರಬೇಕು, ವ್ರಣವು ಹೊಸತಾಗಿರಬೇಕು, ಕಾಲವೆಂದರೆ ಚಿಕಿತ್ಸೆಮಾಡುವ ಕಾಲವು ಹಿಮಂತರುತುವಾಗಿಯಾಗಲೀ ಶಿಶಿರಋತುವಾಗಿಯಾಗಲಿ ಇರಬೇಕು, ಇಷ್ಟು ಸಂಪತ್ತಿಗಳೂ ಇದ್ದಲ್ಲಿ ವ್ರಣವು ಸುಖಸಾಧ್ಯವೆಂದು ಹೇಳಬೇಕು. ಈ ಹಿಂದೆ ಹೇಳಿದ ಲಕ್ಷಣಗಳಲ್ಲಿ ಯಾವ ಭಾಗವು ನ್ಯೂನವಾಗಿದ್ದರೂ ವ್ರಣವು ಕಷ್ಟಸಾಧ್ಯವೆಂದು ತಿಳಿಯಬೇಕು.

ಸರ್ವೈರ್ವಿಹೀನೋವಿಜ್ಞೇಯಸ್ತ್ವಸಾಧ್ಯೋಭೂರ್ಯುಪದ್ರವಃ ॥

ಅಸಾಧ್ಯವ್ರಣ ಲಕ್ಷಣವೇನಂದರೆ—ಸುಖಸಾಧ್ಯ ಲಕ್ಷಣಗಳ್ಯಾವುದೂ ಇಲ್ಲದೆ ಅನೇಕೋಪದ್ರವಯುಕ್ತವಾದ ವ್ರಣವು ಅಸಾಧ್ಯವೆಂದು ತಿಳಿಯಬೇಕು.

ಪೂತಿಃಪೂಯಾತಿದುಷ್ಟಾಸೃಕ್ ಸ್ರಾವ್ಯುತ್ಸಂಗೀಚಿರಸ್ಥಿತಿಃ ॥ ೭ ॥
ದುಷ್ಟೋವ್ರಣೋತಿಗಂಧಾದಿಶ್ಶುದ್ಧಲಿಂಗವಿಪರ್ಯಯಃ ॥

ಕೆಟ್ಟುಹೋದ ವ್ರಣದ ಲಕ್ಷಣವನ್ನು ಹೇಳುತ್ತಾನೆ—ದುರ್ಗಂಧಯುಕ್ತವಾಗಿರುವುದು, ದೋಷಯುಕ್ತವಾದ ಕೀವು ಮತ್ತು ಕೆಟ್ಟ ರಕ್ತ ಇವುಗಳು ಅತಿಯಾಗಿ ಸ್ರವಿಸುತ್ತಿರುವುದು, ಗುಳಿಗಳು ಬಿದ್ದಿರುವುದು, ಬಹಳ ಕಾಲ ಉತ್ತಮ ಸ್ಥಿತಿಗೆ ಬಾರದೆ ಹಾಗೆಯೇ ಉಳಿದಿರುವುದು, ದುರ್ಗಂಧಸ್ರಾವಾದಿಗಳೆಲ್ಲಾ ಅತಿಯಾಗಿರುವುದು, ಮುಂದೆ ಹೇಳುವ ಶುದ್ಧವ್ರಣದ ಲಕ್ಷಣಗಳಿಲ್ಲದಿರುವುದು, ಇವುಗಳು ಕೆಟ್ಟುಹೋದ ವ್ರಣದ ಲಕ್ಷಣಗಳು.

ಜಿಹ್ವಾತಲಾಭೋತಿಮೃದುಶ್ಲಕ್ಷ್ಣಸ್ನಿಗ್ಧೋಲ್ಪವೇದನಃ ॥ ೮ ॥
ಸುವ್ಯವಸ್ಥೋನಿರಾಸ್ರಾವಶ್ಶುದ್ಧೋವ್ರಣಇತಿಸ್ಮೃತಃ ॥

ಶುದ್ಧವ್ರಣದ ಲಕ್ಷಣಗಳನ್ನು ಹೇಳುತ್ತಾನೆ—ಮನುಷ್ಯರ ನಾಲಿಗೆಯಂತೆ ಚೊಕ್ಕಟವಾಗಿರುವುದು, ವ್ರಣವು ಮೃದುವಾಗಿರುವುದು, ವ್ರಣವು ನಾಲಿಗೆಯಂತೆ ನುಣುಪಾಗಿಯೂ ದ್ರವಯುಕ್ತವಾಗಿಯೂ ಇರುವುದು, ವೇದನೆಯು ಕಡಮೆಯಾಗಿರುವುದು, ವ್ರಣವು ಅವ್ಯವಸ್ಥೆಯಾಗಿಲ್ಲದೆ ಸರಿಯಾಗಿರುವುದು, ಕೀವು ಮತ್ತು ರಕ್ತಗಳು ಸೋರದಿರುವುದು, ಇವುಗಳು ಶುದ್ಧವ್ರಣದ ಲಕ್ಷಣಗಳು.

ಕಪೋತವರ್ಣಪ್ರತಿಮಾಯಸ್ಯಾಂತಃಕ್ಲೇದವರ್ಜಿತಾಃ ॥ ೯ ॥
ಸ್ಥಿರಾಶ್ಚಪಿಟಕಾವಂತೋರೋಹತೀತಿತಮಾದಿಶೇತ್ ॥

ಮಾಯುತ್ತ ಬರುವ ವ್ರಣದ ಲಕ್ಷಣಗಳ್ಯಾವುವೆಂದರೆ—ವ್ರಣದ ಒಳಭಾಗದಲ್ಲಿ ಪಾರಿವಾಳದ ಪಕ್ಕಿಯ ಬಣ್ಣದ ಅಂದರೆ ಬಿಳಪು ಮತ್ತು ಕಪ್ಪು ಕೂಡಿದ ಒಂದು ಬಗೆಯ ಹೊಗೆಯ ಬಣ್ಣದ ಸಣ್ಣ ಸಣ್ಣ ಬೊಕ್ಕೆಗಳು ಕಾಣುವುದು, ಬೊಕ್ಕೆಗಳು ಗಟ್ಟಿಯಾಗಿ ಮತ್ತು ರಸಿಕೆ ಇಲ್ಲದಿರುವುದು, ಈ ಲಕ್ಷಣಗಳು ಮಾಯುತ್ತ ಬರುವ ವ್ರಣದ ಗುರ್ತುಗಳು.

ರೂಢವರ್ತ್ಮಾನಮಗ್ರಂಥಿಮಶೂನಮರುಜಂವ್ರಣಂ ॥ ೧೦ ॥
ತ್ವಕ್ಸವರ್ಣಂಸಮತಲಂಸಮ್ಯಗ್ರೂಢಂವಿನಿರ್ದಿಶೇತ್ ॥

ಮಾದುಹೋಯಿತೆಂದು ತಿಳಿಯುವುದು ಹೇಗೆಂದರೆ— ವ್ರಣದ ಅಂಚುಗಳೆಲ್ಲಾ ಒಂದಕೊಂದು ಅಪ್ಪಿಗೆ ಹಾಕಿದಂತೆ ಕೂಡಿಕೊಂಡು ಹೋಗಿರುವುದು, ವ್ರಣದಲ್ಲಿ ಗಂಟಾಗಲಿ, ಬಾವಾಗಲಿ, ನೋವಾಗಲಿ ಇರಬಾರದು, ವ್ರಣದ ಮೇಲು ಭಾಗದ ಚರ್ಮವು ಶರೀರದ ವ್ರಣವಿಲ್ಲದ ಭಾಗದ ಬಣ್ಣಕ್ಕೆ ತಿರಿಗಿ ಹೋಗಿರುವುದು, ವ್ರಣವಿದ್ದ ಭಾಗವು ಗುಳಿಬೀಳದೆ ಸಮವಾಗಿರುವುದು, ಹೀಗಿದ್ದಲ್ಲಿ ಚನ್ನಾಗಿ ಮಾದುಹೋಯಿತೆಂದು ತಿಳಿಯಬೇಕು.

ಕುಷ್ಠಿನಾಂವಿಷಜುಷ್ಟಾನಾಂಶೋಷಿಣಾಂಮಧುಮೇಹಿನಾಂ ॥ ೧೧ ॥
ವ್ರಣಾಃಕೃಚ್ಛ್ರೇಣಸಿಧ್ಯಂತಿಯೇಷಾಂಚಾಪಿವ್ರಣೇವ್ರಣಾಃ ॥
ವಸಾಂಮೇದೋಥಮಜ್ಜಾನಂಮಸ್ತುಲುಂಗಂಚಯಸ್ಸ್ರವೇತ್ ॥ ೧೨ ॥
ಆಗಂತುಜೋವ್ರಣಸ್ಸಿಧ್ಯೇನ್ನಸಿಧ್ಯೇದ್ದೋಷಸಂಭವಃ ॥

ಕಷ್ಟಸಾಧ್ಯಗಳಾದ ವ್ರಣಗಳನ್ನು ಹೇಳುತ್ತಾನೆ— ಕುಷ್ಠರೋಗಿಗಳ ಶರೀರದಲ್ಲಿ ವ್ರಣವಾದಲ್ಲಿ ಅಂತಹ ವ್ರಣವು ಮಾಯುವುದು ಕಷ್ಟ, ಹೇಗಂದರೆ— ಕುಷ್ಠರೋಗದಿಂದಲೇ ರಕ್ತಮಾಂಸಗಳೆಲ್ಲವೂ ಕೆಟ್ಟು ಹಾಳಾಗಿ ಹೋಗಿರುತ್ತವೆ, ವಿಷಸಂಪರ್ಕವಾಗಿರುವವರ ಶರೀರದಲ್ಲಿ ಹುಟ್ಟಿದ ವ್ರಣಗಳು, ಕ್ಷಯರೋಗಿಗಳು, ಮಧುಮೇಹರೋಗದವರು ಇವರುಗಳಿಗೆಲ್ಲಾ ವ್ರಣಗಳಾದರೆ ಮಾಯುವುದು ಕಷ್ಟ, ಇಂತವರ ಶರೀರದಲ್ಲಿ ರಕ್ತಮಾಂಸಗಳು ವಿಶೇಷವಾಗಿ ಕೆಟ್ಟುಹೋಗಿರುತ್ತವೆ, ರಕ್ತವೃದ್ಧಿಯಾಗುವ ಸಂಭವವಿರುವುದಿಲ್ಲ, ಮತ್ತು ಮೊದಲು ಒಂದು ವ್ರಣವಿದ್ದು ಅದು ಮಾಯುವ ಮೊದಲು ಆ ಭಾಗದಲ್ಲಿ ವ್ರಣಗಳು ಹುಟ್ಟಿದರೆ ಆ ಭಾಗವೆಲ್ಲಾ ಮೊದಲೇ ಕೆಟ್ಟುಹೋಗಿರುವುದರಿಂದ ಮಾಯುವುದು ಕಷ್ಟ. ಇನ್ನು ಅಸಾಧ್ಯವ್ರಣ ಲಕ್ಷಣವನ್ನು ಹೇಳುತ್ತಾನೆ—ವ್ರಣದಿಂದ ಮಾಂಸರಸವಾಗಲಿ, ನೆಣವಾಗಲಿ, ಅಸ್ಥಿಗಳಲ್ಲಿರುವ ಒಂದು ಬಗೆಯ ದ್ರವವಾಗಲಿ, ಮಸ್ತುಲುಂಗವೆಂಬ ಮಸ್ತಿಷ್ಕಗತವಾದ ಒಂದು ಬಗೆಯ ದ್ರವವಾಗಲಿ ಸೋರುವುದಕ್ಕಾರಂಭವಾಗಿದ್ದಲ್ಲಿ ಆ ವ್ರಣವು ಆಗಂತುಕಗಳಾದ ಕಾರಣಗಳಿಂದ ಹುಟ್ಟಿರುವುದಾಗಿದ್ದಲ್ಲಿ ಅದು ಸಾಧ್ಯವೆಂಬದಾಗಿಯೂ ಶರೀರಗತವಾದ ದೋಷಪ್ರಕೋಪದಿಂದಲೇ ಹುಟ್ಟಿದ್ದಲ್ಲಿ ಅಸಾಧ್ಯವೆಂಬದಾಗಿಯೂ ತಿಳಿಯಬೇಕು.

ಮದ್ಯಾಗುರ್ವಾಜ್ಯಸುಮನಃಪದ್ಮಚಂದನಚಂಪಕೈಃ ॥ ೧೩ ॥
ಸಗಂಧಾದಿವ್ಯಗಂಧಾಶ್ಚಮುಮೂರ್ಷೂಣಾಂವ್ರಣಾಃಸ್ಮೃತಾಃ ॥

ವ್ರಣರೋಗಿಗಳ ಮರಣಚಿಹ್ನೆಯನ್ನು ಹೇಳುತ್ತಾನೆ— ವ್ರಣವು ಮದ್ಯದ ವಾಸನೆ ಬರುವುದು, ಅಗಿಲು, ತುಪ್ಪ, ಜಾಜಿಯ ಹುವ್ವು, ಕಮಲದ ಹುವ್ವು,

ಶ್ರೀಗಂಧ, ಸಂಪಿಗೆ ಹುವ್ವು ಇವುಗಳ ವಾಸನೆಯುಳ್ಳದ್ದಾಗಿರುವುದು, ಇನ್ನೂ ಇತರ ಸುಗಂಧಗಳು ವ್ರಣವಲ್ಲಿ ತೋರುತ್ತಿರುವುದು, ಈ ಲಕ್ಷಣಗಳಿದ್ದಲ್ಲಿ ಅಂತಹ ವ್ರಣರೋಗಿಗಳು ಸಾಯುತ್ತಾರೆಂಬ ಭಾವ.

ಯೇಚಮರ್ಮಸ್ವಸಂಭೂತಾಭವಂತ್ಯತ್ಯರ್ಥವೇದನಾಃ ॥ ೧೪ ॥
ದಹ್ಯಂತೇಚಾಂತರತ್ಯರ್ಥಂಬಹಿಶ್ಶೀತಾಶ್ಚಯೇವ್ರಣಾಃ ॥
ದಹ್ಯಂತೇಬಹಿರತ್ಯರ್ಥಂಭವಂತ್ಯಂತಶ್ಚಶೀತಲಾಃ ॥ ೧೫ ॥
ಪ್ರಾಣಮಾಂಸಕ್ಷಯಶ್ವಾಸಕಾಸಾರೋಚಕಪೀಡಿತಾಃ ॥
ಪ್ರವೃದ್ಧಪೂಯರುಧಿರಾವ್ರಣಾಯೇಷಾಂಚಮರ್ಮಸು ॥ ೧೬ ॥
ಕ್ರಿಯಾಭಿಸ್ಸಮ್ಯಗಾರಬ್ಧಾನಸಿದ್ಧ್ಯಂತಿಚಯೇವ್ರಣಾಃ ॥
ವರ್ಜಯೇದಪಿತಾನ್ವೈದ್ಯಃಸಂರಕ್ಷನ್ನಾತ್ಮನೋಯಶಃ ॥ ೧೭ ॥

ವ್ರಣವು ಮರ್ಮಸ್ಥಾನದಲ್ಲಿ ಹುಟ್ಟಿದಿದ್ದರೂ ಅತಿಯಾಗಿ ವೇದನೆಯಾಗುತ್ತಿರುವುದು, ವ್ರಣದ ಒಳಭಾಗದಲ್ಲಿ ಉರಿಯಿದ್ದು ಹೊರಭಾಗ ತಣ್ಣಗೆನೇ ಇರುವುದು, ಹೊರಭಾಗದಲ್ಲಿ ಉರಿಯಿದ್ದು ಒಳಭಾಗ ತಣ್ಣಗಿರುವುದು, ಮತ್ತು ವ್ರಣರೋಗ ಪೀಡಿತನಾದ ರೋಗಿಗೆ ದೇಹಶಕ್ತಿ ಕುಂದಿಹೋಗಿರುವುದು, ಮಾಂಸವು ಕ್ಷಯಿಸಿಹೋಗಿರುವುದು. ಉಬ್ಬಸ, ಕೆಮ್ಮು, ಅರುಚಿ ಇವುಗಳಿರುವುದು, ವ್ರಣದಿಂದ ಕೀವು ಮತ್ತು ರಕ್ತ ಸದಾ ಸುರಿಯುತ್ತಲೂ ಹೆಚ್ಚುತ್ತಲೂ ಇರುವುದು, ಮರ್ಮಸ್ಥಾನದಲ್ಲಿ ವ್ರಣ ಸಂಭವಿಸಿರುವುದು, ವ್ರಣಚಿಕಿತ್ಸಾ ಕ್ರಮವನ್ನು ಎಷ್ಟು ಸರಿಯಾದ ರೀತಿಯಲ್ಲಿ ಮಾಡುತ್ತ ಬಂದರೂ ವ್ರಣಗಳ ಉಲ್ಬಣವು ಕಡಮೆಯಾಗದೇನೇ ಇರುವುದು, ಇಂತಹ ವ್ರಣಗಳನ್ನು ಶ್ರೇಯಸ್ಕಾಮನಾದ ವೈದ್ಯನು ಅಸಾಧ್ಯವೆಂಬದಾಗಿ ಚಿಕಿತ್ಸಿಸದೆ ತ್ಯಾಗಮಾಡತಕ್ಕದ್ದು.

ಇಲ್ಲಿಗೆ ಶಾರೀರವ್ರಣನಿದಾನ ಸಂಪೂರ್ಣ.

---

## ಸದ್ಯೋವ್ರಣನಿದಾನ.

ನಾನಾಧಾರಮುಖೈಶ್ಶಸ್ತ್ರೈರ್ನಾನಾಸ್ಥಾನನಿಪಾತಿತೈಃ ॥
ಭವಂತಿನಾನಾಕೃತಯೋವ್ರಣಾಸ್ತಾಂಸ್ತಾನ್ನಿಬೋಧಮೇ ॥ ೧ ॥
ಛಿನ್ನಂಭಿನ್ನಂತಥಾವಿದ್ಧಂಕ್ಷತಂಪಿಚ್ಚಿತಮೇವಚ ॥
ಘೃಷ್ಟಮಾಹುಸ್ತಥಾಷಷ್ಠಂತೇಷಾಂವಕ್ಷ್ಯಾಮಿಲಕ್ಷಣಂ ॥ ೨ ॥

ಆಗಂತುಕಗಳಾದ ಕಾರಣಗಳಿಂದ ಹುಟ್ಟಬಹುದಾದ ವ್ರಣಗಳನ್ನು ಹೇಳುತ್ತಾನೆ—ಅನೇಕ ವಿಧಗಳಾದ ಅಲಗುಗಳು, ಮುಖಗಳು ಉಳ್ಳ ಆಯುಧಗಳು ಶರೀರದ ನಾನಾ ಭಾಗಗಳಿಗೆ ತಗಲಿ ನಾನಾ ವಿಧವಾದ ಆಕಾರಗಳುಳ್ಳ ವ್ರಣಗಳನ್ನು ಹುಟ್ಟಿಸುತ್ತವೆ. ಇವುಗಳ ಸ್ವರೂಪವನ್ನು ಹೇಳುತ್ತಾನೆ—ಈ ಆಗಂತು ವ್ರಣಗಳು ಛಿನ್ನ, ಭಿನ್ನ, ವಿದ್ಧ, ಕ್ಷತ, ಪಿಚ್ಚಿತ, ಘೃಷ್ಟ ಎಂಬದಾಗಿ ಆರು ವಿಧ, ಇವುಗಳ ಲಕ್ಷಣವನ್ನು ಒಂದೊಂದಾಗಿ ಹೇಳುತ್ತೇವೆ.

**ತಿರ್ಯಕ್ ಛಿನ್ನೋಋಜುರ್ವಾಪಿಯೋವ್ರಣಸ್ತ್ವಾಯತೋ ಭವೇತ್ ॥**
**ಗಾತ್ರಸ್ಯಪಾತನಂತದ್ಧಿಛಿನ್ನಮಿತ್ಯಭಿಧೀಯತೇ ॥ ೩ ॥**

ದೇಹದ ಯಾವುದಾದರೂ ಒಂದು ಭಾಗವನ್ನು ಕತ್ತರಿಸಿ ಕೆಡವುವುದಕ್ಕೋಸ್ಕರವಾಗಿ ಅಡ್ಡವಾಗಿಯಾಗಲಿ ಉದ್ದವಾಗಿಯಾಗಲಿ ಕತ್ತರಿಸುವುದರಿಂದ ಉಂಟಾಗಬಹುದಾದ ವ್ರಣಕ್ಕೆ ಛಿನ್ನವ್ರಣವೆಂದು ಹೆಸರು.

**ಶಕ್ತಿದಂತೇಷುಖಡ್ಗಾಗ್ರವಿಷಾಣೈರಾಶಯೋಹತಃ ॥**
**ಯತ್ಕಿಂಚಿತ್ಪ್ರಸ್ರವೇತ್ತದ್ಧಿಭಿನ್ನಲಕ್ಷಣಮುಚ್ಯತೇ ॥ ೪ ॥**

ಶಕ್ತಿ ಎಂಬುವುದೊಂದು ಬಗೆಯ ಮೊನೆಯಾದ ಆಯುಧ. ಹಲ್ಲು ಕತ್ತಿಯ ಮೊನೆ, ಕೋಡು ಇಂತಹ ಮೊನೆಯಾದ ಆಯುಧಗಳಿಂದ ಆಮಾಶಯ, ಪಕ್ವಾಶಯ, ರಕ್ತಾಶಯ, ಮೂತ್ರಾಶಯಗಳೆಂಬ ಶರೀರದ ಭಾಗಗಳಿಗೆ ಪೆಟ್ಟು ತಗಲಿ ಆ ಘಾಯದಿಂದ ಆಯಾ ಆಶಯಗತಗಳಾದ ಪದಾರ್ಥಗಳೇ ಕೊಂಚ ಕೊಂಚವಾಗಿ ಪ್ರಸವಿಸುವುದಕ್ಕೆ ಆರಂಭವಾದರೆ ಆ ವ್ರಣಕ್ಕೆ ಭಿನ್ನವ್ರಣವೆನ್ನುತ್ತಾರೆ.

**ಸ್ಥಾನಾನ್ಯಾಮಾಗ್ನಿಪಕ್ವಾನಾಂಮೂತ್ರಸ್ಯರುಧಿರಸ್ಯಚ ॥**
**ಹೃದುಂಡುಕಃಪುಪ್ಫುಸಶ್ಚಕೋಷ್ಠಇತ್ಯಭಿಧೀಯತೇ ॥ ೫ ॥**
**ತಸ್ಮಿನ್ ಭಿನ್ನೇರಕ್ತಪೂರ್ಣೇಜ್ವರೋದಾಹಶ್ಚಜಾಯತೇ ॥**
**ಮೂತ್ರಮಾರ್ಗಗುದಾಸ್ಯೇಭ್ಯೋರಕ್ತಂಘ್ರಾಣಾಚ್ಚಗಚ್ಛತಿ ॥ ೬ ॥**
**ಮೂರ್ಚ್ಛಾಶ್ವಾಸತೃಷಾಧ್ಮಾನಮಭಕ್ತಚ್ಛಂದಏವಚ ॥**
**ವಿಣ್ಮೂತ್ರವಾತಸಂಗಶ್ಚಸ್ವೇದಾಸ್ರಾವೋಕ್ಷಿರಕ್ತತಾ ॥ ೭ ॥**
**ಲೋಹಗಂಧಿತ್ವಮಾಸ್ಯಸ್ಯಗಾತ್ರದೌರ್ಗಂಧ್ಯಮೇವಚ ॥**
**ಹೃಚ್ಛೂಲಂಪಾರ್ಶ್ವಯೋಶ್ಚಾಪಿವಿಶೇಷಂಚಾತ್ರಮೇಶೃಣು ॥ ೮ ॥**
**ಆಮಾಶಯಸ್ಥೇರುಧಿರೇರುಧಿರಂಛರ್ದಯತ್ಯಪಿ ॥**

**ಆಧ್ಮಾನಮತಿಮಾತ್ರಂಚಶೂಲಂಚಭೃಶದಾರುಣಂ ॥ ೯ ॥**
**ಪಕ್ವಾಶಯಗತೇಚಾಪಿರುಜಾಗೌರವಮೇವಚ ॥**
**ಅಧಃಕಾಯೇವಿಶೇಷೇಣಶೀತತಾಚಭವೇದಿಹ ॥ ೧೦ ॥**

ಹಿಂದಲ ಶ್ಲೋಕದಲ್ಲಿ ಭಿನ್ನವ್ರಣದ ಲಕ್ಷಣವನ್ನು ಹೇಳುವಾಗ್ಯೆ ಆಶಯಗಳಿಗೆ ತೂತುಬಿದ್ದರೆ ಆ ವ್ರಣವು ಭಿನ್ನವ್ರಣವೆನ್ನಿಸಿಕೊಳ್ಳುತ್ತದೆಂದು ಹೇಳಲ್ಪಟ್ಟಿತಷ್ಟೆ. ಆಶಯಗಳೆಂದರೆ ಏನು ಎಂಬ ವಿಷಯವನ್ನು ವಿವರವಾಗಿ ಹೇಳುತ್ತಾನೆ—ಭೋಜನಮಾಡಿದ ಪದಾರ್ಥಗಳು ಮೊದಲು ಹೋಗಿ ನಿಲ್ಲತಕ್ಕ ಸ್ಥಾನವು ಆಮಾಶಯವೆನ್ನಿಸಿಕೊಳ್ಳುತ್ತದೆ, ಮುಂದೆ ದೇಹಗತವಾದ ಶಾಖದಿಂದ ಭೋಜನಮಾಡಿದ ಪದಾರ್ಥಗಳೆಲ್ಲಾ ಪಕ್ವಾವಸ್ಥೆಗೆ ಬರುವ ಸ್ಥಾನಕ್ಕೇನೇ ಪಚ್ಯಮಾನಾಶಯ ಅಥವಾ ಅಗ್ನ್ಯಾಶಯವೆಂದು ಹೆಸರು. ಪಕ್ವಗಳಾದ ಪದಾರ್ಥಗಳು ತಮ್ಮ ಸಾರಭಾಗವನ್ನು ಶರೀರ ಪೋಷಣೆಗೆ ಕಳುಹಿಸಿದ ಮೇಲೆ ನಿಸ್ಸಾರವಾದ ಭಾಗವು ನಿಲ್ಲತಕ್ಕ ಪ್ರದೇಶಕ್ಕೆ ಪಕ್ವಾಶಯವೆಂಬ ಹೆಸರು. ಬಸ್ತಿ ಎಂಬ ಮೂತ್ರಕೋಶಕ್ಕೆ ಮೂತ್ರಾಶಯವೆಂಬ ಹೆಸರು, ದೇಹದ ಒಳಭಾಗದಲ್ಲಿರುವ ಯಕೃತ್ ಪ್ಲೀಹ ಎಂಬ ಭಾಗಗಳಿಗೆ ರಕ್ತಾಶಯವೆಂಬ ಹೆಸರು, ಹೃದಯ, ಉಂಡುಕವೆಂದರೆ ಕಬ್ಬಿನ ಹಾಲನ್ನು ಕಾಯಿಸುವಾಗ್ಯೆ ಅದರ ಮೇಲೆ ಬರುವ ಮಷ್ಟಿನಂತೆ ರಕ್ತವು ದೇಹೋಷ್ಣದಿಂದ ಪಕ್ವವಾಗುವಾಗ್ಯೆ ಹೊರಡುವ ಮಲಪದಾರ್ಥದಿಂದ ಏರ್ಪಟ್ಟ ದೇಹದ ಒಳಗಿನ ಒಂದು ಭಾಗಕ್ಕೆ ಹೆಸರು, ಬಹುಶಃ ಕರುಳಿನ ಒಂದು ಭಾಗದಲ್ಲಿ ಮಲವು ನಿಲ್ಲತಕ್ಕ ಭಾಗವಾಗಬಹುದು, ಪುಪ್ಪುಸವೆಂದರೆ ಹೃದಯದ ಸಮೀಪದಲ್ಲಿ ರಕ್ತ ನಿಲ್ಲತಕ್ಕ ಭಾಗಕ್ಕೆ ಹೆಸರು, ಈ ಎಲ್ಲಕ್ಕೂ ಕೋಷ್ಠವೆಂಬದಾಗಿಯೂ ಆಶಯವೆಂಬದಾಗಿಯೂ ಆಯುರ್ವೇದದಲ್ಲಿ ಸಂದರ್ಭ ಬಂದಂತೆ ವ್ಯವಹರಿಸುವುದುಂಟು. ಇಂತಹ ಆಶಯಗಳ ಮಧ್ಯೆ ಯಾವುದಕ್ಕಾದರೂ ಭಿನ್ನವೆಂಬ ಹೆಸರಿನ ವ್ರಣವುಂಟಾಗಿ ಆಶಯಗಳಲ್ಲಿ ರಕ್ತವು ತುಂಬಿಕೊಂಡರೆ ಜ್ವರ, ಮೈಯುರಿ, ಇವುಗಳುಂಟಾಗುತ್ತವೆ, ಮಲಮೂತ್ರ ಮಾರ್ಗಗಳಿಂದಲೂ ಬಾಯಿ ಮೂಗುಗಳಿಂದಲೂ ರಕ್ತವು ಹೊರಡುತ್ತದೆ. ರೋಗಿಗೆ ಮೂರ್ಛೆ, ಉಬ್ಬಸ, ಬಾಯಾರಿಕೆ, ಹೊಟ್ಟೆಯುಬ್ಬರ, ಅನ್ನದಲ್ಲಿ ಅಪೇಕ್ಷೆ ತಪ್ಪಿಹೋಗುವಿಕೆ, ಮಲಮೂತ್ರಗಳು ಮತ್ತು ಅಪಾನವಾಯು ಸಹ ತಡೆದುಹೋಗುವಿಕೆ, ಬೆವರು ಬರುವುದಕ್ಕಿಲ್ಲ, ಕಣ್ಣು ಕೆಂಪಾಗುವುದು, ಉಸಿರಿನ ವಾಸನೆಯಲ್ಲಿ ಕಬ್ಬಿಣದ ಗಂಧ ತೋರುವುದು, ಮೈಯ್ಯಲ್ಲಿ ದುರ್ವಾಸನೆ ಹುಟ್ಟುವುದು, ಎದೆ ಮತ್ತು ಪಕ್ಕಗಳಲ್ಲಿ ನೋವು, ಇವುಗಳೆಲ್ಲಾ ಕಾಣುವುದು, ಇದು ಸಾಮಾನ್ಯ ಲಕ್ಷಣ. ವಿಶೇಷ ಲಕ್ಷಣಗಳೇನಂದರೆ ಆಮಾಶಯವೆಂಬ ಭಾಗಕ್ಕೆ ತೂತು ಬಿದ್ದು ಆಮಾಶಯದಲ್ಲಿ ರಕ್ತವು ತುಂಬಿಕೊಂಡಲ್ಲಿ ರಕ್ತವು ವಾಂತಿಯಾಗುವುದು, ಭಯಂಕರವಾದ ಹೊಟ್ಟೆಯುಬ್ಬರ

ಮತ್ತು ಶೂಲೆ ಇವುಗಳುಂಟಾಗುತ್ತವೆ, ಇಂತಹ ವ್ರಣವು ಪಕ್ವಾಶಯಕ್ಕೆ ಸಂಭವಿಸಿದಲ್ಲಿ ಆ ಭಾಗದಲ್ಲಿ ನೋವು ಭಾರ, ಶರೀರದ ಕೆಳಭಾಗವೆಲ್ಲಾ ತಣ್ಣಗಾಗಿ ಹೋಗುವುದು.

ಸೂಕ್ಷ್ಮಾಸ್ಯಶಲ್ಯಾಭಿಹತಂಯದಂಗಂತ್ವಾಶಯಂವಿನಾ ॥
ಉತ್ತುಂಡಿತಂನಿರ್ಗತಂವಾತದ್ವಿದ್ಧಮಿತಿನಿರ್ದಿಶೇತ್ ॥ ೧೧ ॥

ವಿದ್ಧವೆಂಬ ವ್ರಣದ ಲಕ್ಷಣ—ಹಿಂದೆ ಹೇಳಿದ ಆಶಯುಗಳನ್ನು ಬಿಟ್ಟು ಬೇರೇ ಶರೀರದ ಭಾಗಗಳು ಸೂಕ್ಷ್ಮವಾದ ಮತ್ತು ಹರಿತವಾದ ಬಾಯಿನ ಶಸ್ತ್ರದಿಂದ ಚುಚ್ಚಲ್ಪಟ್ಟು ಒಳಗಿರುವ ಮುಳ್ಳು ಮೊದಲಾದ ಶಲ್ಯಗಳು ಹೊರಕ್ಕೆ ತೆಗೆಯಲ್ಪಟ್ಟ ಮೇಲೆ ಅಥವಾ ಮುಂಚಿತವಾಗಿಯೇ ಹುಟ್ಟುವ ವ್ರಣಕ್ಕೂ, ಈ ರೀತಿಯಾಗಿ ಚುಚ್ಚಲ್ಪಟ್ಟ ವ್ರಣವ ವಸ್ತುವು ಹೊರಕ್ಕೆ ಹೊರಟಿದ್ದರೂ ಅಥವಾ ಹೊರಡದಿದ್ದರೂ ಅದಕ್ಕೂ ಉತ್ತುಂಡಿತವ್ರಣವೆಂಬ ಹೆಸರು. ಮುಳ್ಳುಗಳು, ಮೊಳೆಗಳು, ಶಿಬರುಗಳು, ಶರೀರದೊಳಗೆ ನಾಟಿಕೊಂಡರೆ ಅವನ್ನು ತೆಗೆಯುವುದಕ್ಕಾಗಿ ಮಾಡುವ ಸೂಜಿದಬ್ಬಣ ಮೊದಲಾದವುಗಳ ಗಾಯಕ್ಕೆ ಈ ಹೆಸರು.

ನಾತಿಚ್ಛಿನ್ನಂನಾತಿಭಿನ್ನಂಉಭಯೋರ್ಲಕ್ಷಣಾನ್ವಿತಂ ॥
ವಿಷಮಂವ್ರಣಮಂಗೇಯತ್ತತ್ ಕ್ಷತಂಸ್ವಭಿಧೀಯತೇ ॥ ೧೨ ॥

ಅರ್ಧಮರ್ಧ ಕತ್ತರಿಸಲ್ಪಟ್ಟಿರುವುದು, ಅರ್ಧಮರ್ಧ ಚುಚ್ಚಲ್ಪಟ್ಟಿರುವುದು, ಈ ರೀತಿ ಛಿನ್ನ ಮತ್ತು ಭಿನ್ನ ವ್ರಣಗಳೆರಡರ ಲಕ್ಷಣಗಳಿಂದಲೂ ಕೂಡಿರುವ ಅಂಗಗಳಿಗೆ ನ್ಯೂನತೆಯನ್ನುಂಟುಮಾಡುವಷ್ಟು ಕಠಿಣವಾದ ವ್ರಣಕ್ಕೆ ಕ್ಷತವ್ರಣವೆಂಬ ಹೆಸರು.

ಪ್ರಹಾರಪೀಡನಾಭ್ಯಾಂತುಯದಂಗಂಪೃಥುತಾಂಗತಂ ॥
ಸಾಸ್ಥಿತತ್ ಪಿಚ್ಚಿತಂವಿದ್ಯಾನ್ಮಜ್ಜಾರಕ್ತಪರಿಪ್ಲುತಂ ॥ ೧೩ ॥

ದೇಹದ ಯಾವುದಾದರೂ ಭಾಗಕ್ಕೆ ಬಲವಾದ ಏಟು ಬೀಳುವದು, ಇನ್ನೂ ಯಾವುದಾದರೂ ಒಂದು ವಿಧವಾದ ಹಿಂಸೆಯಾಗುವುದು, ಹೀಗಾಗೋಣದರಿಂದ ಅಂತಗತವಾದ ಅಸ್ಥಿಗೂ ಪೆಟ್ಟಾಗಿ ಊದಿಕೊಂಡು ರಕ್ತಮತ್ತು ಅಸ್ಥಿರಸಗಳು ಕಟ್ಟಿಕೊಂಡಿರುವ ಮೂಗುಗಾಯಕ್ಕೆ ಪಿಚ್ಚಿತವೆಂದು ಹೆಸರು.

ಘರ್ಷಣಾದವಿಘಾತಾದ್ವಾಯದಂಗಂವಿಗತತ್ವಚಂ ॥
ಊಷಾಸ್ರಾವಾನ್ವಿತಂತಚ್ಚ ಘೃಷ್ಟಮಿತ್ಯಭಿಧೀಯತೇ ॥ ೧೪ ॥

ಚರ್ಮದ ಹೊರಭಾಗವು ಯಾವುದಾದರೂ ಒರಟು ಪದಾರ್ಥದಿಂದ ತಿಕ್ಕಿ ಹೋಗುವುದು, ಏಟು ಬೀಳುವುದು ಈ ಕಾರಣಗಳಿಂದ ಚರ್ಮವು ಕಿತ್ತುಹೋಗಿ ಉರಿ ಮತ್ತು ಒಂದು ಬಗೆಯ ದ್ರವದ ಸ್ರಾವ ಇವುಗಳಿದ್ದರೆ ಅಂತಹ ವ್ರಣಕ್ಕೆ ಘೃಷ್ಟವ್ರಣವೆಂದು ಹೆಸರು.

ಶ್ಯಾವಂಸಶೋಥಂಪಿಡಕಾಚಿತಂಚಮುಹುರ್ಮುಹುಶ್ಶೋಣಿತ
ವಾಹಿನಂಚ ॥
ಮೃದೂದ್ಗತಂಬುದ್ಬುದತುಲ್ಯಮಾಂಸಂಪ್ರಣಂಸಶಲ್ಯಂಸರುಜಂ
ವದಂತಿ ॥ ೧೫ ॥
ತ್ವಚೋತೀತ್ಯಶಿರಾದೀನಿಭಿತ್ವಾವಾಪರಿಹೃತ್ಯವಾ ॥
ಕೋಷ್ಠೇಪ್ರತಿಷ್ಠಿತಂಶಲ್ಯಂಕುರ್ಯಾದುಕ್ತಾನುಪದ್ರವಾನ್ ॥ ೧೬ ॥

ಸಶಲ್ಯವ್ರಣದ ಲಕ್ಷಣವನ್ನು ಹೇಳುತ್ತಾನೆ—ವ್ರಣದೊಳಗೆ ಶಲ್ಯವೆಂದರೆ ಮುಳ್ಳು ಮೊದಲಾದದ್ದು ಸೇರಿಕೊಂಡಿದ್ದರೆ ವ್ರಣವು ಧೂಮ್ರವರ್ಣವಾಗಿರುತ್ತದೆ. ಊದಿಕೊಂಡಿರುತ್ತದೆ, ಅದರ ಮೇಲೆಲ್ಲಾ ಸಣ್ಣ ಬಕ್ಕೆಗಳು ಸೂಸಿರುತ್ತವೆ, ಆಗಾಗ್ಯೆ ರಕ್ತವು ಹೊರಡುತ್ತಿರುತ್ತದೆ, ಮೃದುವಾಗಿರುತ್ತದೆ, ಗುಳ್ಳೆಗಳಂತೆ ಮಾಂಸವು ಮೃದುವಾಗಿ ಉಬ್ಬಿಕೊಂಡಿರುತ್ತದೆ, ವ್ರಣದಲ್ಲಿ ಸಹಿಸಲಾರದ ನೋವಿರುತ್ತದೆ, ಇಂತಹ ವ್ರಣವನ್ನು ಸಶಲ್ಯವ್ರಣವೆಂದು ತಿಳಿಯಬೇಕು. ಮುಳ್ಳಾಗಲಿ ಮೊನೆಯಾದ ಗೂಟವಾಗಲಿ ಚರ್ಮವನ್ನು ಮತ್ತು ನರಗಳನ್ನು ತೂತು ಮಾಡಿಕೊಂಡಾಗಲಿ ಒಂದು ವೇಳೆ ಇವುಗಳನ್ನು ಅಂದರೆ ನರಗಳು, ಸಂಧಿ, ಮಾಂಸ, ಇವುಗಳನ್ನು ಬಿಟ್ಟೇ ಆಗಲಿ ಕೋಷ್ಠವೆಂಬ ಸ್ಥಾನವನ್ನು ಹೇಳಿದರೆ ಹಿಂದೆ ಹೇಳಿದ ಅಂದರೆ ಹಿಂದಿನ ಶ್ಲೋಕದಲ್ಲಿಯೇ ಹೇಳಿದ ಉಪದ್ರವಗಳನ್ನೆಲ್ಲಾ ಉಂಟುಮಾಡುತ್ತದೆ.

ತತ್ರಾಂತಲೋಹಿತಂಪಾಂಡುಶೀತಪಾದಕರಾನನಂ ॥
ಶೀತೋಚ್ಛ್ವಾಸಂರಕ್ತನೇತ್ರಮಾನದ್ಧಂಚವಿವರ್ಜಯೇತ್ ॥ ೧೭ ॥

ಕೋಷ್ಠಭೇದ ವ್ರಣದ ಅಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ—ಹಿಂದೆ ಹೇಳಿದ ರೀತಿಗಳಿಂದ ಕೋಷ್ಠವು ಭಿನ್ನವಾದರೂ ರಕ್ತವು ಹೊರಬೀಳದೆ ಒಳಗೇ ನಿಲ್ಲುವುದು, ರೋಗಿಯು ಬೆಳ್ಳಗಾಗುತ್ತ ಬರುವುದು, ರೋಗಿಯ ಕೈಕಾಲುಗಳು ತಣ್ಣಗಿರುವುದು, ಮುಖವೂ ತಣ್ಣಗೇ ಇರುವುದು, ಉಸಿರು ಸಹಾ ತಣ್ಣಗಿರುವುದು, ಕಣ್ಣು ಕೆಂಪು ಬಣ್ಣಕ್ಕೆ ತಿರಿಗಿರುವುದು, ಹೊಟ್ಟೆಯುಬ್ಬರವಿರುವುದು, ಇಷ್ಟು ಲಕ್ಷಣಗಳಿದ್ದರೆ ಚಿಕಿತ್ಸೆಗೆ ಅಸಾಧ್ಯವೆಂದು ತ್ಯಜಿಸಬೇಕು.

ಭ್ರಮಃಪ್ರಲಾಪಃಪತನಂಪ್ರಮೋಹೋವಿಚೇಷ್ಟನಂಗ್ಲಾನಿರ
ಥೋಷ್ಣತಾಚ ॥
ಸ್ರಸ್ತಾಂಗತಾಮೂರ್ಛನಮೂರ್ಧ್ವವಾತಸ್ತೀವ್ರಾರುಜೋವಾತ
ಕೃತಾಶ್ಚತಾಸ್ತಾಃ ॥ ೧೮ ॥
ಮಾಂಸೋದಕಾಭಂರುಧಿರಂಚಗಚ್ಛೇತ್ಸರ್ವೇಂದ್ರಿಯಾರ್ಥೋ
ಪರಮಸ್ತಥೈವ ॥
ದಶಾರ್ಧಸಂಖ್ಯೇಷ್ವಥವಿಕ್ಷತೇಷುಸಾಮಾನ್ಯತೋಮರ್ಮಸು
ಲಿಂಗಮುಕ್ತಂ ॥ ೧೯ ॥

ಮರ್ಮಸ್ಥಾನಗಳಲ್ಲಿ ವ್ರಣಗಳಾದರೆ ತೋರಿಬರುವ ಲಕ್ಷಣಗಳನ್ನು ಹೇಳುತ್ತಾನೆ—ಮಾಂಸ, ಶಿರಾ, ಸ್ನಾಯು, ಅಸ್ಥಿ, ಸಂಧಿ, ಈ ಐದು ಮರ್ಮಸ್ಥಾನಗಳಲ್ಲಿಯೂ ವ್ರಣಗಳುಂಟಾದರೆ ಸಾಮಾನ್ಯವಾಗಿ ಬುದ್ಧಿಭ್ರಮ, ಹುಚ್ಚು ಮಾತಾಡುವುದು, ಬೀಳುವುದು, ಅಜ್ಞಾನ, ವಿರುದ್ಧ ಚೇಷ್ಟೆಗಳನ್ನು ಮಾಡುವುದು, ಬಳಲಿಕೆ, ಮೈಯ್ಯ ಬಿಸಿ ಹೆಚ್ಚಿಗೆ ತೋರುವುದು, ಅವಯವಗಳು ಕಳಚಿ ಬಿದ್ದುಹೋಗುವಂತೆ ವ್ಯಥೆಯಾಗುವುದು, ಮೂರ್ಛೆ ಬೀಳುವುದು, ಊರ್ಧ್ವಾಂಗವಾತ, ಇವುಗಳಲ್ಲದೆ ಇನ್ನೂ ಬೇರೆ ಬೇರೆ ಭಯಂಕರವಾದ ವಾತವ್ಯಾಧಿಗಳು, ವ್ರಣದಿಂದ ಮಾಂಸದ ನೀರಿನಂತಹ ನೀರು ಹೊರಡುತ್ತಿರುವುದು, ಅದರ ಜೊತೆಯಲ್ಲಿ ರಕ್ತವೂ ಸೇರಿಕೊಂಡೇ ಇರುವುದು, ಇಂದ್ರಿಯಗಳು ತಮ್ಮ ಕೆಲಸಗಳನ್ನು ಮಾಡಲಾರದೆ ಹೋಗುವುದು, ಇವುಗಳೆಲ್ಲಾ ಕಾಣಬರುವುದು

ಸುರೇಂದ್ರಗೋಪಪ್ರತಿಮಂಪ್ರಭೂತಂರಕ್ತಂಸ್ರವೇತ್ತತ್
ಕ್ಷತಜಶ್ಚವಾಯುಃ ॥
ಕರೋತಿರೋಗಾನ್ವಿವಿಧಾನ್ಮಥೋಕ್ತಾನ್‌ಶಿರಾಸುವಿದ್ಧಾಸ್ವ
ಥವಾಕ್ಷತಾಸು ॥ ೨೦ ॥

ಶಿರಾ ಎಂಬ ನರಗಳು ಚುಚ್ಚಲ್ಪಟ್ಟು ಅಥವಾ ಬೇರೇ ಕಾರಣಗಳಿಂದ ಕಿತ್ತು ಹೋಗಿ ವ್ರಣಗಳುಂಟಾದರೆ ಕಾಮನಬಿಲ್ಲಿನಂತಹ ಬಣ್ಣವುಳ್ಳ ರಕ್ತದ್ರವವು ಧಾರಾಳವಾಗಿ ಸುರಿಯುತ್ತಿರುತ್ತದೆ, ಈ ಆಗಂತುಕ ವ್ರಣದಿಂದ ಪ್ರಕುಪಿತವಾದ ವಾಯುವು ನಾನಾ ವಿಧಗಳಾದ ವಾತವಿಕಾರಗಳನ್ನುಂಟುಮಾಡುತ್ತದೆ.

ಕೌಬ್ಜ್ಯಂಶರೀರಾವಯವಾವಸಾದಃಕ್ರಿಯಾಸ್ವಶಕ್ತಿಸ್ತುಮುಲಾ
ರುಜಶ್ಚ ॥
ಚಿರಾದ್ವ್ರಣೋರೋಹತಿಯಸ್ಯಚಾಪಿತಂಸ್ನಾಯುವಿದ್ಧಂಪುರುಷಂ
ವ್ಯವಸ್ಯೇತ್ ॥ ೨೧ ॥

ಶೋಷಾಭಿವೃದ್ಧಿಸ್ತುಮುಲಾರುಜಶ್ಚ ಬಲಕ್ಷಯುಸ್ಸರ್ವತಏವ
ಶೋಥಃ ॥
ಕ್ಷತೇಷುಸಂಧಿಷ್ವಚಲಾಚಲೇಷುಸ್ಯಾತ್ ಸರ್ವಕರ್ಮೋಪರ
ಮಶ್ಚಲಿಂಗಂ ॥ ೨೨ ॥
ಘೋರಾರುಜೋಯಸ್ಯನಿಶಾದಿನೇಷುಸರ್ವಾಸ್ವವಸ್ಥಾಸುಚನೈ
ತಿಶಾಂತಿಂ ॥
ಭಿಷಗ್ವಿಪಶ್ಚಿದ್ವಿದಿತಾರ್ಥಸೂತ್ರಸ್ತಮಸ್ಥಿವಿದ್ಧಂಪುರುಷಂವ್ಯವ
ಸ್ಯೇತ್ ॥ ೨೩ ॥

ನರಗಳು ಬಾಣದ ಅಲಗು ಮೊದಲಾದ ಮೊನೆಯಾದ ಆಯುಧಗಳಿಂದ ಚುಚ್ಚಲ್ಪಟ್ಟರೂ ಕತ್ತಿ ಮೊದಲಾದ ಹರಿತವಾದ ಆಯುಧಗಳಿಂದ ಕತ್ತರಿಸಲ್ಪಟ್ಟರೂ ಕೌಬ್ಜ್ಯಂ ಅಂದರೆ ಆ ಅವಯುವವು ಗುಜ್ಜವಾಗಿ ಹೋಗುವುದು, ಶರೀರದ ಅವಯುವಗಳೆಲ್ಲಾ ಕೆಲಸಕ್ಕೆ ಬಾರದಂತಾಗುವುದು, ಕೆಲಸ ಮಾಡಲು ಶಕ್ತಿಯಿಲ್ಲದೆ ಹೋಗುವುದು, ಭಯಂಕರವಾದ ವ್ಯಥೆಯಾಗುವುದು, ಬಹಳ ಕಾಲದ ಮೇಲೆ ವ್ರಣವಾಗುವುದು, ಈ ಲಕ್ಷಣಗಳನ್ನು ನೋಡಿ ಆ ಮನುಷ್ಯನ ಸ್ನಾಯುಗಳಿಗೆ ವೇಧೆ ಉಂಟಾಗಿದೆ ಎಂದು ಊಹಿಸಬೇಕು, ಶರೀರದಲ್ಲಿ ಶಕ್ತಿಯು ದಿನೇ ದಿನೇ ಕ್ಷಯಿಸುತ್ತಿರುವುದು, ವ್ಯಥೆ ಹೆಚ್ಚಾಗಿರುವುದು, ಶಕ್ತಿಯು ಕ್ಷಯಿಸುತ್ತಿರುವುದು, ಶರೀರದ ಎಲ್ಲಾ ಭಾಗದಲ್ಲಿಯೂ ಬಾವು ಇರುವುದು, ಕೆಲಸಮಾಡುವುದಕ್ಕಾಗದಂತೆ ಎಲ್ಲಾ ಕೆಲಸಗಳೂ ನಿಂತುಹೋಗುವುದು, ಈ ಲಕ್ಷಣಗಳು ಶರೀರದಲ್ಲಿರುವ ಸಂಧಿಗಳಿಗೆ ಗಾಯುವಾದರೆ ತೋರತಕ್ಕವುಗಳು, ಅಸ್ಥಿಗಳಿಗೆ ಪೆಟ್ಟಾದರೆ ಹಗಲು ರಾತ್ರಿ ಎರಡು ಹೊತ್ತಿನಲ್ಲಿಯೂ ಎಲ್ಲಾ ಅವಸ್ಥೆಗಳಲ್ಲಿಯೂ ಭಯಂಕರವಾದ ವೇದನೆಯಾಗುತ್ತಿರುವುದು, ಸಮಾಧಾನವಾಗಿರುವುದೇ ಇಲ್ಲ, ಈ ಲಕ್ಷಣಗಳಿಂದ ಅಸ್ಥಿಗೆ ಪೆಟ್ಟಾಗಿದೆಯೆಂದು ತಿಳಿಯತಕ್ಕದ್ದು.

ಯಥಾಸ್ವಮೇತಾನಿವಿಭಾವಯೇಚ್ಚಲಿಂಗಾನಿಮರ್ಮಸ್ವಭಿತಾಡಿ
ತೇಷು ॥
ಪಾಂಡುರ್ವಿವರ್ಣಸ್ಪ್ರಶತಂನವೇತ್ತಿಯೋಮಾಂಸಮರ್ಮಣ್ಯಭಿ
ಪೀಡಿತಸ್ಯಾತ್ ॥ ೨೪ ॥
ವಿಸರ್ಪಃಪಕ್ಷಘಾತಶ್ಚಶಿರಾಸ್ತಂಭೋಪತಾನಕಃ ॥
ಮೋಹೋನ್ಮಾದವ್ರಣರುಜೋಜ್ವರಸ್ತೃಷ್ಣಾಹನುಗ್ರಹಃ ॥ ೨೫ ॥
ಕಾಸಶ್ಛರ್ದಿರರತೀಸಾರೋಹಿಕ್ಕಾಶ್ವಾಸಸ್ಸವೇಪಥುಃ ॥
ಷೋಡಶೋಪದ್ರವಾಃಪ್ರೋಕ್ತಾಃವ್ರಣಾನಾಂವ್ರಣಚಿಂತಕೈಃ ೨೬

ಇದೇ ರೀತಿಯಾಗಿ ಇನ್ನೂ ಯಾವುದಾದರೂ ಮರ್ಮಸ್ಥಾನಗಳಿಗೆ ಪೆಟ್ಟು ಬಿದ್ದಿದ್ದರೆ ಹಿಂದೆ ಹೇಳಿದ ಲಕ್ಷಣಗಳೇ ಇರುತ್ತವೆಯಾಗಿ ಅವುಗಳನ್ನು ಊಹಿಸಿ ಕೊಳ್ಳಬೇಕು, ಮಾಂಸಮರ್ಮಗಳಿಗೆ ಪೆಟ್ಟು ಬಿದ್ದಲ್ಲಿ ಆ ಭಾಗದಲ್ಲಿ ಸ್ಪರ್ಶಜ್ಞಾನ ವಿರುವುದಿಲ್ಲ, ಆತನು ಬೆಳ್ಳಗಾಗಿ ಹೋಗುತ್ತಾನೆ, ಶರೀರದ ವ್ರಣವು ಕೆಟ್ಟುಹೋಗು ತ್ತದೆ, ವ್ರಣರೋಗದಲ್ಲಿ ಹುಟ್ಟತಕ್ಕ ಉಪರೋಗಗಳನ್ನು ಹೇಳುತ್ತಾನೆ—ವಿಸರ್ಪ ವೆಂದು ಪ್ರಸಿದ್ಧವಾಗಿರುವ ಬಕ್ಕೆಗಳೇಳುವುದು, ಪಕ್ಷಘಾತವೆಂಬ ವಾಯುರೋಗ ಬರುವುದು, ನರಗಳು ಸ್ತಬ್ಧವಾಗಿ ಹಿಡಿದುಕೊಳ್ಳುವುದು, ಅಪತಾನಕವೆಂಬ ವಾತ ರೋಗ ಹುಟ್ಟುವುದು, ಮೂರ್ಛೆ ಬರುವುದು. ಹುಚ್ಚು ಹಿಡಿಯುವುದು, ವ್ರಣದ ನೋವಿನಿಂದ ಜ್ವರ, ಬಾಯಾರಿಕೆ, ದವಡೆಗಳು ಹಿಡಿದುಕೊಳ್ಳುವುದು, ಕೆಮ್ಮು, ವಾಂತಿ, ಅತಿಸಾರ, ಬಿಕ್ಕಳಿಕೆ, ನಡುಕ, ಇವು ಹದಿನಾರು ವ್ರಣರೋಗದ ಉಪ ರೋಗಗಳೆಂದು ವ್ರಣಚಿಕಿತ್ಸೆಯಲ್ಲಿ ಅನುಭವಶಾಲಿಗಳಾದ ಪಂಡಿತರುಗಳು ಹೇಳುತ್ತಾರೆ.

ಇಲ್ಲಿಗೆ ಸದ್ಯೋವ್ರಣನಿದಾನ ಸಂಪೂರ್ಣ.

---

## ಭಗ್ನ ನಿದಾನ.

ಭಗ್ನಂಸಮಾಸಾದ್ದ್ವಿವಿಧಂಹುತಾಶಕಾಂಡೇಚಸಂಧೌಚಹಿತತ್ರ
ಸಂಧೌ ॥
ಉತ್ಪಿಷ್ಟವಿಶ್ಲಿಷ್ಟವಿವರ್ತಿತಂಚತಿರ್ಯಗ್ಗತಂಕ್ಷಿಪ್ತಮಧಶ್ಚ
ಷಟ್ಚ ॥ ೧ ॥

ಭಗ್ನವೆಂದರೆ ಕಾರಣಾಂತರಗಳಿಂದ ಕೈಕಾಲುಗಳಾಗಲೀ ಕೀಲುಗಳಾಗಲೀ ಮುರಿದು ಹೋಗುವುದು ಅಥವಾ ಜಜ್ಜಿಹೋಗುವುದು ಇದಕ್ಕೆ ಹೆಸರು. ಇದನ್ನು ಸಾಮಾನ್ಯವಾಗಿ ಎರಡು ವಿಧವಾಗಿ ವಿಭಾಗಿಸಬಹುದು–ಕಾಂಡಭಗ್ನ, ಸಂಧಿಭಗ್ನ ಎಂಬದಾಗಿ, ಇವುಗಳೊಳಗೆ ಸಂಧಿಭಗ್ನವೆನ್ನುವುದು ಉತ್ಪಿಷ್ಟ, ವಿಶ್ಲಿಷ್ಟ, ವಿವರ್ತಿತ, ತಿರ್ಯಗ್ಗತ, ಕ್ಷಿಪ್ತ, ಅಧಃಕ್ಷಿಪ್ತ ಎಂಬದಾಗಿ ಆರು ವಿಧವಾಗಿರುತ್ತದೆ.

ಪ್ರಸಾರಣಾಕುಂಚನವರ್ತನೋಗ್ರಾರುಕ್ಸ್ಪರ್ಶವಿದ್ವೇಷಣ
ಮೇತದುಕ್ತಂ ॥
ಸಾಮಾನ್ಯತಸ್ಸಂಧಿಗತಸ್ಯಲಿಂಗಮುತ್ಪಿಷ್ಟಸಂಧೇಶ್ವಯಥುಸ್ಸ
ಮಂತಾತ್ ॥ ೨ ॥
ವಿಶೇಷತೋರಾತ್ರಿಭವಾರುಜಾಚವಿಶ್ಲಿಷ್ಟಜೇತೌಚರುಜಾಚನಿತ್ಯಂ।
ವಿವರ್ತಿತೇಪಾರ್ಶ್ವರುಜಶ್ಚತೀವ್ರಾಸ್ತಿರ್ಯಗ್ಗತೇತೀವ್ರರುಜೋ
ಭವಂತಿ ॥ ೩ ॥

ಸಾಮಾನ್ಯವಾಗಿ ಈ ಸಂಧಿಭಗ್ನವೆನ್ನುವುದರ ಲಕ್ಷಣಗಳೇನೆಂದರೆ—ಯಾವ ಭಾಗದಲ್ಲಿ ಪೆಟ್ಟುಬಿದ್ದು ನೋವಾಗಿರುವುದೋ ಆ ಭಾಗವನ್ನು ನೀಡುವುದು, ಬಗ್ಗಿಸುವುದು ಇದ್ಯಾವುದೂ ಮಾಡದೆ ಸುಮ್ಮನಿರುವುದು, ಈ ರೀತಿ ಹೇಗಿದ್ದರೂ ಭಯಂಕರವಾದ ನೋವಾಗುತ್ತಿರುತ್ತದೆ, ಯಾವಾಗಲೂ ಆ ಭಾಗವನ್ನು ಮುಟ್ಟುವುದಕ್ಕೇನೇ ಒಪ್ಪುವುದಿಲ್ಲ, ತಾನೂ ಮುಟ್ಟಿ ನೋಡಿಕೊಳ್ಳುವುದಿಲ್ಲ, ಇವು ಸಾಮಾನ್ಯ ಲಕ್ಷಣಗಳು. ಉತ್ಕ್ಷಿಪ್ತವೆಂಬ ಸಂಧಿಭಂಗದಲ್ಲಿ ಪೆಟ್ಟು ಬಿದ್ದಿರುವ ಸಂಧಿಯು ಸುತ್ತಲೂ ಬಾತು ಇರುತ್ತದೆ, ರಾತ್ರಿ ಹೊತ್ತಿನಲ್ಲಿ ವಿಶೇಷವಾಗಿ ನೋವಿರುತ್ತದೆ, ವಿಶ್ಲಿಷ್ಟವೆಂಬ ಸಂಧಿಭಂಗದಲ್ಲಿ ಹಿಂದೆ ಹೇಳಿದ ಲಕ್ಷಣಗಳೆಲ್ಲಾ ಇರುವುದರ ಜೊತೆಗೆ ಯಾವಾಗ್ಯೂ ನೋವಿದ್ದೇ ಇರುತ್ತದೆ. ಹಿಂದೆ ಹೇಳಿದವುಗಳ ನಡುವೆ ಮೊದಲನೆಯ ಉತ್ಕ್ಷಿಪ್ತವೆನ್ನುವುದು ಎರಡು ಅಸ್ಥಿಗಳು ಕೂಡತಕ್ಕ ಕೀಲುಗಳಲ್ಲಿ ಉಂಟಾಗುತ್ತದೆ, ಕೂಡಿರುವ ಎರಡು ಎಲುಬುಗಳೂ ಯಾವುದಾದರೂ ಕಾರಣದಿಂದ ತುದಿಭಾಗದಲ್ಲಿ ತಿಕ್ಕಾಡುವುದರಿಂದ ಉಭಯಪಾರ್ಶ್ವಗಳಲ್ಲಿಯೂ ಬಾತು ಬರುತ್ತದೆ, ರಾತ್ರಿಹೊತ್ತು ಶೀತಹೆಚ್ಚಾಗಿ ಆ ಭಾಗದಲ್ಲಿ ಮಡತಬರುತ್ತದೆ, ವಿಶ್ಲಿಷ್ಟವೆಂದರೆ ಯಾವುದಾದರೂ ಕಾರಣದಿಂದ ಕೀಲು ತಪ್ಪುವುದು, ಈ ಕೀಲಿನ ಭಾಗದಲ್ಲಿ ಅದುಮಿ ನೋಡಿದರೆ ಕೀಲು ತಪ್ಪಿರುವ ಭಾಗದಲ್ಲಿ ಕೈಗೆ ಕೊಂಚ ಗುಂಡಿ ಬಿದ್ದಿರುವಂತೆ ಸಿಕ್ಕುತ್ತದೆ. ವಿವರ್ತಿತವೆನ್ನುವುದರಲ್ಲಿ ಪಾರ್ಶ್ವದಲ್ಲಿರುವ ಸಂಧ್ಯಸ್ಥಿಗಳು ಕೀಲು ತಪ್ಪದೆ ಒಂದು ಭಾಗಕ್ಕೆ ಹೋಗಿಬಿಟ್ಟಿರುತ್ತವೆ. ಇದರಿಂದ ಕೀಲಿನ ಎರಡು ಪಾರ್ಶ್ವಗಳಲ್ಲಿ ಭಯಂಕರವಾದ ನೋವಿರುತ್ತದೆ. ತಿರ್ಯಗ್ಗತವೆನ್ನುವುದರಲ್ಲಿ ಕೀಲಿನಲ್ಲಿ ಕೂಡಿರುವ ಎರಡು ಎಲುಬುಗಳ ಮಧ್ಯೆ ಒಂದು ಎಲುಬು ಮಾತ್ರ ಕೀಲನ್ನು ಬಿಟ್ಟು ಅಡ್ಡಲಾಗಿರುತ್ತದೆ. ಕ್ಷಿಪ್ತವೆನ್ನುವುದರಲ್ಲಿ ಕೀಲು ತಪ್ಪಿ ಒಂದು ಎಲುಬಿನ ಮೇಲೆ ಮತ್ತೊಂದು ಕೀಲು ಹೋಗಿರುತ್ತದೆ. ಅಧಃಕ್ಷಿಪ್ತವೆನ್ನುವುದರಲ್ಲಿ ಕೀಲು ತಪ್ಪಿ ಎಲುಬುಗಳು ಕೆಳಭಾಗಕ್ಕೆ ಹೋಗಿರುತ್ತವೆ, ನೋವು ಎಲ್ಲದರಲ್ಲಿಯೂ ಒಂದೇ ವಿಧವಾಗಿರುತ್ತದೆ. ಕ್ಷಿಪ್ತವೆನ್ನುವುದರಲ್ಲಿ ಎಲುಬುಗಳು ಸಮನಾಗಿರುವುದಿಲ್ಲ, ಮಡತವಿರುತ್ತದೆ. ಅಧಃಕ್ಷಿಪ್ತವೆನ್ನುವುದರಲ್ಲಿ ಕೆಳಭಾಗದಲ್ಲಿ ಬಹಳ ನೋವಿರುತ್ತದೆ, ಸಂಧಿಯು ಪುನಶ್ಚ ಕೂಡಿಸಲಾರದಷ್ಟು ಕೆಟ್ಟುಹೋಗಿರುತ್ತದೆ.

**ಕ್ಷಿಪ್ತೇತಿಶೂಲಂವಿಷಮತ್ವಮಸ್ಥ್ನೋಃಕ್ಷಿಪ್ತೇತ್ವಧೋರುಗ್ವಿ ಘಟಶ್ಚಸಂಧೇಃ ॥**

**ಕಾಂಡೇತ್ವತಃಕರ್ಕಟಕಾಶ್ವಕರ್ಣವಿಚೂರ್ಣಿತಂಪಿಚ್ಚಿತಮಸ್ಥಿ ಛಲ್ಲಿಕಾ ॥ ೪ ॥**

**ಕಾಂಡೇಷುಭಗ್ನಂಹ್ಯತಿಪಾತಿತಂಚಮಜ್ಜಾಗತಂಚಸ್ಫುಟಿತಂಚ ವಕ್ರಂ ॥**

**ಛಿನ್ನಂದ್ವಿಧಾದ್ವಾದಶಧಾಪಿಕಾಂಡೇಸ್ರಸ್ತಾಂಗತಾಶೋಥರುಜಾತಿ ವೃದ್ಧಿಃ ॥ ೫ ॥**

**ಸಂಪೀಡ್ಯಮಾನೇಭವತೀಹಶಬ್ದಃಸ್ಪರ್ಶಾಸಹಂಸ್ಪಂದನತೋದ ಶೂಲಾಃ ॥**

**ಸರ್ವಾಸ್ವವಸ್ಥಾಸುನಶರ್ಮಲಾಭೋಭಗ್ನಸ್ಯಕಾಂಡೇಖಲುಚಿಹ್ನ ಮೇತತ್ ॥ ೬ ॥**

**ಭಗ್ನಂತುಕಾಂಡೇಬಹುಧಾಪ್ರಯಾತಿಸಮಾಸತೋನಾಮಭಿ ರೇವತಂಲ್ಯಂ ॥**

ಸಂಧಿಭಂಗದ ವಿಷಯವನ್ನು ಹೇಳಿ ಮುಂದೆ ಕಾಂಡಭಂಗ ವಿಷಯವನ್ನು ಹೇಳುತ್ತಾನೆ—ಕಾಂಡವೆಂದರೆ ಕೀಲುಗಳನ್ನು ಬಿಟ್ಟು ಅಸ್ಥಿಗಳಿರತಕ್ಕ ಭಾಗಕ್ಕೆಲ್ಲಾ ಹೆಸರು. ಈ ಭಾಗದಲ್ಲಿರತಕ್ಕ ಎಲುಬುಗಳು ಯಾವುದಾದರೂ ಕಾರಣಗಳಿಂದ ಮುರಿದುಹೋಗುವುದು, ಜಜ್ಜಿಹೋಗುವುದು, ಸಿಗಿದೇಳುವುದು ಇವುಗಳಿಗೆಲ್ಲಾ ಕಾಂಡಭಗ್ನವೆಂದು ಹೆಸರು. ಈ ಕಾಂಡಭಗ್ನವು ಕರ್ಕಟಕ, ಅಶ್ವಕರ್ಣ, ವಿಚೂರ್ಣಿತ, ಪಿಚ್ಚಿತ, ಅಸ್ಥಿಛಲ್ಲಿಕಾ ಎಂಬದಾಗಿ ಅನೇಕ ವಿಧವಾಗಿರುತ್ತದೆ. ಕರ್ಕಟಕವೆಂದರೆ ಎಲುಬಿನ ಎರಡು ಪಕ್ಕಗಳಲ್ಲಿ ಕಬ್ಬನ್ನು ಕಣೆಗಳಲ್ಲಿ ಹಿಸುಕುವಂತೆ ಹಿಸುಕಲ್ಪಟ್ಟದ್ದಲ್ಲಿ ಅದಕ್ಕೆ ಹೆಸರು. ಅಶ್ವಕರ್ಣವೆಂದರೆ ಹಿಸುಕಲ್ಪಟ್ಟ ಎಲುಬು ಜಜ್ಜಿಹೋಗಿ ಕುದುರೆಯ ಕಿವಿಯಂತ ಆಗಲವಾಗಿ ಹಿಡಿಕೊಂಡಿರುವುದಕ್ಕೆ ಹೆಸರು. ವಿಚೂರ್ಣಿತವೆಂದರೆ ಜಜ್ಜಿಹೋದ ಎಲುಬು ಪುಡಿಪುಡಿಯಾಗಿ ಹೋಗಿ ಬಿಟ್ಟಿರುವುದಕ್ಕೆ ಹೆಸರು. ಪಿಚ್ಚಿತವೆಂದರೆ ಯಾವುದಾದರೂ ಕಾರಣದಿಂದ ಎಲುಬು ಹಿಸುಕಲ್ಪಟ್ಟು ಬಾಕು ಹೆಚ್ಚಾಗಿ ಬಂದಿರುವುದಕ್ಕೆ ಹೆಸರು. ಅಸ್ಥಿಛಲ್ಲಿಕಾ ಎಂದರೆ ಹಿಸುಕಿ ಎಲುಬಿನ ಮೇಲಿನ ಗಾರೆಯಂಥ ಪಸ್ತು ಒಡೆದು ಹೋಗಿರುವುದರ ಹೆಸರು. ಸಾಮಾನ್ಯವಾಗಿ ಕಾಂಡಭಂಗವಾಗಿದ್ದಲ್ಲಿ ಆ ಭಾಗವನ್ನು ಸೀಡಿದರೆ ಸ್ವಾಧೀನ ತಪ್ಪಿ ತರತರ ನಡುಗುತ್ತಿರುತ್ತದೆ. ಅತಿಪಾತವೆಂದರೆ ಎಲುಬು ಮುರಿದೇ ಹೋಗಿರುತ್ತದೆ. ಮಜ್ಜಾಗತವೆಂದರೆ ಎಲುಬು ಮುರಿದು ಹೊರಕ್ಕೆ ಚಾಚುವುದಕ್ಕೆ ಬದಲಾಗಿ ಅಸ್ಥಿಯು ಒಳಭಾಗದಲ್ಲಿರುವ ಮಜ್ಜಾ ಎಂಬ ಧಾತುವಿನ ಕಡೆಗೇ ಚಾಚಿಕೊಂಡಿರುವುದು. ಸ್ಫುಟಿತವೆಂದರೆ ಸಾಮಾನ್ಯವಾಗಿ ಬಿದಿರು ಬಿರುಕು ಬಿಟ್ಟಂತೆ ಎಲುಬು ಒಡೆದು ಹೋಗಿರುವುದು. ವಕ್ರವೆಂದರೆ ಎಲುಬು ಸೊಟ್ಟವಾಗಿರುವುದು, ಛಿನ್ನವೆನ್ನುವುದು ಕತ್ತರಿಸಲ್ಪಟ್ಟಿರುವುದಕ್ಕೆ ಹೆಸರು, ಇದು ಎರಡು ವಿಧವೆಂದೂ ಹನ್ನೆರಡು ವಿಧವೆಂದೂ ನಾನಾಭಿಪ್ರಾಯಗಳಿವೆ, ಇವುಗಳಲ್ಲೆಲ್ಲಾ ಅವಯವ ಸ್ವಾಧೀನ ತಪ್ಪುವುದು, ಬಾಕು ಹೆಚ್ಚುತ್ತ ಹೋಗುವುದು, ನೋವೂ ಹೆಚ್ಚುತ್ತಲೇ ಹೋಗುವುದು, ಆ ಭಾಗವನ್ನು

ಒಸಿಕಿ ನೋಡಿದರೆ ನರನರ ಎಂಬ ಶಬ್ದವಾಗುವುದು, ಮುಟ್ಟಿದರೆ ತಡೆಯು ವುದಕ್ಕೆ ಆಗುವುದಿಲ್ಲ, ನಡುಕ, ವ್ಯಥೆ, ಪಡತ ಇವುಗಳು ಇದ್ದೇ ಇರುವುದು, ರೋಗಿಗೆ ಯಾವ ರೀತಿಯಿಂದಲೂ ಅಂದರೆ ಆ ಭಾಗವನ್ನು ಹೇಗಿಟ್ಟರೂ ಸುಖವೇ ಆಗುವುದಿಲ್ಲ, ಇವುಗಳು ಕಾಂಡಭಂಗದ ಲಕ್ಷಣಗಳು, ಈ ಕಾಂಡಭಂಗದ ಹೆಸರು ಗಳನ್ನೂ ಲಕ್ಷಣಗಳನ್ನೂ ಹೇಳಿ ಪೂರೈಸುವುದಾಗುವುದಿಲ್ಲ, ನಾನಾ ವಿಧವಾಗಿರು ತ್ತವೆ, ಸಂಕ್ಷೇಪವಾಗಿ ಇಲ್ಲಿ ಹೇಳಿರುವುದನ್ನು ನಾಮಾನುಗುಣವಾಗಿ ತಿಳಿದು ಕೊಳ್ಳಬಹುದು.

ಅಲ್ಪಾಶಿನೋಽನಾತ್ಮವತೋಜಂತೋರ್ವಾತಾತ್ಮಕಸ್ಯಚ ॥
ಉಪದ್ರವೈರ್ವಾಜುಷ್ಟಸ್ಯಭಗ್ನಂಕೃಚ್ಛ್ರೇಣಸಿಧ್ಯತಿ ॥ ೮ ॥

ಈ ಭಂಗಗಳು ಸಾಧ್ಯವಾಗಬೇಕಾದರೆ ರೋಗಿಯು ಮಿತಾಹಾರಿಯೂ ನಿಯತಾಹಾರಿಯೂ ಆಗಿರಬೇಕು, ಆಹಾರವು ಕಡಮೆಯಾಗುತ್ತ ಹೋಗುವುದು, ಜ್ಞಾನ ಕಡಮೆಯಾಗಿರುವುದು. ರೋಗಿಯು ವಾತಪ್ರಕೃತಿಯುವನಾಗಿರುವುದು, ರೋಗದಲ್ಲಿ ಉಪರೋಗಗಳು ಹುಟ್ಟಿರುವುದು, ಹೀಗಾಗಿದ್ದಲ್ಲಿ ಅದನ್ನು ಸರಿ ಮಾಡುವುದು ಕಷ್ಟ.

ಭಿನ್ನಂಕಪಾಲಂಕಟ್ಯಾಂತುಸಂಧಿಮುಕ್ತಂತಥಾಚ್ಯುತಂ ॥
ಜಘನಂಪ್ರತಿಪಿಷ್ಟಂಚವರ್ಜಯೇದ್ಧಿವಿಚಕ್ಷಣಃ ॥ ೯ ॥
ಅಸಂಶ್ಲಿಷ್ಟಕಪಾಲಂಚಲಲಾಟೇಚೂರ್ಣಿತಂಚಯತ್ ॥
ಭಗ್ನಂಸ್ತನಾಂತರೇಪೃಷ್ಠೇಶಂಖೇಮೂರ್ಧ್ನಿಚವರ್ಜಯೇತ್ ॥ ೧೦ ॥

ಈ ಭಗ್ನರೋಗದಲ್ಲಿ ಅಸಾಧ್ಯವಾದವುಗಳನ್ನು ಹೇಳುತ್ತಾನೆ—ಎಲುಬು ಗಳಲ್ಲಿ ಕಪಾಲ ಎಂಬ ಹೆಸರಿನ ಕೆಲವು ಎಲುಬುಗಳವು, ಅವುಗಳು ಕಾರಣಾಂತರ ದಿಂದ ಮುರಿದರೂ, ಸೊಂಟದಲ್ಲಿ ಯಾವುದಾದರೂ ಎಲುಬು ಮುರಿದರೂ, ಸೊಂಟದಲ್ಲಿ ಕೀಲು ತಪ್ಪಿದರೂ, ಸೊಂಟದಲ್ಲಿಯೇ ಹಿಂದೆ ಹೇಳಿರುವ ಅಧಃಕ್ಷಿಪ್ತ ವೆಂಬ ಲಕ್ಷಣದಿಂದ ಕೂಡಿರುವ ಭಂಗವುಂಟಾದರೂ ಸೊಂಟದ ಮುಂಭಾಗದಲ್ಲಿ ಕೊಂಚ ಕೆಳಗೆ ತೊಡೆಯ ಎಲುಬುಗಳು ಪುಡಿಯಾಗಿ ಹೋಗಿದ್ದರೂ ಅಸಾಧ್ಯ ವೆಂದು ತಿಳಿದು ಬಿಡತಕ್ಕದ್ದು, ಮತ್ತು ತಲೆಯಲ್ಲಿರತಕ್ಕ ಕಪಾಲವೆಂಬ ಅಸ್ಥಿಗಳು ಮುರಿದುಹೋಗಿದ್ದರೂ, ಪುಡಿಯಾಗಿ ಹೋಗಿದ್ದರೂ, ಎದೆಯಲ್ಲಿ ಎಲುಬುಗಳೇ ನಾದರೂ ಮುರಿದಿದ್ದರೂ, ಪೃಷ್ಠವೆಂದರೆ ಅಂಡಿನ ಭಾಗದಲ್ಲಿ ಮುರಿದಿದ್ದರೂ, ಶಂಖವೆಂಬ ಮರ್ಮಸ್ಥಾನದಲ್ಲಿ ಮತ್ತು ತಲೆಯಲ್ಲಿ ಸಹಾ ಮುರಿದದ್ದಿರೂ ಅಸಾಧ್ಯವೆಂದು ನಿಶ್ಚಯಿಸಿಕೊಳ್ಳತಕ್ಕದ್ದು.

ಸಮ್ಯಕ್ ಸಂಧಿತಮಪ್ಯಸ್ಥಿದುರ್ನಿಕ್ಷೇಪನಿಬಂಧನಾತ್ ॥
ಸಂಕ್ಷೋಭಾದ್ವಾಪಿಯದ್ಗಚ್ಛೇದ್ವಿಕ್ರಿಯಾಂತಚ್ಚವರ್ಜಯೇತ್ ॥ ೧೧ ॥

ಮುರಿದು ಹೋದ ಎಲುಬುಗಳನ್ನು ಸರಿಯಾಗಿಯೇ ಕೂಡಿಸಿದ್ದರೂ ಸರಿಯಾಗಿ ಇಟ್ಟುಕೊಳ್ಳದಿರೋಣ ಮತ್ತು ಕಟ್ಟಿರುವುದನ್ನು ಅಲಕ್ಷ್ಯ ಮಾಡೋಣ, ಆ ಭಾಗಕ್ಕೇನೇ ಮತ್ತೆ ಏನಾದರೂ ಪೆಟ್ಟು ಮೊದಲಾದದ್ದು ತಗಲೋಣ, ಈ ಕಾರಣಗಳಿಂದ ಏನಾದರೂ ವ್ಯತ್ಯಾಸವಾದರೆ ಮತ್ತೆ ಸರಿಮಾಡುವುದಕ್ಕೆ ಬರುವುದಿಲ್ಲ.

ತರುಣಾಸ್ಥೀನಿನಮ್ಯಂತೇಭಿದ್ಯಂತೇನಲಕಾನಿಚ ॥
ಕಪಾಲಾನಿವಿಭಜ್ಯಂತೇಸ್ಫುಟಂತಿರುಚಕಾನಿಚ ॥ ೧೨ ॥

ದೇಹದಲ್ಲಿರತಕ್ಕ ಎಲುಬುಗಳ ಮಧ್ಯೆ ತರುಣಾಸ್ಥಿ ಎಂಬ ಹೆಸರಿನ ಎಲುಬುಗಳು ಬಗ್ಗುತ್ತವೆ, ನಲಕ ಎಂಬ ಎಲುಬುಗಳು ಒಡೆದುಹೋಗುತ್ತವೆ, ಕಪಾಲಗಳೆಂಬ ಎಲುಬುಗಳು ಮುರಿದು ಎರಡಾಗುತ್ತವೆ, ರುಚಕ ಎಂಬ ಎಲುಬುಗಳು ಸ್ಫುಟಂತಿ ಎಂದರೆ ಸಿಡಿಯುತ್ತವೆ.

ಇಲ್ಲಿಗೆ ಭಗ್ನನಿದಾನ ಸಂಪೂರ್ಣ.

---

## ನಾಡೀವ್ರಣನಿದಾನ.

ಯಶ್ಶೋಥಮಾಮಮತಿಪಕ್ವಮುಪೇಕ್ಷತೇಜ್ಞೋಯೋವಾ
ವ್ರಣಂಪ್ರಚುರಪೂಯಮಸಾಧುವೃತ್ತಃ ॥
ಅಭ್ಯಂತರಂಪ್ರವಿಶತಿಪ್ರವಿದಾರ್ಯತಸ್ಯಸ್ಥಾನಾನಿಪೂರ್ವವಿಹಿತಾನಿ
ತತಸ್ಸಪೂಯಃ ॥ ೧ ॥
ತಸ್ಯಾತಿಮಾತ್ರಗಮನಾದ್ಗತಿರಿಷ್ಯತೇತುನಾಡೀವಯದ್ವಹತಿತೇ
ನಮತಾಚ ನಾಡೀ ॥
ದೋಷೈಸ್ತ್ರಿಭಿರ್ಭವತಿಸಾಪೃಥಗೇಕಶಶ್ಚಸಮ್ಮೂರ್ಛಿತೈರಪಿಚ
ಶಲ್ಯನಿಮಿತ್ತತೋನ್ಯಾ ॥ ೨ ॥

ನಾಡೀವ್ರಣ ಹುಟ್ಟಲು ಕಾರಣಗಳನ್ನು ಹೇಳುತ್ತಾನೆ—ಕಾರಣಾಂತರದಿಂದ ಶರೀರದ ಯಾವ ಭಾಗದಲ್ಲಿಯಾದರೂ ಬಾಕು ಬಂದರೆ ಅದು ಪಕ್ವವಾಗುವುದಕ್ಕೆ ತಕ್ಕ ಚಿಕಿತ್ಸೆಯನ್ನೂ ಪಕ್ವವಾದ ಮೇಲೆ ಒಡೆದು ಕೀವು ಹೊರಬೀಳುವಂತಹ ಚಿಕಿತ್ಸೆಯನ್ನೂ ಮಾಡಬೇಕು, ಈ ರೀತಿಮಾಡದೆ ಉಪೇಕ್ಷೆ ಮಾಡಿದರೂ, ಬಹಳ

ವಾಗಿ ಕೀವು ಬರುತ್ತಿರುವ ವ್ರಣಗಳಿಗೆ ಸರಿಯಾದ ಚಿಕಿತ್ಸೆಯನ್ನು ನಡೆಯಿಸ ದಿದ್ದರೂ ಆ ವ್ರಣಗಳಲ್ಲಿರುವ ಕೀವು ಅಲ್ಲಿ ನಿಂತು ತ್ವಕ್, ಮಾಂಸ, ಶಿರಾ, ಸ್ನಾಯು, ಸಂಧಿ, ಅಸ್ಥಿ, ಕೋಷ್ಠ, ಮರ್ಮ ಎಂಬ ದೇಹದ ಭಾಗಗಳನ್ನು ಒಡೆದುಕೊಂಡು ಒಳಕ್ಕೆ ಪ್ರವೇಶಿಸುತ್ತದೆ. ಹೀಗೆ ಪ್ರವೇಶಿಸಿದ ಕೀವು ದಾರದಂತೆ ತಾನು ಮಾಡಿಕೊಂಡಿರುವ ದ್ವಾರಗಳ ಮಾರ್ಗವಾಗಿ ಒಳಕ್ಕೆ ಹರಿಯುವುದಕ್ಕೆ ಪ್ರಾರಂಭಿಸುತ್ತದೆ. ಶರೀರದಲ್ಲಿ ದಾರದಂತಿರುವ ನರಗಳ ಹಾಗೆಯೇ ಈ ಕೀವು ಹರಿಯುವಾಗ್ಯ ಕಾಣುವುದರಿಂದ ಈ ರೋಗಕ್ಕೆ ನಾಡೀವ್ರಣನೆಂಬದಾಗಿ ಹೆಸರು ಕೊಟ್ಟಿದ್ದಾರೆ. ಈ ನಾಡೀವ್ರಣವನ್ನು ವಾತಪ್ರಕೋಪಜನ್ಯ, ಪಿತ್ತಪ್ರಕೋಪ ಜನ್ಯ, ಶ್ಲೇಷ್ಮ ಪ್ರಕೋಪಜನ್ಯ, ತ್ರಿದೋಷ ಸನ್ನಿಪಾತಜನ್ಯ, ಆಗಂತುಕಕಾರಣ ಜನ್ಯ ಎಂಬದಾಗಿ ಐದು ವಿಧವಾಗಿ ಭಾಗಿಸಿಕೊಳ್ಳಬಹುದು.

ತತ್ರಾನಿಲಾತ್ ಪರುಷಸೂಕ್ಷ್ಮಮುಖೀಸಶೂಲಾಫೇನಾನುವಿದ್ಧ
ಮಧಿಕಂಸ್ರವತಿಕ್ಷಪಾಸು ॥
ಪಿತ್ತಾತ್ತೃಷಾಜ್ವರಕರೀಪರಿದಾಹಯುಕ್ತಾಪೀತಸ್ರವತ್ಯಧಿಕ
ಮುಷ್ಣಮಹಸ್ಸುಚಾಪಿ ॥ ೩ ॥
ಜ್ಞೇಯಾಕಫಾದ್ಬಹುಘನಾರ್ಜುನಪಿಚ್ಛಿಲಾಸ್ರಾಸ್ತಬ್ಧಾಸಕಂಡುರ
ರುಜಾರಜನೀಪ್ರವೃದ್ಧಾ ॥
ದಾಹಜ್ವರಶ್ವಸನಮೂರ್ಛನವಕ್ತ್ರಶೋಷಾಯಸ್ಯಾಂಭವಂತ್ಯಭಿ
ಹಿತಾನಿಚಲಕ್ಷಣಾನಿ ॥ ೪ ॥
ತಾಮಾದಿಶೇತ್ಪವನಪಿತ್ತಕಫಪ್ರಕೋಪಾದ್ಘೋರಾಮಸುಕ್ಷಯ
ಕರೀಮಿವಕಾಳರಾತ್ರಿಂ ॥

ವಾತಪ್ರಕೋಪಕಾರಣವಾದ ನಾಡೀವ್ರಣದಲ್ಲಿ ವ್ರಣವು ಒರಟಾಗಿರುತ್ತದೆ, ವ್ರಣದ ಬಾಯಿ ಚಿಕ್ಕದಾಗಿರುತ್ತದೆ, ವ್ರಣದಲ್ಲಿ ಪಡತವಿರುತ್ತದೆ, ರಾತ್ರಿವೇಳೆ ಗಳಲ್ಲಿ ನೊರೆನೊರೆಯಾಗಿ ಹೆಚ್ಚಾದ ಕೀವು ಹೊರಡುತ್ತದೆ. ಪಿತ್ತಪ್ರಕೋಪ ಜನ್ಯವಾದ ವ್ರಣದಲ್ಲಿ ಬಾಯಾರಿಕೆ, ಜ್ವರ, ವ್ರಣದಲ್ಲಿ ಅಧಿಕವಾದ ಉರಿ, ಹಗಲು ಹೊತ್ತಿನಲ್ಲಿ ಹಳದಿಯ ಬಣ್ಣದ ಮತ್ತು ಬಿಸಿಯಾದ ಕೀವು ಹೆಚ್ಚಿಗೆ ಸುರಿಯುತ್ತದೆ. ಕಫಪ್ರಕೋಪಕಾರಣವಾದ ನಾಡೀವ್ರಣದಲ್ಲಿ ನವೆ ಹೆಚ್ಚಾಗಿರುತ್ತದೆ, ವ್ರಣವು ಸ್ತಬ್ಧವಾಗಿರುತ್ತದೆ, ಅಂದರೆ ಯಾವ ವಿಧವಾದ ಹಿಂಸೆಯೂ ಹೆಚ್ಚಿಗೆ ಕಾಣುತ್ತಿರು ವುದಿಲ್ಲ, ಕೀವು ಮಾತ್ರ ಬೆಳ್ಳಗೆ ದಪ್ಪವಾಗಿ ರಕ್ತದೊಡನೆ ಕೂಡಿರುತ್ತದೆ, ಕೀವು ಸೋರುವುದು ರಾತ್ರಿಹೊತ್ತಿನಲ್ಲಿ ಹೆಚ್ಚು. ತ್ರಿದೋಷ ಪ್ರಕೋಪಜನ್ಯವಾದ ನಾಡೀವ್ರಣದಲ್ಲಿ ಮೂರು ದೋಷಗಳ ಲಕ್ಷಣಗಳೂ ಕಾಣುತ್ತಿರುವುದರ ಜೊತೆ

ಯಲ್ಲಿ ವೈಯ್ಯುರಿ, ಜ್ವರ, ಶ್ವಾಸ, ಮೂರ್ಛೆ, ಬಾಯಿ ಒಣಗುವುದು, ಈ ಲಕ್ಷಣಗಳೂ ಇರುತ್ತವೆ. ಹೀಗಿರುವ ತ್ರಿದೋಷಸನ್ನಿಪಾತವು ಕಾಳರಾತ್ರಿಯಂತೆ ಪ್ರಾಣಹರಣಪ್ರದವಾಗಿಯೂ ಭಯಂಕರವಾಗಿಯೂ ಇರುವುದು.

**ನಷ್ಟಂಕಥಂಚಿದನುಮಾರ್ಗಮುದೀರಿತೇಷುಸ್ಥಾನೇಷುಶಲ್ಯಮ**
**ಚಿರೇಣಗತಿಂಕರೋತಿ ॥ ೫ ॥**

**ಸಾಫೇನಿಲಂಮಥಿತಮುಷ್ಣಮಸೃಗ್ವಿಮಿಶ್ರಂಸ್ರಾವಂಕರೋತಿಸಹ**
**ಸಾಸರುಜಾಚನಿತ್ಯಂ ॥**

ಆಗಂತುಕಕಾರಣಜನ್ಯವಾದ ನಾಡೀವ್ರಣವು ಹುಟ್ಟುವುದು ಹೇಗಂದರೆ— ಯಾವುದಾದರೂ ಮುಳ್ಳು, ಮೊಳೆಗಳು, ಗೂಟ ಮೊದಲಾದವುಗಳು ಶರೀರದ ಯಾವ ಭಾಗಕ್ಕಾದರೂ ಹೊಕ್ಕು ತೆಗೆಯುವುದಕ್ಕೆ ಸಿಕ್ಕದೆ ಹಿಂದೆ ಹೇಳಿದ ತ್ವಕ್ ಮಾಂಸ ಮೊದಲಾದ ಸ್ಥಳಗಳಲ್ಲಿ ಮುಂದಕ್ಕೆ ಹೋಗಲಾರಂಭಿಸುತ್ತದೆ, ಆ ವ್ರಣದಿಂದ ರಕ್ತಮಿಶ್ರವಾದ ಕೀವು ಬಲವಂತದಿಂದ ಯಾವಾಗ್ಯೂ ಹೊರಬೀಳುತ್ತಿರುತ್ತದೆ, ಕೀವು ಬಿಸಿಯಾಗಿಯೂ ನೊರೆಯಾಗಿಯೂ ಇರುತ್ತದೆ.

**ನಾಡೀತ್ರಿದೋಷಪ್ರಭವಾನಸಿಧ್ಯೇತ್ ಶೇಷಾಶ್ಚತಿಸ್ರಃಖಲುಯತ್ನ**
**ಸಾಧ್ಯಾಃ ॥ ೬ ॥**

ತ್ರಿದೋಷಪ್ರಕೋಪಜನ್ಯವಾದ ನಾಡೀವ್ರಣವು ಚಿಕಿತ್ಸೆಗೆ ಸಾಧ್ಯವಾಗುವುದಿಲ್ಲ, ಉಳಿದ ನಾಲ್ಕೂ ಪ್ರಯತ್ನಪೂರ್ವಕವಾಗಿ ಚಿಕಿತ್ಸೆ ಮಾಡಿದರೆ ಸಾಧ್ಯವಾಗುತ್ತವೆ.

ಇಲ್ಲಿಗೆ ನಾಡೀವ್ರಣನಿದಾನ ಸಂಪೂರ್ಣ.

## ಭ ಗಂ ದ ರ ನಿ ದಾ ನ.

**ಗುದಸ್ಯದ್ವ್ಯಂಗುಲೇಕ್ಷೇತ್ರೇಪಾರ್ಶ್ವತಃಪಿಡಕಾರ್ತಿಕೃತ್ ॥**
**ಭಿನ್ನಾಭಗಂದರೋಜ್ಞೇಯಸ್ಸಚಪಂಚವಿಧೋಮತಃ ॥ ೧ ॥**

ಭಗಂದರವೆಂಬ ವ್ರಣವನ್ನು ಹೇಳುತ್ತಾನೆ—ಗುದವೆಂದರೆ ಮಲದ್ವಾರಕ್ಕೆ ಹೆಸರು, ಈ ಮಲದ್ವಾರದ ಮುಂಭಾಗದಲ್ಲಿ ಎರಡಂಗುಲ ಪ್ರದೇಶದಲ್ಲಿ ಪಾರ್ಶ್ವದಲ್ಲಿ ಬಕ್ಕೆಗಳು ಹುಟ್ಟಿ ನೋವು ಆಗಿ ಒಡೆದುಹೋಗಿ ವ್ರಣವಾಗುತ್ತದೆ, ಇದಕ್ಕೆ ಭಗಂದರವೆಂಬದಾಗಿ ಹೆಸರು.

ಈ ವ್ರಣವು ಸಾಮಾನ್ಯವಾಗಿ ಭಗವೆಂದರೆ ಸ್ತ್ರೀಯರ ಮರ್ಮಸ್ಥಾನದ ಆಕಾರವಾಗೋಣದರಿಂದ ಇದಕ್ಕೆ ಈ ಹೆಸರನ್ನು ಕೊಟ್ಟಿದ್ದಾರೆ.

**ಕಷಾಯರೂಕ್ಷೈಸ್ತ್ವತಿಕೋಪಿತೋನಿಲಸ್ತ್ವಪಾನದೇಶೇಪಿಡ**
**ಕಾಂಕರೋತಿಯಾಂ ॥**

**ಉಪೇಕ್ಷಣಾತ್ಕಾಕವುಪೈತಿದಾರುಣಂರುಜಾಶ್ಚಭಿನ್ನಾರುಣಫೇ**
**ನವಾಹಿನೀ ॥ ೨ ॥**
**ತತ್ರಾಗಮೋಮೂತ್ರಪುರೀಷರೇತಸಾಂವ್ರಣೈರನೈಕೈಶ್ಶತಪೋ**
**ನಕಂವದೇತ್ ॥**

ಈ ಭಗಂದರವೆಂಬ ವ್ರಣವು ಐದು ವಿಧ—(೧) ಶತಪೋನಕ, (೨) ಉಷ್ಟ್ರ ಗ್ರೀವ, (೩) ಪರಿಸ್ರಾವಿ, (೪) ಶಂಬೂಕಾವರ್ತ, (೫) ಉನ್ಮಾರ್ಗಿಭಗಂದರ ಎಂಬದಾಗಿ.

ಶತಪೋನಕವೆನ್ನುವುದನ್ನು ಹೇಳುತ್ತಾನೆ—ಕಷಾಯ ರಸ ಪ್ರಧಾನವಾದ ಆಹಾರಗಳು, ರೂಕ್ಷ ಅಂದರೆ ಜಿಡ್ಡಿಲ್ಲದ ಆಹಾರಗಳು ಇವುಗಳನ್ನು ಉಪಯೋಗಿ ಸೋಣದರಿಂದ ದೇಹಗತವಾದ ವಾಯುವು ಪ್ರಕುಪಿತವಾಗಿ ಅಪಾನದ್ವಾರ ಅಂದರೆ ಮಲದ್ವಾರದ ಹತ್ತಿರ ಕುರವನ್ನೆಬ್ಬಿಸುತ್ತದೆ, ಈ ಕುರಕ್ಕೆ ಸಕಾಲದಲ್ಲಿ ಸರಿಯಾದ ಚಿಕಿತ್ಸೆ ನಡದರಂತೂ ಸರಿಯೆ, ಹಾಗೆ ನಡೆಯಿಸದೆ ಉಪೇಕ್ಷೆ ಮಾಡೋಣದರಿಂದ ಆ ಕುರವೇ ಪಕ್ವವಾಗಿ ಭಯಂಕರವಾದ ವೇದನೆಯೊಡನೆ ಕೂಡಿ ಒಡೆದು ಕೆಂಪಗೆ ನೊರೆಯಿಂದ ಕೂಡಿದ ಒಂದು ಬಗೆಯ ಸ್ರವವನ್ನು ಹೊರಡಿಸುತ್ತದೆ, ಆ ಕುರದ ದ್ವಾರದಿಂದಲೇ ಮಲಮೂತ್ರಗಳು. ರೇತಸ್ಸು ಎಂದರೆ ವೀರ್ಯ ಇವುಗಳು ಸಹಾ ಹೊರಬೀಳುವುದಕ್ಕೆ ಆರಂಭವಾಗುತ್ತದೆ. ಕ್ರಮೇಣ ಈ ಕುರದಲ್ಲಿ ಹುತ್ತದ ಬಾಯಿ ನಂತೆ ಅನೇಕ ವ್ರಣಗಳುಂಟಾಗುತ್ತವೆ, ಇದಕ್ಕೆ ಶತಪೋನಕವೆಂದು ಹೆಸರು.

**ಪ್ರಕೋಪಣೈಃಪಿತ್ತಮತಿಪ್ರಕೋಪಿತಂಕರೋತಿರಕ್ತಾಂಪಿಟಕಾಂ**
**ಗುದಾಶ್ರಿತಾಂ ॥**
**ತದಾಶುಪಾಕಾಹಿಮಪೂತಿವಾಹಿನೀಭಗಂದರಂತೂಷ್ಟ್ರಶಿರೋ**
**ಧರಂವದೇತ್ ॥ ೪ ॥**

ಉಷ್ಟ್ರಗ್ರೀವವೆಂಬ ಭಗಂದರವನ್ನು ಹೇಳುತ್ತಾನೆ— ಪ್ರಕೋಪಕಾರಣ ಗಳಿಂದ ಪಿತ್ತವು ಪ್ರಕುಪಿತವಾಗಿ ಮಲದ್ವಾರದ ಹತ್ತಿರ ಮೊದಲು ರಕ್ತ ಕುರ ವನ್ನು ಹುಟ್ಟಿಸುತ್ತದೆ, ಆದೇ ಕುರವೇ ಜಾಗ್ರತೆಯಾಗಿ ಪಕ್ವವಾಗಿ ಬಿಸಿಯಾದ ರಕ್ತ ಮತ್ತು ಕೀವುಗಳನ್ನು ಸೋರಿಸುವುದಕ್ಕೆ ಪ್ರಾರಂಭಿಸುತ್ತದೆ, ಇದಕ್ಕೇನೇ ಉಷ್ಟ್ರಗ್ರೀವವೆಂಬದಾಗಿ ಹೆಸರು.

**ಕಂಡೂಯುನೋಘನಸ್ರಾವೀಕಠಿನೋಮಂದವೇದನಃ ॥**
**ಶ್ವೇತಾವಭಾಸಃಕಫಜಃಪರಿಸ್ರಾವೀಭಗಂದರಃ ॥ ೫ ॥**

ಪರಿಸ್ರಾವಿಭಗಂದರವನ್ನು ಹೇಳುತ್ತಾನೆ—ಕುರದಲ್ಲಿ ನವೆ ಬಹಳವಾಗಿರುವುದು, ಆದರಿಂದ ಹೊರಡುವ ಕೀವು ಗಟ್ಟಿಯಾಗಿರುವುದು, ಕುರವನ್ನು ಮುಟ್ಟಿ ಅಥವಾ ಅದುಮಿ ನೋಡಿದರೆ ಗಟ್ಟಿಯಾಗಿರುವುದು, ನೋವು ಬಹಳವಾಗಿರುವುದಕ್ಕಿಲ್ಲ, ಕುರವು ಬೆಳ್ಳಗಿರುವುದು, ಹೀಗಿದ್ದಲ್ಲಿ ಇದು ಕಫದೋಷಜನ್ಯವಾದ ಪರಿಸ್ರಾವಿ ಎಂಬ ಭಗಂದರವೆಂದು ತಿಳಿಯಬೇಕು.

ಬಹುವರ್ಣರುಜಾಸ್ರಾವಾಪಿಡಕಾಗೋಸ್ತನೋಪಮಾ ॥
ಶಂಬೂಕಾವರ್ತವನ್ನಾಡೀಶಂಬೂಕಾವರ್ತಕೋಮತಃ ॥ ೬ ॥

ಶಂಬೂಕಾವರ್ತವೆಂಬ ಭಗಂದರವನ್ನು ಹೇಳುತ್ತಾನೆ—ಈ ಭಗಂದರವು ನಾನಾ ದೋಷಪ್ರಕೋಪಗಳಿಂದ ಹುಟ್ಟುವುದಾದ ಕಾರಣ ಇದರ ಕುರದ ಬಣ್ಣ ಮತ್ತು ಸ್ರವಿಸುವ ದ್ರವದ ಬಣ್ಣ ಇವು ನಿಯತವಾಗಿಲ್ಲದೆ ನಾನಾ ವಿಧವಾಗಿರುತ್ತವೆ, ಕುರಗಳು ಹಸುವಿನ ಮೊಲೆಯಂತಿರುತ್ತವೆ, ಇದರಲ್ಲಿ ಉಂಟಾಗುವ ವೇದನೆಯು ನದೀಪ್ರವಾಹದಲ್ಲಿ ಉಂಟಾಗುವ ಸುಳಿಯಂತೆ ನಿಯಮವಿಲ್ಲದ್ದಾಗಿರುತ್ತದೆ, ಇದಕ್ಕೆ ಶಂಬೂಕಾವರ್ತಭಗಂದರವೆಂಬ ಹೆಸರು.

ಕ್ಷತಾದ್ಗತಿಃಪಾಯುಗತಾವಿವರ್ಧತೇಹ್ಯುಪೇಕ್ಷಣಾತ್ಸ್ಯುಃಕ್ರಿಮಯೋವಿದಾರ್ಯತೇ ॥
ಪ್ರಕುರ್ವತೇಮಾರ್ಗಮನೇಕಧಾಮುಖೈರ್ವ್ರಣೈಸ್ತದುನ್ಮಾರ್ಗಿಭಗಂದರಂವದೇತ್ ॥ ೭ ॥

ಉನ್ಮಾರ್ಗಿಭಗಂದರವನ್ನು ಹೇಳುತ್ತಾನೆ—ಗುದದ್ವಾರದ ಹತ್ತಿರ ಮುಳ್ಳು ಮೊಳೆ ಮೊದಲಾದವು ಬಡಿಯೋಣದರಿಂದ ಗಾಯವಾಗಿ ವ್ರಣವಾಗಿ ಕ್ರಮೇಣ ವೃದ್ಧಿಯಾಗುತ್ತಿರುವುದು, ಚಿಕಿತ್ಸೆ ಮಾಡದೆ ಉಪೇಕ್ಷೆ ಮಾಡೋಣದರಿಂದ ಕ್ರಿಮಿಗಳಾಗುವುದು, ವ್ರಣವು ಒಡದು ಹೋಗಿ ವ್ರಣದಲ್ಲಿ ಅನೇಕ ರಂಧ್ರಗಳು ಬಿದ್ದು ಅದರಿಂದ ಸ್ರಾವಗಳು ಆಗುವುದಕ್ಕೆ ಪ್ರಾರಂಭಿಸಿ ತೊಂದರೆ ಪಡಿಸುವುದು, ಇದಕ್ಕೆ ಉನ್ಮಾರ್ಗಿಭಗಂದರವೆಂದು ಹೆಸರು.

ಘೋರಾಸ್ಸಾಧಯಿತುಂದುಃಖ್ಯಾಸ್ಸರ್ವಏವಭಗಂದರಾಃ ॥
ತೇಷ್ವಸಾಧ್ಯಃಸ್ತ್ರಿದೋಷೋತ್ಥಃಕ್ಷತಜಶ್ಚವಿಶೇಷತಃ ॥ ೮ ॥

ಸಾಧ್ಯಾಸಾಧ್ಯ ವಿಚಾರವನ್ನು ಹೇಳುತ್ತಾನೆ—ಭಗಂದರಗಳೆಂಬ ವ್ರಣಗಳೆಲ್ಲವೂ ಭಯಂಕರಗಳಾದವುಗಳು, ಚಿಕಿತ್ಸೆ ಮಾಡಿ ಸಾಧಿಸುವುದು ಪರಮ ದುಃಖ,

ಅವುಗಳಲ್ಲಿಯೂ ತ್ರಿದೋಷಪ್ರಕೋಪಜನ್ಯವಾದ ಭಗಂದರವು ಅತ್ಯಂತ ಅಸಾಧ್ಯವೆಂದೇ ತಿಳಿದುಕೊಳ್ಳಬೇಕು, ಗುದಮಾರ್ಗದಲ್ಲಿ ಗಾಯವಾಗಿ ಆ ಗಾಯವು ಭಗಂದರಕ್ಕೆ ತಿರುಗಿದ್ದರೆ ಅತ್ಯಂತ ಅಸಾಧ್ಯವೆಂಬದಾಗಿಯೇ ಗೊತ್ತುಮಾಡಿಕೊಳ್ಳಬಹುದು.

ವಾತಮೂತ್ರಪುರೀಷಾಣಿಕ್ರಿಮಯಶ್ಶುಕ್ರಮೇವಚ ॥
ಭಗಂದರಾತ್ಸ್ರವಂತಸ್ತುನಾಶಯಂತಿತಮಾತುರಂ ॥ ೯ ॥

ಅಪಾನವಾಯು, ಮಲ, ಮೂತ್ರ, ಶುಕ್ರಧಾತು, ಇವುಗಳು ಆ ದ್ವಾರದಿಂದ ಬರುತ್ತಿರುವುದು, ಕ್ರಿಮಿಗಳು ಕಾಣಿಸಿಕೊಂಡಿರುವುದು, ಹೀಗಿರುವಲ್ಲಿ ಆದರಿಂದ ಮನುಷ್ಯನು ಸತ್ತುಹೋಗುತ್ತಾನೆಂದು ನಿಶ್ಚಯಿಸಿಯೇ ಬಿಡಬಹುದು.

ಇಲ್ಲಿಗೆ ಭಗಂದರನಿದಾನ ಸಂಪೂರ್ಣ.

---

## ಉಪದಂಶನಿದಾನ.

ಹಸ್ತಾಭಿಘಾತಾನ್ನಖದಂತಪಾತಾದಧಾವನಾದ್ಯತ್ಯುಪಸೇವನಾದ್ವಾ ॥
ಯೋನಿಪ್ರದೋಷಾಚ್ಚಭವಂತಿಶಿಶ್ನೇಪಂಚೋಪದಂಶಾವಿವಿಧಾಪಚಾರೈಃ ॥ ೧ ॥

ಉಪದಂಶವೆಂಬ ರೋಗವನ್ನು ಹೇಳುತ್ತಾನೆ—ಈ ಉಪದಂಶವೆಂಬ ರೋಗವು ಪುರುಷರ ಮರ್ಮಸ್ಥಾನವೆನ್ನಿಸುವ ಶಿಶ್ನಕ್ಕೆ ಸಂಭವಿಸುವ ರೋಗ, ಕಾಮುಕರಾದ ಸ್ತ್ರೀಯರು ವಿವೇಕವಿಲ್ಲದೆ ಸಂಭೋಗಕಾಲದಲ್ಲಿ ಪರಾಧೀನರಾದ ಪುರುಷರ ಶಿಶ್ನವನ್ನು ಕೈಯ್ಯಿಂದ ಎಳೆಯುವುದು, ಉಗುರಿನಿಂದ ಜಿಗಟುವುದು, ಅಥವಾ ಕೈಯ್ಯಿಂದಲೇ ಶಿಶ್ನವನ್ನು ಮುಟ್ಟುವಾಗ್ಯೆ ಹೆಂಗಸರ ಉಗರಿನ ಏಟು ಶಿಶ್ನಕ್ಕೆ ಬೀಳುವುದು. ಸಂಭೋಗಕಾಲದಲ್ಲಿ ಉಂಟಾಗತಕ್ಕ ಅತಿಶಯವಾದ ಪ್ರೀತಿಯಿಂದ ಶಿಶ್ನವನ್ನು ತಮ್ಮ ಬಾಯಲ್ಲಿಟ್ಟುಕೊಳ್ಳುವುದು, ಆಗ್ಯೆ ಶಿಶ್ನಕ್ಕೆ ಅವರ ಹಲ್ಲು ತಗಲುವುದು. (ಇದೆಲ್ಲಾ ಸಂಭವವೇ ಎಂದು ಅನೇಕರು ಆಲೋಚಿಸಬಹುದು, ಕಾಮಶಾಸ್ತ್ರದಲ್ಲಿ ಅತ್ಯುತ್ಸುಕರಾದ ಮತ್ತು ಕಾಮನಿರೋಧ ಮಾಡಲಾರದ ಸ್ತ್ರೀಯರು ತಮಗೆ ಕೇವಲ ಪ್ರೀತಿಪಾತ್ರರಾದ ಪುರುಷರ ವಿಷಯದಲ್ಲಿ ಇಂತಹ ಇನ್ನೂ ಅನೇಕ ಚೇಷ್ಟೆಗಳನ್ನು ಮಾಡುತ್ತಾರೆಂದು ಹೇಳಿದೆ, ಕೇಳಿಕೆಯಲ್ಲಿಯೂ ಈ ವಿಷಯಗಳು ನಿಶ್ಚಯವೆಂದೇ ಕಂಡುಬಂದಿದೆ.) ಸ್ತ್ರೀಸಮಾಗಮಾನಂತರದಲ್ಲಿ ಪುರುಷರು ತಮ್ಮ ಶಿಶ್ನವನ್ನು ಪ್ರಕ್ಷಾಳನ ಮಾಡಿಕೊಳ್ಳದೆ ರತಿಕಾಲದಲ್ಲಿ ಸಂಕ್ರಮಿಸಿದ ಮಲವನ್ನು ಅಲ್ಲಿಯೇ ಇರಗೊಡುವುದು, ಮಿತಿಯಿಲ್ಲದೆ ಸಂಭೋಗ-

ಮಾಡೋಣದರಿಂದ ಶಿಶ್ನಕ್ಕೆ ಇನ್ನೇನಾದರೂ ಪೆಟ್ಟು ತಾಗುವುದು, ಯೋನಿ-ಅಂದರೆ ಸ್ತ್ರೀಯರ ಗುಹ್ಯೇಂದ್ರಿಯಗತಗಳಾದ ದೋಷಗಳು ಅಂದರೆ ಆ ಭಾಗದಲ್ಲಿ ಕೂದಲು ಹೆಚ್ಚಾಗಿದ್ದು ಸಂಭೋಗದ ಸಂಭ್ರಮದಲ್ಲಿ ಶಿಶ್ನಕ್ಕೆ ಉಪಹತಿಯಾಗುವುದು, ಮತ್ತು ವಾತಾದಿದೋಷಪ್ರಕೋಪದಿಂದ ಸ್ತ್ರೀಯರ ಯೋಗ್ಯಾವಯವವು ಕೆಟ್ಟಿರುವುದು, ಈ ಕಾರಣಗಳಿಂದ ಪುರುಷರ ಗುಹ್ಯೇಂದ್ರಿಯವಾದ ಶಿಶ್ನದಲ್ಲಿ ಸಂಭವಿಸುವ ವ್ರಣಗಳಿಗೆ ಉಪದಂಶಗಳೆಂಬದಾಗಿ ಹೆಸರು.

**ಸತೋದಭೇದೈಸ್ಸ್ಫುರಣೈಸ್ಸಕೃಷ್ಣೈಸ್ಸ್ಫೋಟೈರ್ವ್ಯವಸ್ಯೇತ್ ಪವನೋಪದಂಶಂ ॥**
**ಪೀತೈರ್ಬಹುಕ್ಲೇದಯುತೈಸ್ಸದಾಹೈಃ ಪಿತ್ತೇನ ರಕ್ತಾತ್ಪಿಶಿತಾವಭಾಸ್ಯೈಃ ॥ ೨ ॥**
**ಸ್ಫೋಟೈಸ್ಸಕೃಷ್ಣೈ ರುಧಿರಂಸ್ರವಂತಂ ರಕ್ತಾತ್ಮಕಂ ಪಿತ್ತಸಮಾನಲಿಂಗಂ ॥**
**ಸಕಂಡುರೈಶ್ಯೋಥಯುತೈರ್ಮಹದ್ಭಿಶ್ಶುಕ್ಲೈರ್ಘನೈಸ್ಸ್ರಾವಯುತೈಃ ಕಫೇನ ॥ ೩ ॥**

ಉಪದಂಶವ್ರಣಗಳಲ್ಲಿ ದೋಷವ್ಯವಸ್ಥೆಯನ್ನು ಹೇಳುತ್ತಾನೆ—ನೋವು, ವಡತ ಹೆಚ್ಚಾಗಿರುವುದು, ಆಗಾಗ್ಯೆ ವ್ರಣವು ಮಿಡಿಯುತ್ತಿರುವುದು, ಬಕ್ಕೆಗಳಾಗಲಿ ಕುರಗಳಾಗಲಿ ಕಪ್ಪಾಗಿರುವುದು, ಈ ರೀತಿ ಇದ್ದಲ್ಲಿ ವಾತಪ್ರಕೋಪಜನ್ಯವಾದ ಉಪದಂಶವೆಂದು ತಿಳಿಯಬೇಕು. ಬಕ್ಕೆಗಳು ಹಳದಿಯ ಬಣ್ಣವಾಗಿರುವುದು, ಬಕ್ಕೆಗಳಿಂದ ಯಾವಾಗಲೂ ನೀರು ಹೊರಡುತ್ತಲಿರುವುದು, ಉರಿಯೂ ಇರುವುದು, ಹೀಗಿದ್ದಲ್ಲಿ ಪಿತ್ತೋಪದಂಶವೆಂದು ತಿಳಿಯಬೇಕು ಬಕ್ಕೆಗಳು ಮಾಂಸದ ಮುದ್ದೆಯಂತೆ ಕೆಂಪಾಗಿರುವುದು, ಕೊಂಚ ಕಪ್ಪುಬಣ್ಣ ಮಿಶ್ರವಾಗಿಯೂ ಇರಬಹುದು, ಯಾವಾಗಲೂ ಬಕ್ಕೆಗಳಿಂದ ರಕ್ತವು ಹೊರಡುತ್ತಲೇ ಇರುವುದು, ಪಿತ್ತೋಪದಂಶದ ಲಕ್ಷಣಗಳೆಲ್ಲವೂ ಇರುವುದು, ಈ ಲಕ್ಷಣಗಳಿದ್ದಲ್ಲಿ ರಕ್ತಪ್ರಕೋಪಜನ್ಯವಾದ ಉಪದಂಶವೆಂದು ತಿಳಿಯಬೇಕು. ನವೆ ಹೆಚ್ಚಾಗಿರುವುದು, ಬಾಕು ಇರುವುದು, ಬೊಕ್ಕೆಗಳು ದಪ್ಪವಾಗಿರುವುದು, ಬೆಳ್ಳಗಿರುವುದು. ಅದರಿಂದ ಹೊರಡುವ ದ್ರವವು ಬೆಳ್ಳಗೆ ಗಟ್ಟಿಯಾಗಿರುವುದು, ಇದು ಕಫೋಪದಂಶದ ಲಕ್ಷಣಗಳು.

**ನಾನಾವಿಧಸ್ರಾವರುಜೋಪಪನ್ನಮಸಾಧ್ಯಮಾಹುಸ್ತ್ರಿಮಲೋಪದಂಶಂ ॥**
**ವಿಶೀರ್ಣಮಾಂಸಂಕ್ರಿಮಿಭಿಃಪ್ರಜಗ್ಧಂಮುಷ್ಕಾವಶೇಷಂಪರಿವರ್ಜಯೇಚ್ಚ ॥ ೪ ॥**

ವ್ರಣದಿಂದ ಸ್ರವಿಸುವ ದ್ರವವು ನಾನಾ ವಿಧಗಳಾದ ಬಣ್ಣಗಳಿಂದ ಕೂಡಿರುವುದು, ನೋವು, ವ್ಯಥೆ, ಬಹಳವಾಗಿರುವುದು ಹೀಗಿದ್ದಲ್ಲಿ ಅದು ತ್ರಿದೋಷ ಪ್ರಕೋಪಜನ್ಯವಾದ ಉಪದಂಶವೆಂದು ತಿಳಿದುಕೊಳ್ಳಬೇಕು. ಮಾಂಸವು ಶೀಳಿಹೋಗಿ ಹೊರಕ್ಕೆ ಹೊರಟಿರುವುದು, ಕ್ರಿಮಿಗಳು ಶಿಶ್ನವನ್ನೆಲ್ಲಾ ತಿಂದು ಫಲ ಕೋಶವನ್ನು (ವೃಷಣ) ಮಾತ್ರ ಉಳಿಸಿರುವುದು ಹೀಗಾಗಿರುವಲ್ಲಿ ಚಿಕಿತ್ಸಿಸದೆ ಬಿಡಬೇಕು.

ಸಂಜಾತಮಾತ್ರೇನಕರೋತಿಮೂಢಃಕ್ರಿಯಾಂನರೋಯೋ
ವಿಷಯೇಪ್ರಸಕ್ತಃ ॥
ಕಾಲೇನಶೋಥಕ್ರಿಮಿದಾಹಪಾಕೈರ್ವಿಶೀರ್ಣಶಿಶ್ನೋಮ್ರಿಯತೇ
ಸತೇನ ॥ ೫ ॥

ಶಿಶ್ನದ ಮೇಲೆ ಹುಟ್ಟುವ ವ್ರಣಗಳ ವಿಷಯದಲ್ಲಿ ವ್ರಣಗಳು ಹುಟ್ಟಿದ ಕೂಡಲೆ ಚಿಕಿತ್ಸೆ ಮಾಡಬೇಕು, ವಿಷಯಾಸಕ್ತನಾಗಿ ಅಂದರೆ ಮೈಥುನವನ್ನು ಬಿಡಲಾರದೆ ಶಿಶ್ನವನ್ನು ರೋಗವಿರುವಾಗ್ಯೂ ಉಪಯೋಗಿಸುತ್ತ ಬಂದಲ್ಲಿ ಕೊಂಚ ಕಾಲ ಕಳದ ಮೇಲೆ ಶಿಶ್ನದ ಮೇಲೆ ಬಾಕು ವ್ರಣಗಳಿಗೆ ಹುಳಬೀಳುವುದು, ಉರಿಯಾಗುವುದು, ಶಿಶ್ನವೆಲ್ಲಾ ಕೊಳತು ಶೀಳಿಹೋಗುವುದು, ಹೀಗಾಗಿ ಮನುಷ್ಯನು ಸಾಯುತ್ತಾನೆ.

ಅಂಕುರೈರಿವಸಂಘಾತೈರುಪರ್ಯುಪರಿಸಂಸ್ಥಿತೈಃ ॥
ಕ್ರಮೇಣಜಾಯತೇವರ್ತಿಸ್ತಾಮ್ರಚೂಡಶಿಖೋಪಮಾ ॥ ೬ ॥
ಕೋಶಸ್ಯಾಭ್ಯಂತರೇಸಂಧೌಸರ್ವಸಂಧಿಗತಾಪಿವಾ ॥
ಸವೇದನಾಪಿಚ್ಛಿಲಾಚದುಶ್ಚಿಕಿತ್ಸ್ಯಾತ್ರಿದೋಷಜಾ ॥ ೭ ॥
ಲಿಂಗವರ್ತಿರಭಿಖ್ಯಾತಾಲಿಂಗಾರ್ಶಇತಿಚಾಪರೇ ॥

ಲಿಂಗಾರ್ಶಸ್ಸೆಂಬ ವ್ರಣವನ್ನು ಹೇಳುತ್ತಾನೆ—ಶಿಶ್ನದ ಮೇಲುಭಾಗದಲ್ಲಿ ವ್ರಣಗಳ ಮಗ್ಗಲಿನಲ್ಲಿ ಮೊಳಿಕೆಗಳಂತಾಗುವುದು, ಕ್ರಮೇಣ ಮೊಳಿಕೆಗಳು ಮೇಲೆ ಮೇಲೆ ವೃದ್ಧಿಯಾಗುತ್ತಾ ಗಂಡುಕೋಳಿಯ ತಲೆಯ ಮೇಲಿರುವ ಜುಟ್ಟಿನ ಮೇಲೆ ಗರಗಸದ ಹಲ್ಲಿನಂತೆ ತೋರುವುದರ ಹಾಗಾಗುತ್ತದೆ, ಈ ವಿಧವಾದ ಮಾಂಸಾಂಕುರಗಳು ಮೂಲವ್ಯಾಧಿಯ ಮೊಳಿಕೆಗಳ ಹಾಗೆಯೇ ಇರುವುದರಿಂದ ಇದಕ್ಕೆ ಲಿಂಗಾರ್ಶಸ್ಸೆಂದು ವೈದ್ಯರು ಕರೆಯುತ್ತಾರೆ, ಈ ಲಿಂಗಾರ್ಶಸ್ಸು ಕೋಶದ ಹತ್ತರ ಎಂದರೆ ಫಲಕೋಶ (ವೃಷಣ)ದ ಹತ್ತರಲೂ ಮರ್ಮಸ್ಥಾನದ ಸಮಸ್ತ ಸಂಧಿಗಳಲ್ಲಿಯೂ ಹುಟ್ಟಬಹುದು, ವೇದನೆಯು ಬಹಳ ಹೆಚ್ಚಾಗಿರುತ್ತದೆ, ಸ್ರಾವವು ಗಟ್ಟಿಯಾಗಿರುತ್ತದೆ, ಇದು ತ್ರಿದೋಷಪ್ರಕೋಪಜನ್ಯವಾದದ್ದು,

ಇದನ್ನೇ ಲಿಂಗವರ್ತಿ ಎಂಬದಾಗಿಯೂ ಲಿಂಗಾರ್ಶಸ್ಸೆಂಬದಾಗಿಯೂ ಕರೆಯುತ್ತಾರೆ, ಇತ್ತೀಚಿನ ವೈದ್ಯರುಗಳು ಉಪದಂಶವೆಂದರೆ ಮೇಹದ ಹುಣ್ಣುಗಳೆಂದು ವ್ಯವಹರಿಸುತ್ತಾರೆ, ಸಿಫಿಲಿಸ್ ಎಂಬದಾಗಿ ಆಂಗ್ಲೇಯ ವೈದ್ಯರು ವ್ಯವಹರಿಸುವ ವ್ರಣಗಳೂ ಉಪದಂಶ ವ್ರಣಗಳೂ ಎರಡೂ ಒಂದೇ ಎಂದು ಅವರುಗಳ ಅಭಿಪ್ರಾಯ, ಆದರೆ ಮಾಧವನಿದಾನದಲ್ಲಿ ಪುರುಷರ ಮರ್ಮಸ್ಥಾನದಲ್ಲಿ ಬರುವ ವ್ರಣಗಳಿಗೆ ಮಾತ್ರವೇ ಉಪದಂಶವೆಂಬದಾಗಿ ವ್ಯವಹರಿಸುವುದರಿಂದ ಮೇಹ ವ್ರಣಗಳು ಉಪದಂಶವೆನ್ನಿಸಿಕೊಳ್ಳಲಾರವು, ಮೇಹವ್ರಣಗಳು ಸ್ತ್ರೀಯರಿಗೆ ಮತ್ತು ಪುರುಷರಿಗೆ ಸಹಾ ಸಂಭವಿಸುತ್ತವೆ ಎಂದು ಕೆಲವರ ಅಭಿಪ್ರಾಯವಾಗಿದೆ ಉಪದಂಶ ವ್ರಣಗಳು ಪುರುಷರಿಗೆ ಮಾತ್ರವಲ್ಲದೆ ಸ್ತ್ರೀಯರಿಗೂ ಸಂಭವಿಸುತ್ತವೆಂದು ಸುಶ್ರುತದಲ್ಲಿ ಹೇಳಿರುವುದರಿಂದ ಉಪದಂಶವೆಂದರೆ ಮೇಹಸಂಬಂಧವಾಗಿ ಗಂಡಸರಿಗೆ ಹೆಂಗಸರಿಗೆ ಸಹಾ ಮರ್ಮಸ್ಥಾನದಲ್ಲಿ ಬರುವ ಹುಣ್ಣುಗಳೇ, ಇವಕ್ಕೇನೇ ಸಿಫಿಲಿಸ್ ಎಂದು ಆಂಗ್ಲವೈದ್ಯರು ಹೇಳುತ್ತಾರೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಇಲ್ಲಿಗೆ ಉಪದಂಶನಿದಾನ ಸಂಪೂರ್ಣ.

---

## ಶೂಕದೋಷನಿದಾನ.

ಅಕ್ರಮಾಚ್ಛೇಫಸೋವೃದ್ಧಿಂಯೋಭಿವಾಂಛತಿಮೂಢಧೀಃ ॥
ವ್ಯಾಧಯಸ್ತಸ್ಯಜಾಯಂತೇದಶಚಾಷ್ಟೌಚಶೂಕಜಾಃ ॥ ೧ ॥

ಶೂಕದೋಷನಿದಾನವನ್ನು ಹೇಳುತ್ತಾನೆ—"ದಂತಕಾಷ್ಠಂಚತ್ರಿಂಶಚಯಥಾಸ್ಥೂಲಂತಥಾಸುಖಂ" ಎಂದರೆ ಪುರುಷರ ಗುಹ್ಯೇಂದ್ರಿಯವಾದ ಶಿಶ್ನವು ದಪ್ಪವಾಗಿದ್ದಷ್ಟೂ ರತಿಕಾಲದಲ್ಲಿ ಸ್ತ್ರೀಯರಿಗೆ ಸುಖಕರವಂತೆ, ದಪ್ಪವಾಗಿ ಶಿಶ್ನವಿರುವವರೊಡನೆ ಸ್ತ್ರೀಯರು ಕಾಮೋಪಭೋಗವನ್ನನುಭವಿಸಲು ಬಹಳವಾಗಿ ಮೋಹಿಸುತ್ತಾರೆ, ಇದು ಕಾಮಶಾಸ್ತ್ರಗಳ ಉದ್ಗ್ರಂಥಗಳಾದ ವಾತ್ಸ್ಯಾಯನ ಸೂತ್ರಗಳಲ್ಲಿಯೂ ಉಕ್ತವಾಗಿದೆ, ಶಿಶ್ನವು ಕೆಲವರಿಗೆ ಆಕಾರದಲ್ಲಿ ಸಣ್ಣದಾಗಿರುವುದುಂಟು, ಅಂತವರು ಸ್ತ್ರೀಯರೊಡನೆ ರಮಿಸಿ ಸಂತೋಷಪಡಿಸಲಾರರು, ಅವರುಗಳು ತಮ್ಮ ಶಿಶ್ನವು ಗಾರ್ದಭಶಿಶ್ನದಂತೆ ದಪ್ಪವಾಗಿ ಆಗಬೇಕೆಂದು ಅಪೇಕ್ಷಿಸುತ್ತಾರೆ, ಅವರುಗಳಿಗೋಸ್ಕರ ಶಿಶ್ನವೃದ್ಧಿಕರಣ (ಸ್ಥೂಲೀಕರಣ) ಯೋಗವನ್ನು ಕಾಮಸೂತ್ರಗಳಲ್ಲಿಯೇ ಹೇಳಿರುತ್ತಾರೆ, ಅಂತಹ ಉಪಾಯಗಳಲ್ಲಿ ಶೂಕವೆಂಬ ಜಲಪ್ರಾಣಿಯನ್ನು ಅರದು ಶಿಶ್ನಕ್ಕೆ ಲೇಪನಮಾಡಿಕೊಳ್ಳುವುದೂ ಒಂದು ಲಿಂಗವೃದ್ಧಿಕರಣೋಪಾಯ, ಅಶ್ವಗಂಧಾದಿತೈಲವನ್ನು ಸ್ತನಗಳು ದಪ್ಪವಾಗಿಲ್ಲದ

ಹೆಂಗಸರು, ಶಿಶ್ನ ದಪ್ಪ ಸಾಲವ ಗಂಡಸರು ಸಹಾ ಲೇಪವಮಾಡಿಕೊಂಡಲ್ಲಿ ವೃಷ್ಧಿ ಯಾಗುತ್ತವೆ, ಇದು ಸೌಮ್ಯೋಪಾಯು, ಇಂತಹ ಉಪಾಯುವನ್ನು ಬಿಟ್ಟು ಈ ಶೂಕವೆಂಬ ಕ್ರಿಮಿಯನ್ನು ಅರದು ಲೇಪವಮಾಡಿಕೊಂಡು ಅದರಿಂದ ಲಿಂಗವೃದ್ಧಿ ಮಾಡಿಕೊಳ್ಳುವುದು ಕ್ರೂರವಾದ ಉಪಾಯು, ಕೆಲವರು ಬುದ್ಧಿಗೇಡಿಗಳು ಈ ಉಪಾಯುದಿಂದ ತಮ್ಮ ಶಿಶ್ನವನ್ನು ದೊಡ್ಡದು ಮಾಡಿಕೊಂಡು ಅದರಿಂದ ಸುಖ ಪಡಬೇಕೆಂದು ಪ್ರಯತ್ನಿಸುತ್ತಾರೆ, ಜಲಶೂಕವೆಂಬ ವಿಷಜಂತುವಿನ ಸಂಪರ್ಕ ದಿಂದ ಅಂತವರ ಶಿಶ್ನವು ಸ್ಥೂಲವಾಗುವ ಬದಲು ವ್ರಣರೋಗಗ್ರಸ್ತವಾಗುತ್ತದೆ, ಇಂತಹ ವ್ರಣಗಳು ಹದಿನೆಂಟು ವಿಧ.

ಗೌರಸರ್ಷಪಸಂಸ್ಥಾನಾಶೂಕದುರ್ಭಗ್ನಹೇತುಕಾ ॥
ಪಿಡಕಾಶ್ಲೇಷ್ಮವಾತಾಭ್ಯಾಂಜ್ಞೇಯಾಸರ್ಷಪಿಕಾತುಸಾ ॥ ೨ ॥

ಮೇಲೆ ಹೇಳಿದ ವ್ರಣಗಳಲ್ಲಿ ಸರ್ಷಪಿಕಾ ಎಂಬುವುದೊಂದು ಜಾತಿಯ ವ್ರಣ—ಈ ವ್ರಣವು ಶಿಶ್ನದ ಮೇಲೆಲ್ಲಾ ಸಾಸುವೆಯ ಕಾಳಿನಂತಹ ಬಕ್ಕೆಗಳು ಎದ್ದು ಕೆಂಪಾಗಿ ಕಲಸಿಕೊಂಡು ಹೋಗಿರುತ್ತದೆ, ಈ ವ್ರಣವು ಶಿಶ್ನವೃದ್ಧಿ ಗೋಸ್ಕರ ಮಾಡತಕ್ಕ ಜಲಶೂಕವೆಂಬ ವಿಷಜಂತುವಿನ ಲೇಪನದಲ್ಲಿ ತಪ್ಪಾಗು ವುದರಿಂದಲೂ ಬರುತ್ತದೆ, ಇಲ್ಲಿ "ಶೂಕದುರ್ಭಗಹೇತುಕಾ" ಎಂಬುದಾಗಿಯೂ ಪಾಠವಿದೆ, ಅಂದರೆ ಯೋನಿದೋಷದಿಂದಲೂ ಇಂತಹ ವ್ರಣವುಂಟಾಗುತ್ತದೆಂಬ ಭಾವ, ಈ ವ್ರಣಗಳು ಶ್ಲೇಷ್ಮ ಮತ್ತು ವಾಯು ಇವುಗಳ ಪ್ರಕೋಪದಿಂದ ಉತ್ಪನ್ನವಾದದ್ದೆಂದು ತಿಳಿಯಬೇಕು.

ಕಠಿನಾವಿಷಮೈರ್ಭುಗ್ನೈರ್ವಾಯುನಾಷ್ಠೀಲಿಕಾಭವೇತ್ ॥
ಶೂಕೈರ್ಯತ್ಪೂರಿತಂಶಶ್ವತ್‌ಗ್ರಥಿತಂನಾಮತತ್‌ಕಫಾತ್ ॥ ೩ ॥

ಅಷ್ಠೀಲಿಕಾ ಎಂಬುವುದೂ ಇವುಗಳಲ್ಲಿ ಒಂದು ಜಾತಿಯ ವ್ರಣ, ಮರ್ಮ ಸ್ಥಾನದಲ್ಲಿ ಮತ್ತು ಅ ಸುತ್ತುಮುತ್ತು ಚಪ್ಪಟೆಯಾಗಿ ಅರ್ಧಾಣೆ ಮೂರುಕಾಸು ಗಳ ಅಗಲಕ್ಕೆ ಗಟ್ಟಿಯಾಗಿ ರಕ್ತಕಟ್ಟಿಕೊಂಡು ಇರುತ್ತದೆ, ಇದನ್ನು ವಾತಪ್ರಕೋ ಪಜನ್ಯವೆಂದು ತಿಳಿಯಬೇಕು. ಗ್ರಥಿತವೆಂಬ ವ್ರಣವು ಲಿಂಗವರ್ಧನೋಪಾಯು ಗಳು ತಪ್ಪಾಗೋಣದರಿಂದಲೂ ದುಷ್ಟಯೋನಿ ಸಂಪರ್ಕದಿಂದಲೂ ಮರ್ಮ ಸ್ಥಾನದಲ್ಲೆಲ್ಲಾ ಸಣ್ಣ ಮತ್ತು ದೊಡ್ಡ ಗಂಟುಗಳು ಕಟ್ಟಿಕೊಳ್ಳುವುದು.

ಕುಂಭಿಕಾರಕ್ತಪಿತ್ತೋತ್ಥಾಜಾಂಬವಾಸ್ಥಿನಿಭಾಶುಭಾ ॥
ತುಲ್ಯಜಾಂತ್ಸಲಜೀಂವಿದ್ಯಾದ್ಯಥಾಪ್ರೋಕ್ತಾಂವಿಚಕ್ಷಣಃ ॥ ೪ ॥

ಕುಂಭಿಕಾ ಎಂಬುವುದೊಂದು ಬಗೆಯ ವ್ರಣ—ಈ ವ್ರಣವು ರಕ್ತ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟುತ್ತದೆ, ಇದು ನೇರಲಬೀಜದಂತೆ ಉದ್ದುದ್ದವಾಗಿ ಕಪ್ಪಗಿರುತ್ತದೆ, ಅಲಜಿ ಎಂಬುವುದು ಒಂದು ಬಗೆಯ ವ್ರಣ, ಹಿಂದೆ ಪ್ರಮೇಹ ನಿದಾನದಲ್ಲಿ ಮೇಹರೋಗವನ್ನು ಸರಿಯಾಗಿ ಸಕಾಲದಲ್ಲಿ ಚಿಕಿತ್ಸಿಸದಿದ್ದರೆ ಹುಟ್ಟುತಕ್ಕ ಮೇಹವ್ರಣಗಳಲ್ಲಿ ಹೇಳಿರುವ ಅಲಜಿ ಎಂಬ ವ್ರಣದಂತೆಯೇ ಇದೂ ಇರುತ್ತದೆ, ಕಾರಣ ಮಾತ್ರ ಇಲ್ಲಿ ಬೇರೆ ಎಂದು ತಿಳಿದುಕೊಳ್ಳಬೇಕು.

ಮೃದಿತಂಪೀಡಿತಂಯಚ್ಚಸಂರಬ್ಧಂವಾತಕೋಪತಃ ॥
ಪಾಣಿಭ್ಯಾಂಭೃಶಸಂಮೂಢೇಸಮ್ಮೂಢಪಿಡಕಾಭವೇತ್ ॥ ೫ ॥

ಮೃದಿತವೆಂಬುವುದೊಂದು ಬಗೆಯ ವ್ರಣ, ಲಿಂಗವೃದ್ಧಿಗೋಸ್ಕರವಾಗಿ ಲೇಪನವನ್ನು ಹತ್ತಿಸಿದ ಮೇಲೆ ಲಿಂಗವನ್ನು ಹಿಸಿಕಿಕೊಳ್ಳೋಣದರಿಂದ ವಾತ ಪ್ರಕೋಪವಾಗಿ ಲಿಂಗದ ಮೇಲುಭಾಗದಲ್ಲಿ ವ್ರಣಗಳಾಗುವುದು, ಸಮ್ಮೂಢ ಪಿಟಕಾ ಎಂಬುವುದೊಂದು ಬಗೆಯ ವ್ರಣ, ಪೂರ್ವದಲ್ಲಿ ಹೇಳಿದಂತೆಯೇ ಲಿಂಗ ವರ್ಧಕವಾದ ಔಷಧವನ್ನು ಪ್ರಯೋಗಿಸಿದ ಮೇಲೆ ಕೈಯ್ಯಿಂದ ಲಿಂಗವನ್ನು ಸವರುತ್ತಿರುವುದು, ಬಗ್ಗಿಸುವುದು ಮೊದಲಾದ ಕಾರಣಗಳಿಂದ ಉಂಟಾಗುವ ವಾತಪ್ರಕೋಪಜನ್ಯವಾದ ವ್ರಣ.

ದೀರ್ಘಾಬಹ್ವ್ಯಶ್ಚಪಿಡಕಾದೀರ್ಯಂತೇಮಧ್ಯತಸ್ತುಯಾಃ ॥
ಸೋಧಿಮಂಥಃಕಫಾಸೃಗ್ಭ್ಯಾಂವೇದನಾರೋಮಹರ್ಷಕೃತ್ ॥ ೬ ॥

ಅಧಿಮಂಥವೆಂಬುವುದೊಂದು ಬಗೆಯ ವ್ರಣ—ಈ ವ್ರಣವು ಕಫ ಮತ್ತು ರಕ್ತಗಳ ಪ್ರಕೋಪದಿಂದ ಹುಟ್ಟತಕ್ಕದ್ದು, ಇದರ ಲಕ್ಷಣಗಳೇನೆಂದರೆ ಉದ್ದುದ್ದವಾದ ಅನೇಕ ವ್ರಣಗಳು ಲಿಂಗದ ಹತ್ತಿರದಲ್ಲೆಲ್ಲಾ ಇದ್ದುಕೊಂಡು ಮಧ್ಯಭಾಗದಲ್ಲಿ ಸೀಳಿಹೋಗುತ್ತವೆ, ಇದರಿಂದ ಬಹಳವಾಗಿ ವೇದನೆಯೂ ಆಗುವುದಲ್ಲದೆ ರೋಮಹರ್ಷವೆಂದರೆ ರೋಮಾಂಚನವೂ ಆಗುತ್ತಿರುತ್ತದೆ.

ಪಿಟಿಕಾಪಿಟಿಕಾವ್ಯಾಪ್ತಾಪಿತ್ತಶೋಣಿತಸಂಭವಾ ॥
ಪದ್ಮಕರ್ಣಿಕಸಂಸ್ಥಾನಾಜ್ಞೇಯಾಪುಷ್ಕರಿಕಾಬುಧಾ ॥ ೭ ॥

ಪುಷ್ಕರಿಕಾ ಎಂಬುವುದೊಂದು ಬಗೆಯ ವ್ರಣ—ಪಿತ್ತ ಮತ್ತು ರಕ್ತಗಳ ಪ್ರಕೋಪದಿಂದ ಈ ವ್ರಣಗಳು ಹುಟ್ಟುತ್ತವೆ, ಗುಳ್ಳೆಗಳ ಮೇಲೆ ಗುಳ್ಳೆಗಳೆದ್ದು ತಾವರೆಯ ಹುವ್ವಿನ ಹಾಗೆ ಗುಂಡಾಗಿ ನೀರು ಸುರಿಯುವ ವ್ರಣಗಳಾಗುತ್ತವೆ, ಇದಕ್ಕೇನೇ ಪುಷ್ಕರಿಕಾ ಎಂದು ಹೆಸರಿಟ್ಟಿದ್ದಾರೆ, ತೆನುಗಿನಲ್ಲಿ ತಾಮರ ಎಂದು ಈ ವ್ರಣಗಳನ್ನು ಪ್ರಸಿದ್ಧ ರೀತಿಯಿಂದ ವ್ಯವಹರಿಸುತ್ತಾರೆ.

ಸ್ಪರ್ಶಹಾನಿಂ ... ಸಯೋಚ್ಛೋಣಿತಂಶೂಕದೂಷಿತಂ ॥
ಮುದ್ಗಮಾ... ಮಾರಕ್ತಾರಕ್ತಪಿತ್ತೋದ್ಭವಾಮಯಾ ॥ ೮ ॥
ವ್ಯಾಧಿರೇಷೋ ... ಸಾಮುಶೂಕಾಜೀರ್ಣನಿಮಿತ್ತತಃ ॥

ಶೂಕವೆಂಬ ... ರ್ಧಕವಾದ ಔಷಧದ್ರವ್ಯವನ್ನು ಲಿಂಗದ ಮೇಲೆ ಸವರುವುದರಿಂದ ಆ ... ಸಂಚಾರಮಾಡುವ ರಕ್ತವು ದೋಷಯುಕ್ತವಾಗಿ ಚರ್ಮಕ್ಕೆ ಇರತಕ್ಕ ... ಶಕ್ತಿಯನ್ನೇ ಕೆಡಿಸಿ ಹಾಳುಮಾಡುತ್ತದೆ, ಅಂದರೆ ಮುಟ್ಟಿದರೆ ಗೊತ್ತಾಗು... , ರಕ್ತ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟಿದ ಹೆಸರು ಮತ್ತು ಉ... ಆಕಾರ ಗಾತ್ರಗಳುಳ್ಳ ಲಿಂಗದ ಸುತ್ತಮುತ್ತಲ ಪ್ರದೇಶಗಳಲ್ಲಿ ಹುಟ್ಟುವ ವ್ರಣಗಳಿಗೆ ಉತ್ತಮಾ ಎಂಬುವುದಾಗಿ ಹೆಸರು, ಈ ವ್ರಣಗಳು ಕೂಡ ಶೂ... ಸಂಬಂಧದಿಂದ ಉತ್ಪನ್ನವಾಗತಕ್ಕವುಗಳೇ.

ಛಿದ್ರೈರಣು ... ಲಿಂಗಂಚಿತ್ತಂಯಸ್ಯಸಮಂತತಃ ॥ ೯ ॥
ವಾತಶೋಣಿ... ವ್ಯಾಧಿಸ್ಸಜ್ಞೇಯಶ್ಶತಪೋನಕಃ ॥

ಶತಪೋನಕವೆಂಬ ... ಒಂದು ಬಗೆಯ ಮರ್ಮಸ್ಥಾನದಲ್ಲಿ ಹುಟ್ಟುವ ವ್ರಣ—ವಾಯು ಮತ್ತು ರಕ್ತಗಳ ಪ್ರಕೋಪದಿಂದ ಹುಟ್ಟುತ್ತದೆ, ಇದರಲ್ಲಿ ಲಿಂಗದಲ್ಲಿ ಎಲ್ಲಾ ಸಣ್ಣ ಸಣ್ಣ ರಂಧ್ರಗಳು ಬಿದ್ದು ಕೀವು ಮತ್ತು ಮೂತ್ರಗಳು ಹೊರಡುತ್ತಿರುತ್ತವೆ.

ವಾತಪಿತ್ತಕೃ... ಜ್ಞೇಯಸ್ತ್ವಕ್ಪಾಕೋಜ್ವರದಾಹವತ್ ॥ ೧೦ ॥
ಕ ಷ್ಣೈ... ಸ್ಫೋಟೈಸ್ಸರಕ್ತಾಭಿಃಪಿಡಕಾಭಿರ್ನಿಪೀಡಿತಂ ॥
ಯಸ್ಯವಾಸ್ತುರುಜಶ್ಚೋಗ್ರಾಜ್ಞೇಯಂತಚ್ಛೋಣಿತಾರ್ಬುದಂ ೧೧

ತ್ವಕ್ಪಾಕವೆಂಬುವುದರ ಲಕ್ಷಣವೇನೆಂದರೆ—ವಾತ ಮತ್ತು ಪಿತ್ತಗಳ ಪ್ರಕೋಪದಿಂದ ಚರ್ಮವೆಲ್ಲಾ ಬೆಟ್ಟು ಜ್ವರ ಮತ್ತು ಉರಿ ಸಹ ಕಂಡರೆ ಅದಕ್ಕೆ ತ್ವಕ್ಪಾಕವೆಂದು ಹೆಸರು, ಕಪ್ಪು ಬಣ್ಣದ ಬೊಕ್ಕೆಗಳು ಮತ್ತು ಕೆಂಪು ಬಣ್ಣದ ಬೊಕ್ಕೆಗಳು ಸಹ ಲಿಂಗದ ಮೇಲೆಲ್ಲಾ ತುಂಬಿಕೊಳ್ಳುವುದು, ವ್ರಣಯುಕ್ತವಾದ ಭಾಗದಲ್ಲಿ ಭಯಂಕರವಾದ ವೇದನೆಯಾಗುತ್ತಿರುವುದು, ಹೀಗಿರುವುದಕ್ಕೆ ಶೋಣಿತಾರ್ಬುದವೆಂಬದಾಗಿ ಹೆಸರು. ಈ ವ್ರಣವಿರುವಾಗ್ಯೆ ಬಸ್ತಿ ಎಂದರೆ ಮೂತ್ರಕೋಶವೂ ಬಹಳ ವೇದನೆಯಿಂದ ಯುಕ್ತವಾಗಿರುತ್ತದೆ.

ಮಾಂಸದೋಷೇಣಜಾನೀಯಾದರ್ಬುದಂಮಾಂಸಸಂಭವಂ ॥
ಶೀರ್ಯಂತೇಯಸ್ಯಮಾಂಸಾನಿಯಸ್ಯಸರ್ವಾಶ್ಚವೇದನಾಃ ॥ ೧೨ ॥
ವಿದ್ಯಾತ್ತಂಮಾಂಸಪಾಕಂತುಸರ್ವದೋಷಕೃತಂಭಿಷಕ್ ॥

ಹಿಂದೆ ಹೇಳಿದ ಶೋಣಿತಾರ್ಬುದದಂತೆಯೇ ಮಾಂಸವು ಕೆಟ್ಟು ಹುಟ್ಟುವ ವ್ರಣಕ್ಕೆ ಮಾಂಸಾರ್ಬುದವೆಂಬದಾಗಿ ಹೆಸರು, ಮರ್ಮಸ್ಥಾನದಲ್ಲಿರುವ ಮಾಂಸಗಳೆಲ್ಲಾ ಶೀಳಿದಂತೆ ಛಿದ್ರವಾಗಿ ಒಡೆದು ಹೋಗುವುದು, ಸಮಸ್ತ ವಿಧವಾದ ವೇದನೆಗಳೂ ಇದ್ದೇ ಇರುವುದು, ಹೀಗಿರುವುದಕ್ಕೆ ಮಾಂಸಪಾಕವೆಂದು ಹೆಸರು, ಇದು ಸಮಸ್ತ ದೋಷಗಳೂ ಪ್ರಕುಪಿತಗಳಾಗಿ ಹುಟ್ಟಿರುವುದೆಂದರಿಯ ಬೇಕು.

ವಿದ್ರಧಿಂಸನ್ನಿಪಾತೇನಯಥೋಕ್ತಾಮಿತಿನಿರ್ದಿಶೇತ್ ॥ ೧೩ ॥
ಕೃಷ್ಣಾನಿಚಿತ್ರಾಣ್ಯಥವಾಶೂಕಾನಿಸವಿಷಾಣಿವಾ ॥
ಪಾತಿತಾನಿಸಜಂತ್ವಾಶುಮೇಢ್ರೇನಿರವಲೇಪತಃ ॥ ೧೪ ॥
ಕಾಲಾನಿಭೂತ್ವಾಮಾಂಸಾನಿಶೀರ್ಯಂತೇಯಸ್ಯದೇಹಿನಃ ॥
ಸನ್ನಿಪಾತಸಮುತ್ಥಾಂಸ್ತುತಾನ್ವಿದ್ಯಾತ್ತಿಲಕಾಲಕಾನ್ ॥ ೧೫ ॥

ಹಿಂದೆ ಹೇಳಿದ ವಿದ್ರಧಿನಿದಾನದಲ್ಲಿ ಸನ್ನಿಪಾತಜನ್ಯವಾದ ವಿದ್ರಧಿಯ ಲಕ್ಷಣಗಳಿಗೆ ಸಮಾನವಾದ ಲಕ್ಷಣಗಳಿಂದ ಕೂಡಿರುವ ಶೂಕವ್ರಣವನ್ನು ಸನ್ನಿಪಾತವಿದ್ರಧಿ ಎಂದು ತಿಳಿಯಬೇಕು. ಲಿಂಗವೃದ್ಧಿಗೋಸ್ಕರ ಔಷಧವಾಗಿ ಮಾಡಲು ಉಪಯೋಗಿಸುವ ಕಪ್ಪು ಬಣ್ಣದ ಅಥವಾ ಚಿತ್ರವಿಚಿತ್ರ ವರ್ಣದ ಶೂಕಗಳೆಂಬ ಕ್ರಿಮಿಗಳು ವಿಷಯುಕ್ತವಾಗಿರುತ್ತವೆ, ಒಂದು ವೇಳೆ ವಿಷಯುಕ್ತವಾಗಿಲ್ಲದಿದ್ದರೂ ಔಷಧವಾಗಿ ಮಾಡಿ ಲಿಂಗಕ್ಕೆ ಲೇಪನಮಾಡಿದರೆ ಕ್ರಮವಾಗಿ ಲಿಂಗವನ್ನೆಲ್ಲಾ ಪಕ್ವವಾಗುವಂತೆ ಮಾಡಿ ಶಿಶ್ನವನ್ನು ನಾಮಾವಶೇಷವಾಗುವಂತೆ ಕೊಳೆಯಿಸಿ ಬಿಡುತ್ತವೆ, ಇಂತಹ ಲೇಪನದಿಂದ ಲಿಂಗದ ಮಾಂಸವು ಕಪ್ಪು ಬಣ್ಣಕ್ಕೆ ತಿರಿಗಿ ಕೊಳೆತು ಹೋಗಿ ಶೀಳಿಹೋಗುತ್ತ ಬಂದಲ್ಲಿ ತ್ರಿದೋಷಸನ್ನಿಪಾತಜನ್ಯವಾದ ಈ ವ್ರಣವನ್ನು ತಿಲಕಾಲಕವೆಂಬದಾಗಿ ವ್ಯವಹರಿಸತಕ್ಕದ್ದು.

ತತ್ರಮಾಂಸಾರ್ಬುದಂಯಚ್ಚಮಾಂಸಪಾಕಶ್ಚಯಸ್ಮೃತಃ ॥
ವಿದ್ರಧಿಶ್ಚನಸಿಧ್ಯಂತಿಯೇಚಸ್ಯುಸ್ತಿಲಕಾಲಕಾಃ ॥ ೧೬ ॥

ಈ ಶೂಕವ್ರಣಗಳ ಸಾಧ್ಯಾಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ—ಮಾಂಸಾರ್ಬುದವೆಂಬುವುದು, ಮಾಂಸಪಾಕವೆಂಬುವುದು, ವಿದ್ರಧಿ ಎಂಬುವುದು, ತಿಲಕಾಲಕವೆಂಬುವುದು ಈ ನಾಲ್ಕು ವಿಧಗಳಾದ ಶೂಕವ್ರಣಗಳೂ ಅಸಾಧ್ಯಗಳೆಂದು ತಿಳಿಯಬೇಕು.

ಇಲ್ಲಿಗೆ ಶೂಕದೋಷನಿದಾನ ಸಂಪೂರ್ಣ.

## ಕುಷ್ಠನಿದಾನ.

ವಿರೋಧೀನ್ಯನ್ನಪಾನಾನಿ ದ್ರವಸ್ನಿಗ್ಧಗುರೂಣಿ ಚ ॥
ಭಜತಾಮಾಗತಾಂ ಛರ್ದಿಂ ವೇಗಾಂಶ್ಚಾನ್ಯಾನ್ ಪ್ರತಿಘ್ನತಾಂ ॥ ೧ ॥
ವ್ಯಾಯಾಮಮತಿಸಂತಾಪಮತಿಭುಕ್ತ್ವಾ ನಿಷೇವಿಣಾಂ ॥
ಘರ್ಮಶ್ರಮಭಯಾರ್ತಾನಾಂ ದ್ರುತಂ ಶೀತಾಂಬುಸೇವಿನಾಂ ॥ ೨ ॥
ಅಜೀರ್ಣಾಧ್ಯಶಿನಾಂ ಚೈವ ಪಂಚಕರ್ಮಾಪಚಾರಿಣಾಂ ॥
ನವಾನ್ನದಧಿಮತ್ಸ್ಯಾತಿಲವಣಾಮ್ಲನಿಷೇವಿಣಾಂ ॥ ೩ ॥
ಮಾಷಮೂಲಕಪಿಷ್ಟಾನ್ನತಿಲಕ್ಷೀರಗುಡಾಶಿನಾಂ ॥
ವ್ಯವಾಯಂ ಚಾಪ್ಯಜೀರ್ಣೇನ್ನೇ ನಿದ್ರಾಂ ಚ ಭಜತಾಂ ದಿವಾ ॥ ೪ ॥
ವಿಪ್ರಾನ್ ಗುರೂನ್ ಧರ್ಷಯತಾಂ ಪಾಪಂ ಕರ್ಮ ಚ ಕುರ್ವತಾಂ ॥
ವಾತಾದಯಸ್ತ್ರಯೋ ದುಷ್ಟಾಸ್ತ್ವಗ್ರಕ್ತಂ ಮಾಂಸಮಂಬು ಚ ॥ ೫ ॥
ದೂಷಯಂತಿ ಸ ಕುಷ್ಠಾನಾಂ ಸಪ್ತಕೋ ದ್ರವ್ಯಸಂಗ್ರಹಃ ॥
ಅತಃ ಕುಷ್ಠಾನಿ ಜಾಯಂತೇ ಸಪ್ತ ಚೈಕಾದಶೈವ ಚ ॥ ೬ ॥

ಕುಷ್ಠರೋಗವನ್ನು ವಿವರಿಸುತ್ತಾನೆ—ಪರಸ್ಪರ ವಿರುದ್ಧಗಳಾದ ಅಂದರೆ ಪರಸ್ಪರ ಸಂಯೋಗದಿಂದ ವಿಷಸ್ವಭಾವವನ್ನು ಹೊಂದಿ ದೋಷಪ್ರಕೋಪವನ್ನುಂಟುಮಾಡುವಂತಹ ಅನ್ನಪಾನಗಳು, ದ್ರವರೂಪವಾದ ಆಹಾರಗಳು, ಸ್ನೇಹಪ್ರಚುರವಾದ ಅಂದರೆ ಕೊಬ್ಬು ಹೆಚ್ಚಾದ ಆಹಾರಗಳು, ಗುರ್ವಾಹಾರಗಳು, ಇವುಗಳನ್ನು ಬಿಡದೆ ಸೇವಿಸುವುದು, ವಮನವನ್ನು ತಡೆಯುವುದು, ಮಲಮೂತ್ರಗಳ ವೇಗವನ್ನು ಅಂದರೆ ಮಲಮೂತ್ರಗಳ ಶಂಕೆಯುಂಟಾದಾಗ ತಡೆಯುವುದು, ಅತಿಯಾಗಿ ಭೋಜನಮಾಡಿ ಹೆಚ್ಚಿಗೆ ವ್ಯಾಯಾಮ ಮಾಡುವುದು, ಅತಿಯಾಗಿ ವ್ಯಸನಪಡುವುದು, ಬಿಸಿಲಿನಲ್ಲಿ ಅತಿಯಾಗಿ ಸಂಚರಿಸುವುದು, ಶಕ್ತಿಮೀರಿ ಶ್ರಮಪಡುವುದು, ಅತಿಯಾಗಿ ಹೆದರುವುದು, ಆಯಾಸಪಟ್ಟು ತಣ್ಣೀರನ್ನು ಕುಡಿಯುವುದು, ಅಜೀರ್ಣವಾಗಿದ್ದರೂ ಅಂದರೆ ತಿಂದದ್ದು ಜೀರ್ಣವಾಗುವ ಮೊದಲು ಮತ್ತೆ ಭೋಜನಮಾಡುವುದು, ಪಂಚಕರ್ಮಗಳು ಅಂದರೆ ವಮನ, ವಿರೇಚನ, ಬಸ್ತಿ ಮೊದಲಾದ ಐದು ಶರೀರಶೋಧನ ಕಾರ್ಯಗಳಲ್ಲಿ ತಪ್ಪು ಮಾಡುವುದು, ಹೊಸದಾದ ಧಾನ್ಯಗಳು, ಮೊಸರು, ಮೀನು, ಅತಿಯಾಗಿ ಉಪ್ಪು, ಅತಿಯಾದ ಹುಳಿ ಇವುಗಳನ್ನು ತಿನ್ನುವುದು, ಉದ್ದನ್ನು ಹೆಚ್ಚಾಗಿ ತಿನ್ನುವುದು, ಮೂಲಂಗಿ ಮೊದಲಾದ ಗೆಡ್ಡೆಗೆಣಸುಗಳನ್ನು ಅತಿಯಾಗಿ ತಿನ್ನುವುದು, ಹಿಟ್ಟಿನಿಂದ ತಯಾರಾದ ತಿಂಡಿಗಳನ್ನು ಹೆಚ್ಚಿಗೆ ತಿನ್ನುವುದು, ಎಳ್ಳು, ಹಾಲು, ಬೆಲ್ಲ ಇವುಗಳನ್ನು ವಿಶೇಷವಾಗಿ ತಿನ್ನುವುದು, ಶರೀರದಲ್ಲಿ ಅಜೀರ್ಣ ಬಾಧೆಯು ಇರು

ವಾಗ್ಯೆ ಸ್ತ್ರೀಸಂಗವು ಮಾಡುವುದು, ಹಗಲು ಹೊ[illegible] ನಿದ್ರೆಮಾಡುವುದು, ಸದ್ಬ್ರಾಹ್ಮಣರು, ಗುರುಗಳು ಇವರುಗಳನ್ನು ತಿರಸ[illegible]ವು, ಅನೇಕ ಪಾಪ ಕರ್ಮಗಳನ್ನು ಪ್ರತ್ಯಹವೂ ಆಚರಿಸುತ್ತಿರುವುದು, [illegible]ಣಗಳಿಂದ ವಾತಾದಿ ಮೂರು ದೋಷಗಳೂ ಏಕಕಾಲದಲ್ಲಿ ಪ್ರಕೋಪವ[illegible]ಂಡು ಶರೀರಗತವಾದ ಚರ್ಮ, ರಕ್ತ, ಮಾಂಸ, ಅಬ್ಧಾತು ಇವುಗಳನ್ನು [illegible] ಹಾಳುಮಾಡಿ ಕುಷ್ಠ ರೋಗವನ್ನು ಹುಟ್ಟಿಸುತ್ತವೆ, ಕುಷ್ಠರೋಗ ಹುಟ್ಟ[illegible] ವಾತ, ಪಿತ್ತ, ಕಫ ಗಳೆಂಬ ಮೂರು ದೋಷಗಳು, ರಸ, ರಕ್ತ, ಚ[illegible]ಾಂಸವೆಂಬ ನಾಲ್ಕು ದೇಹಗತವಾದ ವಸ್ತುಗಳೂ ಈ ಏಳೂ ಸಂಗ್ರಹಿ[illegible]ಬೇಕು ಈ ಏಳ ರಿಂದಲೂ ಕುಷ್ಠಗಳು ಹುಟ್ಟುತ್ತವೆ, ಈ ಕುಷ್ಠರೋಗ[illegible]ವಿಧವಾದ ಮಹಾ ಕುಷ್ಠವೆಂಬುದಾಗಿಯೂ ಹನ್ನೊಂದು ವಿಧವಾಗಿ ಕ್ಷು[illegible]ೆಂಬುವುದಾಗಿಯೂ ಹೇಳಲ್ಪಟ್ಟಿದೆ.

ಕುಷ್ಠಾನಿಸಪ್ತಧಾದೋಷೈಃಪೃಥಗ್ದ್ವಂ[illegible]ಾಗತ್ಯೈಃ ॥
ಸರ್ವೇಷ್ವಪಿತ್ರಿದೋಷೇಷುವ್ಯಪದೇಶೋ[illegible]ಃ ॥ ೭ ॥

ಕುಷ್ಠರೋಗದ ಉತ್ಪತ್ತಿಯು ಮೂರು ದೋ[illegible]ಕೋಪದಿಂದಲೂ ಆಗುತ್ತದೆಯಾದರೂ ಆ ಮೂರು ದೋಷಗಳ ಮಧ್ಯೆ [illegible] ದೋಷವು ಹೆಚ್ಚಿಗೆ ಪ್ರಕುಪಿತವಾಗಿರುತ್ತದೆಯೋ ಅಂತಹ ದೋಷೋಲ್ಬ[illegible] ಕುಷ್ಠವೆಂದು ವ್ಯವ ಹರಿಸಬೇಕಾಗುತ್ತದೆ ಎಂಬ ವಿಷಯವನ್ನು ಹೇಳುತ್ತಾ[illegible]ಷ್ಠರೋಗವು ವಾತ ಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರ[illegible]ಜನ್ಯ, ವಾತಪಿತ್ತ ಪ್ರಕೋಪಜನ್ಯ, ವಾತಶ್ಲೇಷ್ಮ ಪ್ರಕೋಪಜನ್ಯ, ಪಿ[illegible]ಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ ಎಂಬದಾಗಿ ಯಾವ ದೋ[illegible]ಹೆಚ್ಚಾಗಿ ಪ್ರಕುಪಿತ ವಾಗಿದೆಯೋ ಆ ದೋಷದ ಹೆಸರಿನಿಂದ ವ್ಯವಹರಿಸಲ್ಪ[illegible]ು ವಿಧವಾಗಿದೆ.

ದಾಹಃಕಂಡೂಸ್ತ್ವಚಿಸ್ವಾಪಃತೋದಃಕೋ[illegible]ನ್ನತಿಭ್ರ್ರಮಃ ॥
ವ್ರಣಾನಾಮಧಿಕಂಶೂಲಂಶೀಘ್ರೋತ್ಪತ್ತಿ[illegible]ಃ ॥ ೮ ॥
ರೂಢಾನಾಮಪಿರೂಕ್ಷತ್ವಂನಿಮಿತ್ತೇಲ್ಪೇತಿ[illegible]ಪನಂ ॥
ರೋಮಹರ್ಷೋಸೃಜಃಕಾರ್ಷ್ಣ್ಯಂಕುಷ್ಠ[illegible]ಾಮಗ್ರಜಂ ॥ ೯ ॥

ಕುಷ್ಠರೋಗದ ಲಕ್ಷಣವನ್ನು ಹೇಳುತ್ತಾನೆ—ಮೈ[illegible]ರಿ, ನವೆ, ಚರ್ಮವು ಮುಟ್ಟಿದರೆ ಗೊತ್ತಾಗುವುದಕ್ಕಿಲ್ಲ, ವ್ಯಥೆಯಾಗುತ್ತಿರು[illegible], ಬುದ್ಧಿಭ್ರಮಣೆ, ಗಾಯಗಳಲ್ಲಿ ಹೆಚ್ಚಾದ ನೋವು, ವ್ರಣಗಳು ಜಾಗ್ರ[illegible]ಾಗಿ ಹುಟ್ಟುವುದು ಬಹಳ ಕಾಲವಾದರೂ ಹಾಗೆಯೇ ನಿಲ್ಲುವುದು, ವ್ರಣಗಳಲ್ಲಿ ಯಾವಾಗಲೂ

ರೂಕ್ಷತ್ವಂ ಎಂದರೆ ಒರಟು ಗುಣವೇ, ಕೊಂಚ ಕಾರಣವಿದ್ದರೂ ವ್ರಣವು ಬಹಳ ವಾಗಿ ರೇಗುವುದು, ಯಾವಾಗಲೂ ರೋಮಾಂಚನವಾಗುತ್ತಿರುವುದು, ವ್ರಣ ಗಳಿಂದ ಹೊರಡುವ ರಕ್ತವು ಕಪ್ಪಗಿರುವುದು, ಇವು ಕುಷ್ಠರೋಗದಲ್ಲಿ ಕಾಣ ಬರುವ ಪ್ರಥಮ ಲಕ್ಷಣಗಳು.

ಕೃಷ್ಣಾರುಣಕಪಾಲಾಭಂಯದ್ರೂಕ್ಷಂಪರುಷಂತನು ॥
ಕಾಪಾಲಂತೋದಬಹುಳಂತತ್ಕುಷ್ಠಂವಿಷಮಂಸ್ಮೃತಂ ॥ ೧೦ ॥

ಮೊದಲು ಏಳು ವಿಧಗಳಾದ ಮಹಾಕುಷ್ಠಗಳ ಲಕ್ಷಣವನ್ನು ವಿಶದವಾಗಿ ಕ್ರಮವಾಗಿ ಹೇಳುತ್ತಾನೆ—ಕಪಾಲವೆಂಬ ಹೆಸರಿನ ಕುಷ್ಠರೋಗದಲ್ಲಿ ಚರ್ಮವು ಕಪ್ಪಗೂ ಮತ್ತು ಅರುಣವರ್ಣವಾಗಿಯೂ ಇರುವ ಬೊಕ್ಕೆಯಂತೆ ಇರುತ್ತದೆ, ಚರ್ಮವು ಜಿಡ್ಡಿಲ್ಲದ್ದಾಗಿಯೂ ಒರಟಾಗಿಯೂ ಇರುತ್ತದೆ, ವ್ಯಥೆ ಬಹಳವಾಗಿರು ತ್ತದೆ. ಇದಕ್ಕೆ ಕಪಾಲಕುಷ್ಠವೆಂದು ಹೆಸರು, ಇದು ಅತ್ಯಂತ ಭಯಂಕರವೂ ಕಷ್ಟಕರವೂ ಆದದ್ದು.

ರುಗ್ದಾಹರಾಗಕಂಡೂಭಿಃಪರೀತಂರೋಮಪಿಂಜರಂ ॥
ಉದುಂಬರಫಲಾಭಾಸಂಕುಷ್ಠಮೌದುಂಬರಂವದೇತ್ ॥ ೧೧ ॥

ವ್ಯಥೆ ಬಹಳ, ಉರಿಯೂ ಬಹಳ, ಚರ್ಮವೆಲ್ಲಾ ಕೆಂಪಗಾಗಿರುತ್ತದೆ, ಚರ್ಮದಲ್ಲಿ ನವೆ ಬಹಳ. ರೋಮಾಂಚವು ಬಹಳ, ನೋಡಿದರೆ ಅತ್ತಿಯ ಹಣ್ಣಿನ ಹಾಗೆ ಕಾಣುತ್ತಿರುವುದು, ಇದಕ್ಕೆ ಉದುಂಬರಕುಷ್ಠವೆಂಬ ಹೆಸರು.

ಶ್ವೇತಂರಕ್ತಂಸ್ಥಿರಂಸ್ತ್ಯಾನಂಸ್ನಿಗ್ಧಮುತ್ಸನ್ನಮಂಡಲಂ ॥
ಕೃಚ್ಛ್ರಮನ್ಯೋನ್ಯಸಂಯುಕ್ತಂಕುಷ್ಠಮಂಡಲಮುಚ್ಯತೇ ॥೧೨॥

ಮಂಡಲಕುಷ್ಠವೆನ್ನುವುದರ ಲಕ್ಷಣವೇನೆಂದರೆ—ಮೈಯಲ್ಲಿರುವ ಕುಷ್ಠ ವ್ರಣಗಳು ಬೆಳ್ಳಗೂ ಕೆಲವು ಕೆಂಪು ವರ್ಣವಾಗಿಯೂ ಸ್ಥಿರಂ ಎಂದರೆ ಗಟ್ಟಿ ಯಾಗಿಯೂ, ಸ್ತ್ಯಾನಂ ಎಂದರೆ ಯಾವಾಗಲೂ ನೀರಾಡುತ್ತಲೂ, ಕೊಂಚ ವಾಗಿ ಸ್ಪರ್ಶಮಾಡಿದರೆ ಜಿಡ್ಡು ತೋರುತ್ತಲೂ, ವ್ರಣವು ಗುಂಡಾಗಿ ಉಬ್ಬಿ ಕೊಂಡು ಇರುವುದಾಗಿಯೂ, ವ್ರಣಗಳು ಒಂದೊಂದೂ ಕಲಸಿಕೊಂಡೂ ಇರುವ ದಕ್ಕೆ ಮಂಡಲಕುಷ್ಠವೆಂದು ಹೆಸರು.

ಕರ್ಕಶಂರಕ್ತಪರ್ಯಂತಮಂತಶ್ಯಾವಂಸವೇದನಂ ॥
ಯದೃಷ್ಯಜಿಹ್ವಸಂಸ್ಥಾನಮೃಷ್ಯಜಿಹ್ವಂತದುಚ್ಯತೇ ॥ ೧೩ ॥

ಋಷ್ಯಜಿಹ್ವವೆಂಬ ಕುಷ್ಠವ್ರಣದ ಕೊನೆಯ ಭಾಗವು ಕಠಿನವಾಗಿ ಕೆಂಪಗೂ ನಡುವೆ ಹೊಗೆಯ ಬಣ್ಣವಾಗಿ ವೇದನೆಯೊಡನೆ ಕೂಡಿಯೂ ಒಂದು ಬಗೆಯ ಜಿಂಕೆಯ ನಾಲಿಗೆಯಂತೆ ಇರುತ್ತದೆ.

**ಸಶ್ವೇತಂರಕ್ತಪರ್ಯಂತಂಪುಂಡರೀಕದಳೋಪಮಂ ॥**
**ಸೋತ್ಸೇಧಂಚಸರಾಗಂಚಪುಂಡರೀಕಂತದುಚ್ಯತೇ ॥ ॥ ೧೪ ॥**

ಪುಂಡರೀಕವೆಂಬ ಕುಷ್ಠವು ಕಮಲದ ದಳದ ಹಾಗೆ ಬಿಳಪು ಮತ್ತು ಕೆಂಪು ಸಹ ಕೂಡಿದ ವರ್ಣವುಳ್ಳದ್ದಾಗಿ ಶರೀರದ ಇತರ ಭಾಗಗಳಿಗಿಂತ ವ್ರಣವಿರುವ ಭಾಗವು ಎತ್ತರವಾಗಿಯೂ ಬಿಳುಪು ಮಿಶ್ರಿತವಾದ ಕೆಂಪುವರ್ಣವುಳ್ಳದ್ದಾಗಿಯೂ ಇರುತ್ತದೆ.

**ಶ್ವೇತಂತಾಮ್ರಂತನುಚಯದ್ರಜೋಘೃಷ್ಟಂವಿಮುಂಚತಿ ॥**
**ಪ್ರಾಯಶ್ಚೋರಸಿತತ್ಸಿಧ್ಮಮಲಾಬುಕುಸುಮೋಪಮಂ ॥ ೧೫ ॥**

ಸಿಧ್ಮ ಎಂದರೆ ಚಿಬ್ಬು ಎಂಬುವುದು—ಇದು ಕೆಂಪಗೂ ಬೆಳ್ಳಗೂ ಇರುತ್ತದೆ, ಇದರ ವ್ರಣಗಳು ಮನುಷ್ಯನಿಗೆ ಗೊತ್ತಾಗದಷ್ಟು ತೆಳ್ಳಗಿರುತ್ತದೆ, ಉಜ್ಜಿದರೆ ಧೂಳಿನಂತೆ ಉದುರುತ್ತಿರುತ್ತದೆ, ಪ್ರಾಯೇಣ ಇದು ಎದೆಯ ಮೇಲೆ ಹೊಟ್ಟೆಯ ಮೇಲೆ ಇಂತಹ ಪ್ರದೇಶಗಳಲ್ಲಿಯೇ ಇರುತ್ತದೆ, ಹಾಲುಸೋರೆಯ ಹುವ್ವಿನ ಹಾಗಿರುತ್ತದೆ.

**ಯತ್ಕಾಕಣಂತಿಕಾವರ್ಣಂಸಪಾಕಂತೀವ್ರವೇದನಂ ॥**
**ತ್ರಿದೋಷಲಿಂಗಂತತ್ಕುಷ್ಠಂಕಾಕಣಂನ್ನೈವಸಿಧ್ಯತೇ ॥ ೧೬ ॥**

ಕಾಕಣವೆಂಬುವುದೊಂದು ಕುಷ್ಠ—ಇದರ ಬಣ್ಣವು ಗುಲಗಂಜಿಯ ಬಣ್ಣದಂತೆ ಕೆಂಪು ಬಣ್ಣವಾಗಿರುತ್ತದೆ, ಪಕ್ವವಾಗಿಯೂ ಅತ್ಯಧಿಕವಾದ ವೇದನೆಯುಳ್ಳದ್ದಾಗಿಯೂ ಇರುತ್ತದೆ, ಈ ಕಾಕಣವೆಂಬ ಕುಷ್ಠದಲ್ಲಿ ವಾತಾದಿ ಮೂರು ದೋಷಗಳ ಲಕ್ಷಣಗಳೂ ಇರುತ್ತವೆ, ಇದು ಚಿಕಿತ್ಸೆಯಿಂದ ಗುಣವಾಗುವುದಿಲ್ಲ.

**ಅಸ್ವೇದನಂಮಹಾವಾಸ್ತುಯನ್ಮತ್ಸ್ಯಶಕಲೋಪಮಂ ॥**
**ತದೇಕಕುಷ್ಠಂಚರ್ಮಾಖ್ಯಂಬಹುಲಂಹಸ್ತಿಚರ್ಮವತ್ ॥ ೧೭ ॥**

ಚರ್ಮಕುಷ್ಠವೆಂಬುವುದೊಂದು ಕ್ಷುದ್ರ ಕುಷ್ಠ—ಇದಿರುವ ಭಾಗವು ಬೆವರುವುದಿಲ್ಲ, ಶರೀರದ ಬಹಳ ಭಾಗವನ್ನು ವ್ಯಾಪಿಸಿಕೊಂಡಿರುತ್ತದೆ, ಮೀನಿನ ಹೈಯ್ಯಿನ ಹಾಗೆ ಆ ಭಾಗದಲ್ಲಿ ಪರೆಗಳು ಏಳುತ್ತಿರುತ್ತವೆ.

**ಶ್ಯಾವಂಕಿಣಖರಸ್ಪರ್ಶಂಪರುಷಂಕಿಟಿಮುಂಸ್ಮೃತಂ ॥**
**ವೈಪಾದಿಕಂಪಾಣಿಪಾದಸ್ಫುಟನಂತೀವ್ರವೇದನಂ ॥ ೧೮ ॥**

ಕಿಟಿಮವೆಂಬುವುದೊಂದು ಕುಷ್ಠ—ಇದಿರುವ ಭಾಗದಲ್ಲಿ ಬಣ್ಣವು ಧೂಮ್ರವರ್ಣವಾಗಿರುತ್ತದೆ, ಚರ್ಮವು ಆನೆಯ ಚರ್ಮದಂತಿರುತ್ತದೆ, ವ್ರಣವನ್ನು ಮುಟ್ಟಿ ನೋಡಿದರೆ ಕಠಿನವಾಗಿರುತ್ತದೆ, ಕ್ರೂರವಾದ ವೇದನೆಯಿರುತ್ತದೆ, ವೈಪಾದಿಕವೆಂಬುವುದೊಂದು ಬಗೆಯ ಕುಷ್ಠ—ಇದರಲ್ಲಿ ಕೈಕಾಲು ಬೆರಳುಗಳೆಲ್ಲವೂ ಒಡೆದು ಹೋಗಿರುತ್ತವೆ, ಕಠಿನವಾದ ವೇದನೆಯಿರುತ್ತದೆ.

**ಕಂಡೂಮದ್ಭಿಸ್ಸರಾಗೈಶ್ಚಗಂಡೈರಲಸಕಂಚಿತಂ ॥**
**ಸಕಂಡೂರಾಗಪಿಡಕಂದದ್ರುಮಂಡಲಮುದ್ಗತಂ ॥ ೧೯ ॥**

ಅಲಸಕವೆಂಬ ಕುಷ್ಠವು ನವೆಯಿಂದ ಕೂಡಿದ ಕೆಂಪಾದ ಗುಳ್ಳೆಗಳಿಂದ ವ್ಯಾಪ್ತವಾಗಿರುತ್ತದೆ. ದದ್ರುಮಂಡಲವೆಂಬ ಕುಷ್ಠವು ನವೆಯಿಂದ ಕೂಡಿದ ಕೆಂಪಾದ ಸಣ್ಣ ಸಣ್ಣ ಬಕ್ಕೆಗಳಿಂದ ಕೂಡಿಕೊಂಡಿರುತ್ತದೆ.

**ರಕ್ತಂಸಶೂಲಂಕಂಡೂಮತ್ಸಸ್ಫೋಟಂಯುದ್ಗಳತ್ಯಪಿ ॥**
**ತಚ್ಚರ್ಮದಳಮಾಖ್ಯಾತಂಸಂಸ್ಪರ್ಶಾಸಹಮುಚ್ಯತೇ ॥ ೨೦ ॥**

ಚರ್ಮದಳವೆಂಬ ಕುಷ್ಠವು ಕೆಂಪು ಬಣ್ಣವಾಗಿರುತ್ತದೆ, ಪಡತ ನವೆ ಇವುಗಳಿರುತ್ತವೆ, ಗುಳ್ಳೆಗಳಿಂದ ಕೂಡಿರುತ್ತವೆ, ಮುಟ್ಟುವುದಕ್ಕಾಗುವುದಿಲ್ಲ, ಸೋರುತ್ತಿರುತ್ತದೆ.

**ಸೂಕ್ಷ್ಮಾಬಹ್ವ್ಯಃಪಿಡಕಾಸ್ರಾವವತ್ಯಃಪಾಮೇತ್ಯುಕ್ತಾಃಕಂಡುಮತ್ಯಸ್ಸದಾಹಾಃ ॥**
**ಸೈವಸ್ಫೋಟೈಸ್ತೀವ್ರದಾಹೈರುಪೇತಾಜ್ಞೇಯಾಪಾಣ್ಯೋಃ ಕಚ್ಛುರುಗ್ರಾಸ್ಫಿಚೋಶ್ಚ ॥ ೨೧ ॥**

ಪಾಮಾ ಎಂದರೆ ಕಜ್ಜಿಗೆ ಹೆಸರು, ಸಣ್ಣ ಪುಟ್ಟ ಅನೇಕ ಬಕ್ಕೆಗಳು ನೀರಾಡುತ್ತ ನವೆಯಿಂದಲೂ ಉರಿಯಿಂದಲೂ ಕೂಡಿದ್ದರೆ ಪಾಮಾ ಎನ್ನಿಸಿಕೊಳ್ಳುತ್ತವೆ, ಈ ಕಜ್ಜಿಗಳು ಭಯಂಕರವಾದ ಉರಿಯೊಡನೆಯೂ ನವೆಯೊಡನೆಯೂ ಕೂಡಿ ಕೈಗಳಲ್ಲಿ ಅಂಡುಗಳಲ್ಲಿ ಇರುತ್ತವೆ.

**ಸ್ಫೋಟಾಶ್ಯಾವಾರುಣಾಭಾಸಾವಿಸ್ಫೋಟಾಸ್ಯುಸ್ತನುತ್ವಚಃ ॥**
**ರಕ್ತಂಶ್ಯಾವಂಸದಾಹಾರ್ತಿಶತಾರುಃಸ್ಯಾದ್ಬಹುವ್ರಣಂ ॥ ೨೨ ॥**

ಕೆಂಪಗೂ ಧೂಮ್ರವರ್ಣವಾಗಿಯೂ ಇರುವ, ಮುಟ್ಟಿದರೊಡೆದುಹೋಗು ತಕ್ಕಂತಹ ಗುಳ್ಳೆಗಳಿಗೆ ವಿಸ್ಫೋಟಗಳೆಂದು ಹೆಸರು. ಕೆಂಪಗೂ ಧೂಮ್ರವರ್ಣ ವಾಗಿಯೂ ಇರುವ ಮತ್ತು ಉರಿ ಬಾಧೆ ಬಹಳವಾಗಿರುವ ಬಕ್ಕೆಗಳ ಗುಂಪಿಗೆ ಶತಾರು ಎಂಬದಾಗಿ ಹೆಸರು.

ಸಕಂಡೂಃಪಿಡಕಾಶ್ಯಾವಾಬಹುಸ್ರಾವಾವಿಚರ್ಚಿಕಾ ॥

ವಿಚರ್ಚಿಕ ಎಂಬುವುದೊಂದು ಬಗೆಯ ಕುಷ್ಠ, ಇದರಲ್ಲಿ ಬಕ್ಕೆಗಳು ಹೊಗೆಯ ಬಣ್ಣದವಾಗಿರುತ್ತವೆ, ನವೆ ಬಹಳವಾಗಿರುತ್ತವೆ, ಯಾವಾಗಲೂ ಒಂದು ಬಗೆಯ ದ್ರವವು ಆ ಬಕ್ಕೆಗಳಿಂದ ಹೊರಬೀಳುತ್ತಲೇ ಇರುತ್ತದೆ.

ಖರಂಶ್ಯಾವಾರುಣಂರೂಕ್ಷಂವಾತಕುಷ್ಠಂಸವೇದನಂ ॥ ೨೩ ॥
ಪಿತ್ತಾತ್ಪ್ರಕುಥಿತಂದಾಹರಾಗಸ್ರಾವಾನ್ವಿತಂಮತಂ ॥
ಕಫಾತ್ಕ್ಲೇದಿಘನಂಸ್ನಿಗ್ಧಂಸಕಂಡೂಶೈತ್ಯಗೌರವಂ ॥ ೨೪ ॥
ದ್ವಿಲಿಂಗಂದ್ವಂದ್ವಜಂಕುಷ್ಠಂತ್ರಿಲಿಂಗಂಸಾನ್ನಿಪಾತಿಕಂ ॥

ದೋಷಭೇದನಿಮಿತ್ತಕವಾದ ಕುಷ್ಠರೋಗದ ಲಕ್ಷಣವನ್ನು ಹೇಳುತ್ತಾನೆ— ವಾತಪ್ರಕೋಪಜನ್ಯವಾದ ಕುಷ್ಠರೋಗದಲ್ಲಿ ಕುಷ್ಠವಿರುವ ಭಾಗವನ್ನು ಮುಟ್ಟಿ ನೋಡಿದಲ್ಲಿ ಕಠಿನವಾಗಿರುತ್ತದೆ, ಕಣ್ಣಿನಿಂದ ನೋಡಿದರೆ ಧೂಮ್ರವರ್ಣವಾಗಿ ಯೂ ಕೆಂಪಗೂ ಇರುತ್ತದೆ, ವ್ರಣದ ಮೇಲುಭಾಗದಲ್ಲಿ ಕೈಯಿಟ್ಟರೆ ಜಿಡ್ಡಿರುವು ದಕ್ಕಿಲ್ಲ, ವೇದನೆ ಬಹಳವಾಗಿರುವುದು, ಪಿತ್ತಪ್ರಕೋಪಜನ್ಯವಾದ ಕುಷ್ಠರೋಗ ದಲ್ಲಿ ಕುಷ್ಠವ್ರಣವಿರುವ ಭಾಗವು ಬೆಂದುಹೋದಂತಾಗಿರುತ್ತದೆ, ಆ ಭಾಗವಲ್ಲಿ ಉರಿ, ಕೆಂಪುಸ್ರಾವ ಇವುಗಳು ಇರುತ್ತವೆ, ಕಫಪ್ರಕೋಪಜನ್ಯವಾದ ಕುಷ್ಠರೋಗ ದಲ್ಲಿ ಆ ಭಾಗದಲ್ಲಿ ದ್ರವಿಸುತ್ತಿರುವುದು, ವ್ರಣವು ಗಟ್ಟಿಯಾಗಿ ಜಿಡ್ಡಾಗಿರುವುದು, ವ್ರಣದಲ್ಲಿ ನವೆ, ಶೈತ್ಯ, ಗುರುತ್ವ ಇವುಗಳಿರುವುದು, ಎರಡೆರಡು ದೋಷಗಳು ಪ್ರಕೋಪ ಹೊಂದಿದಲ್ಲಿ ಪ್ರಕುಪಿತಗಳಾದ ಎರಡು ದೋಷಗಳ ಲಕ್ಷಣಗಳೂ ತ್ರಿದೋಷಸನ್ನಿಪಾತಜನ್ಯವಾದ ಕುಷ್ಠರೋಗದಲ್ಲಿ ಪ್ರಕುಪಿತಗಳಾದ ಮೂರು ದೋಷಗಳ ಲಕ್ಷಣಗಳೂ ಕಾಣಬರುತ್ತಿರುತ್ತವೆ.

ತ್ವಕ್ಸ್ಥೇವೈವರ್ಣ್ಯಮಂಗೇಷುಕುಷ್ಠೇರೌಕ್ಷ್ಯಂಚಜಾಯತೇ ॥೨೫॥
ತ್ವಕ್ಸ್ವಾಪೋರೋಮಹರ್ಷಶ್ಚಸ್ವೇದಸ್ಯಾತಿಪ್ರವರ್ತನಂ ॥

ಕುಷ್ಠವ್ರಣವು ಚರ್ಮವನ್ನು ಆಶ್ರಯಿಸಿದ್ದಲ್ಲಿ ಅವಯವಗಳು ಬಣ್ಣಗೆಟ್ಟು ಹೋಗುವುದು, ಕುಷ್ಠವ್ರಣವು ಮುಟ್ಟಿದರೆ ತರಕಲಾಗಿ ಜಿಡ್ಡಿಲ್ಲದಂತೆ ಕಾಣು

ವುದು, ಚರ್ಮದಲ್ಲಿ ಸ್ಪರ್ಶಜ್ಞಾನವು ಹೋಗಿಬಿಡುವುದು, ರೋಮಾಂಚನವಾಗುವುದು, ಹೆಚ್ಚಿಗೆ ಬೆವರು ಬರುವುದು, ಇದೆಲ್ಲವೂ ಆಗುತ್ತದೆ.

ಕಂಡೂಃಪೂಯಕಶ್ಚೈವಕುಷ್ಠೇಶೋಣಿತಸಂಶ್ರಿತೇ ॥ ೨೬ ॥

ಕುಷ್ಠರೋಗವು ರಕ್ತದಲ್ಲಿ ವ್ಯಾಪಿಸಿದ್ದರೆ ಶರೀರದಲ್ಲಿ ನವೆ, ಕೆರದರೆ ಹೆಚ್ಚಾಗಿ ಕೀವು ಬರುವುದು ಇವು ಲಕ್ಷಣಗಳು.

ಬಾಹುಲ್ಯಂವಕ್ತ್ರಶೋಷಶ್ಚ ಕಾರ್ಕಶ್ಯಂಪಿಡಕೋದ್ಗಮಃ ॥
ತೋದಃಸ್ಫೋಟಃಸ್ಥಿರತ್ವಂಚಕುಷ್ಠೇಮಾಂಸಸಮಾಶ್ರಿತೇ ॥ ೨೭ ॥

ಕುಷ್ಠರೋಗವು ಮಾಂಸದಲ್ಲಿ ವ್ಯಾಪಿಸಿಕೊಂಡಿದ್ದಲ್ಲಿ ಮುಖವು ಬಾಡಿಹೋಗುವುದು, ಕುಷ್ಠವ್ರಣವು ವ್ಯಾಪಿಸಿರುವ ಭಾಗವು ಕಠಿನವಾಗಿರುವುದು, ಗುಳ್ಳೆಗಳೇಳುವುದು, ವ್ಯಥೆ ಬಹಳ ಹೆಚ್ಚುತ್ತಿರುವುದು, ಮೈಯ್ಯೆಲ್ಲಾ ಬಿರಕು ಬಿಟ್ಟು ಒಡೆಯುವುದು, ಚರ್ಮವು ಗಟ್ಟಿಯಾಗಿರುವುದು, ಇವು ಮಾಂಸಗತ ಕುಷ್ಠದ ಲಕ್ಷಣಗಳು.

ಕೌಣ್ಯಂಗತಿಕ್ಷಯೋಂಗಾನಾಂಸಂಭೇದಃಕ್ಷತಸರ್ಪಣಂ ॥
ಮೇದಸ್ಥಾನಗತೇಲಿಂಗಂಪ್ರಾಗುಕ್ತಾನಿತಥೈವಚ ॥ ೨೮ ॥

ಕುಷ್ಠರೋಗವು ಮೇದೋಧಾತುವನ್ನಾಶ್ರಯಿಸಿ ಉತ್ಪನ್ನವಾದರೆ—ಕೈಕಾಲು ಬೆರಳುಗಳೆಲ್ಲವೂ ಕ್ರಮವಾಗಿ ಮೊಂಡವಾಗುತ್ತ ಬರುವುದಲ್ಲದೆ ಗಮನಾಗಮನ ಶಕ್ತಿಯಿಲ್ಲದಂತಾಗುವುದು, ಅವಯವಗಳೆಲ್ಲಾ ಒಡೆದು ಸೋರುವುದು, ಕ್ರಮೇಣ ವ್ರಣಗಳು ಮೈಯ್ಯೆಲ್ಲೆಲ್ಲ ವ್ಯಾಪಿಸುತ್ತ ಬರುವುದು, ಅಲ್ಲದೆ ಹಿಂದೆ ಹೇಳಿದ ಕುಷ್ಠರೋಗದ ಲಕ್ಷಣಗಳೆಲ್ಲವೂ ತೋರುತ್ತ ಬರುವುದು.

ನಾಸಾಭಂಗೋಕ್ಷಿರಾಗಶ್ಚ ಕ್ಷತೇಷುಕ್ರಿಮಿಸಂಭವಃ ॥
ಸ್ವರೋಪಘಾತಶ್ಚ ಭವೇದಸ್ಥಿಮಜ್ಜಸಮಾಶ್ರಿತೇ ॥ ೨೯ ॥

ಕುಷ್ಠರೋಗವು ಅಸ್ಥಿ ಮತ್ತು ಮಜ್ಜಧಾತುಗಳನ್ನು ಆಶ್ರಯಿಸಿ ವ್ಯಾಪಿಸಿದ್ದರೆ ವ್ರಣವು ಮೂಗಿಗೆ ಹತ್ತಿ ಮೂಗನ್ನೆಲ್ಲ ತಿಂದುಕೊಳ್ಳುತ್ತ ಬರುವುದು, ಕಣ್ಣು ಯಾವಾಗ್ಯೂ ಕೆಂಪಾಗಿಯೇ ಇರುವುದು, ವ್ರಣಗಳಲ್ಲಿ ಬಹಳವಾಗಿ ಕ್ರಿಮಿಗಳು ಹುಟ್ಟುವುದು, ರೋಗಿಯ ಧ್ವನಿ ಕೆಟ್ಟು ಹೋಗುವುದು ಇವು ಲಕ್ಷಣಗಳು.

ದಂಪತ್ಯೋಃಕುಷ್ಠಬಾಹುಲ್ಯಾದ್ದುಷ್ಟಶೋಣಿತಶುಕ್ರಯೋಃ ॥
ಯದಪತ್ಯಂತಯೋರ್ಜಾತಂಜ್ಞೇಯಂತದಪಿಕುಷ್ಠಿತಂ ॥ ೩೦ ॥

ಗಂಡಹೆಂಡತಿಯರಿಬ್ಬರಿಗೂ ಆಗಲಿ ಅವರಲ್ಲಿ ಯಾರಾದರೂ ಒಬ್ಬರಿಗಾಗಲಿ ಕುಷ್ಠರೋಗವು ವ್ಯಾಪಿಸಿಕೊಂಡಿದ್ದು ಅದರಿಂದ ಶುಕ್ರಶೋಣಿತಗಳು ಕೆಟ್ಟು ಕುಷ್ಠರೋಗದ ಬೀಜವು ಅವುಗಳಲ್ಲಿ ವ್ಯಾಪಿಸಿದ್ದು ಆ ಕಾಲದಲ್ಲಿ ನಡೆದ ಸಂಯೋಗದಿಂದ ಉತ್ಪನ್ನವಾದ ಗರ್ಭವು ಕೂಡ ಕುಷ್ಠರೋಗಗ್ರಸ್ತವೇ ಆಗಿ ಮುಂದೆ ಹುಟ್ಟುವ ಮಕ್ಕಳೂ ಕೂಡ ಕುಷ್ಠರೋಗಿಗಳೇ ಆಗುತ್ತಾರೆ.

ಸಾಧ್ಯಂತ್ವಕ್ರಕ್ತಮಾಂಸಸ್ಥಂವಾತಶ್ಲೇಷ್ಮಾಧಿಕಂಚಯತ್ ॥
ಮೇದಸಿದ್ವಂದ್ವಜಂಯಾಪ್ಯಂವರ್ಜ್ಯಂಮಜ್ಜಾಸ್ಥಿಸಂಶ್ರಿತಂ ॥ ೩೧ ॥
ಕ್ರಿಮಿತೃಡ್ದಾಹಮಂದಾಗ್ನಿಸಂಯುಕ್ತಂಯತ್ತ್ರಿದೋಷಜಂ ॥
ಪ್ರಭಿನ್ನಂಪ್ರಸ್ರುತಾಂಗಂಚರಕ್ತನೇತ್ರಂಹತಸ್ವರಂ ॥ ೩೨ ॥
ಪಂಚಕರ್ಮಗುಣಾತೀತಂಕುಷ್ಠಂಹಂತೀಹಮಾನವಂ ॥

ಕುಷ್ಠರೋಗದ ಸಾಧ್ಯಾಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ—ಚರ್ಮ, ರಕ್ತ, ಮಾಂಸ ಇವುಗಳಲ್ಲಿ ವ್ಯಾಪಿಸಿರುವ ಕುಷ್ಠರೋಗವು ಸಾಧ್ಯವೆಂದು ತಿಳಿಯಬೇಕು, ಹಾಗೆಯೇ ವಾಯು ಮತ್ತು ಶ್ಲೇಷ್ಮ ಇವುಗಳ ಪ್ರಕೋಪವು ಹೆಚ್ಚಾಗಿದ್ದು ಉಂಟಾಗುವ ಕುಷ್ಠರೋಗವೂ ಸಾಧ್ಯವೆಂದೇ ತಿಳಿಯಬೇಕು, ಮೇದೋಧಾತುವನ್ನು ಆಶ್ರಯಿಸಿದ್ದರೂ ಎರಡು ದೋಷಗಳ ಪ್ರಕೋಪದಿಂದ ಹುಟ್ಟಿದ್ದರೂ ಕುಷ್ಠರೋಗವು ಯಾಪ್ಯ ಎಂದರೆ ಕಾಲಹರಣವಾಗತಕ್ಕದ್ದೆಂದು ತಿಳಿಯಬೇಕು, ಮಜ್ಜಾಧಾತು ಮತ್ತು ಅಸ್ಥಿ ಇವುಗಳನ್ನು ಆಶ್ರಯಿಸಿ ಹುಟ್ಟಿರುವ ಕುಷ್ಠರೋಗವು ಚಿಕಿತ್ಸೆಗೆ ಸಾಧ್ಯವಿಲ್ಲವೆಂದು ಬಿಟ್ಟು ಬಿಡತಕ್ಕದ್ದು, ಕುಷ್ಠವ್ರಣದಲ್ಲಿ ಕ್ರಿಮಿಗಳು ಉತ್ಪನ್ನವಾಗಿರುವುದು, ರೋಗಿಗೆ ಬಾಯಾರಿಕೆ ಇರುವುದು, ಉರಿ ಇರುವುದು, ಅಗ್ನಿಮಾಂದ್ಯವಿರುವುದು, ಮೂರು ದೋಷಗಳೂ ಪ್ರಕುಪಿತಗಳಾದಂತೆ ಲಕ್ಷಣಗಳು ಕಾಣುತ್ತಿರುವುದು, ವ್ರಣವೆಲ್ಲಾ ಒಡೆದು ಹೋಗಿ ದ್ರವಿಸುತ್ತಿರುವುದು, ಕಣ್ಣು ಕೆಂಪಾಗಿರುವುದು, ಸ್ವರ ಕೆಟ್ಟು ಹೋಗಿರುವುದು, ವಮನ, ವಿರೇಚನಾದಿಪಂಚ ಕರ್ಮಗಳನ್ನು ಪ್ರಯೋಗಿಸಿದರೂ ಗುಣವಾಗುವ ಸ್ಥಿತಿಯನ್ನು ಮೀರಿರುವುದು, ಇಂತಹ ಸ್ಥಿತಿಯಲ್ಲಿರುವ ಕುಷ್ಠರೋಗವು ಮನುಷ್ಯನನ್ನು ಕೊಲ್ಲುತ್ತದೆ.

ವಾತೇನಕುಷ್ಠಂಕಾಪಾಲಂಪಿತ್ತೇನೌದುಂಬರಂಕಫಾತ್ ॥ ೩೩ ॥
ಮಂಡಲಾಖ್ಯಂವಿಚರ್ಚೀಚಋಷ್ಯಾಖ್ಯಂವಾತಪಿತ್ತಜಂ ॥
ಚರ್ಮೈಕಕುಷ್ಠಂಕಿಟಿಮಂಸಿಧ್ಮಾಲಸವಿಪಾದಿಕಾಃ ॥ ೩೪ ॥
ವಾತಶ್ಲೇಷ್ಮೋದ್ಭವಾಶ್ಲೇಷ್ಮಪಿತ್ತಾದ್ದದ್ರುಶತಾರುಷೀ ॥
ಪುಂಡರೀಕಂಸವಿಸ್ಫೋಟಂಪಾಮಾಚರ್ಮದಳಂತಥಾ ॥ ೩೫ ॥

**ಸರ್ವೈಃ ಸ್ಯಾತ್ ಕಾಕಣಂ ಪೂರ್ವತ್ರಿಕಂ ದದ್ರು ಸಕಾಕಣಂ ॥**
**ಪುಂಡರೀಕರ್ಷ್ಯಜಿಹ್ವೇ ಚ ಮಹಾಕುಷ್ಠಾನಿ ಸಪ್ತ ತು ॥ ೩೬ ॥**

ಕಪಾಲಕುಷ್ಠವೆಂಬುವುದು ವಾತಪ್ರಕೋಪಜನ್ಯವು, ಉದುಂಬರ ಕುಷ್ಠವೆಂಬುವುದು ಪಿತ್ತಪ್ರಕೋಪಜನ್ಯವು, ಮಂಡಲಕುಷ್ಠವೆಂಬುವುದು ಕಫಪ್ರಕೋಪಜನ್ಯವು, ವಿಚರ್ಚಿ ಎಂಬುವುದೂ ಋಷ್ಯಜಿಹ್ವವೆಂಬುವುದೂ ವಾತ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟಿದವುಗಳು, ಚರ್ಮಕುಷ್ಠ, ಕಿಟಿಮ, ಸಿಧ್ಮ, ಅಲಸ, ವಿಪಾದಿಕ, ಇವುಗಳು ವಾತ ಮತ್ತು ಶ್ಲೇಷ್ಮ ಪ್ರಕೋಪಜನ್ಯಗಳು, ದದ್ರು, ಶತಾರು, ಪುಂಡರೀಕ, ವಿಸ್ಫೋಟ, ಪಾಮಾ, ಚರ್ಮದಳ, ಇವುಗಳು ಶ್ಲೇಷ್ಮ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟಿದವುಗಳು, ಕಾಕಣವೆಂಬ ಕುಷ್ಠವು ಮೂರು ದೋಷಗಳ ಪ್ರಕೋಪದಿಂದಲೂ ಹುಟ್ಟತಕ್ಕದ್ದು, ಕಪಾಲ, ಉದುಂಬರ, ಮಂಡಲ, ದದ್ರು, ಕಾಕಣ, ಪುಂಡರೀಕ, ಋಷ್ಯಜಿಹ್ವ ಇವು ಏಳೂ ಮಹಾಕುಷ್ಠಗಳೆಂದು ಹೇಳಿಸಿಕೊಳ್ಳುತ್ತವೆ.

**ಕುಷ್ಠೈಕಸಂಭವಂ ಶ್ವಿತ್ರಂ ಕಿಲಾಸಂ ದಾರುಣಂ ಭವೇತ್ ॥**
**ನಿರ್ದಿಷ್ಟಮಪರಿಸ್ರಾವಿ ತ್ರಿಧಾತೂದ್ಭವಸಂಶ್ರಯಂ ॥ ೩೭ ॥**
**ವಾತಾದ್ರೂಕ್ಷಾರುಣಂ ಪಿತ್ತಾತ್ತಾಮ್ರಂ ಕಮಲಪತ್ರವತ್ ॥**
**ಸದಾಹಂ ರೋಮವಿಧ್ವಂಸಿ ಕಫಾತ್ ಶ್ವೇತಂ ಘನಂ ಗುರು ॥ ೩೮ ॥**
**ಸಕಂಡುರಂ ಕ್ರಮಾದ್ರಕ್ತಮಾಂಸಮೇದಸ್ಸು ಚಾದಿಶೇತ್ ॥**
**ವರ್ಣೇನೈವೇದೃಗುಭಯಂ ಕೃಚ್ಛ್ರಂ ತಚ್ಚೋತ್ತರೋತ್ತರಂ ॥ ೩೯ ॥**

ತೊನ್ನು ಎಂಬುವುದೊಂದು ಬಗೆಯ ಕುಷ್ಠರೋಗಗಳಿಗೇ ಸೇರಿದುದು. ಇದು ಶ್ವಿತ್ರ ಎಂದರೆ ಬೆಳ್ಳಗಿರುವುದು, ಅರುಣ ಎಂದರೆ ಸ್ವಲ್ಪ ಕೆಂಪು ಛಾಯೆಯುಳ್ಳದ್ದು ಎಂಬ ರೀತಿಯಿಂದ ಎರಡು ವಿಧ, ವಾತ ಪಿತ್ತ ಶ್ಲೇಷ್ಮಗಳೆಂಬ ದೋಷತ್ರಯಗಳ ಪ್ರಕೋಪದಿಂದ ಹುಟ್ಟತಕ್ಕದ್ದು, ಹಿಂದೆ ಹೇಳಿರುವ ಕುಷ್ಠದಂತೆಯೇ ರಕ್ತ, ಮಾಂಸ, ಮೇದಸ್ಸು ಇವುಗಳನ್ನೇ ಅವಲಂಬಿಸಿಕೊಂಡು ಹುಟ್ಟುತ್ತದೆ, ವಾತಪ್ರಕೋಪಜನ್ಯವಾದ ಶ್ವಿತ್ರವು ಕೆಂಪಗೆ ಜಿಡ್ಡಿಲ್ಲದ್ದಾಗಿಯೂ ಪಿತ್ತಪ್ರಕೋಪಜನ್ಯವಾದರೆ ತಾಮ್ರವರ್ಣವಾಗಿ ಅಂದರೆ ಕಮಲದ ಎಲೆಯ ಹಾಗೆ ಬಿಳುಪು ಕೂಡಿದ ಕೆಂಪುವರ್ಣವಾಗಿ ಉರಿಯಿಂದ ಕೂಡಿ ಕೂದಲು ಉದುರಿಹೋಗಿಯೂ ಕಫಪ್ರಕೋಪಜನ್ಯವಾದರೆ ಬೆಳ್ಳಗೆ ಗುರುಗುಣವುಳ್ಳದ್ದಾಗಿ ನವೆಯಿಂದ ಕೂಡಿಯೂ ಇರುತ್ತದೆ. ಇದಿರತಕ್ಕ ವರ್ಣವನ್ನು ನೋಡಿಕೊಂಡು ರಕ್ತ, ಮಾಂಸ, ಮೇದಸ್ಸು ಇವುಗಳನ್ನು ಆಶ್ರಯಿಸಿರುವುದನ್ನೂ ನಿಶ್ಚಯಿಸುವುದು, ಹಿಂದೆ ಹೇಳಿರುವ ಕ್ರಮವನ್ನನುಸರಿಸಿಯೇ ಒಂದಕ್ಕಿಂತ ಆದರ ಮುಂದಲದು ಕಷ್ಟಸಾಧ್ಯ ಎಂಬ ವಿಷಯವನ್ನೂ ಊಹಿಸಿಕೊಳ್ಳಬೇಕು.

**ಅಶುಕ್ಲರೋಮಬಹುಳಮಸಂಶ್ಲಿಷ್ಟಮಥೋನವಂ ॥**
**ಅನಗ್ನಿದಗ್ಧಜಂಸಾಧ್ಯಂಶ್ವಿತ್ರಂವರ್ಜ್ಯಮತೋಽನ್ಯಥಾ ॥ ೪೦ ॥**

ಬಿಳಿಯತೊನ್ನು ಎಂಬ ಕುಷ್ಠದ ಸಾಧ್ಯಾಸಾಧ್ಯಲಕ್ಷಣವನ್ನು ಹೇಳುತ್ತಾನೆ— ಬಿಳಿಯತೊನ್ನು ಹತ್ತಿರುವ ಕಡೆಯಲ್ಲಿ ಕೂದಲುಗಳು ಕೂಡಾ ಬೆಳ್ಳಗಾಗಿದ್ದಲ್ಲಿ ಅದು ಅಸಾಧ್ಯವೆಂದು ತಿಳಿಯಬೇಕು, ಕೂದಲುಗಳಿನ್ನೂ ಬೆಳ್ಳಗಾಗದಿದ್ದಲ್ಲಿ ಅದು ಸಾಧ್ಯವೆಂದು ತಿಳಿಯಬೇಕು, ಬೆಳ್ಳಗಾಗಿರುವುದು ಅಲ್ಲಲ್ಲಿದ್ದು ಕ್ರಮೇಣ ಅದೆಲ್ಲ ಕಲಸಿಹೋಗುವವದಕ್ಕಿಂತ ಮೊದಲು ಸಾಧ್ಯವೆಂದು ತಿಳಿಯಬೇಕು, ಆಗ ತಾನೆ ಪ್ರಾರಂಭವಾಗಿರುವ ಬಿಳಿಯತೊನ್ನು ಚಿಕಿತ್ಸೆಗೆ ಸಾಧ್ಯವೆಂದು ತಿಳಿಯಬೇಕು, ಬೆಂಕಿಯಿಂದ ಸುಟ್ಟುಹೋಗಿ ಆ ಕಾರಣದಿಂದ ಬೆಳ್ಳಗಾಗಿರುವ ಶ್ವಿತ್ರವೂ ಸಾಧ್ಯವೇ, ಈ ರೀತಿ ವಿನಹಾ ಇದಕ್ಕೆ ವಿಪರೀತ ಕಾರಣವುಳ್ಳಗಳಾದ ಸಮಸ್ತವಿಧಗಳಾದ ಶ್ವೇತಕುಷ್ಠಗಳೂ ಅಸಾಧ್ಯಗಳೆಂದೇ ತಿಳಿದುಕೊಳ್ಳಬಹುದು.

**ಗುಹ್ಯಪಾಣಿತಲೌಷ್ಠೇಷುಜಾತಮಪ್ಯಚಿರಂತನಂ ॥**
**ವರ್ಜನೀಯಂವಿಶೇಷೇಣಕಿಲಾಸಂಸಿದ್ಧಿಮಿಚ್ಛತಾ ॥ ೪೧ ॥**

ಮರ್ಮಸ್ಥಾನದಲ್ಲಿ, ಅಂಗೈಗಳಲ್ಲಿ, ತುಟಿಯಲ್ಲಿ, ಈ ಪ್ರದೇಶಗಳಲ್ಲಿ ಬಿಳೀ ತೊನ್ನು ಪ್ರಾಪ್ತವಾಯಿತೆಂದರೆ ಅದು ಹೊಸತಿರಲಿ ಹಳೆಯದಿರಲಿ ಯಶಸ್ಸನ್ನು ಅಪೇಕ್ಷಿಸುವ ವೈದ್ಯನು ಅದನ್ನು ಚಿಕಿತ್ಸಿಸಲು ಒಪ್ಪಿಕೊಳ್ಳಬಾರದು, ಅಂದರೆ ಅದು ಗುಣವಾಗುವುದಿಲ್ಲ.

**ಪ್ರಸಂಗಾದ್ಗಾತ್ರಸಂಸ್ಪರ್ಶಾನ್ನಿಶ್ವಾಸಾತ್ಸಹಭೋಜನಾತ್ ॥**
**ಏಕಶಯ್ಯಾಸನಾಚ್ಚೈವವಸ್ತ್ರಮಾಲ್ಯಾನುಲೇಪನಾತ್ ॥ ೪೨ ॥**
**ಕುಷ್ಠಂಜ್ವರಶ್ಚಶೋಷಶ್ಚನೇತ್ರಾಭಿಷ್ಯಂದಏವಚ ॥**
**ಔಪಸರ್ಗಿಕರೋಗಾಶ್ಚಸಂಕ್ರಾಮಂತಿನರಾನ್ನರಂ ॥ ೪೩ ॥**

ಸಾಂಕ್ರಾಮಿರೋಗಗಳ ವಿಷಯವನ್ನು ಕುರಿತು ಸಾಮಾನ್ಯವಾದ ಕೆಲವು ವಿಷಯಗಳನ್ನು ಹೇಳುತ್ತಾನೆ—ಔಪಸರ್ಗಿಕ ರೋಗಗಳೆಂದರೆ ಒಬ್ಬರಿಂದೊಬ್ಬರಿಗೆ ಹತ್ತುವ ಸ್ವಭಾವವುಳ್ಳ ಕುಷ್ಠರೋಗ, ಜ್ವರ, ಕ್ಷಯರೋಗ, ಕಣ್ಣಿನರೋಗ ಈ ರೋಗಗಳು ಪ್ರಸಂಗ ಎಂದರೆ ರೋಗಿಗಳೊಡನೆ ನಡೆಯತಕ್ಕ ಮೈಥುನರೂಪವಾದ ಸಂಪರ್ಕ, ಗಾತ್ರಸಂಸ್ಪರ್ಶವೆಂದರೆ ರೋಗಿಯೊಡನೆ ನಡೆಯಬಹುದಾದ ಇತರ ವಿಧವೆ ಶರೀರಸಂಪರ್ಕ, ನಿಶ್ವಾಸಾತ್ ಎಂದರೆ ರೋಗಿಯಾದವನ ಉಸಿರನ್ನು ರೋಗಿಯಲ್ಲದವನು ಆಘ್ರಾಣಿಸುವುದು ಮೊದಲಾದದ್ದು. ಸಹಭೋಜನವೆಂದರೆ ರೋಗಿಯೂ ರೋಗಿಯಲ್ಲದವನೂ ಕೂಡಿ ಒಂದುಪಾತ್ರೆಯಲ್ಲಿ ಭೋಜನಮಾಡು-

ವುದು. ರೋಗಿಯೊಡನೆ ಒಂದೇಹಾಸಿಗೆಯಲ್ಲಿ ಮಲಗುವುದು. ರೋಗಿಯಬಟ್ಟೆ, ಅನುಲೇಪನಗಳೆಂದರೆ—ಶರೀರಕ್ಕೆ ಲೇಪನಮಾಡಿಕೊಳ್ಳುವ ಗಂಧದ್ರವ್ಯ, ರೋಗಿಗಳು ಧರಿಸಿದ ಪುಷ್ಪಿನಮಾಲೆ ಮೊದಲಾದವುಗಳು, ಇವುಗಳನ್ನು ರೋಗವಿಲ್ಲದವರು ಧರಿಸುವುದು, ಈ ಎಲ್ಲಾ ಕಾರಣಗಳಿಂದಲೂ "ಸಂಕ್ರಾಮಂತಿ" ಎಂದರೆ ರೋಗಿಗಳಿಂದ ರೋಗವಿಲ್ಲದವರಿಗೆ ದಾಟುತ್ತವೆ ಎಂಬ ಅಭಿಪ್ರಾಯ.

ಇಲ್ಲಿಗೆ ಕುಷ್ಠನಿಧಾನ ಸಂಪೂರ್ಣ.

---

## ಶೀತಪಿತ್ತೋದರ್ದಕೋಠನಿದಾನ

ಶೀತಮಾರುತಸಂಸ್ಪರ್ಶಾತ್ಪ್ರದುಷ್ಟೌಕಫಮಾರುತೌ ॥
ಪಿತ್ತೇನಸಹಸಂಭೂಯಬಹಿರಂತರ್ವಿಸರ್ಪತಃ ॥ ೧ ॥

ಶೀತಪಿತ್ತ, ಉದರ್ದ, ಕೋಠ, ಎಂಬವುಗಳು ಮೂರೂ ಒಂದು ವಿಧವಾದ ಚರ್ಮರೋಗದ ಗುಂಪಿಗೆ ಸೇರಿದವುಗಳು. ಇವು ಸಾಮಾನ್ಯವಾಗಿ ಮೈಮೇಲೆಲ್ಲಾ ಗಂದೆಗಂದೆಗಳಾಗಿ ಕಾಣಿಸಿಕೊಳ್ಳುತ್ತವೆ. ಇವಕ್ಕೆ ಪಿತ್ತಗಂದೆಗಳೆಂಬ ವ್ಯವಹಾರವೂ ಉಂಟು. ಹೊರಗಿನ ತಣ್ಣನೆ ಗಾಳಿಯ ಸಂಪರ್ಕದಿಂದ ಕಫ ಮತ್ತು ವಾತಗಳು ಪ್ರಕೋಪಿತಗಳಾಗಿ ಪಿತ್ತದೊಡನೆ ಕೂಡಿಕೊಂಡು ಚರ್ಮದ ಹೊರಭಾಗದಲ್ಲಿಯೂ ಶರೀರದ ಒಳಭಾಗದಲ್ಲಿ ರಕ್ತದೊಡನೆಯೂ ಶರೀರದಲ್ಲೆಲ್ಲಾ ವ್ಯಾಪಿಸಿ ಗಂದೆಗಳನ್ನೆಬ್ಬಿಸುತ್ತವೆ.

ಪಿಪಾಸಾರುಚಿಹೃಲ್ಲಾಸದೇಹಸಾದಾಂಗಗೌರವಂ ॥
ರಕ್ತಲೋಚನತಾತೇಷಾಂಪೂರ್ವರೂಪಸ್ಯಲಕ್ಷಣಂ ॥ ೨ ॥

ಈ ರೋಗವು ಹುಟ್ಟುವ ಮೊದಲು ಕಾಣಬರುವ ಲಕ್ಷಣಗಳು ಯಾವುವೆಂದರೆ—ಬಾಯಾರಿಕೆ, ಬಾಯಿರುಚಿ ಕೆಡುವುದು, ಬಾಯಿನೀರು ಬರುವುದು, ಶರೀರದಲ್ಲಿ ಸುಸ್ತು, ಮೈಭಾರ, ಕಣ್ಣು ಕೆಂಪಗಾಗುವುದು ಇವುಗಳು.

ವರಟೀದಷ್ಟಸಂಸ್ಥಾನಶ್ಶೋಥಸ್ಸಂಜಾಯತೇಬಹಿಃ ॥
ಸಕಂಡೂಸ್ತೋದಬಹುಳಶ್ಛರ್ದಿಜ್ವರವಿದಾಹವಾನ್ ॥ ೩ ॥
ಉದರ್ದಮಿತಿತಂವಿದ್ಯಾಚ್ಛೀತಪಿತ್ತಮಥಾಪರೇ ॥
ವಾತಾಧಿಕಂಶೀತಪಿತ್ತಮುದರ್ದಸ್ತುಕಫಾಧಿಕಃ ॥ ೪ ॥

ಜೇನುಹುಳ ಕಡಿದ ಗಂದೆಗಳಂತೆ ಗಂದೆಗಳಾಗುವುದು, ನವೆ, ವ್ಯಥೆ ಬಹಳ ಇರುವುದು, ಇವರ ಜೊತೆಯಲ್ಲಿ ವಮನ, ಜ್ವರ, ಉರಿ, ಇವುಗಳೂ ಸೇರಿರುವುದು,

ಹೀಗಿದ್ದ ಪಕ್ಷದಲ್ಲಿ ಇದಕ್ಕೆ ಉದರ್ದವೆಂಬದಾಗಿ ಹೆಸರು, ಇದನ್ನೇ ಕೆಲವರು ಶೀತಪಿತ್ತವೆಂಬುದಾಗಿಯೂ ಹೇಳುತ್ತಾರೆ. ಪ್ರಕುಪಿತಗಳಾದ ದೋಷಗಳ ನಡುವೆ ವಾಯುವು ಅಧಿಕವಾಗಿದ್ದರೆ ಶೀತಪಿತ್ತವೆಂಬದಾಗಿಯೂ ಕಫವು ಅಧಿಕವಾಗಿದ್ದರೆ ಉದರ್ದವೆಂಬದಾಗಿಯೂ ಹೆಸರು.

**ಸೋತ್ಸಂಗೈಶ್ಚ ಸರಾಗೈಶ್ಚ ಕಂಡೂಮದ್ಭಿಶ್ಚ ಮಂಡಲೈಃ ॥**
**ಶೈಶಿರಃ ಕಫಜೋ ವ್ಯಾಧಿರುದರ್ದ ಇತಿಕೀರ್ತಿತಃ ॥ ೫ ॥**

ಉದರ್ದವೆಂಬುವುದರ ಲಕ್ಷಣವನ್ನು ಹೇಳುತ್ತಾನೆ— ಮಧ್ಯಭಾಗದಲ್ಲಿ ತಗ್ಗಾಗಿ ಕೆಂಪಗೆ ನವೆಯಿಂದ ಕೂಡಿ ಮಂಡಲಾಕಾರವಾದ ಗಂಧೆಗಳು ಮೈಯ್ಯೆಲ್ಲೆಲ್ಲಾ ಇರುವಲ್ಲಿ ಇದನ್ನು ಶೀತಪ್ರಧಾನಜನ್ಯವಾದ ಉದರ್ದವೆಂಬದಾಗಿ ಹೇಳುತ್ತಾರೆ.

**ಅಸಮ್ಯಗ್ವಮನೋದೀರ್ಣಪಿತ್ತಶ್ಲೇಷ್ಮಾನ್ನನಿಗ್ರಹೈಃ ॥**
**ಮಂಡಲಾನಿಸಕಂಡೂನಿರಾಗವಂತಿಬಹೂನಿಚ ॥ ೬ ॥**
**ಉತ್ಕೋಠಸ್ಸಾನುಬಂಧಶ್ಚ ಕೋಠಇತ್ಯಭಿಧೀಯತೇ ॥**

ಉತ್ಕೋಠ, ಕೋಠಗಳನ್ನು ಹೇಳುತ್ತಾನೆ—ವಮನೌಷಧವನ್ನು ತೆಗೆದುಕೊಂಡು ಸರಿಯಾಗಿ ವಮನವಾಗದೆ ಇರೋಣದರಿಂದ ಪಿತ್ತಶ್ಲೇಷ್ಮಗಳು ಪ್ರಕುಪಿತಗಳಾಗಿ ಆ ಕಾರಣದಿಂದಲೂ ಹಸಿವನ್ನು ತಡೆಯೋಣದರಿಂದಲೂ, ಉಪಸ್ಥಿತಗಳಾದ ವಾತಾದಿಗಳ ವೇಗವನ್ನು ತಡೆಯೋಣದರಿಂದಲೂ ಹುಟ್ಟತಕ್ಕವುಗಳಾಗಿಯೂ, ಗಂಧೆಗಳು ಕೆಂಪಗೆ ನವೆಯೊಡನೆ ಕೂಡಿ ಅನೇಕಗಳಾಗಿಯೂ ಇದ್ದಲ್ಲಿ ಕೋಠವೆಂಬದಾಗಿಯೂ, ಗಂಡೆಗಳು ಕೆಲವು ಕಾಣದೆ ಹೋಗುವುದು ಮತ್ತೆ ಕೆಲವು ಹುಟ್ಟುವುದು ಹೀಗಿದ್ದಲ್ಲಿ ಉತ್ಕೋಠವೆಂಬದಾಗಿಯೂ ಹೆಸರು.

ಇಲ್ಲಿಗೆ ಶೀತಪಿತ್ತೋದರ್ದಕೋಠನಿದಾನ ಸಂಪೂರ್ಣ.

---

## ಅಮ್ಲಪಿತ್ತನಿದಾನ.

**ವಿರುದ್ಧದುಷ್ಟಾಮ್ಲವಿದಾಹಿಪಿತ್ತಪ್ರಕೋಪಿಪಾನಾನ್ನಭುಜೋ ವಿದಗ್ಧಂ ॥**
**ಪಿತ್ತಂಸ್ವಹೇತೂಪಚಿತಂಪುರಾಯತ್ತದಮ್ಲಪಿತ್ತಂಪ್ರವದಂತಿ ಸಂತಃ ॥ ೧ ॥**

ಅಮ್ಲಪಿತ್ತವೆಂಬ ರೋಗವನ್ನು ಹೇಳುತ್ತಾನೆ—ಪರಸ್ಪರ ವಿರುದ್ಧಗಳಾದ ಆಹಾರಗಳ, ಕೆಟ್ಟುಹೋದ ಆಹಾರಗಳು, ಹುಳಿಯಾದ ಆಹಾರಗಳು, ವಿಶೇಷ

ವಾಗಿ ಹುರಿದ ಪದಾರ್ಥಗಳು, ಪಿತ್ತವನ್ನು ಪ್ರಕೋಪಪಡಿಸತಕ್ಕ ಆಹಾರಗಳು, ಇಂತಹ ಆಹಾರಗಳನ್ನು ತಿನ್ನತಕ್ಕವರಿಗೆ ದೇಹದಲ್ಲಿ ಪಿತ್ತಪ್ರಕೋಪಕಾರಣ ಗಳಿಂದ ಮೊದಲೇ ಪ್ರಕುಪಿತವಾದ ಪಿತ್ತವು ಹುಳಿಯಾದಂತಾದ್ದಾಗಿ ರೋಗ ವನ್ನು ಹುಟ್ಟಿಸುತ್ತಿದೆ, ಹೀಗೆ ಹುಟ್ಟುವ ರೋಗಕ್ಕೇನೇ ಅಮ್ಲಪಿತ್ತವೆಂಬದಾಗಿ ಹೆಸರು, ಹುಳಿತೇಗು ಬರುವ ರೋಗ.

**ಅವಿಪಾಕಕ್ಲಮೋತ್ ಕ್ಲೇಶತಿಕ್ತಾಮ್ಲೋದ್ಗಾರಗೌರವೈಃ ॥**
**ಹೃತ್ಕಂಠದಾಹಾರುಚಿಭಿರಮ್ಲಪಿತ್ತಂವದೇದ್ಭಿಷಕ್ ॥ ೨ ॥**

ಅಮ್ಲಪಿತ್ತರೋಗವನ್ನು ಗುರ್ತಿಸುವ ವಿಧಾನವನ್ನು ಹೇಳುತ್ತಾನೆ—ಅನ್ನವು ಜೀರ್ಣವಾಗದಿರುವಿಕೆ, ಆಯಾಸ, ವಮನವಾಗುವಂತೆ ತೋರುತ್ತಿರೋಣ, ಕಹಿ ಯಾಗಿ ಮತ್ತು ಹುಳಿಯಾಗಿ ಸಹ ತೇಗುಬರುತ್ತಿರುವುದು, ಮೈಭಾರ, ಎದೆಯಲ್ಲಿ ಮತ್ತು ಗಂಟಲಿನಲ್ಲಿ ಸಹ ಉರಿಯುತ್ತಿರೋಣ, ಅರುಚಿ, ಇಷ್ಟು ಲಕ್ಷಣಗಳಿಂದ ಅಮ್ಲಪಿತ್ತರೋಗವನ್ನು ಗುರ್ತಿಸಬಹುದು.

**ತೃಡ್ ದಾಹಮೂರ್ಚ್ಛಾಭ್ರಮಮೋಹಕಾರಿಪ್ರಯಾತ್ಯಧೋವಾ ವಿವಿಧಪ್ರಕಾರಂ ॥**
**ಹೃಲ್ಲಾಸಕೋಠಾನಲಸಾದಹರ್ಷಸ್ವೇದಾಂಗಪೀತತ್ವಕರಂಕದಾ ಚಿತ್ ॥ ೩ ॥**

ಈ ರೋಗದಲ್ಲಿ ಸಂಭವಿಸತಕ್ಕ ವಿಕಾರಗಳನ್ನು ಹೇಳುತ್ತಾನೆ—ಬಾಯಾ ರಿಕೆ, ಮೈಯುರಿ, ಮೂರ್ಛೆಬರೋಣ, ಜ್ಞಾನಾಜ್ಞಾನ, ಕೆಲವು ವೇಳೆ ವಿರೇಚನವೂ ಮತ್ತೆ ಕೆಲವು ವೇಳೆ ವಮನವೂ ಆಗುವುದು, ಬಾಯಿನೀರು ಬರುವುದು, ಮೈಯ್ಯ ಲ್ಲೆಲ್ಲಾ ಗಂಧೆಗಳೇಳುವುದು, ಅಗ್ನಿಮಾಂದ್ಯ, ಕೂದಲು ಯಾವಾಗ್ಯೂ ನಿಗರಿ ಕೊಂಡಿರುವುದು, ಪದೇ ಪದೇ ಬೆವರು ಬರುವುದು, ಕಾಮಲಾರೋಗದವರಿಗೆ ಇರುವಂತೆ ಶರೀರವೆಲ್ಲವೂ ಹಳದಿಯ ಬಣ್ಣಕ್ಕೆ ಬರುವುದು, ಈ ರೀತಿಯಾದ ವಿಕಾರಗಳೆಲ್ಲವೂ ಸಂಭವಿಸುತ್ತವೆ.

**ವಾಂತಂಹರಿತ್ಪೀತಕನೀಲಕೃಷ್ಣಮಾರಕ್ತರಕ್ತಾಭಮತೀವ ಚಾಮ್ಲಂ ॥**
**ಮಾಂಸೋದಕಾಭಂತ್ವತಿಪಿಚ್ಛಿಲಾಚ್ಛಂಶ್ಲೇಷ್ಮಾನುಜಾತಂ ವಿವಿಧಂರಸೇನ ॥ ೪ ॥**
**ಭುಕ್ತೇವಿದಗ್ಧೇತ್ವಥವಾಪ್ಯಭುಕ್ತೇಕರೋತಿತಿಕ್ತಾಮ್ಲವಮಿಂಕ ದಾಚಿತ್ ॥**
**ಉದ್ಗಾರಮೇವಂವಿಧಮೇವಕಂಠಹೃತ್ಕುಕ್ಷಿದಾಹಂಶಿರಸೋರು ಜಂಚ ॥ ೫ ॥**

**ಕರಚರಣದಾಹಮೌಷ್ಣ್ಯಂಮಹತೀಮರುಚಿಂಜ್ವರಂಚಕಫ ಪಿತ್ತಂ ॥**
**ಜನಯತಿಕಂಡೂಮಂಡಲಪಿಡಕಾಶತನಿಚಿತಗಾತ್ರರೋಗನಿ ಚಯಂ ॥ ೬ ॥**

ಈ ರೋಗದಲ್ಲಿ ವಮನವಾದರೆ ಅದರ ವರ್ಣವು ಹಸುರು ಬಣ್ಣವಾಗಿಯಾದರೂ, ಹಳದಿಯ ಬಣ್ಣವಾಗಿಯಾದರೂ, ನೀಲೀ ವರ್ಣವಾಗಿಯಾದರೂ, ಕಪ್ಪುಬಣ್ಣವಾಗಿಯಾದರೂ, ಕೋಚ ಕೆಂಪಗೂ, ರಕ್ತದಂತೆಯೂ, ಅತ್ಯಂತ ಹುಳಿಯಾಗಿಯೂ, ಮಾಂಸವನ್ನು ತೊಳೆದ ನೀರಿನಂತೆಯೂ, ಅತ್ಯಂತ ಜಿಗಟಾಗಿ ಸ್ವಚ್ಛವಾಗಿಯೂ, ಶ್ಲೇಷ್ಮದೊಡನೆ ಕೂಡಿಯೂ, ನಾನಾ ವಿಧವಾದ ಅಂದರೆ ಕಹಿ, ಕಾರ, ಹುಳಿ, ಮೊದಲಾದ ರಸಗಳುಳ್ಳದಾಗಿಯೂ ಇರುತ್ತದೆ, ಭೋಜನಮಾಡಿದ ಪದಾರ್ಥವು ವಿದಗ್ಧಾವಸ್ಥೆಯಲ್ಲಿರುವಾಗ್ಯೆ ಅಂದರೆ ಅಜೀರ್ಣಾವಸ್ಥೆಯಲ್ಲಿರುವಾಗಲೂ ಅಥವಾ ಭೋಜನವಾಗದೆ ಇರುವಾಗಲೂ ಒಂದೊಂದು ವೇಳೆ ಕಹಿಯಾದ ಮತ್ತು ಹುಳಿಯಾದ ವಮನವನ್ನು ಮಾಡುತ್ತಿರುವುದು, ಕಹಿಯಾದ ಮತ್ತು ಹುಳಿಯಾದ ತೇಗುಬರುತ್ತಿರುವುದು, ಗಂಟಲು, ಎದೆ, ಹೊಟ್ಟೆ, ಇವುಗಳಲ್ಲಿ ಉರಿ, ತಲೆನೋವು, ಕೈಕಾಲುಗಳಲ್ಲಿ ಉರಿ, ಯಾವಾಗಲೂ ಅವು ಬಿಸಿಯಾಗಿರುವುದು, ಯಾವಾಗಲೂ ಮಹತ್ತಾದ ಅರುಚಿ ಇರುವುದು, ಜ್ವರ, ಕಫ ಮತ್ತು ಪಿತ್ತಗಳ ಪ್ರಕೋಪ, ನವೆ, ಮೈಯಲ್ಲೆಲ್ಲಾ ಗಂದೆಗಳೇಳುವುದು, ಗುಂಪುಗುಂಪಾಗಿ ಬಕ್ಕೆಗಳೇಳುವುದು, ಇನ್ನೂ ನಾನಾ ವಿಧಗಳಾದ ರೋಗಗಳೆಲ್ಲಾ ಹುಟ್ಟುವುದು, ಹೀಗೆಲ್ಲಾ ಆಗುತ್ತಿರುತ್ತದೆ.

**ರೋಗೋಯಮಮ್ಲಪಿತ್ತಾಖ್ಯೋಯತ್ನಾತ್ಸಂಸಾಧ್ಯತೇನವಃ ॥**
**ಚಿರೋತ್ಥಿತೋಭವೇದ್ಯಾಪ್ಯಃಕೃಚ್ಛ್ರಸಾಧ್ಯಸ್ಸಕಸ್ಯಚಿತ್ ॥ ೭ ॥**

ಈ ಅಮ್ಲಪಿತ್ತವೆಂಬ ರೋಗವು ಹೊಸತಾಗಿದ್ದಲ್ಲಿ ಪ್ರಯತ್ನಪಟ್ಟು ಚಿಕಿತ್ಸಿಸಿದಲ್ಲಿ ಗುಣಸಿಕ್ಕುತ್ತದೆ, ಬಹಳ ಕಾಲದ್ದಾಗಿದ್ದರೆ ಕಾಲಹರಣಮಾಡತಕ್ಕದ್ದು ವಿನಹ ಗುಣವಾಗುವುದಿಲ್ಲ, ಕೆಲವರಿಗೆ ಈ ಅಮ್ಲಪಿತ್ತರೋಗವು ಗುಣವಾಗುವುದೇ ಬಹಳ ಕಷ್ಟಸಾಧ್ಯವಾಗಿ ಬಿಡುತ್ತದೆ.

**ಸಾನಿಲಂಸಾನಿಲಕಫಂಸಕಫಂತಚ್ಚ ಲಕ್ಷಯೇತ್ ॥**
**ದೋಷಲಿಂಗೇನಮತಿಮಾನ್‌ಭಿಷಗ್ಮೋಹಕರಂಹಿತತ್ ॥ ೮ ॥**
**ಕಂಪಪ್ರಲಾಪಮೂರ್ಛಾಚಿಮಿಚಿಮಿಗಾತ್ರಾವಸಾದಶೂಲಾನಿ ॥**
**ತಮಸೋದರ್ಶನವಿಭ್ರಮಪ್ರಮೋಹಹರ್ಷಾಣ್ಯನಿಲಕೋ ಪಾತ್ ॥ ೯ ॥**

ಕಫನಿಷ್ಠೀವನಗೌರವಜಡತಾರುಚಿಶೀತಸಾದವಮಿಲೇಪಾಃ ॥
ದಹನಬಲಸಾದಕಂಡೂನಿದ್ರಾಚಿಹ್ನಂಕಫಾನುಗತೇ ॥ ೧೦ ॥
ಉಭಯಮಿದಮೇವಚಿಹ್ನಂಮಾರುತಕಫಸಂಭವೇಭವತ್ಯಮ್ಲೇ ॥
ತಿಕ್ತಾಮ್ಲಕಟುಕೋದ್ಗಾರಹೃತ್ಕುಕ್ಷಿಕಂಠದಾಹಕೃತ್ ॥ ೧೧ ॥
ಭ್ರಮೋಮೂರ್ಛಾರುಚಿಶ್ಛರ್ದಿರಾಲಸ್ಯಂಚಶಿರೋರುಜಾ ॥
ಪ್ರಸೇಕೋಮುಖಮಾಧುರ್ಯಂಶ್ಲೇಷ್ಮಪಿತ್ತಸ್ಯಲಕ್ಷಣಂ ॥ ೧೨ ॥

ಬುದ್ಧಿಶಾಲಿಯಾದ ವೈದ್ಯನು ಈ ಆಮ್ಲಪಿತ್ತರೋಗದಲ್ಲಿ ವಾಯುವಿನ ಸಂಬಂಧವಿರುವುದನ್ನೂ, ವಾಯು ಮತ್ತು ಕಫಗಳ ಸಂಬಂಧವಿರುವುದನ್ನೂ ಕೇವಲ ಕಫಸಂಬಂಧವಿರುವುದನ್ನೂ ಆಯಾಯ ದೋಷಗಳ ಲಕ್ಷಣಗಳಿಂದಲೇ ತಿಳಿದುಕೊಳ್ಳಬೇಕು, ಯಾತಕ್ಕೆಂದರೆ ಈ ರೋಗವನ್ನು ನಿಶ್ಚಯಿಸುವಾಗ್ಯೆ ವೈದ್ಯರುಗಳು ಬಹಳವಾಗಿ ಮೋಸಹೋಗುವುದಕ್ಕವಕಾಶವಿದೆ, ವಾತಪ್ರಕೋಪ ಜನ್ಯವಾದ ಆಮ್ಲಪಿತ್ತರೋಗದಲ್ಲಿ ಮುಖ್ಯ ಲಕ್ಷಣಗಳ ಜೊತೆಗೆ ಮೈನಡುಕ, ರೋದನಾದಿಗಳು, ಮೂರ್ಛೆಬರುತ್ತಿರೋಣ, ಚಿಮುಚಿಮುವೆಂದರೆ ಆಗಾಗ್ಗೆ ಮೈ ಜುಮ್ಮೆನ್ನೋಣ, ಸೋಲು, ಮೈಪಡತ, ಆಗಾಗ್ಗೆ ಕಣ್ಣುಕತ್ತಲೆ ಬರುವುದು, ಬುದ್ಧಿಭ್ರಮಣೆ, ಅಜ್ಞಾನ, ರೋಮಾಂಚ, ಇವು ವಾತಪ್ರಕೋಪಜನ್ಯವಾದ ಆಮ್ಲಪಿತ್ತರೋಗದಲ್ಲಿ ಕಾಣುವ ಲಕ್ಷಣಗಳು. ಕಫವನ್ನು ಉಗುಳುತ್ತಿರುವುದು, ಮೈಭಾರ, ಜಡತ್ವ, ಅರುಚಿ, ಶರೀರವು ಶೀತವಾಗಿರೋಣ, ವಮನವಾಗುತ್ತಿರುವುದು, ನಾಲಿಗೆಯ ಮೇಲೆ ಬೆಳ್ಳಗೆ ಕೊಳೆ ಸೇರುವುದು, ಅಗ್ನಿಬಲ ಕಡಮೆಯಾಗುವುದು, ದೇಹಶಕ್ತಿಯೂ ಕಡಮೆಯಾಗುವುದು, ಮೈನವೆಯಾಗುವುದು, ತೂಕಡಿಕೆ, ಈ ಲಕ್ಷಣಗಳು ಕಫಪ್ರಧಾನವಾದ ಆಮ್ಲಪಿತ್ತರೋಗದ ಲಕ್ಷಣಗಳು. ಹಿಂದೆ ಹೇಳಿದ ಎರಡು ವಿಧವಾದ ಲಕ್ಷಣಗಳೂ ವಾಯುಃ ಮತ್ತು ಶ್ಲೇಷ್ಮಗಳ ಪ್ರಕೋಪದಿಂದ ಹುಟ್ಟಿದ ಆಮ್ಲಪಿತ್ತರೋಗದಲ್ಲಿ ಕಂಡುಬರುತ್ತಿರುತ್ತವೆ. ಕಹಿ, ಹುಳಿ, ಖಾರ ಈ ರೀತಿಯಾದ ತೇಗುಗಳು ಹೊರಡುವುದು, ಎದೆಯಲ್ಲಿ, ಹೊಟ್ಟೆಯಲ್ಲಿ, ಗಂಟಲಿನಲ್ಲಿ ಸಹ ಉರಿ ಹಾಯುತ್ತಿರುವುದು, ಬುದ್ಧಿಭ್ರಮಣೆ, ಮೂರ್ಛೆಬರೋಣ, ಅರುಚಿ, ವಾಂತಿಯಾಗುತ್ತಿರುವುದು, ಮೈಬಳಲಿಕೆ, ತಲೆನೋವು, ಬಾಯಿನೀರು ಸುರಿಯುವುದು, ಬಾಯಿ ಸೀಯಾಗಿರುವುದು, ಈ ಲಕ್ಷಣಗಳು ಕಫಪ್ರಕೋಪ ಜನ್ಯವಾದ ಆಮ್ಲಪಿತ್ತದಲ್ಲಿ ಕಾಣಬರುವ ಚಿಹ್ನೆಗಳು.

ಇಲ್ಲಿಗೆ ಆಮ್ಲಪಿತ್ತನಿದಾನ ಸಂಪೂರ್ಣ.

# ವಿ ಸ ರ್ಪ ನಿ ದಾ ನ.

ಲವಣಾಮ್ಲಕಟೂಷ್ಣಾದಿಸಂಸೇವಾದ್ದೋಷಕೋಪತಃ ॥
ವಿಸರ್ಪಸ್ಸಪ್ತಧಾಜ್ಞೇಯಸ್ಸರ್ವತಃಪರಿಸರ್ಪಣಾತ್ ॥ ೧ ॥
ಪೃಥಕ್‌ತ್ರಯಸ್ತ್ರಿಭಿಶ್ಚೈಕೋವಿಸರ್ಪಾದ್ವಂದ್ವಜಾಸ್ತ್ರಯಃ ॥
ವಾತಿಕಃಪೈತ್ತಿಕಶ್ಚೈವಕಫಜಸ್ಸಾನ್ನಿಪಾತಿಕಃ ॥ ೨ ॥
ಚತ್ವಾರಏತೇವೀಸರ್ಪಾವಕ್ಷ್ಯಂತೇದ್ವಂದ್ವಜಾಸ್ತ್ರಯಃ ॥
ಆಗ್ನೇಯೋವಾತಪಿತ್ತಾಭ್ಯಾಂಗ್ರಂಥ್ಯಾಖ್ಯಃಕಫವಾತಜಃ ॥ ೩ ॥
ಯಸ್ತುಕರ್ದಮಕೋಘೋರಸ್ಸಪಿತ್ತಕಫಸಂಭವಃ ॥

ವಿಸರ್ಪರೋಗವನ್ನು ಹೇಳುತ್ತಾನೆ—ವಿಸರ್ಪವೆಂದರೆ ಉರಿಬಕ್ಕೆಗಳು, ಹೆಚ್ಚಿಗೆ ಉಪ್ಪು, ಹೆಚ್ಚು ಹುಳಿ. ಹೆಚ್ಚು ಖಾರ, ಹೆಚ್ಚು ಉಷ್ಣಪದಾರ್ಥಗಳು, ಇವುಗಳನ್ನು ತಿನ್ನೋಣದರಿಂದುಂಟಾದ ದೋಷಪ್ರಕೋಪದಿಂದ ಏಳು ವಿಧವಾಗಿ ಈ ವಿಸರ್ಪರೋಗವು ಹುಟ್ಟುತ್ತದೆ, ಈ ವಿಸರ್ಪವೆಂಬ ರೋಗವು ದೇಹದ ಸಮಸ್ತ ಭಾಗಗಳಲ್ಲಿ ಓಡ್ಯಾಡುವುದರಿಂದಲೇ ಇದಕ್ಕೆ ಈ ಹೆಸರನ್ನು ಕೊಟ್ಟಿದ್ದಾರೆ, ಇವುಗಳು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಕಫಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ವಾತಪಿತ್ತಜನ್ಯ, ವಾತಶ್ಲೇಷ್ಮಜನ್ಯ, ಪಿತ್ತಶ್ಲೇಷ್ಮಜನ್ಯ ಎಂಬ ಹೆಸರುಗಳಿಂದ ಏಳುವಿಧ, ಇವುಗಳಲ್ಲಿ ವಾತ ಮತ್ತು ಪಿತ್ತಗಳೆಂಬ ಎರಡು ದೋಷಗಳಿಂದ ಹುಟ್ಟುವ ವಿಸರ್ಪರೋಗಕ್ಕೆ ಅಗ್ನಿವಿಸರ್ಪನೆಂಬದಾಗಿಯೂ, ವಾತ ಮತ್ತು ಶ್ಲೇಷ್ಮಗಳೆಂಬ ಎರಡು ದೋಷಗಳ ಪ್ರಕೋಪದಿಂದ ಹುಟ್ಟುವ ವಿಸರ್ಪಕ್ಕೆ ಗ್ರಂಥಿವಿಸರ್ಪವೆಂಬದಾಗಿಯೂ, ಪಿತ್ತ ಮತ್ತು ಶ್ಲೇಷ್ಮಗಳ ಪ್ರಕೋಪದಿಂದ ಹುಟ್ಟುವ ವಿಸರ್ಪರೋಗಕ್ಕೆ ಕರ್ದಮವಿಸರ್ಪವೆಂಬದಾಗಿಯೂ ಹೆಸರು, ಈ ಕರ್ದಮವಿಸರ್ಪವೆಂಬುವುದು ಬಹಳ ಭಯಂಕರವಾದ ರೋಗ.

ರಕ್ತಂಲಸೀಕಾತ್ವಙ್ಮಾಂಸಂದೂಷ್ಯಂದೋಷಾಸ್ತ್ರಯೋಮಲಾಃ ೪
ವಿಸರ್ಪಾಣಾಂಸಮುತ್ಪತ್ತೌವಿಜ್ಞೇಯಾಸ್ಸಪ್ತಧಾತವಃ ॥
ತತ್ರವಾತಾತ್ಸವೀಸರ್ಪೋವಾತಜ್ವರಸಮವ್ಯಥಃ ॥ ೫ ॥
ಶೋಥಸ್ಫುರಣನಿಸ್ತೋದಭೇದಾಯಾಸಾರ್ತಿಹರ್ಷವಾನ್ ॥
ಪಿತ್ತಾದ್ದ್ರುತಗತಿಃಪಿತ್ತಜ್ವರಲಿಂಗೋತಿಲೋಹಿತಃ ॥ ೬ ॥
ಕಫಾತ್‌ಕಂಡೂಯುತಸ್ನಿಗ್ಧೋಕಫಜ್ವರಸಮಾನರುಕ್ ॥
ಸನ್ನಿಪಾತಸಮುತ್ಥಶ್ಚಸರ್ವಲಿಂಗಸಮನ್ವಿತಃ ॥ ೭ ॥

ವಿಸರ್ಪರೋಗದ ಉತ್ಪತ್ತಿ ಕ್ರಮವನ್ನು ಹೇಳುತ್ತಾನೆ—ದೇಹಗತವಾದ ರಕ್ತ, ರಸ. ಚರ್ಮ ಮಾಂಸ ಇವುಗಳು ಈ ವಿಸರ್ಪರೋಗದಲ್ಲಿ ದೂಷ್ಯಗಳು,

ಅಂದರೆ ದೂಷಿಸಲ್ಪಡತಕ್ಕವುಗಳು, ವಾತ, ಪಿತ್ತ, ಶ್ಲೇಷ್ಮಗಳೇ ದೋಷಗಳು, ಈ ರೀತಿಯಾಗಿ ದೂಷ್ಯಗಳು ನಾಲ್ಕು, ದೋಷಗಳು ಮೂರು, ಈ ಏಳೂ ಕೂಡಿಯೇ ಈ ವಿಸರ್ಪರೋಗವು ಹುಟ್ಟುತ್ತದೆಂಬ ಭಾವ, ವಾತಪ್ರಕೋಪದಿಂದ ಹುಟ್ಟತಕ್ಕ ವಿಸರ್ಪರೋಗದಲ್ಲಿ ವಾತಪ್ರಕೋಪಜನ್ಯ ಜ್ವರದಂತೆಯೇ ವ್ಯಾಧಿಯಿರುತ್ತದೆ, ಮೈಯಲ್ಲಿ ಶೋಷೆ, ಮೈಯುದುರುವಿಕೆ, ವ್ಯಥೆ, ಮೈನಡತ, ಆಯಾಸ, ರೋಮಾಂಚ ಮೊದಲಾದ ವಾತಚೇಷ್ಟೆಗಳೆಲ್ಲವೂ ಇರುತ್ತವೆ, ಪಿತ್ತಪ್ರಕೋಪ ಜನ್ಯವಾದ ವಿಸರ್ಪರೋಗದಲ್ಲಿ ಪಿತ್ತಜ್ವರದ ಲಕ್ಷಣಗಳೆಲ್ಲವೂ ಇರುತ್ತದೆ, ವಿಸರ್ಪ ಬಕ್ಕೆಗಳು ಅತಿಜಾಗ್ರತೆಯಾಗಿ ವ್ಯಾಪಿಸುತ್ತವೆ ಮತ್ತು ಬಹಳವಾಗಿ ಕೆಂಪಾಗಿರುತ್ತವೆ, ಕಫಪ್ರಕೋಪಜನ್ಯವಾದ ವಿಸರ್ಪರೋಗದಲ್ಲಿ ಕಫಜ್ವರದ ಲಕ್ಷಣಗಳೆಲ್ಲವೂ ಇರುತ್ತವೆ, ಅಲ್ಲದೆ ಮೈಯಲ್ಲಿ ನವೆಯಿರುತ್ತದೆ, ಮೈಯಲ್ಲಿ ಜಿಡ್ಡಿರುತ್ತದೆ, ತ್ರಿದೋಷಸನ್ನಿಪಾತದಿಂದ ಉತ್ಪನ್ನವಾದ ವಿಸರ್ಪರೋಗದಲ್ಲಿ ಮೂರು ದೋಷ ಗಳ ಲಕ್ಷಣಗಳೂ ಕಾಣುತ್ತಿರುತ್ತವೆ.

ವಾತಪಿತ್ತಾಜ್ಜ್ವರಚ್ಛರ್ದಿಮೂರ್ಛಾತೀಸಾರತೃಡ್ಭ್ರಮೈಃ ॥
ಗ್ರಂಥಿಭೇದಾಗ್ನಿಸದನತಮಕಾರೋಚಕೈರ್ಯುತಃ ॥ ೮ ॥
ಕರೋತಿಸರ್ವಮಂಗಂಚದೀಪ್ತಾಂಗಾರಾವಕೀರ್ಣವತ್ ॥
ಯಂಯಂದೇಶಂವಿಸರ್ಪಶ್ಚ ವಿಸರ್ಪತಿಭವೇತ್ಸಸಃ ॥ ೯ ॥
ಶಾಂತಾಂಗಾರಾಸಿತೋನೀಲೋರಕ್ತೋವಾಶುಚಚೀಯತೇ ॥
ಅಗ್ನಿದಗ್ಧಇವಸ್ಫೋಟೈಃಶೀಘ್ರಗತ್ವಾದ್ದ್ರುತಂಸಚ ॥ ೧೦ ॥
ಮರ್ಮಾನುಸಾರೀವೀಸರ್ಪಸ್ಸ್ಯಾದ್ವಾತೋತಿಬಲಸ್ತತಃ ॥
ವ್ಯಥತೇಂಗಂಹರೇತ್ಸಂಜ್ಞಾಂನಿದ್ರಾಂಚಶ್ವಾಸಮೀರಯೇತ್ ॥೧೧॥
ಹಿಕ್ಕಾಂಚಸಗತೋವಸ್ಥಾಮೀದೃಶೀಂಲಭತೇನನಾ ॥
ಕ್ವಚಿಚ್ಛರ್ಮರತಿಗ್ರಸ್ತೋಭೂಮಿಶಯ್ಯಾಸನಾದಿಷು ॥ ೧೨ ॥
ಚೇಷ್ಟಮಾನಸ್ತತಃಕ್ಲಿಷ್ಟೋಮನೋದೇಹಪ್ರಮೋಹವಾನ್ ॥
ದುಷ್ಪ್ರಬೋಧೋಶ್ನುತೇನಿದ್ರಾಂಸೋಗ್ನಿವೀಸರ್ಪಉಚ್ಯತೇ ॥೧೩॥

ಎರಡು ದೋಷಗಳ ಪ್ರಕೋಪದಿಂದ ಹುಟ್ಟುವ ಅಗ್ನಿವಿಸರ್ಪವನ್ನು ಹೇಳುತ್ತಾನೆ—ವಾಯು ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟುವ ವಿಸರ್ಪರೋಗ ದಲ್ಲಿ ಜ್ವರ, ವಮನ, ಮೂರ್ಛೆ, ಅತಿಸಾರ, ಬಾಯಾರಿಕೆ, ಬುದ್ಧಿಭ್ರಮಣೆ, ಕೀಲುಗಳಲ್ಲಿ ನಡತ, ಅಗ್ನಿಮಾಂದ್ಯ, ತಮಕವೆಂಬ ಒಂದು ಬಗೆಯ ಶ್ವಾಸ, ಅರುಚಿ, ಇವುಗಳಿರುತ್ತವೆ, ಮೈಯೆಲ್ಲಾ ಕೆಂಡವನ್ನು ಸುರಿದಂತೆ ಉರಿಯಿರುತ್ತದೆ, ಈ ವಿಸರ್ಪವು ದೇಹದ ಯಾವಯಾವ ಭಾಗದಲ್ಲಿ ವ್ಯಾಪಿಸುತ್ತದೋ ಆಯಾ ಭಾಗವು

ಮಶಿಯಹಾಗೆ ಕಪ್ಪಗೂ, ನೀಲವರ್ಣವಾಗಿಯೂ, ಕೆಂಪಗೂ ಇರುತ್ತದೆ, ಬೆಂಕಿಯಿಂದ ಸುಟ್ಟ ಗುಳ್ಳೆಗಳ ಹಾಗೆ ಅಲ್ಲೆಲ್ಲಾ ಗುಳ್ಳೆಗಳು ವ್ಯಾಪಿಸಿಕೊಳ್ಳುತ್ತವೆ, ಈ ವಿಸರ್ಪದಲ್ಲಿ ವಾಯುವು ಅತಿ ಮುಖ್ಯವಾದ್ದರಿಂದ ಮರ್ಮಸ್ಥಾನಗಳಲ್ಲೆಲ್ಲಾ ವ್ಯಾಪಿಸುತ್ತದೆ, ದೇಹದಲ್ಲೆಲ್ಲಾ ವ್ಯಥೆಯಾಗುತ್ತಿರುತ್ತದೆ, ಜ್ಞಾನಶಕ್ತಿಯು ಕಡಮೆಯಾಗುತ್ತಿರುತ್ತದೆ, ನಿದ್ರೆ ಬರುವುದಿಲ್ಲ, ಉಬ್ಬಸ, ಬಿಕ್ಕಳಿಕೆ ಇವುಗಳು ಪ್ರಾರಂಭವಾಗುತ್ತವೆ, ಹಾಸಿಗೆಯ ಮೇಲೆ ಮಲಗಿದರೂ ಭೂಮಿಯ ಮೇಲೆ ಮಲಗಿದರೂ ಸುಖಕಾಣುವುದಿಲ್ಲ, ದೇಹದ ಚೇಷ್ಟೆ ಯಾವುದು ನಡೆಯಬೇಕಾದರೂ ಬಹಳ ಕಷ್ಟಪಡುತ್ತಿರುತ್ತಾನೆ, ಮನಸ್ಸಿಗೆ ಮತ್ತು ದೇಹಕ್ಕೆ ಈ ಎರಡಕ್ಕೂ ಸುಖವಿರುವುದಿಲ್ಲ, ಕೊನೆಗೆ ಏಳುವುದಕ್ಕೂ ಎಬ್ಬಿಸುವುದಕ್ಕೂ ಆಗದಂತಹ ನಿದ್ರೆಯನ್ನೇ ಹೊಂದಿಬಿಡುತ್ತಾನೆ, ಇದಕ್ಕೆ ಅಗ್ನಿವಿಸರ್ಪವೆಂದು ಹೆಸರು.

ಕಫೇನರುದ್ಧಃಪವನೋಭಿತ್ವಾತಂಬಹುಧಾಕಫಂ ॥
ರಕ್ತಂವಾವೃದ್ಧರಕ್ತಸ್ಯತ್ವಕ್‌ಶಿರಾಸ್ನಾಯುಮಾಂಸಗಂ ॥ ೧೪ ॥
ದೂಷಯಿತ್ವಾತುದೀರ್ಘಾಣುವೃತ್ತಸ್ಥೂಲಖರಾತ್ಮನಾಂ ॥
ಗ್ರಂಥೀನಾಂಕುರುತೇಮಾಲಾಂಸರಕ್ತಾಂತೀವ್ರರುಗ್‌ಜ್ವರಂ ॥೧೫॥
ಶ್ವಾಸಕಾಸಾತಿಸಾರಾಸ್ಯಶೋಷಹಿಕ್ಕಾವಮಿಭ್ರಮೈಃ ॥
ಮೋಹವೈವರ್ಣ್ಯಮೂರ್ಛಾಂಗಭಂಗಾಗ್ನಿಸದನೈರ್ಯುತಾಂ ॥ ೧೬ ॥
ಇತ್ಯಯಂಗ್ರಂಥಿವೀಸರ್ಪಃಕಫಮಾರುತಕೋಪಜಃ ॥

ಕಫಪ್ರಕೋಪಕಾರಣಗಳಿಂದ ಪ್ರಕುಪಿತವಾದ ಕಫವು ವಾಯುವನ್ನು ದೂಷಿಸಿಯಾಗಲಿ, ದೇಹದಲ್ಲಿ ವೃದ್ಧಿಯಾದ ಅಂದರೆ ಪ್ರಕುಪಿತವಾದ ರಕ್ತವು ಚರ್ಮ, ರಕ್ತವಾಹಿನಿಗಳು, ನರಗಳು, ಇವುಗಳಲ್ಲಿ ಸೇರಿಹೋಗಿ ಕೆಡಿಸಿ, ಉದ್ದವಾದ್ದಗಳಾದ, ಸಣ್ಣವುಗಳಾದ, ದುಂಡಾದ, ದಪ್ಪವಾದ, ಕಠಿನಗಳಾದ, ಇಂತಹ ಗ್ರಂಥಿಗಳ ಮಾಲೆಯನ್ನೇ ಶರೀರದಲ್ಲಿ ಹುಟ್ಟಿಸುತ್ತದೆ, ಈ ಗ್ರಂಥಿಗಳಲ್ಲಿ ಬಹಳ ನೋವೂ ಜ್ವರವೂ ಇರುತ್ತದೆ, ಉಬ್ಬಸ, ಕೆಮ್ಮು, ಬಾಯಿ ಒಣಗೋಣ, ಬಿಕ್ಕಳಿಕೆ, ವಮನ, ತಲೆತಿರುಗೋಣ, ಬುದ್ಧಿಭ್ರಮಣೆ, ದೇಹದ ವರ್ಣ ಕೆಟ್ಟುಹೋಗುವುದ, ಮೂರ್ಛೆ, ಅವಯವಗಳಲ್ಲಿ ಸಡತ, ಅಗ್ನಿಮಾಂದ್ಯ, ಈ ಲಕ್ಷಣಗಳಿರುವಲ್ಲಿ ಗ್ರಂಥಿವಿಸರ್ಪವೆಂದು ತಿಳಿಯಬೇಕು.

ಕಫಪಿತ್ತಜ್ವರಸ್ತಂಭೋನಿದ್ರಾತಂದ್ರಾಶಿರೋರುಜಾ ॥ ೧೭ ॥
ಅಂಗಾವಸಾದನಿಕ್ಷೇಪಪ್ರಲೇಪಾರೋಚಕಭ್ರಮಾಃ ॥
ಮೂರ್ಛಾಗ್ನಿಹಾನಿರ್ಭೇದೋಸ್ಥ್ನಾಂಪಿಪಾಸೇಂದ್ರಿಯಗೌರವಂ ॥

**ಆಮೋಪವೇಶನಂಲೇಪೋಸ್ರೋತಸಾಂಸಚಸರ್ಪತಿ ॥**
**ಪ್ರಾಯೇಣಾಮಾಶಯಂಗೃಹ್ಣನ್ನೇಕದೇಶಂನಚಾತಿರುಕ್ ॥ ೧೯ ॥**
**ಪಿಡಕೈರವಕೀರ್ಣೋತಿಪೀತಲೋಹಿತಪಾಂಡುರೈಃ ॥**
**ಸ್ನಿಗ್ಧೋಸಿತೋಮೇಚಕಾಭೋಮಲಿನಶ್ಯೋಥವಾನ್ಗುರುಃ ॥ ೨೦ ॥**
**ಗಂಭೀರಪಾಕಃಪ್ರಾಜ್ಯೋಷ್ಮಾಸ್ಪೃಷ್ಟಃಕ್ಲಿನ್ನೋವಿದೀರ್ಯತೇ ॥**
**ಪಂಕವಚ್ಛೀರ್ಣಮಾಂಸಶ್ಚಸ್ಪಷ್ಟಸ್ನಾಯುಶಿರಾಗಣಃ ॥ ೨೧ ॥**
**ಶವಗಂಧೀಚವೀಸರ್ಪಃಕರ್ದಮಾಖ್ಯಮುಶಂತಿತಂ ॥**

ಕಫ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟುವ ಕರ್ದಮವೆಂಬ ಭಯಂಕರವಾದ ವಿಸರ್ಪವನ್ನು ಹೇಳುತ್ತಾನೆ, ಈ ವಿಸರ್ಪದಲ್ಲಿ ಜ್ವರ, ಶರೀರವು ನಿಶ್ಚೇಷ್ಟವಾಗಿರುವುದು, ನಿದ್ರೆ ಬಂದ ಹಾಗೆಯೇ ತೋರುತ್ತಿರುವುದು, ಆಕಳಿಕೆ, ತಲೆನೋವು, ಅವಯವಗಳಲ್ಲಿಯೂ ಒಂದು ಬಗೆಯ ನೋವು, ಕೈಕಾಲುಗಳನ್ನು ಇತ್ತಅತ್ತ ಬಿಸಾಡುವುದು, ನಾಲಿಗೆಯ ಮೇಲೆ ಬಿಳುಪಾದ ಮಲ ಮೆತ್ತಿಕೊಂಡಿರುವುದು, ಅರುಚಿ, ಬುದ್ಧಿನೆಟ್ಟಗಿರಲಿಕ್ಕಿಲ್ಲ, ಮೂರ್ಛೆ ಬರುವುದು, ಅಗ್ನಿಮಾಂದ್ಯ, ಎಲುಗಳು ಮುರಿದಂತೆ ಮನಸ್ಸಿಗೆ ತೋರುವುದು, ಬಾಯಾರಿಕೆ, ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ತಮ್ಮ ಕರ್ತವ್ಯದಲ್ಲಿ ಮಂದನಾಗುವುದು, ಜೀರ್ಣವಾಗದಿರುವಂತಹ ಮಲಪ್ರವೃತ್ತಿಯಾಗುತ್ತಿರುವುದು, ಈ ವಿಸರ್ಪ ಪ್ರಾಯಿಕವಾಗಿ ಆಮಾಶಯಕ್ಕೇನೇ ತೊಂದರೆ ಕೊಡುತ್ತ ಅಲ್ಲಿಂದಲೇ ಇತರ ಪ್ರದೇಶಗಳಿಗೆ ವ್ಯಾಪಿಸುತ್ತದೆ, ಆದರೆ ವ್ಯಥೆ ಬಹಳವಾಗಿರುವುದಿಲ್ಲ, ಇದರಲ್ಲಿ ಉಂಟಾಗುವ ಬಕ್ಕೆಗಳು ಅರಿಸಿನದ ಬಣ್ಣವಾಗಿಯೂ, ಕೆಂಪಾಗಿಯೂ, ಬೆಳ್ಳಗೂ ಇರುತ್ತವೆ, ಚರ್ಮವು ಜಿಡ್ಡಾಗಿ ಕಪ್ಪಗೂ ನೀಲವರ್ಣವಾಗಿಯೂ, ಮಂಕುಬಣ್ಣವುಳ್ಳದ್ದಾಗಿಯೂ, ಶೋಫೆಯಿಂದ ಕೂಡಿ ಗುರುಃ ಎಂದರೆ ದಪ್ಪವಾಗಿರುತ್ತದೆ, ಈ ಕರ್ದಮ ವಿಸರ್ಪದಲ್ಲಿ ವ್ರಣಗಳು ಸಾವಕಾಶವಾಗಿ ಪಕ್ವಸ್ಥಿತಿಗೆ ಬರುತ್ತವೆ, ವ್ರಣವು ಅತಿಯಾಗಿ ಬಿಸಿಯಾಗಿರುತ್ತದೆ, ಯಾವಾಗಲೂ ನೀರಾಡುತ್ತ ಮುಟ್ಟಿದರೆ ಒಡೆಯುವ ಸ್ಥಿತಿಯಲ್ಲಿರುತ್ತದೆ, ಕೆಸರಿನ ಹಾಗೆ ಮಾಂಸವೆಲ್ಲಾ ಕಲಸಿಹೋಗಿ ಅದರಲ್ಲಿರುವ ನರಗಳೆಲ್ಲವೂ ಕಾಣುತ್ತ ಹೆಣದವಾಸನೆಯಾಗುತ್ತದೆ, ಇದಕ್ಕೇನೇ ಕರ್ದಮ ವಿಸರ್ಪವೆಂಬದಾಗಿ ಹೆಸರು.

**ಬಾಹ್ಯಹೇತೋಃಕ್ಷತಾತ್ಕ್ರುದ್ಧಸ್ಸರಕ್ತಂಪಿತ್ತಮೀರಯನ್ ॥೨೨॥**
**ವೀಸರ್ಪಂಮಾರುತಃಕುರ್ಯಾತ್ಕುಲತ್ಥಸದೃಶೈಶ್ಚಿತಂ ॥**
**ಸ್ಫೋಟೈಶ್ಯೋಥಜ್ವರರುಜಾದಾಹಾಢ್ಯಂಶ್ಯಾವಶೋಣಿತಂ ॥ ೨೩ ॥**

ಬಾಹ್ಯಕಾರಣಗಳಾದ ಆಕಸ್ಮಿಕವಾಗಿ ಪೆಟ್ಟು ಬೀಳೋಣ ಮೊದಲಾದ ಕಾರಣಗಳಿಂದ ಪ್ರಕುಪಿತವಾದ ವಾಯುವು ರಕ್ತಸಹಿತವಾದ ಪಿತ್ತವನ್ನು ಕೆಡಿಸಿ ವಿಸರ್ಪವನ್ನು ಉಂಟುಮಾಡುತ್ತದೆ, ಇದರ ಬಕ್ಕೆಗಳು ಹುರಳಿಯ ಕಾಳಿನ ಹಾಗಿರುತ್ತವೆ, ಶೋಭೆ, ಜ್ವರ, ನೋವು, ಉರಿ ಇರುವುದಲ್ಲದೆ ಹೊಗೆಯ ಮತ್ತು ರಕ್ತದ ಬಣ್ಣವಿರುತ್ತದೆ.

**ಜ್ವರಾತಿಸಾರೌವಮಥುಸ್ತ್ವಙ್ಮಾಂಸದರಣಂಕ್ಲಮಃ ॥**
**ಅರೋಚಕಾವಿಪಾಕೌಚವಿಸರ್ಪಾಣಾಮುಪದ್ರವಾಃ ॥ ೨೪ ॥**

ಜ್ವರ, ಅತಿಸಾರ, ವಮನ, ಚರ್ಮ ಮತ್ತು ಮಾಂಸಗಳು ಒಡೆಯುವುದು, ಆಯಾಸ, ಅರುಚಿ, ಅಜೀರ್ಣ ಇವು ವಿಸರ್ಪರೋಗದಲ್ಲಿ ಉಂಟಾಗುವ ಉಪದ್ರವಗಳು.

**ಸಿಧ್ಯಂತಿವಾತಕಫಪಿತ್ತಕೃತಾವಿಸರ್ಪಾಸ್ಸರ್ವಾತ್ಮಕಃಕ್ಷತ ಕೃತಶ್ಚನಸಿದ್ಧಿಮೇತಿ ॥**
**ಪಿತ್ತಾತ್ಮಕೋಂಜನವಪುಶ್ಚಭವೇದಸಾಧ್ಯಃಕೃಚ್ಛ್ರಾಶ್ಚ ಮರ್ಮಸುಭವಂತಿಹಿಸರ್ವಏವ ॥ ೨೫ ॥**

ವಾತಪ್ರಕೋಪಜನ್ಯವಾದ ವಿಸರ್ಪ, ಪಿತ್ತಪ್ರಕೋಪಜನ್ಯ, ಕಫಪ್ರಕೋಪ ಜನ್ಯ ಎಂಬ ರೀತಿಯಿಂದ ಒಂದೊಂದೇ ದೋಷಪ್ರಕೋಪದಿಂದ ಹುಟ್ಟಿದ ವಿಸರ್ಪ ರೋಗವು ಚಿಕಿತ್ಸೆಗೆ ಸಾಧ್ಯವಾಗುತ್ತವೆ, ತ್ರಿದೋಷಪ್ರಕೋಪಜನ್ಯವಾದ ವಿಸರ್ಪ ಮತ್ತು ಕ್ಷತಜವಿಸರ್ಪ ಈ ಎರಡೂ ಚಿಕಿತ್ಸೆಗೆ ಸಾಧ್ಯವಾಗುವುದಿಲ್ಲ, ಪಿತ್ತಪ್ರಕೋಪವು ಅತಿಯಾಗಿ ವಿಸರ್ಪದಿಂದ ದೇಹಾದ್ಯಂತವೂ ಕಪ್ಪಾಗಿದ್ದಲ್ಲಿ ಅಗ್ನಿವಿಸರ್ಪವೆಂಬ ಆ ರೋಗವು ಅಸಾಧ್ಯ, ಮರ್ಮಸ್ಥಾನಗಳಲ್ಲಿ ವಿಸರ್ಪರೋಗವು ಉಂಟಾಗಿದ್ದಲ್ಲಿ ಅದು ಕಷ್ಟಸಾಧ್ಯ.

ಇಲ್ಲಿಗೆ ವಿಸರ್ಪನಿದಾನ ಸಂಪೂರ್ಣ.

---

## ವಿಸ್ಫೋಟನಿದಾನ.

**ಕಟ್ವಮ್ಲತೀಕ್ಷ್ಣೋಷ್ಣವಿದಾಹಿರೂಕ್ಷಕ್ಷಾರೈರಜೀರ್ಣಾಧ್ಯಶ ನಾತಪೈಶ್ಚ ॥**
**ತಥರ್ತುದೋಷೇಣವಿಪರ್ಯಯೇಣಕುಪ್ಯಂತಿದೋಷಾಃ ಪವನಾದಯಸ್ತು ॥ ೧ ॥**

ವಿಸ್ಫೋಟಕರೋಗನಿದಾನವನ್ನು ಹೇಳುತ್ತಾನೆ—ವಿಸ್ಫೋಟಕರೋಗವೆನ್ನು ವುದನ್ನು ವ್ಯವಹಾರದಲ್ಲಿ ಸಿಡಬೆನ್ನುತ್ತಾರೆ. ಖಾರ, ಹುಳಿ, ತೀಕ್ಷ್ಣವಾದ

ಪದಾರ್ಥಗಳು, ಉಷ್ಣವೀರ್ಯದ ಪದಾರ್ಥಗಳು, ಜಿಡ್ಡಿಲ್ಲದ ಪದಾರ್ಥಗಳು ಇಂತಹ ವಸ್ತುಗಳನ್ನು ಅತಿಯಾಗಿ ಸೇವಿಸೋಣ, ಕ್ಷಾರಗಳನ್ನು ಅತಿಯಾಗಿ ಸೇವಿಸೋಣ, ಅಜೀರ್ಣವಾಗುವಂತೆ ತಿನ್ನೋಣ, ಅಜೀರ್ಣವಿರುವಾಗ್ಯೆ ಭೋಜನಮಾಡೋಣ, ಹೆಚ್ಚಿಗೆ ಬಿಸಲಲ್ಲಿ ತಿರುಗೋಣ, ಋತುದೋಷಗಳಿಂದ, ಆಗಾಗ್ಯೆ ನಡೆಯುವ ಋತುವ್ಯತ್ಯಾಸದಿಂದ, ಈ ಕಾರಣಗಳಿಂದ ವಾತಪಿತ್ತಕಫಗಳೆಂಬ ತ್ರಿದೋಷಗಳು ಪ್ರಕೋಪವನ್ನು ಹೊಂದುತ್ತವೆ.

ತ್ವಚಮಾಶ್ರಿತ್ಯತೇರಕ್ತಮಾಂಸಾಸ್ಥೀನಿಪ್ರದೂಷ್ಯಚ ॥
ಘೋರಾನ್ಕುರ್ವಂತಿವಿಸ್ಫೋಟಾನ್ ಸರ್ವಾನ್ ಜ್ವರಪುರಸ್ಸರಾನ್ ೨

ಈ ರೀತಿಯಾಗಿ ಪ್ರಕುಪಿತಗಳಾದ ವಾತಾದಿದೋಷಗಳು ಚರ್ಮವನ್ನಾಶ್ರಯಿಸಿಕೊಂಡು ರಕ್ತ, ಮಾಂಸ, ಅಸ್ಥಿ ಮೊದಲಾದವುಗಳನ್ನು ಕೆಡಿಸಿ ಜ್ವರದೊಡನೆ ಕೂಡಿರುವ ಭಯಂಕರವಾದ ವಿಸ್ಫೋಟರೋಗವನ್ನು ಹುಟ್ಟಿಸುತ್ತದೆ.

ಅಗ್ನಿದಗ್ಧನಿಭಾಸ್ಫೋಟಾಸ್ಸಜ್ವರಾರಕ್ತಪಿತ್ತಜಾಃ ॥
ಕ್ವಚಿತ್ ಸರ್ವತ್ರವಾದೇಹೇವಿಸ್ಫೋಟಾಇತಿತೇಸ್ಮೃತಾಃ ॥ ೩ ॥
ಶಿರೋರುಕ್ ತೋದಭೂಯಿಷ್ಠಂಜ್ವರಸ್ತೃಟ್ ಪರ್ವಭೇದನಂ ॥
ಸಕೃಷ್ಣವರ್ಣತಾಚೇತಿವಾತವಿಸ್ಫೋಟಲಕ್ಷಣಂ ॥ ೪ ॥
ಜ್ವರದಾಹರುಜಾಸ್ರಾವಪಾಕತೃಷ್ಣಾಭಿರನ್ವಿತಂ ॥
ಪೀತಲೋಹಿತವರ್ಣಂಚಪಿತ್ತವಿಸ್ಫೋಟಲಕ್ಷಣಂ ॥ ೫ ॥
ಛರ್ದ್ಯರೋಚಕಜಾಡ್ಯಾನಿಕಂಡೂಕಾಠಿನ್ಯಪಾಂಡುತಾಃ ॥
ಅವೇದನಶ್ಚಿರಾತ್ಪಾಕೀಸವಿಸ್ಫೋಟಃಕಫಾತ್ಮಕಃ ॥ ೬ ॥
ವಾತಪಿತ್ತಕೃತೋಯಸ್ತುಕುರುತೇತೀವ್ರವೇದನಾಂ ॥
ಕಂಡೂಸ್ತೈಮಿತ್ಯಗುರುಭಿರ್ಜಾನೀಯಾತ್ಕಫವಾತಿಕಂ ॥ ೭ ॥
ಕಂಡೂರ್ದಾಹೋಜ್ವರಶ್ಛರ್ದಿರೇತೈಸ್ತುಕಫಪೈತ್ತಿಕಃ ॥

ವಿಸ್ಫೋಟಗಳೆಂದರೆ ಬೆಂಕಿಯಲ್ಲಿ ಸುಟ್ಟುಕೊಂಡರೆ ಕಾಣುವಂತಹ ಗುಳ್ಳೆಗಳು ದೇಹದಲ್ಲಿ ಯಾವುದಾದರೂ ಒಂದು ಪ್ರದೇಶದಲ್ಲಿಯಾಗಲಿ ಅಥವಾ ಸರ್ವಾವಯವದಲ್ಲಿಯಾಗಲಿ ಕಾಣಿಸಿಕೊಳ್ಳುವುದು, ಜೊತೆಯಲ್ಲಿ ಜ್ವರವಿರುವುದು, ರಕ್ತ ಮತ್ತು ಪಿತ್ತಗಳು ಪ್ರಕುಪಿತವಾಗಿರುವುದು, ಹೀಗಿರುವುದಕ್ಕೆ ಹೆಸರು. ಪ್ರಕುಪಿತವಾದ ದೋಷಗಳ ನಡುವೆ ವಾತಪ್ರಕೋಪವು ಹೆಚ್ಚಿಗೆಯಾಗಿದ್ದು ವಿಸ್ಫೋಟವುಂಟಾದಲ್ಲಿ ತಲೆನೋವು, ಬಹಳವಾದ ಸಂಕಟ, ಜ್ವರ, ಬಾಯಾರಿಕೆ, ಕೀಲುಗಳಲ್ಲೆಲ್ಲಾ ವಡತ, ಗುಳ್ಳೆಗಳು ಕಪ್ಪುಬಣ್ಣದವಾಗಿರುವುದು, ಇವು ಲಕ್ಷಣಗಳು,

ಪಿತ್ತಪ್ರಕೋಪವು ಹೆಚ್ಚಿಗೆಯಾಗಿದ್ದಲ್ಲಿ ಜ್ವರವಿರುವುದು, ಮೈಯ್ಯಲ್ಲಿ ಉರಿ, ಗುಳ್ಳೆಗಳಿಂದ ಒಂದು ಬಗೆಯ ದ್ರವವು ಜಿನುಗುತ್ತಿರುವುದು, ಗುಳ್ಳೆಗಳು ಪಕ್ವವಾಗುತ್ತಿರುವುದು, ಬಾಯಾರಿಕೆಯಿರುವುದು, ಗುಳ್ಳೆಗಳು ಹಳದಿಯ ಬಣ್ಣವಾಗಿಯಾಗಲಿ ಕೆಂಪು ಬಣ್ಣವಾಗಿಯಾಗಲಿ ಇರುವುದು, ಇವು ಲಕ್ಷಣಗಳು. ಕಫಪ್ರಕೋಪ ಹೆಚ್ಚಾಗಿದ್ದರೆ ವಮನ, ಅರುಚಿ, ಮೈಭಾರ, ಮೈನವೆ, ಗುಳ್ಳೆಗಳು ಕಠಿನವಾಗಿರುವುದು, ಗುಳ್ಳೆಗಳು ಬೆಳ್ಳಗಿರುವುದು, ವೇದನೆಯೇನೂ ಇರುವುದಕ್ಕಿಲ್ಲ, ಸಾವಕಾಶವಾಗಿ ಪಕ್ವವಾಗುವುದು, ಇವು ಲಕ್ಷಣಗಳು, ವಾಯು ಮತ್ತು ಪಿತ್ತಗಳೆಂಬ ದ್ವಂದ್ವದೋಷಪ್ರಕೋಪಜನ್ಯವಾದ ವಿಸ್ಫೋಟದಲ್ಲಿ ನವೆ, ವೈಭಾರ, ರೋಗಿಯು ಒಂದು ಬಗೆ ಮಂಕನಂತಿರುವುದು, ಶ್ಲೇಷ್ಮ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟಿದ ವಿಸ್ಫೋಟದಲ್ಲಿ ನವೆ, ಮೈಯ್ಯುರಿ, ಜ್ವರ, ವಮನ ಇವುಗಳಿರುತ್ತವೆ.

ಮಧ್ಯೇನಿಮ್ನೋನ್ನತೋಂತೇಚಕಠಿನೋಲ್ಪಪ್ರಪಾಕವಾನ್ ॥ ೮ ॥
ದಾಹರಾಗತೃಷಾಮೋಹಛರ್ದಿಮೂರ್ಛಾರುಜಾಜ್ವರಾಃ ॥
ಪ್ರಲಾಪೋವೇಪಥುಸ್ತಂದ್ರಾಸೋಸಾಧ್ಯಸ್ಸ್ಯಾತ್ತ್ರಿದೋಷಜಃ॥೯॥

ವಿಸ್ಫೋಟಕರೋಗದ ಅಸಾಧ್ಯ ಲಕ್ಷಣವನ್ನು ಹೇಳುತ್ತಾನೆ—ಗುಳ್ಳೆಗಳ ಮಧ್ಯದಲ್ಲಿ ಗುಂಡಿಯಾಗಿಯೂ ಸುತ್ತಲೂ ಎತ್ತರವಾಗಿಯೂ ಇರುವುದು, ಗುಳ್ಳೆಗಳು ಗಟ್ಟಿಯಾಗಿಯೂ ಸ್ವಲ್ಪ ಮಾತ್ರ ಪಕ್ವಸ್ಥಿತಿಗೆ ಬರುತ್ತಲೂ ಇರುವುದು, ಮೈಯ್ಯುರಿ, ಮೈಯ್ಯೆಲ್ಲಾ ಕೆಂಪಾಗುವುದು, ಬಾಯಾರಿಕೆ, ಅಜ್ಞಾನ, ವಮನ, ಮೂರ್ಛೆ, ವ್ಯಥೆ, ಜ್ವರ, ವ್ಯಥೆಯನ್ನು ತಡೆಯಲಾರದೆ ರೋದನಾದಿಗಳನ್ನು ಮಾಡುವುದು, ನಡುಗುತ್ತಿರುವುದು, ಆಲಸ್ಯ, ಈ ಲಕ್ಷಣಗಳಿದ್ದಲ್ಲಿ ತ್ರಿದೋಷಪ್ರಕೋಪಜನ್ಯವಾದ ಈ ವಿಸ್ಫೋಟವು ಅಸಾಧ್ಯವೆಂದು ತಿಳಿಯಬೇಕು.

ರಕ್ತಾರಕ್ತಸಮುತ್ಥಾನಾಗುಂಜಾವಿದ್ರುಮಸನ್ನಿಭಾಃ ॥
ವೇದಿತವ್ಯಾಸ್ತುರಕ್ತೇನಪೈತ್ತಿಕೇನಚಹೇತುನಾ ॥ ೧೦ ॥
ನತೇಸಿದ್ಧಿಂಸಮಾಯಾಂತಿಸಿದ್ಧೈಯೋಗಶತೈರಪಿ ॥
ಏಕದೋಷೋತ್ಥಿತಸ್ಸಾಧ್ಯಃಕೃಚ್ಛ್ರಸಾಧ್ಯೋದ್ವಿದೋಷಜಃ॥೧೧॥
ಸರ್ವದೋಷೋತ್ಥಿತೋಘೋರಸ್ತ್ವಸಾಧ್ಯೋಭೂರ್ಯುಪದ್ರವಃ ॥

ರಕ್ತದೋಷದಿಂದ ಹುಟ್ಟತಕ್ಕ ವಿಸ್ಫೋಟಗಳು ಗುಲಗಂಜಿ ಹವಳ ಇವುಗಳ ಹಾಗೆ ಕೆಂಪಗೆ ಏಳುತ್ತವೆ, ಹೀಗೆ ಏಳುವ ವಿಸ್ಫೋಟಗಳಲ್ಲಿ ಪಿತ್ತವೂ ಕಾರಣವಾಗಿರುತ್ತದೆ, ಈ ವಿಸ್ಫೋಟಗಳು ಎಷ್ಟು ಔಷಧಗಳನ್ನು ಮಾಡಿದರೂ

ಗುಣವಾಗುವುದೇ ಕಷ್ಟ. ಒಂದು ದೋಷಪ್ರಕೋಪದಿಂದ ಹುಟ್ಟುವ ವಿಸ್ಫೋಟವು ಸಾಧ್ಯವೆಂದೂ, ದ್ವಿದೋಷಪ್ರಕೋಪಜನ್ಯವಾದದ್ದು ಕಷ್ಟಸಾಧ್ಯವೆಂದೂ, ತ್ರಿದೋಷಪ್ರಕೋಪಜನ್ಯವಾದದ್ದು ಭಯಂಕರವಾಗಿಯೂ ಅಸಾಧ್ಯವಾಗಿಯೂ ನಾನಾ ಉಪದ್ರವಯುಕ್ತವಾಗಿಯೂ ಇರುತ್ತದೆಂದೂ ತಿಳಿಯಬೇಕು.

ಇಲ್ಲಿಗೆ ವಿಸ್ಫೋಟನಿದಾನ ಸಂಪೂರ್ಣ.

---

## ಮ ಸೂ ರಿ ಕಾ ನಿ ದಾ ನ.

ಕಟ್ವಮ್ಲಲವಣಕ್ಷಾರವಿರುದ್ಧಾಧ್ಯಶನಾಶನೈಃ ॥
ದುಷ್ಟನಿಷ್ಪಾವಶಾಕಾದ್ಯೈಃಪ್ರದುಷ್ಟಪವನೋದಕೈಃ ॥ ೧ ॥
ಕ್ರೂರಗ್ರಹೇಕ್ಷಣಾಚ್ಚಾಪಿದೇಶೇದೋಷಾಸ್ಸಮುದ್ಧತಾಃ ॥
ಜನಯಂತಿಶರೀರೇಸ್ಮಿನ್ ದುಷ್ಟರಕ್ತೇನಸಂಗತಾಃ ॥ ೨ ॥
ಮಸೂರಾಕೃತಿಸಂಸ್ಥಾನಾಃಪಿಡಕಾಃಸ್ಯುರ್ಮಸೂರಿಕಾಃ ॥
ತಾಸಾಂಪೂರ್ವಂಜ್ವರಃಕಂಡೂರ್ಗಾತ್ರಭಂಗೋರತಿರ್ಭ್ರಮಃ ॥೩॥
ತ್ವಚಿಶೋಥಸ್ಸವೈವರ್ಣ್ಯೋನೇತ್ರರಾಗಶ್ಚಜಾಯತೇ ॥

ಮಸೂರಿಕಾರೋಗವನ್ನು ಹೇಳುತ್ತಾನೆ—ಖಾರ, ಹೆಚ್ಚು ಹುಳಿ, ಹೆಚ್ಚು ಉಪ್ಪು, ಕ್ಷಾರಗಳು, ಪರಸ್ಪರ ವಿರುದ್ಧಗಳಾದ ವಸ್ತುಗಳನ್ನು ತಿನ್ನೋಣ, ಅಜೀರ್ಣವಿರುವಾಗ್ಯೆ ಭೋಜನಮಾಡುವುದು, ಕೆಟ್ಟುಹೋದ ದ್ವಿದಳ ಧಾನ್ಯಗಳನ್ನು ತಿನ್ನುವುದು, ಕೆಟ್ಟು ಹೋದ ತರಕಾರಿಗಳನ್ನು ತಿನ್ನುವುದು, ಗಾಳಿ ಮತ್ತು ನೀರು ಇವುಗಳು ಕೆಟ್ಟುಹೋಗೋಣವರಿಂದಲೂ, ದುಷ್ಟಗ್ರಹದೃಷ್ಟಿ ದೋಷದಿಂದಲೂ, ವಾತಾದಿ ದೋಷಗಳು ಪ್ರಕೋಪವನ್ನು ಹೊಂದಿ ಶರೀರಗತವಾದ ದುಷ್ಟರಕ್ತದೊಡನೆ ಕೂಡಿಕೊಂಡು ಮಸೂರ ಎಂಬನಾಗಿ ಉತ್ತರದೇಶದಲ್ಲಿ ಪ್ರಸಿದ್ಧವಾದ ಒಂದು ಬಗೆಯ ಧಾನ್ಯದಂತಹ ಗುಳ್ಳೆಗಳನ್ನು ಶರೀರದ ಮೇಲೆ ಹುಟ್ಟಿಸುತ್ತವೆ, ಇವಕ್ಕೇನೇ ಮಸೂರಿಕೆಗಳೆಂದು ಹೆಸರು, ಇವು ಹುಟ್ಟುವ ಮೊದಲು ಜ್ವರ, ಮೈನವೆ, ಮೈವಡತ, ಅರುಚಿ, ಬುದ್ಧಿಭ್ರಮಣೆ, ಚರ್ಮದ ಬಣ್ಣಕೆಡುವುದು, ಮತ್ತು ಮೈಯ್ಯಲ್ಲೆಲ್ಲಾ ದದ್ದು, ಕಣ್ಣು ಕೆಂಪಾಗುವುದು ಈ ಲಕ್ಷಣಗಳೆಲ್ಲಾ ಆಗುತ್ತವೆ, ಇದಕ್ಕೆ ಶೀತಾಳಿಸಿಡಬೆನ್ನುತ್ತಾರೆ.

ಸ್ಫೋಟಾಶ್ಯಾವಾರುಣಾರೂಕ್ಷಾಸ್ತೀವ್ರವೇದನಯಾನ್ವಿತಾಃ ॥ ೪ ॥
ಕಠಿನಾಶ್ಚಿರಪಾಕಾಶ್ಚಭವಂತ್ಯನಿಲಸಂಭವಾಃ ॥
ಸಂಧ್ಯಸ್ಥಿಪರ್ವಣಾಂಭೇದಃಕಾಸಃಕಂಪೋರತಿಃಕ್ಲಮಃ ॥ ೫ ॥
ಶೋಷಸ್ತಾಲ್ವೋಷ್ಠಜಿಹ್ವಾನಾಂತೃಷ್ಣಾಚಾರುಚಿಸಂಯುತಾ ॥

ವಾತಪ್ರಕೋಪಜನ್ಯಗಳಾದ ಬಕ್ಕೆಗಳು ಧೂಮ್ರವರ್ಣವಾಗಿಯೂ, ಕೆಂಪ ಗೂ, ಬಿರುಸಾಗಿಯೂ, ಭಯಂಕರವಾದ ವೇದನೆಯಿಂದ ಕೂಡಿಯೂ, ಕಠಿನ ಗಳಾಗಿ, ನಿದಾನವಾಗಿ ಪಕ್ವಕ್ಕೆ ಬರುವಂತವುಗಳಾಗಿರುತ್ತವೆ, ಈ ವಾತಪ್ರಕೋಪ ಜನ್ಯವಾದ ಮಸೂರಿಕಾರೋಗದಲ್ಲಿ ಕೀಲುಗಳು, ಎಲುಬುಗಳು, ಗೆಣ್ಣುಗಳು ಇವುಗಳೆಲ್ಲಾ ಒಡೆಯುತಿರುತ್ತವೆ, ಕೆಮ್ಮು. ನಡುಕ, ಯಾವ ಕೆಲಸದಲ್ಲಿಯೂ ಮನಸ್ಸಿಲ್ಲದಿರುವಿಕೆ, ಆಯಾಸ, ದವಡೆ, ತುಟಿ, ನಾಲಿಗೆ ಇವುಗಳೆಲ್ಲಾ ಒಣಗು ತ್ತಿರುವುದು, ಬಾಯಾರಿಕೆ, ಅರುಚಿ, ಇವುಗಳೆಲ್ಲವೂ ಇರುತ್ತವೆ.

ರಕ್ತಾಃಪೀತಾಸ್ಸಿತಾಸ್ಫೋಟಾಸ್ಸದಾಹಾಸ್ತೀವ್ರವೇದನಾಃ ॥ ೬ ॥
ಭವಂತ್ಯಚಿರಪಾಕಾಶ್ಚ ಪಿತ್ತಕೋಪಸಮುದ್ಭವಾಃ ॥
ವಿಡ್ ಭೇದಶ್ಚಾಂಗಮರ್ದಶ್ಚ ದಾಹಸ್ತೃಷ್ಣಾರುಚಿಸ್ತಥಾ ॥ ೭ ॥
ಮುಖಪಾಕೋಽಕ್ಷಿರಾಗಶ್ಚ ಜ್ವರಸ್ತೀವ್ರಸ್ಸದಾರುಣಃ ॥

ಪಿತ್ತಪ್ರಕೋಪಜನ್ಯವಾದ ಬಕ್ಕೆಗಳು ಕೆಂಪಗೆ, ಹಳದಿಯ ಬಣ್ಣವಾಗಿ, ಬೆಳ್ಳಗೆ ಇರುತ್ತವೆ, ಉರಿ, ಭಯಂಕರವಾದ ವೇದನೆ ಇವುಗಳಿರುತ್ತವೆ, ಬಕ್ಕೆಗಳು ಜಾಗ್ರತೆಯಾಗಿ ಪಕ್ವಕ್ಕೆ ಬರುವ ಸ್ವಭಾವದವುಗಳಾಗಿರುತ್ತವೆ, ಮಲಪ್ರವೃತ್ತಿ, ಮೈವಡತ, ಉರಿ, ಬಾಯಾರಿಕೆ, ಅರುಚಿ, ಬಾಯಲ್ಲಿ ಬೊಕ್ಕೆಗಳಾಗುವುದು, ಕಣ್ಣು ಕೆರಳಿ ಕೆಂಪಾಗುವುದು, ಬಹಳ ಜ್ವರ ಇವುಗಳೂ ಇರುತ್ತವೆ.

ರಕ್ತಜಾಯಾಂಭವಂತ್ಯೇತೇವಿಕಾರಾಃಪಿತ್ತಲಕ್ಷಣಾಃ ॥ ೮ ॥
ಕಫಪ್ರಸೇಕಸ್ತೈಮಿತ್ಯಂಶಿರೋರುಗ್ಗಾತ್ರಗೌರವಂ ॥
ಹೃಲ್ಲಾಸಸ್ಸಾರುಚಿರ್ನಿದ್ರಾತಂದ್ರಾಲಸ್ಯಸಮನ್ವಿತಾಃ ॥ ೯ ॥
ಶ್ವೇತಾಸ್ನಿಗ್ಧಾಭೃಶಂಸ್ಥೂಲಾಃಕಂಡೂರಾಮಂದವೇದನಾಃ ॥
ಮಸೂರಿಕಾಃಕಫೋತ್ಥಾಶ್ಚಚಿರಪಾಕಾಃಪ್ರಕೀರ್ತಿತಾಃ ॥ ೧೦ ॥

ರಕ್ತದೋಷದಿಂದ ಹುಟ್ಟುವ ಮಸೂರಿಕಾ ರೋಗದಲ್ಲಿ ಪಿತ್ತಪ್ರಕೋಪ ದಿಂದ ಹುಟ್ಟುವ ಮಸೂರಿಕಾರೋಗದ ಲಕ್ಷಣಗಳೇ ಕಾಣುತ್ತಿರುತ್ತವೆ, ಕಫ ಪ್ರಕೋಪದಿಂದ ಹುಟ್ಟುವ ಮಸೂರಿಕಾರೋಗದಲ್ಲಿ ಕಫವು ಬಹಳವಾಗಿ ಬಾಯಿ ಯಿಂದ ಹೊರಡುತ್ತಿರುವುದು, ಶರೀರದಲ್ಲಿ ಒಂದು ಬಗೆಯ ಮಾಂದ್ಯ, ತಲೆನೋವು, ಮೈಭಾರ, ಬಾಯಿನೀರು ಬರುವುದು, ಅರುಚಿ, ತೂಕಡಿಕೆ, ಆಕಳಿಕೆ, ಜಡತ್ವ, ಗುಳ್ಳೆಗಳು ಬೆಳ್ಳಗೆ ಜಿಡ್ಡಿನೊಡನೆ ಕೂಡಿ ದಪ್ಪವಾಗಿ ನವೆಯೂ ಮಂದವಾದ ವೇದನೆಯೂ ಇರುತ್ತವೆ, ಈ ಗುಳ್ಳೆಗಳು ಸಾವಕಾಶವಾಗಿ ಪಕ್ವವಾಗುವ ಸ್ವಭಾವ ದವುಗಳಾಗಿರುತ್ತವೆ.

ನೀಲಾಶ್ಚಿಪಿಟವಿಸ್ತೀರ್ಣಾಮಧ್ಯೇನಿಮ್ನಾಮಹಾರುಜಾಃ ॥
ಚಿರಪಾಕಾಃಪೂತಿಸ್ರಾವಾಃಪ್ರಭೂತಾಸ್ಸರ್ವದೋಷಜಾಃ ॥ ೧೧ ॥
ಕಂಠರೋಧಾರುಚಿಸ್ತಂಭಪ್ರಲಾಪಾರತಿಸಂಯುತಾಃ ॥
ದುಶ್ಚಿಕಿತ್ಸ್ಯಾಸ್ಸಮುದ್ದಿಷ್ಟಾಃಪಿಡಕಾಶ್ಚರ್ಮಸಂಜ್ಞಿತಾಃ ॥ ೧೨ ॥

ಗುಳ್ಳೆಗಳು ಕಪ್ಪಾಗಿ ಹರಡಿಕೊಂಡಿರುವುದು, ಮಧ್ಯದಲ್ಲಿ ತಗ್ಗಾಗಿರುವುದು, ವೇದನೆ ಬಹಳವಾಗಿರುವುದು, ಸಾವಕಾಶದಿಂದ ಪರಿಪಕ್ವವಾಗುವ ಸ್ವಭಾವವುಳ್ಳವುಗಳಾಗಿರುವುದು, ಕೀವು ಸೋರುತ್ತಿರುವುದು, ಹೀಗಿದ್ದಲ್ಲಿ ತ್ರಿದೋಷಸನ್ನಿಪಾತಜನ್ಯಗಳೆಂದು ತಿಳಿಯಬೇಕು, ಗಂಟಲು ಕಟ್ಟಿಕೊಳ್ಳುವುದು, ಅರೋಚಕ, ರೋಗಿಯು ಸ್ತಬ್ಧನಾಗಿರುವುದು, ವೇದನೆಯನ್ನು ಸಹಿಸಲಾರದೆ ವ್ಯಥೆಪಡುತ್ತಿರುವುದು, ಕೆಲಸಮಾಡುವ ವಿಷಯದಲ್ಲಿ ಬೇಕಿಲ್ಲದಿರುವುದು, ಈ ಲಕ್ಷಣಗಳೆಲ್ಲಾ ಇರುವ ಮೇಲ್ಕಂಡ ತ್ರಿದೋಷಪ್ರಕೋಪಜನ್ಯಗಳಾದ ಬಕ್ಕೆಗಳು "ಚರ್ಮದಳ" ಎಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತವೆ, ಇವು ಚಿಕಿತ್ಸೆಗೆ ಸಾಧ್ಯಗಳಲ್ಲ.

ರೋಮಕೂಪೋನ್ನತಿಸಮಾರಾಗಿಣ್ಯಃಕಫಪಿತ್ತಜಾಃ ॥
ಕಾಸಾರೋಚಕಸಂಯುಕ್ತಾರೋಮಾಂತ್ಯೋಜ್ವರಪೂರ್ವಿಕಾಃ ॥೧೩॥

ರೋಮಾಂತಿಕಾ ಎಂಬುವುದೊಂದು ಬಗೆಯ ಮಸೂರಿಕಾ ಪ್ರಭೇದ, ಇದನ್ನೇ ಲೋಕದಲ್ಲಿ ದಡಾರ, ಗೋಣಿದಡಾರ ಎಂದು ಸಹ ವ್ಯವಹರಿಸುವ ಪದ್ಧತಿಯಿದೆ, ಇವು ರೋಮಕೂಪಗಳು ಮೇಲಕ್ಕೆ ಉಬ್ಬಿಕೊಂಡಿರುವಂತೆಯೇ ಇರುತ್ತವೆ, ಕೆಂಪಾಗಿರುತ್ತವೆ, ಕೆಮ್ಮಲು, ಅರುಚಿ, ಇವುಗಳು ಇರುತ್ತವೆ, ಇವು ಪ್ರಾರಂಭವಾಗಬೇಕಾದರೂ ಜ್ವರವೇ ಮೊದಲು ಬರುತ್ತದೆ, ಇವು ಕಫ ಮತ್ತು ಪಿತ್ತಗಳ ಪ್ರಕೋಪದಿಂದ ಹುಟ್ಟತಕ್ಕವುಗಳೆಂದು ತಿಳಿಯಬೇಕು.

ತೋಯಬುದ್ಬುದಸಂಕಾಶಾಸ್ತ್ವಗ್ಗತಾಸ್ತುಮಸೂರಿಕಾಃ ॥
ಸ್ವಲ್ಪದೋಷಾಃಪ್ರಜಾಯಂತೇಭಿನ್ನಾಸ್ತೋಯಂಸ್ರವಂತಿಚ ॥೧೪॥
ರಕ್ತಸ್ಥಾಲೋಹಿತಾತಾರಾಶೀಘ್ರಪಾಕಾಸ್ತನುತ್ವಚಃ ॥
ಸಾಧ್ಯಾನಾತ್ಯರ್ಥದುಷ್ಟಾಶ್ಚಭಿನ್ನಾರಕ್ತಂಸ್ರವಂತಿಚ ॥ ೧೫ ॥
ಮಾಂಸಸ್ಥಾಃಕಠಿನಾಸ್ನಿಗ್ಧಾಶ್ಚಿರಪಾಕಾಘನತ್ವಚಃ ॥
ಗಾತ್ರಶೂಲತೃಷಾಕಂಡೂಜ್ವರಾರತಿಸಮನ್ವಿತಾಃ ॥ ೧೬ ॥
ಮೇದೋಜಾಮಂಡಲಾಕಾರಾಮೃದವಃಕಿಂಚಿದುನ್ನತಾಃ ॥
ಘೋರಜ್ವರಪರೀತಾಶ್ಚಸ್ಥೂಲಾಸ್ನಿಗ್ಧಾಸ್ಸವೇದನಾಃ ॥ ೧೭ ॥

ಸಂಮೋಹಾರತಿಸಂತಾಪಾಃಕಶ್ಚಿದಾಭ್ಯೋವಿನಿಸ್ತರೇತ್ ॥
ಕ್ಷುದ್ರಾಗಾತ್ರಸವರ್ಣಾರೂಕ್ಷಾಶ್ಚಿಪಿಟಾಃಕಿಂಚಿದುನ್ನತಾಃ ॥ ೧೮ ॥
ಮಜ್ಜೋತ್ಥಾಭೃಶಸಂಮೋಹವೇದನಾರತಿಸಂಯುತಾಃ ॥
ಛಿಂದಂತಿಮರ್ಮಧಾಮಾನಿಪ್ರಾಣಾನಾಶುಹರಂತಿಚ ॥ ೧೯ ॥
ಭ್ರಮರೇಣೇವವಿದ್ಧಾನಿಕುರ್ವಂತ್ಯಸ್ಥೀನಿಸರ್ವತಃ ॥
ಪಕ್ವಾಭಾಃಪಿಡಕಾಸ್ನಿಗ್ಧಾಃಸೂಕ್ಷ್ಮಾಶ್ಚಾತ್ಯರ್ಥವೇದನಾಃ ॥ ೨೦ ॥
ಸ್ತೈಮಿತ್ಯಾರತಿಸಂಮೋಹದಾಹೋನ್ಮಾದಸಮನ್ವಿತಾಃ ॥
ಶುಕ್ರಜಾಯಾಂಮಸೂರ್ಯಾಂತುಲಕ್ಷಣಾನಿಭವಂತಿಹಿ ॥ ೨೧ ॥
ನಿರ್ದಿಷ್ಟಂಕೇವಲಂಚಿಹ್ನಂದೃಶ್ಯತೇನತುಜೀವಿತಂ ॥
ದೋಷಮಿಶ್ರಾಸ್ತುಸಪ್ತೈತಾದ್ರಷ್ಟವ್ಯಾದೋಷಲಕ್ಷಣೈಃ ॥ ೨೨ ॥
ತ್ವಗ್ಗತಾರಕ್ತಜಾಶ್ಚೈವಪಿತ್ತಜಾಶ್ಲೇಷ್ಮಜಾಸ್ತಥಾ ॥
ಶ್ಲೇಷ್ಮಪಿತ್ತಕೃತಾಶ್ಚೈವಸುಖಸಾಧ್ಯಾಮಸೂರಿಕಾಃ ॥ ೨೩ ॥

ಧಾತುಗತಮಸೂರಿಕಾ ರೋಗದ ಲಕ್ಷಣವನ್ನು ಹೇಳುತ್ತಾನೆ—ಚರ್ಮಗತವಾದ ಮಸೂರಿಕೆಗಳು ಹೇಗಿರುತ್ತವೆಂದರೆ ನೀರಿನ ಮೇಲೆ ಇರುವ ಗುಳ್ಳೆಗಳಂತಿರುತ್ತವೆ, ಇವು ಅಲ್ಪ ಸ್ವಲ್ಪ ದೋಷಗಳ ಪ್ರಕೋಪದಿಂದಲೇ ಹುಟ್ಟಿದವುಗಳಾಗಿರುತ್ತವೆ, ಇವನ್ನು ಚುಚ್ಚಿದರೆ ನೀರು ಹೊರಡುತ್ತದೆ, ರಕ್ತದೋಷದಿಂದ ಉತ್ಪನ್ನಗಳಾದ ಮಸೂರಿಕೆಗಳು ರಕ್ತದ ಹಾಗೆ ಕೆಂಪಾಗಿಯೇ ಇರುತ್ತವೆ, ಜಾಗ್ರತೆಯಾಗಿ ಪಕ್ವವಾಗುತ್ತವೆ, ಚರ್ಮವು ಅಂದರೆ ಈ ಮಸೂರಿಕೆಗಳ ಮೇಲಿರುವ ಚರ್ಮವು ಬಹಳ ತೆಳ್ಳಗಿರುತ್ತವೆ, ಇವೂ ಹೆಚ್ಚಿಗೆ ದೋಷಪ್ರಕೋಪದಿಂದ ಹುಟ್ಟಿದವುಗಳಾಗಿರುವುದಿಲ್ಲ, ಚಿಕಿತ್ಸೆಗೆ ಸಾಧ್ಯಗಳೆಂದೇ ತಿಳಿಯಬೇಕು, ಇವುಗಳನ್ನು ಚುಚ್ಚಿದರೆ ರಕ್ತ ಸೋರುತ್ತದೆ ಮಾಂಸಗತವಾದ ಮಸೂರಿಕೆಗಳು ಗಟ್ಟಿಯಾಗಿರುತ್ತವೆ, ಅವುಗಳನ್ನು ಮುಟ್ಟಿನೋಡಿದರೆ ಜಿಡ್ಡು ತೋರುತ್ತದೆ, ಬಹಳ ಸಾವಕಾಶವಾಗಿ ಪರಿಪಕ್ವವಾಗುತ್ತವೆ, ಇವುಗಳ ಚರ್ಮವು ದಪ್ಪವಾಗಿರುತ್ತದೆ, ಮೈವಡತ, ಬಾಯಾರಿಕೆ, ನವೆ, ಜ್ವರ, ಕೆಲಸಮಾಡುವ ವಿಷಯದಲ್ಲಿ ಮಾಂದ್ಯ, ಈ ಲಕ್ಷಣಗಳೂ ಇರುತ್ತವೆ, ಮೇದೋದೋಷದಿಂದ ಉತ್ಪನ್ನವಾದ ಮಸೂರಿಕಾರೋಗದಲ್ಲಿ ಗುಳ್ಳೆಗಳು ಮಂಡಲದಂತೆ ಗುಂಡಾಗಿರುತ್ತವೆ, ಮೆತ್ತಗಿರುತ್ತವೆ, ಸ್ವಲ್ಪ ಎತ್ತರವಾಗಿ ಉಬ್ಬಿಕೊಂಡಿರುತ್ತವೆ, ಭಯಂಕರವಾದ ಜ್ವರವಿರುತ್ತದೆ, ಗುಳ್ಳೆಗಳು ದೊಡ್ಡವಿರುತ್ತವೆ, ಗುಳ್ಳೆಗಳ ಮೇಲೆ ಜಿಡ್ಡಿರುತ್ತದೆ, ಗುಳ್ಳೆಗಳಲ್ಲಿ ನೋವೂ ಇರುತ್ತದೆ, ಜ್ಞಾನಾಜ್ಞಾನವಿರುತ್ತದೆ, ಮನಸ್ಸಿಗೆ ಉತ್ಸಾಹವಿರುವುದಿಲ್ಲ, ದೇಹಕ್ಕೆ ಸಂತಾಪವಿರುತ್ತದೆ, ಇವು ಕೆಲವರಿಗೆ ಗುಣದಲ್ಲಿ ಪರಿಣಮಿಸುತ್ತವೆ.

ಮಜ್ಜಗತವಾದ ದೋಷದಿಂದ ಹುಟ್ಟತಕ್ಕ ಮಸೂರಿಕೆಗಳು ಸಣ್ಣವಾಗಿರುತ್ತವೆ, ದೇಹದ ಬಣ್ಣವೇ ಇವಕ್ಕೂ ಇರುತ್ತವೆ, ಜಿಡ್ಡಿಲ್ಲದೆ ಇರುತ್ತವೆ, ಕಟ್ಟಿಯಾಗಿ ಕೊಂಚ ಎತ್ತರವಾಗಿರುತ್ತವೆ, ರೋಗಿಗೆ ಪದೇ ಪದೇ ಅಜ್ಞಾನ ಬರುತ್ತಿರುತ್ತದೆ, ವೇದನೆ ಇರುತ್ತದೆ, ಉತ್ಸಾಹವಿರುವುದಿಲ್ಲ, ಮರ್ಮಸ್ಥಾನಗಳನ್ನು ಕತ್ತರಿಸುವಂತೆ ತೋರುತ್ತಿರುತ್ತದೆ, ಥಟ್ಟನೆ ಪ್ರಾಣಹರಣವನ್ನೇ ಮಾಡಿಬಿಡುವುದೂ ಉಂಟು, ಈ ಗುಳ್ಳೆಗಳು ಎದ್ದರೆ ಎಲುವೆಲ್ಲಾ ದುಂಬಿಕೊರದು ಹಾಳುಮಾಡಿದ ಬಿದರಿ ನಂತಾಗುತ್ತದೆ, ಗುಳ್ಳೆಗಳು ಪಕ್ವವಾಗಿಯೇ ಇರುತ್ತವೆ, ಗುಳ್ಳೆಗಳಲ್ಲಿ ಜಿಡ್ಡೂ ಇರುತ್ತದೆ, ಬಹಳ ವೇದನೆ ಇರುತ್ತದೆ, ರೋಗಿಯು ಏನೂ ತಿಳಿಯದವನಂತೆ ಸ್ತಬ್ಧನಾಗಿರುತ್ತಾನೆ, ಉತ್ಸಾಹವಿರುವುದಿಲ್ಲ, ಬುದ್ಧಿ ಸರಿ ಇರುವುದಿಲ್ಲ, ಮೈಯ್ಯುರಿ ಒಂದು ವಿಧವಾದ ಹುಚ್ಚು ಇವುಗಳೆಲ್ಲಾ ಇರುತ್ತವೆ. ಶುಕ್ರಧಾತುಗತವಾದ ದೋಷದಿಂದ ಈ ಮಸೂರಿಕಾ ಗುಳ್ಳೆಗಳು ಉತ್ಪನ್ನವಾದರೂ ಹಿಂದೆ ಹೇಳಿದ ಗುಳ್ಳೆಗಳು ಪಕ್ವವಾಗಿರೋಣ ಮೊದಲಾದ ಎಲ್ಲಾ ಲಕ್ಷಣಗಳೂ ಕಾಣುತ್ತಿರುತ್ತವೆ, ಲಕ್ಷಣಗಳನ್ನು ನೋಡಿಕೊಳ್ಳ ಬಹುದು, ಪರಂತು ರೋಗಿಯು ಬದುಕುವುದಿಲ್ಲ. ಈ ಹಿಂದೆ ಹೇಳಿದ ಏಳು ವಿಧಗಳಾದ ಮಸೂರಿಕೆಗಳನ್ನೂ ಆಯಾ ದೋಷಗಳ ಲಕ್ಷಣಗಳಿಂದ ಗುರ್ತಿಸಬೇಕು, ಚರ್ಮಗತಗಳಾದ ಮಸೂರಿಕೆಗಳೂ, ರಕ್ತಗತ ಗಳಾದ ಮಸೂರಿಕೆಗಳೂ, ಪಿತ್ತಪ್ರಕೋಪಜನ್ಯಗಳಾದ ಮಸೂರಿಕೆಗಳೂ, ಶ್ಲೇಷ್ಮ ಜನ್ಯಮಸೂರಿಕೆಗಳೂ, ಶ್ಲೇಷ್ಮ ಮತ್ತು ಪಿತ್ತಗಳು ಪ್ರಕುಪಿತಗಳಾಗಿ ಹುಟ್ಟಿದ ಮಸೂರಿಕೆಗಳೂ ಸುಖಸಾಧ್ಯಗಳೆಂದು ತಿಳಿಯಬೇಕು.

ವಾತಜಾವಾತಪಿತ್ತೋತ್ಥಾಶ್ಲೇಷ್ಮವಾತಕೃತಾಶ್ಚಯಾಃ ॥
ಕೃಚ್ಛ್ರಸಾಧ್ಯಾಮತಾಸ್ತಸ್ಮಾದ್ಯತ್ನಾದೇತಾಉಪಾಚರೇತ್ ॥ ೨೪ ॥
ಅಸಾಧ್ಯಾಸ್ಸನ್ನಿಪಾತೋತ್ಥಾಸ್ತಾಸಾಂವಕ್ಷ್ಯಾಮಿಲಕ್ಷಣಂ ॥
ಪ್ರವಾಳಸದೃಶಾಃಕಾಶ್ಚಿತ್ ಕಾಶ್ಚಿಜ್ಜಂಬೂಫಲೋಪಮಾಃ ॥ ೨೫ ॥
ಲೋಹಜಾಲಸಮಾಃಕಾಶ್ಚಿದತಸೀಫಲಸನ್ನಿಭಾಃ ॥
ಆಸಾಂಬಹುವಿಧಾವರ್ಣಾಜಾಯಂತೇದೋಷಭೇದತಃ ॥ ೨೬ ॥

ವಾತಪ್ರಕೋಪಜನ್ಯವಾದ ಮಸೂರಿಕಾರೋಗ, ವಾತಪಿತ್ತಪ್ರಕೋಪಜನ್ಯ ವಾದ ಮಸೂರಿಕೆ, ಶ್ಲೇಷ್ಮ ಮತ್ತು ವಾತಗಳ ಪ್ರಕೋಪದಿಂದ ಹುಟ್ಟಿದ್ದು, ಇವು ಗಳು ಕಷ್ಟಸಾಧ್ಯಗಳು, ಇವುಗಳಿಗೆ ಚಿಕಿತ್ಸೆಮಾಡಬೇಕಾದಲ್ಲಿ ಪ್ರಯತ್ನ ಪೂರ್ವಕ ವಾಗಿ ಮಾಡಬೇಕು. ತ್ರಿದೋಷಸನ್ನಿಪಾತದಿಂದ ಉತ್ಪನ್ನವಾದ ಮಸೂರಿಕಾ ರೋಗವು ಅಸಾಧ್ಯವಾದದ್ದು, ಇದರ ಲಕ್ಷಣಗಳೇನಂದರೆ—ಕೆಲವು ಗುಳ್ಳೆಗಳು ಹವಳದ ಹಾಗೆ ಕೆಂಪಗೂ ಮತ್ತೆ ಕೆಲವು ನೇರಿಲಹಣ್ಣಿನ ಹಾಗೆ ಕಪ್ಪಗೂ

ಇರುತ್ತವೆ, ಕೆಲವು ಕಬ್ಬಿಣದ ಬಣ್ಣವಾಗಿಯೂ ಮತ್ತೆ ಕೆಲವು ಆಗಸೇಕಾಯಿನ ಬಣ್ಣವಾಗಿಯೂ ಇರುತ್ತವೆ, ಇವುಗಳ ವರ್ಣಗಳು ದೋಷಪ್ರಕೋಪ ಭೇದದಿಂದ ನಾನಾ ವಿಧವಾಗಿ ಇರುವುದುಂಟು.

ಕಾಸೋಹಿಕ್ಕಾಪ್ರಮೋಹಶ್ಚಜ್ವರಸ್ತೀವ್ರಸ್ಸುದಾರುಣಃ ॥
ಪ್ರಲಾಪಶ್ಚಾತಿಮೂರ್ಛಾಚತೃಷ್ಣಾದಾಹೋತಿಘೂರ್ಣತಾ ॥ ೭೭ ॥
ಮುಖೇನಪ್ರಸ್ರವೇದ್ರಕ್ತಂತಥಾಘ್ರಾಣೇನಚಕ್ಷುಷಾ ॥
ಕಂಠೇಘುರ್ಘುರಕಂಕೃತ್ವಾಶ್ವಸಿತ್ಯತ್ಯರ್ಥವೇದನಂ ॥ ೨೮ ॥
ಮಸೂರಿಕಾಭಿಭೂತಸ್ಯಯಸ್ಯೈತಾನಿಭಿಷಗ್ವರೈಃ ॥
ಲಕ್ಷಣಾನಿಚದೃಶ್ಯಂತೇನದದ್ಯಾತ್ತತ್ರಭೇಷಜಂ ॥ ೨೯ ॥

ಮಸೂರಿಕಾರೋಗದ ಅಸಾಧ್ಯ ಲಕ್ಷಣಗಳು—ಕೆಮ್ಮು, ಬಿಕ್ಕಳಿಕೆ, ಅಜ್ಞಾನ, ಭಯಂಕರವಾದ ಜ್ವರ, ವೇದನೆಯನ್ನು ತಡೆಯಲಾರದೆ ರೋದನಾದಿಗಳನ್ನು ಮಾಡುವುದು, ಮೂರ್ಛೆ ಬರುವುದು, ಬಾಯಾರಿಕೆ, ಸ್ವೈಯ್ಯುರಿ, ತೂಕಡಿಸು ತ್ತಿರುವುದು, ಬಾಯಿ, ಕಣ್ಣು, ಮೂಗು ಇವುಗಳಿಂದ ರಕ್ತ ಬರುವುದು, ಗಂಟಲಿ ನಲ್ಲಿ ಗುರುಗುರು ಶಬ್ದವಾಗುತ್ತ ಅತ್ಯಂತ ಹಿಂಸೆಯೊಡನೆ ಉಸಿರುಬಿಡುವುದು, ಈ ರೀತಿಯಾಗಿ ಮಸೂರಿಕಾರೋಗದಲ್ಲಿ ಈ ಲಕ್ಷಣಗಳು ಕಾಣಬರುತ್ತಿದ್ದರೆ ರೋಗವು ಅಸಾಧ್ಯವೆಂದರಿತು ಚಿಕಿತ್ಸಿಸದೆ ಉದಾಸೀನ ಮಾಡಬೇಕು, ಔಷಧಿ ಕೊಡಬಾರದು.

ಮಸೂರಿಕಾಭಿಭೂತೋಯೋಭೃಶಂಘ್ರಾಣೇನನಿಶ್ವಸೇತ್ ॥
ಸಭೃಶಂತ್ಯಜತಿಪ್ರಾಣಾನ್‌ತೃಷಾರ್ತೋವಾಯುದೂಷಿತಃ ॥ ೩೦ ॥
ಮಸೂರಿಕಾಂತೇಶೋಥಸ್ಯಾತ್‌ಕೂರ್ಪರೇಮಣಿಬಂಧಕೇ ॥
ತಥಾಂಸಫಲಕೇಚಾಪಿದುಶ್ಚಿಕಿತ್ಸ್ಯಸ್ಸುದಾರುಣಃ ॥ ೩೧ ॥

ಮಸೂರಿಕಾರೋಗವುಳ್ಳವನು ಮೂಗಿನಿಂದ ಉಸಿರೆಳೆಯಲು ಪ್ರಾರಂಭಿಸಿ ದಲ್ಲಿ ಬಾಯಾರಿಕೆಯಿಂದ ಪೀಡಿತನಾಗಿ ವಾಯುವಿನ ಸಂಕಟದಿಂದ ಪ್ರಾಣವನ್ನು ಬಿಡುತ್ತಾನೆ. ಮಸೂರಿಕಾರೋಗವು ಇಳಿಯುತ್ತ ಬಂದಂತೆ ಮಣಿಕಟ್ಟು, ಮೊಳ ಕೈಯ್ಯಿ, ಭುಜ ಇವುಗಳಲ್ಲೆಲ್ಲಾ ಶೋಭೆ ಬರುತ್ತ ಬಂದರೆ ಅಸಾಧ್ಯವೆಂದು ತಿಳಿಯಬೇಕು.

ಇಲ್ಲಿಗೆ ಮಸೂರಿಕಾರೋಗನಿದಾನ ಸಂಪೂರ್ಣ.

## ಕ್ಷುದ್ರರೋಗನಿದಾನ.

**ಸ್ನಿಗ್ಧಾಸ್ಸವರ್ಣಾಗ್ರಥಿತಾನೀರುಜಾಮುದ್ಗಸನ್ನಿಭಾಃ ॥**
**ಕಫವಾತೋತ್ಥಿತಾಜ್ಞೇಯಾಬಾಲಾನಾಮಜಗಲ್ಲಿಕಾಃ ॥ ೧ ॥**

ಕ್ಷುದ್ರರೋಗಗಳೆಂದರೆ ಚಿಕ್ಕ ರೋಗಗಳೆಂದು ಕೆಲವರ ಅಭಿಪ್ರಾಯ, ಭಯಂಕರರೋಗಗಳೆಂದು ಮತ್ತೆ ಕೆಲವರು, ಮಕ್ಕಳ ರೋಗಗಳೆಂದು ಹಲವರು, ಮಕ್ಕಳ ಮೈಯ್ಯಲ್ಲಿ ಏಳುವ ಉದ್ದಿನಕಾಳಿನಂತಹ, ಜಿಡ್ಡುಳ್ಳ, ನೋವಿಲ್ಲದ ಬಕ್ಕೆಗಳಿಗೆ ಅಜಗಲ್ಲಿಕೆಗಳೆಂಬ ಹೆಸರು, ಇವುಗಳ ಬಣ್ಣವು ಮಕ್ಕಳ ಮೈಯ್ಯಿನ ಬಣ್ಣದಂತಹ ಬಣ್ಣವೇ ಆಗಿರುತ್ತದೆ, ಇವುಗಳು ಶ್ಲೇಷ್ಮ ಮತ್ತು ವಾತ ಇವುಗಳ ಪ್ರಕೋಪದಿಂದ ಉಂಟಾಗುತ್ತವೆ.

**ಯವಾಕಾರಾಸ್ಸುಕಠಿನಾಗ್ರಥಿತಾಮಾಂಸಸಂಶ್ರಿತಾಃ ॥**
**ಪಿಡಕಾಃಕಫವಾತಾಭ್ಯಾಂಯವಪ್ರಖ್ಯೇತಿಸೋಚ್ಯತೇ ॥ ೨ ॥**

ಉತ್ತರ ದೇಶದಲ್ಲಿ ಪ್ರಸಿದ್ಧವಾದ ಯವೆ ಎಂಬ ಧಾನ್ಯದ ಆಕಾರದಂತೆ ಆಕಾರವುಳ್ಳವುಗಳಾಗಿ ಗಟ್ಟಿಯಾಗಿ ಗಂಟು ಕಟ್ಟಿಕೊಂಡು ಮಾಂಸವನ್ನು ಆಶ್ರಯಿಸಿಕೊಂಡು ಹುಟ್ಟತಕ್ಕ ಬಕ್ಕೆಗಳಿಗೆ ಯವಪ್ರಖ್ಯ ಎಂಬದಾಗಿ ಹೆಸರು, ಶ್ಲೇಷ್ಮ ಮತ್ತು ವಾಯು ಇವುಗಳ ಪ್ರಕೋಪದಿಂದ ಇವು ಹುಟ್ಟುತ್ತವೆ.

**ಘನಾಮವಕ್ರಾಂಪಿಡಕಾಂಉನ್ನತಾಂಪರಿಮಂಡಲಾಂ ॥**
**ಅಂತ್ರಾಲಜೀಮಲ್ಪಪೂಯಾಂತಾಂವಿದ್ಯಾತ್ಕಫವಾತಜಾಂ ॥ ೩ ॥**

ದಪ್ಪವಾಗಿ ವಕ್ರವಾಗದೆ ಎತ್ತರವಾಗಿ ದುಂಡಾಗಿರುವ ವ್ರಣಕ್ಕೆ ಅಂತ್ರಾಲಜಿ ಎಂದು ಹೆಸರು, ಇದು ನರಗಳ ಮೇಲೆ ಏಳುತ್ತದೆ, ಕೀವು ಬಹಳವಾಗಿರುವುದಿಲ್ಲ, ಕುರ ಎಂದು ದೇಹದ ಮೇಲೆ ಏಳುವ ವ್ರಣಗಳು ಈ ಜಾತಿಗೆ ಸೇರಿದವು, ಇವು ಕಫ ಮತ್ತು ವಾಯುಗಳ ಪ್ರಕೋಪದಿಂದುಂಟಾಗತಕ್ಕವು.

**ವಿವೃತಾಸ್ಯಾಂಮಹಾದಾಹಾಂಪಕ್ವೋದುಂಬರಸನ್ನಿಭಾಂ ॥**
**ವಿವೃತಾಮಿತಿತಾಂವಿದ್ಯಾತ್ಪಿತ್ತೋತ್ಥಾಂಪರಿಮಂಡಲಾಂ ॥ ೪ ॥**

ವ್ರಣದ ಮುಖವು ವಿಸ್ತರಿಸಿಕೊಂಡಿರುವುದು, ಉರಿ ಬಹಳವಾಗಿರುವುದು, ಪಕ್ವವಾದ ಅತ್ತಿಯ ಹಣ್ಣಿನಂತೆ ಕೆಂಪಾಗಿರುವುದು, ಇವು ಕೂಡ ದುಂಡಗೆ ಮಂಡಲಾಕಾರವಾಗಿಯೇ ಇರುವುದು, ಹೀಗಿದ್ದಲ್ಲಿ ಇದಕ್ಕೆ ವಿವೃತಾ ಎಂದು ಹೆಸರು, ಇದು ಪಿತ್ತಪ್ರಕೋಪದಿಂದ ಹುಟ್ಟತಕ್ಕದ್ದು, ಇದಕ್ಕೆ ರಕ್ತಕುರು ಎಂದು ವ್ಯವಹಾರದಲ್ಲಿ ಹೆಸರಿದೆ.

**ಗ್ರಥಿತಾಃಪಂಚವಾಷಡ್ವಾದಾರುಣಾಃಕಚ್ಛಪೋಪಮಾಃ ॥**
**ಕಫಾನಿಲಾಭ್ಯಾಂಪಿಡಕಾಜ್ಞೇಯಾಕಚ್ಛಪಿಕಾಬುಧೈಃ ॥ ೫ ॥**

ಕಚ್ಛಪಿಕಾ ಎಂಬುವುದೊಂದು ಬಗೆಯ ವ್ರಣ, ಇದನ್ನು ಯೇಡಿಬಾವು ಎಂದು ಲೌಕಿಕದಲ್ಲಿ ವ್ಯವಹಾರಮಾಡುತ್ತಾರೆ. ಆಮೆಯ ಆಕಾರದಲ್ಲಿ ಐದಾರು ಗಂಟಿನಂತಹ ವ್ರಣಗಳು ಒಂದು ಕಡೆಯಲ್ಲಿ ಏಳುತ್ತವೆ, ಭಯಂಕರವಾದ ನೋವು ವೇದನೆಗಳಿರುತ್ತವೆ, ಇವು ಶ್ಲೇಷ್ಮ ಮತ್ತು ವಾತಗಳ ಪ್ರಕೋಪದಿಂದ ಹುಟ್ಟುತ್ತವೆ.

**ಗ್ರೀವಾಂಸಕಕ್ಷಾಕರಪಾದದೇಶೇಸಂಧೌಗಳೇವಾತ್ರಿಭಿರೇವ ದೋಷೈಃ ॥**
**ಗ್ರಂಥಿಸ್ಸವಲ್ಮೀಕವದಕ್ರಿಯಾಣಾಂಜಾತಃಕ್ರಮೇಣೈವಗತಃ ಪ್ರವೃದ್ಧಿಂ ॥ ೬ ॥**
**ಮುಖೈರನೇಕೈಸ್ಸ್ರುತಿತೋದವದ್ಭಿರ್ವಿಸರ್ಪವತ್ಸರ್ಪತಿಚೋನ್ನತಾಗ್ರೈಃ ॥**
**ವಲ್ಮೀಕಮಾಹುರ್ಭಿಷಜೋವಿಕಾರಂನಿಷ್ಪ್ರತ್ಯನೀಕಂಚಿರಜಂ ವಿಶೇಷಾತ್ ॥ ೭ ॥**

ವಲ್ಮೀಕವೆಂಬುವುದೊಂದು ಬಗೆಯ ವ್ರಣ, ಇದನ್ನು ಹುತ್ತದ ಹುಣ್ಣು ಎಂದು ಕರೆಯುತ್ತಾರೆ, ಇದು ಭುಜದ ಮೇಲೆ, ಹೆಕ್ಕತ್ತಿನ ಮೇಲೆ, ಕಂಕುಳಿನಲ್ಲಿ, ಕೈಕಾಲುಗಳಲ್ಲಿ, ಸಂಧಿಗಳಲ್ಲಿ, ಎಲ್ಲಾ ಕಡೆಯಲ್ಲಿಯೂ ಹುಟ್ಟುತ್ತದೆ, ಇದನ್ನು ನೋಡಿದರೆ ಹುತ್ತದಂತೆ ಕಾಣುತ್ತಿರುತ್ತದೆ, ಇದು ತ್ರಿದೋಷಪ್ರಕೋಪದಿಂದ ಹುಟ್ಟತಕ್ಕದ್ದು, ಇದು ಸಾಮಾನ್ಯವಾಗಿ ಕೆಲಸಮಾಡದೆ ಕೂರುವ ಪ್ರಕೃತಿಯುವರಿಗೇನೇ ವಿಶೇಷ, ಇದು ಸಾಮಾನ್ಯ ವೃದ್ಧಿಯಾಗಿ ಶರೀರವನ್ನೆಲ್ಲಾ ವ್ಯಾಪಿಸಿ ಅಲ್ಲಲ್ಲೆ ಬಾಯಾಗಿ ಸೋರುವುದಕ್ಕೆ ಪ್ರಾರಂಭವಾಗುತ್ತದೆ, ಇದಕ್ಕೆ ಹುಟ್ಟಿದ ಕೊಂಚ ದಿವಸದೊಳಗೇನೇ ಚಿಕಿತ್ಸೆಮಾಡಿದರೆ ಏನಾದರೂ ಪ್ರಯೋಜನವಾಗಬಹುದು, ಹಳತಾದರೆ ಅಸಾಧ್ಯವೇ ಆಗಿಬಿಡುತ್ತದೆ.

**ಪದ್ಮಕರ್ಣಿಕವನ್ಮಧ್ಯೇಪಿಡಕಾಭಿಸ್ಸಮಾಚಿತಾಂ ॥**
**ಇಂದ್ರವಿದ್ಧಾಂತುತಾಂವಿದ್ಯಾದ್ವಾತಪಿತ್ತೋತ್ಥಿತಾಂಭಿಷಕ್ ॥ ೮ ॥**

ಕಮಲದ ಹುವ್ವಿನ ಮಧ್ಯಭಾಗದ ಹಾಗೆ ದುಂಡಗೆ ಬಕ್ಕೆಗಳಿಂದ ವ್ಯಾಪ್ತವಾದ ಕೆಂಪುಬಣ್ಣದ ವ್ರಣಕ್ಕೆ ಇಂದ್ರವಿದ್ಧಾ ಎಂಬದಾಗಿ ಹೆಸರು. ಈ ವ್ರಣವು ವಾಯು ಮತ್ತು ಪಿತ್ತಗಳ ಪ್ರಕೋಪದಿಂದ ಉತ್ಪನ್ನವಾದದ್ದೆಂದು ತಿಳಿಯಬೇಕು.

ಮಂಡಲಂವೃತ್ತಮುತ್ಸನ್ನಂಸರಕ್ತಂಪಿಡಕಾಚಿತಂ ॥
ರುಜಾಕರೀಂಗರ್ದಭಿಕಾಂತಾಂವಿದ್ಯಾದ್ವಾತಪಿತ್ತಜಾಂ ॥ ೯ ॥

ಗರ್ದಭಿಕಾ ಎಂಬುವುದೊಂದು ಬಗೆಯ ವ್ರಣ, ಇದರಲ್ಲಿ ಬಕ್ಕೆಗಳು ದುಂಡಗೆ ಮಂಡಲಾಕಾರವಾಗಿ ಕೆಂಪಾಗಿ ಅಡಗಿಕೊಂಡಿರುತ್ತವೆ. ನೋವು, ವ್ಯಥೆ ಬಹಳವಾಗಿರುತ್ತದೆ, ಇದು ಕೂಡ ವಾಯು ಮತ್ತು ಕಫಗಳ ಪ್ರಕೋಪದಿಂದ ಉತ್ಪನ್ನವಾದದ್ದೆಂದು ತಿಳಿಯಬೇಕು.

ವಾತಶ್ಲೇಷ್ಮಸಮುದ್ಭೂತಶ್ವಯಥುರ್ಹನುಸಂಧಿಜಃ ॥
ಸ್ಥಿರೋಮಂದರುಜಸ್ನಿಗ್ಧೋಜ್ಞೇಯಃಪಾಷಾಣಗರ್ದಭಃ ॥ ೧೦ ॥

ಪಾಷಾಣಗರ್ದಭವೆಂಬುವುದೊಂದು ಬಗೆಯ ರೋಗ. ಇದು ದವಡೆಗಳು ಸಂಧಿಸುವ ಸ್ಥಳದಲ್ಲಿ ಅಂದರೆ ಕಿವಿಯ ಹತ್ತಿರ ಬಾತುಕೊಂಡು ಮುಟ್ಟಿದರೆ ಕಲ್ಲಿನಂತೆ ಗಟ್ಟಿಯಾಗಿರುತ್ತದೆ, ನೋವು ಬಹಳವಾಗಿರುವುದಿಲ್ಲ, ಮೇಲೆ ಜಿಡ್ಡು ತೇಲುತ್ತಿರುತ್ತದೆ, ಇದು ವಾತ ಮತ್ತು ಶ್ಲೇಷ್ಮಗಳ ಪ್ರಕೋಪದಿಂದ ಹುಟ್ಟತಕ್ಕಂಥಾದ್ದು.

ಕರ್ಣಸ್ಯಾಭ್ಯಂತರೇಜಾತಾಂಪಿಡಕಾಮುಗ್ರವೇದನಾಂ ॥
ಸ್ಥಿರಾಂಪನಸಿಕಾಂತಾಂತುವಿದ್ಯಾದ್ವಾತಕಫೋತ್ಥಿತಾಂ ॥ ೧೧ ॥

ಪನಸಿಕಾ ಎಂಬುವುದೊಂದು ಬಗೆಯ ವ್ರಣ, ಕಿವಿಯ ಒಳಭಾಗದಲ್ಲಿ ಈ ವ್ರಣವು ಹುಟ್ಟುತ್ತದೆ, ಹಲಸಿನಕಾಯಿಯ ಮೇಲುಭಾಗದಲ್ಲಿರುವ ಮುಳ್ಳಿನಂತೆ ಈ ಬಕ್ಕೆಗಳಿರುತ್ತವೆ, ಭಯಂಕರವಾದ ನೋವು ಇರುತ್ತದೆ, ಬಕ್ಕೆಗಳು ಗಟ್ಟಿಯಾಗಿರುತ್ತವೆ, ವಾಯು ಮತ್ತು ಶ್ಲೇಷ್ಮಗಳ ಪ್ರಕೋಪದಿಂದ ಇವು ಹುಟ್ಟುತ್ತವೆಂದು ತಿಳಿಯಬೇಕು.

ವಿಸರ್ಪವತ್ಸರ್ಪತಿಯಃಶೋಥಸ್ತನುರಪಾಕವಾನ್ ॥
ದಾಹಜ್ವರಕರಃಪಿತ್ತಾತ್ಸಜ್ಞೇಯೋಜಾಲಗರ್ದಭಃ ॥ ೧೨ ॥

ಜಾಲಗರ್ದಭವೆಂಬುವುದೊಂದು ಬಗೆಯ ವ್ರಣ, ವಿಸರ್ಪವೆಂಬ ಉರಿಯಿಂದ ಕೂಡಿದ ಬಕ್ಕೆಯಂತೆ ಇದರಲ್ಲಿಯೂ ಶೋಭೆ, ಉರಿ, ಜ್ವರ ಇವುಗಳಿಂದ ಕೂಡಿದ ಬಕ್ಕೆಗಳು ಶರೀರದ ಮೇಲೆಲ್ಲಾ ಅಲ್ಲಲ್ಲಿ ಹುಟ್ಟುತ್ತಿರುತ್ತವೆ, ಜಾಗ್ರತೆಯಾಗಿ ಪಕ್ವಸ್ಥಿತಿಗೆ ಬರುವುದಿಲ್ಲ, ಇದು ಪಿತ್ತಪ್ರಕೋಪದಿಂದ ಹುಟ್ಟುತ್ತದೆಂದು ತಿಳಿಯಬೇಕು

ಪಿಡಕಾಮುತ್ತಮಾಂಗಸ್ಥಾಂವೃತ್ತಾಮುಗ್ರರುಜಾಜ್ವರಾಂ ॥
ಸರ್ವಾತ್ಮಿಕಾಂಸರ್ವಲಿಂಗಾಂಜಾನೀಯಾದಿರಿವೇಲ್ಲಿಕಾಂ ॥ ೧೩ ॥

ಇರಿವೇಲ್ಲಿಕಾ ಎಂಬುವುದೊಂದು ಬಗೆಯ ವ್ರಣ, ಇದು ತಲೆಯಲ್ಲಿ ಹುಟ್ಟುತ್ತದೆ, ದುಂಡಾಗಿರುತ್ತದೆ, ಭಯಂಕರವಾದ ನೋವು ಜ್ವರ ಇವುಗಳಿರುತ್ತವೆ, ಇದು ತ್ರಿದೋಷಪ್ರಕೋಪಜನ್ಯವಾದದ್ದು, ತ್ರಿದೋಷಗಳ ಲಕ್ಷಣಗಳೂ ಇದರಲ್ಲಿ ಸ್ಪಷ್ಟವಾಗಿ ಕಾಣುತ್ತಿರುತ್ತವೆ, ತಲೆಹುಣ್ಣು ಎಂಬದಾಗಿ ಇದನ್ನು ವ್ಯವಹರಿಸುತ್ತಾರೆ.

ಬಾಹುಪಾರ್ಶ್ವಾಂಸಕಕ್ಷೇಷುಕೃಷ್ಣಸ್ಫೋಟಾಂಸವೇದನಾಂ ॥
ಪಿತ್ತಪ್ರಕೋಪಸಂಭೂತಾಂಕಕ್ಷ್ಯಾಮಿತ್ಯಭಿನಿರ್ದಿಶೇತ್ ॥ ೧೪ ॥

ಕಕ್ಷ್ಯಾ ಎಂಬುವುದೊಂದು ಬಗೆಯ ವ್ರಣ. ತೋಳುಗಳು, ಪಕ್ಕಗಳು, ಕಂಕಳು, ಭುಜಗಳು, ಈ ಪ್ರದೇಶಗಳಲ್ಲಿ ಕಪ್ಪುಬಣ್ಣದ ಅನೇಕ ಬಕ್ಕೆಗಳೆದ್ದು ಕಲಸಿಹೋಗಿ ವ್ರಣಗಳಾಗುವುವು, ಉರಿ ವೇದನೆ ಬಹಳ ಜಾಸ್ತಿಯಾಗಿ ಇರುತ್ತಿರುವುದು, ಈ ವ್ರಣಗಳು ಪಿತ್ತಪ್ರಕೋಪಜನ್ಯಗಳೆಂದು ತಿಳಿಯಬೇಕು.

ಏಕಾಮೇತಾದೃಶೀಂದೃಷ್ಟ್ವಾಪಿಡಕಾಂಸ್ಫೋಟಸನ್ನಿಭಾಂ ॥
ತ್ವಗ್ಗತಾಂಪಿತ್ತಕೋಪೇನಗಂಧಮಾಲಾಂಪ್ರಚಕ್ಷತೇ ॥ ೧೫ ॥

ಹಿಂದೆ ಹೇಳಿದ ಕಕ್ಷ್ಯಾ ಎನ್ನುವ ಗುಳ್ಳೆಯ ಲಕ್ಷಣಗಳುಳ್ಳ ಒಂದೇ ಗುಳ್ಳೆಯು ಶರೀರದ ಯಾವ ಭಾಗದಲ್ಲಿಯಾದರೂ ಕಂಡುಬಂದಲ್ಲಿ ಪಿತ್ತಪ್ರಕೋಪಜನ್ಯವಾದ ಆ ಗುಳ್ಳೆಯಂತಹ ಒಕ್ಕೆಯನ್ನು ಗಂಧಮಾಲಾ ಎಂಬದಾಗಿ ಕರೆದುಕೊಳ್ಳುತ್ತಾರೆ.

ಕಕ್ಷಭಾಗೇಷುಯೇಸ್ಫೋಟಾಜಾಯಂತೇಮಾಂಸದಾರಣಾಃ ॥
ಅಂತರ್ದಾಹಜ್ವರಕರಾದೀಪ್ತಪಾವಕಸನ್ನಿಭಾಃ ॥ ೧೬ ॥
ಸಪ್ತಾಹಾದ್ವಾದಶಾಹಾದ್ವಾಪಕ್ಷಾದ್ವಾಹಂತಿಮಾನವಂ ॥
ತಾಮಗ್ನಿರೋಹಿಣೀಂವಿದ್ಯಾದಸಾಧ್ಯಾಂಸರ್ವದೋಷಜಾಂ ॥ ೧೭ ॥

ಅಗ್ನಿರೋಹಿಣಿ ಎಂಬುವುದೊಂದು ಬಗೆಯ ಗುಳ್ಳೆಗಳಂತಹ ವ್ರಣ, ಈ ವ್ರಣಗಳು ಕಂಕುಳಿನ ಭಾಗದಲ್ಲಿ ಮಾಂಸವನ್ನೇ ಒಡೆದು ಸೀಳಿಕೊಂಡು ಏಳುತ್ತವೆ, ಈ ವ್ರಣರೋಗದಲ್ಲಿ ರೋಗಿಗೆ ಅಂತರ್ದಾಹವೂ ಜ್ವರವೂ ಎರಡೂ ಇರುತ್ತವೆ, ಉರಿ ಬೆಂಕಿಯಿಂದ ಸುಟ್ಟಂತೆ ಬಹು ವೇದನೆ ಇರುತ್ತದೆ, ಈ ವ್ರಣಗಳು ಉತ್ಪನ್ನವಾದ ಏಳು ದಿವಸಗಳಿಗಾಗಲೀ, ಹತ್ತು ದಿವಸಗಳಿಗಾಗಲೀ, ಒಂದು ಪಕ್ಷ ಎಂದರೆ ಹದಿನೈದು ದಿವಸಗಳಿಗಾಗಲಿ ಮನುಷ್ಯನನ್ನು ಕೊಲ್ಲುತ್ತವೆ, ಈ ವ್ರಣಗಳು ಏಕಕಾಲದಲ್ಲಿ ತ್ರಿದೋಷಗಳೂ ಪ್ರಕೋಪವನ್ನು ಹೊಂದಿ ಹುಟ್ಟತಕ್ಕವುಗಳಾಗಿಯೂ ಅಸಾಧ್ಯಗಳಾಗಿಯೂ ಇರುವುದರಿಂದ ಚಿಕಿತ್ಸೆಗೆ ಯೋಗ್ಯ ಸ್ಥಿತಿಯಲ್ಲಿದ್ದರೆ ಮಾತ್ರ ಚಿಕಿತ್ಸಿಸಬೇಕು.

**ನಖಮಾಂಸಮಧಿಷ್ಠಾಯ ವಾಯುಃ ಪಿತ್ತಂ ಚ ದೇಹಿನಾಂ ॥**
**ಕುರ್ವತೇ ದಾಹಪಾಕೌ ಚ ತಂ ವ್ಯಾಧಿಂ ಚಿಪ್ಪಮಾದಿಶೇತ್ ॥ ೧೮ ॥**

ವಾತ ಮತ್ತು ಪಿತ್ತಗಳು ಪ್ರಕುಪಿತಗಳಾಗಿ ಕೈಯ್ಯಿ ಮತ್ತು ಕಾಲಿನ ಉಗುರುಗಳನ್ನು ಆಶ್ರಯಿಸಿ ಅಲ್ಲಿ ಉರಿಯನ್ನೂ ಮತ್ತು ವ್ರಣವನ್ನೂ ಉಂಟು ಮಾಡಿದಲ್ಲಿ ಅದನ್ನು ಚಿಪ್ಪವೆಂದು ಕರೆಯುತ್ತಾರೆ.

**ತದೇವಾಲ್ಪತರೈರ್ದೋಷೈಃ ಪುರುಷಂ ಕುನಖಂ ವದೇತ್ ॥**
**ಗಂಭೀರಾಮಲ್ಪಸಂರಂಭಾಂ ಸವರ್ಣಾಮುಪರಿಸ್ಥಿತಾಂ ॥ ೧೯ ॥**
**ಪಾದಸ್ಯಾನುಶಯೀಂ ತಾಂ ತು ವಿದ್ಯಾದಂತಃಪ್ರಪಾಕಿನೀಂ ॥**

ಹಿಂದೆ ಹೇಳಿದ ಚಿಪ್ಪವೆಂಬ ವ್ಯಾಧಿಯೇ ಕೊಂಚ ಭಾಗ ದೋಷಪ್ರಕೋಪ ಕಡಮೆಯಾಗಿ ಉಗುರಿನ ಬಣ್ಣವನ್ನು ಮಾತ್ರ ಕೆಡಿಸಿದರೆ ಅದಕ್ಕೆ ಕುನಖವೆಂಬುದಾಗಿ ಹೆಸರು. ಹೀಗೇನೇ ಪಕ್ವವಾಗುತ್ತ ಚರ್ಮದಿಂದ ಹೊರಗೆ ನೋಡಲು ಗಂಭೀರವಾಗಿ ಅಂದರೆ ಏನೂ ಇಲ್ಲದಂತೆ ಕಾಣುತ್ತಿರುವ ಮತ್ತು ಸ್ವಲ್ಪವಾಗಿ ಬಾವಿರುವ ದೇಹದ ಬಣ್ಣಕ್ಕೆ ಸಮನಾದ ಬಣ್ಣವುಳ್ಳ ಕಾಲಿನ ಹತ್ತಿರ ಮೇಲುಭಾಗದಲ್ಲಿರುವ ವ್ರಣಕ್ಕೆ ಅಂತಃಪ್ರಪಾಕಿನೀ ಎಂಬದಾಗಿ ಹೆಸರು.

**ವಿದಾರೀಕಂದವದ್ವೃತ್ತಾ ಕಕ್ಷವಂಕ್ಷಣಸಂಧಿಷು ॥ ೨೦ ॥**
**ವಿದಾರಿಕಾ ಭವೇದ್ರಕ್ತಾ ಸರ್ವಜಾ ಸರ್ವಲಕ್ಷಣಾ ॥**

ವಿದಾರೀಕಂದವೆಂದರೆ ಭೂಕುಷ್ಮಾಂಡಗೆಡ್ಡೆಯ ಹಾಗೆ ದುಂಡಗೆ ಉದ್ದುದ್ದನಾಗಿ ಕಂಕುಳ ಸಂದಿನಲ್ಲಿ ಮತ್ತು ತೊಡೆಯ ಸಂಧಿಯಲ್ಲಿ ಸಹಾ ಕೆಂಪಾಗಿ ಏಳುವ ಗಂಟುಗಳಿಗೆ ವಿದಾರಿಕಾ ಎಂದು ಹೆಸರು, ಇದು ತ್ರಿದೋಷಪ್ರಕೋಪಜನ್ಯ, ತ್ರಿದೋಷಗಳ ಲಕ್ಷಣಗಳೂ ಇದರಲ್ಲಿ ಕಾಣುತ್ತಿರುತ್ತವೆ.

**ಪ್ರಾಪ್ಯ ಮಾಂಸಶಿರಾಸ್ನಾಯೂಃ ಶ್ಲೇಷ್ಮಾ ಮೇದಸ್ತಥಾನಿಲಃ ॥೨೧॥**
**ಗ್ರಂಥಿಂ ಕರೋತ್ಯಸೌ ಭಿನ್ನೋ ಮಧುಸರ್ಪಿರ್ವಸಾನಿಭಂ ॥**
**ಸ್ರವತ್ಯಾಸ್ರಾವಮನಿಲಸ್ತತ್ರ ವೃದ್ಧಿಂ ಗತಃ ಪುನಃ ॥ ೨೨ ॥**
**ಮಾಂಸಂ ಸಂಶೋಷ್ಯ ಗ್ರಥಿತಾಂ ಶರ್ಕರಾಂ ಜನಯೇತ್ತತಃ ॥**
**ದುರ್ಗಂಧಿ ಕ್ಲಿನ್ನಮತ್ಯರ್ಥಂ ನಾನಾವರ್ಣಂ ತತಶ್ಶಿರಾಃ ॥ ೨೩ ॥**
**ಸ್ರವಂತಿ ರಕ್ತಂ ಸಹಸಾ ತಂ ವಿದ್ಯಾಚ್ಛರ್ಕರಾರ್ಬುದಂ ॥**

**ಶರ್ಕರಾರ್ಬುದವೆಂಬುವುದರ ಲಕ್ಷಣಗಳನ್ನು ಹೇಳುತ್ತಾನೆ–ಪ್ರಕುಪಿತವಾದ ಶ್ಲೇಷ್ಮ ಮತ್ತು ವಾಯು ಇವುಗಳು ಮೇದಸ್ಸಿನೊಡನೆ ಕೂಡಿ ಮಾಂಸ, ಸಿರ,**

(ರಕ್ತನಾಳ) ಸ್ನಾಯು ಎಂದರೆ ನರ ಇವುಗಳಲ್ಲಿ ವ್ಯಾಪಿಸಿ ದೇಹದಲ್ಲಿ ಅಲ್ಲಲ್ಲಿ ಗಂಟು ಗಳು ಉಂಟಾಗುವಂತೆ ಮಾಡುತ್ತವೆ. ಅಂತಹ ಗಂಟು ಒಡೆದು ಜೇನುತುಪ್ಪದ ಬಣ್ಣದ, ತುಪ್ಪದ ಬಣ್ಣದ, ಮಾಂಸರಸದಂತಹ ದ್ರವವನ್ನು ಸ್ರವಿಸುವುದಕ್ಕೆ ಆರಂಭಿಸುತ್ತದೆ, ಈ ರೀತಿ ಸ್ರಾವವು ಹೊರಡುತ್ತಿರುವಾಗಲೇ ವಾಯು ವೃದ್ಧಿ ಯಾಗಲು ಕಾರಣಗಳು ಸಂಭವಿಸಿದಲ್ಲಿ ವಾತವೃದ್ಧಿಯಾಗಿ ಮಾಂಸವನ್ನು ಶೋಷಿಸಿ ಹೋಗುವಂತೆ ಮಾಡಿ ಗಂಟುಗಳಲ್ಲಿ ಶರ್ಕರಾ ಎಂದರೆ ಒಂದು ಬಗೆಯ ಕಲ್ಲಿನಂತಹ ಪದಾರ್ಥವನ್ನು ಉಂಟುಮಾಡುತ್ತದೆ ಈ ರೀತಿಯಾಗಿ ಶರ್ಕರೆಯು ಹುಟ್ಟಿದ ಮೇಲೆ ಗಾಯದಲ್ಲಿ ದುರ್ವಾಸನೆ ಹುಟ್ಟುತ್ತದೆ, ಗಾಯವು ದ್ರವಿಸುವುದ ಕ್ಕಾರಂಭವಾಗುತ್ತದೆ, ನಂತರ ನಾನಾ ವರ್ಣಯುಕ್ತವಾದ ರಕ್ತವನ್ನೇ ಸ್ರವಿಸು ವುದಕ್ಕಾರಂಭಿಸುತ್ತದೆ, ಇದಕ್ಕೇನೇ ಶರ್ಕರಾರ್ಬುದವೆಂಬದಾಗಿ ಹೆಸರು.

ಪರಿಕ್ರಮಣಶೀಲಸ್ಯವಾಯುರತ್ಯರ್ಥರೂಕ್ಷಯೋಃ ॥ ೨೪ ॥
ಪಾದಯೋಃಕುರುತೇದಾರೀಂಪಾದದಾರೀಂತಮಾದಿಶೇತ್ ॥

ಬಹಳವಾಗಿ ಸಂಚಾರಮಾಡುವ ಸ್ವಭಾವವುಳ್ಳವರಿಗೆ ವಾಯುವು ಪ್ರಕೋಪ ವನ್ನು ಹೊಂದಿ ರೂಕ್ಷಗಳಾದ ಅಂದರೆ ಸ್ನೇಹರಹಿತಗಳಾದ ಕಾಲಹಿಮ್ಮಡಿಗಳಲ್ಲಿ ಕಾಲಿನ ಇತರ ಭಾಗಗಳಲ್ಲಿ ಒಡಕನ್ನುಂಟುಮಾಡುತ್ತದೆ, ಇದಕ್ಕೆ ಪಾದದಾರೀ ಎಂಬದಾಗಿ ಹೆಸರು. ಅಂಗಾಲು ಬಿರಕುಬಿಡುವುದು.

ಶರ್ಕರೋನ್ಮಥಿತೇಪಾದೇಕ್ಷತೇವಾಕಂಟಕಾದಿಭಿಃ ॥ ೨೫ ॥
ಗ್ರಂಥಿಃಕೋಲವದುತ್ಸನ್ನೋಜಾಯತೇಕದರಂಹಿತತ್ ॥

ಕಾಲಿಗೆ ಕಲ್ಲು ಒತ್ತುವುದರಿಂದಲಾಗಲಿ, ಮುಳ್ಳು ಚುಚ್ಚುವುದರಿಂದಲಾಗಲಿ ಬೋರೆಯ ಕಾಯಿನ ಹಾಗೆ ಅಂಗಾಲಿನಲ್ಲಿ ಗಂಟು ಆಗುತ್ತದೆ, ಇದಕ್ಕೆ ಕದರ ವೆಂದು ಹೆಸರು. ಕಲ್ಲೊತ್ತು, ಆಣಿ ಬೆಳೆಯುವುದು ಎಂದು ಲೋಕದಲ್ಲಿ ವ್ಯವಹಾರವಾಗಿ ಕರೆಯುತ್ತಾರೆ.

ಕ್ಲಿನ್ನಾಂಗುಲ್ಯಂತರೌಪಾದೌಕಂಡೂದಾಹರುಜಾನ್ವಿತೌ ॥ ೨೬ ॥
ದುಷ್ಟಕರ್ದಮಸಂಸ್ಪರ್ಶಾದಲಸಂತಂವಿಭಾವಯೇತ್ ॥

ಕರಗಲು ಕೆಸರಿನಲ್ಲಿ ತಿರಿಗಾಡೋಣದರಿಂದ ಕಾಲುಬೆರಳಿನ ಸಂದುಗಳ ಲ್ಲೆಲ್ಲಾ ಶಲತುಹೋಗಿ ನವೆ, ಉರಿ, ವ್ಯಥೆ ಇವುಗಳುಂಟಾಗಿ ಗಾಯವಾದಲ್ಲಿ ಅದನ್ನು ಅಲಸವೆಂದು ಕರೆಯುತ್ತಾರೆ, ಕೆಸರುಹುಣ್ಣು ಎಂದು ಲೌಕಿಕದಲ್ಲಿ ವ್ಯವಹಾರವಿದೆ.

ರೋಮಕೂಪಾನುಗಂಪಿತ್ತಂವಾತೇನಸಹಮೂರ್ಛಿತಂ ॥ ೨೭ ॥
ಪ್ರಚ್ಯಾವಯತಿರೋಮಾಣಿತತಶ್ಲೇಷ್ಮಾಸಶೋಣಿತಃ ॥
ರುಣದ್ಧಿರೋಮಕೂಪಾಂಸ್ತುತತೋಽನ್ಯೇಷಾಮಸಂಭವಃ ॥ ೨೮ ॥
ತದಿಂದ್ರಲುಪ್ತಂಖಾಲಿತ್ಯಂರುಹ್ಯೇತಿಚವಿಭಾವ್ಯತೇ ॥

ರೋಮಕೂಪಗಳಲ್ಲಿರುವ ಪಿತ್ತವು ವಾಯುವಿನೊಡನೆ ಸೇರಿ ಪ್ರಕೋಪ ವನ್ನು ಹೊಂದಿ ಕೂದಲುಗಳು ಉದುರಿಹೋಗುವಂತೆ ಮಾಡುತ್ತದೆ, ನಂತರ ಅದೇ ಸ್ಥಾನದಲ್ಲಿರುವ ಶ್ಲೇಷ್ಮ ಮತ್ತು ರಕ್ತಗಳು ಕೆಟ್ಟುಹೋಗಿ ಆ ಭಾಗದಲ್ಲಿ ಮತ್ತೆ ಕೂದಲೇ ಹುಟ್ಟದಂತೆ ಮಾಡುತ್ತವೆ, ಇದಕ್ಕೆ ಇಂದ್ರಲುಪ್ತವೆಂಬ ದಾಗಿಯೂ, ಖಾಲಿತ್ಯವೆಂಬದಾಗಿಯೂ, ರುಹ್ಯಾ ಎಂಬದಾಗಿಯೂ ಎರಡು ಮೂರು ಹೆಸರುಗಳಿವೆ, ತಲೆಯಲ್ಲಿ ಪಟ್ಟೆದಲೆ ಬೀಳುವುದು, ಮೀಸೆಯ ಕೂದ ಲೆಲ್ಲಾ ಉದುರುವುದು, ಇವು ಈ ಜಾತಿಗೆ ಸೇರುತ್ತವೆ.

ದಾರುಣಾಕಂಡುರಾರೂಕ್ಷಾಕೇಶಭೂಮಿಃಪ್ರಪಾಟ್ಯತೇ ॥ ೨೯ ॥
ಕಫಮಾರುತಕೋಪೇನವಿದ್ಯಾದ್ದಾರುಣಕಂತುತಂ ॥

ವಾಯು ಮತ್ತು ಪಿತ್ತಗಳ ಪ್ರಕೋಪದಿಂದ ತಲೆಯಲ್ಲಿ ಕೂದಲಿನ ಬುಡ ದಲ್ಲಿ ಬಹಳ ನವೆಯಾಗುವುದು, ಆ ಭಾಗದಲ್ಲೆಲ್ಲಾ ಜಿಡ್ಡಿಲ್ಲದೆ ಕಿತ್ತುಹೋಗು ವುದು, ಹೀಗಾಗುತ್ತ ಬರುವುದು ದಾರುಣಕವೆನ್ನಿಸಿಕೊಳ್ಳಲ್ಪಡುತ್ತದೆ, ತಲೆ ಚುಂಡು, ಸುಣ್ಣಪರಲುಹುಣ್ಣು ಎಂಬ ಹೆಸರುಗಳಿಂದ ಕರೆಯುತ್ತಾರೆ.

ಅರೂಂಷಿಬಹುವಕ್ರಾಣಿಬಹುಕ್ಲೇದೀನಿಮೂರ್ಧನಿ ॥ ೩೦ ॥
ಕಫಾಸೃಕ್ಕ್ರಿಮಿಕೋಪೇನನೃಣಾಂವಿದ್ಯಾದರೂಂಷಿಕಾಂ ॥

ತಲೆಯಲ್ಲಿ ಕಜ್ಜಿಗಳೇಳುವುದು ಈ ಕಜ್ಜಿಗಳು ಬಹು ವಕ್ರವಾಗಿರುವುದು, ಯಾವಾಗಲೂ ನೀರಾಡುತ್ತಿರುವುದು, ಇಂತಹ ಕಜ್ಜಿಗಳಿಗೆ ಅರೂಂಷಿಕಾ ಎಂದು ಹೆಸರು. ಶ್ಲೇಷ್ಮ, ರಕ್ತ, ಕ್ರಿಮಿಗಳು ಇವುಗಳ ಪ್ರಕೋಪದಿಂದ ಈ ಕಜ್ಜಿಗಳು ಹುಟ್ಟುತ್ತವೆ, ಇವುಗಳಿಗೆ ಅರೂಂಷಿಕೆಗಳೆಂಬದಾಗಿ ಹೆಸರು.

ಕ್ರೋಧಶೋಕಶ್ರಮಕೃತಶ್ಶರೀರೋಷ್ಮಾಶಿರೋಗತಃ ॥ ೩೧ ॥
ಪಿತ್ತಂಚಕೇಶಾನ್ಪಚತಿಪಲಿತಂತೇನಜಾಯತೇ ॥

ಸಿಟ್ಟು, ದುಃಖ, ಆಯಾಸ ಇವುಗಳಿಂದ ದೇಹದಲ್ಲಿ ಇರತಕ್ಕ ಉಷ್ಣವು ಹೆಚ್ಚಿ ಶಿರಸ್ಥಾನಗತವಾಗಿ ಅಲ್ಲಿರತಕ್ಕ ಪಿತ್ತದೊಡನೆ ಸೇರಿ ತಲೆಯಲ್ಲಿರುವ

ಕೂದಲುಗಳ ಬುಡವು ಪಕ್ವವಾಗುವಂತೆ ಮಾಡಿ ಕೂದಲುಗಳೆಲ್ಲಾ ಹಣ್ಣಾಗಿ ನರೆತುಹೋಗುವಂತೆ ಮಾಡುತ್ತದೆ, ಇದಕ್ಕೆ ಪಲಿತವೆಂದು ಹೆಸರು.

ಶಾಲ್ಮಲೀಕಂಟಕಪ್ರಖ್ಯಾಃಕಫಮಾರುತರಕ್ತಜಾಃ ॥ ೩೨ ॥
ಯುವಾನಪಿಡಕಾಯೂನಾಂವಿಜ್ಞೇಯಾಮುಖದೂಷಿಕಾಃ ॥

ಕಫ, ವಾಯು, ಪಿತ್ತ, ಇವುಗಳ ಪ್ರಕೋಪದಿಂದ ಮನುಷ್ಯರಿಗೆ ಯವ್ವನ ಕಾಲದಲ್ಲಿ ಮುಖದ ಮೇಲೆ ಮತ್ತು ದೇಹದ ಇತರ ಭಾಗಗಳಲ್ಲಿಯೂ ಬೂರುಗದ ಮುಳ್ಳಿನ ಹಾಗೆ ದಪ್ಪದಪ್ಪದ ಬಕ್ಕೆಗಳೇಳುತ್ತವೆ, ಇವುಗಳಿಗೆ ಯುವಾನಪಿಡಕಗಳೆಂಬದಾಗಿ ಹೆಸರು, ಮೊಡವೆಗಳೆಂದು ಲೋಕದಲ್ಲಿ ವ್ಯವಹರಿಸುತ್ತಾರೆ.

ಕಂಟಕೈರಾಚಿತಂವೃತ್ತಂಮಂಡಲಂಪಾಂಡುಕಂಡುರಂ ॥ ೩೩ ॥
ಪದ್ಮಿನೀಕಂಟಕಪ್ರಖ್ಯೈಸ್ತದಾಖ್ಯಂಕಫವಾತಜಂ ॥

ಕಮಲದ ದಂಟಿನ ಮೇಲೆ ಇರುವ ಮುಳ್ಳಿನಂತಹ ಮುಳ್ಳುಗಳಿರುವುದು, ಬೆಳ್ಳಗೆ ದುಂಡಾಗಿ ಮಾಂಸಖಂಡಗಳೇ ಗಂಡೆಗಳಂತೆ ಶರೀರದಲ್ಲಿ ಅಲ್ಲಲ್ಲಿ ಎದ್ದು ಕೊಂಡಿರುವುದು, ಹೀಗಿದ್ದಲ್ಲಿ ಇದಕ್ಕೆ ಪದ್ಮಿನೀಕಂಟಕವೆಂಬದಾಗಿ ಹೆಸರು. ಇದು ಶ್ಲೇಷ್ಮ ಮತ್ತು ವಾತಗಳ ಪ್ರಕೋಪದಿಂದ ಹುಟ್ಟಬಹುದಾದ ವ್ರಣ.

ಸಮಮುತ್ಸನ್ನಮರುಜಂಮಂಡಲಂಕಫರಕ್ತಜಂ ॥ ೩೪ ॥
ಸಹಜಂಲಕ್ಷ್ಮಚೈಕೇಷಾಂಲಕ್ಷ್ಯೋಜತುಮಣಿಸ್ತುಸಃ ॥

ಶರೀರದಲ್ಲಿ ಯಾವುದಾದರೂ ಒಂದು ಭಾಗದಲ್ಲಿ ಗಂಟು ಬರುವುದು, ಮನುಷ್ಯನು ಹುಟ್ಟಿದಾಗಿನಿಂದಲೂ ಇಂತಹ ಗಂಟು ಇರಬಹುದು, ಕೆಲವು ಗಂಟುಗಳು ಬೆಳೆಯುತ್ತಲಿರಬಹುದು, ಮತ್ತೆ ಕೆಲವು ಯಥಾಸ್ಥಿತಿಯಲ್ಲಿಯೇ ಇರಬಹುದು, ಇದರಲ್ಲಿ ನೋವಾಗಲಿ ವ್ಯಥೆಯಾಗಲಿ ಯಾವುದೂ ಇರುವುದಿಲ್ಲ, ಶರೀರದ ಬಣ್ಣಕ್ಕಿಂತಲೂ ವ್ಯತ್ಯಾಸವಾದ ಬಣ್ಣವೂ ಇರುವುದಿಲ್ಲ, ಶ್ಲೇಷ್ಮ ಮತ್ತು ರಕ್ತಗಳ ಪ್ರಕೋಪದಿಂದ ಇದು ಹುಟ್ಟುತ್ತದೆ, ಇದಕ್ಕೆ ಜತುಮಣಿ ಎಂಬದಾಗಿ ಹೆಸರು, ಆಳವವೆನ್ನುತ್ತಾರೆ.

ಅವೇದನಂಸ್ಥಿರಂಚೈವಯಸ್ಮಿನ್‌ಗಾತ್ರೇಪ್ರದೃಶ್ಯತೇ ॥ ೩೫ ॥
ಮಾಷವತ್‌ಕೃಷ್ಣಮುತ್ಸನ್ನಂಅನಿಲಾನ್ಮಷಕಂವದೇತ್ ॥

ಉದ್ದಿನ ಕಾಳಿನ ಗಾತ್ರ ಮತ್ತು ಅದೇ ಬಣ್ಣವುಳ್ಳ ಗುಂಡಾದ ಬಕ್ಕೆಗಳು ಶರೀರದಲ್ಲಿ ಅಲ್ಲಲ್ಲಿ ಕಾಣುವುದು, ನೋವಾಗಲಿ ವ್ಯಥೆಯಾಗಲಿ ಯಾವುದೂ

ಇರುವುದಕ್ಕಿಲ್ಲ, ಬಕ್ಕೆಗಳು ದೊಡ್ಡದೂ ಆಗುವುದಿಲ್ಲ ಚಿಕ್ಕದೂ ಆಗುವುದಿಲ್ಲ, ಇದಕ್ಕೆ ಮಾಷಕವೆಂದು ಹೆಸರು, ನರಹುಲಿ ಎಂದು ಕರೆಯುತ್ತಾರೆ, ಇದು ವಾತ ಪ್ರಕೋಪದಿಂದ ಹುಟ್ಟುತ್ತದೆ.

ಕೃಷ್ಣಾನಿತಿಲಮಾತ್ರಾಣಿನೀರುಜಾನಿಸಮಾನಿಚ ॥ ೩೬ ॥
ವಾತಪಿತ್ತಕಫೋಚ್ಛೋಷಾತ್ತಾನ್ವಿದ್ಯಾತ್ತಿಲಕಾಲಕಾನ್ ॥

ಕಪ್ಪು ಬಣ್ಣವಾಗಿ ಎಳ್ಳುಕಾಳಿನಂತಹ ಮಚ್ಚೆಗಳು ದೇಹದ ಮೇಲೆ ಅಲ್ಲಲ್ಲಿ ಕಾಣುತ್ತಿರುವುದು, ನೋವಾಗಲೀ ವ್ಯಥೆಯಾಗಲೀ ಯಾವುದೂ ಇರುವುದಕ್ಕಿಲ್ಲ, ಮಚ್ಚೆ ಇರುವ ಭಾಗವು ತಗ್ಗು ಉಬ್ಬುಗಳಿಲ್ಲವೆ ಇತರ ಭಾಗಕ್ಕೆ ಸಮನಾಗಿರುವುದು, ಈ ರೀತಿಯಾಗಿರುವ ಕಪ್ಪುಮಚ್ಚೆಗಳಿಗೆ ತಿಲಕಾಲಕಗಳೆಂದು ಹೆಸರು. ಇವು ವಾಯು ಮತ್ತು ಪಿತ್ತಗಳ ಪ್ರಕೋಪದಿಂದ ಕಫವು ಶೋಷಿಸಿಹೋಗಿ ಉಂಟಾಗುತ್ತದೆ.

ಮಹದ್ವಾಯದಿವಾಚಾಲ್ಪಂಶ್ಯಾವಂವಾಯದಿವಾಸಿತಂ ॥ ೩೭ ॥
ನೀರುಜಂಮಂಡಲಂಗಾತ್ರೇನ್ಯಚ್ಛಮಿತ್ಯಭಿಧೀಯತೇ ॥

ನ್ಯಚ್ಛವೆಂಬುವುದು ಒಂದು ತರಹದ ದೇಹದ ಮೇಲುಭಾಗದಲ್ಲಿರುವ ಮಚ್ಚೆ, ಇದು ದುಂಡಾಗಿ ಬಹಳ ಅಗಲವಾಗಿರಬಹುದು, ಚಿಕ್ಕದಾಗಿಯಾದರೂ ಇರಬಹುದು, ಕಪ್ಪು ಅಥವಾ ಧೂಮ್ರವರ್ಣವಾಗಿರುತ್ತದೆ, ನೋವು ವ್ಯಥೆ ಏನೂ ಇರುವುದಿಲ್ಲ.

ಕ್ರೋಧಾಯಾಸಪ್ರಕುಪಿತೋವಾಯುಃಪಿತ್ತೇನಸಂಯುತಃ ॥೩೮॥
ಮುಖಮಾಗತ್ಯಸಹಸಾಮಂಡಲಂವಿಸೃಜತ್ಯತಃ ॥
ನೀರುಜಂತನುಕಂಶ್ಯಾವಂಮುಖೇವ್ಯಂಗಂತಮಾದಿಶೇತ್ ॥ ೩೯ ॥

ಸಿಟ್ಟು, ಆಯಾಸ ಇವುಗಳಿಂದ ಪ್ರಕೋಪವನ್ನು ಹೊಂದಿದ ವಾಯುವು ಪಿತ್ತದೊಡನೆ ಕೂಡಿ ಮುಖದ ಮೇಲೆ ಬಂದು ಧೂಮ್ರವರ್ಣದ ಮತ್ತು ನೋವು ವ್ಯಥೆಗಳಿಲ್ಲದ ದುಂಡಾದ ಕಲೆಗಳನ್ನು ಉಂಟುಮಾಡುತ್ತದೆ, ಇವಕ್ಕೆ ವ್ಯಂಗ ಎಂದು ಹೆಸರು.

ಕೃಷ್ಣಾಮೇವಂಗುಣಾಂಗಾತ್ರೇಮುಖೇವಾನೀಲಿಕಾಂವಿದುಃ ॥

ಹಿಂದಲ ಶ್ಲೋಕದಲ್ಲಿ ಹೇಳಿದ ತರದ ಮಚ್ಚೆಗಳು ಕಪ್ಪುಬಣ್ಣದೊಡನೆ ದೇಹದ ಮೇಲಿದ್ದರೆ ಅಥವಾ ಮುಖದ ಮೇಲೆಯೇ ಇದ್ದರೆ ಅದಕ್ಕೆ ನೀಲಿಕಾ ಎಂಬದಾಗಿ ಹೆಸರು.

ಮರ್ದನಾತ್ಪೀಡನಾದ್ವಾತಿತಥ್ಯೈವಾತ್ಯಭಿಘಾತತಃ ॥ ೪೦ ॥
ಮೇಢ್ರ ಚರ್ಮಯದಾವಾಯುರ್ಭಜತೇಸರ್ವತಶ್ಚರನ್ ॥
ತದಾವಾತೋಪಸೃಷ್ಟತ್ವಾತ್ ತಚ್ಚರ್ಮಪರಿವರ್ತತೇ ॥ ೪೧ ॥
ಮಣೇರಧಸ್ತಾತ್ ಕೋಶಶ್ಚಗ್ರಂಥಿರೂಪೇಣಲಂಬತೇ ॥
ಸರುಜಾಂವಾತಸಂಭೂತಾಂತಾಂವಿದ್ಯಾತ್ಪರಿವರ್ತಿಕಾಂ ॥ ೪೨ ॥
ಸಕಂಡೂಃಕಠಿನಾವಾಪಿಸ್ಯೆವಶ್ಲೇಷ್ಮಸಮುತ್ಥಿತಾ ॥

ಶಿಶ್ನವನ್ನು ಕೈಯ್ಯಿನಿಂದ ಹಿಸಿಕಿಕೊಳ್ಳುವುದು, ಅತಿಯಾಗಿ ನೋವಾಗು ವಂತೆ ಮಾಡಿಕೊಳ್ಳುವುದು, ಶಿಶ್ನಕ್ಕೆ ಅಕಸ್ಮಾತ್ತಾಗಿ ಅತಿಯಾಗಿ ಪೆಟ್ಟುಬೀಳು ವುದು, ಈ ಕಾರಣಗಳಿಂದ ವಾಯುವು ಪ್ರಕೋಪವನ್ನು ಹೊಂದಿ ಶಿಶ್ನದ ಚರ್ಮ ಪ್ರದೇಶವನ್ನು ಹೊಂದಿ ಶಿಶ್ನದ ಮುಂಭಾಗದಲ್ಲಿ ಗೌಸಣಿಗೆಯಂತಿರುವ ಚರ್ಮ ವನ್ನು ಬಾತುಕೊಳ್ಳುವಂತೆ ಮಾಡುವುದಲ್ಲದೆ ಆ ಚರ್ಮವು ಹಿಂದುಮುಂದಾಗಿ ಜಿಡ್ಡಿಕೊಂಡು ತೊಂದರೆ ಪಡಿಸುವಂತೆ ಸಹಾ ಮಾಡುತ್ತದೆ, ಶಿಶ್ನ ಮತ್ತು ಅದರ ಮುಂಭಾಗ ಇವು ಬಾತುಹೋಗಿರುವುದಲ್ಲದೆ ಕೆಳಭಾಗದಲ್ಲಿ ವೃಷಣವು ಚಿಕ್ಕದಾಗಿ ಒಂದು ಗಂಟಿನಂತೆ ಮಾತ್ರ ಕಾಣಿಸಿಕೊಳ್ಳುತ್ತದೆ, ವ್ಯಥೆಯಿಂದ ಸಹಿತವಾದ ಇಂತಹ ವ್ಯಾಧಿಗೆ ಪರಿವರ್ತಿಕಾ ಎಂಬದಾಗಿ ಹೆಸರು, ಇದೇ ವ್ಯಾಧಿ ಯಲ್ಲಿ ಬಾತಿರುವ ಭಾಗವು ಗಟ್ಟಿಯಾಗಿರುವುದು, ನವೆಯಿರುವುದು, ಈ ಲಕ್ಷಣ ಗಳಿದ್ದರೆ ಶ್ಲೇಷ್ಮಪ್ರಕೋಪವಿದೆ ಎಂದು ತಿಳಿಯಬೇಕು.

ಅಲ್ಪೀಯಃಖಾಂಯದಾಹರ್ಷಾದ್ಬಲಾದ್ಗಚ್ಛೇತ್ ಸ್ತ್ರಿಯಂನರಃ ೪೩
ಹಸ್ತಾಭಿಘಾತಾದಪಿವಾಚರ್ಮಣ್ಯುದ್ವರ್ತಿತೇಬಲಾತ್ ॥
ಯಸ್ಯಾವಪಾಟ್ಯತೇಚರ್ಮತಾಂವಿದ್ಯಾದವಪಾಟಿಕಾಂ ॥ ೪೪ ॥

ಯೋನಿದ್ವಾರವು ದೊಡ್ಡದಾಗುವುದಕ್ಕಿಂತ ಮುಂಚಿತವಾಗಿ ಅಂತಹ ಸ್ತ್ರೀಯ ರಲ್ಲಿ ಬಲಾತ್ಕಾರದಿಂದ ಮೈಥುನಮಾಡುವುದು, ಶಿಶ್ನದ ಚರ್ಮವನ್ನು ಹಿಂದಕ್ಕೆ ಕೈಯ್ಯಿಂದ ಜಗ್ಗುವುದು, ಇಂತಹ ಬಲಾತ್ಕಾರದ ಕೆಲಸಗಳಿಂದ ಶಿಶ್ನದ ಚರ್ಮವು ಕಿತ್ತುಹೋದರೆ ಅದಕ್ಕೆ ಅವಪಾಟಿಕವೆಂದು ಹೆಸರು.

ವಾತೋಪಸೃಷ್ಟೇಮೇಢ್ರೇವೈಚರ್ಮಸಂಶ್ರಯತೇಮಣಿಂ ॥
ಮಣಿಶ್ಚರ್ಮೋಪನದ್ಧಸ್ತುಮೂತ್ರಸ್ರೋತೋರುಣದ್ಧಿಚ ॥ ೪೫ ॥
ನಿರುದ್ಧಪ್ರಕಶೇತಸ್ಮಿನ್ ಮಂದಧಾರಮವೇದನಂ ॥
ಮೂತ್ರಂಪ್ರವರ್ತತೇಜಂತೋರ್ಮಣಿರ್ನವಿವ್ರಿಯತೇನಚ॥ ೪೬ ॥
ನಿರುದ್ಧಪ್ರಕಶಂವಿದ್ಯಾತ್ ಸರುಜಂವಾತಸಂಭವಂ ॥

ವಾತಪ್ರಕೋಪದಿಂದ ಶಿಶ್ನಸ್ಥಾನದಲ್ಲಿ ವಾತಪ್ರಕೋಪವಾಗುವುದರಿಂದ ಶಿಶ್ನದ ಮೇಲೆ ಗೌಸಣಿಗೆಯಂತಿರುವ ಚರ್ಮವು ಬಾತುಹೋಗಿ ಬಿಗಿಯಾಗುತ್ತದೆ, ಈ ರೀತಿ ಬಿಗಿಯಾದ ಚರ್ಮ ಮೂತ್ರಮಾರ್ಗವನ್ನು ತಡೆದುಕೊಳ್ಳುತ್ತದೆ. ಆದರಿಂದ ಮೂತ್ರವು ಸರಿಯಾಗಿ ಬೀಳುವುದಿಲ್ಲ, ಆದರೆ ಆದರಿಂದ ನೋವು ಮತ್ತು ವ್ಯಥೆಗಳೇನೂ ಆಗುವುದಿಲ್ಲ, ಚರ್ಮವು ಬಿಗಿಯಾಗಿರೋಣದರಿಂದ ಶಿಶ್ನದ ಮುಂಭಾಗದಲ್ಲಿ ಗುಂಡಗಿರುವುದು ಮಾತ್ರ ನೋಯ್ಯುತ್ತಿರುತ್ತದೆ, ಇದಕ್ಕೆ ವಾತಪ್ರಕೋಪಜನ್ಯವಾದ ನಿರುದ್ಧಪ್ರಕಶವೆಂಬದಾಗಿ ಹೆಸರು.

**ವೇಗಸಂಧಾರಣಾದ್ವಾಯುರ್ವಿಹತೋಗುದಸಂಶ್ರಿತಃ ॥ ೪೭ ॥**
**ನಿರುಣದ್ಧಿಮಹಾಸ್ರೋತಃಸೂಕ್ಷ್ಮದ್ವಾರಂಕರೋತಿಚ ॥**
**ಮಾರ್ಗಸ್ಯಸೌಕ್ಷ್ಮ್ಯಾತ್ಕೃಚ್ಛ್ರೇಣಪುರೀಷಂತಸ್ಯಗಚ್ಛತಿ ॥ ೪೮ ॥**
**ಸನ್ನಿರುದ್ಧಗುದಂವ್ಯಾಧಿಮೇತಂವಿದ್ಯಾತ್ಸುದಾರುಣಂ ॥**

ಅಪಾನವಾಯು ಮತ್ತು ಮಲಗಳ ವೇಗವನ್ನು ತಡೆಯೋಣದರಿಂದ ವಾತಪ್ರಕೋಪವುಂಟಾಗಿ ಗುದದ್ವಾರವನ್ನು ಸಂಕುಚಿತವಮಾಡುತ್ತದೆ, ಇದರಿಂದ ಗುದದ್ವಾರವು ಸಣ್ಣದಾಗಿ ಮಲಪ್ರವೃತ್ತಿಯು ಬಹಳ ಕಷ್ಟಕರವಾಗುತ್ತದೆ, ಈ ಭಯಂಕರವಾದ ರೋಗಕ್ಕೆ ಸನ್ನಿರುದ್ಧಗುದವೆಂಬದಾಗಿ ಹೆಸರು.

**ಶಕೃನ್ಮೂತ್ರಸಮಾಯುಕ್ತೇಧೌತೇಽಪಾನೇಶಿಶೋರ್ಭವೇತ್ ॥ ೪೯ ॥**
**ಸ್ವಿನ್ನೇವಾಸ್ನಾಪ್ಯಮಾನೇವಾಕಂಡೂರಕ್ತಕಫೋದ್ಭವಾ ॥**
**ಕಂಡೂಯನಾತ್ತತಃಕ್ಷಿಪ್ರಂಸ್ಫೋಟಸ್ರಾವಶ್ಚಜಾಯತೇ ॥ ೫೦ ॥**
**ಏಕೀಭೂತಂವ್ರಣೈರ್ಘೋರಂತಂವಿದ್ಯಾದಹಿಪೂತನಂ ॥**

ಮಕ್ಕಳು ಮಲಮೂತ್ರ ವಿಸರ್ಜನೆಮಾಡಿದ ಮೇಲೆ ಚನ್ನಾಗಿ ಆಯಾ ದ್ವಾರಗಳನ್ನು ತೊಳೆಯಬೇಕು. ಆ ರೀತಿಯಾಗಿ ತೊಳೆಯದಿರೋಣದರಿಂದಲೂ ಮತ್ತು ಮಲಮೂತ್ರ ದ್ವಾರಗಳು ಜಿವರೋಣದರಿಂದಲೂ ಪ್ರತಿನಿತ್ಯವೂ ಅವುಗಳಿಗೆ ಸರಿಯಾಗಿ ಸ್ನಾನಮಾಡಿಸದಿರೋಣದರಿಂದಲೂ ಆಯಾ ಸ್ಥಾನಗತಗಳಾದ ರಕ್ತ ಮತ್ತು ಶ್ಲೇಷ್ಮಗಳು ಪ್ರಕೋಪವನ್ನು ಹೊಂದಿ ಕೆರೆದ ಕೂಡಲೆ ಗುಳ್ಳೆಗಳಾಗುವುದು, ಅದರಿಂದ ಒಂದು ಬಗೆಯ ದ್ರವವು ಜಿನಗುವುದು, ಹೀಗಾಗಿ ಆ ಗುಳ್ಳೆಗಳೆಲ್ಲಾ ಕಲಸಿಹೋಗಿ ಕ್ರಮೇಣ ಭಯಂಕರವಾದ ವ್ರಣವಾಗುತ್ತದೆ, ಈ ವ್ರಣಕ್ಕೆ ಅಹಿಪೂತನವೆಂದು ಹೆಸರು.

**ಸ್ನಾನೋತ್ಸಾದನಹೀನಸ್ಯಮಲೋವೃಷಣಸಂಸ್ಥಿತಃ ॥ ೫೧ ॥**
**ಯದಾಪ್ರಕ್ಲಿದ್ಯತೇಸ್ವೇದಾತ್ಕಂಡೂಂಜನಯತೇತದಾ ॥**

**ಕಂಡೂಯನಾತ್ತತಃ ಕ್ಷಿಪ್ರಂ ಸ್ಫೋಟಃ ಸ್ರಾವಶ್ಚ ಜಾಯತೇ ॥ ೫೨ ॥**
**ಪ್ರಾಹುರ್ವೃಷಣಕಚ್ಛೂಂ ತಾಂ ಶ್ಲೇಷ್ಮರಕ್ತಪ್ರಕೋಪಜಾಂ ॥**

ಸ್ನಾನಮಾಡುವುದು, ಚನ್ನಾಗಿ ಒರಸುವುದು, ಈ ಕೆಲಸಗಳನ್ನು ಮಾಡದಿರೋಣದರಿಂದ ಪುರುಷರ ವೃಷಣಗತವಾದ ಮಲವು ಬೆವತು ನೀರಾಗಿ ನವೆಯನ್ನುಂಟುಮಾಡುತ್ತದೆ, ನವೆಯಾದ ಮೇಲೆ ಕೆರೆದರೆ ಅಲ್ಲೆಲ್ಲಾ ಗುಳ್ಳೆಗಳು ಗಾಯಗಳು ಉಂಟಾಗಿ ಒಂದು ವಿಧವಾದ ದ್ರವವು ಸೋರಲಾರಂಭವಾಗುತ್ತದೆ, ಈ ರೋಗಕ್ಕೆ ವೃಷಣಕಚ್ಛು ಎಂಬದಾಗಿ ಹೆಸರು, ಶ್ಲೇಷ್ಮ ಮತ್ತು ರಕ್ತಗಳ ಪ್ರಕೋಪದಿಂದ ಈ ರೋಗವು ಹುಟ್ಟುತ್ತದೆ.

**ಪ್ರವಾಹಣಾತೀಸಾರಾಭ್ಯಾಂ ನಿರ್ಗಚ್ಛತಿ ಗುದಂ ಬಹಿಃ ॥ ೫೩ ॥**
**ರೂಕ್ಷದುರ್ಬಲದೇಹಸ್ಯ ಗುದಭ್ರಂಶಂ ತಮಾದಿಶೇತ್ ॥**

ಗುದದ್ವಾರವು ದುರ್ಬಲವಾಗಿರುವವರುಗಳಿಗೆ ಮುಕ್ಕಿರಿದು ವಾಯುಬಾನೆಗೆ ಹೊಗೋಣ, ಅತಿಸಾರರೋಗ ಸಂಭವಿಸೋಣ, ಈ ಕಾರಣಗಳಿಂದ ಗುದದ್ವಾರವು ಹೊರಹೊರಡುತ್ತದೆ, ಇದಕ್ಕೆ ಗುದಭ್ರಂಶವೆಂಬದಾಗಿಯೂ ಭಾಷೆಯಲ್ಲಿ ಗುದೆ ಹಾಯುವುದೆಂಬದಾಗಿಯೂ ಹೆಸರುಗಳುಂಟು.

**ಸದಾಹೋ ರಕ್ತಪರ್ಯಂತಸ್ತ್ವಕ್ಪಾಕೀ ತೀವ್ರವೇದನಃ ॥ ೫೪ ॥**
**ಕಂಡೂಮಾನ್ ಜ್ವರಕಾರೀ ಚ ಸ ಸ್ಯಾತ್ಸೂಕರದಂಷ್ಟ್ರಕಃ ॥**

ಚರ್ಮದ ಯಾವ ಭಾಗದಲ್ಲಿಯಾದರೂ ಪ್ರಥಮತಃ ಉರಿ ಕಂಡು ಆ ಭಾಗವೆಲ್ಲಾ ಕೆಂಪಾಗಿ ಅಲ್ಲೆಲ್ಲಾ ಬಕ್ಕೆಗಳು ಸೂಸಿ ಬಹಳ ನವೆ, ವೇದನೆ ಇವುಗಳೆಲ್ಲಾ ಹುಟ್ಟಿ ಇದರ ಜೊತೆಗೆ ಜ್ವರವೂ ಸಂಭವಿಸಿ ತೊಂದರೆ ಪಡಿಸಿದಲ್ಲಿ ಈ ವ್ರಣಕ್ಕೆ ಸೂಕರದಂಷ್ಟ್ರಕವೆಂಬದಾಗಿ ಹೆಸರು. ಹಂದಿಹುಣ್ಣು ಎಂದು ಲೋಕದಲ್ಲಿ ವ್ಯವಹಾರವಿದೆ.

ಇಲ್ಲಿಗೆ ಕ್ಷುದ್ರರೋಗನಿದಾನ ಸಂಪೂರ್ಣ.

---

## ಮುಖರೋಗನಿದಾನ.

**ಆನೂಪಪಿಶಿತಕ್ಷೀರದಧಿಮತ್ಸ್ಯಾತಿಸೇವನಾತ್ ॥**
**ಮುಖಮಧ್ಯೇ ಗದಾನ್ ಕುರ್ಯುಃ ಕ್ರುದ್ಧಾ ದೋಷಾಃ ಕಫೋತ್ತರಾಃ ೧**

ಜವುಗು ನೆಲದಲ್ಲಿ ವಾಸಮಾಡುವ ಪ್ರಾಣಿಗಳ ಮಾಂಸ, ಹಾಲು, ಮೊಸರು ಮೀನುಗಳು ಇವುಗಳನ್ನು ಆಹಾರದಲ್ಲಿ ಅತಿಯಾಗಿ ಉಪಯೋಗಿಸೋಣದರಿಂದ

ದೇಹಗತಗಳಾದ ದೋಷಗಳು ಪ್ರಕೋಪವನ್ನು ಹೊಂದಿ ಶ್ಲೇಷ್ಮವನ್ನೇ ಪ್ರಧಾನವನ್ನಾಗಿ ಮಾಡಿಕೊಂಡು ಬಾಯಿನ ಒಳಭಾಗದಲ್ಲಿ ರೋಗಗಳನ್ನು ಹುಟ್ಟಿಸುತ್ತವೆ.

ಕರ್ಕಶೌಪರುಷೌಸ್ತಬ್ಧೌಸಂಪ್ರಾಪ್ತಾನಿಲವೇದನೌ ॥
ದಾಲ್ಯೇತೇಪರಿಪಾಟ್ಯೇತೇಓಷ್ಠೌಮಾರುತಕೋಪತಃ ॥ ೨ ॥

ತುಟಿಗಳು ಒರಟಾಗಿ ಒಡೆದುಹೋಗುವುದು, ಅಲ್ಲಾಡದಂತಿರುವುದು, ತುಟಿಗಳಲ್ಲಿ ಒಡತ ಬರುವುದು, ಶಿಡಿಯುತ್ತಲಿರುವುದು, ಈ ವಿಕಾರಗಳು ವಾತ ಪ್ರಕೋಪಜನ್ಯಗಳೆಂಬದಾಗಿ ತಿಳಿಯಬೇಕು.

ಚೀಯೇತೇಪಿಡಕಾಭಿಶ್ಚಸರುಜಾಭಿಸ್ಸಮಂತತಃ ॥
ಸದಾಹಪಾಕಪಿಡಕೌಪೀತಾಭಾಸೌಚಪಿತ್ತತಃ ॥ ೩ ॥

ಪಿತ್ತಪ್ರಕೋಪಜನ್ಯಗಳಾದ ಮುಖರೋಗಗಳಲ್ಲಿ ತುಟಿಗಳ ಮೇಲೆಲ್ಲಾ ಗುಳ್ಳೆಗಳೇಳುತ್ತಿರುವುದು, ತುಟಿಗಳಲ್ಲಿ ವ್ಯಥೆ ಉರಿ ಇವು ಬಹಳವಾಗಿರುವುದು, ಗುಳ್ಳೆಗಳೆಲ್ಲಾ ಹಳದಿಯ ಬಣ್ಣವಾಗಿರುವುದು, ಈ ರೀತಿ ಇರುತ್ತವೆ.

ಸವರ್ಣಾಭಿಶ್ಚಚೀಯೇತೇಪಿಡಕಾಭಿರವೇದನೌ ॥
ಭವತಸ್ತುಕಫಾದೋಷ್ಠೌಪಿಚ್ಛಿಲೌಶೀತಲೌಗುರೂ ॥ ೪ ॥

ಶ್ಲೇಷ್ಮಪ್ರಕೋಪದಿಂದ ಹುಟ್ಟುವ ಮುಖರೋಗಗಳಲ್ಲಿ ತುಟಿಯ ಮೇಲೆ ತುಟಿಯ ಬಣ್ಣಕ್ಕೇನೇ ಸಮಾನವಾದ ಬಣ್ಣಗಳುಳ್ಳ ಬಕ್ಕೆಗಳೇಳುತ್ತಿರುವುದು, ಬಕ್ಕೆಗಳನ್ನು ಕೈಯ್ಯಿಂದ ಸವರಿನೋಡಿದರೆ ತಣ್ಣಗೂ ಜಿಗಟಾಗಿಯೂ ಇರುವುದು, ನೋವಾಗಲಿ ವ್ಯಥೆಯಾಗಲಿ ಅಷ್ಟಾಗಿ ಇರುವುದಕ್ಕಿಲ್ಲ, ತುಟಿಗಳು ಭಾರವಾಗಿರುವಂತೆ ತೋರುತ್ತಿರುವುದು. ಈ ಲಕ್ಷಣಗಳಿರುತ್ತವೆ.

ಸಕೃತ್ ಕೃಷ್ಣೌಸಕೃತ್ಪೀತೌಸಕೃತ್ ಶ್ವೇತೌತಥೈವಚ ॥
ಸನ್ನಿಪಾತೇನವಿಜ್ಞೇಯಾವನೇಕಪಿಡಕಾಚಿತೌ ॥ ೫ ॥

ತ್ರಿದೋಷಸನ್ನಿಪಾತಜನ್ಯವಾದ ಮುಖರೋಗದಲ್ಲಿ ತುಟಿಯ ಮೇಲೆ ಏಳುವ ಬೊಕ್ಕೆಗಳು ಕೆಲವು ಕಪ್ಪುಬಣ್ಣದವಾಗಿಯೂ ಮತ್ತೆ ಕೆಲವು ಹಳದಿಯ ಬಣ್ಣದವಾಗಿಯೂ ಮತ್ತೆ ಕೆಲವು ಬೆಳ್ಳಗೂ ಇರುತ್ತವೆ, ಇಂತಹ ಅನೇಕ ಗುಳ್ಳೆಗಳು ತುಟಿಯ ಮೇಲೆ ಎದ್ದು ತೊಂದರೆ ಪಡಿಸುತ್ತಿರುತ್ತವೆ.

ಖರ್ಜೂರಫಲವರ್ಣಾಭಿಃಪಿಡಕಾಭಿರ್ನಿಪೀಡಿತೌ ॥
ರಕ್ತೋಪಸೃಷ್ಟೌರುಧಿರಂಸ್ರವತಃಶೋಣಿತಪ್ರಭೌ ॥ ೬ ॥

ರಕ್ತಪ್ರಕೋಪಜನ್ಯವಾದ ಮುಖರೋಗದಲ್ಲಿ ತುಟಿಯು ಮೇಲೆ ಖರ್ಜೂರದ ಹಣ್ಣಿನ ಬಣ್ಣದ ಬಕ್ಕೆಗಳಿದ್ದು ರಕ್ತದ ಹಾಗೆ ಕೆಂಪಾಗಿ ಯಾವಾಗಲೂ ರಕ್ತವನ್ನು ಚೆಲ್ಲುತ್ತಿರುತ್ತವೆ.

**ಗುರೂಸ್ಥೂಲೌಮಾಂಸದುಷ್ಟೌಮಾಂಸಪಿಂಡವದುದ್ಗತೌ ॥**
**ಜಂತವಶ್ಚಾತ್ರಮೂರ್ಛಂತಿನರಸ್ಯೋಭಯತೋಮುಖಾತ್ ॥ ೭ ॥**

ಮಾಂಸವು ಕೆಟ್ಟು ಬರುವ ಓಷ್ಠರೋಗದಲ್ಲಿ ತುಟಿಗಳು ಮಾಂಸಪಿಂಡ ದಂತೆಯೇ ಕಾಣಿಸಿಕೊಳ್ಳುತ್ತ ದಪ್ಪನಾಗಿ ಗಟ್ಟಿಯಾಗಿರುತ್ತವೆ, ಇದರಲ್ಲಿ ಎರಡು ಮುಖದ ಕ್ರಿಮಿಗಳೂ ಆಗುವುದುಂಟು.

**ಸರ್ಪಿರ್ಮಂಡಪ್ರತೀಕಾಶೌಮೇದಸಾಕಂಡುರೌಗುರೂ ॥**
**ಅಚ್ಛಂಸ್ಫಟಿಕಸಂಕಾಶಮಾಸ್ರಾಪಂಸ್ರವತೋಭೃಶಂ ॥ ೮ ॥**
**ತಯೋರ್ವ್ರಣೋನಸಂರೋಹೇತ್ಮೃದುತ್ವಂಚನಗಚ್ಛತಿ ॥**

ಮೇದಸ್ಸು ದುಷ್ಟವಾಗಿ ಬರುವ ಓಷ್ಠರೋಗಗಳಲ್ಲಿ ತುಟಿಗಳು ದಪ್ಪನಾಗಿ ಬಾತಿರುತ್ತವೆ, ನವೆಯಿರುತ್ತದೆ, ತುಪ್ಪವನ್ನು ಕಾಯಿಸಿದಾಗ್ಯೆ ಬರುವ ನೊರೆ ಯಂತಹ ಒಂದು ಬಗೆಯ ಶುಭ್ರವಾದ ದ್ರವವು ಜಿನುಗುತ್ತಿರುತ್ತದೆ, ಈ ಕೊನೆ ಯಲ್ಲಿ ಹೇಳಿದ ಎರಡು ಬಗೆಯ ಓಷ್ಠರೋಗಗಳಲ್ಲಿಯೂ ಓಷ್ಠಗತಗಳಾದ ವ್ರಣ ಗಳು ಪ್ರಾಯಶಃ ಮಾಯುವುದಿಲ್ಲ.

**ಕ್ಷತಜಾಭೌವಿದೀರ್ಯೇತೇಪಾಟ್ಯೇತೇಚಾಭಿಘಾತತಃ ॥ ೯ ॥**
**ಗ್ರಥಿತೌಚಸಮಾಖ್ಯಾತಾವೋಷ್ಠೌಕಂಡೂಸಮನ್ವಿತೌ ॥**

ಆಗಂತುಕಗಳಾದ ಪೆಟ್ಟು ಮೊದಲಾದ ಕಾರಣಗಳಿಂದ ಹುಟ್ಟುವ ಓಷ್ಠ ರೋಗಗಳಲ್ಲಿ ಯಾವ ಕಾರಣದಿಂದ ರೋಗವು ಉತ್ಪನ್ನವಾಗಿದೆಯೋ ಆಯಾ ಕಾರಣಗಳಿಗೆ ಅನುಗುಣವಾಗಿ ತುಟಿಯು ಒಡೆದುಹೋಗಿರುತ್ತದೆ, ಕಿತ್ತುಹೋಗಿ ರುತ್ತದೆ, ಗಂಟುಕಟ್ಟಿಕೊಂಡಿರುತ್ತದೆ, ಆದರಲ್ಲೆಲ್ಲಾ ನವೆಯಿರುತ್ತದೆ.

**ಶೋಣಿತಂದಂತವೇಷ್ಟೇಭ್ಯೋಯಸ್ಯಾಕಸ್ಮಾತ್ಪ್ರವರ್ತತೇ ॥ ೧೦ ॥**
**ದುರ್ಗಂಧೀನಿಸಕೃಷ್ಣಾನಿಪ್ರಕ್ಲೇದೀನಿಮೃದೂನಿಚ ॥**
**ದಂತಮಾಂಸಾನಿಶೀರ್ಯಂತೇಪಚಂತಿಚಪರಸ್ಪರಂ ॥ ೧೧ ॥**
**ಶೀತಾದೋನಾಮಸವ್ಯಾಧಿಃಕಫಶೋಣಿತಸಂಭವಃ ॥**

ಹಲ್ಲಿನ ಬುಡದಲ್ಲಿ ಅಕಸ್ಮಾತ್ತಾಗಿ ದುರ್ಗಂಧಿಯುಕ್ತವಾಗಿ ರಕ್ತ ಸುರಿಯಲಾರಂಭವಾಗುವುದು, ಹಲ್ಲಿನ ಬುಡವು ಕಪ್ಪಗೆ ಮೃದುವಾಗಿರುವುದು,

ಹಲ್ಲಿನ ಬುಡದ ಮಾಂಸಗಳು ಗಾಯಗಳಾಗಿ ಎಲ್ಲಾ ಕಲಿಸಿಹೋಗುವುದು, ಈ ವ್ಯಾಧಿಗೆ ಶೀತಾದವೆಂಬದಾಗಿ ಹೆಸರು, ಈ ರೋಗವು ಶೋಣಿತ ಮತ್ತು ಕಫಗಳ ಪ್ರಕೋಪದಿಂದ ಉತ್ಪನ್ನವಾದುದೆಂದರಿಯಬೇಕು.

ದಂತಯೋಸ್ತ್ರಿಷುವಾಯಸ್ಯಶ್ವಯಥುರ್ಜಾಯತೇಮಹಾನ್ ॥೧೨॥
ದಂತಪುಪ್ಪುಟಕೋನಾಮಸವ್ಯಾಧಿಃಕಫರಕ್ತಜಃ ॥

ಹಲ್ಲುಗಳ ಬುಡದಲ್ಲಿ ಎರಡು ಹಲ್ಲುಗಳನ್ನು ಅಥವಾ ಮೂರು ಹಲ್ಲುಗಳ ವರೆಗೆ ವ್ಯಾಪಿಸಿಕೊಂಡು ಮೊದಲು ಬಾತುಹೋಗುವುದು, ಕ್ರಮವಾಗಿ ಹುಣ್ಣಾಗುವ ಸ್ಥಿತಿಗೆ ಬರುವುದು, ಇದಕ್ಕೆ ದಂತಪುಪ್ಪುಟಕವೆಂದು ಹೆಸರು, ಇದು ಕಫ ಮತ್ತು ರಕ್ತಗಳ ಪ್ರಕೋಪದಿಂದ ಹುಟ್ಟುತ್ತದೆಂದರಿಯಬೇಕು.

ಸ್ರವಂತಿಪೂಯರುಧಿರಂಚಲಾದಂತಾಭವಂತಿಚ ॥ ೧೩ ॥
ದಂತವೇಷ್ಟಸ್ಸವಿಜ್ಞೇಯೋದುಷ್ಟಶೋಣಿತಸಂಭವಃ ॥

ದಂತದ ಮೂಲದಲ್ಲಿ ಹುಣ್ಣಾಗಿ ಅದರಿಂದ ಕೀವು ಮತ್ತು ರಕ್ತಗಳು ಸೋರಲಾರಂಭವಾಗುವುದು, ಹಲ್ಲುಗಳು ಅಲ್ಲಾಡುವುದು ಈ ರೀತಿ ಆದರೆ ಅದಕ್ಕೆ ದಂತವೇಷ್ಟವೆಂಬದಾಗಿ ಹೆಸರು, ಇದು ರಕ್ತಕೆಟ್ಟು ಬರತಕ್ಕದ್ದು.

ಶ್ವಯಥುರ್ದಂತಮೂಲೇಷುರುಜಾವಾನ್ ಕಫರಕ್ತಜಃ ॥ ೧೪ ॥
ಲಾಲಾಸ್ರಾವೀಸವಿಜ್ಞೇಯಃಶೌಷಿರೋನಾಮನಾಮತಃ ॥

ಹಲ್ಲಿನ ಬುಡದಲ್ಲಿ ಬಾಕುಬರುವುದು, ಬಹಳ ನೋವಿರುವುದು, ತುಟಿಯಲ್ಲಿ ತ್ರಾಣವಿಲ್ಲದೆ ಯಾವಾಗ್ಯೂ ಜೊಲ್ಲು ಸುರಿಯುತ್ತಿರುವುದು, ಇದಕ್ಕೆ ಶೌಷಿರ ವೆಂಬದಾಗಿ ಹೆಸರು, ಶ್ಲೇಷ್ಮ ಮತ್ತು ರಕ್ತಗಳ ಪ್ರಕೋಪದಿಂದ ಈ ವ್ಯಾಧಿಯು ಹುಟ್ಟುತ್ತದೆಂದು ತಿಳಿಯಬೇಕು.

ದಂತಾಶ್ಚಲಂತಿವೇಷ್ಟೇಭ್ಯಸ್ತಾಲುಚಾಪ್ಯವದೀರ್ಯತೇ ॥ ೧೫ ॥
ಯಸ್ಮಿನ್ ಸಸರ್ವಜೋವ್ಯಾಧಿರ್ಮಹಾಶೌಷಿರಸಂಜ್ಞಿತಃ ॥

ಹಲ್ಲುಗಳು ಅಕಾಲದಲ್ಲಿ ಅಲ್ಲಾಡುವುದು, ದವಡೆಯೆಲ್ಲಾ ಬಿರಿದುಹೋಗಿ ಅದರಿಂದ ರಕ್ತ ಕೀವು ಸುರಿಯುತ್ತಿರುವುದು, ಇದನ್ನು ತ್ರಿದೋಷಸನ್ನಿಪಾತಜನ್ಯವಾದ ಮಹಾಶೌಷಿರವೆಂಬ ವ್ಯಾಧಿ ಎಂದು ತಿಳಿಯಬೇಕು.

ದಂತಮಾಂಸಾನಿಶೀರ್ಯಂತೇಯಸ್ಮಿನ್ ಷ್ಠೀವತಿಚಾಸಕೃತ್ ।೧೬।
ಪಿತ್ತಾಸೃಕ್ಕಫಜೋವ್ಯಾಧಿರ್ಜ್ಞೇಯಃಪರಿದರೋಹಿಸಃ ॥

ಹಲ್ಲಿನ ಬುಡದ ಮಾಂಸಗಳೆಲ್ಲವೂ ಶೀಳಿಹೋಗುವುದು, ಉಗುಳುವುದು ಜಾಸ್ತಿಯಾಗಿ ಪದೇಪದೇ ಉಗುಳುತ್ತಿರುವುದು, ಈ ರೋಗಕ್ಕೆ ಪರಿದರವೆಂಬದಾಗಿ ಹೆಸರು, ಈ ರೋಗವು ಪಿತ್ತ, ರಕ್ತ, ಶ್ಲೇಷ್ಮ ಇವುಗಳ ಪ್ರಕೋಪದಿಂದ ಹುಟ್ಟುತ್ತದೆ.

**ವೇಷ್ಟೇಷುದಾಹಃಪಾಕಶ್ಚ ತಾಭ್ಯಾಂದಂತಾಶ್ಚಲಂತಿಚ ॥ ೧೭ ॥**
**ಯಸ್ಮಿನ್ ಸೋಪಕುಶೋನಾಮ ಪಿತ್ತರಕ್ತಕೃತೋಗದಃ ॥**

ಹಲ್ಲಿನ ವಸಡುಗಳಲ್ಲಿ ಉರಿ, ಬಕ್ಕೆಗಳೇಳುವುದು, ಈ ಕಾರಣಗಳಿಂದ ಹಲ್ಲು ಅಲ್ಲಾಡುವುದು, ಹೀಗಾಗುತ್ತಿದ್ದರೆ ಈ ವ್ಯಾಧಿಗೆ ಉಪಕುಶವೆಂಬದಾಗಿ ಹೆಸರು, ಇದು ಪಿತ್ತ ಮತ್ತು ರಕ್ತಗಳಪ್ರಕೋಪದಿಂದ ಹುಟ್ಟುತ್ತದೆ.

**ಘೃಷ್ಟೇಷುದಂತಮಾಂಸೇಷುಸಂರಂಭೋಜಾಯತೇಮಹಾನ್ ೧೮**
**ಚಲಾಭವಂತಿದಂತಾಶ್ಚ ಸವೈದರ್ಭೋಽಭಿಘಾತಜಃ ॥**

ಕಡ್ಡಿ ಬ್ರಷು ಮೊದಲಾದ ಸಾಧನಗಳಿಂದ ಹಲ್ಲನ್ನು ತಿಕ್ಕುವಾಗ್ಯೆ ಹಲ್ಲಿನ ಮೇಲಿನ ವಸಡು ಸಹ ತಿಕ್ಕಲ್ಪಟ್ಟು ಅದರಿಂದ ಪೆಟ್ಟು ಮತ್ತು ಗಾಯಗಳು ಆಗಿ ಹಲ್ಲುಗಳು ಅಲ್ಲಾಡಹತ್ತುತ್ತವೆ, ಈ ರೋಗಕ್ಕೆ ವೈದರ್ಭವೆಂಬದಾಗಿ ಹೆಸರು.

**ಮಾರುತೇನಾಧಿಕೋದಂತೋಜಾಯತೇತೀವ್ರವೇದನಃ ॥ ೧೯ ॥**
**ಖಲಿವರ್ಧನಸಂಜ್ಞೋಽಸೌಜಾತೇರುಕ್ಚಪ್ರಶಾಮ್ಯತಿ ॥**

ದಂತಸ್ಥಾನಗತವಾದ ವಾಯುವು ಪ್ರಕೋಪಹೊಂದೋಣದರಿಂದ ಹಲ್ಲಿನ ವಸಡು ಬಹಳ ನೋವಿನಿಂದ ಕೂಡಿಕೊಂಡು ಹೊಸಹಲ್ಲು ಹುಟ್ಟುತ್ತದೆ, ಇದಕ್ಕೆ ಖಲಿವರ್ಧನವೆಂಬದಾಗಿ ಹೆಸರು, ಹಲ್ಲು ಹುಟ್ಟಿದ ನಂತರ ಈ ನೋವು ಮತ್ತು ವೇದನೆಗಳು ಶಮನವಾಗುತ್ತವೆ.

**ಶನೈಶ್ಶನೈಃಪ್ರಕುರುತೇವಾಯುರ್ದಂತಸಮಾಶ್ರಿತಃ ॥ ೨೦ ॥**
**ಕರಾಳಾನ್ವಿಕಟಾನ್ ದಂತಾನ್ ಕರಾಳೋನಸಸಿಧ್ಯತಿ ॥**

ದಂತಸ್ಥಾನಗತವಾದ ವಾಯುವು ಪ್ರಕುಪಿತವಾಗಿ ಹಲ್ಲುಗಳನ್ನು ಚೊಟ್ಟೆ ಬಟ್ಟನಾಗುವಂತೆಯೂ ಭಯಂಕರವಾಗುವಂತೆಯೂ ಮಾಡುತ್ತವೆ, ಈ ರೋಗಕ್ಕೆ ಕರಾಳವೆಂಬದಾಗಿ ಹೆಸರು, ಇದು ಗುಣವಾಗುವುದಿಲ್ಲ.

**ಹಾನವ್ಯೇಪಶ್ಚಿಮೇದಂತೇಮಹಾನ್ ಶೋಥೋಮಹಾರುಜಃ ॥೨೧॥**
**ಲಾಲಾಸ್ರಾವೀಕಫಕೃತೋವಿಜ್ಞೇಯಸ್ಸೋಽಧಿಮಾಂಸಕಃ ॥**

ದವಡೆಯಲ್ಲಿ ವಾತಪ್ರಕೋಪವುಂಟಾಗಿ ದವಡೆಯ ವಸಡು ಊದಿಕೊಂಡು ಬಹಳವಾಗಿ ನೋವಾಗಿ ಜೊಲ್ಲು ಸುರಿಯುತ್ತಿರುತ್ತದೆ, ಇದು ಕಫ ಸಹಾಯದಿಂದ ಹುಟ್ಟಿದ ರೋಗವೆಂದು ತಿಳಿಯಬೇಕು, ಇದಕ್ಕೆ ಅಧಿಮಾಂಸಕವೆಂದು ಹೆಸರು.

**ದಂತಮೂಲಗತಾನಾಡ್ಯಃಪಂಚಜ್ಞೇಯಾಯಥೇರಿತಾಃ ॥ ೨೨ ॥**

ದಂತಮೂಲಗತಗಳಾದ ರೋಗಗಳು ಸಾಮಾನ್ಯಗಳಾದ ನಾಡೀವ್ರಣಗಳಂತೆಯೇ ಸಂಭವಿಸುತ್ತವೆ, ಇವು ಐದು ವಿಧ—ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಕಫಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ಆಗಂತುಕವೆಂಬದಾಗಿ, ನಾಡೀವ್ರಣಪ್ರಕರಣದಲ್ಲಿ ಇವು ವಿಸ್ತಾರನಾಗಿ ಹೇಳಲ್ಪಟ್ಟವೆ.

**ದೀರ್ಯಮಾಣೇಷ್ವಿವರುಜಾಯಸ್ಯದಂತೇಷುಜಾಯತೇ ॥**
**ದಾಲನೋನಾಮಸವ್ಯಾಧಿಸ್ಸದಾಗತಿನಿಮಿತ್ತಜಃ ॥ ೨೩ ॥**

ದಾಲನವೆಂಬುವುದೊಂದು ಬಗೆಯ ದಂತವ್ಯಾಧಿ, ಇದು ದಂತಸ್ಥಾನಗತವಾದ ವಾತಪ್ರಕೋಪದಿಂದ ಹುಟ್ಟುತ್ತದೆ, ಈ ರೋಗದಲ್ಲಿ ಹಲ್ಲುಗಳಲ್ಲಿ ಹಲ್ಲನ್ನು ಅಲ್ಲಾಡಿಸಿ ಕಿತ್ತಷ್ಟು ನೋವಾಗುತ್ತಿರುತ್ತದೆ.

**ಕೃಷ್ಣಚ್ಛಿದ್ರಶ್ಚಲಸ್ರಾವೀಸಸಂರಂಭೋಮಹಾರುಜಃ ॥**
**ಅನಿಮಿತ್ತರುಜೋವಾತಾದ್ವಿಜ್ಞೇಯಃಕ್ರಿಮಿದಂತಕಃ ॥ ೨೪ ॥**

ಕ್ರಿಮಿದಂತಕವೆಂಬುವುದೊಂದು ಬಗೆಯ ದಂತವ್ಯಾಧಿ, ಇದು ವಾತಪ್ರಕೋಪಜನ್ಯ, ಇದರಲ್ಲಿ ಹುಲ್ಲುಗಳಲ್ಲಿ ಕಪ್ಪಾದ ರಂಧ್ರಗಳು ಬೀಳುವುದು, ಹಲ್ಲುಗಳು ಅಲ್ಲಾಡುವುದು, ದಂತಮೂಲದಲ್ಲಿ ಒಂದು ಬಗೆಯ ದ್ರವವು ಜಿನುಗುವುದು, ಕಾರಣವಿಲ್ಲದೆ ಹಲ್ಲುಗಳಲ್ಲಿ ಬಹಳವಾಗಿ ನೋವಾಗುತ್ತಿರುವುದು, ಇವುಗಳು ಲಕ್ಷಣಗಳು.

**ವಕ್ತ್ರಂವಕ್ರಂಭವೇದ್ಯಸ್ಯದಂತಭಂಗಶ್ಚಜಾಯತೇ ॥**
**ಕಫವಾತಕೃತೋವ್ಯಾಧಿಸ್ಸಭಂಜನಕಸಂಜ್ಞಿತಃ ॥ ೨೫ ॥**

ಭಂಜನಕವೆನ್ನುವುದೊಂದು ಬಗೆಯ ದಂತವ್ಯಾಧಿ, ಇದು ಶ್ಲೇಷ್ಮ ಮತ್ತು ವಾತಗಳ ಪ್ರಕೋಪದಿಂದ ಹುಟ್ಟತಕ್ಕದ್ದು, ಇದರಲ್ಲಿ ಬಾಯಿಯೇ ಒಂದು ಕಡೆಗೆ ಉರುಗನಾಗಿ ಹೋಗುತ್ತದೆ, ಹಲ್ಲುಗಳು ಸಹ ಉದುರಿಹೋಗುತ್ತವೆ.

**ಶೀತರೂಕ್ಷಪ್ರವಾತಾನ್ಲಸ್ಪರ್ಶಾನಾಮಸಹಾದ್ವಿಜಾಃ ॥**
**ಪಿತ್ತಮಾರುತಕೋಪೇನದಂತಹರ್ಷಸ್ಸನಾಮತಃ ॥ ೨೬ ॥**

ದಂತಹರ್ಷವೆಂಬುವುದೊಂದು ಬಗೆಯ ದಂತವ್ಯಾಧಿ, ದಂತಸ್ಥಾನಗತವಾದ ಪಿತ್ತ ಮತ್ತು ವಾಯು ಇವುಗಳ ಪ್ರಕೋಪದಿಂದ ಈ ವ್ಯಾಧಿಯು ಹುಟ್ಟುತ್ತದೆ, ಈ ವ್ಯಾಧಿಯಲ್ಲಿ ಹಲ್ಲುಗಳಿಗೆ ತಣ್ಣೀರು, ಬಿಸಿನೀರು, ತಣ್ಣನೆಯ ಗಾಳಿ, ಹುಳಿಯಾದ ಪದಾರ್ಥ ಇವುಗಳು ತಗಲಿದರೆ ಸಹಿಸುವುದಕ್ಕಾಗುವುದಿಲ್ಲ.

**ಮಲೋದಂತಗತೋಯಸ್ತುಪಿತ್ತಮಾರುತಶೋಷಿತಃ ॥**
**ಶರ್ಕರೇವಖರಸ್ಪರ್ಶಾಸಾಜ್ಞೇಯಾದಂತಶರ್ಕರಾ ॥ ೨೭ ॥**

ದಂತಶರ್ಕರೆ ಎಂಬುವುದೊಂದು ಬಗೆಯ ದಂತವ್ಯಾಧಿ, ಈ ರೋಗದಲ್ಲಿ ಹಲ್ಲುಗಳ ಮೇಲೆ ಶೇರತಕ್ಕ ಕೊಳೆಯು ಪಿತ್ತ ಮತ್ತು ವಾಯುವಿನಿಂದ ಶೋಷಿಸಲ್ಪಟ್ಟು ಗಟ್ಟಿಯಾಗಿ ಸಕ್ಕರೆಯ ಹಾಗಾಗುತ್ತದೆ ಅಂದರೆ ಮುಟ್ಟಿದರೆ ಕಲ್ಲಿನಂತೆ ಗಟ್ಟಿಯಾಗುತ್ತದೆ.

**ಕಪಾಲೇಷ್ವಿವದೀರ್ಯತ್ಸುದಂತಾನಾಂಸೈವಶರ್ಕರಾ ॥**
**ಕಪಾಲಿಕೇತಿವಿಜ್ಞೇಯಾಸದಾದಂತವಿನಾಶಿನೀ ॥ ೨೮ ॥**

ಕಪಾಲಿಕಾ ಎಂಬುವುದೊಂದು ಬಗೆಯ ದಂತವ್ಯಾಧಿ, ಈ ವ್ಯಾಧಿಯಲ್ಲಿ ಹಲ್ಲಿನ ಮೇಲೆ ಸೇರುವ ಕೊಳೆಯು ಕ್ರಮೇಣ ಗಟ್ಟಿಯಾಗಿ ಗಾಜುಗಟ್ಟಿಕೊಂಡು ಕೆಲವು ದಿವಸದ ಮೇಲೆ ಹಲ್ಲನ್ನೂ ಮುರಿದುಕೊಂಡು ಆ ಗಾಜು ತಾನೇ ಬೀಳುತ್ತದೆ, ಇದರಿಂದ ಹಲ್ಲು ಹಾಳಾಗಿಹೋಗುತ್ತದೆ.

**ಅಸೃಜ್ಮಿಶ್ರೇಣಪಿತ್ತೇನದಗ್ಧೋದಂತಸ್ತ್ವಶೇಷತಃ ॥**
**ಶ್ಯಾವತಾಂನೀಲತಾಂವಾಪಿಗತಸ್ಸಶ್ಯಾವದಂತಕಃ ॥ ೨೯ ॥**

ಶ್ಯಾವದಂತಕವೆನ್ನುವುದೊಂದು ಬಗೆಯ ದಂತರೋಗ, ಇದರಲ್ಲಿ ರಕ್ತ ಮತ್ತು ಪಿತ್ತಗಳು ಪ್ರಕುಪಿತಗಳಾಗಿ ಅದರಿಂದ ಹಲ್ಲು ಸುಟ್ಟುಹೋಗಿ ಹಲ್ಲಿನ ಬಣ್ಣವು ಹೊಗೆಯಬಣ್ಣದಂತಾಗಲಿ ಇಲ್ಲವೆ ಕಪ್ಪಾಗಲಿ ಆಗುತ್ತದೆ.

**ದಂತಮಾಂಸೇಮಲೈಸ್ಸಾಸ್ರೈರ್ಬಾಹ್ಯಾಂತಶ್ವಯುಥುರ್ಗುರುಃ ॥**
**ಸದಾಹರುಕ್ಸ್ರವೇದ್ಭಿನ್ನಃಪೂಯಾಸ್ರಂದಂತವಿದ್ರಧಿಃ ॥ ೩೦ ॥**

ದಂತವಿದ್ರಧಿ ಎಂಬುವುದೊಂದು ಬಗೆಯ ದಂತರೋಗ, ಇದನ್ನು ದಂತದ ಹುಣ್ಣೆಂದು ಹೇಳುತ್ತಾರೆ, ಈ ರೋಗದಲ್ಲಿ ದಂತಮೂಲದ ಮಾಂಸದಲ್ಲಿ ಮಲ ಸೇರಿಕೊಂಡು ರಕ್ತಕೆಟ್ಟು ಊದಿ ಕ್ರಮವಾಗಿ ಉರಿ ನೋವು ಹೆಚ್ಚಿ ವ್ರಣವು ಒಡೆದು ಕೀವು ಮತ್ತು ರಕ್ತ ಸುರಿಯಲಾರಂಭವಾಗುತ್ತದೆ.

**ಜಿಹ್ವಾನಿಲೇನಸ್ಫುಟಿತಾಪ್ರಸುಪ್ತಾಭವೇಚ್ಚ ಶಾಕಚ್ಛದನಪ್ರಕಾಶಾ ॥**
**ಪಿತ್ತೇನದಹ್ಯತ್ಯುಪಚೀಯತೇಚದೀರ್ಘೈಸ್ಸರಕ್ತೈರಪಿಕಂಟಕೈಶ್ಚ ॥ ೩೦ ॥**
**ಕಫೇನಗುರ್ವೀಬಹುಳಾಚಿತಾಚಮಾಂಸೋಚ್ಛ್ರಯೈಶ್ಶಾಲ್ಮಲಿಕಂಟಕಾಭೈಃ ॥**

ನಾಲಿಗೆಗೆ ಸಂಬಂಧಪಟ್ಟ ರೋಗಗಳನ್ನು ಹೇಳುತ್ತಾನೆ—ಜಿಹ್ವಾಸ್ಥಾನಗತವಾದ ವಾತವು ಪ್ರಕುಪಿತವಾಗೋಣದಿಂದ ನಾಲಿಗೆ ಒಡೆದು ಹೋಗುತ್ತದೆ, ನಾಲಿಗೆಗೆ ಸ್ಪರ್ಶಜ್ಞಾನ ಸಹ ನಷ್ಟವಾಗುತ್ತದೆ, ನಾಲಿಗೆಯನ್ನು ಮುಟ್ಟಿನೋಡಿದರೆ ಒಂದು ಬಗೆಯ ದೊಡ್ಡದಾದ ಎಲೆಯಂತೆ ಕಾಣುತ್ತಿರುತ್ತದೆ, ಜಿಹ್ವಾಸ್ಥಾನಗತವಾದ ಪಿತ್ತವು ಪ್ರಕುಪಿತವಾದರೆ ನಾಲಿಗೆ ಉರಿಯುತ್ತಿರುತ್ತದೆ, ನಾಲಿಗೆಯ ತುಂಬ ಕೆಂಪಾದ ಮತ್ತು ಉದ್ದವಾದ ಮುಳ್ಳುಗಳು ತುಂಬಿಕೊಳ್ಳುತ್ತವೆ, ಜಿಹ್ವಾಸ್ಥಾನಗತವಾದ ಕಫವು ಪ್ರಕುಪಿತವಾದರೆ ನಾಲಿಗೆಯು ದಪ್ಪವಾಗುತ್ತದೆ, ಬೂರಗದ ಮುಳ್ಳಿನಂತಹ ಮುಳ್ಳುಗಳು ನಾಲಿಗೆಯ ತುಂಬ ಮಾಂಸವನ್ನು ಹೊತ್ತುಕೊಂಡು ಏಳುತ್ತವೆ.

**ಜಿಹ್ವಾತಲೇಯಶ್ಶ್ವಯಥುಃಪ್ರಗಾಢಃಸೋಲಾಸಸಂಜ್ಞಃಕಫರಕ್ತಮೂರ್ತಿಃ ॥ ೩೧ ॥**
**ಜಿಹ್ವಾಂಸತುಸ್ತಂಭಯತಿಪ್ರವೃದ್ಧೋಮೂಲೇಚಜಿಹ್ವಾಭೃಶಮೇತಿಪಾಕಂ ॥**

ನಾಲಿಗೆಯ ಮೇಲೆ ಬಲವಾದ ಬಾಕುಬರುವುದು. ಈ ಬಾಕು ಕ್ರಮೇಣ ಹೆಚ್ಚಿದಂತೆಲ್ಲಾ ನಾಲಿಗೆಯೇ ಅಲ್ಲಾಡದಂತಾಗಿ ಹೋಗುತ್ತದೆ, ನಾಲಿಗೆಯ ಬುಡಗಲ್ಲಿ ಈ ಶೋಥವು ಪಕ್ವವಾಗುತ್ತದೆ, ಇದಕ್ಕೆ ಅಲಾಸವೆಂದು ಹೆಸರು. ಇದು ಜಿಹ್ವಾಸ್ಥಾನಗತವಾದ ಕಫ ಮತ್ತು ರಕ್ತಗಳ ಪ್ರಕೋಪದಿಂದ ಉತ್ಪನ್ನವಾಗುತ್ತದೆ.

**ಜಿಹ್ವಾಗ್ರರೂಪಶ್ಶ್ವಯಥುರ್ಹಿಜಿಹ್ವಾಮುನ್ನಮ್ಯಜಾತಃಕಫರಕ್ತಮೂಲಃ ॥ ೩೨ ॥**
**ಲಾಲಾಕರಃಕಂಡುಯುತಸ್ಸಚೋಷಃಸಾತೂಪಜಿಹ್ವಾಪಠಿತಾಭಿಷಗ್ಭಿಃ ॥**

ಉಪಜಿಹ್ವ ಎಂಬುವುದೊಂದು ಬಗೆಯ ರೋಗ. ನಾಲಿಗೆಯ ಕೆಳಭಾಗದಲ್ಲಿ ನಾಲಿಗೆಯ ಮುಡಿಯಂತಹ ಆಕಾರದ ಒಂದು ಬಗೆಯ ಶೋಭೆಯು ಉತ್ಪನ್ನವಾಗಿ ನಾಲಿಗೆಯನ್ನು ಮೇಲಕ್ಕೆ ಎತ್ತುತ್ತ ಬರುತ್ತದೆ, ಇದು ಜಿಹ್ವಾಸ್ಥಾನಗತವಾದ ಕಫ ಮತ್ತು ರಕ್ತಗಳ ಪ್ರಕೋಪದಿಂದ ಹುಟ್ಟುವಂಥದ್ದು, ಇದರಿಂದ ಬಾಯಿನಲ್ಲಿ ಜೊಲ್ಲು ಸುರಿಯುತ್ತಿರುತ್ತದೆ, ನಾಲಿಗೆಯ ಕೆಳಭಾಗದಲ್ಲಿ ನವೆ ಮತ್ತು ಉರಿ ಸಹ ಇರುತ್ತವೆ.

**ಶ್ಲೇಷ್ಮಾಸೃಗ್ಭ್ಯಾಂತಾಲುಮೂಲೇಪ್ರವೃದ್ಧೋದೀರ್ಘಶ್ಶೋಥೋ ಧ್ಮಾತಬಸ್ತಿಪ್ರಕಾಶಃ ॥ ೩೪ ॥**
**ತೃಷ್ಣಾಕಾಸಶ್ವಾಸಕೃತ್ತಂವದಂತಿವ್ಯಾಧಿಂವೈದ್ಯಾಃಕಂಠಶುಂಡೀತಿನಾಮ್ನಾ ॥**

ಕಂಠಶುಂಡೀ ಎಂಬುವುದೊಂದು ಮುಖರೋಗ, ಇದರಲ್ಲಿ ದವಡೆಯ ಮೂಲದಲ್ಲಿ ಶ್ಲೇಷ್ಮ ಮತ್ತು ರಕ್ತಗಳು ಪ್ರಕೋಪಹೊಂದಿ ಉದ್ದವಾಗಿ ಊದುವುದು, ಮುಟ್ಟಿ ನೋಡಿದರೆ ಉಸಿರು ತುಂಬಿದ ಚರ್ಮದ ಚೀಲದಂತೆ ತೋರಿಬರುತ್ತಿರುವುದು, ಬಾಯಾರಿಕೆ, ಕೆಮ್ಮಲು, ಉಬ್ಬಸ ಇವುಗಳೆಲ್ಲಾ ಕಾಣಿಸಿಕೊಳ್ಳುವುದು, ಈ ಲಕ್ಷಣಗಳಿರುತ್ತವೆ.

**ಶೋಥಸ್ಥೂಲಸ್ತೋದದಾಹಪ್ರಪಾಕೀಪ್ರಾಗುಕ್ತಾಭ್ಯಾಂತುಂಡಿಕೇರೀಮತಾತು ॥ ೩೫ ॥**
**ಮೃದುಶ್ಶೋಥೋಲೋಹಿತೋಶೋಣಿತೋತ್ಥೋಜ್ಞೇಯೋಧ್ರುಸ್ಸಷಜ್ವರಸ್ತೀವ್ರರುಕ್ಚ ॥**

ತುಂಡಿಕೇರಿ ಎಂಬುವುದೊಂದು ಮುಖರೋಗ, ಇದರಲ್ಲಿ ದವಡೆಯಲ್ಲಿ ಬರುವ ಶೋಭೆಯು ಉದ್ದುದ್ದವಾಗಿರದೆ ದಪ್ಪನಾಗಿ ಮಾತ್ರ ಇರುತ್ತದೆ, ಉರಿ ಮತ್ತು ವ್ಯಥೆಗಳಿರುತ್ತದೆ, ಶೋಭೆಯು ಕ್ರಮೇಣ ಪಕ್ವವಾಗುವ ಸ್ಥಿತಿಗೆ ಬರುತ್ತಿರುತ್ತದೆ, ಹಿಂದೆ ಹೇಳಿದ ಕಂಠಶುಂಡಿ ಎಂಬ ರೋಗದಲ್ಲಿ ಪ್ರಕೋಪಹೊಂದಿರುವ ರಕ್ತ ಮತ್ತು ಶ್ಲೇಷ್ಮಗಳೆಂಬ ದೋಷಗಳೇ ಇದರಲ್ಲಿಯೂ ಪ್ರಕೋಪಹೊಂದಿರುತ್ತವೆ, ಅಧ್ರುಷವೆಂಬುವುದೂ ಒಂದು ಮುಖರೋಗ, ಇದರಲ್ಲಿ ಶೋಭೆಯು ಮೆತ್ತಗಿರುತ್ತದೆ, ಕೆಂಪಾಗಿರುತ್ತದೆ, ಇದು ರಕ್ತಪ್ರಕೋಪದಿಂದ ಉಂಟಾಗುತ್ತದೆ, ಬಹಳ ನೋವು ಮತ್ತು ಜ್ವರ ಸಹ ಇರುತ್ತದೆ.

**ಕೂರ್ಮೋನ್ನತೋವೇದನೋಶೀಘ್ರಜನ್ಮಾರೋಗೋಜ್ಞೇಯಃ ಕಚ್ಛಪಶ್ಲೇಷ್ಮಣಾತು ॥ ೩೬ ॥**
**ಪದ್ಮಾಕಾರಂತಾಲುಮಧ್ಯೇತುಶೋಥಂವಿದ್ಯಾದ್ರಕ್ತಾದರ್ಬುದಂಪ್ರೋಕ್ತಲಿಂಗಂ ॥**

ಕಚ್ಛಪವೆಂಬುವುದೊಂದು ದವಡೆಯಲ್ಲಿ ಬರುವ ರೋಗ, ಇದರಲ್ಲಿ ದವಡೆಯಲ್ಲಿ ಶೋಭೆಯು ಆಮೆಯ ಬೆನ್ನಿನಂತೆ ಸಾವಕಾಶವಾಗಿ ಹುಟ್ಟಿ ದೊಡ್ಡದಾಗುತ್ತದೆ, ಅಷ್ಟು ಹೆಚ್ಚಿಗೆ ನೋವು ವ್ಯಥೆಗಳಿರುವುದಿಲ್ಲ, ಇದು ಶ್ಲೇಷ್ಮಪ್ರಕೋಪದಿಂದ ಹುಟ್ಟತಕ್ಕದ್ದು. ತಾಲ್ವರ್ಬುದವೆಂಬುವುದು ಮತ್ತೊಂದು ರೋಗ, ದವಡೆಯ ಮಧ್ಯಭಾಗದಲ್ಲಿ ಕಮಲದ ಹುವ್ವಿನಂತೆ ದುಂಡಾಗಿ ಶೋಭೆ ಉಂಟಾಗುತ್ತದೆ, ಇದು ರಕ್ತಪ್ರಕೋಪದಿಂದ ಹುಟ್ಟತಕ್ಕದ್ದು.

**ದುಷ್ಟಂಮಾಂಸಂನೀರುಜಂತಾಲುಮಧ್ಯೇಕಫಾಚ್ಛೂನಂಮಾಂಸ ಸಂಘಾತಮಾಹುಃ ॥ ೩೭ ॥**

**ನೀರುಕ್ ಸ್ಥಾಯಿಸಾಕೋಲಮಾತ್ರಃ ಕಫಾತ್ ಸ್ಯಾನ್ಮೇದೋಯು ಕ್ತಾತ್ಪುಪ್ಪುಟಸ್ತಾಲುದೇಶೇ ॥**

ದವಡೆಯಲ್ಲಿ ದುರ್ಮಾಂಸ ಬೆಳೆದು ನೋವು ವ್ಯಥೆಯೇನೂ ಇಲ್ಲದೆ ಕಫ ಪ್ರಕೋಪದಿಂದ ಉಬ್ಬಿಹೋಗಿದ್ದರೆ ಅದಕ್ಕೆ ಮಾಂಸಸಂಘಾತವೆಂಬದಾಗಿ ಹೇಳು ತ್ತಾರೆ. ಕಫಪ್ರಕೋಪದಿಂದಲೇ ದವಡೆಯ ಬುಡದಲ್ಲಿ ಬೋರೆಯ ಬೀಜದಷ್ಟು ದಪ್ಪನಾಗಿ ನೋವಿಲ್ಲದೆ ಗಂಟಾಗುವುದಕ್ಕೆ ತಾಲುಪುಪ್ಪುಟವೆಂಬದಾಗಿ ಹೆಸರು, ಈ ತಾಲಪುಪ್ಪುಟವೆಂಬ ರೋಗದಲ್ಲಿ ರೋಗೋತ್ಪಾದಕವಾದ ಕಫದೋಷ ದೊಂದಿಗೆ ಮೇದೋದೋಷವೂ ಸೇರಿಕೊಂಡಿರುತ್ತದೆ.

**ಶೋಷೋತ್ಯರ್ಥಂದೀರ್ಯತೇಚಾಪಿತಾಲುಃ ಶ್ವಾಸಶ್ಚೋಗ್ರಸ್ತಾಲು ಶೋಷೋನಿಲಾಚ್ಚ ॥ ೩೮ ॥**

**ಪಿತ್ತಂಕುರ್ಯಾತ್ಪಾಕಮತ್ಯರ್ಥಘೋರಂತಾಲುನ್ಯೇವಂತಾಲು ಪಾಕಂವದಂತಿ ॥**

ತಾಲುಶೋಷವೆಂಬುವುದೊಂದು ರೋಗ, ಇದರಲ್ಲಿ ದವಡೆಗಳು ಅತ್ಯಂತ ವಾಗಿ ಶೋಷಿಸಿಹೋಗುತ್ತವೆ, ದವಡೆಯೆಲ್ಲಾ ಒಡೆದೂ ಹೋಗುತ್ತದೆ, ಭಯಂ ಕರವಾದ ಊರ್ಧ್ವಶ್ವಾಸವೂ ಉಂಟಾಗುತ್ತದೆ, ಈ ರೋಗವು ತಾಲುಸ್ಥಾನಗತ ವಾದ ವಾತಪ್ರಕೋಪದಿಂದ ಉತ್ಪನ್ನವಾದದ್ದೆಂದು ತಿಳಿಯಬೇಕು, ತಾಲುಪಾಕ ವೆಂಬ ರೋಗದಲ್ಲಿ ತಾಲುಸ್ಥಾನಗತವಾದ ಪಿತ್ತವು ಪ್ರಕೋಪವನ್ನು ಹೊಂದಿ ದವಡೆಯಲ್ಲೆಲ್ಲ ಭಯಂಕರವಾದ ಸಣ್ಣ ಗುಳ್ಳೆಗಳನ್ನುಂಟುಮಾಡುತ್ತದೆ.

**ಗಳೇನಿಲಃಪಿತ್ತಕಫೌಚಮೂರ್ಚ್ಛಿತೌಪ್ರದೂಷ್ಯಮಾಂಸಂಚತ ಥೈವಶೋಣಿತಂ ॥ ೩೯ ॥**

**ಗಲೋಪಸಂರೋಧಕರೈಸ್ತಥಾಂಕುರೈರ್ನಿಹಂತ್ಯಸೂನ್ ವ್ಯಾಧಿರಿ ಯಂಹಿರೋಹಿಣೀ ॥**

ಕಂಠರೋಹಿಣಿ ಎಂಬ ರೋಗವನ್ನು ಹೇಳುತ್ತಾನೆ— ಕಂಠಸ್ಥಾನಗತ ಗಳಾದ ವಾತ, ಪಿತ್ತ ಮತ್ತು ಶ್ಲೇಷ್ಮಗಳು ಪ್ರಕುಪಿತಗಳಾಗಿ ಆ ಸ್ಥಾನದಲ್ಲಿರುವ ಮಾಂಸ ಮತ್ತು ರಕ್ತಗಳನ್ನು ಕೆಡಿಸಿ ಗಂಟಲುದ್ವಾರವನ್ನೇ ತಡೆಯತಕ್ಕಂತಹ ಮೊಳಕೆಗಳಂತಹ ಮಾಂಸಾಂಕುರಗಳನ್ನು ಗಂಟಲಿನಲ್ಲಿ ಉಂಟುಮಾಡಿ ಪ್ರಾಣ ವನ್ನೇ ಕಳೆಯುತ್ತವೆ, ಇದಕ್ಕೇನೇ ಕಂಠರೋಹಿಣೀ ಎಂದು ಹೆಸರು ಗಂಟಲು ಗಾಣವೆನ್ನುತ್ತಾರೆ.

ಜಿಹ್ವಾಸಮಂತಾದ್ಭೃಶವೇದನಾಸ್ತುಮಾಂಸಾಂಕುರಾಃಕಂಠ
ವಿರೋಧಿನೋಯೇ ॥ ೪೦ ॥
ಸಾರೋಹಿಣೀವಾತಕೃತಾಪ್ರದಿಷ್ಟಾವಾತಾತ್ಮಕೋಪದ್ರವಗಾಢ
ಯುಕ್ತಾ ॥
ಕ್ಷಿಪ್ರೋದ್ಗಮಃಕ್ಷಿಪ್ರವಿದಾಹಪಾಕಾತೀವ್ರಜ್ವರಾಪಿತ್ತನಿಮಿತ್ತ
ಜಾತಾ ॥ ೪೧ ॥
ಸ್ರೋತೋವಿರೋಧಿನ್ಯಚಲೋದ್ಗತಾತುಸ್ಥಿರಾಂಕುರಾಯಾಕಫ
ಸಂಭವಾಸಾ ॥
ಗಂಭೀರಪಾಕಿನ್ಯನಿವಾರ್ಯವೀರ್ಯಾತ್ರಿದೋಷಲಿಂಗಾತ್ರಿತಯೋತ್ಥಿ
ತಾಚ ॥ ೪೨ ॥
ಸ್ಫೋಟೈಶ್ಚಿತಾಪಿತ್ತಸಮಾನಲಿಂಗಾಸಾಧ್ಯಾಪ್ರದಿಷ್ಟಾರುಧಿರಾತ್ಮ
ಕಾತು ॥

ವಾತಾದಿದೋಷಭೇದದಿಂದ ಈ ಕಂಠರೋಹಿಣೀರೋಗದಲ್ಲಿ ಕಂಡುಬರುವ ವೈಲಕ್ಷಣ್ಯವನ್ನು ಹೇಳುತ್ತಾನೆ—ವಾತಪ್ರಕೋಪಜನ್ಯವಾದ ಕಂಠರೋಹಿಣೀ ರೋಗದಲ್ಲಿ ನಾಲಿಗೆಯ ಸುತ್ತಲೂ ಮತ್ತು ಗಂಟಲಿನಲ್ಲಿಯೂ ಸಹ ಮಾಂಸಾಂಕುರಗಳು ಅಂದರೆ ಮಾಂಸದ ಗಂಟುಗಳು ಗಂಟಲಿನ ಕಾರ್ಯವನ್ನು ಪ್ರತಿಬಂಧಿಸಿಕೊಂಡು ತುಂಬಿಕೊಳ್ಳುತ್ತವೆ, ಇನ್ನೂ ಅನೇಕ ವಿಧಗಳಾದ ವಾತೋಪದ್ರವಗಳೂ ಇರುತ್ತವೆ, ಪಿತ್ತಪ್ರಕೋಪಜನ್ಯವಾದ ಕಂಠರೋಹಿಣೀ ರೋಗದಲ್ಲಿ ಗಂಟಲಿನಲ್ಲಿ ಗಂಟುಗಳು ಬಹಳ ಜಾಗ್ರತೆಯಾಗಿ ಬಂದುಬಿಡುವುದು, ಉರಿಗಂಟುಗಳು ಪಕ್ವವಾಗುವುದು, ಅದರೊಟ್ಟಿಗೆ ಭಯಂಕರವಾದ ಜ್ವರ ಇರುತ್ತದೆ, ಕಫಪ್ರಕೋಪಜನ್ಯವಾದ ಕಂಠರೋಹಿಣೀ ರೋಗದಲ್ಲಿ ಕಂಠನಾಳದ ವ್ಯಾಪಾರವನ್ನೇ ಪ್ರತಿಬಂಧಿಸಿ ತಡೆದು ನಿಲ್ಲಿಸತಕ್ಕಂತಹ ದೊಡ್ಡದಾದ ಮತ್ತು ಸ್ಥಿರವಾದ ಗಂಟು ಉಂಟಾಗುತ್ತದೆ, ತ್ರಿದೋಷಪ್ರಕೋಪಜನ್ಯವಾದ ಕಂಠರೋಹಿಣೀ ರೋಗದಲ್ಲಿ ಗಂಟುಗಳೆಲ್ಲಾ ಭಯಂಕರವಾಗಿ ಪಕ್ವಕ್ಕೆ ಬರುವ ಸ್ಥಿತಿಯಲ್ಲಿರುತ್ತವೆ, ಜ್ವರ ಉಲ್ಬಣವಾಗಲಿ ಸಂಕಟವಾಗಲಿ ತಡೆಯುವುದಕ್ಕೇನೇ ಅಸಾಧ್ಯವಾಗಿರುತ್ತದೆ, ರಕ್ತದೋಷದಿಂದ ಉತ್ಪನ್ನವಾಗುವ ಕಂಠರೋಹಿಣೀ ರೋಗದಲ್ಲಿ ಪಿತ್ತಜನ್ಯವಾದ ರೋಹಿಣೀ ರೋಗದಲ್ಲಿ ಉಂಟಾಗುವಂತೆಯೇ ಗಂಟಲಿನಲ್ಲಿ ಮತ್ತು ಬಾಯಲ್ಲೆಲ್ಲಾ ಗುಳ್ಳೆಗಳಾಗಿರುತ್ತದೆ, ಚಿಕಿತ್ಸೆಗೆ ಅಸಾಧ್ಯವೂ ಆಗಿರುತ್ತದೆ.

ಕೋಲಾಸ್ಥಿಮಾತ್ರಃಕಫಸಂಭವೋಯೋಗ್ರಂಥಿರ್ಗಲೇಕಂಟಕ
ಶೂಕಭೂತಃ ॥ ೪೩ ॥
ಖರಃಸ್ಥಿರಶ್ಶಸ್ತ್ರನಿಪಾತಸಾಧ್ಯೋತಂಕಂಠಶಾಲೂಕಮಿತಿಬ್ರುವಂತಿ।

ಬೋರೇಬೀಜದಷ್ಟು ದಪ್ಪನಾದ ಗಂಟುಗಳು ಗಂಟಲಿನಲ್ಲಿ ಉಂಟಾಗಿ ಮುಳ್ಳುಚುಚ್ಚಿದಂತೆ ಗಂಟಲಿನಲ್ಲಿ ಚುಚ್ಚುತ್ತಿದ್ದಲ್ಲಿ ಈ ರೋಗವನ್ನು ಕಂಠ ಶಾಲೂಕವೆಂದು ಆಯುರ್ವೇದಜ್ಞರು ಹೇಳುತ್ತಾರೆ. ಈ ಗಂಟುಗಳು ಕಲ್ಲಿನಷ್ಟು ಗಟ್ಟಿಯಾಗಿಯೂ ಸ್ಥಿರವಾಗಿಯೂ ಇರುತ್ತವೆ. ಶಸ್ತ್ರಕ್ರಿಯೆ ವಿನಹಾ ಬೇರೇ ವಿಧವಾದ ಪ್ರತಿಕ್ರಿಯೆಯೇ ಇವುಗಳಿಗೆ ಸಾಧ್ಯವಿರುವುದಿಲ್ಲ.

**ಜಿಹ್ವಾಗ್ರರೂಪಃಶ್ವಯಥುಃಕಫಾತ್ತುಜಿಹ್ವೋಪರಿಷ್ಟಾದಪಿರಕ್ತ ಮಿಶ್ರಾತ್ ॥ ೪೪ ॥**
**ಜ್ಞೇಯೋಧಿಜಿಹ್ವಃಖಲುರೋಗಏಷವಿವರ್ಜಯೇದಾಗತಪಾಕ ಮೇನಂ ॥**

ನಾಲಿಗೆಯ ಮೇಲ್ಭಾಗದಲ್ಲಿ ನಾಲಿಗೆಯ ತುದಿಯ ಹಾಗೆಯೇ ಊದಿಹೋಗಿ ಶೋಭೆ ಬರುವುದಕ್ಕೆ ಅಧಿಜಿಹ್ವವೆಂಬದಾಗಿ ಹೆಸರು. ಇದು ರಕ್ತ ಮಿಶ್ರಿತವಾದ ಕಫದೋಷದಿಂದ ಉಂಟಾಗುತ್ತದೆ, ಪ್ರಾರಂಭದಲ್ಲಿ ಇದಕ್ಕೆ ಚಿಕಿತ್ಸಿಸಲು ಸಾಧ್ಯವೇ ಹೊರ್ತು ಬಲಿತ ಮೇಲೆ ಆಗುವುದಿಲ್ಲ.

**ಬಲಾಸವಿನಾಯುತಮುನ್ನತಂಚಶೋಥಂಕರೋತ್ಯನ್ನಗತಿಂ ನಿವಾರ್ಯ ॥ ೪೫ ॥**
**ತಂಸರ್ವಥೈವಾಪ್ರತಿವಾರ್ಯವೀರ್ಯಂವಿವರ್ಜನೀಯಂವಲಯಂ ವದಂತಿ ॥**

ಕಂಠಸ್ಥಾನಗತವಾದ ಕಫವು ಪ್ರಕುಪಿತವಾಗಿ ವಿಸ್ತಾರವಾದ ಮತ್ತು ದೊಡ್ಡದಾದ ಗಂಟಲಿನ ಸುತ್ತಲೂ ಒಳಭಾಗದಲ್ಲಿ ವಲಯಾಕಾರವಾದ ಶೋಭೆ ಯನ್ನುಂಟುಮಾಡುತ್ತದೆ, ಇದರಿಂದ ಅನ್ನವು ಒಳಕ್ಕೆ ಹೋಗದಂತೆ ಅನ್ನನಾಳವೇ ಬಂದಾಗಿಹೋಗುತ್ತದೆ, ಇದಕ್ಕೆ ವಲಯವೆಂಬದಾಗಿ ಹೆಸರು, ಇದು ಅಸಾಧ್ಯ ವಾದ ರೋಗ.

**ಗಲೇತುಶೋಥಂಕುರುತಃಪ್ರವೃದ್ಧೌಶ್ಲೇಷ್ಮಾನಿಲೌಶ್ವಾಸರು ಜೋಪಪನ್ನಂ ॥ ೪೬ ॥**
**ಮರ್ಮಚ್ಛಿದಂದುಸ್ತರಮೇನಮಾಹುರ್ಬಲಾಶಸಂಜ್ಞಂನಿಪುಣಾ ವಿಕಾರಂ ॥**

ಕಂಠಸ್ಥಾನಗತಗಳಾದ ಶ್ಲೇಷ್ಮ ಮತ್ತು ವಾತಗಳು ಪ್ರಕೋಪವನ್ನು ಹೊಂದಿ ಗಂಟಲಿನಲ್ಲಿ ಬಾಕನ್ನು ಹುಟ್ಟಿಸುತ್ತವೆ, ಇದರೊಂದಿಗೆ ಶ್ವಾಸರೋಗವೂ ಸೇರಿಕೊಳ್ಳುತ್ತದೆ, ಅಂದರೆ ಉಸಿರುಬಿಡೋಣ ಮೊದಲಾದ ಕ್ರಿಯೆಗಳೆಲ್ಲಾ ಕಷ್ಟಕರವಾಗುತ್ತವೆ, ಮರ್ಮೋಪಘಾತಕವಾದ ಈ ರೋಗವನ್ನು ಬಲಾಸರೋಗ ವೆಂದು ನಿಪುಣರಾದವರು ಹೇಳುತ್ತಾರೆ, ಇದು ಅಸಾಧ್ಯ.

**ವೃತ್ತೋನ್ನತೋಂತಶ್ವಯಥುಸ್ಸದಾಹಃಸಕಂಡುರೋಪಾಕ್ಯ**
**ಮೃದುರ್ಗುರುಶ್ಚ ॥ ೪೭ ॥**
**ನಾಮ್ನೈಕವೃಂದಃಪರಿಕೀರ್ತಿತೋಸೌವ್ಯಾಧಿರ್ಬಲಾಸಕ್ಷತಜ**
**ಪ್ರಸೂತಃ ॥**

ಏಕವೃಂದವೆಂಬುವುದೊಂದು ಗಂಟಲವ್ಯಾಧಿ, ಇದರಲ್ಲಿ ಗಂಟಲಿನಲ್ಲಿ ದುಂಡಗೆ ದೊಡ್ಡದಾಗಿ ಬಾತುಬರುತ್ತದೆ, ಈ ಬಾವಿನಲ್ಲಿ ಉರಿ ಮತ್ತು ನವೆ ಇರುತ್ತದೆ, ಈ ಬಾವು ಮೃದುವಾಗಿರುವುದಿಲ್ಲ, ಗುರುಗುಣವುಳ್ಳದ್ದಾಗಿರುತ್ತದೆ, ಈ ವ್ಯಾಧಿಯು ಶ್ಲೇಷ್ಮ ಮತ್ತು ರಕ್ತಗಳ ಪ್ರಕೋಪದಿಂದ ಉತ್ಪತ್ತಿಯಾಗುತ್ತದೆಂದು ತಿಳಿಯಬೇಕು.

**ಸಮುನ್ನತಂವೃತ್ತಮಮಂದದಾಹಂತೀವ್ರಜ್ವರಂವೃಂದಮುದಾ**
**ಹರಂತಿ ॥ ೪೮ ॥**
**ತಚ್ಚಾಪಿಪಿತ್ತಕ್ಷತಜಪ್ರಕೋಪಾತ್‌ಜ್ಞೇಯಂಸತೋದಂಪವನಾ**
**ತ್ಮಕಂತು ॥**

ವೃಂದವೆಂಬುವುದೂ ಒಂದು ಗಂಟಲಿನಲ್ಲಿಯೇ ಹುಟ್ಟತಕ್ಕ ವ್ಯಾಧಿ—ಇದು ಕೂಡ ಏಕವೃಂದವೆಂಬ ಹಿಂದೆ ಹೇಳಿದ ವ್ಯಾಧಿಯಂತೆಯೇ ಇರುತ್ತದೆ, ಗಂಟಲಿನಲ್ಲಿರುವ ಬಾವಿನಲ್ಲಿ ಉರಿ ಜಾಸ್ತಿ, ಇದರ ಜೊತೆಗೆ ಬಹಳವಾಗಿ ಜ್ವರವೂ ಹೆಚ್ಚಾಗಿಯೇ ಇರುತ್ತದೆ, ಹೀಗೆ ಇದ್ದಲ್ಲಿ ಇದು ಪಿತ್ತ ಮತ್ತು ರಕ್ತಗಳ ಪ್ರಕೋಪದಿಂದ ಉತ್ಪನ್ನವಾಗಿದೆ ಎಂದು ತಿಳಿಯಬೇಕು, ಇದರ ಜೊತೆಗೆ ವ್ಯಥೆಯೂ ಸೇರಿಕೊಂಡಿದ್ದರೆ ವಾತಪ್ರಕೋಪವೂ ಇದೆ ಎಂದು ತಿಳಿದುಕೊಳ್ಳಬೇಕು.

**ವರ್ತಿರ್ಘನಾಕಂಠನಿರೋಧಿನೀಯಾಚಿತಾತಿಮಾತ್ರಂಪಿಶಿತಪ್ರ**
**ರೋಹೈಃ ॥ ೪೯ ॥**
**ಅನೇಕರುಕ್‌ಪ್ರಾಣಹರೀತ್ರಿದೋಷಾತ್‌ಜ್ಞೇಯಾಶತಘ್ನೀಚ**
**ಶತಘ್ನಿರೂಪಾ ॥**

ಶತಘ್ನಿ ಎಂಬುವುದೊಂದು ಬಗೆಯ ಕಂಠರೋಗ, ಈ ರೋಗದಲ್ಲಿ ಗಂಟಲಿನಲ್ಲಿ ಬತ್ತಿಯ ಹಾಗೆ ಉದ್ದುದ್ದವಾಗಿ ಬಾತುಕೊಂಡು ಗಂಟಲನ್ನು ಮುಚ್ಚಿಕೊಳ್ಳುತ್ತದೆ, ಆ ಬಾತಿರುವುದರ ಮೇಲೆಲ್ಲಾ ಮಾಂಸಾಂಕುರಗಳು ಹುಟ್ಟಿಕೊಳ್ಳುತ್ತವೆ, ಇದೇ ತರಹವಾದ ಹಿಂಸೆ ಎಂದು ಹೇಳುವುದಕ್ಕೆ ಅಸಾಧ್ಯವಾಗಿ ನಾನಾ ವಿಧಗಳಾದ ಹಿಂಸೆಗಳಾಗುತ್ತಿರುವುದು, ಪ್ರಾಣವಾಯುವೇ ಹಾರಿಹೋಗುವುದು, ಈ ರೀತಿ ಎಲ್ಲಾ ಆಗುತ್ತದೆ, ಶತಘ್ನಿ ಎಂಬ ಕಠಿನವಾದ ಆಯುಧವಷ್ಟು ಕ್ರೂರವಾದ್ದರಿಂದ ಮತ್ತು ಅದೇ ಆಕಾರವೂ ಇದಕ್ಕಿರೋಣದರಿಂದ ಇದಕ್ಕೆ ಶತಘ್ನಿ ಎಂಬದಾಗಿ ಹೆಸರನ್ನು ಕೊಟ್ಟುಕೊಂಡಿದ್ದಾರೆ.

**ಗ್ರಂಥಿರ್ಗಲೇತ್ವಾಮಲಕಾಸ್ಥಿಮಾತ್ರಃಸ್ಥಿರೋಽತಿರುಗ್ಯಃಕಫರಕ್ತ**
**ಮೂರ್ತಿಃ ॥ ೩೦ ॥**
**ಸಂಲಕ್ಷ್ಯತೇಸಕ್ತಮಿವಾಶನಂಚಸಶಸ್ತ್ರಸಾಧ್ಯಸ್ತುಗಲಾಯು**
**ಸಂಜ್ಞಃ ॥**

ಗಲಾಯು ಎಂಬುವುದೊಂದು ಕಂಠರೋಗ, ಕಂಠಸ್ಥಾನಗತವಾದ ಕಫ ಮತ್ತು ರಕ್ತಗಳ ಪ್ರಕೋಪದಿಂದ ಗಂಟಲಿನಲ್ಲಿ ನೆಲ್ಲಿಯ ಬೀಜದಂತಹ ಗಟ್ಟಿಯಾದ ಒಂದು ಗಂಟುಬರುವುದು, ನೋವು ಬಹಳವಾಗಿರುತ್ತದೆ, ಗಂಟಲಿನಲ್ಲಿ ಅನ್ನವಾಗಲಿ ತಿನ್ನತಕ್ಕ ಯಾವುದಾದರೂ ಪದಾರ್ಥವಾಗಲಿ ಸಿಕ್ಕಿಕೊಂಡಿರುವಂತೆ ಭಾಸವಾಗುತ್ತಿರುತ್ತದೆ. ಇದು ಶಸ್ತ್ರಕ್ರಿಯೆಯಿಂದಲೇ ಸಾಧ್ಯವಾಗಬೇಕಾದದ್ದು.

**ಸರ್ವಂಗಲಂವ್ಯಾಪ್ಯಸಮುತ್ಥಿತೋಯಃಶೋಥೋರುಜಸ್ಸಂತಿತು**
**ಯತ್ರಸರ್ವಾಃ ॥ ೩೧ ॥**
**ಸಸರ್ವದೋಷೈರ್ಗಲವಿದ್ರಧಿಸ್ತುತಸ್ಯೈವತುಲ್ಯಃಖಲುಸರ್ವ**
**ಜಸ್ಯ ॥**

ಗಲವಿದ್ರಧಿ ಎಂಬ ಕಂಠರೋಗವನ್ನು ಹೇಳುತ್ತಾನೆ—ಗಂಟಲಿನ ಎಲ್ಲಾ ಭಾಗದಲ್ಲಿಯೂ ನೋವಿರುತ್ತದೆ, ಬಾತುಹೋಗಿಯೂ ಇರುತ್ತದೆ. ಇದು ಸಮಸ್ತ ದೋಷಗಳ ಪ್ರಕೋಪದಿಂದಲೂ ಉತ್ಪನ್ನವಾದದ್ದೆಂದು ತಿಳಿಯಬೇಕು. ತ್ರಿದೋಷ ಸನ್ನಿಪಾತಜನ್ಯವಾದ ವಿದ್ರಧಿಯ ಲಕ್ಷಣಗಳಂತೆಯೇ ಇದರ ಲಕ್ಷಣಗಳೂ ಇರುತ್ತವೆ.

**ಶೋಥೋಮಹಾನನ್ನಜಲಾವರೋಧೀತೀವ್ರಜ್ವರೋವಾಯು**
**ಗತೇರ್ನಿಹಂತಾ ॥ ೩೨ ॥**
**ಕಫೇನಜಾತೋರುಧಿರಾನ್ವಿತೇನಗಲೇಗಲೌಘಃಪರಿಕೀರ್ತ್ಯತೇತು॥**

ಗಂಟಲಿನಲ್ಲಿ ಶೋಥವುಂಟಾಗಿ ಅನ್ನನೀರುಗಳು ತಡೆದುಹೋಗುವುದು, ಬಹಳ ಜ್ವರ ಬರುವುದು, ಕ್ರಮೇಣ ಶ್ವಾಸ ಆಡುವುದೂ ಬಂದಾಗುವ ಲಕ್ಷಣಗಳು ತೋರುವುದು, ಹೀಗಾಗುವುದಕ್ಕೆ ಗಲೌಘವೆಂದು ಹೆಸರು. ಇದು ರಕ್ತ ಮತ್ತು ಕಫಗಳ ಪ್ರಕೋಪದಿಂದ ಉಂಟಾಗುವಂತಹುದೆಂದು ತಿಳಿಯಬೇಕು.

**ಯಸ್ತಾಮ್ಯಮಾನಃಶ್ವಸಿತಿಪ್ರಸಕ್ತಂಭಿನ್ನಸ್ವರಶ್ಶುಷ್ಕವಿಮುಕ್ತ**
**ಕಂಠಃ ॥ ೩೩ ॥**
**ಕಫೋಪದಿಗ್ಧೇಷ್ವನಿಲಾಯನೇಷುಜ್ಞೇಯಸ್ಸರೋಗಶ್ಶ್ವಸನಾತ್**
**ಸ್ವರಘ್ನಃ ॥**

ಪದೇ ಪದೇ ಮೂರ್ಛೆಹೋಗುತ್ತಿರುವುದು, ತಡದು ತಡದು ಉಸಿರುಬಿಡುತ್ತಿರುವುದು, ಧ್ವನಿ ಒಡೆದುಹೋಗಿ ಗಂಟಲಿನಲ್ಲಿ ದ್ರವವಿಲ್ಲದೆ ಗಂಟಲು ಸ್ವಾಧೀನ

ತಪ್ಪಿಹೋಗುವುದು, ಗಂಟಲಿನಲ್ಲಿರುವ ವಾಯು ಸಂಚಾರಮಾರ್ಗಗಳಲ್ಲೆಲ್ಲಾ ಶ್ಲೇಷ್ಮವು ತುಂಬಿಕೊಂಡಿರುವುದು, ಈ ರೋಗಕ್ಕೆ ಸ್ವರಘ್ನವೆಂದು ಹೆಸರು, ಇದು ವಾತಪ್ರಕೋಪಜನ್ಯವಾದದ್ದು.

ಪ್ರತಾನವಾನ್ಯಶ್ಶ್ವಯಥುಸ್ಸುಕಷ್ಟೋಗಲೋಪರೋಧಂಕು
ರುತೇಕ್ರಮೇಣ ॥ ೫೪ ॥
ಸಮಾಂಸತಾನಃಕಥಿತೋವಲಂಬೀಪ್ರಾಣಪ್ರಣುತ್ಸರ್ವಕೃ
ತೋವಿಕಾರಃ ॥

ಗಂಟಲಿನಲ್ಲಿ ಬಹುದೊಡ್ಡದಾಗಿ ಊದುವುದು, ಉಸಿರಾಡುವುದು ಬಹು ಕಷ್ಟವಾಗಿರುವುದು, ಈ ಬಾಕು ಕ್ರಮೇಣ ಕಂಠನಾಳವನ್ನೇ ತಡೆಯುವುದು, ಇದು ಸಮಸ್ತ ದೋಷಗಳ ಪ್ರಕೋಪದಿಂದಲೂ ಹುಟ್ಟತಕ್ಕದ್ದು, ಇದಕ್ಕೆ ಮಾಂಸತಾನವೆಂಬದಾಗಿ ಹೆಸರು. ಪ್ರಾಣಘಾತಕವಾದದ್ದು.

ಸದಾಹತೋದಂಶ್ವಯಥುಂಸುತಾಮ್ರಮಂತರ್ಗಲೇಪೂತಿವಿಶೀ
ರ್ಣಮಾಂಸಂ ॥ ೫೫ ॥
ಪಿತ್ತೇನವಿದ್ಯಾದ್ವದನೇವಿದಾರೀಂಪಾರ್ಶ್ವೇವಿಶೇಷಾತ್ಸತು
ಯೇನಶೇತೇ ॥

ಗಂಟಲಿನ ಒಳಭಾಗದಲ್ಲಿ ಉರಿ, ವ್ಯಥೆ ಇವುಗಳಿಂದ ಕೂಡಿದ ಶೋಭೆ ಉಂಟಾಗುವುದು, ಶೋಭೆಯು ಕೆಂಪಾಗಿರುವುದು, ಗಂಟಲುಮಾಂಸವು ದುರ್ಗಂಧವಾಗಿ ಒಡೆದುಹೋಗಿರುವುದು, ಈ ರೋಗದಿಂದ ಪೀಡಿತನಾದವನು ಯಾವ ಮಗ್ಗಲಿನಲ್ಲಿ ಮಲಗುತ್ತಾನೆಯೋ ಈ ಲಕ್ಷಣಗಳೆಲ್ಲಾ ವಿಶೇಷವಾಗಿ ಆ ಮಗ್ಗಲಿಗೇನೇ ಇರುವುದು, ಇದಕ್ಕೆ ವಿದಾರೀ ಎಂಬದಾಗಿ ಹೆಸರು.

ಸ್ಫೋಟೈಸ್ಸತೋದೈರ್ವದನಂಸಮಂತಾದ್ಯಸ್ಯಾಚಿತಂಸರ್ವಸರಸ್ಸ
ವಾತಾತ್ ॥ ೫೬ ॥
ರಕ್ತೈಸ್ಸದಾಹೈಸ್ತನುಭಿಸ್ಸಪೀತೈರ್ಯಸ್ಯಾಚಿತಂಚಾಪಿಸಪಿತ್ತ
ಕೋಪಾತ್ ॥
ಅವೇದನೈಃಕಂಡುಯುತೈಸ್ಸವರ್ಣೈರ್ಯಸ್ಯಾಚಿತಂಚಾಪಿಸವೈ
ಕಫೇನ ॥ ೫೭ ॥

ಬಾಯಿತುಂಬಾ ಗುಳ್ಳೆಗಳಿರುವುದು, ಅವುಗಳಲ್ಲಿ ನೋವು ಇದ್ದುಕೊಂಡು ಬಾಯಿನಲ್ಲೆಲ್ಲಾ ವ್ಯಾಪಿಸುವ ಸ್ವಭಾವವುಳ್ಳವುಗಳಾಗಿದ್ದರೆ ವಾತಪ್ರಕೋಪಜನ್ಯಗಳೆಂದೂ ಬಾಯಿನ ತುಂಬ ಕೆಂಪು ಮತ್ತು ಹಳದಿಯ ಬಣ್ಣದ ಗುಳ್ಳೆಗಳಿರುವುದು, ಉರಿಯೂ ಇರುವುದು, ಹೀಗಿದ್ದಲ್ಲಿ ಪಿತ್ತಪ್ರಕೋಪಜನ್ಯಗಳೆಂಬದಾಗಿಯೂ

ಬಾಯಿನ ತುಂಬ ಅದೇ ಬಣ್ಣದ ಬಕ್ಕೆಗಳು ತುಂಬಿಕೊಂಡಿರುವುದು, ನವೆಯಿರುವುದು, ನೋವು ವ್ಯಥೆ ಇರುವುದಕ್ಕಿಲ್ಲ, ಹೀಗಿದ್ದಲ್ಲಿ ಕಫಪ್ರಕೋಪಜನ್ಯವೆಂಬದಾಗಿಯೂ ತಿಳಿಯಬೇಕು.

ಓಷ್ಠಪ್ರಕೋಪೇವರ್ಜ್ಯಾಃಸ್ಯುರ್ಮಾಂಸರಕ್ತತ್ರಿದೋಷಜಾಃ ॥
ದಂತಮೂಲೇಷುವರ್ಜ್ಯಾಃಚತ್ರಿಲಿಂಗಗತಿಶೌಷಿರೌ ॥ ೫೮ ॥
ದಂತೇಷುಚನಸಿದ್ಧ್ಯಂತಿಶ್ಯಾವದಾಲನಭಂಜನಾಃ ॥
ಜಿಹ್ವಾರೋಗೇಬಲಾಶಸ್ತುತಾಲವ್ಯೇಷ್ವರ್ಬುದಂತಥಾ ॥ ೫೯ ॥
ಸ್ವರಘ್ನೋವಲಯೋವೃಂದೋಬಲಾಶಶ್ಚವಿದಾರಿಕಾ ॥
ಗಲೌಘೋಮಾಂಸತಾನಶ್ಚಶತಘ್ನೀರೋಹಿಣೀಗಳೇ ॥ ೬೦ ॥
ಅಸಾಧ್ಯಾಃಕೀರ್ತಿತಾಹ್ಯೇತೇರೋಗಾನವದಶೈವತು ॥
ತೇಷುಚಾಪಿಕ್ರಿಯಾಂವೈದ್ಯಃಪ್ರತ್ಯಾಖ್ಯಾಯಸಮಾಚರೇತ್ ॥೬೧॥

ಮುಖರೋಗಗಳಲ್ಲಿ ಅಸಾಧ್ಯಗಳಾದವುಗಳನ್ನು ಪರಿಗಣಿಸುತ್ತಾನೆ— ಓಷ್ಠಗಳಿಗೆ ಬರುವ ರೋಗಗಳಲ್ಲಿ ಮಾಂಸಪ್ರಕೋಪಜನ್ಯಗಳಾದ ರೋಗಗಳು ರಕ್ತಪ್ರಕೋಪಜನ್ಯಗಳಾದ ರೋಗಗಳು, ತ್ರಿದೋಷಪ್ರಕೋಪಜನ್ಯಗಳಾದ ರೋಗಗಳು ಅಸಾಧ್ಯಗಳು, ದಂತಮೂಲರೋಗಗಳಲ್ಲಿ ತ್ರಿದೋಷಪ್ರಕೋಪಜನ್ಯವಾದ ವ್ರಣವೂ ತ್ರಿದೋಷಪ್ರಕೋಪಜನ್ಯವಾದ ಶೌಷಿರವೆಂಬುವುದೂ ಅಸಾಧ್ಯ, ದಂತರೋಗಗಳಲ್ಲಿ ಶ್ಯಾವ, ದಾಲನ, ಭಂಜನಗಳೆನ್ನುವವು ಅಸಾಧ್ಯಗಳು, ನಾಲಿಗೆಗೆ ಸಂಭವಿಸುವ ರೋಗಗಳಲ್ಲಿ ಬಲಾಶವೆಂಬುವುದೂ ದವಡೆಯಲ್ಲಿ ಹುಟ್ಟುವ ರೋಗಗಳಲ್ಲಿ ಅರ್ಬುದವೆಂಬುವುದೂ ಅಸಾಧ್ಯ, ಗಂಟಲಿನಲ್ಲಿ ಹುಟ್ಟುವ ರೋಗಗಳಲ್ಲಿ ಸ್ವರಘ್ನ, ವಲಯ, ವೃಂದ, ಬಲಾಶ, ವಿದಾರಿಕ, ಗಲೌಘ, ಮಾಂಸತಾನ, ಶತಘ್ನಿ, ರೋಹಿಣಿ, ಇವುಗಳು ಅಸಾಧ್ಯಗಳು, ಆದರೆ ಅವುಗಳನ್ನೂ ವೈದ್ಯನಾದವರು ಅಸಾಧ್ಯವೆಂದು ಚಿಕಿತ್ಸಿಸದೆ ಬಿಡಬಾರದು

ಇಲ್ಲಿಗೆ ಮುಖರೋಗನಿದಾನ ಸಂಪೂರ್ಣ.

---

## ಕರ್ಣರೋಗನಿದಾನ.

ಸಮೀರಣಶ್ಶ್ರೋತ್ರಗತೋನ್ಯಥಾಚರನ್ ಸಮಂತತಶ್ಶೂಲಮತೀವಕರ್ಣಯೋಃ ॥
ಕರೋತಿದೋಷೈಶ್ಚಯಥಾಸ್ವಮಾವೃತಃಸಕರ್ಣಶೂಲಃಕಥಿತೋದುರಾಚರಃ ॥ ೧ ॥

ಮುಖರೋಗಗಳನ್ನು ಹೇಳಿ ಕ್ರಮಪ್ರಾಪ್ತವಾದ ಕರ್ಣರೋಗವನ್ನು ಹೇಳುತ್ತಾನೆ—ಶ್ರೋತ್ರೇಂದ್ರಿಯಗತವಾದ ವಾಯುವು ಪ್ರಕೋಪವನ್ನು ಹೊಂದಿ ಪ್ರಕುಪಿತಗಳಾದ ಇತರ ದೋಷಗಳನ್ನೂ ಎಬ್ಬಿಸಿಕೊಂಡು ಪ್ರತಿಕೂಲವಾದ ಮಾರ್ಗದಲ್ಲಿ ಸಂಚರಿಸಿ ಕಿವಿಯಲ್ಲಿ ಅತಿಯಾಗಿ ಶೂಲವನ್ನುಂಟುಮಾಡುತ್ತದೆ, ಇದಕ್ಕೆ ಕರ್ಣಶೂಲವೆಂದು ಹೆಸರು, ಇದಕ್ಕೆ ಚಿಕಿತ್ಸೆಮಾಡುವುದು ಅತಿ ದುಃಖ.

**ಕರ್ಣಸ್ರೋತಸ್ಥಿತೇವಾತೇಶೃಣೋತಿವಿವಿಧಾನ್ ಸ್ವರಾನ್ ॥**
**ಭೇರೀಮೃದಂಗಶಂಖಾನಾಂಕರ್ಣನಾದಸ್ಸಉಚ್ಯತೇ ॥ ೨ ॥**

ಕರ್ಣಸ್ರೋತೋಗತವಾದ ವಾಯುವು ಪ್ರಕೋಪವನ್ನು ಹೊಂದಿ ಶ್ರವಣ ಪಟಲವನ್ನು ಕೆಡಿಸಿ ಕಿವಿಯಲ್ಲಿ ನಾನಾ ವಿಧವಾದ ಅಂದರೆ ಭೇರಿ, ಮೃದಂಗ ಮೊದಲಾದವುಗಳ ಶಬ್ದದಂತೆ ಶಬ್ದವು ಕೇಳುವ ಹಾಗೆ ಮಾಡಿದರೆ ಅದಕ್ಕೆ ಕರ್ಣನಾದವೆಂಬದಾಗಿ ಹೆಸರು.

**ಯದಾಶಬ್ದವಹಂವಾಯುಃಸ್ರೋತಆವೃತ್ಯತಿಷ್ಠತಿ ॥**
**ಶುದ್ಧಶ್ಲೇಷ್ಮಾನ್ವಿತೋವಾಪಿಬಾಧಿರ್ಯಂತೇನಜಾಯತೇ ॥ ೩ ॥**

ಶಬ್ದವಾಹಿನಿಗಳಾದ ಕಿವಿಯ ನಾಡಿಗಳಲ್ಲಿ ಪ್ರಕೋಪವನ್ನು ಹೊಂದಿದ ವಾಯುವು ಸೇರಿಕೊಂಡಾದರೂ, ಶ್ಲೇಷ್ಮಸಮೇತವಾಗಿ ಸೇರಿಕೊಂಡಾದರೂ ಕಿವಿಯಲ್ಲಿ ಯಾವ ಶಬ್ದವೂ ಕೇಳದಂತೆ ಮಾಡಿ ಕರ್ಣೇಂದಿಯವನ್ನೇ ಹಾಳು ಮಾಡಿದಲ್ಲಿ ಇದಕ್ಕೆ ಬಧಿರತ್ವವೆಂದು ವ್ಯವಹಾರ.

**ವಾಯುಃಪಿತ್ತಾದಿಭಿರ್ಯುಕ್ತೋವೇಣುಘೋಷೋಪಮಂಸ್ವನಂ ॥**
**ಕರೋತಿಕರ್ಣಯೋಃಕ್ಷ್ವೇಡಂಕರ್ಣಕ್ಷ್ವೇಡಸ್ಸಉಚ್ಯತೇ ॥ ೪ ॥**

ಕರ್ಣರಂಧ್ರಸ್ಥಾನದಲ್ಲಿರುವ ವಾಯುವು ಪ್ರಕೋಪವನ್ನು ಹೊಂದಿ ಪಿತ್ತಾದಿ ದೋಷಗಳೊಡನೆ ಕೂಡಿಕೊಂಡು ಬಿದಿರುಕೊಳಲು ಊದುವಂತಹ ಶಬ್ದವು ಯಾವಾಗಲೂ ಕಿವಿಯಲ್ಲಿ ತುಂಬಿಕೊಂಡಿರುವಂತೆ ಮಾಡಿದರೆ ಅದಕ್ಕೆ ಕರ್ಣ ಕ್ಷ್ವೇಡವೆಂಬದಾಗಿ ಹೆಸರು.

**ಶಿರೋಭಿಘಾತಾದಥವಾನಿಮಜ್ಜತೋಜಲೇಪ್ರಪಾಕಾದಥವಾಪಿ ವಿದ್ರಧೇಃ ॥**
**ಸ್ರವೇದ್ಧಿಪೂಯಂಶ್ರವಣೋನಿಲಾರ್ದಿತಸ್ಸಕರ್ಣಸಂಸ್ರಾವಇತಿ ಪ್ರಕೀರ್ತಿತಃ ॥ ೫ ॥**

ತಲೆಗೆ ಯಾವುದಾದರೂ ಬಲವಾದ ಪೆಟ್ಟು ಬೀಳೋಣ, ಯಾವಾಗಲೂ ತಲೆಗೆ ಸ್ನಾನಮಾಡಿ ಮುಳುಗೋಣ, ಕಿವಿಯಲ್ಲಿ ಗುಳ್ಳೆಗಳಾಗೋಣ, ಕಿವಿಯ ಒಳಭಾಗದಲ್ಲಿ ಕುರ, ಹುಣ್ಣು ಇವುಗಳೇಳೋಣ, ಇಂತಹ ಕಾರಣಗಳಿಂದ ಕಿವಿಯಲ್ಲಿ ವಾತಪ್ರಕೋಪವಾಗಿ ಕಿವಿಯಿಂದ ಕೀವು, ರಕ್ತಮಿಶ್ರವಾದ ನೀರು ಇವುಗಳು ಸೋರುವುದಕ್ಕೆ ಪ್ರಾರಂಭವಾದರೆ ಅದಕ್ಕೆ ಕರ್ಣಸ್ರಾವವೆಂದಾಗಿ ಹೆಸರು.

ಮಾರುತಃ ಕಫಸಂಯುಕ್ತಃ ಕರ್ಣಕಂಡೂಂ ಕರೋತಿಚ ॥
ಪಿತ್ತೋಷ್ಮಶೋಷಿತಃ ಶ್ಲೇಷ್ಮಾ ಕುರುತೇ ಕರ್ಣಗೂಥಕಂ ॥ ೬ ॥
ಸಕರ್ಣಗೂಥೋದ್ರವತಾಂಗತೋಯದಾವಿಲಾಯಿತೋಘ್ರಾಣ ಮುಖಂಪ್ರಪದ್ಯತೇ ॥
ತದಾಸಕರ್ಣಪ್ರತಿನಾಹಸಂಜ್ಞಿತೋಭವೇದ್ವಿಕಾರಶ್ಶಿರಸೋಽರ್ಧ ಭೇದಕೃತ್ ॥ ೭ ॥

ಕರ್ಣಗತವಾದ ವಾಯುವು ಪ್ರಕುಪಿತವಾಗಿ ಕಫದೊಡನೆ ಕೂಡಿಕೊಂಡು ಕಿವಿಯಲ್ಲಿ ನವೆಯನ್ನುಂಟುಮಾಡುತ್ತದೆ, ಈ ಸಂದರ್ಭದಲ್ಲಿ ಉಂಟಾಗುವ ಪಿತ್ತದ ಔಷ್ಣ್ಯದಿಂದ ಕರ್ಣರಂಧ್ರಗತವಾದ ಶ್ಲೇಷ್ಮವು ಶೋಷಿಸಲ್ಪಟ್ಟು ಕಿವಿಯಲ್ಲಿ ಒಂದು ವಿಧವಾದ ಗೂಥವೆನ್ನಿಸಿಕೊಳ್ಳುವ ಮಲವನ್ನು ಉಂಟುಮಾಡುತ್ತದೆ, ಇಂತಹ ಕರ್ಣಗೂಥವೆನ್ನಿಸಿಕೊಳ್ಳುವ ಮಲವು ಶರೀರಗತಗಳಾದ ಜಿಡ್ಡು ಮತ್ತು ಬೆವರುಗಳ ಸಂಪರ್ಕದಿಂದ ದ್ರವಭಾವವನ್ನು ಹೊಂದಿ ನಾಸಿಕಾದ್ವಾರವನ್ನು ಮುಖವನ್ನು ಸಹ ಹೊಂದಿದರೆ ಆಗ್ಯೆ ಕರ್ಣಪ್ರತಿನಾಹವೆಂಬ ಒಂದು ಕರ್ಣರೋಗವು ಉಂಟಾಗುತ್ತದೆ, ಈ ರೋಗವು ಅರ್ಧಾವಭೇದಕವೆಂಬ ಅರ್ಧ ತಲೆನೋವನ್ನು ಹುಟ್ಟಿಸುತ್ತದೆ.

ಯದಾತುಮೂರ್ಛಂತ್ಯಥವಾಪಿಜಂತವಃ ಸೃಜಂತ್ಯಪತ್ಯಾನ್ಯಥವಾಪಿಮಕ್ಷಿಕಾಃ ॥
ತದ್ವ್ಯಂಜನತ್ವಾತ್ ಶ್ರವಣೋನಿರುಚ್ಯತೇಭಿಷಗ್ಭಿರಾದ್ಯೈಃ ಕ್ರಿಮಿಕರ್ಣಕೋಗದಃ ॥ ೮ ॥

ಕಿವಿಯ ಒಳಭಾಗದಲ್ಲಿರುವ ರಕ್ತಮಾಂಸಗಳು ಯಾವುದಾದರೂ ಕಾರಣದಿಂದ ಕೆಟ್ಟುಹೋಗಿ ಅಲ್ಲಿ ಕ್ರಿಮಿಗಳಾಗುವುದು, ಅಲ್ಲಿ ಇಪ್ಪೆನೊಣಗಳು ಕುಳಿತು ಮೊಟ್ಟೆಗಳನ್ನಿಟ್ಟು ಅದರಿಂದ ಹುಳಗಳಾಗುವುದು, ಈ ಕಾರಣಗಳಿಂದ ಕಿವಿಯಲ್ಲಿ ಹುಳಬಿದ್ದು ಕೆಟ್ಟುಹೋದರೆ ಇದನ್ನು ವೈದ್ಯರು ಕ್ರಿಮಿಕರ್ಣ ಎಂಬ ರೋಗವೆಂದು ವ್ಯವಹರಿಸುತ್ತಾರೆ, ಈ ವಿಚಾರವನ್ನೇ ಊರ್ಧ್ವಾಂಗರೋಗಗಳಲ್ಲಿ ಪೂರ್ಣಪಂಡಿತನಾದ ಜನಕ ಮಹಾರಾಜನು ತನ್ನ ಗ್ರಂಥದಲ್ಲಿ ಈ ರೀತಿಯಾಗಿ ಹೇಳಿರು

ತ್ತಾನೆ—''ಶ್ಲೇಷ್ಮಪಿತ್ತಜಲೋನ್ಮಿಶ್ರೇಶೋಥೇಶೋಣಿತಮಾಂಸಜೇ॥ ಜಾಯಂತೇ ಜಂತವಸ್ತತ್ರಕೃಷ್ಣಾಸ್ತಾಮ್ರಾಸ್ಸಿತಾರುಣಾಃ ॥ ಭಕ್ಷಯಂತೀವತೇಕರ್ಣಂಕುರ್ವಂತೋವಿವಿಧಾರುಜಃ ॥ ಕ್ರಿಮಿಕರ್ಣಂತುತಂವಿದ್ಯಾತ್ಸನ್ನಿಪಾತಪ್ರಕೋಪಜಂ ॥'' ಅಂದರೆ ಕಿವಿಯಲ್ಲಿ ಶ್ಲೇಷ್ಮ ಪಿತ್ತ ನೀರು ಇವುಗಳು ಸೇರಿ ರಕ್ತಮಾಂಸಗಳು ಕೊಳತು ಅಲ್ಲಿ ಕಪ್ಪಾದ, ತಾಮ್ರವರ್ಣದ. ಬಿಳುಪಾದ, ಅರುಣವರ್ಣಗಳಾದ ಕ್ರಿಮಿಗಳು ಹುಟ್ಟುತ್ತವೆ. ಅವುಗಳು ಕಿವಿಯನ್ನೇ ತಿನ್ನುವಂತೆ ನಾನಾ ವಿಧವಾದ ತೊಂದರೆಗಳನ್ನು ಮಾಡುತ್ತವೆ, ಈ ರೋಗವು ತ್ರಿದೋಷಸನ್ನಿಪಾತದಿಂದ ಹುಟ್ಟಿದ ಕ್ರಿಮಿಕರ್ಣಕವೆಂದು ತಿಳಿಯಬೇಕು.

**ಪತಂಗಾಶ್ಯತಪದ್ಯಶ್ಚ ಕರ್ಣಸ್ರೋತಃಪ್ರವಿಶ್ಯಹಿ ॥**
**ಅರತಿಂವ್ಯಾಕುಲತ್ವಂಚಭೃಶಂಕುರ್ವಂತಿವೇದನಾಂ ॥ ೯ ॥**
**ಕರ್ಣೋನಿಸ್ತುದ್ಯತೇತಸ್ಯ ತಥಾಫರಫರಾಯತೆ ॥**
**ಕೀಟೇಚರತಿರುಕ್ ತೀವ್ರಾನಿಷ್ಪಂದೇಮಂದವೇದನಾ ॥ ೧೦ ॥**

ಅಜಾಗರೂಕತೆಯಿಂದ ಕಿವಿಯೊಳಗೆ ಪತಂಗದ ಹುಳಗಳಾಗಲೀ ಶತಪದಿ ಎಂದರೆ ಸಾವಿರಕಾಲು ಎನ್ನಿಸಿಕೊಳ್ಳುವುವಾಗಲೀ ಹೊಕ್ಕರೆ ಮನುಷ್ಯನಿಗೆ ಸಮಾಧಾನವಿರುವುದಕ್ಕಿಲ್ಲ, ಕಿವಿಯಲ್ಲಿ ಬಹಳವಾಗಿ ವೇದನೆಯಾಗುತ್ತಿರುವುದು, ಕಿವಿಯಲ್ಲಿ ಫರಫರ ಎಂಬದಾಗಿ ಶಬ್ದವಾಗುವುದು, ಕಿವಿಗೆ ಹೊಕ್ಕಿರುವ ಹುಳವು ಕಿವಿಯಲ್ಲಿ ಸಂಚಾರಮಾಡಿದಲ್ಲಿ ಬಹಳ ವ್ಯಥೆಯಾಗುವುದು, ಸುಮ್ಮನಿದ್ದರೆ ವ್ಯಥೆ ಕಡಮೆ ಈ ರೀತಿಯಾದ ಲಕ್ಷಣಗಳಿರುತ್ತವೆ.

**ಕ್ಷತಾಭಿಘಾತಪ್ರಭವಸ್ತುವಿದ್ರಧಿರ್ಭವೇತ್ತಥಾದೋಷಕೃತೋಪರಃಪುನಃ ॥**
**ಸರಕ್ತಪೀತಾರುಣಮಸ್ರಮಾಸ್ರವೇತ್ಪ್ರತೋದಧೂಮಾಯನದಾಹಚೋಷವಾನ್ ॥ ೧೧ ॥**

ಕರ್ಣವಿದ್ರಧಿ ಎಂದರೆ ಕಿವಿಯಲ್ಲಿ ಬಾವು ಏಳುವುದು, ಇದು ಕಿವಿಯನ್ನು ಕಡ್ಡಿ ಮೊದಲಾದ ಸಾಧನಗಳಿಂದ ಕೆರೆಯುವಾಗ ಗಾಯವಾಗಿ ಹುಟ್ಟುವುದುಂಟು, ಆಕಸ್ಮಿಕವಾಗಿ ಕಡ್ಡಿ ಮೊದಲಾದವುಗಳು ಕಿವಿಗೆ ಚುಚ್ಚುವುದರಿಂದ ಹುಟ್ಟುವುದುಂಟು, ಇವುಗಳಿಲ್ಲದೆ ದೋಷಗಳು ಪ್ರಕುಪಿತಗಳಾಗಿಯೂ ಬಾವನ್ನು ಹುಟ್ಟಿಸುತ್ತವೆ, ಇವುಗಳಿಂದ ರಕ್ತವರ್ಣದ, ಹಳದಿಯ ಬಣ್ಣದ, ಅರುಣವರ್ಣದ ಸ್ರಾವವು ಹೊರಡುತ್ತಿರುತ್ತದೆ, ವ್ಯಥೆ, ಧೂಮಾಯನವೆಂದರೆ ಹೊಗೆಹೊರಟಂತೆ ತೋರುವುದು, ಉರಿ ಇವುಗಳೆಲ್ಲಾ ಇರುತ್ತವೆ.

**ಕರ್ಣಪಾಕಸ್ತು ಪಿತ್ತೇನ ಕೋಥವಿಕ್ಲೇದಕೃದ್ಭವೇತ್ ॥**
**ಕರ್ಣವಿದ್ರಧಿಪಾಕಾದ್ವಾ ಜಾಯತೇ ಚಾಂಬುಪೂರಣಾತ್ ॥ ೧೨ ॥**

ಕರ್ಣಪಾಕವೆಂದರೆ ಕಿವಿಯಲ್ಲಿ ಗುಳ್ಳೆಗಳಾಗಿ ನೀರುಸೋರುವುದು, ಪಿತ್ತ ಪ್ರಕೋಪದಿಂದ ಇದು ಉಂಟಾದಲ್ಲಿ ಬಕ್ಕೆಗಳಾಗಿ ವಿಶೇಷವಾಗಿ ಒಂದು ಬಗೆಯ ದ್ರವವು ಸುರಿಯುತ್ತಿರುತ್ತದೆ, ಕಿವಿಯಲ್ಲಿ ಏಳುವ ಕುರಗಳು ಹಣ್ಣಾಗಿ ಒಡೆದು ಅವರ ರಸಿಕೆಯು ಹತ್ತಿದಲ್ಲೆಲ್ಲಾ ಇಂತಹ ಗುಳ್ಳೆಗಳೇಳುತ್ತವೆ, ನೀರಿನಲ್ಲಿ ಮುಳುಗಿ ಸ್ನಾನಮಾಡೋಣ ಮೊದಲಾದ ಕಾರಣಗಳಿಂದ ಕಿವಿಯಲ್ಲಿ ನೀರು ತುಂಬಿಕೊಂಡು ಗುಳ್ಳೆಗಳೆದ್ದು ಕರ್ಣಪಾಕವೆನ್ನುವುದು ಹುಟ್ಟಬಹುದು.

**ಪೂಯಂ ಸ್ರವತಿ ಯಃ ಪೂತಿಂ ಸ ಜ್ಞೇಯಃ ಪೂತಿಕರ್ಣಕಃ ॥**
**ಕರ್ಣಶೋಥಾರ್ಬುದಾರ್ಶಾಂಸಿ ಜಾನೀಯಾದುಕ್ತಲಕ್ಷಣೈಃ ॥ ೧೩ ॥**

ಪೂತಿಕರ್ಣವೆಂದರೆ ದುರ್ಗಂಧಯುಕ್ತವಾದ ಕೀವು ಕಿವಿಯಿಂದ ಸೋರುತ್ತಿರುವುದಕ್ಕೆ ಹೆಸರು, ಕರ್ಣಶೋಥ, ಅರ್ಬುದ, ಕರ್ಣಾರ್ಶಸ್ಸು ಇವುಗಳನ್ನು ಪ್ರತ್ಯೇಕವಾಗಿ ಈ ರೋಗಗಳಿಗೆ ಹೇಳಿರುವ ಲಕ್ಷಣಗಳಿಂದಲೇ ಕಿವಿಯಲ್ಲಿಯೂ ಹುಟ್ಟುತ್ತವೆಂಬುದಾಗಿ ತಿಳಿದುಕೊಳ್ಳಬೇಕು.

**ನಾದೋತಿರುಕ್ಕರ್ಣಮಲಸ್ಯ ಶೋಷಃ ಸ್ರಾವಸ್ತನುಶ್ಚಾಶ್ರವಣಂ ಚ ವಾತಾತ್ ॥**
**ಶೋಥಸ್ಸರಾಗೋ ದರಣಂ ವಿದಾಹಸ್ಸಪೀತಪೂತಿಸ್ರವಣಂ ಚ ಪಿತ್ತಾತ್ ॥ ೧೪ ॥**
**ವೈಶ್ರುತ್ಯಕಂಡೂಸ್ಥಿರಶೋಥಶುಕ್ಲಸ್ನಿಗ್ಧಸ್ರುತಿಸ್ಸ್ವಲ್ಪರುಜಃ ಕಫಾಚ್ಚ ॥**
**ಸರ್ವಾಣಿ ರೂಪಾಣಿ ಚ ಸನ್ನಿಪಾತಾತ್ ಸ್ರಾವಶ್ಚ ತತ್ರಾಧಿಕದೋಷವರ್ಣಃ ॥ ೧೫ ॥**

ಕಿವಿಯಲ್ಲಿ ಯಾವಾಗ್ಯೂ ಒಂದು ವಿಧವಾದ ಶಬ್ದವಾಗುತ್ತಿರುವುದು, ಕಿವಿಯಲ್ಲಿ ಅತಿಯಾಗಿ ನೋವು, ಕಿವಿಯ ಮಲವು ಒಣಗಿಹೋಗುವುದು, ಸ್ವಲ್ಪವಾಗಿ ಕಿವಿಯಿಂದ ದ್ರವವು ಹೊರಡುತ್ತಿರುವುದು, ಇವು ವಾತಪ್ರಕೋಪದ ಲಕ್ಷಣಗಳು. ಕಿವಿಯಲ್ಲಿ ಕೆಂಪಾದ ಶೋಥವುಂಟಾಗುವುದು, ಕಿವಿಯು ಒಡೆದುಹೋಗುವುದು, ಉರಿ, ಹಳದಿಯ ಬಣ್ಣದ ಒಂದು ಬಗೆಯ ದ್ರವವು ದುರ್ಗಂಧಯುಕ್ತವಾಗಿ ಸೋರುವುದು, ಇವು ಪಿತ್ತಪ್ರಕೋಪಜನ್ಯಗಳಾದ ಕರ್ಣರೋಗದ್ರೂಪಗಳು, ಕಿವಿಯು ಕೇಳದೆ ಹೋಗುವುದು, ಕಿವಿಯಲ್ಲಿ ನವೆಯಾಗುವುದು, ಕಿವಿಯಲ್ಲಿ ಸ್ಥಿರವಾದ

ಅಂದರೆ ಗಟ್ಟಿಯಾದ ಬಾಕುಬರುವುದು, ಕಿವಿಯಿಂದ ಬಿಳಿಯ ಬಣ್ಣದ ಜಿಡ್ಡಿನಿಂದ ಕೂಡಿದ ದ್ರವವು ಸೋರುವುದು, ಇಷ್ಟಾದರೂ ನೋವು ಕಡಮೆ. ಈ ವಿಕಾರಗಳು ಕಫಪ್ರಕೋಪಜನ್ಯಗಳು, ತ್ರಿದೋಷಸನ್ನಿಪಾತಜನ್ಯಗಳಾದ ಕರ್ಣರೋಗಗಳಲ್ಲಿ ಮೂರು ದೋಷಗಳ ಲಕ್ಷಣಗಳೂ ಕಾಣುತ್ತಿರುತ್ತವೆ. ಆದರೆ ಸ್ರಾವವು ಮಾತ್ರ ಮೂರು ದೋಷಗಳ ಮಧ್ಯೆ ಯಾವ ದೋಷವು ಹೆಚ್ಚಾಗಿ ಪ್ರಕೋಪವನ್ನು ಹೊಂದಿರುತ್ತದೆಯೋ ಅದೇ ಬಣ್ಣವುಳ್ಳದ್ದಾಗಿರುತ್ತದೆ.

ಸೌಕುಮಾರ್ಯಾಚ್ಚಿರೋತ್ಸೃಷ್ಟೇಸಹಸಾತಿಪ್ರವರ್ಧಿತೇ ॥
ಕರ್ಣಶೋಥೋಭವೇತ್ಪಾಲ್ಯಾಂಸರುಜಃಪರಿಪೋಟವಾನ್ ॥೧೬॥
ಕೃಷ್ಣಾರುಣನಿಭಸ್ತಬ್ಧಸ್ಸವಾತಾತ್ಪರಿಪೋಟಕಃ ॥

ಪೂರ್ವಕಾಲದಲ್ಲಿ ಸ್ತ್ರೀಯರು ತಮ್ಮ ಕಿವಿಗಳನ್ನು ದೊಡ್ಡದಾಗಿ ಮಾಡಿಕೊಳ್ಳುವುದೊಂದು ನಾಗರಿಕತೆಯಿತ್ತು, ಹಾಗೆ ದೊಡ್ಡದು ಮಾಡಿಕೊಳ್ಳತಕ್ಕವರು ಬಾಲ್ಯದಿಂದಲೂ ಅದಕ್ಕೆ ತಕ್ಕ ಸನ್ನಾಹವನ್ನು ಮಾಡಿಕೊಳ್ಳಬೇಕಾಗಿತ್ತು, ಅಂತಹ ಸನ್ನಾಹವನ್ನು ಬಾಲ್ಯದಲ್ಲಿ ಕಿವಿ ಎಳೆತಾಗಿದೆ ಎಂದು ಮಾಡಿಕೊಳ್ಳದೆ ಕಿವಿ ಬಲಿತುಹೋದ ಮೇಲೆ ಆ ಕೆಲಸಕ್ಕೆ ಪ್ರಾರಂಭಿಸಿದಲ್ಲಿ ಅದರಿಂದ ಕಿವಿಯ ಹೊರಭಾಗದಲ್ಲಿ ಚರ್ಮ ಕಿತ್ತುಹೋಗಿ ನೋವಿನಿಂದ ಕೂಡಿದ ಶೋಥವು ಉಂಟಾಗುತ್ತದೆ, ಈ ಶೋಥವು ಕಪ್ಪಾಗಿಯೂ ಸ್ವಲ್ಪ ಕೆಂಪಾಗಿಯೂ ಇರುತ್ತದೆ, ಇದು ವಾತಪ್ರಕೋಪಜನ್ಯವಾದದ್ದು, ಇದಕ್ಕೆ ಪರಿಪೋಟಕವೆಂದು ಹೆಸರು, ಮಲೆಯಾಳದೇಶದ ಹೆಂಗಸರಲ್ಲಿ ಈ ಕರ್ಣಪಾಳೀವರ್ಧನಕಲೆಯನ್ನು ಈಗಲೂ ಕಾಣಬಹುದು.

ಗುರ್ವಾಭರಣಸಂಯೋಗಾತ್ತಾಡನಾದ್ಘರ್ಷಣಾದಪಿ ॥ ೧೭ ॥
ಶೋಥಃಪಾಲ್ಯಾಂಭವೇತ್‌ಶ್ಯಾವೋದಾಹಪಾಕರುಜಾನ್ವಿತಃ ॥
ರಕ್ತೋವಾರಕ್ತಪಿತ್ತಾಭ್ಯಾಮುತ್ಪಾತಸ್ಸಗದೋಮತಃ ॥ ೧೮ ॥

ಕಿವಿಗೆ ಭಾರವಾದ ಆಭರಣವನ್ನಿಟ್ಟುಕೊಳ್ಳೋಣ, ಕಿವಿಯ ಮೇಲೆ ಹೊಡೆಯೋಣ, ಕಿವಿ ಹಿಂಡೋಣ, ಕಿವಿಯನ್ನು ಉಜ್ಜಿಕೊಳ್ಳೋಣ, ಈ ಕಾರಣಗಳಿಂದ ಕಿವಿಯು ಊದಿಕೊಳ್ಳುವುದು, ಬೂದುಬಣ್ಣವಾಗಿರುವುದು, ಉರಿ ಮತ್ತು ಬಕ್ಕೆಗಳು ನೋವು ಇವುಗಳಿರುವುದು, ಹೀಗಿರುವ ರೋಗಕ್ಕೆ ಉತ್ಪಾತವೆಂಬದಾಗಿ ಹೆಸರು, ಇದು ಕೇವಲ ರಕ್ತಪ್ರಕೋಪದಿಂದಲಾಗಲಿ ಅಥವಾ ರಕ್ತ ಮತ್ತು ಪಿತ್ತಗಳ ಪ್ರಕೋಪದಿಂದಲಾಗಲಿ ಉತ್ಪನ್ನವಾಗುತ್ತದೆ.

ಕರ್ಣಂಬಲಾದ್ವರ್ಧಯತಃಪಾಲ್ಯಾಂವಾಯುಃಪ್ರಕುಪ್ಯತಿ ॥
ಕಫಂಸಂಗೃಹ್ಯಕುರುತೇಶೋಥಂಸ್ತಬ್ಧಮವೇದನಂ ॥ ೧೯ ॥

ಬಲಾತ್ಕಾರದಿಂದ ಕಿವಿಯನ್ನಾಗಲಿ ಕಿವಿಯ ರಂಧ್ರಗಳನ್ನಾಗಲಿ ದೊಡ್ಡದು ಮಾಡುವ ಪ್ರಯತ್ನದಿಂದ ಕರ್ಣಪಾಳಿ ಎಂದರೆ ಹೊರಕ್ಕೆ ಕಾಣುವ ಕಿವಿಯ ಭಾಗದಲ್ಲಿರುವ ವಾಯುವು ಪ್ರಕೋಪವನ್ನು ಹೊಂದಿ ಆ ಸ್ಥಾನದಲ್ಲಿರುವ ಕಫವನ್ನು ತನ್ನ ಜೊತೆಗೆ ಸೇರಿಸಿಕೊಂಡು ಶೋಭೆಯನ್ನುಂಟುಮಾಡುತ್ತದೆ, ಇದಕ್ಕೆ ಸ್ತಬ್ಧವೆಂಬದಾಗಿ ಹೆಸರು, ಇದರಲ್ಲಿ ವೇದನೆ ಏನೂ ಇರುವುದಿಲ್ಲ.

ಉನ್ಮಂಥಕಸ್ಸಕಂಡೂಕೋವಿಕಾರಃಕಫವಾತಜಃ ॥
ಸಂವರ್ಧ್ಯಮಾನೇದುರ್ವಿದ್ಧೇಕಂಡೂದಾಹರುಜಾನ್ವಿತಃ ॥ ೨೦ ॥
ಶೋಥೋಭವತಿಪಾಕಶ್ಚತ್ರಿದೋಷೋದುಖ್ಖವರ್ಧನಃ ॥
ಕಫಾಸೃಕ್ಕ್ರಿಮುಯಃಕ್ಷುದ್ರಾಸರ್ಷಪಾಭಾವಿಸರ್ಪಿಣಃ ॥ ೨೧ ॥
ಕುರ್ವಂತಿಪಾಲ್ಯಾಂಪಿಡಕಾಃಕಂಡೂದಾಹರುಜಾನ್ವಿತಾಃ ॥
ಕಫಾಸೃಕ್ಕ್ರಿಮಿಸಂಭೂತಃಸವಿಸರ್ಪನ್ನಿತಸ್ತತಃ ॥ ೨೨ ॥
ಲಿಹೇತ್ಸಶಷ್ಕುಲೀಂಪಾಲೀಂಪರಿಲೇಹೀತಿಸಸ್ಮೃತಃ ॥

ಕಿವಿಯಲ್ಲಿ ಯಾವಾಗ್ಯೂ ನವೆಯುಂಟಾಗುತ್ತಿದ್ದರೆ ಅದಕ್ಕೆ ಉನ್ಮಂಥಕವೆಂಬದಾಗಿ ಹೆಸರು, ಇದು ಕಫ ಮತ್ತು ವಾತಗಳ ಪ್ರಕೋಪದಿಂದ ಉತ್ಪನ್ನವಾದದ್ದು, ಕಿವಿಯನ್ನು ಬಲಾತ್ಕಾರದಿಂದ ಹಿಗ್ಗಿಸುವುದಾಗಲಿ, ತಪ್ಪಾಗಿ ಚುಚ್ಚುವುದರಿಂದಾಗಲಿ ನವೆ ಉರಿ ವ್ಯಥೆ ಇವುಗಳಿಂದ ಯುಕ್ತವಾಗಿ ಶೋಭೆಯೂ ಪಾಕವೂ ಉಂಟಾಗುತ್ತದೆ, ಇದು ತ್ರಿದೋಷಪ್ರಕೋಪಜನ್ಯವಾದ ವ್ಯಾಧಿ, ಪದೇಪದೇ ದುಖ್ಖವನ್ನು ಹೆಚ್ಚಿಸುತ್ತಿರುತ್ತದೆ, ಕರ್ಣಪಾಲಿಯಲ್ಲಿರುವ ಕಫ, ರಕ್ತ ಇವುಗಳ ಪ್ರಕೋಪದಿಂದ ಹುಟ್ಟುವ ಕ್ರಿಮಿಗಳು ಇವುಗಳೆಲ್ಲಾ ಸೇರಿ ಕಿವಿಯಲ್ಲಿ ಸಾಸುವೆಯ ಕಾಳಿನಂತಹ ಬಕ್ಕೆಗಳನ್ನು ಕಿವಿ ತುಂಬಾ ಹುಟ್ಟಿಸುತ್ತವೆ, ನವೆ, ಬಹಳ ಉರಿ, ನೋವು ಇರುತ್ತದೆ, ಈ ಬಕ್ಕೆಗಳು ವಿಸರ್ಪವೆಂಬದಾಗಿ ಹೇಳಿಸಿಕೊಳ್ಳುವ ಚರ್ಮರೋಗದಂತೆ ಕಿವಿಯ ಒಳಗೂ ಹೊರಗೂ ವ್ಯಾಪಿಸಿಕೊಂಡು ತೊಂದರೆಪಡಿಸುತ್ತವೆ, ಇದಕ್ಕೆ ಪರಿಲೇಹಿ ಎಂಬದಾಗಿ ಹೆಸರು.

ಇಲ್ಲಿಗೆ ಕರ್ಣರೋಗನಿದಾನ ಸಂಪೂರ್ಣ.

## ನಾಸಾರೋಗನಿದಾನ.

**ಆನಹ್ಯತೇಯಸ್ಯವಿಶುಷ್ಯತೇಚಪ್ರಕ್ಲಿದ್ಯತೇಧೂಪ್ಯತಿಚಾಪಿನಾಸಾ ॥**
**ನವೇತ್ತಿಯೋಗಂಧರಸಾಂಶ್ಚಜಂತುರ್ಜುಷ್ಟಂವ್ಯವಸ್ಯೇದಿಹಪೀನ ಸೇನ ॥ ೧ ॥**
**ತಂಚಾನಿಲಶ್ಲೇಷ್ಮಭವಂವಿಕಾರಂಬ್ರೂಯಾತ್ಪ್ರತಿಶ್ಯಾಯಸಮಾನ ಲಿಂಗಂ ॥**

ಮೂಗಿನಲ್ಲಿರುವ ದ್ರವವು ವಾತಪ್ರಕೋಪದಿಂದ ಒಣಗಿಹೋಗಿ ಮೂಗೇ ಸುಕ್ಕುಕಟ್ಟಿಕೊಂಡು ಬಗ್ಗಿಹೋದಂತಾಗುವುದು, ಮೂಗೆಲ್ಲಾ ಒಣಗಿಹೋಗುವುದು, ಮೂಗಿನಲ್ಲಿ ಹೊಗೆ ಹೊರಟಂತೆ ತೋರುತ್ತಿರುವುದು. ಬಾಯಿಗೆ ರುಚಿಯಾಗಲಿ ಮೂಗಿಗೆ ವಾಸನೆಯಾಗಲಿ ತಿಳಿಯದಂತಾಗಿ ಹೋಗುವುದು, ಇದಕ್ಕೆ ಪೀನಸವೆಂದು ಹೆಸರು, ಈ ವಿಕಾರವು ವಾತ ಮತ್ತು ಶ್ಲೇಷ್ಮಗಳ ಪ್ರಕೋಪದಿಂದ ಉತ್ಪನ್ನವಾಗುತ್ತದೆ, ಇದರ ಲಕ್ಷಣಗಳೆಲ್ಲವು ಪ್ರತಿಶ್ಯಾಯವೆಂಬ ಉರಿನೆಗಡಿಯ ಲಕ್ಷಣಗಳೇ ಆಗಿರುತ್ತವೆ.

**ದೋಷೈರ್ವಿದಗ್ಧೈರ್ಗಲತಾಲುಮೂಲೇಸಂಮೂರ್ಛಿತೋಯಸ್ಯಸಮೀರಣಸ್ತು ॥ ೨ ॥**
**ನಿರೇತಿಪೂತಿರ್ಮುಖನಾಸಿಕಾಭ್ಯಾಂತಂಪೂತಿನಸ್ಯಂಪ್ರವದಂತಿ ರೋಗಂ ॥**

ಪಿತ್ತ, ರಕ್ತ, ಕಫಗಳೆಂಬ ದೋಷಗಳು ಪ್ರಕೋಪವನ್ನು ಹೊಂದಿ ಗಂಟಲು ಮತ್ತು ದವಡೆಯಮೂಲ ಈ ಪ್ರದೇಶಗಳಲ್ಲಿ ವಿದಗ್ಧಾವಸ್ಥೆಯನ್ನು ಹೊಂದಿ ವಾಯುವಿನೊಡನೆ ಕೂಡಿಕೊಂಡು ಮುಖಮಾರ್ಗ ಮತ್ತು ಮೂಗುಗಳಿಂದ ದುರ್ಗಂಧಯುಕ್ತವಾಗಿ ಹೊರಡಲುಪಕ್ರಮವಾದರೆ ಅದಕ್ಕೆ ಪೂತಿನಸ್ಯವೆಂಬ ರೋಗವೆಂದು ಹೆಸರು.

**ಘ್ರಾಣಾಶ್ರಿತಂಪಿತ್ತಮರೂಂಷಿಕುರ್ಯಾದ್ಯಸ್ಮಿನ್ ವಿಕಾರೇಬಲವಾಂಶ್ಚಪಾಕಃ ॥ ೩ ॥**
**ತಂನಾಸಿಕಾಪಾಕಮಿತಿವ್ಯವಸ್ಯೇದ್ವಿಕ್ಲೇದಕೋಥಾವಥವಾಪಿ ಯತ್ರ ॥**

ಘ್ರಾಣಸ್ಥಾನಗತವಾದ ಪಿತ್ತವು ಪ್ರಕೋಪವನ್ನು ಹೊಂದಿ ಮೂಗಿನಲ್ಲಿ ಗಾಯಗಳನ್ನುಂಟುಮಾಡುವುದು, ಮೂಗೆಲ್ಲಾ ಹಣ್ಣಾದಂತಾಗಿ ಕೊಳೆಸಿಹೋಗುವುದು, ಒಂದು ಬಗೆಯ ರಸಿಕೆಯು ಮೂಗಿನಲ್ಲಿ ಬರುವುದು, ದುರ್ವಾಸನೆ ಹುಟ್ಟುವುದು, ಈ ಅವಲಕ್ಷಣಗಳೆಲ್ಲಾ ಆದರೆ ಇದನ್ನು ನಾಸಿಕಾಪಾಕವೆಂದು ವೈದ್ಯರು ಕರೆಯುತ್ತಾರೆ.

**ದೋಷೈರ್ವಿದಗ್ಧೈರಥವಾಪಿಜಂತೋರ್ಲಲಾಟದೇಶೇಭಿಹತಸ್ಯ ತೈಸ್ತೈಃ ॥ ೪ ॥**
**ನಾಸಾಸ್ರವೇತ್ಪೂಯಮಸೃಗ್ವಿಮಿಶ್ರಂತಂಪೂಯರಕ್ತಂಪ್ರವದಂತಿ ರೋಗಂ ॥**

ವಾತಾದಿದೋಷಗಳು ನಾಸಿಕಾಸ್ಥಾನದಲ್ಲಿ ಪ್ರಕೋಪವನ್ನು ಹೊಂದಿ ಕ್ರಮವಾಗಿ ವಿದಗ್ಧಾವಸ್ಥೆಗೆ ಬರೋಣ, ಹಣೆಗೆ ಯಾವುದಾದರೂ ಬಲವಾದ ಆಕಸ್ಮಿಕವಾದ ಪೆಟ್ಟುಬೀಳೋಣ, ಇಂತಹ ಕಾರಣಗಳಿಂದ ಮೂಗಿನಲ್ಲಿ ಕೀವು ಮತ್ತು ರಕ್ತ ಸೋರುವುದಕ್ಕೆ ಆರಂಭವಾದಲ್ಲಿ ಈ ರೋಗಕ್ಕೆ ಪೂಯರಕ್ತವೆಂದು ಹೆಸರು.

**ಘ್ರಾಣಾಶ್ರಿತೇಮರ್ಮಣಿಸಂಪ್ರದುಷ್ಟೋಯಸ್ಯಾನಿಲೋನಾಸಿಕಯಾನಿರೇತಿ ॥ ೫ ॥**
**ಕಫಾನುಜಾತೋಬಹುಶೋತಿಶಬ್ದಸ್ತಂರೋಗಮಾಹುಃಕ್ಷವಥುಂ ವಿಧಿಜ್ಞಾಃ ॥**

ಮೂಗಿನಲ್ಲಿ ಕೆಲವು ಮರ್ಮಸ್ಥಾನಗಳಿವೆ, ಅಂತಹ ಮರ್ಮಸ್ಥಾನಗತವಾದ ವಾಯುವು ಪ್ರಕೋಪವನ್ನು ಹೊಂದಿ ಕಫದೊಡನೆ ಕೂಡಿಕೊಂಡು ಬಹಳ ಶಬ್ದ ಮಾಡುತ್ತ ಮೂಗಿನಿಂದ ಆಗಾಗ್ಯೆ ಹೊರಬೀಳುತ್ತಿದ್ದರೆ ಅದಕ್ಕೆ ಕ್ಷವಥು ಎಂಬದಾಗಿ ಹೆಸರು. ಶೀನುಬರುವ ರೋಗ.

**ತೀಕ್ಷ್ಣೋಪಯೋಗಾದಭಿಜಿಘ್ರತೋವಾಭಾವಾನ್ ಕಟೂನರ್ಕನಿರೀಕ್ಷಣಾದ್ವಾ ॥ ೬ ॥**
**ಸೂತ್ರಾದಿಭಿರ್ವಾತರುಣಾಸ್ಥಿಮರ್ಮಣ್ಯುದ್ಘಾಟಿತೇನ್ಯಃಕ್ಷವಥುರ್ನಿರೇತಿ ॥**

ಖಾರವಾದ ಪದಾರ್ಥಗಳನ್ನು ಉಪಯೋಗಿಸುವುದು, ಮೂಸಿನೋಡುವುದು, ಸೂರ್ಯನ ಕಡೆಗೆ ತಿರುಗಿಕೊಂಡು ನೋಡುತ್ತಿರುವುದು, ದಾರವನ್ನು ಮೂಗಿನೊಳಕ್ಕೆ ಹಾಕಿಕೊಳ್ಳುವುದು, ಈ ಕಾರಣಗಳಿಂದ ಮೂಗಿನಲ್ಲಿರುವ ತರುಣಾಸ್ಥಿಗಳು ಮರ್ಮಸ್ಥಾನಗಳು ಇವುಗಳಿಗೆ ಚಾಲನವಾದರೆ ಆಗ್ಯೆ ಆಗಂತುಕವಾಗಿ ಶೀನುಬರುತ್ತದೆ

**ಪ್ರಭ್ರಶ್ಯತೇನಾಸಿಕಯಾತುಯಸ್ಯಸಾಂದ್ರೋವಿದಗ್ಧೋಲವಣಃ ಕಫಸ್ತು ॥ ೭ ॥**
**ಪ್ರಾಕ್ಸಂಚಿತೋಮೂರ್ಧನಿಸೂರ್ಯತಪ್ತಸ್ತಂಭ್ರಂಶಥುಂರೋಗ ಮುದಾಹರಂತಿ ॥**

ಶಿರಸ್ಸಿನಲ್ಲಿ ಕೂಡಿರುವ ಕಫವು ಸೂರ್ಯನ ತಾಪದಿಂದ ವಿದಗ್ಧಾವಸ್ಥೆ ಹೊಂದಿ ನೀರಾಗಿ ಮೂಗಿನಿಂದ ದಪ್ಪವಾಗಿ ಲವಣರಸದೊಡನೆ ಸೋರುತ್ತಿರುವುದು, ಇದಕ್ಕೆ ಭ್ರಂಶಥು ಎಂಬದಾಗಿ ಹೆಸರು.

ಘ್ರಾಣೇಭೃಶಂದಾಹಸಮನ್ವಿತೇತುವಿನಿಸ್ಸರೇದ್ಧೂಮಇವೇಹ ವಾಯುಃ ॥ ೮ ॥
ನಾಸಾಪ್ರದೀಪ್ತೇವಚಯಸ್ಯಜಂತೋರ್ವ್ಯಾಧಿಂತುತಂದೀಪ್ತ ಮುದಾಹರಂತಿ ॥

ಮೂಗು ಬಹಳವಾಗಿ ಉರಿಯುತ್ತಿರುವುದು, ಅದರಿಂದ ಹೊರಡುವ ಉಸಿರು ಹೊಗೆಯಂತೆ ಹೊರಡುತ್ತಲಿರುವುದು, ಮೂಗಿನೊಳಗೆ ಬೆಂಕಿಯಿಂದ ಸುಟ್ಟಂತೆ ತೋರುತ್ತಿರುವುದು, ಈ ವ್ಯಾಧಿಗೆ ದೀಪ್ತವೆಂಬದಾಗಿ ಹೆಸರು.

ಉಚ್ಛ್ವಾಸಮಾರ್ಗಂತುಕಫಸ್ಸವಾತೋರುಂಧ್ಯಾತ್ಪ್ರತೀನಾಹ ಮುದಾಹರೇತ್ತಂ ॥ ೯ ॥
ಘ್ರಾಣಾದ್ಘನಃಪೀತಸಿತಸ್ತನುರ್ವಾದೋಷಃಸ್ರವೇತ್ ಸ್ರಾವ ಮುದಾಹರೇತ್ತಂ ॥

ನಾಸಿಕಾಗತವಾದ ವಾಯುವು ಪ್ರಕೋಪವನ್ನು ಹೊಂದಿ ಕಫದೊಡನೆ ಕೂಡಿ ಉಸಿರನ್ನು ಮೇಲಕ್ಕೆ ಎಳೆದುಕೊಳ್ಳದಂತೆ ಮಾಡಿದರೆ ಅದಕ್ಕೆ ಪ್ರತಿನಾಹ ವೆಂಬದಾಗಿ ಹೆಸರು, ಮೂಗಿನಿಂದ ಗಟ್ಟಿಯಾಗಿ ದೋಷಯುಕ್ತವಾದ ದ್ರವವು ಹಳದಿ ಮತ್ತು ಬಿಳಿಯ ಬಣ್ಣದೊಡನೆ ಸ್ರವಿಸುತ್ತಿದ್ದರೆ ಅದಕ್ಕೆ ಸ್ರಾವವೆಂದು ಹೆಸರು.

ಘ್ರಾಣಾಶ್ರಿತೇಸ್ರೋತಸಿಮಾರುತೇನಗಾಢಂಪ್ರತಪ್ತೇಪರಿಶೋಷಿ ತೇಚ ॥ ೧೦ ॥
ಕೃಚ್ಛ್ರಾತ್ ಶ್ವಸೇದೂರ್ಧ್ವಮಧಶ್ಚಜಂತುರ್ಯಸ್ಮಿನ್ ಸನಾಸಾ ಪರಿಶೋಷಉಕ್ತಃ ॥

ಘ್ರಾಣಸ್ಥಾನಗತಗಳಾದ ನಾಡಿಗಳು ವಾಯುವಿನಿಂದ ಪಿತ್ತದೊಡನೆ ಕೂಡಿ ಬಿಸಿಮಾಡಲ್ಪಟ್ಟರೂ ದ್ರವವಾರಿಹೋಗುವಂತೆ ಮಾಡಲ್ಪಟ್ಟರೂ ಉಸಿರನ್ನೆಳೆಯು ವುದು ಮತ್ತು ಬಿಡುವುದು ಬಹಳ ಕಷ್ಟವಾಗುತ್ತದೆ, ಇದಕ್ಕೆ ನಾಸಾಪರಿಶೋಷ ವೆಂಬದಾಗಿ ಹೆಸರು.

ಶಿರೋಗುರುತ್ವಮರುಚಿರ್ನಾಸಾಸ್ರಾವಸ್ತನುಃಖರಃ ॥ ೧೧ ॥
ಕ್ಷಾಮಃಷ್ಠೀವತ್ಯಥಾಭೀಕ್ಷ್ಣಮಾಮಪೀನಸಲಕ್ಷಣಂ ॥
ಆಮಲಿಂಗಾನ್ವಿತಶ್ಲೇಷ್ಮಾಘನಃಖೇಷುನಿಮಜ್ಜತಿ ॥ ೧೨ ॥
ಸ್ವರವರ್ಣವಿಶುದ್ಧಿಶ್ಚಪರಿಪಕ್ವಸ್ಯಲಕ್ಷಣಂ ॥

ತಲೆಭಾರ, ಅರುಚಿ, ಮೂಗಿನಲ್ಲಿ ಸೋರುವುದು ಸಾವಕಾಶವಾಗಿರುವುದು, ಮತ್ತು ಗಟ್ಟಿಯಾಗಿಯೂ ಇರುವುದು, ರೋಗಿಯು ದುರ್ಬಲನಾಗಿ ಪದೇಪದೇ ಉಗುಳುತ್ತಿರುವುದು, ಇವು ಪೀನಸರೋಗದ ಆಮಾವಸ್ಥೆಯ ಲಕ್ಷಣಗಳು.

ಅಪಕ್ವಪೀನಸರೋಗದ ಲಕ್ಷಣಗಳೆಲ್ಲವೂ ಇರುವುದು, ಶ್ಲೇಷ್ಮವು ಗಟ್ಟಿಯಾಗುತ್ತ ಕ್ರಮೇಣ ಕಾಣದಂತಾಗಿ ಹೋಗುವುದು, ಕಂಠಸ್ವರವು ಶುದ್ಧವಾಗುವುದು, ರೋಗಿಯಲ್ಲಿ ಅಲಸ್ಯಾದಿ ಸುಖಲಕ್ಷಣಗಳು ಸ್ಪಷ್ಟವಾಗುತ್ತ ಬರುವುದು, ಇವು ಪರಿಪಕ್ವಪೀನಸರೋಗದ ಲಕ್ಷಣಗಳು.

**ಸಂಧಾರಣಾಜೀರ್ಣರಜೋತಿಭಾಷ್ಯಕ್ರೋಧರ್ತುವೈಷಮ್ಯ**
**ಶಿರೋಭಿತಾಪೈಃ ॥ ೧೩ ॥**
**ಪ್ರಜಾಗರಾತಿಸ್ವಪನಾಂಬುಶೀತೈರವಶ್ಯಯಾಮೈಥುನಬಾಷ್ಪ**
**ಧೂಮೈಃ ॥**
**ಸಂಸ್ತ್ಯಾನದೋಷೇಶಿರಸಿಪ್ರವೃದ್ಧೋವಾಯುಃಪ್ರತಿಶ್ಯಾಯ**
**ಮುದೀರಯೇತ್ತು ॥ ೧೪ ॥**
**ಚಯಂಗತಾಮೂರ್ಧನಿಮಾರುತಾದಯಃಪೃಥಕ್ ಸಮಸ್ತಾಶ್ಚತ**
**ಥೈವಶೋಣಿತಂ ॥**
**ಪ್ರಕುಪ್ಯಮಾಣಾವಿಧೈಃಪ್ರಕೋಪಣೈಸ್ತತಃಪ್ರತಿಶ್ಯಾಯಕರಾ**
**ಭವಂತಿಹಿ ॥ ೧೫ ॥**

ಪ್ರತಿಶ್ಯಾಯವೆಂದರೆ ಸಾಮಾನ್ಯವಾಗಿ ನೆಗಡಿ ಎಂದು ಕರೆಯುವ ರೋಗಕ್ಕೆ ಹೆಸರು, ಇಂತಹ ನೆಗಡಿಯು ಹುಟ್ಟತಕ್ಕ ಕಾರಣಗಳನ್ನು ಹೇಳುತ್ತಾನೆ---ಮಲ ಮೂತ್ರಗಳ ವೇಗವನ್ನು ತಡೆಯುವುದು. ಅಜೀರ್ಣವಾಗುವುದು, ಧೂಳಿನಲ್ಲಿ ಹೆಚ್ಚಿಗೆ ಕೆಲಸಮಾಡುವುದು, ಅತಿಯಾಗಿ ಮತ್ತು ಗಟ್ಟಿಯಾಗಿ ಮಾತನಾಡುವುದು, ಸಿಟ್ಟು, ಋತುಗಳ ಬದಲಾವಣೆ, ತಲೆಕಾಯುವುದು, ನಿದ್ರೆಗೆಡುವುದು, ಅಂತೆಯೇ ಅತಿಯಾಗಿ ನಿದ್ರೆಮಾಡುವುದು, ತಣ್ಣೀರನ್ನು ಹೆಚ್ಚಿಗೆ ಉಪಯೋಗಿಸೋಣ, ಶೀತದಗಾಳಿ, ಮಂಜು, ಇವುಗಳಲ್ಲಿ ತಲೆಯನ್ನು ಬಿಟ್ಟುಕೊಂಡು ಓಡಾಡುವುದು, ಅತಿಯಾಗಿ ಸ್ತ್ರೀಸಂಗ ಮಾಡೋಣ, ನೀರಿನ ಆವಿಯಲ್ಲಿ ಮತ್ತು ಹೊಗೆಯಲ್ಲಿ ಸಹ ಅತಿಯಾಗಿ ಓಡಾಡುವುದು, ಈ ಕಾರಣಗಳಿಂದ ತಲೆಯಲ್ಲಿರತಕ್ಕ ದೋಷ ಗಳನ್ನು ಪ್ರಕೋಪಗೊಳಿಸಿ ವಾಯುವು ಪ್ರತಿಶ್ಯಾಯರೋಗವನ್ನು ಹುಟ್ಟಿಸುತ್ತದೆ, ಈ ಪ್ರತಿಶ್ಯಾಯರೋಗವು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮ ಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ರಕ್ತಪ್ರಕೋಪಜನ್ಯ ಎಂಬದಾಗಿ ಸ್ವಸ್ವಪ್ರಕೋಪಕಾರಣಗಳಿಂದ ಪ್ರಕುಪಿತಗಳಾದ ದೋಷಗಳು ಮೇಲೆ ಹೇಳಿದ ಐದು ವಿಧವಾದ ಪ್ರತಿಶ್ಯಾಯರೋಗಕ್ಕೂ ಕಾರಣಭೂತಗಳಾಗುತ್ತವೆ.

**ಕ್ಷವಪ್ರವೃತ್ತಿಃಶಿರಸೋತಿಪೂರ್ಣತಾಸ್ತಂಭೋಗಮರ್ದಃಪರಿ**
**ಹೃಷ್ಟರೋಮತಾ ॥**
**ಉಪದ್ರವಾಶ್ಚಾಪ್ಯಪರೇಪೃಥಗ್ವಿಧಾನೃಣಾಂಪ್ರತಿಶ್ಯಾಯಪುರಸ್ಸ**
**ರಾಸ್ಸ್ಮೃತಾಃ ॥ ೧೬ ॥**

ಪದೇಪದೇ ಶೀನು ಬರುತ್ತಿರುವುದು, ತಲೆಯ ಮೇಲೆ ಕೊಡಹೊತ್ತಂತೆ ಭಾರವಾಗಿರುವುದು, ಮನಸ್ಸಿಗೆ ಏನೂ ತೋಚದಂತಿರುವುದು, ಮೈ ಕೈ ಕಾಲು ಕತ್ತರಿಸುವುದು, ರೋಮಾಂಚನವಾಗುತ್ತಿರುವುದು, ಇಂತಹ ಇನ್ನೂ ಉಪದ್ರವಗಳು ಈ ಪ್ರತಿಶ್ಯಾಯರೋಗಕ್ಕೆ ಪೂರ್ವರೂಪಗಳಾಗಿ ಮೊದಲು ಬರುತ್ತವೆ.

ಆನದ್ಧಾ ಪಿಹಿತಾ ನಾಸಾ ತನುಸ್ರಾವಪ್ರಸೇಕಿನೀ ॥
ಗಲತಾಲ್ವೋಷ್ಠಶೋಷಶ್ಚ ನಿಸ್ತೋದಶ್ಶಂಖಯೋಸ್ತಥಾ ॥ ೧೭ ॥
ಕ್ಷವಪ್ರವೃತ್ತಿರತ್ಯರ್ಥಂ ವಕ್ತ್ರವೈರಸ್ಯಮೇವ ಚ ॥
ಭವೇತ್ ಸ್ವರೋಪಘಾತಶ್ಚ ಪ್ರತಿಶ್ಯಾಯೇನಿಲಾತ್ಮಕೇ ॥ ೧೮ ॥

ವಾತಪ್ರಕೋಪಜನ್ಯವಾದ ಪ್ರತಿಶ್ಯಾಯರೋಗದಲ್ಲಿ ಮೂಗು ಕಟ್ಟಿಹೋಗುವುದು, ಮೂಗಿನಿಂದ ಸಣ್ಣನಾಗಿ ನೀರು ಸೋರುತ್ತಲಿರುವುದು, ಬಾಯಿದವಡೆ ಒಣಗುವುದು, ತಲೆಯು ಕಿವಿಯ ಮೇಲಗಡೆ ಮುಂಭಾಗದಲ್ಲಿ ನೋಯುತ್ತಿರುವುದು, ಬಹಳವಾಗಿ ಶೀನುಬರುತ್ತಿರುವುದು, ಬಾಯಿರುಚಿ ಕೆಟ್ಟುಹೋಗಿರುವುದು, ಧ್ವನಿ ಕೆಟ್ಟುಹೋಗಿರುವುದು, ಇವು ವಾತಪ್ರಕೋಪಜನ್ಯವಾದ ಪ್ರತಿಶ್ಯಾಯದ ಲಕ್ಷಣಗಳು.

ಉಷ್ಣಸ್ಸಪೀತಕಸ್ರಾವೋ ಘ್ರಾಣಾತ್ ಸ್ರವತಿ ಪೈತ್ತಿಕೇ ॥
ಕೃಶೋತಿಪಾಂಡುಸ್ಸಂತಪ್ತೋ ಭವೇದುಷ್ಣಾಭಿಪೀಡಿತಃ ॥ ೧೯ ॥
ಸಧೂಮಮಗ್ನಿಂ ಸಹಸಾ ವಮತೀವ ಸಮಾನವಃ ॥

ಪಿತ್ತಪ್ರಕೋಪಜನ್ಯವಾದ ಪ್ರತಿಶ್ಯಾಯರೋಗದಲ್ಲಿ ಬಿಸಿಯಾದ ಮತ್ತು ಹಳದಿಯ ಬಣ್ಣದ ದ್ರವವು ಮೂಗಿನಿಂದ ಯಾವಾಗಲೂ ಸುರಿಯುತ್ತಿರುವುದು, ರೋಗಿಯು ಕೃಶನಾಗಿ ಬೆಳ್ಳಗಾಗುತ್ತ ಬರುವುದು, ಅತ್ಯುಷ್ಣವಾದಂತೆ ತೋರುತ್ತಿರುವುದು, ಹೊಗೆ ಕೂಡಿದ ಕೆಂಡವನ್ನೇ ಬಾಯಿನಿಂದ ಉಗುಳುತ್ತಿರುವಂತೆ ಅಷ್ಟೊಂದು ಉಷ್ಣತೋರುವುದು, ಇವು ಲಕ್ಷಣಗಳು.

ಘ್ರಾಣಾತ್ ಕಫಃ ಕಫಕೃತೇ ಶೀತಃ ಪಾಂಡುಸ್ಸ್ರವೇದ್ಬಹುಃ ॥ ೨೦ ॥
ಶುಕ್ಲಾವಭಾಸಶ್ಶುಕ್ಲಾಕ್ಷೋ ಭವೇದ್ಗುರುಶಿರಾನರಃ ॥
ಕಂಠತಾಲ್ವೋಷ್ಠಶಿರಸಾಂ ಕಂಡೂಭಿರಭಿಪೀಡಿತಃ ॥ ೨೧ ॥

ಕಫಪ್ರಕೋಪಜನ್ಯವಾದ ಪ್ರತಿಶ್ಯಾಯರೋಗದಲ್ಲಿ ಮೂಗಿನಿಂದ ಬೆಳ್ಳಗೆ ಬಹಳವಾಗಿ ಕಫವೇ ಸೋರುತ್ತಿರುತ್ತದೆ, ತಲೆ ಭಾರವಿರುತ್ತದೆ, ಕಣ್ಣು ಕೈಕಾಲುಗಳೆಲ್ಲಾ ಬೆಳ್ಳಗಾಗುತ್ತ ಬರುತ್ತದೆ, ಗಂಟಲು, ದವಡೆ, ತುಟಿಗಳು, ತಲೆ, ಇದರಲ್ಲೆಲ್ಲಾ ನವೆಯೂ ಇರುತ್ತದೆ.

**ಭೂತ್ವಾಭೂತ್ವಾಪ್ರತಿಶ್ಯಾಯೋಯಸ್ಯಾಕಸ್ಮಾನ್ನಿವರ್ತತೇ ॥**
**ಸಂಪಕ್ವೋವಾಪ್ಯಪಕ್ವೋವಾಸಸರ್ವಪ್ರಭವಸ್ಮೃತಃ ॥ ೨೨ ॥**

ಯಾರಿಗೆ ಪದೇಪದೇ ನೆಗಡಿಯಾಗುವುದು ಮತ್ತೆ ಗುಣವಾಗುವುದು ಮತ್ತೆ ನೆಗಡಿಯಾಗುವುದು ಮತ್ತೆ ಗುಣವಾಗುವುದು ಈ ರೀತಿ ಇರುತ್ತದೋ, ಪಕ್ವಾಪಕ್ವ ವ್ಯವಸ್ಥೆಯಿಲ್ಲದೆ ಈ ರೀತಿಯಾಗುತ್ತಿರುವಲ್ಲಿ ತ್ರಿದೋಷಪ್ರಕೋಪಜನ್ಯವೆಂದು ತಿಳಿಯಬೇಕು.

**ಪ್ರಕ್ಲಿದ್ಯತೇಪುನರ್ನಾಸಾಪುನಶ್ಚಪರಿಶುಷ್ಯತಿ ॥**
**ಪುನರಾನಹ್ಯತೇವಾಪಿಪುನರ್ವಿಪ್ರಿಯತೇತಥಾ ॥ ೨೩ ॥**
**ನಿಶ್ವಾಸೋವಾತಿದುರ್ಗಂಧೋನರೋಗಂಧಾನ್ನವೇತ್ತಿಚ ॥**
**ಏವಂದುಷ್ಟಪ್ರತಿಶ್ಯಾಯಂಜಾನೀಯಾತ್ಕೃಛ್ರಸಾಧನಂ ॥ ೨೪ ॥**

ಮೂಗಿನಲ್ಲಿ ನೀರು ಸುರಿಯುತ್ತಿರುವುದು, ಕೊಂಚ ಹೊತ್ತು ಮೂಗು ಒಣಗಿರುವುದು, ಕೆಲವು ಸಾರಿ ಒಣಗಿ ಬಿಗುವಾಗುವುದು, ಮತ್ತೆ ಸಡಿಲವಾಗುವುದು, ಮೂಸಿನೋಡಿದರೆ ವಾಸನೆ ತಿಳಿಯದೆ ಹೋಗುವುದು, ಈ ಲಕ್ಷಣಗಳಿದ್ದಲ್ಲಿ ಇದಕ್ಕೆ ದುಷ್ಟಪ್ರತಿಶ್ಯಾಯವೆಂದು ಹೆಸರು ಇದು ಗುಣವಾಗುವುದು ಅಸಾಧ್ಯ.

**ರಕ್ತಜೇತುಪ್ರತಿಶ್ಯಾಯೇರಕ್ತಸ್ರಾವಃಪ್ರವರ್ತತೇ ॥**
**ತಾಮ್ರಾಕ್ಷಶ್ಚಭವೇಜ್ಜಂತುರುರೋಘಾತಪ್ರಪೀಡಿತಃ ॥ ೨೫ ॥**
**ದುರ್ಗಂಧೋಚ್ಛ್ವಾಸವದನೋಗಂಧಾನಪಿನವೇತ್ತಿಸಃ ॥**

ರಕ್ತಪ್ರಕೋಪಜನ್ಯವಾದ ಪ್ರತಿಶ್ಯಾಯರೋಗದಲ್ಲಿ ಮೂಗಿನಿಂದ ನೆತ್ತರ ಹರಿಯುತ್ತಿರುತ್ತದೆ, ಕಣ್ಣು ಕೆಂಪಾಗುತ್ತದೆ, ಎದೆಯಲ್ಲಿ ನೋವು ತೊಂದರೆಗಳಿರುತ್ತವೆ, ರೋಗಿಯ ಉಸಿರು, ಬಾಯಿ, ಮೊದಲಾದವುಗಳೆಲ್ಲವೂ ದುರ್ವಾಸನೆಯುಕ್ತವಾಗಿರುತ್ತವೆ, ಮೂಗಿಗೆ ಯಾವ ವಾಸನೆಯೂ ಗೊತ್ತಾಗುವುದಿಲ್ಲ.

**ಸರ್ವಏವಪ್ರತಿಶ್ಯಾಯಾಃನರಸ್ಯಾಪ್ರತಿಕಾರಿಣಃ ॥ ೨೬ ॥**
**ದುಷ್ಟತಾಂಯಾಂತಿಕಾಲೇನತದಾಸಾಧ್ಯಾಭವಂತಿಹಿ ॥**
**ಮೂರ್ಛಂತಿಚಾತ್ರಕ್ರಿಮಯಃಶ್ವೇತಾಸ್ನಿಗ್ಧಾಸ್ತಥಾಣವಃ ॥ ೨೭ ॥**
**ಕ್ರಿಮಿತೋಯಶ್ಶಿರೋರೋಗಸ್ತುಲ್ಯಂತೇನಾಸ್ಯಲಕ್ಷಣಂ ॥**

**ಯಾವ ಕಾರಣದಿಂದ ಹುಟ್ಟಿದ ಪ್ರತಿಶ್ಯಾಯರೋಗವೇ ಆಗಿರಲಿ ಸರಿಯಾದ ಚಿಕಿತ್ಸೆಯನ್ನು ಸಕಾಲದಲ್ಲಿ ನಡೆಯಿಸದಿದ್ದಲ್ಲಿ ದುಷ್ಟಪ್ರತಿಶ್ಯಾಯವಾಗಿ ಪರಿಣಮಿಸಿ**

ಕಾಲಕ್ರಮೇಣ ಅಸಾಧ್ಯ ಸ್ಥಿತಿಗೆ ಬರುತ್ತವೆ, ಆಗ್ಯೆ ಮೂಗಿನಲ್ಲಿ ಬಿಳಿಯ ಜಣ್ಣದ ಸಣ್ಣ ಕ್ರಿಮಿಗಳು ಹುಟ್ಟಿಕೊಳ್ಳುತ್ತವೆ, ಅಲ್ಲಿಂದ ಮುಂದಿನ ಲಕ್ಷಣಗಳೆಲ್ಲವೂ ಕ್ರಿಮಿಜನ್ಯಶಿರೋರೋಗದ ಲಕ್ಷಣಗಳೇ ಆಗಿರುತ್ತವೆ.

ಬಾಧಿರ್ಯಮಾಂಧ್ಯಮಘ್ರಾತ್ವಂಘೋರಾಂಶ್ಚನಯನಾಮಯಾನ್ ೨೮
ಶೋಥಾಗ್ನಿಸಾದಕಾಸಾಂಶ್ಚವೃದ್ಧಾಃಕುರ್ವಂತಿಪೀನಸಾಃ ॥
ಅರ್ಬುದಂಸಪ್ತಧಾಶೋಥಾಶ್ಚತ್ವಾರೋಽರ್ಶಶ್ಚತುರ್ವಿಧಂ ॥ ೨೯ ॥
ಚತುರ್ವಿಧಂರಕ್ತಪಿತ್ತಮುಕ್ತಂಘ್ರಾಣೇಪಿತದ್ವಿದುಃ ॥

ಪೀನಸಿ ಮೊದಲಾದ ನಾಸಿಕಾರೋಗಗಳನ್ನು ಸರಿಯಾದ ಕಾಲದಲ್ಲಿ ಸರಿಯಾದ ರೀತಿಯಿಂದ ಚಿಕಿತ್ಸಿಸಲು ಉಪೇಕ್ಷೆ ಮಾಡಿದಲ್ಲಿ ಕಿವಿ ಕಿವುಡಾಗುವುದು, ಕಣ್ಣು ಕುರುಡಾಗುವುದು, ಮೂಸಿ ನೋಡಿದರೆ ಮೂಗಿಗೆ ವಾಸನೆಯೇ ತಿಳಿಯದಂತೆ ಮೂಗು ಮಂದವಾಗಿ ಹೋಗುವುದು, ಇತರ ವಿಧಗಳಾದ ನೇತ್ರರೋಗಗಳು, ಶೋಥೆ, ಅಗ್ನಿಮಾಂದ್ಯ, ಕೆಮ್ಮಲು, ಇವುಗಳನ್ನೆಲ್ಲಾ ಉಂಟುಮಾಡುತ್ತವೆ.

ನಾಸಿಕಾರೋಗಗಳಲ್ಲಿ ಹಿಂದೆ ಹೇಳಿರುವುವುಗಳಲ್ಲದೆ, ನಾಸಾರ್ಬುದವೆಂಬ ರೋಗವು ಏಳು ವಿಧವಾಗಿಯೂ, ನಾಸಾಶೋಥವೆಂಬುವುದು ನಾಲ್ಕು ವಿಧವಾಗಿಯೂ, ನಾಸಾರ್ಶಸ್ಸೆಂಬುವುದು ನಾಲ್ಕು ವಿಧವಾಗಿಯೂ, ನಾಸಾಗತವಾದ ರಕ್ತಪಿತ್ತವೆಂಬ ರೋಗವು ನಾಲ್ಕು ವಿಧವಾಗಿಯೂ ಉಂಟಾಗುತ್ತವೆ. ಇವುಗಳ ಲಕ್ಷಣಗಳು ಪ್ರತ್ಯೇಕಗಳಾದ ಆಯಾಯ ರೋಗದ ಲಕ್ಷಣಗಳಂತೆಯೇ ಇರುತ್ತದೆಂದು ತಿಳಿಯಬೇಕು.

ಇಲ್ಲಿಗೆ ನಾಸಿಕಾರೋಗನಿದಾನ.

---

## ನೇತ್ರರೋಗನಿದಾನ

ಉಷ್ಣಾಭಿತಪ್ತಸ್ಯಜಲೇಪ್ರವೇಶಾದ್ದೂರೇಕ್ಷಣಾತ್ಸ್ವಪ್ನವಿಪರ್ಯ
ಯಾಚ್ಚ ॥
ಸ್ವೇದಾದ್ರಜೋಧೂಮನಿಷೇವಣಾಚ್ಚ ಛರ್ದೇರ್ವಿಘಾತಾದ್ವಮ
ನಾತಿಯೋಗಾತ್ ॥ ೧ ॥
ದ್ರವಾತ್ತಥಾನ್ನಾನ್ನಿಶಿಸೇವಿತಾಚ್ಚ ವಿಣ್ಮೂತ್ರವಾತಕ್ರಮನಿಗ್ರ
ಹಾಚ್ಚ ॥
ಪ್ರಸಕ್ತಸಂರೋದನಕೋಪಶೋಕಾತ್ ಶಿರೋಭಿಘಾತಾದತಿ
ಮದ್ಯಪಾನಾತ್ ॥ ೨ ॥

**ತಥಾಋತೂನಾಂಚವಿಪರ್ಯಯೇಣಕ್ಲೇಶಾಭಿಘಾತಾದತಿಮೈಥು ನಾಚ್ಚ ॥**
**ಬಾಷ್ಪಗ್ರಹಾತ್ಸೂಕ್ಷ್ಮನಿರೀಕ್ಷಣಾಚ್ಚನೇತ್ರೇವಿಕಾರಾನ್ ಜನ ಯಂತಿದೋಷಾಃ ॥ ೩ ॥**

ನೇತ್ರರೋಗಗಳು ಹುಟ್ಟಲು ಕಾರಣವನ್ನು ಹೇಳುತ್ತಾನೆ—ಬಿಸಲಿನಲ್ಲಿ ಬಹಳ ಹೊತ್ತು ದಣಿದ ಕೂಡಲೆ ತಣ್ಣೀರಿನಲ್ಲಿ ಈಜಾಡುವುದು ಸ್ನಾನಮಾಡು ವುದು, ಮುಳುಗುವುದು, ಈ ಕಾರಣಗಳಿಂದಲೂ, ಬಹು ದೂರದಲ್ಲಿರತಕ್ಕ ವಸ್ತು ವನ್ನು ದೃಷ್ಟಿಸಿ ನೋಡೋಣದರಿಂದಲೂ, ನಿದ್ರೆಗೆಡೋಣದರಿಂದಲೂ, ಅತಿಯಾಗಿ ಬೆವರೋಣದರಿಂದಲೂ, ಧೂಳಿನಲ್ಲಿ ತಿರುಗಾಡೋಣದರಿಂದಲೂ, ಹೊಗೆಯಲ್ಲಿ ತಿರುಗಾಡೋಣ, ಹೊಗೆಯನ್ನು ಅತಿಯಾಗಿ ಸೇದೋಣ ಈ ಕಾರಣಗಳಿಂದಲೂ, ವಾಂತಿಯನ್ನು ತಡೆಯೋಣ, ವಮನೌಷಧಗಳನ್ನು ಅತಿಯಾಗಿ ಸೇವಿಸಿ ಅತಿ ಯಾಗಿ ವಮನಮಾಡೋಣ, ರಾತ್ರಿಯ ಭೋಜನದಲ್ಲಿ ಅತಿಯಾಗಿ ದ್ರವ ಪದಾರ್ಥಗಳನ್ನು ಸೇವಿಸೋಣ, ಮಲವಿಸರ್ಜನ, ಮೂತ್ರವಿಸರ್ಜನ, ಅಪಾನ ವಾಯು ಇವುಗಳನ್ನು ತಡೆಯೋಣ, ಬಹಳ ಹೊತ್ತು ಅಳೋಣ, ಶಿಟ್ಟು ಮಾಡೋಣ, ದುಃಖಪಡೋಣ, ಆಗಂತುಕವಾಗಿ ತಲೆಗೆ ಏನಾದರೂ ಪೆಟ್ಟು ಬಡಿಯೋಣ, ಹೆಚ್ಚಿಗೆ ಮದ್ಯಪಾನಮಾಡೋಣ, ಆಗಾಗ್ಯೆ ನಡೆಯತಕ್ಕ ಋತು ಗಳ ವ್ಯತ್ಯಾಸ ಮೊದಲಾಗಿ ಕಾಲವೈಷಮ್ಯದಿಂದ ಉಂಟಾಗುವ ಶೀತೋಷ್ಣಗಳ ಬದಲಾವಣೆಯಿಂದ, ಶಾರೀರಕವಾದ ಕ್ಲೇಶಗಳಿಂದ, ಅತಿಯಾದ ಸ್ತ್ರೀಸಂಗದಿಂದ, ಕಣ್ಣೀರನ್ನು ತಡೆಯೋಣದರಿಂದ, ಸೂಕ್ಷ್ಮಗಳಾದ ಪದಾರ್ಥಗಳನ್ನು ದೃಷ್ಟಿಸಿ ನೋಡೋಣದರಿಂದ, ನೇತ್ರಸ್ಥಾನಗತಗಳಾದ ದೋಷಗಳು ಪ್ರಕೋಪವನ್ನು ಹೊಂದಿ ನೇತ್ರರೋಗಗಳನ್ನು ಹುಟ್ಟಿಸುತ್ತವೆ.

**ವಾತಾತ್ಪಿತ್ತಾತ್ಕಫಾದ್ರಕ್ತಾದಭಿಷ್ಯಂದಶ್ಚತುರ್ವಿಧಃ ॥**
**ಪ್ರಾಯೇಣಜಾಯತೇಘೋರಸ್ಸರ್ವನೇತ್ರಾಮಯಾಕರಃ ॥ ೪ ॥**

ಅಭಿಷ್ಯಂದವೆಂದರೆ ಕಣ್ಣಿನಲ್ಲಿ ನೀರು ಸುರಿಯುವುದಕ್ಕೆ ಪ್ರಾರಂಭವಾಗು ವುದು, ಈ ರೋಗವು ವಾತಪ್ರಕೋಪ, ಪಿತ್ತಪ್ರಕೋಪ, ಕಫಪ್ರಕೋಪ, ರಕ್ತ ಪ್ರಕೋಪ ಈ ಕಾರಣಗಳಿಂದ ಹುಟ್ಟುತ್ತದೆ, ಕಣ್ಣಿನಲ್ಲಿ ಹುಟ್ಟುವ ಸಮಸ್ತ ರೋಗ ಗಳಿಗೂ ಇದೇ ಮೂಲಭೂತವಾದದ್ದು, ಭಯಂಕರವಾದದ್ದು.

**ನಿಸ್ತೋದನಸ್ತಂಭನರೋಮಹರ್ಷಸಂಘರ್ಷಪಾರುಷ್ಯಶಿರೋಭಿ ತಾಪಾಃ ॥**
**ವಿಶುಷ್ಕಭಾವಃಶಿಶಿರಾಶ್ರುತಾಚವಾತಾಭಿಪನ್ನೇನಯನೇಭವಂತಿ ॥ ೫ ॥**

ನೇತ್ರಸ್ಥಾನಗತವಾದ ವಾಯುವು ಪ್ರಕೋಪವನ್ನು ಹೊಂದಿದಲ್ಲಿ ಕಣ್ಣು ಚುಚ್ಚಿದಂತೆ ವ್ಯಥೆಯಾಗುತ್ತಿರುವುದು, ಕಣ್ಣು ಸ್ತಬ್ಧವಾಗಿರುವುದು, ಕೂದಲು ನಿಗುರಿಕೊಳ್ಳುವುದು, ಕಣ್ಣು ತಿಕ್ಕುವಂತಾಗುವುದು, ಕಣಿನಲ್ಲಿ ರೂಕ್ಷಭಾವ ಬರುವುದು ಅಂದರೆ ಜಿಡ್ಡು ಹಾರಿಹೋಗುವುದು, ಶಿರೋವ್ಯಥೆ, ಕಣ್ಣು ಒಣಗಿಕೊಂಡಿರುವುದು, ಕಣ್ಣೀರು ತಣ್ಣಗಿರುವುದು, ಈ ಲಕ್ಷಣಗಳು ಕಂಡುಬರುತ್ತಿರುವುವು.

ದಾಹಪ್ರಪಾಕೌಶಿಶಿರಾಭಿನಂದಾಧೂಮಾಯನಂಬಾಷ್ಪಸಮುಛ್ರಯಶ್ಚ ॥
ಉಷ್ಣಾಶ್ರುತಾಪೀತಕನೇತ್ರತಾಚಪಿತ್ತಾಭಿಪನ್ನೇನಯನೇಭವಂತಿ ॥ ೬ ॥

ನೇತ್ರಸ್ಥಾನಗತವಾದ ಪಿತ್ತವು ಪ್ರಕೋಪವಾಯಿತೆಂದರೆ ಕಣ್ಣು ಸದಾ ಉರಿಯುವುದು, ಕಣ್ಣಿನ ಸುತ್ತಲೂ ಬಕ್ಕೆಗಳೇಳುವುದು, ತಂಪಾದ ಉಪಚಾರಗಳು ಇಷ್ಟವಾಗಿರುವುದು, ಕಣ್ಣಿನಿಂದ ಹೊಗೆ ಹೊರಡುತ್ತಿರುವಂತೆ ತೋರುವುದು, ಯಥೇಷ್ಟ ಕಣ್ಣಿನಿಂದ ನೀರು ಸುರಿಯುವುದು, ಕಣ್ಣನೀರು ಬಿಸಿಯಾಗಿರುವುದು, ಕಣ್ಣು ಹಳದಿಯ ಬಣ್ಣಕ್ಕೆ ತಿರುಗುವುದು, ಇವು ಲಕ್ಷಣಗಳು.

ಉಷ್ಣಾಭಿನಂದಾಗುರುತಾಕ್ಷಿಶೋಥಃಕಂಡೂಪದೇಹಾವತಿಶೀತತಾಚ ॥
ಸ್ರಾವೋಮುಹುಃಪಿಚ್ಛಿಲಏವಚಾಪಿಕಫಾಭಿಪನ್ನೇನಯನೇಭವಂತಿ ॥ ೭ ॥

ನೇತ್ರಸ್ಥಾನಗತವಾದ ಕಫವು ಪ್ರಕುಪಿತವಾಯಿತೆಂದರೆ ಕಣ್ಣಿಗೆ ಉಷ್ಣೋಪಚಾರಗಳನ್ನು ಮಾಡಿಕೊಂಡರೆ ಹಿತತೋರುವುದು, ಕಣ್ಣು ಭಾರವಾದಂತೆ ತೋರುವುದು, ಕಣ್ಣು ಊದಿರುವುದು, ಕಣ್ಣನಲ್ಲಿ ನವೆ ಹೆಚ್ಚಾಗಿರುವುದು, ಮಲವು ಕಣ್ಣಿನಲ್ಲಿ ಸುತ್ತಿಕೊಂಡಿರುವುದು, ಕಣ್ಣು ಅತಿಶಯವಾಗಿ ತಣ್ಣಗಿರುವುದು, ಕಣ್ಣೀರು ಬಹಳ ಅಂಟಾಗಿ ಪದೇ ಪದೇ ಸುರಿಯುತ್ತಿರುವುದು, ಇವು ಲಕ್ಷಣಗಳು.

ತಾಮ್ರಾಶ್ರುತಾಲೋಹಿತನೇತ್ರತಾಚನಾಡ್ಯಸ್ಸಮಂತಾದತಿಲೋಹಿತಾಶ್ಚ ॥
ಪಿತ್ತಸ್ಯಲಿಂಗಾನಿಚಯಾನಿತಾನಿರಕ್ತಾಭಿಪನ್ನೇನಯನೇಭವಂತಿ ॥ ೮ ॥

ರಕ್ತದೋಷದಿಂದ ಕಣ್ಣು ಕೆಟ್ಟಿದ್ದಲ್ಲಿ ಕಣ್ಣಿನಲ್ಲಿ ಹೊರಡುವ ನೀರು ಕೆಂಪಗಿರುತ್ತದೆ, ಕಣ್ಣೂ ಕೆಂಪಾಗಿರುತ್ತದೆ, ಕಣ್ಣಿನೊಳಗಿರುವ ನರಗಳೆಲ್ಲಾ ಅತ್ಯಂತ ಕೆಂಪಾಗಿರುತ್ತವೆ, ಇನ್ನೂ ಅನೇಕವಾಗಿ ಪಿತ್ತದ ಲಕ್ಷಣಗಳೆಲ್ಲವೂ ಕಂಡುಬರುತ್ತಿರುತ್ತವೆ.

**ವೃದ್ಧೈರೇತೈರಭಿಷ್ಯಂದೈರ್ನರಾಣಾಮಕ್ರಿಯಾವತಾಂ ॥**
**ತಾವಂತಸ್ತ್ವಧಿಮಂಥಾಸ್ಯುರ್ನಯನೇತೀವ್ರವೇದನಾಃ ॥ ೯ ॥**

ಹಿಂದೆ ಹೇಳಲ್ಪಟ್ಟ ಅಭಿಷ್ಯಂದ ಅಂದರೆ ಕಣ್ಣಿನಲ್ಲಿ ನೀರು ಸುರಿಯುವ ರೋಗವನ್ನು ಸರಿಯಾಗಿ ಚಿಕಿತ್ಸಿಸದೆ ಉಪೇಕ್ಷಿಸಿದರೆ ಕಾರಣಾನುರೋಧೇನ ವಾತಾಧಿಮಂಥ, ಪಿತ್ತಾಧಿಮಂಥ, ರಕ್ತಾಧಿಮಂಥ, ಶ್ಲೇಷ್ಮಾಧಿಮಂಥಗಳೆಂದು ನಾಲ್ಕು ರೋಗಾಂತರಗಳೇ ಹುಟ್ಟುತ್ತವೆ, ಈ ಅಧಿಮಂಥವೆಂಬ ರೋಗದ ವೇದನೆಯು ಬಹಳ.

**ಉತ್ಪಾಟ್ಯತಇವಾತ್ಯರ್ಥಂನೇತ್ರಂನಿರ್ಮಥ್ಯತೇತಥಾ ॥**
**ಶಿರಸೋರ್ಧಂಚತಂವಿದ್ಯಾದಧಿಮಂಥಂಸ್ವಲಕ್ಷಣೈಃ ॥ ೧೦ ॥**

ಅಧಿಮಂಥರೋಗದ ಲಕ್ಷಣವನ್ನು ಹೇಳುತ್ತಾನೆ— ಕಣ್ಣುಗುಡ್ಡೆಯನ್ನೇ ಕಿತ್ತುಹಾಕಿದಂತಾಗುತ್ತಿರುವುದು, ತಲೆಯ ಅರ್ಧಭಾಗ ಒಳಗೆ ಕಡೆತ ಹಾಕಿದಂತೆ ವೇದನೆಯಾಗುತ್ತಿರುವುದು, ಇವಕ್ಕೆ ಅಧಿಮಂಥವೆಂದು ಹೆಸರು.

**ಹನ್ಯಾದ್ದೃಷ್ಟಿಂಶ್ಲೈಷ್ಮಿಕಸ್ಸಪ್ತರಾತ್ರಾದಧಿಮಂಥೋರಕ್ತಜಃ**
**ಸಂಚರಾತ್ರಾತ್ ॥**
**ಷಡ್ರಾತ್ರಾದ್ವಾತಿಕೋವೈನಿಹನ್ಯಾನ್ಮಿಥ್ಯಾಚಾರಾತ್ಪೈತ್ತಿಕಸ್ಸದ್ಯ**
**ಏವ ॥ ೧೧ ॥**

ಈ ಅಧಿಮಂಥವೆಂಬ ರೋಗವು ಸಂಭವಿಸಿದರೆ ಉಂಟಾಗುವ ಅನಾಹುತವನ್ನು ಹೇಳುತ್ತಾನೆ— ಶ್ಲೇಷ್ಮಪ್ರಕೋಪಜನ್ಯವಾದ ಅಧಿಮಂಥರೋಗವು ಏಳು ದಿವಸಗಳಲ್ಲಿಯೂ ರಕ್ತಪ್ರಕೋಪಜನ್ಯವಾದ ಅಧಿಮಂಥರೋಗವು ಐದು ದಿವಸಗಳಲ್ಲಿಯೂ, ವಾತಪ್ರಕೋಪಜನ್ಯವಾದ ಅಧಿಮಂಥರೋಗವು ಆರು ದಿವಸಗಳಲ್ಲಿಯೂ ದೃಷ್ಟಿಯನ್ನು ಕೆಡಿಸಿ ಹಾಳುಮಾಡುತ್ತದೆ, ಪಿತ್ತಪ್ರಕೋಪಜನ್ಯವಾದ ಅಧಿಮಂಥರೋಗವು ಸ್ವಲ್ಪ ಹೆಚ್ಚು ಕಡಮೆಯಾದರೆ ಆ ಕ್ಷಣವೇ ಕಣ್ಣನ್ನು ಕಳೆದುಬಿಡುತ್ತದೆ.

**ಉದೀರ್ಣವೇದನಂನೇತ್ರಂರಾಗಶೋಥಸಮನ್ವಿತಂ ॥**
**ಘರ್ಷನಿಸ್ತೋದಶೂಲಾಶ್ರುಯುಕ್ತಮಾಮಾನ್ವಿತಂವಿದುಃ ॥ ೧೨ ॥**

ಚಿಕಿತ್ಸಾಸೌಕರ್ಯಾರ್ಥವಾಗಿ ನೇತ್ರರೋಗಗಳ ಆಮಪಕ್ವ ಲಕ್ಷಣಗಳನ್ನು ಹೇಳುತ್ತಾನೆ—ಕಣ್ಣಿನಲ್ಲಿ ನೋವು ಬಹಳವಾಗಿರುವುದು, ಕಣ್ಣು ಊದಿ ಕೆಂಪಾಗಿರುವುದು, ಕಣ್ಣನ್ನು ತಿಕ್ಕುವಂತಾಗುವುದು, ವ್ಯಥೆ ಬಹಳವಾಗಿರುವುದು, ಒಡತ ಕಣ್ಣಿನಲ್ಲಿ ನೀರು ಸುರಿಯುವುದು, ಇದೆಲ್ಲವೂ ಹೆಚ್ಚಾಗಿರುವುದು, ಹೀಗಿದ್ದಲ್ಲಿ ನೇತ್ರರೋಗವಿನ್ನೂ ಆಮಾವಸ್ಥೆಯಲ್ಲಿದೆ, ಪಕ್ವಸ್ಥಿತಿಗೆ ಬಂದಿಲ್ಲವೆಂದು ತಿಳಿಯಬೇಕು.

ಮಂದವೇದನತಾಕಂಡೂಸ್ಸಂರಂಭಾಶ್ರುಪ್ರಶಾಂತತಾ ॥
ಪ್ರಸನ್ನವರ್ಣತಾಚಾಕ್ಷ್ಣೋಸ್ಸಂಪಕ್ವಂದೋಷಮಾದಿಶೇತ್ ॥೧೩॥

ವೇದನೆ ಕಡಮೆಯಾಗಿರುವುದು, ಕಣ್ಣಿನಲ್ಲಿ ನವೆ ಉಂಟಾಗಿರುವುದು, ಕಣ್ಣಿನ ಬಾಕು ಮತ್ತು ನೀರು ಸುರಿಯೋಣ ಇವು ಶಾಂತವಾಗುತ್ತಿರುವುದು, ಕಣ್ಣಿನ ಕೆಂಪು ಹರಿದು ಕಣ್ಣಿನ ಬಣ್ಣ ಸರಿಯಾಗುತ್ತಿರುವುದು, ಹೀಗಿದ್ದಲ್ಲಿ ನೇತ್ರ ರೋಗವು ಪಕ್ವವಾಯಿತೆಂದರಿಯಬೇಕು.

ಸಂರಭೀಪಚ್ಯತೇಯಸ್ತು ನೇತ್ರಪಾಕಸ್ಸಶೋಥಜಃ ॥
ಶೋಥಹೀನಾನಿಲಿಂಗಾನಿನೇತ್ರಪಾಕೇತ್ವಶೋಥಜೇ ॥ ೧೪ ॥

ಕಣ್ಣಿನಲ್ಲಿ ಶೋಭೆ ಇದ್ದುಕೊಂಡು ನೇತ್ರರೋಗವು ಪರಿಪಕ್ವ ಸ್ಥಿತಿಗೆ ಬರುತ್ತ ಬಂದರೆ ಅದಕ್ಕೆ ಶೋಥಜನೇತ್ರರೋಗವೆಂಬದಾಗಿಯೂ ಶೋಭೆಯಿಲ್ಲದೆ ಪಕ್ವಸ್ಥಿತಿಗೆ ಬಂದಲ್ಲಿ ಶೋಥಜನ್ಯವಲ್ಲವೆಂಬದಾಗಿಯೂ ತಿಳಿದುಕೊಳ್ಳಬೇಕು.

ಉಪೇಕ್ಷಣಾದಕ್ಷಿಯಥಾಧಿಮಂಥೋವಾತಾತ್ಮಕಸ್ಸಾದಯತಿ
ಪ್ರಸಹ್ಯ ॥
ರುಜಾಭಿರುಗ್ರಾಭಿರಸಾಧ್ಯಏಷಹತಾಧಿಮಂಥಃಖಲುನಾಮ
ರೋಗಃ ॥ ೧೫ ॥

ಹಿಂದೆ ಅಧಿಮಂಥವೆಂಬ ರೋಗವನ್ನು ಹೇಳಿದೆಯಷ್ಟೆ, ವಾತಪ್ರಕೋಪ ಜನ್ಯವಾದ ಅಧಿಮಂಥರೋಗವನ್ನು ಉಪೇಕ್ಷೆಮಾಡಿದಲ್ಲಿ ಬಹಳ ಭಯಂಕರವಾದ ವ್ಯಥೆ ವೇದನೆ ಇವುಗಳೊಡನೆ ಕೂಡಿಕೊಂಡು ಅಸಾಧ್ಯವಾಗಿ ಪರಿಣಮಿಸುತ್ತದೆ, ಈ ರೋಗಕ್ಕೆ ಹತಾಧಿಮಂಥವೆಂದು ಹೆಸರು.

ವಾರಂವಾರಂಚಪರ್ಯೇತಿಭ್ರುವೌನೇತ್ರೇಚಮಾರುತಃ ॥
ರುಜಶ್ಚವಿವಿಧಾಸ್ತೀವ್ರಾಸ್ಸಜ್ಞೇಯೋವಾತಪರ್ಯಯಃ ॥ ೧೬ ॥

ನೇತ್ರಸ್ಥಾನಗತವಾದ ವಾಯುವು ಪ್ರಕೋಪವನ್ನು ಹೊಂದಿ ಒಂದೊಂದು ಸಾರಿ ಹುಬ್ಬಿನಲ್ಲೆ ಒಂದೊಂದು ಸಾರಿ ಕಣ್ಣಿನಲ್ಲಿ ಸಹ ನೋವು ವಡತ ಮೊದಲಾಗಿ ನಾನಾ ವಿಧವಾದ ತೊಂದರೆಯನ್ನು ಉಂಟುಮಾಡುತ್ತಿರುತ್ತದೆ, ಇದಕ್ಕೆ ವಾತಪರ್ಯಯವೆಂಬದಾಗಿ ಹೆಸರು.

ಯುತ್ಕೋಣಿತಂದಾರುಣರೂಕ್ಷವರ್ತ್ಮಸಂದಹ್ಯತೇಚಾವಿಲ
ದರ್ಶನಂಯತ್ ॥
ಸುದಾರುಣಂಯತ್ಪ್ರತಿಬೋಧನೇಚಶುಷ್ಕಾಕ್ಷಿಪಾಕೋಪಹ
ತಂತದಕ್ಷಿ ॥ ೧೭ ॥

ಕಣ್ಣುರೆಪ್ಪೆಯು ಸುಕ್ಕು ಹಿಡಿದು ಕಣ್ಣು ಬಿಡಲಾಗದಿರುವುದು, ಮುಟ್ಟಿ ನೋಡಿದರೆ ಜಿಡ್ಡಿಲ್ಲದೆ ಒರಟಾಗಿರುವುದು, ಕಣ್ಣುರಿ ಬಹಳವಾಗಿರುವುದು, ಕಣ್ಣಿನಿಂದ ದೃಷ್ಟಿಸಿ ನೋಡಿದಲ್ಲಿ ಚೊಕ್ಕಟವಾಗಿ ಯಾವುದೂ ಕಾಣುವುದಕ್ಕಿಲ್ಲ, ಕಣ್ಣನ್ನು ಚನ್ನಾಗಿ ಬಿಡುವುದಕ್ಕೆ ಅತಿಯಾಗಿ ತೊಂದರೆಯಾಗುತ್ತಿರುವುದು, ಇದಕ್ಕೆ ಶುಷ್ಕಾಕ್ಷಿಪಾಕವೆಂಬದಾಗಿ ಹೆಸರು.

**ಯಸ್ಯಾವಟುಕರ್ಣಶಿರೋಹನುಸ್ಥೋಮನ್ಯಾಗತೋವಾಪ್ಯ**
**ನಿಲೋನ್ಯತೋವಾ ॥**
**ಕುರ್ಯಾದ್ರುಜಂವೈಭ್ರುವಿಲೋಚನೇಚತಮನ್ಯತೋವಾತ**
**ಮುದಾಹರಂತಿ ॥ ೧೮ ॥**

ನೇತ್ರಸ್ಥಾನಗತವಾದ ವಾಯುವು ಪ್ರಕೋಪವನ್ನು ಹೊಂದಿ, ಕಣ್ಣಿನ ಪಕ್ಕದಲ್ಲಿ ಕಿವಿಯ ಹತ್ತಿರವಿರುವ ಭಾಗ, ಕಿವಿ, ದವಡೆ, ಕುತ್ತಿಗೆಯ ಹಿಂಭಾಗದ ನರಗಳು, ಹುಬ್ಬು ಕಣ್ಣು ಇವುಗಳಲ್ಲಿ ನೋವು ಮತ್ತು ಒಡತವನ್ನುಂಟುಮಾಡುತ್ತಿದ್ದಲ್ಲಿ ಅದಕ್ಕೆ ಅನ್ಯತೋವಾತವೆಂಬದಾಗಿ ಹೆಸರು.

**ಶ್ಯಾವಂಲೋಹಿತಪರ್ಯಂತಂಸರ್ವಂಚಾಕ್ಷಿಪ್ರಪಚ್ಯತೇ ॥**
**ಸದಾಹಶೋಥಂಸಾಸ್ರಾವಮಮ್ಲಾಧ್ಯುಷಿತಮುಚ್ಯತೇ ॥ ೧೯ ॥**

ಕಣ್ಣೆಲ್ಲಾ ಕೊಂಚ ನೀಲೀಬಣ್ಣಕ್ಕೆ ತಿರಿಗಿರುವುದು, ಕಡೆಗಣ್ಣಿನಲ್ಲಿ ಕೆಂಪಿರುವುದು, ಉರಿ, ಶೋಥೆ, ನೀರು ಸುರಿಯುವುದು, ಈ ಲಕ್ಷಣಗಳೆಲ್ಲವೂ ಇದ್ದು ಕಣ್ಣು ಪಕ್ವಾವಸ್ಥೆಗೆ ಬರುತ್ತಿದ್ದಲ್ಲಿ ಅಮ್ಲಾಧ್ಯುಷಿತವೆಂದು ಹೆಸರು, ಹುಳಿಯನ್ನು ಹೆಚ್ಚಿಗೆ ತಿನ್ನುವುದರಿಂದ ಈ ರೋಗವುಂಟಾಗುತ್ತದೆ.

**ಅವೇದನಾವಾಪಿಸವೇದನಾವಾಯಸ್ಯಾಕ್ಷಿರಾಜ್ಯೋಹಿಭವಂತಿ**
**ತಾಮ್ರಾಃ ॥**
**ಮುಹುರ್ವಿರಜ್ಯಂತಿಚಯಾಸ್ಸತಾದೃಗ್ವ್ಯಾಧಿಶ್ಶಿರೋತ್ಪಾತಇತಿ**
**ಪ್ರದಿಷ್ಟಃ ॥ ೨೦ ॥**

ಕಣ್ಣಿನೊಳಗಿರುವ ನರಗಳು ವೇದನೆ ಇರಲೀ ವೇದನೆ ಇಲ್ಲದಿರಲೀ ಯಾವಾಗ್ಯೂ ಒಂದೇ ಸಮನಾಗಿ ಕೆಂಪಾಗಿರುವುದು, ಒಂದೊಂದು ವೇಳೆ ಹೆಚ್ಚಿಗೆ ಕೆಂಪಾಗಿಬಿಡುವುದು, ಹೀಗಾದಲ್ಲಿ ಈ ರೋಗಕ್ಕೆ ಶಿರೋತ್ಪಾತವೆಂಬದಾಗಿ ಹೆಸರು.

**ಮೋಹಾಚ್ಛಿರೋತ್ಪಾತಉಪೇಕ್ಷಿತಸ್ತುಜಾಯೇತರೋಗಸ್ತುಶಿರಾ**
**ಪ್ರಹರ್ಷಃ ॥**
**ತಾಮ್ರಾಭಮಸ್ರಂಸ್ರವತಿಪ್ರಗಾಢಂತಥಾನಶಕ್ನೋತ್ಯಭಿವೀಕ್ಷಿ**
**ತುಂಚ ॥ ೨೧ ॥**

ಹಿಂದೆ ಹೇಳಿದ ಶಿರೋತ್ಪಾತವೆಂಬ ರೋಗವನ್ನು ಸಕಾಲದಲ್ಲಿ ಚಿಕಿತ್ಸಿಸದೆ ಉಪೇಕ್ಷಿಸಿದಲ್ಲಿ ಅದೇ ಕ್ರಮೇಣ ಶಿರಾಪ್ರಹರ್ಷವೆಂಬ ರೋಗವಾಗಿ ಪರಿಣಮಿಸುತ್ತದೆ, ಈ ರೋಗದಲ್ಲಿ ಕಣ್ಣಿನಲ್ಲಿ ಹೊರಡುವ ನೀರು ಸಹ ಕೆಂಪಾಗಿರುತ್ತದೆ, ಕಣ್ಣು ಬಿಟ್ಟು ನೋಡುವುದಕ್ಕೇನೇ ಆಗುತ್ತಿರುವುದಿಲ್ಲ.

ನಿಮಗ್ನರೂಪಂತುಭವೇದ್ಧಿಕೃಷ್ಣೇಸೂಚ್ಯೇವವಿದ್ಧಂಪ್ರತಿಭಾತಿ
ಯದ್ವೈ ॥
ಸ್ರಾವಂಸ್ರವೇದುಷ್ಣಮತೀವಯಚ್ಚತತ್ಸವ್ರಣಂಶುಕ್ಲಮುದಾ
ಹರಂತಿ ॥ ೨೨ ॥

ಕಣ್ಣಿನಲ್ಲಿರತಕ್ಕ ರೂಪಗ್ರಹಣಶಕ್ತಿಯು ಕಡಮೆಯಾಗಿರುವುದು, ಸೂಜಿಯಲ್ಲಿ ಚುಚ್ಚಿದಂತೆ ವ್ಯಥೆಯಾಗುತ್ತಲಿರುವುದು, ಕಣ್ಣಿನಿಂದ ಬರತಕ್ಕ ನೀರು ಅತಿಯಾಗಿ ಬಿಸಿಯಾಗಿರುವುದು, ಈ ರೋಗವನ್ನು ಸವ್ರಣಶುಕ್ಲವೆಂಬದಾಗಿ ಕರೆಯುತ್ತಾರೆ, ಕರಿಯಗುಡ್ಡೆಯ ಮೇಲೆ ಸೂಜಿಯಲ್ಲಿ ಚುಚ್ಚಿದಂತಹ ಗಾಯವು ಸಹ ಇರುತ್ತದೆ.

ದೃಷ್ಟೇಸ್ಸಮೀಪೇನಭವೇತ್ತುಯಚ್ಚನಚಾವಗಾಢಂನಚಸಂ
ಸ್ರವೇದ್ಧಿ ॥
ಅವೇದನಂವಾನಚಯುಗ್ಮಶುಕ್ಲಂತತ್ ಸಿದ್ಧಿಮಾಯಾತಿಕದಾಚಿ
ದೇವ ॥ ೨೩ ॥

ಹಿಂದೆ ಹೇಳಿದ ಸವ್ರಣಶುಕ್ಲವೆಂಬ ರೋಗದಲ್ಲಿ ಕಣ್ಣಿನೊಳಗೆ ಸೂಜಿಯಲ್ಲಿ ಚುಚ್ಚಿದಂತೆ ಕಾಣುವ ವ್ರಣವು ದೃಷ್ಟಿಗೋಳದ ಹತ್ತಿರವಿರಬಾರದು, ವ್ರಣವು ಅಗಾಧವಾಗಿರಬಾರದು, ನೀರು ಬಹಳವಾಗಿ ಸುರಿಯುತ್ತಿರಬಾರದು, ವೇದನೆಯೂ ಅಷ್ಟಾಗಿ ಇರಬಾರದು ಎಂದರೆ ಇಲ್ಲವೆನ್ನುವಂತೆಯೇ ಇರಬೇಕು, ಕಣ್ಣಿನ ಬಿಳಿಯ ಭಾಗದಲ್ಲೆಲ್ಲಿಯೂ ಕ್ಷತಾದಿಗಳಿರಬಾರದು, ಹೀಗಿದ್ದಲ್ಲಿ ಇಂತಹ ಸವ್ರಣಶುಕ್ಲವೆಂಬ ನೇತ್ರರೋಗವು ಚಿಕಿತ್ಸೆಯಿಂದ ಗುಣಕ್ಕೆ ಬರುತ್ತದೆ.

ಸ್ಯಂದಾತ್ಮಕಂಕೃಷ್ಣಗತಂಸಚೋಷಂಶಂಖೇಂದುಕುಂದಪ್ರತಿ
ಮಾವಭಾಸಂ ॥
ವೈಹಾಯಸಾಭ್ರಪ್ರತನುಪ್ರಕಾಶಮಥಾವ್ರಣಂಸಾಧ್ಯತಮಂ
ವದಂತಿ ॥ ೨೪ ॥

ಅವ್ರಣಶುಕ್ರದಲ್ಲಿ ಸುಖಸಾಧ್ಯದ ಲಕ್ಷಣವನ್ನು ಹೇಳುತ್ತಾನೆ—ನೇತ್ರಾಭಿಷ್ಯಂದವೆಂಬ ಕಣ್ಣಿನಲ್ಲಿ ನೀರು ಸುರಿಯುವ ರೋಗದಿಂದ ಹುಟ್ಟಿದ್ದಾಗಿರಬೇಕು, ಕರಿಯ ಗುಡ್ಡೆಯ ಮೇಲಿರಬೇಕು, ಕೊಂಚವಾಗಿ ಉರಿಯಿರಬೇಕು, ಶಂಖದಂತೆ ಬೆಳ್ಳಗಿರಬೇಕು, ಮೇಘದಂತೆ ಮಬ್ಬು ಬಣ್ಣವಾಗಿಯಾದರೂ ಇರಬಹುದು, ವ್ರಣವಿರಬಾರದು, ಹೀಗಿದ್ದಲ್ಲಿ ಅದನ್ನು ಸುಖಸಾಧ್ಯವೆಂದು ತಿಳಿಯಬೇಕು.

**ಗಂಭೀರಜಾತಂಬಹುಲಂಚಶುಕ್ಲಂಚಿರೋತ್ಥಿತಂಚಾಪಿವದಂತಿ ಕೃಚ್ಛ್ರಂ ॥**
**ವಿಚ್ಛಿನ್ನಮಧ್ಯಂಪಿಶಿತಾವೃತಂವಾಚಲಂಶಿರಾಸೂಕ್ಷ್ಮಮದೃಷ್ಟಿ ಕೃಚ್ಛ್ರ ॥ ೨೫ ॥**
**ದ್ವಿತ್ವಗ್ಗತಂಲೋಹಿತಮಂತತಶ್ಚ ಚಿರೋತ್ಥಿತಂಚಾಪಿವಿವರ್ಜ ನೀಯಂ ॥**

ಗಂಭೀರಜಾತವೆಂದರೆ ನೇತ್ರದ ಎರಡು ಮೂರನೆಯ ಪಟಲಗಳನ್ನಾಶ್ರಯಿಸಿ ಹುಟ್ಟಿರುವುದು, ತೆಳ್ಳಗಿಲ್ಲದೆ ಘನವಾದ ಮುಂಗಾರು ಮೋಡದಂತಿರುವುದು, ಬಹಳ ಬೆಳ್ಳಗಾಗಿರುವುದು, ಬಹಳ ದಿವಸದಿಂದಿರುವುದು, ಹೀಗಿರುವುದು ಕಷ್ಟಸಾಧ್ಯ ವಾದದ್ದು, ಶುಕ್ರದ ಮಧ್ಯದಲ್ಲಿ ಒಡೆದುಹೋಗಿರುವುದು, ಶುಕ್ರದ ಸುತ್ತಲೂ ದುರ್ಮಾಂಸವಿರುವುದು, ಶುಕ್ರದೊಳಗೆಲ್ಲಾ ಸೂಕ್ಷ್ಮವಾದ ನರಗಳು ವ್ಯಾಪಿಸಿ ಕೊಂಡಿರುವುದು, ದೃಷ್ಟಿಶಕ್ತಿಯನ್ನೇ ಕಳದಿರುವುದು, ಕಣ್ಣಿನ ಎರಡನೆಯ ಪಟಲ ದಲ್ಲಿರುವುದು, ಶುಕ್ರದ ಅಂತರ್ಭಾಗದಲ್ಲಿ ಕೆಂಪಾಗಿರುವುದು, ಬಹಳ ದಿವಸವನ್ನು ತಿಂದದ್ದು, ಇಂತವುಗಳೆಲ್ಲಾ ಅಸಾಧ್ಯಗಳೆಂದು ಬಿಟ್ಟುಬಿಡಬೇಕು.

**ಉಷ್ಣಾಶ್ರುಪಾತಃಪಿಡಕಾಚನೇತ್ರೇಯಸ್ಮಿನ್ ಭವೇನ್ಮುದ್ಗನಿ ಭಂಚಶುಕ್ಲಂ ॥ ೨೬ ॥**
**ತದಪ್ಯಸಾಧ್ಯಂಪ್ರವದಂತಿಕೇಚಿದನ್ಯಚ್ಚಯತ್ತಿತ್ತಿರಿಪಕ್ಷತುಲ್ಯಂ ॥**

ಕಣ್ಣಿನಿಂದ ಸುರಿಯುವ ನೀರು ಯಾವಾಗಲೂ ಬಿಸಿಯಾಗಿರುವುದು ಕಣ್ಣಿನ ತುಂಬಲೂ ಗುಳ್ಳೆಗಳಾಗಿರುವುದು, ಶುಕ್ಲವು ಉದ್ದಿನಕಾಳಿನಷ್ಟು ಗಾತ್ರ ವಾಗಿಯೂ ದಪ್ಪವಾಗಿಯೂ ಇರುವುದು, ಹೀಗಿದ್ದರೂ ಅಸಾಧ್ಯವೆಂದೇ ಕೆಲವರು ಹೇಳುತ್ತಾರೆ, ಕಣ್ಣಿನ ಒಳಭಾಗದಲ್ಲಿರುವ ಶುಕ್ರವು ತಿತ್ತಿರಿಪಕ್ಷಿಯ ರೆಕ್ಕೆಯ ಹಾಗೆ ಚಿತ್ರವಾದ ಬಣ್ಣಗಳುಳ್ಳದ್ದಾಗಿದ್ದರೂ ಅದೂ ಅಸಾಧ್ಯವೆಂದೇ ತಿಳಿಯಬೇಕು.

**ಶ್ವೇತಸ್ಸಮಾಕ್ರಾಮತಿಸರ್ವತೋಹಿದೋಷೇಣಯಸ್ಯಾಸಿತ ಮಂಡಲಂಚ ॥ ೨೭ ॥**
**ತಮಕ್ಷಿಪಾಕಾತ್ಯಯಮಕ್ಷಿರೋಗಂಸರ್ವಾತ್ಮಕಂವರ್ಜಯಿತವ್ಯ ಮಾಹುಃ ॥**

ದೋಷಪ್ರಕೋಪದಿಂದ ಕಣ್ಣಿನಲ್ಲಿ ಉಂಟಾಗುವ ಬಿಳಪು ಕ್ರಮೇಣ ಕರಿಯ ಗುಡ್ಡೆಯನ್ನೂ ಆಕ್ರಮಿಸುತ್ತ ಬಂದರೆ ಆ ರೋಗಕ್ಕೆ ಅಕ್ಷಿಪಾಕಾತ್ಯಯ ವೆಂಬದಾಗಿ ಹೆಸರು. ಇದು ತ್ರಿದೋಷಪ್ರಕೋಪದಿಂದ ಹುಟ್ಟಿದ್ದಾದ್ದರಿಂದ ಚಿಕಿತ್ಸೆಗೆ ಅಸಾಧ್ಯವೆಂಬದಾಗಿ ಬಿಟ್ಟುಬಿಡಬೇಕೆಂದು ಹೇಳುತ್ತಾರೆ.

ಅಜಾಪುರೀಷಪ್ರತಿಮೋರುಜಾವಾನ್ ಸಲೋಹಿತೋಲೋಹಿತ
ಪಿಚ್ಛಿಲಾಸ್ರಃ ॥ ೨೮ ॥
ವಿಗೃಹ್ಯಕೃಷ್ಣಂಪ್ರಚಯೋಭ್ಯುಪೈತಿತಚ್ಚಾಜಕಾಜಾತಮಿತಿವ್ಯವ
ಸ್ಯೇತ್ ॥

ಆಡಿನ ಹಿಕ್ಕೆಯಷ್ಟು ಗಾತ್ರವಾಗಿ ಕಣ್ಣಿನಿಂದ ಹೊರಕ್ಕೆ ದುರ್ಮಾಂಸ ಹೊರಡುವುದು, ಅದರಲ್ಲಿ ನೋವಿರುವುದು, ಬಿಳುಪು ಮತ್ತು ಕೆಂಪು ಸೇರಿದ ಬಣ್ಣವಿರುವುದು, ಕಣ್ಣಿನಲ್ಲಿ ಸುರಿಯುವ ನೀರು ಕೆಂಪಗೆ ಜಿಗಟಾಗಿರುವುದು, ಈ ಮಾಂಸವು ಕಣ್ಣಿನ ಕಪ್ಪುಗುಡ್ಡೆಯನ್ನೂ ಹೊತ್ತುಕೊಂಡು ಮೇಲಕ್ಕೆ ಏಳುತ್ತಿರುವುದು, ಇದಕ್ಕೆ ಅಜಕಾಜಾತವೆಂದು ಹೆಸರು.

ಪ್ರಥಮೇಪಟಲೇದೋಷಾಯಸ್ಯದೃಷ್ಟ್ಯಾಂವ್ಯವಸ್ಥಿತಾಃ ॥ ೨೯ ॥
ಅವ್ಯಕ್ತಾನಿಚರೂಪಾಣಿಕದಾಚಿದಥಪಶ್ಯತಿ ॥

ದೃಷ್ಟಿಸ್ಥಾನಗತಗಳಾದ ದೋಷಗಳು ಪ್ರಕುಪಿತಗಳಾಗಿ ಪ್ರಥಮ ಪಟಲದಲ್ಲಿ ವ್ಯಾಪಿಸಿಕೊಂಡು ದೃಷ್ಟಿಶಕ್ತಿಯನ್ನು ಕಡಮೆ ಮಾಡಿದ್ದಲ್ಲಿ ಕಣ್ಣಿಗೆ ಬಾಹ್ಯ ಪದಾರ್ಥಗಳು ಇಂತವೇ ಎಂದು ಹೇಳುವ ಶಕ್ತಿಯು ಕಡಮೆಯಾಗಿ ಹೋಗಿರುತ್ತದೆ, ಅಂದರೆ ಪದಾರ್ಥವು ಇಂತದೇ ಎಂದು ಗುರ್ತಿಸುವ ಶಕ್ತಿ ಕಡಮೆಯಾಗಿರುತ್ತದೆ.

ದೃಷ್ಟಿರ್ಭೃಶಂವಿಹ್ವಲತಿದ್ವಿತೀಯಂಪಟಲಂಗತೇ ॥ ೩೦ ॥
ಮಕ್ಷಿಕಾಮಶಕಾಶ್ಚಾಪಿಜಾಲಕಾನಿಚಪಶ್ಯತಿ ॥
ಮಂಡಲಾನಿಪತಾಕಾಂಶ್ಚಮರೀಚಿಂಕುಂಡಲಾನಿಚ ॥ ೩೧ ॥
ಪರಿಪ್ಲವಾಂಶ್ಚವಿವಿಧಾನ್ ವರ್ಷಮಭ್ರಂತಮಾಂಸಿಚ ॥
ದೂರಸ್ಥಾನಿಚರೂಪಾಣಿಮನ್ಯತೇಸಸಮೀಪತಃ ॥ ೩೨ ॥
ಸಮೀಪಸ್ಥಾನಿದೂರೇಚದೃಷ್ಟೇರ್ಗೋಚರವಿಭ್ರಮಾತ್ ॥

ಪ್ರಕುಪಿತಗಳಾದ ದೃಷ್ಟಿಸ್ಥಾನಗತಗಳಾದ ದೋಷಗಳು ಕಣ್ಣಿನ ಎರಡನೆಯ ಪಟಲವನ್ನು ಸೇರಿ ದೃಷ್ಟಿಶಕ್ತಿಗೆ ಕುಂದಕವನ್ನುಂಟುಮಾಡಿದಲ್ಲಿ ಯಾವ ಪದಾರ್ಥವನ್ನು ನೋಡಿದರೂ ಸ್ಪಷ್ಟವಾಗಿ ಕಾಣದ ಗಲಿಬಿಲಿಯಾಗಿಯೇ ಕಾಣುತ್ತಿರುತ್ತದೆ, ಯಾವ ಪದಾರ್ಥವನ್ನು ನೋಡಿದರೂ ನೊಣಗಳು ಗುಂಗರಗಳು ಬಲೆ ಇವುಗಳನ್ನು ನೋಡಿದಂತೆಯೇ ಕಾಣುತ್ತಿರುತ್ತದೆ, ದ್ವಿತೀಯ ಪಟಲಗತಗಳಾದ ದೋಷಗಳು ವೃದ್ಧಿಯಾದಂತೆಲ್ಲಾ ನೋಡಿದ ವಸ್ತುವೆಲ್ಲಾ ಅವ್ಯಕ್ತವಾದ ಮಂಡಲದಂತೆ ಕಾಣಿಸುವುದು, ಪತಾಕೆಗಳು ಹಾರಾಡಿದಂತೆ ಕಾಣುತ್ತಿರುವುದು, ಬಿಸಿಲ ಬೆಳಕೇ ಕಣ್ಣು ಬಿಡುವುದು, ವಕ್ರವಕ್ರವಾಗಿ ಏನೇನೋ ಕಾಣುವುದು.

ನಾನಾ ವಿಧಗಳಾದ ರೂಪಗಳು ಕಾಣುವುದು, ಮಳೆ ಸುರಿಯುತ್ತಿರುವಂತೆ ಕಾಣುವುದು, ಕತ್ತಲೆ ಕವಿದಂತೆ ಕಾಣುವುದು, ದೂರದಲ್ಲಿರುವ ವಸ್ತುವು ಹತ್ತಿರದಲ್ಲಿ ಕಾಣುವುದು, ಹತ್ತಿರದಲ್ಲಿರುವ ವಸ್ತುವು ದೂರದಲ್ಲಿ ಕಾಣುವುದು, ಹೀಗಾಗಿ ಕಣ್ಣಿಗೆ ಕಾಣಬಹುದಾದ ವಸ್ತುಗಳೆಲ್ಲಾ ತಪ್ಪುತಪ್ಪಾಗಿಯೇ ಕಾಣುತ್ತಿರುತ್ತವೆ.

ಯತ್ನವಾನಪಿಚಾತ್ಯರ್ಥಂಸೂಚೀಪಾಶಂನಪಶ್ಯತಿ ॥ ೩೩ ॥
ಊರ್ಧ್ವಂಪಶ್ಯತಿನಾಧಸ್ತಾತ್ತೃತೀಯಂಪಟಲಂಗತೇ ॥
ಮಹಂತ್ಯಪಿಚರೂಪಾಣಿಛಾದಿತಾನೀವಚಾಂಬರೈಃ ॥ ೩೪ ॥
ಕರ್ಣನಾಸಾಕ್ಷಿಹೀನಾನಿವಿಕೃತಾನೀವಪಶ್ಯತಿ ॥

ದೋಷಗಳು ಪ್ರಕುಪಿತಗಳಾಗಿ ಮೂರನೆಯ ನೇತ್ರಪಟಲದ ಭಾಗದಲ್ಲಿ ಸೇರಿ ದೃಷ್ಟಿಯನ್ನು ಮಂದಗೊಳಿಸಿದಲ್ಲಿ ಸೂಜಿಯಾಗಲೀ ಸೂಜಿಗೆ ಪೋಣಿಸುವ ದಾರವಾಗಲಿ ಕಾಣುವುದಿಲ್ಲ, ಯಾವಾಗಲೂ ಮೇಲಕ್ಕೆ ನೋಡುವುದು ವಿನಹ ಅಧೋದೃಷ್ಟಿಯೇ ಇರುವುದಿಲ್ಲ, ಎಷ್ಟು ದೊಡ್ಡ ಪದಾರ್ಥವಾಗಲಿ ವೋಡ ಮುಚ್ಚಿಕೊಂಡಂತೆ ಮಬ್ಬಾಗಿಯೇ ಕಾಣುವುದು, ಮನುಷ್ಯಾಕೃತಿಯನ್ನು ನೋಡಿದರೆ ಕಣ್ಣು ಮೂಗುಗಳು ಸ್ಪಷ್ಟವಾಗಿ ಕಾಣಿಸುತ್ತಿರುವುದಿಲ್ಲ.

ಯಥಾದೋಷಂಚರಜ್ಯೇತದೃಷ್ಟಿದೋರ್ಷೇಬಲೀಯಸಿ ॥ ೩೫ ॥
ಅಧಸ್ಥಿತೇಸಮೀಪಸ್ಥಂದೂರಸ್ಥಂಚೋಪರಿಸ್ಥಿತೇ ॥
ಪಾರ್ಶ್ವಸ್ಥಿತೇತಥಾದೋಷೇಪಾರ್ಶ್ವಸ್ಥಂನೈವಪಶ್ಯತಿ ॥ ೩೬ ॥
ಸಮಂತತಸ್ಥಿತೇದೋಷೇಸಂಕುಲಾನೀವಪಶ್ಯತಿ ॥
ದೃಷ್ಟಿಮಧ್ಯಸ್ಥಿತೇದೋಷೇಮಹದ್ಧ್ರಸ್ವಂಚಪಶ್ಯತಿ ॥ ೩೭ ॥
ದ್ವಿಧಾಸ್ಥಿತೇದ್ವಿಧಾಪಶ್ಯೇದ್ಬಹುಧಾಚಾನವಸ್ಥಿತೇ ॥
ದೋಷೇದೃಷ್ಟ್ಯಾಶ್ರಿತೇತಿರ್ಯಕ್ಸಮೇಕಂಮನ್ಯತೇದ್ವಿಧಾ ॥ ೩೮ ॥

ದೃಷ್ಟಿಪಟಲದ ಅಧೋಭಾಗದಲ್ಲಿ ಪ್ರಕೋಪಹೊಂದಿದ ದೋಷವು ಸೇರಿದರೆ ಸಮೀಪಗತವಾದ ವಸ್ತುವನ್ನೂ, ಉಪರಿಭಾಗದಲ್ಲಿ ಸೇರಿದರೆ ದೂರಗತವಾದ ವಸ್ತುವನ್ನೂ, ಒಂದು ಪಾರ್ಶ್ವದಲ್ಲಿ ಸೇರಿದರೆ ಪಕ್ಕದಲ್ಲಿರುವ ವಸ್ತುಗಳನ್ನೂ ನೋಡಿದರೆ ಕಾಣುವುದಿಲ್ಲ, ಪಟಲದ ಎಲ್ಲಾ ಭಾಗದಲ್ಲಿಯೂ ದೋಷವು ವ್ಯಾಪಿಸಿಕೊಂಡಿದ್ದರೆ ಯಾವ ವಸ್ತುವನ್ನು ನೋಡಿದರೂ ಗಲಿಬಿಲಿಯಾಗಿ ಕಾಣುವುದು, ದೃಷ್ಟಿಪಟಲದ ಮಧ್ಯದಲ್ಲಿ ದೋಷವು ವ್ಯಾಪಿಸಿಕೊಂಡಿದ್ದಲ್ಲಿ ದೊಡ್ಡದಾದ ವಸ್ತುವು ಚಿಕ್ಕದಾಗಿ ಕಾಣುತ್ತದೆ, ದೋಷವು ಎರಡು ಭಾಗವಾಗಿ ವ್ಯಾಪ್ತವಾಗಿದ್ದಲ್ಲಿ ನೋಡಿದ ಒಂದು ಪದಾರ್ಥವು ಎರಡಾಗಿ ಕಾಣುತ್ತದೆ, ಅನೇಕ ಭಾಗವಾಗಿ

ದೋಷವು ವ್ಯಾಪಿಸಿಕೊಂಡಿದ್ದರೆ ಒಂದು ವಸ್ತುವೇ ಅನೇಕವಾಗಿಯೂ ಕಾಣು ತ್ತದೆ, ಪಟಲಗತವಾದ ದೋಷವು ಅಡ್ಡಲಾಗಿ ವ್ಯಾಪಿಸಿಕೊಂಡಿದ್ದರೂ ಒಂದು ವಸ್ತುವು ಎರಡಾಗಿ ಕಾಣುತ್ತದೆ.

ತಿಮಿರಾಖ್ಯಸ್ಸವೈದೋಷಶ್ಚತುರ್ಥಂಪಟಲಂಗತಃ ॥
ರುಣದ್ಧಿಸರ್ವತೋದೃಷ್ಟಿಂಲಿಂಗನಾಶಮತಃಪರಂ ॥ ೩೯ ॥
ಅಸ್ಮಿನ್ನಪಿತಮೋಭೂತೇನಾತಿರೂಢೇಮಹಾಗದೇ ॥
ಚಂದ್ರಾದಿತ್ಯೌಸನಕ್ಷತ್ರಾವಂತರಿಕ್ಷೇಚವಿದ್ಯುತಃ ॥ ೪೦ ॥
ನಿರ್ಮಲಾನಿಚತೇಜಾಂಸಿಭ್ರಾಜಿಷ್ಣೂನ್ಯಥಪಶ್ಯತಿ ॥

ಪ್ರಕೋಪವನ್ನು ಹೊಂದಿದ ದೋಷವು ದೃಷ್ಟಿಗೋಳದ ನಾಲ್ಕನೆಯ ಪಟಲವನ್ನು ಹೊಂದಿತೆಂದರೆ ದೃಷ್ಟಿಶಕ್ತಿಯನ್ನು ತಡದುಬಿಡುತ್ತದೆ, ಅನಂತರದಲ್ಲಿ ಲಿಂಗನಾಶವೆಂದರೆ ಪದಾರ್ಥಗಳು ಕಾಣುವುದು ಕಡಮೆಯಾಗುತ್ತ ಬರುತ್ತದೆ, ಈ ಲಿಂಗನಾಶಾಖ್ಯರೋಗವು ಕೂಡ ಚನ್ನಾಗಿ ವ್ಯಾಪಿಸದಿರುವ ಮೊದಮೊದಲು ಸೂರ್ಯ, ಚಂದ್ರ, ನಕ್ಷತ್ರಗಳು, ಮಿಂಚು, ಸ್ವಚ್ಛವಾದ ತೇಜಸ್ಸುಗಳು ಇವುಗಳು ಮಾತ್ರ ಕಾಣುತ್ತಲಿರುತ್ತವೆ.

ಸಏವಲಿಂಗನಾಶಸ್ತುನೀಲಿಕಾಕಾಚಸಂಜ್ಞಿತಃ ॥ ೪೧ ॥

ಈ ಲಿಂಗನಾಶವೆಂಬುವುದನ್ನೇ ಮತಭೇದದಿಂದ ನೀಲಿಕಾ ಎಂಬದಾಗಿಯೂ ಕಾಚವೆಂಬುವುದಾಗಿಯೂ ಕೆಲಕೆಲವರು ವ್ಯವಹರಿಸುತ್ತಾರೆ.

ವಾತೇನಚಾಪಿರೂಪಾಣಿಭ್ರಮಂತೀವಚಪಶ್ಯತಿ ॥
ಆವಿಲಾನ್ಯರುಣಾಭಾನಿವ್ಯಾವಿದ್ಧಾನೀವಮಾನವಃ ॥ ೪೨ ॥
ಪಿತ್ತೇನಾದಿತ್ಯಖದ್ಯೋತಶಕ್ರಚಾಪತಟಿದ್ಗುಣಾನ್ ॥
ನೃತ್ಯತಶ್ಚೈವಶಿಖಿನಃಸರ್ವಂನೀಲಂಚಪಶ್ಯತಿ ॥ ೪೩ ॥
ಕಫೇನಪಶ್ಯೇದ್ರೂಪಾಣಿಸ್ನಿಗ್ಧಾನಿಚಸಿತಾನಿಚ ॥
ಪಶ್ಯೇದಸೂಕ್ಷ್ಮಾಣ್ಯತ್ಯರ್ಥಂವ್ಯಭ್ರೇಮೇಘಾಭ್ರಸಂಪ್ಲವಂ ॥ ೪೪ ॥
ಸಲಿಲಪ್ಲಾವಿತಾನೀವಪರಿಜಾಡ್ಯಾನಿಮಾನವಃ ॥
ಪಶ್ಯೇದ್ರಕ್ತೇನರಕ್ತಾನಿತಮಾಂಸಿವಿವಿಧಾನಿಚ ॥ ೪೫ ॥
ಸಸಿತಾನ್ಯಪಿಕೃಷ್ಣಾನಿಪೀತಾನ್ಯಪಿಚಮಾನವಃ ॥
ಸನ್ನಿಪಾತೇನಚಿತ್ರಾಣಿವಿಪ್ಲುತಾನೀವಪಶ್ಯತಿ ॥ ೪೬ ॥
ಬಹುಧಾಚದ್ವಿಧಾಚಾಪಿಸರ್ವಾಣ್ಯೇವಸಮಂತತಃ ॥
ಹೀನಾಧಿಕಾಂಗಾನ್ಯಪಿವಾಜ್ಯೋತೀಂಷ್ಯಪಿಚಭೂಯಸಾ ॥ ೪೭ ॥

ಹಿಂದೆ ಹೇಳಿದ ಲಿಂಗನಾಶವೆಂಬ ರೋಗವೇ ವಾತಪ್ರಧಾನವಾಗಿದ್ದರೆ ಅಂದರೆ ವಾತಪ್ರಕೋಪದಿಂದ ಉಂಟಾಗಿದ್ದಲ್ಲಿ ಮಬ್ಬುಮಬ್ಬಾಗಿ ಕಾಣುವ ಪದಾರ್ಥಗಳು ಕೂಡ ಅಲ್ಲಾಡುತ್ತಿರುವಂತೆಯೇ ಕಾಣುತ್ತಲಿರುವುದು, ಸ್ವಚ್ಛವಾಗಿಲ್ಲದೆ ಅರುಣವರ್ಣವಾಗಿಯೂ ವಕ್ರವಾಗಿಯೂ ಕಾಣುವುದು, ಇವು ಲಕ್ಷಣಗಳು, ಅದೇ ಲಿಂಗನಾಶರೋಗವೇ ಪಿತ್ತಪ್ರಧಾನವಾಗಿದ್ದರೆ ನೋಡಿದ ಕಡೆಯೆಲ್ಲಾ ಸೂರ್ಯಮಂಡಲಗಳು, ನಕ್ಷತ್ರಗಳು, ಕಾಮನಬಿಲ್ಲು, ಮಿಂಚು, ಇವುಗಳನ್ನೆಲ್ಲಾ ಕಾಣುವುದಲ್ಲದೆ ಆಕಾಶವೆಲ್ಲಾ ಕೇವಲ ನೀಲವರ್ಣವಾಗಿರುವಂತೆಯೇ ಕಾಣುತ್ತಾನೆ, ಕಫಪ್ರಧಾನವಾಗಿದ್ದಲ್ಲಿ ಕಣ್ಣಿಗೆ ಕಾಣುವ ವಸ್ತುಗಳೆಲ್ಲವೂ ಸ್ನೇಹಯುಕ್ತಗಳಾಗಿ ಬೆಳ್ಳಗೂ ಕಾಣುವುದು, ಕಾಣುವ ಪದಾರ್ಥಗಳೆಲ್ಲವೂ ದಪ್ಪನಾಗಿಯೇ ಕಾಣುತ್ತಲಿರುವುದು, ಆಕಾಶದಲ್ಲಿ ಮೋಡವಿಲ್ಲದಿದ್ದರೂ ಮೊಡವಾಗಿ ನೀರು ಸುರಿದು ಎಲ್ಲವೂ ನೀರಿನಲ್ಲಿ ಮುಳುಗಿಹೋಗಿರುವಂತೆಯೂ ನೋಡುತ್ತಿರುತ್ತಾನೆ, ರಕ್ತಪ್ರಕೋಪದಿಂದ ಈ ಲಿಂಗನಾಶವೆಂಬ ರೋಗವು ಹುಟ್ಟಿದಲ್ಲಿ ಕಾಣುವ ಪದಾರ್ಥಗಳೆಲ್ಲವೂ ಕೆಂಪಗೆ ಕಾಣುತ್ತಲೂ, ನಾನಾ ವಿಧವಾದ ಅಂಧಕಾರಗಳು ಕಾಣುತ್ತಲೂ, ಪದಾರ್ಥಗಳು ಬಿಳುಪಿನಿಂದ ಕೂಡಿದ ಕಪ್ಪು ಬಣ್ಣವಾಗಿ ಕಾಣುತ್ತಲೂ ಹಳದಿಯ ಬಣ್ಣವಾಗಿ ಕಾಣುತ್ತಲೂ ಇರುತ್ತವೆ, ತ್ರಿದೋಷಸನ್ನಿಪಾತದಿಂದ ಈ ಲಿಂಗನಾಶರೋಗವು ಉತ್ಪನ್ನವಾಗಿದ್ದಲ್ಲಿ ಕಣ್ಣಿಗೆ ಏನಾದರೂ ಕಂಡಲ್ಲಿ ಅವು ಚಿತ್ರವಿಚಿತ್ರವಾಗಿ ಕಾಣುತ್ತಿರುವುದು, ಒಂದೊಂದೇ ಪದಾರ್ಥಗಳು ಎರಡೆರಡಾಗಿ ಅನೇಕವಾಗಿ ಕಾಣುತ್ತಿರುವುದು, ಇಂತಹ ಅವ್ಯವಸ್ಥೆಗಳೆಲ್ಲಾ ಆಗುತ್ತವೆ, ಮನುಷ್ಯರ ಅವಯವಗಳನ್ನು ನೋಡಿದಲ್ಲಿ ಅಂಗಹೀನವಾಗಿರುವಂತೆಯೂ ಒಂದೊಂದು ಎರಡೆರಡಿರುವಂತೆಯೂ ಕಾಣುವುದೂ ಉಂಟು.

ಪಿತ್ತಂಕುರ್ಯಾತ್ಪರಿಮ್ಲಾಯೀಮೂರ್ಚ್ಛಿತಂಪಿತ್ತತೇಜಸಾ ॥
ಪೀತಾದಿಶಸ್ತ್ವಖದ್ಯೋತಾನ್ ಭಾಸ್ಕರಂಚಾಪಿಪಶ್ಯತಿ ॥ ೪೮ ॥
ವಿಕೀರ್ಯಮಾಣಾನ್ ಖದ್ಯೋತೈರ್ವೃಕ್ಷಾನ್ ತೇಜೋಭಿರೇವಚ ॥

ಪರಿಮ್ಲಾಯಿ ಎಂಬುವುದೊಂದು ವಿಧವಾದ ತಿಮಿರರೋಗ ಅಂದರೆ ಕಣ್ಣು ಮಂಜಾಗುವ ರೋಗ, ಈ ರೋಗವು ಉಂಟಾಗಬೇಕಾದರೆ ರಕ್ತಪ್ರಕೋಪದಿಂದ ಪ್ರಕುಪಿತವಾದ ಪಿತ್ತವು ದೃಷ್ಟಿಸ್ಥಾನಗತವಾಗಿ ಕಣ್ಣು ಮಂಜಾಗುತ್ತದೆ, ಇದರಿಂದ ನೋಡಿದ ಕಡೆಯಲ್ಲೆಲ್ಲಾ ಪಿತ್ತದ ಬಣ್ಣವೇ ಅಂದರೆ ಹಳದಿಯ ಬಣ್ಣವೇ ಕಾಣುವುದು, ಸೂರ್ಯೋದಯವಾದಂತೆ ಕಾಣುವುದು, ಖದ್ಯೋತವೆಂದರೆ ಸಣ್ಣ ಸಣ್ಣ ಬೆಳಕುಗಳು ಕಂಡಂತೆ ಕಾಣುವುದು, ಇಂತಹ ವಿಕಾರಗಳೆಲ್ಲಾ ಆಗುತ್ತವೆ, ಸುತ್ತಲೂ ಕಾಣುವ ಗಿಡಮರಗಳೆಲ್ಲಾ ಹೊತ್ತಿಕೊಂಡು ಉರಿಯುವಂತೆಯೂ ಕಾಣುತ್ತಿರುತ್ತದೆ.

ವಕ್ಷ್ಯಾಮಿ ಷಡ್ವಿಧಂ ರಾಗೈರ್ಲಿಂಗನಾಶಮತಃ ಪರಂ ॥ ೪೯ ॥
ರಾಗೋಽರುಣೋ ಮಾರುತಜಃ ಪ್ರದಿಷ್ಟೋ ಮ್ಲಾಯೀ ಚ ನೀಲಶ್ಚ ತಥೈವ ಪಿತ್ತಾತ್ ।
ಕಫಾತ್ ಸಿತಃ ಶೋಣಿತಜಸ್ತು ರಕ್ತಃ ಸಮಸ್ತದೋಷೋಽಥ ವಿಚಿತ್ರರೂಪಃ ॥ ೫೦ ॥

ಲಿಂಗನಾಶವೆಂದರೆ ಪದಾರ್ಥದ ಸ್ವರೂಪವೇ ಗೊತ್ತಾಗದಂತೆ ಕಣ್ಣಿಂಗೆ ಪೊರೆಗೋಳು; ಇದು ಕಣ್ಣಿನ ಗೋಳದಲ್ಲಿ ಉಂಟಾಗುವ ವರ್ಣ ವ್ಯತ್ಯಾಸದಿಂದ ಇಂತಹ ದೋಷಪ್ರಕೋಪದಿಂದ ಉಂಟಾಯಿತೆಂದು ಗೊತ್ತುಮಾಡಲು ಬೇರೆ ಬೇರೆ ಲಕ್ಷಣಗಳನ್ನು ನಿರ್ಣಯಿಸುತ್ತಾ ಕಣ್ಣಿನಲ್ಲಿ ಮೊದಲು ವಾತದಿಂದಾಗಿ ಅರುಣ ವರ್ಣದ ಕೆಂಪು ಅಂದರೆ ಬಿಳುಪು ಮಿಶ್ರವಾದ ಕೆಂಪು ಹುಟ್ಟುವುದು, ವಾತ ಪ್ರಕೋಪದಿಂದ ಪಿತ್ತಪ್ರಕೋಪದಿಂದ ನೇತ್ರಗೋಳವು ಹಳದಿಮಿಶ್ರವಾದ ನೀಲ ವರ್ಣವಾಗಿಯೂ ಕೇವಲ ನೀಲವರ್ಣವಾಗಿಯೂ ಇರುತ್ತದೆ, ಕಫಪ್ರಕೋಪ ದಿಂದ ನೇತ್ರಗೋಳವು ಶುಭ್ರವಾಗಿರುತ್ತದೆ, ರಕ್ತಪ್ರಕೋಪದಿಂದ ಕೇವಲ ರಕ್ತ ವಂತೆಯೇ ಆಗಿಹೋಗುತ್ತದೆ, ಎಲ್ಲಾ ದೋಷಗಳೂ ಏಕಕಾಲದಲ್ಲಿ ಪ್ರಕೋಪ ವನ್ನು ಹೊಂದಿದಲ್ಲಿ ನೇತ್ರಗೋಳವು ನಾನಾ ವಿಚಿತ್ರವರ್ಣವಾಗಿರುತ್ತದೆ.

ಅರುಣಂ ಮಂಡಲಂ ದೃಷ್ಟ್ಯಾಂ ಸ್ಥೂಲಕಾಚಾರುಣಪ್ರಭಂ ।
ಪರಿಮ್ಲಾಯಿನಿ ರೋಗೇ ಸ್ಯಾತ್ ಮ್ಲಾಯಿ ನೀಲಂ ಚ ಮಂಡಲಂ ॥
ದೋಷಕ್ಷಯಾತ್ ಸ್ವಯಂ ತತ್ರ ಕದಾಚಿತ್ ಸ್ಯಾತ್ತು ದರ್ಶನಂ ॥

ವಾತಪ್ರಕೋಪಜನ್ಯವಾದ ನೇತ್ರಮಂಡಲರೋಗವನ್ನು ಹೇಳುತ್ತಾನೆ— ದೃಷ್ಟಿಮಂಡಲವು ಅಂದರೆ ಗೋಳವು ದಪ್ಪವಾದ ಅರುಣವರ್ಣವಾದ ಗಾಜಿನಂತೆ ಕಾಣುತ್ತಿದ್ದರೆ ಅದಕ್ಕೆ ಅರುಣಮಂಡಲವೆಂದೂ ಪರಿಮ್ಲಾಯಿ ಎಂಬ ರೋಗದಲ್ಲಿ ನೇತ್ರಗೋಳವು ಬಳಲಿಹೋಗಿರುವಂತೆ ಕಾಣುವುದಲ್ಲದೆ ನೀಲವರ್ಣವಾಗಿಯೂ ಕಾಣುತ್ತಿರುತ್ತದೆ, ಪ್ರಕುಪಿತಗಳಾದ ದೋಷಗಳು ಕೆಲವು ವೇಳೆ ಕಡಮೆಯಾದಲ್ಲಿ ಕಣ್ಣು ತನ್ನಂತೆಯೇ ಕಾಣುವುದಕ್ಕೆ ಆರಂಭವಾಗುವುದೂ ಉಂಟು.

ಅರುಣಂ ಮಂಡಲಂ ವಾತಾತ್ ಚಂಚಲಂ ಪರುಷಂ ತಥಾ ॥ ೫೧ ॥
ಪಿತ್ತಾನ್ಮಂಡಲಮಾನೀಲಂ ಕಾಂಸ್ಯಾಭಂ ಪೀತಮೇವ ಚ ॥
ಶ್ಲೇಷ್ಮಣಾ ಬಹುಳಂ ಪೀತಂ ಶಂಖಕುಂದೇಂದುಪಾಂಡುರಂ ॥ ೫೨ ॥
ಚಲತ್ಪದ್ಮಪಲಾಶಸ್ಥಃ ಶುಕ್ಲೋ ಬಿಂದುರಿವಾಂಭಸಃ ॥
ಮೃಜ್ಯಮಾನೇ ಚ ನಯನೇ ಮಂಡಲಂ ತದ್ವಿಸರ್ಪತಿ ॥ ೫೩ ॥

ಪ್ರ[illegible] ॥
ದೃಷ್ಟಿರಾಗೋ ಭವೇಚ್ಚಿತ್ರೋ ಲಿಂಗನಾಶೇ ತ್ರಿದೋಷಜೇ ॥ ೫೪ ॥
ಯಥಾಸ್ವಂ ದೋಷಲಿಂಗಾನಿ ಸರ್ವೇಷ್ವೇವ ಭವಂತಿ ಹಿ ॥

ದೃಷ್ಟಿಮಂಡಲದಲ್ಲಿ ಉಂಟಾಗತಕ್ಕ ಬಣ್ಣಗಳ ಭೇದದಿಂದ ವಾತಾದಿದೋಷ ಪ್ರಕೋಪವನ್ನು ಕಂಡುಹಿಡಿಯಲು ಅನುಕೂಲವಾದ ಮಾರ್ಗವನ್ನು ಹೇಳುತ್ತಾನೆ—ನೇತ್ರಗೋಳಗತನಾದ ವಾಯುವು ಪ್ರಕೋಪವನ್ನು ಹೊಂದಿದ್ದರೆ ಗೋಳವು ಅರುಣವರ್ಣ ಅಂದರೆ ಕೆಂಪು ಮತ್ತು ಬಿಳಪು ಸಹ ಕೂಡಿದ ವರ್ಣವುಳ್ಳದ್ದಾಗಿರುತ್ತದೆ, ದೃಷ್ಟಿಯು ಚಂಚಲವಾಗಿರುತ್ತದೆ ಮತ್ತು ರೂಕ್ಷವಾಗಿರುತ್ತದೆ, ಅಂದರೆ ಕಣ್ಣಿನಲ್ಲಿ ಜಿಡ್ಡಿನ ಅಭಾವವುಂಟಾಗಿ ಕಣ್ಣು ಕೊಂಚ ಉರಿಯಾಗುತ್ತಿರುತ್ತದೆ, ಗೋಳಗತವಾದ ಪಿತ್ತವು ಪ್ರಕೋಪವನ್ನು ಹೊಂದಿದ್ದಲ್ಲಿ ನೇತ್ರಗೋಳವು ಕೆಂಪು ನೀಲವರ್ಣವಾಗಿಯೂ ಕಂಚಿನ ಬಣ್ಣವುಳ್ಳದ್ದಾಗಿಯೂ, ಹಳದಿಯ ಬಣ್ಣವುಳ್ಳದ್ದಾಗಿಯೂ ಇರುತ್ತದೆ, ನೇತ್ರಗೋಳಗತವಾದ ಶ್ಲೇಷ್ಮವು ಪ್ರಕೋಪವನ್ನು ಹೊಂದಿದ್ದರೆ ನೇತ್ರಗೋಳವು ಹಳದಿಯ ಬಣ್ಣವುಳ್ಳದ್ದಾಗಿಯೂ ಶಂಖ, ಕುಂದವೆಂಬ ಒಂದು ಬಗೆಯ ಬಿಳಿಯ ಹುವ್ವು, ಬೆಳದಿಂಗಳು ಇವುಗಳಂತೆ ಪಾಂಡುರವರ್ಣವುಳ್ಳದ್ದಾಗಿಯೂ ಇರುತ್ತದೆ, ಶುಕ್ಲವೆಂದರೆ ಕಣ್ಣಿನಲ್ಲಿ ಬರುವ ಬಿಳುಪು ಎಂಬುವುದು, ಇದು ಗಾಳಿಗೆ ಅಲ್ಲಾಡುವ ತಾವರೆಯ ಎಲೆಯ ಮೇಲಿರುವ ನೀರಿನ ಬಿಂದುವಿನಂತೆ ಕಣ್ಣನ್ನು ತಿಕ್ಕಿದಾಗಲೆಲ್ಲಾ ಅಲ್ಲಾಡುತ್ತಿರುತ್ತದೆ, ನೇತ್ರಗತವಾದ ರಕ್ತವು ಪ್ರಕೋಪಹೊಂದಿತೆಂದರೆ ನೇತ್ರಮಂಡಲವು ಹವಳ ಮತ್ತು ಕಮಲದ ದಳಗಳಂತೆ ವರ್ಣವುಳ್ಳದ್ದಾಗಿರುತ್ತದೆ, ವಾತಾದಿತ್ರಿದೋಷಪ್ರಕೋಪ ಜನ್ಯವಾದ ಲಿಂಗನಾಶವೆಂಬ ನೇತ್ರರೋಗದಲ್ಲಿ ನೇತ್ರಗೋಳದ ವರ್ಣವು ನಾನಾ ವಿಧವಾದ ಚಿತ್ರವರ್ಣವುಳ್ಳದ್ದಾಗಿರುತ್ತದೆ. ಈ ವಾತಾದಿಪ್ರಕೋಪಜನ್ಯಗಳಾದ ನೇತ್ರವಿಕಾರಗಳಲ್ಲಿ ಆಯಾಯ ದೋಷಾನುಗುಣಗಳಾದ ಲಕ್ಷಣಗಳೇ ಇರುತ್ತವೆಂದು ಊಹಿಸಿಕೊಳ್ಳಬಹುದು.

ಷಡ್‌ಲಿಂಗನಾಶಾಷ್ಷಡಿಮೇಚರೋಗಾದ್ದೃಷ್ಟ್ಯಾಶ್ರಯಾಃ
ಷಟ್ ಚ ಷಡೇವ ವಾಚ್ಯಾಃ ॥ ೫೫ ॥

ಹಿಂದೆ ಹೇಳಲ್ಪಟ್ಟಿರುವ ಮತ್ತು ಮುಂದೆ ಹೇಳಲ್ಪಡುವ ನೇತ್ರರೋಗಗಳ ಸಂಖ್ಯೆಯನ್ನು ಹೇಳುತ್ತಾನೆ—ಹಿಂದೆ ಹೇಳಲ್ಪಟ್ಟ ಲಿಂಗನಾಶವೆಂಬ ನೇತ್ರರೋಗವು ಆರು ವಿಧ, ಮುಂದೆ ಹೇಳಲ್ಪಡುವ ದೃಷ್ಟ್ಯಾಶ್ರಿತರೋಗಗಳೂ ಆರು ವಿಧ, ಅಂತೂ ಆರು ಆರು ಹನ್ನೆರಡು ವಿಧ ಎಂಬ ಅಭಿಪ್ರಾಯ.

**ಪಿತ್ತೇನದುಷ್ಟೇನಗದಾತುದೃಷ್ಟಿಃಪೀತಾಭವೇದ್ಯಸ್ಯನರಸ್ಯ
ಕಿಂಚಿತ್ ॥
ಪೀತಾನಿರೂಪಾಣಿಚತೇನಪಶ್ಯೇತ್ಸನ್ಯೈನರಃಪಿತ್ತವಿದಗ್ಧದೃಷ್ಟಿಃ
॥ ೫೬ ॥
ಪ್ರಾಪ್ತೇತೃತೀಯಂಪಟಲಂತುದೋಷೇದಿವಾನ್ನಪಶ್ಯೇನ್ನಿಶಿಚೇ
ಕ್ಷತೇಸಃ ॥
ರಾತ್ರೌಚಶೀತಾನುಗೃಹೀತದೃಷ್ಟಿಃಪಿತ್ತಾಲ್ಪಭಾವಾದಪಿತಾನಿ
ಪಶ್ಯೇತ್ ॥ ೫೭ ॥**

ದೃಷ್ಟಿಗೋಳಗತವಾದ ಪಿತ್ತವು ಪ್ರಕೋಪವನ್ನು ಹೊಂದಿದಲ್ಲಿ ದೃಷ್ಟಿಗೋಳವೆಲ್ಲವೂ ಹಳದಿಯ ಬಣ್ಣವಾಗಿ ಹೋಗುತ್ತದೆ, ನೋಡಿದ ವಸ್ತುವೆಲ್ಲವೂ ಅವನಿಗೆ ಹಳದಿಯ ಬಣ್ಣವಾಗಿಯೇ ಕಾಣುವುದಕ್ಕೆ ಪ್ರಾರಂಭವಾಗುತ್ತದೆ, ಈ ರೀತಿ ಪ್ರಕೋಪವನ್ನು ಹೊಂದಿದ ಪಿತ್ತವು ನೇತ್ರಗೋಳದ ಮೂರನೆಯ ಪಟಲವನ್ನು ಹೊಂದಿತೆಂದರೆ ಹಗಲು ಹೊತ್ತಿನಲ್ಲಿ ಏನೂ ಕಾಣದೆ ಕಣ್ಣು ಮಬ್ಬಾಗುತ್ತದೆ, ರಾತ್ರಿವೇಳೆಯಲ್ಲಿ ಮಾತ್ರ ತಣ್ಣಗೆ ಶೀತವಾಗಿರೋಣದರಿಂದ ಮತ್ತು ಪಿತ್ತವು ಕಡಮೆಯಾಗಿರೋಣದರಿಂದ ಸಹಾ ಕಣ್ಣು ಕಾಣಿಸುತ್ತದೆ, ಇದಕ್ಕೆ ದಿವಾಂಧ್ಯವೆಂಬದಾಗಿ ಹೆಸರು.

**ತಥಾನರಶ್ಲೇಷ್ಮವಿದಗ್ಧದೃಷ್ಟಿಸ್ತಾನ್ಯೇವಶುಕ್ಲಾನಿತುಮನ್ಯತೇಸಃ ॥
ತ್ರಿಷುಸ್ಥಿತೋಲ್ಪಃಪಟಲೇಷುದೋಷೋನಕ್ತಾಂಧ್ಯಮಾಪಾದ
ಯತಿಪ್ರಸಹ್ಯ ॥ ೫೮ ॥
ದಿವಾಸಸೂರ್ಯಾನುಗೃಹೀತದೃಷ್ಟಿಃಪಶ್ಯೇತ್ತುರೂಪಾಣಿಕಫಾಲ್ಪ
ಭಾವಾತ್ ॥**

ನೇತ್ರಗೋಳಗತವಾದ ಶ್ಲೇಷ್ಮವು ಪ್ರಕೋಪವನ್ನು ಹೊಂದಿ ನೇತ್ರಗೋಳವನ್ನು ಕೆಡಿಸಿತೆಂದರೆ ನೋಡಿದ ಪದಾರ್ಥಗಳೆಲ್ಲವೂ ಬೆಳ್ಳಗೆ ಕಾಣಲಾರಂಭವಾಗುತ್ತದೆ, ನೇತ್ರದ ಪ್ರಥಮ ದ್ವಿತೀಯ ತೃತೀಯ ಪಟಲಗಳಲ್ಲಿ ಈ ಶ್ಲೇಷ್ಮರೂಪ ದೋಷವು ಸ್ವಲ್ಪಪ್ರಮಾಣದಿಂದ ಸೇರಿಕೊಂಡಿತೆಂದರೆ ರಾತ್ರಿಹೊತ್ತು ಕಣ್ಣು ಕಾಣದಂತೆ ಮಾಡುತ್ತದೆ, ಹಗಲು ಹೊತ್ತು ಸೂರ್ಯತಾಪದಿಂದ ಕಫದೋಷವು ಕೊಂಚ ಕಡಮೆಯಾಗೋಣದರಿಂದ ಕಣ್ಣು ಕಾಣಿಸುತ್ತದೆ, ರಾತ್ರಿಹೊತ್ತು ಸೂರ್ಯರಶ್ಮಿ ಇಲ್ಲದಿರೋಣದರಿಂದಲೂ ಕಫವು ಹೆಚ್ಚಾಗೋಣದರಿಂದಲೂ ಕಣ್ಣು ಕಾಣಿಸುವುದಿಲ್ಲ.

**ಶೋಕಜ್ವರಾಯಾಸಶಿರೋಭಿತಾಪೈರಭ್ಯಾಹತಾಯಸ್ಯನರಸ್ಯ
ದೃಷ್ಟಿಃ ॥ ೫೯ ॥
ಧೂಮ್ರಾಂಸ್ತಥಾಪಶ್ಯತಿಸರ್ವಭಾವಾನ್ ಸಧೂಮದರ್ಶೀತಿನರಃ
ಪ್ರದಿಷ್ಟಃ ॥**

ಅತಿಯಾದ ದುಃಖ, ಜ್ವರತಾಪ, ಆಯಾಸ, ಅತಿಯಾದ ಶಿರೋವೇದನೆ, ಈ ಕಾರಣಗಳಿಂದ ಪ್ರಕೋಪಹೊಂದಿದ ಪಿತ್ತವು ದೃಷ್ಟಿಗೋಳದಲ್ಲಿ ವ್ಯಾಪಿಸಿ ದೃಷ್ಟಿಯನ್ನು ಕೆಡಿಸಿತೆಂದರೆ ನೋಡಿದ ವಸ್ತುವೆಲ್ಲವೂ ಧೂಮ್ರವರ್ಣವಾಗಿ ಅಂದರೆ ಹೊಗೆಯ ಬಣ್ಣದಿಂದ ವ್ಯಾಪ್ತವಾದಂತೆ ಕಾಣುತ್ತಿರುತ್ತದೆ. ಈ ರೀತಿಯಾದ ದೃಷ್ಟಿದೋಷವುಳ್ಳ ಮನುಷ್ಯನಿಗೆ ಧೂಮದರ್ಶಿ ಎಂಬದಾಗಿ ಹೆಸರು.

ಯೋ ಹ್ರಸ್ವಜಾಡ್ಯೋ ದಿವಸೇಷು ಕೃಚ್ಛ್ರಾದ್ಧ್ರಸ್ವಾನಿ ರೂಪಾಣಿ
ಚ ತೇನ ಪಶ್ಯೇತ್ ॥ ೬೦ ॥
ವಿದ್ಯೋತತೇ ಯಸ್ಯ ನರಸ್ಯ ದೃಷ್ಟಿ ರ್ದೋಷಾಭಿಪನ್ನಾ ನಕುಲಸ್ಯ ಯ
ದ್ವತ್ ॥
ಚಿತ್ರಾಣಿ ರೂಪಾಣಿ ದಿವಾ ಸ ಪಶ್ಯೇತ್ ಸ ವೈ ವಿಕಾರೋ ನಕುಲಾಂಧ್ಯ
ಸಂಜ್ಞಃ ॥ ೬೧ ॥

ಹ್ರಸ್ವಜಾಡ್ಯವೆಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ದೃಷ್ಟಿಸ್ಥಾನಗತಗಳಾದ ದೋಷಗಳು ಪ್ರಕೋಪವನ್ನು ಯಾವ ಪದಾರ್ಥವನ್ನು ನೋಡಿದರೂ ಆ ಪದಾರ್ಥವು ತನ್ನ ಪ್ರಮಾಣಕ್ಕಿಂತ ಚಿಕ್ಕದಾಗಿಯೇ ಕಾಣುವುದು.

ನಕುಲಾಂಧ್ಯವೆಂಬುವುದೂ ಒಂದು ವಿಧವಾದ ನೇತ್ರರೋಗ, ಈ ರೋಗದಲ್ಲಿ ದೃಷ್ಟಿಸ್ಥಾನಗತಗಳಾದ ದೋಷಗಳು ಪ್ರಕೋಪವನ್ನು ಹೊಂದಿ ದೃಷ್ಟಿಗೋಳವು ನಕುಲ ಎಂದರೆ ಮುಂಗಿಸಿಯ ದೃಷ್ಟಿಗೋಳದಂತೆ ಚಿತ್ರವಿಚಿತ್ರವರ್ಣವಾಗಿ ಕಾಣುತ್ತಿರುತ್ತದೆ, ಹೀಗಾಗೋಣದರಿಂದ ರೋಗಿಯು ಹಗಲುಹೊತ್ತು ಯಾವ ಪದಾರ್ಥವನ್ನು ನೋಡಿದರೂ ಆ ಪದಾರ್ಥವು ಚಿತ್ರವಿಚಿತ್ರವಾಗಿಯೇ ಕಾಣುತ್ತಿರುತ್ತದೆ.

ದೃಷ್ಟಿರ್ವಿರೂಪಾಶ್ವಸನೋಪಸೃಷ್ಟಾ ಸಂಕೋಚಮಭ್ಯಂತರತಸ್ತು
ಯಾತಿ ॥
ರುಜಾವಗಾಢಾ ಚ ತಮಕ್ಷಿರೋಗಂ ಗಂಭೀರಕೇತಿ ಪ್ರವದಂತಿ
ತದ್‌ಜ್ಞಾಃ ॥ ೬೨ ॥

ನೇತ್ರಗೋಳಸ್ಥಾನಗತನಾದ ವಾಯುವು ಪ್ರಕೋಪವನ್ನು ಹೊಂದಿ ದೃಷ್ಟಿಯು ವಿರೂಪವನ್ನು ಹೊಂದುವುದಲ್ಲದೆ ನೇತ್ರಗೋಳವು ಸಹ ಸಂಕುಚಿತವಾಗಿ ಅಂದರೆ ಚಿಕ್ಕದಾಗಿ ಒಳಗೆ ಹೋಗಿಬಿಡುತ್ತದೆ, ಅಂದರೆ ಗುಣಿಗೆ ಇಳಿದುಹೋಗುತ್ತದೆ, ಆ ಭಾಗದಲ್ಲೆಲ್ಲಾ ವ್ಯಥೆ ನೋವುಗಳಿದ್ದೇ ಇರುತ್ತವೆ, ಇಂತಹ ನೇತ್ರರೋಗವನ್ನು ನೇತ್ರರೋಗಜ್ಞರು "ಗಂಭೀರಕ"ವೆಂದು ಹೇಳುತ್ತಾರೆ.

ಬಾಹ್ಯೌ ಪುನರ್ದ್ವಾವಿಹ ಸಂಪ್ರದಿಷ್ಟೌ ನಿಮಿತ್ತತಶ್ಚಾಪ್ಯನಿಮಿತ್ತತಶ್ಚ ॥
ನಿಮಿತ್ತತಸ್ತತ್ರ ಶಿರೋಭಿತಾಪಾದ್ ಜ್ಞೇಯಸ್ತ್ವಭಿಷ್ಯಂದನಿದರ್ಶನಸ್ಸಃ ॥ ೬೩ ॥
ಸುರರ್ಷಿಗಂಧರ್ವಮಹೋರಗಾಣಾಂ ಸಂದರ್ಶನೇನಾಪಿ ಚ ಭಾಸ್ಕರಸ್ಯ ॥
ಹನ್ಯೇತ ದೃಷ್ಟಿರ್ಮನುಜಸ್ಯ ಯಸ್ಯ ಸ ಲಿಂಗನಾಶಸ್ತ್ವನಿಮಿತ್ತಸಂಜ್ಞಃ ॥ ೬೪ ॥
ತತ್ರಾಕ್ಷಿ ವಿಸ್ಪಷ್ಟಮಿವಾವಭಾತಿ ವೈಡೂರ್ಯವರ್ಣಾ ವಿಮಲಾ ಚ ದೃಷ್ಟಿಃ ॥

"ಷಡ್ ಲಿಂಗನಾಶಾಃ" ಎಂಬ ಶ್ಲೋಕದಲ್ಲಿ ಸೂಚಿಸಿರುವಂತೆ ಹನ್ನೆರಡು ಪ್ರಕಾರಗಳಾದ ಅಭ್ಯಂತರಕಾರಣಜನ್ಯಗಳಾದ ನೇತ್ರರೋಗಗಳನ್ನು ಹೇಳಿ ಬಾಹ್ಯಕಾರಣಜನ್ಯಗಳಾದ ನೇತ್ರವಿಕಾರಗಳನ್ನು ಹೇಳುತ್ತಾನೆ—ಬಾಹ್ಯಕಾರಣ ಜನ್ಯಗಳಾದ ನೇತ್ರವಿಕಾರಗಳು ಎರಡು ವಿಧ, ನಿಮಿತ್ತಜನ್ಯ, ಅನಿಮಿತ್ತಜನ್ಯ ಎಂಬದಾಗಿ, ನಿಮಿತ್ತಜನ್ಯ ಎಂದರೆ ತಲೆಯು ಬಹಳವಾಗಿ ಕಾಯೋಣದಿಂದ ತಲೆಯಲ್ಲಿರುವ ರಕ್ತವು ಕೆಟ್ಟುಹೋಗಿ ದೃಷ್ಟಿಶಕ್ತಿಗೆ ವಿಘಾತವುಂಟಾಗುತ್ತದೆ, ರಕ್ತಾಭಿಷ್ಯಂದ ರೂಪವಾದ ಬಾಹ್ಯಕಾರಣಜನ್ಯವಾದ ನೇತ್ರರೋಗಕ್ಕೆ ಇದು ಉದಾಹರಣ, ದೇವತೆಗಳು, ಋಷಿಗಳು, ಗಂಧರ್ವರು, ಭಯಂಕರಗಳಾದ ಹಾವು ಹುಲಿ, ಸಿಂಹ ಇವುಗಳನ್ನು ದೃಷ್ಟಿಸಿ ನೋಡೋಣ, ಸೂರ್ಯ ಮೊದಲಾದ ಹೆಚ್ಚಾದ ಬೆಳಕನ್ನು ದೃಷ್ಟಿಸಿ ನೋಡೋಣ, ಈ ಕಾರಣಗಳಿಂದ ಮನುಷ್ಯನ ದೃಷ್ಟಿಶಕ್ತಿಯು ಕಡಮೆಯಾದಲ್ಲಿ ಅದಕ್ಕೆ ಹೇಳಲು ಅಸಾಧ್ಯವಾದ ಕಾರಣದಿಂದ ಸಂಭವಿಸಿದ ಲಿಂಗನಾಶವೆಂಬ ನೇತ್ರರೋಗಕ್ಕೆ ಉದಾಹರಣ. ಈ ಎರಡನೆಯ ಕಾರಣದಿಂದ ಸಂಭವಿಸಿದ ಲಿಂಗನಾಶವೆಂಬ ನೇತ್ರರೋಗದಲ್ಲಿ ನೇತ್ರಗೋಳವಾಗಲಿ ಕಣ್ಣಿನ ಯಾವ ಭಾಗವಾಗಲಿ ಕೆಟ್ಟುಹೋಗಿರುವುದಿಲ್ಲ, ಸ್ವಚ್ಛವಾಗಿಯೇ ಇರುತ್ತದೆ, ಆದರೆ ನೋಡತಕ್ಕ ಶಕ್ತಿ ಮಾತ್ರ ಲುಪ್ತವಾಗಿ ಹೋಗುತ್ತದೆ.

ಪ್ರಸ್ತಾರ್ಯರ್ಮ ತನು ಸ್ತೀರ್ಣಂ ಶ್ಯಾವಂ ರಕ್ತನಿಭಂ ಸಿತೇ ॥ ೬೫ ॥
ಸಶ್ವೇತಂ ಮೃದು ಶುಕ್ಲಾರ್ಮ ಶುಕ್ಲೇ ತದ್ವರ್ಧತೇ ಚಿರಾತ್ ॥

ಪ್ರಸ್ತಾರ್ಯರ್ಮ ಎಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಕಣ್ಣಿನೊಳಗಿರುವ ಬಿಳಿಯ ಗುಡ್ಡೆಯ ಮೇಲೆ ಧೂಮ್ರವರ್ಣವಾಗಿಯಾಗಲಿ, ಕೆಂಪಗಾಗಲಿ ತೆಳ್ಳಗೆ ಹರಡಿಕೊಂಡಿರುವ ಗುತೆರ್ಗಂದಿರುತ್ತದೆ, ಶುಕ್ಲಾರ್ಮ ಎಂಬುವುದು ಮತ್ತೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಕಣ್ಣಿನೊಳ

ಗಿರುವ ಬಿಳಿಯ ಗುಡ್ಡೆಯ ಭಾಗದಲ್ಲಿ ಬೆಳ್ಳಗೆ ಮೃದುವಾಗಿ ಒಂದು ಗುಳ್ಳೆ ಇರುತ್ತದೆ, ಇದು ಮೆತ್ತಗಿರುತ್ತದೆ, ಮತ್ತು ದಿನೇ ದಿನೇ ಕೊಂಚ ಕೊಂಚ ವೃದ್ಧಿಯಾಗುತ್ತಿರುತ್ತದೆ.

ಪದ್ಮಾಭಂಮೃದುರಕ್ತಾರ್ಮಯಸ್ಮಾಂಸಂಚೀಯತೇಸಿತೇ ॥ ೭೬ ॥
ಪೃಥುಮೃದ್ವಧಿಮಾಂಸಾರ್ಮಬಹುಳಂಚಯಕೃನ್ನಿಭಂ ॥
ಸ್ಥಿರಂಪ್ರಸ್ತಾರಿಮಾಂಸಾಢ್ಯಂಸ್ನಾಯ್ವರ್ಮಪಂಚಮಂ ॥ ೭೭ ॥

ರಕ್ತಾರ್ಮ ಎಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಕಣ್ಣಿನೊಳಭಾಗದ ಬಿಳಿಯ ಗುಡ್ಡೆಯ ಮೇಲೆ ತಾವರೆಯ ಎಸಳಿನ ಬಣ್ಣದ ಮೃದುವಾದ ಮಾಂಸವು ಉಬ್ಬುತ್ತ ಬರುತ್ತದೆ, ಅಧಿಮಾಂಸಾರ್ಮ ಎಂಬುವು ದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಬಿಳಿಯಗುಡ್ಡೆಯ ಮೇಲೆ ಬಹಳ ಕೆಂಪಾದ ಮತ್ತು ಮೃದುವಾದ ಮಾಂಸವು ಹಿಂದೆ ಹೇಳಿದ ರಕ್ತಾರ್ಮರೋಗ ಕ್ಕಿಂತ ಹೆಚ್ಚಾಗಿ ಉಬ್ಬುತ್ತ ಬರುತ್ತದೆ. ಸ್ನಾಯ್ವರ್ಮ ಎಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಬಿಳಿಯಗುಡ್ಡೆಯ ಮೇಲೆ ಗಟ್ಟಿಯಾದ ಹೆಚ್ಚಾದ ಮಾಂಸವು ಉಬ್ಬುವುದಲ್ಲದೆ ಇದರಲ್ಲಿ ನರಗಳು ಸಹ ಕಾಣುತ್ತವೆ.

ಶ್ಯಾವಾಸ್ಯುಃಪಿಶಿತನಿಭಾಶ್ಚಬಿಂದವೋಯೇಽಶುಕ್ತ್ಯಾಭಾಸ್ಸಿತನಿಯ
ತಾಸ್ಸಶುಕ್ತಿಸಂಜ್ಞಃ ॥
ಏಕೋಯಶ್ಶಶರುಧಿರೋಪಮಸ್ತುಬಿಂದುಶ್ಶುಕ್ಲಸ್ಥೋಭವತಿ
ತಮರ್ಜುನಂವದಂತಿ ॥ ೭೮ ॥

ಶುಕ್ತಿ ಎಂಬ ನೇತ್ರರೋಗದ ಲಕ್ಷಣವನ್ನು ಹೇಳುತ್ತಾನೆ—ಕಣ್ಣಿನ ಒಳ ಭಾಗದಲ್ಲಿರುವ ಬಿಳಿಯಗುಡ್ಡೆಯ ಮೇಲೆ ಧೂಮ್ರವರ್ಣವಾಗಿಯೂ, ಮಾಂಸದ ಬಣ್ಣವುಳ್ಳವುಗಳಾಗಿಯೂ ಇರುವ ಮುತ್ತಿನಂತಹ ಗುಳ್ಳೆಗಳು ಉಂಟಾದರೆ ಅದಕ್ಕೆ ಶುಕ್ತಿ ಎಂಬದಾಗಿ ಹೆಸರು, ಇವು ಯಾವಾಗಲೂ ಬಿಳಿಯಗುಡ್ಡೆಯ ಮೇಲೆಯೇ ಬರುತ್ತವೆ. ಅರ್ಜುನವೆಂಬುವುದೊಂದು ಬಗೆಯ ನೇತ್ರರೋಗ, ಮೊಲದ ರಕ್ತದ ಬಿಂದುವಿನಂತಹ ಒಂದು ಚುಕ್ಕೆಯು ಕಣ್ಣಿನ ಬಿಳಿಯಗುಡ್ಡೆಯ ಮೇಲೆ ಬರುತ್ತದೆ.

ಶ್ಲೇಷ್ಮಮಾರುತಕೋಪೇನಶುಕ್ಲೇಪಿಷ್ಟಂಸಮುನ್ನತಂ ॥
ಪಿಷ್ಟವತ್ಪಿಷ್ಟಕಂವಿದ್ಧಿಮಲಾಕ್ತಾದರ್ಶಸನ್ನಿಭಂ ॥ ೭೯ ॥

ಪಿಷ್ಟಕವೆನ್ನುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಕಣ್ಣಿನ ಬಿಳಿಯಗುಡ್ಡೆಯ ಮೇಲೆ ಯಾವುದಾದರೂ ಹಿಟ್ಟನ್ನು ಸವರಿದಂತೆ ಆಗುತ್ತದೆ,

ಇದು ಬಿಳಿಯ ಗುಡ್ಡೆಯಿಂದ ಮೇಲಕ್ಕೆ ಎದ್ದದ್ದಾಗಿರುತ್ತದೆ, ಇದನ್ನು ನೋಡಿದರೆ ಕನ್ನಡಿಯ ಮೇಲೆ ಯಾವುದಾದರೂ ಧೂಳು ಹತ್ತಿಕೊಂಡಿದ್ದರೆ ಹೇಗೋ ಹಾಗೇ ಕಾಣುತ್ತಿರುತ್ತದೆ.

ಜಾಲಾಭಃ ಕಠಿನಶಿರೋಮಹಾನ್ ಸರಕ್ತಸ್ಸಂತಾನಸ್ಸ್ಮೃತ ಇಹ
ಜಾಲಸಂಜ್ಞಿತಸ್ತು ॥
ಶುಕ್ಲಸ್ಥಾಸ್ಸಿತಪಿಡಕಾಶ್ಶಿರಾವೃತಾಯಾಸ್ತಾಬ್ರೂಯಾದಸಿತ
ಸಮೀಪಜಾಶ್ಶಿರಾಜಾಃ ॥ ೨೦ ॥
ಕಾಂಸ್ಯಾಭೋಽಮೃದುರಥವಾರಿಬಿಂದುಕಲ್ಪೋವಿಜ್ಞೇಯೋಽಸಿತ
ಯಮಸಿತೇಬಲಾಸಸಂಜ್ಞಃ ॥

ಶಿರಾಜಾಲವೆಂಬುವುದೊಂದು ಬಗೆಯ ನೇತ್ರರೋಗ, ಇದರಲ್ಲಿ ಕಣ್ಣುಗುಡ್ಡೆಯ ಮೇಲೆಲ್ಲಾ ಬಲೆಯನ್ನು ಹರಡಿದಂತೆ ನರಗಳು ಕಾಣುತ್ತಿರುತ್ತವೆ, ಈ ನರಗಳು ಕೆಂಪಾಗಿರುತ್ತವೆ ಮತ್ತು ಬಹಳ ಒರಟಾಗಿರುತ್ತವೆ, ಶಿರಾಜಪಿಟಕಗಳೆಂಬುವುದೊಂದು ಬಗೆಯ ನೇತ್ರರೋಗ, ಕಣ್ಣಿನೊಳಗಿರುವ ಬಿಳಿಯ ಗುಡ್ಡೆಯ ಮೇಲೆ ಬಿಳಿಯ ಗುಳ್ಳೆಗಳಿರುವುದು, ಈ ಗುಳ್ಳೆಗಳ ಮೇಲೆಲ್ಲಾ ನರಗಳು ಬಲೆಯಂತೆ ವ್ಯಾಪಿಸಿರುವುದು, ಮತ್ತು ಈ ಗುಳ್ಳೆಗಳು ಕಣ್ಣಿನ ಕರಿಯುಗುಡ್ಡೆಯ ಸಮೀಪದಲ್ಲಿರುವುದು, ಇಂತಹ ಗುಳ್ಳೆಗಳಿಗೆ ಶಿರಾಜಪಿಟಕಗಳೆಂದು ಹೆಸರು. ಬಲಾಸವೆಂಬುವುದೊಂದು ನೇತ್ರರೋಗ, ಕಣ್ಣಿನೊಳಗಿರುವ ಬಿಳಿಯುಗುಡ್ಡೆಯ ಮೇಲುಭಾಗದಲ್ಲಿ ಕಂಚಿನ ಬಣ್ಣದ ಮೃದುವಾದ ನೀರಿನ ಹನಿಯ ಹಾಗಿರುವ ಗುಳ್ಳೆಯಿದ್ದರೆ ಅದಕ್ಕೆ ಬಲಾಸವೆಂಬದಾಗಿ ಹೆಸರು.

ಪಕ್ವಶ್ಶೋಥಸ್ಸಂಧಿಜೋಯಸ್ಸತೋದಸ್ಸ್ರವೇತ್ಪೂಯಂಪೂತಿ
ಪೂಯಾಲಸಾಖ್ಯಃ ॥ ೨೧ ॥
ಗ್ರಂಥಿರ್ನಾಲ್ಪೋದೃಷ್ಟಿಸಂಧಾವಪಾಕೀಕಂಡೂಪ್ರಾಯೋನೀ
ರುಜಸ್ತೂಪನಾಹಃ ॥

ಪೂಯಾಲಸವೆಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ಕಣ್ಣಿನ ಸಂಧಿಭಾಗದಲ್ಲಿ ಬಾಕು ಬಂದು ಅದು ಪಕ್ವವಾಗಿ ವ್ಯಥೆಯೊಡನೆ ಕೀವಾಗಲಿ ಒಂದು ಬಗೆಯ ದ್ರವವಾಗಲಿ ಹೊರಡುತ್ತಿದ್ದಲ್ಲಿ ಅದಕ್ಕೆ ಪೂಯಾಲಸಕವೆಂಬದಾಗಿ ಹೆಸರು. ಉಪನಾಹವೆಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ದೃಷ್ಟಿಸಂಧಿಯಲ್ಲಿ ದೊಡ್ಡ ಗಂಟು ಉಂಟಾಗಿ ಅದು ಪಕ್ವವಾಗದೆ ನೋವೂ ಇಲ್ಲದೆ ನವೆ ಮಾತ್ರವಿದ್ದಲ್ಲಿ ಅದಕ್ಕೆ ಶ್ಲೇಷ್ಮೋಪನಾಹವೆಂಬದಾಗಿ ಹೆಸರು.

ಗತ್ವಾಸಂಧೀನಶ್ರುಮಾರ್ಗೇಣದೋಷಾಃಕುರ್ಯುಃಸ್ರಾವಾನ್
ಅಕ್ಷಣ್ಯೈಸ್ಸ್ವೈರುಪೇತಾನ್ ॥ ೨೧ ॥
ತಂಹಿಸ್ರಾವಂನೇತ್ರನಾಡೀತಿಚೈಕೇತಸ್ಯಲಿಂಗಂಕೀರ್ತಯಿಷ್ಯೇ
ಚತುರ್ಧಾ ॥

ನಾಲ್ಕು ವಿಧಗಳಾದ ನೇತ್ರಸ್ರಾವಗಳು ಉಂಟಾಗುತ್ತವೆ, ಅವುಗಳನ್ನು ವಿವರಿಸುವ ರೀತಿಯಲ್ಲಿ ಅವುಗಳು ಸಂಭವಿಸುವ ಕ್ರಮವನ್ನು ವಿವರಿಸುತ್ತಾನೆ, ನೇತ್ರಗತವಾದ ತ್ರಿದೋಷಗಳು ಪ್ರಕೋಪವನ್ನು ಹೊಂದಿ ಸಾಮಾನ್ಯ ಕಣ್ಣಿನಲ್ಲಿ ನೀರು ಬರುವ ನೇತ್ರರಂಧ್ರಗಳ ಮೂಲಕ ಒಳಗೆ ವ್ಯಾಪಿಸಿ ನೇತ್ರಸಂಧಿಗಳನ್ನು ಸೇರಿ ಅಲ್ಲಿ ತಮ್ಮ ಲಕ್ಷಣಗಳಿಂದ ಯುಕ್ತಗಳಾದ ಸ್ರಾವಗಳನ್ನು ಹೊಸದಾಗಿ ಹುಟ್ಟಿಸುತ್ತವೆ. ಇದನ್ನೇ ಕೆಲವರು ನೇತ್ರನಾಡಿ ಎಂಬದಾಗಿಯೂ ಕರೆಯುತ್ತಾರೆ. ಇದರ ಸ್ವರೂಪವನ್ನು ಮುಂದೆ ಹೇಳುತ್ತೇವೆ.

ಪಾಕಸ್ಸಂಧೌ ಸಂಜಾತಃ ಶೋಥಸ್ತು ಪೂಯಂ ಪ್ರಸ್ರವೇತ್ ಪೂಯಾಸ್ರಾವಃ ಸ ಗದ
ಸ್ಸರ್ವಜಸ್ತು ॥ ೨೨ ॥
ಶ್ವೇತಂಸಾಂದ್ರಂಪಿಚ್ಛಿಲಂಯಸ್ಸ್ರವೇತ್ತುಶ್ಲೇಷ್ಮಸ್ರಾವೋಽಸೌ
ವಿಕಾರೋಮತಸ್ತು ॥

ಪೂಯಸ್ರಾವವೆಂಬ ನೇತ್ರಸ್ರಾವರೋಗದ ಲಕ್ಷಣವನ್ನು ಹೇಳುತ್ತಾನೆ— ಕಣ್ಣಿನ ಸಂಧಿಸ್ಥಾನಗಳಲ್ಲಿ ಗುಳ್ಳೆಗಳಾಗಿ ಆ ಗುಳ್ಳೆಗಳು ಪಾಕಕ್ಕೆ ಬಂದು ಅದರಿಂದ ವಾಸನೆಯಿಂದ ಕೂಡಿದ ಕೀವು ಸುರಿಯುವುದಕ್ಕೆ ಪ್ರಾರಂಭವಾದರೆ ಅದಕ್ಕೆ ಪೂಯಸ್ರಾವವೆಂದು ಹೆಸರು, ಈ ಸ್ರಾವವು ತ್ರಿದೋಷಗಳ ಪ್ರಕೋಪದಿಂದಲೂ ಹುಟ್ಟತಕ್ಕದ್ದೆಂದು ತಿಳಿಯಬೇಕು.

ಶ್ಲೇಷ್ಮಸ್ರಾವವೆಂಬ ನೇತ್ರಸ್ರಾವರೋಗದ ಲಕ್ಷಣಗಳನ್ನು ಹೇಳುತ್ತಾನೆ— ಕಣ್ಣಿನಿಂದ ಸ್ರವಿಸುವ ದ್ರವವು ಬೆಳ್ಳಗಿರುವುದು, ಸಾಂದ್ರವಾಗಿರುವುದು, ಮತ್ತು ಅಂಟಾಗಿರುವುದು, ಈ ರೀತಿಯಲ್ಲಿದ್ದಲ್ಲಿ ಅದಕ್ಕೆ ಶ್ಲೇಷ್ಮಸ್ರಾವವೆಂದು ಹೆಸರು, ಇದು ನೇತ್ರಸ್ಥಾನಗತವಾದ ಶ್ಲೇಷ್ಮದ ಪ್ರಕೋಪದಿಂದ ಹುಟ್ಟತಕ್ಕದೆಂದು ತಿಳಿಯಬೇಕು.

ರಕ್ತಸ್ರಾವಶ್ಶೋಣಿತೋತ್ಥೋವಿಕಾರಸ್ಸ್ರವೇದುಷ್ಣಂತತ್ರ
ರಕ್ತಂಪ್ರಭೂತಂ ॥ ೨೪ ॥
ಹರಿದ್ರಾಭಂಪೀತಮುಷ್ಣಂಜಲಾಭಂಪಿತ್ತಸ್ರಾವಸ್ಸಂಸ್ರವೇತ್
ಸಂಧಿಮಧ್ಯಾತ್ ॥

ರಕ್ತಸ್ರಾವದ ಲಕ್ಷಣವನ್ನು ಹೇಳುತ್ತಾನೆ— ಈ ಬಗೆಯ ಸ್ರಾವದಲ್ಲಿ ಕಣ್ಣಿನ ಸಂಧಿಸ್ಥಾನಗಳಿಂದ ಅತಿಯಾಗಿ ಕೆಟ್ಟರಕ್ತವು ಸ್ರವಿಸುವುದು. ಇದು ನೇತ್ರಗತವಾದ ರಕ್ತವು ಕೆಟ್ಟು ಉಂಟಾಗತಕ್ಕದ್ದೆಂದು ತಿಳಿಯಬೇಕು.

ಪಿತ್ತಪ್ರಕೋಪಜನ್ಯವಾದ ಸ್ರಾವವನ್ನು ಹೇಳುತ್ತಾನೆ—ಅರಿಸಿನದ ಬಣ್ಣದ ನೀರಿನ ವರ್ಣವಾಗಿಯೂ, ಬಿಸಿಯಾಗಿ, ಕೆಲವು ವೇಳೆ ನೀರಿನ ಹಾಗೆಯೂ ನೇತ್ರ ಸಂಧಿ ಮಧ್ಯದಿಂದ ಸ್ರವಿಸುವುದಕ್ಕೆ ಪ್ರಾರಂಭವಾದಲ್ಲಿ ಅದಕ್ಕೆ ಪಿತ್ತಸ್ರಾವವೆಂಬದಾಗಿ ಹೆಸರು, ಇದನ್ನೇ ಕೆಲವರು ಜಲಸ್ರಾವವೆಂಬದಾಗಿಯೂ ಹೇಳುತ್ತಾರೆ.

ತಾಮ್ರಾತನ್ವೀದಾಹಶೂಲೋಪಪನ್ನಾರಕ್ತಾಜ್ಜ್ಞೇಯಾ
ಪರ್ವಣೀವೃತ್ತಶೋಭಾ ॥ ೭೫ ॥
ಜಾತಾಸಂಧೌ ಕೃಷ್ಣಶುಕ್ಲೇಲಜೀಸ್ಯಾತ್ ತಸ್ಮಿನ್ನೇವಖ್ಯಾಪಿತಾ
ಪೂರ್ವಲಿಂಗೈಃ ।

ಪರ್ವಣೀ ಎಂಬುವುದೊಂದು ಬಗೆಯ ನೇತ್ರವ್ಯಾಧಿ ಕಣ್ಣು ಕೆಂಪಾಗಿರುವುದು, ಕಣ್ಣಿನಲ್ಲಿ ಉರಿ ಶೂಲೆ ಇವುಗಳಿರುವುದು, ಕಣ್ಣಿನ ಸುತ್ತಲೂ ದುಂಡಾಗಿ ಶೋಭೆಯಿರುವುದು, ಹೀಗಿದ್ದಲ್ಲಿ ಇದಕ್ಕೆ ಪರ್ವಣಿ ಎಂಬದಾಗಿ ಹೆಸರು. ಇದು ರಕ್ತಪ್ರಕೋಪಜನ್ಯ. ಅಲಜಿ ಎಂಬ ನೇತ್ರರೋಗದ ಲಕ್ಷಣವೇನೆಂದರೆ ಕಣ್ಣಿನ ಕಪ್ಪುಗುಡ್ಡೆ ಮತ್ತು ಬಿಳಿಯಗುಡ್ಡೆ ಇವುಗಳ ಸಂಧಿಯ ಸ್ಥಳದಲ್ಲಿ [illegible] ಪ್ರಮೇಹಪಿಟಕನಿದಾನದಲ್ಲಿ ಹೇಳಿರುವ [illegible] ಬಕ್ಕೆಗಳು [illegible]ಗಳುಳ್ಳದ್ದಾಗಿಯೋ ಏಳುವುದಕ್ಕೆ ಅಲಜಿ ಎಂದು ಹೆಸರು

ಕ್ರಿಮಿಗ್ರಂಥಿರ್ವರ್ತ್ಮನಃಪಕ್ಷ್ಮಣಶ್ಚ ಕಂಡೂಂಕುರ್ಯುಃ ಕ್ರಿಮಯೋ[illegible]
[illegible] ॥ ೭೬ ॥
ನಾನಾರೂಪಾ ವರ್ತ್ಮಶುಕ್ಲಸ್ಯಸಂಧೌ ಚರಂತೋಂತರ್ನಯನಂ
ದೂಷಯಂತಿ ॥

ಕ್ರಿಮಿಗ್ರಂಥಿ ಎಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ನೇತ್ರಸಂಧಿಸ್ಥಾನದಲ್ಲಿ ಹುಟ್ಟಿದ ನಾನಾ ವಿಧವಾದ ಕ್ರಿಮಿಗಳು ಕ್ರಮೇಣ ಕಣ್ಣಿನ ಮುಚ್ಚಳ ರೆಪ್ಪೆ ಇವುಗಳಲ್ಲೆಲ್ಲಾ ಸೇರಿಕೊಂಡು ನವೆಯುನ್ನುಂಟುಮಾಡುತ್ತವೆ ಮತ್ತು ಕಣ್ಣಿನ ಒಳಭಾಗದಲ್ಲಿ ಬಿಳಿಯಗುಡ್ಡೆ ಮತ್ತು ಕಣ್ಣಿನ ಮುಚ್ಚಳ ಇವುಗಳು ಸೇರತಕ್ಕ ಸ್ಥಳದಲ್ಲಿ ಈ ಕ್ರಿಮಿಗಳು ತಿನ್ನುವುದಕ್ಕೆ ಪ್ರಾರಂಭಿಸಿ ಕಣ್ಣನ್ನು ಕೆಡಿಸುತ್ತವೆ, ಇದಕ್ಕೆ ಕ್ರಿಮಿಗ್ರಂಥಿ ಎಂದು ಹೆಸರು.

ಅಭ್ಯಂತರಮುಖೀತಾಮ್ರಾಬಾಹ್ಯತೋವರ್ತ್ಮನಶ್ಚಯಾ ॥ ೭೭ ॥
ಸೋತ್ಸಂಗೋತ್ಸಂಗಪಿಟಕಾಸರ್ವಜಾಸ್ಥೂಲಕಂಡುರಾ ॥

ಕಣ್ಣುರೆಪ್ಪೆಯ ಹೊರಭಾಗದಲ್ಲಿ ಕಣ್ಣಿನ ಒಳಕ್ಕೆ ಮುಖವಾಗಿ ಬೊಕ್ಕೆ ಏಳುವುದು, ಈ ಬೊಕ್ಕೆಯು ಕೆಂಪಾಗಿಯೂ, ದಪ್ಪವಾಗಿಯೂ, ಅತ್ಯಂತ ನವೆಯುಳ್ಳದ್ದಾಗಿಯೂ ಇರುವುದು, ಹೀಗಿದ್ದರೆ ಇದಕ್ಕೆ ಉತ್ಸಂಗಪಿಟಕಾ ಎಂದು ಹೆಸರು, ಇದು ತ್ರಿದೋಷಜನ್ಯವಾದದ್ದು.

ವರ್ತ್ಮಾಂತಃ ಪಿಟಕಾ ಧ್ಮಾತಾ ಭಿದ್ಯಂತೇ ಚ ಸ್ರವಂತಿ ಚ ॥ ೨೮ ॥
ಕುಂಭೀಕಾಬೀಜಪ್ರತಿಮಾಃ ಕುಂಭೀಕಾಸ್ಸನ್ನಿಪಾತಜಾಃ ॥

ಕಣ್ಣಿನ ಕುಣಿಕೆಯ ಕೊನೆಯಲ್ಲಿ ಬಕ್ಕೆಗಳೆದ್ದು ಉಬ್ಬಿಕೊಂಡು ಒಡೆದು ಸೋರುತ್ತಿರುತ್ತವೆ, ಈ ಬಕ್ಕೆಗಳು ಕುಂಭೀಕಾ ಎಂದರೆ ಒಂದು ಬಗೆಯ ದಾಳಿಂಬರೆಯ ಹಣ್ಣು, ಇದರ ಬೀಜದಂತೆ ಈ ಬಕ್ಕೆಗಳೂ ಇರುತ್ತವೆ, ಇವುಗಳಿಗೆ ಕುಂಭೀಕಾ ಎಂದು ಹೆಸರು, ಈ ಬಕ್ಕೆಗಳು ತ್ರಿದೋಷಸನ್ನಿಪಾತಜನ್ಯಗಳೆಂದು ತಿಳಿಯಬೇಕು.

ಸ್ರಾವಿಣ್ಯಃ ಕಂಡುರಾಗುರ್ವ್ಯೋ ರಕ್ತಸರ್ಷಪಸನ್ನಿಭಾಃ ॥ ೨೯ ॥
ರುಜಾವತ್ಯಶ್ಚ ಪಿಟಕಾಃ ಪೋಥಕ್ಯ ಇತಿ ಕೀರ್ತಿತಾಃ ॥

ಪೋಥಕೀ ಎಂಬುದೊಂದು ಬಗೆಯ ಬಕ್ಕೆ, ಈ ಬಕ್ಕೆ ಕಣ್ಣಿನ ರೆಪ್ಪೆ ಮೊದಲಾದವುಗಳ ಮೇಲೆ ಏಳುತ್ತವೆ, ಕೆಂಪುಸಾಸುವೆಯ ಕಾಳಿನ ಹಾಗಿರುತ್ತವೆ, ಇವುಗಳಲ್ಲಿ ನವೆ, ಗುರುತ್ವ, ನೋವು ಮತ್ತು ಸ್ರಾವ ಸಹ ಇದ್ದೇ ಇರುತ್ತದೆ, ಒಡೆದರೆ ನೀರಿನಂತಹ ಸ್ರಾವವು ಇವುಗಳಿಂದ ಸೋರುತ್ತಿರುತ್ತದೆ, ಇಂತಹ ಬಕ್ಕೆಗಳಿಗೆ ಪೋಥಕೀ ಎಂಬದಾಗಿ ಹೆಸರು.

ಪಿಟಕಾ ಖರಾ ಸ್ಥೂಲಾ ಸೂಕ್ಷ್ಮಾಭಿರಭಿಸಂವೃತಾ ॥ ೩೦ ॥
ವರ್ತ್ಮಸ್ಥಾ ಶರ್ಕರಾ ನಾಮ ಸ ರೋಗೋ ವರ್ತ್ಮದೂಷಕಃ ॥

ವರ್ತ್ಮಶರ್ಕರಾ ಎಂಬುದೊಂದು ಬಗೆಯ ನೇತ್ರರೋಗ, ಕಣ್ಣುಕುಣಿಕೆಯಲ್ಲಿ ದಪ್ಪ ಗುಂಡಾದ ಮತ್ತು ಕಠಿಣವಾದ ಅಂದರೆ ಗಟ್ಟಿಯಾದ ಬಕ್ಕೆ ಏಳುವುದು, ಇದರ ಸುತ್ತಲೂ ಸಣ್ಣ ಸಣ್ಣ ಅನೇಕ ಬಕ್ಕೆಗಳಿದ್ದೇ ಇರುವುವು, ಇದಕ್ಕೆ ವರ್ತ್ಮಶರ್ಕರಾ ಎಂದು ಹೆಸರು, ಇದು ಕಣ್ಣುಕುಣಿಕೆಯನ್ನೇ ಕೆಡಿಸಿ ನಾಶಮಾಡುತ್ತದೆ.

ಏರ್ವಾರುಬೀಜಪ್ರತಿಮಾಃ ಪಿಡಕಾ ಮಂದವೇದನಾಃ ॥ ೩೧ ॥
ಶ್ಲಕ್ಷ್ಣಾಃ ಖರಾಶ್ಚ ವರ್ತ್ಮಸ್ಥಾಸ್ತದರ್ಶೋವರ್ತ್ಮ ಕೀರ್ತ್ಯತೇ ॥

ಅರ್ಶೋವರ್ತ್ಮ ಎನ್ನುವುದೊಂದು ಬಗೆಯ ನೇತ್ರರೋಗ, ಕಣ್ಣುಕುಣಿಕೆಯಲ್ಲಿ ಒಳಗೂ ಹೊರಗೂ ಸೌತೆಯ ಬೀಜದಂತಹ ಉದ್ದುದ್ದವಾದ ಬಕ್ಕೆಗಳೇಳುವುದು, ಈ ಬಕ್ಕೆಗಳಲ್ಲಿ ವೇದನೆ ಕಡಮೆ, ಕೆಲವು ಬಕ್ಕೆಗಳು ಮೃದುವಾಗಿಯೂ ಮತ್ತೆ ಕೆಲವು ಕಠಿನವಾಗಿಯೂ ಇರುವುದು, ಹೀಗಿರುವುದಕ್ಕೆ ಅರ್ಶೋವರ್ತ್ಮ ಎಂಬದಾಗಿ ಹೆಸರು.

ದೀರ್ಘಾಂಕುರಃ ಖರಃ ಸ್ತಬ್ಧೋ ದಾರುಣೋಭ್ಯಂತರೋದ್ಭವಃ ।೮೨।
ವ್ಯಾಧಿರೇಷೋಭಿವಿಖ್ಯಾತಃ ಶುಷ್ಕಾರ್ಶೋನಾಮನಾಮತಃ ॥

ಶುಷ್ಕಾರ್ಶಸ್ಸೆಂಬುವುದೊಂದು ಬಗೆಯ ನೇತ್ರರೋಗ, ರೆಪ್ಪೆಯ ಒಳಭಾಗದಲ್ಲಿ ಮೂಲವ್ಯಾಧಿಯ ಮೊಳಕೆಯಂತಹ ಮೊಳಕೆಗಳಾಗುವುದು, ಈ ಮೊಳಕೆಗಳು ಒರಟಾಗಿ ನಿಶ್ಚಲವಾಗಿ ಭಯಂಕರವಾಗಿರುವುವು, ಹೀಗಿದ್ದಲ್ಲಿ ಈ ವ್ಯಾಧಿಗೆ ಶುಷ್ಕಾರ್ಶಸ್ಸೆಂಬದಾಗಿ ಹೆಸರು, ಈ ರೋಗವು ತ್ರಿದೋಷಸನ್ನಿಪಾತಜನ್ಯವೆಂಬದಾಗಿ ತಿಳಿಯಬೇಕು.

ದಾಹತೋದವತೀ ತಾಮ್ರಾ ಪಿಡಕಾ ವರ್ತ್ಮಸಂಭವಾ ॥ ೮೩ ॥
ಮೃದ್ವೀ ಮಂದರುಜಾ ಸೂಕ್ಷ್ಮಾ ಜ್ಞೇಯಾ ಸಾಂಜನನಾಮಿಕಾ ॥

ಅಂಜನನಾಮಿಕಾ ಎಂಬುವುದೊಂದು ಬಗೆಯ ನೇತ್ರರೋಗ, ಕಣ್ಣಕುಣಿಕೆಯಲ್ಲಿ ಉರಿ ವ್ಯಥೆ ಇವುಗಳಿಂದ ಕೂಡಿದ ಕೆಂಪು ಬಣ್ಣದ ಮೃದುವಾದ ಬೊಕ್ಕೆಗಳೇಳುವುವು, ಈ ಬೊಕ್ಕೆಗಳು ಸಣ್ಣವುಗಳಾಗಿರುವುವು. ನೋವು ಕಡಮೆಯಾಗಿರುವುವು, ಹೀಗಿದ್ದಲ್ಲಿ ಅಂಜನನಾಮಿಕಾ ಎಂಬದಾಗಿ ಹೆಸರು.

ವರ್ತ್ಮೋಪಚೀಯತೇ ಯಸ್ಯ ಪಿಡಕಾಭಿಸ್ಸಮಂತತಃ ॥ ೮೪ ॥
ಸವರ್ಣಾಭಿಸ್ಸಮಾಭಿಸ್ತು ವಿದ್ಯಾದ್ಬಹುಲವರ್ತ್ಮತತ್ ॥

ಬಹುಲವರ್ತ್ಮ ಎಂಬುವುದೊಂದು ಬಗೆಯ ನೇತ್ರರೋಗ, ಕಣ್ಣಕುಣಿಕೆಯಲ್ಲಿ ಸಣ್ಣ ಬೊಕ್ಕೆಗಳೆದ್ದು ತುಂಬಿಕೊಳ್ಳುವುದು, ಈ ಬೊಕ್ಕೆಗಳು ಚರ್ಮದ ಬಣ್ಣದಂತಹ ಬಣ್ಣದವುಗಳಾಗಿಯೂ ಸ್ಥಿರವಾಗಿಯೂ ಇರುವುದು, ಹೀಗಿದ್ದಲ್ಲಿ ಬಹುಳವರ್ತ್ಮ ಎಂದು ಹೆಸರು.

ಕಂಡೂಮತಾಲ್ಪತೋದೇನ ವರ್ತ್ಮಶೋಥೇನ ಯೋ ನರಃ ॥ ೮೫ ॥
ನಸಸಂಛಾದಯೇದಕ್ಷಿ ಯತ್ರಾಸೌ ವರ್ತ್ಮಬಂಧಕಃ ॥

ವರ್ತ್ಮಬಂಧಕವೆಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ರೆಪ್ಪೆಯು ಬಾತುಹೋಗುತ್ತದೆ, ಅದರಲ್ಲಿ ನವೆ ಕೊಂಚ ಮಟ್ಟಿಗೆ ನೋವು ಇವುಗಳಿರುತ್ತವೆ, ಕಣ್ಣು ಮುಚ್ಚುವುದಕ್ಕಾಗುತ್ತಿರುವುದಿಲ್ಲ, ಇದಕ್ಕೇನೇ ವರ್ತ್ಮಬಂಧಕವೆಂದು ಹೆಸರು.

ಮೃದ್ವಲ್ಪವೇದನಂ ತಾಮ್ರಂ ಯದ್ವರ್ತ್ಮ ಸಮಮೇವ ಚ ॥ ೮೬ ॥
ಅಕಸ್ಮಾಚ್ಚ ಭವೇದ್ರಕ್ತಂ ಕ್ಲಿಷ್ಟವರ್ತ್ಮೇತಿ ತದ್ವಿದುಃ ॥

ಕಣ್ಣಿನ ರೆಪ್ಪೆಯು ಮೃದುವಾಗಿ ಸ್ವಲ್ಪ ಮಾತ್ರ ವೇದನೆಯುಳ್ಳದ್ದಾಗಿ ತಾಮ್ರವರ್ಣವಾಗಿರುವುದು, ಈ ರೀತಿಯಾಗಿ ಎರಡು ಕಣ್ಣಿನ ರೆಪ್ಪೆಗಳೂ ಇದ್ದು ಅಕಸ್ಮಾತ್ತಾಗಿ ಎರಡೂ ಒಂದೇ ಸಾರಿ ರಕ್ತದ ಬಣ್ಣಕ್ಕೆ ತಿರಿಗಿ ಹೋದರೆ ಕ್ಲಿಷ್ಟವರ್ತ್ಮ ಎಂಬ ನೇತ್ರರೋಗವೆಂದು ತಿಳಿಯಬೇಕು.

**ಕ್ಲಿಷ್ಟಂಪುನಃಪಿತ್ತಯುತಂಶೋಣಿತಂವಿದಹೇದ್ಯದಾ ॥ ೮೭ ॥**
**ತತಃಕ್ಲಿನ್ನತ್ವಮಾಪನ್ನಮುಚ್ಯತೇವರ್ತ್ಮಕರ್ದಮಃ ॥**

ವರ್ತ್ಮಕರ್ದಮವೆಂಬ ನೇತ್ರರೋಗವನ್ನು ಹೇಳುತ್ತಾನೆ—ಕ್ಲಿಷ್ಟವರ್ತ್ಮ ಎಂಬ ರೋಗಯುಕ್ತವಾದ ರೆಪ್ಪೆಗಳು ಪಿತ್ತಾಧಿಕ್ಯದಿಂದ ರಕ್ತವನ್ನೇ ಸುಡುವಂತೆ ಮಾಡಿದಲ್ಲಿ ಅಂದರೆ ಕ್ಲಿಷ್ಟವರ್ತ್ಮ ಎಂಬ ರೋಗದಲ್ಲಿ ಪಿತ್ತಾಧಿಕ್ಯದಿಂದ ರೆಪ್ಪೆಯು ಉರಿಯುವುವಕ್ಕಾರಂಭವಾಗಿ ಕ್ರಮೇಣ ಕಲಸಿಕೊಂಡು ಒಂದು ಬಗೆಯ ದ್ರವವು ಜಿನುಗುವಂತಾದರೆ ಅದಕ್ಕೆ ವರ್ತ್ಮಕರ್ದಮವೆಂದು ಹೆಸರು.

**ಯದ್ವರ್ತ್ಮಬಾಹ್ಯತೋಽಂತಶ್ಚಶ್ಯಾವಂಶೂಲಂಸಶೋಫನಂ ॥ ೮೮ ॥**
**ತದಾಹುಶ್ಶ್ಯಾವವರ್ತ್ಮೇತಿವರ್ತ್ಮರೋಗವಿಶಾರದಾಃ ॥**

ಶ್ಯಾವವರ್ತ್ಮ ಎಂಬ ನೇತ್ರರೋಗದಲ್ಲಿ ಕಣ್ಣಿನ ಮುಚ್ಚಳದ ಒಳಗೂ ಮತ್ತು ಹೊರಗೂ ಸಹ ಧೂಮ್ರವರ್ಣವಾಗುವುದು, ಶೂಲೆ ಮತ್ತು ವೇದನೆಗಳಿರುವುವು, ಹೀಗಿದ್ದಲ್ಲಿ ನೇತ್ರರೋಗದ ಅನುಭವವುಳ್ಳವರು ಇದನ್ನು ಶ್ಯಾವವರ್ತ್ಮ ಎಂದು ಕರೆಯುತ್ತಾರೆ.

**ಅರುಜಂಬಾಹ್ಯತಶ್ಶೂನಂವರ್ತ್ಮಯಸ್ಯನರಸ್ಯಹಿ ॥ ೮೯ ॥**
**ಪ್ರಕ್ಲಿನ್ನವರ್ತ್ಮತದ್ವಿದ್ಯಾತ್ ಕ್ಲಿನ್ನಮತ್ಯರ್ಥಮಂತತಃ ॥**

ರೆಪ್ಪೆಯ ಹೊರಭಾಗದಲ್ಲಿ ಬಹಳವಾಗಿ ಬಾತಿರುವುದು, ಕೊಂಚವಾಗಿ ವೇದನೆಯಿರುವುದು, ಒಳಭಾಗದಲ್ಲಿ ಅತಿಯಾಗಿ ಕೆಟ್ಟುಹೋಗಿ ಒಂದು ವಿಧವಾದ ದ್ರವವು ಬರುತ್ತಿರುವುದು, ಈ ರೋಗಕ್ಕೆ ಪ್ರಕ್ಲಿನ್ನವರ್ತ್ಮ ಎಂಬದಾಗಿ ಹೆಸರು.

**ಯಸ್ಯಧೌತಾನ್ಯಧೌತಾನಿಸಂಬಂಧ್ಯಂತೇಪುನಃಪುನಃ ॥ ೯೦ ॥**
**ವರ್ತ್ಮಾನ್ಯಪರಿಪಕ್ವಾನಿವಿದ್ಯಾದಕ್ಲಿನ್ನವರ್ತ್ಮತತ್ ॥**

ಕಣ್ಣಿನ ರೆಪ್ಪೆಗಳನ್ನು ತೊಳೆದು ಚೊಕ್ಕಟವಾಗಿರಿಸಿದರೂ ಅಥವಾ ತೊಳೆಯದೆ ಬಿಟ್ಟರೂ ಒಂದೇ ಸಮನಾಗಿ ಅಂಟಿಕೊಂಡು ತೊಂದರೆ ಪಡಿಸುವುದು, ಇನ್ನೂ ಪಕ್ವಾವಸ್ಥೆಗೆ ಬಂದಿರುವುದಕ್ಕಿಲ್ಲ, ಹೀಗಿದ್ದಲ್ಲಿ ಈ ರೋಗಕ್ಕೆ ಅಕ್ಲಿನ್ನವರ್ತ್ಮ ಎಂದು ಹೆಸರು.

**ವಿಮುಕ್ತಸಂಧಿನಿಶ್ಚೇಷ್ಟಂವರ್ತ್ಮಯಸ್ಯನಮಿಾಲ್ಯತೇ ॥ ೯೧ ॥**
**ಏತದ್ವಾತಹತಂವರ್ತ್ಮಜಾನೀಯಾದಕ್ಷಿಚಿಂತಕಃ ॥**

ರೆಪ್ಪೆಗೂ ಮತ್ತು ನೇತ್ರಗೋಳಕ್ಕೂ ಇರುವ ಸಂಧಿಬಂಧವು ತಪ್ಪಿಹೋಗಿ ರೆಪ್ಪೆಗಳು ಮುಚ್ಚಿಕೊಳ್ಳದೆ ಯಾವಾಗ್ಯೂ ತೆರದೇ ಇರುವುದು, ಹೀಗಿದ್ದರೆ ಇದಕ್ಕೆ ವಾತಹತವರ್ತ್ಮ ಎಂಬ ನೇತ್ರರೋಗವೆಂದು ಹೆಸರು.

**ವರ್ತ್ಮಾಂತರಸ್ಥಂವಿಷಮಂಗ್ರಂಥಿಭೂತಮವೇದನಂ ॥ ೯೨ ॥**
**ಆಚಕ್ಷತಾರ್ಬುದಮಿತಿಸರಕ್ತಮವಿಲಂಬಿತಂ ॥**

ನೇತ್ರಾರ್ಬುದ ಲಕ್ಷಣವನ್ನು ಹೇಳುತ್ತಾನೆ—ಕಣ್ಣಿನ ರೆಪ್ಪೆಯ ಒಳಭಾಗದಲ್ಲಿ ಸಣ್ಣನಾಗಿ ಅಂದರೆ ಕಡಲೆಯ ಕಾಳಿನಂತಹ ಗಂಟುಬರುವುದು, ಅದು ರೆಪ್ಪೆಯ ಹೊರಭಾಗಕ್ಕೂ ಉಬ್ಬಿ ಕಾಣುತ್ತಿರುವುದು, ಕೊಂಚವಾಗಿ ನೋವಿರುವುದು, ಆದರಲ್ಲಿ ಕೊಂಚ ರಕ್ತಪ್ರಕೋಪವೂ ಇರುವುದು, ಈ ಗ್ರಂಥಿಯು ಕೂಡಲೇ ಹುಟ್ಟತಕ್ಕ ಸ್ವಭಾವವುಳ್ಳದ್ದಾಗಿರುವುದು, ಇದಕ್ಕೆ ನೇತ್ರಾರ್ಬುದವೆಂದು ಹೆಸರು.

**ನಿಮೇಷಿಣೀಸ್ಸಿರಾವಾಯುಃಪ್ರವಿಷ್ಟೋಸಂಧಿಸಂಶ್ರಯಾಃ ॥ ೯೩ ॥**
**ಚಾಲಯತ್ಯಕ್ಷಿವರ್ತ್ಮಾನಿನಿಮೇಷಂನಾಮತದ್ವಿದುಃ ॥**

ನಿಮೇಷವೆಂಬ ನೇತ್ರರೋಗದ ಲಕ್ಷಣವನ್ನು ಹೇಳುತ್ತಾನೆ—ಕಣ್ಣು ಕಣ್ಣುರೆಪ್ಪೆಯನ್ನು ಮಿಟಕಿಸಲು ಸಹಕಾರಿಗಳಾದ ನೇತ್ರಸಂಧಿಗತಗಳಾದ ನರಗಳಲ್ಲಿ ವಾಯುವು ಪ್ರವೇಶಿಸಿ ರೆಪ್ಪೆಗಳು ವಿರಾಮವಿಲ್ಲದೆ ಸದಾ ಮಿಟಕಿಸುತ್ತಿರುವಂತೆ ಅಲ್ಲಾಡಿಸುತ್ತಿದ್ದಲ್ಲಿ ಅದಕ್ಕೆ ನಿಮೇಷವೆಂದು ಹೆಸರು.

**ಯಸ್ಥಿತೋವರ್ತ್ಮಮಧ್ಯೇತುಲೋಹಿತೋಮೃದುರಂಕುರಃ ॥೯೪॥**
**ತದ್ರಕ್ತಜಂಶೋಣಿತಾರ್ಶಶ್ಛಿನ್ನಂಛಿನ್ನಪ್ರರೋಹತಿ ॥**

ಶೋಣಿತಾರ್ಶವೆಂಬುವುದೊಂದು ನೇತ್ರರೋಗ, ಕಣ್ಣಿನ ರೆಪ್ಪೆಯ ಮಧ್ಯದಲ್ಲಿ ಕೆಂಪುಬಣ್ಣದ ಮಾಂಸಾಂಕುರವು ಮೃದುವಾಗಿ ಹುಟ್ಟಿಕೊಂಡು ಸ್ಥಿರವಾಗಿ ಅಲ್ಲಿಯೇ ಇರುವುದು, ಶಸ್ತ್ರಕ್ರಿಯೆಮಾಡಿ ಕತ್ತರಿಸಿದಲ್ಲಿ ಪುನಶ್ಚ ಬೆಳೆಯುವುದು, ಹೀಗಿರುವುದಕ್ಕೆ ರಕ್ತಾರ್ಶಸ್ಸೆಂದು ಹೆಸರು, ಇದು ರಕ್ತಪ್ರಕೋಪದಿಂದ ಹುಟ್ಟುತ್ತದೆ.

**ಅಪಾಕೀಕಠಿನಸ್ಥೂಲೋಗ್ರಂಥಿರ್ವರ್ತ್ಮಭವೋರುಜಃ ॥ ೯೫ ॥**
**ನಗಣೋನಾಮಸವ್ಯಾಧಿರ್ಲಿಂಗತಃಪರಿಕೀರ್ತಿತಃ ॥**

ನಗಣವೆಂಬುವುದೊಂದು ಬಗೆಯ ನೇತ್ರವ್ಯಾಧಿ, ರೆಪ್ಪೆಯ ಮೇಲಗಡೆಯಲ್ಲಿ ದಪ್ಪನಾದ ಮತ್ತು ಗಟ್ಟಿಯಾದ ಒಂದು ಗಂಟಾಗುವುದು, ನೋವಿರುವುದಿಲ್ಲ, ಹಣ್ಣಾಗುವುದಿಲ್ಲ, ಇದಕ್ಕೆ ನಗಣವೆಂದು ಹೆಸರು, ಇದು ಶ್ಲೇಷ್ಮಪ್ರಕೋಪದಿಂದ ಹುಟ್ಟುವಂತಹುದು.

ತ್ರಯೋದೋಷಾಬಹಿಶ್ಶೋಥಂಕುರ್ಯುಶ್ಛಿದ್ರಾಣಿವರ್ತ್ಮನೋಃ ॥ ೯೬ ॥
ಪ್ರಸ್ರವಂತ್ಯಂತರುದಕಂಬಿಸವದ್ಬಿಸವರ್ತ್ಮತತ್ ॥

ಬಿಸವರ್ತ್ಮ ಎಂಬುವುದೊಂದು ಬಗೆಯ ನೇತ್ರರೋಗ, ಈ ರೋಗದಲ್ಲಿ ವಾತಾದಿತ್ರಿದೋಷಗಳೂ ಪ್ರಕೋಪವನ್ನು ಹೊಂದಿ ಕಣ್ಣುರೆಪ್ಪೆಯ ಹೊರಗೆ ಶೋಭೆಯನ್ನುಂಟುಮಾಡುವುದು, ರೆಪ್ಪೆಗಳಲ್ಲಿ ಒಳಮುಖವಾಗಿ ರಂಧ್ರಬೀಳುವಂತೆ ಮಾಡುವುದು, ಈ ರಂಧ್ರಗಳಿಂದ ಒಳಗೆ ಯಾವಾಗ್ಯೂ ನೀರು ಊರುತ್ತಿರುವುದು, ಬಿಸವೆಂಬ ತಾವರೆಯ ದಂಟಿನಲ್ಲಿರುವ ರಂಧ್ರಗಳಂತೆ ರಂಧ್ರಗಳು ಬೀಳುವುದರಿಂದ ಇದಕ್ಕೆ ಬಿಸವರ್ತ್ಮ ಎಂಬದಾಗಿ ಹೆಸರು.

ವಾತಾದ್ಯಾವರ್ತ್ಮಸಂಕೋಚಂಜನಯಂತಿಮಲಾಯದಾ ॥ ೯೭ ॥
ತದಾದ್ರಷ್ಟುಂನಶಕ್ನೋತಿಕುಂಚನಂನಾಮತದ್ವಿದುಃ ॥

ಕುಂಚನವೆಂಬುವುದೊಂದು ಬಗೆಯ ನೇತ್ರವ್ಯಾಧಿ, ವಾತ ಪಿತ್ತ ಶ್ಲೇಷ್ಮಗಳೆಂಬ ಮಲಗಳು ಪ್ರಕುಪಿತಗಳಾಗಿ ನೇತ್ರಸ್ಥಾನವನ್ನು ಹೊಂದಿ ಕಣ್ಣುರೆಪ್ಪೆಗಳು ಸಂಕೋಚಹೊಂದುವಂತೆ ಮಾಡುತ್ತವೆ, ಅಂದರೆ ಚನ್ನಾಗಿ ಕಣ್ಣು ತೆರೆದು ನೋಡುವುದಕ್ಕೇನೇ ಆಗುವುದಿಲ್ಲ, ಇದಕ್ಕೇನೇ ಕುಂಚನವೆಂಬದಾಗಿ ಹೆಸರು.

ಪ್ರಚಾಲಿತಾನಿವಾತೇನಪಕ್ಷ್ಮಾಣ್ಯಕ್ಷಿವಿಶಂತಿಹಿ ॥ ೯೮ ॥
ಘೃಷ್ಟಂತ್ಯಕ್ಷಿಮುಹುಸ್ತಾನಿಸಂರಂಭಂಜನಯಂತಿಚ ॥
ಅಸಿತೇಸಿತಭಾಗೇಚಮೂಲಕೋಶಾತ್ಪತಂತ್ಯಪಿ ॥ ೯೯ ॥
ಪಕ್ಷ್ಮಕೋಪಸ್ಸವಿಜ್ಞೇಯೋವ್ಯಾಧಿಃಪರಮದಾರುಣಃ ॥

ಪಕ್ಷ್ಮಕೋಪವೆಂಬುವುದೊಂದು ಬಗೆಯ ನೇತ್ರವ್ಯಾಧಿ. ಈ ವ್ಯಾಧಿಯಲ್ಲಿ ರೆಪ್ಪೆಯ ಕೂದಲುಗಳು ಗಾಳಿಯಿಂದ ತಳ್ಳಲ್ಪಟ್ಟವುಗಳಾಗಿ ಕಣ್ಣಿನ ಒಳಮುಖವಾಗಿ ತಿರಿಗಿ ರೆಪ್ಪೆಯ ಒಳಕ್ಕೆ ನೂಕ್ಕು ಹೋಗುವುದು, ಕಣ್ಣಿನ ಬಿಳಿಯಗುಡ್ಡೆಯ ಭಾಗವನ್ನು ಮತ್ತು ಕಪ್ಪುಗುಡ್ಡೆಯ ಭಾಗವನ್ನು ಸಹ ತಿಕ್ಕುವುದು, ಇದರಿಂದ ಕಣ್ಣಿನಲ್ಲಿ ಶೋಭೆಬರುವುದು ಅಂದರೆ ಕಣ್ಣು ಊದಿಹೋಗುವುದು, ಕೊನೆಗೆ ಕಣ್ಣಿನ ರೆಪ್ಪೆಯ ಕೂದಲೇ ಉದುರಿಹೋಗುವುದು, ಇದಕ್ಕೇನೇ ಪಕ್ಷ್ಮಕೋಪವೆಂದು ಹೆಸರು, ಇದು ಅತಿ ಭಯಂಕರವಾದ ವ್ಯಾಧಿ.

**ವರ್ತ್ಮಪಕ್ಷ್ಮಾಶಯಗತಂಪಿತ್ತಂರೋಮಾಣಿಶಾತಯೇತ್ ॥೧೦೦॥**
**ಕಂಡೂಂದಾಹಂಚಕುರುತೇಪಕ್ಷ್ಮಶಾತಂತಮಾದಿಶೇತ್ ॥**

ನೇತ್ರಗತವಾದ ಪಿತ್ತವು ಪ್ರಕೋಪವನ್ನು ಹೊಂದಿ ರೆಪ್ಪೆಯ ಕೂದಲಿನ ಬುಡವನ್ನು ಕೆಡಿಸಿ ಆ ಭಾಗದಲ್ಲಿ ನವೆ ಮತ್ತು ಉರಿ ಸಹ ಉಂಟಾಗುವಂತೆ ಮಾಡುವುದು, ಕೂದಲೆಲ್ಲಾ ಉದುರಿಹೋಗುವುದು, ಈ ರೋಗಕ್ಕೇನೇ ಪಕ್ಷ್ಮಶಾತವೆಂಬದಾಗಿ ಹೆಸರು.

**ನವಸಂಧ್ಯಾಶ್ರಯಾಸ್ತೇಷುವರ್ತ್ಮಜಾಸ್ತ್ವೇಕವಿಂಶತಿಃ ॥ ೧೦೧ ॥**
**ಶುಕ್ಲಭಾಗೇದಶೈಕಶ್ಚಚತ್ವಾರಃಕೃಷ್ಣಭಾಗಜಾಃ ॥**
**ಸರ್ವಾಶ್ರಯಾಸ್ಸಪ್ತದಶದೃಷ್ಟಿಜಾದ್ವಾದಶೈವತು ॥ ೧೦೨ ॥**
**ಬಾಹ್ಯಜೌದ್ವೌಸಮಾಖ್ಯಾತೌರೋಗೌಪರಮದಾರುಣೌ ॥**
**ಭೂಯಏತಾನ್ಪ್ರವಕ್ಷ್ಯಾಮಿಸಂಖ್ಯಾರೂಪಚಿಕಿತ್ಸಿತೈಃ ॥ ೧೦೩ ॥**

ಇಲ್ಲಿಗೆ ನೇತ್ರರೋಗನಿದಾನವು ಪೂರ್ಣವಾಯಿತು, ಈ ಶ್ಲೋಕಗಳು ಪ್ರಕ್ಷಿಪ್ತಗಳು, ಇವುಗಳಲ್ಲಿ ಹಿಂದೆ ಹೇಳಿರುವ ನೇತ್ರರೋಗಗಳ ಸಂಖ್ಯೆಯನ್ನು ಮಾತ್ರ ಹೇಳುತ್ತಾನೆ—ಇವುಗಳಿಗೆ ವ್ಯಾಖ್ಯಾನವಿಲ್ಲ, ನೇತ್ರಸಂಧಿಗತಗಳಾದ ರೋಗಗಳು ಒಂಭತ್ತು, ರೆಪ್ಪೆಗೆ ಸಂಭವಿಸತಕ್ಕ ರೋಗಗಳು ಇಪ್ಪತ್ತೊಂದು, ಕಣ್ಣಿನ ಬಿಳೀಗುಡ್ಡೆಗೆ ಸಂಭವಿಸುವ ರೋಗಗಳು ಹನ್ನೊಂದು, ಕಪ್ಪುಗುಡ್ಡೆಗೆ ಸಂಭವಿಸತಕ್ಕವು ನಾಲ್ಕು, ಕಣ್ಣಿನ ಎಲ್ಲಾ ಭಾಗದಲ್ಲಿಯೂ ಬರತಕ್ಕವುಗಳು ಹದಿನೇಳು, ದೃಷ್ಟಿಗೋಳಕ್ಕೆ ಸಂಭವಿಸತಕ್ಕವುಗಳು ಹನ್ನೆರಡು.

ಇಲ್ಲಿಗೆ ನೇತ್ರರೋಗನಿದಾನ ಸಂಪೂರ್ಣ.

---

## ಶಿರೋರೋಗನಿದಾನ.

**ಶಿರೋರೋಗಾಸ್ತುಜಾಯಂತೇವಾತಪಿತ್ತಕಫೈಸ್ತ್ರಿಭಿಃ ॥**
**ಸನ್ನಿಪಾತೇನರಕ್ತೇನಕ್ಷಯೇಣಕ್ರಿಮಿಭಿಸ್ತಥಾ ॥ ೧ ॥**
**ಸೂರ್ಯಾವರ್ತಾನಂತವಾತಾರ್ಧಾವಭೇದಕಶಂಖಕೈಃ ॥**

ನೇತ್ರರೋಗಗಳನ್ನು ಹೇಳಿ ಮುಂದೆ ಶಿರೋರೋಗಗಳನ್ನು ಹೇಳುತ್ತಾನೆ—ಈ ಶಿರೋರೋಗಗಳು ಹನ್ನೊಂದು ವಿಧ, ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ, ರಕ್ತಪ್ರಕೋಪಜನ್ಯ, ಶಿರೋಗತಗಳಾದ ಅಸೃಗ್ವಸಾದಿಧಾತುಕ್ಷಯಜನ್ಯ, ಕ್ರಿಮಿಗಳಿಂದ ಹುಟ್ಟತಕ್ಕ ಶಿರೋರೋಗ, ಸೂರ್ಯಾವರ್ತ, ಅನಂತವಾತ, ಅರ್ಧಾವಭೇದಕ, ಶಂಖಕ ಎಂಬದಾಗಿ.

**ಯಸ್ಯಾನಿಮಿತ್ತಂಶಿರಸೋರುಜಶ್ಚ ಭವಂತಿತೀವ್ರಾನಿಶಿಚಾತಿ ಮಾತ್ರಂ ॥ ೨ ॥**
**ಬಂಧೋಪತಾಪೈಃಪ್ರಶಮಶ್ಚ ಯತ್ರಶಿರೋಭಿತಾಪಸ್ಸಸಮೀರ ಣೇನ ॥**

ವಾತಪ್ರಕೋಪಜನ್ಯವಾದ ಶಿರೋರೋಗವನ್ನು ಹೇಳುತ್ತಾನೆ—ಕಾರಣ ವನ್ನು ಗೊತ್ತುಮಾಡುವುದಕ್ಕೆ ಆಗದಂತೆ ತಲೆನೋವು ಬರುವುದು, ರಾತ್ರಿ ವೇಳೆ ಬಹಳ ಹೆಚ್ಚಾಗುವುದು, ತಲೆಗೆ ಬಿಗಿಯಾಗಿ ಬಟ್ಟೆಕಟ್ಟುವುದು ಎಣ್ಣೆ ತಿಕ್ಕುವುದು ಶಾಖಕೊಡುವುದು ಇಂತಹ ಉಪಾಯಗಳಿಂದ ಕಡಮೆಯಾಗುವುದು, ಹೀಗಿದ್ದಲ್ಲಿ ಇದು ವಾತಪ್ರಕೋಪಜನ್ಯವಾದ ಶಿರೋರೋಗವೆಂದು ತಿಳಿಯಬೇಕು.

**ಯಸ್ಯೋಷ್ಣಮಂಗಾರಚಿತಂಯಥೈವಭವೇಚ್ಛಿರೋಧೂಪ್ಯತಿ ಚಾಕ್ಷಿನಾಸಂ ॥ ೩ ॥**
**ಶೀತೇನರಾತ್ರೌಚಭವೇಚ್ಛಮಶ್ಚ ಶಿರೋಭಿತಾಪಸ್ಸತುಪಿತ್ತಕೋ ಪಾತ್ ॥**

ಪಿತ್ತಪ್ರಕೋಪಜನ್ಯವಾದ ಶಿರೋರೋಗವನ್ನು ಹೇಳುತ್ತಾನೆ—ತಲೆಯನ್ನು ಮುಟ್ಟಿನೋಡಿದರೆ ಬೆಂಕಿಯಿಂದ ಸುಟ್ಟಂತೆ ಅತಿ ಬಿಸಿಯಾಗಿರುವುದು, ಕಣ್ಣಿನಲ್ಲಿ ಮತ್ತು ಮೂಗಿನಲ್ಲಿ ಸಹ ಹೊಗೆ ಹಾಯುವಂತೆ ತೋರುತ್ತಿರುವುದು, ತಂಪಾದ ಶಿಶಿರೋಪಚಾರಗಳಿಂದಲೂ ಮತ್ತು ರಾತ್ರಿಹೊತ್ತುಗಳಲ್ಲಿಯೂ ವೇದನೆ ಕಡಮೆ ಯಾಗುವುದು, ಈ ರೀತಿಯಾಗಿದ್ದಲ್ಲಿ ಪಿತ್ತಪ್ರಕೋಪಜನ್ಯವಾದ ಶಿರೋರೋಗ ವೆಂದು ತಿಳಿದುಕೊಳ್ಳಬೇಕು.

**ಶಿರೋಭವೇದ್ಯಸ್ಯಕಫೋಪದಿಗ್ಧಂಗುರುಪ್ರತಿಷ್ಟಬ್ಧಮತೋಹಿ ಮಂಚ ॥ ೪ ॥**
**ಶೂನಾಕ್ಷಿಕೂಟಂವದನಂಚಯಸ್ಯಶಿರೋಭಿತಾಪಸ್ಸಕಫಪ್ರಕೋ ಪಾತ್ ॥**

ಕಫಪ್ರಕೋಪಜನ್ಯವಾದ ಶಿರೋರೋಗವನ್ನು ಹೇಳುತ್ತಾನೆ—ತಲೆಯು ಕಫದಿಂದ ವ್ಯಾಪ್ತವಾಗಿ ಭಾರವಾಗಿರುವುದು, ತಲೆಯು ಕಟ್ಟಿಕೊಂಡತೆಯೂ ಮುಟ್ಟಿನೋಡಿದರೆ ತಣ್ಣಗೂ ಇರುವುದು, ಇದರ ಜೊತೆಗೆ ಮುಖ ಮತ್ತು ಕಣ್ಣು ಗಳು ಕೊಂಚ ಜವ್ವಾದಂತೆ ತೋರುತ್ತಿರುವುದು, ಇದು ಕಫಪ್ರಕೋಪಜನ್ಯವಾದ ಶಿರೋರೋಗವೆಂದು ತಿಳಿಯಬೇಕು.

**ಶಿರೋಭಿತಾಪೇತ್ರಿತಯಪ್ರವೃತ್ತೇಸರ್ವಾಣಿಲಿಂಗಾನಿಸಮು ದ್ಭವಂತಿ ॥ ೫ ॥**
**ರಕ್ತಾತ್ಮಕಃಪಿತ್ತಸಮಾನಲಿಂಗಃಸ್ಪರ್ಶಾಸಹತ್ವಂಶಿರಸೋ ಭವೇಚ್ಚ ॥**

ತ್ರಿದೋಷಪ್ರಕೋಪಜನ್ಯವಾದ ಶಿರೋರೋಗದಲ್ಲಿ ತ್ರಿದೋಷಗಳ ಲಕ್ಷಣಗಳೂ ಕಾಣುತ್ತಿರುತ್ತವೆ, ರಕ್ತಪ್ರಕೋಪಜನ್ಯವಾದ ಶಿರೋರೋಗದಲ್ಲಿ ಪಿತ್ತಪ್ರಕೋಪಜನ್ಯಶಿರೋಗದ ಲಕ್ಷಣಗಳೇ ಕಾಣುತ್ತಿರುತ್ತವೆ, ಅದರ ಜೊತೆಗೆ ತಲೆಯನ್ನು ಕೈಯಿಂದ ಮುಟ್ಟಿದರೆ ಸಹಿಸುವುದಕ್ಕಾಗುವುದಕ್ಕಿಲ್ಲ, ಈ ಲಕ್ಷಣವೂ ಇರುತ್ತದೆ.

**ಅಸೃಗ್ವಸಾಶ್ಲೇಷ್ಮಸಮೀರಣಾನಾಂಶಿರೋಗತಾನಾಮಿಹಸಂಕ್ಷಯೇಣ ॥ ೬ ॥**
**ಕ್ಷಯಪ್ರವೃತ್ತಶ್ಶಿರಸೋಭಿತಾಪಃಕಷ್ಟೋಭವೇದುಗ್ರರುಜೋತಿಮಾತ್ರಂ ॥**
**ಸಂಸ್ವೇದನಚ್ಛರ್ದನಧೂಮನಸ್ಯೈರಸೃಗ್ವಿಮೋಕ್ಷೈಶ್ಚವಿವೃದ್ಧಿಮೇತಿ ॥ ೭ ॥**

ಶಿರೋಗತಗಳಾದ ರಕ್ತ, ವಸಾ, ಶ್ಲೇಷ್ಮ, ವಾಯು, ಇವುಗಳು ಕ್ಷಯಿಸೋಣದರಿಂದ ಉಂಟಾಗತಕ್ಕ ಶಿರೋರೋಗಕ್ಕೆ ಕ್ಷಯಜನ್ಯಶಿರೋರೋಗವೆಂದು ಹೆಸರು, ಇದರಲ್ಲಿ ಉಂಟಾಗತಕ್ಕ ವ್ಯಥೆಯು ಬಹಳ ಭಯಂಕರವಾಗಿರುತ್ತದೆ, ತಲೆಗೆ ಯಾವುದಾದರೂ ಶಾಖಕೊಡುವುದು, ವಾಂತಿಮಾಡಿಸುವುದು, ಹೊಗೆ ಸೇದುವುದು, ಮೂಗಿಗೆ ನಸ್ಯಹಾಕುವುದು, ಸಿರಾವ್ಯಧನಮಾಡಿ ರಕ್ತವನ್ನು ಹೊರಡಿಸುವುದು, ಇಂತಹ ಉಪಾಯಗಳಿಂದ ಈ ಕ್ಷಯಜನ್ಯವಾದ ಶಿರೋರೋಗವು ಕಡಮೆಯಾಗುವುದಿಲ್ಲ, ಹೆಚ್ಚೇ ಆಗುತ್ತದೆ.

**ನಿಸ್ತುದ್ಯತೇಯಸ್ಯಶಿರೋತಿಮಾತ್ರಂಸಂಭಕ್ಷ್ಯಮಾಣಂಸ್ಫುರತೀವಚಾಂತಃ ॥**
**ಘ್ರಾಣಾಚ್ಚಗಚ್ಛೇತ್ಸಲಿಲಂಸಪೂಯಂಶಿರೋಭಿತಾಪಃಕ್ರಿಮಿಭಿಸ್ಸಘೋರಃ ॥ ೮ ॥**

ಕ್ರಿಮಿಜನ್ಯಶಿರೋರೋಗದ ಲಕ್ಷಣವನ್ನು ಹೇಳುತ್ತಾನೆ—ತಲೆಯ ಒಳಭಾಗದಲ್ಲಿ ಸೂಜಿಯಿಂದ ಚುಚ್ಚಿದ ಹಾಗೆ ತೋರುತ್ತಿರುವುದು, ಕ್ರಿಮಿಗಳು ಒಳಗೆ ಕೀಳುತ್ತಿರುವಂತೆ ತೋರುವುದು, ಕ್ರಿಮಿಗಳು ತಲೆಯೊಳಗೆ ಓಡಾಡುತ್ತಿರುವಂತೆ ತೋರುವುದು, ಮೂಗಿನಿಂದ ಕೀವು ಮತ್ತು ನೀರು ಸಹ ಸುರಿಯುತ್ತಿರುವುದು, ಹೀಗಿದ್ದರೆ ಇದು ಕ್ರಿಮಿಜನ್ಯಶಿರೋರೋಗವೆಂದು ತಿಳಿಯಬೇಕು, ಇದು ಬಹು ಭಯಂಕರವಾದದ್ದು.

**ಸೂರ್ಯೋದಯಂವಾಪ್ರತಿಮಂದಮಂದಮಕ್ಷಿಭ್ರುವಂರುಕ್ಸಮುಪೈತಿಗಾಢಂ ॥**
**ವಿವರ್ಧತೇಚಾಂಶುಮತಾಸಹೈವಸೂರ್ಯಾಪ್ರವೃತ್ತೌವಿನಿವರ್ತತೇಚ ॥ ೯ ॥**
**ಸರ್ವಾತ್ಮಕಂಕಷ್ಟತಮಂವಿಕಾರಂಸೂರ್ಯಾಪವರ್ತಂತಮುದಾಹರಂ ॥**

ಸೂರ್ಯಾವರ್ತವೆಂಬ ಶಿರೋರೋಗದ ಲಕ್ಷಣವನ್ನು ಹೇಳುತ್ತಾನೆ—ಸೂರ್ಯೋದಯವಾಗುವ ಹೊತ್ತಿಗೆ ಸರಿಯಾಗಿ ಪ್ರತಿದಿವಸವೂ ಕಣ್ಣುಹುಬ್ಬುಗಳಲ್ಲಿ ಪ್ರಾರಂಭವಮಾಡಿಕೊಂಡು ನೋವು ಬರುವುದು, ಸೂರ್ಯನು ಗಗನ ಮಧ್ಯವನ್ನು ಏರಿದಂತೆ ಎಲ್ಲಾ ಹೆಚ್ಚಾಗುವುದು, ಸಾಯಂಕಾಲವಾಗುತ್ತ ಬಂದಂತೆಲ್ಲಾ ಕಡಮೆಯಾಗುವುದು, ರಾತ್ರಿವೇಳೆಯಲ್ಲಿ ಸೂರ್ಯನಿಲ್ಲದೆ ಹೋಗುವುದರಿಂದ ನಿಂತುಹೋಗುವುದು, ಈ ರೀತಿಯಾಗಿರುತ್ತದೆ, ಇದಕ್ಕೆ ಸೂರ್ಯಾವರ್ತವೆಂಬದಾಗಿ ಹೆಸರು, ಇದು ತ್ರಿದೋಷಪ್ರಕೋಪಜನ್ಯವಾದದ್ದು, ಚಿಕಿತ್ಸೆಗೆ ಬಹಳ ಕಷ್ಟತಮವಾದದ್ದು.

ದೋಷಾಸ್ತುದುಷ್ಟಾಸ್ತ್ರಯಏವಮನ್ಯಾಂಸಂಪೀಡ್ಯಘಾಟಾಸುರು
ಜಾಂಸುತೀವ್ರಾಂ ॥ ೧೧ ॥
ಕುರ್ವಂತಿಯೋಕ್ಷಿಭ್ರುವಿಶಂಖದೇಶೇಸ್ಥಿತಿಂಕರೋತ್ಯಾಶು
ವಿಶೇಷತಸ್ತು ॥
ಗಂಡಸ್ಯಪಾರ್ಶ್ವೇತುಕರೋತಿಕಂಪಂಹನುಗ್ರಹಂಲೋಚನ
ಜಾಂಶ್ಚರೋಗಾನ್ ॥ ೧೧ ॥
ಅನಂತವಾತಂತಮುದಾಹರಂತಿದೋಷತ್ರಯೋತ್ಥಂಶಿರಸೋ
ವಿಕಾರಂ ॥

ಅನಂತವಾತವೆಂಬ ಶಿರೋರೋಗದ ಲಕ್ಷಣವನ್ನು ಹೇಳುತ್ತಾನೆ—ಶಿರೋಗತಗಳಾದ ವಾತಾದಿತ್ರಿದೋಷಗಳು ಪ್ರಕೋಪವನ್ನು ಹೊಂದಿ ಕತ್ತಿನ ಹಿಂಭಾಗದಲ್ಲಿರತಕ್ಕ ನರವನ್ನು ಪೀಡಿಸಿ ಕಂಠದ ಹಿಂಭಾಗದಲ್ಲಿ, ಕಣ್ಣಿನಲ್ಲಿ ಹುಬ್ಬಿನಲ್ಲಿ, ಶಂಖವೆಂಬ ಮರ್ಮಸ್ಥಾನದಲ್ಲಿ ಅಂದರೆ ಕಣ್ಣಿನ ಪಾರ್ಶ್ವದಲ್ಲಿ ಕಿವಿಯ ಮುಂಭಾಗದಲ್ಲಿ ವಿಶೇಷವಾಗಿ ನೋವನ್ನುಂಟುಮಾಡುತ್ತದೆ, ಗಂಡಸ್ಥಳದಲ್ಲಿ ನಡುಕವನ್ನೂ, ದವಡೆಗಳು ಅಲ್ಲಾಡದಂತೆ ಹಿಡಿದುಕೊಳ್ಳೋಣವನ್ನೂ, ಅನೇಕ ವಿಧಗಳಾದ ನೇತ್ರರೋಗಗಳನ್ನೂ ಉಂಟುಮಾಡುತ್ತದೆ, ಇದನ್ನು ತ್ರಿದೋಷಪ್ರಕೋಪಜನ್ಯವಾದ ಅನಂತವಾತವೆಂಬ ವಾತರೋಗವೆಂದು ಕರೆಯುತ್ತಾರೆ.

ರೂಕ್ಷಾಶನಾತ್ಯಧ್ಯಶನಪ್ರಾಗ್ವಾತಾವಶ್ಯಾಯಮೈಥುನ್ಯೈಃ ॥ ೧೨ ॥
ವೇಗಸಂಧಾರಣಾಯಾಸವ್ಯಾಯಾಮೈಃಕುಪಿತೋನಿಲಃ ॥
ಕೇವಲಃಸಕಫೋವಾರ್ಧಂಗೃಹೀತ್ವಾಶಿರಸೋಬಲೀ ॥ ೧೩ ॥
ಮನ್ಯಾಭ್ರೂಶಂಖಕರ್ಣಾಕ್ಷಿಲಲಾಟಾರ್ಧೇತಿವೇದನಾಂ ॥
ಶಸ್ತ್ರಾರಣಿನಿಭಾಂಕುರ್ಯಾತ್ತೀವ್ರಾಂಸೋರ್ಧಾವಭೇದಕಃ ॥ ೧೪ ॥
ನಯನಂವಾಥವಾಶ್ರೋತ್ರಮತಿವೃದ್ಧೋವಿನಾಶಯೇತ್ ॥

ಅರ್ಧಾವಭೇದಕದ ಲಕ್ಷಣವನ್ನು ಹೇಳುತ್ತಾನೆ—ರೂಕ್ಷವಾದ ಭೋಜನ ಅಂದರೆ ಸ್ನೇಹರಹಿತವಾದ ಭೋಜನಮಾಡುವುದು, ಅತಿಯಾಗಿ ತಿನ್ನುವುದು, ಒಂದು ಬಾರಿ ಭೋಜನಮಾಡಿದ್ದು ಜೀರ್ಣಕ್ಕೆ ಬರುವುದರೊಳಗಾಗಿ ಮತ್ತೆ ಭೋಜನಮಾಡುವುದು, ತಣ್ಣನೆಯ ಗಾಳಿಯಲ್ಲಿ ತಲೆಯನ್ನು ಬಿಟ್ಟುಕೊಂಡು ತಿರುಗುವುದು, ಹಿಮದಲ್ಲಿ ತಿರುಗಾಡುವುದು, ಅತಿಯಾಗಿ ಸ್ತ್ರೀಸಂಗಮಾಡುವುದು, ಮಲಮೂತ್ರಗಳ ವೇಗವನ್ನು ತಡೆಯುವುದು, ಅತಿಯಾಗಿ ಆಯಾಸಪಡುವುದು, ಶಕ್ತಿಮೀರಿ ವ್ಯಾಯಾಮಮಾಡುವುದು, ಈ ಕಾರಣಗಳಿಂದ ಪ್ರಕೋಪಹೊಂದಿದ ವಾಯು ಕಫದೊಡನೆ ಕೂಡಿಕೊಂಡಾಗಲಿ ಅಥವಾ ಒಂದೇ ಆಗಲಿ ಪ್ರಬಲವಾಗಿ ತಲೆಯ ಅರ್ಧವನ್ನು ಹಿಡಿದುಕೊಂಡು ಕಂಠದ ಹಿಂಭಾಗದ ನರ, ಹುಬ್ಬು, ಶಂಖವೆಂಬ ಕಣ್ಣಿನ ಪಾರ್ಶ್ವದ ಮರ್ಮ, ಕಿವಿ, ಕಣ್ಣು, ಹಣೆ, ಇವುಗಳ ಒಂದು ಪಾರ್ಶ್ವದಲ್ಲಿ ಅಂದರೆ ಒಂದೇ ಪಾರ್ಶ್ವದ ಕಣ್ಣು, ಅದೇ ಪಾರ್ಶ್ವದ ಕಿವಿ ಈ ರೀತಿಯಾಗಿ ಒಂದು ಭಾಗದಲ್ಲಿ ಯಾವುದಾದರೂ ಒಂದು ಶಸ್ತ್ರದ ಏಟುಬಿದ್ದಂತೆಯೂ, ಅರಣಿಯಲ್ಲಿ ಅಗ್ನಿಯನ್ನು ಕಡತ ಹಚ್ಚಿದಂತೆಯೂ ಒಂದು ವಿಧವಾದ ನೋವನ್ನುಂಟುಮಾಡುತ್ತದೆ, ಇದು ಅತಿಯಾಗಿ ಹೆಚ್ಚಾದಲ್ಲಿ ಯಾವ ಭಾಗದಲ್ಲಿ ಇದು ಸಂಭವಿಸುತ್ತದೋ ಆ ಭಾಗದ ಕಣ್ಣನ್ನಾಗಲಿ ಕಿವಿಯನ್ನಾಗಲಿ ಹಾಳುಮಾಡುತ್ತದೆ, ಇದಕ್ಕೆ ಅರ್ಧಾವಭೇದಕವೆಂದು ಹೆಸರು.

> ರಕ್ತಪಿತ್ತಾನಿಲಾದುಷ್ಟಾಶ್ಯಂಖದೇಶೇವಿಮೂರ್ಚ್ಛಿತಾಃ ॥ ೧೫ ॥
> ತೀವ್ರರುಗ್ದಾಹರಾಗಂಹಿಶೋಥಂಕುರ್ವಂತಿದಾರುಣಂ ॥
> ಸಶಿರೋವಿಷವದ್ವೇಗೀನಿರುಧ್ಯಾಶುಗಲಂತಥಾ ॥ ೧೬ ॥
> ತ್ರಿರಾತ್ರಾಜ್ಜೀವಿತಂಹಂತಿಶಂಖಕೋನಾಮತಃಪರಂ ॥
> ತ್ರ್ಯಹಾಜ್ಜೀವತಿಭೈಷಜ್ಯಂಪ್ರತ್ಯಾಖ್ಯಾಯಸಮಾಚರೇತ್ ॥ ೧೭ ॥

ಶಂಖಕವೆಂಬ ಶಿರೋರೋಗದ ಲಕ್ಷಣವನ್ನು ಹೇಳುತ್ತಾನೆ—ಶಿರೋಗತವಾದ ರಕ್ತ, ಪಿತ್ತ, ವಾಯು, ಇವುಗಳು ಪ್ರಕುಪಿತಗಳಾಗಿ ಶಂಖದೇಶ ಎಂದರೆ ಕಣ್ಣಿನ ಪಾರ್ಶ್ವದಲ್ಲಿ ಕಿವಿಯ ಮುಂಭಾಗದಲ್ಲಿರುವ ಶಂಖವೆಂಬ ಮರ್ಮಸ್ಥಾನದಲ್ಲಿ ಶೇರಿಕೊಂಡು ಭಯಂಕರವಾದ ವ್ಯಥೆ ಉರಿ ಇವುಗಳುಂಟಾಗುವುದು, ಆ ಪ್ರದೇಶದಲ್ಲಿ ಕೆಂಪಾಗಿ ಬಾತುಹೋಗುವುದು, ಹೀಗಾಗುತ್ತದೆ, ಈ ರೋಗವು ವಿಷದ ವೇಗದಂತೆ ವೇಗವುಳ್ಳದ್ದಾಗಿ ತಲೆಯನ್ನು ಮತ್ತು ಗಂಟಲನ್ನು ಸಹ ತಡದು ವ್ಯಾಪಿಸಿಕೊಂಡು ಮೂರು ದಿವಸದೊಳಗಾಗಿ ಮನುಷ್ಯನ ಜೀವವನ್ನು ತೆಗೆದುಹಾಕುತ್ತದೆ, ಬಲವತ್ತರವಾದ ಔಷಧವನ್ನು ಮಾಡುವುದರಿಂದ ಮೂರು ದಿವಸದೊಳಗಾಗಿ ಬದುಕಬಹುದು, ಇದಕ್ಕೆ ಶಂಖಕವೆಂದು ಹೆಸರು.

ಇಲ್ಲಿಗೆ ಶಿರೋರೋಗನಿದಾನ ಸಂಪೂರ್ಣ.

# ಅಸೃಗ್ದರನಿದಾನ.

**ವಿರುದ್ಧಮದ್ಯಾಧ್ಯಶನಾದಜೀರ್ಣಾದ್ಗರ್ಭಪ್ರಪಾತಾದತಿಮೈಥುನಾಚ್ಚ ॥**
**ಯಾನಾಧ್ವಶೋಕಾದತಿಕರ್ಷಣಾಚ್ಚ ಭಾರಾಭಿಘಾತಾಚ್ಛಯನಾದ್ದಿವಾಚ ॥ ೧ ॥**
**ತಂಶ್ಲೇಷ್ಮಪಿತ್ತಾನಿಲಸನ್ನಿಪಾತೈಶ್ಚತುಃಪ್ರಕಾರಂಪ್ರದರಂ ವದಂತಿ ॥**

ಅಸೃಗ್ದರನಿದಾನವನ್ನು ಹೇಳುತ್ತಾನೆ—ಅಸೃಗ್ದರವೆಂಬುವುದು ಸಾಮಾನ್ಯವಾಗಿ ಸ್ತ್ರೀಯರಿಗೇನೇ ಸಂಭವಿಸುವ ರೋಗ, ಲೋಕವಲ್ಲಿ ವಾಡಿಕೆಯಾಗಿ ಇದನ್ನು ಶರಗುನಡೆಯುವುದೆಂದು ವ್ಯವಹರಿಸುತ್ತಾರೆ, ಇದು ಉತ್ಪನ್ನವಾಗಲು ಕಾರಣವೇನಂದರೆ—ಪರಸ್ಪರ ವಿರುದ್ಧವಾದ ಮತ್ತು ಸಂಯೋಗದಿಂದ ವಿರುದ್ಧವಾದ ಆಹಾರವನ್ನು ಭೋಜನಮಾಡುವುದು, ಅತಿಯಾಗಿ ಮದ್ಯಪಾನಮಾಡುವುದು, ಭೋಜನಮಾಡಿದ್ದು ಜೀರ್ಣವಾಗುವುದಕ್ಕೆ ಮೊದಲೇ ಭೋಜನಮಾಡುವುದು, ಅಜೀರ್ಣರೋಗ, ಗರ್ಭಪಾತವಾಗೋಣ, ಅತಿಯಾಗಿ ಪುರುಷಸಮಾಗಮಮಾಡೋಣ, ಅತಿಯಾಗಿ ವಾಹನಗಳ ಮೇಲೆ ಯಾವಾಗಲೂ ಸಂಚರಿಸುವುದು, ಅತಿಯಾಗಿ ದಾರಿ ನಡೆಯುವುದು, ಅತಿಯಾಗಿ ದುಃಖಪಡುವುದು, ಅತಿಯಾಗಿ ಲಂಘನಮಾಡುವುದು, ಭಾರವನ್ನು ಹೆಚ್ಚಾಗಿ ಹೊರುವುದು, ಅಕಸ್ಮಿಕವಾಗಿ ಪೆಟ್ಟುಬೀಳುವುದು. ಹಗಲು ಮಲಗುವುದು, ಈ ಕಾರಣಗಳಿಂದ ಈ ಪ್ರದರರೋಗವು ಹುಟ್ಟುತ್ತದೆ. ಪ್ರದರರೋಗವು ವಾತಪ್ರಕೋಪಜನ್ಯ. ಪಿತ್ತಪ್ರಕೋಪಜನ್ಯ, ಶ್ಲೇಷ್ಮಪ್ರಕೋಪಜನ್ಯ, ತ್ರಿದೋಷಸನ್ನಿಪಾತಜನ್ಯ ಎಂಬದಾಗಿ ನಾಲ್ಕು ವಿಧ.

**ಅಸೃಗ್ದರಂಭನೇತ್ಸರ್ವಂಸಾಂಗಮರ್ದಂಸವೇದನಂ ॥ ೨ ॥**
**ತಸ್ಯಾತಿವೃತ್ತೌದೌರ್ಬಲ್ಯಂಭ್ರಮೋಮೂರ್ಚ್ಛಾಮದಸ್ತೃಷಾ ॥**
**ದಾಹಃಪ್ರಲಾಪಃಪಾಂಡುತ್ವಂತಂದ್ರಾರೋಗಾಶ್ಚವಾತಜಾಃ ॥ ೩ ॥**

ಸಾಮಾನ್ಯವಾಗಿ ಈ ರೋಗದ ಲಕ್ಷಣಗಳನ್ನು ಹೇಳುತ್ತಾನೆ—ಬೆನ್ನು, ಸೊಂಟ, ಮೈ, ಕೈಕಾಲುಗಳಲ್ಲೆಲ್ಲಾ ವಡತವಿದ್ದೇ ಇರುತ್ತದೆ, ಯೋನಿದ್ವಾರದಿಂದ ಹೊರಡುವ ದ್ರವವು ಅತಿಯಾಗಿ ಹೋಗುತ್ತ ಬಂದಲ್ಲಿ ದೇಹದೌರ್ಬಲ್ಯ, ಬುದ್ಧಿಭ್ರಮಣೆ, ಅಗಾಗ್ಯೆ ಮೂರ್ಛೆಬರುವುದು, ಒಂದು ಬಗೆಯ ಮತ್ತತೆಯುಂಟಾಗುವುದು, ಬಾಯಾರಿಕೆ, ಮೈಯ್ಯುರಿ, ಕಾರಣವಿಲ್ಲದೆ ರೋದನಮಾಡುವುದು, ಶರೀರವೆಲ್ಲಾ ಬೆಳ್ಳಗಾಗಿಹೋಗುವುದು, ಆಕಳಿಕೆ ಹೆಚ್ಚಾಗುವುದು, ವಾತಸಂಬಂಧವಾದ ವಿಕಾರಗಳೆಲ್ಲವೂ ಕಾಣಿಸಿಕೊಳ್ಳುವುದು, ಈ ಲಕ್ಷಣಗಳಾಗುತ್ತವೆ.

ಆಮಂಸಪಿಚ್ಛಾಪ್ರತಿಮಂಸಪಾಂಡುಪುಲಾಕತೋಯಪ್ರತಿಮಂ
ಕಫಾತ್ತು ॥
ಸಪೀತನೀಲಾಸಿತರಕ್ತಮುಷ್ಣಂಪಿತ್ತಾರ್ತಿಯುಕ್ತಂಭೃಶವೇಗಿ
ಪಿತ್ತಾತ್ ॥ ೪ ॥
ರೂಕ್ಷಾರುಣಂಫೇನಿಲಮಲ್ಪಮಲ್ಪಂವಾತಾರ್ತಿವಾತಾತ್ಪಿಶಿತೋ
ದಕಾಭಂ ॥
ಸಕ್ಷೌದ್ರಸರ್ಪಿರ್ಹರಿತಾಲವರ್ಣಂಮಜ್ಜಾಪ್ರಕಾಶಂಕುಣಪಂ
ತ್ರಿದೋಷಾತ್ ॥ ೫ ॥
ತಂಚಾಪ್ಯಸಾಧ್ಯಂಪ್ರವದಂತಿತದ್ಜ್ಞಾನತತ್ರಕುರ್ವೀತಭಿಷಕ್
ಚಿಕಿತ್ಸಾಂ ॥

ಕಫಪ್ರಕೋಪಜನ್ಯವಾದ ಪ್ರದರರೋಗದಲ್ಲಿ ಸ್ರಾವವು ಅಂಟಾದರಸವೊಡನೆ ಕೂಡಿರುವುದು, ಬೂರಗದ ಮರದಿಂದ ಸ್ರವಿಸುವ ರಸದ ಬಣ್ಣದಂತಹ ಬಣ್ಣದ್ದಾಗಿರುವುದು, ಅದರ ಜೊತೆಗೆ ಕೊಂಚ ಪಾಂಡುವರ್ಣವೂ ಸೇರಿಕೊಂಡಿರುವುದು, ಮಾಂಸವನ್ನು ತೊಳೆದ ನೀರಿನಂತಹ ವಾಸನೆಯುಳ್ಳದ್ದಾಗಿರುವುದು ಹೀಗಿರುತ್ತದೆ, ಪಿತ್ತಪ್ರಕೋಪಜನ್ಯವಾದ ಪ್ರದರರೋಗದಲ್ಲಿ ಸ್ರಾವದ ವರ್ಣವು ಹಳದಿಯ ಬಣ್ಣ, ಕಪ್ಪು ಬಣ್ಣ, ನೀಲೀ ಬಣ್ಣ, ರಕ್ತದ ಬಣ್ಣದಂತಹ ವರ್ಣವುಳ್ಳದ್ದಾಗಿರುವುದು, ಬಿಸಿಯಾಗಿರುವುದು, ಪಿತ್ತ ಸಂಬಂಧವಾದ ವೇದನೆಗಳೆಲ್ಲಾ ಇರುವುದು, ಸ್ರಾವದ ವೇಗವು ಬಹಳವಾಗಿರುವುದು, ಈ ಲಕ್ಷಣ ವಾತಪ್ರಕೋಪ ಜನ್ಯವಾದ ಪ್ರದರರೋಗದಲ್ಲಿ ಸ್ರಾವವು ರೂಕ್ಷವಾಗಿರುವುದು ಅಂದರೆ ಸ್ರಾವವನ್ನು ಮುಟ್ಟಿನೋಡಿದರೆ ಸ್ವಲ್ಪವೂ ಜಿಡ್ಡಿರುವುದಿಲ್ಲ, ಅರುಣವರ್ಣವಾಗಿರುವುದು ಅಂದರೆ ಬಿಳುಪು ಕೂಡಿದ ಕೆಂಪು ಬಣ್ಣ. ಸ್ರಾವದೊಂದಿಗೆ ನೊರೆಯೂ ಸೇರಿರುವುದು, ಮಾಂಸದ ನೀರಿನಂತಿರುವುದು, ವಾತದ ಸಂಬಂಧವಾದ ವೇದನೆಯೊಂದ ಕೂಡಿ ಕೊಂಚಕೊಂಚವೇ ಸ್ರಾವವು ಆಗುತ್ತಿರುವುದು. ಇವು ಲಕ್ಷಣಗಳು, ತ್ರಿದೋಷಪ್ರಕೋಪಜನ್ಯವಾದ ಪ್ರದರರೋಗದಲ್ಲಿ ಸ್ರಾವವು ಜೇನುತುಪ್ಪದೊಡನೆ ಕೂಡಿದ ತುಪ್ಪದ ವರ್ಣವುಳ್ಳದ್ದಾಗಿಯೂ ಹಳದಿಯ ಬಣ್ಣದ್ದಾಗಿಯೂ ಮಜ್ಜ ಅಂದರೆ ಅಸ್ಥಿರಸದಂತೆಯೂ ಶವದ ವಾಸನೆಯುಳ್ಳದ್ದಾಗಿಯೂ ಇರುತ್ತದೆ, ಈ ತ್ರಿದೋಷಪ್ರಕೋಪಜನ್ಯವಾದ ಪ್ರದರರೋಗವು ಅಸಾಧ್ಯವಾದದ್ದೆಂದು ಹೇಳುವುದರಿಂದ ಅದಕ್ಕೆ ಚಿಕಿತ್ಸೆ ಮಾಡಲು ವೈದ್ಯನಾದವನು ಪ್ರಯತ್ನಪಡಬಾರದು.

ಶಶ್ವತ್ ಸ್ರವಂತೀಮಾಸ್ರಾವಂತೃಷ್ಣಾದಾಹಜ್ವರಾನ್ವಿತಾಂ ॥ ೬ ॥
ಕ್ಷೀಣರಕ್ತಾಂದುರ್ಬಲಾಂಚತಾಮಸಾಧ್ಯಾಂವಿನಿರ್ದಿಶೇತ್ ॥

ಪ್ರದರರೋಗದ ಅಸಾಧ್ಯಲಕ್ಷಣವನ್ನು ಹೇಳುತ್ತಾನೆ—ಸ್ರಾವವು ಪದೇ ಪದೇ ಆಗುತ್ತಿರುವುದು, ಬಾಯಾರಿಕೆ, ಮೈಯ್ಯುರಿ, ಜ್ವರ, ಇವುಗಳಿಂದ ಕೂಡಿರುವುದು, ದುರ್ಬಲ ಬಹಳವಾಗಿರುವುದು, ರೋಗಿಗೆ ಈ ಲಕ್ಷಣಗಳೆಲ್ಲಾ ಇದ್ದಲ್ಲಿ ಅಸಾಧ್ಯವೆಂದು ತಿಳಿಯಬೇಕು.

**ಮಾಸಾನ್ನಿಷ್ಪಿಚ್ಛದಾಹಾರ್ತಿಪಂಚರಾತ್ರಾನುಬಂಧಿಚ ॥ ೭ ॥**
**ನೈವಾತಿಬಹುಲಾತ್ಯಲ್ಪಮಾರ್ತವಂಶುದ್ಧಮಾದಿಶೇತ್ ॥**
**ಶಶಾಸೃಕ್ಪ್ರತಿಮಂಯಚ್ಚ ಯದ್ವಾಲಾಕ್ಷಾರಸೋಪಮಂ ॥ ೮ ॥**
**ತದಾರ್ತವಂಪ್ರಶಂಸಂತಿಯದ್ವಾಸೋನವಿರಂಜಯೇತ್ ॥**

ದುಷ್ಟಾರ್ತವ ದೆಸೆಯಿಂದ ಉಂಟಾಗುವ ಪ್ರದರರೋಗವನ್ನು ಹೇಳಿ ಪ್ರಕರಣಾನುರೋಧೇನ ಶುದ್ಧಾರ್ತವದ ಲಕ್ಷಣವನ್ನು ಹೇಳುತ್ತಾನೆ—ತಿಂಗಳಿಗೊಂದಾವರ್ತಿ ಹೊರಬೀಳುತ್ತಿರಬೇಕು. ಸ್ರಾವವು ಐದು ದಿವಸ ನಡೆಯಬೇಕು, ಸ್ರಾವವು ಜಿಗಟಾಗಿರಬಾರದು, ಉರಿಯಾಗಲಿ ನೋವಾಗಲಿ ಇರಬಾರದು, ಸ್ರಾವವು ಅತಿ ಹೆಚ್ಚಾಗಿಯೂ ಇರಬಾರದು, ಅತ್ಯಲ್ಪವಾಗಿಯೂ ಇರಬಾರದು, ಒಂದೇ ವಿಧವಾಗಿರಬೇಕು, ಇದು ಶುದ್ಧವಾದ ಆರ್ತವದ ಲಕ್ಷಣ, ಆರ್ತವದ ಬಣ್ಣವು ಮೊಲದ ರಕ್ತದಂತೆಯೂ ಅರಗಿನ ಕಷಾಯದಂತೆಯೂ ಇದ್ದು ಬಟ್ಟೆಗೆ ತಗುಲಿದರೆ ಅದರ ಬಣ್ಣವು ನಿಲ್ಲಬಾರದು. ಹೀಗಿದ್ದಲ್ಲಿ ಅದು ರೋಗರಹಿತವಾಗಿ ಶುದ್ಧವಾದದ್ದೆಂದು ವೈದ್ಯಶಾಸ್ತ್ರಜ್ಞರು ಪ್ರಶಂಸಿಸುತ್ತಾರೆ.

ಇಲ್ಲಿಗೆ ಪ್ರದರರೋಗನಿದಾನ ಸಂಪೂರ್ಣ.

---

## ಯೋನಿವ್ಯಾಪನ್ನಿದಾನ.

**ವಿಂಶತಿರ್ವ್ಯಾಪದೋಯೋನೇರ್ನಿರ್ದಿಷ್ಟಾರೋಗಸಂಗ್ರಹೇ ॥**
**ಮಿಥ್ಯಾಚಾರೇಣತಾಸ್ತ್ರೀಣಾಂಪ್ರದುಷ್ಟೇನಾರ್ತವೇನಚ ॥ ೧ ॥**
**ಜಾಯಂತೇಬೀಜದೋಷಾಚ್ಚ ದೈವಾಚ್ಚ ಶೃಣುತಾಃಪೃಥಕ್ ॥**

ಯೋನಿರೋಗಗಳನ್ನು ಸಂಗ್ರಹಿಸಿ ಹೇಳತಕ್ಕ ಪ್ರಕರಣದಲ್ಲಿ ಯೋನಿರೋಗಗಳು ಇಪ್ಪತ್ತೆಂಬದಾಗಿ ಸಂಗ್ರಹಿಸಿ ಹೇಳಿದ್ದಾರೆ, ಈ ಇಪ್ಪತ್ತು ವಿಧವಾದ ಯೋನಿರೋಗಗಳೂ ಪ್ರಕೃತಿ ವಿರುದ್ಧಗಳಾದ ಆಹಾರವಿಹಾರಗಳನ್ನು ಅನುಸರಿಸುವುದರಿಂದಲೂ, ವಾತಾದಿಪ್ರಕೋಪಗಳಿಂದ ದುಷ್ಟವಾದ ರಜಸ್ಸಿನ ದೋಷದಿಂದಲೂ, ತಾಯಿತಂದೆಗಳ ಬೀಜದಲ್ಲಿ ಅನುಸ್ಯೂತವಾದ ದೋಷವು ವ್ಯಾಪಿಸಿಕೊಳ್ಳೋಣದರಿಂದಲೂ, ಪ್ರಾರಬ್ಧ ಕರ್ಮ ವಿಶೇಷದಿಂದಲೂ ಅಂತೂ ಈ ರೀತಿಯಾದ ನಾಲ್ಕು ವಿಧ ಕಾರಣಗಳಿಂದ ಹುಟ್ಟುತ್ತವೆ.

ಸಾಫೇನಿಲಮುದಾವರ್ತಾರಜಃಕೃಚ್ಛ್ರೇಣಮುಂಚತಿ ॥ ೨ ॥
ವಂಧ್ಯಾಂನಷ್ಟಾರ್ತವಾಂವಿದ್ಯಾದ್ವಿಪ್ಲುತಾಂನಿತ್ಯವೇದನಾಂ ॥
ಪರಿಪ್ಲುತಾಯಾಂಭವತಿಗ್ರಾಮ್ಯಧರ್ಮೇಣರುಗ್ಭೃಶಂ ॥ ೩ ॥
ವಾತಲಾಕರ್ಕಶಾಸ್ತಬ್ಧಾಶೂಲನಿಸ್ತೋದಪೀಡಿತಾ ॥
ಚತಸೃಷ್ವಪಿಚಾದ್ಯಾಸುಭವಂತ್ಯನಿಲವೇದನಾಃ ॥ ೪ ॥

ಕ್ರಮವಾಗಿ ಇಪ್ಪತ್ತು ವಿಧವಾದ ಯೋನಿರೋಗದ ಲಕ್ಷಣಗಳನ್ನು ಹೇಳುತ್ತಾನೆ—ಯೋನಿದ್ವಾರವು ಊರ್ಧ್ವಮುಖವಾಗಿ ತೆರದು ನೊರೆಯಿಂದ ಕೂಡಿದ ರಜಸ್ಸು ಅತ್ಯಂತ ಕಷ್ಟದಿಂದ ಹೊರಡುತ್ತಿರುತ್ತದೆ ಇದೊಂದು ವಿಧ, ತಿಂಗಳು ತಿಂಗಳಿಗೆ ಹೊರಡುವ ರಜಃಪ್ರವೃತ್ತಿಯೇ ನಷ್ಟವಾಗಿ ಹೋಗುವುದು ಇದೊಂದು ವಿಧ, ಇದಕ್ಕೆ ವಂಧ್ಯಾ ಎಂದು ಹೆಸರು, ವಿಪ್ಲುತಾ ಎಂಬುವುದೊಂದು ವಿಧ, ಇವರಲ್ಲಿ ಯೋನಿಯಲ್ಲಿ ವೇದನೆಯು ನಿತ್ಯವಾಗಿರುತ್ತದೆ, ಪರಿಪ್ಲುತಾ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಪುರುಷಸಂಪರ್ಕವುಂಟಾದರೆ ಅತಿಯಾಗಿ ವ್ಯಥೆಯಾಗುತ್ತದೆ, ವಾತಲಾ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಯೋನ್ಯವಯವವು ಕಠಿನವಾಗಿಯೂ ಸ್ತಬ್ಧವಾಗಿಯೂ ಶೂಲೆ ಮತ್ತು ಅತಿಯಾದ ವ್ಯಥೆ ಇವುಗಳಿಂದ ಕೂಡಿದ್ದಾಗಿಯೂ ಇರುತ್ತದೆ, ಮೊದಲು ಹೇಳಿದ ನಾಲ್ಕು ವಿಧವಾದ ಯೋನಿರೋಗಗಳಲ್ಲಿ ವಾತಪ್ರಕೋಪಜನ್ಯವಾದ ವೇದನೆಗಳು ಕಾಣುತ್ತಿರುತ್ತವೆ.

ಸದಾಹಂಕ್ಷೀಯತೇರಕ್ತಂಯಸ್ಯಾಂಸಾಲೋಹಿತಕ್ಷಯಾ ॥
ಸವಾತಮುದ್ಗಿರೇದ್ಬೀಜಂವಾಮಿನೀರಜಸಾಯುತಂ ॥ ೫ ॥
ಪ್ರಸ್ರಂಸಿನೀಸ್ರಂಸತೇಚಕ್ಷೋಭಿತಾದುಷ್ಪ್ರಜಾಯಿನೀ ॥
ಸ್ಥಿತಂಸ್ಥಿತಂಹಂತಿಗರ್ಭಂಪುತ್ರಘ್ನೀರಕ್ತಸಂಕ್ಷಯಾತ್ ॥ ೬ ॥
ಅತ್ಯರ್ಥಂಪಿತ್ತಲಾಯೋನಿರ್ದಾಹಪಾಕಜ್ವರಾನ್ವಿತಾ ॥
ಚತಸೃಷ್ವಪಿಚಾದ್ಯಾಸುಪಿತ್ತಲಿಂಗೋಚ್ಛ್ರಯೋಭವೇತ್ ॥ ೭ ॥

ಲೋಹಿತಕ್ಷಯಾ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಯೋನಿಯಲ್ಲಿ ಉರಿಯೊಡನೆ ರಕ್ತವು ಕ್ಷಯಿಸುತ್ತ ಬರುತ್ತದೆ, ವಾಮಿನೀ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಗರ್ಭಾಧಾನ ಮಾಡಲ್ಪಟ್ಟ ಪುರುಷಬೀಜವು ಪುನಃ ರಜಸ್ಸಿನೊಡನೆ ಹಿಂದಕ್ಕೇನೇ ಬಂದುಬಿಡುತ್ತದೆ, ಪ್ರಸ್ರಂಸಿನೀ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಯೋನ್ಯವಯವವೇ ಹೊರಕ್ಕೆ ಜಾರಿ ಬಂದು ಬಿಡುತ್ತದೆ, ದುಷ್ಪ್ರಜಾಯಿನೀ

ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ವಾತದಿಂದ ಯೋನಿಯಲ್ಲಿ ಕ್ಷೋಭೆಯುಂಟಾಗಿ ಗರ್ಭವತಿಯಾದ ಕಾಲದಲ್ಲಿ ಪ್ರಸುವಿಸುವುದೇ ಕಷ್ಟವಾಗುತ್ತದೆ, ಪುತ್ರಘ್ನಿ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ವಾತಪ್ರಕೋಪದಿಂದ ಋತುರಕ್ತವು ಕ್ಷಯಿಸಿಹೋಗಿ ನಿಂತ ಗರ್ಭವೆಲ್ಲವೂ ನಷ್ಟವಾಗಿಯೇ ಹೋಗುತ್ತದೆ, ಪಿತ್ತಲಾ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಯೋನಿಯಲ್ಲಿ ಅತಿಯಾಗಿ ದಾಹ ಎಂದರೆ ಉರಿ, ಯೋನಿಪಾಕ, ಇವರೊಟ್ಟಿಗೆ ಜ್ವರ ಸಹಾ ಇರುತ್ತವೆ, ಹಿಂದೆ ಹೇಳಿದ ಮೊದಲಿನ ನಾಲ್ಕು ವಿಧವಾದ ಯೋನಿರೋಗಗಳಲ್ಲಿ ಪಿತ್ತಪ್ರಕೋಪ ಲಕ್ಷಣಗಳು ಹೆಚ್ಚಾಗಿ ಕಾಣುತ್ತಿರುತ್ತವೆ.

ಅತ್ಯಾನಂದಾನಸಂತೋಷಂಗ್ರಾಮ್ಯಧರ್ಮೇಣಗಚ್ಛತಿ ॥
ಕರ್ಣಿನ್ಯಾಂಕರ್ಣಿಕಾಯೋನೌಶ್ಲೇಷ್ಮಾಸೃಗ್ಭ್ಯಾಂಚಜಾಯತೇ॥೮॥
ಮೈಥುನೇಚರಣಾತ್ಪೂರ್ವಂಪುರುಷಾದತಿರಿಚ್ಯತೇ ॥
ಬಹುಶಶ್ಚಾತಿಚರಣಾತಯೋರ್ಬೀಜಂನವಿಂದತಿ ॥ ೯ ॥
ಶ್ಲೇಷ್ಮಜಾಪಿಚ್ಛಿಲಾಯೋನಿಃಕಂಡೂಗ್ರಸ್ತಾತಿಶೀತಲಾ ॥
ಚತಸೃಷ್ವಪಿಚಾದ್ಯಾಸುಶ್ಲೇಷ್ಮಲಿಂಗೋಚ್ಛ್ರಯೋಭವೇತ್ ॥೧೦॥

ಅತ್ಯಾನಂದಾ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗವುಳ್ಳವಳಿಗೆ ಪುರುಷಸಂಭೋಗವನ್ನು ಎಷ್ಟು ಸಾರಿ ಮಾಡಿದರೂ ತೃಪ್ತಿಯೇ ಆಗುವುದಿಲ್ಲ, ಕರ್ಣಿನಿ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗದಲ್ಲಿ ಶ್ಲೇಷ್ಮ ಮತ್ತು ರಕ್ತಗಳ ಪ್ರಕೋಪದಿಂದ ಯೋನಿಯಲ್ಲಿ ಒಂದು ಬಗೆಯ ಗ್ರಂಥಿಯುಂಟಾಗುತ್ತದೆ, ಅಚರಣ, ಅತಿಚರಣ ಎಂಬುವವೂ ಯೋನಿರೋಗಗಳು, ಸ್ತ್ರೀಪುರುಷರು ಕೂಡಿ ನಡೆಸತಕ್ಕ ಮೈಥುನಕ್ರಿಯೆಯಲ್ಲಿ ಅಚರಣ ಎಂಬ ಯೋನಿರೋಗಯುಕ್ತಳಾದ ಸ್ತ್ರೀಯು ಪುರುಷನಿಗಿಂತಲೂ ಮೊದಲೇ ಸೋತುಹೋಗುತ್ತಾಳೆ. ಅತಿಚರಣ ಎಂಬ ಯೋನಿರೋಗಯುಕ್ತಳಾದ ಸ್ತ್ರೀಯು ಶ್ಲೇಷ್ಮಪ್ರಕೋಪದಿಂದ ಯೋನಿಯಲ್ಲಿ ಅತ್ಯಂತ ನವೆಯುಂಟಾಗುವುದರಿಂದ ಪುರುಷನು ಮೈಥುನಕ್ರಿಯೆಯಿಂದ ವಿಶ್ರಾಂತನಾದರೂ ಅವಳಿಗೆ ಪರ್ಯಾಪ್ತಿಯೇ ಉಂಟಾಗುವುದಿಲ್ಲ, ಈ ಕಾರಣಗಳಿಂದಲೇ ಈ ಎರಡು ವಿಧವಾದ ಯೋನಿರೋಗದವರಿಗೂ ಬೀಜಗ್ರಹಣಸಾಮರ್ಥ್ಯವೇ ಇರುವುದಿಲ್ಲ. ಪಿಚ್ಛಿಲಾ ಎಂಬುವುದೊಂದು ಬಗೆಯ ಯೋನಿರೋಗ, ಇದರಲ್ಲಿ ಯೋನ್ಯವಯವನ್ನು ಮುಟ್ಟಿನೋಡಿದರೆ ಜಿಗಟಾಗಿರುತ್ತದೆ, ನವೆ ಬಹಳವಾಗಿರುತ್ತದೆ, ಅತಿಯಾಗಿ ತಣ್ಣಗಿರುತ್ತದೆ, ಹಿಂದೆ ಹೇಳಿದ ಮೊದಲಿನ ನಾಲ್ಕು ವಿಧವಾದ ಯೋನಿರೋಗಗಳಲ್ಲಿಯೂ ಶ್ಲೇಷ್ಮಪ್ರಕೋಪಲಕ್ಷಣಗಳೇ ವಿಶೇಷವಾಗಿ ಕಾಣುತ್ತಿರುತ್ತವೆ.

ಅನಾರ್ತವಾಸ್ತನೀಷಂಡೀಖರಸ್ಪರ್ಶಾಚಮೈಥುನೇ ॥
ಅತಿಕಾಯಗೃಹೀತಾಯಾಸ್ತರುಣ್ಯಾಸ್ತ್ವಂಡಲೀಭವೇತ್ ॥ ೧೧ ॥
ವಿವೃತಾಚಮಹಾಯೋನಿಸ್ಸೂಚೀವಕ್ತ್ರಾತಿಸಂವೃತಾ ॥
ಸರ್ವಲಿಂಗಸಮುತ್ಥಾನಾಸರ್ವದೋಷಪ್ರಕೋಪಜಾ ॥ ೧೨ ॥
ಚತಸೃಷ್ವಪಿಚಾದ್ಯಾಸುಸರ್ವಲಿಂಗೋಚ್ಛ್ರಯೋಭವೇತ್ ॥
ಪಂಚಾಸಾಧ್ಯಾಭವಂತೀಹಯೋನಯಸ್ಸರ್ವದೋಷಜಾಃ ॥ ೧೩ ॥

ಷಂಡೀ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗಯುಕ್ತಳಾದ ಹೆಂಗಸಿಗೆ ಪ್ರತಿ ತಿಂಗಳೂ ಆಗಬೇಕಾದ ರಜೋದರ್ಶನವೇ ಆಗುವುದಿಲ್ಲ, ಎದೆಯ ಮೇಲೆ ಸ್ತನಗಳು ಕಾಣುತ್ತಿರುವುದಿಲ್ಲ, ಹಾಗು ಇಂತವಳಲ್ಲಿ ಮೈಥುನ ಕ್ರಿಯೆಯನ್ನು ನಡೆಯಿಸುವುದಾದರೆ ಸ್ಪರ್ಶದಲ್ಲಿ ಸ್ತ್ರೀಜಾತಿಸಹಜವಾದ ಮಾರ್ದವ ಕೋಮಲಗುಣಗಳ ಸಂಪರ್ಕವೇ ಇರುವುದಿಲ್ಲ, ಅಂಡಲೀ ಎಂಬುವುದೊಂದು ಬಗೆಯ ಯೋನಿರೋಗ, ಈ ರೋಗವು ಸ್ತ್ರೀಯರ ಯೋನಿಗಿಂತಲೂ ಪುರುಷರ ಶಿಶ್ನೇಂದ್ರಿಯವು ಎರಡು ಮೂರು ಪಾಲು ದೊಡ್ಡದಾಗಿದ್ದು ಅಂತಹ ಶಿಶ್ನೇಂದ್ರಿಯದಿಂದ ಪದೇ ಪದೇ ಘರ್ಷಣ ಉಂಟಾಗಿ ಆ ಕಾರಣದಿಂದ ಯೋನಿಯ ಕೆಳಭಾಗದಲ್ಲಿ ಪುರುಷರ ವೃಷಣದಂತೆ ಒಂದು ಬಗೆಯ ಮಾಂಸಗೋಳವು ನೇತುಬೀಳುತ್ತದೆ, ಇದಕ್ಕೆ ಅಂಡಲಿ ಎಂದು ಹೆಸರು, ಯೋನಿದ್ವಾರವು ಅತಿಯಾಗಿ ವಿಸ್ತರಿಸಿಕೊಂಡಿದ್ದಲ್ಲಿ ವಿವೃತಾ ಎಂದೂ, ಅತಿಯಾಗಿ ಸಂಕುಚಿತವಾಗಿದ್ದಲ್ಲಿ ಅಂದರೆ ಸೂಜಿಯ ಮೊನೆಯಷ್ಟು ಸಣ್ಣದಾಗಿದ್ದಲ್ಲಿ ಸಂವೃತಾ ಎಂದೂ ಹೆಸರು. ಈ ಹಿಂದೆ ಹೇಳಿದ ಯೋನಿರೋಗಗಳಲ್ಲಿ ತ್ರಿದೋಷಗಳ ಲಕ್ಷಣಗಳೂ ಕಾಣುತ್ತಿರುತ್ತವೆ. ತ್ರಿದೋಷಗಳ ಪ್ರಕೋಪವೂ ಇದ್ದೇ ಇರುತ್ತದೆ, ಸರ್ವದೋಷಪ್ರಕೋಪಜನ್ಯಗಳಾದ ಈ ಯೋನಿರೋಗಗಳು ಅಸಾಧ್ಯಗಳೆಂದು ತಿಳಿಯಬೇಕು.

ಇಲ್ಲಿಗೆ ಯೋನಿವ್ಯಾಪನ್ನಿದಾನ ಸಂಪೂರ್ಣ.

---

## ಯೋನಿಕಂದನಿದಾನ.

ದಿವಾಸ್ವಪ್ನಾದತಿಕ್ರೋಧಾದ್ವ್ಯಾಯಾಮಾದತಿಮೈಥುನಾತ್ ॥
ಕ್ಷತಾಚ್ಚನಖದಂತಾದ್ಯೈರ್ವಾತಾದ್ಯಾಃಕುಪಿತಾಯದಾ ॥ ೧ ॥
ಪೂಯಶೋಣಿತಸಂಕಾಶಂನಿಕುಚಾಕೃತಿಸನ್ನಿಭಂ ॥
ಜನಯಂತಿಯದಾಯೋನೌನಾಮ್ನಾಕಂದಸ್ಸಯೋನಿಜಃ ॥ ೨ ॥

ಯೋನಿಕಂದನಿದಾನವನ್ನು ಹೇಳುತ್ತಾನೆ—ಹಗಲುಹೊತ್ತು ಮಲಗೋಣ, ಅತಿಯಾಗಿ ಸಿಟ್ಟುಮಾಡೋಣ, ಅತಿಯಾಗಿ ವ್ಯಾಯಾಮಮಾಡೋಣ, ಮಿತಿ ಮೀರಿ ಮೈಥುನಕ್ರಿಯೆಯನ್ನು ಆಚರಿಸೋಣ, ಕಾಮಶಾಸ್ತ್ರ ಪ್ರಸಿದ್ಧಗಳಾದ ನಖಕ್ಷತ, ದಂತಕ್ಷತ ಅಂದರೆ ಉಗುರಿನ ಗಾಯ, ಹಲ್ಲಿನ ಗಾಯಗಳನ್ನು ಯೋನಿ ಪ್ರದೇಶದಲ್ಲಿ ಮಾಡೋಣ, ಈ ಕಾರಣಗಳಿಂದ ಭಗಸ್ಥಾನಗತಗಳಾದ ವಾತಾದಿ ಗಳು ಪ್ರಕೋಪವನ್ನು ಹೊಂದಿ ಯೋನಿಪ್ರದೇಶದಲ್ಲಿ ವರ್ತುಲಾಕಾರವಾದ ರಕ್ತ ಮತ್ತು ಕೀವುಗಳಿಂದ ಕೂಡಿರುವ ಒಂದು ಗ್ರಂಥಿಯನ್ನುಂಟುಮಾಡುತ್ತವೆ, ಈ ರೋಗಕ್ಕೆ ಯೋನಿಕಂದವೆಂಬದಾಗಿ ಹೆಸರು.

ರೂಕ್ಷಂವಿವರ್ಣಂಸ್ಫುಟಿತಂವಾತಿಕಂತಂವಿನಿರ್ದಿಶೇತ್ ॥
ದಾಹರಾಗಜ್ವರಯುತಂವಿದ್ಯಾತ್ಪಿತ್ತಾತ್ಮಕಂತುತಂ ॥ ೩ ॥
ನೀಲಪುಷ್ಪಪ್ರತೀಕಾಶಂಕಂಡೂಮಂತಂಕಫಾತ್ಮಕಂ ॥
ಸರ್ವಲಿಂಗಸಮಾಯುಕ್ತಂಸನ್ನಿಪಾತಾತ್ಮಕಂವಿದುಃ ॥ ೪ ॥

ಈ ಯೋನಿಕಂದವು ಮುಟ್ಟಿದರೆ ರೂಕ್ಷವಾಗಿಯೂ ಅಂದರೆ ಜಿಡ್ಡಿಲ್ಲ ದ್ದಾಗಿಯೂ ಮಾಸಲುಬಣ್ಣದ್ದಾಗಿಯೂ ಒಡೆದುಹೋಗುವಂತಹ ವೇದನೆಯುಳ್ಳ ದ್ದಾಗಿಯೂ ಇದ್ದಲ್ಲಿ ವಾತಪ್ರಕೋಪಜನ್ಯವೆಂಬದಾಗಿಯೂ, ಉರಿ, ಕೆಂಪು, ಜ್ವರ ಇವುಗಳಿದ್ದರೆ ಪಿತ್ತಪ್ರಕೋಪಜನ್ಯವೆಂಬದಾಗಿಯೂ, ನೀಲವರ್ಣವಾಗಿ ನವೆ ಯಿಂದ ಕೂಡಿದ್ದರೆ ಕಫಪ್ರಕೋಪಜನ್ಯವೆಂಬದಾಗಿಯೂ, ಸಮಸ್ತ ದೋಷಗಳ ಲಕ್ಷಣಗಳೂ ಕೂಡಿದ್ದಲ್ಲಿ ಯೋನಿಕಂದವು ತ್ರಿದೋಷಸನ್ನಿಪಾತಜನ್ಯವೆಂಬ ದಾಗಿಯೂ ತಿಳಿಯಬೇಕು.

ಇಲ್ಲಿಗೆ ಯೋನಿಕಂದನಿದಾನ ಸಂಪೂರ್ಣ.

---

## ಮೂಢಗರ್ಭನಿದಾನ.

ಭಯಾಭಿಘಾತಾತ್ತೀಕ್ಷ್ಣೋಷ್ಣಪಾನಾಶನನಿಷೇವಣಾತ್ ॥
ಗರ್ಭೇಪತತಿರಕ್ತಸ್ಯಸಶೂಲಂದರ್ಶನಂಭವೇತ್ ॥ ೧ ॥

ಗರ್ಭಪಾತಕ್ಕೆ ಪೂರ್ವಭಾವಿಯಾಗಿ ಉಂಟಾಗುವ ಲಕ್ಷಣ ಕಾರಣಗಳನ್ನು ಹೇಳುತ್ತಾನೆ—ಗರ್ಭಿಣಿಯಾದ ಸ್ತ್ರೀಯರು ಹೆದರುವುದು, ಗರ್ಭಕ್ಕೆ ಏಟುಬೀಳು ವುದು, ತೀಕ್ಷ್ಣವಾದ ಮತ್ತು ಉಷ್ಣವಾದ ಪದಾರ್ಥಗಳನ್ನು ಗರ್ಭಿಣಿಯರು ಸೇವಿಸುವುದು, ಈ ಕಾರಣಗಳಿಂದ ಗರ್ಭಪಾತವುಂಟಾಗುತ್ತದೆ, ಗರ್ಭಪಾತ ವುಂಟಾಗುವ ಪೂರ್ವದಲ್ಲಿ ಯೋನಿ ಮತ್ತು ಆ ಭಾಗಗಳಲ್ಲೆಲ್ಲಾ ಶೂಲೆಯುಂಟಾಗಿ ಯೋನಿದ್ವಾರದಿಂದ ರಕ್ತವು ಹೊರಡುವುದಕ್ಕಾರಂಭವಾಗುತ್ತದೆ.

**ಆಚತುರ್ಥಾತ್ತತೋಮಾಸಾತ್ಪ್ರಸ್ರವೇದ್ಗರ್ಭವಿದ್ರವಃ ॥**
**ತತಃಸ್ಥಿರಶರೀರಸ್ಯಪಾತಃಪಂಚಮಷಷ್ಠಯೋಃ ॥ ೨ ॥**

ಗರ್ಭಸ್ರಾವ ಮತ್ತು ಗರ್ಭಪಾತಗಳಿಗೆ ಇರತಕ್ಕ ವ್ಯತ್ಯಾಸವನ್ನು ಹೇಳುತ್ತಾನೆ—ಗರ್ಭವು ಪ್ರಾರಂಭವಾದ ನಾಲ್ಕು ತಿಂಗಳ ವರಿಗೂ ಗರ್ಭವು ದ್ರವರೂಪವಾಗಿರುತ್ತದೆ, ಆ ಕಾಲದಲ್ಲಿ ಯಾವುದಾದರೂ ಕಾರಣದಿಂದ ಗರ್ಭದ್ರವವೇ ಹೊರಬಿದ್ದುಹೋದಲ್ಲಿ ಅದಕ್ಕೆ ಸ್ರಾವವೆಂದು ಹೆಸರು, ನಾಲ್ಕು ತಿಂಗಳು ಕಳದ ಮೇಲೆ ಗರ್ಭವು ಒಂದು ವಿಧವಾಗಿ ಘನೀಭಾವವನ್ನು ಹೊಂದಿ ಆಕಾರಕ್ಕೆ ಬರುತ್ತದೆ, ನಂತರ ಐದು ಮತ್ತು ಆರನೆಯ ತಿಂಗಳುಗಳಲ್ಲಿ ಕಾರಣಾಂತರದಿಂದ ಗರ್ಭವು ಗಳಿತವಾದಲ್ಲಿ ಅದಕ್ಕೆ ಗರ್ಭಪಾತವೆಂದು ಹೆಸರು, ಏಳರಿಂದ ಮುಂದಕ್ಕೆ ಪ್ರಸವವೆಂದೇ ಹೆಸರು.

**ಗರ್ಭೋಭಿಘಾತವಿಷಮಾಶನಪೀಡನಾದ್ಯೈಃಪಕ್ವಂದ್ರುಮಾದಿವಫಲಂಪತತಿಕ್ಷಣೇನ ॥**
**ಮೂಢಃಕರೋತಿಪವನಃಖಲುಮೂಢಗರ್ಭಂಶೂಲಂಚಯೋನಿಜಠರಾದಿಷುಮೂತ್ರಸಂಗಂ ॥ ೩ ॥**

ಆಕಸ್ಮಿಕವಾಗಿ ಗರ್ಭಕ್ಕೆ ಯಾವುದಾದರೂ ಪೆಟ್ಟುಬೀಳೋಣ, ವಿರುದ್ಧ ಪದಾರ್ಥಗಳನ್ನು ಭೋಜನಮಾಡೋಣ, ಗರ್ಭಕ್ಕೆ ಇನ್ನೂ ಯಾವುದಾದರೂ ರೀತಿಯಿಂದ ಪೀಡೆ ಅಂದರೆ ವ್ಯಥೆ ಸಂಭವಿಸೋಣ, ಈ ಕಾರಣಗಳಿಂದ ಗರ್ಭವು ಪಕ್ವವಾಗಿ ತಾನೇ ಬೀಳುವುದಕ್ಕಿಂತ ಮುಂಚಿತವಾಗಿ ಬಲವತ್ತರವಾದ ಪ್ರಯತ್ನದಿಂದ ಕಸುಗಾಯನ್ನು ಕೆಡವುವಂತೆ ಬಿದ್ದುಹೋಗುತ್ತದೆ, ಇದನ್ನೇ ಗರ್ಭಪಾತವೆಂದು ಕರೆಯುವುದು, ಇನ್ನು ಗರ್ಭವು ನಿಯತಕಾಲದ ವರಿವಿಗೂ ಗರ್ಭದಲ್ಲಿ ಇದ್ದ ಮೇಲೆಯೂ ಸುಖಪ್ರಸವಕ್ಕೆ ಅನುಕೂಲವಾದ ವಾಯುವು ತತ್ಕಾಲದಲ್ಲಿ ಪ್ರಕೋಪವನ್ನು ಹೊಂದಿ ಮೂಡಗರ್ಭವನ್ನುಂಟುಮಾಡುತ್ತದೆ, ಮೂಢಗರ್ಭವೆಂದರೆ ಗರ್ಭವು ಸರಿಯಾಗಿ ಅಂದರೆ ತಾನು ಬರಬೇಕಾದ ರೀತಿಯಿಂದ ಹೊರಕ್ಕೆ ಬಾರದೆ ವಕ್ರಗತಿಯುಳ್ಳದ್ದಾಗಿ ಸಿಗಹಾಕಿಕೊಳ್ಳುವುದಕ್ಕೆ ಹೆಸರು, ಹೀಗೆ ಸಿಗಹಾಕಿಕೊಳ್ಳುವುದರ ಜೊತೆಯಲ್ಲಿ ಯೋನಿಭಾಗ, ಜಠರ ಅಂದರೆ ಹೊಟ್ಟೆ ಇವುಗಳಲ್ಲಿ ಶೂಲೆಯುನ್ನೂ ಮೂತ್ರಸಂಗವೆಂದರೆ ಮೂತ್ರವು ತಡೆದುಹೋಗುವುದು, ಇಂತಹ ತೊಂದರೆಗಳನ್ನೆಲ್ಲಾ ಉಂಟುಮಾಡುತ್ತದೆ.

**ಭುಗ್ನೋನಿಲೇನವಿಗುಣೇನತತಸ್ಸಗರ್ಭಃಸಂಖ್ಯಾಮತೀತ್ಯಬಹುಧಾಸಮುಪೈತಿಯೋನಿಂ ॥**
**ದ್ವಾರಂನಿರುಧ್ಯಶಿರಸಾಜಠರೇಣಕಶ್ಚಿತ್ ಕಶ್ಚಿತ್ ಶರೀರಪರಿವರ್ತಿತಕುಬ್ಜದೇಹಃ ॥ ೪ ॥**

ಏಕೇನಕಶ್ಚಿದಪರಸ್ತುಭುಜದ್ವಯೇನತಿರ್ಯಗ್ಗತೋಭವತಿಕಶ್ಚಿದ
ವಾಙ್ಮುಖೋನ್ಯಃ ॥
ಪಾರ್ಶ್ವಾಪವೃತ್ತಗತಿರೇತಿತಥೈವಕಶ್ಚಿದಿತ್ಯಷ್ಟಧಾಗತಿರಿಯಂಹ್ಯಪ
ರಾಚತುರ್ಧಾ ॥ ೫ ॥

ಮೂಢಗರ್ಭವು ಹೊರಬೀಳತಕ್ಕ ಕ್ರಮವನ್ನು ಹೇಳುತ್ತಾನೆ—ಗರ್ಭವನ್ನು ಸರಿಯಾಗಿ ಜಾರಿಸಿ ಪ್ರಸವ ಮಾಡಿಸತಕ್ಕ ವಾಯುವು ಪ್ರತಿಕೂಲ ಮಾರ್ಗವನ್ನು ಅನುಸರಿಸಿತೆಂದರೆ ಅಂತಹ ಪ್ರತಿಕೂಲವಾದ ಗರ್ಭವಾಯುವಿನಿಂದ ಗರ್ಭವು ಸರಿಯಾದ ರೀತಿಯಲ್ಲಿ ಹೊರಪಡುವುದರಬದಲಾಗಿ ಮಾರ್ಗತಪ್ಪಿ ಲೆಕ್ಕವಿಲ್ಲದಷ್ಟು ವಿಧವಾಗಿ ಅಂದರೆ ಅನೇಕ ವಿಧವಾಗಿ ಯೋನಿದ್ವಾರವನ್ನು ಹೊಂದುತ್ತದೆ. ಆದರಲ್ಲಿ ಮುಖ್ಯವಾದ ಎಂಟು ವಿಧವನ್ನು ಈ ಮುಂದೆ ಹೇಳುತ್ತಾನೆ.—ಮಗುವಿನ ಶಿರಸ್ಸು ಯೋನಿದ್ವಾರದಲ್ಲಿ ಬಂದು ತಡೆದುಕೊಂಡು ತೊಂದರೆ ಮಾಡುವುದು ಒಂದು. ಮಗುವಿನ ಹೊಟ್ಟೆಯು ಯೋನಿದ್ವಾರಕ್ಕೆ ಬಂದು ಆತು ಕೊಳ್ಳುವುದು ಒಂದು ಮಗುವಿನ ಶರೀರವು ತಿರುಗಿ ಹೋಗೋಣದರಿಂದ ಕುಬ್ಜ ಅಂದರೆ ಗುಜ್ಜಾರಿಯ ಆಕಾರವನ್ನು ಹೊಂದಿ ಯೋನಿದ್ವಾರದಲ್ಲಿ ಸಿಗಹಾಕಿ ಕೊಳ್ಳುವುದು ಒಂದು. ಗರ್ಭಗತವಾದ ಶಿಶುವಿನ ಒಂದು ತೋಳುಮಾತ್ರ ಯೋನಿದ್ವಾರದಿಂದ ಹೊರಕ್ಕೆ ಬಂದು ಉಳಿದ ಭಾಗವೆಲ್ಲವೂ ಒಳಗೆ ಸಿಕ್ಕಿಕೊಳ್ಳುವುದು ಒಂದು ಎರಡು ತೋಳುಗಳು ಮಾತ್ರವೇ ಹೊರಕ್ಕೆ ಹೊರಟು ಶರೀರವೆಲ್ಲವೂ ಹೊರಡುವುದಕ್ಕೆ ಮಾರ್ಗವಿಲ್ಲದೆ ಒಳಗೆ ಸಿಕ್ಕಿ ಕೊಳ್ಳುವುದು ಒಂದು ಗರ್ಭಗತವಾದ ಶಿಶುವೇ ಅಗುಳಿಯಹಾಗೆ ಅಡ್ಡಡ್ಡಲಾಗಿ ಸಿಕ್ಕಿ ಕೊಳ್ಳುವುದು ಒಂದು ಬಗೆ. ಮಗುವಿನ ಶಿರಸ್ಸು ಬಗ್ಗಿಹೋಗಿ ಕೆಳಮುಖವಾಗಿ ಮಗು ಸಿಕ್ಕಿಕೊಳ್ಳುವುದು ಒಂದು ಬಗೆ. ಮಗುವಿನ ತಲೆಯು ಪಾರ್ಶ್ವಕ್ಕೆ ತಿರುಗಿಕೊಂಡು ಗರ್ಭವು ಸರಿಯಾಗಿ ಹೊರಕ್ಕೆ ಹೊರಡಲು ಅವಕಾಶವಾಗದೆ ಸಿಕ್ಕಿಕೊಳ್ಳುವುದು ಒಂದು ಬಗೆ. ಈ ರೀತಿಯಾಗಿ ಗರ್ಭದ ಆಕ್ರಮಗತಿಗಳು ಎಂಟು ಬಗೆಯಾಗಿರುತ್ತವೆ,

ಸಂಕೀಲಕಃಪ್ರತಿಖುರಃಪರಿಘೋಥಬೀಜಸ್ತೇಷೂರ್ಧ್ವಬಾಹು
ಚರಣೈಶ್ಶಿರಸಾಚಯೋನಿಂ ॥
ಸಂಗೀಚಯೋಭವತಿಕೀಲಕವತ್ಸಕೀಲೋದೃಶ್ಯೈಃಖುರೈಃಪ್ರತಿ
ಖುರಂಸಹಿಕಾಯಸಂಗೀ ॥
ಗಚ್ಛೇದ್ಭುಜದ್ವಯಶಿರಾಸ್ಸಚಬೀಜಕಾಖ್ಯೋಯೋನೌಸ್ಥಿತಸ್ಸಪರಿ
ಘಃಪರಿಘೇಣತುಲ್ಯಃ ॥ ೬ ॥

ಹಿಂದೆ ಹೇಳಿದ ಎಂಟು ವಿಧವಲ್ಲದೆ ಗರ್ಭದ ವಕ್ರಮಾರ್ಗಗತಿಯು ಇನ್ನೂ ನಾಲ್ಕು ವಿಧವಾಗುವುದುಂಟು. ಯಾವುವೆಂದರೆ—ಸಂಕೀಲಕ, ಪ್ರತಿಖುರ, ಪರಿಘ ಬೀಜಕ ಎಂಬದಾಗಿ. ಗರ್ಭದ ಬಾಹುಗಳಾಗಲಿ, ಕಾಲಾಗಲಿ, ತಲೆಯಾಗಲಿ, ಗರ್ಭನಿರ್ಗಮನದ್ವಾರದಲ್ಲಿ ಅಡ್ಡ ಬೆಣೆಯಹಾಗೆ ತಡೆದುಕೊಂಡು ತೊಂದರೆಪಡಿಸಿದಲ್ಲಿ ಅದಕ್ಕೆ ಸಂಕೀಲಕವೆಂದು ಹೆಸರು. ಕೈಗಳಾಗಲಿ ಕಾಲುಗಳಾಗಲಿ ಗರ್ಭದ್ವಾರದಿಂದ ಮುಂಚಿತವಾಗಿ ಹೊರಟು ಪ್ರಸವಕ್ಕೆ ತೊಂದರೆ ಪಡಿಸಿದಲ್ಲಿ ಅದಕ್ಕೆ ಪ್ರತಿಖುರವೆಂದು ಹೆಸರು. ಇದರಲ್ಲಿ ಗರ್ಭಸ್ಥ ಶಿಶುವಿನ ಶರೀರವು ಹೊರಡದೆ ತೊಂದರೆಯಾಗುತ್ತದೆ. ಗರ್ಭನಿರ್ಗಮನ ದ್ವಾರದಿಂದ ಒಂದು ಭುಜ ಮತ್ತು ತಲೆಸಹಾ ಹೊರಟು ಉಳಿದ ಭಾಗವು ಹೊರಡದೆ ತೊಂದರೆ ಪಡಿಸಿದಲ್ಲಿ ಅದಕ್ಕೆ ಬೀಜಕವೆಂದು ಹೆಸರು. ಯೋನಿದ್ವಾರವನ್ನೇ ಮುಚ್ಚಿಕೊಂಡು ತಡದು ಬಿಟ್ಟಲ್ಲಿ ಅದಕ್ಕೆ ಪರಿಘವೆಂದು ಹೆಸರು ಈ ರೀತಿಯಾಗಿ ತಡದು ಹೋಗಿರುವ ಯೋನಿದ್ವಾರವನ್ನು ನೋಡಿದರೆ ಪರಿಘವೆಂಬ ಒಂದು ಆಯುಧವನ್ನು ನೋಡಿದಂತಿರುತ್ತದೆ. ಇದರಿಂದಲೇ ಇದಕ್ಕೆ ಪರಿಘವೆಂಬದಾಗಿ ಹೆಸರನ್ನಿಟ್ಟಿದ್ದಾರೆ.

**ಅಪವಿದ್ಧಶಿರಾಯಾತುಶೀತಾಂಗೀನಿತಪತ್ರಪಾ ॥**
**ನೀಲೋದ್ಗತಶಿರಾಹಂತಿಸಾಗರ್ಭಂಸಚತಾಂತಥಾ ॥ ೭ ॥**

ಮೂಢಗರ್ಭದ ಅಸಾಧ್ಯಲಕ್ಷಣವನ್ನು ಹೇಳುತ್ತಾನೆ—ಗರ್ಭಿಣಿಯು ತನ್ನ ತಲೆಯನ್ನೇ ಎತ್ತುವುದಕ್ಕೆ ಆಗದಷ್ಟು ಅಶಕ್ತಳಾಗಿರುವುದು, ಗರ್ಭಿಣಿಯ ಮೈಯೆಲ್ಲಾ ತಣ್ಣಗಾಗುತ್ತಾ ಬರುವುದು, ನಾಚಿಕೆ ತಪ್ಪಿ ಹೋಗಿರುವುದು, ಹೊಟ್ಟೆಯ ಮೇಲೆ ಕಪ್ಪು ನರಗಳು ಉಬ್ಬಿಕೊಂಡಿರುವುದು, ಈ ರೀತಿಯಾಗಿದ್ದಲ್ಲಿ ಗರ್ಭವೂ ಬದುಕುವುದಿಲ್ಲ, ಗರ್ಭಿಣಿಯೂ ಬದುಕುವುದಿಲ್ಲ.

**ಗರ್ಭಸ್ಪಂದನಮಾವೀಸಾಂಪ್ರಣಾಶಶ್ಯಾವಪಾಂಡುತಾ ॥**
**ಭವೇದುಚ್ಛ್ವಾಸಪೂತಿತ್ವಂಶೂನತಾಂತರ್ಮೃತೇಶಿಶೌ ॥ ೮ ॥**

ಗರ್ಭಚಲನವು ನಿಂತು ಹೋಗುವುದು, ಆವಿ ಅಂದರೆ ಗರ್ಭ ಹೊರಡಲು ಬರತಕ್ಕ ಬೇನೆ, ಅದು ಬಾರದೆ ನಿಂತುಹೋಗುವುದು, ಹೊಟ್ಟೆಯು ಧೂಮ್ರವರ್ಣವಾಗಿಯೂ, ಪಾಂಡುವರ್ಣವಾಗಿಯೂ ಇರುವುದು. ಉಸಿರು ಬಿಟ್ಟರೆ ದುರ್ಗಂಧವು ತೋರುವುದು, ಗರ್ಭಿಣಿಯ ಮೈಯುಬ್ಬುವುದು, ಇವು ಗರ್ಭದಲ್ಲಿ ಮಗು ಸತ್ತುಹೋದದ್ದಕ್ಕೆ ಲಕ್ಷಣಗಳು.

**ಮಾನಸಾಗಂತುಭಿರ್ಮಾತುರುಪತಾಪೈಃಪ್ರಪೀಡಿತಃ ॥**
**ಗರ್ಭೋವ್ಯಾಪದ್ಯತೇಕುಕ್ಷೌವ್ಯಾಧಿಭಿಶ್ಚನಿಪೀಡಿತಃ ॥ ೯ ॥**

ಗರ್ಭಿಣಿಯಾದ ಸ್ತ್ರೀಯ ಮಾನಸಿಕಗಳಾದ ದುಖ್ಖಗಳು ಆಗಂತುಕಗಳಾದ ದುಖ್ಖಗಳು ಮತ್ತು ಇತರ ವಿಧವಾದ ರೋಗಗಳು ಇವುಗಳಿಂದ ಪೀಡಿಸಲ್ಪಟ್ಟದ್ದಾಗಿ ಗರ್ಭವು ಮರಣ ಹೊಂದುತ್ತದೆ.

ಯೋನಿಸಂವರಣಂಸಂಗಃಕುಕ್ಷೌಮಕ್ಕಲ್ಲಏವಚ ॥
ಹನ್ಯುಃಸ್ತ್ರಿಯಂಮೂಢಗರ್ಭಾಂಯಥೋಕ್ತಾಶ್ಚಾ
ಪ್ಯುಪದ್ರವಾಃ ॥ ೧೦ ॥

ಪ್ರಸವಸಮಯಕ್ಕೆ ಸರಿಯಾಗಿ ಯೋನಿದ್ವಾರವು ವಿಶಾಲವಾಗಿ ಸುಖಪ್ರಸವವಾಗುವುದಕ್ಕನುಕೂಲಪಡಿಸದೆ ವಾತಪ್ರಕೋಪದಿಂದ ಯೋನಿದ್ವಾರವು ಸಂಕುಚಿತವಾಗುವುದು. ಗರ್ಭವು ಕಾಲಕ್ಕೆ ಸರಿಯಾಗಿ ಹೊರಕ್ಕೆ ಹೊರಡದೆ ಒಳಗೆ ಸಿಕ್ಕಿಕೊಳ್ಳುವುದು, ಗರ್ಭಿಣಿಗೆ ವಾತಪ್ರಕೋಪದಿಂದ ಮಕ್ಕಲ್ಲವೆಂಬ ಒಂದುಬಗೆಯ ಶೂಲೆ ಬರುವುದು, ಮೂಢಗರ್ಭದಲ್ಲಿ ಹೇಳಿರುವ ಇತರ ವಿಧಗಳಾದ ಉಪದ್ರವಗಳು, ಈ ತೊಂದರೆಗಳೆಲ್ಲಾ ಗರ್ಭಿಣಿಯನ್ನು ಕೊಲ್ಲುತ್ತವೆ.

ಇಲ್ಲಿಗೆ ಮೂಢಗರ್ಭನಿದಾನ ಸಮಾಪ್ತಿ

## ಸೂತಿಕಾ ರೋಗ ನಿದಾನ.

ವಾಯುಃಪ್ರಕುಪಿತಃಕುರ್ಯಾತ್ ಸಂರುಧ್ಯರುಧಿರಂಸ್ರುತಂ ॥
ಸೂತಾಯಾಹೃಚ್ಛಿರೋಬಸ್ತಿಶೂಲಂಮಕ್ಕಲ್ಲಸಂಜ್ಞಕಂ ॥ ೧ ॥
ಅಂಗಮರ್ದೋಜ್ವರಃಕಂಪಃಪಿಪಾಸಾಗುರುಗಾತ್ರತಾ ॥
ಶೋಥಶ್ಶೂಲಾತಿಸಾರೌಚಸೂತಿಕಾರೋಗಲಕ್ಷಣಂ ॥ ೨ ॥

ಸೂತಿಕಾರೋಗವೆಂದರೆ ಬಾಣಂತಿಗೆ ಬರುವ ರೋಗ. ಪ್ರಸವವಾದ ಮೇಲೆ ಸ್ರವಿಸಬೇಕಾದ ಗರ್ಭರಕ್ತವು ಸರಿಯಾಗಿ ಸ್ರವಿಸದೆ ವಾಯುವು ಪ್ರಕೋಪವನ್ನು ಹೊಂದಿ ಹೃದಯಶೂಲೆ, ತಲೆಶೂಲೆ, ಬಸ್ತಿಶೂಲೆ, ಅಂದರೆ ಕಿಬ್ಬೊಟ್ಟೆಯಲ್ಲಿ ನೋವು ಇವುಗಳನ್ನೆಲ್ಲಾ ಉಂಟುಮಾಡುತ್ತದೆ. ಇದಕ್ಕೆ ಮಕ್ಕಲ್ಲ ರೋಗವೆಂದು ಹೆಸರು. ಇದೊಂದು ಬಗೆಯ ಸೂತಿಕಾರೋಗ. ಬಾಣಂತಿಯರಾದ ಹೆಂಗಸರಿಗೆ ಬರತಕ್ಕ ಮೈ ಕೈನೋವು, ಜ್ವರ, ಮೈನಡುಕ, ಬಾಯಾರಿಕೆ, ಮೈಭಾರವಾಗುವದು. ಮೈ ಕೈ ಬಾತುಬರುವುದು, ಹೊಟ್ಟೆಶೂಲೆ, ಅತಿಸಾರ ಇವುಗಳೆಲ್ಲವೂ ಸೂತಿಕಾರೋಗದ ಲಕ್ಷಣಗಳು.

ಮಿಥ್ಯೋಪಚಾರಾತ್ಸಂಕ್ಲೇಶಾದ್ವಿಷಮಾಜೀರ್ಣಭೋಜನಾತ್ ॥
ಸೂತಿಕಾಯಾಸ್ತು ಯೇರೋಗಾಜಾಯಂತೇದಾರುಣಾಸ್ತು ತೇ॥ ೩ ॥
ಜ್ವರಾತಿಸಾರಶೋಥಾಶ್ಚ ಶೂಲಾನಾಹಬಲಕ್ಷಯಾಃ ॥
ತಂದ್ರಾರುಚಿಪ್ರಸೇಕಾದ್ಯಾಃ ಕಫವಾತಾಮಯೋದ್ಭವಾಃ ॥ ೪ ॥
ಕೃಚ್ಛ್ರಸಾಧ್ಯಾಹಿತೇರೋಗಾಃ ಕ್ಷೀಣಮಾಂಸಬಲಾಶ್ರಿತಾಃ ॥
ತೇಸರ್ವೇಸೂತಿಕಾನಾಮ್ನಾರೋಗಾಸ್ತೇಚಾಪ್ಯುಪದ್ರವಾಃ ॥ ೫ ॥

ಬಾಣಂತಿಯಾದ ಸ್ತ್ರೀಗೆ ಆಹಾರಾದ್ಯುಪಚಾರಗಳ ಅವ್ಯವಸ್ಥೆಯಿಂದಲೂ ಮನಸ್ಸಿಗೆ ಕ್ಲೇಶವನ್ನುಂಟುಮಾಡತಕ್ಕ ಕಾರಣಗಳಿಂದಲೂ ಅಜೀರ್ಣವಾಗುವಂತಹ ಭೋಜನಗಳಿಂದಲೂ ಇಂತಹ ಕಾರಣಗಳಿಂದ ಬರತಕ್ಕ ರೋಗಗಳು ಬಹಳ ಭಯಂಕರಗಳಾಗಿರುತ್ತವೆ. ಬಾಣಂತಿಗೆ ಸಂಭವಿಸತಕ್ಕ ರೋಗಗಳಲ್ಲಿ ಜ್ವರ, ಅತಿಸಾರ, ಶೋಥೆ, ಶೂಲೆ, ಹೊಟ್ಟೆಯುಬ್ಬರ, ಶಕ್ತಿ ಕಡಿಮೆಯಾಗಿ ಹೋಗುವುದು, ತೂಕಡಿಕೆ, ಅರುಚಿ, ಬಾಯಿ ನೀರುಸುರಿಯುತ್ತಿರುವುದು ಇವುಗಳೆಲ್ಲಾ ಶ್ಲೇಷ್ಮ ಮತ್ತು ವಾತಗಳ ಪ್ರಕೋಪದಿಂದ ಹುಟ್ಟುತ್ತವೆ. ಬಾಣಂತಿಯಾದವಳಿಗೆ ರಕ್ತ ಮಾಂಸಬಲಗಳು ಕ್ಷಯಿಸಿ ಹೋಗಿರೋಣದಿಂದ ಯಾವರೋಗ ಬಂದರೂ ಕಷ್ಟತಮವೇ ಆಗುತ್ತವೆ. ಇವುಗಳಿಗೂ ಇವುಗಳ ಉಪದ್ರವಗಳಿಗೂ ಸೂತಿಕಾರೋಗಗಳೆಂದು ಹೆಸರು.

ಇಲ್ಲಿಗೆ ಸೂತಿಕಾರೋಗ ಸಮಾಪ್ತಿ

## ಸ್ತನ ರೋಗನಿದಾನ

ಸಕ್ಷೀರೌವಾಪ್ಯದುಗ್ಧೌವಾಪ್ಯದೋಷಃಸ್ತನೌಸ್ತ್ರಿಯಃ ॥
ಪ್ರದೂಷ್ಯಮಾಂಸರುಧಿರಂಸ್ತನರೋಗಾಯಕಲ್ಪತೇ ॥ ೧ ॥
ಪಂಚಾನಾಮಪಿತೇಷಾಂಹಿರಕ್ತಜಂವಿದ್ರಧಿಂವಿನಾ ॥
ಲಕ್ಷಣಾನಿಸಮಾನಾನಿಬಾಹ್ಯವಿದ್ರಧಿಲಕ್ಷಣೈಃ ॥ ೨ ॥

ಸ್ತನರೋಗವೆಂದರೆ ಮುಖ್ಯವಾಗಿ ಮೊಲೆಬಾವಿಗೆ ಹೆಸರು. ಮೊಲೆಯಲ್ಲಿ ಹಾಲು ಇರುವಾಗಲಾಗಲೀ ಅಥವಾ ಹಾಲು ಇಲ್ಲದೆ ಇರುವಾಗಲೇ ಆಗಲಿ ಪ್ರಕುಪಿತಗಳಾದ ವಾತಾದಿ ದೋಷಗಳು ಸ್ತನಪ್ರದೇಶದಲ್ಲಿ ರಕ್ತ ಮಾಂಸಗಳನ್ನು ಕೆಡಿಸಿ ಬಾವುಗಳನ್ನುಂಟುಮಾಡುತ್ತವೆ. ಈ ಸ್ತನವಿದ್ರಧಿ ರೋಗದಲ್ಲಿ ಸಾಮಾನ್ಯ ವಿದ್ರಧಿ ರೋಗದಲ್ಲಿ ಹೇಳಿರುವ ರಕ್ತವಿದ್ರಧಿಯೊಂದು ವಿನಾ ಬಾಕಿಯ ಐದು

ವಿಧಗಳಾದ ವಿದ್ರಧಿಯ ಲಕ್ಷಣಗಳೂ ಹಿಂದಿನ ವಿದ್ರಧಿಯಂತೆಯೇ ಎಂದು ತಿಳಿಯಬೇಕು. ರಕ್ತವಿದ್ರಧಿಯು ಸ್ತನರೋಗಗಳಲ್ಲಿ ಇಲ್ಲ.

ಇಲ್ಲಿಗೆ ಸ್ತನರೋಗನಿದಾನ ಸಮಾಪ್ತಿ

## ಸ್ತನ್ಯ ದುಷ್ಟಿ ನಿದಾನ

ಗುರುಭಿರ್ವಿವಿಧೈರನ್ನೈರ್ದುಷ್ಟೈರ್ದೋಷೈಃಪ್ರದೂಷಿತಃ ॥
ಕ್ಷೀರಂಮಾತುಃಕುಮಾರಸ್ಯನಾನಾರೋಗಾಯಕಲ್ಪತೇ ॥ ೧ ॥

ಸಾಮಾನ್ಯವಾಗಿ ಜೀರ್ಣವಾಗದ ಗುರ್ವಾಹಾರಗಳು ನಾನಾವಿಧಗಳಾದ ಆಹಾರಗಳು ಇವುಗಳಿಂದ ಪ್ರಕುಪಿತಗಳಾದ ವಾತಾದಿ ದೋಷಗಳಿಂದ ದೂಷಿತವಾದ ತಾಯಿಯ ಮೊಲೆಹಾಲು ಮಕ್ಕಳಿಗೆ ನಾನಾರೋಗಗಳನ್ನುಂಟುಮಾಡುತ್ತದೆ.

ಕಷಾಯಂಸಲಿಲಪ್ಲಾವಿಸ್ತನ್ಯಂಮಾರುತದೂಷಿತಂ ॥
ಕಟ್ವಮ್ಲಲವಣಂಪೀತರಾಜೀಮತ್ಪಿತ್ತಸಂಜ್ಞಿತಂ ॥ ೨ ॥
ಕಫದುಷ್ಟಂಘನಂತೋಯೇನಿಮಜ್ಜತಿಸಪಿಚ್ಛಿಲಂ ॥
ದ್ವಿಲಿಂಗಂದ್ವಂದ್ವಜಂವಿದ್ಯಾತ್ಸರ್ವಲಿಂಗಂತ್ರಿದೋಷಜಂ ॥ ೩ ॥

ವಾತಪ್ರಕೋಪದಿಂದ ದುಷ್ಟವಾದ ಸ್ತನ್ಯವು ಕಷಾಯರಸ ಅಂದರೆ ವಗರು ರಸವುಳ್ಳದ್ದಾಗಿರುತ್ತದೆ, ನೀರಿನಲ್ಲಿ ಹಾಕಿದಲ್ಲಿ ತೇಲುತ್ತದೆ. ಪಿತ್ತಪ್ರಕೋಪದಿಂದ ದುಷ್ಟವಾದಸ್ತನ್ಯವು ಖಾರವಾಗಿಯೂ, ಹುಳಿಯಾಗಿಯೂ, ಕೊಂಚಉಪ್ಪಾಗಿಯೂ ಇರುತ್ತದೆ. ಹಾಲಿನಲ್ಲಿ ನೋಡಿದರೆ ಕೊಂಚವಾಗಿ ಹಳದಿಯ ಬಣ್ಣದ ಗೆರೆಗಳಿರುತ್ತವೆ. ಕಫಪ್ರಕೋಪದಿಂದ ದುಷ್ಟವಾದ ಸ್ತನ್ಯವು ಜಿಗಟಾಗಿಯೂ ಗಟ್ಟಿ ಅಂದರೆ ಮಂದವಾಗಿಯೂ ಇರುತ್ತದೆ. ನೀರಿನಲ್ಲಿ ಹಾಕಿದರೆ ಮುಳುಗುತ್ತದೆ. ಸ್ತನ್ಯದಲ್ಲಿ ಎರಡೆರಡು ದೋಷಗಳ ಲಕ್ಷಣಗಳು ಕಂಡರೆ ಎರಡು ದೋಷಗಳು ಪ್ರಕೋಪ ಹೊಂದಿವೆಯೆಂದೂ, ಮೂರುದೋಷಗಳ ಲಕ್ಷಣಗಳು ಕಂಡಲ್ಲಿ ಮೂರು ದೋಷಗಳು ಪ್ರಕುಪಿತಗಳಾಗಿವೆಯೆಂದೂ ತಿಳಿಯಬೇಕು.

ಅದುಷ್ಟಂಚಾಂಬುನಿಕ್ಷಿಪ್ತಮೇಕೀಭವತಿಪಾಂಡುರಂ ॥
ಮಧುರಂಚಾವಿವರ್ಣಂಚಪ್ರಸನ್ನಂತತ್ಪ್ರಶಸ್ಯತೇ ॥ ೪ ॥

ಶುದ್ಧವಾದ ಸ್ತನ್ಯದಲಕ್ಷಣವನ್ನು ಹೇಳುತ್ತಾನೆ—ಸ್ತನ್ಯವನ್ನು ಹಾಲಿನಲ್ಲಿ

ಹಾಕಿದರೆ ಯಾವ ಬದಲು ಬಣ್ಣವೂ ಇಲ್ಲದೆ ನೀರಿನೊಡನೆ ಕೂಡಿಹೋಗುತ್ತದೆ ಸ್ತನ್ಯವನ್ನು ನೋಡಿದರೆ ಬಿಳಿದಿಯ ಬಣ್ಣಕ್ಕಿರುತ್ತದೆ. ರುಚಿಯಲ್ಲಿ ಮಧುರವಾಗಿರುತ್ತದೆ. ಮತ್ತು ಸ್ವಚ್ಛವಾಗಿರುತ್ತದೆ.

ಇಲ್ಲಿಗೆ ಸ್ತನ್ಯದುಷ್ಟಿ ನಿದಾನ ಸಮಾಪ್ತಿ

## ಬಾಲರೋಗ ನಿದಾನ

**ವಾತದುಷ್ಟಂಶಿಶುಸ್ತನ್ಯಂಪಿಬನ್ವಾತಗದಾತುರಃ ॥**
**ಕ್ಷಾಮಸ್ವರಃಕೃಶಾಂಗಸ್ಯಾದ್ಬದ್ಧವಿಣ್ಮೂತ್ರಮಾರುತಃ ॥ ೧ ॥**
**ಸ್ವಿನ್ನೋಭಿನ್ನಮಲೋಬಾಲಃಕಾಮಲಾಪಿತ್ತರೋಗವಾನ್ ॥**
**ತೃಷ್ಣಾಳುರುಷ್ಣಸರ್ವಾಂಗಃಪಿತ್ತದುಷ್ಟಂಪಯಃಪಿಬನ್ ॥ ೨ ॥**
**ಕಫದುಷ್ಟಂಪಿಬನ್‌ಕ್ಷೀರಃಲಾಲಾಲುಶ್ಲೇಷ್ಮರೋಗವಾನ್ ॥**
**ನಿದ್ರಾನ್ವಿತೋಜಡಶ್ಶೂನವಕ್ತ್ರಾಕ್ಷಃಛರ್ದನಶ್ಶಿಶುಃ ॥ ೩ ॥**
**ದ್ವಂದ್ವಜೇದ್ವಂದ್ವಜಂರೂಪಂಸರ್ವಜೇಸರ್ವಲಕ್ಷಣಂ ॥**

ಬಾಲಕರುಗಳಿಗೆ ಬರತಕ್ಕ ರೋಗಗಳನ್ನು ವಿವರಿಸುತ್ತಾನೆ.–ವಾತಪ್ರಕೋಪದಿಂದ ದೂಷಿತವಾದ ಸ್ತನ್ಯವನ್ನು ಕುಡಿಯುವ ಮಗುವಿಗೆ ವಾತವ್ಯಾಧಿಗಳೆಲ್ಲಾ ಪ್ರಾಪ್ತವಾಗುತ್ತವೆ, ಧ್ವನಿ ಕುಗ್ಗಿಹೋಗುತ್ತದೆ, ಮೈ ಕೈಯ್ಯೆಲ್ಲಾ ಕೃಶವಾಗಿರುತ್ತದೆ ಮಲ ಮತ್ತು ಮೂತ್ರಗಳು ಬದ್ಧವಾಗಿ ಹೋಗುತ್ತವೆ ಪಿತ್ತ ಪ್ರಕೋಪದಿಂದ ಕೆಟ್ಟುಹೋಗಿರುವ ಮೊಲೆಹಾಲನ್ನು ಕುಡಿಯುವ ಮಗುವಿನ ಮೈ ಸದಾ ಬೆವರುತ್ತಿರುತ್ತದೆ, ಭೇದಿಯಾಗುತ್ತಿರುತ್ತದೆ, ಕಾಮಾಲೆ ಮೊದಲಾದ ಪಿತ್ತಸಂಬಂಧವಾದ ರೋಗಗಳಿಂದ ನರಳುತ್ತಿರುತ್ತದೆ, ಯಾವಾಗ್ಯೂ ಬಾಯಾರಿಕೆಯಿರುತ್ತದೆ, ಸದಾ ಮೈ ಮುಟ್ಟಿ ನೋಡಿದಲ್ಲಿ ಜ್ವರ ಬಂದಂತೆಯೇ ಇರುತ್ತದೆ, ಕಫಪ್ರಕೋಪದಿಂದ ದೂಷಿತವಾದ ಸ್ತನ್ಯವನ್ನು ಪಾನಮಾಡತಕ್ಕ ಮಗುವು ಯಾವಾಗ್ಯೂ ಜೊಲ್ಲು ಸುರಿಸುತ್ತಿರುತ್ತದೆ, ಶ್ಲೇಷ್ಮ ರೋಗಗಳಿರುತ್ತವೆ, ನಿದ್ರೆಯಿಂದ ಯಾವಾಗಲೂ ಮತ್ತವಾಗಿಯೇ ಇರುತ್ತದೆ, ವಾಂತಿಯಾಗುತ್ತಿರುತ್ತದೆ ಕಣ್ಣು ಮತ್ತು ಮುಖ ಸಹಾ ಬಾತಿರುತ್ತದೆ. ಎರಡು ದೋಷಪ್ರಕೋಪದಿಂದ ದುಷ್ಟವಾದ ಸ್ತನ್ಯವನ್ನು ಪಾನ ಮಾಡುವುದರಿಂದ ಮಗುವಿನಲ್ಲಿ ಆಯಾರೋಗದ ಲಕ್ಷಣಗಳೂ ಎಲ್ಲಾ ದೋಷಗಳಿಂದಲೂ ದುಷ್ಟವಾದ ಸ್ತನ್ಯಪಾನದಿಂದ ತ್ರಿದೋಷ ಲಕ್ಷಣಗಳೂ ಮಗುವಿನಲ್ಲಿ ಕಾಣುತ್ತಿರುತ್ತವೆ.

ಶಿರೋಽಸ್ತಿ ವ್ಯಾಮತಿವ್ಯಾಂಚರೋದನಾಲ್ಲಕ್ಷಯೇದ್ರುಜಂ ॥ ೪ ॥
ಸಯಂಸ್ಪೃಶೇದ್ಭೃಶಂದೇಶಂಯತ್ರಚಸ್ಪರ್ಶನಾಕ್ಷಮಃ ॥
ತತ್ರವಿದ್ಯಾದ್ರುಜಂಮೂರ್ಧ್ನಿರುಜಂಚಾಕ್ಷಿನಿಮೀಲನಾತ್ ॥ ೫ ॥
ಕೋಷ್ಠೇವಿಬಂಧವಮಥುಸ್ತನದಂಶಾಂತ್ರಕೂಜನೈಃ ॥
ಆಧ್ಮಾನಪೃಷ್ಠನಮನಜಠರೋನ್ನಮನೈರಪಿ ॥ ೬ ॥
ಬಸ್ತೌಗುಹ್ಯೇಚವಿಣ್ಮೂತ್ರಸಂಗೋತ್ರಾಸಾಂತ್ರಕೂಜನೈಃ ॥
ಸ್ರೋತಾಂಸ್ಯಂಗಾನಿಸಂಧೀಂಶ್ಚಪಶ್ಯೇದ್ಯತ್ನಾ
ನ್ಮುಹುರ್ಮುಹುಃ ॥ ೭ ॥

ಮಕ್ಕಳಿಗೆ ದೇಹದಲ್ಲಿ ಸಂಭವಿಸಿರುವ ರೋಗಗಳನ್ನು ಅವುಗಳ ಅಳುವಿಕೆ ಯಿಂದಲೇ ಗೊತ್ತುಹಚ್ಚಬೇಕು ಅಂದರೆ ಬಹಳವಾಗಿ ಅಳುತ್ತಿದ್ದಲ್ಲಿ ಮಕ್ಕಳಿಗೆ ಬಹಳವಾಗಿ ವೇದನೆಯಿದೆಯೆಂದೂ ಸ್ವಲ್ಪವಾಗಿ ಅಳುತ್ತಿದ್ದಲ್ಲಿ ವೇದನೆ ಕಡಿಮೆ ಯಾಗಿದೆ ಎಂದೂ ತಿಳಿಯಬೇಕು. ಮಗುವು ಶರೀರದ ಯಾವಭಾಗನ್ನು ಪದೇಪದೇ ಮುಟ್ಟಿಕೊಳ್ಳುವುದೊ ಯಾವ ಭಾಗದಲ್ಲಿ ನಾವು ಮುಟ್ಟಿದಲ್ಲಿ ತಡೆಯಲಾರದೆ ಅಳುವುದೊ ಆ ಭಾಗದಲ್ಲಿಯೇ ಅದಕ್ಕೆ ವೇದನೆಯಿದೆ ಎಂದು ನಿಶ್ಚಯಿಸಬೇಕು ಮಗುವಿಗೆ ತಲೆಯಲ್ಲಿ ಏನಾದರೂ ಬಾಧಕವಿದ್ದಲ್ಲಿ ಕಣ್ಣನ್ನು ಮುಚ್ಚಿಕೊಂಡಿರುತ್ತದೆ ಮಲಪ್ರವೃತ್ತಿ ಸರಿಯಾಗಿ ಆಗದಿರುವುದು, ಆಗಾಗ್ಗೆ ವಮನವಾಗುತ್ತಿರುವುದು, ಸ್ತನ್ಯಪಾನ ಮಾಡುವಾಗ್ಗೆ ತಾಯಿಯ ಮೊಲೆಯನ್ನ ಕಚ್ಚುವುದು, ಹೊಟ್ಟೆಯಲ್ಲಿ ಕರುಳು ಕೂಗುವುದು, ಹೊಟ್ಟೆಯುಬ್ಬರ, ಬೆನ್ನು ಕುಗ್ಗಿಹಿಡಿದಿರುವುದು. ಹೊಟ್ಟೆ ಉಬ್ಬರಿಸಿರುವುದು ಈ ಲಕ್ಷಣಗಳಿಂದ ಮಗುವಿನ ಹೊಟ್ಟೆಯಲ್ಲಿ ವೇದನೆಯಿದೆ ಎಂದು ತಿಳಿಯಬೇಕು. ಮಲಮೂತ್ರಗಳು ತಡದುಹೋಗಿ ಹೊಟ್ಟೆಯಲ್ಲಿ ಕರುಳು ಕೂಗುತ್ತಲಿದ್ದಲ್ಲಿ ಮರ್ಮಸ್ಥಾನದಲ್ಲಿ ವೇದನೆಯಿದೆ ಎಂದು ತಿಳಿಯಬೇಕು. ಮಕ್ಕಳ ಅವಯವಗಳನ್ನು, ನಾಡಿಯನ್ನು, ಸಂಧಿಸ್ಥಾನಗಳನ್ನು ಅಂದರೆ ಕೀಲು ಗಳನ್ನು ಇವುಗಳನ್ನೆಲ್ಲಾ ಪ್ರಯತ್ನದಿಂದ ಪರೀಕ್ಷಿಸಬೇಕು.

ಕುಕೂಣಕಃಕ್ಷೀರದೋಷಾಚ್ಛಿಶೂನಾಮಕ್ಷಿವರ್ತ್ಮನಿ ॥
ಜಾಯತೇತೇನತನ್ನೇತ್ರಂಕಂಡುರಂಚಸ್ರವೇನ್ಮುಹುಃ ॥ ೮ ॥
ಶಿಶುಃಕುರ್ಯಾಲ್ಲಲಾಟಾಕ್ಷಿಕೂಟನಾಸಾವಘರ್ಷಣಂ ॥
ಶಕ್ತೋನಾರ್ಕಪ್ರಭಾಂದ್ರಷ್ಟುಂನವರ್ತ್ಮೋನ್ಮೀಲನಕ್ಷಮಃ ॥ ೯ ॥

ಕುಕೂಣಕವೆಂಬುವುದೊಂದು ಬಗೆಯ ಮಕ್ಕಳಿಗೆ ಬರುವ ನೇತ್ರರೋಗ. ಈ ರೋಗವು ಮಕ್ಕಳಿಗೆ ತಾಯಿಯರ ಹಾಲಿನಲ್ಲಿರತಕ್ಕ ದೋಷದಿಂದ ಉಂಟಾಗುತ್ತದೆ

ಈ ರೋಗಯುಕ್ತವಾದ ಮಗುವಿನ ಕಣ್ಣಿನಲ್ಲಿ ನೆವೆ ಬರುತ್ತದೆ, ನೀರು ಸುರಿಯು ತ್ತಿರುತ್ತದೆ. ಮಗುವು ಯಾವಾಗಲೂ ಹಣೆ ಕಣ್ಣು ಮೂಗು ಇವುಗಳನ್ನು ಕೈಯಿಂದ ತಿಕ್ಕಿಕೊಳ್ಳುವುದು, ಕಣ್ಣುಬಿಟ್ಟುಕೊಂಡು ಬೆಳಕನ್ನು ಮತ್ತು ಸೂರ್ಯ ಕಿರಣಗಳನ್ನು ನೋಡಲಾರದೆ ಹೋಗುವುದು ಈ ಲಕ್ಷಣಗಳೆಲ್ಲಾ ಇರುತ್ತವೆ.

ಮಾತುಃಕುಮಾರೋಗರ್ಭಿಣ್ಯಾಸ್ತನ್ಯಂಪ್ರಾಯಃಪಿಬನ್ನಪಿ ॥
ಕಾಸಾಗ್ನಿಸಾದವಮಥುತಂದ್ರಾಕಾರ್ಶ್ಯಾರುಚಿಭ್ರಮೈಃ ॥ ೧೦ ॥
ಯುಜ್ಯತೇಕೋಷ್ಠವೃದ್ಧ್ಯಾಚತಮಾಹುಃಪರಿಗರ್ಭಿಕಂ ॥
ರೋಗಂಪರಿಭವಾಖ್ಯಂಚಯುಂಜ್ಯಾತ್ತತ್ರಾಗ್ನಿದೀಪನಂ ॥ ೧೧ ॥

ಮಗುವು ಗರ್ಭಿಣಿಯಾದ ತಾಯಿಯ ಮೊಲೆಹಾಲನ್ನು ಕುಡಿದರೆ ಅದರಿಂದ ಕೆಮ್ಮು, ಅಗ್ನಿಮಾಂದ್ಯ, ವಮನ, ತೂಕಡಿಕೆ, ಕೈಕಾಲು ಕೃಶವಾಗುವುದು, ಅರುಚಿ ಬುದ್ಧಿಭ್ರಮಣ, ಕೋಷ್ಠವೃದ್ಧಿ ಅಂದರೆ ಹೊಟ್ಟೆಯಲ್ಲಿ ಒಂದುವಿಧವಾದ ಗೆಡ್ಡೆ ಬರುವುದು ಇಂತಹ ವಿಕಾರಗಳೆಲ್ಲಾ ಬರುತ್ತವೆ. ಈ ರೋಗಕ್ಕೆ ಪರಿಗರ್ಭಿತ, ಪರಿಭವ ಎಂಬದಾಗಿ ಎರಡು ಹೆಸರು ಅಗ್ನಿದೀಪನೌಷಧವನ್ನು ಕೊಡಬೇಕು

ತಾಲುಮಾಂಸೇಕಫಃಕ್ರುದ್ಧಃಕುರುತೇತಾಲುಕಂಟಿಕಂ ॥
ತೇನತಾಲುಪ್ರದೇಶಸ್ಯನಿಮ್ನತಾಮೂರ್ಧ್ನಿಜಾಯತೇ ॥ ೧೨ ॥
ತಾಲುಪಾತಸ್ತನದ್ವೇಷಃಕೃಚ್ಛ್ರಾತ್ಪಾನಂಶಕೃದ್ದ್ರವಂ ॥
ತೃಡಕ್ಷಿಕಂಠಾಸ್ಯರುಜಾಗ್ರೀವಾದುರ್ಧರತಾವಮಿಃ ॥ ೧೩ ॥

ಮಗುವಿನ ದವಡೆಯಲ್ಲಿ ಕಫವು ಪ್ರಕೋಪವನ್ನು ಹೊಂದಿ ದವಡೆಯಲ್ಲಿರುವ ಮಾಂಸದಲ್ಲಿ ಮುಳ್ಳಿನಹಾಗೆ ಒಂದು ಬಗೆಯ ವ್ರಣಗಳು ಹುಟ್ಟುತ್ತವೆ. ಇದರಿಂದ ದವಡೆ ಗುಂಡಿ ಬಿದ್ದಹಾಗೆ ಕಾಣುತ್ತಿರುತ್ತದೆ. ಇದಕ್ಕೆ ತಾಲುಪಾತವೆಂದು ಹೆಸರು. ಸ್ತನ್ಯದಲ್ಲಿದ್ವೇಷ ಮೊಲೆಕುಡಿಸುವುದಕ್ಕೆ ಬಹಳ ಕಷ್ಟವಾಗುವುದು. ಮಲ ಪ್ರವೃತ್ತಿ ನೀರಾಗಿರುವುದು, ಬಾಯಾರಿಕೆ, ಕಣ್ಣು ಗಂಟಲು ಬಾಯಿ ಇವುಗಳಲ್ಲಿ ವ್ಯಥೆ ಮಗುವಿನ ಕಂಠಭಾಗವು ಸರಿಯಾಗಿ ನಿಲ್ಲುವುದಕ್ಕೇನೇ ತೊಂದರೆಯಾಗು ವುದು. ಇವುಗಳೆಲ್ಲಾ ಲಕ್ಷಣಗಳು.

ವಿಸರ್ಪಸ್ತುಶಿಶೋಃಪ್ರಾಣನಾಶನೋಬಸ್ತಿಶೀರ್ಷಜಃ ॥
ಪದ್ಮವರ್ಣೋಮಹಾಪದ್ಮನಾಮಾದೋಷತ್ರಯೋದ್ಭವಃ ॥ ೧೪ ॥
ಶಂಖಾಭ್ಯಾಂಹೃದಯಂಯಾತಿಹೃದಯಾದ್ವಾಗುದಂವ್ರಜೇತ್ ॥
ಕ್ಷುದ್ರರೋಗೇಚಕಥಿತೇತ್ಯಜಗಲ್ಲ್ಯಹಿಪೂತನೇ ॥ ೧೫ ॥

ಮಕ್ಕಳಿಗೆ ಮೂತ್ರಾಶಯದ ಭಾಗದಲ್ಲಿಯಾಗಲೀ ತಲೆಯಮೇಲಾಗಲಿ ಬರ ತಕ್ಕ ಒಂದುಬಗೆಯ ವಿಸರ್ಪಗಳೆಂಬ ಬಕ್ಕೆಗಳು ಕೇವಲ ಪ್ರಾಣವನ್ನೇ ನಾಶ ಮಾಡುತ್ತವೆ, ಕಮಲದ ಹುವ್ವಿನ ಬಣ್ಣವುಳ್ಳವುಗಳಾಗಿರುತ್ತವೆ ತ್ರಿದೋಷ ಪ್ರಕೋಪದಿಂದ ಹುಟ್ಟತಕ್ಕವುಗಳೆಂದು ತಿಳಿಯಬೇಕು, ಇವು ತಲೆಯಿಂದ ಶಂಖ ವೆಂಬ ಮರ್ಮಸ್ಥಾನದ ಮಾರ್ಗವಾಗಿ ಹೃದಯ ಪ್ರದೇಶಕ್ಕೂ ಅಲ್ಲಿಂದ ಗುದ ದ್ವಾರದವರಿಗೂ ವ್ಯಾಪಿಸುತ್ತವೆ, ಅಜಗಲ್ಲಿ, ಅಹಿಪೂತನ ಎಂಬ ಎರಡು ಮಕ್ಕಳ ರೋಗಗಳು. ಕ್ಷುದ್ರರೋಗ ಪ್ರಕರಣದಲ್ಲಿ ಹೇಳಲ್ಪಟ್ಟಿವೆ.

ಜ್ವರಾದ್ಯಾವ್ಯಾಧಯಸ್ಸರ್ವೇಮಹಾಂತೋಯೇಪುರೇರಿತಾಃ ॥
ಬಾಲದೇಹೇಪಿತೇತದ್ವದ್ವಿಜ್ಞೇಯಾಃಕುಶಲೈಸ್ಸದಾ ॥ ೧೬ ॥

ಜ್ವರ ಅತಿಸಾರ ಮೊದಲಾದ ರೋಗಗಳನ್ನೆಲ್ಲಾ ಹಿಂದೆ ಹೇಳಲ್ಪಟ್ಟಿರುವ ಸಾಮಾನ್ಯ ಲಕ್ಷಣಗಳಿಂದಲೇ ಕುಶಲನಾದ ವೈದ್ಯನು ಮಕ್ಕಳ ದೇಹದಲ್ಲಿಯೂ ಬುದ್ಧಿವಂತಿಕೆಯಿಂದ ಅವುಗಳನ್ನು ಗುರ್ತಿಸಿಕೊಳ್ಳಬೇಕು.

ಕ್ಷಣಾದುದ್ವಿಜತೇಬಾಲಃಕ್ಷಣಾತ್ತ್ರಸ್ಯತಿರೋದಿತಿ ॥
ನಖೈರ್ದಂತೈರ್ದಾರಯತಿಧಾತ್ರೀಮಾತ್ಮಾನಮೇವಚ ॥ ೧೭ ॥
ಊರ್ಧ್ವಂನಿರೀಕ್ಷತೇದಂತಾನ್ ಖಾದೇತ್ ಕೂಜತಿಜೃಂಭತೇ ॥
ಭ್ರುವೌಕ್ಷಿಪತಿದಂತೋಷ್ಠಂಫೇನಂವಮತಿಚಾಸಕೃತ್ ॥ ೧೮ ॥
ಕ್ಷಾಮೋತಿನಿಶಿಜಾಗರ್ತಿಶೂನಾಕ್ಷೋಭಿನ್ನವಿಟ್ ಸ್ವರಃ ॥
ಮಾಂಸಶೋಣಿತಗಂಧಿಶ್ಚನಚಾಶ್ನಾತಿಯಥಾಪುರಾ ॥ ೧೯ ॥
ಸಾಮಾನ್ಯಂಗ್ರಹಜುಷ್ಟಾನಾಂಲಕ್ಷಣಂಸಮುದಾಹೃತಂ ॥

ಮಕ್ಕಳಿಗೆ ಗ್ರಹಚೇಷ್ಟೆ ಎಂಬದಾಗಿ ಲೋಕದಲ್ಲಿ ವ್ಯವಹಾರವುಂಟು. ಅದನ್ನೂ ವೈದ್ಯರು ಬಾಲರೋಗದಲ್ಲಿಯೇ ಸೇರಿಸುತ್ತಾರೆ. ಅದರ ಲಕ್ಷಣ ಗಳೇನೆಂದರೆ ಗ್ರಹಚೇಷ್ಟೆ ಸಂಭವಿಸಿದ ಬಾಲಕನು ಒಂದುಕ್ಷಣ ಸಂಕಟಪಡುತ್ತಾನೆ, ಕ್ಷಣದಲ್ಲಿಯೇ ಹೆದರಿ ನಡುಗುತ್ತಾನೆ, ಅಳುತ್ತಾನೆ, ಎತ್ತಿಕೊಂಡವರನ್ನು ಕೈಯಿಂದ ಪರಚವುದು, ಹಲ್ಲಿನಿಂದ ಕಚ್ಚುವುದು, ತನ್ನ ಮೈಯನ್ನೇ ಪರಚಿಕೊಳ್ಳುವುದು, ಕಚ್ಚಿಕೊಳ್ಳುವುದು, ಮೇಲಕ್ಕೆ ನೋಡುವುದು, ಹಲ್ಲು ಕಡಿಯುವುದು, ಕಿರಕಲ ಧ್ವನಿಯಿಂದ ಕೂಗುವುದು, ಆಕಳಿಸುವುದು, ಹುಬ್ಬನ್ನು ಹಾರಿಸುವುದು, ಹಲ್ಲು ಮತ್ತು ತುಟಿಗಳನ್ನು ನಡಗಿಸುವುದು, ಬಾಯಿನಲ್ಲಿ ನೊರೆಯನ್ನು ಸುರಿಸುವುದು, ಬಡವಾಗಿ ಹೋಗುವುದು, ರಾತ್ರಿ ನಿದ್ರೆಮಾಡುವುದಕ್ಕಿಲ್ಲ, ಕಣ್ಣು ಬಾತುಹೋಗು ವುದು, ಭೇದಿಯಾಗುವುದು, ಧ್ವನಿ ಒಡೆದು ಹೋಗುವುದು, ಮಗುವಿನ ಬಾಯಲ್ಲಿ

ಶರೀರದಲ್ಲಿ ಸಹ ಮಾಂಸ ಮತ್ತು ರಕ್ತಗಳ ವಾಸನೆಯಿರುವುದು, ಊಟವನ್ನು ಮೊದಲಿನಂತೆ ಮಾಡುವುದಕ್ಕಿಲ್ಲ, ಇವುಗಳೆಲ್ಲಾ ಸಾಮಾನ್ಯ ಲಕ್ಷಣಗಳು

ಏಕನೇತ್ರಸ್ಯ ಗಾತ್ರಸ್ಯಸ್ರಾವಃಸ್ಪಂದನಕಂಪನಂ ॥ ೨೦ ॥
ಊರ್ಧ್ವಂದೃಷ್ಟ್ಯಾನಿರೀಕ್ಷೇತವಕ್ತ್ರಾಸ್ಯೋಽರಕ್ತಗಂಧಿಕಃ ॥
ದಂತಾನ್‌ಖಾದತಿವಿತ್ರಸ್ತಃಸ್ತನ್ಯಂನೈವಾಭಿನಂದತಿ ॥ ೨೧ ॥
ಸ್ಕಂದಗ್ರಹಗೃಹೀತಾನಾಂರೋದನಂಚಾಲ್ಪಮೇವಚ ॥

ಸ್ಕಂದಗ್ರಹವೆಂಬ ಬಾಲಗ್ರಹಪೀಡಿತವಾದ ಮಗುವಿನ ಲಕ್ಷಣಗಳೇನಂದರೆ ಒಂದು ಕಣ್ಣಿನಲ್ಲಿ ನೀರು ಸುರಿಯುತ್ತಿರುವುದು; ಆ ಭಾಗದ ಶರೀರವು ಯಾವಾಗ್ಯೂ ನಡುಗುವುದು; ಒಂದೊಂದುಬಾರಿ ನಡುಗುವುದು, ಯಾವಾಗ್ಯೂ ಮೇಲಕ್ಕೆ ನೋಡುತ್ತಿರುವುದು, ಮುಖವು ಒಂದುಕಡೆಗೆ ಸೊಟ್ಟಾಗಿಹೋಗುವುದು, ಮೈಯಲ್ಲೆಲ್ಲಾ ರಕ್ತದವಾಸನೆಯಿರುತ್ತದೆ, ಹಲ್ಲು ಕಡಿಯುತ್ತಿರುವುದು, ಗಾಬರಿಯಾಗಿರುವುದು ಮೊಲೆಯನ್ನು ಉಣ್ಣದೆ ದ್ವೇಷಿಸುವುದು, ಸ್ವಲ್ಪಸ್ವಲ್ಪವೇ ಅಳುವುದು, ಇವು ಲಕ್ಷಣಗಳು

ನಷ್ಟಸಂಗೋವಮೇತ್ಫೇನಂಸಂಜ್ಞಾವಾನತಿರೋದಿತಿ ॥
ಪೂಯಶೋಣಿತಗಂಧಿತ್ವಂಸ್ಕಂದಾಪಸ್ಮಾರಲಕ್ಷಣಂ ॥ ೨೨ ॥

ಸ್ಕಂದವೆಂಬ ಗ್ರಹದ ಭಾಧೆಯಿಂದ ಉಂಟಾಗುವ ಅಪಸ್ಮಾರ ರೋಗದಲ್ಲಿ ಜ್ಞಾನತಪ್ಪಿದಾಗ್ಗೆ ಬಾಯಲ್ಲಿ ನೊದಲೆ ಸುರಿಸುವುದು, ಜ್ಞಾನಬಂದಮೇಲೆ ಅಳುವುದು ದೇಹದಲ್ಲಿ ರಕ್ತ ಮತ್ತು ಮಾಂಸದ ವಾಸನೆಗಳು ಅತಿಯಾಗಿರುವುದು, ಇವು ಲಕ್ಷಣಗಳು.

ಸ್ರಸ್ತಾಂಗೋಽಭಯಚಕಿತೋಽವಿಹಂಗಗಂಧಿಸ್ಸಾಸ್ರಾವವ್ರಣ
ಪರಿಪೀಡಿತಸ್ಸಮಂತಾತ್ ॥
ಸ್ಫೋಟೈಶ್ಚಪ್ರಚಿತತನುಸ್ಸದಾಹಪಾಕೈರ್ವಿಜ್ಞೇಯೋಽಭವತಿಶಿಶುಃ
ಕ್ಷತಶ್ಶಕುನ್ಯಾ ॥ ೨೩ ॥

ಶಕುನಿಗ್ರಹ ಭಾದೆಯಿರುವ ಮಗುವಿನ ಲಕ್ಷಣಗಳೇನಂದರೆ, ಮಗುವು ಅವಯವಗಳು ಕಳಚಿಬಿದ್ದಂತೆ ಸಂಕಟ ಪಡುತ್ತಿರುತ್ತದೆ, ಯಾವಾಗ್ಯೂ ಭಯಪಟ್ಟಂತೆ ಗಾಬರಿಯಾಗಿಯೇಯಿರುತ್ತದೆ, ಮಗುವಿನ ಶರೀರದಲ್ಲಿ ಪಕ್ಷಿಗಳ ವಾಸನೆಯಿರುತ್ತದೆ, ಮೈಯ್ಯಲ್ಲೆಲ್ಲಾ ಗುಳ್ಳೆಗಳೆದ್ದು ಒಡೆದು ವ್ರಣವಾಗಿ ತೊಂದರೆಯಾ

ಗುತ್ತಿರುತ್ತದೆ, ಗುಳ್ಳೆಗಳಿದ್ದು ಅತಿಯಾಗಿ ಉರಿಯಾಗುತ್ತಿರುತ್ತದೆ, ಗುಳ್ಳೆಗಳು ಪಕ್ವಕ್ಕೆಬರುವುದು ಅದರಿಂದತೊಂದರೆಯಾಗುವುದು ಈ ಲಕ್ಷಣಗಳೆಲ್ಲಾ ಇರುತ್ತವೆ

ವ್ರಣೈಸ್ಫೋಟೈಶ್ಚಿತಂಗಾತ್ರಂಪಂಕಗಂಧಂಸ್ರವೇದಸೃಕ್ ॥
ಭಿನ್ನವರ್ಚಾಜ್ವರೀದಾಹೀರೇವತೀಗ್ರಹಲಕ್ಷಣಂ ॥ ೨೪ ॥
ಅತೀಸಾರೋಜ್ವರಸ್ತೃಷ್ಣಾತಿರ್ಯಕ್‌ಪ್ರೇಕ್ಷಣರೋದನಂ ॥
ನಷ್ಟನಿದ್ರಸ್ತಥೋದ್ವಿಗ್ನೋಗ್ರಸ್ತಃಪೂತನಯಾಶಿಶುಃ ॥ ೨೫ ॥
ಛರ್ದಿಃಕಾಸೋಜ್ವರಸ್ತೃಷ್ಣಾವಸಾಗಂಧೋತಿರೋದನಂ ॥
ಸ್ತನ್ಯದ್ವೇಷೋತಿಸಾರಶ್ಚಅಂಧಪೂತನಯಾಭವೇತ್ ॥ ೨೬ ॥
ವೇಪತೇಕಾಸತೇಕ್ಷೀಣೋನೇತ್ರರೋಗೋವಿಗಂಧಿತಾ ॥
ಛರ್ದ್ಯತೀಸಾರಯುಕ್ತಶ್ಚಶೀತಪೂತನಯಾಶಿಶುಃ ॥ ೨೭ ॥
ಪ್ರಸನ್ನವರ್ಣವದನಃಶಿರಾಭಿರಭಿಸಂವೃತಃ ॥
ಮೂತ್ರಗಂಧೀಚಬಹ್ವಾಶೀಮುಖಮುಂಡತಿಕಾಗ್ರಹೀ ॥ ೨೮ ॥
ಛರ್ದಿಸ್ಪಂದನಕಂಠಾಸ್ಯಶೋಷಮೂರ್ಛಾವಿಗಂಧಿತಾ ॥
ಊರ್ಧ್ವಂಪಶ್ಯೇದ್ದಶೇದ್ದಂತಾನ್‌ನೈಗಮೇಯ
ಗ್ರಹಂವದೇತ್ ॥ ೨೯ ॥

ಮಗುವಿಗೆ ರೇವತಿ ಗ್ರಹಬಾಧೆಯುಂಟಾದರೆ ಮೈಯೆಲ್ಲಾ ವ್ರಣಗಳು ಗುಳ್ಳೆಗಳು ಆಗುತ್ತವೆ. ಅವುಗಳಿಂದ ಕೆಸರಿನ ವಾಸನೆಯು ರಕ್ತವು ಸುರಿಯುತ್ತಿರುತ್ತದೆ, ಭೇದಿಯಾಗುತ್ತಿರುತ್ತದೆ. ಜ್ವರ ಮತ್ತು ಬಾಯಾರಿಕೆಗಳಿರುತ್ತವೆ, ಮಗುವಿಗೆ ಪೂತನ ಎಂಬ ಗ್ರಹದ ಬಾಧೆಯಾದರೆ ಅತಿಸಾರ, ಜ್ವರ, ಅತಿಯಾದಬಾಯಾರಿಕೆ, ಅಡ್ಡಡ್ಡಲಾಗಿ ನೋಡುವುದು, ಅಳುವುದು, ನಿದ್ದೆಬರುವುದಿಲ್ಲ, ವ್ಯಥೆ ಬಹಳವಾಗಿ ಇರುವುದು, ಇವು ಲಕ್ಷಣಗಳು ಅಂಧಪೂತನ ಎಂಬ ಗ್ರಹಬಾಧೆಯಾದರೆ ವಾಂತಿಯಾಗುತ್ತಿರುವುದು, ಕೆಮ್ಮು, ಜ್ವರ, ಬಾಯಾರಿಕೆ, ಮೈಯ್ಯೆಲ್ಲಾ ಮಾಂಸದ ವಾಸನೆ, ಅತಿಯಾಗಿ ಅಳೋಣ, ಸ್ತನ್ಯ ಪಾನಮಾಡದಿರುವುದು, ಅತಿಸಾರ, ಈ ಲಕ್ಷಣಗಳಿರುತ್ತವೆ. ಶೀತಪೂತನಾ ಎಂಬ ಗ್ರಹದ ಬಾಧೆಯಾದರೆ ಮಗುವು ಯಾವಾಗ್ಲೂ ನಡುಗುತ್ತಲಿರುವುದು, ಕೆಮ್ಮು, ಕ್ಷಯಿಸಿ ಹೋಗುತ್ತಿರುವುದು, ನೇತ್ರ ರೋಗಗಳಿಂದ ತೊಂದರೆಯಾಗುತ್ತಿರುವುದು, ಮೈಯ್ಯೆಲ್ಲಾ ದುರ್ವಾಸನೆಯಾಗಿರುವುದು, ವಮನ, ಅತಿಸಾರ ಇವುಗಳು ಇರುವುದು, ಈ ಲಕ್ಷಣಗಳಿರುತ್ತವೆ. ಮುಖಮುಂಡತಿಕಾ ಎಂಬ ಗ್ರಹಬಾಧೆಯುಂಟಾದರೆ ದೇಹದ ಬಣ್ಣ ಮತ್ತು ಮುಖ ಸಹ ಗೆಲುವಾಗಿಯೇ ಇರುತ್ತವೆ, ಮುಖದ ಮೇಲೆ ನರಗಳು ಎದ್ದುಕೊಂಡಿರುತ್ತವೆ,

ಮೈಯ್ಯೆಲಾ ಮೂತ್ರದ ವಾಸನೆ ಸುತ್ತಿಕೊಂಡಿರುತ್ತದೆ, ಊಟದಲ್ಲಿ ಮಿತಿ ಯಿರುವುದಿಲ್ಲ, ಇವು ಲಕ್ಷಣಗಳು. ನೈಗಮೇಯವೆಂಬ ಗ್ರಹಬಾಧೆಯುಂಟಾದರೆ ವಾಂತಿ ಮೈನಡುಕ, ಗಂಟಲು ಮತ್ತು ಬಾಯಿಸಹಾ ಒಣಗುವುದು. ಮೂರ್ಛೆ, ಮೈ ದುರ್ವಾಸನೆ, ಊರ್ಧ್ವದೃಷ್ಟಿ, ಹಲ್ಲನ್ನು ಕಡಿಯುತ್ತಿರುವುದು, ಇವು ಲಕ್ಷಣಗಳು

ಇಲ್ಲಿಗೆ ಬಾಲರೋಗ ನಿದಾನ ಸಮಾಪ್ತಿ

## ವಿಷನಿದಾನ-

**ಸ್ಥಾವರಂಜಂಗಮಂಚೈವದ್ವಿವಿಧಂವಿಷಮುಚ್ಯತೇ ॥**
**ಮೂಲಾದ್ಯಾತ್ಮಕಮಾದ್ಯಂಸ್ಯಾತ್ಪರಂಸರ್ಪಾದಿಸಂಭವಂ ॥ ೧ ॥**

ವಿಷರೋಗ ನಿದಾನವನ್ನು ಹೇಳುತ್ತಾನೆ.–ವಿಷವು ಸ್ಥಾವರವಿಷ, ಜಂಗಮ ವಿಷ ಎಂಬದಾಗಿ ಎರಡು ವಿಧ. ಇಂತಹ ವಿಷಸಂಪರ್ಕದಿಂದ ಹುಟ್ಟತಕ್ಕ ರೋಗಗಳಿಗೆ ವಿಷರೋಗಗಳೆಂದು ಹೆಸರು. ಸ್ಥಾವರವಿಷವೆಂದರೆ ಮೂಲಿಕೆಗಳು, ಧಾತುಗಳು, ಇವುಗಳ ಸಮ್ಬಂಧವಾದ ವಿಷಗಳಿಗೆ ಹೆಸರು. ಇವು ಸಾಮಾನ್ಯವಾಗಿ ಹತ್ತು ವಿಧ. (1) ಮೂಲ ಅಂದರೆ ಬೇರು. (2) ಪತ್ರ ಅಂದರೆ ಎಲೆ. (3) ಫಲ ಅಂದರೆ ಹಣ್ಣುಕಾಯಿಗಳು. (4) ಪುಷ್ಪ ಅಂದರೆ ಹೂವು. (5) ತ್ವಕ್ ಅಂದರೆ ತೊಗಟೆ. (6) ಕ್ಷೀರ ಅಂದರೆ ಹಾಲು. (7) ಸಾರ ಅಂದರೆ ಮೂಲಿಕಾಸಾರ. (8) ನಿರ್ಯಾಸ ಎಂದರೆ ಅಂಟು. (9)ಕಂದ ಅಂದರೆ ಗೆಡ್ಡೆ. (10) ಧಾತು ಅಂದರೆ ಖನಿಜವಸ್ತುಗಳಿಂದ ಉತ್ಪನ್ನವಾಗುವ ವಿಷ ಎಂಬದಾಗಿ, ಜಂಗಮ ವಿಷಗಳೆಂದರೆ ಪ್ರಾಣಿ ಸಂಬಂಧಗಳಾದ ವಿಷಗಳು, ಇವು ಸಾಮಾನ್ಯವಾಗಿ ಹದಿನಾರುವಿಧ. (1) ದೃಷ್ಟಿ ವಿಷ. (2) ಉಸಿರು. (3) ಕೋರೆಹಲ್ಲು. (4) ಉಗುರು. (5) ಮೂತ್ರ. (6) ಮಲ (7) ಶುಕ್ರ (8) ಜೊಲ್ಲು. (9) ಸ್ಪರ್ಶ ಎಂದರೆ ಮುಟ್ಟೋಣ. (10) ಬಾಯಿಂದ ಕಚ್ಚೋಣ. (11) ಶರ್ದಿತ ಅಂದರೆ ಅಪಾನವಾಯು. (12) ಗುದಾಸ್ಥಿ. (13) ಪಿತ್ತ. (14) ಶೂಕ. (15) ಶವ. (16) ಅರಾಳ. ಈ ರೀತಿಯಾದ ಸ್ಥಾವರ ಮತ್ತು ಜಂಗಮ ವಿಷಗಳ ಸಂಪರ್ಕದಿಂದ ಹುಟ್ಟತಕ್ಕ ರೋಗಗಳಿಗೆಲ್ಲಾ ವಿಷರೋಗ ಗಳೆಂಬು ಹೆಸರು.

**ನಿದ್ರಾಂತಂದ್ರಾಂಕ್ಲಮಂದಾಹಮಪಾಕಂಲೋಮಹರ್ಷಣಂ ॥**
**ಶೋಥಂಚೈವಾತಿಸಾರಂಚಜಂಗಮಂಕುರುತೇವಿಷಂ ॥ ೨ ॥**

ಜಂಗಮವಿಷವೆಂಬ ವಿಷವರ್ಗಕ್ಕೆ ಸೇರಿದ ವಿಷದಿಂದುಂಟಾಗುವ ರೋಗಗಳು ಯಾವುವೆಂದರೆ, ತೂಕಡಿ, ಆಕಳಿಕೆ, ಬಳಲಿಕೆ, ಮೈಯುರಿ, ಅಜೀರ್ಣ, ಮೈ ಕೂದಲುಗಳೆಲ್ಲಾ ಎದ್ದುಕೊಂಡಿರುವುದು, ಶರೀರದಲ್ಲಿ ಶೋಭೆ ಬರುವುದು, ಅತಿಸಾರ, ಈ ರೋಗಗಳನ್ನುಂಟುಮಾಡುತ್ತದೆ.

ಸ್ಥಾವರಂಚಜ್ವರಂಹಿಕ್ಕಾಂದಂತಹರ್ಷಗಲಗ್ರಹಂ ॥
ಫೇನಚ್ಛರ್ದ್ಯರುಚಿಶ್ವಾಸಂಮೂರ್ಛಾಂಚಕುರುತೇವಿಷಂ ॥ ೩ ॥

ಸ್ಥಾವರ ವಿಷವರ್ಗಕ್ಕೆ ಸೇರಿದ ಸಂಪರ್ಕದಿಂದ ಜ್ವರ, ಬಿಕ್ಕಳಿಕೆ, ದಂತ ಹರ್ಷವೆಂದರೆ ಹುಳಿಯನ್ನು ತಿಂದರೆ ಹಲ್ಲು ಸುಳ್ಳೆನ್ನುವಂತೆ ಹಲ್ಲೆಲ್ಲಾ ಸುಳ್ಳೆನ್ನುವುದು, ಗಂಟಲು ಹಿಡಿದುಕೊಳ್ಳುವುದು, ನೊರೆಯಾಗಿ ವಾಂತಿಯಾಗುವುದು, ನಾಲಿಗೆ ರುಚಿ ತಪ್ಪಿಹೋಗಿರುವುದು, ಊರ್ಧ್ವಶ್ವಾಸ ತೋರುವುದು, ಮೂರ್ಛೆ ಬರುತ್ತಿರುವುದು, ಈ ರೋಗಗಳೆಲ್ಲಾ ಇರುತ್ತವೆ.

ಇಂಗಿತಜ್ಞೋಮನುಷ್ಯಾಣಾಂವಾಕ್ಚೇಷ್ಟಾಮುಖವೈಕೃತೈಃ ॥
ಜಾನೀಯಾದ್ವಿಷದಾತಾರಮೇಭಿರ್ಲಿಂಗೈಶ್ಚಬುದ್ಧಿಮಾನ್ ॥ ೪ ॥
ನದದಾತ್ಯುತ್ತರಂಪೃಷ್ಟೋವಿವಕ್ಷುರ್ಮೋಹಮೇತಿಚ ॥
ಅಪಾರ್ಥಂಬಹುಸಂಕೀರ್ಣಂಭಾಷತೇಚಾಪಿಮೂಢವತ್ ॥ ೫ ॥
ಹಸತ್ಯಕಸ್ಮಾತ್‌ಸ್ಫೋಟಯೇದಂಗುಲೀರ್ವಿಲಿಖೇನ್ಮಹೀಂ ॥
ವೇಪಥುಶ್ಚಾಸ್ಯಭವತಿತ್ರಸ್ತಶ್ಚಾನ್ಯೋನ್ಯಮೀಕ್ಷತೇ ॥ ೬ ॥
ವಿವರ್ಣವಕ್ತ್ರೋಧ್ಯಾಮಶ್ಚನಖೈಃಕಿಂಚಿಚ್ಛಿನತ್ತ್ಯಪಿ ॥
ಆಲಭೇತಾಸನಂದೀನಃಕರೇಣಚಶಿರೋರುಹಂ ॥ ೭ ॥
ವರ್ತತೇವಿಪರೀತಶ್ಚವಿಷದಾತಾವಿಚೇತನಃ ॥

ವಿಷವನ್ನು ಕೊಟ್ಟವನ ಲಕ್ಷಣಗಳನ್ನು ಹೇಳುತ್ತಾನೆ.—ವಿಷದಾತೃವನ್ನು ಗುರ್ತಿಸಬೇಕಾದರೆ ಸಾಮಾನ್ಯವಾಗಿ ಮನುಷ್ಯರ ಮಾತು, ಚೇಷ್ಟೆಗಳು, ಮುಖ ವಿಕಾರ, ಇವುಗಳ ಲಕ್ಷಣಗಳಿಂದ ಮನುಷ್ಯರ ಅಭಿಪ್ರಾಯವನ್ನು ತಿಳಿದುಕೊಳ್ಳುವ ಶಕ್ತಿಯಿರಬೇಕು, ಅಲ್ಲದೆ ಮುಂದೆಹೇಳುವ ಲಕ್ಷಣಗಳನ್ನು ನೋಡಿ ವಿಷದಾತನನ್ನು ಗುರ್ತುಮಾಡಬಹುದು, ವಿಷದಾತೃವು ಹೇಳಿದ್ದಕ್ಕೆ ಉತ್ತರಕೊಡುವುದಿಲ್ಲ ಒಂದೊಂದುಸಾರಿ ಹೇಳುವುದಕ್ಕೆ ಹೋಗಿ ಅಜ್ಞಾನದಿಂದ ತಪ್ಪಿಹೋಗುತ್ತಾನೆ. ಕೆಲವುಸಾರಿ ಅರ್ಥವಿಲ್ಲದ ಮಾತುಗಳನ್ನಾಡುವುದು, ಮತ್ತೆ ಕೆಲವುಸಾರಿ ಗಲಿಬಿಲಿಯಾಗಿ ಒಂದುಬಗೆಯ ಹುಚ್ಚು ಮಾತುಗಳನ್ನಾಡುವುದು ಹೀಗೆಲ್ಲಾ ಮಾಡುತ್ತಾನೆ ಕಾರಣವಿಲ್ಲದೆ ಅಕಸ್ಮಾತ್ತಾಗಿ ನಗುವುದು, ನಿರುತ್ತರನಾಗಿ ಕೈ ಕಾಲುಗಳನ್ನು ತಿಕ್ಕಿ

ಕ್ಕೊಳ್ಳುವುದು, ನಡುಗುವುದು, ಹೆದರಿ ಮುಖಮುಖ ನೋಡುವುದು, ಮುಖ ಕಾಂತಿಯು ಮಂಕಾಗುವುದು, ಉಗುರಿನಿಂದ ಕಡ್ಡಿಯನ್ನು ಮುರಿಯುತ್ತಿರುವುದು, ಕುಳಿತುಕೊಳ್ಳ ಹೇಳಿದರೆ ಸಂಕೋಚದಿಂದ ಕೂತುಕೊಳ್ಳುವುದು, ಈ ದುರ್ಲಕ್ಷಣ ಗಳೆಲ್ಲಾ ವಿಷದಾತೃವಿನಲ್ಲಿ ಕಂಡು ಬರುತ್ತಿರುತ್ತವೆ.

ಉದ್ವೇಷ್ಟನಂಮೂಲವಿಷೈಃಪ್ರಲಾಪೋಮೋಹಏವಚ ॥ ೮ ॥
ಜೃಂಭಣಂವೇಪನಂಶ್ವಾಸೋಜ್ಞೇಯಂ ಪತ್ರವಿಷೇಣತು ॥
ಮುಷ್ಕಶೋಥಃ ಫಲವಿಷೈರ್ದಾಹೋನ್ನದ್ವೇಷಏವಚ ॥ ೯ ॥
ಭವೇತ್ ಪುಷ್ಪವಿಷೈಶ್ಛರ್ದಿರಾಧ್ಮಾನಂಶ್ವಾಸಏವಚ ॥
ತ್ವಕ್‌ಸಾರನಿರ್ಯಾಸವಿಷೈರುಪಯುಕ್ತೈರ್ಭವಂತಿಹಿ ॥ ೧೦ ॥
ಆಸ್ಯದೌರ್ಗಂಧ್ಯಪಾರುಷ್ಯಶಿರೋರುಕ್ಕಫಸಂಸ್ರವಾಃ ॥
ಫೇನಾಗಮಃಕ್ಷೀರವಿಷೈರ್ವಿಡ್ಭೇದೋಗುರುಗಾತ್ರತಾ ॥ ೧೧ ॥
ಹೃತ್ಪೀಡನಂ ಧಾತುವಿಷೈರ್ಮೂರ್ಛಾದಾಹಶ್ಚತಾಲುನಿ ॥
ಪ್ರಾಯೇಣಕಾಲಘಾತೀನಿವಿಷಾಣ್ಯೇತಾನಿನಿರ್ದಿಶೇತ್ ॥ ೧೨ ॥

ವಿಷಭೇದದಿಂದ ಅವುಗಳನ್ನು ತಿಂದವರಲ್ಲಿ ಕಾಣಬರುವ ದುರ್ಲಕ್ಷಣಗಳನ್ನು ಹೇಳುತ್ತಾನೆ.—ಕೆಲವು ಬೇರುಗಳು ವಿಷಸ್ವಭಾವದವುಗಳಿರುತ್ತವೆ, ಉದಾಹರಣೆ ಗಾಗಿ ವತ್ಸನಾಭಿಯನ್ನು ಹೇಳಬಹುದು. ಇದನ್ನು ತಿಂದರೆ ದೊಣ್ಣೆಯಿಂದ ಪೆಟ್ಟು ಬಿದ್ದಂತೆ ಶರೀರದಲ್ಲೆಲ್ಲಾ ನೋವು ವಡತಗಳಿರುತ್ತವೆ, ಅಳುವುದು, ಆಗಾಗ್ಗೆ ಜ್ಞಾನ ಹೋಗುವುದು ಆಕಳಿಕೆ, ನಡುಕ, ಉಬ್ಬಸ, ಇವುಗಳೆಲ್ಲಾ ಉಂಟಾಗುತ್ತವೆ, ಕೆಲವು ಮೂಲಿಕೆಗಳ ಎಲೆಗಳು ವಿಷಸ್ವಭಾವದವುಗಳಾಗಿರುತ್ತವೆ, ಉದಾಹರಣೆಗಾಗಿ ತುರಚೆಯನ್ನು ತೆಗೆದುಕೊಳ್ಳಬಹುದು, ಇಂತಹ ಪತ್ರವಿಷವನ್ನು ತಿಂದವರಿಗೆ ವೃಷಣಗಳು ಊದಿಕೊಳ್ಳುತ್ತವೆ, ಕೆಲವು ಫಲಗಳೇ ವಿಷಸ್ವಭಾವದವಿರುತ್ತವೆ, ಇವುಗಳಿಂದ ವ್ಯೆಯ್ಯುರಿ ಅನ್ನದ್ವೇಷ ಇವುಗಳುಂಟಾಗುತ್ತವೆ,ಕೆಲವು ಪುಷ್ಪಗಳು ವಿಷಸ್ವಭಾವದವಿರುತ್ತವೆ, ಇವುಗಳಿಂದ ವಮನ. ಹೊಟ್ಟೆಯುಬ್ಬರ, ಉಬ್ಬಸ ಉಂಟಾಗುತ್ತದೆ. ಕೆಲವು ತೊಗಟೆಗಳು, ಕೆಲವು ಹಗಿನುಗಳು. ಇವುಗಳೆಲ್ಲಾ ವಿಷ ಸ್ವಭಾವದವುಗಳಿರುತ್ತವೆ, ಇವುಗಳಿಂದ ಬಾಯಿ ದುರ್ವಾಸನೆ, ಬಾಯಿ ಒಡೆದು ಒರಟಾಗುವುದು, ತಲೆನೋವು ಕಫವು ಯಾವಾಗ್ಯೂ ಬಾಯಿಂದ ಹೊರಡುತ್ತಿರು ವುದು, ಬಾಯಿಂದ ನೊರೆ ಸುರಿಯುವುದು, ಈ ದುರ್ಗುಣಗಳಾಗುತ್ತದೆ. ಕೆಲವು ಹಾಲುಗಳು ವಿಷಸ್ವಭಾವದವುಗಳಿರುತ್ತವೆ, ಇವುಗಳಿಂದ ಮಲಪ್ರವೃತ್ತಿ, ವ್ಯೆಭಾರ, ಹೃದಯವೇದನೆ, ಈ ದುರ್ಗುಣಗಳು ಹುಟ್ಟುತ್ತವೆ. ಕೆಲವು ಖನಿಜ ಪದಾರ್ಥ ಗಳಾಗಿರುತ್ತವೆ, ಇವುಗಳಿಂದ ಮೂರ್ಛೆ, ದವಡೆಯಲ್ಲಿ ಉರಿ ಇವುಗಳುಂಟಾಗುತ್ತವೆ.

ಈ ವಿಷಗಳೆಲ್ಲಾ ಒಂದೇ ಕ್ಷಣದಲ್ಲಿ ಕೊಲ್ಲದಿದ್ದರೂ ಕಾಲಾಂತರದಿಂದ ಸಾವಕಾಶ ವಾಗಿ ಕೊಂದುಹಾಕುತ್ತವೆ.

ಸದ್ಯಃಕ್ಷತಂಪಚ್ಯತೇಯಸ್ಯಜಂತೋಃಸ್ರವೇದ್ರಕ್ತಂಪಚ್ಯತೇ
ಚಾಪ್ಯಭೀಕ್ಷ್ಣಂ ॥
ಕೃಷ್ಣಭೂತಂಕ್ಲಿನ್ನಮತ್ಯರ್ಥಪೂತಿಕ್ಷತಾನ್ಮಾಂಸಂಶೀರ್ಯತೇ
ಚಾಪಿಯಸ್ಯ ॥ ೧೩ ॥
ತೃಷ್ಣಾಮೂರ್ಛಾಜ್ವರದಾಹೌಚಯಸ್ಯದಿಗ್ಧಾಹತಂಪುರುಷಂ
ತಂವ್ಯವಸ್ಯೇತ್ ॥
ಲಿಂಗಾನ್ಯೇತಾನ್ಯೇವಕುರ್ಯಾದಮಿತ್ರೈರ್ವ್ರಣೇವಿಷಂಯಸ್ಯದತ್ತಂ
ಪ್ರಮಾದಾತ್ ॥ ೧೪ ॥

ಪೂರ್ವಕಾಲದಲ್ಲಿ ಕತ್ತಿ ಮೊದಲಾದ ಶಸ್ತ್ರಗಳಿಗೆ ವಿಷವನ್ನು ಲೇಪವಾಡಿ ಅವುಗಳನ್ನು ಯುದ್ಧಕಾಲಗಳಲ್ಲಿ ಶತ್ರು ನಿಗ್ರಹಾರ್ಥವಾಗಿ ಉಪಯೋಗಿಸುವ ಪದ್ಧತಿಯಿತ್ತೆಂದು ಹೇಳುತ್ತಾರೆ, ಅಂತಹ ಸಂದರ್ಭಗಳಲ್ಲಿ ವ್ರಣಚಿಕಿತ್ಸಕರು ಅಂತಹ ಶಸ್ತ್ರಗಳಿಂದೇನಾದರೂ ವ್ರಣಗಳು ಸಂಭವಿಸಿರಬಹುದೊ ಎಂಬುವುದನ್ನು ಪರಿಕ್ಷಿಸಲೋಸ್ಕರ ಅದನ್ನು ಹೇಳುತ್ತಾನೆ,—ವಿಷವನ್ನು ಸವರಿದ ಶಸ್ತ್ರದಿಂದ ಉಂಟಾದ ಗಾಯವು ರಕ್ತ ಸುರಿಯುತ್ತಿರುವಾಗಲೇ ಬಹಳ ಜಾಗ್ರತೆಯಾಗಿ ಕೊಳೆಯುವುದಕ್ಕೆ ಪ್ರಾರಂಭವಾಗುತ್ತದೆ, ಗಾಯವು ಕಪ್ಪಾಗಿ ಯಾವಾಗ್ಯೂ ದ್ರವಯುಕ್ತವಾಗಿಯೇ ಇರುತ್ತದೆ, ದುರ್ವಾಸನೆ ಬರುತ್ತಿರುತ್ತದೆ, ಗಾಯದಿಂದ ಮಾಂಸವು ಕೊಳೆತು ಬೀಳುವುದಕ್ಕೆ ಮೊದಲಾಗುತ್ತದೆ, ಇದರೊಟ್ಟಿಗೆ ವ್ರಣ ರೋಗಿಗೆ ಬಾಯಾರಿಕೆ, ಆಗಾಗ್ಯೆ ಮೂರ್ಛೆಬರುವುದು, ಜ್ವರ, ಮೈಯ್ಯುರಿ, ಇವುಗಳೆಲ್ಲಾ ಇರುತ್ತವೆ, ಈ ಲಕ್ಷಣಗಳಿದ್ದಲ್ಲಿ ಅಂತಹ ವ್ರಣವಿಷಲಿಪ್ತವಾದ ಶಸ್ತ್ರದಿಂದಾದದ್ದೆಂತ ತಿಳಿಯಬೇಕು, ಮೊದಲೇ ಶರೀರದಲ್ಲಿ ಆಗಿರುವ ವ್ರಣಗಳಿಗೆ ಶತ್ರುಗಳಾದವರು ಯಾರಾದರೂ ವಿಷವನ್ನು ಸೇರಿಸಿದರೂ ಅದರ ಲಕ್ಷಣಗಳೂ ಹೀಗೆಯೇ ಇರುತ್ತವೆ.

ಸಪೀತಂಗೃಹಧೂಮಾಭಂಪುರೀಷಂಯೋತಿಸಾರ್ಯತೇ ॥
ಫೇನಮುದ್ವಮತೇಚಾಪಿವಿಷಪೀತಂತಮಾದಿಶೇತ್ ॥ ೧೫ ॥

ಇಲ್ಲಣದ ನೀರಿನಂತೆಯೂ ಹಳದಿಯ ಬಣ್ಣದಿಂದ ಕೂಡಿಯೂ ಮಲವು ನೀರಾಗಿ ಪ್ರವರ್ತಿಯಾಗುತ್ತಿರುವುದು, ಬಾಯಿನಿಂದ ಯಾವಾಗ್ಯೂ ನೊರೆ

ಸುರಿಯುತ್ತಿರುವುದು, ಈ ಲಕ್ಷಣಗಳು ಕಂಡುಬಂದರೆ ವಿಷವನ್ನು ಕುಡಿದಿದ್ದಾನೆಂದು ಗುರ್ತಿಸಬೇಕು.

ವಾತಪಿತ್ತಕಫಾತ್ಮಾನೋಭೋಗಿಮಂಡಲರಾಜಿಲಾಂ ॥
ಯಥಾಕ್ರಮಂಸಮಾಖ್ಯಾತಾದ್ವ್ಯಂತರಾದ್ವಂದ್ವರೂಪಿಣಂ ॥ ೧೬ ॥

ಈ ವರಿವಿಗೂ ಸ್ಥಾವರ ವಿಷವಿಕಾರಗಳನ್ನು ಹೇಳಿ ಜಂಗಮ ವಿಷಗಳನ್ನು ಹೇಳುವ ಪ್ರಾರಂಭದಲ್ಲಿ ಜಂಗಮವಿಷಗಳ ಮಧ್ಯೆ ಕ್ರೂರತಮಗಳಾದ ಸರ್ಪವಿಷಗಳನ್ನು ಹೇಳಲೆಳಸಿ ಸರ್ಪಗಳ ಜಾತಿಪ್ರಭೇದಗಳನ್ನು ತಿಳಿಸುತ್ತಾನೆ. ಭೋಗಿ, ಮಂಡಲ, ರಾಜಿಲ, ಎಂಬ ಪ್ರಧಾನತಮಗಳಾದ ಮೂರು ಸರ್ಪಜಾತಿಗಳುಂಟು ಇವು ಮೂರೂ ಕ್ರಮನಾಗಿ ವಾತ, ಪಿತ್ತ, ಕಫಸ್ವಭಾವದವುಗಳು, ಅಂದರೆ ಭೋಗಿ ಎಂಬ ಸರ್ಪವಿಷದಿಂದ ವಾತವಿಕಾರಗಳೂ, ಮಂಡಲವೆಂಬ ಸರ್ಪವಿಷದಿಂದ ಪಿತ್ತ ವಿಕಾರಗಳೂ, ರಾಜಿಲವೆಂಬ ಸರ್ಪವಿಷದಿಂದ ಶ್ಲೇಷ್ಮವಿಕಾರಗಳೂ, ವಿಶೇಷವಾಗಿ ಉಂಟಾಗುತ್ತವೆ. ಈ ಸರ್ಪಗಳ ಜಾತಿಸಾಂಕರ್ಯದಿಂದ ಹುಟ್ಟಿದ ಸರ್ಪಗಳ ವಿಷದಿಂದ ಎರಡೆರಡು ದೋಷಗಳ ಲಕ್ಷಣಗಳು ಕಾಣಬರುತ್ತವೆ,

ದಂಶೋಭೋಗಿಕೃತಃಕೃಷ್ಣಸ್ಸರ್ವವಾತವಿಕಾರಕೃತ್ ॥
ಪೀತೋಮಂಡಲಿಜಶ್ಶೋಥೋಮೃದುಃಪಿತ್ತವಿಕಾರವಾನ್ ॥ ೧೭ ॥
ರಾಜಿಲೋತ್ಥೋಭವೇದ್ದಂಶಸ್ಥಿರಶೋಥಶ್ಚಪಿಚ್ಛಿಲಃ ॥
ಪಾಂಡುಸ್ನಿಗ್ಧೋತಿಸಾಂದ್ರಾಸೃಕ್ ಸರ್ವಶ್ಲೇಷ್ಮವಿಕಾರಕೃತ್ ॥೧೮॥

ಭೋಗಿ ಎಂಬಜಾತಿಗೆ ಸೇರಿದ ಸರ್ಪವು ಕಡಿದ ಘಾಯವು ಕಪ್ಪಾಗಿರುತ್ತದೆ ಸಮಸ್ತ ವಿಧವಾದ ವಾತ ವಿಕಾರಗಳೂ ಈ ಸರ್ಪದಂಶದಿಂದುಂಟಾಗುತ್ತದೆ. ಮಂಡಲಿ ಎಂಬ ಸರ್ಪವು ಕಡಿಯೋಣದರಿಂದುಂಟಾಗುವ ಬಾಕು ಹಳದಿಯು ಬಣ್ಣವಾಗಿ ಮೃದುವಾಗಿರುತ್ತದೆ, ಪಿತ್ತಪ್ರಕೋಪಜನ್ಯವಿಕಾರಗಳೆಲ್ಲಾ ಇದರಿಂದ ಉಂಟಾಗುತ್ತದೆ, ರಾಜಿಲವೆಂಬ ಸರ್ಪವು ಕಡಿದರೆ ಬಾಕುಗಟ್ಟಿಯಾಗಿ ಜಿಗಟಾಗಿ ಬೆಳ್ಳಗಿರುತ್ತದೆ, ಆದರಿಂದ ಹೊರಡುವ ರಕ್ತವು ಅತಿಗಟ್ಟಿಯಾಗಿರುತ್ತದೆ, ಇದರಿಂದ ಶ್ಲೇಷ್ಮಪ್ರಕೋಪಜನ್ಯಗಳಾದ ವಿಕಾರಗಳೆಲ್ಲಾ ಉಂಟಾಗುತ್ತಿರುತ್ತವೆ.

ಅಶ್ವತ್ಥದೇವಾಯತನಶ್ಮಶಾನವಲ್ಮೀಕಸಂಧ್ಯಾಸುಚ
ತುಷ್ಪದೇಷು ॥
ಯಾಮ್ಯೇಚದಷ್ಟಾಃಪರಿವರ್ಜನೀಯಾಋಕ್ಷೇಶಿರಾಮರ್ಮ
ಸುಯೇಚದಷ್ಟಾಃ ॥ ೧೯ ॥

ದರ್ವೀಕರಾಣಾಂವಿಷಮಾಶುಘಾತಿಸರ್ವಾಣಿಚೋಷ್ಣೇ
ದ್ವಿಗುಣೀಭವಂತಿ ॥

ಸರ್ಪದಂಶದ ಅಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ.-ಅಶ್ವತ್ಥದ ಕಟ್ಟೆಯಲ್ಲಿ ಹಾವುಕಡಿದರೆ ಅಸಾಧ್ಯವೆಂದು ತಿಳಿಯಬೇಕು, ದೇವಾಲಯಗಳಲ್ಲಿ ಕಡಿದರೂ ಅಸಾಧ್ಯ, ಶ್ಮಶಾನ, ಹುತ್ತದ ಸಮೀಪ ಇತರಹಪ್ರದೇಶಗಳಲ್ಲಿ ಸಂಧ್ಯಾಕಾಲಗಳಲ್ಲಿ ರಾಜಬೀದಿಗಳಲ್ಲಿ ಮತ್ತು ಭರಣಿನಕ್ಷತ್ರದಲ್ಲಿ ಸಹ ಸರ್ಪಗಳು ಕಡಿದರೆ ಚಿಕಿತ್ಸೆಗೆ ಅಸಾಧ್ಯವೆಂದು ತಿಳಿದು ಬಿಡಬೇಕು, ದರ್ವೀಕರವೆಂಬ ಉದ್ದವಾದ ಬಾಲವುಳ್ಳ ಜಾತಿಯ ಸರ್ಪದವಿಷವು ಬಹುಜಾಗ್ರತೆಯಾಗಿ ಕೊಲ್ಲುತ್ತದೆ, ಸಮಸ್ತವಾದ ಸರ್ಪಜಾತಿಯ ವಿಷಗಳೂ ಉಷ್ಣಕಾಲದಲ್ಲಿ ದ್ವಿಗುಣ ವೇಗಯುಕ್ತವಾಗುತ್ತವೆ.

ಅಜೀರ್ಣಪಿತ್ತಾತಪಪೀಡಿತೇಷುಬಾಲೇಷುವೃದ್ಧೇಷುಬುಭುಕ್ಷಿ
ತೇಷು ॥
ಕ್ಷೀಣಕ್ಷತೇಮೇಹಿನಿಕುಷ್ಟಯುಕ್ತೇರೂಕ್ಷೇಬಲೇಗರ್ಭವತೀಷು
ಚಾಪಿ ॥

ಅಜೀರ್ಣರೋಗಿಗಳು ಪಿತ್ತಪ್ರಕೋಪವುಳ್ಳವರು, ಬಿಸಿಲಿನಿಂದ ಬಳಲಿದವರು, ಹುಡುಗರು, ಮುದುಕರು, ಹಸಿವುಗೊಂಡವರು, ಕ್ಷಯಿಸಿ ಹೋದವರು, ಗಾಯಪಟ್ಟವರು, ಮೇಹ ರೋಗಿಗಳು, ಕುಷ್ಠ ರೋಗಿಗಳು, ರೂಕ್ಷ ದೇಹಿಗಳು, ಬಲಹೀನರು ಗರ್ಭಿಣೀಸ್ತ್ರೀಯರು, ಇವರುಗಳಿಗೆಲ್ಲಾ ವಿಷವೇಗವು ಬಹುಹೆಚ್ಚು.

ಶೀತಾಭಿರದ್ಭಿಶ್ಚ ನರೋಮಹರ್ಷೋವಿಷಾಭಿಭೂತಂಪರಿವರ್ಜ
ಯೇತ್ತಂ ॥
ಜಿಹ್ಮಂಮುಖಂಯಸ್ಯಚಕೇಶಶಾತೋನಾಸಾವಸಾದಶ್ಚ ಸಕಂಠ
ಭಂಗಃ ॥ ೨೨ ॥
ಕೃಷ್ಣಸ್ಸರಕ್ತಶ್ಶಯಥುಶ್ಚ ದಂಶೇಹನ್ವೋಸ್ಥಿರತ್ವಂಚವಿವರ್ಜ
ನೀಯಃ ॥
ವರ್ತಿರ್ಘನಾಯಸ್ಯನಿರೇತಿವಕ್ತ್ರಾದ್ರಕ್ತಂಸ್ರವೇದೂರ್ಧ್ವ
ಮಧಶ್ಚ ಯಸ್ಯ ॥ ೨೩ ॥
ದಂಷ್ಟ್ರಾನಿಪಾತಾಶ್ಚತುರಶ್ಚ ಯಸ್ಯತಂಚಾಪಿವೈದ್ಯಃ ಪರಿವರ್ಜ
ಯೇಚ್ಚ ॥
ಉನ್ಮತ್ತಮತ್ಯರ್ಥಮುಪದ್ರುತಂವಾಹೀನಸ್ವರಂವಾಪ್ಯಥವಾವಿ
ವರ್ಣಂ ॥ ೨೪ ॥

ಸಾರಿಷ್ಟಮತ್ಯರ್ಥಮವೇಗಿನಂ ಚಜಹ್ಯಾತ್ತ್ವಾನರಂ ಕರ್ಮಣ ನತತ್ರ ಕುರ್ಯಾತ್ ॥

ಹಾವಿನವಿಷವು ದೇಹದಲ್ಲಿ ವ್ಯಾಪಿಸಿರುವಾಗ್ಯೆ ಮೈಮೇಲೆ ಕಣ್ಣೀರು ಎರಚಿದರೆ ಯಾರಿಗೆ ರೋಮಾಂಚಿತವೇ ಆಗುವುದಿಲ್ಲವೊ ಅಂತವರಿಗೆ ಅಸಾಧ್ಯವೆಂದು ಚಿಕಿತ್ಸೆ ಮಾಡದೆ ಬಿಟ್ಟುಬಿಡಬೇಕು. ಮತ್ತು ಮುಖವು ವಕ್ರವಾಗಿರುವುದು, ಸಾಮಾನ್ಯವಾಗಿ ಎಳೆದಮಾತ್ರವೇ ಕೂದಲುಗಳು ಕಿತ್ತು ಬರುವುದು, ವಾಸನೆ ತಿಳಿಯದೆ ಹೋಗುವುದು, ಗಂಟಲು ಕೆಟ್ಟು ಧ್ವನಿ ಖಿನ್ನವಾಗುವುದು, ಹಾವು ಕಡಿದ ಸ್ಥಳದಲ್ಲಿ ಕಪ್ಪಾದ ಮತ್ತು ರಕ್ತವರ್ಣದಿಂದ ಕೂಡಿದ ಶೋಭೆಯು ಬಂದಿರುವುದು, ದವಡೆಗಳು ಬಂದಾಗಿ ಹಿಡಿದುಹೋಗುವುದು, ಈ ದುರ್ಲಕ್ಷಣಗಳಿದ್ದರೂ ಬಿಟ್ಟುಬಿಡಬೇಕು, ಬತ್ತಿಯಹಾಗೆ ಗಟ್ಟಿಯಾದಜೊಲ್ಲು ಬಾಯಿಂದ ಸುರಿಯುತ್ತಿರುವುದು, ಊರ್ಧ್ವಾಧೋದ್ವಾರಗಳಿಂದ ರಕ್ತಸ್ರಾವವಾಗುತ್ತಿರುವುದು, ಹಾವು ಕಡಿದ ಜಾಗದಲ್ಲಿ ಕೊರೇಹಲ್ಲಿನ ನಾಲ್ಕು ಗುರುತುಗಳು ಕಾಣುತ್ತಿರುತ್ತವೆ, ಈ ದುರ್ಲಕ್ಷಣಗಳಿದ್ದರೂ ಬಿಟ್ಟುಬಿಡಬೇಕು. ಹಾವು ಕಡಿದು ಹುಚ್ಚುಹಿಡಿದಿರುವುದು, ಜ್ವರ, ಅತಿಸಾರಾದ್ಯುಪದ್ರವಗಳು ಅಧಿಕವಾಗಿ ಇರುವುದು, ಧ್ವನಿ ಕುಗ್ಗಿಹೋಗಿರುವುದು, ದೇಹದ ಬಣ್ಣ ಕೆಟ್ಟುಹೋಗಿರುವುದು, ಮರಣ ಚಿನ್ಹೆಗಳು ತೋರುತ್ತಿರುವುದು, ಗಮನಾಗಮನ ಶಕ್ತಿಯು ಕೆಟ್ಟುಹೋಗಿರುವುದು, ಹೀಗಿದ್ದರೂ ಅಂತವರಿಗೆ ಚಿಕಿತ್ಸೆ ಮಾಡಬಾರದು.

ಜೀರ್ಣಂ ವಿಷಘ್ನೌಷಧಿಭಿರ್ಹತಂವಾದಾವಾಗ್ನಿವಾತಾತಪಶೋಷಿತಂವಾ ॥ ೨೫ ॥

ಸ್ವಭಾವತೋವಾಗುಣವಿಪ್ರಹೀನಂ ವಿಷಂಹಿದೋಷೀವಿಷತಾಮುಪೈತಿ ॥

ವಿಷವು ದೂಷೀವಿಷತ್ವವನ್ನು ಅಂದರೆ ಶಕ್ತಿಹೀನವಿಷತ್ವವನ್ನು ಹೊಂದುವ ಬಗೆಯನ್ನು ಹೇಳುತ್ತಾನೆ—ವಿಷವು ವಿಷಪ್ರತಿಕೂಲಗಳಾದ ಔಷಧಿಗಳಿಂದ ಜೀರ್ಣವಾಗುವುದು, ಅಂದರೆ ಕುಂಠಿತ ಶಕ್ತಿಕವಾಗುವುದು, ಕಾಡುಗಿಚ್ಚು, ಗಾಳಿ, ಬಿಸಲು ಇವುಗಳು ತಗಲೋಣದರಿಂದ ಶೋಷಿಸಿಹೋಗಿ ಶಕ್ತಿಹೀನವಾಗುವುದು, ಸ್ವಾಭಾವಿಕವಾಗಿಯೇ ಕೆಲವು ವಿಷಗಳು ವಿಷಕ್ಕೆ ಇರಬೇಕಾದ ಸಂಪೂರ್ಣ ಶಕ್ತಿಯನ್ನು ಹೊಂದದಿರುವುದು, ಈ ಕಾರಣಗಳಿಂದ ವಿಷವು ದೂಷೀವಿಷತ್ವವನ್ನು ಹೊಂದುತ್ತದೆ.

ವೀರ್ಯೋಲ್ಪಭಾವಾನ್ನ ನಿಪಾತಯೇತ್ತತ್ ಕಫಾನ್ವಿತಂವರ್ಷ
ಗಣಾನುಬಂಧಿ ॥ ೨೬ ॥
ತೇನಾರ್ದಿತೋಭಿನ್ನಪುರೀಷವರ್ಣೋವೈಗಂಧ್ಯವೈರಸ್ಯಯುತಃ
ಪಿಪಾಸೀ ॥
ಮೂರ್ಛಾಂಭ್ರಮಂಗದ್ಗದವಾಗ್ವಮಿಂಚವಿಚೇಷ್ಟಮಾನೋರತಿ
ಮಾಪ್ನುಯಾದ್ವಾ ॥ ೨೭ ॥

ಈ ದೂಷೀವಿಷವೆಂಬ ಅವಸ್ಥೆಯನ್ನು ಹೊಂದಿದಮೇಲೆ ವಿಷವುಮಾಡಬಹು ದಾದ ಕಾರ್ಯಗಳನ್ನು ಹೇಳುತ್ತಾನೆ.—ಈ ದೂಷೀವಿಷವು ಕುಂಠಿತಶಕ್ತಿಕವಾಗಿ ಶಕ್ತಿಹೀನವಾಗಿರೋಣದರಿಂದ ಮನುಷ್ಯನನ್ನು ಕೊಲ್ಲುವುದಿಲ್ಲ, ಕಫಯುಕ್ತವಾಗಿ ಅನೇಕ ವರುಷಗಳವರಿಗೂ ದೇಹದಲ್ಲಿ ನಿಂತೇಬಿಡುತ್ತದೆ, ಇದು ಶರೀರದಲ್ಲಿ ಸೇರಿಕೊಂಡು ಪಡಿಸತಕ್ಕ ತೊಂದರೆಗಳು ಯಾವುವೆಂದರೆ ಅತಿಸಾರವು ಪ್ರಾರಂಭ ವಾಗುತ್ತದೆ, ಶರೀರದ ವರ್ಣವು ಬದಲಾಯಿಸಿ ಹೋಗುತ್ತದೆ, ಶರೀರದಲ್ಲಿ ಒಂದು ಬಗೆಯ ದರ್ಗಂಧವು ಹುಟ್ಟುತ್ತದೆ, ನಾಲಿಗೆಯಲ್ಲಿ ರುಚಿ ಕೆಟ್ಟುಹೋಗುತ್ತದೆ, ಬಾಯಾರಿಕೆ ಬಹಳವಾಗಿ ಪ್ರಾರಂಭವಾಗುತ್ತದೆ, ಆಗಾಗ್ಯೆ ಮೂರ್ಛೆಬರುವುದಕ್ಕಾ ರಂಭವಾಗುತ್ತದೆ, ಬುದ್ಧಿಭ್ರಮಣವೂ ತೋರುವುದುಂಟು, ಧ್ವನಿಯುಗದ್ಗದವಾಗು ತ್ತದೆ, ವಮನ ಪ್ರಾರಂಭವಾಗುತ್ತದೆ, ಬುದ್ಧಿಭ್ರಂಶವಾದವನಂತೆ ಏನೇನೋ ಕೆಲಸ ಮಾಡುವುದು, ಯಾವಾಗ್ಯೂ ಸೌಖ್ಯವಾಗಿರುವುದಕ್ಕೇನೇ ಇಲ್ಲ ಈ ಲಕ್ಷಣಗಳೆಲ್ಲಾ ಆಗುತ್ತವೆ.

ಆಮಾಶಯಸ್ಥೇಕಫವಾತರೋಗೀಪಕ್ವಾಶಯಸ್ಥೇಕಫಪಿತ್ತ
ರೋಗೀ ॥
ಭವೇತ್ ಸಮುಧ್ವಸ್ತಶಿರೋರುಹಾಂಗೋವಿಲೂನಪಕ್ಷಸ್ತುಯ
ಥಾವಿಹಂಗಃ ॥ ೨೮ ॥

ಇನ್ನು ವಿಷವು ದೇಹದ ಯಾವಯಾವ ಭಾಗದಲ್ಲಿ ಸೇರಿದರೆ ಯಾವಯಾವ ವಿಕಾರವುಂಟಾಗುತ್ತದೆಂಬುವುದನ್ನು ಹೇಳುತ್ತಾನೆ.—ವಿಷವು ದೂಷೀವಿಷವೆಂಬ ಅವಸ್ಥೆಯನ್ನುಹೊಂದಿ ಆಮಾಶಯದಲ್ಲಿ ನಿಲ್ಲೋಣದರಿಂದ ಕಫ ಮತ್ತು ವಾತ ಇವುಗಳ ಪ್ರಕೋಪದಿಂದ ಉಂಟಾಗುವ ರೋಗಗಳೆಲ್ಲವೂ ಸಂಭವಿಸುತ್ತವೆ, ಅದೇ ವಿಷವು ಪಕ್ವಾಶಯದಲ್ಲಿ ಸೇರಿ ಅಲ್ಲಿ ನಿಲ್ಲೋಣದರಿಂದ ವಾತ ಮತ್ತು ಪಿತ್ತಗಳ ಪ್ರಕೋಪದಿಂದ ಸಂಭವಿಸಬಹುದಾದ ರೋಗಗಳೆಲ್ಲವೂ ಸಂಭವಿಸಬಹುದು,

ಮತ್ತು ತಲೆಯಲ್ಲಿ ಮೈಮೇಲೆ ಇರುವ ಕೂದಲುಗಳೆಲ್ಲವೂ ಉದುರಿಹೋಗಿ ರೆಕ್ಕೆ ಉಪುರಿದ ಪಕ್ಷಿಯಂತೆ ಒಂದುಬಗೆಯ ವಿಕಾರ ರೂಪವನ್ನು ಹೊಂದುತ್ತಾನೆ.

ಸ್ಥಿತಂರಸಾದಿಷ್ವಥವಾಯಥೋಕ್ತಾನ್ ಕರೋತಿಧಾತುಪ್ರಭವಾನ್ವಿ
ಕಾರಾನ್ ॥
ಕೋಪಂಚಶೀತಾನಿಲದುರ್ದಿನೇಷುಯಾತ್ಯಾಶುಪೂರ್ವಂಶೃಣು
ತಸ್ಯರೋಪಂ ॥ ೨೯ ॥

ಇನ್ನು ದೂಷೀವಿಷವು ರಸಾದಿಸಪ್ತಧಾತುಗತವಾದಲ್ಲಿ ಸಂಭವಿಸುವ ತೊಂದರೆಗಳಾವುವೆಂದರೆ—ದೂಷೀವಿಷವು ರಸಾದಿಧಾತುಗತವಾದಲ್ಲಿ ಸುಶ್ರುತದಲ್ಲಿ ಹೇಳಲ್ಪಟ್ಟ ಅನ್ನದಲ್ಲಿ ಅಶ್ರದ್ಧೆ ಅಂದರೆ ಇಷ್ಟವಿಲ್ಲದಿರೋಣ ಮೊದಲಾದ ವಿಕಾರಗಳನ್ನೆಲ್ಲಾ ಉಂಟುಮಾಡುತ್ತದೆ, ಈ ವಿಷವು ಶೀತಕಾಲದಲ್ಲಿ, ವಾತಕಾಲದಲ್ಲಿ, ಮೋಡ ಮುಚ್ಚಿಕೊಂಡಿರುವ ದಿವಸಗಳಲ್ಲಿ ಪ್ರಕೋಪವನ್ನು ಹೊಂದುತ್ತದೆ, ಸಂಪೂರ್ಣವಾಗಿ ಅದರ ಲಕ್ಷಣವನ್ನು ಮುಂದೆ ಹೇಳುತ್ತೇವೆ

ನಿದ್ರಾಗುರುತ್ವಂಚವಿಜೃಂಭಣಂಚವಿಶ್ಲೇಷಹರ್ಷಾವಥವಾಂಗ
ಮರ್ದಂ ॥
ತತಃಕರೋತ್ಯನ್ನಮದಾವಿಪಾಕಾವರೋಚಕಂಮಂಡಲಕೋಠ
ಜನ್ಮ ॥ ೩೦ ॥
ಮಾಂಸಕ್ಷಯಂಪಾದಕರಪ್ರಶೋಥಂಮೂರ್ಚ್ಛಾಂತಥಾಛರ್ದಿ
ಮಥಾತಿಸಾರಂ ॥
ದೂಷೀವಿಷಂಶ್ವಾಸತೃಷಾಜ್ವರಾಂಶ್ಚಕುರ್ಯಾತ್ಪ್ರವೃದ್ಧಿಂಜಠರಸ್ಯ
ಚಾಪಿ ॥ ೩೧ ॥

ನಿದ್ರೆಹೆಚ್ಚಾಗುವುದು ಅಂದರೆ ಯಾವಾಗ್ಯೂ ತೂಕಡಿಕೆ, ಮೈಭಾರ, ಆಕಳಿಕೆ, ದೇಹವೆಲ್ಲಾ ಸಡಿಲಬಿದ್ದು ಹೋಗುವುದು, ರೋಮಹರ್ಷವೆಂದರೆ ಯಾವಾಗ್ಯೂ ಕೂದಲು ನಿಗುರಿಕೊಂಡಿರುವುದು, ಮೈ ವಡತ ಈ ಲಕ್ಷಣಗಳು ಮೊದಲು ಕಾಣಿಸಿಕೊಳ್ಳುತ್ತವೆ ಆ ಮೇಲೆ ಅನ್ನಮದವೆಂದರೆ ಅನ್ನವನ್ನು ತಿಂದ ಕೂಡಲೇ ಒಂದು ಬಗೆಯ ಮೈಕಬರುವುದು, ಅನ್ನ ಸರಿಯಾಗಿ ಜೀರ್ಣವಾಗುವುದಕ್ಕಿಲ್ಲ, ಬಾಯಿ ರುಚಿ ಕೆಟ್ಟು ಹೋಗವುದು, ಶರೀರದ ಎಲ್ಲಾ ಭಾಗದಲ್ಲಿಯೂ ಮಂಡಲಾಕಾರಗಳಾದ ಅಂದರೆ ದುಂಡುದುಂಡಾದ ಬೊಕ್ಕೆಗಳಾಗವುದು, ಕ್ರಮೇಣ ಶರೀರಗತವಾದ ಮಾಂಸವು ಕ್ಷಯಿಸುತ್ತ ಬರುವುದು, ಕೈ ಕಾಲುಗಳಲ್ಲಿ ಬಾಕು

ಬರುವುದು, ಮೂರ್ಛೆಬರುವುದಕ್ಕೆ ಪ್ರಾರಂಭವಾಗುವುದು, ವಮನ ಅತಿಸಾರ ವೆಂದರೆ ಭೇದಿ, ಬಾಯಾರಿಕೆ, ಊರ್ಧ್ವಶ್ವಾಸ, ಜ್ವರ, ಕ್ರಮೇಣಜಠರವೃದ್ಧಿ ಯಾಗೋಣ, ಇವುಗಳನ್ನೆಲ್ಲಾ ಈ ದೂಷೀವಿಷವು ಧಾತುಗತವಾಗಿ ಮಾಡುತ್ತದೆ.

**ಉನ್ಮಾದಮನ್ಯಜ್ಜನಯೇತ್ತಥಾನ್ಯದಾನಾಹಮನ್ಯತ್ ಕ್ಷಪಯೇಚ್ಚ ಶುಕ್ರಂ ॥**
**ಗಾದ್ಗದ್ಯಮನ್ಯಜ್ಜನಯೇಚ್ಚ ಕುಷ್ಠಂತಾಂಸ್ತಾನ್ವಿಕಾರಾಂಶ್ಚ ಬಹುಪ್ರಕಾರಾನ್ ॥೩೨॥**

ಕೆಲವು ವಿಷಗಳು ದೂಷೀವಿಷಾವಸ್ಥೆಗೆ ಬಂದು ಹುಚ್ಚುಹಿಡಿಯುವಂತೆ ಮಾಡುತ್ತವೆ, ಮತ್ತೆಕೆಲವು ಹೊಟ್ಟೆಯುಬ್ಬರವನ್ನು ಹುಟ್ಟಿಸುತ್ತವೆ, ಇನ್ನೂಕೆಲವು ಶುಕ್ರಧಾತುವನ್ನೇ ನಾಶಪಡಿಸುತ್ತವೆ, ಕೆಲವು ಧ್ವನಿಯನ್ನು ಕೆಡಿಸಿ ಗದ್ಗದ ಸ್ವರವನ್ನು ಉಂಟುಮಾಡುತ್ತವೆ, ಮತ್ತೂಕೆಲವು ಕುಷ್ಠರೋಗವನ್ನುಹುಟ್ಟಿಸು ತ್ತವೆ, ಇವುಗಳಲ್ಲದೆ ಇನ್ನೂ ನಾನಾವಿಧಗಳಾದ ವಿಕಾರಗಳನ್ನೆಲ್ಲಾ ಉಂಟು ಮಾಡಿಬಿಡುತ್ತವೆ.

**ದೂಷಿತಂದೇಶಕಾಲಾನ್ನ ದಿವಾಸ್ವಪ್ನೈರಭೀಕ್ಷ್ಣಶಃ ॥**
**ಯಸ್ಮಾತ್ ಸಂದೂಷಯೇದ್ಧಾತೂನ್ ತಸ್ಮಾದ್ದೂಷೀ ವಿಷಸ್ಮೃತಂ ॥ ೩೩ ॥**
**ಸಾಧ್ಯಮಾತ್ಮವತಸ್ಸದ್ಯೋಯಾಪ್ಯಸ್ಸಂವತ್ಸರೋತ್ಥಿತಃ ॥**
**ದೂಷೀವಿಷಮಸಾಧ್ಯಂಸ್ಯಾತ್ ಕ್ಷೀಣಸ್ಯಾಹಿತಸೇವಿನಃ ॥ ೩೪ ॥**

ದೂಷೀವಿಷವೆಂಬ ಹೆಸರು ಬರಲು ಕಾರಣವನ್ನು ಹೇಳುತ್ತಾನೆ. ದೇಶವಿಶೇಷ ಅಂದರೆ ವಿಷವನ್ನು ತಿಂದ ಮನುಷ್ಯನು ವಾಸಮಾಡುವ ಪ್ರದೇಶ, ಕಾಲ, ಮತ್ತು ಅನ್ನಭೋಜನ ಪದೇಪದೇ ಹಗಲು ನಿದ್ರೆಮಾಡೋಣ ಈ ಕಾರಣಗಳಿಂದ ಧಾತು ಗಳನ್ನೆಲ್ಲಾ ಕೆಡಿಸಿ ರೋಗವನ್ನು ಹುಟ್ಟಿಸುತ್ತದೆಯಾದ್ದರಿಂದ ಇದಕ್ಕೆ ದೂಷೀವಿಷ ವೆಂಬದಾಗಿ ಹೆಸರನ್ನು ಕೊಟ್ಟಿರುತ್ತಾರೆ. ರೋಗಿಗೆ ಶಕ್ತಿಯು ಚನ್ನಾಗಿದ್ದು ವಿಷವು ದೇಹಗತವಾಗಿ ಕೊಂಚವೇ ದಿವಸವಾಗಿದ್ದರೆ ಅದು ಔಷಧೋಪಚಾರಗಳಿಂದ ನಿವಾರಣಮಾಡಲು ಸಾಧ್ಯವಾಗುತ್ತದೆ. ದೇಹಗತವಾಗಿ ಒಂದುವರುಷ ಕಳೆದು ಹೋಗಿದ್ದಲ್ಲಿ ಅದು ಯಾಪ್ಯವೆನ್ನಿಸಿಕೊಂಡು ಔಷಧೋಪಚಾರಗಳಿಂದ ಪೂರ್ಣ ನಿವಾರಣೆಯಾಗುವುದಿಲ್ಲ. ದೇಹವು ಕ್ಷಯಿಸಿಹೋಗಿ ಅದರ ಜೊತೆಗೆ ರೋಗಿಯು ಅಪಥ್ಯವೂ ಮಾಡುತ್ತಿದ್ದಲ್ಲಿ ಅದನ್ನು ಔಷಧೋಪಚಾರಗಳಿಂದ ತಿದ್ದುವುದು ಸಾಧ್ಯವಿಲ್ಲ.

ಸೌಭಾಗ್ಯಾರ್ಥಂಸ್ತ್ರಿಯಃಸ್ವೇದಂರಜೋನಾನಾಂಗಜಾನ್ಮಲಾನ್ ॥
ಶತ್ರುಪ್ರಯುಕ್ತಾಂಶ್ಚಗರಾನ್ ಪ್ರಯಚ್ಛಂತ್ಯನ್ನಮಿಶ್ರಿತಾನ್॥ ೩೫ ॥
ತೈಸ್ಸ್ಯಾತ್ಪಾಂಡುಃಕೃಶೋಲ್ಪಾಗ್ನಿರ್ಗರಶ್ಚಾಸ್ಯೋಪಜಾಯತೇ ॥
ಮರ್ಮಪ್ರಧಮನಾಧ್ಮಾನಂಹಸ್ತಯೋಶ್ಶೋಥಲಕ್ಷಣಂ ॥ ೩೬ ॥
ಜಠರಂಗ್ರಹಣೀದೋಷೋಯಕ್ಷ್ಮಾಗುಲ್ಮಃಕ್ಷಯೋಜ್ವರಃ ॥
ಏವಂವಿಧಸ್ಯಚಾನ್ಯಸ್ಯವ್ಯಾಧೇರ್ಲಿಂಗಾನಿದರ್ಶಯೇತ್ ॥ ೩೭ ॥

ಮದ್ದಿಕ್ಕುವುದು ಎಂಬದಾಗಿ ಲೋಕದಲ್ಲಿ ವಾಡಿಕೆಯಲ್ಲಿರುವ ಸಂಪ್ರದಾಯ ವಿದು. ಹೆಂಗಸರು ದ್ರವ್ಯಾಶೆಯಿಂದ ಅಥವಾ ಇತರ ವಿಧವಾದ ಪ್ರತ್ಯಾಶೆಯಿಂದ ತಿನ್ನತಕ್ಕ ಪದಾರ್ಥಗಳೊಡನೆ ಮಿಶ್ರಮಾಡಿ ವಿಷಸ್ವಭಾವವುಳ್ಳ ಮೈ ಬೆವರು, ಯಾವುದಾದರೂ ಚೂರ್ಣ, ವಿಷಸ್ವಭಾವವುಳ್ಳ ನಾನಾ ಅವಯವಸಂಭೂತಗಳಾದ ಮಲಗಳು, ಶತ್ರುಗಳಿಂದ ಕೊಡಲ್ಪಟ್ಟ ಕೃತ್ರಿಮ ವಿಷಗಳು ಇಂತವುಗಳನ್ನು ಮೋಸದಿಂದ ತಿನ್ನಿಸುತ್ತಾರೆ. ಇದೇ ಪದ್ಧತಿಯನ್ನೇ ಲೋಕದಲ್ಲಿ ಮದ್ದಿಕ್ಕುವುದೆಂದು ವ್ಯವಹರಿಸುತ್ತಾರೆ. ಇಂತಹ ವಿಷವು ದೇಹಗತವಾದರೆ ರೋಗಿಯ ದೇಹದಲ್ಲಿ ರಕ್ತವು ಕ್ಷಯಿಸಿ ರೋಗಿಯು ಕ್ರಮೇಣ ಬೆಳ್ಳಗಾಗುತ್ತಾ ಬರುವುದು, ದೇಹವು ಕೃಶವಾಗುವುದು,ಅಗ್ನಿಶಕ್ತಿ ಕಡಿಮೆಯಾಗಿ ಜೀರ್ಣಶಕ್ತಿ ಕುಂದುವುದು, ಹೀಗಾಗಿ ದೇಹಗತವಾದ ಆಹಾರವು ಜೀರ್ಣವಾಗದೇ ಅದೇ ವಿಷವಾಗಿ ಪರಿಣಮಿಸುತ್ತ ಬರುತ್ತದೆ. ಇದರಿಂದ ಮರ್ಮಸ್ಥಾನದಲ್ಲಿ ಬಾಕುಬರುವುದು, ಹೊಟ್ಟೆಯುಬ್ಬರ, ಕೈ ಕಾಲುಗಳು ಊದುವುದು, ಉದರರೋಗ, ಭೇದಿ ಪ್ರಾರಂಭವಾಗುವುದು, ಕ್ರಮೇಣ ಕ್ಷಯ ರೋಗಕ್ಕೆ ತಿರುಗುವುದು, ಗುಲ್ಮರೋಗದ ಲಕ್ಷಣಗಳು ತೋರುವುದು, ಜ್ವರ ಪ್ರಾರಂಭವಾಗುವುದು, ಈ ರೀತಿಯಾಗಿ ನಾನಾ ವಿಧಗಳಾದ ರೋಗಗಳ ಚಿಹ್ನೆಗಳೆಲ್ಲಾ ಕಾಣಬರುತ್ತವೆ.

ಯಸ್ಮಾಲ್ಲೂನಂತೃಣಂಪ್ರಾಪ್ತಾಮುನೇಃಪ್ರಸ್ವೇದಬಿಂದವಃ ॥
ತಸ್ಮಾಲ್ಲೂತಾಸ್ತುಭಾಷಂತೇಸಂಖ್ಯಯಾತಾಶ್ಚಷೋಡಶ ॥ ೩೮ ॥

ಕೆಲವುವಿಧ ಕ್ರಿಮಿಗಳ ಮಲಮೂತ್ರಗಳು ಜೊಲ್ಲು ಮೊದಲಾದುವುಗಳು ವಿಷಸ್ವಭಾವದವುಗಳಾಗಿರುತ್ತವೆ, ಅಂತಹ ಪ್ರಾಣಿಗಳಿಗೆ ಲೂತಿಗಳೆಂದು ಹೆಸರು. ಇದರ ಸಂಬಂಧದಲ್ಲಿ ಒಂದು ಕಥೆಯನ್ನು ಹೇಳುತ್ತಾನೆ:—ಪೂರ್ವದಲ್ಲಿ ವಿಶ್ವಾಮಿತ್ರ ವಸಿಷ್ಠರುಗಳಿಗೆ ಕಾಮಧೇನುವಿಗೋಸ್ಕರ ವಿವಾದ ಹುಟ್ಟಿದಾಗ್ಯೆ ಕೋಪಗೊಂಡ ವಸಿಷ್ಠರ ಹಣೆಯ ಬೆವರು ಧೇನುವಿಗೋಸ್ಕರವಾಗಿ ಕುಯ್ಯಿರಿಸಲ್ಪಟ್ಟ ಹುಲ್ಲಿನ

ಮೇಲೆ ಬಿದ್ದು ಆಗ್ಯೆ ಹುಟ್ಟಿದ ಕ್ರಿಮಿಗಳಿಗೆ ಲೂತಗಳೆಂದು ಹೆಸರು. ಇವು ಹದಿನಾರು ವಿಧ.

ತಾಭಿರ್ದಷ್ಟೇದಂಶಕೋಥಃಪ್ರವೃತ್ತಿಃಕ್ಷತಜಸ್ಯಚ ॥
ಜ್ವರೋದಾಹೋತಿಸಾರಶ್ಚಗದಾಸ್ಯುಶ್ಚತ್ರಿದೋಷಜಾಃ ॥ ೩೯ ॥
ಪಿಡಕಾವಿವಿಧಾಕಾರಾಮಂಡಲಾನಿಮಹಾಂತಿಚ ॥
ಶೋಥಾಮಹಾಂತೋಮೃದವೋರಕ್ತಾಶ್ಯಾವಾಶ್ಚಲಾಸ್ತಥಾ ॥ ೪೦ ॥
ಸಾಮಾನ್ಯಂಸರ್ವಲೂತಾನಾಮೇತದ್ದಂಶಸ್ಯಲಕ್ಷಣಂ ॥

ಲೂತಗಳೆಂಬ ಕ್ರಿಮಿಗಳು ಕಡಿಯೋಣದರಿಂದ ಉಂಟಾಗುವ ಲಕ್ಷಣಗಳನ್ನು ಹೇಳುತ್ತಾನೆ:-ಇವುಗಳು ಕಚ್ಚಿದಸ್ಥಳದಲ್ಲಿ ದುರ್ವಾಸನೆ ಕೋರೋಣ, ಕಚ್ಚಿದ ಗಾಯದಿಂದ ರಕ್ತಸುರಿಯೋಣ, ಜ್ವರ, ಮೈಯ್ಯುರಿ, ಅತಿಸಾರವೆಂದರೆ ಭೇದಿ, ಇನ್ನೂ ನಾನಾ ವಿಧಗಳಾದ ತ್ರಿದೋಷ ಜನ್ಯಗಳಾದ ಉಪದ್ರವಗಳು ಕಚ್ಚಿದ ಪ್ರದೇಶದಲ್ಲಿ ನಾನಾವಿಧಗಳಾದ ಬಕ್ಕೆಗಳು ದೊಡ್ಡದೊಡ್ಡ ಮಂಡಲಾಕಾರಗಳಾದ ವ್ರಣಗಳು ಕಚ್ಚಿದಸ್ಥಳದಲ್ಲಿ ದೊಡ್ಡದಾದ ಮತ್ತು ಮೃದುವಾದ ಶೋಭೆ ಬರೋಣ, ಆ ಶೋಭೆಯು ಕೆಲವುವೇಳೆ ರಕ್ತವರ್ಣವಾಗಿಯೂ ಮತ್ತೆ ಕೆಲವುವೇಳೆ ಧೂಮ್ರವರ್ಣವಾಗಿಯೂ, ಕೈಯ್ಯಲ್ಲಿ ಮುಟ್ಟಿನೋಡಿದರೆ ಅಲ್ಲಾಡುತ್ತಲೂ, ಇರುವುದು. ಈ ಲಕ್ಷಣಗಳೆಲ್ಲಾ ಲೂತಗಳು ಕಚ್ಚಿದವರಲ್ಲಿ ಕಾಣಬರುತ್ತಿರುತ್ತವೆ.

ದಂಶಮಧ್ಯೇತುಯತ್‌ಕೃಷ್ಣಂಶ್ಯಾವಂವಾಜಾಲಕಾಚಿತಂ ॥ ೪೧ ॥
ಊರ್ಧ್ವಾಕೃತಿರ್ಭೃಶಂಪಾಕಕ್ಲೇದಶೋಥಜ್ವರಾನ್ವಿತಂ ॥
ದೂಷೀವಿಷಾಭಿರ್ಲೂತಾಭಿಸ್ತದ್ದಷ್ಟಮಿತಿನಿರ್ದಿಶೇತ್ ॥ ೪೨ ॥

ಕಚ್ಚಿದ ಕ್ಷಣದಲ್ಲಿಯೇ ಉಪದ್ರವಗಳನ್ನು ತೋರಿಸದೆ ಕೆಲವುಕಾಲ ಕಳದ ಮೇಲೆ ಉಪದ್ರವ ಕೊಡುವ ವಿಷಗಳಿಗೆ ದೂಷೀವಿಷಗಳೆಂದು ಹೆಸರು. ಇಂತಹ ದೂಷೀವಿಷಗಳುಳ್ಳ ಕ್ರಿಮಿಗಳು ಕಚ್ಚಿದ್ದನ್ನು ಗುರ್ತಿಸುವುದು ಹೇಗೆಂದರೆ ಕಚ್ಚಿದ ಗುರ್ತಿನ ನಡುವೆ ಕಪ್ಪುವರ್ಣವಾಗಲಿ ಧೂಮ್ರವರ್ಣವಾಗಲಿ ಕಾಣುತ್ತಿರುತ್ತದೆ. ಕಚ್ಚಿದ ಪ್ರದೇಶದಲ್ಲೆಲ್ಲಾ ಬಲೆಯು ಗುರ್ತಿರುತ್ತದೆ, ಕಚ್ಚಿದ ಪ್ರದೇಶವು ಮೇಲಕ್ಕೆ ಉಬ್ಬಿರುತ್ತದೆ, ಜಾಗ್ರತೆಯಲ್ಲಿ ಪಕ್ವಕ್ಕೆ ಬರುತ್ತದೆ, ಆ ಪ್ರದೇಶದಲ್ಲಿ ಮುಟ್ಟಿನೋಡಿದಲ್ಲಿ ಒಂದುವಿಧವಾದ ದ್ರವವಿರುತ್ತದೆ, ಶೋಭೆ ಮತ್ತು ಜ್ವರಗಳಿರುತ್ತವೆ, ಈ ಲಕ್ಷಣಗಳಿದ್ದಲ್ಲಿ ದೂಷೀ ವಿಷಗಳುಳ್ಳ ಕ್ರಿಮಿಗಳು ಕಚ್ಚಿರುವುದಾಗಿ ತಿಳಿಯಬೇಕು.

**ಶೋಥಃಶ್ವೇತಸ್ಸಿತಾರಕ್ತಾಪೀತಾವಾಪಿಡಕಾಜ್ವರಃ ॥**
**ಪ್ರಾಣಾಂತಿಕಾಶ್ಚ ಜಾಯಂತೇಶ್ವಾಸಹಿಕ್ಕಾಶಿರೋಗ್ರಹಾಃ ॥ ೪೩ ॥**

ಕೆಲವು ಬಗೆಯ ಲೂತಗಳು ಕಚ್ಚಿದರೆ ಕಚ್ಚಿದ ಪ್ರದೇಶದಲ್ಲಿ ಬರತಕ್ಕ ಶೋಭೆಯು ಬಿಳುಪಾಗಿರುತ್ತದೆ, ಅಲ್ಲಿ ಹುಟ್ಟತಕ್ಕ ಬಕ್ಕೆಗಳು ಬೆಳ್ಳಗೆ, ಕೆಂಪು ಬಣ್ಣವಾಗಿ, ಹಳದಿ ಬಣ್ಣವಾಗಿ ಇರುತ್ತವೆ, ಜ್ವರವಿರುತ್ತದೆ, ಇನ್ನೂ ಪ್ರಾಣಕ್ಕೆ ಅಪಾಯವನ್ನು ಉಂಟುಮಾಡತಕ್ಕ ಊರ್ಧ್ವಶ್ವಾಸ, ಬಿಕ್ಕಳಿಕೆ, ತಲೆ ಹಿಡಿದ ಹಾಗಾಗುವುದು, ಇಂತಹ ವ್ಯಾಧಿಗಳೆಲ್ಲಾ ಉಂಟಾಗುತ್ತವೆ.

**ಆದಂಶಾಚ್ಛೋಣಿತಂಪಾಂಡುಮಂಡಲಾನಿಜ್ವರೋರುಚಿಃ ॥**
**ಲೋಮಹರ್ಷಶ್ಚ ದಾಹಶ್ಚಾಪ್ಯಾಖುದೂಷೀವಿಷಾರ್ದಿತೇ ॥ ೪೪ ॥**

ಇಲಿ ಕಚ್ಚಿದ ವಿಷವು ದೂಷೀವಿಷದ ಸ್ವಭಾವವನ್ನು ಹೊಂದತಕ್ಕದ್ದಾವಲ್ಲಿ ಅದರ ಲಕ್ಷಣಗಳು ಯಾವುವೆಂದರೆ ಕಚ್ಚಿದ ಕೂಡಲೇ ಆ ಸ್ಥಳದಿಂದ ರಕ್ತವು ಸೋರುವುದು, ಶುಭ್ರಗಳಾದ ಮಂಡಲಾಕಾರಗಳಾದ ಬಕ್ಕೆಗಳೇಳುವುದು. ಜ್ವರ, ಅರುಚಿ, ಶರೀರದಲ್ಲಿರುವ ಕೂದಲುಗಳೆಲ್ಲಾ ನೆಟ್ಟಗಾಗುವುದು, ಮೈಯ್ಯುರಿ, ಇವು ಲಕ್ಷಣಗಳು.

**ಮೂರ್ಛಾಂಗಶೋಥವೈವರ್ಣ್ಯಕ್ಲೇದಶಬ್ದಾಶ್ರುತಿಜ್ವರಾಃ ॥**
**ಶಿರೋಗುರುತ್ವಂಲಾಲಾಸೃಕ್‌ಛರ್ದಿಶ್ಚಾಸಾಧ್ಯಮೂಷಿಕೈಃ ॥ ೪೫ ॥**

ಇಲಿ ಕಚ್ಚಿದ ವಿಷದಲ್ಲಿ ಅಸಾಧ್ಯ ಲಕ್ಷಣಗಳನ್ನು ಹೇಳುತ್ತಾನೆ.—ಮೂರ್ಛೆ ಬರುವುದು, ಅವಯವಗಳಲ್ಲಿ ಶೋಭೆ, ದೇಹದವರ್ಣ ಕೆಟ್ಟುಹೋಗುವುದು, ಶರೀರದಿಂದ ಒಂದು ವಿಧವಾದ ದ್ರವವು ಹೊರಬೀಳುವುದು, ಅಂದರೆ ಜಿಡ್ಡು ಜಿನಗುವುದು, ಕಿವಿ ಕೇಳದೆ ಹೋಗುವುದು, ಜ್ವರ, ತಲೆಭಾರ, ಜೊಲ್ಲು ಸುರಿಯುತ್ತಿರುವುದು, ರಕ್ತವು ವಮನವಾಗುವುದು, ಇವು ಅಸಾಧ್ಯ ಲಕ್ಷಣಗಳು.

**ಕಾರ್ಷ್ಣ್ಯಂಶ್ಯಾವತ್ವಮಥವಾನಾನಾವರ್ಣತ್ವಮೇವವಾ ॥**
**ಮೋಹೋಥವರ್ಚಸೋಭೇದೋದಷ್ಟೇಸ್ಯಾತ್‌ಕೃಕಲಾಸಕೈಃ॥೪೬॥**

ಕೃಕಲಾಸವೆಂದರೆ ಹಾಳು ಗೋಡೆಗಳಲ್ಲಿ ಓಡಾಡುವ ಹಲ್ಲಿಯ ಜಾತಿಗೆ ಸೇರಿದ ಅದರಹಾಗೆಯೇ ಇರುವ ಕೊಂಚ ದೊಡ್ಡದಾದ ಪ್ರಾಣಿ, ಅದು ಕಚ್ಚಿದಲ್ಲಿ ಕಚ್ಚಿದ ಪ್ರದೇಶವು ಕಪ್ಪಗೂ ಹೊಗೆಯಬಣ್ಣಕ್ಕೂ ಅಥವಾ ನಾನಾವಿಧವಾದ

ಈ ಜೇನುಹುಳಗಳ ಜಾತಿಯಲ್ಲಿ ಸ್ಥಗಿಕಾ ಎಂಬುದೊಂದು ಜಾತಿಯ ಹುಳವಿದೆ. ಅದು ಕಚ್ಚಿದರೆ ಪ್ರಾಣವೇ ಹೋಗುತ್ತದೆ.

**ಚತುಷ್ಪದ್ಭಿರ್ದ್ವಿಪದ್ಭಿಶ್ಚನಖದಂತವಿಷಂಚಯತ್ ॥**
**ಪೂಯತೇಪಚ್ಯತೇವಾಪಿಸ್ರವತಿಜ್ವರಯತ್ಯಪಿ ॥ ೫೬ ॥**

ಹಿಂದೆ ಕೆಲವು ಪ್ರಾಣಿಗಳ ಹೆಸರನ್ನು ನಿರ್ದೇಶಿಸಿ ಹೇಳಿ ಅವುಗಳ ವಿಷದಿಂದ ಉಂಟಾಗುವ ಲಕ್ಷಣಗಳನ್ನು ಹೇಳಿದ್ದಾಯಿತು, ಈ ಶ್ಲೋಕದಲ್ಲಿ ಸಾಮಾನ್ಯವಾಗಿ ಹೇಳುತ್ತಾನೆ.—ಸಾಮಾನ್ಯವಾಗಿ ಚತುಷ್ಪಾದ ಪ್ರಾಣಿಗಳು, ದ್ವಿಪಾದಪ್ರಾಣಿಗಳು ಇವುಗಳ ಹಲ್ಲು ಉಗುರು ಇವುಗಳಿಂದ ಉಂಟಾದ ವಿಷಗಳು ಸಂಪರ್ಕವಾದ ಪ್ರದೇಶದಲ್ಲಿ ಕೀವನ್ನುಂಟುಮಾಡಿ ಪಕ್ವಾವಸ್ಥೆಗೆಬಂದು ಸೋರುವುದು, ಜ್ವರ ವನ್ನುಂಟುಮಾಡುವುದು, ಇಂತಹ ಅವಸ್ಥೆಗಳನ್ನೆಲ್ಲಾ ಉಂಟುಮಾಡುತ್ತದೆ.

**ಪ್ರಶಾಂತದೋಷಂಪ್ರಕೃತಿಸ್ಥಧಾತುಮನ್ನಾಭಿಕಾಮಂ**
**ಸಮಮೂತ್ರವಿಟ್ಕಂ ॥**
**ಪ್ರಸನ್ನವರ್ಣೇಂದ್ರಿಯಚಿತ್ತಚೇಷ್ಟಂವೈದ್ಯೋವಗಚ್ಛೇ**
**ದವಿಷಂಮನುಷ್ಯಂ ॥ ೫೭ ॥**

ವೈದ್ಯನು ರೋಗಿಯಲ್ಲಿ ವಿಷಸಂಪರ್ಕದೋಷ ನಿವೃತ್ತಿಯಾಗಿದೆ ಎಂಬುವುದನ್ನು ಈಲಕ್ಷಣಗಳಿಂದ ಅರಿತುಕೊಳ್ಳಬೇಕು ಯಾವುವೆಂದರೆ ಪ್ರಕುಪಿತಗಳಾದ ದೋಷಗಳು ಶಾಂತಸ್ಥಿತಿಗೆ ಬಂದಿರಬೇಕು, ಧಾತುಗಳು ವಿಕಾರವನ್ನು ಹೊಂದದೆ ಪ್ರಕೃತ್ಯನುಗುಣವಾಗಿರಬೇಕು. ಆಹಾರದಲ್ಲಿ ಅಪೇಕ್ಷೆಯುಂಟಾಗಿರಬೇಕು, ಮಲ ಮೂತ್ರಗಳು ಸಮನಾಗಿ ವಿಸರ್ಜಿಸಲ್ಪಡುತ್ತಿರಬೇಕು, ದೇಹದಬಣ್ಣವು ಸರಿಯಾದ ಸ್ಥಿತಿಯಲ್ಲಿರಬೇಕು, ಇಂದ್ರಿಯಗಳ ಪಾಟವ ಚನ್ನಾಗಿರಬೇಕು, ಮನಸ್ಸು ಪರಿಶುದ್ಧವಾಗಿರಬೇಕು. ಇದಕ್ಕೆತಕ್ಕಂತೆ ದೇಹದ ಚಲನವಲನಾದಿ ಬಾಹ್ಯಚೇಷ್ಟೆಗಳು ಆಂತರಿಕವಾದ ಮನೋವ್ಯಾಪಾರ ಇವುಗಳು ಪ್ರಶಸ್ತವಾಗಿರಬೇಕು, ಈ ಲಕ್ಷಣಗಳು ಕಂಡುಬಂದಲ್ಲಿ ರೋಗಿಯಲ್ಲಿ ವಿಷ ದೋಷವು ನಿವೃತ್ತಿಯಾಗಿದೆ ಎಂದು ತಿಳಿದುಕೊಳ್ಳಬೇಕು.

**ದರ್ಶನಸ್ಪರ್ಶನಪ್ರಶ್ನೈಃಪರೀಕ್ಷಾತ್ರಿವಿಧಾಮತಾ ॥**
**ವಯೋವರ್ಣಶರೀರಾಣಾಮಿಂದ್ರಿಯಾಣಾಂಚದರ್ಶನಾತ್ ॥ ೫೮ ॥**

ರೋಗಿಯನ್ನು ಪರೀಕ್ಷಿಸಬೇಕಾದರೆ ಮೂರು ಮುಖ್ಯವಾದ ಮಾರ್ಗಗಳು, ರೋಗಿಯ ದೇಹಾದ್ಯಂತವನ್ನು ಮಲಮೂತ್ರಗಳನ್ನು ನಾಲಿಗೆಯನ್ನು ಚನ್ನಾಗಿ

ನೋಡಿ ಅದರಿಂದ ತಿಳಿಯಬಹುದಾದಷ್ಟು ರೋಗಸ್ವರೂಪವನ್ನು ತಿಳಿದುಕೊಳ್ಳಬೇಕು, ಆ ಮೇಲೆ ಸ್ಪರ್ಶನವೆಂದರೆ ರೋಗಿಯನ್ನು ಕೈಯಿಂದ ಮುಟ್ಟನೋಡಿ ಆದರಿಂದ ತಿಳಿದುಕೊಳ್ಳಬೇಕು, ಆ ಮೇಲೆ ರೋಗನಿಶ್ಚಯಕ್ಕೆ ಬೇಕಾಗುವಷ್ಟು ವಿಷಯಗಳನ್ನು ಪ್ರಶ್ನಿಸಿ ತಿಳಿದುಕೊಳ್ಳಬೇಕು, ವಯಸ್ಸು ದೇಹವರ್ಣ ಶರೀರದ ಬಲಾಬಲಗಳು ಇಂದ್ರಿಯಗಳಪಾಟವ ಇವೆಲ್ಲವೂ ನೋಡಿ ತಿಳಿದುಕೊಳ್ಳುವ ವಿಷಯಗಳಾಗಿವೆ.

ಇಲ್ಲಿಗೆ ವಿಷನಿದಾನ ಸಮಾಪ್ತ.

## -: ವಿಷಯಾನುಕ್ರಮಣಿಕೆ: -

ಜ್ವರೋಽತಿಸಾರೋಗ್ರಹಣೀಚಾರ್ಶೋಽಜೀರ್ಣಂವಿಸೂಚಿಕಾ ॥
ಅಲಸಶ್ಚವಿಲಂಬೀಚಕ್ರಿಮಿರುಕ್ಪಾಂಡುಕಾಮಲಾಃ ॥ ೧ ॥
ಹಲೀಮಕಂರಕ್ತಪಿತ್ತಂರಾಜಯಕ್ಷ್ಮಾಉರಃಕ್ಷತಂ ॥
ಕಾಸೋಹಿಕ್ಕಾಸಹಶ್ವಾಸೈಃಸ್ವರಭೇದಸ್ತ್ವರೋಚಕಃ ॥ ೨ ॥
ಛರ್ದಿಸ್ತೃಷ್ಣಾಚಮೂರ್ಛಾರ್ದ್ಯಾರೋಗಾಃಪಾನಾತ್ಯಯಾದಯ ॥
ದಾಹೋನ್ಮಾದಾಪಸ್ಮಾರಃಕಥಿತೋಽಥಾನಿಲಾಮಯಃ ॥ ೩ ॥
ವಾತರಕ್ತಮೂರುಸ್ತಂಭಆಮವಾತೋಽಥಶೂಲರುಕ್ ॥
ಪಕ್ತಿಜಂಶೂಲಮಾನಾಹಉದಾವರ್ತೋಽಥಗುಲ್ಮರುಕ್ ॥ ೪ ॥
ಹೃದ್ರೋಗೋಮೂತ್ರಕೃಚ್ಛ್ರಂಚಮೂತ್ರಾಘಾತಸ್ತಥಾಶ್ಮರೀ ॥
ಪ್ರಮೇಹೋಮಧುಮೇಹಶ್ಚಪಿಡಕಾಶ್ಚಪ್ರಮೇಹಜಾಃ ॥ ೫ ॥
ಮೇದಸ್ತಥೋದರಂಶೋಥೋವೃದ್ಧಿಶ್ಚಗಲಗಂಡಕಃ ॥
ಗಂಡಮಾಲಾಪಚೀಗ್ರಂಥಿರರ್ಬುದಶ್ಲೀಪದಂತಥಾ ॥ ೬ ॥
ವಿದ್ರಧಿರ್ವ್ರಣಶೋಥೌಚದ್ವೌವ್ರಣೌಭಗ್ನನಾಡಿಕೇ ॥
ಭಗಂದರೋಪದಂಶೌಚಶೂಕದೋಷಸ್ತ್ವಗಾಮಯಃ ॥ ೭ ॥
ಶೀತಪಿತ್ತಮುದರ್ದಶ್ಚಕೋಠಶ್ಚೈವಾಮ್ಲಪಿತ್ತಕಂ ॥
ವಿಸರ್ಪಶ್ಚಸವಿಸ್ಫೋಟಸ್ಸರೋಮಾಂತ್ಯೋಮಸೂರಿಕಾಃ ॥ ೮ ॥
ಕ್ಷುದ್ರಾಸ್ಯಕರ್ಣನಾಸಾಕ್ಷಿಶಿರಸ್ತ್ರೀಬಾಲಕಾಮಯಾಃ ॥
ವಿಷಂಚೇತ್ಯಯಮುದ್ದಿಷ್ಟೋರುಗ್ವಿನಿಶ್ಚಯಸಂಗ್ರಹಃ ॥ ೯ ॥

ವರ್ಣವುಳ್ಳದ್ದಾಗಿಯೂ ಇರುತ್ತದೆ, ಅಜ್ಞಾನವುಂಟಾಗುತ್ತದೆ, ಭೇದಿಯಾಗಲು ಪ್ರಾರಂಭವಾಗುತ್ತದೆ, ಇವು ಲಕ್ಷಣಗಳು.

ದಹತ್ಯಗ್ನಿರಿವಾದೌ ಚ ಭಿನತ್ತೀವೋರ್ಧ್ವಮಾಶು ಚ ॥
ವೃಶ್ಚಿಕಸ್ಯವಿಷಂ ಯಾತಿ ದಂಶೇ ಪಶ್ಚಾತ್ತು ತಿಷ್ಠತಿ ॥ ೪೭ ॥
ದಷ್ಟೋಽಸಾಧ್ಯೈಶ್ಚ ಹೃದ್ ಘ್ರಾಣರಸನೋಪಹತೋ ನರಃ ॥
ಮಾಂಸೈಃ ಪತದ್ಭಿರತ್ಯರ್ಥಂ ವೇದನಾರ್ತೋ ಜಹಾತ್ಯಸೂನ್ ॥ ೪೮ ॥

ಚೇಳಿನವಿಷದ ಲಕ್ಷಣಗಳನ್ನು ಹೇಳುತ್ತಾನೆ.-ಚೇಳು ಕ್ಚಚಿದರೆ ಮೊದಲು ಬೆಂಕಿಯಿಂದ ಸುಟ್ಟಂತೆ ಉರಿಯಾಗುತ್ತಿರುತ್ತದೆ, ಅನಂತರದಲ್ಲಿ ಅಸಾಧ್ಯವಾದ ವಡತ ಉಂಟಾಗುತ್ತದೆ, ಹೃದಯಪ್ರದೇಶ, ಮೂಗು, ನಾಲಿಗೆ, ಈ ಪ್ರದೇಶ ಗಳಲ್ಲಿ ಚೇಳು ಕುಟುಕಿ ತನ್ನ ವಿಷವು ವ್ಯಾಪಿಸುವಂತೆ ಮಾಡಿತೆಂದರೆ ಆಗ್ಯೆ ರೋಗಿಯ ಆಯಾಯ ಭಾಗದ ಮಾಂಸವೇ ಕಳಚಿಬಿದ್ದು ಹೋಗುವಷ್ಟು ಸಂಕಟ ವನ್ನನುಭವಿಸುತ್ತಾ ಪ್ರಾಣವನ್ನು ಬಿಡುತ್ತಾನೆ.

ವಿಸರ್ಪಃಶ್ವಯಥುಃ ಶೂಲಂ ಜ್ವರಶ್ಛರ್ದಿರಥಾಪಿ ಚ ॥
ಲಕ್ಷಣಂ ಕಣಭೈರ್ದಷ್ಟೇ ದಂಶಶ್ಚೈವಾವಸೀದತಿ ॥ ೪೯ ॥

ಕಣಭವೆಂದರೆ ಕಣಜವೆಂಬದಾಗಿ ಲೋಕದಲ್ಲಿ ವ್ಯವಹಾರದಲ್ಲಿರುವ ಜೇನು ಹುಳದಂತಹ ಒಂದುಬಗೆಯ ಪ್ರಾಣಿ, ಅದು ಕಚ್ಚಿತೆಂದರೆ ಮನುಷ್ಯನಿಗೆ ಶರೀರ ದಲ್ಲೆಲ್ಲಾ ಉರಿಬಕ್ಕೆಗಳೇಳುವುದು, ಶೋಭೆ ಬರುವುದು, ವಡತ ಬರುವುದು, ಜ್ವರ, ವಮನ, ಇವುಗಳೆಲ್ಲಾ ಉಂಟಾಗಿ ಕಚ್ಚಿರತಕ್ಕ ಭಾಗವು ಒಡೆದುಹೋದಂತೆ ಕಾಣುತ್ತಿರುತ್ತದೆ.

ಹೃಷ್ಟಲೋಮೋಚ್ಚಿಟಿಂಗೇನಸ್ತಬ್ಧಲಿಂಗೋಽಭೃಶಾರ್ತಿಮಾನ್ ॥
ದಷ್ಟಶ್ಶೀತೋದಕೇನೇವ ಸಿಕ್ತಾನ್ಯಂಗಾನಿ ಮನ್ಯತೇ ॥ ೫೦ ॥

ಉಚ್ಚಿಟಿಂಗವೆಂಬುವುದೊಂದು ಬಗೆಯ ವಿಷಜಂತು, ಅದು ಮನುಷ್ಯನನ್ನು ಕಚ್ಚಿ ಅದರ ವಿಷವು ವ್ಯಾಪಿಸಿದರೆ ಶರೀರದಲ್ಲಿ ರೋಮಾಂಚವಾಗುವುದು, ದೇಹಾದ್ಯಂತವೂಸ್ತಬ್ಧವಾಗಿರುವುದು, ಶರೀರವೆಲ್ಲವೂ ತಣ್ಣೀರಿನಿಂದ ನೆನೆಸಲ್ಪಟ್ಟ ಹಾಗೆ ತಣ್ಣಗಾಗಿರುವುದು, ಇವು ಲಕ್ಷಣಗಳು.

ಏಕದಂಷ್ಟ್ರಾರ್ದಿತಶ್ಶೂನಸರುಜಃ ಪೀತಕಸ್ಸತೃಟ್ ॥
ಛರ್ದಿರ್ನಿದ್ರಾ ಚ ಸವಿಷ್ಟೈರ್ಮಂಡೂಕೈರ್ದಷ್ಟಲಕ್ಷಣಂ ॥ ೫೧ ॥

**ಮತ್ಸ್ಯಾಸ್ತು ಸವಿಷಾಃ ಕುರ್ಯುರ್ದಾಹಂ ಶೋಥಂ ರುಜಂ ತಥಾ ॥**
**ಕಂಡೂಂ ಶೋಥಂ ಜ್ವರಂ ಮೂರ್ಛಾಂ ಸವಿಷಾಸ್ತು ಜಲೌಕಸಃ ॥೫೨॥**

ವಿಷದೋಷವಿರುವ ಕಪ್ಪೆಗಳು ಸ್ವಾಭಾವಿಕವಾಗಿ ಮನುಷ್ಯರನ್ನು ಒಂದೇ ಕೋರೆಹಲ್ಲಿನಿಂದ ಕಚ್ಚುತ್ತವೆ. ಆ ರೀತಿಯಾಗಿ ಕಚ್ಚಲ್ಪಟ್ಟವರ ಶರೀದಲ್ಲಿ ಬಾಕುಬರುತ್ತದೆ, ನೋವಿರುತ್ತದೆ, ಮನುಷ್ಯನು ಹಳದಿ ಬಣ್ಣವಾಗುತ್ತಾನೆ. ವಮನ, ನಿದ್ರೆ ಇವುಗಳಿರುತ್ತವೆ, ಜಲಚರಗಳಾದ ಕೆಲವುಬಗೆಯ ವಿಷದಮೀನು ಗಳು ಮನುಷ್ಯರನ್ನು ಕಚ್ಚಿ ಮೈಯ್ಯುರಿ, ಮೈಬಾಕು. ಮೈನೋವು ಇವುಗಳನ್ನು ಉಂಟುಮಾಡುತ್ತವೆ, ವಿಷಯುಕ್ತಗಳಾದ ಜಿಗಳೆಗಳು ಮನುಷ್ಯನನ್ನು ಕಚ್ಚಿದರೆ ಮೈನವೆ, ಶೋಥೆ, ಜ್ವರ, ಮೂರ್ಛೆ ಇವುಗಳನ್ನುಂಟುಮಾಡುತ್ತವೆ.

**ವಿದಾಹಂ ಶ್ವಯಥುಂ ತೋದಂ ಸ್ವೇದಂ ಚಗೃಹಗೋಧಿಕಾ ॥**
**ದಂಶೇ ಸ್ವೇದಂ ರುಜಂ ದಾಹಂ ಕುರ್ಯಾತ್ ಶತಪದೀ ವಿಷಂ ॥ ೫೩ ॥**

ಮನೆಗಳಲ್ಲಿ ಗೋಡೆಗಳಮೇಲೆ ಓಡಾಡುವ ಹಲ್ಲಿ ಎಂಬಪ್ರಾಣಿಯು ಕಚ್ಚಿದರೆ ಕಚ್ಚಿದಭಾಗದಲ್ಲಿ ವಿಶೇಷವಾದ ಉರಿ, ಶೋಥೆ, ವ್ಯಥೆ, ಆ ಭಾಗದಲ್ಲಿ ಬೆವರು ತ್ತಿರೋಣ, ಇವು ಲಕ್ಷಣಗಳು ಜರಿ ಎಂಬದಾಗಿ ಲೋಕದಲ್ಲಿ ಪ್ರಸಿದ್ಧಿ ಇರುವ ಪ್ರಾಣಿಯು ಕಚ್ಚಿದಲ್ಲಿ ಆ ಭಾಗ ಬೆವರುವುದು, ನೋಯುವುದು, ಉರಿಯುತ್ತಿರು ವುದು, ಈ ಲಕ್ಷಣಗಳೆಲ್ಲಾ ಕಾಣುತ್ತವೆ.

**ಕಂಡೂಮಾನ್ಮಶಕೈರೀಷತ್ ಶೋಥಸ್ಸ್ಯಾನ್ಮಂದವೇದನಃ ॥**
**ಅಸಾಧ್ಯಕೀಟಸದೃಶಮಸಾಧ್ಯಂ ಮಶಕಕ್ಷತಂ ॥ ೫೪ ॥**

ಸಾಮಾನ್ಯಗಳಾದಸೊಳ್ಳೆಗಳು ಕಚ್ಚಿದರೆ ಶರೀರದಲ್ಲಿ ನವೆ, ಕೊಂಚಮಾತ್ರ ಬಾಕುಬರುತ್ತದೆ. ಆದರೆ ವೇದನೆಹೆಚ್ಚಾಗಿರುವುದಿಲ್ಲ. ಕ್ರೂರವಾದ ಕೆಲವುಜಾತಿಯ ಸೊಳ್ಳೆಗಳು ಕಚ್ಚಿದರೆ ತಡೆಯುವುದು ಅಸಾಧ್ಯವೇ ಆಗಿಬಿಡುತ್ತದೆ

**ಸದ್ಯಃಪ್ರಸ್ರಾವಿಣೀ ಶ್ಯಾವಾದಾಹಮೂರ್ಛಾಜ್ವರಾನ್ವಿತಾ ॥**
**ಪಿಡಕಾಮಕ್ಷಿಕಾದಂಶೇತಾಸಾಂತು ಸ್ಥಗಿಕಾಸುಹೃತ್ ॥ ೫೫ ॥**

ಜೇನುಹುಳಕಚ್ಚಿ ವಿಷವೇರಿದರೆ ಕಚ್ಚಿದಭಾಗದಿಂದ ಒಂದುಬಗೆಯ ದ್ರವವು ಹೊರಡುತ್ತಿರುತ್ತದೆ. ಆಭಾಗವು ಧೂಮ್ರವರ್ಣವಾಗ್ತದೆ. ಅದರೊಂದಿಗೆ ರೋಗಿಗೆ ಮೈಯ್ಯುರಿ, ಮೂರ್ಛೆ, ಜ್ವರ, ಇವುಗಳಿಂದ ಕೂಡಿ ಬೊಕ್ಕೆಗಳೇಳುತ್ತಿರುತ್ತವೆ.

**ಸುಭಾಷಿತಂಯತ್ರಯದಸ್ತಿಕಿಂಚಿತ್ತತ್ಸರ್ವಮೇಕೀಕೃತಮತ್ರ ಯತ್ನಾತ್ ॥**
**ವಿನಿಶ್ಚಯೇಸರ್ವರುಜಾಂನರಾಣಾಂಶ್ರೀಮಾಧವೇನೇಂದು ಕರಾತ್ಮಜೇನ ॥ ೧೧ ॥**
**ಯತ್ಕೃತಂಸುಕೃತಂಕಿಂಚಿತ್ಕೃತ್ವೈವಂರುಗ್ವಿನಿಶ್ಚಯಂ ॥**
**ಮುಂಚಂತುಜಂತವಸ್ತೇನನಿತ್ಯಮಾತಂಕಸಂತತಿಂ ॥ ೧೧ ॥**

ಮಾಧವಕರನೆಂಬ ವೈದ್ಯಶ್ರೇಷ್ಠನು ಲೋಕದಲ್ಲಿರುವ ವೈದ್ಯ ಸೋದರರುಗಳ ಉಪಯೋಗಕ್ಕಾಗಿ ಮಾಧವನಿದಾನವೆಂಬ ರೋಗನಿಶ್ಚಯೋಪಯುಕ್ತವಾದ ಗ್ರಂಥ ವನ್ನು ಸಂಗಹಿಸಿಬರೆದು ತಾನು ಸಂಗ್ರಹಿಸಿರತಕ್ಕ ವಿಷಯವು ಇಷ್ಟೇ ಎಂಬ ವಿಷಯವನ್ನು ಗ್ರಂಥಾಂತ್ಯದಲ್ಲಿ ವಿಷಯಾನುಕ್ರಮಣಿಕೆಯರೂಪದಿಂದ ತಿಳಿಸು ತ್ತಾನೆ.— ಈ ಗ್ರಂಥದಲ್ಲಿ ಜ್ವರ ನಿದಾನ, ಅತಿಸಾರ ನಿದಾನ, ಗ್ರಹಣೀರೋಗ ನಿದಾನ, ಅರ್ಶೋ ನಿದಾನ, ಅಜೀರ್ಣ ನಿದಾನ, ವಿಸೂಚಿಕಾ ನಿದಾನ, ಅಲಸಕ ವಿಲಂಬಿಕಾ ರೋಗಗಳ ನಿದಾನ, ಕ್ರಿಮಿರೋಗ ನಿದಾನ, ಪಾಂಡುರೋಗ ನಿದಾನ, ಕಾಮಲಾರೋಗ ನಿದಾನ, ಹಲೀಮಕರೋಗ ನಿದಾನ, ರಕ್ತಪಿತ್ತ, ರಾಜಯಕ್ಷ್ಮ (ಕ್ಷಯರೋಗ), ಉರಃಕ್ಷತ, ಕಾಸ, ಹಿಕ್ಕಾ, ಶ್ವಾಸ, ಸ್ವರಭಂಗ, ಅರೋಚಕ, ಛರ್ದಿ, ತೃಷ್ಣಾರೋಗ, ಮೂರ್ಛಾರೋಗ, ಪಾನಾತ್ಯಯ, ದಾಹ, ಉನ್ಮಾದ, ಅಪಸ್ಮಾರ, ವಾತವ್ಯಾಧಿ, ವಾತರಕ್ತ, ಊರುಸ್ತಂಭ, ಆಮವಾತ, ಶೂಲ, ಪರಿಣಾಮಶೂಲ, ಉದಾವರ್ತ, ಆನಾಹ, ಗುಲ್ಮ, ಹೃದ್ರೋಗ, ಮೂತ್ರಕೃಚ್ಛ್ರ, ಮೂತ್ರಾಘಾತ, ಅಶ್ಮರೀರೋಗ, ಪ್ರಮೇಹ, ಮಧುಮೇಹ, ಪ್ರಮೇಹಪಿಡಕಾ, ಮೇದೋರೋಗ, ಉದರರೋಗ, ಶೋಥ, ವೃದ್ಧಿ, ಗಲಗಂಡ, ಗಂಡಮಾಲಾ, ಅಪಚೀ, ಗ್ರಂಥಿ, ಅರ್ಬುದ, ಶ್ಲೀಪದ, ವಿದ್ರಧಿ, ವ್ರಣಶೋಥ, ಭಗ್ನವ್ರಣ, ನಾಡೀವ್ರಣ, ಭಗಂದರ, ಉಪದಂಶ, ಶೂಕದೋಷ, ತ್ವಗ್ರೋಗಗಳು, ಶೀತಪಿತ್ತ, ಉದರ್ದ, ಕೋಠ, ಅಮ್ಲಪಿತ್ತ, ವಿಸರ್ಪ, ವಿಸ್ಫೋಟಕ, ರೋಮಾಂತಿಕ, ಮಸೂರಿಕಾರೋಗ, ಕ್ಷುದ್ರರೋಗ, ಮುಖರೋಗ, ಕರ್ಣರೋಗ, ನಾಸಾರೋಗ, ಅಕ್ಷಿರೋಗ, ಶಿರೋರೋಗ. ಸ್ತ್ರೀರೋಗ, ಬಾಲರೋಗ, ವಿಷರೋಗ ಎಂಬದಾಗಿ ಇಷ್ಟು ರೋಗಗಳ ನಿದಾನವನ್ನೂ ಉತ್ತಮಗಳಾದ ಗ್ರಂಥಗಳಿಂದ ಸಂಗ್ರಹಿಸಿ ಇಲ್ಲಿ ಹೇಳಿದ್ದಾನೆ, ಇಂದುಕರ ಎಂಬುವರ ಮಗನಾದ ಮಾಧವನೆಂಬ ವೈದ್ಯ ಶ್ರೇಷ್ಠನು ರೋಗವಿನಿಶ್ಚಯ ವಿಷಯದಲ್ಲಿ ಉತ್ತಮಗಳಾದ ಪ್ರಬಂಧನೆಗಳನ್ನೆಲ್ಲಾ ಪರಿಶೀಲಿಸಿ ಅವುಗಳಲ್ಲಿ ಉತ್ತಮೋತ್ತಮವಾದವುಗಳನ್ನು ಸಂಗ್ರಹಿಸಿ ವೈದ್ಯ ಬಂಧುಗಳ ಉಪಯೋಗಾರ್ಥವಾಗಿ ಗ್ರಂಥರೂಪವಾಗಿ ಸಂಗ್ರಹಿಸಿದನು, ರೋಗ

ವಿನಿಶ್ಚಯ ವಿಷಯದಲ್ಲಿ ಬರೆಯಲ್ಪಟ್ಟಿರುವ ಈ ಗ್ರಂಥವು ಕೊಂಚಮಟ್ಟಿಗಾದರೂ ಉತ್ತಮವಾಗಿದ್ದಲ್ಲಿ ಅದರ ಸಹಾಯದಿಂದ ಪ್ರಾಣಿಗಳು ನಿತ್ಯಗಳಾಗಿ ಬಾಧಿಸತಕ್ಕ ರೋಗಗಳ ಸಮುದಾಯದಿಂದ ವಿಮುಕ್ತರಾಗಿ ಸುಖವಾಗಿರಲಿ.

ಇಲ್ಲಿಗೆ ಮಾಧವ ನಿದಾನ ಸಂಪೂರ್ಣ.

## -: ಪರಿಶಿಷ್ಟ :-

## ಸ್ನಾಯುಕ ನಿದಾನ

**ಶಾಖಾಸುಕುಪಿತೋದೋಷಃಶೋಥಂಕೃತ್ವಾವಿಸರ್ಪವತ್ ॥**
**ಭಿನತ್ತಿತತ್ಕ್ಷತೇತತ್ರಸೋಷ್ಮಾಸ್ನಾಯುಂವಿಶೋಷ್ಯಚ ॥ ೧ ॥**
**ಕುರ್ಯಾತ್ತಂತುನಿಭಂಜೀವಂವೃತ್ತಂಶ್ವೇತದ್ಬಹಿಂಬಹಿಃ ॥**
**ಶನೈಶ್ಶನೈಃಕ್ಷತಾದ್ಯಾತಿಛೇದಾತ್ಕೋಪಮುಪೈತಿಚ ॥ ೨ ॥**
**ತತ್ಪಾತಾತ್ಶೋಥಶಾಂತಿಸ್ಸ್ಯಾತ್ಪುನಃಸ್ಥಾನಾಂತರೇಭವೇತ್ ॥**
**ಸಸ್ನಾಯುಕೇತಿವಿಖ್ಯಾತಃಕ್ರಿಯೋಕ್ತಾತ್ರವಿಸರ್ಪವತ್ ॥ ೩ ॥**
**ಬಾಹ್ವೋರ್ಯದಿಪ್ರಮಾದೇನತ್ರುಟ್ಯತೇಜಂಘಯೋರಪಿ ॥**
**ಸಂಕೋಚಂಖಂಜತಾಂಚೈವಛಿನ್ನತಂತುಃಕರೋತ್ಯಸೌ ॥ ೪ ॥**
**ವಾತೇನಶ್ಯಾವರೂಕ್ಷಸ್ಸರುಗಥದಹನಾನ್ನೀಲಪೀತಸ್ಸದಾಹೋಥ ಶ್ವೇತಶ್ಲೇಷ್ಮಣಾಸ್ಯಾತ್ಪೃಥುಗರಿಮಯುತೋಥದ್ವಿದೋಷೋ ದ್ವಿಲಿಂಗೀ ॥**
**ರಕ್ತೇನಾರಕ್ತಕಾಂತಿಸ್ಸಮಧಿಕದಹನೋಥಾಖಿಲೈಸ್ಸರ್ವಲಿಂಗೋ ರೋಗೋಸಾವಷ್ಟಧೇತ್ಥಂಮುನಿಭಿರಭಿಹಿತಸ್ನಾಯುಕಸ್ತಂತು ಕೀಟಃ ॥ ೫ ॥**

ಸ್ನಾಯುಕರೋಗ ನಿದಾನವನ್ನು ಹೇಳುತ್ತಾನೆ:—ಸ್ನಾಯುಕರೋಗವೆಂದರೆ ಕನ್ನಡ ಭಾಷೆಯಲ್ಲಿ ನಾರುಹುಣ್ಣು ಎಂದು ವ್ಯವಹಾರದಲ್ಲಿರುವ ರೋಗ, ಕೈಯ್ಯಿಗಳಲ್ಲಿಯಾಗಲಿ ಕಾಲುಗಳಲ್ಲಿಯಾಗಲಿ ಪ್ರಕೋಪಹೊಂದಿದ ವಾತಾದಿದೋಷಗಳು ಮೊದಲು ಶೋಥವೆಂದರೆ ಬಾಕನ್ನು ಹುಟ್ಟಿಸಿ ವಿಸರ್ಪರೋಗದಂತೆ ವ್ರಣವು ಪ್ರಾರಂಭವಾಗುತ್ತದೆ, ಆ ಬಾಕುಬಂದ ಪ್ರಕೋಪಹೊಂದಿದ ದೋಷಗಳು ಶಾಖದಿಂದ ಆ ಭಾಗದಲ್ಲಿರುವ ನರಗಳು ಶೋಷಿಸಿಹೋಗಿ[illegible]ಾಡಿ ಅಲ್ಲಿ ಒಡೆದುಕೊಳ್ಳುತ್ತದೆ, ಈ ರೀತಿ ಗಾಯವಾಗಿ ಆ ಗಾಯದಿಂದ [illegible]ನಂತಹ ದುಂಡಾದ

ಮತ್ತು ಬೆಳ್ಳಗಾದ ಒಂದುಬಗೆಯ ಕ್ರಿಮಿಯು ದಾರದಹಾಗೆ ಇಳಿಬೀಳುತ್ತದೆ, ಈ ರೀತಿ ಇಳಿಬಿದ್ದ ಕ್ರಿಮಿಯು ಮೆಲ್ಲಗೆ ಹೊರಕ್ಕೆಬರಲು ಪ್ರಾರಂಭವಾಗುತ್ತದೆ, ಹೀಗೆ ಇಳಿಬಿದ್ದ ಕ್ರಿಮಿಯು ಮಧ್ಯದಲ್ಲಿ ಕಡಿದುಹೋದರೆ ವ್ರಣವು ಬಹಳವಾಗಿ ಪ್ರಕೋಪಹೊಂದುತ್ತ ಕಡಿದುಹೋಗದೆ ಸಲೀಸಾಗಿ ಹೊರಕ್ಕೆ ಬಂದಲ್ಲಿ ಬಾಕು ಶಾಂತವಾಗಿ ವ್ರಣವು ಆರುತ್ತ ಬರುತ್ತದೆ, ಆದರೆ ಆ ಸುತ್ತುಮುತ್ತಿನಲ್ಲಿಯೇ ಇಂತಹ ಮತ್ತೊಂದು ವ್ರಣವು ಪ್ರಾರಂಭವಾಗುತ್ತದೆ, ಈ ರೀತಿಯದ ವ್ರಣ ರೋಗಕ್ಕೆ ಸ್ನಾಯುಕ ರೋಗವೆಂದು ಹೆಸರು, ಇದಕ್ಕೆ ಚಿಕಿತ್ಸೆಯನ್ನು ವಿಸರ್ಪ ರೋಗದಂತೆ ಮಾಡಬೇಕು, ಈ ರೀತಿಯಲ್ಲಿ ಹೊರಟ ನರವು ಪ್ರಮಾದವಶಾತ್ ತೋಳುಗಳಲ್ಲಿಯಾಗಲಿ ತೊಡೆಗಳಲ್ಲಿಯಾಗಲಿ ಕಿತ್ತುಹೋದರೆ ಕೈ ಕಾಲುಗಳು ಹಿಡಿದುಕೊಳ್ಳುವುದು, ಕುಂಟನಾಗುವುದು, ಮೊದಲಾದ ವಿಕಾರಗಳನ್ನುಂಟು ಮಾಡುತ್ತದೆ, ಈ ರೋಗವು ವಾತಪ್ರಕೋಪಜನ್ಯ, ಪಿತ್ತಪ್ರಕೋಪಜನ್ಯ ಶ್ಲೇಷ್ಮ ಪ್ರಕೋಪಜನ್ಯ, ವಾತಪಿತ್ತ ಪ್ರಕೋಪಜ, ವಾತಶ್ಲೇಷ್ಮ ಪ್ರಕೋಪಜ, ಪಿತ್ತಶ್ಲೇಷ್ಮ ಪ್ರಕೋಪಜ, ರಕ್ತ ಪ್ರಕೋಪಜ, ತ್ರಿದೋಷ ಸನ್ನಿಪಾತಜ, ಎಂಬದಾಗಿ ಎಂಟು ವಿಧವಾಗಿವೆ, ವಾತಪ್ರಕೋಪ ಜನ್ಯವಾದ ಈ ರೋಗದಲ್ಲಿ ವ್ರಣವು ಧೂಮ್ರವರ್ಣವಾಗಿ ಒರಟಾಗಿ ನೋವುವಡತಗಳಿಂದ ಕೂಡಿರುತ್ತದೆ, ಪಿತ್ತಪ್ರಕೋಪಜನ್ಯ ವ್ರಣವು ನೀಲೀ ಬಣ್ಣವಾಗಿಯೂ ಹಳದಿಯ ವರ್ಣವಾಗಿಯೂ ಉರಿಯೊಡನೆ ಕೂಡಿಯೂ ಇರುತ್ತದೆ, ಶ್ಲೇಷ್ಮಪ್ರಕೋಪಜನ್ಯ ವ್ರಣವು ಬೆಳ್ಳಗೂ ದಪ್ಪವಾಗಿಯೂ ಇರುತ್ತದೆ, ಇದೇ ರೀತಿಯಾಗಿ ಎರಡೆರಡು ದೋಷಗಳ ಪ್ರಕೋಪದಿಂದ ಹುಟ್ಟಿದ ವ್ರಣಗಳಲ್ಲಿ ಎರಡೆರಡು ದೋಷಗಳ ಲಕ್ಷಣಗಳೂ ಕಾಣಬರುತ್ತವೆ, ರಕ್ತ ಪ್ರಕೋಪಜನ್ಯವಾದ ಸ್ನಾಯುಕ ವ್ರಣವು ಕೆಂಪಾಗಿ ಅತಿ ಉರಿಯಿಂದ ಕೂಡಿರುತ್ತದೆ, ತ್ರಿದೋಷ ಪ್ರಕೋಪ ಜನ್ಯವಾದ ವ್ರಣದಲ್ಲಿ ಮೂರು ದೋಷಗಳ ಲಕ್ಷಣಗಳೂ ಕಾಣುತ್ತಿರುತ್ತವೆ, ಈ ವ್ರಣಕ್ಕೆ ಸ್ನಾಯುಕವ್ರಣವೆಂಬದಾಗಿಯೂ ತಂತುಕೀಟ ವ್ರಣವೆಂಬದಾಗಿಯೂ ಹೆಸರು.

ಇಲ್ಲಿಗೆ ಸ್ನಾಯುಕ ನಿದಾನ ಸಮಾಪ್ತಿ.

## ಫಿರಂಗರೋಗ ನಿದಾನ.

**ಫಿರಂಗಸಂಜ್ಞಕೇದೇಶೇಬಾಹುಲ್ಯೇನೈವಯದ್ಭವೇತ್ ॥**
**ತಸ್ಮಾತ್ಫಿರಂಗಇತ್ಯುಕ್ತೋವ್ಯಾಧಿರ್ವ್ಯಾಧಿವಿಶಾರದೈಃ ॥ ೧ ॥**

ಗಂಧರೋಗಃಫಿರಂಗೋಽಯಂಜಾಯತೇದೇಹಿನಾಂಧ್ರುವಂ ॥
ಫಿರಂಗಿನೋಂಗಸಂಸರ್ಗಾತ್ಫಿರಂಗಿಣ್ಯಾಃಪ್ರಸಂಗತಃ ॥ ೨ ॥
ವ್ಯಾಧಿರಾಗಂತುಜೋಹ್ಯೇಷದೋಷಾಣಾಮತ್ರಸಂಕ್ರಮಃ ॥
ಭವೇತ್ತಲ್ಲಕ್ಷಯೇತ್ತೇಷಾಂಲಕ್ಷಣೈರ್ಭಿಷಜಾಂವರಃ ॥ ೩ ॥
ಫಿರಂಗಸ್ತ್ರಿವಿಧೋಜ್ಞೇಯೋಬಾಹ್ಯಆಭ್ಯಂತರಸ್ತಥಾ ॥
ಬಹಿರಂತರ್ಭವಶ್ಚಾಪಿತೇಷಾಂಲಿಂಗಾನಿಚಬ್ರುವೇ ॥ ೪ ॥
ತತ್ರಬಾಹ್ಯಃಫಿರಂಗಸ್ಸ್ಯಾದ್ವಿಸ್ಫೋಟಸದೃಶೋಲ್ಪರುಕ್ ॥
ಸ್ಫುಟಿತೋವ್ರಣವದ್ವೈದ್ಯೈಸ್ಸುಖಸಾಧ್ಯೋಪಿಸೋಮತಃ ॥ ೫ ॥
ಸಂಧಿಷ್ವಾಭ್ಯಂತರಸ್ಸಸ್ಯಾದಾಮವಾತಇವವ್ಯಥಾ ॥
ಶೋಫಂಚಜನಯೇದೇಷಕಷ್ಟಸಾಧ್ಯೋಬುಧೈಸ್ಮೃತಃ ॥ ೬ ॥
ಕಾರ್ಶ್ಯಂಬಲಕ್ಷಯೋನಾಸಾಭಂಗೋವಹ್ನೇಶ್ಚಮಂದತಾ ॥
ಅಸ್ಥಿಶೋಷೋಸ್ಥಿವಕ್ರತ್ವಂಫಿರಂಗೋಪದ್ರವಾಅಮೀ ॥ ೭ ॥
ಬಹಿರ್ಭವೋಭವೇತ್ಸಾಧ್ಯೋನವೀನೋನಿರುಪದ್ರವಃ ॥
ಆಭ್ಯಂತರಸ್ತುಕಷ್ಟೇನಸಾಧ್ಯಸ್ಸ್ಯಾದಯಮಾಮಯಃ ॥ ೮ ॥
ಬಹಿರಂತರ್ಭವಶ್ಚಾಪಿಕ್ಷೀಣಸ್ಯೋಪದ್ರವೈರ್ಯುತಃ ॥
ವ್ಯಾಪ್ತೋವ್ಯಾಧಿರಸಾಧ್ಯೋಯಮಿತ್ಯಾಹುರ್ಮುನಯಃಪುರಾ॥೯॥

ಫಿರಂಗರೋಗದ ನಿದಾನವನ್ನು ಹೇಳುತ್ತಾನೆ:—ಫಿರಂಗವೆಂಬ ಹೆಸರಿನ ದೇಶದಲ್ಲಿ ಈ ರೋಗವು ವಿಶೇಷ ವ್ಯಾಪಿಸಿರುವುದರಿಂದ ಈ ರೋಗಕ್ಕೆ ವ್ಯಾಧಿತತ್ವಜ್ಞರು ಫಿರಂಗರೋಗವೆಂದು ಹೆಸರು ಕೊಟ್ಟಿದ್ದಾರೆ, ಲೋಕದಲ್ಲಿ ಕೂಡ ವ್ಯಭಿಚಾರದಿಂದ ಹತ್ತತಕ್ಕ ಹುಣ್ಣುಗಳಿಗೆ ಪರಂಗಿ ಹುಣ್ಣೆಂದು ವ್ಯವಹಾರವುಂಟು. ಈ ರೋಗಕ್ಕೂ ಅವರಿಗೂ ಅವರ ದೇಶಕ್ಕೂ ಏನಾದರೂ ಕಾರ್ಯ ಕಾರಣ ಸಂಬಂಧವಿರಬಹುದೆಂಬ ಅನುಮಾನವಿದೆ. ಫಿರಂಗ ರೋಗವುಳ್ಳ ಸ್ತ್ರೀಯ ಅಂಗಸಂಗವನ್ನು ಪುರುಷನು ಮಾಡಿದರೂ ಅದೇ ರೋಗವುಳ್ಳ ಪುರುಷರ ಅಂಗಸಂಗವನ್ನು ಸ್ತ್ರೀಯರು ಮಾಡಿದರೂ ಈ ರೋಗವು ಆಗಂತುಕವಾಗಿ ಒಬ್ಬರಿಂದೊಬ್ಬರಿಗೆ ಬಂದು ಬಿಡುತ್ತದೆ, ಆದ್ದರಿಂದಲೇ ಇದು ಆಗಂತುಕವ್ಯಾಧಿ ಎಂದು ತಿಳಿಯಬೇಕು ರೋಗವು ಪ್ರಾಪ್ತವಾದನಂತರ ಇದರಲ್ಲಿ ತ್ರಿದೋಷಗಳ ಸಂಕ್ರಮಣವುಂಟಾಗುತ್ತದೆ, ಆ ಮೇಲೆ ವೈದ್ಯರು ಆಯಾಯದೋಷಗಳ ಲಕ್ಷಣಗಳಿಂದ ಇಂತಹ ದೋಷಪ್ರಕೋಪಜನ್ಯವೆಂಬದಾಗಿ ಗುರ್ತಿಸಿಕೊಳ್ಳಬೇಕು, ಈ ಫಿರಂಗರೋಗವು ಮೂರುವಿಧ, ಬಾಹ್ಯ, ಆಭ್ಯಂತರ, ಬಾಹ್ಯಾಭ್ಯಂತರ ಎಂಬದಾಗಿ ಬಾಹ್ಯಫಿರಂಗ

ರೋಗವು ವಿಸ್ಫೋಟವೆಂಬದಾಗಿ ಹಿಂದೆ ಹೇಳಲ್ಪಟ್ಟ ರೋಗಗಳ ಲಕ್ಷಣಗಳಿಂದಲೇ ಕೂಡಿರುತ್ತದೆ, ಅಂದರೆ ಸುಟ್ಟ ಗುಳ್ಳೆಗಳಂತಹ ಗುಳ್ಳೆಗಳು ಮೈಯ್ಯೆಲ್ಲೆಲ್ಲಾ ಏಳುತ್ತವೆ, ಆದರೆ ನೋವಾಗಲಿ ವ್ಯಥೆಯಾಗಲಿ ಅಷ್ಟೊಂದು ಹೆಚ್ಚಾಗಿರುವುದಿಲ್ಲ, ಈ ಗುಳ್ಳೆಗಳು ಒಡೆದಮೇಲೆ ವ್ರಣದಂತೆ ಇದಕ್ಕೆ ಚಿಕಿತ್ಸೆಯನ್ನು ಮಾಡಿಕೊಳ್ಳಬೇಕು, ಇದು ಸುಖಸಾಧ್ಯ, ಅಭ್ಯಂತರವಾದ ಫಿರಂಗರೋಗವು ಹಿಂದೆಹೇಳಲ್ಪಟ್ಟ ಆಮವಾತವೆಂಬ ರೋಗದಂತೆ ಕೀಲುಗಳು ನೋವಾಗುವುದು, ಕೀಲುಗಳು ಹಿಡಿದುಕೊಳ್ಳುವುದು, ಕೀಲುಗಳಲ್ಲಿ ಬಾಕು ಬರುವುದು ಮೊದಲಾದ ತೊಂದರೆಗಳನ್ನೆಲ್ಲಾ ಮಾಡುತ್ತದೆ, ಇದು ಕಷ್ಟಸಾಧ್ಯ, ಬಾಹ್ಯಾಭ್ಯಂತರ ಫಿರಂಗರೋಗದಲ್ಲಿ ಈ ಎರಡು ಲಕ್ಷಣಗಳೂ ಇರುತ್ತವೆ. ಈ ಫಿರಂಗರೋಗದ ಉಪದ್ರವಗಳು ಯಾವುವೆಂದರೆ ಶರೀರವು ಕೃಶವಾಗಿ ಹೋಗುವುದು, ಶರೀರಬಲವು ತಗ್ಗುತ್ತ ಬರುವುದು, ಮೂಗು ವಕ್ರವಾಗಿ ವ್ರಣವು ಮೂಗನ್ನೆಲ್ಲಾ ತಿನ್ನುತ್ತ ಬರುವುದು, ಅಗ್ನಿಮಾಂದ್ಯ; ಅಸ್ಥಿಗಳು ಶೋಷಿಸುತ್ತ ಬರುವುದು ಅಸ್ಥಿಗಳು ಸೊಟ್ಟನಾಗುವುದು ಇವುಗಳೆಲ್ಲವೂ ಫಿರಂಗರೋಗದ ಉಪದ್ರವಗಳು ಈ ಫಿರಂಗರೋಗದಲ್ಲಿ ಬಾಹ್ಯವಾದದ್ದು ಹೊಸತಾಗಿಯೂ ಉಪದ್ರವಗಳ್ಯಾವುವೂ ಇಲ್ಲದ್ದಾಗಿಯೂ ಇದ್ದಲ್ಲಿ ಚಿಕಿತ್ಸೆಗೆ ಸಾಧ್ಯವೆಂದು ತಿಳಿದುಕೊಳ್ಳಬೇಕು, ಅಭ್ಯತರವಾದ ಫಿರಂಗರೋಗವು ಕಷ್ಟಸಾಧ್ಯ, ರೋಗಿಯ ದೇಹಬಲವು ಕ್ಷಯಿಸಿಹೋಗಿರುವುದು, ಫಿರಂಗರೋಗಕ್ಕೆ ಹೇಳಿದ ಉಪದ್ರವಗಳೆಲ್ಲವೂ ಇರುವುದು, ಹೀಗಿದ್ದಲ್ಲಿ ಬಾಹ್ಯಾಭ್ಯಂತರವೆಂಬ ಉಭಯವಿಧವಾದ ಫಿರಂಗರೋಗವು ಅಸಾಧ್ಯವೆಂದೇ ತಿಳಿಯಬೇಕು.

ಇಲ್ಲಿಗೆ ಫಿರಂಗರೋಗ ನಿದಾನ ಸಮಾಪ್ತ.

## ಸೋಮರೋಗ ನಿದಾನ,

ಸ್ತ್ರೀಣಾಮತಿಪ್ರಸಂಗೇನಶೋಕಾಚ್ಚಾಪಿಶ್ರಮಾದಪಿ ॥
ಅತಿಸಾರಕಯೋಗಾದ್ವಾಗರಯೋಗಾತ್ತಥೈವಚ ॥ ೧ ॥
ಆಪಸ್ಸರ್ವಶರೀರಸ್ಥಾಃಕ್ಷುಭ್ಯಂತಿಪ್ರಸ್ರವಂತಿಚ ॥
ತಸ್ಯಾಸ್ತಾಃಪ್ರಚ್ಯುತಾಃಸ್ಥಾನಾನ್ಮೂತ್ರಮಾರ್ಗಂವ್ರಜಂತಿಹಿ ॥ ೨ ॥
ಪ್ರಸನ್ನಾವಿಮಲಾಶ್ಶೀತಾನಿರ್ಗಂಧಾನೀರುಜಸ್ಸಿತಾಃ ॥
ಸ್ರವಂತಿಚಾತಿಮೂತ್ರಂತಾಸ್ಸಾನಶಕ್ನೋತಿದುರ್ಬಲಾ ॥ ೩ ॥
ವೇಗಂಧಾರಯಿತುಂತಾಸಾಂಪವಿಂದತಿಸುಖಂಕ್ವಚಿತ್ ॥
ಶಿರಶ್ಶಿಥಿಲತಾತಸ್ಯಾಮುಖಂತಾಲುಚಶುಷ್ಯತಿ ॥ ೪ ॥

ಮೂರ್ಛಾ ಜೃಂಭಾಪ್ರಲಾಪಶ್ಚ ತ್ವಗ್ರೂಕ್ಷಾ ಚಾತಿಮೂತ್ರಕ್ಷೇ ॥
ಭಕ್ಷ್ಯೈರ್ಭೋಜ್ಯೈಶ್ಚ ಪೇಯೈಶ್ಚ ನತೃಪ್ತಿಂಲಭತೇಕ್ವಚಿತ್ ॥ ೫ ॥
ಸಂಧಾರಣಾತ್ ಶರೀರಸ್ಯತಾ ಆಪಸ್ಸೋಮಸಂಜ್ಞಿತಾಃ ॥
ತತಸ್ಸೋಮಕ್ಷಯಾತ್ ಸ್ತ್ರೀಣಾಂಸೋಮರೋಗಇತಿಸ್ಮೃತಃ ॥ ೬ ॥

ಸೋಮರೋಗ ನಿದಾನವನ್ನು ಹೇಳುತ್ತಾನೆ:—ಸ್ತ್ರೀಯರು ಅತಿಯಾಗಿ ಪುರುಷರ ಸಂಸರ್ಗ ಮಾಡೋಣದರಿಂದಲೂ ಅತಿಯಾಗಿ ದುಃಖ ಪಡೋಣದರಿಂದಲೂ ಅತಿಯಾಗಿ ಶ್ರಮಪಡೋಣದರಿಂದಲೂ ಅತಿಸಾರ ರೋಗದಿಂದ ವಿಷ ಸಂಪರ್ಕದಿಂದಲೂ ಶರೀರಗತವಾದ ಜಲವೆಲ್ಲವೂ ಕ್ಷೋಭೆಹೊಂದಿ ಸ್ರವಿಸುತ್ತ ಕ್ರಮೇಣ ಮೂತ್ರಕೋಶದಲ್ಲಿ ಜಮೆಯಾಗಿ ಮೂತ್ರಮಾರ್ಗದೀದ ಹೊರಬೀಳುವುದಕ್ಕೆ ಪ್ರಾರಂಭವಾಗುತ್ತವೆ, ಇಂತಹ ಜಲವು ಸ್ವಚ್ಛವಾಗಿಯೂ ನಿರ್ಮಲವಾಗಿಯೂ ತಣ್ಣಗೂ ಯಾವವಿಧವಾದ ವಾಸನೆಯೂ ಇಲ್ಲದ್ದಾಗಿಯೂ ಇರುತ್ತದೆ, ಮತ್ತೂ ಶುಭ್ರವಾಗಿರುತ್ತದೆ, ಇದು ಹೊರಬೀಳಬೇಕಾದರೆ ಯಾವ ವಿಧವಾದ ಹಿಂಸೆಯೂ ಆಗುತ್ತಿರುವುದಿಲ್ಲ, ಅತಿಯಾಗಿ ಈ ನೀರು ಹೊರಬೀಳುವುದಕ್ಕೆ ಅಂದರೆ ಮೂತ್ರಮಾರ್ಗದಿಂದ ಹೊರಡುವುದಕ್ಕೆ ಪ್ರಾರಂಭವಾಗುತ್ತವೆ, ರೋಗಿಗೆ ಇದನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ, ಕ್ರಮೇಣ ಬಲವು ಕುಗ್ಗುತ್ತ ಬರುತ್ತದೆ, ಯಾತರಲ್ಲಿಯೂ ಸುಖವೆನ್ನುವುದೇ ಇರುವುದಿಲ್ಲ, ತಲೆಯು ನೆಟ್ಟಗೆ ನಿಲ್ಲುವುದಿಲ್ಲ, ಮುಖ ಮತ್ತು ದವಡೆಗಳು ಬತ್ತಿಹೋಗಿ ಒಣಗುತ್ತ ಬರುತ್ತವೆ, ಕ್ರಮೇಣ ಆಗಾಗ್ಯೆ ಮೂರ್ಛೆ ಬರುವುದು, ಆಕಳಿಕೆ ಹೆಚ್ಚುವುದು, ಹುಚ್ಚು ಮಾತುಗಳು ಪ್ರಾರಂಭವಾಗುವುದು, ಚರ್ಮವೆಲ್ಲಾ ಅತಿಯಾಗಿ ಒರಟಾಗುತ್ತ ಹೋಗುವುದು, ಯಾವ ವಿಧವಾದ ಭಕ್ಷ್ಯಭೋಜ್ಯಗಳನ್ನಾಗಲೀ ಅನ್ನಪಾನಗಳನ್ನಾಗಲಿ ಸೇವಿಸಿದರೂ ತೃಪ್ತಿಯಾಗೋಣವೇ ಇಲ್ಲ, ಈ ರೀತಿಯಾಗುತ್ತದೆ, ದೇಹಧಾರಣೆಗೆ ಮುಖ್ಯ ಆಶ್ರಯಭೂತವಾದ್ದರಿಂದ ಈ ನೀರಿಗೆ " ಸೋಮ " ಎಂಬದಾಗಿ ಶಾಸ್ತ್ರಜ್ಞರು ಹೆಸರು ಕೊಟ್ಟಿದ್ದಾರೆ, ಈ ನೀರೇ ಕ್ರಮೇಣ ಕ್ಷಯಿಸುತ್ತ ಬರುವುದರಿಂದ ಈ ರೋಗಕ್ಕೆ ಸೋಮರೋಗವೆಂದು ಹೆಸರು

ಇಲ್ಲಿಗೆ ಸೋಮರೋಗ ನಿದಾನ ಸಮಾಪ್ತ.

## ಮಾಧವ ನಿದಾನ ಪರಿಶಿಷ್ಟ ಸಮಾಪ್ತಿ.

ಇಲ್ಲಿಗೆ
ವೈದ್ಯರತ್ನ ಪಂಡಿತ ಗೋಪಾಲಾಚಾರ್ಯ ಶಿಷ್ಯ
ಸೂರ್ಯನಾರಾಯಣ ಶಾಸ್ತ್ರಿ ವಿರಚಿತ
ಮಾಧವ ನಿದಾನ ಕರ್ಣಾಟ ಭಾಷಾನುವಾದ
ಸಮಾಪ್ತ.

